ಪ್ರಬುದ್ಧ

ಕರ್ಣಾಟಕ

ಪಾರ್ಥಿವ ಸಂವತ್ಸರ —೧೦೩— 68 ವಿನಾಯಕನ ಸಂಚಿಕೆ

ಮನ್ನೋಮಂದಿರಕೆ

ಮನ್ನೋಮಂದಿರಕೆ, ಓ,
ಲೋಕ ಗುರುಗಳೆಲ್ಲ ಬನ್ನಿ !
ಬನ್ನಿ, ಬನ್ನಿ, ಬನ್ನಿ !—
ತುಳಿಯೆ ನಿಮ್ಮ ಪದತಲ
ದಲ ದಲ ದಲ ಅರಳ್ವುದೆನ್ನ
ಶಿರಃಕಮಲ ಕುಟ್ಮಲ !

ತಮೋತಿಮಿರವಳಿಯಲಲ್ಲಿ
ಪರಂಜ್ಯೋತಿ ಬೆಳಗಲಿ ;
ಋತದ ಶಿವದ ಆನಂದದ
ಚಿದ್ವಿಭೂತಿ ತೊಳಗಲಿ.

ಮನ್ನೋಮಂದಿರಕೆ, ಓ,
ಲೋಕಗುರುಗಳೆಲ್ಲ ಬನ್ನಿ !
ಬನ್ನಿ, ಬನ್ನಿ, ಬನ್ನಿ !

ಕುವೆಂಪು.

ಕರ್ಮಯೋಗಿ

ಸೂತ್ರಧಾರಿಣಿ ನೀನು ; ಪಾತ್ರಚಾರಿಯು ನಾನು ;
ಯಾವ ಪಾತ್ರವನಿತ್ತರೇನು ನೀನೆನಗೆ ?
ನಿನ್ನ ಅಧ್ಯಕ್ಷತೆಯ ಈ ನಿನ್ನ ಲೀಲೆಯಲಿ
ಪರಮ ಪುರುಷಾರ್ಥರೂಪಿಣಿ ನೀನೆ ಕೊನೆಗೆ !

ಚವರಿವಿಡಿದರೆ ಮೇಲೆ, ಪೊರಕೆವಿಡಿದರೆ ಕೀಳೆ,
ನಾಳ್ಪ ಕೆಲಸಗಳೆಲ್ಲ ನೈವೇದ್ಯವಾಗೆ ?
ರಸಭೇದವಿಹುದೆ ಸುಖದುಃಖಗಳಿಗಾಟದಲಿ
ಜೀವಭಾವವೆ ಸಚ್ಚಿದಾನಂದವಾಗೆ ?

ಸಚ್ಚಿದಾನಂದ ರೂಪಿಣಿ ನೀಂ, ಜಗದ್ಧಾತ್ರಿ,
ಮೆಚ್ಚುವಂದದಿ ನಾಂ ನಡೆಯೆ ಪಾತ್ರಚಾರಿ
ಹೆಚ್ಚು ಕಡಮೆಯ ಹೆಮ್ಮೆ ದೈನ್ಯದ ವಿಭೇದವದು
ಹುಚ್ಚು ಬೆಮೆಯಲ್ತೆ, ಓ ಋತಸೂತ್ರಧಾರಿ !

ಕುವೆಂಪು.

ಪಾಡು

ರಾಮು, ರಾಮಾ! ಏನು ಆಯಿತೊ? ಆಯಿತಾಯಿತು-ಹೋಯಿತು
ಅಹುದೆ ಹೋಯಿತೆ? ಅಲ್ಲವೆನಲೇ? ಇಲ್ಲ; ಆದದ್ದಾಯಿತು.
ಸೂರ್ಯಚಂದ್ರರ ಕಳೆದುಕೊಂಡೀ ಕಣ್ಣುತಾರಗೆ ನೋಡುತ
ಕತ್ತಲೆಗೆ ಬೆಳಕೆಂದು ನಂಬುತ ಕಾದಹಾಗಿದೆ ಪಾಡುತ. ‖ ೧ ‖

ಎದೆಯ ಹತ್ತಿರ ಹೆಗಲ ಎತ್ತರ ಬೆಳೆದು ಬೆಂಬಲವಾಗುತ
ಉಲ್ಕೆ ಉಳುಕಿದ ಹಾಗೆ ಗಳಕನೆ ಕಳಚುವರೆ ಕೆಳಸಾಗುತ,
ನಿನ್ನ ಹದಮಿದು ನಿನ್ನ ಹಿತಮಿತ 'ನಿಮ್ಮವಿವು' ನನಗೆಂದೆಯೋ
ನಿನ್ನ ನಗೆಬಗೆ—ಎಂಥ ಲಗುಬಗೆಯಿಂದ ಕಣ್ಮರೆ ಸಂದೆಯೋ. ‖ ೨ ‖

'ತಂದೆ, ಎಲ್ಲಿಗೆ ತಂದೆ? ಏತಕೆ ತಂದೆ?' ಎನುತಿರುವಾಗಲೇ
ಕಂದ, ನೀನೂ ಬಂದೆ; ಬಂದೆಯಾ? ಏನು ಹೊರಟೆಯೊ ಈಗಲೇ?
ಬರಲು ಅವಸರ, ಹೊರಡಲವಸರ, ಯಾವ ಸೊಗಸಿನ ನಡೆಯಿದು
ಯಾವ ತವಕದ ಭವಕೆ ಬಂದೆಯೊ ಯಾರ ಎದೆಯೂ ತಡೆಯದು. ‖ ೩ ‖

ನಿನ್ನ ತಾಯಿಯ ಕಣ್ಣನೋಡಲೆ, ಅಳಲು ಆಳಕ್ಕಿಳಿದಿದೆ
ತಮ್ಮದಿರ ಎದೆ ತಬ್ಬಿನೋಡಲೆ ಮಿಡುಕ ನಡುಕಕ್ಕೆಳೆದಿದೆ
ತಂಗಿ ಮಂಗಲೆ ನಗಲು ನುಡಿಯಲು ಬಂದ ದುಃಖವ ನುಂಗಲೆ
ಅಭಯ ಸಾರಲು ಬರುವ ಹಲವರ ಹರಕೆ ನೆರಳಿಗೆ ತಂಗಲೆ. ‖ ೪ ‖

ನೀನು ಹೆಸರಿನ ಸಿದ್ಧ, ಕೆಲಸಕೆ ಸಿದ್ಧ, ವಲಸೆಗೆ ಸಿದ್ಧನು
ನನ್ನ ಸರಿಸಹ-ತಾಪದಲಿ ಪರಿಪಾಕ ಹೊಂದಿದ ಬುದ್ಧನು.
ಭಾವಚಂಚಲನಾಗದಲೆ ನೀನಿದ್ದೆ ಜೀವದ ಕೊಡೆಯಲಿ
ಬಾಳುಗೆಟ್ಟಿರೆ, ಉಸುರುಗಟ್ಟಿರೆ ಬಿದ್ದೆ ಸಾವಿನ ತೊಡೆಯಲಿ. ‖ ೫ ‖

ಸಿಡಿಲು ಎರಗಿದ ಮರದ ತೆರದಲಿ ಮನೆಯು ರಣರಣಗುಟ್ಟಿತು
ಕಂಡ ಜನರಿಗೆ ಕೇಳಿದವರಿಗೆ ಏನೊ ಭಯಲಯ ಹುಟ್ಟಿತು.
ಯಾವ ಕಾಳನ ಖೂಳರಕ್ಕಸರಾರು ಬಂದರೊ ನುಗ್ಗುತ
ಚಿಗುರ ಕುಯ್ದರು, ಮಿಡಿಯ ಕಡಿದರು, ಹೂವ ಹಿಡಿದರು ಹಿಗ್ಗುತ. ‖ ೬ ‖

ಬಾಳ ತೋಟವ ಕಾಯಬಲ್ಲವ ಕಾಳನಲ್ಲವು ಬಲ್ಲೆನು
ಆ ನಿರಾಸೆಗೆ ಗುಡಿಯಕಟ್ಟುತ ನೀರಸೆರೆಯಲು ಒಲ್ಲೆನು
ದುಃಖದುಡುಗೊರೆಯಲ್ಲಿ ಸಡಗರವಿಲ್ಲ; ಒಪ್ಪಿದೆ ಬಾಗುತ.
ನೋವಿಗೆಲ್ಲಿಯು ಇಲ್ಲ ಔತಣ; ಅತಿಥಿಗೆಂದಿಗು ಸ್ವಾಗತ. ‖ ೭ ‖

ತೆರೆಯಲಾರೆನು ಮರೆಯಲಾರೆನು ದೈವವಿತ್ತೀ ಕಷ್ಟವ
ತಗ್ಗು ಸಾರುತಲಿರಲಿ ಸ್ಮಾರಕವಾಗಿ ಹಿಗ್ಗಿನ ನಷ್ಟವ.
ಮಗುವೆ, ಕಣ್ಮರೆಗಾದ ನಗುವೇ ಮನವು ಮರೆಯಲು ಸಾಧ್ಯವೆ?
ಅರಳಿಬಾ ನನ್ನೆದೆಯ ತುಂಬುವ ಹಾಗೆ ಚಿತ್ತಾರಾಧ್ಯವೆ! ‖ ೮ ‖

ತಾಳಿ ಬಾಳುವ ದುಃಖದೊಳು ಕಸ್ತೂರಿಯಂದದ ಕಂಪಿದೆ.
ಹಳಿತ ನೋವಿಗೆ ತನ್ನ ಕಾವನೆ ತಣಿಸುವಂತಹ ತಂಪಿದೆ
ಸಾವು ಅಗಲಿಕೆ ಅಳಲುಗಳ ಹೆಸರೇನು ಇದ್ದರು ಏನಿದೆ
ಏನು ನಾನಿಹೆ? ಎಲ್ಲಿ ನೀನಿಹೆ? ಜೀವ ತಾನೇ ತಾನಿದೆ. ‖ ೯ ‖

ಇರುತಿರುತ ಇತಿಹಾಸವಾಯಿತೆ? ಇರವು ಅರಿವಿನ ಆಚೆಗೆ!
ನನ್ನ ಮೋಹವ ನೆನೆಸಿಕೊಂಡರೆ ಮುಸುಕಿಕೊಂಬುದು ನಾಚಿಗೆ
ಜೀವಸಾವಿಗೆ ಹತ್ತುಗಡೆ; ದಿನಮೀರಿ ಒಡಲೂ ಬಾಳವು!
ನಿದ್ದೆನೆಲೆ ನಮಗಿಲ್ಲ; ತಿಳಿದೀತೆಂತು ಸಾವಿನ ಆಳವು? ‖ ೧೦ ‖

ಹೊತ್ತು ಆದೊಡೆ ನಲ್ಲಿನೀರೂ ಹೋಗಿ ಬಿಡುವುದು ಗಕ್ಕನೆ
ಮರ್ಮಕೆಣಕಲು ಮಿಂಚುದೀವಿಗೆ ಆರಿಬಿಡುವುದು ಪಕ್ಕನೆ.
ಯಾವ ಯಾಂತ್ರಿಕನಿಂದ ಪ್ರಾಣದ ಸೆಲೆಯೊ ಜ್ಯೋತಿಯೊ ಬಲ್ಲೆವೆ?
ಯಾರ ಪಂಚಾಂಗವನು ಪಾಲಿಸಿ ಕಣ್ಣು ಬಿಡುವವೊ ಕಲ್ಲೆವೆ? ‖ ೧೧ ‖

ಎಚ್ಚರಿರಲಿರದಿರಲಿ, ಚಟಕಿಸುತಿಹುದು ಉಸಿರಿನ ಲಾಳಿಗೆ
ಹೆಸರ ನೂಲಿನ ಹಚ್ಚಡವ ಹೊಚ್ಚುತ್ತ ನೇವುದು ಬಾಳಿಗೆ
ಎಳೆಯು ಹರಿದರು, ಎಲ್ಲೊ ಬೆಳೆದರು, ಮಗ್ಗದುದ್ದಕು ನಡೆವುದು
ನನಗು ತೀರಿದ ಮೇಲೆ ತಡವೇ? ಕುಯ್ದ ಕೂಡಲೆ ತಡೆವುದು. ‖ ೧೨ ‖

ಸಾವುಬಿದ್ದಿದೆ ಹುಟ್ಟುಬೆನ್ನಿಗೆ ಬಲ್ಲೆ; ಪಂಥಕೆ ಬಿದ್ದೆನು.
ನಿನ್ನ ಮೃತಿ ಮುಂಗಂಡು ಇದ್ದರೆ, ಸಾವಿಗೊಪ್ಪಿಸುತಿದ್ದೆನು

ಆನೆ ದಂಡೆಗೆ ಮೊಸಳೆ ನೀರಿಗೆ ಎಳೆಯುವೊಲು ಗಜರಾಜನ
ಗಾಸಿಗೊಳಿಸಿದೆ ಎಳೆದು ಮೈಯನು ಮರೆತುಭಾಗ್ಯದ ಭಾಜನ. ॥ ೧೩ ॥

ಸಾವಿರದ ಕಾಲಾಳ ಕಾಲಲಿ ವೀರನೊಬ್ಬನು ಬೀಳಲಿ ;
ಅವನಗತಿಯೇ ? ನೀನು ತಬ್ಬಿಬ್ಬಾದೆ ಯಮನರೆತೋಳಲಿ.
ಗುರುವೆ ಶರಣೆಂದೆಂಬ ನಂಬಿಕೆ ನಿನ್ನ ಬೆಂಬಿಡದಿದ್ದಿತು.
ಇದ ನೆನೆದು ಬಿಗಿಹಿಡಿವೆ ಶೋಕವ, ಜೀವ ಮೇಲಕ್ಕೆದ್ದಿತು. ॥ ೧೪ ॥

ದೀಪಗಳ ಬುಡದಲ್ಲೆ ಕತ್ತಲು ಅಡಗಿಕೊಂಡಿರುವಂದದಿ,
ಜೀವಪುಷ್ಪದ ತೊಟ್ಟಿನಲ್ಲಿಯೆ ಸಾವು ಇರುವುದು ಚಂದದಿ.
ಬೆಳಕು ಎತ್ತುತ್ತಿರಲು ಕಣ್ಣನು ರವಿಯ ಆಗಸದತ್ತಲು,
ಮೈಯನೆಳೆಯುತ್ತಿಹುದು ಮಣ್ಣಿಗೆ ಮಣ್ಣಬಿಣ್ಪು ಸುತ್ತಲೂ ॥ ೧೫ ॥

ಹೂವು ಬೀತರು, ನೆನವು ಇದೆ. ಚೆಲುವಿಕೆಗು ಯಮನಿಗು ಪಂಥವೆ ?
ಜೀವದೊಡನೊಂದಾದ ಆ ರಮ್ಯತೆಗೆ ಸಾವೇ ಅಂತವೆ ?
ಮೆಯ್ಯು ಹೂಡಿದ ಮಣ್ಣುಗಾಳಿಯು ಬಯಲು ಸೇರಿದರೇನಿದೆ ?
ಒಬ್ಬರೊಬ್ಬರ ಜೀವದಲ್ಲಿಯೆ ಜೀವ ಜೀವದ ಜೇನಿದೆ. ॥ ೧೬ ॥

ದೈವವೆಂದರು, ಕರ್ಮವೆಂದರು, ಏನು ಆಯಿತು ಉತ್ತರ ?
ಮಾತನೂಲಿಗೆ ಬದುಕು ಕುಣಿವುದೆ ? ಮಾತು ಎತ್ತರ ತತ್ತರ !
ವೇದನೆಗೆ ಹಿಂಜರಿವುದೇತಕೆ ? ಭವವು ಅನುಭವದಾಗರ ;
ಮೃತಿಗೆ ಜಗ್ಗದ ಜೀವಬಂಧವು ತುಂಬಿದಮೃತದ ಸಾಗರ. ॥ ೧೭ ॥

ಚಿತ್ತಪಾಕದೊಳಿಳಿದ ರಸರುಚಿ ಅಮೃತವಾಗಿದೆ ಬಾಳಿಗೆ
ಅಲ್ಲೆ ಕಾಣುವೆ ನಿನ್ನ ಝುರಿಯನು ಮರುಗಲೇತಕೆ ನಾಳೆಗೆ ?
‘ ಆದರೂ, ಅಹುದಾದರು-ಮುಂದೇನು ? ಆದರೆ ’, ಎಂಬುದು
ಸತ್ತಭಯದಲಿ ಅಭಯಕಂಡರು, ಚಿತ್ತ ತನ್ನನೆ ನಂಬದು. ॥ ೧೮ ॥

ಮರಣವೆಂಬುದು ಮರೆಯಮಾತಿರುವನಕ ವಿರಹದ ವೇದನೆ
ಕತಕತನೆ ಕುದಿಯುವುದು ಪಾಕಕೆ, ಮರೆತು ಬೆಡಗಿನ ಓದನೆ.
ಕತ್ತೆಹೊತ್ತಿರುವಂತೆ ಹೊತ್ತಿರಬೇಕು ಜೀವನ ಹೊತ್ತಿಗೆ—
ಮರಣ ಛಾಯೆಯು ಮುಸುಕಿರಲು ಇಳೆ ; ಜೀವಗಿಲ್ಲರಸೊತ್ತಿಗೆ. ॥ ೧೯ ॥

ನಿನ್ನ ಬಯಕೆಯ ಚಾಚುತೊಂಗೆಗೆ ನನ್ನ ಆಸೆಗಳರಳಿರೆ
ನನ್ನ ಕೈಲಾಗದಲೆ ಅಲ್ಲೇ ನಿಂತಸಾಹಸ ಕೆರಳಿರೆ.
ಹಾರಿಸಿದ ಪಟ ಹರಿದುಕೊಂಡೇ ಹೋಗುವಂತೆಯೆ ಮಾಡಿದೆ
ಕೋಡನೇರಿಸಿ-ಅಹ! ಚಿಕೀರ್ಷೆಯ ದರಿಯತಳದಲಿ ದೂಡಿದೆ. ‖ ೨೦ ‖

ಉರುಳಿದೆನೊ ಪಾತಾಳಖಾತಕೆ ಎಂದು ಎದೆಯೊಳಗಾಗಿರೆ,
ಪೋಣಿಸಿದ ಸರ ಹರಿದು ಮಣಿಗಳು ಎಲ್ಲ ಜರಿಯುವ ಹಾಗಿರೆ,
ತಾಯ ಕರುಣೆಯ ತಿಗುರ ಬೀರುತ ನಿನ್ನ ಹೂನಗೆ ಮಿಂಚಿಸಿ
ಯಾವ ಕೈಯೋ ಕಾಯುತಿದೆ ಈ ಮರುಳು ಮನವನು ವಂಚಿಸಿ. ‖ ೨೧ ‖

ಬಲ್ಲೆನಾ ಭಾವಣ್ಣ, ಸಣ್ಣವನಿದ್ದು ನೀ ಲಗುಮಾಡಿದೆ.
ಚಿಂತೆಯಲ್ಲಿಯೆ ಚಿಂತನದ ಸುಳಿಹಿಡಿದು ನೀನೂ ಸಾಗಿದೆ.
ನಿನ್ನ ಈ ಸುವಿವೇಕಪಾಕದ ರುಚಿಯ ನೋಡುವ ಮುನ್ನವು
ಹಾರಿ ಹೊಡೆದಿತು ಕೈಯತುತ್ತನು ರಸವಿಹೀನವು ಅನ್ನವು. ‖ ೨೨ ‖

ಸತ್ತ ದಶರಥ ಇದ್ದ ರಾಮನಿಗಾಗಿ ಅತ್ತನು ಅಂದಿಗೆ—
ಸತ್ತ ರಾಮಗೆ ಅತ್ತೆ ಅಳುವನು ಇರುವ ದತ್ತನು ಇಂದಿಗೆ.
ಜೀವ ಜೀವವು ಅಗಲದಂದದ ಅರಿವು ಬೆಳೆವುದು ಎಂದಿಗೆ
ಅಂದೆ ಸಾಕೆನಿಸೀತು ಶೋಕವು ಹುಟ್ಟಿ ಸಾಯುವ ಮಂದಿಗೆ. ‖ ೨೩ ‖

ಮುತ್ತಿಗಾಗಿಯೊ ಹಾಲಿಗಾಗಿಯೊ ನೀರಸೇರದೆ ಸಾರಸಾ!
ಏನು ಹವಣಿಸಿ ನಿನಗೆ ತಿನಿಸಿದೆ ನೆಲದೆದೆಯ ಜ್ವಾಲಾರಸ?
ಮತ್ತೆ ಕೈಲಾಸಕ್ಕೆ ಹಾರಿದೆ ಇನ್ನು ನೋಟಕು ಸಿಕ್ಕೆಯಾ?
ಬಿದ್ದ ಪುಚ್ಛಗಳಲ್ಲಿ ಹುಡುಕುವೆ ಹಾರಿಹೋಗಿಹ ಹಕ್ಕಿಯಾ! ‖ ೨೪ ‖

ನೋವಿನೊರೆಗಲ್ಲಲ್ಲಿ ಇರವಿನ ಅರಿವು ತಿಕ್ಕಲು ಹೊಳೆವುದು
ಬ್ರಹ್ಮತಿನ್ನಲಿ ಬೇನೆ; ಸಾಯಲಿ ರುದ್ರ; ಮನುಜನೆ ಅಳುವುದು.
ಹಕ್ಕಿ ಬೀಳಲಿ, ಚಿಕ್ಕೆ ಬೀಳಲಿ; ಸತ್ತ್ವವೇದನೆಗೆಡೆಯಿದೆ;
ಉಸಿರಿಗೊಂದೇಗಾಳಿ ಇರುವೊಲು ನೋವಿಗೊಂದೇ ಎಡೆಯಿದೆ. ‖ ೨೫ ‖

ಮಕ್ಕಳನು ಕಳಕೊಂಡ ಜನರಲಿ ಮೊದಲಿನವ ನಾನಲ್ಲವು
ಕೊನೆಯವನು ನಾನಲ್ಲ; ಅರರೇ! ಒಂದೆ ದುಃಖವು ಎಲ್ಲವು.

ಶೋಕಕೇತಕೆ ಬೇಕು ಹೆರವರ ನೋವು, ಸಾಕಿದೆ ನನ್ನದು.
ದುಃಖದಲಿ ಪಾಲಿಲ್ಲ, ಹೃದಯಕೆ ಸಕಲ ದುಃಖವು ತನ್ನದು. ‖ ೨೬ ‖

ಹೊಟ್ಟೆನೋವಿಗೆ ಏನೊ ಮದ್ದನು ನಾಯಿಯೊಲು ಎಡೆ ಮೂಸುತ
ನನ್ನ ಉಸಿರೆಲ್ಲೆಲ್ಲೊ ತಡಕುವದಣ್ಣ ಕಾವನು ಸೂಸುತ;
ನಿಲಿಸಲಾರದ ಕಡಿತ ಕಳೆಯಲು ನೆಲದಿ ಹೊರಳಾಡುವದದು,
ಬಳಲಿ ಬವಣಿಗೆ ಕವಳಿ ಹತ್ತಲು ನಿದ್ರಿಸುತ್ತಿದೆ ಮನವಿದು. ‖ ೨೭ ‖

ಬೆಳಗು ಜಾವದ ಎಲರು ಕದಿರಿನ ಬದಿಗೆ ನಿರ್ಸೆರನಲಗುತ
ಎಲೆಯ ಸಂದಿಗೆ ಅಲರಿನಂದಿಗೆ ಮರದ ಹೊಂದಿಗೆ ನಲಗುತ
ಚರಿಸುವೊಲು ತಿಳಿಭಾವ ಬೆಳಕಿನ ಬಾವಿಸೆರಳನು ನೋಡುತ
ಮಿಸುಗುತಿದೆ ಬಗೆ ಚಾಚಿದಾಚೆಗೆ ನಿನ್ನ ಕಂಡರೆಕೋಡುತ. ‖ ೨೮ ‖

ಬಲ್ಲದೇನೀ ಗಂಡು ಎದೆ ಆ ಹೆಣ್ಣು ಹೊಟ್ಟೆಯ ತಾಪವ
ನನ್ನ ಗತಿಯೇ ಹೀಗೆ ಆಗಿರೆ ಅದಕೆ ಹಾಕಲೆ ಧೂಪವ
ಹೇಳಿ ತೀರದ ಹೊಳವು ಮೀರಿದ ಮಿಡುಕಿ ನಿಲುಕದ ನೋವನು
ಮೌನ ಸಾಲದು ಮಾತು ಸಾಕೇ ಛಂದಮಿಡಿಯುವನಾವನು. ‖ ೨೯ ‖

ಹಡೆದವರ ಹಸಿ ಬೇಗೆಯರಿವುದೆ ಹೊರೆವವರ ಆರಿರುವೆದೆ
ಚಿತೆಯು ನಂದಿದ ಮೇಲು ಉರಿಯುವ ಹೆತ್ತ ಬಸಿರಿನ ಬಲ್ಬೆದೆ
ನೋವಿನೀ ಒಪ್ಪೊತ್ತು ನೆರಳಿಗು ಮುಪ್ಪು ತಲೆಗಡರುತ್ತಿದೆ
ಎದೆಯ ಗುಂಡಿಗೆ ಯಾವ ಕಾವೋ ತಣ್ಣನೇ ಬದಿಗೊತ್ತಿದೆ. ‖ ೩೦ ‖

ಬಿಗಿದು ಸೆರೆಗಳ ಹಿಳಿದು ಕರುಳನು ಕಿವಿಚಿಬರುವುದು ಯಾವುದೋ
ಹೇಳಿಕೊಂಡರು ಕೇಳದಿದ್ದರು ಸೂಲೆಯಂದದಿ ನೋವುದೋ !
ನುಂಗಿಕೊಂಡರು ಕಾರಿಕೊಂಡರು ಮರ್ಮಗಳ ಕಿತ್ತುತ್ತಿದೆ
ಎಣ್ಣೆಗೈಯಲಿ ಕೆಂಡಹಿಡಿದೊಲು ಭಗ್ಗನೇ ಹೊತ್ತುತ್ತಿದೆ ‖ ೩೧ ‖

ಅತ್ತೆನೇ ನಗೆಗೀಡು, ಅಳೆನೇ ಬಾಳುಬಾಳೇ ಬೇಸರ.
ಕವನದೀ ನೆವದಲ್ಲಿ ತೀಡುವೆ ಮನುಜ ಮಾತ್ರರ ಈಸ್ವರ.
ಹಾಡಿಕೊಂಡರೆ, ತೋಡಿಕೊಂಡೊಲು ಎದೆಯ ಎಸರಿನ ಕಂಬನಿ
ಗಮ್ಮಗಾವನು ತಣಿಸಬೇಡವೆ ಬಂದು ಬೇಸಗೆ ಮುಂಬನಿ ? ‖ ೩೨ ‖

ಬಿದ್ದ ಕಚ್ಚನು ಮುಚ್ಚಿಕೊಳ್ಳಲು ಅಂಟುಸುರಿಸುವ ಧೂಪವು
ಸುಟ್ಟು ಕಂಪನ್ನೊಗೆವ ತೆರದಲಿ ಇರಲಿ ದೀಪಸಮೀಪವು
ಶೋಕನೀರಲಿ ಹೋಮವಾಗದೆ ತಿಳಿವ ಬೆಳಸಲಿ ಈಸಲ
ಉದಯಿಸಲಿ ನನ್ನುಳಿದಮಕ್ಕಳ ಕಾದುಕೊಳ್ಳುವ ಕೌಶಲ ‖ ೩೩ ‖

ಜನನ ಮರಣದ ನಡುವೆ ಕಾಂಬುದು ಬಾಳಕ್ಷಿತಿಜದ ಕಂಕಣ.
ನೆಲವು ನೀರಿನ ಕರೆಗೆ ತೀರದು ; ಹೆಸರು ತೆಂಕಣ ಕೊಂಕಣ.
ಬಯಲ ಸರಿಸಮ ಹರಡಿಕೊಂಡಿದೆ ಎಲ್ಲ ಬಾಳಿನ ಸಾರವು.
ಹೋಗಿ ಬರುವುದು ಎಲ್ಲಿ ? ಕಂಗಳ ಆಟವೀ ಸಂಸಾರವು ‖ ೩೪ ‖

ಎತ್ತ ಕಾಡಿನ ಹಕ್ಕಿ ! ಎತ್ತಣ ಮುನಿಯ ಮೌನವ ಕೆಣಕಿತು !
ಅಚ್ಚರಿಯೆ ನನ್ನೀಜಿವಾಳದ ಪಾಡು ಹಾಡಿನೊಳಿಣಿಕಿತು.
ಶೋಕದೆಳೆಯಲಿ ಶ್ಲೋಕ ಹೆಣೆದಿರೆ ಲೋಕವೇ ರಸವುಂಡಿದೆ
ಯಾರ ದುಃಖಕೊ ಯಾರೆ ಅತ್ತರು ಎಲ್ಲರಿಗು ಸಮುಕಂಡಿದೆ ‖ ೩೫ ‖

ನಿನ್ನ ತಾಯಿಗೆ ನಿನ್ನ ನೆನವೇ ವಿಷದ ಬಟ್ಟಲವಾಗಿದೆ
ತೃಷೆಗೆ ಯಾನೀರೇನು ? ಒಡಲಿಗೆ ಚಿತೆಯೆ ತೊಟ್ಟಿಲವಾಗದೆ ?
ಬಾಳೆ ಬೇಗೆಯ ಬಟ್ಟೆಯೆನಿಸಿರುವಾಗ ನೆನಸಿನ ಕಿಚ್ಚಿಗೆ
ನೀರನೆರೆದರು ಭುಗಿಲನುರಿದರೆ ಏನುಪಾಯವು ಹೆಚ್ಚಿಗೆ ? ‖ ೩೬ ‖

ನಿನ್ನ ಮರಣಕೆ ನಾಡೆ ಮರುಗಿತು ; ಓಲೆ ಹತ್ತೂ ದಿಕ್ಕಿಗೆ
ಹಸೆಗೆ ಸಾರುವ ಹರೆಯದವನೊ ಸಗೆಯನೊ ಎನುವೊಲು ಉಕ್ಕಿಗೆ
ಹಾರಿಸಾರಿತು ಬಿಸಿಯುಸಿರ ಸುಯ್ಲಾಗಿ ಸುತ್ತೂ ನಾಡಿಗೆ
ನೋವು ಬಯಸುವ ಕಾವಿನಂತೆಯೆ ; ದುಃಖ ಮರಳಿತು ಗೂಡಿಗೆ ‖ ೩೭ ‖

ನಿನ್ನ ನೆನೆವರು ಊರ ಜನರೇ ? ನೂರುಜನ ನೂರಾರೆಡೆ.
ಅವರೆರೆದ ಸ್ನೇಹಕ್ಕೆ ಹೊತ್ತಿದೆ ಬತ್ತಿಹೋಗದ ಕೆಂಜೆಡೆ.
ನೆತ್ತಿಯಲಿ ಹೊತ್ತಿರುವ ಆರತಿಯಂತೆ ಆರದೆ ಸಾಗಿದೆ
ಮನದ ತುರಿಯ ನಿವಾರಿಸಲು ಉರಿನೀರ ಸುರಿವಿದ ಹಾಗಿದೆ ‖ ೩೮ ‖

ನನ್ನ ಹತ್ತಿರ ನೀನು ಸುತ್ತುತ್ತಿರಬಹುದು ! ಅಹುದಹುದಹಾ !
ನಾನು ಕಾಣದೆ ನೀನು ಕಂಡರೆ ತೃಪ್ತಿಯೇ ಏನದು ಮಹಾ !

ಮೆಲ್ಲಮೆಲ್ಲನೆ ಎದೆಯು ಝಲ್ಲೆನೆ ಒಳಗೊಳಗೆ ಕೂಗುವೆನಿಗೋ!
ಭಾವು, ಭಾವುರಾಯ, ರಾಮಾ! ಎಕೆ ಓಗೊಡಲಾರೆಯೋ? ‖ ೩೯ ‖

ನೀನು ಚೆಲುವಿನುಪಾಸಕನು, ನೀ ಗಾಳಿಮೋಡದ ಗೆಳೆಯನು
ಋತುಗಳಲಿ ಭಲ! ನೀನು ನೋಡಿದೆ ನಾನು ನೋಡದ ಎಳೆಯನು
ಅಲ್ಲಿ ಸಾಧನಕೇರಿ ಕರೆವುದು ಏನುಹೇಳಲಿ ಬೀದಿಗೆ?
ನನ್ನ ಊಹೆಯು ಅಡವಿಹೊಕ್ಕರೆ ಹೇಗೆ ಹತ್ತಲಿ ಹಾದಿಗೆ? ‖ ೪೦ ‖

ನನ್ನ ಚರಿತದ ಒಂದು ಮಗ್ಗಲು ನಿನ್ನೊಡನೆ ಕುಸಿಬಿದ್ದಿತು.
ನನ್ನ ಜೀವನ ವಿಭವವಿಲಸವ ಮರವೆಗಡಲೊಳಗದ್ದಿತು.
ಎಂದಿಗೋ ಇನ್ನೆಂದಿಗೋ ನಿನ್ನಂದ ಎಳೆನಗೆ ಎಂಬುದು
ನನ್ನ ಕವನವನಿದಿರುಗೊಂಬುದು? ಅಮಲ ಸ್ವಾಗತಕಾಂಬುದು ‖ ೪೧ ‖

ನನ್ನ ಕವನಗಳನ್ನು ಓದಲು ನಿನ್ನ ರಸನೆಗೆ ಹೊಳೆವುದು
ಪಾಂಡುರಂಗನ ರಾಗದಲ್ಲಿಯು ನಿನ್ನ ದನಿಯೇ ಮೊಳೆವುದು.
ಬಾಳನಾಡಿದ ಚತುರಮಾತುಗಳಲ್ಲಿ ನಿನ್‌ತನ ಕೊನೆವುದು
ಮಂಗಲೆಯ ಮುದ್ದಾಟದಲ್ಲಿಯೆ ನಿನ್ನ ಬಾಲ್ಯವು ನೆನೆವುದು ‖ ೪೨ ‖

ತಮ್ಮದಿರ ನಾ ಕಳೆದುಕೊಂಡಿಹೆ, ಕಳೆದುಕೊಂಡಿಹೆ ತಾಯಿಯ,
ಎಳೆಯ ಗೆಳೆಯರ ಕಳವಿನಲಿ ನಾ ಕಳೆದೆ ಜೀವನ ಮಾಯೆಯ
ಎಲ್ಲಿಯೋ ಅಡಗಿತ್ತು ಕಾಲನ ಹೊಟ್ಟೆಯಲಿ ಈ ಲೆಕ್ಕವು
ನಿನ್ನ ಮರಣದ ನೆವಕೆ ಮರುಕಳಿಸಿಹುದು ಮುಂಚಿನ ದುಃಖವು ‖ ೪೩ ‖

ಮಕ್ಕಳಲಿ ನೀ ಮೊದಲಿನವ ನಮ್ಮಕ್ಕರಕೆ ತುತ್ತಾದವ,
ನಿರ್ಭಯದ ನಿಃಸೀಮದಲಿ ನೀ ನಮ್ಮ ತುಟಿಮುತ್ತಾದವ
ನಮ್ಮ ಮುನಿಸಿಗೆ ಮರುಗಿ, ಕನಸಿಗೆ ಕೊರಗಿ, ನೆನಸಿಗೆ ಮಾದವ,
ನಮ್ಮ ಕಿಚ್ಚಿನ ಚುರುಕನುಂಡೂ ಕೆಚ್ಚಿನೊಳಗೊಂದಾದವ ‖ ೪೪ ‖

ತೊದಲು ಜಲ್ಪಿಸಿ ಸಾಕು ಬಂದರೆ ಭೃಂಗವಾಹನೆ ಕಲ್ಪನೆ
ನಿಮಿರಿ ಕಿವಿಸೂಸುವದು ಸವಿ ನಿನ್ನೊಳಗೆ ರಸ ಸಂಕಲ್ಪನೆ!
ನಿನ್ನ ಕಣ್ಣಿನ ತವಕ ನನ್ನಲಿ ಮಿಡಿಟುವದು ಮಿದುರಾಗವ
ಸಹೃದಯನೆ! ಹೇ ಸದಯನೇ! ತುಂಬುವರು ಯಾರಾ ಜಾಗವ? ‖ ೪೫ ‖

ಗ್ರೀಕ ಯುವಕರ ಹಾಗೆ ಪ್ರಾಣೋಲ್ಲಾಸಿ ಚೇತೋಮಂದಿರ
ತವಕ ತಾಳ್ಮೆಯ ಸಮರಸಿಯು ವಿಸ್ಮಿತದ ಸುಸ್ಮಿತ ಸುಂದರ!
ಬಂದೆ ಹೊರ ಎಚ್ಚರದ ತೆರೆಯನು ತೆರೆದು ಕನಸಿನ ಅಟ್ಟಕೆ
ಜನನ ಮರಣದ ವೇಷ ಬಯಲಿಗೆ ಎಳೆವ ದೃಶ್ಯದ ಮಟ್ಟಕೆ ॥ ೪೬ ॥

ಎಲ್ಲಿ ಮಾವಿನ ನೆರಳಿಹುದೊ, ಹೂಹುಲ್ಲು ಹಸಿರಿನ ತಂಗೊಳ
ಚುಕ್ಕೆ ಪಕ್ಕದ ಚಿಟ್ಟೆಕುಣಿವಲಿ, ತುಂಬಿ ಕುಡಿವವು ಜೇಂಗೊಡ
ಅಲ್ಲಿ ಬೆಳಗಿನ ಬೈಗುಗೆಂಪಿನ ಕಂಪು ಕಣ್ಮರೆ ಸುಳಿವುದು
ಮಲ್ಲಿಗೆಯನಗೆ ಮುಗುಳರಳುವೊಲು ನಿನ್ನ ನೋಟವು ಹೊಳೆವುದು ॥ ೪೭ ॥

ಅತ್ತು ಏನಿದೆ? ಹಾಡಿ ಏನಿದೆ? ಬೇಡಿ ಬಂದುದು ಸಂದಿತು
ಚಿತ್ತ ಉಪರಮಹೊಂದುವಾಗಲೆ ಪಾಪ, ನೀರೆದೆ ನೊಂದಿತು.
ನೀನೆ ನನ್ನನು ಹಾಡಿ ನೆನೆಯುವೆ ಎಂದು ನಾ ನೆನೆಸಿದ್ದೆನು.
ರಸದನದಿ ಈನೆನೆತು ನನ್ನನು; ಇಲ್ಲದಿರೆ ಮುಳುಗಿದ್ದೆನು ॥ ೪೮ ॥

ಹೆಣವ ಮುಟ್ಟಲು ಹೆದರಿ ಜನ ಸತ್ತವನ ಸುತ್ತಲು ಸುಳಿವುದು
ಅದರ ಹಾಗೆಯೆ ನಿನ್ನ ಮುಟ್ಟದೆ ನನ್ನ ನುಡಿಯೂ ಬೆಳೆವುದು
ಬೆನ್ನತಟ್ಟಲು, ಗಲ್ಲಮುಟ್ಟಲು, ತಲೆಯ ಸವರಲು ಬಾರದು;
ಕಣ್ಣುಕಣ್ಣನು ಕರೆಯದಾಚೆಗೆ ಹೋದೆ; ಈ ಬಗೆ ಹಾರದು ॥ ೪೯ ॥

ತಾಯ ಬಸಿರಿನ ಬೇಗೆ ನಂದಿಸೆ ಬಯಲ ಬಿಜ್ಜಣಗಾಳಿಯೇ?
ನಿದ್ರೆಯಲ್ಲಿಯು ನೊಂದು ಮರುಗುವ ಎದೆಗೆ ಈ ವೈತಾಳಿಯೇ!
ಕೆಟ್ಟ ಅನ್ನವ ಅಟ್ಟಬೇಕಿದೆ. ವತ್ಸವಿರಹದ ಸಾಮವು
ಛಂದ ತಪ್ಪಿದ ಉಸಿರ ಹಾದಿಗೆ ತರುವ ಪ್ರಾಣಾಯಾಮವು ॥ ೫೦ ॥

ಪುತ್ರಶೋಕದ ಬೆಲೆಯ ಹಿಗ್ಗಿಸೆ ದನಿಯ ತೆಗೆದೆನೆ ರಾಗಕೆ?
ಹಾಡುಗಾರಗೆ ಹಾಡಿನಂಜಲಿ ಬೇಡವೇನು ವಿಯೋಗಕೆ.
ರಸವಿರಸಗಳ ಸ್ವರಸವಿಷವನು ಗುಟುಕರಿಸಿ ನಾ ನುಡಿಯುವೆ
ಪುತ್ರವಿರಹದ ಖ್ಯಾತಿ ಸಲ್ಲಿಸುತಿಹ ವಿವೇಕವ ಕುಡಿಯುವೆ ॥ ೫೧ ॥

ಶುಕ್ರವಾರದ ಸ್ಮರಣೆವಾರಕೆ ಶುಕ್ರ ಸಂಜೀವನಿಯೊಲು
ಸತ್ತದುಃಖವನೆತ್ತದೇ ಸಂಶಮಿಸಲಾ ಸುರಧುನಿಯೊಲು

ರಾಮನಾಮಕೆ ತಣಿಯಲಿಲ್ಲವೆ ಶಿವನಗಂಟಲ ತನಿವಿಷ
ದೇವಯಾನದ ಗಾನವಾಗಲಿ ನಿನ್ನ ನೆನಪಿನ ಇನಿರಸ ‖ ೫೨ ‖

ಬನದ ಮರೆಗಿಹ ಮಲೆಯ ಕೋಡಿನ ಗುಡಿಯ ಗಂಟೆಯ ನಾದವು
ಕರೆಯುವೊಲು ಕಲ್ಪನೆಯ ಸುಮಗಳ, ಅದರ ದಿವ್ಯಸ್ವಾದವು
ಛಂದದಲಿ ಸ್ವಚ್ಛಂದದಲಿ ತನ್ನೆತ್ತರಕೆ ಎಳೆವಂದದಿ—
ನೆನಪು ಪಾಡಿನ ಹಾಡ ಹೆಣೆದಿದೆ ಹೂವು ಹೂವಿನ ಬಂಧದಿ. ‖ ೫೩ ‖

ದ. ರಾ. ಬೇಂದ್ರೆ

ಅನಿಶ್ಚಯ—ಸುನಿಶ್ಚಯ

ಎಲ್ಲ ಅನಿಶ್ಚಯ! ಒಂದೆ ಸುನಿಶ್ಚಯ:
  ನಿನ್ನ ಅಚಿಂತ್ಯ ಅಪಾರ ದಯಾ!
ದುಃಖ ಹಿರಣ್ಯನ ಸುಖನಖ ಕೃಪೆಯಿಂ
  ಸೀಳ್ವ ನೃಸಿಂಹನ ಮುಖದ ದಯಾ!

ಎಲ್ಲ ಸುಚಂಚಲ! ಒಂದೆ ಅಚಂಚಲ:
  ನಿನ್ನ ಚರಣತಲ ಭಕ್ತಿಬಲ!
ಎಲ್ಲ ಬಲಗಳಿಗೆ ತಾ ಮೂಲದ ಬಲ,
  ಸಕಲ ತಪೋತರು ಪರಮಫಲ!

ಕುವೆಂಪು.

ಶ್ರೀ ಚಾಮುಂಡೇಶ್ವರೀ

I

ಭಾರತೀಯ ಸಂಸ್ಕೃತಿಯಲ್ಲಿ ಪ್ರತೀಕೋಪಾಸನೆಯು ಅನಾರ್ಯಸಂಪರ್ಕದಿಂದ ಪ್ರಚಾರಕ್ಕೆ ಬಂದಿತೆಂಬ ಸಾಧಾರಣವಾದ ಅಭಿಪ್ರಾಯವು ನಿರಾಧಾರವಾದುದು.[1] ತಾಂತ್ರಿಕ ಪದ್ಧತಿಗಳೆಲ್ಲವೂ ವೇದವಿರುದ್ಧವೆಂದು ಪ್ರತಿಪಾದಿಸಲು ಸಾಧ್ಯವಿಲ್ಲ. ಸಕಲ ತಂತ್ರಗಳೂ ವೇದಮೂಲವೆಂದು, ತಾಂತ್ರಿಕ ಪದ್ಧತಿಯನ್ನು ಬಿಟ್ಟರೆ ಅಥರ್ವಣ ಪ್ರಯೋಗವೇ ಸಾಧ್ಯವಲ್ಲವೆಂದೂ ತಂತ್ರಗ್ರಳಲ್ಲಿ ಹೇಳಿದೆ.

ವಿನಾ ಕಾಲೀಂ ವಿನಾತಾರಾನ್ನಾಥರ್ವಣೋ ವಿಧಿಃ ಕ್ವಚಿತ್ ||

(ಸಮ್ಮೋಹನ ತಂತ್ರ)

ಅಥರ್ವವೇದವು ವೈದಿಕ ಸಂಸ್ಕೃತಿಯ ವಿಶಿಷ್ಟರೂಪವೇ ವಿನಾ ವಿರುದ್ಧರೂಪವಲ್ಲ.[2] ಅನೇಕ ವೈದಿಕ ಮಂತ್ರಗಳಿಗೆ ತಾಂತ್ರಿಕಾರ್ಥಗಳನ್ನು ಕಲ್ಪಿಸದಿದ್ದರೆ ಸಮನ್ವಯೇ ಸಿದ್ಧವಾಗುವದಿಲ್ಲ. ಇತಿಹಾಸ ಪುರಾಣಗಳು ವೇದಾರ್ಥವನ್ನೇ ಉಪಬೃಂಹಣ ಮಾಡುವವು. ತಾಂತ್ರಿಕಮತಗಳೆನಿಸಿಕೊಂಡ ಶೈವ, ವೈಷ್ಣವ, ಶಾಕ್ತ, ಸೌರ, ಗಾಣಾಪತ್ಯ, ಕೌಮಾರ ಪಂಥಗಳೆಲ್ಲವೂ ಸಂಹಿತಾ ಭಾಗಗಳಲ್ಲಿಯೇ ಸೂಚಿಸಲ್ಪಟ್ಟಿವೆ. ಶಿವನು ಅನಾರ್ಯದೇವತೆಯೆಂದು, ವಿಷ್ಣುವು "ಪಿಶನ್" ಎಂಬ ಸುಮೇರಿಯನ್ ದೇವತೆಯೆಂದು, ಮಾತೃದೇವತಾಪೂಜೆಯು ಸುಮೇರು, ಬ್ಯಾಬಿಲೋನಿಯ, ಈಜಿಪ್ಟ್ ಮುಂತಾದ ಪ್ರಾಚೀನ ಸಂಸ್ಕೃತಿಗಳ ಸಂಪರ್ಕದಿಂದಲೋ ಅಥವಾ ಅನಾರ್ಯರಾದ ದ್ರಾವಿಡ ಮತ್ತು ಪ್ರಾಗ್ದ್ರಾವಿಡ ಸಂಪರ್ಕದಿಂದಲೋ ಬಂದಿತೆಂದು, ನಾರಾಯಣನು ಜಲಾಭಿಮಾನಿಯಾದ ದೇವತೆಯಾದುದರಿಂದ ಮೊದಲು ಸಮುದ್ರಯಾನವನ್ನರಿತಿದ್ದ ದ್ರಾವಿಡದೇವತೆ ಎಂದೂ, ಸೂರ್ಯೋಪಾಸನೆಯು ಈಜಿಪ್ಟಿನವರ-ಒಸೈರಿಸ್ ಅಥವಾ ಪರ್ಷಿಯ ದೇಶದ "ಮಿತ್ರ-ಮಿಹಿರ" ಪೂಜೆಯಿಂದ ಗ್ರಹಿಸಲ್ಪಟ್ಟಿತೆಂದೂ, ಕುಮಾರಪೂಜೆಯು ಕ್ಯಾಪಡೋಷಿಯ, ಫ್ರಿಜಿಯ, ಆನಟೋಲಿಯ ಪ್ರಾಂತ್ಯದ "ಅಟ್ಟಿಸ್-ಅಡೋನಿಸ್" ಸಂಬಂಧದಿಂದುಂಟಾಯಿತೆಂದೂ, ಗಣಪತಿಯು ಹೇರಂಬ (ಎರುಮೈ) ಮತ್ತು ಗಜಾಸ್ಯನಾದುದರಿಂದ ಅನಾರ್ಯರ (totemistic) ದೇವತೆಯೆಂದೂ ಊಹೆಗಳು ಬೆಳೆಯುತ್ತಿವೆ. ಈ ಊಹೆಗಳ ಸಾಧುತ್ವಾ

[1] Farquhar, *The Religions of India.*

[2] S. Srikantha Sastri, *Proto-Indic Religion.*

ಸಾಧುತ್ವವನ್ನು ಪ್ರಕೃತದಲ್ಲಿ ಪರೀಕ್ಷಿಸಲು ಸಾಧ್ಯವಿಲ್ಲ. ಆದರೂ ಇವುಗಳು ನಿರಾಧಾರವೆಂಬುದನ್ನು ಕೆಲವಂಶಗಳಿಂದ ಸೂಚಿಸುವೆವು.

ವೈದಿಕ ಸಂಸ್ಕೃತಿಯಲ್ಲಿ ಅಗ್ನಿಯಜ್ಞಗಳಿಗೇ ಪ್ರಾಧಾನ್ಯವೆಂಬುದು ನಿರ್ವಿವಾದ. ಋಗ್ವೇದ ಸಂಹಿತಾಕಾಲಕ್ಕೆ ಎಷ್ಟೋ ಮುಂಚೆಯೇ ಚಾತುರ್ಮಾಸ್ಯ, ಅತಿರಾತ್ರ, ಅಶ್ವಮೇಧ ಮುಂತಾದಯಜ್ಞಗಳು ಪ್ರಚಾರದಲ್ಲಿದ್ದು ಅನಾದಿ ಎಂದು ಗಣಿಸಲ್ಪಟ್ಟಿದ್ದವು.[1] ಯಜ್ಞವು ಪ್ರಥಮಧರ್ಮ (ಯಜ್ಞೇನಯಜ್ಞಮಯಜಂತ ದೇವಾಃ ತಾನಿ ಧರ್ಮಾಣಿ ಪ್ರಥಮಾನ್ಯಾಸನ್|| ಋಗ್. X-೯೦-೧೬). ಯಜ್ಞಸಂಬಂಧವಾಗಿಯೇ ಷಣ್ಮತಗಳು ಹುಟ್ಟಿರುವದರಿಂದ ತಾಂತ್ರಿಕ ಮತಗಳು ವೇದಮೂಲ ಮತ್ತು ವೇದಸಮ್ಮತ.[2] ಉದಾಹರಣೆಗಾಗಿ :

ಶಿವನು ಅನಾರ್ಯದೇವತೆ ಎಂದೂ ವೈದಿಕರುದ್ರ ಸಂಬಂಧದಿಂದ ಶೈವಮತವು ಈಗಿನ ಸ್ಥಿತಿಯನ್ನು ಪಡೆಯಿತೆಂದೂ ಅನೇಕರ ಅಭಿಪ್ರಾಯವಾಗಿದೆ.[3] ಆದರೆ ಶಿವರುದ್ರರು ಯಜ್ಞೇಶ್ವರನ ಸೌಮ್ಯ ಮತ್ತು ಕ್ರೂರರೂಪಗಳೆಂದು ವೇದಮಂತ್ರಗಳಲ್ಲಿಯೇ ಹೇಳಿದೆ.

> ತ್ವಮಗ್ನೇ ಪ್ರಥಮೋಽಂಗಿರಾ ಋಷಿರ್ದೇವೋ ದೇವಾನಾಮಭವಃ ಶಿವಃ ಸಖಾ |
> ತವ ವ್ರತೇ ಕವಯೋ ವಿದ್ಮನಾಪಸೋಽಜಾಯನ್ತ ಮರುತೋ ಭ್ರಾಜದೃಷ್ಟಯಃ ||
> (ಋಗ್. I, ೭-೩೧. ೧.).
>
> ತ್ವಮಗ್ನೇ ರುದ್ರೋ ಅಸುರೋ ಮಹೋ ದಿವಃ | . . . ಆವೋ ರಾಜಾನಂ ಅಧ್ವರಸ್ಯರುದ್ರಂ ಹೋತಾರಂ ಸತ್ಯಯಜಂರೋದಸ್ಯೋಃ || ಇತ್ಯಾದಿ.

ಶಿವಲಿಂಗ ಮತ್ತು ಪಿಂಡಿಕೆಗಳು ಉತ್ತರಾರಣಿ ಅಧರಾರಣಿಗಳ ಅಥವಾ ವೇದಿ-ಅಗ್ನಿಜ್ವಾಲೆಗಳ ಪ್ರತೀಕಗಳು.

ವಿಷ್ಣುವು ಕೂಡ ಯಜ್ಞಾಭಿಮಾನದೇವತೆಯು. (ಯಜ್ಞೋವೈ ವಿಷ್ಣುಃ ಪಶವಃ ಶಿಪಿಃ ; ಅಗ್ನಿರ್ವೈದೇವಾನಾಮವಮೋ ವಿಷ್ಣುಃ ಪರಮಃ ತದಂತರಂ ಅನ್ಯಾದೇವತಾಃ —ಐ. ಬ್ರಾ I, ೧.). ವಿಷ್ಣುವಿನ ದಶಾವತಾರ ಕಥೆಗಳು ವೇದಮೂಲವು (ಮತ್ಸ್ಯ—ಶತಪಥ I,—೮-೧ ; ಕೂರ್ಮ—ಶತಪಥ VII, ೪-೩-೫ ; ೫-೧-೫ ; ವರಾಹ—ತೈತ್ತಿರೀಯ VII, ೧-೫ ; ಶತಪಥ XIV, ೧-೨-೧೧ ; ವಾಮನ—ತ್ರೀಣಿಪದಾ ವಿಚಕ್ರಮೇ—ಇತ್ಯಾದಿ). ಪಾಂಚರಾತ್ರವು ಪಂಚರಾತ್ರ ಸತ್ರದಿಂದ ಬಂದುದು.

ಶಕ್ತಿದೇವತಾಸ್ವರೂಪಗಳಾದ ದುರ್ಗಾ, ಕಾಳೀ, ಕರಾಲೀ ಇತ್ಯಾದಿಗಳು ಯಜ್ಞೇಶ್ವರಸಂಬಂಧವಾದುವು. ತೈತ್ತಿರೀಯ ಸಂಹಿತೆಯಲ್ಲಿ ವೇದಿಯನ್ನು ಅದಿತಿ,

---

[1] P. V. Kane, *The History of Dharma Śāstra*, Vol. II, Pt. 1.
[2] S. Śrīkaṇṭha Śāstri, *Introduction to Śrī Bhāgavata.*
[3] R. G. Bhandarkar, *Vaiṣṇavism, Śaivism and Minor Religions.*

ಸಿಂಹೀ, ಮಹಿಷೀ ಇತ್ಯಾದಿಯಾಗಿ ಸಂಬೋಧಿಸಿದೆ. ವೇದಿ ಅಥವಾ ಚಿತಿಯಲ್ಲಿ ಪ್ರತಿಷ್ಠಿತವಾದ ಅಗ್ನಿಯ ಪ್ರಚಣ್ಡರೂಪವು ದುರ್ಗಾ.

ಜಾತವೇದಸೇ ಸುನವಾಮ ಸೋಮಮರಾತೀಯತೋ ನಿದಹಾತಿ ವೇದಃ
ಸನಃ ಪರ್ಷದತಿದುರ್ಗಾಣಿ ವಿಶ್ವಾ ನಾವೇವ ಸಿನ್ಧುಂ ದುರಿತಾತ್ಯಗ್ನಿಃ
ತಾಮಗ್ನಿವರ್ಣಾಂ ತಪಸಾಜ್ವಲನ್ತೀಂ ವೈರೋಚನೀಂ ಕರ್ಮಫಲೇಷು ಜುಷ್ಟಾಮ್
ದುರ್ಗಾಂ ದೇವೀಂ ಶರಣಮಹಂ ಪ್ರಪದ್ಯೇಸುತರಸಿ ತರಸೇ ನಮಃ.

(ತೈ. ಬ್ರಾ. IV—೪೪).

ಈ ಜಾತವೇದಸೇದೇವಿಯಿಂದ ಹೊರಟ ಸ್ಫುಲಿಂಗಗಳೇ ಕಾಳೀ, ಕರಾಳೀ ಇತ್ಯಾದಿ ನಾಮಗಳನ್ನು ಹೊಂದಿದವು.

ಕಾಳೀ ಕರಾಳೀ ಚ ಮನೋಜವಾ ಚ ಸುಲೋಹಿತಾಯಾ ಚ ಸುಧೂಮ್ರವರ್ಣಾ |
ಸ್ಫುಲಿಂಗಿನೀ ವಿಶ್ವರೂಪೀ ಚ ದೇವೀ ಲೇಲಾಯಮಾನ ಇತಿ ಸಪ್ತ ಜಿಹ್ವಾಃ ||

(ಮುಣ್ಡಕೋಪನಿಷತ್, II—4).

ಸತೀದೇವಿ ಸಂಬಂಧವಾದ ಕಥೆಗಳೆಲ್ಲವೂ (ದಕ್ಷಯಜ್ಞ, ಸತಿಯು ಯಜ್ಞಕುಣ್ಡದಲ್ಲಿ ದೇಹತ್ಯಾಗಮಾಡಿದುದು ಇತ್ಯಾದಿ) ಯಜ್ಞ ಸಂಬಂಧವಾಗಿವೆ.

ಹೀಗೆಯೇ ಕೌಮಾರ ಮತ್ತು ಗಾಣಾಪತ್ಯಮತಗಳೂ ಯಜ್ಞಮೂಲವು. ಸುಬ್ರಹ್ಮಣ್ಯನೆಂಬುವನು ಒಬ್ಬ ಋತ್ವಿಗ್. ಕುಮಾರಸ್ವಾಮಿಯ ಅಗ್ನಿಸಂಬಂಧವಾದ ಜನನ, ಷಣ್ಮಾತೃಗಳಿಂದ ಪೋಷಣೆ (ಕೃತ್ತಿಕಾಸು ಅಗ್ನಿಮಾದಧೀತ) ಶಿಖಿ (ಅಗ್ನಿ) ವಾಹನ ಮುಂತಾದವು ಯಜ್ಞಮೂಲವನ್ನು ಸೂಚಿಸುವವು. ಹಾಗೆಯೇ ಗಣಪತಿಗೂ ಬೃಹಸ್ಪತಿ—ಮರುದ್ಗಣಗಳಿಗೂ ಸಂಬಂಧವಿದೆ. ರುದ್ರನು ಮರುದ್ಗಣಗಳ ಪಿತೃ.

ಗಣಾನಾಂ ತ್ವಾ ಗಣಪತಿಂ ಹವಾಮಹೇ ಕವಿಂ ಕವೀನಾಮುಪಮಶ್ರವಸ್ತಮಂ | ಜ್ಯೇಷ್ಠರಾಜಂ ಬ್ರಹ್ಮಣಾಂ ಬ್ರಹ್ಮಣಸ್ಪತ ಆನ ಶೃಣ್ವನ್ನೂತಿ ಭಿಸ್ಸೀದ ಸಾದನಮ್ || ಇದಂ ಪಿತ್ರೇಮರುತಾಮುಚ್ಯತೇ ವಚಃ ಸ್ವಾದೋಃ ಸ್ವಾದೀಯೋ ರುದ್ರಾಯ ವರ್ಧನಮ್ | ರಾಸ್ವಾ ಚನೋ ಅಮೃತ ಮರ್ತಭೋಜನಂ ತ್ಮನೇ ತೋಕಾಯ ತನಯಾಯ ಮೃಳ ||

(ಋಗ್. I—೧೩-೧೧೪, ೬).

ಆದುದರಿಂದ ತಾಂತ್ರಿಕ ಮತಗಳೆಂದೆನಿಸಿಕೊಂಡ ಷಣ್ಮತಗಳೂ ಆರ್ಯಪರಿಗೃಹೀತವೂ ವೇದಮೂಲವೂ ಎಂದು ಸಂಕ್ಷೇಪವಾಗಿ ನಿರ್ಧರಿಸಬಹುದು. ಆರ್ಯರು ಪುರುಷದೇವತೆಗಳನ್ನೇ ಮುಖ್ಯವೆಂದು ಗಣಿಸಿದ್ದರೆಂಬ, ಮಾತೃದೇವತಾಪೂಜೆ, ವಿಗ್ರಹಾರಾಧನೆಗಳು ಅನಾರ್ಯರದೆಂಬ ಅಭಿಪ್ರಾಯಗಳಿಗೆ ವೇದದಲ್ಲಿ ಸ್ವಲ್ಪವೂ

ಅವಕಾಶವಿಲ್ಲ. ಸಗುಣೋಪಾಸನೆ ನಿರ್ಗುಣೋಪಾಸನೆ ಎರಡೂ ವೈದಿಕವೇ. ವಸಿಷ್ಠರಂತಹ ಋಷಿಗಳು ಕೂಡ ಮೂರ್ತಿಪೂಜೆ ಮಾಡುತಿದ್ದರೆಂಬುದಕ್ಕೆ ವೇದದಲ್ಲಿಯೇ ಆಧಾರವಿದೆ.

ಕಇಮಂ ದಶಭಿರ್ಮಮೇನ್ದ್ರಂ ಕ್ರೀಣಾತಿಧೇನುಭಿಃ |
ಯದಾ ವೃತ್ರಾಣಿ ಜಂಘನತ್ ಅಥೈನಂ ಮೇ ಪುನರ್ದದತ್ ||

(ಋಗ್. VI—೨೪-೧೦)

ಮಹೇಚನ ತ್ವಾಮದ್ರಿವಃ ಪರಾ ಶುಲ್ಕಾಯ ದೇಯಾಮ್ |
ನ ಸಹಸ್ರಾಯ ನಾಯುತಾಯ ವಜ್ರವೋ ನ ಶತಾಯ ಶತಾಮಘ ||

(ಋಗ್. VIII—೧-೫)

ಇಳಾ, ಸರಸ್ವತೀ, ಭಾರತೀ, ಶ್ರೀ, ಅದಿತಿ ಇತ್ಯಾದ್ಯನೇಕ ದೇವಿಯರೂ ಮೂರ್ತಿರೂಪದಲ್ಲಿ ಪೂಜಿಸಲ್ಪಡುತ್ತಿದ್ದರು.

ಹೋತಾಯಕ್ಷತ್ಪೇಶಸ್ವತೀಃ | ತಿಸ್ರೋದೇವೀಃ ಹಿರಣ್ಯಯೀಃ |
ಭಾರತೀರ್ಬೃಹತೀರ್ಮಹೀಃ ||

(ತೈ. ಬ್ರಾ. II—೬-೧೭)

ಪಾವಕಾಃ ನಃ ಸರಸ್ವತೀ | ವಾಜೇಭಿರ್ವಾಜಿನೀವತೀ |
ಯಜ್ಞಂವಷ್ಟು ಧಿಯಾವಸುಃ ||
ಚೋದಯಿತ್ರೀ ಸೂನೃತಾನಾಂ | ಚೇತನ್ತೀಸುಮತೀನಾಮ್
ಯಜ್ಞಂದಧೇ ಸರಸ್ವತೀ ||
ಮಹೋ ಅರ್ಣಃ ಸರಸ್ವತೀ | ಪ್ರಚೇತಯತಿ ಕೇತುನಾ |
ಧಿಯೋ ವಿಶ್ವಾವಿರಾಜತಿ ||

(ಋಗ್, I—೧-೩-೧೦. ೧೨)

ತಾಂತ್ರಿಕಾಚಾರಗಳಾದ ಮಧು, ಮದ್ಯ, ಮಾಂಸ, ಮೀನ (ಮುದ್ಗ) ಮೈಥುನಾದಿಗಳುಮಧುವ್ರತ, ಸೌತ್ರಾಮಣಿ, ಅತಿರಾತ್ರ ಅಶ್ವಮೇಧ, ರಾಜಸೂಯ ಮುಂತಾದ ವೈದಿಕ ಯಜ್ಞಗಳಲ್ಲಿಯೂ ಪ್ರಚಾರದಲ್ಲಿವೆ. ಪ್ರಯೋಗ ಮತ್ತು ಪ್ರಯೋಜನಗಳ ಭೇದಕ್ಕನುಸಾರವಾಗಿ ವೈದಿಕ ತಾಂತ್ರಿಕವೆಂಬ ಭೇದವು ಕಲ್ಪಿಸಿದೆ. ಐಹಿಕದಲ್ಲಿ ಫಲಾಭಿವೃದ್ಧಿಯೂ ಆಮುಷ್ಮಿಕದಲ್ಲಿ ಮುಕ್ತಿಯೂ ಎರಡು ಮಾರ್ಗಕ್ಕೂ ಸಮಾನ ಧರ್ಮಗಳು. ಪಶುಪಾಶ ವಿಮೋಕ್ಷೆಗಾಗಿ ಪಶು ಹಿಂಸೆಯು ವಿಧಿಸಲ್ಪಟ್ಟಿದೆಯೇ ವಿನಾ ಪ್ರಾಣಿಹಿಂಸೆಯು ಕೇವಲ ಸ್ವಾರ್ಥಕ್ಕಾಗಿ ವಿಧಿಸಲ್ಪಟ್ಟಿಲ್ಲ. ವೇದಗಳಲ್ಲಿಯೇ ಪಶುವು ನಿಜವಾಗಿ ಮರಣ ಹೊಂದುವುದಿಲ್ಲವೆಂದು ದಿವ್ಯ ಶರೀರ ಪಡೆಯುವದೆಂದು ಹೇಳಿದೆ. ಆದುದರಿಂದ ಪಶುಹಿಂಸೆ ಮಾಡಿದ ಅಧ್ರಿಗು "ಅಪಾಪ"

ನವಾ ಉ ಏತನ್ಮ್ರಿಯಸೇ ನರಿಷ್ಯಸಿ ದೇವಾಂ ಇದೇಷಿ ಪಥಿಭಿಃ ಸುಗೇಭಿಃ |
ಹರೀ ತೇಯುಜ್ಞಂ ಪೃಷತೀ ಅಭೂತಾಮುಪಸ್ಥಾದ್ವಾಜೀ ಧುರಿರಾಸಭಸ್ಯ ||

(ಋಗ್. 1—೧೬೨—೨೧ ; I—೧೬೩-೧೩),

ದೈವ್ಯಾಃ ಶಮಿತಾರ ಆರಭಧ್ವಮುತ ಮನುಷ್ಯಾ ಉಪನಯತ ಮೇಧ್ಯಾದುರ
ಆಶಾಸಾನಾ ಮೇಧಪತಿಭ್ಯಾಂ ಮೇಧಮ್ | ....ಅಧ್ರಿಗೋ ಶಮೀಧ್ವಂ
ಸುಶಮಿಶಮೀಧ್ವಂ ಶಮೀಧ್ವಮಧ್ರಿಗಾ ೩ ಉ ಅ ಪಾ ಪಾ ||

(ತೈ. ಬ್ರಾ. III—೬-೬),

ಹೀಗೆಯೇ ತಾಂತ್ರಿಕಾಚಾರದಲ್ಲಿಯೂ ವೃಥಾ ಪ್ರಾಣಹಿಂಸೆಯು ನಿಷೇಧಿಸಲ್ಪಟ್ಟಿದೆ.

ಆತ್ಮಾರ್ಥಂ ಪ್ರಾಣಿನಾಂ ಹಿಂಸಾ ನಕದಾಚಿನ್ಮಯೋದಿತಾ |
ಬಲಿದಾನಂ ವಿನಾ ದೇವ್ಯಾ ಹಿಂಸಾ ಸರ್ವತ್ರ ವರ್ಜಯೇತ್ ||

(ಕುಲಾರ್ಣವ ತಂತ್ರ)

ಪಶುಪಾಶ ವಿಮೋಕ್ಷಾಯ ಹೇತುಕೂಟಸ್ಥಿತಾಯಚ |
ಪಶವೇ ಚ ನಮುಸ್ತುಭ್ಯಂ ನಮಸ್ತೇ ಬಲಿರೂಪಿಣೇ ||
ಭೇದ್ಯೋಽಸಿ ಬಲಿರೂಪಸ್ತ್ವಂ ಆಜ್ಞಯಾಪರಯಾಗುರೋಃ |
ಭೇದಭೇದೋದ್ಭವಂ ದುಃಖಂ ಕ್ಷಮಸ್ವ ಪಶುರೂಪಧೃಕ್ ||

(ಶ್ರೀ ವಿದ್ಯಾರ್ಣವತಂತ್ರ I, p. ೫೧೮)

ಕುಣ್ಡಲಿನೀ ಯೋಗ, ನ್ಯಾಸ, ಮುದ್ರಾ, ಚಕ್ರರಚನಾ, ಯೋನಿಮಂಡಲ ಮುಂತಾದ ಅಂಶಗಳೆಲ್ಲವೂ ವೇದಮೂಲವು. ವಿಶ್ವಾತ್ಮಕವಾದ ಶ್ರೀಚಕ್ರಯಂತ್ರವು ಯಜ್ಞ ಕುಂಡದಿಂದಾವಿರ್ಭವಿಸಿತೆಂದು ಬ್ರಹ್ಮಾಂಡ ಪುರಾಣದಲ್ಲಿ ಹೇಳಿದೆ. ಆದುದರಿಂದ ತಂತ್ರಗಳೆಲ್ಲವೂ ವೇದಾಧಾರದ ಮೇಲೆ ನಿಂತಿವೆ.

ದೇವತಾಭ್ಯಃ ಪಿತೃಭ್ಯಶ್ಚ ಮಧುವಾತಾಋತಾಯತೇ |
ಸ್ವಾದಿಷ್ಟಯಾ ಮದಿಷ್ಟಯಾ ಕ್ಷೀರಂಸರ್ಪಿ ಮಧೂದಕಮ್ ||
ಹಿರಣ್ಯಪಾವಾಃ ಖಾದಿಶ್ಚ ಅಬಧ್ನನ್ ಪುರುಷಂಪಶುಮ್ |
ದೀಕ್ಷಾಮುಪೇಯಾದಿತ್ಯಾದ್ಯಾಃ ಪ್ರಮಾಣಂಶ್ರುತಯಃ ಪ್ರಿಯೇ ||

(ಕುಲಾರ್ಣವ. II—೧೪೦, ೧೪೧)

ಶಿವಶಕ್ತಿ ಮಯೋಲೋಕೋ ಲೋಕೇಕೌಲಂ ಪ್ರತಿಷ್ಠಿತಮ್ |
ತಸ್ಮಾತ್ಸರ್ವಾಧಿಕಂ ಕೌಲಂ ಸರ್ವಸಾಧಾರಣಂ ಕಥಮ್ ? ||
ಷಡ್ದರ್ಶನಾನಿ ಮೇಽಂಗಾನಿ ಪಾದೌಕುಕ್ಷಿಃ ಕರೌ ಶಿರಃ |
ತೇಷು ಭೇದನ್ತುಯಃ ಕುರ್ಯಾನ್ಮಮಾಂಗಂ ಭೇದಯೇತ್ತುಸಃ ||
ಏತಾನ್ಯೇವ ಕುಲಸ್ಯಾಪಿ ಷಡಂಗಾನಿ ಭವನ್ತಿಹಿ |
ತಸ್ಮಾದ್ವೇದಾತ್ಮಕಂ ಶಾಸ್ತ್ರಂ ವಿದ್ಧಿ ಕೌಲಾತ್ಮಕಂ ಪ್ರಿಯೇ ||

(ಕುಲಾರ್ಣವ II—೮೩).

II


ಮಾತೃದೇವತಾ ವಿಗ್ರಹಗಳು ಉಪಶ್ಶಿಲಾಯುಗದಿಂದ ಪ್ರಪಂಚದ ಅನೇಕ ಭಾಗಗಳಲ್ಲಿ ಪ್ರಚಾರದಲ್ಲಿದ್ದವು. ಡಾ| ಕಾರ್ಲ್ ಆಬ್ಸೊಲಾನ್ ಅವರು ಮೊರೇವಿಯ ದೇಶದ "ಮಾಮತ್" ಬೇಟೆಗಾರರ ಶಿಲ್ಪಗಳನ್ನು ಕಂಡುಹಿಡಿದಿರುವರು.[1] ಮೊರೇವಿಯ ದೇಶದ ಪ್ರಾಕ್ ಶಿಲಾಯುಗದ ಶಿಲ್ಪಿಗಳಲ್ಲಿ ಮೃತ್ತಿಕಾ ವಿಗ್ರಹಗಳು, ದಂತದಿಂದ ಮಾಡಿದ ಸ್ತನರೂಪವಾದ ಮಣಿ (beads) ಗಳು ಕಂಡುಬರುವವು. "ವೀನಸ್" ಎಂದು ಕರೆಯಲ್ಪಟ್ಟ ಮಾತೃದೇವತಾ ವಿಗ್ರಹಗಳು ಪ್ರೇಡ್ ಮೋಸ್ಟ್, ಪೆರ್ಕರ್ನಗುಹೆ ಮತ್ತು ವಿಸ್ಟರ್ನಿಟ್ಸ್ ಪ್ರಾಂತ್ಯಗಳಲ್ಲಿ ಸ್ವಾಭಾವಿಕ ರೂಪವಾಗಿಯೂ ದೇಹಾಂಗಗಳನ್ನ ನುಕರಿಸುವಂತೆಯೂ ರಚಿಸಲ್ಪಟ್ಟಿವೆ. ಸೈಬೀರಿಯ ಪ್ರಾಂತ್ಯದಲ್ಲಿರುವ ಮಾಲ್ಟಾ ಇಂದ ಹಿಡಿದು ಪಿರೆನ್ನಿಸ್ ಪರ್ವತಗಳ ವರೆಗೂ ೯೧ ವಿಗ್ರಹಗಳು ಸಿಕ್ಕಿವೆ. ಇವುಗಳ ರಚನಾರೀತಿಯನ್ನನುಸರಿಸಿ ವಿಸ್ಟರ್ನಿಟ್ಸ್, ವಿಲ್ಲೆಂಡಾರ್ಫ್, ಮಾಲ್ಟ, ಗ್ರಿಮಾಲ್ಡಿ, ಪ್ರೇಡ್ಮೋಸ್ಟ್, ಲೆಪೂನೆ, ಮಿಶ್ರ ರೀತಿಗಳಾಗಿ ವಿಂಗಡಿಸಲಾಗಿದೆ. ಹಾರಗಳಲ್ಲಿನ ಮಣಿಗಳು ಸ್ತನಾಕಾರವಾಗಿವೆ. (ಹಿಂದುಗಳಲ್ಲಿ ಪ್ರಚಾರದಲ್ಲಿರುವ ತಾಳಿ ಬೊಟ್ಟು, ಭಾಪಿಂಗ ಮತ್ತು ಕರಿಯಮಣಿ ಸರಗಳಂತೆಯೇ ಇರುವದರಿಂದ ಇವುಗಳ ಪ್ರಾಶಸ್ತ್ಯವು ಪ್ರಾಕ್ ಶಿಲಾಯುಗದಲ್ಲಿಯೇ ಅಂಗೀಕರಿಸಲ್ಪಟ್ಟಿದ್ದಿತೆಂದು ಊಹಿಸಬಹುದು. ರಷ್ಯಾ ದೇಶದ ಕುರ್ಗಾನ್ ಸಮಾಧಿ, ಗ್ರಿಮಾಲ್ಡಿ ಮತ್ತು ಪಾವಿಲಾಂಡ್ ಗುಹೆಗಳ ಸಮಾಧಿಗಳಲ್ಲಿ ಕೆಂಪುಬಣ್ಣಕ್ಕೆ ಪ್ರಾಶಸ್ತ್ಯವು ಕಂಡುಬರುವದು[2]. ಇದರಿಂದ ಹಿಂದುಗಳ ಕುಂಕಮದ ಪ್ರಾಚೀನತೆಯು ಕಂಡುಬರುವದು.)


ಪ್ರಾಗ್ವಂಶೀಯ ಈಜಿಪ್ಟ್, ಸುಮೇರು, ಅಸುರ್, ಕ್ರೀಟ್, ಚೀಣ, ಜಪಾನ್ ಮುಂತಾದ ಪ್ರಪಂಚದ ನಾನಾ ಭಾಗಗಳಲ್ಲಿ ಇಂತಹ "ವೀನಸ್" ವಿಗ್ರಹಗಳು ಸಿಕ್ಕಿವೆ. ಭರತಖಂಡದಲ್ಲಿ ಸಿಂಧು ಪ್ರಾಂತ್ಯ, ಬಕ್ಸಾರ್, ಅಸ್ಸಾಮ್, ಪೈಠಾನ್, ಕೊಂಡಾಪುರ, ಮಾಸ್ಕಿ ಮುಂತಾದ ಅನೇಕ ಸ್ಥಳಗಳಲ್ಲಿ ಈ ಸ್ತ್ರೀ ವಿಗ್ರಹಗಳು ಹೇರಳವಾಗಿವೆ. ಭಾರತೀಯರ ಮಾತೃದೇವತಾ ಭಾವನೆಗಳಿಗೂ ಇತರ ದೇಶಗಳ ಪೂಜಾವಿಧಿಗೂ ಕೆಲವು ಸಾಮ್ಯಗಳಿದ್ದರೂ ಭಾರತೀಯ ಮತಗಳಲ್ಲಿ ವೈಶಿಷ್ಟ್ಯವಿದೆ.

ಸುಮೇರಿಯನ್ ಸಂಸ್ಕೃತಿಯಲ್ಲಿ—ಅಲ್ ಉಬಾಯ್ದ್ ಕಾಲದಲ್ಲಿ ಸ್ತ್ರೀ ವಿಗ್ರಹಗಳು (ನಿನ್ ಖುರ್ ಶೆಗ್) ಊರ್—ವಾರ್ಕ ನಿವೇಶನದಲ್ಲಿ ಸಿಕ್ಕಿವೆ. ಟೆಲ್ ಅಗ್ರಾಬ್, ಖಫಜೆ ಮುಂತಾದ ಸ್ಥಳಗಳಲ್ಲಿ ನಗ್ನ ಸ್ತ್ರೀ ವಿಗ್ರಹಗಳು ವೃಷಭಾರೂಢವಾಗಿವೆ. ಮರಿ (ಟೆಲ್ ಹರಿರಿ) ಯಲ್ಲಿ "ಇಸ್ಟಾರ್" ದೇವತೆಯು ನಗ್ನವಾಗಿ, ಉಷ್ಣೀಷವನ್ನು

[1] Karl Absolon, *Ill. L. News*, March 25, 1939, p. 467.

[2] Hawke, *The Foundations of Europe*.


ಲೆಪೂನೆ
ಗ್ರಿಮಾಲ್ಡಿ
ಕ್ರೀಟ್ ಶಿಲಾಯುಗ
ವಿಡ್ರ
ಮೊರೇವಿಯ
ಪರೋಸ್
ಇರಾನ್
ರುಮೇನಿಯ-ಮೊರೇವಿಯ
ಮೊರೇವಿಯ ಮಣಿಸರ
ಎಲ್ಯೂಸಿಸ್
ಸಾರ್ಡಿನಯ
ಐರ್ಲೆಂಡ್
ಈಜಿಪ್ಟ್
ಸೈಪ್ರಸ್
ಮಿನೋವನ್
ಸುಮೇರು-ಲುಗಲ್ ಅಂಡ ಮುದ್ರೆ
ಶ್ರೀಲಾಖಿಷ್



ಮಾತೃದೇವತೆಯರು

ಧರಿಸಿ, ಪೂರ್ಣ ಕುಂಭವನ್ನು ಹೊಂದಿದೆ.[1] ಸೈಪ್ರಸ್ ದ್ವೀಪದಲ್ಲಿ ಮಾತೃದೇವತೆಯ ವಿಗ್ರಹಗಳು "ಪಿಟೀಲು" ಆಕಾರವಾಗಿವೆ. ಈಜಿಪ್ಟಿನ ಬದರಿ ಸಂಸ್ಕೃತಿಯಲ್ಲಿ ದಂತ ಮತ್ತು ಮೃತ್ತಿಕಾ ವಿಗ್ರಹಗಳು ವಿಶೇಷವಾಗಿವೆ. ಕ್ರೀಟಿನಲ್ಲಿ ಮಾತೃ ದೇವತೆಯು ಸರ್ಪಗಳನ್ನು ಪಾರಿವಾಳಗಳನ್ನು ಹಿಡಿದುಕೊಂಡಿದೆ; ಅಥವಾ ಶಿಶುವನ್ನೋ ಅಭಯ ಹಸ್ತವನ್ನೋ ಹೊಂದಿರುವದು.[2] ಟ್ರಾಯ್ ಸಂಸ್ಕೃತಿಯಲ್ಲಿಯೂ ಹಿಟ್ಟೈಟರ ಟೆಲ್ ಹಲಾಫ್, ಕಾರ್ಕೆಮಿಷ್ ಮುಂತಾದ ಸ್ಥಳಗಳಲ್ಲಿನ ಕೆತ್ತನೆ ಕೆಲಸದಲ್ಲಿಯೂ ಮಾತೃ ದೇವತಾ ವಿಗ್ರಹಗಳು ಕಂಡುಬರುವವು. ಟೆಲ್ ಹಲಾಫ್ ಚಿತ್ರಗಳಲ್ಲಿ ಮಾತೃ ದೇವತೆಯು ಸಿಂಹವಾಹನೆಯಾಗಿರುವಳು.[3] ಬ್ರಿಟನಿ, ಐರ್ಲೆಂಡ್, ಸ್ಕಾಟ್ಲೆಂಡ್ ಪ್ರಾಂತ್ಯಗಳಲ್ಲಿ ಮಾತೃ ದೇವತಾ ಚಿತ್ರಗಳು ಕಲ್ಲಿನ ಮೇಲೆ ಕೊರೆಯಲ್ಪಟ್ಟಿವೆ.

ಈ ವಿಶ್ವವ್ಯಾಪಿಯಾದ ಮಾತೃದೇವತೆಗೆ ನನ್ನ, ಇಷ್ಟಾರ್, ಅಸ್ಟಾರ್ಟೆ, ಐಸಿಸ್, ಆರ್ಟೆಮಿಸ್, ಅಥೀನ, ಡೆಮಿಟರ್, ಗೆಮಿಟರ್, ಕುಬಬ, ಕೈಬೇಲೆ, ಮಾ, ಡಿಕ್ಟಿನ್ನ ಮುಂತಾದ ಅನೇಕ ಹೆಸರುಗಳಿದ್ದವು. ಸಾಮಾನ್ಯವಾಗಿ ಈ ಮಾತೃದೇವತೆಯ ಪುತ್ರನೇ ಪತಿ. ಅವನು ಮರಣ ಹೊಂದಿ ಅಧೋಲೋಕಕ್ಕೆ ಹೋಗುವದು, ದೇವಿಯು ಶೋಕಪಟ್ಟು ಅವನನ್ನು ಹುಡುಕಿಕೊಂಡು ಹೋಗುವದು, ಅವನಿಗೆ ಪುನರ್ಜೀವನ ಉಂಟುಮಾಡುವದು, ಪುನಃ ಇಬ್ಬರೂ ಕಲೆತು ಪ್ರಕೃತಿಯಲ್ಲೆಲ್ಲ ನವಚೈತನ್ಯ ಉಂಟು ಮಾಡುವದು—ಈ ಭಾವಗಳೂ, ಅವುಗಳಿಗೆ ತಕ್ಕ ಆಚಾರಗಳೂ ಸಮೀಪ ಪ್ರದೇಶ ಗಳಲ್ಲಿ ಪ್ರಬಲವಾಗಿದ್ದವು.[4] ಆದುದರಿಂದ ಸುಮೇರಿಯನ್, ಬ್ಯಾಬಿಲೋನಿಯನ್, ಈಜಿಪ್ಷಿಯನ್ ಮತಗಳಲ್ಲಿ ಫಲಾಭಿವೃದ್ಧಿಯನ್ನು ಸೂಚಿಸುವ ಉತ್ಸವಗಳು ನಡೆಯುತ್ತಿದ್ದವು. ಫ್ರಿಜಿಯ ದೇಶದ ಮಹಾಮಾತೆ (Magna Mater) ಕೈಬೆಲೆ ದೇವತಾಪೂಜೆಯು ವಿಶೇಷ ವ್ಯಾಪ್ತಿಹೊಂದಿತು. ಈ ದೇವತೆಯ ಪೂಜೆಯು ಚಿತ್ರಲಿಪಿ ಹಿಟ್ಟೈಟರ ಕಾಲದಿಂದಲೂ ಬಂದಿತೆಂಬುದಕ್ಕೆ ನಿದರ್ಶನಗಳಿವೆ. ಕ್ರಿ. ಪೂ. ೩೦೦೦ ದ ಟೆಲ್ ಹಲಾಫ್ ಶಿಲ್ಪಗಳಲ್ಲಿ ಸಿಂಹಾರೂಢನಾದ ಮತ್ತು ಎರಡು ಕೊಂಬುಗಳುಳ್ಳ ಒಬ್ಬ ಪುರುಷದೇವತೆಯು, ವೃಷಭಾರೂಢನಾದ ಒಬ್ಬ ದೇವನು, ಹೆಣ್ಣು ಸಿಂಹದ ಮೇಲೆ ಚಂದ್ರಾಕಾರದ ಮುಖವುಳ್ಳ ದೇವತೆಯು ಕಂಡುಬರುವರು. ಈ ತ್ರಿಮೂರ್ತಿಗಳ ಜತೆಗೆ ಗರುಡ, ಕುಳಿತಿರುವ ದಂಪತಿಗಳು, ವೃಶ್ಚಿಕ ಪುಚ್ಛ ಪಕ್ಷಿ ದೇಹ ಮನುಷ್ಯ ಮುಖಗಳುಳ್ಳ ವಿಗ್ರಹಗಳು ಇರುವವು.[5] ಈ ಕೈಬೆಲೆ ದೇವತೆಯು ಭೂಮಿ ಮತ್ತು ಅರಣ್ಯ ಮೃಗಗಳಿಗೆ ಅಭಿಮಾನ ದೇವತೆಯಾಗಿದ್ದಳು. ಸಸ್ಯಾಭಿಮಾನಿಯಾದ ಅಟ್ಟಿಸ್

[1] Seton Lloyd, *Mesopotamia*.
[2] Evans, *The Palace of Minos*.
[3] Von Oppenheim, *Tell Halaaf*.
[4] Frankfort, *Cylindar Seals*.
[5] Von Oppenheim, *Tell Halaaf*.

ಅಥವಾ ಪಾಪಸ್ ಎಂಬ ಪುರುಷ ದೇವತೆಯು ಈ ಭೂದೇವತೆಯೊಡನೆ ಸೇರಿಕೊಂಡನು. ಕಾಲಕ್ರಮೇಣ ಕೈಬಿಲೆ, ಮಾ, ಬಿಲ್ಲೋನ ದೇವಿಯರೊಂಪಾದರು. ಹಾಗೆಯೇ ಅಟ್ಟಿಸ್, ದಿಯೋನಿಸಸ್, ಅದೋನಿಸ್, "ಸಬಾಸಿಯಸ್" ದೇವತೆಗಳೂ ಒಂದೆಂದು ಗಣಿಸಲ್ಪಟ್ಟರು. ಅಟ್ಟಿಸ್—ಕೈಬಿಲೆ ಉತ್ಸವಗಳು ನೂತನ ವರ್ಷಾರಂಭದಲ್ಲಿ ವಸಂತ ಋತುವಿನಲ್ಲಿ (ಮಾರ್ಚ್ ೧೫—೨೭) ಆರಂಭವಾಗುತ್ತಿದ್ದವು. ಕೈಬಿಲೆಯು ನದೀತೀರದಲ್ಲಿ ಶಿಶುರೂಪನಾದ ಅಟ್ಟಿಸನನ್ನು ಕಂಡುಹಿಡಿಯುವುದು, ಅನಂತರ ವಿಷುಕಾಲದಲ್ಲಿ ಒಂದು ಮರವನ್ನು ಕಡಿದು, ಅಟ್ಟಿಸನು ಸತ್ತನೆಂದು ಭಾವಿಸಿ ಶೋಕಪಡುವದು, ಗ್ಯಾಲ್ಲೈ ಎಂಬ ಪೂಜಕರು ತಮ್ಮ ದೇಹವನ್ನು ಕತ್ತಿ ಕೊಡಲಿಗಳಿಂದ ಕತ್ತರಿಸಿಕೊಂಡು ರಕ್ತ ಸುರಿಸುವದು, ಅನಂತರ ಅಟ್ಟಿಸನು ಪುನರ್ಜೀವ ಹೊಂದಿದನೆಂದು ಭಾವಿಸಿ ಸಂತೋಷ ಸೂಚಿಸುವದು (ಹಿಲೇರಿಯ, ಮಾರ್ಚಿ ೨೫), ಎರಡು ದಿನಗಳನಂತರ ಅತಿ ವಿಜೃಂಭಣೆಯಿಂದ ಕೈಬಿಲೆಯ ರಜತಮೂರ್ತಿಯನ್ನು ಮೆರವಣಿಗೆ ಮಾಡಿ ನದಿಗೆ ತೆಗೆದುಕೊಂಡು ಹೋಗಿ ಅಭಿಷೇಕ ಮಾಡಿ ಪವಿತ್ರ ಮಾಡುವದು —ಆಚಾರವಾಗಿದ್ದಿತು. ಕಾಡುಕೋಣಗಳನ್ನು ಬೇಟೆಯಾಡಿ ಈ ಮಾತೃ ದೇವತೆಗೆ ಬಲಿ ಕೊಡುತ್ತಿದ್ದರೆಂದು ಕಂಡುಬರುವದು. ಇಂತಹ ಮೃಗಯಾವಿಹಾರವು ಕಾಲಕ್ರಮೇಣ ವೃಷಭ ಮತ್ತು ಛಾಗ ಬಲಿ (Tauro-bolium and Crio-bolium) ಯಾಗಿ ಪರಿಣಮಿಸಿತು.[1]

ಸುಮೇರು ಸಂಸ್ಕೃತಿಯಲ್ಲಿ ನಾನಾ, ಇನ್ನಿನ, ಇರ್ನಿನಿ, ನಿನಾ ಎಂಬ ಹೆಸರುಗಳುಳ್ಳ ಇಸ್ಟಾರ್ ದೇವತೆಯೂ ಮಾತೃದೇವತೆಯೂ ಯುದ್ಧದೇವಿಯೂ ಆಗಿದ್ದಳು. ಯೋಧಳ ರೂಪದಲ್ಲಿ ಧನುರ್ಬಾಣಗಳನ್ನು ಧರಿಸಿದ್ದಳು. ಶುಕ್ರಗ್ರಹಾಧಿದೇವತೆಯೂ ಆಗಿದ್ದಳು. ಉರುಕ್ ಕಾಲದಲ್ಲಿ ಮಾತೃದೇವತೆಯು ಗೋಶಾಲೆಯ ಮೇಲೆ ಚಿತ್ರಿಸಲ್ಪಟ್ಟ ಒಂದು ಚಿಹ್ನೆಯಿಂದ ಮಾತ್ರ ಸೂಚಿಸಲ್ಪಟ್ಟಿರುವಳು. (¶). ಜೆಮ್ದತ್ ನಸ್ರ್ ಕಾಲದಲ್ಲಿ ದೇವತೆಗೆ ಗೋಶೃಂಗಗಳಿರುವವು. ಜತೆಗೆ ಒಬ್ಬ ಪುರುಷದೇವತೆ, ಸೊಂಡಿಲುಳ್ಳ ವೃಷಭ, ಸಿಂಹ, ಸಿಂಹಮುಖವುಳ್ಳ ಗರುಡ, ಮುಂತಾದ ವಿಗ್ರಹಗಳು ಇರುವವು. ಪ್ರಾಚೀನ ವಂಶಗಳ ಕಾಲದಲ್ಲಿ ಲುಗಲ್ ಅಂದ ಮತ್ತು ಅವನ ಪತ್ನಿ ಬರನಂತರ ಅವರ ಮುದ್ರೆಯ ಮೇಲೆ ಶೃಂಗವನ್ನೂ ಜಡೆಯನ್ನೂ ಹೊಂದಿದ ಸ್ತ್ರೀ ವಿಗ್ರಹವು ಸಿಂಹವನ್ನು ವೃಷಭ—ಪುರುಷನ ಮೇಲೇ ಯುದ್ಧಮಾಡುವಂತೆ ಪ್ರೇರಿಸುವಂತೆಯೂ ಮೇಲೆ ಸಿಂಹಮುಖವುಳ್ಳ ಗರುಡ (ಸು) ಇರುವಂತೆಯೂ ಚಿತ್ರಿಸಿದೆ. ಅಕ್ಕಾಡ್ ಕಾಲದಲ್ಲಿ ನೂತನ ವರ್ಷಾರಂಭವನ್ನು ಸೂಚಿಸುವ ದೇವದೇವಿಯರ ಕಲ್ಯಾಣ ಮಹೋತ್ಸವವು ಪ್ರಚಾರ

[1] Cumont, *Oriental Religions in Roman Paganism.*

ದಲ್ಲಿದ್ದಿತು. ಚೌ ಮತ್ತು ನಿ-ನ್ಗಿರ್-ಸು ದೇವತೆಗಳ ಶಯನೋತ್ಸವವು ಚಿತ್ರಿಸಲ್ಪಟ್ಟಿದೆ. ನೆರ್‌ಗಲ್ ಮತ್ತು ಎರೇಶ್‌ಕಿಗಲ್ ಆಲಿಂಗಿಸಿಕೊಂಡಿರುವರು. ಯುದ್ಧಾಭಿಮಾನಿಯಾದ ದೇವಿಯು ಸಿಂಹದ ಮೇಲೆ ನಿಂತು ಒಂದು ಕಾಲನ್ನು ಮುಂದುಮಾಡಿ ಕತ್ತಿ, ಗದೆ ಧನುರ್ಬಾಣ ಮುಂತಾದ ಅನೇಕಾಯುಧಗಳನ್ನು ಹೊಂದಿರುವಳು. ಜಲಾಭಿಮಾನಿಯಾಗಿ ಎರಡು ಅಜ-ಮತ್ಸ್ಯಗಳ ಮೇಲೆ ನಿಂತು ಪೂರ್ಣ ಕುಂಭವನ್ನು ಹಿಡಿದಿರುವಳು. ಬ್ಯಾಬಿಲೋನಿಯನ್ ವಂಶಗಳ ಕಾಲದಲ್ಲಿ (೨೦೦೦-೧೭೦೦ ಕ್ರಿ.ಪೂ.), ದೇವತೆಯು ನಗ್ನಳಾಗಿರುವಳು ಮತ್ತು ವೃಷಭ ಚಂದ್ರರೇಖೆಗಳೊಂದಿಗೆ ಚಿತ್ರಿಸಲ್ಪಟ್ಟಿರುವಳು. ಸಿಂಹವಾಹನವುಳ್ಳ ಪುರುಷ ದೇವತೆಗಳು ಜತೆಯಲ್ಲಿರುವರು. ಬಹುಶಃ ಹಿಟ್ಟೈಟ್ ಸಂಪರ್ಕದಿಂದ ಕೆಲವು ಮುದ್ರೆಗಳಲ್ಲಿ ಪುರುಷದೇವತೆಯಿಂದ ಹಿಡಿಯಲ್ಪಟ್ಟ ವೃಷಭದ ಮೇಲೆ ದೇವಿಯು ತನ್ನ ವಸ್ತ್ರವನ್ನು ತೆಗೆದುಹಾಕುತ್ತಿರುವಂತೆ ಚಿತ್ರಿಸಲ್ಪಟ್ಟಿರುವಳು. ಅಲ್ಲದೆ ಈ ನಗ್ನದೇವತೆಯು ವೃಷಭಾರೂಢಳಾಗಿ ದೇವನಿಂದ ಆಲಿಂಗಿಸಲ್ಪಟ್ಟಿರುವಳು. ಆರ್ಯರಾದ ಮಿಟಾನಿವಂಶದ ಕಾಲದಲ್ಲಿ ವೃತ್ರಾಸುರವಧ, ಇಂದ್ರ, ಸಿಂಹಾರೂಢಳಾದ ದೇವತೆ, ಗಂಡಭೇರುಂಡ, ತ್ರಿಶೂಲಧಾರಿ ಮತ್ತು ವೃಷಭಾರೂಢನಾದ ದೇವತೆ ಇತ್ಯಾದಿ ವಿಗ್ರಹಗಳು ಕಂಡುಬರುವವು. ಶುಕ್ರಗ್ರಹ ಮತ್ತು ಯುದ್ಧಾಭಿಮಾನಿಯಾದ ದೇವಿಯು ಚಕ್ರ, ಬಾಣ, ಬತ್ತಳಿಕೆ, ಕತ್ತಿಗಳನ್ನು ಧರಿಸಿರುವಳು. ಸುಮೇರಿಯನ್ ಮತ್ತು ಬ್ಯಾಬಿಲೋನಿಯನ್ ಪೂಜಾವಿಧಾನವನ್ನು ಹೇಳುವ ವ್ರತಪುಸ್ತಕಗಳಲ್ಲಿ ಅನೇಕ ವಿಗ್ರಹಗಳಿಗೆ ಸಮರ್ಪಕವಾದ ಅರ್ಥವನ್ನು ಹೇಳಿಲ್ಲ. ಆದುದರಿಂದ ಕ್ರಿ.ಪೂ. ೩೦೦೦ಕ್ಕೆ ಹಿಂದಿನಿಂದಲೂ ಭರತಖಂಡಕ್ಕೂ ಈ ದೇಶಗಳಿಗೂ ಸಂಬಂಧವು ಇದ್ದುದರಿಂದ ಅನೇಕ ಭಾರತೀಯ ಭಾವನೆಗಳು ಮೆಸೊಪೊಟೇಮಿಯ ಜನರಿಂದ ಗ್ರಹಿಸಲ್ಪಟ್ಟವೆಂದು ಊಹಿಸಲ್ಪಟ್ಟಿದೆ.[1]

ಈಜಿಪ್ಟಿನ ಒಸೈರಿಸ್ ಐಸಿಸ್ ದೇವತೆಗಳಿಗೂ ಕೈಬೆಲೆ-ಅಟ್ಟಿಸ್ ದೇವತೆಗಳಿಗೂ ಅನೇಕ ಸಾಮ್ಯಗಳಿದ್ದವು. ಪಾರ್ಫೈರಿಯು ಐಸಿಸ್ ಪೂಜಾ ವಿಧಾನವನ್ನು ವರ್ಣಿಸಿರುವನು. ಅರ್ಚಕರು ಉಷಃಕಾಲದಲ್ಲಿ ಗರ್ಭಗೃಹದ ಬಾಗಿಲನ್ನು ತೆಗೆದು ದೇವತೆಯನ್ನು ಎಚ್ಚರಿಸಿ, ಹೋಮವನ್ನು ಮಾಡಿ, ನೈಲ್‌ನದಿಯ ಉದಕದಿಂದ ಅಭಿಷೇಕಮಾಡಿ ಗೂಢಭಾಷೆಯಲ್ಲಿ ಮಂತ್ರಗಳನ್ನುಚ್ಚರಿಸುತ್ತಿದ್ದರು. ಅನಂತರ ವಿಗ್ರಹಕ್ಕೆ ನೂತನ ವಸ್ತ್ರಪುಷ್ಪಗಂಧಾದಿಗಳಿಂದ ಅಲಂಕಾರಮಾಡಿ ಮೌನದಿಂದ ಧ್ಯಾನಮಾಡುತ್ತಿದ್ದರು. ಮಧ್ಯಾಹ್ನ ಮತ್ತು ಸಾಯಂಕಾಲಗಳಲ್ಲಿ ಪುನಃ ಪೂಜೆಮಾಡಿ ಶಯನೋತ್ಸವವನ್ನು ನೆರವೇರಿಸಿ ಕವಾಟಬಂಧನ ಮಾಡುತ್ತಿದ್ದರು. ವಸಂತ ಮತ್ತು ಶರದೃತುಗಳಲ್ಲಿ

[1] Frankfort, *Cylindar Seals*.

ವಿಶೇಷೋತ್ಸವಗಳು ನಡೆಯುತ್ತಿದ್ದವು. ವರ್ಷಾರಂಭದಲ್ಲಿ ನೌಕಾವ್ಯಾಪಾರವನ್ನು ಆರಂಭಿಸುವದಕ್ಕಾಗಿ ತೆಪ್ಪದ ಉತ್ಸವವು ಮಾರ್ಚ್ ೫ನೆಯ ದಿನ ಆರಂಭವಾಗುತ್ತಿತ್ತು. ದೇವಾಲಯದಿಂದ ಸಮುದ್ರದ ವರೆಗೂ ನರ್ತಕರು, ಗಾಯಕರು, ವೇಷಗಾರರು, ಬಿಳಿಯವಸ್ತ್ರಗಳನ್ನು ಧರಿಸಿದ ಸ್ತ್ರೀಯರು, ಪೂಜಾರಿಗಳೂ, ದೀವಟಿಗೆ ಹಿಡಿದವರು, ಪರಿವಾರ ದೇವತೆಗಳನ್ನು ಹೊತ್ತವರು, ಅನಂತರ ಶಿರೋಮುಂಡನ ಮಾಡಿಕೊಂಡು ದೇವಿಯನ್ನು ಹೊತ್ತ ಉತ್ತಮ ದರ್ಜೆಯ ಪೂಜಾರಿಗಳು ಮೆರವಣಿಗೆ ಹೋಗಿ ಐಸಿಸ್ ದೇವಿಯನ್ನು ನಾವೆಯಲ್ಲಿಟ್ಟು ಅನಂತರ ಇತರ ನೌಕೆಗಳನ್ನು ಸಮುದ್ರದ ಮೇಲೆ ಕಳುಹಿಸುತ್ತಿದ್ದರು (*Navium Isidis*). ಶರತ್ಕಾಲದಲ್ಲಿ ಒಸ್ಸೈರಿಸನನ್ನು ಕಂಡು ಹಿಡಿಯುವದು (Inventio), ದೇವಾಲಯದಿಂದ ಬರುತ್ತಿದ್ದ ಒಸ್ಸೈರಿಸನು ಪಾಪದೇವತೆಯಾದ ಸೆಟ್‌ನಿಂದ ಕೊಲ್ಲಲ್ಪಡುವದು, ಐಸಿಸ್ ಒಸ್ಸೈರಿಸನ್ನು ಹುಡುಕಿಕೊಂಡು ಹೋಗುವದು; ಸೇಟ್‌ನನ್ನು ಹೋರಸನು ಸಂಹರಿಸುವದು, ಒಸ್ಸೈರಿಸನು ಪುನರ್ಜೀವ ಪಡೆಯುವದು—ಇತ್ಯಾದಿ ಕಥೆಯು ಅನುಕರಿಸಲ್ಪಡುತ್ತಿದ್ದಿತು.

ಸಿರಿಯಾದೇಶದಲ್ಲಿ ಅಟರ್‌ಗಾಟಿಸ್ ದೇವಿಯೂ ಹದಾದ್ ದೇವನೂ ಮುಖ್ಯರಾಗಿದ್ದರು. ಪೂಜಾರಿಗಳು ತಮ್ಮ ಪುಂಸ್ತ್ವವನ್ನು ಬಲಿಕೊಡುತ್ತಿದ್ದರು. ದೇವಿಯ ಆವೇಶದಿಂದ ಚಾಟಿಯಿಂದ ಹೊಡೆದುಕೊಳ್ಳುವದು, ಕತ್ತಿ ಭರ್ಜಿಗಳಿಂದ ರಕ್ತ ಸುರಿಸುವದು, ಬಾಯಿ ಬೀಗಹಾಕಿಕೊಳ್ಳುವದು—ಇತ್ಯಾದಿ ಪದ್ಧತಿಗಳು ಇದ್ದವು. ಫಿನೀಷಿಯನ್ನರು ಅಸ್ಟಾರ್ಟ್ ದೇವಿಯೇ ಅಟರ್‌ಗಾಟಿಸ್ ಎಂದು ಭಾವಿಸಿ, ಈ ಮತವನ್ನು ಕಾರ್ಥೆಜ್, ಟೈರ್, ಸಿಡೋನ್, ಐರ್ಲೆಂಡ್, ಸ್ಕಾಟ್ಲೆಂಡ್ ವರೆಗೂ ಹರಡಿದರು. ಲಿಪಿ, ಜ್ಯೋತಿಷ, ಗಣಿತ, ನಾಣ್ಯ, ವ್ಯಾಪಾರ ಪದ್ಧತಿಗಳು ಮತದೊಂದಿಗೆ ಪಾಶ್ಚಾತ್ಯ ದೇಶಗಳಲ್ಲಿ ಪ್ರಚಾರವಾದವು.

ಪರ್ಷಿಯಾದೇಶದ ದ್ವೈತಮತದೊಡನೆ ಅನಾಹಿತಾದೇವಿಯ ಪೂಜೆಯು ಯೂರೋಪ್ ಖಂಡದಲ್ಲಿ ಹರಡಿ ಇಸ್ಟಾರ್, ಐಸಿಸ್, ಬಾಲ್ಟಿಸ್, ಆರ್ಟೆಮಿಸ್ ದೇವತಾ ಪೂಜೆಗಳೊಡನೆ ಮಿಳಿತವಾಯಿತು. ಮಗರ (Magi) " ಮಿತ್ರ—ಅನಾಹಿತ' ಮತಪ್ರಚಾರದಿಂದ ಹಿಬ್ರೂಗಳೂ ಕ್ರಿಶ್ಚಿಯನ್ನರೂ ದ್ವೈತ ಸಿದ್ಧಾಂತವನ್ನಂಗೀಕರಿಸಿದರು. ಮಡೋನಾ ಮಾತೃದೇವತೆಯ ಪೂಜೆಯು ಈಜಿಪ್ಟ್, ಸಿರಿಯ, ಪರ್ಷಿಯ ಬ್ಯಾಬಿಲೋನಿಯ, ಸುಮೇರಿಯ, ಕ್ರೀಟ್ ಸಂಸ್ಕೃತಿಗಳ ಮಾತೃ ದೇವತಾಪೂಜೆಯ ಅನುಕರಣೆ ಎಂದು ನಿರ್ಧರಿಸಲ್ಪಟ್ಟಿದೆ.[1]

ಕ್ರೀಟಿನ ಮಿನೋವನ್ ಸಂಸ್ಕೃತಿಯಲ್ಲಿ ಮಾತೃದೇವತೆಯು ವೃಕ್ಷ ಮತ್ತು

[1] Cumont, *Oriental Religions in Roman Paganism.*

ಪರ್ವತಾಧಿದೇವಿ. ಅರಣ್ಯಮೃಗಗಳಿಗೆ ಅಭಿಮಾನದೇವತೆ. ಪುರುಷದೇವತೆಯು ಇವಳ ಮಗ. ಮುದ್ರೆಗಳ ಮೇಲೆ ದೇವಿಯು ಬರಿಯ ತಲೆಯಲ್ಲಿದ್ದರೂ ವಿಗ್ರಹಗಳಲ್ಲಿ ಕಿರೀಟ ವಿದೆ. ಶಂಖಧ್ವನಿಯಿಂದಲೂ ನರ್ತನದಿಂದಲೂ ದೇವಿಯನ್ನು ಆಹ್ವಾನಿಸುತ್ತಿದ್ದರು. ಈ ದೇವಿಗೆ ಶೃಂಗಗಳು, ದ್ವಿಮುಖ ಪರಶು (double axe), ವೃಷಭ, ಪಾರಿವಾಳ ಮತ್ತು ಸರ್ಪಗಳು ಚಿಹ್ನೆಗಳಾಗಿದ್ದವು. ಗ್ರೀಕರು ಈ ದೇವತೆಯ ಸರ್ಪಗಳನ್ನು ತಮ್ಮ ಅಥೀನದೇವಿಗೂ, ಪಾರಿವಾಳಗಳನ್ನು ಅಫ್ರೋಡಿಟಿಗೂ, ಜಿಂಕೆಯನ್ನು ಆರ್ಟೆಮಿಸ್ ದೇವಿಗೂ ಸೇರಿಸಿದರು. ಜೂನೊ, ಹೆರ, ವೀನಸ್-ಆಫ್ರೊಡಿಟಿ, ಅಥೀನ, ಮಿನರ್ವ ಇತ್ಯಾದಿ ಗ್ರೀಕರ ದೇವಿಯರಿಗೆಲ್ಲ ಕ್ರೀಟ್ ಸಂಸ್ಕೃತಿಯ ಬ್ರಿಟೋಮಾರ್ಟಿಸ್ ಅಥವಾ ಡಿಕ್ಟಿನ್ನದೇವಿಯೇ ಮೂಲವೆಂದು ನಿಶ್ಚಯಿಸಲ್ಪಟ್ಟಿದೆ.[1]

III

ಭರತಖಂಡದ ತಾಂತ್ರಿಕ ಮತವು ಇತರ ದೇಶಗಳ ಮತಗಳಿಗಿಂತ ಭಿನ್ನವಾಗಿದೆ. ಪೂಜಾ ಪದ್ಧತಿಗಳಲ್ಲಿ ಕೆಲವು ಸಾಮ್ಯಗಳು ಕಂಡುಬಂದರೂ ಧ್ಯೇಯವು ಬೇರೆ. ಡಾ|| ಆನಂದ ಕುಮಾರಸ್ವಾಮಿ ಅವರು ಮಿಥುನೈಕ್ಯ (Bi-unity) ಭಾಸವು ವೈದಿಕ ಮತಗಳಲ್ಲೇ ಅಲ್ಲದೆ ಸೆಮಿಟಿಕ್ ಮತಗಳಾದ ಕ್ರೈಸ್ತ, ಯಹೂದ್ಯ ಮತ್ತು ಇಸ್ಲಾಂ ಮತಗಳಲ್ಲಿಯೂ ಒಂದೇ ವಿಧವಾಗಿದೆ ಎಂದು ತೋರಿಸಲು ಯತ್ನಿಸಿರುವರು.[2] ಆದರೆ ಭಾರತೀಯರ ತಾಂತ್ರಿಕ ಪೂಜೆಯು ವೇದ ಮೂಲ. ಕರ್ಮ, ಜ್ಞಾನ, ಭಕ್ತಿ, ಹಠ, ಇತ್ಯಾದಿ ರೂಪುಗಳನ್ನುಳ್ಳ ಯೋಗಶಾಸ್ತ್ರವು ತಂತ್ರಗಳಲ್ಲಿ ಅನುಸ್ಯೂತವಾಗಿದೆ.[3] ಭರತಖಂಡದ ಮಾತೃದೇವತಾ ಪೂಜೆಗೂ ಭೂತಲಿಪಿ ಮಾತೃಕೆಗಳಿಗೂ ನಿಕಟ ಸಂಬಂಧವಿದೆ. ತಾಂತ್ರಿಕ ಮಾತೃಕೆಗಳಿಂದಲೇ ಹರಪ್ಪಲಿಪಿಯೂ ಬ್ರಾಹ್ಮೀಲಿಪಿಯೂ ಹುಟ್ಟಿದವು. ಇತರ ದೇಶಗಳಲ್ಲಿ ಲಿಪಿಗೂ ಮಾತೃದೇವತಾ ಪೂಜೆಗೂ ಏನೂ ಸಂಬಂಧ ವಿಲ್ಲ. ತಾಂತ್ರಿಕ ಸಮಯ ಮತ್ತು ಕೌಲಾಚಾರಗಳೆರಡರಲ್ಲೂ ಅದ್ವೈತವೇ ಧ್ಯೇಯ. ಆದರೆ ಇತರ ದೇಶಗಳಲ್ಲಿ ಸ್ವಾಮಿಭೃತ್ಯ ಭಾವವೂ ದ್ವೈತ ಬುದ್ಧಿಯೂ ಮುಖ್ಯವು. ಶಾಕ್ತ ಪೂಜೆಯಲ್ಲಿರುವ ಮಾಯಾವಾದವು ವೇದ ಮೂಲವಾಗಿದ್ದು ಇತರ ಮಾತೃ ದೇವತಾ ಪೂಜೆಗಳಿಗಿಂತ ಭಿನ್ನವಾಗಿದೆ, ಭಾರತೀಯ ತಾಂತ್ರಿಕ ಮತದಲ್ಲಿ ಬಹಳ ಪ್ರಾಚೀನಕಾಲದಿಂದಲೂ ವಾಕ್, ಯಂತ್ರ ರಚನೆಗೆ ಆವಶ್ಯಕವಾದ ಗಣಿತ, ಜ್ಯೋತಿಷ, ಇತ್ಯಾದಿ ಶಾಸ್ತ್ರಗಳು ಬೆಳೆದು ಬಂದವು. ಮತ್ತು ಮೌನದಿಂದ ಧ್ಯಾನ ಪೂಜೆಗಳು, ಏಕದೇವತಾ ಪೂಜೆಗಳು ಗ್ರೀಸ್ ರೋಮ್ ಯೂರೋಪ್ ದೇಶಗಳಿಗೆ

[1] Pendlebury, *Archaeology of Crete*. [2] Ananda Coomaraswami, *The Tāntric Doctrine of Divine Biunity, A. Bh. O. R. I.* XIX, pt. 2. p. 73.

[3] S. Śrīkaṇṭha Sastri, *Proto-Indic and Tantrik Hieroglyphs*.

ಈಜಿಪ್ಟ್ ದೇಶದಿಂದ ಕ್ರಿ.ಪೂ. ೫-೬ ನೆಯ ಶತಮಾನದಲ್ಲಿ ಮೊದಲು ಬಂದವು. ಆದರೆ ಭರತಖಂಡದಲ್ಲಿ ಕ್ರಿ.ಪೂ. ೩೦೦೦ ದಲ್ಲಿಯೇ ಹರಪ್ಪ ಸಂಸ್ಕೃತಿಯಲ್ಲೂ ಕೂಡ ಪ್ರಚಾರದಲ್ಲಿದ್ದವು. ಹಾಗೆಯೇ ಸಾಂಗವಾದ ಪ್ರತೀಕೋಪಾಸನೆಯು ವೇದ ಯುಗದಿಂದಲೂ ಭರತಖಂಡದಲ್ಲಿದೆ. ಈಜಿಪ್ಟ್, ಕ್ರೀಟ್ ಮುಂತಾದ ಸಂಸ್ಕೃತಿಗಳಲ್ಲಿ ಕ್ರಿ.ಪೂ. ೩೦೦೦ ಕ್ಕೆ ಹಿಂದೆ ನಿಯತವಾದ ಪೂಜಾಪದ್ಧತಿ ಇದ್ದಿತೆಂಬುದಕ್ಕೆ ಆಧಾರ ವಿಲ್ಲ. ಭಾರತೀಯ ಮತಗಳಲ್ಲಿ ದೀಕ್ಷಾ ವಿಧಾನ, ಮಹಾ ಷೋಢಾನ್ಯಾಸ ಇತ್ಯಾದಿಗಳಿಗೂ ಇತರ ದೇಶಗಳ ಮಾತೃದೇವತಾ ಪೂಜಾ ವಿಧಾನಗಳಿಗೂ ಬಹಳ ವ್ಯತ್ಯಾಸವಿದೆ. ಇತರ ದೇಶಗಳಲ್ಲಿ ಮಾತೃದೇವತೆಯು ಮರಣ, ದೇಹಸಹಿತ ಪುನರುತ್ಥಾನ (body-resurrection), ಫಲಾಭಿವೃದ್ಧಿ (fertility) ಸಂಬಂಧವನ್ನೇ ಮುಖ್ಯವಾಗಿ ಹೊಂದಿದ್ದಳು. ಆದರೆ ಶಾಕ್ತ ಪೂಜೆಯಲ್ಲಿ ಅಮೃತತ್ವ, ಅಪುನ ರಾವೃತ್ತಿ, ದೇಹದ ನಶ್ವರತೆ, ಫಲತ್ಯಾಗ—ಇವೇ ಮುಖ್ಯವಾದ ಭಾವಗಳು. ಶಾಕ್ತ ಪೂಜೆಯಲ್ಲಿ ಕಾಮ ಪ್ರವೃತ್ತಿಯ ಪರಾವೃತ್ತಿ (sublimation) ಮುಖ್ಯವಾಗಿದ್ದಿತು. ಇತರ ದೇಶಗಳಲ್ಲಿ ಸ್ವೇಚ್ಛಾಕಾಮಪ್ರವೃತ್ತಿಯೇ ಕಂಡುಬರುವದು. ಮತ್ತು ಭಾರ ತೀಯ ತಾಂತ್ರಿಕ ಮತಕ್ಕೆ ಭಾರತೀಯ ಸಂಸ್ಕೃತಿ ಚಿಹ್ನೆಗಳಾದ ವರ್ಣಾಶ್ರಮ ಧರ್ಮ, ಪುನರ್ಜನ್ಮ, ಕರ್ಮ ಇತ್ಯಾದಿಗಳೇ ಆಧಾರವಾಗಿವೆ.

ಆದುದರಿಂದ ಪ್ರಾಚೀನತೆಯಲ್ಲಿಯೂ, ಧ್ಯೇಯದಲ್ಲಿಯೂ, ಪೂಜಾ ವಿಧಾನದ ಲ್ಲಿಯೂ ಭಾರತೀಯ ಮಾತೃದೇವತಾ ಪೂಜೆಯು ಇತರ ದೇಶಗಳ ಮಾತೃದೇವತಾ ಪೂಜಾ ವಿಧಾನಗಳಿಗಿಂತ ಭಿನ್ನವೂ ಉತ್ಕೃಷ್ಟವೂ ಆಗಿರುವದು.

ಭಾರತೀಯರ ವಿಗ್ರಹಗಳಲ್ಲಿ ತತ್ತ್ವವನ್ನನುಸರಿಸಿ ಎರಡು ಮುಖ್ಯ ಭೇದಗಳಿವೆ. ಕೂಟಸ್ಥನಿತ್ಯವಾದ ಶಾಂತಿವೈರಾಗ್ಯ ನಿವೃತ್ತಿಫಲವನ್ನು ಸೂಚಿಸುವ ಮೂಲವಿಗ್ರಹ ಗಳೂ, ಇಚ್ಛಾಜ್ಞಾನಕ್ರಿಯಾಶಕ್ತಿಗಳನ್ನೂ ಪ್ರವೃತ್ತಿಯನ್ನೂ ಸೂಚಿಸುವ ಉತ್ಸವ ಮೂರ್ತಿಗಳೂ ಅರ್ಚಿಸಲ್ಪಡುವವು. ದೇಹವು ದೇವಾಲಯವಾದುದರಿಂದ ಗುಹಾ ಪ್ರವಿಷ್ಟವಾದ ಮೂಲದೇವತೆಯು ಶಾಂತಶಿವಾದ್ವೈತಭಾವವನ್ನು ಸೂಚಿಸುವದು. ಹೀಗೆಯೇ ಜೈನರ ಗೊಮ್ಮಟೇಶ್ವರ ಮೂರ್ತಿಯು ನಿವೃತ್ತಿ, ವೀತರಾಗ ಭಾವವನ್ನು ಪ್ರವೃತ್ತಿ ವಿಮುಖತೆಯನ್ನು ಸೂಚಿಸುವದು. ಇದು ಸ್ಥಿತಿರೂಪ. ಸೃಷ್ಟಿಸಂಹಾರ ಪ್ರವೃತ್ತಿಗಳನ್ನು ಅಲಾತಚಕ್ರದಂತೆ ಪರಿಭ್ರಮಿಸುತ್ತಿರುವ ಪ್ರಕೃತಿಯನ್ನು ಸೂಚಿಸುವ ನಟರಾಜಮೂರ್ತಿಯು ಸ್ಥಾನಕಮೂರ್ತಿಗಳಿಗಿಂತ ಭಿನ್ನ ಭಾವವನ್ನು ನಿದರ್ಶಿಸುವದು. ಆದರೂ ಅವಿಚ್ಛಿನ್ನವಾಗಿ ಭ್ರಮಿಸುತ್ತಿರುವ ಪ್ರಕೃತಿಯ ಮಧ್ಯದಲ್ಲಿ ಶಾಶ್ವತವಾದ ಶಾಂತಿ ಸ್ಥಳವಿದೆಯೆಂಬುದನ್ನು ಸೂಚಿಸುವದಕ್ಕಾಗಿ ನಟರಾಜನ ಶಿರೋಭಾಗವು ಚಲನೆ ಇಲ್ಲದೆ ಇರುವದು. ಇದೇ ರೀತಿಯಲ್ಲಿ ಮಾತೃದೇವತಾ ವಿಗ್ರಹಗಳೂ

ಪ್ರವೃತ್ತಿ—ನಿವೃತ್ತಿ, ಶ್ರೇಯ—ಪ್ರೇಯ, ನಿರ್ಗುಣ—ಸಗುಣ ರೂಪಗಳಾಗಿರುವವು. ತಾಂತ್ರಿಕ ಗ್ರಂಥಗಳಲ್ಲಿ ಮಾತೃದೇವತೆಯ ಅಸಂಖ್ಯಾತ ರೂಪಗಳು ಬೇರೆಬೇರೆ ಉಪಾಸನಾ, ಫಲ, ಅಧಿಕಾರಾನುಗುಣವಾಗಿ ವರ್ಣಿಸಲ್ಪಟ್ಟಿವೆ. ಚಾಮುಣ್ಡಾ ತನ್ತ್ರದಲ್ಲಿ ದಶಮಹಾವಿದ್ಯೆಗಳು ಉಕ್ತವಾಗಿವೆ.

> ಕಾಲೀ ತಾರಾಮಹಾವಿದ್ಯಾ ಷೋಡಶೀಭುವನೇಶ್ವರೀ |
> ಭೈರವೀ ಛಿನ್ನಮಸ್ತಾ ಚ ವಿದ್ಯಾಧೂಮವತೀ ಮತಾ ||
> ಬಗಲಾ ಸಿದ್ಧವಿದ್ಯಾ ಚ ಮಾತಂಗೀ ಕಮಲಾತ್ಮಿಕಾ |
> ಏತಾ ಏವ ಮಹಾವಿದ್ಯಾ ದಶವಿದ್ಯಾಃ ಪ್ರಕೀರ್ತಿತಾಃ ||
> ನಾತ್ರಶುದ್ಧ್ಯಾದ್ಯಪೇಕ್ಷಾಸ್ತಿ ನಾರಿಮಿತ್ರಾದಿ ದೂಷಣಮ್ |
> ನವಾ ಪ್ರಯಾಸಬಾಹುಲ್ಯಂ ಸಮಯಾಸಮಯಾದಿಕಮ್ ||

ಅಥರ್ವಪ್ರಯೋಗಕ್ಕೆ ಮುಖ್ಯವಾದ ಕಾಲೀ ಮತ್ತು ತಾರಾ ಮಹಾವಿದ್ಯೆಗಳು. ಷೋಡಶೀ, ಭುವನೇಶ್ವರೀ, ಭೈರವೀ, ಛಿನ್ನಮಸ್ತಾ ಮತ್ತು ಧೂಮವತೀ ಇವು ವಿದ್ಯೆಗಳು. ಬಗಳಾಮುಖೀ, ಮಾತಂಗೀ, ಕಮಲಾ ಇವು ಸಿದ್ಧವಿದ್ಯೆಗಳು. ಶ್ಯಾಮಾ ರಹಸ್ಯದಲ್ಲಿ ಎಲ್ಲವೂ ಮಹಾವಿದ್ಯೆಗಳೆಂದು ಹೇಳಿದೆ. ವಿಶ್ವಸಾರ ತಂತ್ರದಲ್ಲಿ ಕಾಲೀ, ತಾರಾ ಮಹಾಮಹಾಸಿದ್ಧವಿದ್ಯೆಗಳು. ಷೋಡಶೀ, ಭುವನೇಶ್ವರೀ, ಭೈರವೀ, ಛಿನ್ನಮಸ್ತಾ, ಧೂಮವತೀ ಮಹಾಸಿದ್ಧ ವಿದ್ಯೆಗಳು. ಬಗಳಾ, ಮಾತಂಗೀ, ಕಮಲಾ, ಸಿದ್ಧಮಹಾವಿದ್ಯೆಗಳು. ದೇವೀಭಾಗವತದಲ್ಲಿ ಈ ದಶವಿದ್ಯೆಗಳು ದಶದಿಕ್ಕುಗಳಲ್ಲಿ ವ್ಯಾಪಿಸಿ ಕೊಂಡಿವೆ ಎಂದು ಹೇಳಿದೆ:—ಊರ್ಧ್ವದಲ್ಲಿ ತಾರಾ, ಉತ್ತರದಲ್ಲಿ ಕಾಲೀ, ಈಶಾನ್ಯ ದಲ್ಲಿ ಷೋಡಶೀ, ಪೂರ್ವದಲ್ಲಿ ಛಿನ್ನಮಸ್ತಾ, ಆಗ್ನೇಯದಲ್ಲಿ ಧೂಮವತೀ, ದಕ್ಷಿಣದಲ್ಲಿ ಬಗಲಾ, ನೈಋತ್ಯದಲ್ಲಿ ಕಮಲಾ, ಪಶ್ಚಿಮದಲ್ಲಿ ಭುವನೇಶ್ವರೀ, ವಾಯವ್ಯದಲ್ಲಿ ಮಾತಂಗೀ, ಅಧೋಲೋಕದಲ್ಲಿ ಭೈರವೀ ವಿದ್ಯೆಗಳು ಇರುವವು. ದುರ್ಗಾಪೂಜೆಯ ಪೀಠನ್ಯಾಸದಲ್ಲಿ ದೇವಿಯ ಸ್ಥಾನಗಳು ಹೀಗಿರುವವು :[1]

ಪೂರ್ವ	ಓಡ್ಯಾಣಪೀಠ	ಮುಂಡೇಶ್ವರನಾಥ	ಮುಂಡಾಂಬಾ	ವೇತಾಲ
ಆಗ್ನೇಯ....	ಮಾತೃಕಾಪೀಠ	ಮಾತೃಕಾ ಚಕ್ರೇಶ್ವರನಾಥ	ಮಾತೃಕಾಂಬಾ	ಅಗ್ನಿಮುಖ
ದಕ್ಷಿಣ	ಜಾಲಂಧರಪೀಠ	ಜ್ವಾಲಾಮುಖನಾಥ	ಜ್ವಾಲಾಂಬಾ	ವೇತಾಲ
ನೈಋತ್ಯ	ಕೋಲಾಪುರಪೀಠ	ಕೋಲಾಪುರೇಶ್ವರನಾಥ	ಕೋಲಾಂಬಾ	ಪ್ರೇತವಾಹನ
ಪಶ್ಚಿಮ	ಪೂರ್ಣಗಿರಿಪೀಠ	ಪೂರ್ಣೇಶ್ವರನಾಥ	ಪೂರ್ಣಾಂಬಾ	ವೇತಾಲ
ವಾಯವ್ಯ....	ಚೌಹಾರಪೀಠ	ಚೌಹಾರನಾಥ	ಚೌಹಾರಾಂಬಾ	ಜ್ವಾಲಾಮುಖಿ
ಉತ್ತರ	ಕೋಲಗಿರಿಪೀಠ	ಕೋಲನಾಥನಾಥ	ಕೋಲಾಂಬಾ	ವೇತಾಲ
ಈಶಾನ್ಯ	ಕಾಮರೂಪಪೀಠ	ಕಾಮರೂಪನಾಥ	ಕಾಮಾಂಬಾ	ಧೂಮ್ರಾಕ್ಷ
ಮಧ್ಯ	ಯೋಗಿನೀಪೀಠ			

[1] S. Śrikaṇṭha Śāstri, *The Iconography of Śrī Vidyārṇava Tantra.*

ಅಷ್ಟಾಷ್ಟಕನ್ಯಾಸದಲ್ಲಿ :

ಚಕ್ರ	ಕ್ಷೇತ್ರ	ಪುರ	ಪೀಠ	ವೃಕ್ಷ	ಮುದ್ರಾ	ಮಂಡಲ	ಸಂತಾನ	ಬೀಜಾಕ್ಷರ	ದೇವಿ
ಮೂಲಾಧಾರ	ಪ್ರಯಾಗ	ವೇಶಿನೀ	ಕಾಮರೂಪ	ವಟ	ಪದ್ಮ	ಆಕಾಶ	ಮೇರು	ಅಂ—ಕ್ಷಾಂ	ಮಂಗಲಾ
ಸ್ವಾಧಿಷ್ಠಾನ	ವಾರಾಣಸೀ	ಶೌಣ್ಡಿನೀ	ಮಲಯಗಿರಿ	ಶ್ಲೇಷ್ಮಾತಕ	ಲಿಂಗ	ವಾಯು	ಮಹೇಂದ್ರ	ಈಂ—ಲಾಂ	ಚರ್ಚಿಕಾ
ಮಣಿಪೂರ	ಕೌಲಾಪುರ	ಕೈವರ್ತಿನೀ	ಪೂರ್ಣಗಿರಿ	ಉದುಂಬರ	ಸುರಭಿ	ವಹ್ನಿ	ಚಂದ್ರಶಿಲಾ	ಊಂ—ಹಾಂ	ಯೋಗೀಶಾ
ಅನಾಹತ	ಅಟ್ಟಹಾಸ	ಕುಟಿನೀ	ಕುಲಾಂತಕ	ಅಶ್ವತ್ಥ	ಕ್ಷೋಭಿಣೀ	ಸಲಿಲ	ಶಾಂಬರ	ಋೂಂ—ಸಾಂ	ಹರಸಿದ್ಧಾ
ವಿಶುದ್ಧಿ	ಜಯನ್ತಿಕಾ	ಗಂಡಕೀ	ಚೌಹಾರ	ವಿಭೀತಕ	ದ್ರಾವಿಣೀ	ಪೃಥ್ವೀ	ಅಂಬರಯೋಗ	ಌಂ—ಷಾಂ	ಭದ್ರಾ
ಆಜ್ಞಾ	ಚಾರಿತ್ರ	ರಜನೀ	ಜಾಲನ್ಧರ	ನಿಂಬ	ಅಂಕುಶ	ಅಗ್ನಿ	ಕುಲಿಶಭೇದ	ಐಂ—ಶಾಂ	ಕಿಲಕಿಲಾ
ನಾದ	ಏಕಾಮ್ರ	ಶಿಲ್ಪಿನೀ	ಉಡ್ಯಾಣ	ಕರಂಜ	ಲೇಲಿಹಾನ	ವ್ಯಾಪಿಕಾ	ರಕ್ತವರ್ಣ	ಔಂ—ವಾಂ	ಕಾಲರಾತ್ರಿ
ನಾದಾಂತ	ದೇವೀಕೋಟ	ಸಟೀನ	ದೇವಿಕೋಟಿ	ಕದಂಬ	ಭೇಕಿ	ಶಿವ	ಲಂಪಟಾವಲೀ	ಅಃ—ಯಾಂ	ವಿಭೀಷಕಾ

ವರಾಹ ಪುರಾಣದಲ್ಲಿ ಸ್ವಾಯಂಭುವಮನ್ವಂತರದಲ್ಲಿ ಗಾಯತ್ರೀದೇವಿಯು ಮಹಿಷನನ್ನು ಮಂದರಗಿರಿಯಲ್ಲಿ ಸಂಹರಿಸಿದಳೆಂದು ಅನಂತರ ಮಹಿಷನು ಚೈತ್ರಾಸುರನಾದನೆಂದು ಅವನ ಸಂಹಾರಕ್ಕಾಗಿ ದೇವಿಯು ನಂದಾ ಎಂಬಭಿಧಾನದಿಂದ ವಿಂಧ್ಯಪರ್ವತದಲ್ಲವತರಿಸಿದಳೆಂದು ಹೇಳಿದೆ. ಮತ್ತು ಪರಾಶಕ್ತಿಯ ತಮೋಗುಣವು ರೌದ್ರೀ ಚಾಮುಣ್ಡಾ ಎಂದೂ ರಾಜಸರೂಪವು ವೈಷ್ಣವೀ, ಸತ್ವರೂಪವು ಬ್ರಾಹ್ಮೀ ಎಂದೂ ಚಾಮುಂಡಾ ಪ್ರಭೇದಗಳು ೯ ಕೋಟಿ, ವೈಷ್ಣವೀ ಭೇದಗಳು ೧೮ ಕೋಟಿ, ಬ್ರಾಹ್ಮೀರೂಪಗಳನಂತವೆಂದು ಉಕ್ತವಾಗಿದೆ.[1] ಇವೆಲ್ಲಕ್ಕೂ ರುದ್ರನೇ ಪತಿ. ತಂತ್ರರಾಜ ತಂತ್ರದಲ್ಲಿ ಬ್ರಾಹ್ಮ್ಯಾದಿ ಅಷ್ಟಮಾತೃಕೆಯರು ಭೂಪುರತ್ರಯದ ಮಧ್ಯರೇಖೆಯಲ್ಲಿರುವರೆಂದು, ಬ್ರಾಹ್ಮಿಯು ಕಾಮ, ಮಾಹೇಶ್ವರಿಯು ಕ್ರೋಧ, ಕೌಮಾರಿಯು ಲೋಭ, ವೈಷ್ಣವಿಯು ಮೋಹ, ವಾರಾಹಿಯು ಮದ, ಇಂದ್ರಾಣಿಯು ಮಾತ್ಸರ್ಯ, ಚಾಮುಂಡಾ ಪಾಪ, ಮಹಾ ಲಕ್ಷ್ಮಿಯು ಪುಣ್ಯವನ್ನು ಸೂಚಿಸುವರೆಂದು ಹೇಳಿದೆ. ವರಾಹಪುರಾಣದ ಪ್ರಕಾರ ಯೋಗೇಶ್ವರಿಯು ಕಾಮ, ಮಹೇಶ್ವರಿಯು ಕ್ರೋಧ, ವೈಷ್ಣವಿಯು ಲೋಭ, ಬ್ರಹ್ಮಾಣಿಯು ರಾಗ, ಕಲ್ಯಾಣಿಯು ಮೋಹ, ಇಂದ್ರಜೆಯು ಮಾತ್ಸರ್ಯ, ಯಮದಂಡಹಸ್ತೆಯು ನಿಂದಾ, ವರಾಹೆಯು ತಿರಸ್ಕಾರವನ್ನು ಸೂಚಿಸುವರು. ಮಾರ್ಕಂಡೇಯ ಪುರಾಣ ಮತ್ತು ನಾರದ ಪಾಂಚರಾತ್ರದ ಲಕ್ಷ್ಮೀತಂತ್ರದಲ್ಲಿ ವೈವಸ್ವತ ಮನ್ವಂತರದಲ್ಲಿ ದೇವಿಯು ಯಶೋಧರಾ ಮತ್ತು ನಂದಗೋಪರಿಗೆಲ್ಲ ನಂದಾಭಗವತೀ ಎಂಬ ಹೆಸರಿನಿಂದ ಅವತರಿಸಿ ವಿಂಧ್ಯಪರ್ವದಲ್ಲಿ ಶುಂಭ ನಿಶುಂಭ ವಧೆಮಾಡಿ ವಿಂಧ್ಯವಾಸಿನಿ ಆದಳೆಂದು ಹೇಳಿದೆ. ಮತ್ಸ್ಯಪುರಾಣ, ಪಾದ್ಮ ಮತ್ತು ದೇವೀಭಾಗವತಗಳಲ್ಲಿ ಮುಖ್ಯವಾಗಿ ಪ್ರಯಾಗದಲ್ಲಿ ಲಲಿತಾ, ವಿಂಧ್ಯದಲ್ಲಿ ವಿಂಧ್ಯವಾಸಿನೀ, ವಾರಾಣಸಿಯಲ್ಲಿ ವಿಶಾಲಾಕ್ಷೀ, ಕಿಷ್ಕಿಂಧ ಪರ್ವತದಲ್ಲಿ ತಾರೆ ದೇವಿಯ ಅವತಾರಗಳೆಂದು ಹೇಳಿದೆ. ದುರ್ಗಾ ವಿಂಧ್ಯವಾಸಿನಿಯೇ ನಂದಾಭಗವತೀ ಮಹಿಷಮರ್ದಿನೀ. ಶ್ರೀ ಶಂಕರಭಗವತ್ಪಾದರು ಪ್ರಪಂಚಸಾರ ತಂತ್ರದಲ್ಲಿ (ಅ. ೧೪) ದುರ್ಗಾಮೂರ್ತಿಭೇದಗಳನ್ನು ವರ್ಣಿಸಿರುವರು.[2]

> ಶಂಖಾರಿ ಚಾಪ ಶರಭಿನ್ನ ಕರಾಂ ತ್ರಿನೇತ್ರಾಂ
> ತಿಗ್ಮೇತರಾಂಶು ಕಲಯಾ ವಿಲಸತ್ಕಿರೀಟಾಮ್
> ಸಿಂಹಸ್ಥಿತಾಂ ಸಕಲಸಿದ್ಧನುತಾಂಶ್ಚ ದುರ್ಗಾಂ
> ದೂರ್ವಾನಿಭಾಂ ದುರಿತವರ್ಗಹರಾಂ ನಮಾಮಿ.

---

[1] Bhāskara Rāya, *Lalitāsahasranāma Bhāṣya.*

[2] Ed. Avalon, *Prapanca Sāra Tantra.*

ಇದು ಚತುರ್ಬಾಹುಮೂರ್ತಿ. ಪ್ರಭಾ, ಮಾಯಾ, ಜಯಾ, ಸೂಕ್ಷ್ಮಾ, ವಿಶುದ್ಧಾ, ನನ್ದಿನೀ, ಸುಪ್ರಭಾ, ವಿಜಯಾ, ಸರ್ವಸಿದ್ಧಿದಾ ಎಂಬ ನವಶಕ್ತಿಗಳು. ಅಷ್ಟಬಾಹುಗಳುಳ್ಳ ದುರ್ಗಾಮೂರ್ತಿಗೆ ಚಕ್ರ, ಶಂಖ, ಗದಾ, ಖಡ್ಗ, ಪಾಶಾಂಕುಶ, ಶರ, ಧನುಸ್ಸುಗಳು, ಆಯುಧಗಳು. ಜಯಾ, ವಿಜಯಾ, ಕೀರ್ತಿ, ಪ್ರೀತಿ, ಪ್ರಭಾ, ಶ್ರದ್ಧಾ, ಮೇಧಾ, ಶ್ರುತಿ ಎಂಬ ಅಷ್ಟ ಶಕ್ತಿಗಳು. ಮಹಿಷಮರ್ದಿನೀ ದುರ್ಗೆಯು ಮುಖ್ಯವಾಗಿ ಎರಡು ವಿಧ. ಅಷ್ಟ ಬಾಹು ಮೂರ್ತಿಯು ಚಕ್ರ, ಶಂಖ, ಕೃಪಾಣ, ಖೇಟ, ಬಾಣ, ಧನು, ಶೂಲ, ತರ್ಜನೀ ಹೊಂದಿರುವಳು. ಷೋಡಶಭುಜಮೂರ್ತಿಯು ಚಕ್ರ, ಶಂಖ, ಖಡ್ಗ, ಖೇಟ, ಶರಕಾರ್ಮುಕ, ಶೂಲ, ಕಪಾಲ, ಋಷ್ಟಿ, ಮುಸಲ, ಕುನ್ತ, ಸಂದಕ, ವಲಯ, ಗದಾ, ಭಿಂದಿಪಾಲ ಮತ್ತು ಶಕ್ತಿಗಳನ್ನು ಹೊಂದಿ ಮಹಿಷನ ಮೇಲೆ ಸಿಂಹಾರೂಢಳಾಗಿ ಮೇಘವರ್ಣದಿಂದಲಿರುವಳು. ಅಥವಾ ಅಗ್ನಿವರ್ಣದಿಂದ ಕಮಲದ ಮೇಲೂ, ಅಥವಾ ಮರಕತಶ್ಯಾಮ ವರ್ಣದಿಂದಲೂ ಇರಬಹುದು.

ಕಾಲೀವಿಲಾಸ ತಂತ್ರದಲ್ಲಿ[1] (ಅ. ೧೮-೨೨) ದುರ್ಗಾ ಮಹಿಷಮರ್ದಿನೀ ಸಂಬಂಧವಾಗಿ ಕಾರ್ತಿಕೇಯ, ಜಯಾ, ವಿಜಯಾ, ಗಣೇಶ, ಮಹಿಷಾಸುರ, ಲಕ್ಷ್ಮೀ, ಸರಸ್ವತೀ ಪೂಜಾ ವಿಧಾನವು ಹೇಳಲ್ಪಟ್ಟಿದೆ. ಕಾಳಿಕಾ ಪುರಾಣದಿಂದ ಮಂತ್ರವನ್ನು, ಪೂಜಾ ಕ್ರಮವನ್ನು, ಆಯುಧಗಳನ್ನು, ಆಯುಧ ತತ್ತ್ವವನ್ನು, ಧ್ಯಾನ ಕ್ರಮವನ್ನು, ಪರಿವಾರ ಶಕ್ತಿಗಳನ್ನು ವಿವರಿಸಿದೆ. ಮಂತ್ರವು ಪ್ರತಿಲೋಮ ಕ್ರಮದಲ್ಲಿ ಕೊಡಲ್ಪಟ್ಟಿದೆ (ರ್ಗೆದುರ್ಗೇದುಹಂ). ಮಹಿಷಮರ್ದಿನಿಯ ವಾಹನದಲ್ಲಿ ಶಿವನು ಮಹಾಪ್ರೇತ, ವಿಷ್ಣುವು ಸಿಂಹ, ಬ್ರಹ್ಮನು ಕಮಲ.

ರಾಧಾತಂತ್ರದಲ್ಲಿ ಮಹಿಷಮರ್ದಿನೀ ಮಂತ್ರಕ್ಕೆ ಶ್ರೀಕೃಷ್ಣನು ಋಷಿ, ಗಾಯತ್ರೀ ಛಂದಸ್ಸು. ಕುಲಚೂಡಾಮಣಿ[2] ತಂತ್ರದಲ್ಲಿ ಮಹಿಷಮರ್ದಿನೀ ವಿದ್ಯೆಯು ಹೇಳಲ್ಪಟ್ಟಿದೆ.

ದೇವೀಕೂಟೇಮಹಾಭಾಗಾಂ ಉಡ್ಡೀಯಾನೇಚ ಭೈರವ
ಯೋಗನಿದ್ರಾಂ ಕಾಮರೂಪೇ ಮಹಿಷಾಸುರಮರ್ದಿನೀಮ್.
ಕಾತ್ಯಾಯನೀಂ ಕಾಮಭೂಮೌ ಕಾಮಾಖ್ಯಾಂ ಕಾಮದಾಯಿನೀಮ್
ಜಾಲನ್ಧರೇ ಚ ಪೂರ್ಣೇಶೀಂ ಪೂರ್ಣಶೈಲೇಚ ಚಣ್ಡಿಕಾಮ್.
ಕಾಮರೂಪಾಂತು ಕೇಹಾರೇ ಪೂಜ್ಯಾದಿಕ್ಕರ ವಾಸಿನೀ

(ಅ. ೩-೬೦).

ಅಥವಾ ಸರ್ವಪೀಠೇಷು ಯಜೇನ್ಮಹಿಷಮರ್ದಿನೀಮ್.

(ಅ. ೬-೧೩).

[1] Ed. Avalon, *Kālī Vilāsa Tantra.*
[2] Ed. Avalon, *Kula Cūḍāmaṇi Tantra.*

ಮಹಿಷಮರ್ದಿನೀ ಮಂತ್ರದಲ್ಲಿ ಅಷ್ಟವರ್ಣಗಳನ್ನು ಮಾತ್ರ ಉಚ್ಚರಿಸಬೇಕು. ನವಾಕ್ಷರಿಯನ್ನು ಗೋಪ್ಯವಾಗಿಡಬೇಕು. "ನಮಃ" ಬದಲು "ಸ್ವಾಹಾ" ಎಂದು ಹೇಳಬೇಕು. ಮಂತ್ರಕ್ಕೆ ಋಷಿ ನಾರದ, ಗಾಯತ್ರೀ ಛಂದಸ್ಸು, ಮಹಿಷಘ್ನಿಯು ದೇವತೆ. ಶಾರದಾತಿಲಕದಲ್ಲಿ[1] ಈ ಅಷ್ಟಾಕ್ಷರೀ ಮಂತ್ರಕ್ಕೆ ಋಷಿ ಶತವತ್ಸ, ಛಂದಸ್ಸು ಪ್ರಕೃತಿ. ರಾಘವಭಟ್ಟನು ಋಷಿಯು ಮಾರ್ಕಣ್ಡೇಯನೆಂದು ಹೇಳುವನು. ದೇವಿಯು ಮಹಿಷನ ಮೇಲೆ ಪೀತಾಂಬರ ಜಟಾಮುಕುಟಗಳನ್ನು ಧರಿಸಿ ಪಿತೃಭೂಮಿಯಲ್ಲಿ ಅಷ್ಟಭುಜಗಳಲ್ಲಿ ಚಕ್ರ, ಖಡ್ಗ, ಬಾಣ, ಶೂಲಗಳನ್ನು ಬಲಗೈಗಳಲ್ಲೂ, ಖಡ್ಗ, ಚರ್ಮ, ಧನು, ತರ್ಜನ ಮುದ್ರೆಯನ್ನು ಎಡಗೈಗಳಲ್ಲೂ ಹೊಂದಿರುವಳು (ಅ. ೭-೧೩). ತಿರ್ಯಗಾನತ ಶಿರವಾದ ಮಹಿಷನ ಶೃಂಗಗಳ ಮಧ್ಯೆ ಅಷ್ಟಪತ್ರಗಳುಳ್ಳ ಯಂತ್ರವಿರುವದು. ಈ ಪತ್ರಗಳಲ್ಲಿ ದುರ್ಗಾ (ಆ), ವರವರ್ಣಿನೀ (ಈ), ಆರ್ಯಾ (ಊ), ಕನಕಪ್ರಭಾ (ೠ), ಕೃತ್ತಿಕಾ (ೡ), ಅಭಯಪ್ರದಾ (ಐ), ಕನ್ಯಾ (ಔ), ಸುರೂಪಾ (ಅಃ) ಎಂಬ ದೇವಿಯರನ್ನು ಬೀಜಾಕ್ಷರಗಳನ್ನು ಆಹ್ವಾನಮಾಡಬೇಕು. ಎಂಟು ಆಯುಧಗಳಿಗೆ ಯ ರ ಲ ವ ಶ ಷ ಸ ಹ ಎಂಬವು ಬೀಜಾಕ್ಷರಗಳು. ಶಾರದಾತಿಲಕದಲ್ಲಿ ದೇವಿಯು ಮಹಿಷನ ಶಿರಸ್ಸಿನ ಮೇಲೆ ಆಸೀನಳಾಗಿ ಶಂಖ, ಚಕ್ರ, ಕೃಪಾಣ, ಖೇಟಕ, ಬಾಣ, ಕಾರ್ಮುಕ, ಶೂಲ, ತರ್ಜನಿಯನ್ನು ಹೊಂದಿರುವಳೆಂದು ಹೇಳಿದೆ. ರಾಘವಭಟ್ಟನು ಟೀಕೆಯಲ್ಲಿ ತರ್ಜನೀ ಎಂದರೆ ಅಭಯವೆಂಬ ಆಯುಧ, ಮುದ್ರೆಯಲ್ಲವೆಂದು ಹೇಳುವನು. ಶಾರದಾತಿಲಕದಲ್ಲಿ ನೇತ್ರಗಳನ್ನು ಬಿಟ್ಟು ಐದು ಅಂಗಗಳಿಗೆ ಮಾತ್ರ ನ್ಯಾಸಮಾಡಬೇಕೆಂದು ಹೇಳಿದೆ. ತಂತ್ರಸಾರ ತನ್ತ್ರದಲ್ಲಿಯೂ ಕುಲಚೂಡಾಮಣಿ ತಂತ್ರದಲ್ಲೂ ಉದ್ಧೃತವಾದ ಮಹಿಷಮರ್ದಿನೀ ಸ್ತೋತ್ರದಲ್ಲಿ ವರ್ಣನೆಯು ಹೀಗಿದೆ.

ಊರ್ಧ್ವಾಧಃ ಕ್ರಮ ಸವ್ಯವಾಮ ಕರಯೋಶ್ಚಕ್ರಂ ದರಂ ಕರ್ತೃಕಾಂ
ಖೇಟಂ ವಾಣಧನುಸ್ತ್ರಿಶೂಲ ಭಯಹೃನ್ಮುದ್ರಾಂ ದಧಾನಾಂ ಶಿವಾಂ
ಶ್ಯಾಮಾಂ ನೀಲಘನೋಚ್ಚ ಕುಂತಲಚಯ ಪ್ರೋನ್ನದ್ಧ ಜೂಟಾಂಸ್ಖಲದ್-
ವೀರಾಸ್ಫಾಲ ಲಸತ್ಕರಾಲವದನಾಂ ಘೋರಾಟ್ಟಹಾಸೋದ್ಭಟಾಮ್.

ಶ್ರೀ ಶಂಕರಾಚಾರ್ಯರು ಭುವನೇಶ್ವರೀ ಸ್ತೋತ್ರದಲ್ಲಿ ದುರ್ಗಿಯನ್ನೂ, ಮಹಿಷಮರ್ದಿನೀ ಸ್ತೋತ್ರದಲ್ಲಿ ತಾಣ್ಡವ ರೂಪವನ್ನೂ ವರ್ಣಿಸಿರುವರು.

ಲಸಚ್ಛಂಖ ಚಕ್ರಾಚಲತ್ಖಡ್ಗಭೀಮಾನದತ್ಸಿಂಹವಾಹಾ ಜ್ವಲತ್ತುಂಗಮೌಲಿಃ
ದ್ರವದ್ದೈತ್ಯಸವರ್ಗಾಸ್ತುವತ್ಸಿದ್ಧವರ್ಗಾ ತ್ವಮೇವೇಶಿ ದುರ್ಗಾಽಪಿ ಸರ್ಗಾದಿಹೀನೇ.

(ಪ್ರಪಂಚಸಾರ)

[1] *Sāradā Tilaka*, Chowkhāmbā Skt. Series, Benares.

ಸುರಲಲನಾತತ ಥೇಯಿತ ಥೇಯಿತ ಥಾಭಿನಯೋತ್ತರ ನೃತ್ಯರತೇ
ಧಿಧಿಕಿಟ ಧಿಕ್ಕಿಟ ಧಿಕ್ಕಿಟ ಧಿಂಧ್ವನಿ ಧೀರಮೃದಂಗ ನಿನಾದರತೇ
ತುರಗ ಮುಖೇರಿತ ಮಾನಸಮನ್ವಿತ ಮಾನವ ಮೋಹನ ಗೀತರತೇ
ಜಯ ಜಯಹೇ ಮಹಿಷಾಸುರ ಮರ್ದಿನಿ ರಮ್ಯಕಪರ್ದಿನಿ ಶೈಲಸುತೇ.
ಜಯಜಯ ಜಯ್ಯಜಯೇ ಜಯಶಬ್ದ ಪರಿಸ್ತುತಿ ತತ್ಪರ ವಿಶ್ವನುತೇ
ಝುಣಝುಣ ಝುಂಝುಣ ಝುಂಕೃತ ನೂಪುರಶಿಂಜಿತ ಮೋಹಿತ ಭೂತಪತೇ
ನಟಿತ ನಟಾರ್ಧ ನಟೀ ನಟನಾಯಕ ನಾಟಿತ ನಾಟ್ಯಸಗಾನರತೇ
ಜಯಜಯಹೇ ಮಹಿಷಾಸುರಮರ್ದಿನಿ ರಮ್ಯಕಪರ್ದಿನಿ ಶೈಲಸುತೇ.

ಶ್ರೀವಿದ್ಯಾರ್ಣವತಂತ್ರದಲ್ಲಿ[1] ವಿಂಧ್ಯವಾಸಿನಿಯು ಚಕ್ರ, ದರ, ಅಸಿ, ಗದಾ, ಶರ ಚಾಪ, ತ್ರಿಶಿಖ, ಸಾರಗಳನ್ನು ಅಷ್ಟಭುಜಗಳಲ್ಲಿ ಹೊಂದಿರುವಳೆಂದು, ನಾರಾಯಣೀ ಯದ ಪ್ರಕಾರ ನಸದುರ್ಗಾ ಪ್ರಭೇದವಾದ ಮಹಿಷಮರ್ದಿನಿಯು ಶ್ಯಾಮವರ್ಣದಿಂದ ಮಹಿಷನಮೇಲೆ ಸಿಂಹಾಸನಾಸೀನಳಾಗಿ ಚಕ್ರ, ಶಂಖ, ಅಸಿ, ಖೇಟ, ಬಾಣ, ಚಾಪ, ತರ್ಜನೀ, ತ್ರಿಶೂಲ, ಪುಂಸ್ಕಪಾಲ, ಮುಷ್ಟಿಕ, ಮುಸಲ, ಕುನ್ತ, ಸಂದಕ, ಗದಾ, ಭಿಂಡಿವಾಲ, ಶಕ್ತಿಗಳನ್ನು ಹದಿನಾರು ಕೈಗಳಲ್ಲಿ ಹೊಂದಿರುವಳೆಂದು, ಅಥವಾ ಅಷ್ಟಭುಜಗಳಲ್ಲಿ ದಕ್ಷಿಣಾಧಃಕರದಿಂದಾರಂಭಿಸಿ ಶೂಲ, ಬಾಣ, ಚಕ್ರ, ಶಂಖ, ಖಡ್ಗ, ಖೇಟ, ಧನುಃ, ಕಪಾಲಗಳನ್ನು ಹಿಡಿದಿರುವಳೆಂದು ಹೇಳಿದೆ.

ಬ್ರಹ್ಮಾಂಡ ಪುರಾಣದ ಲಲಿತೋಪಾಖ್ಯಾನದಲ್ಲಿ ಲಲಿತಾಪರಮೇಶ್ವರಿಯ ರೋಷಾಟ್ಟಹಾಸದಿಂದ ದುರ್ಗಿಯು ಹುಟ್ಟಿದಳೆಂದು, ದುರ್ಗಿಗೆ ಸಮಸ್ತ ದೇವತೆಗಳು ತಮ್ಮ ಆಯುಧಗಳಾದ ಚಕ್ರ, ಶಂಖ, ಶಕ್ತಿ, ಧನು, ಅಕ್ಷಯತೂಣೀರ, ವಜ್ರ, ಘಂಟಾ, ಕುಂಡಿಕಾ, ಚಷಕ, ಖಡ್ಗ-ಖೇಟಗಳನ್ನು ಕೊಟ್ಟರೆಂದು ದುರ್ಗಿಯು ಹಿಂದೆ ಚಂಡಿಕಾಸಪ್ತಶತಿಯಲ್ಲಿ ವಿವರಿಸಿದಂತೆಯೇ ಈಗಲೂ ಮಹಿಷನನ್ನು ಸಂಹಾರ ಮಾಡಿದಳೆಂದು ಹೇಳಿದೆ (ಲಲಿತೋಪಾಖ್ಯಾನ, ಅ. ೨೪).

ಇದರಿಂದ ಮಹಿಷಮರ್ದಿನಿಯು ಸರ್ವದೇವತೆಗಳ ಸಮಷ್ಟಿರೂಪವೆಂದು ತಿಳಿದು ಬರುವದು. ತೈತ್ತಿರೀಯ ಸಂಹಿತೆಯಲ್ಲಿ ಉತ್ತರವೇದಿಯನ್ನು ಸಿಂಹೀ ಮಹಿಷೀ ಎಂದು ಸಂಬೋಧಿಸಿದೆ. ಉತ್ತರವೇದಿಯು ಸಿಂಹೀರೂಪದಿಂದ ದೇವತೆಗಳನ್ನು ಬಿಟ್ಟು ಹೋಯಿತೆಂದು ಹೇಳಿದೆ (ತೈ-ಸಂ. VI, ೨-೭). ಮಹಿಷ ಎಂಬುದನ್ನು ವೃಷಭಕ್ಕೆ ಪರ್ಯಾಯವಾಗಿ ಹೇಳಿದೆ. ಇಂದ್ರಸು ಗೌರಾವಸ್ಕಂದಿನ್. (ಐ.ಬ್ರಾ. VI, ೩). ಸಿಂಹ ಅಥವಾ ಮಹಿಷರೂಪವಾದ ವೇದಿಯ ಮೇಲೆ ಅಗ್ನಿರೂಪಳಾದ ಜಾತವೇದಸೀ ದೇವಿಯು ಮಹಿಷಮರ್ದಿನಿಯಾದಳು. ಈ ಪಶುವು ಸಿದ್ಧೇಶ್ವರರನ್ನು ಬಿಟ್ಟು ಸರ್ವ

[1] *Śrī Vidyārṇava Tantra*, Kashmir Skt. Texts.

ಚೇತನಾವಂತರನ್ನು ನಿರ್ದೇಶಿಸುವದು.[1] (ಪಶ್ಯನಾತ್ ಪಾಶನಾಚ್ಚ ಪಶವಃ| ಕಾರ್ಯ ಕಾರಣಾಂಜನಾ ನಿರಂಜನಾಶ್ಚ ಪಶವಃ—ಪಾಶುಪತಸೂತ್ರ ಭಾಷ್ಯ). ಪಾಶವೆಂದರೆ ಕಾರ್ಯಕರಣಾಖ್ಯ ಕಲೆಗಳು. ಅವುಗಳಿಂದ ಬದ್ಧರಾಗಿ ಶರೀರಮಾತ್ರವನ್ನು ನೋಡುವವರು ಪಶುಗಳು. (ಯಸ್ಮಾದ್ವಿಭುತ್ವೇऽಪಿ ಚಿತ್ಸಮವೇತತ್ವೇऽಪಿಚ ಶರೀರಮಾತ್ರಮೇವಪಶ್ಯನ್ತಿ ಉಪಲಭನ್ತಿಚ| ನ ಬಹಿರ್ಧಾನಿ|).

ಸಾಂಖ್ಯಯೋಗೇನಯೇಮುಕ್ತಾಃ ಸಾಂಖ್ಯಯೋಗೇಶ್ವರಾಶ್ಚಯೇ |
ಬ್ರಹ್ಮಾದಯಸ್ತಿರ್ಯಗನ್ತಾಃ ಸರ್ವೇತೇಪಶವಃಸ್ಮೃತಾಃ ||

ಪಶುಪ್ರಸಾದಕ್ಕಾಗಿ ದೇವಿಯು ಧರಿಸಿರುವ ಆಯುಧಗಳು ಒಂದೊಂದು ತತ್ತ್ವವನ್ನು ನಿರ್ದೇಶಿಸುವವು. ಮುಖ್ಯವಾದ ಪಾಶಾಂಕುಶಾಭಯ ವರಗಳ ಅರ್ಥವನ್ನು ಶ್ರೀ ಶಂಕರಾಚಾರ್ಯರು ವಿವರಿಸಿರುವರು.[2]

ಧಾತೂದ್ವೌ ಸ್ತೋರಕ್ಷಣವ್ಯಾಪಕಾರ್ಥೌ ಪಾದ್ಯೋऽಶ್ವಾದ್ಯಸ್ತತ್ರಭಾವಸ್ತಯೋಶ್ಚ
ಸರ್ವಂ ಸಂರಕ್ಷ್ಯೋऽಥ ಸರ್ವಾತ್ಮನಾ ಯೋ ವ್ಯಾಪ್ನೋತ್ಯಂಶಃ ಸ್ಯಾದಸೌ **ಪಾಶವಾಚೀ.**
ಅಂಸ್ಯಾದಾತ್ಮಾ ಕುರ್ಧರಾ ಕುಸ್ತನುರ್ವಾ ಭಾಗಾರ್ಥಃ ಸ್ಯಾಚ್ಛೋऽಥವಾ ವೃತ್ತಿವಾಚೀ
ಭೂಶ್ಚೇದ್ಭೂತಾನ್ಯನ್ಯಥಾ ಚೇಚ್ಛರೀರಾಣ್ಯಾಕೃಷ್ಯಾತ್ಮನ್ಯಾಹರೇ **ದಂಕುಶಾಖ್ಯಃ.**
ಸ್ಮೃತೇಯಥಾ ಸಂಸೃತಿ ಚಕ್ರ ಚಂಕ್ರಮೋದ್ಭವಾದ್ಭಲಾಪಾಯ ಸಮುತ್ಥಿತಾದಪಿ
ವಿಯೋಜಯತ್ಯಾತ್ಮತನುಂನರಂ ಭಯಾತ್ತಥಾऽಭಯ**ಸ್ಯಾಭಯ** ಸಂಜ್ಞಿತಾ ವಿಭೋಃ.
ಮುಖ್ಯಾರ್ಥವಾಚೀವರ ಶಬ್ದ ಉಕ್ತಃ ಸ್ಯಾದ್ವಾಂಛಿತಾರ್ಥಶ್ಚ ವರಾಭಿಧಾನಃ
ಮುಖ್ಯನ್ತ್ಯಭೀಷ್ಟಂ ಸ್ಮೃತಿಮಾತ್ರಕೇಣ ದದಾತಿಯೋऽಸೌ **ವರದೋ**ऽವಗಮ್ಯಃ.

(ಪ್ರಪಂಚಸಾರ. ಅ. ೧೦-೧೧. 14).

ಚಕ್ರ, ಶಂಖ, ಕರ್ತೃಕಾ, ಖೇಟ, ಬಾಣ, ಧನುಸ್ಸು ತ್ರಿಶೂಲಗಳಿಗೂ ಬೀಜಾಕ್ಷರಗಳು ಒಂದೊಂದು ತತ್ತ್ವವನ್ನು ಸೂಚಿಸುವವು. ಇನ್ನೂ ಅನೇಕ ರಹಸ್ಯಗಳು ದುರ್ಗಾ ಮಹತ್ವ, ಚಾಮುಣ್ಡಾ ತಂತ್ರ, ಮುಣ್ಡಮಲಾತಂತ್ರ, ಕಾಲಿಕಾ ತಂತ್ರ, ಮಹಿಷ ಮರ್ದಿನೀ ತಂತ್ರ, ಶ್ಯಾಮಾ ರಹಸ್ಯ, ಇತ್ಯಾದಿ ಗ್ರಂಥಗಳಲ್ಲಿ ವಿವರಿಸಲ್ಪಟ್ಟಿವೆ.[3]

IV

ದೇವೀ ಭಾಗವತದಲ್ಲಿ ದುರ್ಗಿಯ ಪ್ರತಿಮಾ ಪೂಜೆಯು ಸುಬಾಹುವಿನಿಂದ ಕಾಶಿಯಲ್ಲಿ ಆರಂಭಿಸಲ್ಪಟ್ಟಿತೆಂದು ಅನಂತರ ಭರತಖಂಡದಲ್ಲೆಲ್ಲ ಹರಡಿತೆಂದು ಹೇಳಿದೆ.

ಸುಬಾಹುರಪಿ ಕಾಶ್ಯಾಂತು ದುರ್ಗಾಯಾಃ ಪ್ರತಿಮಾಂ ಶುಭಾಂ
ಕಾರಯಿತ್ವಾ . . . ಸರ್ವತ್ರಭಾರತೇಲೋಕೇ ಸರ್ವವರ್ಣೇಷು ಸರ್ವದಾ
ಭಜನೀಯಾ ಭವಾನೀತು ಸರ್ವೇಷಾಮಭವತ್ತದಾ.

(ದೇ. ಭಾ. III-25-41. 44).

---

[1] *The Pāśupata Sūtras with Kauṇḍinya Bhāṣya*, Tr. Skt. Series.
[2] Ed. Avalon, *The Prapanca Sāra Tantra.*
[3] Avalon, *The Principles of Tantra*, Vol. II.

ಕೇನೋಪನಿಷತ್ತಿನಲ್ಲಿ ಉಮಾಹೈಮವತಿಯ ಉಲ್ಲೇಖನವಿದೆ. ತೈತ್ತಿರೀಯಾರಣ್ಯಕದಲ್ಲಿ ಅಂಬಿಕೆಯ ಹೆಸರಿದೆ (ತೈ. ಆ. X—18). ಮಹಾಭಾರತದಲ್ಲಿ ದುರ್ಗಾವಿಂಧ್ಯವಾಸಿನಿಯ ಸ್ತೋತ್ರವಿದೆ (ವಿರಾಟ ಪ. ೬. ಭೀಷ್ಮ ಪ. ೨೩, ವನ ಪ. 39-4-ಕಿರಾತೀ). ಯಾಜ್ಞವಲ್ಕ್ಯ ಸ್ಮೃತಿಯಲ್ಲಿ (I-290) ಅಂಬಿಕೆಯು ವಿನಾಯಕನ ತಾಯಿ ಎಂದು ಹೇಳಿದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ (II-4) ಅಪರಾಜಿತ, ಮದಿರಾ ದೇವಾಲಯಗಳು ನಿರ್ದೇಶಿಸಲ್ಪಟ್ಟಿವೆ. ಬಾಣನು ಚಣ್ಡೀ ಶತಕವನ್ನು ರಚಿಸಿದನೆಂದು ಹೇಳಲಾಗಿದೆ. ಕಾದಮ್ಬರಿಯಲ್ಲೂ ಮಾಲತೀ ಮಾಧವದಲ್ಲೂ ಚಣ್ಡೀ ಮಹಿಷಮರ್ದಿನೀ ದೇವಾಲಯದ ಪ್ರಶಂಸೆ ಇದೆ. ಕ್ರಿ. ಶ. ೬೨೫ನೆಯ ಒಂದು ಶಾಸನದಲ್ಲಿ ದುರ್ಗಾದೇವಿಯೇ ಪರಮ ದೇವತೆಯೆಂದು ಹೇಳಿದೆ. (*E. I.* IX. p. 189). ಅನೇಕ ರಾಜರೂ ಪರಮ ಭಾಗವತರೂ ಪರಮ ಮಾಹೇಶ್ವರರೂ ಆಗಿದ್ದುದಲ್ಲದೇ ಭಗವತೀ ಪ್ರಸಾದ ಲಬ್ಧ ರಾಜ್ಯರೆಂದೂ ಹೇಳಿಕೊಂಡಿರುವರು. ಚಾಲುಕ್ಯರ ಮೂಲ ಪುರುಷನಾದ ವಿಷ್ಣುವರ್ಧನನು ನನ್ದಾಭಗವತಿಯನ್ನು ಸಪ್ತಮಾತೃಕೆಯರನ್ನು ಆರಾಧಿಸಿ ರಾಜ್ಯ ಪಡೆದನು. ಗುಪ್ತರ ಕಾಲದಿಂದ ಮಹಿಷಾಸುರಮರ್ದಿನೀ ವಿಗ್ರಹಗಳು ಸಿಕ್ಕುವುವು.[1] ಬಾದಾಮಿ ಚಾಳುಕ್ಯ ಪಲ್ಲವರ ಶಿಲ್ಪಿಗಳಲ್ಲಿ ಮಹಿಷಮರ್ದಿನಿಗೆ ಮುಖ್ಯಸ್ಥಾನವಿದ್ದಿತು. ಚಾಳುಕ್ಯ ಚಕ್ರವರ್ತಿಯಾದ ಸರ್ವಜ್ಞ ಸೋಮೇಶ್ವರನು ಮಹಿಷಮರ್ದಿನಿಯ ಲಕ್ಷಣಗಳನ್ನು ಹೇಳಿರುವನು.

ತಥಾ ಕಾತ್ಯಾಯಿನೀಂ ದೇವೀಂ ಶಿವನಾರಾಯಣಾತ್ಮಿಕಾಂ
ಬಾಹುಭಿರ್ದಶಭಿರ್ಯುಕ್ತಾಂ ಜಟಾಮುಕುಟಮಂಡಿತಾಮ್.
ಲೋಚನತ್ರಯಸಂಯುಕ್ತಾಮರ್ಧೇಂದು ಕೃತಶೇಖರಾಮ್
ಅತಸೀಪುಷ್ಪ ಸಚ್ಛಾಯಾಮಿನ್ದೀವರದಳೇಕ್ಷಣಾಮ್.

---

[1] ಪುರಾಣ ನಾಣ್ಯಗಳ ಮೇಲೆ ಒ ಏಶೋ ಮತ್ತು ನಾನಾ ಎಂಬ ಮೂರ್ತಿಗಳೂ ಭವೇಶ ಮತ್ತು ನಾನಾ (ದುರ್ಗಾ) ಎಂಬ ದೇವತೆಗಳು. ಒಮ್ಮೋ ಎಂದು ಕರೆಯಲ್ಪಟ್ಟ ದೇವತೆಯು ಉಮಾ (*J.R.A.S.*, 1897, p. 324). ಗುಪ್ತರ ನಾಣ್ಯಗಳ ಮೇಲೆ ಅಂಬಿಕೆಯು ಅಕ್ಷಯಶೃಂಗ (cornucopiae) ಹಿಡಿದಿರುವಳು. ಗುಪ್ತರಕಾಲದ ರಾಜಘಾಟ್ ಮುದ್ರೆಗಳಲ್ಲಿ "ದುಗ್ಗ್ಗಃ" ಎಂದು ಕರೆಯಲ್ಪಟ್ಟ ದೇವತೆಯು ದ್ವಿಭುಜಗಳನ್ನು ಒಂದು ಕೈಯಲ್ಲಿ ಮಾಲೆಯನ್ನು ಮತ್ತೊಂದರಲ್ಲಿ ತ್ರಿಶೂಲದಂತಹ ಆಯುಧವನ್ನು ಹತ್ತಿರ ಹಾವನ್ನು ಹೊಂದಿರುವಳು. ಮತ್ತು ಚಂಡೀಶ್ವರ ದಾಸ ಎಂಬ ಹೆಸರುಗಳು ಇವೆ. ಪುರಾಣನಾಣ್ಯಗಳ ಮೇಲಿರುವ ಚಿಹ್ನೆಗಳು ಹರಪ್ಪ ಚಿಹ್ನೆಗಳಂತೆಯೇ ತಾಂತ್ರಿಕವೆಂದು ಅನೇಕರ ಅಭಿಪ್ರಾಯವಾಗಿದೆ. ಒಬ್ಬ ಶಾಕ್ತನಿಂದ ನಿರ್ಮಿಸಲ್ಪಟ್ಟ ಚೌಷಟ್ ಯೋಗಿನೀ ದೇವಾಲಯದಲ್ಲಿ ದೆದ್ದರೀ, ತೇರಂಬಾ (ಮಹಿಷಮರ್ದಿನೀ) ಐಂಗಿನೀ (ಗಣೇಶನ ಪತ್ನಿ) ಇತ್ಯಾದಿ ಅಪೂರ್ವ ದೇವೀ ವಿಗ್ರಹಗಳಿವೆ.

ಪೀನೋನ್ನತ ಕುಚಾಭೋಗಾಂ ತನುಮಧ್ಯೇನಶೋಭಿತಾಮ್
ತ್ರಿಭಂಗಸ್ಥಾನ ಸಂಸ್ಥಾನಾಂ ಮಹಿಷಾಸುರಮರ್ದಿನೀಮ್.
ತ್ರಿಶೂಲಂದಕ್ಷಿಣೇ ಖಡ್ಗಂ ಚಕ್ರಂ ಶಕ್ತಿಂ ವರಂತಥಾ
ಅಧಿಜ್ಯ ಕಾರ್ಮುಕಂ ವಾಮೇ ಪಾಶಮಂಕುಶಖೇಟಕಮ್.
ಘಂಟಾಂ ವಾಪರಶುಂವಾಪಿ ಧಾರಯನ್ತೀಂ ಸಮಾಲಿಖೇತ್
ಅಧಸ್ತಾನ್ಮಹಿಷಂ ತಸ್ಯಾ ಭಿನ್ನಗ್ರೀವಂ ಸಮಾಲಿಖೇತ್.
ಭಿನ್ನಸ್ಥಾನ ಸಮುತ್ಪನ್ನಂ ಖಡ್ಗಖೇಟಕಧಾರಿಣಮ್
ಹೃದಿಶೂಲೇನನಿರ್ಭಿನ್ನರುಧಿರಾರುಣವಿಗ್ರಹಮ್.
ಪ್ರಬದ್ಧಂ ನಾಗ ಪಾಶೇನ ಭ್ರುಕುಟೀಭೀಷಣೇಕ್ಷಣಮ್
ನಾಭೇರೂರ್ಧ್ವಂವಿನಿಷ್ಕ್ರಾನ್ತಂ ದಾರುಣಂ ಪುರುಷಂ ಲಿಖೇತ್.
ದಕ್ಷಿಣಂ ಚರಣಂದೇವ್ಯಾ ಸಿಂಹಪೃಷ್ಠೇಪ್ರತಿಷ್ಠಿತಮ್
ಉತ್ತುಂಗಮಂಚಿತಂವಾಮಂ ಮಹಿಷಸ್ಯೋಪರಿಸ್ಥಿತಮ್.

(ಅಭಿಲಷಿತಾರ್ಥಚಿನ್ತಾಮಣಿ, I)

ಚೋಳರಕಾಲದ ಪಿಡಾರಿ (ಭಟ್ಟಾರಿಕಾ—ಮಹಿಷಮರ್ದಿನೀ) ವಿಗ್ರಹಗಳು ನಂದಿ, ಕೋಲಾರ ಮುಂತಾದ ಸ್ಥಳಗಳಲ್ಲಿ ಸಿಕ್ಕಿರುವವು. ಹೊಯ್ಸಳರು ಚಾಳುಕ್ಯ ಚೋಳ ಸಂಪರ್ಕದಿಂದ ಮಹಿಷಮರ್ದಿನೀ ವಿಗ್ರಹಗಳನ್ನು ವಿಶೇಷವಾಗಿ ತಮ್ಮ ದೇವಾಲಯ ಗಳಲ್ಲಿ ಸ್ಥಾಪಿಸಿದರು. ಚೌಡೇಶ್ವರಿ, ಚೌಡ, ಚಾಮುಣ್ಡ ಎಂಬ ಹೆಸರುಗಳು ೯ ನೆಯ ಶತಮಾನದಿಂದ ಸಾಮಾನ್ಯವಾಗಿ ಪ್ರಚಾರಕ್ಕೆ ಬಂದವು. ಹೊಯ್ಸಳರು ಶಶಕಪುರೀ ವಾಸನ್ತಿಕಾದೇವೀಲಬ್ಧ ವರಪ್ರಸಾದರೆಂದೂ ಮೂಲಪುರುಷನಾದ ಸಳನು ವಾಸಂತಿ ಕಾದೇವಿಯ ಬಳಿಯಲ್ಲಿ ತಪಸ್ಸು ಮಾಡುತ್ತಿದ್ದ ಒಬ್ಬ ಜೈನಯತಿಯ (ವರ್ಧಮಾನ, ಸುದತ್ತ) ಶಿಷ್ಯನಾಗಿದ್ದನೆಂದೂ ಶಾಸನಗಳಲ್ಲಿ ಹೇಳಿಕೊಂಡಿರುವರು. ಈಚೆಗೆ ಸಿಕ್ಕಿರುವ ವಾಸನ್ತಿಕಾ ಎಂದೆನಿಸಿದ ವಿಗ್ರಹವು ಚಾಮುಂಡಾ ಲಕ್ಷಣಗಳನ್ನು ಹೊಂದಿದೆ.[2] ಗಂಗ—ರಾಷ್ಟ್ರಕೂಟರ ಕಾಲದಲ್ಲಿ ಪ್ರಸಿದ್ಧನಾದ ಚಾಮುಣ್ಡರಾಯನು ಜೈನನು. ಆದುದರಿಂದ ಚಾಮುಣ್ಡಿಗೂ ವಾಸನ್ತಿಕಾದೇವಿಗೂ ಸಾಮ್ಯವೋ ಅಭೇದವೋ ಇದ್ದಿ ತೆಂದು ಊಹಿಸಬಹುದು. ಜೈನ ತೀರ್ಥಂಕರರಲ್ಲಿ ಕೆಲವರಿಗೆ ಚಾಮುಣ್ಡೀ ಸದೃಶರಾದ ಯಕ್ಷಿಣಿಯರಿದ್ದರು.[2]

[1] *M. A. R.*—1942.
[2] Burgess, *Digambara Jaina Iconography.*

ತೀರ್ಥಂಕರ	ಯಕ್ಷ		ಯಕ್ಷಿಣೀ	
	ಶ್ವೇತಾಂಬರ	ದಿಗಂಬರ	ಶ್ವೇತಾಂಬರ	ದಿಗಂಬರ
ಅಭಿನನ್ದನ	ನಾಯಕ	ಯಕ್ಷೇಶ್ವರ	ಕಾಲಿಕಾ	ವಜ್ರಶೃಂಖಲಾ
ಸುಮತಿ	ತುಂಬುರು	ತುಂಬುರು	ಮಹಾಕಾಲೀ	ಪುರುಷದತ್ತಾ
ಪದ್ಮಪ್ರಭ	ಕುಸುಮ	ಕುಸುಮ	ಶ್ಯಾಮಾ	ಮನೋವೇಗಾ
ಸುಪಾರ್ಶ್ವ	ಮಾತಂಗ	ವರನನ್ದಿ	ಶಾಂತಾ	ಕಾಲೀ
ಸುವಿಧಿ	ಅಜಿತ	ಅಜಿತ	ಸುತಾರಕಾ	ಮಹಾಕಾಲೀ
ಶ್ರೇಯಾಂಸ	ಯಕ್ಷೇಟ್	ಈಶ್ವರ	ಮಾನವೀ	ಗೌರೀ
ವಾಸುಪೂಜ್ಯ	ಕುಮಾರ	ಕುಮಾರ	ಚಂಡಾ	ಗಾನ್ಧಾರೀ
ವಿಮಲ	ಷಣ್ಮುಖ	ಷಣ್ಮುಖ	ವಿದಿತಾ	ವೈರೋಟೀ
ನಮಿ	ಭ್ರುಕುಟೀ	ಭ್ರುಕುಟೀ	ಗಾನ್ಧಾರಿ	ಚಾಮುಣ್ಡಾ
ನೇಮಿ	ಗೋಮೇಧ	ಸರ್ವಾಹ್ಣ	ಅಂಬಿಕಾ	ಕೂಷ್ಮಾಣ್ಡಿನೀ
ಪಾರ್ಶ್ವ	ಧರಣೇಂದ್ರ	ಧರಣೇಂದ್ರ	ಪದ್ಮಾವತೀ	ಪದ್ಮಾವತೀ

ದೇವಚಂದ್ರನ ರಾಜಾವಳೀ ಕಥೆಯಲ್ಲಿ[1] ಕಾರುಗಹಳ್ಳಿ ವೀರಶೂರನೆಂಬವನು ಚಾಮುಂಡೀ ಬೆಟ್ಟದಮೇಲಿರುವ ವಾಸಂತಿಕಾದೇವಿಗೆ ಚಾಮುಂಡಿ ಎಂದು ಹೆಸರಿಟ್ಟು ಮಹಿಷಾಪುರವನ್ನು ಸ್ಥಾಪಿಸಿದನೆಂದು ಹೇಳಿದೆ. ಆದರೆ ಮತ್ತೊಂದು ಸ್ಥಳದಲ್ಲಿ ಬೆಟ್ಟದ ಮೇಲಿದ್ದ ಪದ್ಮಾವತೀ ವಿಗ್ರಹವು ಬಲ್ಲಾಳರಾಜರಿಗೆ ಕುಲದೇವತೆಯಾಗಿದ್ದಿತೆಂದೂ ಅದನ್ನು ಕಾರುಗಹಳ್ಳಿ ಪಾಳೆಯಗಾರರು ಚಾಮುಂಡೇಶ್ವರಿಯಾಗಿ ಮಾರ್ಪಡಿಸಿ ಮಹಾಬಲೇಶ್ವರ ದೇವಸ್ಥಾನವನ್ನು ಸ್ಥಾಪಿಸಿದರೆಂದೂ ದೇವಚಂದ್ರನು ಹೇಳುವನು. ಪದ್ಮಾವತಿಯು ಆಶಾಧರನ ಪ್ರತಿಷ್ಠಾಕಲ್ಪದ ಪ್ರಕಾರ ಕಮಲಾಸನವನ್ನು ಕುಕ್ಕುಟ ಸರ್ಪವಾಹನವನ್ನು ಫಣಾಛತ್ರವನ್ನು ಹೊಂದಿರುವಳು. ಆದುದರಿಂದ ಚಾಮುಂಡಿಯು ಪದ್ಮಾವತಿ ಆಗಿರಲಾರಳು. ದೇವಚಂದ್ರನು ಹೇಳುವಂತೆ ಬೆಟ್ಟದ ಮೇಲಿನ ಮಹಾಬಲೇಶ್ವರ ದೇವಾಲಯವನ್ನು ಕಾರುಗಹಳ್ಳಿಯ ಪಾಳೆಯಗಾರರು ಸ್ಥಾಪಿಸಿದರೆಂಬುದಕ್ಕೂ ಅಲ್ಲಿ ಜೈನ ಬಸದಿಗಳಿದ್ದವೆಂಬುದಕ್ಕೂ ಶಾಸನಾಧಾರಗಳಿಲ್ಲ. ಹೊಯ್ಸಳ ವಿಷ್ಣುವರ್ಧನನು ಯಾದವ ಪುರದಲ್ಲಿದ್ದು ಶಕ. ೧೦೫೦ ಪ್ಲವಂಗ, ಕನ್ನೆಮಾಸ, ವಿಷು ಆದಿತ್ಯವಾರ ಹಸ್ತಾ ನಕ್ಷತ್ರದಲ್ಲಿ "ಮೈಸುನಾಡಸ್ವಸ್ತಿ ಶ್ರೀ ಮಾರ್ಬಳದ ತೀರ್ಥಕ್ಕೆ ಮಣಲೆವಾಡಿಯನರ್ಸತರಂ ಶಿದ್ಧಿಯಾಗೆ ಬಿಟ್ಟ . . . ಮಾಬಂಬಯ, ನಾಡನುಂ ನರಸಿಂಗದೇವನುಂಬಿಟ್ಟ" (*E. C.* III *My. 16.*). ಪ್ರಭವ, ಮಾರ್ಗಶಿರ ಶು. ೧.

[1] S. Śrīkaṇṭha Śastri, *Jaina Antiquary* VII. No. 11. 672.

ಸೋಮವಾರದ ಎರಡು ಶಾಸನಗಳಲ್ಲಿ "ಮಾಬಳೇಶ್ವರ ದೇವರ ಪಾತ್ರ ಮಾಯಿದೇವಿಯ ಮಗ ನಾಗ ಶಂಭು, ದರಸಿವಾಳ ಮಾಯ ಗುರುಗಳ ಮಾಯಪ್ಪ" ಎಂಬುವರ ಉಲ್ಲೇಖಸವಿದೆ. (*E.C.* III. *My.* 18, 19). ಇದರಿಂದ ಮಾರ್ಬಲ ಪರ್ವತವು ಕಾಳಾಮುಖ ಪಾಶುಪತರ ಸ್ಥಾನವಾಗಿದ್ದಿತೆಂದೂ ಚಾಮುಂಡೇಶ್ವರೀ ದೇವಾಲಯದ ಸೂಚನೆ ಇಲ್ಲದಿರುವದರಿಂದ ಮಾರ್ಬಲೇಶ್ವರನೇ ಇಲ್ಲಿ ಮುಖ್ಯ ದೇವತೆಯಾಗಿದ್ದನೆಂದೂ ಊಹಿಸಲವಕಾಶವಿದೆ. ಜೈನರ ಚಾಮುಂಡಾ, ಬೌದ್ಧರ ತಾರಾ, ತಾಂತ್ರಿಕರ ತ್ರಿಪುರಾ ಇತ್ಯಾದಿ ರೂಪಗಳನ್ನೊಳಕೊಂಡ ಅಗ್ನಿರೂಪಳಾದ ಚಾಮುಂಡೇಶ್ವರೀ ಮಾತೃದೇವತೆಯು ವೇದಯುಗದಿಂದಲೂ ಭಾರತೀಯ ಸಂಸ್ಕೃತಿಯ ಚಿಹ್ನೆಯಾಗಿ ಆರಾಧಿಸಲ್ಪಡುತ್ತಿರುವಳಲ್ಲದೆ ಈ ಮಾತೃದೇವತೆಯ ಕೆಲವಂಶಗಳನ್ನು ಗ್ರಹಿಸಿ ಇತರ ದೇಶಗಳ ಪ್ರಾಚೀನ ಜನಾಂಗಳೂ ಮಾತೃದೇವತಾ ಪೂಜಕರಾಗಿದ್ದರು.

ಎಸ್. ಶ್ರೀಕಂಠಶಾಸ್ತ್ರೀ.

ಜೀರುಂಡೆಯ ಮೇಳ

ಕದ್ದಿಂಗಳಿನಿರುಳು,
ಬುವಿಬಾನಂತರವೆಲ್ಲವ ಕತ್ತಲು ತುಂಬಿರಲು ;
ದೆಸೆ ಅಳಿಯದೆನಿಲಲು
ತಮಕಿವು ಸೇತುವೊ ಎನೆ ದಟ್ಟೈಸಿರೆ ತಾರೆಗಳು ;
ಭೂತ ಭವಿಷ್ಯವನು
ಮುಸುಕಿನೊಳವಿತಿಟ್ಟಂತಿಳೆ ಹೊದ್ದಿರೆ ಮೌನವನು ;
ಸೆರೆಬಿದ್ದಿಹ ಕಾಲ,
ಹುಯಿಲಿಡುವುದೊ ಎನೆ ಜಿರ‍್ರನೆ ಜೀರುಂಡೆಯ ಮೇಳ.

ಪು.ತಿ.ನ.

ಲಕ್ಷ್ಮಮ್ಮನವರ ದಿನಚರಿ*

ಬೆಳಿಗ್ಗೆ ಐದೂವರೆ ಗಂಟೆಗೆ ಅಲಾರಂ ಹೊಡೆಯಿತು. ಲಕ್ಷ್ಮಮ್ಮನವರು ಎದ್ದು ನೋಡಿದರೆ ಇನ್ನೂ ನಾಲ್ಕು ನಾಲ್ಕೂವರೆ ಘಂಟೆ ಮಾತ್ರ ಆದಹಾಗಿತ್ತು. ಹಾಳು ಗಡಿಯಾರ ದಿನಾ ಒಂದು ಘಂಟೆ ಮುಂದೆ ಹೋಗುತ್ತೆ. ಎರಡು ತಿಂಗಳಿಂದಲೂ ಅದನ್ನು ಸರಿಮಾಡಿಸಬೇಕು ಎಂದುಕೊಳ್ಳುವುದರಲ್ಲೇ ಕಾಲಕಳೆದಾಯಿತು. ರಾತ್ರೆ ಅದನ್ನು ಒಂದು ಘಂಟೆ ಹಿಂದಕ್ಕೆ ತಿರುಗಿಸಿ ಇಡಬೇಕಾಗಿತ್ತು. ಮಲಗುವುದು ಹೊತ್ತಾದ್ದರಿಂದ ಅದು ಮರೆತೇಹೋಗಿತ್ತು. . . . ಇನ್ನೂ ಮೊದಲ ಕೋಳಿ ಸಹ ಕೂಗಿರಲಾರದು. ಮತ್ತೆ ಸ್ವಲ್ಪ ಮಲಗೋಣವೆಂದರೆ ಪುನಃ ಎಚ್ಚರವಾಗಲು ಹೊತ್ತಾಗಬಹುದು. ಹೇಗಿದ್ದರೂ ಎದ್ದಾಯಿತು. ಅತ್ತೆ ತುಳಸಿ ಪೂಜೆಗೆ ಏಳುವುದ ರೊಳಗೆ ಮನೆ ಕೆಲಸವನ್ನೆಲ್ಲಾ ಮುಗಿಸಿಬಿಡಬಹುದು. ಅಡಿಗೆ ಮನೆಯನ್ನು ಒಕ್ಕಲ ಗಿತ್ತಿ ಸಾರಿಸುವ ಹಾಗಿಲ್ಲವಲ್ಲ: ಆದಷ್ಟು ಕೆಲಸ ಮುಗಿಸಿ ನೀರೊಲೆಗೆ ಉರಿ ಹಾಕಿ ಬಿಟ್ಟರೆ ಅವರು ಏಳುವ ಹೊತ್ತಿಗೆ ಸ್ನಾನಕ್ಕೆ ನೀರು ಸಿದ್ಧವಾಗಿರುತ್ತೆ. "ಅವರು" ಎಂದರೆ ಲಕ್ಷ್ಮಮ್ಮನ ಯಜಮಾನರು,—ರಾಮರಾಯರು. . . . ಲಕ್ಷ್ಮಮ್ಮನ ಕಣ್ಣು ಇನ್ನೂ ನಿದ್ದೆಯ ಜೊಂಪಿನಿಂದ ಎಳೆದುಕೊಂಡು ಹೋಗುತ್ತಾ ಇದೆ. ಹೋಗಲಿ, ಇವೊತ್ತಿನದೇನು ಹೆಚ್ಚುಗಾರಿಕೆ? ಆಕೆ ಹಾಯಾಗಿ ನಿದ್ದೆಮಾಡಿದ್ದು ಎಂದಾದರೂ ಉಂಟೆ! ರಾತ್ರೆ ಹನ್ನೊಂದು ಘಂಟೆಗೆ ಮಲಗುವುದು; ಬೆಳಿಗ್ಗೆ ಐದು ಘಂಟೆಗೆ ಏಳುವುದು. ಇಲ್ಲದಿದ್ದರೆ ಮನೆಗೆಲಸದ ರಥವನ್ನು ತುಯ್ಯುವವರು ಯಾರು? ಅವರಿಗೆ ಐವತ್ತು ರೂಪಾಯಿ ಸಂಬಳ ಹೆಚ್ಚಾದರೆ ಒಬ್ಬ ಅಡಿಗೆಯವನನ್ನಾದರೂ ಗೊತ್ತು ಮಾಡಿಕೊಳ್ಳಬಹುದು. ಅಂದರೆ ಅಷ್ಟು ಹೊತ್ತಿಗೆ ಇನ್ನೇನು ಖರ್ಚು ಬಂದೊದಗು ತ್ತದೆಯೋ, ಯಾರು ಬಲ್ಲರು! ಅದಲ್ಲದೆ ಅಡಿಗೆಯವನಿದ್ದರೆ ಮನೆಯಲ್ಲಿ ದುಂದುವೆಚ್ಚ ಹೆಚ್ಚಾಗುತ್ತೆ. ಅವನಿಗೆ ಕೊಡುವ ಸಂಬಳ ೨೫ ರೂಪಾಯಾದರೆ ಕಣ್ಣಿಗೆ ಕಾಣದ ಹಾಗೆ ೫೦ ರೂಪಾಯಿನ ಸಾಮಾನು ಮಾಯವಾಗಿ ಹೋಗುತ್ತೆ. ಅದೇ ಹಣ ಉಳಿಸಿಕೊಂಡರೆ ಇನ್ನೆರಡು ಒಳ್ಳೆಯ ಸೀರೆ ತೆಗೆದುಕೊಳ್ಳಬಹುದು. ಮಾಲತಿಗೆ ಇನ್ನೂ ಚೆನ್ನಾಗಿ ಪಾಠಹೇಳುವ ವೀಣೆ ಮೇಷ್ಟರನ್ನು ಗೊತ್ತುಮಾಡಬಹುದು. ಅಂತೂ ಲಕ್ಷ್ಮಮ್ಮನಿಗೆ ಕೆಲಸದ ಹೊರೆ ಕಡಮೆ ಮಾಡಿಕೊಳ್ಳುವುದು ಹಣೆಯಲ್ಲಿ ಬರೆದಿಲ್ಲ.

---

* ಮೈಸೂರು 'ಆಕಾಶವಾಣಿ'ಯ ನೆರವಿನಿಂದ.

ಕೈಯಲ್ಲಿ ಹಣವೂ ಉಳಿಯುವುದಿಲ್ಲ. ನೆರೆಮನೆಯ ಶಾರದೆಯ ಗಂಡನಿಗೆ ಇನ್ನೂ ಕಡಮೆ ಸಂಬಳ ಬಂದರೂ ಅವರು ಹೇಗೋ ಸಂಸಾರವನ್ನು ಸುಖವಾಗಿಯೇ ಸಾಗಿಸುತ್ತಾರೆ. ಯಾವುದಕ್ಕೂ ಅದೃಷ್ಟವಿರಬೇಕು.

ಹೀಗೆ ಮನಸ್ಸಿನಲ್ಲಿ ಯೋಚಿಸುತ್ತ ಲಕ್ಷ್ಮಮ್ಮ ಅಡಿಗೆ ಮನೆಯ ಕಸಮುಸುರೆ ಎಲ್ಲಾ ತೀರಿಸಿ ನೀರೊಲೆಗೆ ಉರಿ ಹಾಕಿದರು. ಅಷ್ಟು ಹೊತ್ತಿಗೆ ಮುಂಚೆ ಎದ್ದರೂ ಈ ಕೆಲಸವೆಲ್ಲಾ ಮುಗಿಯುವುದರೊಳಗೆ ಬೆಳಕುಹರಿಯುವ ಸಮಯ. ರಾಮರಾಯರೂ ಇನ್ನೇನು ಏಳುವ ಹೊತ್ತು. ಇನ್ನು ಕಾಫೀಗೆ ಸಿದ್ಧಮಾಡಬೇಕು. ಎದ್ದು ಮುಖ ತೊಳೆದಕೂಡಲೆ ಮೊದಲನೆಯ ವರಸೆ ಒಂದು ಕಪ್ಪು ಕಾಫಿ ಬೀಳದಿದ್ದರೆ ರಾಯರಿಗೆ ಆಕಾಶವೇ ಕಳಚಿಬೀಳುವುದು. ಲಕ್ಷ್ಮಮ್ಮ ಕಾಫೀ ಸಿದ್ಧಮಾಡಿಲ್ಲದಿದ್ದರೆ, ಅವರೇ ಕಾಫೀ ಪುಡಿ, ಸಕ್ಕರೆ ಹುಡುಕಿಕೊಂಡು ಬಂದು ಒಲೆಯಮುಂದೆ ಕುಳಿತು, ಹೆಂಡತಿಗೆ ನೆರ ವಾಗುತ್ತಾರೆ. ಅವರು ಸಹಾಯಕ್ಕೆ ಬಂದರೆ, ನೀರು ಉರುಳುತ್ತೆ, ಒಲೆ ಆರುತ್ತೆ, ಹಾಲು ಉಕ್ಕಿ ದಂಡವಾಗುತ್ತೆ. ಹೀಗೇನಾದರೂ ಅವಸ್ಥೆಮಾಡಿಟ್ಟು ಐದು ನಿಮಿಷದ ಕೆಲಸಕ್ಕೆ ಅರ್ಧಘಂಟೆ ವ್ಯರ್ಥಮಾಡುತ್ತಾರೆ. ಆದ್ದರಿಂದ ಅವರು ಏಳುವುದಕ್ಕೆ ಮುಂಚೆಯೇ ಲಕ್ಷ್ಮಮ್ಮ ಕಾಫೀ ಮಾಡಿಟ್ಟು ಅವರು ಕಾಫೀ ಮನೆಗೆ ಕಾಲಿಡದಂತೆ ನೋಡಿಕೊಳ್ಳು ತ್ತಾರೆ. ಗಂಡನ ಸೇವದಲ್ಲಿಯೇ ಲಕ್ಷ್ಮಮ್ಮನಿಗೂ ಹೊತ್ತಿಗೆಮುಂಚೆ ಕಾಫೀ ಸಿಕ್ಕುತ್ತಿ ತ್ತಾದರೂ ರಾತ್ರೆ ಇಟ್ಟಿದ್ದ ಹಾಲು ಒಡೆದುಹೋದರೆ ಯಜಮಾನರು ಬೇಸರ ಗೊಂಡಾರೆಂಬ ಯೋಚನೆ ದಿನಾ ಇದ್ದೇ ಇರುತ್ತದೆ. ಬೆಳಗಿನಜಾವ ಆರು ಘಂಟೆಯ ಹೊತ್ತಿಗೆ ಯಾರುತಾನೇ ಹಾಲು ತಂದುಕೊಡುತ್ತಾರೆ!

ಕಾಫೀ ಮುಗಿಯುವ ವೇಳೆಗೆ ಮುಸುರೆ ತಿಕ್ಕುವವಳು ಬಂದು ಕೂಗುತ್ತಾಳೆ. ಲಕ್ಷ್ಮಮ್ಮನಿಗೆ ಮನೆಯ ಯಜಮಾನಿತಿ ಎಂಬ ಹೆಸರು ಸಲ್ಲುವುದಾದರೂ ಆಕೆ ಯಜ ಮಾನಿಕೆ ಮಾಡುವುದು ಈ ಪರಿಚಾರಿಕಿತಿ ಮತ್ತು ಮನೆಯ ಆಳು ತಿಮ್ಮ—ಇವರಿಬ್ಬರ ಮೇಲೆ ಮಾತ್ರ. ಅನೇಕವೇಳೆ ಅದು ಸಹ ಸಾಧ್ಯವಾಗುವುದಿಲ್ಲ. ಈಗಿನ ಕಾಲದಲ್ಲಿ ಆಳುಗಳ ಮೇಲೆ ಜೋರುಮಾಡಿದರೆ ಅವರು ಕಾಲು ಕೊಡವಿಕೊಂಡು ಹೊರಟು ಹೋಗುತ್ತಾರೆ. ಬೇರೆ ಆಳು ಸಿಕ್ಕುವುದು ಕಷ್ಟ. ಪಾತ್ರೆಗಳನ್ನು ಸೇರಿಸಿ ತೊಳೆಯು ವುದಕ್ಕೆ ಕೊಡುವ ಹೊತ್ತಿಗೆ ರಾಯರು ಸ್ನಾನಕ್ಕೆ ಬರುತ್ತಾರೆ. ರಾಮರಾಯರು ತಮ್ಮ ಬನಿಯನ್, ಟವೆಲ್ ಮುಂತಾದ್ದನ್ನು ಸಿಕ್ಕಿದಕಡೆ ಎಸೆದಿರುತ್ತಾರೆ. ಅವನ್ನೆಲ್ಲ ಹುಡುಕಿ ಸಿದ್ಧಮಾಡಿಕೊಡುವುದು ಲಕ್ಷ್ಮಮ್ಮನ ಕೆಲಸ. ಗಂಡನ ಸ್ನಾನ ಮುಗಿದ ಮೇಲೆ ಲಕ್ಷ್ಮಮ್ಮ ತಾನೂ ಸ್ನಾನಮಾಡಿ ಅಡಿಗೆಯ ಕೆಲಸ ಪ್ರಾರಂಭಿಸಬೇಕು. ಅದಕ್ಕೆ ಮುಂಚೆ ಗಂಡನಿಗೆ ಎರಡನೆಯ ಸಾರಿ ಕಾಫೀ ಮಾಡಿಕೊಡಬೇಕು. ಕಾಫಿಯ

ಹದ ಸರಿಯಾಗಿದೆಯೋ ಇಲ್ಲವೋ ನೋಡುವುದಕ್ಕೆ ಲಕ್ಷ್ಮಮ್ಮನೂ ಒಂದು ಕಪ್ಪು ಕುಡಿಯುವುದು ವಾಡಿಕೆ. ಆಕೆ ಶಬರಿಯ ಹಾಗೆ: ತಾನು ರುಚಿನೋಡಿ ಯೋಗ್ಯವೆಂದು ಕಂಡ ಪದಾರ್ಥಗಳನ್ನು ಮಾತ್ರ ಸ್ವಾಮಿಗೆ ಅರ್ಪಿಸುತ್ತಾಳೆ. ಗಂಡನಿಗೆ ಮತ್ತು ಮನೆಯ ಇತರರಿಗೆಲ್ಲರಿಗೂ ಕಾಫೀ ಆದ ಮೇಲೆ ಅಡಿಗೆಗೆ ಸಿದ್ಧಮಾಡಿಕೊಳ್ಳುತ್ತಾಳೆ. ಹನ್ನೊಂಧು ಘಂಟೆಗೆ ಹುಡುಗರು ಸ್ಕೂಲಿಗೆ ಹೋಗುವ ವೇಳೆ; ಅಷ್ಟು ಹೊತ್ತಿಗೆ ಎಲೆ ಹಾಕಬೇಕು. ಈ ಮಧ್ಯೆ ರಾಯರು ಇನ್ನೆರಡು ಬಟ್ಟಲು ಕಾಫೀ ಬೇಕೆಂದು ಹೇಳಿಕಳುಹಿಸುತ್ತಾರೆ. ಗಂಡ ಹೆಂಡತಿಯನ್ನು ಸ್ವತಃ ಕರೆದು ಮಾತಾಡುವ ಪದ್ಧತಿ ಸಭ್ಯಸಮಾಜದಲ್ಲಿಲ್ಲವಷ್ಟೆ. ಅಲ್ಲದೆ ರಾಯರಿಗೆ ಹೆಂಡತಿಯ ಎದುರಿಗೆ ಮುಖ ಕೊಟ್ಟು "ಇನ್ನಷ್ಟು ಕಾಫೀಮಾಡು" ಎಂದು ಹೇಳುವುದಕ್ಕೆ ಸ್ವಲ್ಪ ಸಂಕೋಚ. ಆಕೆ ಬೆಳಗಿನ ಜಾವದಿಂದಲೂ ದುಡಿದಿದ್ದಾಳೆಂದೂ, ಅಡಿಗೆಯ ಆತುರದಲ್ಲಿದ್ದಾಳೆಂದೂ, ಮತ್ತೆ ಕಾಫೀ ಮಾಡುವುದು ಬೇಸರವೆಂದೂ ರಾಯರು ಬಲ್ಲರು. ಆದರೆ ಎಂದೂ ಬಾರದ ಸ್ನೇಹಿತರು ಅಂದು ಮನೆಗೆ ಬಂದಿರುತ್ತಾರೆ. ಅವರಿಗೆ ಸ್ವಲ್ಪ ಕಾಫೀಯಾದರೂ ಕೊಡಬೇಡವೆ? ತಾವು ಅವರ ಮನೆಗೆ ಹೋದಾಗಲೆಲ್ಲ ಅವರು ತಪ್ಪದೆ ಕಾಫೀ ಆತಿಥ್ಯ ನಡಸಿರುತ್ತಾರೆ. ಆದ್ದರಿಂದ ರಾಯರು ಸ್ವಲ್ಪ ಸಂಕೋಚದಿಂದ ಹೆಂಡತಿಗೆ ಕಷ್ಟವಾದರೂ ಆಗಲೆಂದು ಮತ್ತೆ ಕಾಫೀಗೆ ಅಪ್ಪಣೆಮಾಡುತ್ತಾರೆ. ಇದು ಒಂದು ದಿನದ ಕಥೆಯಾದರೆ ಸರಿ; ಆದರೆ ರಾಯರ ಮನೆಗೆ ಇಂಥ ಅಪರೂಪದ ಅತಿಥಿಗಳು ದಿನಾ ಯಾರಾದರೂ ಬರುತ್ತಲೇ ಇರುತ್ತಾರೆ. ಕೆಲವರು ಹೆಚ್ಚು ಬಳಕೆಯವರು "ಏನೋ, ಕಾಫೀ ಮಾಡಿಸುತ್ತೀಯೋ ಇಲ್ಲ ಷರಬತ್ತು ಮಾಡಿಸುತೀಯೋ" ಎಂದು ತಾವೇ ಪ್ರಶ್ನೆ ಹಾಕುವುದುಂಟು. ಇಂಥ ಸಮಯದಲ್ಲಿ ಲಕ್ಷ್ಮಮ್ಮ ಕಾಫೀ ಷರಬತ್ತು ಎರಡನ್ನೂ ತಯಾರು ಮಾಡಬೇಕಾಗಬಹುದು. ಇದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಲಕ್ಷ್ಮಮ್ಮ ಇತ್ತೀಚೆಗೆ ಗಂಡನ ಸ್ನೇಹಿತರು ಬಂದೊಡನೆಯೇ ಕಾಫೀ ಮಾಡಿಕೊಡುವ ವಾಡಿಕೆ ಮಾಡಿಕೊಂಡಿದ್ದಾಳೆ. ಈ ಸಮಾರಾಧನೆ ಅವಳಿಗೆ ಅಸಹ್ಯವಾಗಿ, ಕಂಡವರ ಮೇಲೆ ರೇಗುವುದೂ ಉಂಟು. ಈ ಕೋಪಕ್ಕೆ ರಾಯರೇ ಮೂಲಕಾರಣವಾದರೂ, ಅದರ ಬಿರುಸು, ಅವರಿಗೆ ತಾಗುವುದಿಲ್ಲ. ಅವರು ತಮ್ಮ ಸ್ನೇಹಿತರ ನಡುವೆ ಸುರಕ್ಷಿತವಾಗಿ ಕುಳಿತಿರುತ್ತಾರೆ. ಆದ್ದರಿಂದ ಲಕ್ಷ್ಮಮ್ಮನ ಕೋಪವೆಲ್ಲಾ ಪಾತ್ರೆಪರಟೆಗಳ ಮೇಲೆ ಪ್ರಯೋಗವಾಗುತ್ತದೆ. ಒಂದೊಂದುವೇಳೆ ಮಗುವಿಗೂ ಒಂದೆರಡು ಏಟು ಬೀಳುವುದುಂಟು. ಇದು ಅಪರೂಪ. ಲಕ್ಷ್ಮಮ್ಮ ಸಿಡುಕುಗಾತಿಯಲ್ಲ. ಗಾಣದೆತ್ತಿನಂತೆ ದುಡಿದು ದುಡಿದು ಅವಳು ತಾಳ್ಮೆಯನ್ನು ಕಲಿತಿದ್ದಾಳೆ. ಹೆಣ್ಣೂ ತಾಳ್ಮೆ ಕಲಿಯದಿದ್ದರೆ ಸಂಸಾರ ಹೇಗೆ ನಡೆಯಬೇಕು?

ಕಾಫಿಯ ಸತ್ಕಾರ ಮುಗಿದ ಮೇಲೆ ಅಡಿಗೆ ಮನೆಯನ್ನು ಪ್ರವೇಶಿಸಿ ಕೈಯಲ್ಲಿ ಗರತಿಯ ದಂಡವಾದ ಸೌಟನ್ನು ಹಿಡಿದಾಯಿತು. ಅಡಿಗೆ ಮನೆ, ಲಕ್ಷ್ಮಮ್ಮನ ರಾಜ್ಯ. ಅಲ್ಲಿ ಆಕೆಗೆ ಸರ್ವಾಧಿಪತ್ಯ. ಶ್ರೀಮಂತ ಗರತಿಗೂ ಲಕ್ಷ್ಮಮ್ಮನಿಗೂ ವ್ಯತ್ಯಾಸವೆಂದರೆ, ಲಕ್ಷ್ಮಮ್ಮನ ರಾಜ್ಯದಲ್ಲಿ ಮಂತ್ರಿ, ಕೋಲುಕಾರರು ಯಾರೂ ಇಲ್ಲ. ಎಲ್ಲಾ ಪಾತ್ರಗಳನ್ನೂ ಅವಳೇ ವಹಿಸಬೇಕು. ಆಕೆ ಯಾವ ಆಜ್ಞೆ ಬೇಕಾದರೂ ಹೊರಡಿಸಬಹುದು. ಆದರೆ ಆಜ್ಞೆಯನ್ನು ಪಾಲಿಸುವುದಕ್ಕೂ ಅವಳೇ ಬರಬೇಕು. ಸಾಧಾರಣವಾಗಿ ಅಡಿಗೆಗೆ ಕಾಯಿಪಲ್ಯ ಹೊಂದಿಸುವುದು ಒಂದು ಭಾರಿ ಸಮಸ್ಯೆ. ರಾಯರು ಎಂದೂ ಮಾರ್ಕೆಟ್ಟಿನ ಮುಖ ಕಂಡವರಲ್ಲ. ಗುಮಾಸ್ತೆಯಂತೆ ಬೈಸಿಕಲ್ಲಿಗೆ ಒಂದು ಚೀಲ ತಗುಲಿ ಹಾಕಿಕೊಂಡು ಅಂಗಡಿಗೆ ಹೋಗುವುದಕ್ಕೆ ಅವರಿಗೆ ಆಗದು. ಅವರಿಗೆ ಪುಸ್ತಕ ಪಿಶಾಚಿ ಹಿಡಿದಿದೆ. ಕುರ್ಚಿಯ ಮಗ್ಗುಲಲ್ಲಿ ಏನಾದರೂ ಸ್ವಲ್ಪ ತಿಂಡಿ, ಕೇಳಿದಾಗ ಕಾಫೀ, ಕೈಯಲ್ಲಿ ಒಂದು ಪುಸ್ತಕ ಇಷ್ಟಿದ್ದುಬಿಟ್ಟರೆ ಅವರಿಗೆ ಮತ್ತೆ ಯಾವುದರಲ್ಲೂ ಆಸಕ್ತಿ ಇಲ್ಲ. ಕಾಯಿಪಲ್ಯ ಇಲ್ಲದಿದ್ದರೂ ಸರಿಯೆ, ಅನ್ನಕ್ಕೆ ಬದಲು ರಾಗಿ ಮುದ್ದೆ ಬಡಿಸಿದರೂ ಸರಿಯೆ, ಅವರು ಎಡಗೈಯಲ್ಲಿ ಒಂದು ಪುಸ್ತಕ ಹಿಡಿದು ತಟ್ಟೆಯ ಕಡೆಗೇ ನೋಡದೆ ಊಟವನ್ನು ಮುಗಿಸುತ್ತಾರೆ. ಇಂಥಾ ಪ್ರಾಣಿಯನ್ನು ನೆಚ್ಚಿದರೆ ಮನೆಗೆ ತರಕಾರಿ ಬಂದೀತೆ? ಅಪರೂಪಕ್ಕೆ ಅವರೇನಾದರೂ ಮಾರ್ಕೆಟ್ಟಿನ ಕಡೆ ಹೋದರೆ ಒಂದಕ್ಕೆ ನಾಲ್ಕರಷ್ಟು ಬೆಲೆ ಕೊಟ್ಟು ತಂದುಹಾಕಿ "ನೋಡಿದೆಯೋ! ಇವೊತ್ತು ನಿನಗೋಸ್ಕರ ಎಷ್ಟು ಕಷ್ಟಪಟ್ಟು ವ್ಯಾಪಾರಮಾಡಿಕೊಂಡು ಬಂದಿದ್ದೇನೆ. ಚೌಕಾಸಿ ಮಾಡಿ ಇಷ್ಟು ತರಕಾರಿಯನ್ನು ನಾಲ್ಕಾಣೆಗೆ ದಕ್ಕಿಸಿಕೊಂಡು ಬಂದಿದ್ದೇನೆ" ಎಂದು ಲಕ್ಷ್ಮಮ್ಮನಿಂದ ಶಾಬಾಸುಗಿರಿ ಪಡೆಯಲು ಯತ್ನಿಸುವರು. ಲಕ್ಷ್ಮಮ್ಮನಿಗೆ ಗೊತ್ತಿಲ್ಲವೇ, ತನ್ನ ದೇವರ ಸತ್ಯ! ರಾಯರು ಹೆಂಡತಿಯ ಎದುರಿಗೆ ನಿಜಹೇಳುವ ಧೈರ್ಯವಿಲ್ಲದೆ ತರಕಾರಿಯ ಬೆಲೆ ನಾಲ್ಕಾಣೆ ಎಂದು ಹೇಳಿದರೂ, ಅವರು ಕೊಟ್ಟಿರುವುದು ಎಂಟಾಣೆಗೆ ಕಡಮೆ ಇಲ್ಲದೆ ಆಗಿರುತ್ತದೆ. ಅಲ್ಲದೆ ಆ ತರಕಾರಿಯ ಲಕ್ಷಣ ಹೇಳತೀರದು. ಅದು ಬಲಿತಿರುವುದು ಮಾತ್ರವಲ್ಲ, ವೃದ್ಧಾಪ್ಯದಿಂದ ಸೊರಗಿ ಸುಕ್ಕುಗಟ್ಟಿರುತ್ತದೆ. ದಹನ ಕ್ರಿಯೆಗೆ ಯೋಗ್ಯವೇ ಹೊರತು ಪಾಕಕ್ಕೆ ಯೋಗ್ಯವಿರುವುದಲ್ಲ. ಲಕ್ಷ್ಮಮ್ಮನಿಗೆ ಗಂಡನ ವ್ಯಾಪಾರ ನೋಡಿ ನಗಬೇಕೊ ಅಳಬೇಕೊ ತಿಳಿಯದು. ಆದ್ದರಿಂದ ಆಕೆ ಗಂಡನಿಗೆ ಉಪಾಯವಾಗಿ "ತರಕಾರಿ ತರುವುದು ಆಫೀಸರುಗಳಿಗೆ ಮಾನಕ್ಕೆ ಕಡಮೆ. ಈ ಕೆಲಸಕ್ಕೆಲ್ಲಾ ನೀವು ಹೋಗಬೇಡಿ" ಎಂದು ಬುದ್ಧಿ ಹೇಳುತ್ತಾಳೆ. ರಾಮರಾಯರಿಗೆ ಇದನ್ನು ಕೇಳಿದಾಗ ಆನಂದವಾಗುವುದು. ಒಂದು ಕಡೆ ತರಕಾರಿ ತರುವ ಯೋಚನೆ ತಪ್ಪಿತು, ಇನ್ನೊಂದು ಕಡೆ ಲಕ್ಷ್ಮಮ್ಮನಿಗೆ ತನ್ನ ಆಫೀಸರ್‌ಗಿರಿಯ ವಿಷಯದಲ್ಲಿ ಇಷ್ಟು

ಅಭಿಮಾನವಿದೆಯಲ್ಲ ಎಂಬ ಹೆಮ್ಮೆ. ಇನ್ನು ರಾಯರಿಗೆ ಹೋಟಲಿನಲ್ಲಿ ಮಾಡುವಂತೆ ಊಟಮಾಡಿ ಎದ್ದು ಹೋಗುವುದೊಂದೇ ಕೆಲಸ. ಮನೆಯಲ್ಲಿ ಯಾವ ಪದಾರ್ಥವಿದೆ ಯಾವುದು ಇಲ್ಲ ಎನ್ನುವ ಯೋಚನೆಯನ್ನೇ ಅವರು ಈಚೆಗೆ ಬಿಟ್ಟಿದ್ದಾರೆ. ಸಂಬಳ ಬಂದ ದಿನ ಅದನ್ನು ಹೆಂಡತಿಯ ಕೈಗೆ ಹಾಕಿಬಿಡುತ್ತಾರೆ. ಲಕ್ಷ್ಮಮ್ಮನೇ ಮನೆಗೆ ಕಂಟ್ರೋಲರ್ ಮತ್ತು ಫಿನ್ಯಾನ್ಷಿಯಲ್ ಸೆಕ್ರೆಟರಿ. ಆಕೆ ಗಂಡನನ್ನೂ ತನ್ನ ಕರುಣೆ ಮಿಶ್ರವಾದ ಪ್ರೇಮದಿಂದ ಮಗುವಿನಂತೆ ಸಾಕುತ್ತಾಳೆ.

ಇನ್ನು ತರಕಾರಿ ತರುವವರು ಯಾರು? ತಿಮ್ಮನಿಗೆ ಹೇಳಿದರೆ ಅವನು ದಿನವೆಲ್ಲಾ ಅಂಗಡಿಯ ಮುಂದೇ ಕಳೆದುಬಿಡುತ್ತಾನೆ. ಮಗ ಕಿಟ್ಟೂಗೆ ಹೇಳಿದರೆ ಅವನು ಎಂಟು ಹತ್ತು ಪುಸ್ತಕಗಳ ಪ್ರದರ್ಶನಮಾಡಿ "ಹೋಂ ವರ್ಕ್" ನೆವಹೇಳಿ ತಪ್ಪಿಸಿಕೊಳ್ಳು ತ್ತಾನೆ. ಸಾಧಾರಣವಾಗಿ ಲಕ್ಷಮ್ಮ ಮನೆಯ ಬಳಿಗೆ ಮಾರಲು ಬಂದ ತರಕಾರಿಯನ್ನೇ ಕೊಳ್ಳುವುದು. ತರ್ಕಾರಿಯವರು ಯಾರೂ ಬರಲಿಲ್ಲ;—ಬರಿಯ ಅನ್ನ ಸಾರು ಮಾಡಿ, ಸ್ವಲ್ಪ ಸಂಡಿಗೆ ಕರಿದು ಅಡಿಗೆ ಮುಗಿಸುವಳು. ಅಷ್ಟುಹೊತ್ತಿಗೆ ಅವಳ ಮಗು ಅಡಿಗೆ ಮನೆಗೆ ನುಗ್ಗಿ ಒಂದೆರಡು ಸಂಡಿಗೆಯನ್ನು ಕದ್ದು ಓಡುತ್ತದೆ. ಅದನ್ನು ಸ್ವಲ್ಪ ಗದರಿಸಿ ಕೊಂಡಿದ್ದಕ್ಕೆ ಅದರ ಮಾನ ಹೋದಂತಾಗಿ ಬಿಕ್ಕಿ ಬಿಕ್ಕಿ ಅಳಲಾರಂಭಿಸುವುದು. ರಾಯರು ರೂಮಿನಲ್ಲಿ ಏನೋ ಓದುತ್ತಿದ್ದವರು ಈ ಗಾನವನ್ನು ಕೇಳಿ ಆವೇಶ ದಿಂದ ಈಚೆಗೆ ಬಂದು ಮಗುವನ್ನು ಮತ್ತಷ್ಟು ಗದರಿಸಿ "ಈ ಮನೆಯಲ್ಲಿ ಒಂದು ಘಳಿಗೆ ಹಾಯಾಗಿ ಕುಳಿತಿರುವಹಾಗಿಲ್ಲ, ಮಕ್ಕಳನ್ನು ಸಮಾಧಾನಪಡಿಸಬಾರದೆ" ಎಂದು ಅಸಮಾಧಾನಪಟ್ಟುಕೊಳ್ಳುವರು. ಲಕ್ಷ್ಮಮ್ಮ ಎಳೆಯ ಮಗುವನ್ನು ಸುಲಭ ವಾಗಿ ಸಮಾಧಾನಪಡಿಸಲು ಬಲ್ಲವಳು. ಮಧ್ಯೆ ಈ ದೊಡ್ಡಮಗು ಬಂದು ಗಲಭೆ ಮಾಡುವುದರಿಂದ ಅವಳ ಕೆಲಸ ಮತ್ತಷ್ಟು ಕಷ್ಟವಾಗುವುದು. ದೇವರ ದಯೆಯಿಂದ ಅಷ್ಟು ಹೊತ್ತಿಗೆ ಯಾರೋ ಸ್ನೇಹಿತರು ಕೂಗುವುದರಿಂದ ಕ್ಲೇಶ ಹರಿಯುವುದು. ರಾಯರು ಕೋಪವನ್ನು ನುಂಗಿಕೊಂಡು ರೂಮಿಗೆ ಹೋಗಿ ಅವರ ಜತೆಯಲ್ಲಿ ಹರಟೆಗೆ ಕುಳಿತುಕೊಳ್ಳುವರು. ಲಕ್ಷ್ಮಮ್ಮ ಊಟದ ಮನೆಯನ್ನು ಗುಡಿಸಿ ಎಲೆ ಹಾಕುವ ಏರ್ಪಾಡಿಗೆ ತೊಡಗುವಳು. ಅಂತು, ಇಂತು ಮಗು ಸಂಡಿಗೆ ದಕ್ಕಿಸಿಕೊಳ್ಳುವುದು.

ಊಟದ ಹೊತ್ತಿಗೆ ಬಂದ ಸ್ನೇಹಿತರನ್ನು ಮಾತನಾಡಿಸಿ ಹಾಗೇ ಕಳುಹಿಸು ವುದಕ್ಕಾಗುತ್ತದೆಯೆ? ರಾಯರು ಅವರನ್ನೂ ಊಟಕ್ಕೆ ಆಹ್ವಾನಿಸುವರು. ಮನೆಯಲ್ಲಿ ಅತಿಥಿಗಳಿಗೆ ಯೋಗ್ಯವಾದ ಅಡಿಗೆ ಮಾಡಿದ್ದಾರೋ ಇಲ್ಲವೋ ಅದನ್ನೆಲ್ಲಾ ಯೋಚನೆ ಮಾಡುವ ಪದ್ಧತಿ ಇಲ್ಲ. ರಾಯರಿಗೆ ಅಂಥಾ ಯೋಚನೆ ಯಾವಾಗಲೂ ಹೊಳೆದ ದ್ದಿಲ್ಲ. ರೂಮಿನೊಳಗೇ ಕೂತು "ಕೃಷ್ಣರಾಯರೂ ಇಲ್ಲೇ ಊಟಕ್ಕೇಳುತ್ತಾರೆ.

ಎಲೆ ಹಾಕು ಅನ್ನಪ್ಪ" ಎಂದು ಆಜ್ಞೆಯನ್ನು ಹೊರಡಿಸಿಬಿಡುವರು. ಲಕ್ಷ್ಮಮ್ಮನಿಗೆ ಪ್ರಾಣಸಂಕಟ. ಅತಿಥಿಗೆ ಆಹ್ವಾನ ಕೊಟ್ಟಮೇಲೆ ಬೇಡ ಎನ್ನುವುದು ಸಾಧ್ಯವಿಲ್ಲ. ಸುಮ್ಮನಿರೋಣವೆಂದರೆ—ಮನೆಗೆ ಬಂದವರಿಗೆ ಬರಿಯ ಅನ್ನ ನೀರು ಬಡಿಸುವುದಕ್ಕಾಗುವುದಿಲ್ಲ. ಲಕ್ಷ್ಮಮ್ಮ ಮನೆಯ ಮರ್ಯಾದೆ ಉಳಿಸಿಕೊಳ್ಳುವ ವಿಷಯದಲ್ಲಿ ಬಹಳ ಅಭಿಮಾನಶಾಲಿ. "ಅವರು ಊಟಕ್ಕೆ ಬರುತ್ತಾರೆಂದು ಸ್ವಲ್ಪ ಮುಂಚೆ ಹೇಳಬಾರದಾಗಿತ್ತೆ" ಎಂದು ಗಂಡನ ವಿಷಯದಲ್ಲಿ ಸ್ವಲ್ಪ ಅಸಮಾಧಾನವಾಗುವುದು. ಆದರೆ ಅವರು ಯಾವಾಗಲೂ ಹಾಗೆಯೇ. ತಿಮ್ಮನನ್ನು ಓಡಿಸಿ ಸ್ವಲ್ಪ ಕೋಸುಗೆಡ್ಡೆ ತರಿಸಿ ಬೇಗ ಸ್ವಲ್ಪ ಪಲ್ಯ ಮಾಡುವಳು. ಮೊದಲು ಸ್ಕೂಲಿಗೆ ಹೋಗುವ ಹುಡುಗರಿಗೆ ಬಡಿಸಿ ಆಯಿತು. ಆ ಮೇಲೆ ರಾಯರು, ಅವರ ಸ್ನೇಹಿತರು. ಮನೆಯಲ್ಲಿ ಎಲ್ಲರೂ ಒಟ್ಟಿಗೆ ಊಟಕ್ಕೆ ಕುಳಿತ ದಿನವೇ ಇಲ್ಲ. ಇವರಿಗೆಲ್ಲಾ ಬಡಿಸುವ ಓಡಾಟದಲ್ಲಿ ಲಕ್ಷ್ಮಮ್ಮನಿಗೆ ಕೈಕಾಲು ಬಿದ್ದುಹೋಗುತ್ತದೆ. ಇವರೆಲ್ಲರ ಊಟವಾದ ಮೇಲೂ ಆಕೆಗೆ ವಿಶ್ರಾಂತಿ ಇಲ್ಲ. ಅತ್ತೆ ಸಾಧಾರಣವಾಗಿ ಒಂದು ಘಂಟೆಗೆ ಮುಂಚೆ ಊಟಕ್ಕೇಳರು. ಅವರಿಗೆ ಬಡಿಸದೆ ಲಕ್ಷ್ಮಮ್ಮ ಊಟ ಮಾಡುವುದಕ್ಕಾದೀತೆ? ಇದೆಲ್ಲಾ ಮುಗಿಯುವ ವೇಳೆಗೆ ಎರಡು ಘಂಟೆ. ಆಗ ಲಕ್ಷ್ಮಮ್ಮ ರೂಮಿಗೆ ಹೋಗಿ ಕೈಯಲ್ಲಿ ಒಂದು ಪುಸ್ತಕವನ್ನು ಹಿಡಿದು ಮಲಗುವಳು. ಪುಸ್ತಕವೇನೋ ಕೈಯಲ್ಲಿರುವುದು. ಓದುಮಾತ್ರ ಸಾಗುವುದಿಲ್ಲ. ಯಾವಾಗ ನಿದ್ರೆ ಹತ್ತಿತೋ ಅವಳಿಗೇ ತಿಳಿಯದು. ಎಲ್ಲೋ ಎರಡು ನಿಮಿಷ ನಿದ್ದೆ ಬಂದಹಾಗಾಗುವುದು. ಎದ್ದು ನೋಡಿದರೆ ಆಗಲೇ ಮೂರೂವರೆ ಘಂಟೆ! ಮತ್ತೆ ಕಾಫಿಯ ಸಮಾರಂಭ. ರಾಮರಾಯರು ಐದು ಘಂಟೆಗೆ ಆಫೀಸಿಂದ ಬರುತ್ತಾರೆ. ಅಷ್ಟುಹೊತ್ತಿಗೆ ಏನಾದರೂ ತಿಂಡಿಮಾಡಿಡಬೇಕು. ರಾಯರಿಗೆ ಊಟದ ಹಂಗು ಅಷ್ಟೇನೂ ಇಲ್ಲದಿದ್ದರೂ ಸಂಜೆಯ ತಿಂಡಿಯ ವಿಷಯದಲ್ಲಿ ಅವರ ನಾಲಗೆಯ ಚಪಲ ವಿಪರೀತ. ಸುಮ್ಮನೆ ದೋಸೆ, ಉಪ್ಪಿಟ್ಟು ಮಾಡಿದರೆ ಅವರಿಗೆ ತೃಪ್ತಿಯಿಲ್ಲ. ಸಿಹಿತಿಂಡಿ ಏನಾದರೂ ಇದ್ದೇ ಇರಬೇಕು. ಈ ಬಯಕೆಯನ್ನು ಪೂರೈಸುವುದಕ್ಕಾಗಿ ಲಕ್ಷ್ಮಮ್ಮ ಜಾಮೂನು, ಜಹಂಗೀರು ಮುಂತಾದ್ದು ಮಾಡುವುದನ್ನೆಲ್ಲ ಕಲಿತಿದ್ದಳು. ಮಾಡುವುದನ್ನು ಕಲಿಯುವುದು ಕಷ್ಟವಿಲ್ಲ: ಆದರೆ ದಿನಾ ಒಲೆಯ ಮುಂದೆ ಕುಳಿತು ಆ ತಿಂಡಿಯನ್ನು ತಯಾರುಮಾಡುವುದು ಬೇಸರ. ಆದರೂ ದಿನವೆಲ್ಲಾ ಕೆಲಸಮಾಡಿ ಗಂಡ ಮನೆಗೆ ಬಂದರೆ ಅವನಿಗೆ ಪ್ರಿಯವಾದ ವಸ್ತು ಏನಾದರೂ ಕೊಡಬೇಡವೆ? ಕೇಸರಿಭಾತನ್ನೂ, ಕಾರಾಸೇವನ್ನೂ ಮಾಡಿಡುವಳು. ಆ ಮೇಲೆ ಮುಖ ತೊಳೆದು ತಲೆ ಬಾಚಿಕೊಂಡು ಒಳ್ಳೆಯ ಸೀರೆಯುಟ್ಟು ರಾಯರನ್ನು ಇದಿರುನೋಡುತ್ತಾ ಕೂಡುವಳು. ರಾಯರು ಐದೂವರೆ ಘಂಟೆಗೆ ಬಂದು

ಉಪಾಹಾರ ಮಾಡಿಕೊಂಡು ಮತ್ತೆ ಗಾಳಿಸವಾರಿ ಹೊರಡುವರು. ಸ್ನೇಹಿತರೊಡನೆ ಅಲ್ಲಿ ಇಲ್ಲಿ ತಿರುಗಿ ಮನೆಗೆ ೯ ಘಂಟೆಯ ವೇಳೆಗೆ ಹಿಂದಕ್ಕೆ ಬರುತ್ತಾರೆ.

ಲಕ್ಷ್ಮಮ್ಮನಿಗೆ ಸಂಜೆ ೬½–೭ ಘಂಟೆಯ ವರೆಗೆ ಸ್ವಲ್ಪ ವಿರಾಮ. ರೇಡಿಯೋ ತಿರುಗಿಸಿ ಏನಾದರೂ ಸಂಗೀತ ಕೇಳುತ್ತಾ ಲಕ್ಷ್ಮಮ್ಮ ಕುಳಿತಿರುತ್ತಾಳೆ. ಒಳ್ಳೆಯ ಸಂಗೀತವನ್ನು ಕೇಳಿದಾಗ, ಭಾಷಣವನ್ನು ಕೇಳಿದಾಗ, ಲಕ್ಷ್ಮಮ್ಮನಿಗೆ ಅನೇಕ ವೇಳೆ ಮನಸ್ಸಿಗೆ ವೇದನೆಯಾಗುತ್ತದೆ. ಅವಳೂ ಏಳೆಂಟು ವರ್ಷದ ಕೆಳಗೆ ಸ್ವಲ್ಪ ಚೆನ್ನಾಗಿಯೇ ವೀಣೆಯನ್ನೂ, ಹಾಡುಗಾರಿಕೆಯನ್ನೂ ಅಭ್ಯಾಸಮಾಡಿದ್ದಳು. ಹೈ ಸ್ಕೂಲಿನಲ್ಲಿ ೫ನೆಯ ಫಾರಂ ವರೆಗೆ ಓದಿದವಳು. ಸಂಸಾರಚಕ್ರಕ್ಕೆ ಸಿಕ್ಕಿದನಂತರ ಆ ಸಂಸ್ಕಾರ ಕ್ರಮೇಣ ಮರೆಯುತ್ತಾ ಬಂತು. ಈಗ ವೀಣೆ ಅವಳ ರೂಮಿನಲ್ಲಿ ಒಂದುಕಡೆ ಮುಸುಗು ಹಾಕಿಕೊಂಡು ಕುಳಿತಿದೆ. ವೀಣೆ ಯಾವಾಗ ಬಾರಿಸಬೇಕು! ಗಂಡನ ಮನೆಗೆ ಬಂದ ಹೊಸದರಲ್ಲಿ ರಾಯರು ಒಂದೊಂದು ಬಾರಿ "ಸ್ವಲ್ಪ ಹಾಡು, ಚಿನ್ನಾ" ಎಂದು ಕೇಳುತ್ತಿದ್ದರು. ಆಗ ಕೂಡ ಹೆಚ್ಚುಹೊತ್ತು ವೀಣೆಯ ಮುಂದೆ ಕುಳಿತಿದ್ದರೆ ಅತ್ತೆ ಏನೆಂದುಕೊಳ್ಳುತ್ತಾರೋ ಎಂಬ ಭಯ ಮನಸ್ಸನ್ನು ಕೊರೆಯುವುದು. ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವ ಜವಾಬ್ದಾರಿ ಬಂದೊದಗಿದ ಮೇಲೆ ಸಂಗೀತಸಾಹಿತ್ಯಗಳ ಕಡೆ ಗಮನಕೊಡುವುದು ಅಸಾಧ್ಯವಾಗುತ್ತ ಬಂತು. ರಾಮರಾಯರೂ ಆಗಿಂದಾಗ ತಮಗೆ ಪ್ರಿಯವಾದ ಕಾವ್ಯಗಳನ್ನು ಲಕ್ಷ್ಮಮ್ಮನಿಗೆ ಓದಿಹೇಳುತ್ತಿದ್ದರು. ಆ ಕಾಲವನ್ನು ನೆನೆದರೆ ಈಗಲೂ ಲಕ್ಷ್ಮಮ್ಮನಿಗೆ ಮೈ ಪುಳಕವಾಗುತ್ತಿತ್ತು. ಆಗ ರಾಮರಾಯರು ಆಫೀಸಿಂದ ನೆಟ್ಟಗೆ ಮನೆಗೆ ಬಂದು ಸಂಜೆಯೆಲ್ಲಾ ಹೆಂಡತಿಯೊಡನೆಯೇ ಕಳೆಯುತ್ತಿದ್ದರು. ಅವರಿಗೋಸ್ಕರ ಲಕ್ಷ್ಮಮ್ಮ ಶೃಂಗಾರ ಮಾಡಿಕೊಂಡಿರಬೇಕು. ಅವರಿಗೆ ಬೇಕಾದ ಸೀರೆಯುಡಬೇಕು. ಅವರೊಡನೆ ಹಾಡಬೇಕು—ಅವರೂ ಸಂಗೀತ ಪ್ರಿಯರು. ಶಾಸ್ತ್ರೋಕ್ತವಾಗಿ ಸಂಗೀತ ಅಭ್ಯಾಸಮಾಡಿಲ್ಲದಿದ್ದರೂ ಚೆನ್ನಾಗಿ ತಮಗೆ ತಾವೇ ಹಾಡಿಕೊಳ್ಳಬಲ್ಲರು. ಅವರೊಡನೆ ಕಾವ್ಯಗಳನ್ನು ಓದಬೇಕು. . . . ಆ ಕಾಲದಲ್ಲಿ ಜೀವನವು ಒಂದು ಹರ್ಷದ ಲಾಸ್ಯವಾಗಿತ್ತು. ಈಗ ರಾಯರಿಗೆ, ತಾನು ಯಾವ ಸೀರೆಯನ್ನುಟ್ಟಿದ್ದಳೆಂಬ ಕಡೆ ಗಮನವೇ ಇಲ್ಲ. ತನ್ನ ಸಂಗೀತ ಈಗ ಅವರಿಗೆ ಬೇಡ. ಅವರನ್ನು ತಾನೇ ದೂರುವುದು ಹೇಗೆ? ವರ್ಷಗಟ್ಟಳೆ ಅಭ್ಯಾಸತಪ್ಪಿದ ಮೇಲೆ ತನ್ನ ಸಂಗೀತ ಅವರಿಗೆ ಹೇಗೆ ರುಚಿಸೀತು! ಅಭ್ಯಾಸ ನಿಂತುಹೋದದ್ದು ಲಕ್ಷ್ಮಮ್ಮನ ತಪ್ಪಲ್ಲ, ನಿಜ. ಮನೆಯ ಕೆಲಸ, ಹಿರಿಯರ ಸೇವೆ, ಮಕ್ಕಳನ್ನು ಸಾಕುವುದು—ನೂರೆಂಟು ತಾಪತ್ರಯಗಳಿರುವಾಗ ಸಂಗೀತ ಸಾಹಿತ್ಯಗಳಿಗೆ ಸಮಯವೆಲ್ಲಿಯದು? ಆ ಹಿಂದಿನ

ಕಾಲದ ದೃಶ್ಯಗಳು ಈಗ ಕೇವಲ ಕನಸಿನ ಪರದೆಯ ಮೇಲೆ ಬಂದು ಹೋಗುವ ಚಿತ್ರಗಳಾಗಿ ಪರಿಣಮಿಸಿರುವುವು. ಜೀವನದಲ್ಲಿ ಯಾವ ವೈವಿಧ್ಯವೂ ಇಲ್ಲ. ಒಳ್ಳೆಯ ಚಿತ್ರ ಏನಾದರೂ ಬಂದಾಗ ಗಂಡನೊಡನೆ ಸಿನಿಮಾಕ್ಕೆ ಆಗಿಂದಾಗ ಹೋಗುತ್ತಾಳೆ. ಹಿಂದಿನ ಸುಖಸ್ವಪ್ನ ಆಗ ಮತ್ತೆ ಸುಳಿದಂತಾಗುತ್ತದೆ. ಅಷ್ಟು ಬಿಟ್ಟರೆ, ಬೆಳಗಿಂದ ಸಂಜೆಯ ವರೆಗೂ, ಒಂದೇಸಮ ಕೆಲಸ. ಉತ್ಸಾಹವಿಲ್ಲ, ಹರ್ಷವಿಲ್ಲ.

ಲಕ್ಷ್ಮಮ್ಮನ ಗೆಳತಿಯರನೇಕರು ಈಗಲೂ ಸಂಜೆಯಾದರೆ ಅಲಂಕಾರ ಮಾಡಿಕೊಂಡು ಮನಸ್ಸಿಗೊಂದು ಚಿಂತೆಯೂ ಇಲ್ಲದೆ ಕ್ಲಬ್ಬಿಗೆ ಹೋಗುತ್ತಾರೆ. ಅವರು ತನಗಿಂತ ಎಷ್ಟೋ ಸುಖವಾಗಿರಬೇಕು. . . . ಇಲ್ಲ, ಅವರಿಗೆ ಇನ್ನೇನೇನು ಚಿಂತೆಗಳಿವೆಯೋ ! ದೇವರು ಎಲ್ಲರ ಜೀವನದಲ್ಲಿಯೂ ಸ್ವಲ್ಪ ಕಹಿ ಇಟ್ಟೇ ಇರುತ್ತಾನಂತೆ? ಗಂಡಂದಿರು ಕುಡುಕರಾಗಬಹುದು, ಮನೆಯಲ್ಲಿ ವೈಷಮ್ಯಗಳಿರಬಹುದು:—ಮುಕ್ಕಾಲು ಪಾಲು ಜನರ ಸೌಖ್ಯ ಕೇವಲ ತೋರಿಕೆಯ ಸೌಖ್ಯವೆಂದೇ ತೋರುತ್ತದೆ. ಆದರೂ ಈ ಮಧ್ಯಮ ಜೀವನವರ್ಗದವರ ಜೀವನ ಕಷ್ಟ. ಅವರಿಗೆ ಉತ್ತಮಜೀವನ ನಡಸುವ ಮನೋಭಾವವಿದೆ, ಬೇಕಾದ ಬುದ್ಧಿ ಶಕ್ತಿಯಿದೆ, ಬಯಕೆಯಿದೆ. ಆದರೆ ಸಮಾಜದ ವ್ಯವಸ್ಥೆಯಲ್ಲಿ ಅದಕ್ಕೆ ಬೇಕಾದ ಆವರಣವಿಲ್ಲದೆ ಅವರ ಆಸೆಯೆಲ್ಲ ಮಣ್ಣುಗೂಡಿ ಹೋಗುತ್ತದೆ. ನಮ್ಮ ಸಮಾಜದಲ್ಲಿ ಯಾರೂ ಎಷ್ಟು ಸೌಖ್ಯ ಸಾಧ್ಯವೋ ಅಷ್ಟನ್ನೂ ಅನುಭವಿಸುವ ಹಾಗಿಲ್ಲ. . . . ಲಕ್ಷ್ಮಮ್ಮ ಒಂದು ನಿಟ್ಟುಸಿರು ಬಿಡುವಳು. ಹಾಗೆಯೇ ಸಮಾಧಾನ ತಂದುಕೊಳ್ಳುವಳು. ತನಗಿಂತಲೂ ಕಷ್ಟದ ಜೀವನ ನಡಸುವವರು ಎಷ್ಟು ಜನವಿಲ್ಲ! ಯೋಚಿಸಿ ನೋಡಿದರೆ ತನ್ನ ಜೀವನ ಅಷ್ಟೇನೂ ದುಃಖಮಯವಲ್ಲ: ಇನ್ನೂ ಯೌವನವಿದೆ, ಪ್ರೇಮಮೂರ್ತಿಯಾದ ಗಂಡನಿದ್ದಾನೆ. ಮುದ್ದಾದ ಮಕ್ಕಳಿವೆ. ಅಷ್ಟೈಶ್ವರ್ಯವಿಲ್ಲದಿದ್ದರೂ ಸಾಕಾದಷ್ಟು ಸಂಪತ್ತಿದೆ. ಬಯಕೆಗಳೇನೋ ಬೇಕಾದ ಹಾಗಿವೆ. ಆದರೆ ಬಯಕೆಗೆ ಮಿತಿಯುಂಟೆ? ದಿನಚರಿಯನ್ನು ನೆನೆದರೆ ಬೇಸರವೇನೋ ಆಗುತ್ತದೆ. . . . ಇನ್ನು ೭ ಘಂಟೆಯಾದರೆ ಮತ್ತೆ ಅಡಿಗೆಯ ಕಡೆ ಗಮನಕೊಡಬೇಕು. ಸಂಸಾರದ ಚಕ್ರ ತಿರುಗುತ್ತಲೇ ಇರಬೇಕು. . . .

ಇಂದು, ಲಕ್ಷ್ಮಮ್ಮ ಹೀಗೆ ಯೋಚನೆಯಲ್ಲಿ ಮಗ್ನಳಾಗಿರುವಾಗ ಅವಳ ಮಗು ಬಂದು ತೊಡೆಯ ಮೇಲೇರಿ, "ತೋಟಕ್ಕೆ ಹೋಗೋಣ, ಬಾಮ್ಮ" ಎಂದು ಕಾಡುವುದಕ್ಕಾರಂಭಿಸಿತು. ಲಕ್ಷ್ಮಮ್ಮನು ಮಗುವನ್ನು ಅಪ್ಪಿ ಮುದ್ದಿಟ್ಟಳು. ಅವಳ ಮನಸ್ಸಿನ ಯೋಚನೆಯೆಲ್ಲಾ ಮಾಯವಾಯಿತು. ಮುಖದಲ್ಲಿ ಗೆಲವು ಉಕ್ಕಿ ಕಾಂತಿಯೇರಿತು. ಮಗನನ್ನು ಎತ್ತಿ ಕುಣಿಸುತ್ತಾ ಕಾಂಪೌಂಡಿನ ಉಪವನಕ್ಕೆ ಹೊರಟಳು.

ಸುಬ್ಬಮ್ಮಣ್ಣಿ ಬಸಪ್ಪಾಜಿ ಅರಸ್.

ದೇಶದ ಸಂಪತ್ತಿನ ಬೆಳೆವಣಿಗೆಯಲ್ಲಿ ಶಿಲ್ಪಶಾಸ್ತ್ರಜ್ಞನ ಕಾರ್ಯ

ಭಾರತವು ಪ್ರಕೃತಿ ಸಂಪತ್ತಿನ ಬೀಡಾಗಿದೆ. ಈ ಸಂಪತ್ತು ಜನತೆಯ ಸೌಖ್ಯಕ್ಕೆ ನೆರವಾಗುವಂತೆ ಮಾಡುವ ಕಾರ್ಯ ಶಿಲ್ಪಜ್ಞರದು (Engineers). ನಿತ್ಯ ಜೀವನದ ಪ್ರತಿ ಅಣು ಕೂಡ ಶಿಲ್ಪಶಾಸ್ತ್ರದಿಂದ ಮಾರ್ಪಾಡಾಗುತ್ತಿದೆ. ಮನುಷ್ಯವರ್ಗಕ್ಕೆ ಮೂಲಾಗತ್ಯಗಳಾಗಿರುವ ಊಟ, ವಸತಿ, ಉಡುಪು ಇವನ್ನು ನಮ್ಮ ದೇಶದ ಕೋಟ್ಯಂತರ ಪ್ರಜೆಗಳಿಗೆ ಒದಗಿಸಿ ಕೊಡುವ ಮಹಾಕಾರ್ಯದಲ್ಲಿ ಶಿಲ್ಪಜ್ಞನ ಪಾತ್ರ ಇಷ್ಟೇ ಎಂದು ಹೇಳಲು, ಅಸಾಧ್ಯ.

ಇದು ಉಷ್ಣ ದೇಶ. ನಮ್ಮ ಜನರಿಗೆ ವಸತಿ, ಉಡುಪಿನ ಅಗತ್ಯವಿಲ್ಲ; ಮರದ ತೋಪಿನ ನೆರಳೇ ವಸತಿ; ಕೌಪೀನವೇ ಉಡುಪು; ಮಾನ ಕಾಪಾಡಿಕೊಳ್ಳಲು ಎಷ್ಟು ಬಟ್ಟೆ ಬೇಕು? ಎಂದು ವಾದಿಸುವವರು ಹಲವರಿದ್ದಾರೆ. ಈ ವಾದ ಸರಿಯಲ್ಲ. ಈ ದೇಶದಲ್ಲಿ ಬಿಸಿಲಿನ ಹೊಡೆತದಿಂದ (Sun-stroke) ಸಾಯುವಂತೆಯೇ ಅತಿ ಚಳಿಯಿಂದಲೂ (Cold-wave) ಸಾಯುತ್ತಾರೆ. ಮಳೆ, ಗಾಳಿ ಕೆಲವು ತಿಂಗಳಲ್ಲಿ ಅತ್ಯಧಿಕವಾಗಿರುತ್ತವೆ. ಇವುಗಳ ಹೊಡೆತವನ್ನು ತಡೆಯುವುದಕ್ಕೆ ಬೆಚ್ಚಗಿರುವ, ಹಿತವಾಗಿರುವ ವಸತಿಗಳು ಬೇಕು. ಹಕ್ಕಿ, ಪ್ರಾಣಿ, ಹುಳ ಮನೆಗಳನ್ನು ಕಟ್ಟಿಕೊಳ್ಳುವುವು. ಬೇಕಾದ ರೆಕ್ಕೆ, ಪುಕ್ಕ, ತೊವಲು, ಉಣ್ಣೆ ಬೆಳಸಿ ಹೊದೆಯುವುವು. ಮನುಷ್ಯನಿಗೂ ಸುಖ ಜೀವನಕ್ಕೆ ಉಡುಪು ಬೇಕು. ವಾಸದ ಮನೆಯ ಅಗತ್ಯ ಉಂಟು.

ನಮ್ಮ ಹಳ್ಳಿಗಳು ಅಜ್ಞಾನ, ಕೊಳೆ, ಜಾಡ್ಯ, ಬಡತನದಿಂದ ಶೋಚನೀಯ ಸ್ಥಿತಿಗೆ ಬಂದಿವೆ. ರಾಜಕೀಯ ದಾಸ್ಯ, ಆರ್ಥಿಕ ದುಃಸ್ಥಿತಿ ಮತ್ತು ಮೂಢ ಸಂಪ್ರದಾಯಗಳ ಕಟ್ಟು ಜನತೆಯ ಮನುಷ್ಯತ್ವವನ್ನೇ ಅಳಿಸುವಂತಿವೆ. ಸುಲಭ ಬೆಲೆಯಲ್ಲಿ, ಶುಭ್ರವಾದ, ಅಚ್ಚುಕಟ್ಟಾದ, ನಲ್ಲಿ, ದೀಪ, ಬೆಳಕು, ಬಚ್ಚಲು, ರಸ್ತೆಗಳಿಂದ ಕೂಡಿದ ಮನೆಗಳನ್ನುಳ್ಳ, ಹೊಸ ಬಗೆಯ ಗ್ರಾಮಗಳನ್ನು ರಚಿಸಿ, ಪಾಠಶಾಲೆ, ಆಸ್ಪತ್ರೆ, ಪಶುವೈದ್ಯಶಾಲೆ, ಹೆರಿಗೆ ಆಸ್ಪತ್ರೆ, ಪುಸ್ತಕ ಭಂಡಾರ, ವಾಚನಾಲಯ, ಸಂಗೀತ ನಾಟ್ಯ ಮಂದಿರಗಳನ್ನು ಸ್ಥಾಪಿಸುವುದು ಗ್ರಾಮಪುನರೋದ್ಧಾರಕ್ಕೆ ಆವಶ್ಯಕ. ಇವುಗಳ ರಚನೆಗೆ ಶಿಲ್ಪಶಾಸ್ತ್ರಜ್ಞರ ಸಹಾಯ ಅತ್ಯಾವಶ್ಯಕ.

ನಮ್ಮ ಪಟ್ಟಣಗಳ ರಚನೆ ಯಾವ ಯೋಜನೆಗೂ ಒಳಪಟ್ಟಿಲ್ಲ. ವ್ಯಾಪಾರ, ಕೈಗಾರಿಕೆ ಅಭಿವೃದ್ಧಿಯಾದ ಹಾಗೆಲ್ಲ ಪಟ್ಟಣಗಳಲ್ಲಿ ಜನಸಂದಣಿ ಮಿತಿಮೀರು

ತ್ತಿದೆ. ಹತ್ತಾರು ಶ್ರಮಜೀವಿಗಳು ಒಂದೇ ಕೊಠಡಿಯಲ್ಲಿ ಸಂಸಾರ ನಡಸುವರು. ಇಂತಹ ನಿವಾಸಸ್ಥಾನ ಹೊಲಸುಗೇರಿ (Slum) ಯಾಗುವುದು. ಬಾಣಂತಿಯರ ಮತ್ತು ಶಿಶುಗಳ ಸಾವು ಈ ಕೇರಿಗಳಲ್ಲಿ ಅಧಿಕವಾಗಿರುತ್ತದೆ. ಚಿಕ್ಕ ವಯಸ್ಸಿನಿಂದಲೇ ದುಷ್ಟತನವನ್ನು (Delinquency) ಕಲಿಯುವುದಕ್ಕೆ ಅನುಕೂಲವಾದ ವಾತಾವರಣ ಇಂಥ ಕೇರಿಗಳು. ಇವನ್ನು ನಿರ್ಮೂಲಗೊಳಿಸಲು ತಗಲುವ ವೆಚ್ಚ ಅನೇಕ ವೇಳೆ, ಹೊಸ ಪಟ್ಟಣವನ್ನು ನಿರ್ಮಾಣ ಮಾಡುವುದಕ್ಕಿಂತ ಹೆಚ್ಚು. ಶ್ರಮ ಜೀವಿಗಳ ಜೀವನಮಟ್ಟವನ್ನು ಉತ್ತಮಗೊಳಿಸುವುದು ರಾಷ್ಟ್ರದ ಕೈಗಾರಿಕೆಯ ಹಿತದೃಷ್ಟಿಯಿಂದ ಕೂಡ ಆವಶ್ಯಕ. ಪಾಶ್ಚಾತ್ಯ ದೇಶಗಳಲ್ಲಿ ಕೈಗಾರಿಕೆಯ ಉಪನಗರಗಳನ್ನು (Industrial Suburbs) ರಚಿಸಿ ಅವುಗಳಲ್ಲಿ ದೂಳಿಲ್ಲದ ರಸ್ತೆ, ಸಾಲುಮರ, ಉದ್ಯಾನವನ, ಆಟದ ಮೈದಾನಗಳು, ಈಜುವ ಕೊಳ, ವ್ಯಾಯಾಮ ಶಾಲೆ, ಪುಸ್ತಕ ಭಂಡಾರ, ಕ್ಲಬ್, ಸಿನೆಮಾ ಮಂದಿರ, ಆಸ್ಪತ್ರೆ, ಪಾಠಶಾಲೆ, ಮಾರ್ಕೆಟು, ನಲ್ಲಿ, ದೀಪ, ಒಳಚರಂಡಿಯ ವಸತಿ—ಇವುಗಳನ್ನೆಲ್ಲಾ ಶ್ರಮಜೀವಿಗಳ ಉಪಯೋಗಕ್ಕಾಗಿ ಕಲ್ಪಿಸಿರುತ್ತಾರೆ. ನಮ್ಮ ಕೆಲಸಗಾರರಿಗೂ ಈ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಈ ಕಾರ್ಯ ಸಫಲವಾಗಬೇಕಾದರೆ ಸಾವಿರಾರು ವಾಸ್ತು, ಮತ್ತು ನಗರ ನಿರ್ಮಾಣಕಾರರ, ಮತ್ತು ಚರಂಡಿ, ನಲ್ಲಿ, ನೀರು, ರಸ್ತೆಯ, ಶಿಲ್ಪಗಳನ್ನು ಬಲ್ಲವರ ಸಹಾಯ ಬೇಕು.

ಆಹಾರ ಸಮಸ್ಯೆ

ಸಾಗುವಳಿಯಲ್ಲಿರುವ ಜಮೀನಿನ ಸೇಕಡ ೮೧.೬ ರಲ್ಲಿ ಆಹಾರದ ಬೆಳೆ ತೆಗೆದರೂ ಇದು ಜನತೆಯ ಆರೋಗ್ಯಕ್ಕೂ ಸಂತೃಪ್ತಿಗೂ ಸಾಲದು. ನಮ್ಮ ಬೇಸಾಯ ಪದ್ಧತಿ ಬಹಳ ಹಿಂದುಳಿದಿದೆ. ಬದಲಾವಣೆಗೆ ಆವಶ್ಯಕತೆ, ಅವಕಾಶ ಇದೆ. ಇತರ ದೇಶದ ಬೆಳೆಯೊಡನೆ ಹೋಲಿಸಿದರೆ, ನಾವು ಎಷ್ಟು ಹಿಂದುಳಿದಿದ್ದೇವೆಂಬುದು ಸ್ಪಷ್ಟವಾಗುವುದು.

ಎರಡು ಮುಖ್ಯ ಬೆಳೆಗಳನ್ನು ಕೆಳಗೆ ಹೋಲಿಸಿದೆ:—

ಗೋಧಿ		ಬತ್ತ	
ದೇಶ	ಎಕರೆಗೆ ಆಗುವ ಬೆಳೆ ಪೌಂಡಿನಲ್ಲಿ	ದೇಶ	ಎಕರೆಗೆ ಆಗುವ ಬೆಳೆ ಪೌಂಡಿನಲ್ಲಿ
ಕೆನಡ	೧,೦೬೮	ಇಟಲಿ	೨,೧೫೧
ಇಂಗ್ಲೆಂಡ್	೧,೮೭೨	ಅಮೇರಿಕ	೧,೦೯೦
ಜಪಾನ್	೧,೩೫೦	ಜಪಾನ್	೨,೪೭೭
ಡೆನ್‌ಮಾರ್ಕ್	೧,೩೪೦	ಇಂಡಿಯ	೯೧೧
ಇಂಡಿಯ	೭೮೦		

ನಮ್ಮ ದೇಶದಲ್ಲಿ ಆಗುವ ಕಡಮೆ ಉತ್ಪತ್ತಿಗೆ ಕಾರಣಗಳನೇಕವಿವೆ. ಶಿಲ್ಪಿ ಉತ್ಪತ್ತಿಯನ್ನು ಹೆಚ್ಚಿಸಬಲ್ಲ ಬಗೆಗಳನ್ನು ಮಾತ್ರ ಇಲ್ಲಿ ವಿವರಿಸಿದೆ:—

೧. ವ್ಯವಸಾಯಕ್ಕೆ ಬೇಕಾದ ಯಂತ್ರೋಪಕರಣಗಳನ್ನು ಕಾರ್ಖಾನೆಗಳಲ್ಲಿ ತಯಾರಿಸಿ, ಸುಲಭ ಬೆಲೆಗೆ ಆರಂಭಗಾರನಿಗೆ ಒದಗಿಸಬಹುದು. ಇದರಿಂದ ಭೂಮಿಯಿಂದ ಹೆಚ್ಚು ಬೆಳಸನ್ನು ತೆಗೆಯಬಹುದು. ಮಾತ್ರವಲ್ಲದೆ, ಬೇಸಾಯದಿಂದ ಜೀವಿಸುವವರ ಅತಿ ಸಂಖ್ಯೆಯನ್ನೂ ಕಡಮೆ ಮಾಡಬಹುದು.

೨. ಗೊಬ್ಬರದ ತಯಾರಿಕೆ ಯಂತ್ರಾಗಾರಗಳನ್ನು (Fertilizer plants) ಸ್ಥಾಪಿಸಿ, ಒಳ್ಳೆಯ ಗೊಬ್ಬರವನ್ನು ಸುಲಭಬೆಲೆಗೆ ರೈತರಿಗೆ ಒದಗಿಸುವುದು. ನಮ್ಮ ದೇಶದ ಭೂಮಿಯಲ್ಲಿ ಕಡಮೆ ಬೆಳೆ ಬರುವುದಕ್ಕೆ, ಸಾಕಾದಷ್ಟು ಸರಿಯಾದ ಗೊಬ್ಬರವನ್ನು ಉಪಯೋಗಿಸದೆ ಇರುವುದೇ ಕಾರಣ. ವಾಯುಮಂಡಲದಿಂದ ಸಾರಜನಕವನ್ನು ಪ್ರತ್ಯೇಕಿಸಿ, ಅಮೋನಿಯಾ ತಯಾರುಮಾಡಿ, ಇದರಿಂದ ಗೊಬ್ಬರವನ್ನು ಮಾಡುವುದು ಪಾಶ್ಚಾತ್ಯ ವ್ಯವಸಾಯ ಪದ್ಧತಿಯಲ್ಲಿ ಕ್ರಾಂತಿ ಉಂಟುಮಾಡಿದೆ. ಅವಿಚ್ಛಿನ್ನವಾಗಿ ಗೊಬ್ಬರವನ್ನು ತಯಾರುಮಾಡುವುದಕ್ಕೆ ಸಾಧಕವಾಗಿದೆ. ಈಚೆಗೆ ಇಂಡಿಯ ಸರ್ಕಾರದವರು ಗೊಬ್ಬರದ ಆವಶ್ಯಕತೆಯನ್ನು ತಿಳಿದು, ದೇಶದ ನಾನಾ ಭಾಗಗಳಲ್ಲಿ ಗೊಬ್ಬರ ತಯಾರಿಸುವ ಕಾರ್ಖಾನೆಗಳನ್ನು ಸ್ಥಾಪಿಸಲು ನಿಶ್ಚಯಿಸಿದ್ದಾರೆ. ಈಚಿನ ಬಂಗಾಳದ ಕ್ಷಾಮದಲ್ಲಿ ೩೦ ಲಕ್ಷ ಜನರು ಹೊಟ್ಟೆಗಿಲ್ಲದೆ ಸತ್ತಿರುವುದು ಜನತೆಯನ್ನೂ ಸರ್ಕಾರವನ್ನೂ ಗಾಢನಿದ್ರೆಯಿಂದ ಎಬ್ಬಿಸಿ, ದೇಶದ ಆಹಾರ ಸಂಪತ್ತನ್ನು ಅಭಿವೃದ್ಧಿಗೊಳಿಸಲು ಹುರುಪನ್ನು ಕೊಟ್ಟಿದೆ.

ನೀರಾವರಿ ಕೆಲಸಗಳು ದೇಶದ ಆಹಾರ ಸಂಪತ್ತನ್ನು ಹೆಚ್ಚುಮಾಡಲು ಸಾಧಕವಾಗಿವೆ. ನಮ್ಮ ದೇಶದ ಬೇಸಾಯ ಬಹುಮಟ್ಟಿಗೆ ಮಳೆಯನ್ನು ಆಶ್ರಯಿಸಿದೆ. ಮಳೆಯ ನೀರು ಹಳ್ಳ, ತೊರೆ, ಹೊಳೆಗಳಲ್ಲಿ ಹರಿಯುತ್ತದೆ. ಈ ನೀರನ್ನು ಕಟ್ಟೆ, ಅಣೆಕಟ್ಟು, ಮಣ್ಣು ಏರಿಗಳಿಂದ ತಡೆಗಟ್ಟಿ, ನಾಲೆಗಳ ಮತ್ತು ತೂಬುಗಳ ಮೂಲಕ ಗದ್ದೆಗಳಿಗೆ ಹಾಯಿಸುವುದಕ್ಕೆ ನಿರಾವರಿ ಕೆಲಸಗಳು ಅಗತ್ಯ. ಈ ಕಟ್ಟೆಗಳು ಮಳೆಗಾಲದಲ್ಲಿ ತುಂಬಿ, ಬೇಸಗೆಯಲ್ಲಿ ಕಬ್ಬು ಮೊದಲಾದ ಪಯಿರುಗಳಿಗೆ ನೀರನ್ನು ಒದಗಿಸುವುವು. ಪ್ರವಾಹದ ಹೊಡೆತವನ್ನು ತಡೆಯುವುದಕ್ಕೂ ಈ ಕಟ್ಟೆಗಳು ಸಹಾಯವಾಗಿವೆ. ಮಣ್ಣಿನ ಏರಿಯಿಂದ ಅಡ್ಡಗಟ್ಟಿರುವ ಹಳ್ಳಗಳೇ ಕೆರೆಗಳು. ಮೈಸೂರು ಸಂಸ್ಥಾನದಲ್ಲಿ ೨೫,೦೦೦ ಕೆರೆಗಳಿವೆ. ಇದರಿಂದ ೭,೬೬,೦೦೦ ಎಕರೆ ತರಿ ಜಮೀನು ಸಾಗುವಳಿಯಾಗುತ್ತಿದೆ. ಈ ಕೆರೆಗಳಿಗೆ ತಗುಲಿರುವ ವೆಚ್ಚ ೫೦ ಕೋಟಿ ರೂಪಾಯಿಗೆ ಜಾಸ್ತಿಯಾಗಿರಬಹುದು. ಅರ್ಧಕ್ಕಿಂತ ಜಾಸ್ತಿಯಾಗಿ ಈ ಕೆರೆಗಳು ಇಂದು ಪಾಳು ಸ್ಥಿತಿ

ಯಲ್ಲಿವೆ. ಇವುಗಳ ಜೀರ್ಣೋದ್ಧಾರ (Restoration) ನೀರಾವರಿ ಕೆಲಸಗಳಲ್ಲೆಲ್ಲ ಮುಖ್ಯವಾದದ್ದು. ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಕೆರೆಗಳಿಗೆ ಮುಖ್ಯಸ್ಥಾನವಿದೆ.

ನದಿಗಳಿಗೆ ಅಡ್ಡಗಟ್ಟಿ (Dams and Anicuts) ನಾಲೆಗಳನ್ನು ತೆಗೆದು ಲಕ್ಷಾಂತರ ಎಕರೆ ಜಮೀನನ್ನು ಸಾಗುವಳಿಮಾಡುತ್ತಿದ್ದಾರೆ. ಹೊಸ ಜಲಾಶಯಗಳನ್ನು ನಿರ್ಮಿಸುವುದಕ್ಕೂ ಇರುವ ಕಟ್ಟೆ ಮತ್ತು ನಾಲೆಗಳ ಉಸ್ತುವಾರಿಗೂ ಸಾವಿರಾರು ಜಲಶಿಲ್ಪಜ್ಞರು (Irrigation Engineers) ಬೇಕು.

ನೀರಾವರಿ ಕೆಲಸಗಳನ್ನು ವಿದ್ಯುಚ್ಛಕ್ತಿ ತಯಾರುಮಾಡುವುದಕ್ಕೂ ಉಪಯೋಗಿಸುವುದರಿಂದ ವ್ಯವಸಾಯ, ಕೈಗಾರಿಕೆ, ಎರಡೂ ಪ್ರಯೋಜನ ಹೊಂದುತ್ತವೆ. ಗಂಗಾ, ಸಿಂಧೂ ನದಿ ಕಣಿವೆಯ ನೀರಾವರಿ ಕೆಲಸಗಳಲ್ಲಿ ಈ ಸಂಯೋಗವನ್ನು ಕಾಣಬಹುದು. ನಾಲೆಯಲ್ಲಿ ಹರಿಯುವ ನೀರನ್ನು ಕೆಲವು ದುಮುಕುವ ಸ್ಥಳಗಳಲ್ಲಿ (Canal drops) ವಿದ್ಯುಚ್ಛಕ್ತಿ ತಯಾರಿಕೆಗೆ ಉಪಯೋಗಿಸುತ್ತಾರೆ. ಹೀಗೆ ತಯಾರಾದ ವಿದ್ಯುಚ್ಛಕ್ತಿಯಿಂದ, ಪಂಪುಗಳ ಮೂಲಕ ನಾಲೆಯ ಮೇಲುಭಾಗದಲ್ಲಿರುವ ಭೂಮಿಯನ್ನು ಸಹ ವ್ಯವಸಾಯಕ್ಕೆ ತಂದಿದ್ದಾರೆ. ಪಂಜಾಬಿನಲ್ಲಿ ಆಳವಾದ ಕೊಳವೆ ಭಾವಿಗಳನ್ನು ತೋಡಿ (Tube-well), ಇದರ ನೀರನ್ನು ಈ ವಿದ್ಯುಚ್ಛಕ್ತಿಯಿಂದ ಮೇಲಕ್ಕೆ ಎತ್ತಿ ವ್ಯವಸಾಯಕ್ಕೆ ಉಪಯೋಗಿಸುತ್ತಾರೆ. ಇಂತಹ ಸ್ಥಳಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿ, ವಿದ್ಯುಚ್ಛಕ್ತಿಯಿಂದ ನಡಸುತ್ತಾರೆ; ಅಲ್ಲಿಯ ಮನೆ, ಬೀದಿಗಳನ್ನು ಕೂಡ ಈ ವಿದ್ಯುಚ್ಛಕ್ತಿಯಿಂದ ಬೆಳಗುತ್ತಾರೆ. ನಮ್ಮ ಪ್ರಾಂತದಲ್ಲಿಯೂ ಕೃಷ್ಣರಾಜ ಸಾಗರ ಕಟ್ಟೆಯು ಇರ್ವಿನ್ ನಾಲಾ ಪ್ರದೇಶಗಳಿಗೆ ನೀರು ಸರಬರಾಜು ಮಾಡುವುದಲ್ಲದೆ, ಶಿವನ ಸಮುದ್ರದಲ್ಲಿರುವ ವಿದ್ಯುಚ್ಛಕ್ತಿ ಯಂತ್ರಗಳಿಗೆ ಬೇಸಗೆಯಲ್ಲಿ ಸಾಕಾದಷ್ಟು ನೀರನ್ನು ಒದಗಿಸುವುದಕ್ಕೆ ಅದು ಸಾಧಕವಾಗಿದೆ.

ನೀರಾವರಿ ಕೆಲಸಗಳು ಸಫಲವಾಗಬೇಕಾದರೆ, ಮಲೇರಿಯಾನಿವಾರಕ ಶಿಲ್ಪಿಯ (Malaria Engineer) ಸೇವೆ ಅಗತ್ಯ. ನೀರಾವರಿ ಕೆಲಸಗಳು ನಡೆದ ಕಡೆ ಮಲೇರಿಯ ಬೆನ್ನು ಹತ್ತಿದ್ದೇ. ಅದರಿಂದ ಹಳ್ಳಿಗಳು ಪೂರ್ಣವಾಗಿ ನಾಶವಾಗಿವೆ. ಉಳುವರಿಲ್ಲದೆ ಒಳ್ಳೆಯ ಜಮೀನು ಪಾಳುಬಿದ್ದಿದೆ. ನೀರು ನಿಂತ ಕಡೆ ಸೊಳ್ಳೆ ಹುಟ್ಟುವುದು. ನೀರಿನ ಮಟ್ಟ ಹೆಚ್ಚಾಗಿ ಜವುಗು ಬಲಿಯುವುದು. ನೀರನ್ನು ಶೋಷಿಸುವುದು (drainage); ಹಳ್ಳಿಗಳನ್ನು ತಿಟ್ಟಿನ ಪ್ರದೇಶಗಳಲ್ಲಿ ಕಟ್ಟಿ, ಸುತ್ತಲೂ ಅರ್ಧ ಮೈಲಿ ಸಾಗುವಳಿಗೆ ಅವಕಾಶ ಕೊಡದಿರುವುದು. ಮಲೇರಿಯಾ ಸೊಳ್ಳೆ ಪರಿಹಾರಕ್ಕೆ ನಾಲಾ ನೀರಿನ ಪ್ರದೇಶದಲ್ಲಿ ವಿಶೇಷ ತರಹ ಮೀನುಗಳನ್ನು ಸಾಕುವುದು; ನಾಲೆಯ ದಡಗಳನ್ನು ಸಿಮೆಂಟಿನಿಂದ ಮೆತ್ತಿ ನೀರು ಜಿನುಗದಂತೆ ಮಾಡುವುದು; ನಾಲೆಯ ತಳದಲ್ಲಿರುವ ಹಳ್ಳಕೊಳ್ಳ

ಗಳನ್ನು ಮುಚ್ಚಿ ನೀರು ಸುಲಭವಾಗಿ ಹರಿಯುವಂತೆ ಮಾಡುವುದು; ಪಾಳುಬಿದ್ದಿರುವ ಕೆರೆಯೇರಿಗಳನ್ನು ಒಡೆದು, ಮಾಳದಲ್ಲಿ ನೀರು ನಿಲ್ಲದಂತೆ ಮಾಡುವುದು, ರಸ್ತೆಗೆ ಬೇಕಾಗುವ ಗರಸಲು ಮಣ್ಣನ್ನು (Gravel Blendage) ಗುಳಿಮಾಡಿ ತೆಗೆದು, ನೀರು ತುಂಬಿಕೊಳ್ಳಲು ಅವಕಾಶ ಕೊಡದಿರುವುದು—ಈ ಕಾರ್ಯಕ್ರಮಗಳಿಂದ ಮಲೇರಿಯ ಹಾವಳಿಯನ್ನು ಕಡಮೆಮಾಡುವುದಕ್ಕೆ ಶಿಲ್ಪಿಜ್ಞರು ನೆರವಾಗುವರು.

ನೀರಿನ ಶೇಖರಣೆ ಮತ್ತು ವಿನಿಯೋಗ, ನೆರೆಯ ಹತೋಟಿ (Flood-control), ಹಡಗುಗಳಿಗೆ ಜಲಮಾರ್ಗಗಳನ್ನು ಕಲ್ಪಿಸುವುದು (Navigation). ನದಿಗಳ ಉಸ್ತುವಾರಿ ಮತ್ತು ಮಣೆಗಾರಿಕೆ (River management), ಜಲಶಕ್ತಿಯಿಂದ ಉತ್ಪನ್ನವಾದ ವಿದ್ಯುತ್—ಈ ಸಮಸ್ಯೆಗಳ ಸುವ್ಯವಸ್ಥೆಗೆ ರಾಷ್ಟ್ರೀಯ ನೀರಾವರಿ ಸಂಪತ್ತಿನ ಸಂಸ್ಥೆಯನ್ನು (National Water Resources Board) ನಿರ್ಮಾಣಮಾಡಬೇಕೆಂಬುದು ರಾಷ್ಟ್ರೀಯ ಯೋಜನಾ ಸಮಿತಿಯವರ (National Planning Committee) ಮುಖ್ಯ ಸಿಫಾರಸಿನಲ್ಲೊಂದು. ಇಂತಹ ಸಂಸ್ಥೆಯಲ್ಲಿ ಶಿಲ್ಪಿಗೆ ದೊಡ್ಡ ಸ್ಥಾನವಿದೆ.

ರಾಷ್ಟ್ರದ ಆರ್ಥಿಕ ವ್ಯವಸ್ಥೆಯನ್ನು ಮೇಲಿನ ಮಟ್ಟಕ್ಕೆ ಎತ್ತಬೇಕಾದರೆ ಸಂಚಾರ ಮಾರ್ಗಗಳ (Communications) ವ್ಯವಸ್ಥೆ ಉತ್ತಮಪಡಬೇಕು. ವ್ಯವಸಾಯದಿಂದ ಆದ ಬೆಳೆ ಮತ್ತು ಕೈಗಾರಿಕೆಯಿಂದ ತಯಾರಾದ ಸಾಮಾನುಗಳನ್ನು ಉತ್ಪತ್ತಿಸ್ಥಾನದಿಂದ, ಉಪಯೋಗವಾಗುವ ಸ್ಥಾನಗಳಿಗೆ ಸಾಗಿಸುವುದಕ್ಕೆ ಯಾನ ವಾಹನ ವರ್ತಮಾನದ ಮಾರ್ಗಗಳು ಅತ್ಯಾವಶ್ಯಕ. ಆರ್ಥಿಕ ಅಭಿವೃದ್ಧಿಗೆ ಮಾರ್ಗಗಳು, ಮನುಷ್ಯನ ಶರೀರಕ್ಕೆ ರಕ್ತನಾಳಗಳಿದ್ದಂತೆ. ನಮ್ಮ ದೇಶದಲ್ಲಿ ಈ ಸಾಧನದ ಆವಶ್ಯಕತೆ ಇತರ ದೇಶಗಳಿಗಿಂತ ಹೆಚ್ಚು. ಇಲ್ಲಿ ಒಳದೇಶದ ವ್ಯಾಪಾರ, ಹೊರದೇಶದ ವ್ಯಾಪಾರದ ಹತ್ತುಹನ್ನೆರಡರಷ್ಟಿದೆ. ಇದು ತೊಂದರೆಯಿಲ್ಲದೆ ಸುಸೂತ್ರವಾಗಿ ನಡೆಯಬೇಕಾದರೆ ಭೂಮಾರ್ಗ (Roads) ರೈಲುಮಾರ್ಗ (Railways) ಜಲಮಾರ್ಗ (Water-ways) ವಾಯುಮಾರ್ಗಗಳ (Air-ways) ವ್ಯವಸ್ಥೆ ಬೇಕು.

ಭೂಮಾರ್ಗದ ಬೆಳೆವಣಿಗೆಯಲ್ಲಿ ನಮ್ಮ ದೇಶ ಬಹಳ ಹಿಂದುಳಿದಿದೆ. ಇಷ್ಟು ದೊಡ್ಡದೇಶದಲ್ಲಿ ೮೫,೦೦೦ ಮೈಲಿ ಜಲ್ಲಿಯ (Metalled) ರಸ್ತೆ, ೨೨೦,೮೮೯ ಮೈಲಿ ಮಣ್ಣಿನ ರಸ್ತೆ, ಮಾತ್ರ ಇವೆ. ಇದನ್ನು ಐದರಷ್ಟಾದರೂ ಹೆಚ್ಚಿಸಬೇಕೆಂದು ಇಂಡಿಯಾ ಸರ್ಕಾರದವರು ನಿಶ್ಚಯಿಸಿದ್ದಾರೆ. ರೈಲುದಾರಿ ಮಾಡಿ ಪ್ರತಿ ಹಳ್ಳಿಯನ್ನೂ ಮುಟ್ಟಲು ಸಾಧ್ಯವಿಲ್ಲ. ಹಳ್ಳಿಯ ರಸ್ತೆಗಳನ್ನು (Inter-Village Roads) ಹೆಚ್ಚಿಸುವುದರಿಂದ ಹಳ್ಳಿಯವರಿಗೆ ನಾಗರಿಕತೆಯ ಸಂಪರ್ಕ ಜಾಸ್ತಿಯಾಗಿ ಗ್ರಾಮ ಪುನರುಜ್ಜೀವನ ಜಾಗ್ರತೆಯಾಗಿ ಆಗುವುದು. ಹೊಸ ಭೂಮಾರ್ಗ ರಚನೆಯೊಂದಿಗೆ

ಹೊಸ ಸೇತುವೆಗಳನ್ನು ಕೂಡ ನಿರ್ಮಿಸಬೇಕಾಗುವುದು. ನಮ್ಮ ದೇಶದ ಮಹಾ ಮಾರ್ಗಗಳನ್ನೆಲ್ಲ (Highways) ಸಿಮೆಂಟ್ ಕಾಂಕ್ರೀಟಿನಿಂದಲೇ ಮಾಡಬೇಕು. ಇದರಿಂದ ಭಾರಿ ಲಾರಿಗಳ ಮೂಲಕ ವೇಗವಾಗಿ, ಸಾಮಾನುಗಳನ್ನು ಸಾಗುಕಳಿಸುವುದಕ್ಕೆ ಸಹಾಯವಾಗುವುದು. ಈ ಕಾರ್ಯಸಾಧನೆಗೆ ಸಾವಿರಾರು ರಸ್ತೆ, ಸೇತುವೆ ಶಿಲ್ಪಿಗಳು ಬೇಕಾಗುವರು. ಸಿಮೆಂಟು ಕೈಗಾರಿಕೆಯೂ ಇದರಿಂದ ಅಭಿವೃದ್ಧಿ ಹೊಂದುವುದು. ಒಂದು ಇನ್ನೊಂದಕ್ಕೆ ಪೋಷಕವಾಗುವುದು. ವಸ್ತುಸಂಪತ್ತು ಹೆಚ್ಚುವುದು.

ರಸ್ತೆಗಳನ್ನು ಮಾತ್ರ ಏರ್ಪಡಿಸಿದರೆ ಸಾಲದು. ಅದರಮೇಲೆ ಸಾಮಾನು ಸರಿಯಾಗಿ ಸಾಗಬೇಕಾದರೆ, ಮೋಟರ್ ವಾಹನಗಳೂ ಬೇಕು. ವಾಹನಗಳನ್ನು ನಡೆಸುವುದಕ್ಕೆ ಪೆಟ್ರೋಲ್ ಬೇಕು. ಇವು ಈಗ ಪರದೇಶಗಳಿಂದ ಬರುತ್ತಿವೆ. ಈ ಪರಾಧೀನತೆಯು ನಮ್ಮ ಆರ್ಥಿಕಾಭಿವೃದ್ಧಿಗೆ ಆತಂಕ. ಈ ದೇಶದಲ್ಲಿ ಒಳಗೆ ಉರಿದು ಶಾಖೋತ್ಪತ್ತಿ ಮಾಡಿಕೊಳ್ಳುವ ಇಂಜಿನು (Internal Combustion Engine) ತಯಾರುಮಾಡುವುದಕ್ಕೆ ಇಲ್ಲಿಯೇ ಕಾರ್ಖಾನೆಗಳನ್ನು ಸ್ಥಾಪಿಸಬೇಕು. ಇಲ್ಲಿರುವ ಪೆಟ್ರೋಲು ಗಣಿಗಳನ್ನು ಉತ್ತಮಗೊಳಿಸಬೇಕು. ಮತ್ತು ಪೆಟ್ರೋಲಿಗೆ ಬದಲಾಗಿ ಹೊಸ ಉರುವಲು ವಸ್ತುಗಳನ್ನು (Substitute Fuels) ಸಂಶೋಧನೆ ಮಾಡಬೇಕು. ಈ ಯೋಜನೆಗಳು ಸಫಲವಾಗಬೇಕಾದರೆ ಸ್ವಯಂಚಾಲಿತ ಯಂತ್ರ ವಿದ್ಯೆಯನ್ನು ಬಲ್ಲ ಶಿಲ್ಪಿಗಳ (Automobile Engineers) ಮತ್ತು ರಸಾಯನವಸ್ತುಶಿಲ್ಪಿಗಳ (Chemical Engineers) ಸಹಾಯ ಅಗತ್ಯ.

ರೈಲುಮಾರ್ಗದ ವ್ಯವಸ್ಥೆಯಲ್ಲಿಯೂ ನಾವು ಬಹಳ ಹಿಂದುಳಿದಿದ್ದೇವೆ. ರೈಲು ನಡಸುವುದಕ್ಕೆ ಬೇಕಾದ ಕಲ್ಲಿದ್ದಲು ಬೇಕಾದಷ್ಟು ದೊರೆತರೂ, ರೈಲ್ವೆ ಇಂಜಿನುಗಳನ್ನೂ ಅದರ ಉಪಕರಣಗಳನ್ನೂ (Locomotive Engines and spare parts) ಪರದೇಶದಿಂದಲೇ ತರಿಸಬೇಕಾದ ಸ್ಥಿತಿಯಲ್ಲಿದ್ದೇವೆ. ಈ ಕೈಗಾರಿಕೆಯನ್ನು ಸ್ಥಾಪಿಸಲು ಬೇಕಾದ ಸೌಕರ್ಯ ಈ ದೇಶದಲ್ಲಿದೆ. ರಾಷ್ಟ್ರೀಯ ಸರ್ಕಾರ ಬಂದಾಗಲಾದರೂ ಈ ಕೈಗಾರಿಕೆಯನ್ನು ಇಲ್ಲಿ ಸ್ಥಾಪಿಸಲೇ ಬೇಕು. ಇದರ ಸಾಧನೆಗೆ ನೂರಾರು ಮಂದಿ ಯಂತ್ರಶಿಲ್ಪಿಗಳು ಅವಶ್ಯ. ನಮ್ಮ ದೇಶದಲ್ಲಿ ವಿದ್ಯುಚ್ಛಕ್ತಿಯ ಬೆಳವಣಿಗೆಯಾದ ಹಾಗೆಲ್ಲ ನಮ್ಮ ರೈಲುಗಳನ್ನು ಹೆಚ್ಚುಹೆಚ್ಚಾಗಿ ಇದ್ದಲಿಗೆ ಬದಲು ವಿದ್ಯುಚ್ಛಕ್ತಿಯಿಂದ ನಡಸುವುದು (Electric Train) ವಾಡಿಕೆಗೆ ಬರುವುದು. ಇದರಿಂದ ಯಂತ್ರಗಳನ್ನು ನಡಸುವ ಖರ್ಚು ಕಡಮೆಯಾಗುವುದು. ಇದರ ವ್ಯವಸ್ಥೆಗೆ ವಿದ್ಯುತ್ ತಂತ್ರಜ್ಞರು, (Traction Engineers) ಬೇಕಾಗುವರು.

ನೀರಿನ ಮಾರ್ಗದ ವ್ಯವಸ್ಥೆಗೆ ನಾವು ಏನೂ ಮಾಡುವುದಾಗಿಲ್ಲ. ನಮ್ಮ ದೇಶ

ದಲ್ಲಿಯೇ ತೀರದ ವ್ಯಾಪಾರಕ್ಕೆ ಬೇಕಾದ ಹಡಗುಗಳು ಪರದೇಶದವರ ಸ್ವಾಧೀನಕ್ಕೆ ಸಿಕ್ಕಿವೆ. ಕೆಲವು ಹಡಗುಗಳನ್ನು ನಮ್ಮ ದೇಶೀಯ ಮಾಲೀಕರು ನಡಸಿದರೂ, ಅವುಗಳ ತಯಾರಿಕೆ ದೇಶದ ಹೊರಗೆಆಗಬೇಕಾಗಿದೆ. ತೀರದವ್ಯಾಪಾರ ಉತ್ತಮಗೊಳ್ಳಬೇಕಾದರೆ ನಮ್ಮ ದೇಶದಲ್ಲಿ ಹಡಗು ತಯಾರಿಕೆಗೆ ಸಂಬಂಧಪಟ್ಟ ಕೈಗಾರಿಕೆಗಳನ್ನು ಆರಂಭಮಾಡ ಬೇಕು. ಅದನ್ನು ರಾಷ್ಟ್ರದೃಷ್ಟಿಯಿಂದ ಸರ್ಕಾರದವರು ಕೈಕೊಳ್ಳಬೇಕು. ಹಡಗುಗಳು ಸುಗಮವಾಗಿ ಸಮುದ್ರದಲ್ಲಿ ಸಂಚಾರ ಮಾಡುವುದಕ್ಕೆ ಸಹಾಯವಾಗುವಂತೆ ಹೆಚ್ಚು ದೀಪದ ಮನೆಗಳನ್ನು (Light-houses) ಕಟ್ಟಿಸಬೇಕು. ರೇವುಗಳನ್ನು (Harbours) ಹೆಚ್ಚಿಸಬೇಕು. ಇರುವ ರೇವುಗಳನ್ನು ಉತ್ತಮಗೊಳಿಸಬೇಕು. ಬಂದರಿನ ಚಾಚು ಕಟ್ಟೆ (Jetty) ಹೆಚ್ಚು ಮಾಡುವುದರಿಂದ ಪ್ರಯಾಣಿಕರು ಹತ್ತುವುದಕ್ಕೂ ಇಳಿಯುವುದಕ್ಕೂ ಸಾಮಾನುಗಳನ್ನು ಸಾಗಿಸುವುದಕ್ಕೂ ಸಹಾಯವಾಗುವುದು. ರೇವು ಬಂದರುಗಳ ರಚನೆಗೆ ಸಂಬಂಧಿಸಿದ (Harbour Engineering) ಬೆಳೆವಣಿಗೆಗೆ ನಮ್ಮ ದೇಶದಲ್ಲಿ ಬಹಳ ಅವಕಾಶವಿದೆ.

ವಾಯುಮಾರ್ಗದ ಆವಶ್ಯಕತೆ ಈ ಯುದ್ಧದಿಂದ ಸರ್ಕಾರಕ್ಕೆ ಚೆನ್ನಾಗಿ ಗೊತ್ತಾಗಿದೆ. ಅಮೇರಿಕದ ಸಂಯುಕ್ತ ಸಂಸ್ಥಾನಗಳ (U.S.A.) ಸರ್ಕಾರದವರು ಈ ಯುದ್ಧದಲ್ಲಿ ಲಕ್ಷಾಂತರ ಟನ್ನುಗಳಷ್ಟು ಆಹಾರ ಮತ್ತು ಯುದ್ಧ ಸಾಮಗ್ರಿಗಳನ್ನು ಮಿತ್ರರಾಷ್ಟ್ರಗಳಿಗೆ ವಿಮಾನಗಳಲ್ಲಿ ಸಾಗಿಸಿದ್ದಾರೆ. ಭಾವೀ ಪ್ರಪಂಚದಲ್ಲಿ ವಿಮಾನದಲ್ಲಿ ಸಾಮಾನುಗಳ ಸಾಗಣೆ (Air Transport) ಪ್ರಾಮುಖ್ಯತೆ ಹೊಂದುವುದು. ಪ್ರಯಾಣಿಕರನ್ನೂ, ಅಂಚೆಯನ್ನೂ ಸಾಗಿಸುವುದಲ್ಲದೆ ವ್ಯಾಪಾರ ಕೂಡ ವಿಮಾನಗಳ ಸಹಾಯದಿಂದಲೇ ನಡೆದೀತು. ವಿಮಾನ ಕಟ್ಟುವ ಕಾರ್ಖಾನೆಗಳನ್ನು ಈ ದೇಶದಲ್ಲಿ ಸ್ಥಾಪಿಸುವುದು ರಾಷ್ಟ್ರೀಯ ಸರ್ಕಾರದ ಮೊದಲನೆಯ ಕರ್ತವ್ಯ. ಅಲ್ಲದೆ ವಿಮಾನ ನಿಲ್ದಾಣಗಳನ್ನೂ ಕಳಗಳನ್ನೂ ಸ್ಥಾಪಿಸಬೇಕು. ವಾಯು ಶಿಲ್ಪಿಯ (Aero-nautical Engineers) ಕಾರ್ಯಕ್ಷೇತ್ರ ಈ ಮುಖವಾಗಿಯೂ ವಿಸ್ತಾರಗೊಳ್ಳುವುದರಲ್ಲಿ ಸಂದೇಹವಿಲ್ಲ.

ಮಾರ್ಗಗಳ ಬೆಳೆವಣಿಗೆಯಿಂದ ಆರ್ಥಿಕ ಅಭಿವೃದ್ಧಿ ಮಾತ್ರವಲ್ಲದೆ, ರಾಷ್ಟ್ರರಕ್ಷಣಾ (National Defence) ಶಕ್ತಿಯೂ ಹೆಚ್ಚುವುದು. ನಾಳೆ ರಾಷ್ಟ್ರೀಯ ಸರ್ಕಾರ ರಚನೆಯಾದಾಗ ರಕ್ಷಣಾ ಸಮಸ್ಯೆ ಹೆಚ್ಚು ಪ್ರಾಮುಖ್ಯತೆಗೆ ಬರುವುದು. ರಾಷ್ಟ್ರ ರಕ್ಷಣೆಗಾಗಿ ನಮ್ಮ ದೇಶದಲ್ಲಿ ಹೊಸ ಭೂಮಾರ್ಗಗಳೂ ಬಂದರುಗಳೂ ವಿಮಾನ ಕ್ಷೇತ್ರಗಳೂ (Air-fields) ಬೇಕಾಗುವುವು. ನೌಕಾಪಡೆ (Navy), ವಿಮಾನಪಡೆ (Air-force) ಹೆಚ್ಚಾದಂತೆಲ್ಲ ಅವುಗಳ ಅಗತ್ಯವನ್ನು ಒದಗಿಸ

ಬೇಕಾದ ಕೈಗಾರಿಕೆಗಳು ಹುಟ್ಟಿಕೊಳ್ಳುವುವು. ಮದ್ದು, ಗುಂಡು, ಫಿರಂಗಿ, ಮೆಷೀನ್ ಗನ್, ಟ್ಯಾಂಕ್, ವಿ-ಆಯುಧಗಳು (V-weapans), ಬಾಂಬರ್ ವಿಮಾನಗಳು, ಯುದ್ಧದ ಹಡಗಿನ ಸಲಕರಣೆಗಳು—ಇವನ್ನು ಒದಗಿಸಲು ಯುದ್ಧದ ಕಾರ್ಖಾನೆಗಳು (Arsenals) ದೇಶದಲ್ಲಿ ಸ್ಥಾಪಿತವಾಗಬೇಕು. ಇದು ಜಯಪ್ರದವಾಗಬೇಕಾದರೆ ಯುದ್ಧ ಶಿಲ್ಪಿಗಳ (Military Engineers) ಸೇವೆ ಅಗತ್ಯ.

ದೂರ ದೇಶಗಳ ಸಂಸರ್ಗಕ್ಕೆ ಬೇಕಾದ ರೇಡಿಯೋ, ಟೆಲೆಗ್ರಾಫ್, ಟೆಲೆಫೋನ್ ಮತ್ತು ವೈರ್‌ಲೆಸ್ ಈ ಶಾಸ್ತ್ರಗಳಲ್ಲಿ ನಿಪುಣರಾದ ಶಿಲ್ಪಿಗಳಿಗೆ ವಿಸ್ತಾರವಾದ ಸೇವಾಕ್ಷೇತ್ರವಿದೆ. ಇವುಗಳ ಉಪಕರಣಗಳನ್ನು ಈ ದೇಶದಲ್ಲಿಯೇ ತಯಾರಿಸಲು ಬೇಕಾದಷ್ಟು ಸಾಮಗ್ರಿ ಇದೆ. ಈ ಕೈಗಾರಿಕೆಗಳನ್ನು ರಾಷ್ಟ್ರೀಯ ಸರ್ಕಾರದ ನೇತೃತ್ವದಲ್ಲಿ ಬೆಳಸಬೇಕು.

ನಮ್ಮ ಕಾಡುಗಳಲ್ಲಿ ವಾಸ್ತು ಕೈಗಾರಿಕೆಗೆ ಬೇಕಾದ ಮರದ ದಿಮ್ಮಿ, ಬೊಂಬು ಹೇರಳವಾಗಿ ಸಿಕ್ಕುವುವು. ಬಣ್ಣ, ಅರಗು, ಕರ್ಪೂರತೈಲ ಇವುಗಳ ಕೈಗಾರಿಕೆಗೆ ಬೇಕಾದ ಸಾಮಾಗ್ರಿಗಳು ನಮ್ಮ ಕಾಡಿನಲ್ಲಿವೆ. ಚರ್ಮ ಹದ ಮಾಡುವುದಕ್ಕೆ ಬೇಕಾದ ಕೆಲವು ಮರದ ಚಕ್ಕೆಗಳು ಸಿಕ್ಕುತ್ತವೆ. ಕಾಡುಗಳ ಬೆಳವಣಿಗೆಗೆ ಅರಣ್ಯ ಶಿಲ್ಪಿಗಳ (Forest Engineers) ಸೇವೆ ಬೇಕು.

ದೇಶದ ಖನಿಜ ಸಂಪತ್ತನ್ನು ಆರ್ಥಿಕ ಅಭಿವೃದ್ಧಿಗೆ ಉಪಯೋಗಿಸುವುದರಲ್ಲಿ ಶಿಲ್ಪಿಗೆ ದೊಡ್ಡ ಕಾರ್ಯಕ್ಷೇತ್ರವಿದೆ. ಅನೇಕ ಖನಿಜಗಳ ಅದರನ್ನು ಇತರ ದೇಶಗಳಿಗೆ ಕಳುಹಿಸುವುದನ್ನು ನಿಲ್ಲಿಸಿ ಈ ದೇಶದಲ್ಲಿ ಕೈಗಾರಿಕೆ ಬೆಳವಣಿಗೆಗೆ ಉಪಯೋಗಿಸ ಬಹುದು.

ನಮ್ಮ ದೇಶದಲ್ಲಿ ಸಿಕ್ಕುವ ಮುಖ್ಯ ಖನಿಜಗಳು

೧. ಮ್ಯಾಂಗನೀಸ್ (Manganese). ಇದು ಬ್ಯಾಟರಿ ತಯಾರಿಕೆಯಲ್ಲಿಯೂ ಉಕ್ಕಿನ ಮಿಶ್ರ ಲೋಹಗಳ (Ferro-manganese Alloys) ತಯಾರಿಕೆಯಲ್ಲಿಯೂ ಉಪಯೋಗವಾಗುವುದು.

೨. ಕಾಗೆಭಂಗಾರ (Mica). ಪ್ರಪಂಚದ ಒಟ್ಟು ಉತ್ಪತ್ತಿಯಲ್ಲಿ ¾ ಭಾಗ ಅದರು ನಮ್ಮ ದೇಶದ್ದು. ವಿಮಾನ, ಮೋಟರ್, ವಿದ್ಯುಚ್ಛಕ್ತಿ, ರೇಡಿಯೋ ಕೈಗಾರಿಕೆಗಳಿಗೆ ಅಗತ್ಯವಾಗಿ ಬೇಕಾಗುವ ವಸ್ತುವಿದು.

೩. ಮ್ಯಾಗ್‌ನೆಸೈಟು (Magnesite). ಕುಲಿಮೆಗಳ (Furnaces) ಒಳಭಾಗ ಗಳನ್ನು ಕಟ್ಟುವುದಕ್ಕೆ ಬೇಕಾದ ಇಟ್ಟಿಗೆ ಸಾಮಗ್ರಿಗಳಿಗೆ (Refractories) ಬಹಳ ಉಪಯೋಗವಾದ ವಸ್ತು. ಉಕ್ಕಿನ ತಯಾರಿಕೆಯಲ್ಲಿಯೂ ಉಪಯೋಗವಾಗುವುದು.

೪. **ಇಲ್‌ಮೆನೈಟ್** (Ilmenite). ಇದರಿಂದ ಟೈಟೇನಿಯಂ (Titanium) ಮತ್ತು ಫೆರೋ ಟೈಟೇನಿಯಂ (Ferro-Titanium) ಮಿಶ್ರ ಲೋಹಗಳನ್ನು ಮಾಡುತ್ತಾರೆ.

೫. **ಕಲ್ಲಿದ್ದಲು** ಕಬ್ಬಿಣ. ಕಲ್ಲಿದ್ದಲು, ಬಂಗಾಳ, ಬಿಹಾರಿನಲ್ಲಿ ಅಕ್ಕ ಪಕ್ಕದಲ್ಲಿ ಸಿಕ್ಕುವುದರಿಂದ, ಉಕ್ಕಿನ ಕೈಗಾರಿಕೆ ಆ ಪ್ರಾಂತಗಳಲ್ಲಿ ಅಷ್ಟು ಅಭಿವೃದ್ಧಿಗೆ ಬಂದಿದೆ. ಕೀಳು ತರಹದ ಕಲ್ಲಿದ್ದಲನ್ನು ಗಣಿಯ ಸಮೀಪದಲ್ಲೇ ವಿದ್ಯುಚ್ಛಕ್ತಿ ತಯಾರಿಕೆಗೆ ಉಪಯೋಗಿಸಿದರೆ ಕೈಗಾರಿಕೆಗೆ ಹೆಚ್ಚು ಅನುಕೂಲವಾಗುವುದು.

೬. **ಕಬ್ಬಿಣ.** ಈ ಅದರನ್ನು ೧೯೩೮-೯ ರಲ್ಲಿ ೨೭ ಲಕ್ಷ ಟನ್ ಅಷ್ಟು ತೆಗೆದು ೧೮.೩೭ ಲಕ್ಷ ಟನ್ ಕಬ್ಬಿಣ ತಯಾರು ಮಾಡಲಾಯಿತು. ಇದರಿಂದ ಉಕ್ಕಿನ (Steel) ರೈಲ್ವೆ ಕಂಬಿಗಳು, ಪಟ್ಟಿಗಳು, ತೊಲೆಗಳು (Girders), ತಗಡುಗಳು (Sheets) ಮುಂತಾದ ನೂರಾರು ತರಹ ಕೈಗಾರಿಕೆಗೆ ಬೇಕಾದ ಸಾಮಾನುಗಳು ದೇಶದಲ್ಲಿ ತಯಾರಾಗುತ್ತಿವೆ. ವಿದ್ಯುಚ್ಛಕ್ತಿ ಹೆಚ್ಚಿದ ಹಾಗೆಲ್ಲಾ, ಕಲ್ಲಿದ್ದಲ ಸಹಾಯವಿಲ್ಲದೆ ಹೆಚ್ಚು ಉಕ್ಕು ತಯಾರುಮಾಡಬಹುದು.

೭. **ಬಾಕ್ಸೈಟ್** (Bauxite). ಈ ಅದರು ಪಟಿಕ (Alum), ಕುಲಿಮೆ ಶಾಖವನ್ನು ತಡೆಕೊಳ್ಳಬಲ್ಲ ಪದಾರ್ಥಗಳು (Refractories), ಘರ್ಷಕ ಪದಾರ್ಥಗಳು (Abrasives), ಅಲ್ಯುಮಿನಿಯಂ ಲೋಹ ಇವುಗಳ ತಯಾರಿಕೆಗೆ ಅಗತ್ಯವಾಗಿ ಬೇಕು. ಅಲ್ಯುಮಿನಿಯಂ (Aluminium) ಲೋಹವು ನಮ್ಮ ದೇಶದ ಪ್ರಗತಿಗೆ ಮುಖ್ಯವಾಗಿ ಬೇಕಾದದ್ದು. ಮೋಟರು, ವಿಮಾನ, ವಿದ್ಯುಚ್ಛಕ್ತಿ ಕೈಗಾರಿಕೆಗಳಿಗೆ ಅಗತ್ಯ. ತಾಮ್ರಕ್ಕೆ ಬದಲು ಅಲ್ಯುಮಿನಿಯಂ ಮಿಶ್ರ ಲೋಹಗಳನ್ನು ವಿದ್ಯುಚ್ಛಕ್ತಿ ಕೈಗಾರಿಕೆಗಳಲ್ಲಿ ಉಪಯೋಗಿಸಬಹುದು. ಮನೆಗಳಲ್ಲಿ ನಿತ್ಯದ ಉಪಯೋಗಕ್ಕೆ ಬೇಕಾಗುವ ಪಾತ್ರೆ ಸಲಕರಣೆಗಳಿಗೂ ಈ ಲೋಹ ಬರುತ್ತದೆ. ವಿದ್ಯುಚ್ಛಕ್ತಿಯ ಬೆಳವಣಿಗೆಗೆ ಈ ಲೋಹದ ತಯಾರಿಕೆ ಅಗತ್ಯ.

೮. **ತಾಮ್ರ.** ನಮ್ಮ ದೇಶದಲ್ಲಿ ೭,೦೦೦ ಟನ್ ತಾಮ್ರ ಪ್ರತಿ ವರ್ಷ ತೆಗೆಯಲಾಗುತ್ತಿದೆ. ೧೪,೦೦೦ ಟನ್ ಅಷ್ಟು ಇತರ ದೇಶಗಳಿಂದ ತರಿಸುತ್ತಿದ್ದೇವೆ. ವಿದ್ಯುಚ್ಛಕ್ತಿ ಕೈಗಾರಿಕೆಗಳಿಗೆ (Electrical Industries), ತಾಮ್ರ ಆವಶ್ಯಕ. ದೇಶದ ಅದರನ್ನು ಹೆಚ್ಚಾಗಿ ತೆಗೆದು, ತಾಮ್ರದ ಉತ್ಪತ್ತಿಯನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಅವಕಾಶವಿದೆ.

ನಮ್ಮ ದೇಶದಿಂದ ಕಡಲೆಕಾಯಿ, ಹರಳು, ಅಗಸೆ ಮತ್ತು ಇತರ ಎಣ್ಣೆ ಬೀಜಗಳು, ವಿದೇಶಗಳಿಗೆ ಹೋಗುತ್ತಿವೆ. ನವೀನ ಯಂತ್ರಗಳ ಮೂಲಕ ಬೀಜಗಳಿಂದ ಎಣ್ಣೆ

ತೆಗೆದು, ಶುದ್ಧಿಮಾಡಿ ಅವು ಕೆಡದಂತೆ ಜಲಜನಕ ಸೇರಿಸಿ (Hydrogenation) ಹೊರ ದೇಶಗಳಿಗೆ ಕಳುಹಿಸಿದರೆ, ನಮ್ಮ ಎಣ್ಣೆಗೆ ಬೀಜಗಳಿಗಿಂತ ಹೆಚ್ಚು ಬೆಲೆ ಸಿಕ್ಕುವುದು. ಬಣ್ಣದ ಕೈಗಾರಿಕೆ ಬೆಳೆದಹಾಗೆಲ್ಲ ಅಗಸೆ ಎಣ್ಣೆ (Linseed oil) ಯನ್ನು ನಮ್ಮ ದೇಶದಲ್ಲೇ ಉಪಯೋಗಿಸಬಹುದು. ಯಂತ್ರಚಾಲಿತವಾದ ಈ ಎಣ್ಣೆ ಕೈಗಾರಿಕೆಗೆ (Oil Mill Industry) ಒಳ್ಳೆಯ ಭವಿಷ್ಯವಿದೆ.

ನಮ್ಮ ಕೈಗಾರಿಕೆಗಳಲ್ಲೆಲ್ಲ ಬಟ್ಟೆಯ ಕೈಗಾರಿಕೆ (Textile Industry) ಉನ್ನತ ಸ್ಥಿತಿಯಲ್ಲಿದೆ. ನಮಗೆ ಬೇಕಾದ ಬಟ್ಟೆಯಲ್ಲಿ ೯/೧೦ ಭಾಗ ಈಗ ನಮ್ಮ ಗಿರಣಿಗಳಲ್ಲಿ ತಯಾರಾಗುತ್ತದೆ. ಈ ಕೈಗಾರಿಕೆ ಮುಂದೆ ಇನ್ನೂ ಹೆಚ್ಚು ಅಭಿವೃದ್ಧಿಗೆ ಬರುವುದರಲ್ಲಿ ಸಂದೇಹವಿಲ್ಲ. ನಾವು ವರ್ಷಕ್ಕೆ ತಲೆಗೆ ೧೨ ಚದರ ಗಜ ಬಟ್ಟೆಯಂತೆ ಉಪಯೋಗಿಸುತ್ತಿದ್ದೇವೆ. ಆರ್ಥಿಕ ಸ್ಥಿತಿ ಉತ್ತಮಗೊಂಡ ಹಾಗೆಲ್ಲ ನಮ್ಮ ಜನರು ಹೆಚ್ಚು ಬಟ್ಟೆಯನ್ನು ಕೊಳ್ಳುವರು. ಈ ದೇಶದ ಅರಳೆಯ ಎಳೆಯನ್ನು (Staple) ಉತ್ತಮಗೊಳಿಸಬೇಕು. ಅದಕ್ಕೆ ಬೇಕಾದ ಪ್ರಯತ್ನಗಳು ನಡೆಯುತ್ತಿವೆ. ಪ್ರಯತ್ನ ಸಫಲವಾಗುತ್ತಲೂ ಇದೆ. ಮುಂದೆ ನಮ್ಮ ಹತ್ತಿಯನ್ನು ಹೊರಗೆ ಕಳುಹಿಸುವ ಬದಲು, ಹತ್ತಿಯ ಬಟ್ಟೆಯನ್ನು ಮಾಡಿ ಇತರ ದೇಶಗಳಿಗೆ ಕಳುಹಿಸುವ ಕಾಲ ಬರುತ್ತಿದೆ. ಈ ಬೆಳೆವಣಿಗೆಗೆ ನೆಯ್ಗೆ ಯಂತ್ರಶಿಲ್ಪಿಯ (Textile Engineer) ಸಹಾಯ ಅಗತ್ಯ. ಹಾಗೆಯೇ ಉಣ್ಣೆ ಬಟ್ಟೆಗಳನ್ನು ಅಭಿವೃದ್ಧಿಗೊಳಿಸಬಹುದು.

೧೯೩೮ ರಲ್ಲಿ ಖನಿಜ ಸಂಪತ್ತಿನಿಂದ ಆದಾಯ ೩೪.೧೪ ಕೋಟಿ ರೂಪಾಯಿ. ಈ ಸಂಪತ್ತನ್ನು ಸುವ್ಯವಸ್ಥಗೊಳಿಸುವುದಕ್ಕೆ ಸಾವಿರಾರು ಖನಿಜ ಮತ್ತು ರಸಾಯನ ಶಿಲ್ಪಿಗಳು (Mining, Metallurgical and Chemical Engineers) ಬೇಕು.

ಈ ದೇಶವು ಸೆಣಬಿನ ತವರುಮನೆ. ಸೆಣಬು, ಸೆಣಬಿನಿಂದ ಆಗುವ ಪದಾರ್ಥಗಳು ಎಲ್ಲಾ ದೇಶಗಳಿಗೂ ರಫ್ತಾಗುತ್ತಿವೆ. ಇಲ್ಲಿ ಕೈಗಾರಿಕೆ ಅಭಿವೃದ್ಧಿಯಾದಷ್ಟೂ ಸೆಣಬಿನ ಪದಾರ್ಥಗಳಿಗೆ ಹೆಚ್ಚು ಉಪಯೋಗ ಬರುತ್ತದೆ. ಹೆಚ್ಚು ಸೆಣಬಿನ ಕಾರ್ಖಾನೆಗಳನ್ನು ದೇಶದಲ್ಲಿ ತೆಗೆಯಬಹುದು.

ಚರ್ಮದ ವ್ಯಾಪಾರದಲ್ಲಿಯೂ ನಮಗೆ ಒಂದು ದೊಡ್ಡ ಸ್ಥಾನವಿದೆ. ನವೀನ ರೀತಿಯಲ್ಲಿ ಯಂತ್ರೋಪಕರಣಗಳಿಂದ ಹದಮಾಡುವ ಕಾರ್ಖಾನೆಗಳು ನಮ್ಮ ದೇಶದಲ್ಲಿ ಜಾಸ್ತಿಯಾದ ಹಾಗೆಲ್ಲ ಇಲ್ಲಿಯ ಚರ್ಮಗಳಿಗೆ ಹೆಚ್ಚು ಬೆಲೆ ಸಿಕ್ಕುವುದು. ಉತ್ತಮ ತರಹದ ಪಾದರಕ್ಷೆಗಳನ್ನು ಈ ದೇಶದಲ್ಲಿ ತಯಾರಿಸಿ, ಇತರ ದೇಶಗಳಿಗೆ ಕಳುಹಿಸಿ ಹೆಚ್ಚು ಹಣ ಸಂಪಾದಿಸಬಹುದು. ನಮ್ಮ ಉಪಯೋಗಕ್ಕೆ ಅಗಾಧವಾದ ಒಳಪೇಟೆಯೂ ಬೆಳೆಯಬಲ್ಲುದು.

ಉಣ್ಣೆ ನಮ್ಮ ಕೈಗಾರಿಕೆಗಳಲ್ಲಿ ಮುಖ್ಯವಾದದ್ದು. ಪ್ರತಿ ವರ್ಷ ಇಲ್ಲಿ ೧೦ ಕೋಟಿ ಪೌಂಡಿನಷ್ಟು ಉಣ್ಣೆ ತಯಾರಾಗುತ್ತಿದೆ. ಇದರಿಂದ ವರ್ಷಕ್ಕೆ ೧೦ ಕೋಟಿ ರೂಪಾಯಿ ಆದಾಯವಾಗಿದೆ. ಗ್ರಾಮ ಕೈಗಾರಿಕೆಯಾಗಿ ವಿದ್ಯುಚ್ಛಕ್ತಿಯಿಂದ ಇದರ ಬೆಳವಣಿಗೆಯನ್ನು ಹೆಚ್ಚು ಮಾಡಬಹುದು.

ಮೀನಿನ ಕೈಗಾರಿಕೆ ಬೆಳವಣಿಗೆಗೂ ಅವಕಾಶವಿದೆ. ಇದರಿಂದ ಔಷಧಕ್ಕೆ, ಪುಷ್ಟಿಗೆ ಬೇಕಾದ ಷಾರ್ಕ್ ಲಿವರ್ ಆಯಿಲ್, ಫಿಷ್ ಲಿವರ್ ಆಯಿಲ್ ತಯಾರುಮಾಡುತ್ತಾರೆ. ಮೀನಿನ ಸಂಪತ್ತನ್ನು ಸರಿಯಾಗಿ ಉಪಯೋಗಿಸಿದರೆ ಆಹಾರ ಸಮಸ್ಯೆಯ ಕಾಠಿಣ್ಯವೂ ಕಡಮೆಯಾಗಬಹುದು. ಸರ್ಕಾರದವರು ಮೀನಿನ ಕ್ಷೇತ್ರಗಳನ್ನು (Nurseries) ಸ್ಥಾಪಿಸಿ ಕೆರೆ, ಕೊಳ, ನದಿಗಳಲ್ಲಿ ಮೀನನ್ನು ಬೆಳಸಬೇಕು. ಇದರ ರಚನೆಗೂ ಶಿಲ್ಪಿಗಳ ಸಹಾಯ ಬೇಕಾಗುವುದು.

ಪಿಂಗಾಣಿ ಕೈಗಾರಿಕೆಯ ಬೆಳವಣಿಗೆಗೆ ಬೇಕಾದ ಸುದ್ದೆ ಮಣ್ಣು (Kaolin) ಈ ಈ ದೇಶದಲ್ಲಿ ಹೇರಳವಾಗಿ ಸಿಕ್ಕುತ್ತದೆ. ವಿದ್ಯುಚ್ಛಕ್ತಿ ಸಹಾಯದಿಂದ ಇದರಲ್ಲಿ ಪಿಂಗಾಣಿ ಸಾಮಾನುಗಳನ್ನು ಮಾಡಬಹುದು. ಎಲೆಕ್ಟ್ರಿಕ್ ಇನ್‌ಸುಲೇಟರ್‌ಗಳು (Electric Insulators) ಪಾತ್ರೆ, ತಟ್ಟೆ, ಬಟ್ಟಲು, ಮುಂತಾದ ಮನೆಗಳಲ್ಲಿ ಉಪಯೋಗಿಸುವ ಸಾಮಾನುಗಳನ್ನು ಮಾಡಬಹುದು.

ಈ ಕೈಗಾರಿಕೆಗಳೆಲ್ಲಾ ಸುಗಮವಾಗಿ ನಡೆಯಬೇಕಾದರೆ ಯಂತ್ರ ಮತ್ತು ಯಂತ್ರೋಪಕರಣ (Machine and Machine-tools) ತಯಾರಿಕೆ ಈ ದೇಶದಲ್ಲೇ ಆಗಬೇಕಾದೀತು. ಇದಕ್ಕೆ ಯಂತ್ರ, ವಿದ್ಯುಚ್ಛಕ್ತಿ, ಲೋಹ ಶಿಲ್ಪಿಗಳ (Mechanical, Electrical, Metallurgical) ಸೇವೆ ಬೇಕು.

ಮೇಲಿನ ವಿವರಣೆಗಳಿಂದ ಒಂದು ಸಂಗತಿ ಈ ವರೆಗೆ ವೇದ್ಯವಾಗಿದ್ದೀತು: ರಾಷ್ಟ್ರ ಜೀವನವನ್ನೇ ಕ್ರಾಂತಿಪಡಿಸುವ ಕೈಗಾರಿಕೆಯೆಂದರೆ ವಿದ್ಯುಚ್ಛಕ್ತಿ. ಇದನ್ನು ಕೈಗಾರಿಕೆಗಳನ್ನು ಪೋಷಿಸುವ ತಾಯಿ ಎಂದರೆ ಅತಿಶಯೋಕ್ತಿಯಾಗದು. ನಮ್ಮ ಮನೆ, ಬೀದಿ, ಗ್ರಾಮ, ನಗರಗಳನ್ನು ಬೆಳಗುವುದು ಮಾತ್ರವಲ್ಲದೆ, ಯಂತ್ರ, ಗಿರಣಿ, ಕಾರ್ಖಾನೆಗಳನ್ನು ನಡಸುವುದಕ್ಕೂ, ಮೂಲ ಕೈಗಾರಿಕೆಗಳನ್ನು (Basic Industries) ಸ್ಥಾಪಿಸುವುದಕ್ಕೂ, ಗ್ರಾಮ ಕೈಗಾರಿಕೆಗಳನ್ನು ಉತ್ತಮಪಡಿಸುವುದಕ್ಕೂ, ವ್ಯವಸಾಯಕ್ಕೆ ಬೇಕಾಗುವ ಪಂಪುಗಳನ್ನು ನಡಸುವುದಕ್ಕೂ, ರೈಲು, ಟ್ರಾಂಗಳನ್ನು ನಡಸುವುದಕ್ಕೂ, ಕಷ್ಟವಾದ ಕೆಲಸಗಳನ್ನು ಸುಲಭವಾಗಿ ಮಾಡುವುದಕ್ಕೂ, ಲೋಹದ ತಯಾರಿಕೆಗೂ ಸಾಧಕವಾಗಿದೆ. ಗಣಿಗಳಿಂದ ಇದ್ದಿಲನ್ನು ದೂರಸ್ಥಳಗಳಿಗೆ ಸಾಗಿಸುವ ಖರ್ಚು ಇಂದು ಬಹಳವಾಗಿದೆ. ವಿದ್ಯುಚ್ಛಕ್ತಿಯನ್ನು

ಎಷ್ಟು ದೂರ ಬೇಕಾದರೂ ಹೆಚ್ಚು ಖರ್ಚಿಲ್ಲದೆ ತರಬಹುದು. ಪರದೇಶದ ಕೈಗಾರಿಕೆಗಳ ಪೈಪೋಟಿಯನ್ನು ತಡೆದುಕೊಳ್ಳಬೇಕಾದರೆ, ನಮ್ಮ ಕೈಗಾರಿಕೆಗಳನ್ನು ವಿದ್ಯುಚ್ಛಕ್ತಿ ಯಿಂದಲೇ ನಡಸಬೇಕು. ಈ ಬೆಳೆವಣಿಗೆಗೆ ಬೇಕಾದ ವಿದ್ಯುಚ್ಛಕ್ತಿಯಂತ್ರಗಳನ್ನೂ, ಉಪಕರಣಗಳನ್ನೂ ನಮ್ಮ ದೇಶದಲ್ಲೇ ತಯಾರಿಸಬೇಕು. ಹೀಗೆ ವಿದ್ಯುಚ್ಛಕ್ತಿಯ ಬೆಳೆವಣಿಗೆಗೆ ವಿಸ್ತಾರವಾದ ಕ್ಷೇತ್ರವಿದೆ. ೨.೭ ಕೋಟಿ ಕಿಲೊವಾಟ್ ಶಕ್ತಿಯನ್ನು ತಯಾರಿಸುವಷ್ಟು ಅವಕಾಶವಿದೆ. ಈಗ ೫ ಲಕ್ಷ ಕಿಲೊವಾಟ್ ಮಾತ್ರ ತಯಾ ರಾಗುತ್ತಿದೆ.

ರಷ್ಯದೇಶದ ಹಳ್ಳಿಗಳನ್ನೆಲ್ಲಾ ವಿದ್ಯುಚ್ಛಕ್ತಿಯಿಂದ ಪ್ರಕಾಶಗೊಳಿಸಬೇಕೆಂಬ ಕನಸು ಲೆನಿನ್ ಮಹಾಶಯರಿಗಿತ್ತು. ಹಾಗೆ ಮಾಡುವುದರಿಂದ ಆ ದೇಶಕ್ಕೆ ಒಂದು ಹೊಸ ತೇಜಸ್ಸು, ನವಶಕ್ತಿ ಉಂಟಾಗುವುದೆಂದು ಅವರು ಅರಿತಿದ್ದರು. ಮೈಸೂರು ಸಂಸ್ಥಾನದ ಆಶ್ರಯದಲ್ಲಿ ಸರ್ ಕೆ. ಶೇಷಾದ್ರಿ ಅಯ್ಯರವರ ದೂರಾಲೋಚನೆಯೂ ರಾಜನೀತಿನೈಪುಣ್ಯವೂ ನಮ್ಮ ದೇಶದಲ್ಲಿ ವಿದ್ಯುಚ್ಛಕ್ತಿಯ ತಯಾರಿಕೆಗೆ ಕಾರಣ ವಾದವು. ಸರ್ ಎಂ. ವಿಶ್ವೇಶ್ವರಯ್ಯನವರು, ಸ್ವತಃ ಶಿಲ್ಪಜ್ಞರಾದ್ದರಿಂದ, ಅಭಿವೃದ್ಧಿ ಯೋಜನೆಯನ್ನು ದೇಶದ ಮುಂದಿಟ್ಟು ತಮ್ಮ ಅಧಿಕಾರಕಾಲದಲ್ಲಿಯೇ ಆ ಯೋಜನೆ ಗಳನ್ನು ಆರಂಭಿಸಿದರು. ಈಗ ಅವರ ಕಾರ್ಯಕ್ಷೇತ್ರ ಇಡಿಯ ಹಿಂದೂಸ್ಥಾನವೆ ಆಗಿದೆ. ತಮ್ಮ ಕಾಲವನ್ನೆಲ್ಲಾ ದೇಶದ ಆರ್ಥಿಕ ಬೆಳೆವಣಿಗೆಯ ಕಾರ್ಯಗಳಿಗೆ ಧಾರೆಯೆರೆದು ಅವರು ಜನತೆಯ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಸರ್ ಮಿರ್ಜಾ ಎಂ. ಇಸ್ಮೇಯಿಲರು ಈ ಕಾರ್ಯವನ್ನು ಅತಿಶಯವಾಗಿ ಮುಂದುವರಿಸಿ ದೇಶದಲ್ಲಿ ಅನೇಕ ಹೊಸ ಕೈಗಾರಿಕೆ ಗಳನ್ನು ಸ್ಥಾಪಿಸಿ, ಮೈಸೂರಿನ ಪ್ರಗತಿಕೀರ್ತಿಗೆ ಕಾರಣರಾಗಿದ್ದಾರೆ.

ಒಟ್ಟಿನಲ್ಲಿ ಶಿಲ್ಪದ ಬೆಳೆವಣಿಗೆಯಿಂದಲೇ ನಾಳಿನ ರಾಷ್ಟ್ರಾಭಿವೃದ್ಧಿಯಾಗಬೇಕು. ಈ ಬೆಳೆವಣಿಗೆಯನ್ನು ಚುರುಕಾಗಿ ಮಾಡುವ ಜವಾಬ್ದಾರಿಯೂ ಗೌರವವೂ ಶಿಲ್ಪಿಗೆ ಸೇರಿದ್ದು.

ಕೆ. ರಾಮಸ್ವಾಮಿ.

ಭಾರತೀಯ ತತ್ವಶಾಸ್ತ್ರದಲ್ಲಿ ಈಚಿನ ಬೆಳವಣಿಗೆಗಳು

ಭಾರತವು ತತ್ವಶಾಸ್ತ್ರದ ತವರು ಮನೆಯೆಂದು ಪ್ರಸಿದ್ಧವಾಗಿದೆ. ಇಲ್ಲಿ ತತ್ವಶಾಸ್ತ್ರವು ಕನಿಷ್ಠಪಕ್ಷ ಸುಮಾರು ನಾಲ್ಕುಸಾವಿರ ವರ್ಷಗಳ ಹಿಂದೆ ಹುಟ್ಟಿತೆಂದು ಹೇಳಬಹುದು. ಕ್ರಿಸ್ತಪೂರ್ವಕ್ಕಾಗಲೇ ಅದು ಪ್ರೌಢದಶೆಯನ್ನು ಮುಟ್ಟಿತ್ತು. ಅಲ್ಲಿಂದ ಒಂದು ಸಾವಿರ ವರ್ಷಗಳ ವರೆಗೆ ಅದರ ಬೆಳವಣಿಗೆ ಸರ್ವತೋಮುಖವಾಗಿದೆ. ವೈದಿಕ ಅವೈದಿಕ ದರ್ಶನಗಳು, ಭೌತವಾದಗಳು, ವಾಸ್ತವವಾದಗಳು, ಜೀವವಾದಗಳು, ಚಿದ್ವಾದಗಳು, ಸೇಶ್ವರವಾದಗಳು, ನಿರೀಶ್ವರವಾದಗಳು, ಆಶಾವಾದಗಳು, ನಿರಾಶಾವಾದಗಳು—ಎಲ್ಲ ವಾದಗಳೂ ತಾಂಡವವಾಡಿವೆ. ಸುಮಾರು ಕ್ರಿಸ್ತಶಕ ಹನ್ನೆರಡು ಹದಿಮೂರನೆಯ ಶತಮಾನದ ಹೊತ್ತಿಗಾಗಲೇ ತತ್ವಾವಲೋಕನದ ಅವನತಿ ಆರಂಭವಾಯಿತೆಂದು ಹೇಳಬಹುದು. ಸುಮಾರು ನಾಲ್ಕೈದು ಶತಮಾನಗಳ ಹಿಂದಿನಿಂದ ಭಾರತೀಯ ತತ್ವದ ಬೆಳವಣಿಗೆ ನಿಂತುಹೋಗಿದೆ. ತತ್ವದಲ್ಲಿ ಮುನ್ನೋಟವಿಲ್ಲ; ಹಿನ್ನೋಟವೇ ಹೆಚ್ಚು. ನಮ್ಮವರ ತತ್ವಾಭ್ಯಾಸ ಹಿಂದಿನ ತತ್ವಗಳ ಪುನಶ್ಚರಣೆಯಾಗಿದೆ. ನಮ್ಮವರ ತತ್ವಗ್ರಂಥಗಳು ಹಿಂದಿನವರ ಗ್ರಂಥಗಳ ಟೀಕೆಗಳೂ ವಿವರಣೆಗಳೂ ಅಥವಾ ಹಿಂದಿನ ದರ್ಶಗಳ ಮಂಡನ ಖಂಡನಗಳೂ ಆಗಿವೆ. ತತ್ವವಿಚಾರವು ಒಂದು ಕಡೆ ಪಂಥಪಂಥಗಳ ಪರಸ್ಪರ ಕಲಹಗಳಾಗಿಯೂ ಇನ್ನೊಂದು ಕಡೆ ಅವಿಚಾರ ರಮಣೀಯವಾದ ಅಥವಾ ನಿರ್ವಿಚಾರವಾದವಾಗಿಯೂ ಪರಿಣಮಿಸಿದೆ. ಹೊರಗಿನಿಂದ ಬಂದು ನಮ್ಮ ತಾತ್ವಿಕಜೀವನವನ್ನು ನೋಡಿದವರು ನಮಗೆ ಸ್ವತಂತ್ರವಾಗಿ ಆಲೋಚಿಸುವ ಶಕ್ತಿಯೇ ಇಲ್ಲವೆಂದು ಹೇಳುವಂತಾಗಿದೆ. ಉಪನಿಷತ್ತುಗಳು, ಭಗವದ್ಗೀತೆ, ವೇದಾಂತ ಸೂತ್ರಗಳು ಮತ್ತು ಅವುಗಳ ಮೇಲೆ ಬೇರೆ ಬೇರೆ ಆಚಾರ್ಯರು ಬರೆದಿರುವ ಭಾಷ್ಯಗಳು—ಇವುಗಳನ್ನು ಬಿಟ್ಟು ಜೀವನಸಮಸ್ಯೆಗಳನ್ನು ಕುರಿತು ಅಥವ ಅಂತರಂಗಪರೀಕ್ಷೆಯ ಆಧಾರದ ಮೇಲೆ ಸ್ವತಂತ್ರವಾಗಿ ತತ್ವವಿಚಾರ ಬೆಳಸುವ ಶಕ್ತಿ ನಮ್ಮಲ್ಲಿ ಉಡುಗಿಹೋಗಿದೆಯಲ್ಲವೆ ಎಂದು ನಮ್ಮನ್ನೇ ನಾವು ಪ್ರಶ್ನೆಮಾಡಿಕೊಳ್ಳುವಂತಾಗಿದೆ.

ಆದರೆ ಈಗ ಸುಮಾರು ಅರ್ಧಶತಮಾನದಿಂದೀಚೆಗೆ ಅಲ್ಲೊಂದು ಕಡೆ ಇಲ್ಲೊಂದು ಕಡೆ ಭಾರತದ ತತ್ವ ಹೊಸತಾಗಿ ಚೇತನಗೊಳ್ಳುತ್ತಿದೆ. ಸ್ವಾಮಿ ವಿವೇಕಾನಂದರು, ರವೀಂದ್ರನಾಥ ಠಾಕೂರರು, ಮಹಾತ್ಮಗಾಂಧಿಯವರು ನವತತ್ವ

ಪ್ರಚೋದನೆಗೆ ಕಾರಣರಾಗಿರುತ್ತಾರೆ. ಭಾರತೀಯರ ಜೀವನಾಂತರಾಳದಲ್ಲಿ ಹುಟ್ಟಿದ ಮೂಗುಬ್ಬಸಗಳು ಇವರ ಅಂತಃಕರಣದಲ್ಲಿ ಅನುಕಂಪಿಸಿ ಇವರ ಆತ್ಮ ಎಚ್ಚತ್ತು ಹೊಸತತ್ವದ ಅರುಣೋದಯವಾಗುತ್ತಿದೆ.

ಸ್ವಾಮಿ ವಿವೇಕಾನಂದರು ಹಿಡಿದೆತ್ತಿದ ಸಿದ್ಧಾಂತ ಹೊಸತೇನೂ ಅಲ್ಲ. ಸಾವಿರ ವರ್ಷಗಳಿಂದಲೂ ಪ್ರಚಾರದಲ್ಲಿದ್ದ ಶಂಕರಾಚಾರ್ಯರ ಅದ್ವೈತತತ್ವ. ಆದರೆ ಅದರಲ್ಲಿ ಅಡಗಿದ್ದ ವಿಶಾಲವಾದ ಮತ ಮೀಮಾಂಸಾತತ್ವವನ್ನು ಪ್ರಕಾಶಕ್ಕೆ ತಂದುದು ಇವರು ಮಾಡಿದ ಮಹಾಕಾರ್ಯ. ಈ ತತ್ವ ಪ್ರಖ್ಯಾತವಾದ ವಿಶ್ವಮತತತ್ವ[1]. ಮತಗಳು ಬೇರೆ ಬೇರೆಯಾದರೂ ಅವುಗಳ ಬೆಳವಣಿಗೆ ವಿವಿಧವಾಗಿದ್ದರೂ ಎಲ್ಲ ಮತಗಳಿಗೂ ಅಡಿಪಾಯವಾದ ಪೂಜ್ಯ ಭಾವನೆ ಒಂದೇ. ಅವು ಆರಾಧಿಸುವ ದೇವರುಗಳು ಹಲವಾದರೂ ಅವುಗಳ ಸತ್ವ ಒಂದೇ. ಆದುದರಿಂದ ಬೇರೆಬೇರೆ ಮತದವರು ಒಬ್ಬರು ಮತ್ತೊಬ್ಬರ ಮತವನ್ನು ತೆಗಳಬಾರದು. ಅವುಗಳನ್ನು ತಿಳಿಯಲು ಪ್ರಯತ್ನಿಸಬೇಕು. ಹಾಗೆ ಮಾಡುವುದರಿಂದ ಒಬ್ಬೊಬ್ಬರ ಮತಭಾವವು ಗಾಢವೂ ವಿಶಾಲವೂ ಆಗುವುದು. ನಾವು ಆರಾಧಿಸುವ ದೇವತೆಗಳಲ್ಲೇ ಒಂದು ಹೊಸಕಾಂತಿ ಕಾಣುವೆವು. ಇದರಿಂದ ಎಲ್ಲ ಮತಗಳೂ ಉದಾತ್ತವಾಗುತ್ತವೆ, ಎಲ್ಲರೂ ಉದ್ಧಾರವಾಗುತ್ತಾರೆ. ಇದು ಮತ ಮೀಮಾಂಸೆಯಲ್ಲಿ ಚಿರವಾಗಿ ನಿಲ್ಲಬಹುದಾದ ಪರಮೋತ್ಕೃಷ್ಟ ತತ್ವ. ಇದನ್ನು ಬೋಧಿಸಿದ ಹಿರಿಮೆ ವಿವೇಕಾನಂದರದು. ಇವರ ತತ್ವೋಪದೇಶ ಪಾಶ್ಚಾತ್ಯರ ಮನಸ್ಸನ್ನು ಸೂರೆಗೊಂಡಂತೆ ನಮ್ಮ ದೇಶದವರ ಮನಸ್ಸನ್ನು ಸೂರೆಗೊಳ್ಳಲಿಲ್ಲ. ಭಾರತೀಯರಲ್ಲಿ ಈ ತತ್ವ ಮೂಡಿ ಬೇರೆಬೇರೆ ಮತದವರಲ್ಲಿ ಸೌಹಾರ್ದ ಬೆಳೆದಿಲ್ಲ. ಹಿಂದೂಗಳು ಮುಸಲ್ಮಾನರ ಮತವನ್ನು ತಿಳಿಯಲಿಲ್ಲ; ಅವರ ಮತದ ವಿಚಾರವಾಗಿ ನಮ್ಮಲ್ಲಿ ಪೂಜ್ಯ ಭಾವನೆ ಹುಟ್ಟಲಿಲ್ಲ. ಹಾಗೆಯೇ ಮುಸಲ್ಮಾನರಿಗೂ ಹಿಂದೂ ಮತದಲ್ಲಿ ಪೂಜ್ಯಭಾವನೆ ಹುಟ್ಟಲಿಲ್ಲ. ಇದರಿಂದ ಹಿಂದೂಗಳ ಮತ ಭಾವನೆಯೂ ಬೆಳಗಲಿಲ್ಲ, ಬೆಳೆಯಲಿಲ್ಲ, ಮುಸಲ್ಮಾನರ ಮತ ಭಾವನೆಯೂ ಬೆಳಗಲಿಲ್ಲ ಬೆಳೆಯಲಿಲ್ಲ. ತಮ್ಮ ಮತಗಳ ಮೂಲಕ ಅವರ ಮನಸ್ಸು ಶುಚಿಯಾಗುವುದರ ಬದಲು ಅದು ಕಲಕಿ ಬದಿಯಾಗಿದೆ. ತನ್ನ ದೇವರನ್ನು ನಿಜವಾಗಿ ಕಂಡ ಹಿಂದುವು ಮುಸಲ್ಮಾನರ ದೇವರನ್ನು ಕಾಣದಿರನು ; ಅದನ್ನು ಪೂಜ್ಯ ಭಾವನೆಯಿಂದ ನೋಡದಿರನು. ಹಾಗೆಯೇ ತನ್ನ ದೇವರನ್ನು ಪ್ರೀತಿಸುವ ಮುಸಲ್ಮಾನನು ಹಿಂದೂಗಳ ದೇವರನ್ನು ಪ್ರೀತಿಸದಿರಲಾರನು. ಪರಿಮಳವನ್ನು ಸವಿದ ರಸಿಕನು, ಪರಿಮಳವು ಯಾವ ಹೂವಿನಲ್ಲಿದ್ದರೂ ಅದನ್ನು ಸ್ವಾದಿಸಿ ಆನಂದಪಡುವನು. ಹೂವಿನ

[1] ಈ ವಿಚಾರವನ್ನು ಸ್ವಲ್ಪ ವಿಶದವಾಗಿ ತಿಳಿಯಲಪೇಕ್ಷಿಸುವವರು "ಸಂಭಾವನೆ" ಯಲ್ಲಿ ಪ್ರಕಟವಾಗಿರುವ "ವಿಶ್ವಮತ" ಎಂಬ ಹೆಸರಿನ ಲೇಖನವನ್ನು ಓದಬಹುದು.

ಗಂಧವನ್ನೇ ತಿಳಿಯದವನಿಗೆ ತನ್ನ ದೇಶದ ಹೂಗಳಲ್ಲೂ ಅಭಿರುಚಿಯಿಲ್ಲ ಇತರರದರಲ್ಲಿಯೂ ಅಭಿರುಚಿಯಿಲ್ಲ. ಪರಿಮಳದ ವೈವಿಧ್ಯವನ್ನೂ ವೈಚಿತ್ರ್ಯವನ್ನೂ ಕಂಡವನಲ್ಲಿ ರಸಜ್ಞತೆ ಬೆಳೆಯುವುದು. ಹಿಂದುವು ತನ್ನ ವೇದಗಳನ್ನು ತಿಳಿದುದಲ್ಲದೆ ಕೊರಾನನ್ನೂ ತಿಳಿದುಕೊಂಡರೆ ಅವನ ಮತಭಾವನೆ ಪುಷ್ಟಿಗೊಂಡು ಅವನು ಇನ್ನೂ ಉತ್ತಮವಾದ ಹಿಂದುವಾಗುವನು. ಹಾಗೆಯೇ ಮುಸಲ್ಮಾನನು ಕೂಡ ಕೊರಾನನ್ನೂ ತಿಳಿದುದಲ್ಲದೆ ವೇದಗಳನ್ನೂ ತಿಳಿಯುವುದರಿಂದ ಅವನು ಇನ್ನೂ ಉತ್ತಮನಾದ ಮುಸಲ್ಮಾನನಾಗುತ್ತಾನೆ. ಹಿಂದೂಗಳೂ ಮುಸಲ್ಮಾನರೂ ಒಬ್ಬರ ಮೂಲಕ ಒಬ್ಬರು, ಒಬ್ಬರ ನೆರೆಯಿಂದ ಒಬ್ಬರು ಉದ್ಧಾರವಾಗುತ್ತಾರೆ. ಈ ತತ್ವದ ಘೋಷಣೆ ಸ್ಪಷ್ಟವಾಗಿದೆ. ಆದರೆ ಭಾರತೀಯ ಹಿಂದೂಗಳ ಮತ್ತು ಮುಸಲ್ಮಾನರ ಕಿವಿಗಳು ಇನ್ನೂ ಕಿವುಡಾಗಿಯೇ ಇವೆ.

ತತ್ವಜ್ಞಾನವನ್ನು ಎಚ್ಚರಗೊಳಿಸಿದವರಲ್ಲಿ ರವೀಂದ್ರನಾಥ ಠಾಕೂರರು ಎರಡನೆಯವರು. **"ಸಾಧನ"** ಎಂಬ ಇವರ ತತ್ವ ಗ್ರಂಥವನ್ನು ಇಂಗ್ಲೀಷಿನಲ್ಲಿ ಕೆಲವರು ಕನ್ನಡಿಗರು ಓದಿರುತ್ತಾರೆ. ಆದರೆ ಕನ್ನಡವನ್ನು ಮಾತ್ರವೇ ತಿಳಿದಿರುವ ಕನ್ನಡಿಗರಿಗೆ ಅದನ್ನು ಓದುವ ಸುಯೋಗ ಇನ್ನೂ ದೊರೆತಿಲ್ಲ. ಇವರ ಸೌಂದರ್ಯ ಮೀಮಾಂಸೆಯ ಭಾಗಗಳು ಮಾತ್ರ ಕೆಲವು ಕನ್ನಡಕ್ಕೆ ಭಾಷಾಂತರವಾಗಿವೆ. "ಪರ್ಸನ್ಯಾಲಿಟಿ," "ನ್ಯಾಷನಲಿಸಂ", "ದಿ ರಿಲಿಜನ್ ಆಫ್ ಮ್ಯಾನ್"—ಇವು ಇವರ ತತ್ವಗ್ರಂಥಗಳು. ಮೊದಲನೆಯದರಲ್ಲಿ ಅವರು ಬೋಧಿಸಿದ ಆತ್ಮತತ್ವವೂ, ಎರಡನೆಯದರಲ್ಲಿ ಅವರು ಬೋಧಿಸಿದ ರಾಷ್ಟ್ರ ತತ್ವವೂ, ಮೂರನೆಯದರಲ್ಲಿ ಅವರು ಬೋಧಿಸಿದ ಮತತತ್ವವೂ ಅಡಗಿವೆ.

ಠಾಕೂರರು ತಮ್ಮ ಗ್ರಂಥಗಳಲ್ಲಿ ಉಪನಿಷತ್ತಿನ ತತ್ವವನ್ನು ಹೊಸರೀತಿಯಲ್ಲಿ ಆಧುನಿಕರ ಮನಸ್ಸನ್ನು ಸೆಳೆಯುವಂತೆ ಮನೋಹರವಾದ ರೀತಿಯಲ್ಲಿ ಪ್ರತಿಪಾದಿಸಿದ್ದಾರೆ. ಠಾಕೂರರ ತತ್ವ ಭಾರತೀಯರ ತತ್ವವಾದರೂ ಅದನ್ನು ಹಳೆಯ ಸಂಪ್ರದಾಯದಲ್ಲಿ ಬೆಳೆದ ಪಂಡಿತರು ಭಾರತೀಯ ತತ್ವವೆಂದು ಎಣಿಸುವುದಿಲ್ಲ. ಇದು ಹೂಣ ಸಂಸ್ಕೃತಿಯಿಂದ ಹುಟ್ಟಿದುದೆಂದು ತಿಳಿಯುವರು. ಠಾಕೂರರ ಗ್ರಂಥಗಳಲ್ಲಿ ಪಾಶ್ಚಾತ್ಯರ ಸಂಸ್ಕೃತಿಯ ಛಾಯೆ ಇದೆ. ಆದರೆ ಆಧುನಿಕ ಭಾರತೀಯನಾದವನು ಯಾವನೂ ಪಾಶ್ಚಾತ್ಯರ ಸಂಸ್ಕೃತಿಗೆ ಬಾಹಿರನಾಗಿ ಇರಲಾರನು, ಇರಬಾರದು. ಆಧುನಿಕ ಭಾರತೀಯ ಸಂಸ್ಕೃತಿ ಇತರ ಜನರ ಸಂಸ್ಕೃತಿಯ ಸಂಪರ್ಕವಿಲ್ಲದೆ ಮಡಿಯಾಗಿ ಇರಲು ಸಾಧ್ಯವಿಲ್ಲ. ಹಾಗಿರುವುದು ಅದಕ್ಕೆ ಹಾನಿಕರ. ಠಾಕೂರರ ತತ್ವ ಮಡಿಯ ತತ್ವವಲ್ಲದಿದ್ದರೂ ಅದು ನಿಜವಾಗಿಯೂ ಭಾರತೀಯ ತತ್ವ. ಭಾರತೀಯರು ಮುಂದುವರಿಯಬೇಕಾದರೆ ಅಂಥಾ ತತ್ವದ ಮೂಲಕ. ಮಡಿಯ ತತ್ವಕ್ಕೆ ಜೀವಶಕ್ತಿಯಿಲ್ಲ;

ಅದರಿಂದ ಮುನ್ನಡೆ ಸಾಗದು. ಅದಿರುವವರೆಗೂ ನಾವು ಅಸ್ಪೃಶ್ಯತೆಯ ಕಶ್ಮಲದಲ್ಲಿ ಉಳಿಯಬೇಕಾಗುತ್ತದೆ.

ರವೀಂದ್ರರ ಮತತತ್ವ, ಅವರ ಮತ ವಿಮಾಂಸೆಯ ಪುಸ್ತಕವಾದ "ದಿ ರಿಲಿಜನ್ ಆಫ್ ಮ್ಯಾನ್" ಎಂಬ ಹೆಸರೇ ಸೂಚಿಸುವಂತೆ, ಅಖಿಲ ಮಾನವ ಜಾತಿಗೇ ಮಂಗಳದಾಯಕವಾದ ತತ್ವ. ಅದರಲ್ಲಿ ಬುಡಕಟ್ಟುಗಳ, ಜನಾಂಗಗಳ, ಕೋಮುಗಳ ಭೇದ ಭಾವಗಳಿಗೆ ಎಡೆಯಿಲ್ಲ. ಅದು ಸ್ವಚ್ಛವಾದ ಆತ್ಮ ತತ್ವ. ಇವರ ಮತ ತತ್ವವನ್ನು ಓದಿದ ಪಾಶ್ಚಾತ್ಯರು ಅದಕ್ಕೆ ಮನಸೋತಿರುವರು; ಭಾರತೀಯ ಸಂಸ್ಕೃತಿಯನ್ನು ಗೌರವಿಸಿರುವರು. ಆದರೆ ಅವರು ಭಾರತಕ್ಕೆ ಬಂದು ಭಾರತೀಯರ ಮತಾಚಾರಗಳನ್ನೂ ಮತ ಸಂಸ್ಥೆಗಳನ್ನೂ ನೋಡಿದಾಗ ಅವರು ಬೇಸರಪಟ್ಟಿದ್ದಾರೆ. ಭಾರತೀಯರಲ್ಲಿ ಅವರಿಗೆ ಹುಟ್ಟಿದ್ದ ಪೂಜ್ಯಭಾವನೆ ಹೋಗಿ ಕನಿಕರ ಹುಟ್ಟಿದೆ.

ರವೀಂದ್ರರ ತತ್ವ ಎಷ್ಟೇ ಆಧುನಿಕವಾದರೂ ಅದರಲ್ಲಿ ಭಾರತೀಯ ಮನೋಭಾವದ ಒಂದು ದೋಷ ಮಾತ್ರ ಎದ್ದು ಕಾಣುವುದು. ಪಾಶ್ಚಾತ್ಯ ಆರ್ಥಿಕ ಜೀವನದ ವಿಚಾರವಾಗಿ, ಯಂತ್ರಗಳ ವಿಚಾರವಾಗಿ, ಅವುಗಳನ್ನು ಉಪಯೋಗಿಸಿಕೊಂಡು ನಡೆಸುವ ಕಾರ್ಖಾನೆಗಳ ವಿಚಾರವಾಗಿ ಅವರ ದೃಷ್ಟಿ ಸ್ವಲ್ಪ ಸಂಕುಚಿತವಾಗಿದೆ ಆಧುನಿಕ ಪಾಶ್ಚಾತ್ಯ ಜೀವನವನ್ನು ಕೇವಲ ಭೌತ ಸಂಸ್ಕೃತಿಯೆಂದೂ ಅವರ ಕೈಗಾರಿಕೆಯ ಜೀವನ ಅಪವಿತ್ರವಾದುದೆಂದೂ ಕಟುವಾಗಿ ಟೀಕಿಸಿರುತ್ತಾರೆ. ಪಾಶ್ಚಾತ್ಯ ಆರ್ಥಿಕ ಜೀವನದಲ್ಲಿರುವ ಅನೇಕ ದೋಷಗಳನ್ನು ತೋರಿಸುವುದಕ್ಕಾಗಿ ಅವರನ್ನು ಯಾರೂ ಅಕ್ಷೇಪಿಸಬೇಕಾದುದಿಲ್ಲ. ಆದರೆ ಅದೇ ಪ್ರಮಾಣದಲ್ಲಿ ಅದರಲ್ಲಿರುವ ಗುಣಗಳನ್ನು ಗ್ರಹಿಸಿರುವುದಿಲ್ಲ. ಆಧುನಿಕ ಜನಾಂಗ ಯಾವುದೂ ಯಂತ್ರಗಳನ್ನು ಬಿಟ್ಟು ಬಾಳುವುದಕ್ಕಾಗುವುದಿಲ್ಲ. ದೊಡ್ಡ ಕೈಗಾರಿಕೆಯ ಯಂತ್ರಗಳನ್ನು ನಡೆಸದೆ ಬಾಳುವುದಕ್ಕಾಗುವುದಿಲ್ಲ. ಸಾವಿರಾರು ಜನರು ಸೇರಿ ಕೆಲಸ ಮಾಡುವ ವ್ಯವಸ್ಥೆ ಮಾಡಬೇಕಾದುದು ಅತ್ಯಾವಶ್ಯಕ. ದೊಡ್ಡದೊಡ್ಡ ಯಂತ್ರಗಳೂ ಕಾರ್ಖಾನೆಗಳೂ ನಮ್ಮ ಜೀವನಕ್ಕೆ ಬೇಕಾದ ಅಂಗಗಳು. ಅವುಗಳನ್ನು ನಡೆಸುವುದರಲ್ಲಿ ಲೋಪದೋಷಗಳಿರಬಹುದು. ಅವುಗಳಿಂದ ಅನೇಕ ಸಾಮಾಜಿಕರೋಗರುಜಿನಗಳು ಹುಟ್ಟಿರಬಹುದು. ಆದರೆ ಯಂತ್ರಗಳೂ ಕೈಗಾರಿಕೆಯ ಕೇಂದ್ರ ಗಳೂ ಅವಕ್ಕೆ ಕಾರಣಗಳಲ್ಲ; ಅವುಗಳನ್ನು ನಡೆಸುವ ಜನರ ನೀತಿ ನಡವಳಿಕೆಗಳು ಅವಕ್ಕೆ ಕಾರಣ. ಯಂತ್ರವಿದ್ಯೆಗೆ ಸಮನಾಗಿ ಆತ್ಮವಿದ್ಯೆ, ವೈಯಕ್ತಿಕ ಮತ್ತು ಸಾಮಾಜಿಕ ನೀತಿರೀತಿಗಳು ಬೆಳೆದಿಲ್ಲ. ಇವುಗಳನ್ನು ಬೆಳೆಯಿಸಲು ಈಗ ಪಾಶ್ಚಾತ್ಯ ತತ್ವಜ್ಞರು ಪ್ರಯತ್ನಮಾಡುತ್ತಿದ್ದಾರೆ.

ಭಾರತೀಯರ ತತ್ವಪ್ರಚೋದನೆಗೆ ಕಾರಣರಾದವರಲ್ಲಿ ಮಹಾತ್ಮ ಗಾಂಧಿಯವರು

ಮೂರನೆಯವರು. ತತ್ವವನ್ನು ಆತ್ಮಶೋಧನೆಯ ಮೂಲಕ ಅರಿತುಕೊಳ್ಳುವುದು, ತಾವು ತಿಳಿದುಕೊಂಡ ತತ್ವಗಳ ಸತ್ವವನ್ನು ಅನುಷ್ಠಾನದ ಒರೆಗಲ್ಲಿಗೆ ಹಚ್ಚಿನೋಡು ವುದು ಅವರ ಮಾರ್ಗದ ವೈಶಿಷ್ಟ್ಯ. ಮಹಾತ್ಮ ಗಾಂಧಿಯವರು ಬೋಧಿಸಿರುವ ತತ್ವ ಅಹಿಂಸಾತತ್ವ. "ಅಹಿಂಸಾಪರಮೋಧರ್ಮಃ" ಎಂಬುದು ಹೊಸ ತತ್ವವೇನೂ ಅಲ್ಲ. ಆದರೆ ಅದನ್ನು ಅವರು ಪ್ರತಿಪಾದಿಸಿರುವ ರೀತಿ, ಅದನ್ನು ವೈಯಕ್ತಿಕ ಮತ್ತು ಸಾಮೂಹಿಕ ಸ್ವಾತಂತ್ರ್ಯ ಸಾಧನೆಗಾಗಿ ಉಪಯೋಗಿಸಿಕೊಂಡಿರುವ ಕ್ರಮ ಹೊಸ ತಾದುವು. ಇವರ ತತ್ವದಲ್ಲಿ ಭಾರತೀಯರ ದೃಷ್ಟಿವೈಶಿಷ್ಟ್ಯವಿದೆ ಹಾಗೂ ಅಂತ ರ್ರಾಷ್ಟ್ರೀಯ ತತ್ವವಾಗುವಷ್ಟು ವೈಶಾಲ್ಯವಿದೆ.

ಈ ಮೂವರೂ ತತ್ವ ಪ್ರಚೋದನೆಗೆ ಕಾರಣರಾದರೂ ಇವರ ಮಾತು ಭಾರತದ ಎಲ್ಲೆಯನ್ನು ದಾಟಿ ವಿಶ್ವವ್ಯಾಪಕವಾದುದಾದರೂ ಇವರುಗಳನ್ನು ತತ್ವಶಾಸ್ತ್ರಜ್ಞ ರೆಂದು ಹೇಳುವುದಕ್ಕಾಗುವುದಿಲ್ಲ. ಅವರ ಬರವಣಿಗೆಗಳು ತತ್ವಶಾಸ್ತ್ರ ಗ್ರಂಥಗಳೆಂದು ಹೇಳಲಾಗುವುದಿಲ್ಲ. ಆಧುನಿಕ ಭಾರತೀಯರಲ್ಲಿ ತತ್ವಶಾಸ್ತ್ರಜ್ಞರೆಂದು ಹೇಳಬಹು ದಾದವರು ಸರ್ ಡಾಕ್ಟರ್ ಸಾರ್ವಪಲ್ಲಿ ರಾಧಾಕೃಷ್ಣನ್ ಅವರು. ಇವರು ಪಾಶ್ಚಾತ್ಯ ಮತ್ತು ಪೌರಸ್ತ್ಯ ತತ್ವ ಚರಿತ್ರೆಯ ಜೀವಾಳವನ್ನು ಕಂಡ ನುರಿತ ಶಾಸ್ತ್ರಜ್ಞರು. ಇವರು ತಮ್ಮ ರೇನ್ ಆಫ್ ರಿಲಿಜನ್ ಇನ್ ಕಂಟೆಂಪೊರರಿ ಫಿಲಾಸಫಿ ಎಂಬ ಗ್ರಂಥದಲ್ಲಿ ಇಂದಿನ ಪಾಶ್ಚಾತ್ಯ ದರ್ಶನಗಳನ್ನು ವಿಮರ್ಶೆ ಮಾಡಿರುತ್ತಾರೆ. ಭಾರ ತೀಯ ದರ್ಶನಗಳನ್ನು ಆಕರ್ಷಣೀಯವಾದ ಹಾಗೂ ತತ್ವಶಾಸ್ತ್ರ ಮರ್ಯಾದೆಗನು ಸಾರವಾಗಿ ಪ್ರತಿಪಾದಿಸುವುದರಲ್ಲಿ ಅದ್ವಿತೀಯ[1] ಪ್ರತಿಭೆಯನ್ನು ತೋರಿಸಿದ್ದಾರೆ. ಪಾಶ್ಚಾತ್ಯ ವಿಶ್ವವಿದ್ಯಾನಿಲಯಗಳ ಆಶ್ರಯದಲ್ಲಿ ಹಿಂದೂ ಧರ್ಮವನ್ನೂ, ಧ್ಯೇಯಾ ತ್ಮಕ ಜೀವನದೃಷ್ಟಿಯನ್ನೂ ಕುರಿತು ಅನೇಕ ಉಪನ್ಯಾಸಗಳನ್ನು ಕೊಟ್ಟು ಅವುಗಳ ಮೆಚ್ಚಿಗೆಯನ್ನು ಪಡೆದಿದ್ದಾರೆ.

---

[1] ಈ ಮೂವರಲ್ಲದೆ ಅರವಿಂದಘೋಷರ ಹೆಸರನ್ನು ಇಲ್ಲಿ ಹೇಳದಿದ್ದರೆ ಅದು ಒಂದು ಲೋಪ ವಾಗಿ ಪರಿಗಣಿಸಲ್ಪಡಬಹುದು. ಅರವಿಂದ ಘೋಷರು ಗೀತೆಯ ಮೇಲೆ ಬರೆದಿರುವ ಲೇಖನಗಳೂ "ಲೈಫ್ ಡಿವೈನ್" ಎಂಬ ಇವರ ಬಹು ವಿಸ್ತಾರವಾದ ಗ್ರಂಥವೂ ಅನೇಕ ಭಾರತೀಯರ ಮನ್ನಣೆಗೆ ಪಾತ್ರವಾಗಿವೆ. ದಿ ಟೈಮ್ಸ್ ಲಿಟರೆರಿ ಸಪ್ಲಿಮೆಂಟ್ ಎಂಬ ಪ್ರಖ್ಯಾತವಾದ ಆಂಗ್ಲೇಯ ಪತ್ರಿಕೆಯ ೧೯೪೪ ನೆಯ "ಜುಲೈ ೮ ರ ಸಂಚಿಕೆಯಲ್ಲಿ "ಲೈಫ್ ಡಿವೈನ್" ಗ್ರಂಥವನ್ನು ಪ್ರಶಂಸಿಸಿ ಲೇಖನ ವೊಂದು ಬಂದಿದೆ. ಅರವಿಂದಘೋಷರು ಈ ಗ್ರಂಥದಲ್ಲಿ ಪಾಶ್ಚಾತ್ಯ ಮತ್ತು ಪೌರಸ್ತ್ಯ ತತ್ವಗಳನ್ನು ಸಮನ್ವಯ ಮಾಡಿರುತ್ತಾರೆಂದು ಅದರ ಲೇಖಕರು ಅಭಿಪ್ರಾಯಪಡುತ್ತಾರೆ. ಈ ಗ್ರಂಥದಲ್ಲಿ ನನ್ನ ಮನಸ್ಸು ನಾಟಲಿಲ್ಲವಾದುದರಿಂದ ಇದರ ವಿಚಾರವಾಗಿ ನಾನೊಂದು ಮಾತನ್ನೂ ಆಡುವ ಅಧಿಕಾರ ಪಡೆಯುವಷ್ಟು ವ್ಯಾಸಂಗ ಮಾಡಲಾಗಲಿಲ್ಲ. ಆದುದರಿಂದ ಅದರ ವಿಚಾರವಾಗಿ ನಾನು ಬರೆಯಲಾರೆ.

ಇವರಲ್ಲದೆ ಪ್ರೊಫೆಸರ್ ಎಂ. ಹಿರಿಯಣ್ಣನವರು, ಡಾ. ಸುರೇಂದ್ರನಾಥ ದಾಸ್ ಗುಪ್ತರು ಭಾರತೀಯ ದರ್ಶನಗಳ ಚರಿತ್ರೆಗಳನ್ನು ಬರೆದು ಭಾರತಕ್ಕೆ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ. ಭಾರತದ ಬೇರೆಬೇರೆ ವಿಶ್ವವಿದ್ಯಾನಿಲಯಗಳಲ್ಲಿ ತತ್ವಶಾಸ್ತ್ರಾಧ್ಯಾಪಕರು ಭಾರತೀಯ ದರ್ಶನಗಳನ್ನು ಪಾಶ್ಚಾತ್ಯ ತತ್ವದೃಷ್ಟಿಯಿಂದಲೂ ಪಾಶ್ಚಾತ್ಯ ದರ್ಶನಗಳನ್ನೂ ಭಾರತೀಯ ತತ್ವ ದೃಷ್ಟಿಯಿಂದಲೂ ವಿಚಾರಮಾಡತೊಡಗಿರುತ್ತಾರೆ. ಇವರ ಮನಸ್ಸಿನ ಮೇಲೆ ಈಚಿನ ಕೆಲವು ಪಾಶ್ಚಾತ್ಯ ದರ್ಶನಗಳು ಬಹಳ ಪರಿಣಾಮಕಾರಿಗಳಾಗಿವೆ. ಇವು ಇಂದೂ ಇನ್ನು ಮುಂದೆಯೂ ಭಾರತೀಯ ತತ್ವದ ಬೆಳವಣಿಗೆಗೆ ಕಾರಣವಾಗಿರಬಹುದಾದುದರಿಂದ ಇವುಗಳಲ್ಲಿ ಮುಖ್ಯವಾದುವಕ್ಕೆ ಇಲ್ಲಿ ಗಮನಕೊಡಬಹುದು.

ಭಾರತೀಯರ ಮನಸ್ಸನ್ನು ಸೂರೆಗೊಂಡ ಪಾಶ್ಚಾತ್ಯ ತತ್ವವೆಂದರೆ ಜರ್ಮನ್ ತಾತ್ವಿಕನಾದ ಹೆಗೆಲಿನ ತತ್ವ. ಈಗ ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಪಾಠ ಹೇಳುವವರಲ್ಲಿ ಸೇಕಡ ೭೦ ರಷ್ಟು ಹೆಗೆಲ್ ಅನುಯಾಯಿಗಳಿರಬಹುದು. ಇವನ ತತ್ವ ಭಾರತೀಯರಿಗೆ ಅಷ್ಟು ಪ್ರಿಯವಾಗಿರುವುದಕ್ಕೆ ಕಾರಣ ಹುಡುಕುವುದೇನು ಕಷ್ಟವಲ್ಲ. ಅವನ ತತ್ವಕ್ಕೂ ವೇದಾಂತ ತತ್ವಕ್ಕೂ ನಿಕಟ ಸಂಬಂಧವಿದೆ. ನಮ್ಮ ದೇಶದಲ್ಲಿ ವೇದಾಂತ ಅಗ್ರಸ್ಥಾನವನ್ನು ಪಡೆದಿದೆಯಾದುದರಿಂದ ನಮ್ಮವರ ಮನಸ್ಸು ಹೆಗೆಲಿನ ತತ್ವದ ಕಡೆ ಬಾಗಿದುದೇನೂ ಆಶ್ಚರ್ಯವಲ್ಲ. ಹೆಗೆಲಿನ ತತ್ವ ಚಿತ್ಪಾರಮ್ಯವಾದ. ಇದರ ಪ್ರಭಾವ ಈಚೆಗೆ ಪಾಶ್ಚಾತ್ಯದೇಶಗಳಲ್ಲಿ ಕುಂದುತ್ತಿದೆ, ಭಾರತದಲ್ಲೂ ಅದು ಇಳಿಮುಖವಾಗಿದೆ. ಹೆಗೆಲಿನ ತತ್ವದಿಂದ ಬೇರೆಯಾದ ಮತ್ತು ಅನೇಕ ಅಂಶಗಳಲ್ಲಿ ಅದಕ್ಕೆ ವಿರುದ್ಧವಾದ ದರ್ಶನಗಳು ಮುಂದಕ್ಕೆ ಬರುತ್ತಿವೆ. ಇವು ಆತನ ತತ್ವಕ್ಕೆ ವಿರುದ್ಧವಾದುದರಿಂದ ವೇದಾಂತ ತತ್ವಕ್ಕೂ ವಿರುದ್ಧವಾಗಿವೆಯೆಂದು ಹೇಳಬಹುದು. ಇವುಗಳಲ್ಲಿ ಮೂರನ್ನು ಇಲ್ಲಿ ಸೂಚಿಸಬಹುದು.[1]

ಮೊದಲನೆಯದು ವಾಸ್ತವವಾದ (Realism). ಇದರಲ್ಲಿ ಮುಖ್ಯವಾಗಿ ಎರಡು ಪಂಗಡಗಳಿವೆ. ನೂತನ ವಾಸ್ತವವಾದಿ (Neo Realist) ಗಳದು ಒಂದು; ವಿಮರ್ಶಾತ್ಮಕ ವಾಸ್ತವವಾದಿ (Critical Realists) ಗಳದು ಇನ್ನೊಂದು. ಈ ಎರಡು ಪಂಗಡಗಳವರ ತತ್ವಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯಗಳಿದ್ದರೂ ಇವರಿಬ್ಬರೂ ಹೆಗೆಲಿನ ತತ್ವವನ್ನು ಖಂಡಿಸುವುದರಲ್ಲಿ ಒಂದಾಗಿದ್ದಾರೆ. ವಾಸ್ತವವಾದ ಮೊಟ್ಟಮೊದಲು ವಿಚಾರ

[1] ಇಲ್ಲಿ ಅದಕ್ಕಿಂತಲೂ ಹೆಚ್ಚಾಗಿ ಹೇಳಲು ಅವಕಾಶವಿಲ್ಲ. ಹೆಚ್ಚು ವಿಷಯಗಳನ್ನು ತಿಳಿಯಲಪೇಕ್ಷಿಸುವವರು ಇನ್ನು ಸ್ವಲ್ಪ ದಿವಸಗಳಲ್ಲೇ ಮೈಸೂರು ವಿಶ್ವವಿದ್ಯಾನಿಲಯದವರು ಪ್ರಕಟಿಸುವ "ಆಧುನಿಕ ತತ್ವಶಾಸ್ತ್ರ ಸಮಸ್ಯೆಗಳು" ಎಂಬ ಗ್ರಂಥವನ್ನು ನೋಡಬಹುದು.

ಮಾಡತೊಡಗಿದ ಸಮಸ್ಯೆಗಳು ಜ್ಞಾನಮೀಮಾಂಸೆಯ ಸಮಸ್ಯೆಗಳು. ಜ್ಞಾನ, ಜ್ಞಾತೃ, ಜ್ಞೇಯಗಳ ಪರಸ್ಪರ ಸಂಬಂಧವನ್ನು ಕುರಿತ ಜಿಜ್ಞಾಸೆಯಲ್ಲೇ ಇವರು ಕಾಲು ಶತಮಾನವನ್ನು ಕಳೆದಿರುತ್ತಾರೆ. ಪ್ರತ್ಯಕ್ಷಾನುಭವದ ವಿಭಜನೆಯ ಕೆಲಸ ಒಂದಕ್ಕೇ ಅಷ್ಟು ಕಾಲವನ್ನು ವಿನಿಯೋಗಿಸಿದ ವಾಸ್ತವವಾದಿಗಳೂ ಇದ್ದಾರೆ.

ವಾಸ್ತವವಾದ ಹುಟ್ಟಿ ಸುಮಾರು ಅರ್ಧ ಶತಮಾನವಾದರೂ ಅದು ಇನ್ನೂ ತರುಣಾವಸ್ಥೆಯಲ್ಲೇ ಇದೆ. ತತ್ವ ಸಮಸ್ಯೆಗಳೆಲ್ಲಕ್ಕೂ ಇದರಲ್ಲಿ ಉತ್ತರ ದೊರೆಯುವುದಿಲ್ಲ. ಅಲ್ಲದೆ ಅಸ್ತಿತ್ವದ ವಿಚಾರವಾಗಿ ಒಂದೇ ಪಕ್ಷದವರಲ್ಲೂ ಏಕಾಭಿಪ್ರಾಯವಿಲ್ಲ. ಕೆಲವರು ಭೌತವಾದಿಗಳು (Materialists). ಇನ್ನು ಕೆಲವರು ಪ್ರಕೃತಿವಾದಿಗಳು (Naturalists), ಇನ್ನು ಕೆಲವರು ಚಿದ್ವಾದಿಗಳು (Spiritualists), ಮತ್ತೆ ಕೆಲವರು ಚಿದಚಿತ್ ವಿಲಕ್ಷಣವಾದ ನಪುಂಸಕ ಸತ್ (Neutral stuff) ವಾದಿಗಳು. ಕೆಲವರ ವಾಸ್ತವವಾದದಲ್ಲಿ ಈಶ್ವರನಿಗೆ[1] (Deity) ಎಡೆಯೇ ಇಲ್ಲ. ಇನ್ನು ಕೆಲವರ ವಾದದಲ್ಲಿ ಈಶ್ವರನಿಗೆ ಸ್ಥಾನವಿದ್ದರೂ ಆ ಸ್ಥಾನ ಪ್ರಥಮ ಸ್ಥಾನವಲ್ಲ; ಈಶ್ವರನು ಪರಮನಲ್ಲ, ಕಾಲಾತೀತನೂ ಅಲ್ಲ. ಅವನು ಬೆಳೆಯುವ ಈಶ್ವರ (A Growing God). ಆದಿಯಲ್ಲಿ ಅವನು ಅವ್ಯಕ್ತ. ಕಾಲಬೆಳೆದಂತೆಲ್ಲಾ ಅವನ ಸ್ವರೂಪ ವ್ಯಕ್ತವಾಗುತ್ತದೆ. ಈ ವಾದದಲ್ಲಿ ಕಾಲ ತತ್ವಕ್ಕೆ ಪ್ರಾಶಸ್ತ್ಯ ಹೆಚ್ಚು. ಸಾಮ್ಯುಎಲ್ ಅಲೆಕ್ಸಾಂಡರ್ ಎಂಬ ಪ್ರಸಿದ್ಧ ನೂತನ ವಾಸ್ತವವಾದಿಯ ದರ್ಶನದಲ್ಲಿ ವಿಶ್ವವನ್ನು ಒಂದು ದೊಡ್ಡ 'ಪಿರಮಿಡ್ಡಿ'ಗೆ ಹೋಲಿಸಿದೆ. ದಿಕ್ಕಾಲ ಅದರ ತಳ; ಈಶ್ವರ ಅದರ ತುದಿ; ತುದಿ ಇನ್ನೂ ಬೆಳೆಯುತ್ತಿದೆ.

ಅಲೆಕ್ಸಾಂಡರಿನ ಈಶ್ವರವಾದದಲ್ಲಿ ಇರುವ ಕೆಲವು ಅಸ್ಫುಟ ಮತ್ತು ಅತಿರೇಕಾಂಶಗಳನ್ನು ಸರಿಪಡಿಸಿ ಅಲ್‌ಫ್ರೆಡ್ ನಾರ್ತ್ ವೈಟೆಡ್ ಎಂಬ ಪ್ರಸಿದ್ಧ ವಾಸ್ತವವಾದಿಯು ಈ ಆಧುನಿಕ ಈಶ್ವರ ಭಾವನೆಯನ್ನು ಬೆಳಸಿರುವನು. ಇವನ ಬರವಣಿಗೆಗಳಲ್ಲಿ ಒಂದು ನವೀನವಾದ ಈಶ್ವರನು ರೂಪ ತಾಳಿದಂತಿದೆ. ಆ ಈಶ್ವರನು ಇತರ ದರ್ಶನಗಳಲ್ಲಿರುವ ಈಶ್ವರನಂತೆ ಸಕಲ ಗುಣಪೂರ್ಣನಲ್ಲ. ಅವನ ಸ್ವರೂಪ ಇಮ್ಮುಖವಾಗಿದೆ: ಒಂದು ಭಾವಸ್ವರೂಪ, ಇನ್ನೊಂದು ವಾಸ್ತವ ಸ್ವರೂಪ. ಅವನ ಭಾವಸ್ವರೂಪ ಅಮಿತವಾದುದು, ಅನಾದಿಯದು. ಅದು ವಿಶ್ವಕ್ರಿಯೆಯ ಮೂಲಕ ಕ್ರಮಕ್ರಮವಾಗಿ ವಾಸ್ತವವಾದ ವ್ಯಕ್ತ ರೂಪವನ್ನು ತಾಳುವುದು. ಈ ವಿಶ್ವವು ಯಾವ ಒಂದು ಕಾಲದಲ್ಲೂ ಈಶ್ವರನ ಪೂರ್ಣ ರೂಪವನ್ನು ತೋರಿಸುವುದಿಲ್ಲ. ಈ ವಿಶ್ವದಂಥ ಕೋಟ್ಯಂತರ ವಿಶ್ವಗಳು ಭಾವನಾರೂಪವಾದ ಅವನ ಬಸಿರಿ

[1] ಈಶ್ವರ ಎಂಬ ಪದವನ್ನು ಇಲ್ಲಿ ದೇವರು, ಈಶ ಎಂಬ ಪಾರಿಭಾಷಿಕ ರೂಪದಲ್ಲಿ ಉಪಯೋಗಿಸಿದೆ. ಶೈವ ದೇವರಿಗೂ ಇದಕ್ಕೂ ಸಂಬಂಧವಿಲ್ಲ.

ಸಲ್ಲಿವೆ. ಅವನ ಭಾವನಾಸ್ವರೂಪವನ್ನು ನೋಡಿದಾಗ ಅವನು ಅಚರನಾಗಿ ಕಾಣು ವನು, ವಿಶ್ವವು ಚರಾತ್ಮಕವಾಗಿ ಕಾಣುವುದು. ಅವನ ವ್ಯಕ್ತಸ್ವರೂಪವನ್ನು ನೋಡಿ ದಾಗ ವಿಶ್ವವು ಅಚರವಾಗಿಯೂ ಈಶ್ವರನು ಚರಾತ್ಮಕವಾಗಿಯೂ ಕಾಣುವುದು. ಅವ್ಯಕ್ತರೂಪದಲ್ಲಿ ದೇವರು ಒಬ್ಬನೇ, ಅವನ ಹೊಟ್ಟೆಯಲ್ಲಿರುವ ವಿಶ್ವಗಳು ಅನೇಕ. ವ್ಯಕ್ತರೂಪದಲ್ಲಿ ವಿಶ್ವ ಒಂದೇ, ಆದರೆ ದೇವರುಗಳು ಅನೇಕ. ಒಂದು ದೃಷ್ಟಿಯಿಂದ ವಿಶ್ವವು ವಾಸ್ತವವಾದುದು, ದೇವರು ಭಾವರೂಪವಾದವನು. ಇನ್ನೊಂದು ದೃಷ್ಟಿ ಯಿಂದ ದೇವರು ವಾಸ್ತವವಾದ ವಸ್ತು, ವಿಶ್ವವು ಬರಿಯ ಭಾವನೆ. ಒಂದು ದೃಷ್ಟಿ ಯಿಂದ ದೇವರು ವಿಶ್ವದಲ್ಲಿ ಅಂತರ್ಯಾಮಿಯಾಗಿದ್ದಾನೆ, ಇನ್ನೊಂದು ದೃಷ್ಟಿಯಿಂದ ವಿಶ್ವವು ದೇವರಲ್ಲಿ ಅಂತರ್ಯಾಮಿಯಾಗಿದೆ. ಒಂದು ದೃಷ್ಟಿಯಿಂದ ದೇವರು ವಿಶ್ವದ ಹೊರಗಿರುವನು, ಇನ್ನೊಂದು ದೃಷ್ಟಿಯಿಂದ ವಿಶ್ವವು ದೇವರ ಹೊರಗಿದೆ. ಒಂದು ದೃಷ್ಟಿಯಿಂದ ದೇವರು ವಿಶ್ವವನ್ನು ಸೃಷ್ಟಿಮಾಡುತ್ತಾನೆಂದು ಹೇಳಬಹುದು. ಇನ್ನೊಂದು ದೃಷ್ಟಿಯಿಂದ ವಿಶ್ವವು ದೇವರನ್ನು ಸೃಷ್ಟಿಸುತ್ತಿದೆ ಎಂದು ಹೇಳಬಹುದು.[1] ಒಂದು ದೃಷ್ಟಿಯಿಂದ ದೇವರು ನಿರ್ಗುಣ. ಇನ್ನೊಂದು ದೃಷ್ಟಿಯಿಂದ ದೇವರು ಸಗುಣ. ಆದರೆ ದೇವರು ಸಗುಣನು ಮಾತ್ರವೇ ಅಥವ ನಿರ್ಗುಣನು ಮಾತ್ರವೇ ಎಂದು ವಾದಿಸುವುದು ತಪ್ಪು. ದೇವರು ನಿರ್ಗುಣನೂ ಹೌದು, ಸಗುಣನೂ ಹೌದು. ಒಂದು ದೃಷ್ಟಿಯಿಂದ ನಿರ್ಗುಣ ಪ್ರಧಾನವಾಗಿಯೂ ಇನ್ನೊಂದು ದೃಷ್ಟಿಯಿಂದ ಸಗುಣ ಪ್ರಧಾನವಾಗಿಯೂ ಕಾಣುವನು. ಆದರೆ ದೇವರು ಒಂದನ್ನು ಬಿಟ್ಟು ಇನ್ನೊಂದಾಗಿ ಮಾತ್ರ ಇರಲಾಗುವುದಿಲ್ಲ. ಬಹುಶಃ ಹೀಗೆ ಉಪನಿಷತ್ತುಗಳ ಬ್ರಹ್ಮವನ್ನು ಈಕ್ಷಿಸು ವುದರಿಂದ ನಮಗೆ ಉಪನಿಷತ್ತುಗಳಲ್ಲಿ ಉಕ್ತವಾಗಿರುವ ತತ್ವ ಚೆನ್ನಾಗಿ ಮನದಟ್ಟಾಗ ಬಹುದು. ವಿವಿಧ ವೇದಾಂತ ಪಂಥಗಳು ಒತ್ತಿ ಹೇಳುವ ಎಲ್ಲ ಅಂಶಗಳ ಆವಶ್ಯಕತೆ ಯನ್ನೂ ಮನಗಾಣಬಹುದು. ಭಾವವಾದಕ್ಕೆ ವಿರೋಧಿಯಾಗಿ ಹುಟ್ಟಿದ ವಾಸ್ತವ ವಾದವು ವೈಟೆಡ್ಡಿನ ದರ್ಶನದಲ್ಲಿ ಅದರೊಡನೆ ಸುಮನ್ವಯವಾದದಂತೆ ತೋರುವುದು. ಈ ದರ್ಶನವು ಭಾರತೀಯ ತತ್ವದ ಭವಿಷ್ಯದಲ್ಲಿ ಬಹು ಪರಿಣಾಮಕಾರಿಯಾಗುವು ದೆಂದು ನಿರೀಕ್ಷಿಸಬಹುದು.

ಆಧುನಿಕ ತಾತ್ವಿಕರ ಮನಸ್ಸನ್ನು ಆಕರ್ಷಿಸಿರುವ ಎರಡನೆಯ ತತ್ವ **ಫಲವಾದ** (Pragmatism). ಇದನ್ನು ಪ್ರತಿಪಾದಿಸುತ್ತಿರುವವರು ಇಂಗ್ಲೆಂಡಿನಲ್ಲೂ ಯೂರೋ ಪಿನ ಇತರ ದೇಶಗಳಲ್ಲೂ ಇರುತ್ತಾರಾದರೂ ಇದು ವಿಶೇಷವಾಗಿ ಬೆಳೆದು ಪ್ರಚಾರಕ್ಕೆ ಬಂದಿರುವುದು ಅಮೆರಿಕಾದಲ್ಲಿ. ಇದು ಕೂಡ ಹೆಗೆಲಿನ ತತ್ವಕ್ಕೆ ವಿರೋಧವಾಗಿ

[1] A. N. Whitehead: *Process and Reality*, Pp. 492-3.

ಹುಟ್ಟಿದ ತತ್ವ. ಹೆಗೆಲಿನ ತತ್ವದಲ್ಲಿ ಜ್ಞಾನಕ್ಕೂ ತರ್ಕಕ್ಕೂ ಪ್ರಾಧಾನ್ಯ. ಕ್ರಿಯೆಗೂ ಪುರುಷಾರ್ಥಗಳಿಗೂ ಪ್ರಾಶಸ್ತ್ಯ ಕಡಮೆ. ಫಲವಾದದಲ್ಲಾದರೋ ಜೀವನದ ಆಶೆ ಆಕಾಂಕ್ಷೆಗಳಿಗೆ ಮುಖ್ಯ ಸ್ಥಾನ. ಆ ತತ್ವವನ್ನು ಜೀವನಕೇಂದ್ರ (Biocentric) ತತ್ವವೆಂದು ಕರೆಯುವುದು ವಾಡಿಕೆಯಾಗಿದೆ. ಫಲಪ್ರಾಪ್ತಿ ತತ್ವದ ಮುಖ್ಯ ಧ್ಯೇಯ. ಸತ್ಯ ಅದಕ್ಕೆ ಪೋಷಕವಾದುದು. ನಮಗೆ ಇರವಿನ ಸತ್ವ ತಿಳಿಯುವುದು ಅದರ ಕ್ರಿಯಾಕಾರಿತ್ವದ ಮೂಲಕ. ಕ್ರಿಯೆಯಿಂದ ಕ್ರಿಯೆಗೆ ಫಲದಿಂದ ಫಲಕ್ಕೆ ನಮ್ಮನ್ನು ಒಯ್ಯುವುದು ಜ್ಞಾನದ ಕೆಲಸ. ಇದರ ವಿನಾ ಅದಕ್ಕೆ ಸ್ವತಂತ್ರವಾದ ಅಸ್ತಿತ್ವವಿಲ್ಲ. ಜ್ಞಾನ, ಫಲಗಳನ್ನು ಗಳಿಸುವ ಒಂದು ಅಂಗ—ಆಯುಧ (Instrument). ಅಂಗವಾಗಲಿ ಆಯುಧವಾಗಲಿ ಅದು ಮಾಡಬೇಕಾದ ಕೆಲಸವನ್ನು ಸಾಧಿಸಿದಾಗ ಅದು ಸರಿಯಾದ ಅಂಗ ಅಥವ ಆಯುಧವೆಂದು ಹೇಳುವೆವು. ಜ್ಞಾನ ಒಂದು ಅಂಗ ಅಥವ ಆಯುಧವಾದರೆ ಅದರ ಸತ್ಯತ್ವ ಅಂದರೆ ಪ್ರಾಮಾಣ್ಯ ತಿಳಿಯುವುದು ಅದು ಕಾರ್ಯಕಾರಿಯಾಗುವುದರ ಮೂಲಕ. ಹೆಗೆಲಿನ ಅನುಯಾಯಿಗಳು ಹೇಳುವಂತೆ ಒಂದು ಭಾವ ಇನ್ನೊಂದು ಭಾವದೊಡನೆ ಸಂಗತವಾಗುವುದರಿಂದ ಅದರ ಪ್ರಾಮಾಣ್ಯ ಸಿದ್ಧವಾಗುವುದಿಲ್ಲ. ಸಾಂಗತ್ಯಗೊಂಡ ಭಾವ ಸಾರ್ಥಕ್ಯವನ್ನು ಹೊಂದಿದಾಗ ಅದು ಸತ್ಯಸಿದ್ಧವಾಗುವುದು. ಈ ವಾದದಲ್ಲಿ ಭಾವಸಾಂಗತ್ಯ ಗೌಣ, ಭಾವ ಸಾರ್ಥಕ್ಯ ಪ್ರಧಾನ.

ಈ ತತ್ವದೃಷ್ಟಿಯಿಂದ ತತ್ವ ಬರಿಯ "ಜಿಜ್ಞಾಸ" ವಲ್ಲ. ತರ್ಕತಾಂಡವವಲ್ಲ. ಅದು ಒಂದು ಬಗೆಯ ಜೀವನಸಂಶೋಧನೆ, ಪುರುಷರ್ಥಸಾಧನೆಯ ಅಂಗವಾದ ಪ್ರಾಯೋಗಿಕ ಜ್ಞಾನ. ಇದರ ಮುಖ್ಯ ಪ್ರತಿಪಾದಕರು ಅಮೆರಿಕದ ಸುಪ್ರಸಿದ್ಧ ತಾತ್ವಿಕರಾದ ವಿಲಿಯಂ ಜೇಮ್ಸ್ ಮತ್ತು ಜಾನ್ ಡ್ಯೂಯಿ ಅವರು. ಇವರ ತತ್ವದೃಷ್ಟಿ ಭಾರತೀಯರ ತತ್ವ ದೃಷ್ಟಿಯನ್ನು ಹೋಲುವುದು. ಭಾರತೀಯರ ದರ್ಶನಗಳಲ್ಲಿ ತತ್ವ, ಮುಕ್ತಿ, ಅಪವರ್ಗ, ನಿರ್ವಾಣ—ಇವುಗಳ ಸಾಧನೆಗೆ ಸಹಕಾರಿಯಾದ ಜ್ಞಾನ. ಪ್ರತಿಯೊಂದು ಭಾರತೀಯ ದರ್ಶನವೂ ಫಲವಾದವೇ. ಆದರೆ ಪಾಶ್ಚಾತ್ಯರ ಫಲವಾದವೂ ಭಾರತೀಯರ ಫಲವಾದವೂ ಒಂದೇ ಅಲ್ಲ. ಭಾರತೀಯ ತತ್ವದಲ್ಲಿ ಮತಕ್ಕೆ, ಇಂದ್ರಿಯಾತೀತ ವಿಷಯಗಳಿಗೆ, ಪರಾತ್ಪರ ವಿಷಯಗಳಿಗೆ ವಿಶೇಷವಾಗಿ ಗಮನಕೊಟ್ಟಿರುತ್ತಾರೆ. ಆದರೆ ಪಾಶ್ಚಾತ್ಯ ಫಲವಾದಿಗಳು ಇಹಲೋಕ ಜೀವನಕ್ಕೂ ಐಹಿಕ ಪುರುಷಾರ್ಥಗಳಿಗೂ ಹೆಚ್ಚು ಗಮನಕೊಟ್ಟಿರುತ್ತಾರೆ. ಪಾಶ್ಚಾತ್ಯ ಫಲವಾದಿಗಳು ಅನುಭಾವಿಗಳಲ್ಲ, ಅನುಭವವಾದಿಗಳು (Empiricists); ಐಹಿಕವಾದಿಗಳು (Secularists). ತತ್ವವಿಚಾರವು ಪ್ರಾಜ್ಞರೂ ಪ್ರೌಢ ವಿದ್ಯಾವಂತರೂ ಮಾಡುವ ಜಿಜ್ಞಾಸೆಯಲ್ಲ. ಅದು ಪಾಮರರೂ ಸಮಾನ್ಯ ಜನರೂ ತಮ್ಮ ಜೀವನವನ್ನು ನುಗೊಳಿ

ಸಲು ಅತ್ಯಾವಶ್ಯಕವಾದ ವಿವೇಚನೆ. ಅದು ಅಲ್ಪ ಸಂಖ್ಯಾತರ ಪಾಲಿಗೆ ವಿಲಾಸ ಲಾದ ಭೋಗವಸ್ತುವಲ್ಲ, ಬಹುಸಂಖ್ಯಾತರ ಜೀವನಕ್ಕೆ ಬೇಕಾದ ಆವಶ್ಯಕತೆ.

ಇಂದಿನ ಭಾರತೀಯರ ಗಮನವನ್ನು ಸೆಳೆಯುತ್ತಿರುವ ಮೂರನೆಯ ತತ್ವ ಚಳವಳಿಯಲ್ಲಿ ಚರಿತ್ರೆಗೆ ವಿಶೇಷ ಪ್ರಾಶಸ್ತ್ಯ ಬಂದಿದೆ. ತತ್ವಕ್ಕೂ ಚರಿತ್ರೆಗೂ ಅತಿ ನಿಕಟ ಸಂಬಂಧವೇರ್ಪಟ್ಟಿದೆ. ಇದರ ಪ್ರಕಾರ ತತ್ವಶಾಸ್ತ್ರವು ಬ್ರಹ್ಮ, ಆತ್ಮ, ಪರಲೋಕ ಇತ್ಯಾದಿ ನಿರ್ದಿಷ್ಟವಾದ ತತ್ವಗಳನ್ನು ವಿಚಾರ ಮಾಡಲೇಬೇಕೆಂಬ ನಿಯಮವಿಲ್ಲ. ಮಾನವ ಚರಿತ್ರೆಯನ್ನು ಸರ್ವತೋಮುಖವಾಗಿ ವಿಶಾಲ ಭಾವನೆಗಳ ದೃಷ್ಟಿಯಿಂದ, ಚಿರಂತವಾದ ಧ್ಯೇಯಗಳ ದೃಷ್ಟಿಯಿಂದ ನೋಡುವುದು ತತ್ವದ ಕೆಲಸ. ಮಾನವ ಜೀವಾವಲೋಕನವೇ ತತ್ವ. ಇಲ್ಲಿ ತತ್ವ ಮತ್ತು ಚರಿತ್ರೆ—ಈ ಎರಡು ಪದಗಳೂ ಹೊಸ ಅರ್ಥವನ್ನು ಪಡೆದಿವೆ. ಚರಿತ್ರೆ ಬರಿಯ ಯುದ್ಧಗಳ, ರಾಜ ರಾಜಕೀಯ ಸಂಸ್ಥೆ ಗಳ ವಿವರಣೆಯಲ್ಲ. ಜನಜೀವನದ ಸಾಮೂಹಿಕ ಮತ್ತು ವೈಯಕ್ತಿಕ ಆಶೆ ಆಕಾಂಕ್ಷೆ ಗಳ ಹುಟ್ಟು ಬೆಳವಣಿಗೆಗಳನ್ನು ತಿಳಿದು ಅವುಗಳ ಮೂಲಕ ಒಟ್ಟು ಜೀವನವನ್ನು ಹೇಗೆ ಅರ್ಥಮಾಡಿಕೊಳ್ಳಬಹುದು, ಅವುಗಳನ್ನು ಸಂಯೋಗಗೊಳಿಸಿ ಜೀವನದ ಮುನ್ನಡೆ ಯನ್ನು ಹೇಗೆ ಸಾಧಿಸಬಹುದು ಎಂಬುದನ್ನು ತಿಳಿಸುವುದು ತತ್ವಶಾಸ್ತ್ರದ ಕೆಲಸ.

ಈ ಹೊಸ ತತ್ವರೀತಿಯನ್ನು ಪ್ರತಿಪಾದಿಸಿದವರಲ್ಲಿ ಇಟಲಿಯ ಪ್ರಸಿದ್ಧ ತಾತ್ವಿಕನಾದ ಬೆನಿಡಿಟ್ಟೋ ಕ್ರೋಚ್ಯೇ ಪ್ರಮುಖನಾದವನು. ಇವನು ತನ್ನ ತತ್ವ ಗ್ರಂಥಗಳಲ್ಲಿ ಸೌಂದರ್ಯ, ಸತ್ಯ, ಅರ್ಥ ಮತ್ತು ಧರ್ಮ—ಈ ನಾಲ್ಕು ಪುರುಷಾರ್ಥ ಗಳ ಸ್ವರೂಪವನ್ನು, ಇವುಗಳ ಪರಸ್ಪರ ಸಂಬಂಧವೇನು, ಇವುಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದಿರುವುದರಿಂದ ಅಥವ ಒಂದನ್ನು ಮುಂದುಮಾಡಿ ಉಳಿದುವನ್ನು ಹಿಂದಕ್ಕೆ ತಳ್ಳುವುದರಿಂದ, ಒಂದನ್ನು ಮತ್ತೊಂದಕ್ಕೆ ಅಧೀನಗೊಳಿಸುವುದರಿಂದ ಮಾನವ ಜೀವನದಲ್ಲಿ ಕ್ಲೇಶಗಳೂ, ಕಲಹಗಳೂ, ಕ್ರಾಂತಿಗಳೂ ಹುಟ್ಟಿದುವು, ಈ ಪುರುಷಾರ್ಥಗಳೆಲ್ಲಕ್ಕೂ ಸಾಂಗತ್ಯವಾದಾಗ ಜೀವನದಲ್ಲಿ ಸುಖ ಶಾಂತಿಗಳು ನೆಲಸಬಹುದು, ಜೀವನವು ಪ್ರಗತಿಗಾಮಿಯಾಗಬಹುದು—ಇತ್ಯಾದಿ ವಿಷಯಗಳನ್ನು ವಿಚಾರಮಾಡಿರುತ್ತಾನೆ. ಇವನು ತನ್ನ "ಹಿಸ್ಟೋರಿಯೋಗ್ರಫಿ" ಎಂಬ ತತ್ವಗ್ರಂಥದಲ್ಲಿ ತತ್ವವೇ ಬೇರೆ ಚರಿತ್ರೆಯೇ ಬೇರೆ ಎಂಬ ಅಭಿಪ್ರಾಯವನ್ನು ಖಂಡಿಸಿ, ಚರಿತ್ರೆ ಜ್ಞಾನದ ಶರೀರ, ತತ್ವ ಅದರ ಆತ್ಮ, ಒಂದನ್ನು ಉಳಿದು ಇನ್ನೊಂದು ಇರಲಾಗದು, ಒಂದರ ಮೂಲಕ ಒಂದು ಪೂರ್ಣಗೊಳ್ಳಬೇಕು ಎಂಬುದನ್ನು ಪ್ರತಿಪಾದಿಸಿದ್ದಾನೆ.

ಹೀಗೆ ಚರಿತ್ರೆಗೆ ಪ್ರಾಶಸ್ತ್ಯ ಕೊಟ್ಟಿರುವ ತತ್ವಗಳಲ್ಲಿ ಕಾಲತತ್ವಕ್ಕೂ ವ್ಯಕ್ತಿತ್ವಕ್ಕೂ ಹೆಚ್ಚು ಪ್ರಾಶಸ್ತ್ಯ ಬಂದಿರುವುದು ಸ್ವಾಭಾವಿಕವಾಗಿದೆ. ಹಿಂದಿನ

ಕಾಲದ ತತ್ವಗಳಲ್ಲಿ ಮಾನವ ವ್ಯಕ್ತಿಗಳನ್ನು ನೀರಿನ ಮೇಲಿನ ಗುಳ್ಳೆಗಳಿಗೂ ಅಲೆಗಳಿಗೂ ಹೋಲಿಸುವುದು ವಾಡಿಕೆಯಾಗಿತ್ತು. ಇಂದಿನ ಹೊಸ ತತ್ವಗಳಲ್ಲಿ ಆ ಉಪಮಾನಗಳಿಗೆ ಎಡೆ ಇಲ್ಲ. ನಮ್ಮ ಜೀವನ ಬರಿಯ ತೋರಿಕೆಯಲ್ಲ. ನಿನ್ನೆ ಇದ್ದುದು ಇಂದು ನಾಶವಾಗುವುದಿಲ್ಲ, ಇಂದಿದ್ದುದು ನಾಳೆ ಅಳಿಸಿ ಹೋಗುವುದಿಲ್ಲ. ನಿನ್ನೆ ಇಂದಿನಲ್ಲಿ ಜೀವಂತವಾಗಿವೆ, ಇಂದು ನಾಳೆಯಲ್ಲಿ ಜೀವತಾಳುವುದು. ಭೂತಕಾಲವು ವರ್ತಮಾನದಲ್ಲೂ, ವರ್ತಮಾನವು ಭವಿಷ್ಯದಲ್ಲೂ ಹೊಸತಾಗುವುವು. ಮಾನವ ಜೀವನದ ಅರ್ಥವನ್ನು ಕಾಲಾತೀತವಾದ ತತ್ವದ ಮೂಲಕ ಅರ್ಥಮಾಡಿಕೊಳ್ಳುವುದು ಹಿಂದಿನ ತತ್ವ ಮಾರ್ಗವಾದರೆ ಕಾಲಾತ್ಮಕ ತತ್ವದ ಮೂಲಕ ಅದರ ಅರ್ಥವನ್ನು ಹೊರಗೆಡಹುವುದು ಇಂದಿನ ತತ್ವಮಾರ್ಗ.

ಇಂದು ನಮ್ಮ ಮನಸ್ಸಿನಲ್ಲಿ ಮೇಲೆ ಹೇಳಿದ ಪಾಶ್ಚಾತ್ಯ ತತ್ವಗಳೂ, ವೇದಾಂತ, ಜೈನ, ಬೌದ್ಧ ತತ್ವಗಳೂ ಮಥನವಾಗುತ್ತಿವೆ. ಈ ಮಂಥನದಿಂದ ಯಾವ ವಿಧವಾದ ಹೊಸ ದರ್ಶನ ತತ್ವಗಳು ಉದಯಿಸುತ್ತವೆಯೋ ಈಗ ಹೇಳಲು ಸಾಧ್ಯವಿಲ್ಲ. ಆದರೆ ಇಷ್ಟು ಮಾತ್ರ ಹೇಳಬಹುದು. ಅದು ಭಾರತೀಯರ ಹಿಂದಿನ ತತ್ವಗಳ ಪುನಶ್ಚರಣೆಯಾಗಿ ಆಗಲಿ ಇಂದಿನ ಪಾಶ್ಚಾತ್ಯ ತತ್ವಗಳ ಅನುಕರಣ ಅಥವ ಅನುಸರಣೆಯಾಗಿ ಆಗಲಿ ಇರಲು ಸಾಧ್ಯವಿಲ್ಲ. ಹೀಗೆ ಹೇಳಿದಾಗ ಭಾರತೀಯ ತಾತ್ವಿಕರು ಉಪನಿಷತ್ತುಗಳಿಂದಾಗಲಿ, ಬೌದ್ಧ, ಜೈನ ದರ್ಶನಗಳಿಂದಾಗಲಿ, ಶಂಕರ, ರಾಮಾನುಜ ಮಾಧ್ವರುಗಳ ಭಾಷ್ಯಗಳಿಂದಾಗಲಿ, ಪಾಶ್ಚಾತ್ಯರ ಹಿಂದಿನ ಮತ್ತು ಇಂದಿನ ದರ್ಶನಗಳಿಂದಾಗಲಿ ಸ್ಫೂರ್ತಿಪಡೆಯಬಾರದೆಂದು ಅರ್ಥ ಮಾಡಕೂಡದು. ಇಂದು ಯಾವ ಜನಾಂಗವೂ, ತಮ್ಮದೇ ಆಗಲಿ ಇತರರದೇ ಆಗಲಿ, ಹಿಂದಿನದೇ ಆಗಲಿ, ಇಂದಿನದೇ ಆಗಲಿ ಯಾವ ತತ್ವವನ್ನೂ ಮರೆಯಲಾಗದು. ಈಗ ಎಲ್ಲ ಜನಾಂಗಗಳೂ, ಎಲ್ಲ ಬುಡಕಟ್ಟಿನವರೂ, ಎಲ್ಲ ಮತದವರೂ ಇಡಿಯ ಮಾನವ ಸಂಸ್ಕೃತಿಯ ವಾರಸುದಾರರಾಗಿರುತ್ತಾರೆ; ಎಲ್ಲರೂ ಮಾನವಸಂಸ್ಕೃತಿಯ ಮುನ್ನಡೆಗೆ ಹೊಣೆಗಾರರಾಗಿರುತ್ತಾರೆ. ಆದುದರಿಂದ ನಾವು, "ಇದು ಪಾಶ್ಚಾತ್ಯರ ತತ್ವ, ನಮಗೆ ಬೇಡ; ಇದು ಪೌರಸ್ತ್ಯ ತತ್ವ, ಇದು ನಮಗೆ ಬೇಕು" ಎಂಬ ಭಾವನೆಗಳಿಗೆ ಎಡೆಕೊಡಕೂಡದು. ಈಗ ಎಲ್ಲರೂ ಒಬ್ಬೊಬ್ಬರ ಮೂಲಕ, ಒಬ್ಬೊಬ್ಬರೂ ಎಲ್ಲರ ಮೂಲಕ ಉದ್ಧಾರವಾಗಬೇಕಾಗಿದೆ. ಭಾರತೀಯ ತತ್ವ ತನ್ನದೇ ಆದ ಹೊಸ ವರ್ಚಸ್ಸಿನಿಂದ ಬೆಳಗಬೇಕಾದರೂ ಹಾಗೆ ಅದು ಬೆಳಗುವುದು ವಿಶಾಲವಾದ ವಿಶ್ವಸಂಸ್ಕೃತಿಯ ದಿಗಂತದ ಹಿನ್ನೆಲೆಯಲ್ಲಿ.

ಜಿ. ಹನುಮಂತರಾವ್.

ಭೂಮಿಗೀತ

ತಾಯ ಸೆರೆಯ ಬಿಡಿಸಿಕೊಂಡು
  ಕಣ್-ತೆರೆಯುವ ಬದುಕಿಗೆಲ್ಲ
ಆದಿಶೇಷ ಹೊತ್ತ ಭೂಮಿ
  ಆದಿಶೇಷದಂತಿದೆ.

ತನ್ನ ಸಾಲ ಸಲಿಸಿಕೊಂಡು
  ಮಣ್ಣಾಗುವ ಬದುಕಿಗೆಲ್ಲ
ಆದಿಶೇಷ ಹೊತ್ತ ಭೂಮಿ
  ಅಂತ್ಯಶೇಷದಂತಿದೆ.

ನೆಲದೊಲವಿನ ಚಳಿಬಯಲಲಿ
ಹೊತ್ತು ಹಡೆದ ಕತ್ತಲಲ್ಲಿ
ಮಿತ್ತು ಮಿಡಿದ ಉಸಿರ ಬಳ್ಳಿ
ಹಸುರನುಟ್ಟು, ಹೂವ ತೊಟ್ಟು,
ಹಣ್ಣಬಿಟ್ಟು ಚೆನ್ನಾಯಿತು ;
ಕಣ್ಣತೆರೆದು ಕನಸಾಯಿತು ;
  ತಲೆಯ ತೂಗಿತು.

ನಂಬಿದ ತಂಬೆಲರ ಕಂಬ
ನೆಲಕುರುಳಲು ಅಡಗಿ ಜಂಬ,
ಹಸುರ ಹೂವ ಹಣ್ಣ ಕನಸು
ಸತ್ತು ಬಿದ್ದು ಸೊಪ್ಪಾಯಿತು ;
ಮಣ್ಣನುಟ್ಟು ಮಣ್ಣಾಯಿತು ;
ತಾಯಿಮಣ್ಣು ತಾನುಳಿಯಿತು ;
  ಮಣ್ಣು ಉಳಿಯಿತು.

ಬಾಳಿನ ಈ ಆಸೆಗೆಲ್ಲ
ಮಣ್ಣಿನ ನೆರವಿಲ್ಲ, ಇಲ್ಲ.

ಹಾಡಿನ ಈ ತಂಪಿಗೆಲ್ಲ
ಮಣ್ಣಿನ ಒಲವಿಲ್ಲ, ಇಲ್ಲ.
ಅಲೆಯಲೆಗೊಂದೊಂದು ಹಡಗು
ನಿಲ್ಲಲಿ, ಸಂತೋಷವಿಲ್ಲ;
ಮಳೆಬಿಲ್ಲಿನ ಮೇಲೆ ಮಹಲು
ಬೆಳಗಲಿ, ಆಶ್ಚರ್ಯವಿಲ್ಲ;
'ಹಾರಾಡುವ ಕೋಟೆ' ಯಿಂದ
ಬಾಂಬಿಳಿಯಲಿ ಭೀತಿಯಿಲ್ಲ;
ಪದತಲದಲಿ ನೊಂದ ಕಂದ,
—ಕಾಪಾಡುವ ಪ್ರೀತಿಯಿಲ್ಲ.
ಚೆಲುವು ಶಕ್ತಿ ಉಳಿಯಲೆನುವ
ವ್ಯಾಪಾರದ ನೀತಿಯಿಲ್ಲ;
ಅಬಲೆಯೆಂದು ಕ್ಷಮಿಸಲಿಲ್ಲ;
ಕೊಲೆಮನೆಯಲಿ ರೀತಿಯಿಲ್ಲ.
ದಿವಿಜ ಮನುಜ ದನುಜ ಎನುವ ವಿಭೇದವನೆ ಅರಿಯದೆ,
ಮಹಾತ್ಮರೊ ಅಲ್ಪಾತ್ಮರೊ ಹಿಡಿದು ತಡೆದು ನೋಳ್ಪೆನೆನದೆ,
ಬನ್ನಿರೆಂದು ಬಾಯಿತೆರೆದು ಕಣ್ಣನೊಮ್ಮೆ ತೆರೆಯದೆ
ಜ್ವಾಲಾಮುಖಿ, ಚಂದ್ರಸಖಿ,
ಸೂರ್ಯಪ್ರಿಯೆ, ರುದ್ರಸುಖಿ,
ಜಗನ್ಮಾಯೆ! ಇವಳು ತಾಯೆ? ಮಣ್ಣ ಹರಡಿ ಮಲಗಿರುವಳು;
ಗಳಿಗೆಯಲಿ ರಾಜ್ಯ ಎದ್ದು ರಾಜ್ಯ ಬಿದ್ದು ಹೊರಳುತಿರಲು,
ನೋಡಲಾರೆ ನೀ ಮಸಣದ ಚೆಲುವನೆಂದು ಮರುಗಿ ಬಾನು
ಅರಿಲನೆಳೆದು ಕಣ್ಣಮುಚ್ಚಿ ಒಣಗಿ ಬಿಕೋ ಎನ್ನುತಿಹುದು.

ಇರುವುದಿರಲಿ ಇದ್ದಂತೆಯೆ ಎನುವ ಅನಾಸಕ್ತಿಯಿಂದ
ಇರುವುದೆಲ್ಲ ಸತ್ತಂತೆಯೆ ಎನುವ ಮಹಾಪ್ರೀತಿಯಿಂದ
ಪ್ರಳಯೋತ್ತರ ಸುಖಸ್ವಪ್ನ ನೀಲತರುಚ್ಛಾಯೆಯಲ್ಲಿ
ತಾನೆ ಹಡೆದು ತಾನೆ ಬೆಳಸಿ ಮೆಚ್ಚಿ ಹಿಡಿದ ಮಾಯೆಯಲ್ಲಿ
ಹೆಣಭಾರಕೆ ಹೆಡೆಯ ತೆತ್ತು
ಮಾತಾಡದೆ ಎಲ್ಲ ಹೊತ್ತು

‘ಇಲ್ಲಿ ನಡೆವುದೊಂದಕ್ಕೂ ನನಗೂ ಸಂಬಂಧವಿಲ್ಲ;
ಈ ಬಾಳಿನ ಚೆಲುವಿನಿಂದ ನನಗೇನಾನಂದವಿಲ್ಲ;
ಗುಡಿಗೋಪುರ ರಾಜ್ಯ ಕಾವ್ಯ ಶಾಸ್ತ್ರಜ್ಞರು ಬರಲಿ ಮುಂದೆ
ಮೇರೆ ಮೀರಿ ಮುಂಬರಿದರೆ ಅಪ್ಪಳಿಸುವೆ’ನೆನುವಳೀಕೆ.

—ದಿನದಿನವೂ ಇದೇ ಹಾಡು,
ನೆಲದಾಸೆಗೆ ನರಬಲಿ.
ಎಳೆಯ ಬದುಕು, ಬೆಳೆದ ಬದುಕು
ಏನಿದ್ದೂ ತಬ್ಬಲಿ.

ಕೆ. ಎಸ್. ನ.

ಶ್ರೀನಿವಾಸ ರಾಮಾನುಜನ್

'The most romantic figure in the recent history of mathematics; —a man whose career seems full of paradoxes and contradictions. . . .'

'I cannot imagine anybody saying with confidence how great he was or how great he might have been.'

—G. H. Hardy.

ಭಾಸ್ಕರಾಚಾರ್ಯರ ತರುವಾಯ ಹಿಂದುಸ್ಥಾನದಲ್ಲಿ ಏಳು ಶತಮಾನಗಳ ಕಾಲ ಅಸ್ತವಾಗಿದ್ದ ಗಣಿತಕಲಾ ಪ್ರತಿಭೆಯು ಮತ್ತೆ ಯಾವ ಮಹಾವ್ಯಕ್ತಿಯಲ್ಲಿ ಆಶಾಜನಕವಾದ ರೀತಿಯಲ್ಲಿ ತಲೆದೋರಲು ಗಣಿತ ಪ್ರಪಂಚದಲ್ಲಿ ಹಿಂದುಸ್ಥಾನವು ಹೆಮ್ಮೆಯಿಂದ ತಲೆಯೆತ್ತಿ ಅಪಾರವಾದ, ಶಾಶ್ವತವಾದ ಕೀರ್ತಿಯನ್ನು ಗಳಿಸುವುದೆಂಬ ನಿರೀಕ್ಷೆಯು, ಈ ದೇಶದಲ್ಲೇ ಅಲ್ಲದೆ ಪಾಶ್ಚಾತ್ಯ ದೇಶಗಳಲ್ಲೂ ಸಹ, ಉತ್ಪನ್ನವಾಯಿತೋ,

ಯಾವ ಮಹಾ ವ್ಯಕ್ತಿಯ ಮರ್ಮಭೇದಕ ಸ್ಫೂರ್ತಿಯೂ, ಗಣಿತಶಾಸ್ತ್ರದ Theory of Partitions, Elliptic Functions, Continued Fractions ಮುಂತಾದ ಗಹನವಾದ ಆಧುನಿಕ ಭಾಗಗಳಲ್ಲಿ ಆತನು ನಡೆಸಿದ ಶೋಧನೆಗಳ ಪ್ರೌಢಿಮೆಯೂ, ಇಡಿಯ ಪ್ರಪಂಚದ ಗಣಿತಶಾಸ್ತ್ರಜ್ಞರನ್ನೇ ವಿಸ್ಮಯಗೊಳಿಸಿದವೋ,

ಯಾವ ಮಹಾವ್ಯಕ್ತಿಯ ಅಕಾಲಮರಣದಿಂದ, ಗಣಿತಶಾಸ್ತ್ರದ ಪ್ರಗತಿಗೂ ಭಾರತದ ಕೀರ್ತಿಗೂ ಉಂಟಾದ ಅಪಾರ ನಷ್ಟವನ್ನು ಸ್ಮರಿಸಿ, ಗಣಿತಕಲಾಭಿಮಾನಿಗಳು ಇಂದಿಗೂ ಕಂಬನಿ ಗರೆಯುತ್ತಿರುವರೋ, ಆ ಮಹಾವ್ಯಕ್ತಿ ಶ್ರೀನಿವಾಸ ರಾಮಾನುಜನ್. ಅವರ ಜೀವನದ ಸ್ಥೂಲಪರಿಚಯವೇ ಈ ಲೇಖನದ ಉದ್ದೇಶ.

ಶಾಸ್ತ್ರದ ಪ್ರಗತಿಗಾಗಿ ಶೋಧನೆಯನ್ನು ನಡೆಸುವುದಕ್ಕೆ ಪ್ರತಿಭೆ, ಮೇಧಾಶಕ್ತಿ, ಪಾಂಡಿತ್ಯ ಎಂಬ ಮೂರು ಸಾಧನಗಳು ಅವಶ್ಯಕ. ಪ್ರತಿಭೆಯು ವಿಶೇಷ ವೇಗವುಳ್ಳದ್ದು ; ಅದಕ್ಕೆ ಹೊಸ ವಿಷಯವು ಬಹುಬೇಗ ಸ್ಫುರಿಸುತ್ತದೆ. ಆದರೆ ಸ್ಫುರಿಸಿದ ವಿಷಯವು, ವೇಗದ ಭರದಲ್ಲಿ, ಒಂದೊಂದು ವೇಳೆ ನಿರ್ದುಷ್ಟವಾಗಿಲ್ಲದಿರುವುದೂ ಉಂಟು. ಮೇಧಾಶಕ್ತಿಯ ಗಮನ ಮಂದ ; ಅದು ಕಾರ್ಯಕಾರಣ ತತ್ವವನ್ನನುಸರಿಸುತ್ತ, ಪ್ರತಿಭೆಗೆ ಸ್ಫುರಿಸಿರುವ ವಿಷಯವನ್ನು ಸ್ವಲ್ಪ ಸ್ವಲ್ಪವಾಗಿ ಸ್ಫುಟಗೊಳಿಸಿಕೊಂಡು ಹಂತ ಹಂತವಾಗಿ ಸಾಗುತ್ತದೆ. ಪ್ರತಿಭೆಗೆ ಸ್ಫುರಿಸಿ, ಮೇಧಾಶಕ್ತಿಯಿಂದ

ಸ್ಫುಟಗೊಳಿಸಲ್ಪಟ್ಟು ಸಿದ್ಧವಾಗಿರುವ ನಾನಾ ವಿಷಯಗಳ ಅರಿವೇ ಪಾಂಡಿತ್ಯ. ಈ ಮೂರು ಸಾಧನಗಳನ್ನೂ ಒಬ್ಬನೇ ಸಮಪ್ರಮಾಣದಲ್ಲಿ ಹೊಂದಿರುವುದು ಅಪೂರ್ವ. ಒಬ್ಬೊಬ್ಬನಲ್ಲಿ ಒಂದೊಂದು ಶಕ್ತಿ ವಿಜೃಂಭಿಸಿರಬಹುದು. ಅಲ್ಲದೆ ಮೇಧಾ ಶಕ್ತಿಯುಳ್ಳವರ ಅಥವಾ ಪಾಂಡಿತ್ಯವನ್ನು ಗಳಿಸಿರುವವರ ಸಂಖ್ಯೆಯೇ ಹೆಚ್ಚು; ಪ್ರತಿಭಾಶಾಲಿಗಳು ವಿರಳ. ಒಬ್ಬ ಪ್ರತಿಭಾಶಾಲಿಯು ಮಾಡಿಟ್ಟು ಹೋಗುವ ಕೆಲಸ ವನ್ನು ಪರಿಷ್ಕರಿಸಲು ಅನೇಕ ಮೇಧಾವಿಗಳೂ ಪಂಡಿತರೂ ಬಹುಕಾಲ ಶ್ರಮಿಸ ಬೇಕಾಗಬಹುದು; ರಾಮಾನುಜನ್ ಅವರ ಹ್ರಸ್ವವಾದ ಜೀವಿತಕಾಲದಲ್ಲಿ ಅವರ ಅಸಾಧಾರಣ ಪ್ರತಿಭೆಯಿಂದ ಹೊರಬಿದ್ದ ವಿಷಯಗಳ ಮೇಲೆ ಈಗಲೂ ಸಹ ಕಾರ್ಯ ನಡೆಯುತ್ತಿರುವುದೇ ಇದಕ್ಕೆ ಸಾಕ್ಷಿ.

"ಕನಸುಗಳಲ್ಲಿ ದೇವಿಯು ನನಗೆ ಸಹಾಯಮಾಡುತ್ತಾಳೆ" ಎಂದು ರಾಮಾನು ಜನ್ ಹೇಳುತ್ತಿದ್ದರು. ಅನೇಕವೇಳೆ ನಿದ್ರೆಯಿಂದೆದ್ದು ಕುಳಿತು ಶೋಧನೆ ನಡೆಸು ತ್ತಿದ್ದರು. ಇವರ ಪ್ರತಿಭೆ ಅಮಾನುಷವಾಗಿಯೇ ಇತ್ತು. ಅದು ವಂಶ ಪಾರಂಪರ್ಯವಾಗಿ ಬಂದುದಂತು ಅಲ್ಲ. ಏಕೆಂದರೆ ಇವರ ತಂದೆ ಮತ್ತು ತಾತಂದಿರು, ಮದರಾಸು ಪ್ರಾಂತದ ತಂಜಾವೂರು ಜಿಲ್ಲೆಯ ಕುಂಭಕೋಣದಲ್ಲಿ, ಗಡಂಗಿನ ಸಾಧಾರಣ ಗುಮಾಸ್ತರಾಗಿದ್ದರು. ತಾಯಿಯ ತಂದೆ, ಈರೋಡಿನಲ್ಲಿ ಅಮೀನ ರಾಗಿದ್ದರು. ಬಹುಕಾಲ ಮಕ್ಕಳಾಗದಿರಲು, ರಾಮಾನುಜನ್ ಅವರ ತಾಯಿತಂದೆಗಳು ನಾಮಕ್ಕ ದೇವತೆಯನ್ನು ಪೂಜಿಸಿ ಪ್ರಸಾದವನ್ನು ಪಡೆದರು. ತರುವಾಯ ೧೮೮೭ ನೆಯ ಡಿಸೆಂಬರ್ ೨೨ (ಸರ್ವಜಿತು ಸಂ. ಮಾರ್ಗಶಿರ ಶು. ೯) ರಲ್ಲಿ ಈರೋಡಿನಲ್ಲಿ ರಾಮಾನುಜನ್ ಜನ್ಮತಾಳಿದರು.

ಐದನೆಯ ವಯಸ್ಸಿನಲ್ಲಿ ಬಾಲಕನು ಶಾಲೆಗೆ ಕಳುಹಲ್ಪಟ್ಟನು. ಎರಡು ವರ್ಷ ಗಳನಂತರ ಕುಂಭಕೋಣದ ಹೈ ಸ್ಕೂಲಿಗೆ ಸೇರಿದನು. ಯೋಚನಾಪರನೂ ಮಿತ ಭಾಷಿಯೂ ಆದ ಈ ಬಾಲಕನು ಸಹಪಾಠಿಗಳೊಂದಿಗೆ ಹೆಚ್ಚಿಗೆ ಕಲೆಯುತ್ತಿರ ಲಿಲ್ಲ. ಒಡನಾಡಿಗಳು ಮನೆಗೆ ಬಂದರೆ ಕಿಟಿಕಿಯಿಂದ ಮಾತನಾಡಿಸಿ ಅವರನ್ನು ಹಾಗೇ ಸಾಗಹಾಕುತ್ತಿದ್ದನು. ಇವನೊಡನೆ ಮಾತನಾಡುವುದು ಅವರಿಗೂ ತುಂಬ ಪ್ರಯಾಸವಾಗುತ್ತಿತ್ತು. ನಕ್ಷತ್ರಗಳ ದೂರವೆಷ್ಟೆಂದು ಇವನು ಕೇಳಿದರೆ ಅವರು ಏನುತಾನೆ ಹೇಳಿಯಾರು? ಆದರೂ ಒಂದೊಂದುಸಲ ಅವರು ಇವನ ಪ್ರಶ್ನೆಗಳಿಗೆ ಉತ್ತರ ಹೇಳುವುದಕ್ಕೆ ಪ್ರಯತ್ನಿಸುತ್ತಿದ್ದರು. "ಗಣಿತದ ಅಂತ್ಯ ತತ್ವವಯಾವುದು?' ಎಂದು ಇವನು ಕೇಳಿದಾಗ ನಾಲ್ಕನೆಯ ತರಗತಿ (IV Form)ಯ ಹುಡುಗ ನೊಬ್ಬನು ಸ್ವಲ್ಪ ಯೋಚಿಸಿ, "ಪೈಥಾಗರಾಸನ ಸಾಧನೆ" ಎಂದನು; ಇನ್ನೊ

ಬ್ಬನು “ ಅಲ್ಲ, ದಳ್ಳಾಳಿ ಲೆಕ್ಕ ” ಎಂದು ವಾದಿಸಿದನು. ರಾಮಾನುಜನ್ ಎರಡನೆಯ ತರಗತಿಯಲ್ಲಿದ್ದಾಗ “ ಸೊನ್ನೆಯನ್ನು ಸೊನ್ನೆಯಿಂದ ಭಾಗಿಸಿದರೆ ಏನಾಗುತ್ತದೆ? ” ಎಂದು ಉಪಾಧ್ಯಾಯರನ್ನು ಕೇಳಿ ಅವರು ತಬ್ಬಿಬ್ಬಲಾದುದನ್ನು ಕಂಡು ಸುಮ್ಮನಾದನು. ಮೂರನೆಯ ತರಗತಿಯಲ್ಲಿ ಶ್ರೇಢೀವ್ಯವಹಾರ (Arithmetic Progression) ವನ್ನು ಕಲಿತನು. ನಾಲ್ಕನೆಯ ತರಗತಿಗೆ ಬಂದಮೇಲೆ ಬಿ.ಎ. ತರಗತಿಯ ಒಬ್ಬ ವಿದ್ಯಾರ್ಥಿಯಿಂದ ಲೋನಿಯ “ ಕೋನಶಾಸ್ತ್ರ, ಎರಡನೆಯ ಭಾಗ ”[1] (Loney's Trigonometry, Part II) ಎಂಬ ಪುಸ್ತಕವನ್ನು ತಂದು, ಅದರಲ್ಲಿದ್ದ ಲೆಕ್ಕಗಳನ್ನೆಲ್ಲ ಮಾಡಿ, ಆ ಬಿ.ಎ. ವಿದ್ಯಾರ್ಥಿಗೆ ಹೇಳಿಕೊಟ್ಟನು. ಐದನೆಯ ತರಗತಿಯಲ್ಲಿದ್ದಾಗ ಕೋನಶಾಸ್ತ್ರದ ಕೆಲವು ಫಲಗಳನ್ನು (Euler's Sine and Cosine Products) ಸ್ವತಃ ಕಂಡುಹಿಡಿದನು. ಆದರೆ ಇವು ಆಯಿಲರ್ ಎಂಬ ವಿದ್ವಾಂಸನಿಂದ ಹಿಂದೆಯೇ ಕಂಡುಹಿಡಿಯಲ್ಪಟ್ಟಿದ್ದವೆಂದು ಕೇಳಿ, ತನ್ನ ಕಾಗದವನ್ನು ಮಾಳಿಗೆಯಲ್ಲಿ ಜಂತೆಗೆ ಸಿಗಿಸಿಟ್ಟನು. ಆರನೆಯ ತರಗತಿ (Matric) ಯಲ್ಲಿ ಕಾರ್ (Carr) ಎಂಬ ಗಣಿತಶಾಸ್ತ್ರಜ್ಞನ (Synopsis of Pure Mathematics) ಎಂಬ ಗ್ರಂಥವು ಇವನ ಕೈಗೆ ಬಿದ್ದುದು ಇವನ ಜೀವನದಲ್ಲಿ ಒಂದು ಮುಖ್ಯ ಸಂಗತಿಯಾಗಿದೆ. ಏಕೆಂದರೆ ಆ ಗ್ರಂಥವು ಇವನ ಪ್ರತಿಭೆಯನ್ನು ವಿಕಾಸಗೊಳಿಸಿತು. ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣನಾಗುವ ವೇಳೆಗೆ (೧೯೦೩) ರಾಮಾನುಜನ್ ಈ ಪುಸ್ತಕವನ್ನು ಸಾಂಗವಾಗಿ ಅಭ್ಯಾಸಮಾಡಿದುದೇ ಅಲ್ಲದೆ ಮಾಯಾ ಚೌಕಗಳು, ರೇಖಾಗಣಿತ, ಶ್ರೇಢಿಗಳು ಮುಂತಾದ ಭಾಗಗಳಲ್ಲಿಯೂ ತುಂಬ ಪರಿಶ್ರಮವನ್ನು ಹೊಂದಿದನು.

೧೯೦೪ ರಲ್ಲಿ ಕುಂಭಕೋಣದ ಸರಕಾರಿ ಕಾಲೇಜಿನಲ್ಲಿ ಇವನ ಪ್ರೌಢ ವಿದ್ಯಾಭ್ಯಾಸ ಪ್ರಾರಂಭವಾಯಿತು. ಅಲ್ಲಿ ಗಣಿತ ಮತ್ತು ಇಂಗ್ಲಿಷ್ ಭಾಷೆಗಳಿಗಾಗಿ ಮೀಸಲಾಗಿದ್ದ ‘ ಸುಬ್ರಹ್ಮಣ್ಯಂ ಸ್ಕಾಲರ್‌ಷಿಪ್ ’ ಎಂಬ ವೇತನವು ದೊರೆತದ್ದು ಈ ಬಡ ಹುಡುಗನಿಗೆ ಎಷ್ಟೋ ಅನುಕೂಲವಾಯಿತು. ಆದರೆ ತರಗತಿಯಲ್ಲಿ ಯಾವ ಪಾಠ ನಡೆಯುತ್ತಿದ್ದರೂ ಗಣಿತಶಾಸ್ತ್ರದಲ್ಲೇ ಮಗ್ನನಾಗಿರುತ್ತಿದ್ದ ಇವನ ಏಕಮುಖ ವ್ಯಾಸಂಗವು ಕುಂಭಕೋಣದ ಕಾಲೇಜಿನ ಕಾಯಿದೆಗೆ ವಿರುದ್ಧವಾಗಿ ಪರಿಣಮಿಸಿ, ಇವನಿಗೆ ತಕ್ಕ ಶಾಸ್ತಿಯಾಯಿತು : ಮುಂದಿನ ತರಗತಿಗೆ ಹೋಗಲಾಗಲಿಲ್ಲ ; ವೇತನವು ನಿಂತುಹೋಯಿತು. ಈ ಕಾರಣದಿಂದಲೋ ಅಥವಾ ಒಬ್ಬ ಗೆಳೆಯನ ಉತ್ತೇಜನದಿಂದಲೋ ರಾಮಾನುಜನ್ ಆಂಧ್ರದೇಶಕ್ಕೆ ಹೊರಟುಹೋದನು. ಆದರೂ ಸ್ವಲ್ಪ ಕಾಲದ ಮೇಲೆ ಮರಳಿ, ಅದೇ ಕಾಲೇಜಿಗೆ ಸೇರಿದನು. ವರ್ಷಾಂತದಲ್ಲಿ ಕಾಲೇಜಿನ

ಅಧಿಕಾರಿಗಳು 'ಹಾಜರಿ' ಸಾಲದೆಂದರು. ಅಲ್ಲಿಂದ ೧೯೦೬ರಲ್ಲಿ ಮದರಾಸಿಗೆ ಹೋಗಿ ಪಚ್ಚೆಯಪ್ಪಾಸ್ ಕಾಲೇಜಿಗೆ ಸೇರಿದನು, ಆದರೆ ಶರೀರಾಲಸ್ಯದ ಕಾರಣ ಕುಂಭಕೋಣಕ್ಕೆ ಹಿಂದಿರುಗಬೇಕಾಯಿತು. ಅಲ್ಲಿ ೧೯೦೭ರಲ್ಲಿ ಖಾಸಗಿಯಾಗಿ ಎಫ್.ಎ. ಪರೀಕ್ಷೆಗೆ ಕುಳಿತನು. ಇಂಗ್ಲಿಷ್ ಭಾಷಾಪರಿಜ್ಞಾನ ಸಾಲದೆಂದು ಫಲಿತಾಂಶ ಬಂದಿತು. ಮುಖ್ಯವಾಗಿ ರಾಮಾನುಜನ್ ಪ್ರತಿಭೆಯು ಆ ಕಾಲೇಜಿನವರಿಗೆ ಗೊತ್ತಾಗಲಿಲ್ಲ. ಗೊತ್ತಾಗಿದ್ದರೆ ಅವರು ಅವನನ್ನು ಬೇರೆ ವಿಧದಲ್ಲಿ ಪರೀಕ್ಷಿಸಿ ಸನ್ಮಾನಿಸುತ್ತಿದ್ದರು. ಈಗ ಜಗತ್ಪ್ರಸಿದ್ಧನಾಗಿರುವ ರಾಮಾನುಜನ್ ಹಿಂದೆ ತಮ್ಮ ಕಾಲೇಜಿನ ವಿದ್ಯಾರ್ಥಿಯಾಗಿದ್ದನೆಂದು ಅವರು ಹೆಮ್ಮೆಪಡುವುದು ಸಹಜವೇ ಆದಾಗ್ಯೂ, ತಮ್ಮ ಕಾಲೇಜಿನ ಪದವೀಧರರ ಪಟ್ಟಿಯಲ್ಲಿ ಅವನ ಹೆಸರಿಲ್ಲದಂತೆ ಮಾಡಿಕೊಂಡ ಕಳಂಕವು ಅವರಿಗೆ ತಪ್ಪಲಾರದು. ಅವರ ತಪ್ಪೇನು, ಪಾಪ, ರಾಮಾನುಜನ್ ಅಂಥವನ ಮಟ್ಟವನ್ನರಿತುಕೊಳ್ಳುವುದು ಅಷ್ಟು ಸುಲಭವಲ್ಲ. ಅದಕ್ಕೆ ಕೇಂಬ್ರಿಜಿನ ಹಾರ್ಡಿಯವರೇ ಬೇಕಾಯಿತು. ಅಂತು ರಾಮಾನುಜನಿನ ಶಾಲಾವ್ಯಾಸಂಗವು ಅಲ್ಲಿಗೆ ಮುಗಿಯಿತು.

ಅಲ್ಲಿಂದ "ಕೆಲಸ" ಸಿಗುವುದು ತಡವಾಯಿತು. ಆದರೂ ಹಿರಿಯರು ಇವನಿಗೆ ೧೯೦೯ರಲ್ಲಿ ಯಥಾವಿಧಿಯಾಗಿ ವಿವಾಹವನ್ನೇನೋ ಮಾಡಿಬಿಟ್ಟರು. "ಕೆಲಸ" ದೊರೆಯದಿದ್ದರೂ ನೋಟ್ ಬುಕ್ಕಿನಲ್ಲಿ ಇವನ ಸ್ವಂತ ಕೆಲಸ ನಡೆಯುತ್ತಲೇ ಇತ್ತು—ಗಣಿತಶೋಧನೆ. ಕಡೆಗೆ "ಕೆಲಸ" ದೊರೆತ ಹೊರತು ವಿಧಿಯಿಲ್ಲವಾಯಿತು. ಆಗ ದಕ್ಷಿಣ ಆರ್ಕಾಟ್ ಜಿಲ್ಲೆಯ ತಿರುಕೋಯಿಲೂರಿನಲ್ಲಿ ವಿ. ರಾಮಸ್ವಾಮಿ ಅಯ್ಯಂಗಾರ್ಯರು ಡೆಪ್ಯುಟಿ ಕಲೆಕ್ಟರಾಗಿದ್ದರು. ಅವರಿಗೆ ಗಣಿತದಲ್ಲಿ ತಕ್ಕಮಟ್ಟಿಗೆ ಪರಿಶ್ರಮವೂ ಇದ್ದುದರಿಂದ ರಾಮಾನುಜನ್ ನೋಟ್‌ಬುಕ್ ಸಮೇತ ಅವರನ್ನು ಭೇಟಿಯಾಗಿ ಗುಮಾಸ್ತೆಯ ಕೆಲಸವನ್ನು ಬೇಡಿದನು (೧೯೧೧). ಅದಕ್ಕೆ ಅವರು ಒಂದು ಕಾಗದವನ್ನು ಬರೆದುಕೊಟ್ಟು, ಅದನ್ನು ಪಿ. ವಿ. ಶೇಷು ಅಯ್ಯರವರಿಗೆ ಕೊಡೆಂದು ಹೇಳಿ ಕಳುಹಿಸಿದರು. ಶೇಷು ಅಯ್ಯರು ಕುಂಭಕೋಣದ ಕಾಲೇಜಿಗೆ ಮುಖ್ಯೋಪಾಧ್ಯಾಯರಾಗಿದ್ದರು. ರಾಮಸ್ವಾಮಿ ಅಯ್ಯಂಗಾರ್ಯರಿಂದ ಕಾಗದವನ್ನು ತಂದ ಈ ಯುವಕನ ವಿಷಯ ಅವರಿಗಾಗಲೇ ಗೊತ್ತಿತ್ತು. ಅವರು ಮದರಾಸಿನ ಅಕೌಂಟೆಂಟ್ ಜನರಲ್‌ರವರ ಆಫೀಸಿನಲ್ಲಿ ಪ್ರಯತ್ನಿಸಿ ಇವನಿಗೆ ಹಂಗಾಮಿಯಾಗಿ ಒಂದು ಗುಮಾಸ್ತೆಯ ಕೆಲಸ ಕೊಡಿಸಿಕೊಟ್ಟರು. ಆ ಮೇಲೆ ರಾಮಾನುಜನ್ ಕೆಲವು ಕಾಲ ಮದರಾಸಿನಲ್ಲಿ ಖಾಸಗಿಯಾಗಿ ಪಾಠಗಳನ್ನು ಹೇಳಿ ಜೀವನವನ್ನು ತಳ್ಳಬೇಕಾಯಿತು. ಶೇಷು ಅಯ್ಯರು ಮತ್ತೆ ಇವನನ್ನು ನೆಲ್ಲೂರಿಗೆ ಹೋಗಿ ಅಲ್ಲಿ ಕಲೆಕ್ಟ

ರಾಗಿದ್ದ ದಿವಾನ್ ಬಹದೂರ್ ರಾಮಚಂದ್ರರಾಯರನ್ನು ನೋಡೆಂದು ಒತ್ತಾಯ ಪಡಿಸಿದರು. ಹಳೆಯ ನೋಟ್ ಬುಕ್ಕನ್ನು ಕಂಕುಳಲ್ಲಿರುಕಿಸಿಕೊಂಡು ಎದುರಿಗೆ ಬಂದು ನಿಂತ ಈ ಬಡಬ್ರಾಹ್ಮಣನು ವಿಚಿತ್ರವಾಗಿ ಕಂಡರೂ, ಅವನ ಕಣ್ಣಿನ ಹೊಳಪು ರಾಮಚಂದ್ರರಾಯರ ಗಮನವನ್ನು ಸೆಳೆಯಿತು. ಮೊದಲನೆಯ ಭೇಟಿಯಲ್ಲಿ ಇವನ ನೋಟ್ ಬುಕ್ಕು ಅವರಿಗೆ ಅರ್ಥವಾಗದಿದ್ದರೂ ಅವರ ಪಾಂಡಿತ್ಯದ ಮಟ್ಟ ಇವನಿಗೆ ಅರ್ಥವಾಗಿ, ಎರಡನೆಯ ದಿವಸ ಅವರಿಗೆ ಅರ್ಥವಾಗುವಂಥ ಕೆಲವು ವಿಷಯಗಳನ್ನು ಹೇಳಿ ವಿವರಿಸಿದನು. "ಇವನ Theory of Divergent Series ಮುಂತಾದ ಶೋಧನೆಗಳಲ್ಲಿ ಏನೋ ಇರಬೇಕು. ಅಂತು ಇವನು ಅಸಾಧಾರಣ ವ್ಯಕ್ತಿ" ಎಂದು ರಾಮಚಂದ್ರರಾಯರಿಗೆ ತೋರಿತು. ಅವರು ಸ್ವಂತ ಖರ್ಚಿನಿಂದ ಇವನನ್ನು ಕೆಲವುಕಾಲ ಮದರಾಸಿನಲ್ಲಿರಿಸಿ, ಆ ಮೇಲೆ ಮದರಾಸಿನ ಬಂದರಿನಲ್ಲಿ (Madras Port Trust Office) ಗುಮಾಸ್ತೆಯ ಕೆಲಸವನ್ನು ಕೊಡಿಸಿದರು. ಹೀಗೆ ೧೯೧೨ನೆಯ ಫೆಬ್ರುವರಿ ೯ ರಿಂದ ೧೯೧೩ನೆಯ ಮೇ ೧೮ ವರೆಗೆ ಮದರಾಸಿನ ಬಂದರಿನಲ್ಲಿ ಬಂದಿಳಿದ ಮೂಟೆಗಳು ಪ್ರಚಂಡ ಪ್ರತಿಭಾಶಾಲಿಯಾದ ಶ್ರೀನಿವಾಸ ರಾಮಾನುಜನ್ನಿಂದ ಎಣಿಸಲ್ಪಡುವ ಭಾಗ್ಯವನ್ನು ಪಡೆದವು.

ಮೂಟೆಗಳನ್ನೆಣಿಸುವ ಮಧ್ಯೆ ರಾಮಾನುಜನ್ Bernoulli's Numbers ಎಂಬ ಶೋಧನೆಯನ್ನು *Journal of the Indian Mathematical Society* ಎಂಬ ಪತ್ರಿಕೆಯಲ್ಲಿ ಪ್ರಕಟಿಸಿದನು. ಇದಕ್ಕೆ ಹಿಂದೆ ಕೆಲವು ಹೊಸ ಲೆಕ್ಕಗಳನ್ನೂ ಪ್ರಕಟಿಸಿದ್ದನು. ಇದೆಲ್ಲವನ್ನೂ ನೋಡಿ ರಾಮಚಂದ್ರರಾಯರು ಮದರಾಸಿನ ಎಂಜಿನಿಯರಿಂಗ್ ಕಾಲೇಜಿನ ಗ್ರಿಫಿತ್ ಎಂಬವರ ಮೂಲಕ, ಬಂದರಿನ ಮುಖ್ಯಾಧಿಕಾರಿಗಳಾಗಿದ್ದ ಸರ್ ಫ್ರಾನ್ಸಿಸ್ ಸ್ಪ್ರಿಂಗರವರಿಗೆ ಈ ಮೇಧಾವಿಯ ವಿಷಯವನ್ನು ತಿಳಿಯಪಡಿಸಿದರು. ಸ್ಪ್ರಿಂಗರವರು ವಿದ್ಯಾಪಕ್ಷಪಾತಿಗಳಾಗಿದ್ದುದರಿಂದ, ಅವರಿಂದಲೂ ಬಂದರಿನ ಮ್ಯಾನೇಜರಾಗಿದ್ದ ಎಸ್. ನಾರಾಯಣ ಅಯ್ಯರಿಂದಲೂ ರಾಮಾನುಜನ್ನಿಗೆ ತುಂಬ ಉತ್ತೇಜನ ದೊರೆಯಿತು.

ಅತ್ತ ಶೇಷು ಅಯ್ಯರೂ ಯೋಚಿಸುತ್ತಿದ್ದರು: "ಈ ದೇಶದಲ್ಲಿ ರಾಮಾನುಜನ್ನಿನ ಶೋಧನೆಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವವರಿಲ್ಲ. ಅಲ್ಲದೆ ಪಾಶ್ಚಾತ್ಯ ವಿದ್ವಾಂಸರ ಸಂಪರ್ಕವೂ ಅವನಿಗೆ ಆವಶ್ಯಕ" ಎಂದು. ಹೀಗೆ ಯೋಚಿಸಿ ಅವರು ಕೇಂಬ್ರಿಜ್ ವಿಶ್ವವಿದ್ಯಾಲಯದ ಹಾರ್ಡಿಯವರಿಗೆ ಶೋಧನೆಗಳನ್ನು ಕಳುಹಿಸಿಕೊಡೆಂದು ರಾಮಾನುಜನ್ನಿಗೆ ಸಲಹೆಯಿತ್ತರು. ಅದರಂತೆ ಅವನು ೧೯೧೩ನೆಯ ಜನವರಿ ೧೬ರಲ್ಲಿ ಹಾರ್ಡಿಯವರಿಗೆ ಒಂದು ಕಾಗದವನ್ನು ಬರೆದು ಅದರ ಜೊತೆಯಲ್ಲಿ

ತನ್ನ ನೂರಾರು ಶೋಧನಾ ಫಲಗಳನ್ನೂ ಕಳುಹಿಸಿದನು. ಆಗ ತಾನೇ ಹಾರ್ಡಿಯವರು "Orders of Infinity" ಎಂಬ ವಿಷಯವಾಗಿ ಒಂದು ಲೇಖನವನ್ನು ಪ್ರಕಟಿಸಿ, ಅದರಲ್ಲಿ "ಒಂದು ಸಂಖ್ಯೆಯನ್ನು ಕೊಟ್ಟರೆ ಅದಕ್ಕಿಂತ ಕಡಮೆಯಾದ ಮತ್ತು ಅಪವರ್ತನಗಳಿಲ್ಲದ ಸಂಖ್ಯೆಗಳೆಷ್ಟಿವೆ ಎಂಬುದು ಇನ್ನೂ ಗೊತ್ತಾಗಿಲ್ಲ" ಎಂದು ಒಂದು ಕಡೆ ಬರೆದಿದ್ದರು. ರಾಮಾನುಜನ್ ತನ್ನ ಕಾಗದದಲ್ಲಿ ಈ ಪ್ರಸ್ತಾಪವನ್ನೆತ್ತಿ, "ಇದು ನನಗೆ ಗೊತ್ತಿದೆ" ಎಂದು ಬರೆದು, ಕೊನೆಯಲ್ಲಿ "ಮದರಾಸಿನ ವಿಶ್ವವಿದ್ಯಾನಿಲಯದಿಂದ ನನಗೆ ವೇತನ ಬರುವಂತೆ ಶಿಫಾರಸು ಮಾಡುವಿರಾ?" ಎಂದು ಪ್ರಾರ್ಥಿಸಿದ್ದನು. ಹಾರ್ಡಿಯವರಿಗೆ ಇವನು ಪ್ರತಿಭಾಶಾಲಿಯೆಂಬುದು ಗೊತ್ತಾಯಿತು; ಇವನ ಶೋಧನೆಗಳ ತಪ್ಪುನೆಪ್ಪುಗಳು ಅರ್ಥವಾದವು. ಇವನ ಪ್ರತಿಭೆಗೆ ಪಾಶ್ಚಾತ್ಯ ವಿದ್ವಾಂಸರ ಸಂಪರ್ಕವು ಅತ್ಯಾವಶ್ಯಕವೆಂದು ತೀರ್ಮಾನಿಸಿಕೊಂಡು, ಅವರು ಲಂಡನ್ನಿನ ಭಾರತೀಯ ವಿದ್ಯಾರ್ಥಿಗಳ ಕಾರ್ಯದರ್ಶಿಗಳಿಗೆ (Secretary for Indian Students in London) ಬರೆದು, ಈ ಪ್ರತಿಭಾಶಾಲಿಯನ್ನು ಹೇಗಾದರೂ ಮಾಡಿ ಕೇಂಬ್ರಿಜ್‌ಗೆ ಬರಮಾಡಿಕೊಳ್ಳಬೇಕೆಂದು ಸೂಚಿಸಿದರು. ಈ ಸಿಫಾರಸು ಮದರಾಸಿನ ಕಾರ್ಯದರ್ಶಿಗಳಿಗೆ (Secretary for Students' Advisory Board) ಕಳುಹಿಸಲ್ಪಟ್ಟಿತು. ಆದರೆ ರಾಮಾನುಜನ್ "ಇಂಗ್ಲೆಂಡಿಗೆ ಹೋಗುವುದಕ್ಕಾಗಿ ನಾನು ವೇತನವನ್ನು ಕೇಳಲಿಲ್ಲ. ಬ್ರಾಹ್ಮಣನು ಸಮುದ್ರಯಾನ ಮಾಡುವುದುಂಟೆ? ನನ್ನ ತಾಯಿಯೂ ಒಪ್ಪುವುದಿಲ್ಲ. ನಾನು ಕೇಂಬ್ರಿಜ್‌ಗೆ ಹೋಗುವುದಿಲ್ಲ" ಎಂದು ಸ್ಪಷ್ಟವಾಗಿ ಹೇಳಿಬಿಟ್ಟನು. ಇದನ್ನು ಕೇಳಿದ ಆ ಕಾರ್ಯದರ್ಶಿಯು ಕಿಂಕರ್ತವ್ಯ ಮೂಢನಾಗಿ, ಮದರಾಸಿನ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರರಿಗೆ ಎಲ್ಲ ವಿಷಯವನ್ನೂ ತಿಳಿಸಿ ತನ್ನ ಪಾಲಿನ ಕಾರ್ಯವನ್ನು ಮುಗಿಸಿಕೊಂಡನು. ಇದಕ್ಕೆ ಒಂದು ತಿಂಗಳ ಹಿಂದೆ, ಎಂದರೆ ೧೯೧೩ನೆಯ ಫೆಬ್ರುವರಿಯಲ್ಲಿ, ಸಿಮ್ಲಾದಿಂದ ಹವಾ ಇಲಾಖೆಯ ಮುಖ್ಯಾಧಿಕಾರಿ ಡಾ|| ಜಿ. ಟಿ. ವಾಕರ್ ಅವರು ಮದರಾಸಿಗೆ ಭೇಟಿ ಕೊಟ್ಟಿದ್ದಾಗ, ಸ್ಪ್ರಿಂಗರವರು ರಾಮಾನುಜನ್ನಿನ ನೋಟ್ ಬುಕ್ಕನ್ನು ಅವರಿಗೆ ತೋರಿಸಿದ್ದರು. ವಾಕರ್ ಅವರೂ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ಸಿಫಾರಸು ಮಾಡಿದರು. ಹೀಗೆ ಹಾರ್ಡಿ ಮತ್ತು ವಾಕರ್ ಇಬ್ಬರ ಸಿಫಾರಸುಗಳ ಫಲವಾಗಿ ರಾಮಾನುಜನ್ನಿಗೆ ವಿಶ್ವವಿದ್ಯಾನಿಲಯದಿಂದ ತಿಂಗಳಿಗೆ ೭೫ ರೂಪಾಯಿಗಳಂತೆ ವೇತನ ದೊರೆಯಿತು. ಮೂಟೆಗಳ ಪರಿಗಣನೆಯಿಂದ ಮುಕ್ತಿಯುಂಟಾಯಿತು.

ಅಲ್ಲಿಂದ ಮುಂದೆ ಶ್ರೀನಿವಾಸ ರಾಮಾನುಜನ್ ಅವರು ತಮ್ಮ ಜೀವನವನ್ನು ಗಣಿತಶಾಸ್ತ್ರ ಶೋಧನೆಯಲ್ಲೇ ಕಳೆದರು.

ಇವರನ್ನು ಇಂಗ್ಲೆಂಡಿಗೆ ಬರಮಾಡಿಕೊಳ್ಳುವ ಯೋಚನೆಯನ್ನು ಹಾರ್ಡಿಯವರು ಅಷ್ಟಕ್ಕೇ ಬಿಡಲಿಲ್ಲ. ಬಾರೆಂದು ಆಕರ್ಷಣೆಗಳನ್ನು ತೋರಿಸಿ ಕಾಗದಗಳನ್ನು ಬರೆಯುತ್ತಲೇ ಇದ್ದರು. ಈ ಮಧ್ಯೆ ೧೯೧೪ರಲ್ಲಿ ಇ. ಎಚ್. ನೆವಿಲ್ ಎಂಬ ವಿದ್ವಾಂಸರು ಕೇಂಬ್ರಿಜ್ ಇಂದ ಮದರಾಸಿಗೆ ಉಪನ್ಯಾಸಮಾಡುವುದಕ್ಕಾಗಿ ಆಹ್ವಾನಿತರಾಗಿ ಬಂದರು. ಅವರು ಕೇಂಬ್ರಿಜಿನಿಂದ ಮದರಾಸಿಗೆ ಹೊರಡುವಾಗ ಹಾರ್ಡಿಯವರು ಅವರನ್ನು ಭೇಟಿಯಾಗಿ, "ನೀವು ಮದರಾಸಿನಿಂದ ಹಿಂದಕ್ಕೆ ಬರುವಾಗ, ಹೇಗಾದರೂ ಮಾಡಿ ಅಲ್ಲಿರುವ ಆ ಶ್ರೀನಿವಾಸ ರಾಮಾನುಜನ್ ಅವರನ್ನು ಜೊತೆಯಲ್ಲಿ ಕರೆತಂದೀರಾ?" ಎಂದು ಕೇಳಿದ್ದರು. ಅದರಂತೆ ನೆವಿಲ್ ಅವರು ಮದರಾಸಿನಲ್ಲಿ ರಾಮಾನುಜನ್ ಅವರನ್ನು ಒತ್ತಾಯಪಡಿಸಿದರು. ಇದನ್ನು ನೋಡಿ ರಾಮಾನುಜನ್ ಸ್ನೇಹಿತರು ಮೆಲ್ಲನೆ ಅವರನ್ನು ಕೇಂಬ್ರಿಜ್‌ಗೆ ಹೋಗುವುದಕ್ಕೆ ಒಪ್ಪಿಸಿದರು; ಅಲ್ಲಿಗೆ ರಾಮಾನುಜನ್ ತಾಯಿ ಒಪ್ಪುವುದೊಂದು ಮಾತ್ರ ಉಳಿಯಿತು. ಈ ವಿಘ್ನ ಶೇಷವನ್ನು ನಾಮಕ್ಕ ದೇವತೆಯೇ ಪರಿಹರಿಸಿದಳು. ದೇವಿಯು ತಾಯಿಯ ಕನಸಿನಲ್ಲಿ ಕಾಣಿಸಿಕೊಂಡು, ಮಗನನ್ನು ಕೇಂಬ್ರಿಜ್‌ಗೆ ಕಳುಹಿಸುವಂತೆ ಅಪ್ಪಣೆಮಾಡಿದುದೇ ಅಲ್ಲದೆ, ಪಾಶ್ಚಾತ್ಯ ವಿದ್ವತ್ಸಭೆಯೊಂದರಲ್ಲಿ ರಾಮಾನುಜನ್ ಸನ್ಮಾನಿತನಾದಂತೆ ಒಂದು ದೃಶ್ಯವನ್ನು ತೋರಿಸಿ, ಅಂತರ್ಧಾನಳಾದಳು. ದುಃಸಾಧ್ಯವಾದ ಘಟ್ಟವು ಹೀಗೆ ಸಾಧ್ಯವಾದ ಮೇಲೆ, ನೆವಿಲ್ ಅವರೂ, ಪ್ರೆಸಿಡೆನ್ಸಿ ಕಾಲೇಜಿನ ಪ್ರೊಫೆಸರ್ ಲಿಟ್ಲ್ ಹೆಯಿಲ್ಸ್‌ರವರೂ ಮದರಾಸಿನ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ "ಇವನಿಗೆ ನೀವು ಅನ್ನ ಹಾಕಿರಿ, ಇವನು ಇಡಿಯ ಪ್ರಪಂಚಕ್ಕೇ ಅಗ್ರಗಣ್ಯನಾಗುತ್ತಾನೆ" ಎಂದು ಮನಮುಟ್ಟುವಂತೆ ಬರೆದು, ವರ್ಷಕ್ಕೆ ೨೫೦ ಪೌಂಡುಗಳಂತೆ ಎರಡು ವರ್ಷಗಳ ವೇತನವನ್ನೂ ಹಡಗಿನ ಖರ್ಚನ್ನೂ ಕೊಡಿಸಿದರು. ಹೀಗೆ ಎರಡು ವರ್ಷ ಅವಧಿಯೊಡನೆ ಪ್ರಾರಂಭವಾದ ವೇತನವು ರಾಮಾನುಜನ್ ಅವರ ಶೋಧನಾ ಸಾಮರ್ಥ್ಯದಿಂದ ಸಾರ್ಥಕವಾದುದೇ ಅಲ್ಲದೆ ಅವರ ಜೀವಾವಧಿ ನಡೆದೂ ನಡೆಯಿತು. ವೇತನದಿಂದ ತಿಂಗಳಿಗೆ ೬೦ ರೂಪಾಯಿಗಳನ್ನು ಕುಂಭಕೋಣದಲ್ಲಿ ತಮ್ಮ ವೃದ್ಧ ಮಾತೆಗೆ ಸಲ್ಲಿಸುವಂತೆ ಏರ್ಪಡಿಸಿ, ರಾಮಾನುಜನ್ ಅವರು ನೆವಿಲ್‌ರವರ ಜೊತೆಯಲ್ಲಿ ೧೯೧೪ನೆಯ ಮಾರ್ಚ್ ೧೭ರಲ್ಲಿ ಕೇಂಬ್ರಿಜ್‌ಗೆ ಪ್ರಯಾಣ ಬೆಳೆಸಿದರು. ಕೇಂಬ್ರಿಜಿನಲ್ಲಿ ಹಾರ್ಡಿಯವರು ರಾಮಾನುಜನ್ ಅವರನ್ನು ಟ್ರಿನಿಟಿ ಕಾಲೇಜಿಗೆ ಸೇರಿಸಿ ಅಲ್ಲೂ ವರ್ಷಕ್ಕೆ ೬೦ ಪೌಂಡು ವೇತನವನ್ನು ಕೊಡಿಸಿದರು.

ಹಾರ್ಡಿಯವರು ರಾಮಾನುಜನ್ ಅವರನ್ನು ಕೇಂಬ್ರಿಜ್‌ಗೆ ಬರಮಾಡಿಕೊಳ್ಳುವ ಸಾಹಸದಲ್ಲೇನೋ ಉತ್ತೀರ್ಣರಾದರು. ಆದರೆ ಅಲ್ಲಿಂದ ಮುಂದೆ ಏನು ಮಾಡ

ಬೇಕೆಂಬುದು ಅವರಿಗೆ ಪ್ರಯಾಸಕ್ಕಿಟ್ಟುಕೊಂಡಿತು. ಏಕೆಂದರೆ ಹಾರ್ಡಿಯವರೇ ಹೇಳಿರುವ ಹಾಗೆ

'Here was a man who could work out modular equations and theorems of complex multiplication to orders unheard of, whose mastery of continued fractions was, on the formal side at any rate, beyond that of any mathematician in the world, who had found for himself the functional equation of the zeta-function and the dominant terms of many of the most famous problems in the analytic theory of numbers; and he had never heard of a doubly-periodic function or of Cauchy's theorem, and had indeed but the vaguest idea of what a function of a complex variable was.'

ಹೀಗೆ ಗಣಿತದ ಕೆಲವು ಭಾಗಗಳಲ್ಲಿ ಅವನಿಗೆ ಅತ್ಯಂತ ಗಹನವಾದ ವಿಷಯಗಳು ಗೊತ್ತಿದ್ದವು; ಮತ್ತೆ ಕೆಲವು ಭಾಗಗಳಲ್ಲಿ ಏನೂ ಗೊತ್ತಿರಲಿಲ್ಲ! ಪಾಂಡಿತ್ಯದ ಸಹಾಯವಿಲ್ಲದೆ ಅವನ ಪ್ರತಿಭೆಯು ಹೇಗೆ ಹೇಗೋ ಪ್ರವಹಿಸುತ್ತಿತ್ತು. ಇಡಿಯ ಯೂರೋಪ್ ಖಂಡದ ಪಾಂಡಿತ್ಯವೆಂಬ ಪರ್ವತದೊಂದಿಗೆ ಹೋರಾಡಬೇಕಾಗಿತ್ತು ಈ ಬಡ ಬ್ರಾಹ್ಮಣನ ಮೇಧಾಶಕ್ತಿ!

('. . . . a poor solitary Hindu pitting his brains against the accumulated wisdom of Europe.') —HARDY.

ಅವನಿಗೆ ಕ್ರಮವಾದ ಶಾಸ್ತ್ರಾಭ್ಯಾಸವನ್ನು ಮಾಡಿಸಿ ಪಾಂಡಿತ್ಯವನ್ನು ತುಂಬಿಸಿದರೆ ಈ ಪರಿಸ್ಥಿತಿಯನ್ನು ಸರಿಪಡಿಸಬಹುದೆಂದು ಯೋಚಿಸಿ ಹಾರ್ಡಿಯವರು ಶಿಕ್ಷಣವನ್ನು ಪ್ರಾರಂಭಿಸಿ ನೋಡಿದರು. ಆದರೆ

('It was impossible to teach him systematically.') —Ibid.

ಅವನಿಗೆ ಕ್ರಮವಾದ ಶಿಕ್ಷಣವನ್ನು ಕೊಡುವುದು ಅಸಾಧ್ಯವಾಗಿ ತೋರಿತು. ಬಲಾತ್ಕಾರ ಶಿಕ್ಷಣದಿಂದ

('I might destroy his confidence or break the spell of his inspiration.') —Ibid.

ಶೋಧನಾ ಕಾರ್ಯದಲ್ಲಿ ಅವನಿಗಿರುವ ಭರವಸೆಯು ನಾಶವಾಗಬಹುದು, ಅಥವಾ ಅವನ ಸ್ಫೂರ್ತಿಯ ಮಂತ್ರಶಕ್ತಿಗೆ ಧಕ್ಕೆಯುಂಟಾಗಬಹುದು. ಹಾಗೆಂದು ಶಿಕ್ಷಣವನ್ನು ನಿಲ್ಲಿಸುವುದೂ ಸಾಧ್ಯವಾಗಿ ಕಾಣಲಿಲ್ಲ. ಏಕೆಂದರೆ,

('It was impossible to allow him to go through life supposing that all the zeros of the zeta-function were real.') —Ibid.

ಕೆಲವು ವಿಷಯಗಳಲ್ಲಿ ಅವನಿಗಿದ್ದ ತಪ್ಪು ಅಭಿಪ್ರಾಯಗಳು ಆಜೀವ ಪರ್ಯಂತ ಹಾಗೇ ಇರಲೆಂದು ಸುಮ್ಮನಿರುವುದಾದರೂ ಹೇಗೆ? ಅವನನ್ನು ಸಂಪೂರ್ಣವಾಗಿ ಕೈಬಿಡೋಣವೆಂದರೆ

('His flow of original ideas showed no symptom of abatement.')
—Ibid.

ಅವನ ಹೊಸ ಯೋಚನೆಗಳ ಪ್ರವಾಹವು ತಗ್ಗುವಂತೆಯೇ ಕಾಣಲಿಲ್ಲ. ಬೆಳಕು ಹರಿದರೆ ನಾಲ್ಕಾರು ಗಣಿತ ಫಲಗಳನ್ನು ತಂದು ತೋರಿಸುತ್ತಿದ್ದನು. ಅವುಗಳಲ್ಲಿ ಹಿಂದೆಯೇ ಬೇರೊಬ್ಬರಿಂದ ಕಂಡುಹಿಡಿಯಲ್ಪಟ್ಟ ಫಲಗಳೂ ಸೇರಿದ್ದಾಗ್ಯೂ, ಹೊಸ ಫಲಗಳೂ ಇರುತ್ತಿದ್ದವು. ಅಲ್ಲದೆ ಅವುಗಳಲ್ಲಿ

('More than meets the eye.') —Ibid.

ಕಣ್ಣಿಗೆ ಕಾಣುವುದಕ್ಕಿಂತ ಹೆಚ್ಚು ವಿಷಯ ಗರ್ಭಿತವಾಗಿರುತ್ತಿತ್ತು. ಹಾರ್ಡಿಯವರು ಒಂದು ವೇಳೆ ಶಿಕ್ಷಣವನ್ನು ಮುಂದುವರಿಸಿದ್ದರೆ

('He would have been less of Ramanujan and more of a European professor, and the loss might have been greater than the gain.')
—Ibid.

ರಾಮಾನುಜನ್ನಿನ ರಾಮಾನುಜತ್ವವು ಕಡಮೆಯಾಗಿ ಪಾಶ್ಚಾತ್ಯ ಪಾಂಡಿತ್ಯವು ಹೆಚ್ಚಾಗಿ, ಲಾಭಕ್ಕಿಂತ ನಷ್ಟವೇ ಜಾಸ್ತಿಯೆನಿಸುತ್ತಿತ್ತು. ಆದ್ದರಿಂದ ಹಾರ್ಡಿಯವರು ಕಡೆಗೆ ಅವನ ಪ್ರತಿಭೆಯನ್ನೇ ಅನುಸರಿಸುತ್ತ, ಅದಕ್ಕೆ ಭಂಗಬಾರದಂತೆ ಅನುಗುಣವಾಗಿಯೇ ವಿಷಯವನ್ನೂ ಬೋಧಿಸುತ್ತ ಹೋಗಬೇಕಾಯಿತು. ಹೀಗೆ ಮಾಡಿದ್ದರಿಂದ ಅವರು ಕೊನೆಗೆ

('I learnt more from him than he from me.')

"ಅವನು ನನ್ನಿಂದ ಕಲಿತುಕೊಂಡುದಕ್ಕಿಂತ ಹೆಚ್ಚಾಗಿ ನಾನೇ ಅವನಿಂದ ಕಲಿತೆ" ಎಂದು ಹೇಳಿದ್ದಾರೆ. ಅಲ್ಲದೆ

('I can still remember with satisfaction that I could recognize at once what a treasure I had found.') —Ibid.

"ರಾಮಾನುಜನ್ ನನಗೆ ದೊರೆತುದು ಎಂಥಾ ನಿಧಿ ದೊರೆತಂತಾಯಿತೆಂಬುದನ್ನು ಕೂಡಲೇ ಗ್ರಹಿಸಿದೆನೆಂಬ ತೃಪ್ತಿ ನನಗಿದೆ" ಎಂದೂ ಹೇಳಿದ್ದಾರೆ.

ಕೇಂಬ್ರಿಜಿನಲ್ಲಿ ರಾಮಾನುಜನ್ ಅವರ ಶೋಧನಾ ಕಾರ್ಯವು ಏಕಮುಖವಾಗಿ ಸಾಗುತ್ತಿತ್ತು.

('He was a mathematician anxious to get on with the job.')
ಮದರಾಸಿನ ವಿಶ್ವವಿದ್ಯಾನಿಲಯಕ್ಕೆ ಹಾರ್ಡಿಯವರಿಂದಲೂ ರಾಮಾನುಜನ್ ಅವರಿಂದಲೂ ಕಾಗದಗಳು ಬರುತ್ತಿದ್ದವು. ಹಾರ್ಡಿಯವರು ರಾಮಾನುಜನ್ ಅವರ ಶೋಧನೆಗಳನ್ನು ಶ್ಲಾಘಿಸಿ ಬರೆಯುತ್ತಿದ್ದರು. ಆದರೆ ರಾಮಾನುಜನ್ ಅವರು ವೇತನಕ್ಕೆ ತಕ್ಕಷ್ಟು ಕೆಲಸ ನಡೆಯುತ್ತಿಲ್ಲ" ವೆಂದು ಬರೆಯುತ್ತಿದ್ದರು. ವಾಸ್ತವವಾಗಿಯೂ ಕಾರ್ಯ ನಡೆದಿದೆ ಎಂಬ ತೃಪ್ತಿಯನ್ನು ರಾಮಾನುಜನ್ ಅವರಲ್ಲಿ ಉಂಟುಮಾಡುವುದೇ ಹಾರ್ಡಿಯವರಿಗೆ ಕಷ್ಟವಾಗಿತ್ತು.

('All that is wanted is to get him realize that he really is a success.') —Ibid.

ಹಾರ್ಡಿಯವರ ಸಾನ್ನಿಧ್ಯದಲ್ಲಿ ರಾಮಾನುಜನ್ ಅವರು ಅನೇಕ ಲೇಖನಗಳನ್ನು ಪ್ರಕಟಿಸಿದರು. ಅವುಗಳಲ್ಲಿ ಏಳು ಲೇಖನಗಳಿಗೆ ಹಾರ್ಡಿಯವರು ಪ್ರಾಶಸ್ತ್ಯ ಕೊಟ್ಟಿದ್ದಾರೆ.

1. 'Modular Equations and Approximations to π'—*Quart. Journal of Mathematics*, Vol. 45.
2. 'Highly Composite Numbers'—*Proc. Lond. Math. Soc.*, Vol. 14.
3. 'On Certain Arithmetical Functions'—*Trans. Camb. Phil. Soc.*, Vol. 22.
4. 'On Certain Trigonometric Sums and their Application to the Theory of Numbers'—*Trans Camb. Phil. Soc.*, Vol. 22.
5. 'Some Properties of P (n), the number of Partitions of n.—*Proc. Camb. Phil. Soc.*, Vol. 19.
6. 'Proof of Certain Identities in Combinatory Analysis'—Ibid, pp. 214-216.
7. 'Congruence Properties of Partitions'—*Math. Zeitschrift*, Vol. 9.

ಅಲ್ಲದೆ, ಈ ಹಾರ್ಡಿಯವರು ತಮ್ಮ ಅಧಿಕಾರವಾಣಿಯಿಂದ

'I am inclined to think that it was in the Theory of Partitions and the allied parts of the theories of Elliptic Functions and continued Fractions that Ramanujan shows at his best.'

ಎಂದು ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದಾರೆ.

ರಾಮಾನುಜನ್ ಅವರ ಶೋಧನೆಗಳನ್ನು ಮೆಚ್ಚಿ ರಾಯಲ್ ಸೊಸೈಟಿಯ ವಿದ್ವಾಂಸರು ೧೯೧೮ನೆಯ ಫೆಬ್ರುವರಿ ೨೮ರಲ್ಲಿ ಅವರನ್ನು ತಮ್ಮ 'ಫೆಲೋ' ಪ್ರಶಸ್ತಿ

(F.R.S.) ಯಿಂದ ಸನ್ಮಾನಿಸಿದರು. ಆಗ ಅವರಿಗೆ ಕೇವಲ ೩೦ ವರ್ಷ ವಯಸ್ಸು. ಈ ಪ್ರಶಸ್ತಿಯು ಅದಕ್ಕೆ ಹಿಂದೆ ಯಾವ ಭಾರತೀಯನಿಗೂ ದೊರೆತಿರಲಿಲ್ಲ. ರಾಮಾನುಜನ್ ಅವರೇ ಮೊದಲನೆಯ ಭಾರತೀಯ (F.R.S.). ನಾಮಕ್ಕದೇವಿಯು ತಾಯಿಯ ಸ್ವಪ್ನದಲ್ಲಿ ತೋರಿಸಿದ ದೃಶ್ಯವು ನಿಜವಾಯಿತು.

ಇಂಗ್ಲೆಂಡಿನಲ್ಲಿ ರಾಮಾನುಜನ್ ಸಂಪೂರ್ಣವಾಗಿ 'ಗಣಿತಜೀವಿ' ಯಾಗಿಬಿಟ್ಟನು. ಶಾಸ್ತ್ರಸಂಶೋಧನದಾಹದಿಂದ ಶರೀರವನ್ನು ವಿಶೇಷವಾಗಿ ದಂಡಿಸಿದನು. ಆ ದೇಶದ ಹವಕ್ಕೆ ತಕ್ಕ ಏರ್ಪಾಟುಗಳನ್ನು ಮಾಡಿಕೊಳ್ಳಲಿಲ್ಲ. ಈ ಕಾರಣಗಳಿಂದ ಅಲ್ಲಿಗೆ ಹೋದ ಮೂರುವರ್ಷದೊಳಗಾಗಿಯೇ ಕ್ಷಯರೋಗಗ್ರಸ್ತನಾದನು. ೧೯೧೭ ರ ಬೇಸಗೆಯಲ್ಲಿ ಕೇಂಬ್ರಿಜಿನ ಆಸ್ಪತ್ರೆಗೆ ಸೇರಬೇಕಾಯಿತು. ಬಳಿಕ ವೆಲ್ಸ್ ಮತ್ತು ಲಂಡನ್‌ಗಳಲ್ಲಿ ಶುಶ್ರೂಷೆ ಹೊಂದಿದುದರಿಂದ ೧೯೧೮ ರ ವೇಳೆಗೆ ರೋಗವು ಸ್ವಲ್ಪ ಮಟ್ಟಿಗೆ ಇಳಿಯಿತು. ಆ ವರ್ಷ ಲಭಿಸಿದ F.R.S. ಪ್ರಶಸ್ತಿಯಿಂದ ಉತ್ತೇಜಿತನಾಗಿ, ಶರೀರ ದೌರ್ಬಲ್ಯವನ್ನು ಸಹ ಲಕ್ಷಿಸದೆ ಶ್ರಮಿಸಿ, ಮತ್ತೆ ಕೆಲವು ಶೋಧನೆಗಳನ್ನು ನಡೆಸಿ, ಅದೇ ಅಕ್ಟೋಬರ್ ೧೩ರಲ್ಲಿ ಟ್ರಿನಿಟಿ ಕಾಲೇಜಿನ 'ಫೆಲೋ' ಆದನು. ಇದರಿಂದ ವರ್ಷಕ್ಕೆ ೨೫೦ ಪೌಂಡುಗಳಂತೆ ಆರು ವರ್ಷಕಾಲ ವೇತನವು ದೊರೆಯುವಂತಾಯಿತು.

ರಾಮಾನುಜನ್ನಿಗೆ ಅಸಾಧಾರಣವಾದ ಜ್ಞಾಪಕಶಕ್ತಿಯಿತ್ತು. π, e ಮುಂತಾದ ಸಂಖ್ಯೆಗಳ ದಶಮಾಂಶರೂಪವನ್ನು ಎಷ್ಟು ಸ್ಥಾನಗಳವರೆಗೆ ಬೇಕಾದರೂ ಹೇಳುತ್ತಿದ್ದನು. ಹಾರ್ಡಿಯವರು

'He remembered the idiosyncrasies of numbers in an uncanny way.'

ಎಂದು ಹೇಳಿದ್ದಾರೆ. ರಾಮಾನುಜನ್ ಪುಟ್ನಿಯ ಆಸ್ಪತ್ರೆಯಲ್ಲಿದ್ದಾಗ ಒಂದು ದಿನ ಹಾರ್ಡಿಯವರು ಅಲ್ಲಿಗೆ ಒಂದು ಟ್ಯಾಕ್ಸಿಯಲ್ಲಿ ಹೋದರು. ರಾಮಾನುಜನ್‌ನಿನ ಶರೀರಸ್ಥಿತಿ ಉತ್ತೇಜನಕರವಾಗಿರಲಿಲ್ಲ. ಹಾರ್ಡಿಯವರು "ನೀವು ಹೀಗೆ ಮಲಗಿದ್ದೀರಿ. ನಾನು ಇಲ್ಲಿಗೆ ಬರುವಾಗ ಶಕುನವೂ ಸರಿಯಾಗಿ ಆಗಲಿಲ್ಲ; ೧೭೨೯ನೆಯ ನಂಬರಿನ ಟ್ಯಾಕ್ಸಿ ದೊರಕಿತು. ಈ ಸಂಖ್ಯೆ ಅಷ್ಟೇನೂ ಒಳ್ಳೆಯದಲ್ಲ. ಏಕೆಂದರೆ ಅದರ ಅಪವರ್ತನಗಳು ೭, ೧೩, ೧೯" ಎಂದರು. ಅದಕ್ಕೆ ರಾಮಾನುಜನ್ "ಅದು ಸ್ವಾರಸ್ಯವಾದ ಸಂಖ್ಯೆ. ಏಕೆಂದರೆ ಎರಡು ರೀತಿಗಳಲ್ಲಿ ಎರಡು ಘನ ಸಂಖ್ಯೆಗಳ ಮೊತ್ತವಾಗಿರುವ ($10^3 + 9^3$ ಅಥವಾ $12^3 + 1^3$) ಕನಿಷ್ಠ ಸಂಖ್ಯೆ ಅದು" ಎಂದರು. ಹಾರ್ಡಿಯವರಿಗೆ ಆಶ್ಚರ್ಯವಾಯಿತು. "ಘನ ಸಂಖ್ಯೆಗಳ ಮೊತ್ತವಾಗುವ ಬದಲು

ನಾಲ್ಕಾವೃತ್ತಿಯ ಸಂಖ್ಯೆಗಳ ಮೊತ್ತವಾಗಿ ಅದೇ ಗುಣವುಳ್ಳ ಸಂಖ್ಯೆಯನ್ನು ಹೇಳ ಬಲ್ಲಿರಾ ?" ಎಂದು ಕೇಳಿದರು. ರಾಮಾನುಜನ್ ಕ್ಷಣಕಾಲ ಸುಮ್ಮನಿದ್ದು "ಅದನ್ನು ಹೇಳುವುದು ಅಷ್ಟು ಸುಲಭವಲ್ಲ. ಆದರೆ ಅದು ಬಹು ದೊಡ್ಡ ಸಂಖ್ಯೆ" ಎಂದರು. ಅವರು ಹೇಳಿದುದು ನಿಜವೆಂದು ಹಾರ್ಡಿಯವರಿಗೆ ಆ ಮೇಲೆ ಗೊತ್ತಾಯಿತು ; ಆಯಿಲರನು $158^4 + 59^4 = 134^4 + 133^4$ ಎಂಬ ಫಲವನ್ನು ಹಿಂದೆಯೇ ಪ್ರಕಟಿಸಿದ್ದನು. ಗಣಿತದಲ್ಲಿ ರಾಮಾನುಜನ್ ಅವರು ಆಯಿಲರ್, ಯಾಕೋಬಿ ಎಂಬ ಮಹಾವ್ಯಕ್ತಿಗಳ ಮಟ್ಟದವರೆಂದು ಹಾರ್ಡಿಯವರು ಎಣಿಸಿದ್ದಾರೆ.

ತನ್ನ ಜೀವನದಲ್ಲಿ ನಡೆದ ಘಟನೆಗಳೆಲ್ಲವೂ ನಾಮಕ್ಕದೇವಿಯ ಪ್ರಸಾದವೆಂದು ರಾಮಾನುಜನ್ ಭಾವಿಸಿದ್ದನು. ಇಂಗ್ಲೆಂಡಿನ ವಾತಾವರಣದಲ್ಲಿದ್ದಾಗ್ಯೂ, ಶಾಸ್ತ್ರ ಶೋಧನೆಯಲ್ಲಿ ನಿರತನಾಗಿದ್ದಾಗ್ಯೂ, ವ್ಯಾಧಿಗ್ರಸ್ತನಾಗಿದ್ದಾಗ್ಯೂ, ಅವನು ಅನುಷ್ಠಾನವನ್ನಾಗಲಿ, ನಾಮಕ್ಕದೇವತೆಯ ಪೂಜೆಯನ್ನಾಗಲಿ ಒಂದು ದಿನವಾದರೂ ಬಿಡಲಿಲ್ಲ ; ಸ್ವಯಂಪಾಕವನ್ನು ಸಹ ಮಾಡಿಕೊಳ್ಳುತ್ತಿದ್ದನಂತೆ. ಕುರುಡು ನಂಬುಗೆಯಿಂದ ಹೀಗೆ ಮಾಡುತ್ತಿದ್ದನೇ ಅಥವಾ ಮತವಿಚಾರವನ್ನು ಚೆನ್ನಾಗಿ ಯೋಚನೆ ಮಾಡಿ, ದೃಢವಾದ ನಿರ್ಧರಗಳಿಗೆ ಬಂದಿದ್ದನೇ, ಎಂಬುದನ್ನು ಹೇಳುವುದು ಕಷ್ಟ. ಅಂತು ದೇವರ ಮತ್ತು ಇಹಪರಗಳ ವಿಚಾರವಾಗಿ ಅವನಿಗೆ ಸ್ಥಿರವಾದ ನಂಬುಗೆಗಳಿದ್ದವು. ಅವುಗಳನ್ನು ಯಾರೂ ಸಡಿಲಿಸುವಂತಿರಲಿಲ್ಲ. ರಾಮಾಯಣ ಮಹಾಭಾರತಗಳಲ್ಲಿ ಅವನಿಗೆ ತುಂಬ ಶ್ರದ್ಧೆ. ಮತದೃಷ್ಟಿಯಿಂದ ಮಾತ್ರ ಸಾಹಿತ್ಯದಲ್ಲಿ ಅವನಿಗೆ ಹೆಚ್ಚು ಆಸಕ್ತಿಯಿರಲಿಲ್ಲ. ರಾಜಕೀಯ ವಿಚಾರಗಳಲ್ಲಿ ಆಧುನಿಕನಾಗಿದ್ದನು. ಬಡತನವನ್ನು ಅನುಭವಿಸಿದ್ದುದರಿಂದ ಬಡವರ ಮೇಲೆ ತುಂಬ ಕನಿಕರವುಳ್ಳವನಾಗಿದ್ದನು. ತನ್ನ ವೇತನದಲ್ಲಿ ಮಿಕ್ಕ ಹಣವನ್ನು ಬಡವಿದ್ಯಾರ್ಥಿಗಳಿಗೆ ಕೊಡಬೇಕೆಂದು ಅಧಿಕಾರಿಗಳಿಗೆ ತಿಳಿಸಿದ್ದನು.

ಮದರಾಸಿನ ವಿಶ್ವವಿದ್ಯಾನಿಲಯದ ಅಧಿಕಾರಿಗಳು ೧೯೧೯ನೆಯ ಏಪ್ರಿಲ್ ೧ ರಿಂದ ಐದು ವರ್ಷಕಾಲ ರಾಮಾನುಜನ್ ಅವರಿಗೆ ಮತ್ತೆ ವೇತನ ನಡೆಯುವಂತೆ ಮಂಜೂರು ಮಾಡಿದರು. ರೋಗವು ಪ್ರಬಲಿಸಿದ ಕಾರಣ ರಾಮಾನುಜನ್ ಅವರು ಭಾರತಕ್ಕೆ ಹಿಂದಿರುಗಬೇಕಾಯಿತು. ೧೯೧೯ನೆಯ ಫೆಬ್ರುವರಿ ೨೭ರಲ್ಲಿ ಇಂಗ್ಲೆಂಡಿನಿಂದ ಹೊರಟು, ಏಪ್ರಿಲ್ ೨ರಲ್ಲಿ ಮದರಾಸನ್ನು ತಲುಪಿದರು. ಆಗ ಹಾರ್ಡಿಯವರು "ಹಿಂದೂ ಇತಿಹಾಸದಲ್ಲೇ ಅದ್ವಿತೀಯವಾದ ವಿದ್ಯಾಗುರುತ್ವವನ್ನೂ ಯಶಸ್ಸನ್ನೂ ಹೊಂದಿ ರಾಮಾನುಜನ್ ಅವರು ಇಂಗ್ಲೆಂಡಿನಿಂದ ಹಿಂದುಸ್ತಾನಕ್ಕೆ ಹಿಂದಿರುಗುವವರಾಗಿದ್ದಾರೆ. ನಿಧಿಯಾಗಿರುವ ಈತನನ್ನು ಹಿಂದೂ ದೇಶವು ನಿಧಿಯೆಂದೇ ಭಾವಿಸುವುದೆಂಬ ಭರವಸೆ ನನಗಿದೆ"

'He will return to India with a scientific standing and reputation such as no Indian has enjoyed before, and I am confident that India will regard him as the treasure that he is.'

ಎಂದು ಪ್ರಶಂಸಿಸಿದರು. ಮದರಾಸಿನಲ್ಲಿ ರಾಮಾನುಜನ್ ಅವರಿಗೆ ಒಂದು ಪ್ರೊಫೆಸರ್ ಸ್ಥಾನವನ್ನು ನಿರ್ಮಿಸುವ ಯೋಚನೆ ನಡೆಯಿತು. ಆದರೆ ದೈವಸಂಕಲ್ಪ ಬೇರೆ ರೀತಿ ಇತ್ತು.

ಮದರಾಸನ್ನು ತಲುಪುವ ವೇಳೆಗೆ ರಾಮಾನುಜನ್ ಅವರ ದೇಹಸ್ಥಿತಿಯು ತುಂಬ ಕೆಟ್ಟಿತ್ತು. ಅವರ ಶುಶ್ರೂಷೆಗಾಗಿ ಪುರಜನರು ಸರ್ವಪ್ರಯತ್ನವನ್ನೂ ಮಾಡಿದರು. ಶ್ರೀಯುತ ಎಸ್. ಶ್ರೀನಿವಾಸ ಅಯ್ಯಂಗಾರ್ಯರೂ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರೂ ಎಲ್ಲ ಅನುಕೂಲ್ಯಗಳನ್ನೂ ಕಲ್ಪಿಸಿದರು. ರಾವ್ ಬಹದ್ದೂರ್ ಟಿ. ನಂಬೆರುಮಾಳ್ ಶೆಟ್ಟಿಯವರು ತಮ್ಮ ಬಂಗಲೆಯನ್ನು ರಾಮಾನುಜನ್ ಅವರ ವಾಸಕ್ಕಾಗಿ ಬಿಟ್ಟುಕೊಟ್ಟರು. ಉತ್ತಮ ವೈದ್ಯಚಿಕಿತ್ಸೆ ನಡೆಯಿತು. ವೈದ್ಯರು ವ್ಯಾಧಿಯೊಂದಿಗೆ ಹೋರಾಡುವುದರ ಜೊತೆಗೆ ರಾಮಾನುಜನ್ನೊಂದಿಗೂ ಹೋರಾಡಬೇಕಾಗಿತ್ತು. ರಾಮಾನುಜನ್ ಅವರ ಮನಸ್ಸು Mock Theta Functions ಎಂಬ ಗಣಿತ ಭಾಗದಲ್ಲಿ ಸಿಕ್ಕಿಹೋಗಿ ಶೋಧನೆ ನಡೆಸುತ್ತಿತ್ತು. ಮನಸ್ಸಿಗೆ ವಿಶ್ರಾಂತಿ ಆವಶ್ಯಕವೆಂದು ವೈದ್ಯರು ಎಷ್ಟು ವಿಧವಾಗಿ ಹೇಳಿದರೂ ಪ್ರಯೋಜನವಾಗಲಿಲ್ಲ. ಮೂರು ತಿಂಗಳ ಕಾಲ ಚಿಕಿತ್ಸೆಯಾದ ನಂತರ ರಾಮಾನುಜನ್ ಅವರು ಮದರಾಸಿನಿಂದ ಕಾವೇರೀ ತೀರದ ಕೊಡುಮುಡಿ ಎಂಬ ಸ್ಥಳಕ್ಕೆ ಹೋಗಿ, ಮತ್ತೆ ೧೯೨೦ ನೆಯ ಜನವರಿಯಲ್ಲಿ ಮದರಾಸಿಗೆ ಬಂದರು. ಬರ ಬರುತ್ತ ವ್ಯಾಧಿ ಹೆಚ್ಚಾಯಿತೇ ವಿನಾ ಇಳಿಮುಖವಾಗಲೇ ಇಲ್ಲ. ಸರ್ವಪ್ರಯತ್ನಗಳೂ ವಿಫಲವಾಗಿ ಕೊನೆಗೆ ೧೯೨೦ ನೆಯ ಏಪ್ರಿಲ್ ೨೬ ರಲ್ಲಿ, ಮೂವತ್ತು ಮೂರನೆಯ ವಯಸ್ಸಿನಲ್ಲಿ, ಚೆಟ್ ಪಟ್ ನಲ್ಲಿ ಕಾಲವಶರಾದರು. ಅವರ ವೃದ್ಧ ಮಾತೆ ಶೋಕಕ್ಕೆ ಸಿಕ್ಕಿದಳು. ಧರ್ಮಪತ್ನಿ ಅನಾಥಳಾದಳು. ರಾಮಾನುಜನ್ ಅವರಿಗೆ ಮಕ್ಕಳಿರಲಿಲ್ಲ.

ಇಂಗ್ಲೆಂಡಿನಿಂದ ಹಿಂದಿರುಗಿದಾಗ ರಾಮಾನುಜನ್ ಅವರ ದೇಹವು ಸ್ವಲ್ಪ ಸ್ಥೂಲಮುಖವಾಗಿತ್ತು. ಎತ್ತರ ೫ ಅಡಿ ೫ ಅಂಗುಲ. ದಪ್ಪ ತಲೆ, ವಿಶಾಲ ಲಲಾಟ. ಕೂದಲು ಕಪ್ಪಗೆ ಗುಂಗುರು ಗುಂಗುರಾಗಿತ್ತು. ಕಣ್ಣು ಸಣ್ಣ, ಆದರೆ ಪ್ರಕಾಶಮಾನವಾಗಿಯೂ ತೀಕ್ಷ್ಣವಾಗಿಯೂ ಇದ್ದವು. ಮದರಾಸಿನ ವಿಶ್ವವಿದ್ಯಾನಿಲಯದ ಪುಸ್ತಕ ಭಂಡಾರದಲ್ಲಿರುವ ಚಿತ್ರಪಟವು ಅವರ ನಿಜವಾದ ರೂಪವನ್ನು ತೋರಿಸುತ್ತದೆ.

ರಾಮಾನುಜನ್ ಅವರನ್ನು ಚೆನ್ನಾಗಿ ಬಲ್ಲವರೂ, ಅವರ ಜೀವನ ನಾಟಕದಲ್ಲಿ ಸಹಾಯಕ ಪಾತ್ರಗಳನ್ನು ವಹಿಸಿದವರೂ, ಅವರ ಕೃತಿಗಳನ್ನು ತುಲನಮಾಡಬಲ್ಲ

ಸಾಮರ್ಥ್ಯವುಳ್ಳವರೂ ಆದ ಹಾರ್ಡಿಯವರೂ, ರಾಮಚಂದ್ರರಾಯರೂ, ಶೇಷು ಅಯ್ಯರೂ, ಅವರ ಗಣಿತ ಲೇಖನಗಳನ್ನು ಕ್ರೋಢೀಕರಿಸುವ, ಮತ್ತು ಗಣಿತ ಶಾಸ್ತ್ರದ ಪ್ರಗತಿಯಲ್ಲಿ ಅವರ ಸ್ಥಾನವನ್ನು ನಿರ್ದೇಶಿಸುವ, ಕಾರ್ಯಗಳನ್ನು ನಡೆಸಿದ್ದಾರೆ. ಅವರ ಲೇಖನಗಳ ಸಮುಚ್ಚಯವನ್ನು ರಾಮಚಂದ್ರರಾಯರೂ ಶೇಷು ಅಯ್ಯರೂ ಪ್ರಕಟಿಸಿದ್ದಾರೆ. ಆ ಗ್ರಂಥದಲ್ಲಿ ಹಾರ್ಡಿಯವರೂ ರಾಮಾನುಜನ್ ಅವರನ್ನು ಕುರಿತು ಒಂದು ಪರಿಚಯವನ್ನು ಬರೆದಿದ್ದಾರೆ. ಅಲ್ಲದೆ ಹಾರ್ಡಿಯವರು ೧೯೩೬ರಲ್ಲಿ, ಹಾರ್ವರ್ಡ್ ವಿಶ್ವವಿದ್ಯಾನಿಲಯದ Tercentenary Conference of Arts and Sciences ಎಂಬ ಸಮ್ಮೇಳನದಲ್ಲೂ, ಪ್ರಿನ್‌ಸ್ಟನ್ ಮತ್ತು ಕೇಂಬ್ರಿಜ್ ವಿಶ್ವವಿದ್ಯಾನಿಲಯಗಳಲ್ಲೂ, ರಾಮಾನುಜನ್ ಅವರ ಜೀವನ ಮತ್ತು ಕೃತಿಗಳ ಮೇಲೆ ಹನ್ನೆರಡು ಉಪನ್ಯಾಸಗಳನ್ನು ಕೊಟ್ಟು, ಅವುಗಳನ್ನು ಗ್ರಂಥ ರೂಪವಾಗಿ ಪ್ರಕಟಿಸಿದ್ದಾರೆ. ಈ ಗ್ರಂಥಗಳಲ್ಲಿ ರಾಮಾನುಜನ್ ಅವರ ಕೃತಿಗಳಿಗೆ ಸಂಬಂಧಿಸಿದ ಭಾಗವನ್ನು 'ಕಬ್ಬಿಣದ ಕಡಲೆ' ಎಂದು ಧಾರಾಳವಾಗಿ ಕರೆಯಬಹುದು. ಅದಕ್ಕೆ ತಕ್ಕ ದಂತ ಮತ್ತು ಪಚನ ಶಕ್ತಿಯನ್ನು ಹೊಂದಿರುವವರು ಮಾತ್ರ ಅದಕ್ಕೆ ಕೈ ಹಾಕಬಹುದು.

ರಾಮಾನುಜನ್ ಅವರು ಅಕಾಲಮರಣಕ್ಕೆ ತುತ್ತಾಗದೆ ಇದುವರೆಗೆ ಜೀವಂತರಾಗಿದ್ದಿದ್ದರೆ ಮದರಾಸ್ ನಗರವು ಈ ವೇಳೆಗೆ ಗಣಿತ ಶಾಸ್ತ್ರದ ಒಂದು ಮುಖ್ಯ ಕೇಂದ್ರವಾಗುತ್ತಿತ್ತು. ಅವರ ಸುತ್ತಲೂ ಶಿಷ್ಯ ಕೋಟಿ ಬೆಳೆಯುತ್ತಿತ್ತು. ಕ್ರಾಂತಿ ಕಾರಕ ಫಲಗಳು ಹೊರಬೀಳುತ್ತಿದ್ದವು. ಇನ್ನೂ ಸರಿಯಾಗಿ ಫಲಿಸದಿರುವಾಗಲೇ ಅವರ ಜೀವವೃಕ್ಷ ಬಿದ್ದು ಹೋಯಿತು. ಇದರಿಂದ ಗಣಿತ ಪ್ರಪಂಚಕ್ಕೂ ಭಾರತಕ್ಕೂ ಉಂಟಾದ ನಷ್ಟವನ್ನು ಊಹಿಸುವುದು ಸಾಧ್ಯವಲ್ಲ.

ಬಿ. ಸೀತಾರಾಮಶಾಸ್ತ್ರೀ.

ಬುದ್ಧನ ಮತ್ತು ಮಹಾವೀರನ ಪರಿನಿರ್ವಾಣಗಳ ಕಾಲ

೧

ಮೌರ್ಯ ಸಮ್ರಾಟ್ ಅಶೋಕನು ಪಟ್ಟಾಭಿಷಿಕ್ತನಾದ ೮ನೆಯ ವರ್ಷದಲ್ಲಿ ಕಳಿಂಗರನ್ನು, ಅಂದರೆ ಕಳಿಂಗ ದೇಶವನ್ನು ಗೆದ್ದುಕೊಂಡನೆಂದೂ,[1] ಆ ಯುದ್ಧದಲ್ಲಿ ೧,೫೦,೦೦೦ ಮಂದಿ ಸೆರೆಹಿಡಿದು ಒಯ್ಯಲ್ಪಟ್ಟರೆಂದೂ ೧,೦೦,೦೦೦ ಮಂದಿ ಕೊಲ್ಲಲ್ಪಟ್ಟರೆಂದೂ ಅದಕ್ಕಿಂತಲೂ ಹೆಚ್ಚು ಮಂದಿ ಸತ್ತುಹೋದರೆಂದೂ, ಆ ವಿಜಯದಿಂದ ಪಶ್ಚಾತ್ತಾಪಹೊಂದಿ ಆತನು ಕೂಡಲೆ ಧರ್ಮಪಾಲನದಲ್ಲೂ ಧರ್ಮಕಾಮತೆಯಲ್ಲೂ ಧರ್ಮಾನುಶಾಸನದಲ್ಲೂ ಅನುರಕ್ತನಾದನೆಂದೂ,[2] ಇನ್ನು ಮುಂದೆ ತನ್ನ ಮಕ್ಕಳೂ ಮೊಮ್ಮಕ್ಕಳೂ ಹೊಸ ರಾಜ್ಯಗಳನ್ನು ಗೆದ್ದುಕೊಳ್ಳದಂತೆ ಅವರನ್ನು ಎಚ್ಚರಿಸುವುದಕ್ಕೆ ತಾನು ಈ ಧರ್ಮಲಿಪಿಯನ್ನು ಬರೆಸಿಟ್ಟೆನೆಂದೂ[3] ಆತನ ೧೩ನೆಯ ಶಿಲಾಲೇಖದಲ್ಲಿದೆ (Rock Edict XIII). ಹಾಗಾದರೆ ಆಮೇಲೆ ತಾನೆ ಆತನು ಬೌದ್ಧಧರ್ಮವನ್ನೂ ಕೈಗೊಂಡಿರಬೇಕು, ಅದನ್ನು ಅನುಶಾಸಿಸುವುದರಲ್ಲಿಯೂ ಪ್ರವೃತ್ತನಾಗಿರಬೇಕು. ಆತನ ೮ನೆಯ ಶಿಲಾಲೇಖದಲ್ಲಿ (Rock Edict VIII) ಆತನು ಅಭಿಷಿಕ್ತನಾದ ೧೦ನೆಯ ವರ್ಷದಲ್ಲಿ ಸಂಬೋಧಿಗೆ ಹೋಗಿ ಬಂದನೆಂದಿದೆ.[4] ಸಂಬೋಧಿ ಎಂದರೆ ಬೋಧಿತೀರ್ಥವು ಎಂಬ ಬುದ್ಧಗಯೆ; ಅದೇ ಬುದ್ಧನು ಸಂಬೋಧಿಜ್ಞಾನವನ್ನು ಪಡೆದ ತಾವು, ಅದೇ ಆತನು ಸಮ್ಮಾಸಂಬುದ್ಧನಾದ ತಾವು, ಅತಏವ ಅದು ಬೌದ್ಧರ ಮಹಾ ಪುಣ್ಯಕ್ಷೇತ್ರ. ಹಾಗಾದರೆ ಕಳಿಂಗದ ವಿಜಯಾ

---

[1] ಅಠ ವಷಾಭಿಸಿತಷಾ ದೇವಾನಂ ಪಿಯಷ ಪಿಯದಷಿನೆ ಲಾಜಿನೆ ಕಲಿಗ್ಯಾ ವಿಜಿತಾ (ಕಾಲಸೀ ಪ್ರತಿ). ಕಾಲಸೀ, ಗಿರನಾರ, ಮನಸೇರಾ, ಶಹಬಾಜಘಢೀ, ಧಿಲ್ಲೀ-ತೋಪರಾ, ಸಹಸರಾಮ, ಗವೀಮಠ ಮೊದಲಾದ ಊರುಗಳಲ್ಲಿ ಅಶೋಕನ ಶಿಲಾಲೇಖಗಳೂ ಸ್ತಂಭಲೇಖಗಳೂ ಇವೆ.

[2] ಧಂಮವಾಯೇ ಧಂಮಕಾಮತಾ ಧಂಮಾನುಷಥಿ ಚಾ ದೇವಾನಂ ಪಿಯಷಾ (ಕಾಲಸೀ ಪ್ರತಿ).

[3] ಇಯಂ ಧಂಮಲಿಪಿ ಲಿಖಿತಾ ಕಿತಿ ಪುತಾ ಪಪೊತಾ ಮೆ ಅಸು ನವಂ ವಿಜಯ ಮ ವಿಜಯ ತವಿಯ ಮನಿಷು (ಕಾಲಸೀ ಪ್ರತಿ).

[4] ಸೊ ದೇವಾನಂ ಪ್ರಿಯೊ ಪಿಯದಸಿ ರಾಜಾ ದಸ ವರ್ಸಾಭಿಸಿತೊ ಸಂತೊ ಅಯಾಯ ಸಂಬೋಧಿಂ (ಗಿರನಾರ ಪ್ರತಿ).

ನಂತರ ಅಶೋಕನು ಬೌದ್ಧಧರ್ಮವನ್ನೂ ಸ್ವೀಕರಿಸಿದ ಬಳಿಕ ತಾನೆ ಬುದ್ಧಗಯೆಗೆ ಯಾತ್ರೆಗೆ ಹೋಗಿರಬೇಕು, ಮತ್ತು ಅವೇಳೆಯೇ ಆತನು ಊರು ಪರವೂರುಗಳಲ್ಲಿ ಬೌದ್ಧಧರ್ಮವನ್ನು ಹಬ್ಬಿಸಲೂ ಆ ಬಗ್ಗೆ ಅಲ್ಲಲ್ಲಿಗೆ ತನ್ನ ಧರ್ಮಮಹಾಮಾತ್ರರನ್ನು ಕಳಿಸಲೂ ತೊಡಗಿರಬೇಕು.

ಅಶೋಕನ ೫ನೆಯ ಶಿಲಾಲೇಖದಲ್ಲಿ (Rock Edict V) ಆತನು ಅಭಿಷಿಕ್ತನಾದ ೧೩ನೆಯ ವರ್ಷದಲ್ಲಿ ಯವನ (Greek) ರಾಜ್ಯಗಳಿಗೂ, ಕಾಂಬೋಜ, ಗಾಂಧಾರಾದಿ ದೇಶಗಳಿಗೂ ಧರ್ಮಮಹಾಮಾತ್ರರನ್ನು ಅಟ್ಟಿ ಅವರು ಅಲ್ಲಲ್ಲಿ ತಮ್ಮ ಕೆಲಸದಲ್ಲಿ ವ್ಯಾಪೃತರಾಗಿರುತ್ತಾರೆ ಎಂದಿದೆ.[5] ಮೇಲೆ ಕಂಡಿರುವ ೧೩ನೆಯ ಶಿಲಾಲೇಖದಲ್ಲಿ ಆತನು ತನ್ನಲ್ಲಿಂದ ನೂರಾರು ಯೋಜನಗಳಿಗೆ ದೂರದಲ್ಲಿರುವ ಆಸ್ಯದಲ್ಲಿ (Asia)[6] ಅಲ್ಲಲ್ಲಿಯ ಯವನ ರಾಜರಾದ ಸುರಿಯದ (Syria) **ಅಂತಿಯೊಕ** (Antiochus Theos, ಕ್ರಿ.ಪೂ. 261-246), ಐಗುಪ್ತದ (Egypt) **ಪ್ತೊಲೆಮಿ** (Ptolemy Philadelphus, ಕ್ರಿ.ಪೂ. 285-247), ಮಕೆದೋನ್ಯದ (Macedon) **ಅಂತಿಗೊನ** (Antigonus Gonatus, ಕ್ರಿ.ಪೂ. 277-239), ಸುರೇನ್ಯದ (Cyrene) **ಮಗ** (Magas, ಕ್ರಿ.ಪೂ. 285-258), ಹಾಗೂ ಎಪಿರದ (Epirus) **ಅಲೆಕ್ಸಂದರ** (Alexander, ಕ್ರಿ.ಪೂ. 272-258),[7] ಇವರ ರಾಜ್ಯಗಳಲ್ಲಿ ತನ್ನ ಧರ್ಮಶಾಸನವನ್ನು, ಅಂದರೆ ತನ್ನ ಧರ್ಮಮಹಾಮಾತ್ರರ ದ್ವಾರಾ ತಾನು ಪ್ರಚಾರಿಸಿದ ಧರ್ಮವನ್ನು ಅನುವರ್ತಿಸುತ್ತಾರೆ ಎಂದಿರುತ್ತಾನೆ.[8] ಹಾಗಾದರೆ ಆತನು ಅಭಿಷಿಕ್ತನಾದ ೧೩ನೆಯ ವರ್ಷದಲ್ಲಿ ಆ ಯವನ ಅರಸರಲ್ಲಿಗೆ ತನ್ನ ಧರ್ಮಮಹಾಮಾತ್ರರನ್ನು ಕಳಿಸಿದನೆಂಬುದರಿಂದ, ಅಲ್ಲಿ ಆತನ ಧರ್ಮವು ಅನುವರ್ತಿಸಲ್ಪಡಲಿಕ್ಕೆ ನಡುವೆ ಕನಿಷ್ಠಪಕ್ಷಕ್ಕೆ ಎರಡಾದರೂ ವರ್ಷಗಳು ದಾಟಿರಬೇಕೆಂದು ನಿಷ್ಕೃಷ್ಟವಿರುವುದರಿಂದ, ಆತನ ೧೩ನೆಯ ಶಿಲಾಲೇಖವು ಆತನು ಅಭಿಷಿಕ್ತನಾದ ೧೫ ಅಥವಾ ೧೬ನೆಯ ವರ್ಷದಲ್ಲಿ ಉತ್ಕೀರ್ಣವಾಗಿರಬೇಕು.

---

5 ತ ಮಯಾ ತ್ರೈದಸ ವಾಸಾಭಿಸಿತೆನ ಧಂಮಮಹಾಮಾತಾ ಕತಾ. ತೆ . . ವ್ಯಾಪತಾ . . . ಯೊಣ ಕಂಬೊಜ ಗಂಧಾರಾನಂ (ಗಿರನಾರ ಪ್ರತಿ).

6 ಸವ್ರೆಷು ಚ ಅಂತೆಷು **ಅಷಷು** ಪಿ ಯೊಜನ ಸತೆಷು (ಮನಸೇರಾ ಪ್ರತಿ). ಶ್ರೀ ಕಾಶೀ ಪ್ರಸಾದ ಜಾಯಸವಾಲರು ಈ '**ಅಷಷು**' ಎಂಬುದನ್ನು **ಆಷ್ಯದಲ್ಲಿ** (Asia) ಎಂದು ನೇರಾಗಿ ಅರ್ಥವಿಸಿರುತ್ತಾರೆ. (*Indian Antiquary*, XL VII ಪು. 297).

7 **ಅಂತಿಯೊಕೊ** ನಮ ಯೊನ ರಜ ಪರಂ ಚ ತೆನ ಅಂತಿಯೊಕೆನ ಚತುರೆ ೪ ರಜನಿ **ತುರಮಯೆ** ನಮ **ಅಂತಿಕಿನಿ** ನಮ **ಮಕ** ನಮ **ಅಲಿಕಸುದರೊ** ನಮ (ಶಹಬಾಜಘಢೀ ಪ್ರತಿ).

8 ದೇವಾನಂ ಪಿಯಸಾ ಧಂಮಾನುಷಥಿ ಅನುವತಂತಿ (ಕಾಲಸೀ ಪ್ರತಿ).

ಈಗ ಈ ೧೩ನೆಯ ಶಿಲಾಲೇಖದಲ್ಲಿ ಹೆಸರಿಸಿರುವ ಆ ಐದು ಮಂದಿ ಯವನ ರಾಜರಲ್ಲಿ ಕೊಟ್ಟಕೊನೆಗೆ ಸುರಿಯದ ಅಂತಿಯೊಕನು ಪಟ್ಟಕ್ಕೆ ಬಂದ ಕ್ರಿ.ಪೂ. 261 ಕ್ಕೂ ವೊತ್ತಮೊದಲಲ್ಲಿ ಸುರೇನ್ಯದ ಮಗನೂ ಎಪಿರದ ಅಲೆಕ್ಸಂದರನೂ ಕಾಲವಾದ ಕ್ರಿ.ಪೂ. 258 ಕ್ಕೂ ಸರಿಯಾಗಿ ಆ ಶಾಸನವು ಕ್ರಿ.ಪೂ. 260-259 ರಲ್ಲಿ ಹುಟ್ಟಿರಬೇಕೆಂದು ಕಂಡಿತವಿದೆ. ಆ ಕ್ರಿ.ಪೂ. 260-259 ನೆಯ ವರ್ಷವು ಅಶೋಕನು ಅಭಿಷಿಕ್ತನಾದ ೧೫ ಅಥವಾ ೧೬ನೆಯ ವರ್ಷವೆಂದರೆ ಆತನು ಕ್ರಿ.ಪೂ. ಸು. 275 ರಲ್ಲಿ ಪಟ್ಟಾಭಿಷಿಕ್ತನಾಗಿರಬೇಕು. ಆತನ ಆಳೊತ್ತು ೩೬ ವರ್ಷವೆಂದು ಪುರಾಣಗಳಲ್ಲಿಯೂ ೩೭ ವರ್ಷವೆಂದು ಸಿಂಹಲದ್ವೀಪದ ಮಹಾವಂಸ ಹಾಗೂ ದೀಪವಂಸ ಎಂಬ ಪ್ರಾಚೀನ ಕಾವ್ಯಗಳಲ್ಲಿಯೂ ಹೇಳಿರುವುದರಿಂದ, ಆ ಮೇರೆಗೆ ಆತನು ಕ್ರಿ.ಪೂ. ಸು. 239 ಅಥವಾ 238ರ ವರೆಗೆ ಆಳಿರಬೇಕು.

ಅಶೋಕನ ಸ್ತಂಭಲೇಖಗಳಲ್ಲಿ (Pillar Edicts) ನಂ. ೧, ೪, ೫ ಮತ್ತು ೬ನೆಯವು ಆತನು ಅಭಿಷಿಕ್ತನಾದ ೨೬ನೆಯ ವರ್ಷದಲ್ಲಿ[9] ಅಂದರೆ ಕ್ರಿ.ಪೂ. ಸು. 249 ರಲ್ಲಿಯೂ, ಆತನ ೭ನೆಯ ಸ್ತಂಭಲೇಖವು ಆತನು ಅಭಿಷಿಕ್ತನಾದ ೨೭ನೆಯ ವರ್ಷದಲ್ಲಿ,[10] ಅಂದರೆ ಕ್ರಿ.ಪೂ. ಸು. 248 ರಲ್ಲಿಯೂ ಉತ್ಕೀರ್ಣವಾದುವೆಂದು ಅವುಗಳಿಂದ ತಿಳಿಯುತ್ತದೆ. ೭ನೆಯ ಸ್ತಂಭಲೇಖದಲ್ಲಿ ತಾನು ಧರ್ಮಸ್ತಂಭಗಳನ್ನು ಮಾಡಿಸಿರುವೆನೆಂದೂ,[11] ಅದರ ಕೊನೆಯಲ್ಲಿ 'ಈ ಧರ್ಮಲಿಪಿ ಚಿರಸ್ಥಿತವಾಗಿ ಇರುವಂತೆ ಇದನ್ನು ಎಲ್ಲೆಲ್ಲಿ ಶಿಲಾಸ್ತಂಭಗಳೂ ಶಿಲಾಫಲಕಗಳೂ ಇವೆಯೊ, ಅವಲ್ಲಿ ಕೊರೆದಿರಿಸಬೇಕು'[12] ಎಂದೂ ಹೇಳಿರುತ್ತಾನೆ. ಆತನ ೧ನೆಯ ಲಘು ಶಿಲಾಲೇಖದಲ್ಲಿಯೂ (Minor Edict I) 'ಈ ಅರ್ಥವನ್ನು ಪರ್ವತ (ಬಂಡೆ) ಗಳಲ್ಲಿಯೂ ಸ್ತಂಭಗಳಲ್ಲಿಯೂ ಕೊರೆದಿರಿಸಬೇಕು'[13] ಎನ್ನುತ್ತಾನೆ. ಈ ಮಾತನ್ನು ತನ್ನ ೭ನೆಯ ಸ್ತಂಭಲೇಖದಲ್ಲಿ ಮತ್ತು ಈ ೧ನೆಯ ಲಘು ಶಿಲಾಲೇಖದಲ್ಲಿ ಮಾತ್ರವಲ್ಲದೆ ಮತ್ತೆಲ್ಲಿಯೂ ಹೇಳಿಲ್ಲದ ಕಾರಣ ಇವೆರಡೂ ಹೆಚ್ಚುಕಡಿಮೆ ಸಮಕಾಲಿಕವಾಗಿರಬೇಕು.

---

9 ಸಡುವೀಸತಿ ವಸ ಅಭಿಸಿತೆನ ಮೆ (ಧಿಲ್ಲೀ-ತೋಪರಾ ಪ್ರತಿ).

10 ಸತವಿಸತಿ ವಸಾಭಿಸಿತೆನ ಮೆ (ಅದೇ).

11 ಧಂಮಥಂಭಾನಿ ಕಟಾನಿ (ಅದೇ).

12 ಇಯಂ ಧಂಮಲಿಬಿ ಅತ ಅಥಿ ಸಿಲಾಥಂಭಾನಿ ವಾ ಸಿಲಾಫಲಕಾನಿ ವಾ ತತ ಕಟವಿಯಾ ಎನ ಎಸ ಚಿಲಠಿತಿಕೆ ಸಿಯಾ (ಅದೇ).

13 ಇಮು ಚ ಅಠಂ ಪವತೆಸು ಲಿಖಾಪಯಾಥಾ ಯತ ವಾ ಅಥಿ ಹೆತಾ ಸಿಲಾಥಂಬಾ ತತಪಿ ಲಿಖಾಪಯಥ ತಿ (ಸಹಸರಾಮ ಪ್ರತಿ).

ಆದರೆ ತಾನು ಉಪಾಸಕನಾಗಿ ೨½ ವರ್ಷಕ್ಕಿಂತ ಹೆಚ್ಚಾಯಿತು. ಸಂಘವನ್ನು ಹೊಕ್ಕು ೧ ವರ್ಷಕ್ಕಿಂತ ಹೆಚ್ಚಾಯಿತು, ಎಂದು ೧ನೆಯ ಲಘು ಶಿಲಾಲೇಖದಲ್ಲಿ ಹೇಳಿರುವಂತೆ[14] ೭ನೆಯ ಸ್ತಂಭಲೇಖದಲ್ಲಿ ಹೇಳಿಲ್ಲದುದರಿಂದ, ಆ ೭ನೆಯ ಸ್ತಂಭ ಲೇಖದ ತನ್ನ ಪಟ್ಟಾಭಿಷೇಕವಾದ ೨೭ನೆಯ ವರ್ಷದಲ್ಲಿ ಹೇಗೂ ಆತನು ಸಂಘ ವನ್ನು ಸೇರಿದ್ದಿಲ್ಲವಷ್ಟೆ, ಇನ್ನೂ ಉಪಾಸಕನೂ ಆಗಿದ್ದಿಲ್ಲವೆಂದು ಸ್ವಯಂ ವ್ಯಕ್ತ ವಿರುವ ಕಾರಣ, ೧ನೆಯ ಲಘು ಶಿಲಾಲೇಖವು ೭ನೆಯ ಸ್ತಂಭಲೇಖಕ್ಕಿಂತ ಈಚೆಯ ದಾಗಿರಬೇಕು, ಅಂದರೆ ಕ್ರಿ.ಪೂ. 248 ರಿಂದ 240 ರೊಳಗಿನದಾಗಿರಬೇಕು.

ಈ ೧ನೆಯ ಲಘು ಶಿಲಾಲೇಖದ (೧) ಮಧ್ಯಪ್ರಾಂತದಲ್ಲಿಯ ರೂಪನಾಥದ,[15] (೨) ದಕ್ಷಿಣ ಬಿಹಾರದಲ್ಲಿಯ ಸಹಸರಾಮದ,[16] ಮತ್ತು (೩) ಮೈಸೂರು ಸೀಮೆಯ ಚಿತ್ರದುರ್ಗ ಜಿಲ್ಲೆಯಲ್ಲಿಯ ಬ್ರಹ್ಮಗಿರಿ,[17] (೪) ಸಿದ್ದಾಪುರ[18] ಹಾಗೂ (೫) ಜಟ್ಟಿಂಗ ರಾಮೇಶ್ವರಗಳ[19] ಪ್ರತಿಗಳಲ್ಲಿ ತೋರುವಂತೆ ಅದರಲ್ಲಿ ೨೫೬ ಎಂಬ ಒಂದು ಸಂಖ್ಯೆ ಇದೆ. ಅದೇ ಲಘು ಶಿಲಾಲೇಖದ ಮದ್ರಾಸು ಆಧಿಪತ್ಯದ ಕರ್ನೂಲು ಜಿಲ್ಲೆಯಲ್ಲಿಯ ಯೆರ್ರಗುಡಿಯ ಪ್ರತಿಯಲ್ಲಿ[20] ಆ ಸಂಖ್ಯೆ ಹೀಗೆ ಒದಗುತ್ತದೆ—

ಇಯಂ ಚ ಸಾವನೆ ಸಾವಾಪಿತೆ ವ್ಯಥೆನ ೨೫೬

ಈ ಪ್ರತಿಯನ್ನು ಸಂಪಾದಿಸಿದ ಶ್ರೀ ಬಿ. ಎಮ್. ಬರುಅರವರು (B. M. Barua) 'ವ್ಯಥ—ವ್ಯತ' ಎಂಬ ಪ್ರಾಕೃತ ಶಬ್ದವು ಸಂಸ್ಕೃತ 'ವ್ಯಷ್ಟ'ದ ಅಪಭ್ರಂಶವೆಂದೂ, ಅದು ಅರಸರ ಆಳೊತ್ತಿನ ವರ್ಷ—ಮಾಸ—ಪಕ್ಷ—ದಿನಗಳನ್ನು ನಮೂದಿಸುವ ಅರ್ಥದಲ್ಲಿ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಒದಗುತ್ತದೆಂದೂ ಹೇಳಿ,[21] ಆ ಮಾತುಗಳನ್ನು

---

[14] ದೇವಾಣಂ ಪಿಯೆ ಆಹ ಸಾತಿರೆಕಾಣಿ ಅಢತಿಯಾಣಿ ವಸಾಣಿ ಯಂ ಸುಮಿ ಉಪಾಸಕೆ . . . ಸಂವಛರೆ ಸಾತಿರೆಕೆ ಯಂ ಮೆ ಸಂಘೆ ಉಪೆತಿ (ಗವೀಮಠದ ಪ್ರತಿ).

[15] ವ್ಯಠೇಣಾ ಸಾವನೆ ಕಟೆ ೨೫೬ ಸತ ವಿವಾಸಾ ತ (ರೂಪನಾಥ ಪ್ರತಿ).

[16] ಇಯಂ ಚ ಸಾವನೆ ವಿವುಥೆನ ದುವೆ ಸಪಂನಾಲಾತಿಸತಾ ವಿವುಥಾ ತಿ ೨೫೬ (ಸಹಸ ರಾಮು ಪ್ರತಿ).

[17] ಇಯಂ ಚ ಸಾವಣೆ ಸಾವಾಪಿತೆ ವ್ಯುಥೆನ ೨೫೬ (ಬ್ರಹ್ಮಗಿರಿ ಪ್ರತಿ).

[18] ಇಯಂ ಚ ಸಾವಣೆ . . . ೨೫೬ (ಸಿದ್ದಾಪುರ ಪ್ರತಿ).

[19] ಇ ಸಾವಣೆ . . . ಥೆನ ೨೫೬ (ಜಟ್ಟಿಂಗ ರಾಮೇಶ್ವರ ಪ್ರತಿ).

[20] *Indian Historical Quarterly*: The Yerragudi Copy of Aśoka's *Minor Rock Edict*, By B. M. Barua, Vol. IX (1933), ಪು. 117.

[21] ಅರ್ಥಶಾಸ್ತ್ರ (Mysore University Edition, 1919): ರಾಜವರ್ಷಂ ಮಾಸಃ ಪಕ್ಷೋ ದಿವಸಶ್ಚ ವ್ಯುಷ್ಟಮ್ (ಪು. ೬೦).

'This declaration is caused to be declared in 256 in terms of the time gone by,'[22] ಅಂದರೆ ಈ ಹೇಳಿಕೆ ೨೫೬ರ ಕಾಲ ಕಳೆದಲ್ಲಿ ಸಾರಿಸಲ್ಪಟ್ಟದೆ ಎಂದು ಅರ್ಥವಿಸಿ, ಈ ೨೫೬ ವರ್ಷಸಂಖ್ಯೆಯಾದರೆ ಅದು ಆಗ್ಗೆ ಸಲುವಳಿಯಲ್ಲಿದ್ದ ಯಾವುದೊಂದು ಶಕದ (era), ಪ್ರಾಯಶಃ ಬುದ್ಧಶಕದ, ವರ್ಷವಾಗಿರಬೇಕು, ಹಾಗೂ ಈ ಲಘು ಶಿಲಾಲೇಖದ ತೇದಿಯಾಗಿರಬೇಕು ಎಂದಿರುತ್ತಾರೆ.[23] ಈ ೨೫೬ ವರ್ಷಸಂಖ್ಯೆಯೇ ವಿನಾ ಬೇರೇನೂ ಅಲ್ಲ, ಯಾವೊಂದು ಪ್ರಸಿದ್ಧವಾದ ಘಟನೆಯಿಂದ ೨೫೬ ವರ್ಷಗಳು ಕಳೆದುವೆಂದೊ ಅಥವಾ ೨೫೬ ನೆಯ ವರ್ಷ ನಡೆಯುತ್ತದೆಂದೊ ಸೂಚಿಸುವ ವರ್ಷಸಂಖ್ಯೆ. ಆ ಘಟನೆಯಾದರೊ ಬಹುಶಃ ಬುದ್ಧನ ಪರಿನಿರ್ವಾಣವಾಗಿರಬೇಕು.[24] ಹಾಗಾದರೆ ಈ ಲಘು ಶಿಲಾಲೇಖವು ಕ್ರಿ.ಪೂ. 248 ರಿಂದ 240 ರೊಳಗೆ ಹುಟ್ಟಿರಬೇಕೆಂದು ಮೇಲೆ ಕಂಡಿರುವುದರಿಂದ, ಬುದ್ದನ ಪರಿನಿರ್ವಾಣವು ಕ್ರಿ.ಪೂ. 248+256= ಕ್ರಿ.ಪೂ. 504 ರಿಂದ ಕ್ರಿ.ಪೂ. 240+256= ಕ್ರಿ.ಪೂ. 496 ರೊಳಗೆ ಸಂಭವಿಸಿರಬೇಕು.

೨

ಬರ್ಮ ದೇಶದ (Burma) ಬುದ್ಧಚರಿತ್ರದಲ್ಲಿ[25] ಬುದ್ಧನ ಜನನ—ನಿರ್ಯಾಣ—ನಿರ್ವಾಣ—ಪರಿನಿರ್ವಾಣಗಳ ವರ್ಷ—ಮಾಸ—ತಿಥಿ—ವಾರ—ನಕ್ಷತ್ರಗಳನ್ನು ಕುರಿತು ಹೀಗದೆ—

ದೇವಹದ (Dewaha), ಅಂದರೆ ದೇವದಹದ,[26] ಶಾಕ್ಯವಂಶೀಯ ರಾಜನೂ

---

[22] *Indian Historical Quarterly*, IX, ಪು. 119 ಮತ್ತು ಅಡಿಬರೆಹ 13-14.

[23] ಅದೇ, ಪು. 116.

[24] 'We believe also that the figures 256, notwithstanding all objections are really intended as a date of the Lord's (*i.e.* Buddha's) Parinirvāṇa' (Kern: *Manual of Buddhisim*, p. 115.)

[25] Bigandet's, *Life of Gaudama* (*Bigandet*). ಈ ಗ್ರಂಥದಲ್ಲಿಯ ಹೇಳಿಕೆಗಳ ಸತ್ಯತೆಯನ್ನು ಕುರಿತು ಶ್ರೀ ಸ್ವಾಮಿಕಣ್ಣು ಪಿಳ್ಳೆಯವರು ಹೀಗೆಂದಿರುತ್ತಾರೆ—

"The Burmese chronicle translated by Bigandet is called *Malla-linkara-wouttoo* and was composed about A.D. 1773, but Prof. Rhys Davids testifies to the substantial, even verbal identity of that chronicle with the Jātaka commentary current in Ceylon in the fifth century A. D." *Indian Antiquary*, 1914 October, ಪು. 200).

[26] ದೇವದಹ ಎಂಬುದು ಬುದ್ಧನು ಹುಟ್ಟಿದ ಕಪಿಲವಸ್ತುವಿನ ಪಕ್ಕದಲ್ಲಿಯ ಒಂದು ಊರು. ಅದನ್ನು ಬರ್ಮಾ ಭಾಷೆಯಲ್ಲಿ ದೇವಹ ಎಂದದೆ.

ಬುದ್ಧನ ಮಾತಾಮಹನೂ ಆದ ಈತ್ಜನ (Eetzana), ಅಂದರೆ ಅಂಜನ[27] ಎಂಬ ಅರಸನು ಒಂದು ಹೊಸ ಶಕವನ್ನು ಸ್ಥಾಪಿಸಿದನು.

(೧) ಆ ಶಕ ತಾಗು (Tagoo) ತಿಂಗಳಿನ, ಅಂದರೆ ಚೈತ್ರ ಮಾಸದ, ಶುಕ್ಲ ಪ್ರತಿಪದೆ ಆದಿತ್ಯವಾರದಂದು ಪ್ರಾರಂಭವಾಯಿತು ;[28]

(೨) ಆ ಶಕದ ೬೮ನೆಯ ವರ್ಷದ ಕತ್ಸೊನ (Katson) ತಿಂಗಳಿನ, ಅಂದರೆ ವೈಶಾಖ ಮಾಸದ, ಹುಣ್ಣಿಮೆ ಶುಕ್ರವಾರ ವಿಥಾಕ (Withaka) ನಕ್ಷತ್ರದಲ್ಲಿ, ಅಂದರೆ ವಿಶಾಖಾ ನಕ್ಷತ್ರದಲ್ಲಿ, ಬುದ್ಧನು ಹುಟ್ಟಿದನು ;[29]

(೩) ಅದರ ೯೬ನೆಯ ವರ್ಷದಲ್ಲಿ ಆಷಾಢ ಶುದ್ಧ ಹುಣ್ಣಿಮೆ ಸೋಮವಾರ ಉತ್ತರಥನ (Oottarathan) ನಕ್ಷತ್ರದಲ್ಲಿ, ಅಂದರೆ ಉತ್ತರಾಷಾಢಾ ನಕ್ಷತ್ರದಲ್ಲಿ, ಬುದ್ಧನು ಜ್ಞಾನಸಿದ್ಧಿಗಾಗಿ ಕಪಿಲವಸ್ತುವನ್ನು ಬಿಟ್ಟು ಹೊರಟುಹೋದನು ;[30]

(೪) ಅದರ ೧೦೩ನೆಯ ವರ್ಷದ ಕತ್ಸೊನ (Katson) ತಿಂಗಳಿನ, ಅಂದರೆ ವೈಶಾಖ ಮಾಸದ, ಹುಣ್ಣಿಮೆ ಬುಧವಾರ ವಿಥಾಕ (Withaka) ನಕ್ಷತ್ರದಲ್ಲಿ, ಅಂದರೆ ವಿಶಾಖಾ ನಕ್ಷತ್ರದಲ್ಲಿ, ಆತನು ಬೋಧಿಜ್ಞಾನ ಪಡೆದು ಬುದ್ಧನಾದನು ;[31]

(೫) ಆ ಶಕದ ೧೦೭ನೆಯ ವರ್ಷದಲ್ಲಿ ವಖಒಂಗ (Wakhaong) ತಿಂಗಳಿನ, ಅಂದರೆ ಶ್ರಾವಣ ಮಾಸದ, ಹುಣ್ಣಿಮೆ ಶನಿವಾರದಂದು ಸೂರ್ಯೋದಯದ ಹೊತ್ತಿಗೆ ಬುದ್ಧನ ತಂದೆಯಾದ ಶುದ್ಧೋದನನು ತನ್ನ ಪ್ರಾಯದ ೯೭ನೆಯ ವರ್ಷದಲ್ಲಿ ಕಾಲವಾದನು ;[32]

(೬) ಅದರ ೧೪೮ನೆಯ ವರ್ಷದಲ್ಲಿ ಕತ್ಸೊನ (Katson) ತಿಂಗಳಿನ, ಅಂದರೆ ವೈಶಾಖ ಮಾಸದ, ಹುಣ್ಣಿಮೆ ಕುಜವಾರದ ರಾತ್ರಿ ವಿಥಾಕ (Withaka) ನಕ್ಷತ್ರದಲ್ಲಿ, ಅಂದರೆ ವಿಶಾಖಾ ನಕ್ಷತ್ರದಲ್ಲಿ, ಮಾರನೆಯ ಸೂರ್ಯೋದಯಕ್ಕೆ ಕೊಂಚ ಮುಂಚೆ ಬುದ್ಧನು ಪರಿನಿರ್ವಾಣ ಹೊಂದಿದನು.[33]

---

27 ಬೌದ್ಧರ ಅಪದಾನ ಎಂಬ ಗ್ರಂಥದಲ್ಲಿಯ ಬುದ್ಧನ ತಾಯಿ ಮಾಯಾದೇವಿಯ ತಂಗಿಯೂ ಸವತಿಯೂ ಆದ ಮಹಾ ಪ್ರಜಾವತಿ ಗೌತಮಿಯದೊಂದು ಅಪದಾನದಲ್ಲಿ ಆಕೆ—

ಪಚ್ಛಿಮೇ ಚ ಭವೇ ದಾನಿ ಜಾತಾ ದೇವದಹೇ ಪುರೇ |
ಪಿತಾ ಅಂಜನ ಸಕ್ಕೋ ಮೇ ಮಾತಾ ಮಮ ಸುಲಕ್ಖಣಾ ||
ತತೋ ಕಪಿಲವತ್ಥುಸ್ಮಿಂ ಸುದ್ಧೋದನ ಘರಂ ಗತಾ |

ತಾನು ದೇವದಹಪುರದ ಶಾಕ್ಯ ಅರಸನಾದ ಅಂಜನನ ಮಗಳೆಂದೂ, ಬುದ್ಧನ ತಂದೆಯಾದ ಶುದ್ಧೋದನನ (೨ ನೆಯ) ಹೆಂಡತಿ ಎಂದೂ ಹೇಳಿರುವುದರಿಂದ, ಬುದ್ಧನ ಮಾತಾಮಹನ ಹೆಸರು ಅಂಜನ ಎಂದು ತಿಳಿಯುತ್ತದೆ. ಆ ಅಂಜನವೇ ಬರ್ಮಾ ಭಾಷೆಯಲ್ಲಿ ಈತ್ಜನ (Eetzana) ಎಂದಾಗಿದೆ.

28 *Bigandet*, I, ಪು. 13. 29 ಅದೇ, II, ಪು. 71-72. 30 ಅದೇ, I, ಪು. 63 ; II, ಪು. 72.
31 ಅದೇ, I, ಪು. 79 ; II, ಪು. 72-73. 32 ಅದೇ, I, ಪು. 208. 33 ಅದೇ, II, ಪು. 69 ಮತ್ತು 73.

ಈಗ ಬುದ್ಧನು ಪರಿನಿರ್ವಾಣ ಹೊಂದಿದನೆಂದು ಮೇಲೆ ಕಂಡಿರುವ ಕ್ರಿ.ಪೂ. 504 ರಿಂದ 496 ರೊಳಗೆ ಯಾವ ವರ್ಷದಲ್ಲಿ ವೈಶಾಖ ಹುಣ್ಣಿಮೆ ಕುಜವಾರ ಬಂದಿತ್ತೆಂದು ನೋಡಿದರೆ, ಅದು **ಕ್ರಿ.ಪೂ. 501 ನೆಯ ಏಪ್ರಿಲ್ 15 ನೆಯ ತಾರೀಕಿನಂದು ಕುಜವಾರ** ಬಂದಿತ್ತೆಂದೂ ಅಂದಿನ ರಾತ್ರಿ ವಿಶಾಖಾ ನಕ್ಷತ್ರ ವಿತ್ತೆಂದೂ ತಿಳಿಯುತ್ತದೆ. ಅದೇ ಬುದ್ಧನ ಪರಿನಿರ್ವಾಣದ ತೇದಿ.

(೧) ಹಾಗಾದರೆ ಈತ್ಜನ (Eetzana) ಶಕದ ೧೪೮ನೆಯ ವರ್ಷದಲ್ಲಿ ಬುದ್ಧನು ಪರಿನಿರ್ವಾಣ ಹೊಂದಿದನೆಂಬುದರಿಂದ, ಆ ಶಕದ ಮೊತ್ತಮೊದಲಿನ ದಿನವಾದ ರವಿವಾರದಂದಿನ ಚೈತ್ರಶುಕ್ಲ ಪ್ರತಿಪದೆ ಕ್ರಿ.ಪೂ. 648 ಫೆಬ್ರವರಿ 17 ನೆಯ ತಾರೀಕು ರವಿವಾರವಾಗುತ್ತದೆ;

(೨) ಆ ಶಕದ ೬೮ ನೆಯ ವರ್ಷದಲ್ಲಿ ಬುದ್ಧನು ಹುಟ್ಟಿದ ವೈಶಾಖ ಹುಣ್ಣಿಮೆ ಶುಕ್ರವಾರವು ಕ್ರಿ. ಪೂ. 580 ನೆಯ ಏಪ್ರಿಲ್ 19 ನೆಯ ತಾರೀಕು ಶುಕ್ರವಾರ ವಾಗುತ್ತದೆ, ಅಂದು ವಿಶಾಖಾ ನಕ್ಷತ್ರವೂ ಇತ್ತು;

(೩) ಅದರ ೯೬ ನೆಯ ವರ್ಷದಲ್ಲಿ ಬುದ್ಧನು ಜ್ಞಾನಸಿದ್ಧಿಗಾಗಿ ಮನೆಬಿಟ್ಟು ಹೊರಟುಹೋದ ಸೋಮವಾರದಂದಿನ ಆಷಾಢ ಶುದ್ಧ ಹುಣ್ಣಿಮೆ ಕ್ರಿ.ಪೂ. 553 ಜೂನು 18 ನೆಯ ತಾರೀಕು ಸೋಮವಾರವಾಗುತ್ತದೆ, ಅಂದು ಉತ್ತರಾಷಾಢಾ ನಕ್ಷತ್ರವಿತ್ತು;

(೪) ಆ ಶಕದ ೧೦೩ನೆಯ ವರ್ಷದಲ್ಲಿ ಆತನಿಗೆ ಬೋಧಿಜ್ಞಾನವಾದ ಬುಧವಾರ ದಂದಿನ ವೈಶಾಖ ಹುಣ್ಣಿಮೆ **ಕ್ರಿ.ಪೂ. 546 ಏಪ್ರಿಲ್ 3 ನೆಯ ತಾರೀಕು ಬುಧವಾರ**ವಾಗುತ್ತದೆ, ಅಂದು ವಿಶಾಖಾ ನಕ್ಷತ್ರವಿತ್ತು;

(೫) ಅದರ ೧೦೭ನೆಯ ವರ್ಷದಲ್ಲಿ ಆತನ ತಂದೆ ಶುದ್ಧೋದನನು ಕಾಲವಾದ ಶ್ರಾವಣ ಶುದ್ಧ ಹುಣ್ಣಿಮೆ ಶನಿವಾರವು ಕ್ರಿ.ಪೂ. 541 ನೆಯ ಜುಲಾಯಿ 6 ನೆಯ ತಾರೀಕು ಶನಿವಾರದ ಪ್ರಾತಃಕಾಲವಾಗುತ್ತದೆ;

(೬) ಹಾಗಾದರೆ ಬುದ್ಧನ ಪರಿನಿರ್ವಾಣದ ತೇದಿ **ಕ್ರಿ.ಪೂ. 501 ಏಪ್ರಿಲ್ 15 ನೆಯ ತಾರೀಕು ಕುಜವಾರ.** ಬುದ್ಧನು ಹುಟ್ಟಿದುದೂ ವೈಶಾಖ ಹುಣ್ಣಿಮೆ, ಕಾಲವಾದುದೂ ವೈಶಾಖ ಹುಣ್ಣಿಮೆ, ಆದಕಾರಣ ಅವನ ಆಯುರ್ದಾಯವು ನೇರ ೮೦ ವರ್ಷ,[34] ಅಂದರೆ ಆತನು ತನ್ನ ೮೦ ನೆಯ ಜನ್ಮದಿನದಂದೇ ಪರಿನಿರ್ವಾಣ ಹೊಂದಿದನು.

ಆದರೆ ಸಿಂಹಲದ್ವೀಪ (Ceylon), ಬರ್ಮ (Burma), ಸಿಯಾಮ್ (Siam) ದೇಶಗಳಲ್ಲಿ ನಡವಡಿಕೆಯಲ್ಲಿರುವ ಬುದ್ಧಶಕವು (Buddha era) ಕ್ರಿ.ಪೂ. 545-44

[34] Kern's *Manual of Indian Buddhism*, ಪು. 41-42.

ರಿಂದಲೊ 544-43 ರಿಂದಲೊ ಮೊದಲಾಗುತ್ತದಷ್ಟೆ, ಅದೇಸು? ಎಂದು ಕೇಳಿದರೆ ಅದರ ಪ್ರತ್ಯುತ್ತರವಿಷ್ಟೇ—

ಆ ದೇಶಗಳಲ್ಲಿಯ ಬುದ್ಧಶಕವು ಪ್ರಾರಂಭಿಸಿದುದು ಸರ್ವಥಾ ಬುದ್ಧನ ಪರಿನಿರ್ವಾಣದಿಂದಲ್ಲ, ಬುದ್ಧನ ನಿರ್ವಾಣದಿಂದ, ಅಂದರೆ ಬುದ್ಧನು ಬೋಧಿಜ್ಞಾನವೆಂಬ ನಿರ್ವಾಣವನ್ನು ಪಡೆದಂದಿನಿಂದ. ಬುದ್ಧನು ತನ್ನ ಜೀವಮಾನದಲ್ಲಿ ಪಡೆದ ಜ್ಞಾನಸಿದ್ಧಿಗೆ ನಿರ್ವಾಣವೆಂದೂ, ಆತನು ತನ್ನ ದೇಹಾವಸಾನದೊಂದಿಗೆ ಪಡೆದ ಮೋಕ್ಷಸಿದ್ಧಿಗೆ ಪರಿನಿರ್ವಾಣವೆಂದೂ ಹೆಸರು. ಅತಏವ ಅವನ ಜ್ಞಾನಸಿದ್ಧಿ ಎಂದರೆ ವೇದಾಂತಿಗಳ ಜೀವನ್ಮುಕ್ತಿ, ಜೈನ ತೀರ್ಥಂಕರರ ಕೇವಲ ಜ್ಞಾನೋತ್ಪತ್ತಿ. ಅದನ್ನು ಪಾಲಿಭಾಷೆಯ ಬೌದ್ಧಗ್ರಂಥಗಳಲ್ಲಿ 'ಉಪಾದಿಸೇಸ' ನಿರ್ವಾಣವೆಂದೂ, ಆತನ ಪರಿನಿರ್ವಾಣವನ್ನು 'ಅನುಪಾದಿಸೇಸ' ನಿರ್ವಾಣವೆಂದೂ ಹೇಳಿದೆ.[35] ಆದರೆ ಹೆಚ್ಚಾಗಿ ಆತನ ಪರಿನಿರ್ವಾಣವನ್ನು ಬರೇ ನಿರ್ವಾಣವೆಂದೂ ಹೇಳುವುದರಿಂದ, ನಿರ್ವಾಣಕ್ಕಿರುವ ಜ್ಞಾನಸಿದ್ಧಿ, ಜೀವನ್ಮುಕ್ತಿ ಎಂಬ ಅರ್ಥವು ಅಡಗಿಹೋಗಿದೆ. ಈಗ ಬುದ್ಧನು ಕ್ರಿ.ಪೂ. 546 ಏಪ್ರಿಲ್ 3 ನೆಯ ತಾರೀಕು ಬುಧವಾರ ಬೋಧಿಜ್ಞಾನವೆಂಬ ನಿರ್ವಾಣವನ್ನು ಪಡೆದನೆಂದು ಮೇಲೆ ಕಂಡಿರುತ್ತೇವೆ. ಅತಏವ ಗತವರ್ಷಗಳ ಸಂಖ್ಯೆಯಿಂದ ವರ್ತಮಾನ ವರ್ಷವನ್ನು ಲೆಕ್ಕಿಸುವ ನಮ್ಮ ಬಹಳ ಪ್ರಾಚೀನ ಕಾಲಾರಭ್ಯದ ವಾಡಿಕೆಯ ಮೇರೆಗೆ ಕ್ರಿ.ಪೂ. 546-45 ಆ ಬುದ್ಧನಿರ್ವಾಣಶಕದ ಶೂನ್ಯವರ್ಷ (Zero Year), ಕ್ರಿ.ಪೂ. 545-44 ಅದರ ೧ನೆಯ ವರ್ಷ. ಆದಕಾರಣ ಈಗ ನಡೆವ ಕ್ರಿ.ಶ. 1945 ನೆಯ ಇಸವಿ ಆ ನಿರ್ವಾಣಶಕದ ೨೪೯೦ನೆಯ ವರ್ಷವಾಗುತ್ತದೆ. ಆದರೆ ಸಿಂಹಲದ್ವೀಪದಲ್ಲಿ ಈ ಕ್ರಿ.ಶ. 1945 ಅದರ ೨೪೮೯ನೆಯ ವರ್ಷವೆಂದು ತಿಳಿಯುವುದರಿಂದ, ಅಲ್ಲಿ ಆ ನಿರ್ವಾಣಶಕದ ೧ನೆಯ ವರ್ಷವು ಕ್ರಿ.ಪೂ. 544-43 ಎಂದು ಮತ್ತೂ ೧ ವರ್ಷಕ್ಕೆ ಇಳಿತಂದಿರುವಂತೆ ವ್ಯಕ್ತವಾಗುತ್ತದೆ. ಆದರೆ ಆ ಶಕವು ಸಿಂಹಲದ್ವೀಪದಲ್ಲಿ ಬಳಕೆಯಲ್ಲಿ ಉಳ್ಳ ಕಳದ ಸು. ೨೨೦೦ ವರ್ಷಗಳಲ್ಲಿ ಹೀಗಾದ ೧-೨ ವರ್ಷಗಳ ವ್ಯತ್ಯಾಸವು ಏನೂ ಸೋಜಿಗವಲ್ಲ. ಮೇಲೆ ಕಂಡಿರುವ ಅಶೋಕನ ೧ನೆಯ ಲಘು ಶಿಲಾಲೇಖದಲ್ಲಿಯ ೨೫೬ ಎಂಬ ವರ್ಷಸಂಖ್ಯೆಯಾದರೊ ಬುದ್ಧನ ಪರಿನಿರ್ವಾಣಶಕದ ವರ್ಷವೆಂದು ಹೀಗೆ ಕಂಡಿತವಾಗುವ ಕಾರಣ, ಅದು ಗತವರ್ಷ ಸಂಖ್ಯೆಯಾದರೆ ಆ ಶಿಲಾಲೇಖದ ತೇದಿ ಕ್ರಿ.ಪೂ. 244 ಎಂದೂ, ಅದು ವರ್ತಮಾನ ವರ್ಷದ ಸಂಖ್ಯೆಯಾದರೆ ಅದರ ತೇದಿ ಕ್ರಿ.ಪೂ. 245 ಎಂದೂ ಸ್ವಯಂವ್ಯಕ್ತವದೆ.

(ಸಶೇಷ) ಗೋವಿಂದ ಪೈ.

[35] ಅದೇ, ಪು. 53.

ಅಕ್ಷರ ಪ್ರಚಾರದ ಹುಟ್ಟು—ಬೆಳವಣಿಗೆ

ಕಾಮೀವಾ ಕದರ್ಯೋವಾ ನೃಶಂಸಃ ಪುರುಷಃ ಕ್ವಚಿತ್
ದ್ರಷ್ಟುಂ ಶಕ್ಯಂ ಅಯೋಧ್ಯಾಯಾಂ ನ ಅವಿದ್ವಾನ್ ನ ಚ ನಾಸ್ತಿಕಃ
—ಬಾಲಕಾಂಡ, vi (೮)

ರಾಮನ ರಾಜ್ಯದಲ್ಲಿ ಅವಿದ್ಯಾವಂತರನ್ನು ನೋಡಬೇಕೆಂದು ಹುಡುಕಿದರೂ ಸಿಗರು ಎಂದು ರಾಮಾಯಣದ ಒಂದು ಶ್ಲೋಕವಿದೆ. ರಾಮನ ರಾಜ್ಯದಲ್ಲಿ ವಾಸ್ತವವಾಗಿ ಹೀಗಿತ್ತೋ ಇಲ್ಲವೋ ? ಕವಿಯು ಕಂಡ 'ರಾಮರಾಜ್ಯ' ದಲ್ಲಿ ವಿದ್ಯಾವಂತನಲ್ಲದವನಿಗೆ ಜಾಗವಿರಲಿಲ್ಲ ಎಂದು ಹೇಳಬಹುದು. ದೇಶದ ಪ್ರಜೆಗಳೆಲ್ಲರೂ ವಿದ್ಯಾವಂತರಾಗಿರುವುದು ಆದರ್ಶರಾಜ್ಯದ ಒಂದು ಗುರುತು ಎಂದು ಮೊದಲಿಂದಲೂ ಜನ ತಿಳಿದಿರುವ ಹಾಗೆ ಇದೆ.

ಇಷ್ಟು ಹೇಳಬಹುದು: ಜನಸಾಮಾನ್ಯಕ್ಕೆ ತಿಳಿವಳಿಕೆಯನ್ನು ಕೊಡುವುದರ ಅಗತ್ಯವನ್ನು ನಮ್ಮ ಹಿರಿಯರು ಮನಗಂಡು ಅದಕ್ಕೆ ಬೇಕಾದ ಸಾಧನಗಳನ್ನು ಹುಡುಕಿದ್ದರೆಂಬುದರಲ್ಲಿ ಸಂಶಯವಿಲ್ಲ. ಪುರಾಣ ಪುಣ್ಯಕಥೆಗಳ ಶ್ರವಣ, ಹರಿಕಥೆ, ದಾಸರ ಪದಗಳು, ವಚನಗಳು, ಇವೆಲ್ಲವೂ ಇಂಥ ಏರ್ಪಾಟುಗಳು. ಆದರೆ ಜನಸಾಮಾನ್ಯಕ್ಕೆ **ಅಕ್ಷರ ಕಲಿಸಬೇಕೆಂಬ** ವ್ಯವಸ್ಥೆ ಹಿಂದೆ ಇರಲಿಲ್ಲ. ಏಕೆಂದರೆ ಅದರ ಅಗತ್ಯವಿರಲಿಲ್ಲ. ಅಕ್ಷರಜ್ಞಾನ ತಿಳಿವಳಿಕೆಗೆ ಸಾಧನ ಮಾತ್ರವಷ್ಟೆ ? ಅಕ್ಷರಸ್ಥನಾಗದೆ ತಿಳಿವಳಿಕೆ ಪಡೆಯುವುದು ಸಾಧ್ಯವಾದರೆ ಅಕ್ಷರದಿಂದೇನು ? ಅಲ್ಲದೆ ಅಕ್ಷರಜ್ಞಾನವನ್ನು ಹರಡಲು ಈಗಿನ ಕಾಲದ ಅಗ್ಗದ ಕಾಗದ, ಅಚ್ಚಿನ ಯಂತ್ರ ಮೊದಲಾದ ಸಲಕರಣೆಗಳು ಆಗ ಇರಲಿಲ್ಲ. ಓಲೆಯಗರಿಯ ಮೇಲೆ ಬರೆದು ಪ್ರತಿಗಳನ್ನು ತಯಾರು ಮಾಡಬೇಕಾದ ಕಾಲದಲ್ಲಿ ಓದುಬರಹವನ್ನು ಹರಡುವುದು ಎಷ್ಟೇ ಅಗತ್ಯವೆಂದು ತಿಳಿದಿದ್ದರು ಕೂಡ ಅದು ಅಸಾಧ್ಯದ ಕೆಲಸವಾಗಿತ್ತು. ಅಂಥ ಕಾಲದಲ್ಲಿ ವೃತ್ತ ಪತ್ರಿಕೆಗಳು ಹುಟ್ಟಿಯಾವೆ ? ಒಂದು ಕಡೆ ಅಚ್ಚು ಕೂಟ, ಅಗ್ಗದ ಕಾಗದ; ಮತ್ತೊಂದು ಕಡೆ ಅಂಚೆಯ ಏರ್ಪಾಟು—ಇವು ಅಕ್ಷರಜ್ಞಾನವನ್ನು ಜನರಲ್ಲಿ ಹರಡಲು ಸಾಧ್ಯಮಾಡಿಕೊಟ್ಟಿವೆ. ಜೊತೆಗೆ, ಪ್ರಜಾಸರಕಾರವು ಜನಪ್ರಿಯವಾದ ಮೇಲೆ ಸಾಮಾನ್ಯಜನರ ಹಕ್ಕುಬಾಧ್ಯತೆಗಳ ತಿಳಿವಳಿಕೆ, ತಮ್ಮ ಅಭಿಮತವನ್ನು ಸೂಚಿಸಲು ವೋಟು ಮಾಡುವ ಅಧಿಕಾರ—ಇವು ಅಕ್ಷರ ಕಲಿಯುವುದರ ಆವಶ್ಯಕತೆಯನ್ನು ಹೆಚ್ಚು ಮಾಡಿವೆ.

ಎಲ್ಲ ದೇಶಗಳಲ್ಲಿಯೂ ೫೦—೬೦ ವರ್ಷಗಳ ಹಿಂದೆ ಓದಿದವರ ಸಂಖ್ಯೆ ತೀರ ಕಡಮೆ ಇತ್ತು. ಕೆಲವರು ಮಾತ್ರ ಓದು ಕಲಿಯುತ್ತಿದ್ದರು. ಅವರು ಪಾದ್ರಿಗಳು, ಉಪದೇಶಕರು, ದೇಶದ ಆಡಳಿತಗಾರರು, ಉಪಾಧ್ಯಾಯರು, ಇಂಥವರು. ಆದರೆ ಪ್ರಜಾಸರ್ಕಾರವು ಇಂಗ್ಲೆಂಡ್, ಫ್ರಾನ್ಸ್, ಅಮೆರಿಕಾ ಮೊದಲಾದ ದೇಶಗಳಲ್ಲಿ ಏರ್ಪಟ್ಟಾಗ ಪ್ರಭುತ್ವವನ್ನು ನಡಸುವ ಪ್ರಜಾಪ್ರತಿನಿಧಿಗಳನ್ನೂ, ಅವರನ್ನು ಆರಿಸುವ ಸಾಮಾನ್ಯ ಪ್ರಜೆಯನ್ನೂ ಸುಶಿಕ್ಷಿತರನ್ನಾಗಿ ಮಾಡಬೇಕಾದುದು (to educate our masters) ದೇಶದ ಕರ್ತವ್ಯವೆಂದು ತೋರಿತು. ಅಕ್ಷರಜ್ಞಾನ ಈ ಶಿಕ್ಷಣಕ್ಕೆ ತಳಹದಿಯೆಂದು, ಎಲ್ಲ ಮಕ್ಕಳಿಗೂ ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಕೊಡುವ ಏರ್ಪಾಟು ಮಾಡಿದರು.

ಸಾರ್ವತ್ರಿಕ ಶಿಕ್ಷಣದ ಅಗತ್ಯವನ್ನು ಮನಗಂಡವರಲ್ಲಿ ಗೋಖಲೆಯವರು ನಮ್ಮಲ್ಲಿ ಮೊದಲನೆಯವರು. ೧೯೧೧ ರಲ್ಲಿ ಅವರು ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್ ಸಭೆಯಲ್ಲಿ ಒತ್ತಾಯ ಶಿಕ್ಷಣ ಮಸೂದೆಯನ್ನು ತಂದರು. ಮಸೂದೆಯನ್ನು ಸಭೆ ಒಪ್ಪಲಿಲ್ಲ! (ಪರವಾಗಿ ೧೩, ವಿರೋಧವಾಗಿ ೩೧ ಜನರು!) ಅಲ್ಲಿಂದೀಚೆಗೆ ಹಿಂದುಸ್ತಾನದ ಎಲ್ಲ ಪ್ರಾಂತ ಸರ್ಕಾರಗಳು ಒತ್ತಾಯ ಶಿಕ್ಷಣದ ತತ್ವವನ್ನು ಒಪ್ಪಿಕೊಂಡಿದ್ದರೂ ಅದನ್ನು ಕಾರ್ಯಗತವಾಗಿ ಮಾಡಲು ಹಿಂದು ಮುಂದು ನೋಡುತ್ತಿವೆ.

ಒತ್ತಾಯದ ಪ್ರಾಥಮಿಕ ಶಿಕ್ಷಣವು ಜಾರಿಯಲ್ಲಿಲ್ಲದೆ ಇದ್ದರೂ ಬರ್ಮಾದಲ್ಲಿ ವಿದ್ಯಾವಂತರ ಸಂಖ್ಯೆ ತಕ್ಕಮಟ್ಟಿಗೆ ಹೆಚ್ಚಿಗೆ ಕಂಡುಬಂದಿದೆ. ಅಲ್ಲಿನ ವಿದ್ಯಾವಂತರ ಸಂಖ್ಯೆ ಹೀಗಿದೆ:

	೧೯೧೧	೧೯೨೧	೧೯೩೧
ಸೇಕಡ	೨೨.೨	೨೮.೦	೩೧.೨

ಬರ್ಮಾವನ್ನು ೧೯೩೫ ನೆಯ ಇಂಡಿಯಾ ಆಕ್ಟ್ ಪ್ರಕಾರ ಇಂಡಿಯಾ ದೇಶದಿಂದ ಬೇರೆಮಾಡಿದರು. ಅದುವರೆಗೆ ಅದು ಇಂಡಿಯದ ಭಾಗವಾಗಿದ್ದು, ಇಂಡಿಯಾ ಸೆನ್ಸಸ್ಸಿನ ಎಲ್ಲ ಅಂಕಿ ಅಂಶಗಳೂ ಬರ್ಮಾದ ಅಂಕಿಗಳನ್ನು ಒಳಗೊಂಡಿರುತ್ತದೆ. ಹಿಂದುಸ್ತಾನದ ಅಕ್ಷರತೆ ಅದೇ ವರ್ಷಗಳಲ್ಲಿ

	೧೯೧೧	೧೯೨೧	೧೯೩೧
ಸೇಕಡ	೫.೯	೭.೨	೮.೦

ಬರ್ಮಾವನ್ನು ಬೇರ್ಪಡಿಸಿ, ಹಿಂದುಸ್ತಾನಕ್ಕೆ ಮಾತ್ರ ಈ ಅಂಕಿಗಳನ್ನು ಕೊಟ್ಟರೆ ಇವು ತೀರ ಕಡಮೆಯಾಗುತ್ತದೆ ಎಂದು ಹೇಳಬೇಕಾಗಿಲ್ಲ. ನೆರೆಪ್ರಾಂತವೊಂದರಲ್ಲಿ

ಹೀಗಿರುವುದಕ್ಕೆ ಕಾರಣವೇನು? ಅಲ್ಲಿನ ವಿದ್ಯಾವ್ಯವಸ್ಥೆಯ ಹೆಚ್ಚುಗಾರಿಕೆ ಏನಿರ ಬಹುದು ಎಂಬುದು ವಿಚಾರಮಾಡಬೇಕಾದುದು.

ನಮ್ಮಲ್ಲಿ ಹಿಂದೆ ಹಳ್ಳಿ ಹಳ್ಳಿಯಲ್ಲೂ ಕೂಲಿಮಠಗಳು ಇದ್ದವು. 'ಸರಕಾರಿ ಶಾಲೆಗಳು' ಹುಟ್ಟಿಕೊಂಡಮೇಲೆ ಅವು ಒಂದೊಂದಾಗಿ ಮಾಯವಾದವು. ಆದರೆ ಬರ್ಮಾದಲ್ಲಿ ಇಂಥ ಕೂಲಿ ಮಠಗಳನ್ನು ಬೌದ್ಧ ದೇವಾಲಯ ಮತ್ತು ವಿಹಾರಗಳಲ್ಲಿ ಅಲ್ಲಿನ ಸಂನ್ಯಾಸಿಗಳು ನಡಸಿಕೊಂಡು ಬಂದರು. ೧೯೨೧-೩೧ ನೆಯ ದಶಮಾನದಲ್ಲಿ ಬರ್ಮಾದ ೧.೫ ಕೋಟಿ ಪ್ರಜೆಗಳಲ್ಲಿ ೧೩ ಲಕ್ಷ ಜನರು ಹೊಸದಾಗಿ ಅಕ್ಷರಸ್ಥ ರಾದರು. ಅವರ ಪೈಕಿ ಸರಕಾರಿ ಶಾಲೆಯ ವಿದ್ಯಾರ್ಥಿಗಳು ೩ ಲಕ್ಷ ಮಾತ್ರ! ಉಳಿದ ೧೦ ಲಕ್ಷ ಜನರು ಬೌದ್ಧ ಸಂನ್ಯಾಸಿಗಳು ನಡಸುತ್ತಿದ್ದ ಶಾಲೆಗಳಲ್ಲಿ ವಿದ್ಯಾ ಭ್ಯಾಸಮಾಡಿದವರು. ವಿದ್ಯಾಪ್ರಸಾರದಲ್ಲಿ ಬರ್ಮಾಕ್ಕೂ ಹಿಂದುಸ್ತಾನಕ್ಕೂ ಇರುವ ವ್ಯತ್ಯಾಸದ ಕಾರಣ—ಬರ್ಮಾದಲ್ಲಿ ವಿದ್ಯಾಭ್ಯಾಸ ವ್ಯವಸ್ಥೆಯನ್ನು ಸರಕಾರವು ಕೈಗೊಂಡ ಮೇಲೂ ಹಿಂದಿನ ಕೂಲಿಮಠಗಳಂಥ ವಿದ್ಯಾಶಾಲೆಗಳು ಜನಪ್ರಿಯವಾಗಿ ಉಳಿದುಕೊಂಡದ್ದು ಎಂದು ಶಿಕ್ಷಣ ಶಾಸ್ತ್ರಜ್ಞರ ಅಭಿಪ್ರಾಯ.[1] ನಮ್ಮ ದೇಶದಲ್ಲಿ ಹಿಂದಿದ್ದ ಕೂಲಿ ಮಠಗಳನ್ನು ಪೋಷಿಸದೆ, ಸರಕಾರದ ವಿದ್ಯಾ ವ್ಯವಸ್ಥೆಯಲ್ಲಿ ಅವುಗಳಿಗೆ ಯೋಗ್ಯಸ್ಥಾನ ಕೊಡದೆ ಅನಾದರಣೆ ಮಾಡಿದ್ದು ಜನಸಾಮಾನ್ಯದ ವಿದ್ಯಾಭ್ಯಾಸ ಹಿಂದುಳಿದಿರುವುದಕ್ಕೆ ಕಾರಣವೆಂದು ಅನೇಕರ ಅಭಿಪ್ರಾಯ.

ಪ್ರಜಾ ಸರ್ಕಾರವು ಏರ್ಪಟ್ಟ ದೇಶಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಒತ್ತಾಯ ಮಾಡಿದುದರ ಜೊತೆಗೆ ಅದುವರೆಗೆ ಅನಕ್ಷರಸ್ಥರಾಗಿ ಉಳಿದಿರುವ ವಯಸ್ಕರಿಗೆಲ್ಲ ವಿದ್ಯಾ ಭ್ಯಾಸ ಮಾಡಿಸಬೇಕೆಂದು ಅವರಿಗೇ ಪ್ರತ್ಯೇಕ ಶಾಲೆಗಳನ್ನು ತೆರೆದರು. ಅಷ್ಟೇ ಅಲ್ಲದೆ ವಿದ್ಯಾಭ್ಯಾಸವು ಮನುಷ್ಯನ ಯಾವಜ್ಜೀವಪರ್ಯಂತ ನಡೆಯಬೇಕಾದುದು,

[1] ಕನ್ನಡನಾಡಿನಲ್ಲಂತೂ ಭಾರತವನ್ನು ಓದುವುದು, ಅದನ್ನು ಓದಲು ಕಲಿಸುವುದು ಹಳ್ಳಿ ಹಳ್ಳಿಯಲ್ಲೂ ರೂಢಿಯಲ್ಲಿತ್ತು. "ಏನು ಓದಿದ್ದಾನೆ, ಹುಡುಗ" ಎಂದು ಈಗಿನ ಕಾಲದ ತಂದೆ ತಾಯಿಗಳು ಮುಂದೆ ತಮ್ಮ ಅಳಿಯನಾಗುವ ವರನನ್ನು ಕೇಳುವಂತೆ, ಆಗ "ಭಾರತ ಓದು ವುದಕ್ಕೆ ಬರುತ್ತದೆಯೇ?" ಎಂದು ಪರೀಕ್ಷಿಸುವುದು ವಾಡಿಕೆಯಾಗಿತ್ತು ಎಂದು ಕಾಣುತ್ತದೆ. ಇಂಥ ವರಪರೀಕ್ಷೆಯಲ್ಲಿ ನಡೆದ ಒಂದು ಸಂದರ್ಭ ಈಗ ಮನೆ ಮಾತಾಗಿದೆ. ಹುಡುಗ ಮಣೆಯ ಮೇಲೆ ಕೂತು ಕೈಯಲ್ಲಿ ಪುಸ್ತಕ ಹಿಡಿದು ಯಾವುದನ್ನು ಓದಲಿ?—ಭಾರತವನ್ನೋ, ಭಾಗವತವನ್ನೋ ಎಂದು ಕೇಳಿದನಂತೆ. ವರನ ಎರಡು ಪಾರ್ಶ್ವಕ್ಕೂ ಹಣತೆಗಳನ್ನು ಹಚ್ಚಿಟ್ಟಿದ್ದರು. ಭಾರತವನ್ನು ಓದಲೇ ಎಂದು ಒಂದುಕಡೆ ನೆರದಿದ್ದ ಜನರನ್ನು ನೋಡುತ್ತ ಕೇಳಿದಾಗ ಮಹಾಪ್ರಾಣದ ಉಚ್ಚಾರಣೆ ಯಿಂದ ಆ ಕಡೆಯ ದೀಪ ಆರಿಹೋಯಿತು! ಭಾಗವತವನ್ನು ಓದಲೆ?—ಎಂದು ಮತ್ತೊಂದು ಕಡೆ ನೆರದಿರುವ ಜನರನ್ನು ಕೇಳಿದಾಗ 'ಭಾ' ಆ ದೀಪವನ್ನು ಆರಿಸಿತು. ಹೀಗೆಂದು ಕಥೆ.

ಅದು ಅವನ ಬಾಲ್ಯಕ್ಕೇ ಮುಗಿಯತಕ್ಕದ್ದಲ್ಲ. ಹೀಗೆಂದು ಗಿರಣಿ, ಮಿಲ್ಲು, ಫ್ಯಾಕ್ಟರಿ ಮೊದಲಾದ ಕೆಲಸಗಾರರಿಗೆ ಸಾಂಸ್ಕೃತಿಕ ಶಿಕ್ಷಣವನ್ನೂ ತಮ್ಮ ವೃತ್ತಿಯಲ್ಲಿಯೇ ಹೆಚ್ಚಿನ ಶಿಕ್ಷಣವನ್ನೂ ಕೊಡುವುದರಿಂದ ಅವರ ಸಂಪಾದನೆ ಹೆಚ್ಚಿಸಲು ಅನುಕೂಲ ಮಾಡಿಕೊಡಬೇಕೆಂದೂ ರಾತ್ರಿಶಾಲೆ, ಕಾಲೇಜುಗಳು ಆರಂಭವಾದುವು.

ಮೈಸೂರು ಸಂಸ್ಥಾನದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ (೧೯೧೨-೧೯೧೮) ವಿದ್ಯಾಪ್ರಸಾರಕ್ಕೆ ಅನೇಕ ಕಾರ್ಯಕ್ರಮಗಳನ್ನು ಕೈಕೊಂಡರು. ಅವುಗಳಲ್ಲಿ ಮುಖ್ಯವಾದ ಒಂದು, ವಯಸ್ಕರ ಶಿಕ್ಷಣಯೋಜನೆ. ಎಲ್ಲೆಲ್ಲಿ ಪ್ರಾಥಮಿಕ ಶಾಲೆಗಳು ಇವೆಯೋ ಅಲ್ಲೆಲ್ಲ ಅವುಗಳಿಗೆ ಸೇರಿದಂತೆ ರಾತ್ರಿ ಶಾಲೆಗಳನ್ನು, ಇದುವರೆಗೆ ಶಾಲೆಗೆ ಹೋಗದೆ ಇದ್ದ ವಯಸ್ಕರಿಗೆ, ಓದುಬರಹ ಕಲಿಸಲು ಏರ್ಪಡಿಸಿದರು. ಅಲ್ಲದೆ ಹಳ್ಳಿಗರು ಕಲಿತ ಓದನ್ನು ಮರೆಯದೆ ಇರುವುದಕ್ಕೂ ಹೆಚ್ಚಿನ ತಿಳಿವಳಿಕೆಯನ್ನು ಸಂಪಾದಿಸುವುದಕ್ಕೂ ಗ್ರಾಮಾಂತರ ಪುಸ್ತಕ ಭಂಡಾರಗಳನ್ನು ಸ್ಥಾಪಿಸಿದರು.

ದೇಶದ ಅಭಿವೃದ್ಧಿ ಕಾರ್ಯಗಳು ಫಲಿಸುವುದು ಸಾವಕಾಶವಾಗಿ ಇಂಥ ಕಾರ್ಯಗಳಲ್ಲಿ ಉತ್ಸಾಹವುಳ್ಳ ಜನ ಒಂದಕ್ಕೆ ನೂರ್ಮಡಿ ಆಗಬೇಕು. ತಾವು ಓದು ಕಲಿಯುವುದರ ಆವಶ್ಯಕತೆಯನ್ನು ಜನ ಮನಗಾಣಬೇಕಾದರೆ ಏಕಪ್ರಕಾರವಾಗಿ ಪ್ರಚಾರ ನಡೆಯಬೇಕು. ಆಡಳಿತಗಾರರೂ ಕೆಲಸಗಾರರೂ ಅನುಭವಪಡೆದಂತೆ ಕಾರ್ಯಯೋಜನೆಯಲ್ಲಿ ಮಾರ್ಪಾಟುಗಳನ್ನು ಮಾಡಿಕೊಳ್ಳಬೇಕಾಗುವುದು. ದೊಡ್ಡ ಧ್ಯೇಯವನ್ನು ಸಾಧಿಸುವ ಒಂದು ಮನೋದಾರ್ಢ್ಯ ಕಾರ್ಯನಿಯೋಜಕರಿಗಿರುವಷ್ಟು ಅವರನ್ನು ಹಿಂಬಾಲಿಸುವವರಿಗೆ ಇರುವುದಿಲ್ಲ. ಈ ಮಧ್ಯದಲ್ಲಿ ಕಾರ್ಯನಿಯೋಜಕರೇ ಕಾರಣಾಂತರಗಳಿಂದ ಅಧಿಕಾರ ಸೂತ್ರವನ್ನು ಬಿಟ್ಟುಬಿಟ್ಟರೆ ಅದು ದೇಶದ ದುರ್ದೈವವೆಂದು ಹೇಳಬೇಕಾಗುತ್ತದೆ. ಈ ರಾತ್ರಿಶಾಲೆಗಳ ವ್ಯವಸ್ಥೆಯ ಕಥೆ ಹೀಗಾಯಿತು. ಕೆಲಸಗಾರರಲ್ಲಿ ಆರಂಭದಲ್ಲಿದ್ದ ಮುತುವರ್ಜಿ ಮಾಯವಾಗುತ್ತ ಬಂದಿತು. ಜನರಲ್ಲಿಯೂ ಈ ಓದಿನಿಂದ ನಮಗೇನು ಎಂಬ ಉದಾಸೀನವು ಬಲವಾಯಿತು. ಈ ಯೋಜನೆ ನಿಷ್ಫಲ ಎಂಬ ಭಾವನೆ ಅಧಿಕಾರವರ್ಗದಲ್ಲಿ ಪ್ರಬಲವಾಗುತ್ತ ಬಂದು ೫-೬ ವರ್ಷಗಳಲ್ಲಿ ಈ ಶಾಲೆಗಳನ್ನು ಒಂದೊಂದಾಗಿ ಮುಚ್ಚುವುದಕ್ಕೆ ಆರಂಭಿಸಿದರು. ಅಲ್ಲಲ್ಲಿ ಇದ್ದ ಶಾಲೆಗಳು ಹೆಸರಿಗೆ ಮಾತ್ರ ನಡೆಯುತ್ತಿದ್ದ ಶಾಲೆಗಳಾದವು. ಆದರೂ ಮುಂದೆ ಮಾಡುವ ಯೋಜನೆಗಳಿಗೆ ಮೊದಲನೆಯ ಹೆಜ್ಜೆ ಇಟ್ಟಂತಾಯಿತು. ಇದರಿಂದ ನೇರವಾಗಿ ದೊರೆತ ಫಲವೆಂದರೆ, ಪ್ರಾಥಮಿಕ ಶಾಲೆಯಲ್ಲಿ ಓದುವ ಮಕ್ಕಳ ಸಂಖ್ಯೆ ಹೆಚ್ಚಿತು.

ಅಲ್ಲಿಂದೀಚೆಗೆ, ವಯಸ್ಕರ ಶಿಕ್ಷಣಕ್ಕೆ ಹೊಸ ಉತ್ಸಾಹ ಜನರಲ್ಲಿ ಹುಟ್ಟಿದ್ದು ಬ್ರಿಟಿಷ್ ಪ್ರಾಂತಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡವು ಏರ್ಪಟ್ಟಾಗ. ಬಿಹಾರಲ್ಲಿ ನಡೆದ ವಿದ್ಯಾಪ್ರಸಾರ ಕಾರ್ಯವು ಎಲ್ಲ ಪ್ರಾಂತಗಳಿಗೂ ಆದರ್ಶವಾಯಿತು. ಅದು ವರೆಗೆ ಆಗಲೆ ರಷ್ಯಾ, ಚೀನಾ ಮತ್ತು ತುರ್ಕಿ ದೇಶಗಳಲ್ಲಿ ಜನರನ್ನು ಅಕ್ಷರಸ್ಥರನ್ನಾಗಿ ಮಾಡಲು ಅನುಸರಿಸಿದ ರೀತಿನೀತಿಗಳು ಪ್ರಪಂಚದ ಗಮನವನ್ನು ಸೆಳೆದಿದ್ದವು. ದೇಶದ ಜನವನ್ನೆಲ್ಲ ಅಕ್ಷರಸ್ಥರನ್ನಾಗಿ ಮಾಡಬೇಕಾದರೆ ಸಾಮಾನ್ಯ ಕಾರ್ಯಕ್ರಮಗಳನ್ನು ಮೀರಿ, ಜನರಲ್ಲಿ ಒಂದು ಕ್ರಾಂತಿ ಹುಟ್ಟಿಸುವ ಚಳವಳಿಯನ್ನು ಆರಂಭಿಸಬೇಕು, ಅವರಲ್ಲಿ ಒಂದು ಹೊಸ ಉತ್ಸಾಹ ಹುಟ್ಟಬೇಕು, ಅಂಥ ಚಳವಳಿಯ ಅಂಗವಾಗಿ ವಿದ್ಯಾಪ್ರಸಾರವನ್ನು ನಡಸಿದರೆ ಅದು ಶೀಘ್ರದಲ್ಲಿ ಫಲಿಸುತ್ತದೆ ಎಂದು ರಷ್ಯಾ ಮೊದಲಾದ ದೇಶಗಳು ತೋರಿಸಿಕೊಟ್ಟಿದ್ದವು. ಅಲ್ಲದೆ ದೊಡ್ಡವರಿಗೆ ಓದುಬರಹ ಕಲಿಸುವುದಕ್ಕೆ ಹೆಚ್ಚು ಕಾಲ ಬೇಕಾಗುವುದಿಲ್ಲ. ಅವರಿಗೇ ಪ್ರತ್ಯೇಕವಾದ ಸುಲಭೋಪಾಯದಲ್ಲಿ, ಅಕ್ಷರ ಕಲಿಸುವ ಪುಸ್ತಕಗಳು ಬೇಕು, ಉಪಾಧ್ಯಾಯವೃತ್ತಿಯನ್ನು ಅನುಸರಿಸುವವರಿಗೆ ಮಾತ್ರ ಈ ಕಾರ್ಯವನ್ನು ಬಿಡದೆ, ಅಕ್ಷರಸ್ಥರಾಗಿರುವವರೆಲ್ಲರೂ—ಶಾಲೆ ಕಾಲೇಜುಗಳ ವಿದ್ಯಾರ್ಥಿಗಳು, ಗುಮಾಸ್ತರು, ಅಧಿಕಾರಿಗಳು, ವರ್ತಕರು—ಉಪಾಧ್ಯಾಯರಾಗಿ ಮುಂದೆ ಬಂದು, ಕಚೇರಿಗಳಲ್ಲಿ, ಗಿರಣಿಗಳಲ್ಲಿ, ಬಂದೀಖಾನೆಗಳಲ್ಲಿ, ಊರ ಚಾವಡಿಗಳಲ್ಲಿ, ರಾಮಮಂದಿರಗಳಲ್ಲಿ, ದೇವಸ್ಥಾನಗಳಲ್ಲಿ—ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ, ಕೊನೆಗೆ ಮನೆಮನೆಯಲ್ಲೂ—ವಯಸ್ಕರ ಶಾಲೆಗಳನ್ನು ನಡಸಬೇಕು ಎಂದು ಆ ದೇಶಗಳು ತೋರಿಸಿಕೊಟ್ಟವು. ಆ ಅಳತೆ ಅವಕಾಶದಲ್ಲಿ ಬಿಹಾರಿನಲ್ಲಿ ಕೆಲಸ ನಡೆಯಿತು. ಆಗ ವಿದ್ಯಾಮಂತ್ರಿಗಳಾಗಿದ್ದ ಡಾ. ಸೈಯದ್ ಮಹಮ್ಮೂದರವರು ಮುಂದೆ ನಿಂತು ದೇಶದ ನಿರಕ್ಷರತೆಯನ್ನು ನಿವಾರಿಸಲು ದೊಡ್ಡ ಕಾರ್ಯಕ್ರಮವನ್ನು ನಡಸಿದರು. ಎಲ್ಲರಿಗೂ ಮಾದರಿಯಾಗಿ ತಾವು ಸ್ವಂತ ೨೦ ಜನಕ್ಕೆ ಓದುಬರಹ ಕಲಿಸಿದರು. ಎರಡು ವರ್ಷಗಳ ಕಾಲದಲ್ಲಿ ೧೧ ಲಕ್ಷ ಜನ ಅಕ್ಷರಸ್ಥರಾದರು.

ಮದರಾಸಿನಲ್ಲಿ ಮುಖ್ಯ ಮಂತ್ರಿಗಳಾಗಿ ಅಧಿಕಾರ ಸೂತ್ರವನ್ನು ವಹಿಸಿದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು ವಯಸ್ಕರು ಓದುಬರಹ ಕಲಿಯಲು ಪುಸ್ತಕಗಳನ್ನು ತಾವೇ ಬರೆದು ಪ್ರಕಟಿಸಿಸಿದರು. ಬೊಂಬಾಯಿ ಪ್ರಾಂತದ ಮುಖ್ಯ ಮಂತ್ರಿಗಳಾಗಿ ಬಂದ ಶ್ರೀ ಬಿ. ಜಿ. ಖೇರ್ ಅವರು ಬೊಂಬಾಯಿ ನಗರದ ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿ ನಿಂತು ನಗರದ ನಾನಾ ಭಾಗಗಳಲ್ಲಿ ವಯಸ್ಕರ ತರಗತಿಗಳನ್ನು ಆರಂಭಮಾಡಿಸಿದರು. ಔಂಧ್ ಸಂಸ್ಥಾನದಲ್ಲಿ ಶಾಲೆಯ ಮಕ್ಕಳಿಗೆಲ್ಲ ಎರಡು ತಿಂಗಳು ರಜಾ ಕೊಟ್ಟು ತಮ್ಮ ತಮ್ಮ ಊರುಗಳಿಗೆ ಕಳುಹಿಸಿ, ಅಲ್ಲಿ ತಮ್ಮ

ತಂದೆತಾಯಿಗಳಿಗೆ ಪಾಠಕಲಿಸಲು ಏರ್ಪಾಟುಮಾಡಿದರು. ಅಲ್ಲಿನ ರಾಜಕುಮಾರ ಮತ್ತು ರಾಜಕುಮಾರಿಯವರು ಸ್ವತಃ ಹಳ್ಳಿಹಳ್ಳಿಗೆ ಹೋಗಿ ಓದುಬರಹದ ಲಾವಣಿಗಳನ್ನು ಹಾಡುತ್ತ ಜನರನ್ನು ಶಾಲೆಗಳಿಗೆ ಹೋಗುವಂತೆ ಪ್ರೋತ್ಸಾಹಿಸಿದರು. ಮಧ್ಯಪ್ರಾಂತದಲ್ಲಿ ಅಕ್ಷರ ಪ್ರಚಾರದ ಒಂದು ಚಳವಳಿಯನ್ನು ದೊಡ್ಡ ಸಭೆಗಳು, ಮೆರವಣಿಗೆಗಳು, ಬಣ್ಣಬಣ್ಣದ ಜಾಹಿರಾತುಗಳ ಮೂಲಕ ದೇಶದಾದ್ಯಂತ ಹರಡಿದರು. ಹಿಂದುಸ್ತಾನದ ಎಲ್ಲ ಪ್ರಾಂತಗಳಲ್ಲಿಯೂ ಜನಸಾಮಾನ್ಯಕ್ಕೆ ಓದುಬರಹ ಕಲಿಸಲು ಒಂದು ಹೊಸ ಉತ್ಸಾಹ ಹುಟ್ಟಿತು.

ಈ ಮಧ್ಯದಲ್ಲಿ, ಡಾ. ಎಫ್. ಸಿ. ಲಾವ್‌ಬಕ್ ಎಂಬವರು ಫಿಲಿಪೈನ್ ದ್ವೀಪಗಳಲ್ಲಿ, ಅತ್ಯಲ್ಪಕಾಲದಲ್ಲಿ ವಯಸ್ಕರನ್ನು ಅಕ್ಷರಸ್ಥರನ್ನಾಗಿ ಮಾಡುವ ಒಂದು ಹೊಸ ಉಪಾಯವನ್ನು ಹುಡುಕಿದ್ದರು. ಅವರು ಹಿಂದುಸ್ತಾನಕ್ಕೆ ಬಂದು ದೇಶದ ನಾನಾ ಭಾಗಗಳ ವಿದ್ಯಾಸಂಸ್ಥೆಗಳನ್ನೂ ಜನಮುಖಂಡರನ್ನೂ ಕಂಡು ಮಾತುಕತೆ ನಡಸಿ ವಯಸ್ಕರ ಶಿಕ್ಷಣಕ್ಕೆ ಅವರಲ್ಲಿ ಆದರ ವಿಶ್ವಾಸಗಳನ್ನು ಹುಟ್ಟಿಸಿದರು. ಫಿಲಿಪೈನ್ ದ್ವೀಪಗಳಲ್ಲಿ ಅನುಸರಿಸಿದ ಶಿಕ್ಷಣ ರೀತಿಯನ್ನು ಎಲ್ಲ ದೇಶಭಾಷೆಗಳಿಗೂ ಅನ್ವಯಿಸಿ ಪುಸ್ತಕಗಳನ್ನು ಬರಸಿದರು. ಅವರ ಶಿಕ್ಷಣ ರೀತಿಯ ಮುಖ್ಯ ತತ್ವ ಪ್ರತಿಯೊಬ್ಬನೂ ಇನ್ನೊಬ್ಬನನ್ನು ಅಕ್ಷರಸ್ಥನನ್ನಾಗಿ ಮಾಡಲಿ—'Each one teach one'—ಎಂದು ಅಂದರೆ ವಯಸ್ಕರ ಶಾಲೆಯ ಪ್ರತಿವಿದ್ಯಾರ್ಥಿಯೂ ಉಪಾಧ್ಯಾಯನಾಗಬೇಕು. ಏಕೆಂದರೆ ಹಿಂದುಸ್ತಾನದ ೪೦ ಕೋಟಿ ಪ್ರಜೆಗಳಲ್ಲಿ ಅನಕ್ಷರಸ್ಥರು ⅘ ಭಾಗ; ಸುಮಾರು ೩೫ ಕೋಟಿ. ಇಷ್ಟು ಜನಕ್ಕೆ ಸಾಮಾನ್ಯ ತರಗತಿಗಳ ಮಾದರಿಯಲ್ಲಿ ಪಾಠ ಹೇಳಿಕೊಡಬೇಕಾದರೆ ಸಾಕಾದಷ್ಟು ಉಪಾಧ್ಯಾಯರು ಸಿಗುವುದಿಲ್ಲ! ಅಲ್ಲದೆ ಅವರೆಲ್ಲರೂ ಅಕ್ಷರಸ್ಥರಾಗುವ ವರೆಗೆ ದೇಶ ಕಾಯುವ ಹಾಗಿಲ್ಲ. ಆದ್ದರಿಂದ ಅಕ್ಷರ ಕಲಿಯುತ್ತಿರುವ ಪ್ರತಿಯೊಬ್ಬನೂ ಇನ್ನೊಬ್ಬನನ್ನೂ ಅಕ್ಷರಸ್ಥನನ್ನಾಗಿ ಮಾಡಬೇಕು ಎಂದು. ಅದಕ್ಕೆ ತಕ್ಕ ಶಿಕ್ಷಣ ರೀತಿಯಲ್ಲಿ ಪುಸ್ತಕಗಳನ್ನು ಬರೆಯಬೇಕು ಎಂಬ ಉದ್ದೇಶದಿಂದ ಅವರು ತಮ್ಮ ಪುಸ್ತಕಗಳನ್ನು ಪ್ರಕಟಿಸಿದರು.

ಈ ಹೊತ್ತಿಗಾಗಲೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ (University Settlement) ಎಂಬ ಸಂಸ್ಥೆಯು ವಿದ್ಯಾರ್ಥಿಗಳನ್ನು ಸಮಾಜಸೇವೆಗೆ ತಯಾರು ಮಾಡುವ ಉದ್ದೇಶದಿಂದ ಸ್ಥಾಪಿತವಾಗಿತ್ತು. ಸಮಾಜ ಸೇವೆಯ ಮುಖ್ಯಾಂಗ, ನಮ್ಮ ದೇಶದಲ್ಲಿ ಜನರಿಗೆ ಓದುಬರಹ ಕಲಿಸುವುದು. ಆ ಸಂಸ್ಥೆಗೆ ಸದಸ್ಯರಾಗಿ ಸೇರಿದ ವಿದ್ಯಾರ್ಥಿಗಳು ಹರಿಜನರ ಕೇರಿ, ಕೂಲಿಗಾರರ ಕ್ಯಾಂಪು ಇವುಗಳಲ್ಲಿ ರಾತ್ರಿಶಾಲೆಗಳನ್ನು ತೆರೆದರು. ಮೈಸೂರು ನಗರದ ವಿಶ್ವವಿದ್ಯಾನಿಲಯ ಸಂಘವು ಅನೇಕ ವರ್ಷಗಳಿಂದ

‘ ಸಮಾಜ ಹಿತ ಸಮಿತಿ ’ (Social Service Sub-committee) ಎಂಬ ಹೆಸರಿನಿಂದ ಸಮಾಜ ಸೇವೆಯಲ್ಲಿ ಆಸಕ್ತಿಯುಳ್ಳ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿ ಅವರ ಕೈಯಿಂದ ಜ್ಞಾನಪ್ರಸಾರ ಕಾರ್ಯವನ್ನು ನಡಸುತ್ತಿತ್ತು. ೧೯೪೦ರಲ್ಲಿ ಅಕ್ಷರ ಪ್ರಚಾರ, ಅಂದರೆ ವಯಸ್ಕರ ಶಿಕ್ಷಣಕಾರ್ಯವು, ಈ ಸಮಿತಿಯ ಮುಖ್ಯ ಕಾರ್ಯಕ್ರಮ ವಾಗಿ ಏರ್ಪಟ್ಟು ಆ ವರ್ಷ ಮೈಸೂರು ನಗರದ ಬೇರೆ ಬೇರೆ ಭಾಗಗಳಲ್ಲಿ ವಿದ್ಯಾರ್ಥಿ ಗಳು ರಾತ್ರಿಶಾಲೆಗಳನ್ನು ನಡಸಿದರು. ಬಹಳ ಉತ್ಸಾಹದಿಂದ ವಿದ್ಯಾರ್ಥಿಗಳು ಮುಂದೆ ಬಂದು ಆರು ತಿಂಗಳು ಕಾಲ ಪಾಠ ನಡಸಿದರು. ಸುಮಾರು ೬೦೦ ಜನ ಅಕ್ಷರಸ್ಥರಾದರು. ಆಗ ವಿಶ್ವವಿದ್ಯಾನಿಲಯದ ಸ್ಥಾನಪತಿಗಳಾಗಿದ್ದ ಶ್ರೀ ಎನ್. ಎಸ್. ಸುಬ್ಬರಾಯರು ಈ ಕಾರ್ಯಕ್ಕೆ ವಿಶ್ವವಿದ್ಯಾನಿಲಯದ ಧನಸಹಾಯ ಮತ್ತು ಆಶ್ರಯವನ್ನು ದೊರಕಿಸಿಕೊಟ್ಟರು. ಪಾಠ ಹೇಳಲು ಸ್ವಯಂ ಸೇವಕರಾಗಿ ಸೇರಿದ ವಿದ್ಯಾರ್ಥಿಗಳನ್ನು ಹುರಿದುಂಬಿಸಿ, ಪಾಠ ನಡೆಯುತ್ತಿದ್ದಾಗ ತರಗತಿಗಳನ್ನು ನೋಡಿ ಕೊಂಡು ಬಂದು, ಈ ಕಾರ್ಯಕ್ಕೆ ಆರಂಭದಲ್ಲಿ ಬೇಕಾಗಿದ್ದ ಉತ್ತೇಜನವನ್ನು ಕೊಟ್ಟರು. ವಿಶ್ವವಿದ್ಯಾನಿಲಯದ ಸೆನೇಟ್ ಸಭೆಯಲ್ಲಿ ವಯಸ್ಕರ ಶಿಕ್ಷಣ ಕಾರ್ಯ ವರದಿಯ ಪ್ರತಿ ಗಳನ್ನು ಸದಸ್ಯರಲ್ಲಿ ಹಂಚಿಸಿ ಅವರ ಬೆಂಬಲವನ್ನು ಈ ಕಾರ್ಯಕ್ಕೆ ಕೊಡಿಸಿದರು.

ಆಗತಾನೆ, ಮೈಸೂರಲ್ಲಿ ಹೊಸರಾಜಕೀಯ ಸುಧಾರಣೆಗಳ ಫಲವಾಗಿ ಇಬ್ಬರು ಖಾಸಗಿ ಮಂತ್ರಿಗಳು ನೇಮಿತರಾಗಿದ್ದರು. ದೇಶದ ಎಲ್ಲ ಅಭಿವೃದ್ಧಿ ಕಾರ್ಯಗಳಿಗೂ ಜನಸಾಮಾನ್ಯದ ಶಿಕ್ಷಣವು ತಳಹದಿಯೆಂದು ತಿಳಿದು ಅವರು ನಾಲ್ಕಾರು ಸಭೆಗಳಲ್ಲಿ ಮಾತನಾಡಿ ಜನರಲ್ಲಿ ಈ ವಿಚಾರದಲ್ಲಿ ಉತ್ಸಾಹವನ್ನು ತುಂಬಿದರು. ಒಂದು ಕಡೆ ಜನರಲ್ಲಿ ಹುಟ್ಟಿರುವ ಜಾಗೃತಿ ಮತ್ತೊಂದು ಕಡೆ ಓದುಬರಹ ಕಲಿಯಲು ಮಕ್ಕಳಿಗೆ ಬೇಕಾಗುವಷ್ಟು ಕಾಲ ವಯಸ್ಕರಿಗೆ ಅನಾವಶ್ಯಕ ಎಂಬ ತಿಳಿವಳಿಕೆ—ಇವು ವಯಸ್ಕರ ಶಿಕ್ಷಣಕ್ಕೆ ಹೊಸ ಜೀವವನ್ನು ಕೊಟ್ಟಿತು. ಅಕ್ಷರಜ್ಞಾನ ಎಷ್ಟೇ ಅಗತ್ಯವೆನಿಸಿದರೂ ಅಕ್ಷರಸ್ಥನಾಗಲು ಎರಡು ಮೂರು ವರ್ಷಗಳಾದರೂ ಬೇಕು ಎಂದಾದರೆ ಯಾರಿ ಗಾದರೂ ನಿರಾಸೆಯೇ. ಅದರ ಬದಲು ೨-೩ ತಿಂಗಳು ಕಷ್ಟಪಟ್ಟು ಶಾಲೆಗೆ ಹೋದರೆ ಮುಂದೆ ವೃತ್ತಪತ್ರಿಕೆಗಳನ್ನು ತಾವೇ ಓದಿಕೊಳ್ಳಬಹುದು, ತಮ್ಮ ಕಾಗದಪತ್ರಗಳನ್ನು ತಾವೇ ಬರೆಯಬಹುದು ಎಂದು ತಿಳಿದರೆ ಜನ ಓದುಕಲಿಯಲು ಮನಸ್ಸುಮಾಡುತ್ತಾರೆ.

ಹೀಗೆ ವಿದ್ಯಾರ್ಥಿಗಳು ಆರಂಭಮಾಡಿದ ಕಾರ್ಯವು ಸಂಸ್ಥಾನಾದ್ಯಂತ ವಯಸ್ಕರ ಶಿಕ್ಷಣವನ್ನು ನಡಸಲು ಒಂದು ಯೋಜನೆಯನ್ನು ತಯಾರುಮಾಡುವುದಕ್ಕೆ ಸಹಾಯ ವಾಯಿತು. ಅದುವರೆಗೆ ವಯಸ್ಕರ ಶಿಕ್ಷಣದಲ್ಲಿ ನಿರತರಾಗಿದ್ದ ಕೆಲಸಗಾರರ ಸಭೆ ಯೊಂದನ್ನು ವಿದ್ಯಾಮಂತ್ರಿಗಳಾಗಿದ್ದ ಶ್ರೀ ಜೆ. ಮಹಮ್ಮದ್ ಇಮಾಮರವರು

೧೯೪೧ ನೆಯ ಅಕ್ಟೋಬರ್ ತಿಂಗಳಲ್ಲಿ ಕರೆದು, ಮೈಸೂರು ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿಯನ್ನು ಸ್ಥಾಪಿಸಿದರು. ಈ ಸಮಿತಿಯು ಖಾಸಗಿಸಂಸ್ಥೆ; ಸರಕಾರವು ವರ್ಷ ವರ್ಷವೂ ಸಮಿತಿಯು ಕಳುಹಿಸಿದ ಆಯವ್ಯಯದ ಅಂದಾಜನ್ನು ಅನುಸರಿಸಿ ಕೊಂಡು ಧನಸಹಾಯವನ್ನು ಮಾಡುತ್ತಿದೆ. ಮೂರು ವರ್ಷಗಳ ಹಿಂದೆ ೧೨,೫೦೦ ರೂಪಾಯಿ ಸಮಿತಿಗೆ ಸರಕಾರದ್ದು ಗ್ರ್ಯಾಂಟು. ಈಗಿನ, ಅಂದರೆ ೧೯೪೫-೪೬ನೆಯ ವರ್ಷಕ್ಕೆ ೩ಲ್ಲ ಲಕ್ಷ ರೂಪಾಯಿ ಗ್ರ್ಯಾಂಟು ಕೊಟ್ಟಿದ್ದಾರೆ. ಈ ಮೂರು ವರ್ಷ ಗಳಲ್ಲಿ ೫೦,೦೦೦ ಜನ ಹೊಸದಾಗಿ ಅಕ್ಷರಸ್ಥರಾಗಿದ್ದಾರೆ.

ತಕ್ಕಮಟ್ಟಿಗೆ ಜನರಿಗೆ ಓದುಬರಹ ಕಲಿಸುವುದರ ಜೊತೆಗೆ ಈ ಸಮಿತಿ ಇದು ವರೆಗೆ ದೊರೆಯದೆ ಇದ್ದ ಕೆಲವು ಅಂಕಿ ಅಂಶಗಳನ್ನು ಶೇಖರಿಸಿದೆ.—೧. ವಯಸ್ಕ ರನ್ನು ಅಕ್ಷರಸ್ಥರನ್ನಾಗಿ ಮಾಡಲು ಬೇಕಾಗುವ ಕಾಲ ಸುಮಾರು ೫ ತಿಂಗಳು, ಅಥವಾ ೧೦೮ ಘಂಟೆಕಾಲ. ಇತ್ತೀಚೆಗೆ ಸಾರ್ಜೆಂಟ್ ರಿಪೋರ್ಟು ಎಂದು ಹೆಸರು ವಾಸಿಯಾದ ಇಂಡಿಯ ಸರಕಾರದ ಕೇಂದ್ರ ಸಲಹಾ ವಿದ್ಯಾಸಮಿತಿ ಸುಮಾರು ಇಷ್ಟೇ ಕಾಲವನ್ನು ಗೊತ್ತುಮಾಡಿದೆ; ಅಂದರೆ ೧೦೦ ಘಂಟೆ. (೨) ಅಕ್ಷರಸ್ಥ ನೆಂದರೆ ಪುನಃ ನಿರಕ್ಷರತಾಸ್ಥಿತಿಗೆ ಜಾರದೆ ಇರುವಷ್ಟು ಯೋಗ್ಯತೆ. ಇದರ ಮಟ್ಟ ಸಾಮಾನ್ಯವಾಗಿ ವೃತ್ತಪತ್ರಿಕೆಗಳನ್ನು ಓದಿ ತಿಳಿದುಕೊಳ್ಳುವುದು. (೩) ಈ ಮಟ್ಟದ ವರೆಗೆ ವಿದ್ಯಾಭ್ಯಾಸಮಾಡಿಸಲು ತಗಲುವ ಖರ್ಚು ತಲಾ ರೂ. ೫. 'ಬೊಂಬಾಯಿ ಯೋಜನೆ' ಎಂದು ಪ್ರಸಿದ್ಧಿಯಾಗಿರುವ ಟಾಟಾ ಬಿರ್ಲಾ ಮೊದಲಾದವರು ತಯಾರಿಸಿದ ಯೋಜನೆಯಲ್ಲಿ ಈ ಅಂಕಿ ರೂ. ೪ ಎಂದು ಗೊತ್ತು ಮಾಡಿದೆ. ಆದರೆ ಯಾವ ಮಟ್ಟದವರಿಗೆ ವಿದ್ಯಾಭ್ಯಾಸಮಾಡಿಸಬೇಕು? ಎಂದು ನಿರ್ಧರಿಸಿ ಅಕ್ಷರಸ್ಥರಾದ ಮೇಲೆ ಅವರಿಗೆ ಪುಸ್ತಕ, ಪತ್ರಿಕೆ ಮೊದಲಾದ ವ್ಯಾಸಂಗಾನುಕೂಲಗಳನ್ನು ಒದಗಿ ಸಿದರೆ ತಲಾ ವೆಚ್ಚ ರೂ. ೪ ನಿಂದ ರೂ. ೫ ಗೆ ಏರುತ್ತದೆ.

ಎಲ್ಲೆಲ್ಲಿ ವಯಸ್ಕರ ಶಿಕ್ಷಣದ ಏರ್ಪಾಟು ನಡೆಯಿತೋ ಅಲ್ಲೆಲ್ಲ ಆಯಾ ಭಾಷೆಯಲ್ಲಿ ವಯಸ್ಕರ ದೃಷ್ಟಿಯಿಂದಲೇ ಪಠ್ಯಪುಸ್ತಕಗಳನ್ನು ಬರೆಯಿಸಿ ಪ್ರಕಟಿಸಿ ದರು. ಮದರಾಸಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಚಕ್ರವರ್ತಿ ರಾಜಗೋಪಾಲಾ ಚಾರಿಯವರೇ ಅಂಥ ಪುಸ್ತಕಗಳನ್ನು ತಮಿಳಿನಲ್ಲಿ ರಚಿಸಿದರು ಎಂದು ಹಿಂದೆ ತಿಳಿಸಿದೆ. ಮೈಸೂರು ಸಂಸ್ಥಾನದ ಅಕ್ಷರಪ್ರಚಾರ ಸಮಿತಿಯು ಕನ್ನಡವನ್ನು ಶೀಘ್ರದಲ್ಲಿ ಕಲಿಸಲು ವಯಸ್ಕರಿಗೆ ಬೇಕಾದ ಪುಸ್ತಕಗಳನ್ನು ರಚಿಸುವುದರ ಜೊತೆಗೆ ಹೀಗೆ ಅಕ್ಷರಸ್ಥರಾದವರು ತಮ್ಮ ಸಂತೋಷಕ್ಕಾಗಲಿ ಹೆಚ್ಚಿನ ಜ್ಞಾನಾರ್ಜನೆ ಗಾಗಲಿ ತಾವೇ ಓದಿಕೊಳ್ಳಲು ಸುಲಭಸಾಹಿತ್ಯವನ್ನು ಪ್ರಕಟಿಸಿದೆ; ಅಲ್ಲದೆ,

'ಪ್ರತಿ ಹಳ್ಳಿಗೂ ಒಂದು ಪುಸ್ತಕಭಂಡಾರ' ಎಂಬ ಗುರಿಯನ್ನಿಟ್ಟುಕೊಂಡು ಗ್ರಾಮ ಪುಸ್ತಕಭಂಡಾರಗಳನ್ನೂ ವಾಚನಾಲಯಗಳನ್ನೂ ಸ್ಥಾಪಿಸಿದೆ.

ಜನತೆಯಲ್ಲಿ ವಿದ್ಯಾಪ್ರಸಾರದ ಚಳವಳಿಯನ್ನು ನಡಸಿದ ಚೀನಾ, ರಷ್ಯಾ ಮತ್ತು ತುರ್ಕಿ ದೇಶಗಳಲ್ಲಿ ಆ ಚಳವಳಿಯ ಅಂಗವಾಗಿ ಮೊದಲು ಆಯಾ ವರ್ಣ ಮಾಲೆಯ ಸಂಸ್ಕರಣ ನಡೆದಿದೆ. ಕೆಲವರು ಮಾತ್ರ ಅಕ್ಷರ ಕಲಿಯುತ್ತಿದ್ದ ಕಾಲದಲ್ಲಿ ವರ್ಣಮಾಲೆಯಲ್ಲಿ ಎಷ್ಟು ಅಕ್ಷರಗಳಿದ್ದರೂ ಚಿಂತೆಯಿಲ್ಲ, ಅವುಗಳನ್ನು ಕಲಿಯುವುದು ಎಷ್ಟು ಕಠಿನವಾದರೂ ಚಿಂತೆಯಿಲ್ಲ. ಜನಸಾಮಾನ್ಯಕ್ಕೆ ಅಕ್ಷರಜ್ಞಾನ ಅನ್ನಾ ಹಾರದಷ್ಟು ಆವಶ್ಯಕ ಎನ್ನುವ ಕಾಲದಲ್ಲಿ ವರ್ಣಮಾಲೆ ಆದಷ್ಟು ಸುಲಭವಾಗಬೇಕು. ಅಕ್ಷರ ಕಲಿಯುವುದು ಹೆಚ್ಚಿನ ಪ್ರಯಾಸವಾಗಬಾರದು. ಚೀನಾ ಭಾಷೆಯಲ್ಲಿ ಹತ್ತು ಲಕ್ಷಕ್ಕಿಂತ ಹೆಚ್ಚಿನ ಅಕ್ಷರಗಳಿವೆ. ಅದನ್ನು ಚಿತ್ರಲಿಪಿಯೆಂದು ಕರೆಯುತ್ತಾರೆ. ಒಂದೊಂದು ಮಾತೂ ಒಂದೊಂದು ಅಕ್ಷರ. ಇಂಥ ಭಾಷೆಯಲ್ಲಿ ಅಕ್ಷರಪ್ರಚಾರ ಮಾಡುವುದಕ್ಕೆ ಮುಂಚೆ ಲಿಪಿಯನ್ನು ಸುಧಾರಿಸುವುದು ಅತ್ಯಗತ್ಯವಲ್ಲವೆ? ಚೀನಾ ದಲ್ಲಿ ಜನಸಾಮಾನ್ಯಕ್ಕೆ ಬೇಕಾದ ಒಂದು ಸಾವಿರ ಅಕ್ಷರದ ಲಿಪಿಯೊಂದನ್ನು ಸೃಷ್ಟಿ ಸಿದರು. ತುರ್ಕಿಯಲ್ಲಿ ಅರಾಬಿಕ್ ಲಿಪಿಯನ್ನು ತ್ಯಜಿಸಿ ಸುಲಭವಾದ ರೋಮನ್ ಲಿಪಿಯನ್ನು ಅಂಗೀಕರಿಸಿದರು. ರಷ್ಯಾದಲ್ಲಿ ಲಿಪಿಯಿಲ್ಲದ ಭಾಷೆಗಳಿಗೆ ಸುಲಭವಾದ ಸಾಮಾನ್ಯ ಲಿಪಿಯೊಂದನ್ನು ಸೃಷ್ಟಿಮಾಡಿಕೊಂಡರು. ಅದೇ ದೃಷ್ಟಿಯಿಂದ ನಮ್ಮ ದೇಶದಲ್ಲಿ ಎಲ್ಲ ಭಾಷೆಗಳಿಗೂ ಸಾಮಾನ್ಯ ಲಿಪಿಯೊಂದನ್ನು ಅಂಗೀಕರಿಸುವುದು ಯೋಗ್ಯವಲ್ಲವೆ? ಹಾಗಾದರೆ ಆ ಲಿಪಿಯಾವುದು ಆಗಿರಬೇಕು? ರೋಮನ್ ಲಿಪಿ ಈಚೆಗೆ ಸೈನಿಕರಾಗಿ ಸೇರಿದ ಸಮಸ್ತರಿಗೂ ಅಭ್ಯಾಸವಾಗಿದೆ. ಅದನ್ನು ಜನಸಾಮಾನ್ಯ ರಿಗೆ ಕಲಿಯಲೂ ಸುಲಭವಾದೀತು. ಅದನ್ನು ಎಲ್ಲ ಭಾಷೆಗಳಿಗೂ ಉಪಯೋಗಿಸ ಬಹುದು. ಮತ್ತು ಇಂಡಿಯಾ ದೇಶದ ಯಾವ ಒಂದು ಗುಂಪಿನ ಅಭಿಮಾನಕ್ಕೂ ಕುಂದುಬರಲಾರದು. ಜೊತೆಗೆ ರೋಮನ್ ಲಿಪಿ ಪಾಶ್ಚಿಮಾತ್ಯರದೆಷ್ಟೋ ನಮ್ಮದೂ ಅಷ್ಟೇ ಆಗಿರುತ್ತದೆ. ಆದರೆ ಈ ರೀತಿಯ ಬದಲಾವಣೆಗೆ ಜನ ಇನ್ನೂ ಸಿದ್ಧವಿರಲಾರರು ಮನಸ್ಸಿಗೆ ಒಪ್ಪಿಗೆ ಇಲ್ಲದ ಈ ಬದಲಾವಣೆಯನ್ನು ಒತ್ತಾಯಪಡಿಸಿದರೆ ಅಕ್ಷರ ಪ್ರಚಾರ ಚಳವಳಿಗೇ ಅಪಾಯ ಒದಗಬಹುದು. ಆದ್ದರಿಂದ ಸದ್ಯದಲ್ಲಿ ಸಾಮಾನ್ಯ ಲಿಪಿಯ ಪ್ರಶ್ನೆಯನ್ನು ಬಿಟ್ಟು ಅಯಾ ಭಾಷೆಗಳ ಲಿಪಿ ಸುಧಾರಣೆಯನ್ನು ಮಾಡಿ ಕೊಂಡರೆ ಜನಸಾಮಾನ್ಯಕ್ಕೆ ಅಕ್ಷರ ಕಲಿಸಲು ಸುಲಭವಾದೀತು. ಲಿಪಿ ಸುಧಾರಣೆ ಯಷ್ಟೇ ಅಗತ್ಯವಾದ ಇನ್ನೊಂದು ಕೆಲಸವಿದೆ.—ಸುಲಭ ಸಾಹಿತ್ಯ ಪುಸ್ತಕಗಳಿಗೆ ಬೇಕಾದ ಪದಸಂಗ್ರಹ. ಈ ಕೆಲಸ ತಕ್ಕಮಟ್ಟಿಗೆ ತಮಿಳು, ಉರ್ದು, ಹಿಂದಿಯಲ್ಲಿ

ನಡೆದಿದೆ. ಅಕ್ಷರಸ್ಥರಾದ ಮೇಲೆ ತಾವೇ ತಮ್ಮ ಸಂತೋಷಕ್ಕಾಗಿ ಓದಿಕೊಳ್ಳುವ ಪುಸ್ತಕಗಳು ಅವರಿಗೆ ಬಳಕೆಯಾಗಿರುವ ಮಾತುಗಳಲ್ಲಿ ಬರೆದಿರಬೇಕು. ಮಾತು ಮಾತಿಗೂ ಅರ್ಥವಾಗದ ಪದಗಳು ಸಿಕ್ಕಿದರೆ ಓದಲು ಬೇಸರವಾಗಿ ಪುಸ್ತಕಗಳು ಉಪಯೋಗವಾಗುವುದಿಲ್ಲ. ಆ ಕಾರಣದಿಂದ ಕನ್ನಡದಲ್ಲಿ ಬಳಕೆಯ ಮಾತುಗಳ ಸಂಗ್ರಹವೊಂದು ಆಗಬೇಕಾಗಿದೆ. ಇವು ಅಕ್ಷರಪ್ರಚಾರ ಸಮಿತಿ ಗಮನಿಸಬೇಕಾಗಿರುವ ಅಂಶಗಳು.

ಯುದ್ಧಾನಂತರದ ಪುನರ್‌ರಚನಾ ಯೋಜನೆಯಲ್ಲಿ ವಯಸ್ಕರ ಶಿಕ್ಷಣಕ್ಕೆ ಬಹು ಮುಖ್ಯಸ್ಥಾನವಿದೆ. ಇದುವರೆಗೆ ಪ್ರಕಟವಾಗಿರುವ ಎಲ್ಲ ಯೋಜನೆಗಳೂ ವಯಸ್ಕರ ಶಿಕ್ಷಣದ ಅಗತ್ಯವನ್ನು ಒತ್ತಿ ಹೇಳಿವೆ. "ಬೊಂಬಾಯಿ ಯೋಜನೆ" ೧೧ ರಿಂದ ೫೦ ನೆಯ ವಯಸ್ಸಿನೊಳಗೆ ಇರುವ ವಯಸ್ಕರ ಸಂಖ್ಯೆ ೧೬.೫ ಕೋಟಿ ಎಂದು ಲೆಕ್ಕಹಾಕಿ ಅವರನ್ನು ಅಕ್ಷರಸ್ಥರನ್ನಾಗಿ ಮಾಡಲು ೬೬ ಕೋಟಿ ರುಪಾಯಿ ಬೇಕೆಂದು ಅಂದಾಜುಮಾಡಿದೆ. ಸಾರ್ಜೆಂಟ್ ಯೋಜನೆಯಲ್ಲಿ "ಈ ದೇಶದ ಜನರ ಸಾಮಾನ್ಯ ಆಯುಃಪರಿಮಿತಿಯನ್ನು ಗಣನೆಮಾಡಿದರೆ ೪೦ ವರ್ಷ ಮೀರಿದ ವಯಸ್ಸಿನವರಿಗೆ ಓದುಬರಹ ಕಲಿಸುವುದರಿಂದ ಅಷ್ಟೇನು ಉಪಯೋಗ ಕಾಣಬರುವುದಿಲ್ಲ. ಆದ್ದರಿಂದ ಓದುಬರಹ ಕಲಿಯುವ ವಯಸ್ಕನ ವಯಃಪರಿಮಿತಿಯನ್ನು ೧೦ + ಇಂದ ೪೦ ಎಂದು ಇಟ್ಟುಕೊಳ್ಳಬಹುದು" ಎಂದು ಗೊತ್ತುಮಾಡಿ ಈ ವಯಸ್ಸಿನವರು ಹಿಂದೂಸ್ತಾನದಲ್ಲಿ ೯,೦೫,೦೦,೦೦೦. ಇವರನ್ನು ಅಕ್ಷರಸ್ಥರನ್ನಾಗಿ ಮಾಡಿ, ಮುಂದೆ ಹೆಚ್ಚಿನ ಜ್ಞಾನಾರ್ಜನೆಗೆ ಸಾಧನಗಳನ್ನು ಒದಗಿಸಲು ಸುಮಾರು ೬೦ ಕೋಟಿ ರುಪಾಯಿಗಳು ಎಂದು ಅಂದಾಜು ಮಾಡಿದ್ದಾರೆ. 'ಗಾಂಧಿ ಯೋಜನೆ'ಯಲ್ಲಿ ವಯಸ್ಕರ ಶಿಕ್ಷಣಕ್ಕಾಗಿ ವೆಚ್ಚದ ಅಂದಾಜು ೭೦ ಕೋಟಿ.

ಒಟ್ಟಿನಲ್ಲಿ, ವಯಸ್ಕರ ಶಿಕ್ಷಣಕ್ಕಾಗಿ ೬೦ ರಿಂದ ೭೦ ಕೋಟಿಗಳ ವರೆಗೆ ಖರ್ಚು ಮಾಡಿದರೆ ಸುಮಾರು ೧೫-೨೦ ವರ್ಷಗಳಲ್ಲಿ ದೇಶದ ಜನರೆಲ್ಲ ಅಕ್ಷರಸ್ಥರಾಗಿ ಸಾಮಾನ್ಯ ಶಿಕ್ಷಣವನ್ನು ಪಡೆದಿರುತ್ತಾರೆ. ದೇಶದ ಜನವೆಲ್ಲ ಅಕ್ಷರಸ್ಥರಾದ ಮೇಲೆ ಮುಂದೆ ವಯಸ್ಕರಿಗೆ ಓದುಬರಹ ಕಲಿಸಲು ವರ್ಷ ವರ್ಷದ ವೆಚ್ಚವೇನೂ ಇರುವುದಿಲ್ಲ. ಆದರೆ ಈಗ ಪಾಶ್ಚಿಮಾತ್ಯ ದೇಶಗಳಲ್ಲಿರುವಂತೆ ಅವರಿಗೆ ಹೆಚ್ಚಿನ ಜ್ಞಾನಾರ್ಜನೆಗೆ ಬೇಕಾದ ಸಾಧನೋಪಾಯಗಳನ್ನು ಕಲ್ಪಿಸಬೇಕಾಗುವುದು. ಇಂಗ್ಲೆಂಡಿನ (W.E.A.) "ಕೆಲಸಗಾರರ ಶಿಕ್ಷಣ ಸಂಘ", ಡೆನ್ಮಾರ್ಕಿನ ('Folk High Schools') ಜನರ ಪ್ರೌಢ ಶಾಲೆಗಳು ಈ ರೀತಿಯ ಏರ್ಪಾಟುಗಳು.

ವಯಸ್ಕರ ಶಿಕ್ಷಣದ,—ಅಥವಾ ಜನತಾ ಶಿಕ್ಷಣದ—ಉದ್ದೇಶ, ಅದನ್ನು ಸಾಧಿಸುವ

ರೀತಿ, ಅದು ಹೇಗೆ ನಡೆದರೆ ಫಲಪ್ರದವಾದೀತು ?—ಎಂಬ ಅಂಶಗಳನ್ನು ವಿವರಿಸುತ್ತಾ 'ಗಾಂಧಿ ಯೋಜನೆ' ಯಲ್ಲಿ ಹೇಳಿರುವಂತೆ, "ಬರಿಯ ಅಕ್ಷರಜ್ಞಾನ ವಯಸ್ಕರ ಶಿಕ್ಷಣವಾಗುವುದಿಲ್ಲ; ಅದು ಸಾಧನವೇ ಹೊರತು ಗುರಿಯಲ್ಲ. ಜನಸಾಮಾನ್ಯದ ಆರ್ಥಿಕ ಮತ್ತು ಸಾಂಸ್ಕೃತಿಕ ಮಟ್ಟವನ್ನು ಏರಿಸುವುದೇ ವಯಸ್ಕರ ಶಿಕ್ಷಣದ ಗುರಿಯಾಗಿರಬೇಕು—ಆರ್ಥಿಕ ಏಕೆಂದರೆ, ಅವರಿಗೆ ತಮ್ಮ ದಿನದಿನದ ಆರ್ಥಿಕ ಜೀವನದಲ್ಲಿ ಆಸಕ್ತಿ ಹುಟ್ಟಿದ ಹೊರತು ಜನರು ಬರಿಯ ಪುಸ್ತಕದ ಓದಿಗೋಸ್ಕರವೇ ವಿದ್ಯಾಭ್ಯಾಸ ಮಾಡಲಾರರು." ಅಲ್ಲದೆ ನಮಗೆ ಸಾಂಪ್ರದಾಯಿಕವಾಗಿ ಬಂದ ಬಯಲಾಟ, ಸುಗ್ಗಿ ಕುಣಿತ, ಜನಪದ ಸಾಹಿತ್ಯ, ಹಳ್ಳಿಯಪದ ಇವುಗಳನ್ನು ಉಜ್ಜೀವನ ಗೊಳಿಸಿ ಅವನ್ನು ವಯಸ್ಕರ ಶಿಕ್ಷಣದ ಮುಖ್ಯಸಾಧನಗಳನ್ನಾಗಿ ಮಾಡಿಕೊಳ್ಳಬೇಕು.

ಎಸ್. ವಿ. ಶ್ರೀನಿವಾಸರಾವ್

ಮೇಲು-ಕೀಳು

ಎತ್ತರದ ಬೆಟ್ಟ ಹಳ್ಳದ ಹೊಳೆಯನೀಕ್ಷಿಸುತ
‘ತೊಳೆ ತೊತ್ತೆ ಪಾದವನು’ ಎಂದು ನಗಲು,
ಉತ್ತರದ ಬಾನು ಭೂಮಿಯ ಕಂಡು ನಸುನಗುತ
‘ಅಯ್ಯೋ ! ಹತ್ತರಿಹೊಡೆದ ಹಾಳು’ ಎನಲು,

ನಕ್ಷತ್ರ ಮಾಲೆ ಈ ಬಾನೆಲ್ಲ ಭೈರವನ
ಶೂನ್ಯಶಕ್ತಿಯ ನೀಲವೇಣಿಯೆನಲು,
ಸುತ್ತ ಹಬ್ಬಿದ ಮುಪ್ಪುಗತ್ತಲೆಯೆ ಈ ನನ್ನ
ಭೂಮಿಯೇ ತನ್ನ ಶಿಶುವೆಂದಿಳಿಯಲು,

ಮೇಲು ಕೀಳೆನುವ ಅಗ್ಗದ ಮಾತು ಅವತರಿಸಿ
ತೇಲುತಿಹುದೀ ತೆರೆದ ಧರಣಿಯಲ್ಲಿ ;
ಅಳಿವ ಈ ಅಲ್ಪತೆಯ ಅಗ್ರಪೂಜೆಗೆ ಹೊಂಚಿ
ಬಾಳು ಹೋರುವುದಿಲ್ಲಿ ಮಚ್ಚರದಲಿ :—

ಈ ಸೃಷ್ಟಿ ಈ ದೃಷ್ಟಿ ಅವಿನಯ ಅಹಂಕಾರ
ಇವಕೆಲ್ಲ ತಾನು ಹೊಣೆಯಲ್ಲ ಎಂದು
ಉರುಳುತಿಹುದೀ ಭೂಮಿ ಸೂರ್ಯಬಿಂಬದ ಸುತ್ತ ;
ನೆಲ ನೀರು ಹಗಲಿರುಳ ಕಾಣುತಿಹವು.

ಧವಳಗಿರಿಯಿಂದ ಕನ್ಯಾಕುಮಾರಿಯವರೆಗೆ
ಬಿಡುಗಡೆಗೆ ಕಾದಿಹುದು ಒಂದು ಖಂಡ.
ಇಕ್ಕೆಲದ ಕಡಲ ತಂಪಿನಗಾಳಿ ಬೀಸಿದರೆ
ಎದೆಯೊಳಗೆ ಮಿನುಗುವುದು ದನಿಯ ಕೆಂಡ.

ಜ್ಯೋತಿಗಳು ಹಲವಿಲ್ಲ ; ಜಾತಿಯೇ ಬಲವೆಲ್ಲ ;—
ನಾಡು ಬಯಸುವ ಗಂಡು-ಜಾತಿಯಿಲ್ಲ,
ದೊಡ್ಡತಲೆ, ದೊಡ್ಡ ದನಿ, ಕೋಟಿಗೇ ಒಂದಿಲ್ಲ ;
ಸೊಪ್ಪುಸದೆಯಲಿ ಎಷ್ಟು ಜಾತಿಯಿಲ್ಲ ?

ಗಂಡಿಲ್ಲ ; ಹೆಣ್ಣಿಲ್ಲ, ಬಿಡುಗಡೆಯ ಹೊಂಬೆಳಕು
ದುಡಿಮೆಯಿಲ್ಲದೆ ಬರುವ ಭಾಗ್ಯವೇನು ?
ಕಾಲಪುರುಷನ ಮುಂದೆ ಕೈಚಾಚಿ ಈ ನಾಡು
‘ಗಂಡು ಸಂತತಿಯುಂಟೆ ?’ ಎನ್ನುತಿಹುದು.

ಮೇಲುಕೀಳೆನುವ ಅಗ್ಗದ ಮಾತು ಸಾಕಿನ್ನು.
ನಾಡ ನಡಸುವ ಅಗ್ನಿ ಪುರುಷರೆಲ್ಲಿ ?
ಮೇಲೆ ತೇಲುವ ಮಾತು ಇನ್ನು ಅಳಿದರೆ ಚೆನ್ನು.
ನಾಡಗಲ ಮೂಡಿಬಹ ಧ್ವನಿಗಳೆಲ್ಲಿ ?

ಕೆ. ಎಸ್. ನ.

ಈಗಿನ ಬಡತನ—ಸಿರಿತನ

ಬಡತನ ಕೊನೆಗಾಣಬೇಕೆಂಬ ಮಾತೇ ಎಲ್ಲೆಲ್ಲೂ ಮುಂದಾಗಿ ಕೆಲಸ ಹಿಂದೆ ಬಿದ್ದಿತ್ತು. ಈಗ ಅದಕ್ಕಾಗಿ ಮುಂದೇನು ಮಾಡಬೇಕು ಎಂಬ ಚರ್ಚೆ ಮೊದಲಾಗಿದೆ. 'ತಪ್ಪದಯ್ಯ ಲಲಾಟ ಲಿಖಿತ' ಎಂಬುದರಿಂದ ನಮ್ಮನ್ನು ತಪ್ಪಿಸುವ ಮಹಾ ಕಾರ್ಯದಲ್ಲಿ ಈ ಚರ್ಚೆ ಮೊದಲ ಮೆಟ್ಟಿಲು.

ಬಡತನಕ್ಕೆ ಕಾರಣ ನಮ್ಮ ಜನಸಂಖ್ಯೆ ಎನ್ನುವುದುಂಟು. ೧೯೨೧ರಲ್ಲಿ ಜನಸಂಖ್ಯೆ ೩೨ ಕೋಟಿಯಿದ್ದದ್ದು ೧೯೪೧ರಲ್ಲಿ ೩೮ ಕೋಟಿಯಾಗಿದೆ. ಇಷ್ಟು ಜನ ಹೆಚ್ಚೆಂದು ಕೆಲವರು, ಇಲ್ಲವೆಂದು ಇತರರು. ಕಳೆದ ನಲವತ್ತು ವರ್ಷಗಳಲ್ಲಿ ಹತ್ತು ಕೋಟಿ ಜನ ಹೆಚ್ಚಿದೆ. ತಲಾ ರೂ. ೩೦ ಇದ್ದ ಆದಾಯ ರೂ. ೧೩೨ ಆಗಿದೆ. ಹೀಗಿರುವಾಗ ಜನಸಂಖ್ಯೆ ಸಾಕೇ ಸಾಲದೇ ಎಂದು ಹೇಳುವುದು ಕಷ್ಟ.

ಈ ದೇಶದ ಆದಾಯದಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗ ಬರುತ್ತಿರುವುದು ವ್ಯವಸಾಯದಿಂದ. ವ್ಯವಸಾಯದಿಂದಲೇ ಜೀವಿಸುವ ಜನ ಹತ್ತು ಕೋಟಿಗಿಂತ ಹೆಚ್ಚು. ಇದಕ್ಕೆ ಕಾರಣ ಜನಸಂಖ್ಯೆ ಹೆಚ್ಚಿರುವುದೊಂದೇ ಅಲ್ಲ;—ಕೈಕಸಬುಗಳು ಹಾಳಾದದ್ದು ಕೂಡ. ಹಳ್ಳಿಗಾಡಿನ ಜನರಲ್ಲಿ ಮೂರನೆಯ ಒಂದರ ಪಾಲಿಗೆ ಜಮೀನಿನ ಕೆಲಸವಿರುವುದಿಲ್ಲ. ಅವರಿಗೆ ಸರಿಯಾದ ಕಸಬುಗಳನ್ನು ಒದಗಿಸಿದರೆ ಹಳ್ಳಿಗಳ ಬಡತನ ತಕ್ಕಮಟ್ಟಿಗೆ ಕಡಮೆಯಾಗುತ್ತದೆ.

ಸಾಗುವಳಿಗೆ ಬಂದಿರುವ ಭೂಮಿ ಸುಮಾರು ೨೪ ಕೋಟಿ ಎಕರೆ. ಅದರ ಬೆಳೆಯಲ್ಲಿ ಮುಕ್ಕಾಲುಪಾಲು ಆಹಾರಕ್ಕೆ; ಉಳಿದದ್ದು ವ್ಯಾಪಾರಕ್ಕೆ ಇಟ್ಟದ್ದು. ಸಾಗುವಳಿಯಾಗುತ್ತಿರುವ ಭೂಮಿಯನ್ನು ಜನರಿಗೆ ಸಮನಾಗಿ ಹಂಚಿದರೆ ತಲಾ ಮುಕ್ಕಾಲು ಎಕರೆಗಿಂತ ಸ್ವಲ್ಪ ಮಿಗಿಲಾದೀತು. ಕಷ್ಟಕಾಲದಲ್ಲಿ ಜೀವ ಹಿಡಿದಿರುವುದಕ್ಕೂ ಸಾಲದು ಇಷ್ಟು ನೆಲದ ಬೆಳೆ.

ನಮ್ಮ ವ್ಯವಸಾಯ ಸಾಕಾದಷ್ಟು ಮುಂದುವರಿದಿಲ್ಲ. ರೈತನ ಬಡತನ, ಅವನ ಜಮೀನಿನ ಬಡತನ, ಸರಿಯಾದ ಬಿತ್ತದ ಕೊರತೆ, ದನಕರುಗಳ ಮತ್ತು ಮುರಮುಟ್ಟುಗಳ ಅಭಾವ, ಜಮೀನುದಾರರ ಕಾಟ, ಜಮೀನು ಚೂರುಪಾರಾಗಿ ಹರಿದು ಹರಡಿರುವುದು, ಬೆಳಸನ್ನು ಸಾಗಿಸುವುದಕ್ಕೂ ಮಾರುವುದಕ್ಕೂ ಅನನುಕೂಲ—ಇವು ಆ ಬಡತನಕ್ಕೆ ಕೆಲವು ಕಾರಣಗಳು.

ಬಿತ್ತದ ಮತ್ತು ಬೇಸಾಯದ ಉಪಕರಣಗಳ ಕೊರತೆ ದೊಡ್ಡದು. ಬತ್ತದ

ಬೆಳೆಯನ್ನು ಒಳ್ಳೆಯ ಬೀಜಧಾನ್ಯದಿಂದ ಸೇಕಡ ೫ ರಷ್ಟು, ಒಳ್ಳೆಯ ಗೊಬ್ಬರದಿಂದ ಸೇಕಡ ೨೦ ರಷ್ಟು, ಕ್ರಿಮಿಕೀಟ ರೋಗರುಜಿನಗಳಿಂದ ರಕ್ಷಿಸಿ ಸೇಕಡ ೫ ರಷ್ಟು,— ಹೀಗೆ ಒಟ್ಟು ಸೇಕಡ ೩೦ ರಷ್ಟು ಹೆಚ್ಚಿಸಬಹುದು. ಇವೇ ಮೂರು ತೆರನಾಗಿ ನೀರಾವರಿ ವಸತಿಯಿರುವ ಭೂಮಿಯ ಗೋಧಿಯ ಬೆಳೆಯನ್ನು ಎಕರೆಗೆ ೬೪೦ ಪೌಂಡಿನಿಂದ ೧,೨೦೦ ಪೌಂಡಿಗೆ ಏರಿಸಬಹುದು (೨೪ ತೊಲ = ೧ ಸೇರು; ೪೦ ತೊಲ = ೧ ಪೌಂಡು) ಭೂಮಿ ಬಿಡಿಬೀಸಾಗಿ ಹರಿದು ಹರಡಿರುವುದಕ್ಕೆ ಹಿಂದೂ ಕುಟುಂಬವ್ಯವಸ್ಥೆಯೂ ಭಾಗಶಾಸನಗಳೂ ಕಾರಣ. ಪರಂಪರೆಯಿಂದ ಬಂದ ಭೂಮಿ ಭಾಗವಾಗುವಾಗ ಚಿಕ್ಕ ಚಿಕ್ಕದಾಗಿ ದಿಕ್ಕುಪಾಲಾಗಿ ಸೀಳಿ ದರಿಚೆ ಕೆಲವುಸಲ ಅರ್ಧ ಎಕರೆಗೂ ಕಡಮೆಯಾಗುವುದುಂಟು. ಹೀಗೆ ಜಮೀನು ಚಿಕ್ಕ ದಾದಷ್ಟೂ ವ್ಯವಸಾಯಕ್ಕೆ ನಷ್ಟ ಹೆಚ್ಚು. ಇಂತಹ ಚಿಕ್ಕಪುಟ್ಟ ಯಜಮಾನರೇ ವ್ಯವಸಾಯಗಾರರಲ್ಲಿ ಮುಕ್ಕಾಲು ಮಂದಿ.

೧೯೩೭ ರಿಂದೀಚೆಗೆ "ಕುಂಪಣಿ" ಸೀಮೆಯಲ್ಲಿ ಸರ್ಕಾರವು ರೈತನ ಸಾಲದ ಭಾರವನ್ನು ಕಡಮೆಮಾಡಿದೆ, ಬಡ್ಡಿಯ ಮೊತ್ತ ಅಸಲನ್ನು ಮೀರದಂತೆ ತಡೆದಿದೆ. ಬಡ್ಡಿಯ ದರ ತಗ್ಗಿದ್ದರೂ ರೈತನ ಸಾಲ ಹೊಸ ಅವತಾರ ತಾಳುವುದು ಖಂಡಿತ. ರೈತನಿಗೆ ಸಾಲಗಾರರ ತೊಂದರೆ ತಪ್ಪಲೆಂದೇ ಸರ್ಕಾರವು ಸಹಕಾರ ಸಂಘಗಳಿಗೆ ಉತ್ತೇಜನ ಕೊಟ್ಟಿದೆಯೆಂಬುದು ನಿಜ. ಅವುಗಳ ಸಂಖ್ಯೆ ಎರಡು ಮೂರರಷ್ಟು ಬೆಳೆದೂ ಇದೆ. ಅವುಗಳಿಂದ ರೈತನಿಗಾಗುತ್ತಿರುವ ಉಪಕಾರ ಅಷ್ಟಕ್ಕಷ್ಟೇ. ಅವು ತಮ್ಮತಮ್ಮಲ್ಲೇ ಸಹಕರಿಸುತ್ತಿಲ್ಲ. ಅವಕ್ಕೆ ಕೇಂದ್ರ ಧನಮಂಡಲದಿಂದ ದೊರೆಯ ಬಹುದಾದ ಸಹಾಯವೆಲ್ಲ ಬರುತ್ತಿಲ್ಲ. ಇಷ್ಟಲ್ಲದೆ ಸರ್ಕಾರವು ಕಡಮೆ ಬಡ್ಡಿಯಲ್ಲಿ ರೈತನಿಗೆ ತಕ್ಕಮಟ್ಟಿಗೆ ತಕ್ಕಾವಿ ಸಾಲವನ್ನು ಕೊಡುತ್ತಿದೆ. ತಾನು ಬೆಳೆದದ್ದನ್ನು ಮಾರುವುದೂ ರೈತನಿಗೆ ಒಂದು ಸಮಸ್ಯೆ. ಬೆಳಸನ್ನು ಊರಿಂದೂರಿಗೆ ಸಾಗಿಸುವ ತೊಂದರೆಗಿಂತ ದಲ್ಲಾಳಿಯ ತೊಂದರೆ ಹೆಚ್ಚು. ರೈತನಿಗೆ ಸೇರಬೇಕಾದ ಲಾಭವನ್ನು ತಾವೇ ದಕ್ಕಿಸಿಕೊಳ್ಳುವುದರಲ್ಲಿ ದಲ್ಲಾಳಿಗಳು ಗಟ್ಟಿಗರು. ಅವನನ್ನು ದಲ್ಲಾಳಿಗಳ ದಯೆಯಿಂದ ಪಾರುಮಾಡುವುದೂ ಸಹಕಾರ ಸಂಘಗಳ ಉದ್ದೇಶಗಳಲ್ಲೊಂದು. ಆದರೆ ದುರದೃಷ್ಟ! ರೈತನಿಗೆ ಸಾಲಕೊಡುವ, ಅವನು ಬೆಳೆದದ್ದನ್ನು ಮಾರುವ ಕೆಲಸ ಗಳನ್ನು ಸರಿಯಾಗಿ ಮಾಡುತ್ತಿರುವ ಸಹಕಾರ ಸಂಘಗಳು ಅಪರೂಪ.

ವ್ಯವಸಾಯ ಸರಿಯಾಗಿ ನಡೆಯಬೇಕಾಪರೆ ರೈತನು ಉಳುವ ನೆಲ ಅವನದಾಗಿರ ಬೇಕು. ಹೀಗೆ ಇರುವುದು ರೈತರಲ್ಲಿ ಅರ್ಧ ಮಂದಿಗೆ ಮಾತ್ರ. ಉಳಿದ ಭೂಮಿ ಜಮೀನುದಾರರಿಗೆ ಸೇರಿದ್ದು. ಜಮೀನುದಾರರು ಸಾಮಾನ್ಯವಾಗಿ ತಮ್ಮ ಜಮೀ

ನಿರುವ ಊರುಗಳಲ್ಲಿರದೆ ಪಟ್ಟಣಗಳಲ್ಲಿರುತ್ತಾರೆ. ಈಗಿರುವ ಗುತ್ತಿಗೆ ಪದ್ಧತಿಯ ಪ್ರಕಾರ ರೈತನು ಎಷ್ಟೇ ಕಷ್ಟಪಟ್ಟು ದುಡಿದರೂ ಹೊಟ್ಟೆ ಬಟ್ಟೆಗೆ, ಬೇಕಾದಷ್ಟು ಅವನಿಗೆ ಉಳಿಯುತ್ತಿಲ್ಲ. ಅವನ ಯೋಗಕ್ಷೇಮ ವಿಚಾರಿಸುವವರಿಲ್ಲದೆ ಜಮೀನಿನ ಕೆಲಸ ಹಿಂದಾಗಿದೆ. ರೈತ—ಜಮೀನ್ದಾರರ ಸಂಬಂಧವೂ ಹದಗೆಟ್ಟಿದೆ. ಅವನಲ್ಲಿ ಜಮೀನ್ದಾರರಿಗೆ ಅನಾದರ, ಅವನಿಗೆ ಜಮೀನಿನ ಮೇಲೆ ಅನಾದರ. ಇಬ್ಬರಿಗೂ ನಷ್ಟ. ದೇಶದ ಸಂಪತ್‌ಪುಷ್ಟಿಗೆ ಇದರಿಂದ ತುಂಬಾ ಅಡಚನೆ. ವ್ಯವಸಾಯಕ್ಕೆ ಇಂದಿಗೂ ಹೆಚ್ಚು ಕಡಮೆ ಮಳೆಯೇ ಅಧಾರ. ಮಳೆ ಬೇಕಾದಾಗ ಬರದೇ ಇರುವುದೂ, ಬಂದರೂ ಸಾಲದಿರುವುದೂ ಉಂಟು. ಆದ್ದರಿಂದ ನೀರಾವರಿ ಕೆಲಸಗಳು ಹಿಂದಿನಿಂದಲೂ ನಡೆದುಕೊಂಡು ಬಂದಿವೆ. ಕಳೆದ ನಲವತ್ತು ವರ್ಷಗಳಲ್ಲಿ ನೀರಾವರಿಯ ಸಹಾಯದಿಂದ ಸಾಗುವಳಿಗೆ ಬಂದಿರುವ ಜಮೀನು ೩¼ ಕೋಟಿ ಎಕರೆಯಿಂದ ೫¼ ಕೋಟಿ ಎಕರೆಗೆ ಹೆಚ್ಚಿದೆ. ಸರ್ಕಾರವು ತಕ್ಕಮಟ್ಟಿಗೆ ನೀರಾವರಿ ಸೌಕರ್ಯಗಳನ್ನು ಏರ್ಪಡಿಸಿದೆ. ಇದುವರೆಗೂ ಇದಕ್ಕಾಗಿ ರೂ. ೮೦೦ ಕೋಟಿ ವೆಚ್ಚವಾಗಿದೆ.

ಈಚೆಗೆ ಎಲ್ಲರ ದೃಷ್ಟಿಯೂ ವ್ಯವಸಾಯದ ಕಡೆಗೆ ತಿರುಗಿದೆ. ಕೃತಕ ಗೊಬ್ಬರಗಳ ವ್ಯವಸಾಯಕ್ಕೆ ಬೇಕಾದ ಕಬ್ಬಿಣದ ಸಲಕರಣೆಗಳ ತಯಾರಿ ಹೆಚ್ಚುತ್ತಿದೆ. ಸರ್ಕಾರವೂ ಧಾನ್ಯಗಳ ಬೆಳೆಯನ್ನು ಸೇಕಡ ೩೦ ರಷ್ಟು, ಜಿಡ್ಡಿನ ಪದಾರ್ಥ—ಎಣ್ಣೆ, ಇತ್ಯಾದಿಗಳನ್ನು ಸೇಕಡ ೨೦ ರಷ್ಟು, ಹಣ್ಣು ಹಂಪಲಗಳನ್ನು ಸೇಕಡ ೨೦ ರಷ್ಟು, ತರ್ಕಾರಿಗಳನ್ನು ಸೇಕಡ ೫೦ ರಷ್ಟು, ಹಾಲನ್ನು ಸೇಕಡ ೩೦೦ ರಷ್ಟು ಹೆಚ್ಚಿಸುವ ಪ್ರಯತ್ನದಲ್ಲಿ ತೊಡಗಿದೆ. ಇದುವರೆಗೂ ಸರ್ಕಾರಕ್ಕೆ ಆಹಾರಪದಾರ್ಥಗಳ ಸಮಸ್ಯೆ ಮನದಟ್ಟಾಗಿರಲಿಲ್ಲ. ವ್ಯವಸ್ಥಾಯ ರೈತನಿಗೆ ಕಟ್ಟಿತ್ತು. ಸರ್ಕಾರದ ಕೆಲಸ ಕಂದಾಯದ ವಸೂಲಿಯಷ್ಟೇ ಅಲ್ಲ, ನೆಲದಲ್ಲಿ ಯಾವ ಬೆಳೆ ತೆಗೆಯಬೇಕೆಂದು ವಿಚಾರಿಸುವುದು ಕೂಡ ಎಂಬ ಪಾಠ ಅದರ ಕಣ್ಣಿಗೆ ಕಟ್ಟಿದ್ದು ಈಚಿನ ಬಂಗಾಳದ ಕ್ಷಾಮದಿಂದಲೇ.

ಬಡತನಕ್ಕೆ ಇನ್ನೊಂದು ಕಾರಣ ಕೈಗಾರಿಕೆಗಳು ಹೆಚ್ಚಾಗಿಲ್ಲದಿರುವುದು. ನಮ್ಮಲ್ಲಿರುವುದು ೬½ ಲಕ್ಷ ಹಳ್ಳಿಗಳು, ೨,೭೦೦ ಪಟ್ಟಣಗಳು. ಮರಳಿ ಮಣ್ಣಿಗೆ ಎಂಬ ಆಕರ್ಷಣೆಯ ನಾಡು ನಮ್ಮದು. ಕೈಗಾರಿಕೆ ತಲೆ ಹಾಕಿದ್ದೇ ಕಳೆದ ಯುದ್ಧದ ಕಾಲದಲ್ಲಿ. ಹತ್ತಿ, ಗೋಣಿ, ಉಕ್ಕು—ಈ ಕೈಗಾರಿಕೆಗಳು ಆಗ ಬೇರುಬಿಟ್ಟವು. ಆ ಯುದ್ಧ ಮುಗಿದ ಮೇಲೆ ಬ್ರಿಟಿಷರ ಯಂತ್ರಸಾಮಾಗ್ರಿ ಬಂದು ಕೈಗಾರಿಕೆಗಳಲ್ಲಿ ಅವರ ಕೈವಾಡ ಬಲವಾಯಿತು. ನಮ್ಮ ದೇಶದಲ್ಲಿ ಸಿಗುತ್ತಿದ್ದ ಹಾಗೆ ಲಾಭ ಅವರಿಗೆ ಇನ್ನೆಲ್ಲೂ ಸಿಕ್ಕಲಿಲ್ಲ. ಆದ್ದರಿಂದಲೇ ಬ್ರಿಟಿಷರು ಕೊಟ್ಟ ಸಾಲವನ್ನು ಮನಸಿಲ್ಲದ ಮನಸ್ಸಿನಿಂದ ಸರ್ಕಾರವು ತೀರಿಸುತ್ತಿದೆ. ಅದಕ್ಕೂ ಹೆಚ್ಚಿನ ನಿರಿಷ್ಟತೆಯಿಂದ ಬ್ರಿಟನ್ ಅದನ್ನು ಪಾವತಿ ಪಡೆಯುತ್ತಿದೆ.

ಈಗ ಎಲ್ಲೆಲ್ಲೂ ಕಣ್ಣಿಗೆ ಬೀಳುತ್ತಿರುವ ಮ್ಯಾನೇಜಿಂಗ್ ಏಜಂಟರುಗಳ ಪರಂಪರೆ ತಲೆಯೆತ್ತಿದ್ದು ಬಿಳಿಯ ವರ್ತಕರ ನಡುವೆ. ಸಾಹುಕಾರು ಹಣವಂತರು ಸೇರಿ ಹಲವಾರು ಕೈಗಾರಿಕೆಗಳನ್ನು ಮೊದಲಿಟ್ಟು ಆಳಲು ಆರಂಭವಾದದ್ದು ಅರವತ್ತು ಎಪ್ಪತ್ತು ವರ್ಷಗಳ ಹಿಂದೆ. ಅವರಿಂದ ಕೈಗಾರಿಕೆ ಮುಂದುವರಿದುದು ನಿಜ. ಆದರೆ ಅವರಿಗೆ ನಮ್ಮ ದೇಶದ ಸಂಪತ್ತನ್ನು ಹೆಚ್ಚಿಸುವುದಕ್ಕಿಂತ ತಮ್ಮ ಲಾಭದ ಮೇಲೆ ಆಸೆ ಹೆಚ್ಚಾಗಿರುವುದು ಸಹಜ. ಸಾಲದುದಕ್ಕೆ 'ಸ್ವದೇಶೀ' ಮ್ಯಾನೇಜಿಂಗ್ ಏಜಂಟರು ಬೇರೆ ಅವರ ಜೊತೆಗೆ. ಬಣ್ಣ ಬದಲಾದರೆ ಗುಣ ಬದಲಾಗಬೇಕೇನು?

೧೯೧೯ರಲ್ಲಿ ಕೈಗಾರಿಕೆಗಾಗಿ ೩ತ್ತಿ ಸಾವಿರ ಜಾಯಿಂಟ್ ಸ್ಟಾಕ್ ಕಂಪೆನಿಗಳಿದ್ದುವು. ೧೯೪೩ ರಲ್ಲಿ ೧೨ತ್ತಿ ಸಾವಿರ ಇದ್ದುವು. ಆಗ ೧೯೧೯ ರಲ್ಲಿ—ಅವುಗಳ ಬಂಡವಾಳ ರೂಪಾಯಿ ೧೨೩ ಕೋಟಿ, ಈಗ ರೂ. ೩೬೪ ಕೋಟಿ.

ನಮ್ಮ ದೇಶದ ಕೈಗಾರಿಕೆಯ ಬೆಳವಣಿಗೆಗೆ ಎಂದೂ ಗೊತ್ತಾದ ನೀತಿ ಬಂದಿಲ್ಲ. ಉದಾಹರಣೆಗೆ ಈಗ ಕೆಲವು ವರ್ಷಗಳ ವರೆಗೂ ಕೈಗಾರಿಕೆಗಳು ಬಂಗಾಳ ಮತ್ತು ಬೊಂಬಾಯಿ ಪ್ರಾಂತಗಳಲ್ಲೇ ಹೆಚ್ಚಾಗಿದ್ದುವು. ಈಗ ಅವು ದೇಶದಮೇಲೆಲ್ಲಾ ಹಬ್ಬಿ ಹರಡಲು ಮೊದಲಾಗಿದೆ. ಅದೂ ಸರಿಯಾದ—ಎಂದರೆ ಪದಾರ್ಥಗಳನ್ನು ಅಗ್ಗವಾಗಿ ತಯಾರಿಸಲು ಸಾಧ್ಯವಾಗುವಂತಹ—ಸ್ಥಳದಲ್ಲಿ ಕೈಗಾರಿಕೆಗಳು ನಡೆದುಕೊಂಡು ಬರುವಂತೆ ಸರ್ಕಾರವು ಏರ್ಪಡಿಸಬೇಕು.

ಕೈಗಾರಿಕೆ ತಲೆ ಎತ್ತಬೇಕಾದರೆ ಹೊರದೇಶದ ಕೈಗಾರಿಕೆಗಳ ಮೇಲಾಟದಿಂದ ಅದನ್ನು ಕಾಪಾಡಬೇಕು. ೧೯೨೩ ರಲ್ಲಿ ಸರ್ಕಾರವು ಅರೆಮನಸ್ಸಿನಿಂದ ಉಕ್ಕು, ಹತ್ತಿ, ಸಕ್ಕರೆ, ಕಾಗದ, ಬೆಂಕಿಕಡ್ಡಿ, ಇವುಗಳಿಗೆ ರಕ್ಷಣೆಕೊಟ್ಟಿತು. ೧೯೨೭ ರಿಂದೀಚೆಗೆ ಬ್ರಿಟಿಷ್ ಸಾಮ್ರಾಜ್ಯದಲ್ಲಿ ತಯಾರಾದ ಸಾಮಾನುಗಳಿಗೆ ತೆರಿಗೆ ತಗ್ಗಿ ಪುರಸ್ಕಾರ ಹೆಚ್ಚಿತು. ೧೯೩೨, ೧೯೩೫, ೧೯೩೯ ಈ ಮೂರು ವರುಷಗಳಲ್ಲಿ ಬ್ರಿಟನ್ ಭರತಖಂಡಗಳಿಗೆ ಆದ ಕರಾರುಗಳಲ್ಲೂ ನಮ್ಮ ದೇಶದ ಸಾಮಾನುಗಳಿಗಿಂತ ಬ್ರಿಟನ್ ಮತ್ತು ಅದರ ಸಾಮ್ರಾಜ್ಯದ ಸಾಮಾನುಗಳಿಗೆ ಅನುಕೂಲ ಹೆಚ್ಚಿತು. ಸಕ್ಕರೆ, ಬೆಂಕಿಕಡ್ಡಿ, ಸಿಮೆಂಟ್ ಇವು ನಮಗೆ ಬೇಕಾದಷ್ಟು ನಮ್ಮಲ್ಲೇ ತಯಾರಾಗುತ್ತಿವೆ. ಕೈಗಾರಿಕೆಗೆ ಅಗತ್ಯವಾಗಿ ಬೇಕಾದ ಯಂತ್ರಸಾಧನ ಮೊದಲಾದುವು ಹೊರದೇಶಗಳಿಂದ ಬರುತ್ತಿವೆ.

ಇಷ್ಟಲ್ಲದೆ ೧೯೨೯ ರಿಂದ ೧೯೩೩ ರ ವರೆಗೆ ಹಣಕಾಸಿನ ಮುಗ್ಗಟ್ಟು ಬೇರೆ ಇಲ್ಲಿನ ಆರ್ಥಿಕ ಜೀವನವನ್ನು ಸೊರಗಿಸಿತ್ತು. ನಮ್ಮ ದೇಶದ ರಫ್ತು ರೂ. ೩೩೯ ಕೋಟಿಯಿಂದ ರೂ. ೧೩೫ ಕೋಟಿಗೂ, ಆಮದು ರೂ. ೨೬೦ ಕೋಟಿಯಿಂದ

ರೂ. ೧೩೫ ಕೋಟಿಗೂ ಇಳಿಯಿತು. ಬ್ರಿಟನ್ನಿಗೆ ಸಾಲ ತೀರಿಸಲು ೧೯೩೧ ರಿಂದ ೧೯೩೭ರ ವರೆಗೆ ರೂ. ೩೨೧ ಕೋಟಿ ಬೆಲೆಬಾಳುವ ಚಿನ್ನವನ್ನು ಮಾರಬೇಕಾಯಿತು.[1]

ಈಗಿನ ಯುದ್ಧ ಮೊದಲಾದ ಹೊಸದರಲ್ಲೂ ಸರ್ಕಾರದ ಆರ್ಥಿಕ ನೀತಿ ಎಂದಿನಂತೆಯೇ ಇತ್ತು. ಜಪಾನು ಯುದ್ಧಕ್ಕಿಳಿದದ್ದರಿಂದ ಬದಲಾಯಿಸಿತು. ಬ್ರಿಟಿಷ್ ಸಾಮ್ರಾಜ್ಯವು ನಮ್ಮ ರೈತನ ಜಮೀನಿನಂತೆ ದಿಕ್ಕುಪಾಲಾಗಿ ಹರಡಿಕೊಂಡಿರುವುದರ ಅನನುಕೂಲ ಆಳರಸರಿಗೆ ಮಂದಟ್ಟಾಯಿತು. ಯುದ್ಧಕ್ಕೆ ಬೇಕಾದ ಸಾಮಗ್ರಿಗಳನ್ನು ತಯಾರಿಸುವ ಕೆಲಸ ಭರತಖಂಡ ಆಸ್ಟ್ರೇಲಿಯಗಳ ಪಾಲಿಗೆ ಬಿತ್ತು. ನಮ್ಮ ದೇಶದ ಉಕ್ಕು ಕಬ್ಬಿಣಗಳ ತಯಾರಿ ಎರಡು ವರ್ಷಗಳಲ್ಲಿ ಇಮ್ಮಡಿಸಿತು. ಕೋಟ್ಯಂತರ ರೂಪಾಯಿಗಳ ಯುದ್ಧ ಸಲಕರಣೆಯ ತಯಾರಿಕೆಗಾಗಿ ೨೫೦ ಯಂತ್ರಾಲಯಗಳೂ ೨೩ ರೈಲ್ವೆ ಕಾರ್ಯಾಲಯಗಳೂ ಬಂದದ್ದು ೧೯೪೧ ರಿಂದೀಚೆಗೆ.[2]

ಕೈಗಾರಿಕೆಯ ಬೆಳವಣಿಗೆಗೆ ಬೇಕಾದದ್ದು ಇನ್ನೊಂದು ಅಂಗ; ಯಂತ್ರಗಳನ್ನು ನಡಸುವುದಕ್ಕೆ ಬೇಕಾದ ಶಕ್ತಿ ಮತ್ತು ಪದಾರ್ಥಗಳ ಸಾಗಣೆಗೆ ಬೇಕಾದ ವಾಹನ ಸೌಕರ್ಯ.

ಬಂಗಾಳ ಮತ್ತು ಬಿಹಾರದ ಗಣಿಗಳ ಕಲ್ಲಿದ್ದಲು ಅಷ್ಟು ಅಗ್ಗವಲ್ಲ. ಆದ್ದರಿಂದ ನಮ್ಮ ದೇಶದಲ್ಲಿ ನೀರಿನಿಂದ ವಿದ್ಯುತ್ತನ್ನು ತಯಾರಿಸಿ ಕೈಗಾರಿಕೆಗಳಲ್ಲಿ ಬಳಸುತ್ತಾರೆ. ಮೈಸೂರು, ಬೊಂಬಾಯಿ, ಮದರಾಸು, ಕಾಶ್ಮೀರ ಮತ್ತು ಪಂಜಾಬ್ ಪ್ರಾಂತಗಳಲ್ಲಿ ವಿದ್ಯುಚ್ಛಕ್ತಿ ಹೆಚ್ಚು ಉಪಯೋಗದಲ್ಲಿದೆ. ಮೈಸೂರು ಮದರಾಸುಗಳಲ್ಲಿ ಅದರ ಉತ್ಪತ್ತಿಯೂ ಹೆಚ್ಚಿದೆ, ವಿದ್ಯುತ್ತಿನ ಸಹಾಯದಿಂದ ಅನೇಕ ಲೋಹದ ಮತ್ತು ರಾಸಾಯನಿಕ ಕೈಗಾರಿಕೆಗಳನ್ನು ಸುಲಭವಾಗಿ ನಡಸಬಹುದು. ವ್ಯಾಪಾರದ ವಹಿವಾಟಕ್ಕೆ ಬೇಕಾದ ವಾಹನ ಸೌಕರ್ಯಗಳೂ ಹೆಚ್ಚಿವೆ. ಈಗ ೮೭,೦೦೦ ಮೈಲಿ ಟಾರು ರಸ್ತೆಗಳೂ, ೨೨೪,೦೦೦ ಮೈಲಿ ಸಾದಾ ರಸ್ತೆಗಳೂ ಇವೆ. ಸೈನ್ಯದ ಓಡಾಟಕ್ಕೆ ಆವಶ್ಯಕವಾದ ಮೋಟರು ರಸ್ತೆ ಹೆಚ್ಚಿರುವಹಾಗೆ ರೈಲು ರಸ್ತೆ ಹೆಚ್ಚಿಲ್ಲ. ೧೯೧೯ ರಲ್ಲಿ

[1] ಅದರಲ್ಲಿ ಒಂದಂಶಸಂತೋಷವೆಂದರೆ ಬೆಲೆಯಲ್ಲಿ ಈ ಸಂಖ್ಯೆ ಹೆಚ್ಚಾಗಿ ಕಂಡರೂ ನಮ್ಮ ಒಟ್ಟು ಚಿನ್ನದ ತೂಕ ಅಷ್ಟು ಭಯಂಕರವಾಗಿ ಕರಗಲಿಲ್ಲ. ಚಿನ್ನಕ್ಕೆ ಬೆಲೆ ಒಂದಕ್ಕೆ ೨-೩ ಏರಿತ್ತಾದ್ದರಿಂದ ಚಿನ್ನದ ಮಾರಾಟದಿಂದ ಆಗಬಹುದಾಗಿದ್ದ ನಷ್ಟದ ಪ್ರಮಾಣ ಸ್ವಲ್ಪಮಟ್ಟಿಗಾದರೂ ಕಡಮೆಯಾಯಿತು.

[2] ಯಂತ್ರ ಸಾಮಗ್ರಿಗಳ ತಯಾರಿ ಹೆಚ್ಚಿದರೂ, ಆಸ್ಟ್ರೇಲಿಯದಷ್ಟು ಅನುಕೂಲಗಳು ನಮಗೆ ಸಿಕ್ಕಿಲ್ಲ. ಕೆನಡಾ, ಆಸ್ಟ್ರೇಲಿಯಗಳು ಯುದ್ಧದ ನೆಪದಿಂದ ಅನೇಕ ಹೊಸ ಕೈಗಾರಿಕೆಗಳನ್ನು ಆರಂಭಿಸಿವೆ. ನಮ್ಮದು ಹಳೆಯ ಕಥೆಯೇ. ಯುದ್ಧಕ್ಕೆ ಬೇಕಾದ ಸಣ್ಣ ಪುಟ್ಟ ಸಾಮಾನು ಕೆಲವು ತಯಾರಾಗ ತೊಡಗಿವೆ ಅಷ್ಟೇ.

೩೬,೭೦೦ ಮೈಲಿ ರೈಲು ರಸ್ತೆಯಿತ್ತು. ಈಗ ೪೨,೦೦೦ ಮೈಲಿಯಿದೆ. ಅದಕ್ಕಾಗಿ ಇದುವರೆಗೂ ರೂ. ೯೦೦ ಕೋಟಿ ಖರ್ಚಾಗಿದೆ. ಆದರೂ ಓಡಾಟಕ್ಕೆ ಅನುಕೂಲ ಸಾಲದು. ಇಷ್ಟು ದೊಡ್ಡ ದೇಶಕ್ಕೆ ಈ ಪ್ರಮಾಣ ಬಹು ಕಡಮೆ.

ಕೈಗಾರಿಕೆ ಮುಂದುವರಿಯುವುದಕ್ಕೆ ಬೇಕಾದ ಹಣಕಾಸಿನ ಹಿನ್ನೆಲೆಯೂ ಸಿದ್ಧವಾಗುತ್ತಿದೆ. ೧೯೧೯-೨೦ ರಲ್ಲಿ ರೂ. ೧೫೩ ಕೋಟಿ ನೋಟು ಚಲಾವಣೆಯಲ್ಲಿತ್ತು. ಅದು ೧೯೩೮-೩೯ ರಲ್ಲಿ ರೂ. ೧೮೯ ಕೋಟಿಯಾಗಿ ಈಗ ರೂ. ೧,೦೦೦ ಕೋಟಿಗೆ ಮೀರಿದೆ. ೧೯೧೯-೨೦ ರಲ್ಲಿ ಬಳಕೆಯಲ್ಲಿದ್ದದ್ದು ೨೦ ಕೋಟಿ ರೂಪಾಯಿ; ಈಗ ೨೫ ಕೋಟಿ. ಹಣಕಾಸಿನ ವ್ಯವಹಾರ ಹೆಚ್ಚುವುದಕ್ಕೆ ಬ್ಯಾಂಕುಗಳ ಬೆಳವಣಿಗೆಯೂ ಸಹಕಾರಿ. ೧೯೨೦ ರಲ್ಲಿದ್ದ ದೊಡ್ಡ—ಎಂದರೆ ರೂ. ೧ ಲಕ್ಷಕ್ಕೆ ಹೆಚ್ಚಾಗಿ ಬಂಡವಾಳವಿದ್ದ—ಬ್ಯಾಂಕುಗಳ ಸಂಖ್ಯೆ ೫೯; ಅವುಗಳ ಒಟ್ಟು ಬಂಡವಾಳ ರೂ. ೧೩ ಕೋಟಿ. ೧೯೪೪ ರಲ್ಲಿ ದೊಡ್ಡ ಬ್ಯಾಂಕುಗಳ ಸಂಖ್ಯೆ ೨೪೫, ಅವುಗಳ ಬಂಡವಾಳ ರೂ. ೨೬ ಕೋಟಿ. ಇವುಗಳ ಜೊತೆಗೆ ೧೯೨೦ ರಲ್ಲಿ ರೂ. ೧ ಕೋಟಿ ಬಂಡವಾಳವಿದ್ದ ಸಹಕಾರದ ಬ್ಯಾಂಕುಗಳು ೫೧ ಇದ್ದವು; ೧೯೪೪ ರಲ್ಲಿ ಅವುಗಳ ಸಂಖ್ಯೆ ೩೩೭, ಅವುಗಳ ಬಂಡವಾಳ ರೂ. ೫ ಕೋಟಿ.

ದೇಶಕ್ಕೆ ಕೈಗಾರಿಕೆ ಹೇಗೆ ಹೊಸದೋ, ಗಿರಣಿಗಳ ಕೂಲಿಕಾರರೂ ಹಾಗೇ ಹೊಸ ಲಕ್ಷಣ. ಹೊಟ್ಟೆಪಾಡಿಗೆ ಕಾರ್ಖಾನೆಗಳಲ್ಲಿ ದುಡಿಯುವವರು ಸೇಕಡ ೨೫ ಮಂದಿ. ಇದರಲ್ಲಿ ಮೂರು ಲಕ್ಷ ಹೆಂಗಸರು ಸೇರಿದ್ದಾರೆ. ಕಳೆದ ಯುದ್ಧ ಮುಗಿದ ಹೊಸದರಲ್ಲಿ ಕಾರ್ಖಾನೆಗಳ ಕೂಲಿಕಾರರ ಪಾಡು ತುಂಬ ಕಷ್ಟವಾಗಿತ್ತು. ಸಂಬಳ ಹೆಚ್ಚಿಸುವ ಮಾತಿಗೆ, ಕೆಲಸ ಸರಿಯಾಗಿ ಮಾಡುತ್ತಿಲ್ಲವೆಂಬ ಮರುಮಾತು ಸಿದ್ಧವಾಗಿತ್ತು. ಗಾಳಿ ಬೆಳಕಿಲ್ಲದ ಅನಾರೋಗ್ಯವಾದ ಸ್ಥಳದಲ್ಲಿ ಬಹಳ ಹೊತ್ತು ಕೆಲಸ ಮಾಡಬೇಕಾಗಿತ್ತು. ಚಿಕ್ಕ ಮಕ್ಕಳನ್ನು ತಂದೆತಾಯಿಗಳು ಪುಡಿಕಾಸಿನ ಆಸೆಯಿಂದ ಕಾರ್ಖಾನೆಗೆ ಅಟ್ಟುತ್ತಿದ್ದರು. ಇದನ್ನು ತಪ್ಪಿಸಲು ೧೯೨೨ರಲ್ಲಿ ಒಂದು ಕಾನೂನು ಬಳಕೆಗೆ ಬಂತು. ದೊಡ್ಡವರು ದಿನಕ್ಕೆ ವಿರಾಮದೊಡನೆ ಏಳು ಗಂಟೆ, ವಾರಕ್ಕೆ ಅರವತ್ತು ಗಂಟೆಗೆ ಮೀರದೆ ಕೆಲಸಮಾಡುವಂತೆಯೂ, ಹನ್ನೆರಡು ವರ್ಷವಾದವರು ಕಾರ್ಖಾನೆಗಳಲ್ಲೂ ಹದಿನೈದು ವರ್ಷವಾದವರು ಗಣಿಗಳಲ್ಲೂ ಕೆಲಸಮಾಡುವಂತೆಯೂ ಗೊತ್ತಾಯಿತು.

೧೯೨೩ಕ್ಕೆ ಮುಂಚೆ, ಕೂಲಿಗಾರರಿಗೆ ಪರಿಹಾರ ಸಿಕ್ಕಬೇಕಾದರೆ ಅವರು ಸಾಯಬೇಕಾಗಿತ್ತು. ಯಂತ್ರಗಳ ಬಳಿನಿಂತು ಕೆಲಸಮಾಡುವಾಗ ಆಕಸ್ಮಿಕವಾದರೆ, ಅದರಿಂದ ದೇಹಸ್ಥಿತಿ ಕೆಟ್ಟರೆ ಕೆಲಸಗಾರರಿಗೆ ಪರಿಹಾರಕೊಡಬೇಕೆಂದು ೧೯೨೩ರಲ್ಲಿ ಕಾನೂ

ನಾಯಿತು. ಹೆಂಗಸರಿಗೆ ಹೆರಿಗೆಗೆ ರಜಕೊಡಬೇಕೆಂಬ ಕಾನೂನು ಬಂದಿದೆ! ೧೯೩೪ರಲ್ಲಿ ಮಕ್ಕಳಿಗೆ ದಿನಕ್ಕೆ ಐದುಗಂಟೆ ಕೆಲಸ, ದೊಡ್ಡವರಿಗೆ ಸದಾ ನಡೆಯುವ ಕಾರ್ಖಾನೆಗಳಲ್ಲಿ ದಿನಕ್ಕೆ ಹತ್ತು ಗಂಟೆ, ವಾರಕ್ಕೆ ೬೦ ಗಂಟೆ; ವರ್ಷದಲ್ಲಿ ಕೆಲವು ತಿಂಗಳು ಮಾತ್ರ ನಡೆವ ಕಾರ್ಖಾನೆಗಳಲ್ಲಿ ದಿನಕ್ಕೆ ಹನ್ನೊಂದು ಗಂಟೆ, ವಾರಕ್ಕೆ ೬೦ ಗಂಟೆ ಕೆಲಸ ಎಂದು ನೇಮಕವಾಯಿತು.

ಕೈಗಾರಿಕೆಗಳ ಫಲವಾಗಿ ಸಾಹುಕಾರರಿಗಿಂತ ಕೂಲಿಕಾರರು ಹೆಚ್ಚುತ್ತಾರೆ. ಕೂಲಿಕಾರರ ಸಂಸ್ಥೆಗಳು ತಲೆಯೆತ್ತಿದ್ದು ೧೯೧೯ರಲ್ಲಿ. ೧೯೨೧-೨೨ರಲ್ಲಿ ಮುಷ್ಕರಗಳ ಪರಂಪರೆ ಸಾಮಾನ್ಯವಾಗಿ ಮುಷ್ಕರಗಳಿಗೆ ಸಂಬಳಸಾರಿಗೆಗಳು ಕಾರಣವಾಗಿದ್ದರೂ, ಅನೇಕ ಸಲ ಅವುಗಳಿಗೆ ರಾಜಕೀಯವೇ ಕಾರಣವಾಗಿತ್ತು. ಕೂಲಿಕಾರರ ಸಂಸ್ಥೆಗಳು ಕೈಗಾರಿಕೆಗೆ ಸಂಬಂಧಿಸಿದ ಹಾಗೆ ಕೆಲವು, ಕೆಲಸಗಾರರ ಯೋಗಕ್ಷೇಮವನ್ನು ನೋಡಿಕೊಳ್ಳುವುದಕ್ಕೆ ಇನ್ನು ಕೆಲವು. ಇವನ್ನೆಲ್ಲಾ ವ್ಯವಸ್ಥೆಗೊಳಿಸಲು ಅಖಿಲ ಭಾರತ ಕೂಲಿಕಾರರ ಕಾಂಗ್ರೆಸ್ ಸ್ಥಾಪನೆಯಾಯಿತು. ೧೯೨೯ರಲ್ಲಿ ಕೆಲಸಗಾರರಿಗೂ ಸಾಹುಕಾರರಿಗೂ ಸ್ನೇಹಸಂಬಂಧದ ಏರ್ಪಾಡಿಗೆ ಬೇಕಾದ ಸಂಧಾನಸಮಿತಿಗಳ ರಚನೆಗೆ ಸರ್ಕಾರದ ಸಮ್ಮತಿ ದೊರೆಯಿತು. ಇಷ್ಟಾದರೂ ಕೂಲಿಕಾರನು ಬಡತನದಲ್ಲಿ ರೈತನ ಜೋಡಿಯೇ. ಸರಕಾರದ, ಬಂಡವಾಳಗಾರರ ಇಬ್ಬರ ಕಣ್ಣೂ ಅವನ ಮೇಲೆಯೇ. ಇನ್ನಷ್ಟು ನಿಷ್ಠುರವೇ.

ಸರ್ಕಾರದ ಹಣಕಾಸಿದ ನೀತಿಯಿಂದಲೂ ಬಡತನ ಹೆಚ್ಚಿದೆ ಎನ್ನುವುದುಂಟು. ಸರ್ಕಾರದ ವರಮಾನ ೧೯೧೯-೨೦ರಲ್ಲಿ ರೂ. ೧೩೬ ಕೋಟಿ, ೧೯೪೪-೪೫ರಲ್ಲಿ ರೂ. ೩೫೬ ಕೋಟಿ. ಸರ್ಕಾರವು ದೇಶದ ಉತ್ಪನ್ನದಲ್ಲಿ ಸೇಕಡ ೮ರಷ್ಟು ತೆರಿಗೆಗಳ ಮೂಲಕ ವಸೂಲುಮಾಡಿ ಖರ್ಚುಮಾಡುತ್ತದೆ. ಇದು ಇತರ ದೇಶಗಳಲ್ಲಿ ಸರ್ಕಾರವು ಮಾಡುವ ವಸೂಲಿಗಿಂತ ಕಡಮೆ ಎನ್ನುವುದಾದರೆ ಇತರ ದೇಶಗಳ ಸಾಹುಕಾರಿಕೆ ನಮ್ಮ ದೇಶಕ್ಕಿಂತ ಹೆಚ್ಚೆಂಬುದನ್ನು ಮರೆಯಲಾಗದು. ಸರ್ಕಾರವು ತೆರಿಗೆಗಳಿಂದ ಬಡವರ ಬಡತನವನ್ನು ಹೆಚ್ಚಿಸಿರಬಹುದೇ ಹೊರತು ಸಾಹುಕಾರರ ಸಂಪತ್ತನ್ನು ಕಡಮೆಮಾಡಿಲ್ಲ.

೧೯೨೨ ರಿಂದೀಚೆಗೆ ಸರ್ಕಾರದ ಹಣಕಾಸಿನ ಸ್ಥಿತಿ ಸುಧಾರಿಸಿತ್ತು. ನಮ್ಮ ದೇಶದ ಸಾಮಾನುಗಳಿಗೆ ಹೊರದೇಶಗಳಿಂದ ಕರೆ ಹೆಚ್ಚಾಗಿ ವ್ಯಾಪಾರ ಹೆಚ್ಚಿತ್ತು. ಕೆಲವು ತೆರಿಗೆಗಳನ್ನು ತಳ್ಳಿಹಾಕುವ, ಸುಂಕ ಮತ್ತು ವರಮಾನದ ತೆರಿಗೆಗಳಿಂದ—ಇವೆರಡೇ ಸರ್ಕಾರದ ಆಧಾರ—ಬರುವ ಹಣ ಹೆಚ್ಚುವ, ನಿರೀಕ್ಷೆಯೂ ಇತ್ತು ೧೯೨೮ರಲ್ಲಿ. ೧೯೨೯ ರಿಂದ ಜಗತ್ತಿಗೇ ಹಣಕಾಸಿನ ಮುಗ್ಗಟ್ಟು. ನಾಲ್ಕು ವರ್ಷ

ಗಳಲ್ಲಿ ಬೆಲೆಗಳೆಲ್ಲ ಅರ್ಧಕ್ಕರ್ಧ ತಗ್ಗಿದುವು. ಹೊರದೇಶಗಳಿಗೆ ಸಾಮಾನುಗಳನ್ನು ಕೊಡುವುದೂ ಅವುಗಳಿಂದ ಕೊಳ್ಳುವುದೂ ಇಳಿಯಿತು. ಸರ್ಕಾರದ ಆದಾಯದ ಹೆಚ್ಚು ಭಾಗ ಸುಂಕದಿಂದ; ಅದರಲ್ಲೂ ಹತ್ತಿ, ಸಕ್ಕರೆ ಸುಂಕಗಳಿಂದ ಬರುತ್ತಿತ್ತು. ವರಮಾನದ ತೆರಿಗೆಯಿಂದ ಬರಬೇಕಾದ ಹಣವೂ ಅರ್ಧಕ್ಕಿಂತ ಕಡಮೆಯಾಯಿತು. ೧೯೩೧ ರಲ್ಲಿ ಸಕ್ಕರೆ, ಅಡಕೆ, ಚಿನ್ನ, ಬೆಳ್ಳಿ ಮೊದಲಾದುವುಗಳ ಮೇಲೆ ಹಾಕಿದ್ದ ಸುಂಕದ ದರ ಹೆಚ್ಚಿತು. ಹೆಚ್ಚು ಕಡಮೆ ಎಲ್ಲ ತೆರಿಗೆಗಳೂ ಹೆಚ್ಚಿದುವು. ಅಂಚೆ ದರಗಳೂ ಹೆಚ್ಚಿದುವು. ೧೯೩೨ರ ಹೊತ್ತಿಗೆ ಸರ್ಕಾರದ ಆಯವ್ಯಯ ಸಮತೂಗುವ ಹಾಗಾಯಿತು.

ಸರ್ಕಾರದ ಸಾಲ ೧೯೧೪ರಲ್ಲಿ ರೂ. ೫೫೧ ಕೋಟಿಯಿತ್ತು. ೧೯೩೬ರಲ್ಲಿ ರೂ. ೧,೨೦೧ ಕೋಟಿಯಾಯಿತು. ಯುದ್ಧ ಆರಂಭವಾದಾಗಿನಿಂದ ಇದುವರೆಗೂ ತೆಗೆದಿರುವ ಸಾಲ ರೂ. ೮೩೩ ಕೋಟಿ. ಇತರ ದೇಶಗಳಲ್ಲಿರುವಂತೆ ನಮ್ಮ ದೇಶದ ಸರ್ಕಾರಕ್ಕೆ ಸಾಲದ ಕಾಟ ಅಷ್ಟಾಗಿಲ್ಲ.[1]

ಇತರ ದೇಶಗಳಿಗಿಂತ ನಮ್ಮ ದೇಶದಲ್ಲಿ ರಕ್ಷಣೆಗಾಗಿ—ಎಂದರೆ ಸೈನ್ಯಕ್ಕಾಗಿ—ಮಾಡುವ ಖರ್ಚು ಹೆಚ್ಚು. ಅದು ೧೯೧೮-೧೯ ರಲ್ಲೇ ರೂ. ೬೬ ಕೋಟಿಯಿತ್ತು, ೧೯೪೪-೪೫ರಲ್ಲಿ ರೂ. ೪೫೦ ಕೋಟಿ. ಜನಗಳ ವಿದ್ಯಾಭ್ಯಾಸ, ಆರೋಗ್ಯ ಅನುಕೂಲಗಳಿಗೆ ಮಾಡುವ ಖರ್ಚು ಕಡಮೆ.

ಇಷ್ಟು ಬಡತನದ ಕಾರಣ. ಜನದ ಯೋಗ್ಯತೆಯೂ ಉತ್ಪತ್ತಿಶಕ್ತಿಯೂ ಬೇರೆ ವ್ಯಕ್ತಿಶವಾದ ಮತ್ತು ಇತರ ಲೌಕಿಕ ಕಾರಣಗಳಿಂದ ಹೇಗೆ ಈ ಬಡತನವನ್ನು ಬೆಳಸುತ್ತಿದೆ ಯೆಂಬುದನ್ನು ಎಲ್ಲರೂ ಬಲ್ಲರು. ಬಡತನ ಕೊನೆಗಾಣಲು ದೇಶದ ಉತ್ಪನ್ನ ಹೆಚ್ಚಬೇಕು. ವ್ಯವಸಾಯ ಮತ್ತು ಕೈಗಾರಿಕೆಗಳನ್ನು ಸಮವಾಗಿ ಬೆಳಸಬೇಕು. ಸದ್ಯದಲ್ಲಿ ವ್ಯವಸಾಯಕ್ಕಿಂತ ಕೈಗಾರಿಕೆ ಹಿಂದಿದೆ. ಕೈಗಾರಿಕೆಗಳನ್ನು ಹೆಚ್ಚಿಸಿದರೆ ಹೆಚ್ಚು ಜನರಿಗೆ ಕೆಲಸ ಸಿಕ್ಕುತ್ತದೆ. ಭೂಭಾರ (Pressure of Population on Land) ಕಡಮೆಯಾಗಿ, ಸಂಪತ್ತು ಹೆಚ್ಚಾಗುತ್ತದೆ. ಜನರ ಸಂಪಾದನೆ ಹೆಚ್ಚಿ ಅವರಿಗೆ ಸಿಕ್ಕುವ ಪದಾರ್ಥಗಳಲ್ಲಿ ವಿವಿಧತೆ ಹೆಚ್ಚಿ, ಅವರು ಹೆಚ್ಚು ಹಣವನ್ನು ಖರ್ಚುಮಾಡುವುದಕ್ಕೆ ಅವಕಾಶವೂ ಉಂಟಾಗುತ್ತದೆ.

---


[1] ಸರ್ಕಾರವು ಸಾಲವನ್ನು ತೀರಿಸುತ್ತಲೇ ಇದೆ. ೧೯೩೧-೩೩ ರಲ್ಲೂ ವರ್ಷಕ್ಕೆ ರೂ. ೭ ಕೋಟಿಯಷ್ಟು ಸಾಲ ತೀರಿತು. ಹೀಗೆ ಸರ್ಕಾರದ ಸಾಲದ ಹೊರೆ ಕಡಮೆಯಾದದ್ದು ಚಿನ್ನವು ದೇಶದಿಂದ ಸಾಗಿದ್ದರಿಂದಲೇ. ಇದರಿಂದ ದೇಶದಲ್ಲಿ ಹಣವೂ ಕಡಮೆಯಾಗಲಿಲ್ಲ, ಬೆಲೆಯೂ ತಗ್ಗಲಿಲ್ಲ.

ನಮ್ಮ ಸಂಪತ್ತಿನ ತಳಹದಿಯಾಗಿ ಉಳಿದಿರುವ ವ್ಯವಸಾಯ ಕೂಡ ಒಂದು ಕೈಗಾರಿಕೆಯೇ : ಅದಕ್ಕೆ ವಿಜ್ಞಾನದ ಸಹಕಾರ ದೊರೆತರೆ, ಯಂತ್ರ ಮತ್ತು ವಿದ್ಯುಚ್ಛಕ್ತಿಗಳ ಸಹಾಯ ಸಿಕ್ಕಿದರೆ ಕೈಗಾರಿಕೆಯ ಲಕ್ಷಣಗಳು ಮೈದೋರುತ್ತವೆ. ಆದ್ದರಿಂದ ವ್ಯವಸಾಯವನ್ನು, ಅದಕ್ಕೆ ಸಂಬಂಧಿಸಿದ ವಿಜ್ಞಾನವು ವಿಧಿಸುವ ರೀತಿಯಲ್ಲಿ, ಯಂತ್ರದ ಸಹಾಯದಿಂದ ವ್ಯವಸ್ಥೆಮಾಡಬೇಕು.

ಇಷ್ಟೂ ನಡೆಯಬೇಕಾದರೆ ದೇಶಕ್ಕೆ ಒಂದು ಯೋಜನೆಬೇಕು. ಮನಸ್ಸು, ಹಣ, ಕೆಲಸ, ವಿತರಣೆ ಕೂಡಬೇಕು. ಈಗಾಗಲೇ ನಾಲ್ಕಾರು ಯೋಜನೆಗಳು ಸಿದ್ಧವಾಗಿವೆ. ಬೊಂಬಾಯಿ ಸಾಹುಕಾರರ ಯೋಜನೆ, ಎಂ. ಎನ್. ರಾಯ್ ಅವರ ಯೋಜನೆ, ಸರ್ಕಾರದ ಯುದ್ಧಾನಂತರ ಪುನರ್ರಚನೆಯ ಹಂಚಿಕೆ, ಗಾಂಧೀಯೋಜನೆ ಇವೆಲ್ಲ ಜನರ ಕಣ್ಣುಮುಂದಿವೆ. ಇಲ್ಲದ ಕುಂಟುನೆಪಗಳಿಂದ ಅವು ಮೂಲೆಗೆ ಬಿದ್ದಾವೆಂಬ ಭಯವಿದೆ. ಇದರ ನಡುವೆ ರಾಜಕಾರಣದ ಬಿಕ್ಕಟ್ಟು ಬಿಡಿಸಲಾಗದಂತೆ ಉಳಿದಿದೆ. ಯಾವುದಾದರೂ ಒಂದು ಯೋಜನೆಯನ್ನು, ಉದಾಹರಣೆಗೆ ಬೊಂಬಾಯಿ ಯೋಜನೆಯೇ ಆಗಲಿ, ಹಿಡಿದು ಅದರಂತೆ ನಡೆದರೆ ಅದರ ತಪ್ಪುನೆಪ್ಪುಗಳು ತಾವೇ ಹೊರಬೀಳುತ್ತವೆ. ತಿದ್ದುಪಾಡಿನ ಮಾತು ತರುವಾಯ ; ಲೋಪದೋಷ ಕಂಡಂತೆಲ್ಲ ತಿದ್ದುಪಾಡನ್ನು ಮಾಡಿಕೊಳ್ಳುತ್ತ ಹೋಗಬಹುದು.

ರಾಜಕಾರಣ ಸುಸೂತ್ರವಾದರೆ ಮಣ್ಣು ಹೊನ್ನಾದೀತು ; ಬಾಳು ಬಣ್ಣವಾದೀತು.

ಅ. ನ. ಸುಬ್ರಹ್ಮಣ್ಯಂ.



ಲಂಡನ್ (*Economist*) ಕೃಪೆಯಿಂದ.

ರಾಷ್ಟ್ರಗಳ ವರಮಾನ ಪ್ರಕಾರ ನೋಡಿದರೆ ಪ್ರಪಂಚ ವಿಸ್ತಾರ ಕಾಣುವ ರೀತಿ.

ನೀಲಗಿರಿಯ ಇತಿಹಾಸ

ಚಿತ್ತಾಕರ್ಷವಾದ ಪ್ರಕೃತಿ ಸೌಂದರ್ಯದಿಂದಲೂ ತಂಪಾದ ಹವದಿಂದಲೂ ಹಿಂದುಸ್ತಾನದಲ್ಲೆಲ್ಲಾ ಪ್ರಖ್ಯಾತಿಪಡೆದು ಪರ್ವತಾವಾಸಗಳ ರಾಣಿ (Queen of Hill-stations) ಎಂದು ಕರೆಯಲ್ಪಡುವ ನೀಲಗಿರಿ ಪರ್ವತದ ಹೆಸರನ್ನು ಕೇಳದ ಸುಸಂಸ್ಕೃತ ಕರ್ಣಾಟಕರು ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಮೈಸೂರು ದೇಶದ ದಕ್ಷಿಣ ಎಲ್ಲೆಗೆ ಹತ್ತಿದಂತಿರುವ ಈ ಪರ್ವತದ ರಮಣೀಯತೆಯನ್ನೂ ದೊಡ್ಡಬೆಟ್ಟ (೮,೭೬೦ ಅಡಿ), ಮೂಕರ್ತಿ (೮,೪೦೦ ಅಡಿ), ಸ್ನೋಡನ್ (೮,೨೯೯ ಅಡಿ), ಎಲ್ಕ್‌ಹಿಲ್ (೮,೦೯೦ ಅಡಿ) ಮುಂತಾದ ಅದರ ಶಿಖರಗಳನ್ನೂ ಅವುಗಳ ಭೀಷಣ ದೃಶ್ಯಗಳನ್ನೂ ಅದರ ಮೇಲಿರುವ ಉಟಕಮಂಡ್ (ಉದಕಮಂಡಲ), ಕುನ್ನೂರು, ಕೋತಗಿರಿ, ಗೂಡಲೂರು ಮುಂತಾದ ಊರುಗಳನ್ನೂ ಅವುಗಳ ಸುತ್ತ ಮುತ್ತಲಿರುವ ಮನೋಹರವಾದ ಪ್ರದೇಶಗಳನ್ನೂ, ಪಾಯಿಕೆರೆ, ಕಾಟ್ಟೇರಿ, ಕಲ್ಹಟ್ಟಿ ಮುಂತಾದ ಜಲಪಾತಗಳನ್ನೂ, ಬೆಟ್ಟದ ವಾಯುಗುಣವನ್ನೂ ಈ ಪರ್ವತನಿವಾಸಿಗಳಾದ ತೊದವರು, ಕೋತರು, ಕುರುಂಬರು, ಬಡಗರು ಇವರುಗಳ ನಡೆ, ನುಡಿ, ಉಡಿಗೆ, ತೊಡಿಗೆ, ವಸತಿ, ವ್ಯವಹಾರ, ಸಂಪ್ರದಾಯಗಳು, ನಾಗರಿಕತೆ ಮುಂತಾದುವುಗಳ ವಿಚಾರವನ್ನೂ ಅನೇಕರು ನೋಡಿಯೂ, ಓದಿಯೂ, ಕೇಳಿಯೂ ಇದ್ದಾರೆ. ಆದರೆ ಕನ್ನಡನಾಡಿಗೆ ಸೇರಿದ ಈ ಪರ್ವತದ ಚರಿತ್ರೆಯು ಕನ್ನಡಿಗರಿಗೆ ತಕ್ಕಮಟ್ಟಿಗೆ ತಿಳಿದಿಲ್ಲವಾದುದರಿಂದ ನನಗೆ ತಿಳಿದಮಟ್ಟಿಗೆ ಅದನ್ನು ಇಲ್ಲಿ ಬರೆಯಲು ಪ್ರಯತ್ನಿಸಿದ್ದೇನೆ.

ವಾಲ್ಮೀಕಿ ರಾಮಾಯಣ ಮೊದಲಾದ ನಮ್ಮ ಪುರಾತನ ಸಂಸ್ಕೃತ ಗ್ರಂಥಗಳಲ್ಲಿ ಈ ಪರ್ವತವು ನೀಲಗಿರಿ ಎಂಬ ಹೆಸರಿನಿಂದ ಕಾಣಬರುವುದಿಲ್ಲವಾದರೂ ಅವುಗಳಲ್ಲಿ ನಿರ್ದಿಷ್ಟವಾದ ದರ್ದುರವೆಂಬ ಪರ್ವತವೇ ನೀಲಗಿರಿಯೆಂದು ಹಲ ಪಂಡಿತರು ಹೇಳಿದ್ದಾರೆ. ರಾಮಾಯಣದ ಸುಂದರಕಾಂಡದಲ್ಲಿ ಹನುಮಂತನು ರಾವಣನ ಅಶೋಕವನದಲ್ಲಿದ್ದ ಸೀತಾದೇವಿಯನ್ನು ಕಂಡು ತಾನು ರಾಮದೂತನೆಂದು ಆಕೆಗೆ ವಿಜ್ಞಾಪಿಸಿಕೊಂಡು ರಾಮನು ಆಕೆಯನ್ನು ಅಗಲಿದಾಗಿನಿಂದಲೂ ಹೇಗೆ ಆಕೆಯ ಹಂಬಲಿನಲ್ಲಿಯೇ ಇದ್ದಾನೆಂದು ತಿಳಿಸಿ ಈ ವಿಷಯದಲ್ಲಿ ನಂಬಿಕೆಯನ್ನು ಹುಟ್ಟಿಸುವುದಕ್ಕೋಸುಗ ಭರತಖಂಡದ ಮುಖ್ಯವಾದ ಪರ್ವತಗಳ ಮೇಲೆ ಆಣೆಯನ್ನಿಡುತ್ತಾನೆ :—

ಮಲಯೇನ ಚ ವಿಂಧ್ಯೇನ ಮೇರುಣಾ ಮಂದರೇಣ ಚ |
ದರ್ದುರೇಣ ಚ ತೇ ದೇವಿ ಶಪೇ ಮೂಲಫಲೇನ ಚ ||

ಯಥಾ ಸುನಯನಂ ವಲ್ಗು ಬಿಂಬೋಷ್ಠಂ ಚಾರುಕುಂಡಲಂ |
ಮುಖಂ ದ್ರಕ್ಷ್ಯಸಿ ರಾಮಸ್ಯ ಪೂರ್ಣಚನ್ದ್ರಮಿವೋದಿತಂ ||

ಪುನಃ ಯುದ್ಧಕಾಂಡದಲ್ಲಿ ರಾಮರಾವಣ ಸೇನೆಗಳು ಯುದ್ಧಕ್ಕೆ ಅನುವಾಗಿರುವಾಗ ರಾವಣೇಶ್ವರನು ಶಾರಣನನ್ನೂ ಕಪಿಸೇನೆಯಲ್ಲಿ ಪ್ರಮುಖರಾದ ವೀರರನ್ನೂ ಯಾರು ಯಾರೆಂದು ತಿಳಿಸೆಂದು ಹೇಳಿದಾಗ ಶಾರಣನು ಕಪಿನಾಯಕರನ್ನು ಒಬ್ಬೊಬ್ಬರನ್ನಾಗಿ ತೋರಿಸುತ್ತಾ ವಿನತನೆಂಬ ವಾನರ ಮುಖ್ಯನನ್ನು ಈ ರೀತಿ ವರ್ಣಿಸುತ್ತಾನೆ.

ಏಷ **ದರ್ದುರ** ಸಂಕಾಶೋ ವಿನತೋ ನಾಮ ಯೂಥಪಃ |
ಪಿಬಂಶ್ಚರತಿ ಪರ್ಣಾಸಾಂ ನದೀನಾಮುತ್ತಮಾಂ ನದೀಂ |
ಷಷ್ಟಿಃ ಶತಸಹಸ್ರಾಣಿ ಬಲಮಸ್ಯ ಪ್ಲವಂಗಮಾಃ ||

ಮಹಾಭಾರತದ ಸಭಾಪರ್ವದಲ್ಲಿ ದುರ್ಯೋಧನನು ಪಾಂಡವರಿಂದ ತನಗಾದ ಅಪಮಾನವನ್ನು ತನ್ನ ತಂದೆಗೆ ಹೇಳುವ ಸಂದರ್ಭದಲ್ಲಿ ಅವರ ಐಶ್ವರ್ಯವನ್ನೂ ಸಂಪತ್ತನ್ನೂ ನೋಡಿ ತಾನು ಜೀವಂತನಾಗಿರಲಾರನೆಂದು ದುಃಖಪಟ್ಟು ಅವರಿಗೆ ಭಾರತ ವರ್ಷದ ರಾಜರೆಲ್ಲರೂ ಅಧೀನರಾಗಿದ್ದಾರೆಂದೂ ಯಾವ ಯಾವ ರಾಜರು ಯಾವ ಯಾವ ವಸ್ತುಗಳನ್ನು ಧರ್ಮರಾಜನ ರಾಜಸೂಯಯಾಗಕ್ಕಾಗಿ ತಂದು ಅರ್ಪಿಸಿದರೆಂಬುದನ್ನು ವರ್ಣಿಸುತ್ತಾ ದಕ್ಷಿಣ ದಿಕ್ಕಿನ ಪಾಂಡ್ಯರಾಜನು ದರ್ದುರ ಪರ್ವತದ ಚಂದನವನ್ನು ಕಳುಹಿಸಿದ್ದನೆಂಬುದನ್ನು ತಿಳಿಸುತ್ತಾನೆ.

ದಾ**ರ್ದುರಂ** ಚಂದನಂ ಮುಖ್ಯಂ ಭಾರಾನ್ ಷಣ್ಣವತಿಂ ಧ್ರುವಂ
ಪಾಂಡವಾಯ ದದೌ ಪಾಂಡ್ಯಃ ಶಂಖಂ ಸ್ತಾವತ ಏವಚ ||
ಚಂದನಾಗರು ಚಾನಂತಂ ಮುಕ್ತಾವೈದೂರ್ಯ ಚಿತ್ರಿಕಾಂ |
ಚೋಲಶ್ಚ ಕೇರಲಶ್ಚೋಭೌ ದದತುಃ ಪಾಂಡವಾಯ ವೈ ||

ಪುನಃ ಅರಣ್ಯಪರ್ವತದ ರಾಮೋಪಾಖ್ಯಾನದಲ್ಲಿ ಸೀತಾದೇವಿಯನ್ನು ಕಂಡ ಸುವಾರ್ತೆಯನ್ನು ಶ್ರೀರಾಮನಿಗೆ ಹನುಮಂತನು ಅರಿಕೆಮಾಡುವಾಗ ಪ್ರಭಾವತಿಯ ಗುಹೆಯಿಂದ ಕಪಿಗಳು ಈಚೆಗೆ ಬಂದಾಗ ಸಮುದ್ರವನ್ನು ನೋಡುವುದಕ್ಕೆ ಮೊದಲು ದರ್ದುರ, ಮಲಯ ಮೊದಲಾದ ಪರ್ವತಗಳು ಅವರ ದೃಷ್ಟಿಗೆ ಬಿದ್ದುವೆಂದು ತಿಳಿಸುತ್ತಾನೆ.

ಗಿರ್ಯಾಯ ತಸ್ಮಾದುದ್ದೇಶಾತ್ ಪಶ್ಯಾಮ ಲವಣಾಂಭಸಃ |
ಸಮೀಪೇ ಸಹ್ಯಮಲಯೌ **ದರ್ದುರಂ** ಚ ಮಹಾಗಿರಿಮ್ ||
ತತೋ ಮಲಯಮಾರುಹ್ಯ ಪಶ್ಯನ್ತೋ ವರುಣಾಲಯಮ್ |

ಮಾರ್ಕಂಡೇಯ ಪುರಾಣದ ಭಾರತವರ್ಷ ವಿಭಾಗವನ್ನು ಹೇಳುವ ಅಧ್ಯಾಯದಲ್ಲಿ ದರ್ದುರವು ಮುಖ್ಯ ಪರ್ವತಗಳಲ್ಲೊಂದಾಗಿ ಎಣಿಸಲ್ಪಟ್ಟಿದೆ.

ಮಹೇಂದ್ರೋ ಮಲಯಃ ಸಹ್ಯಃ ಶುಕ್ತಿಮಾನೃಷ್ಯ ಪರ್ವತಃ |
ವಿನ್ಧ್ಯಶ್ಚ ಪಾರಿಯಾತ್ರಶ್ಚ ಸಪ್ತೈವಾತ್ರ ಕುಲಾಚಲಾಃ |
ತೇಷಾಂ ಸಹಸ್ರಶಶ್ಚಾನ್ಯೇ ಭೂಧರಾಯೇ ಸಮೀಪಗಾಃ ||
ವಿಸ್ತಾರೋಚ್ಛ್ರಯಿಣೋರಮ್ಯಾ ವಿಪುಲಾಶ್ಚಿತ್ರಸಾನವಃ |
ಕೋಲಾಹಲಃ ಸವೈಭ್ರಾಜೋ ಮನ್ದರೋ ದರ್ದುರಾಚಲಃ ||

ಕಾಳಿದಾಸನು 'ರಘುವಂಶದಲ್ಲಿ' ರಘುಮಹಾರಾಜನ ದಿಗ್ವಿಜಯವನ್ನು ವರ್ಣನೆ ಮಾಡುವಾಗ ದಕ್ಷಿಣ ದಿಕ್ಕಿನಲ್ಲಿದ್ದ ಕೆಲರಾಜ್ಯಗಳನ್ನು ಆ ರಾಜನು ಸ್ವಾಧೀನಪಡಿಸಿಕೊಂಡನೆಂದು ಹೇಳುತ್ತಾ ಮಲಯ ದರ್ದುರ ಪರ್ವತಗಳು ಆ ದಿಗ್ವನಿತೆಯ ಸ್ತನಗಳೋಪಾದಿಯಲ್ಲಿ ಮೆರೆಯುತ್ತಿದ್ದುವೆಂದು ಹೇಳಿದ್ದಾನೆ.

ಸ್ತನಾನೀವದಿಶಸ್ತಸ್ಯಾಃ ಶ್ವೇತಾವಮಲಯು **ದರ್ದುರೌ**

ವರಾಹಮಿಹಿರನ 'ಬೃಹತ್ ಸಂಹಿತೆ'ಯಲ್ಲಿಯೂ ಭರತಖಂಡದ ದಕ್ಷಿಣದೆಸೆಯ ಪರ್ವತಗಳಲ್ಲಿ ದರ್ದುರವು ಉಕ್ತವಾಗಿದೆ:—

ಅಥದಕ್ಷಿಣೇನ ಲಂಕಾ ಕಾಲಿಂಜಿನ ಸೌರಿಕೀರ್ಣ ತಾಲಿಕಟಾಃ |
ಗಿರಿನಗರ ಮಲಯ **ದರ್ದುರ** ಮಹೇಂದ್ರ ಮಾಲಿಂದ್ಯ ಭರುಕಚ್ಛಾಃ ||

ಭಟ್ಟೋತ್ಪಲನು ಈ ಗ್ರಂಥದ ತನ್ನ ವ್ಯಾಖ್ಯಾನದಲ್ಲಿ ಉದ್ಧರಿಸಿರುವ ಪರಾಶರೋಕ್ತವಾದ ದಕ್ಷಿಣ ದಿಗ್ವಿಭಾಗದಲ್ಲಿಯೂ ದರ್ದುರ ಪರ್ವತದ ಹೆಸರು ಕಾಣಬರುತ್ತದೆ—

ಅಥ ದಕ್ಷಿಣಸ್ಯಾಂ ವಿಂಧ್ಯ ಕುಸುಮಾಪೀಡ ದರ್ದುರ ಮಹೇಂದ್ರ |
ಶೂರ್ಪ ವತ್ಸ ಮಲಯ ಮಾಲಿಂದ್ಯ ||

ಮೇಲೆ ಹೇಳಿದ ಎಲ್ಲಾ ಗ್ರಂಥಗಳಿಂದಲೂ ದರ್ದುರ ಪರ್ವತವು ಮಲಯ ಪರ್ವತದಷ್ಟೇ ಮುಖ್ಯವಾದುದೆಂದೂ ಅದರ ಸಮೀಪದಲ್ಲಿಯೇ ಇದ್ದುದೆಂದೂ ಗೊತ್ತಾಗುತ್ತದೆ. ನೀಲಗಿರಿಯೆಂಬ ಹೆಸರಿನಿಂದಲೇ ಈ ಪರ್ವತವು ತಮಿಳು ಶಂಗಂ ಗ್ರಂಥಗಳಲ್ಲೊಂದಾದ 'ಶಿಲಪ್ಪದಿಕಾರಂ'ದಲ್ಲಿ ಉಕ್ತವಾಗಿದೆ; ಚೇರದೇಶದ ಅರಸನಾದ ಶೆಂಗುಟ್ಟವನು ಕಣ್ಣಕಿಯ ಪ್ರತಿಮೆಯನ್ನು ಮಾಡಿಸಲೋಸುಗ ಶಿಲೆಯನ್ನು ತರಲು ಹಿಮವತ್ಪರ್ವತಕ್ಕೆ ಹೋಗುವ ವ್ಯಾಜದಿಂದ ಉತ್ತರ ದಿಗ್ವಿಜಯವನ್ನು ಕೈಕೊಂಡನೆಂದೂ ಆಗ ತನ್ನ ರಾಜಧಾನಿಯಾದ ವಂಚಿಯಿಂದ ಚತುರಂಗ ಬಲದೊಡನೆ ಹೊರಟು ಕೆಲವು ದಿವಸಗಳು ಪ್ರಯಾಣ ಮಾಡಿದ ತರುವಾಯ ನೀಲಗಿರಿಬೆಟ್ಟದ

ತಪ್ಪಲಲ್ಲಿ ಬೀಡನ್ನು ಬಿಟ್ಟನೆಂದೂ ಈ ಗ್ರಂಥದಲ್ಲಿ ಹೇಳಿದೆ. ವಂಚಿಯು ಪಶ್ಚಿಮ ಸಮುದ್ರತೀರದಲ್ಲಿರುವ ಕೊಡುಂಕೊಲೂರ್ (Cranganore) ನ ಒಂದು ಭಾಗವಾದ ತಿರುವಂಚಿಕೊಳಂ ಎಂದು ಹೇಳಬಹುದಾದುದರಿಂದ ಇಲ್ಲಿ ಹೇಳಿರುವ ನೀಲಗಿರಿಯು ನಮ್ಮ ನೀಲಗಿರಿಯೇ ಎಂಬುದರಲ್ಲಿ ಸಂದೇಹವಿಲ್ಲ.

ಮೇಲೆ ಹೇಳಿದ ಅಂಶಗಳನ್ನು ಬಿಟ್ಟರೆ ಸುಮಾರು ಕ್ರಿ.ಶ. ಹತ್ತನೆಯ ಶತಮಾನದ ತನಕ ಸಾಹಿತ್ಯದಲ್ಲಿಯಾಗಲಿ ಶಾಸನಗಳಲ್ಲಿಯಾಗಲಿ ನೀಲಗಿರಿಗೆ ಸಂಬಂಧಪಟ್ಟ ಯಾವ ವಿಷಯವೂ ಗೋಚರವಾಗುವುದಿಲ್ಲ. ಆದರೆ ಬಹು ಪುರಾತನಕಾಲದವುಗಳೆಂದು ಊಹಿಸಲ್ಪಟ್ಟಿರುವ ಕೆಲವು ಅವಶಿಷ್ಟಗಳು ಈ ಪರ್ವತದ ಮೇಲೆ ಸಿಕ್ಕಿವೆ. ಇವುಗಳಲ್ಲಿ ಮುಖ್ಯವಾದವು ಈ ಬೆಟ್ಟದ ಅನೇಕ ಶಿಖರಗಳಲ್ಲಿರುವ ಗೋರಿಯ ಗುಡ್ಡೆಗಳು (Barrows and Cairns). ಇವುಗಳ ತುದಿಯಲ್ಲಿ ಕಲ್ಲುಚಪ್ಪಡಿಗಳ ಗುಂಡಾಗಿರುವ ಪ್ರಾಕಾರದಿಂದ ಇವುಗಳನ್ನು ಸುಲಭವಾಗಿ ಗುರ್ತಿಸಬಹುದು. ಈ ಗುಡ್ಡೆಗಳಲ್ಲಿ ಕೆಲವನ್ನು ಅಗೆದು ನೋಡಿದಾಗ ನಾನಾ ವಿಧವಾದ ಚಿತ್ರಗೆಲಸದ ಮಣ್ಣಿನ ಪಾತ್ರೆಗಳೂ, ದಿನವಹಿ ಮನುಷ್ಯರು ಬಳಸುತ್ತಿದ್ದ ಕೊಡಲಿ ಮೊದಲಾದ ಆಯುಧಗಳೂ ಚಿನ್ನದ ಆಭರಣಗಳೂ ಗಾಜಿನಿಂದಲೂ ನೀಲ ಮೊದಲಾದ ಕಲ್ಲುಗಳಿಂದಲೂ ಮಾಡಿದ ಮಣಿಗಳೂ ಸುಟ್ಟ ಎಲುಬುಗಳೂ ಬೂದಿಯೂ ಸಿಕ್ಕಿವೆ. ಇವುಗಳಲ್ಲಿ ದೊರೆತ ಕೆಲವು ಮಣ್ಣಿನ ಪಾತ್ರೆಗಳ ಆಕಾರವು ಗಮನಾರ್ಹವಾಗಿದೆ. ಅವುಗಳ ತಳವು ಚಪ್ಪಟೆಯಾಗಿಲ್ಲದೆ ನೆಲದಲ್ಲಿ ಹೂಳುವುದಕ್ಕೋ ಅಥವಾ ಸಿಂಬೆಗಳ ಮೇಲೆ ಇಡುವುದಕ್ಕೋ ಆಗುವಂತೆ ಅಂಡಾಕಾರವಾಗಿವೆ. ಇವುಗಳ ಮೇಲಿನ ಮುಚ್ಚಳಗಳು ಗುಮ್ಮಟಾಕಾರವಾಗಿವೆ. ಅವುಗಳ ಮೇಲೆ ಮನುಷ್ಯ, ಹುಲಿ, ಚಿರತೆ, ಆನೆ, ಕುದುರೆ, ಸಾರಂಗ, ಎಮ್ಮೆ, ಕುರಿ ಮೊದಲಾದ ಬೊಂಬೆಗಳಿವೆ. ಕೆಲವು ಎಮ್ಮೆ ಕುರಿಗಳ ಕತ್ತಿಗೆ ಗೆಜ್ಜೆಯೂ ಇದೆ. ಗಂಡು, ಹೆಣ್ಣು ಮನುಷ್ಯ-ಬೊಂಬೆಗಳು ಇವುಗಳನ್ನು ಮಾಡಿದ ಜನಾಂಗದವರ ಉಡುಪು ಹೇಗಿತ್ತೆಂಬುದನ್ನು ತೋರಿಸುತ್ತವೆ. ಆ ಗಂಡಸರೂ ಹೆಂಗಸರೂ ಒಂದು ವಿಧವಾದ ಉದ್ದನೆ ಟೋಪಿಯನ್ನು ಧರಿಸುತ್ತಿದ್ದರು. ಸೊಂಟದಿಂದ ಕೆಳಗೆ ಮಾತ್ರ ಬಟ್ಟೆಯನ್ನು ಉಡುತ್ತಿದ್ದರು. ಹೆಂಗುಸರೂ ಗಂಡಸರೂ ಕತ್ತಿಗೂ ಕೈಗೂ ಸೊಂಟಕ್ಕೂ ಆಭರಣಗಳನ್ನು ಹಾಕಿಕೊಳ್ಳುತ್ತಿದ್ದರು. ಇವರ ಮಣಿಯ ಹಾರಗಳೂ ಚಿನ್ನದ ಒಡವೆಗಳೂ ಬಹಳ ಅಂದವಾಗಿಯೂ ನಾಜೂಕಾಗಿಯೂ ಇವೆ. ಮಣಿಗಳ ಮೇಲೆ ಬಗೆಬಗೆಯಾದ ಚಿತ್ರಗಳು ಕೊರೆಯಲ್ಪಟ್ಟಿವೆ. ಕಂಚಿನ ಪಾತ್ರೆಗಳ ಮೇಲೆ ಸುಂದರವಾದ ಹೂಗಳೂ ಇತರ ಚಿತ್ರಗಳೂ ಇವೆ. ಉಕ್ಕಿನ ಸಾಮಾನುಗಳಲ್ಲಿ ಮುಖ್ಯವಾದ ಕತ್ತಿ, ಕಠಾರಿ, ಬಿಲ್ಲು, ಕೊಡಲಿ, ಕುಡು



ನೀಲಗಿರಿಯಲ್ಲಿ ಸಿಕ್ಕಿದ ಅವಶೇಷಗಳು



ನೀಲಗಿರಿಯಲ್ಲಿ ಸಿಕ್ಕಿದ ಅವಶೇಷಗಳು

ಗೋಲು, ಕ್ಷೌರಕತ್ತಿ, ಚೂರಿ ಮೊದಲಾದವುಗಳೂ, ದೀಪಗಳೂ, ಘಂಟೆಗಳೂ ದೊರೆತಿವೆ. ಕೆಲವು ಗುಡ್ಡೆಗಳಲ್ಲಿ 'ದೀನಾರ' (denariums) ಗಳೆಂದು ಪ್ರಸಿದ್ಧಿವೆತ್ತ ರೋಮನರ ನಾಣ್ಯಗಳೂ ದೊರೆತಿವೆ. ಪಿತೃಗಳನ್ನು ಹೂಳುವಾಗ ನಾಣ್ಯಗಳನ್ನು ಗೋರಿಗಳಲ್ಲಿಡುವುದು ಬಹಳ ಪುರಾತನ ಪದ್ಧತಿ. ಹಿಂದೂ ದೇಶದ ಅನೇಕ ಬೌದ್ಧ ಸ್ತೂಪಗಳಲ್ಲಿಯೂ ಇನ್ನೂ ಪ್ರಾಚೀನವಾದ ಕೆಲವು ಪ್ರದೇಶಗಳಲ್ಲಿಯೂ ನಾಣ್ಯಗಳು ಸಿಕ್ಕಿವೆ. ಆದುದರಿಂದ ಈ ಮೇಲೆ ಹೇಳಿದ ವಸ್ತುಗಳನ್ನು ಉಪಯೋಗಿಸುತ್ತಿದ್ದ ಜನಗಳು ಬಹಳ ನಾಗರಿಕರಾಗಿದ್ದರೆಂದು ಹೇಳಬಹುದು. ಇವರು ನೀಲಗಿರಿಯ ನಿವಾಸಿಗಳಾದ, ಈಗ ಕಾಡುಜನರೆನಿಸಿಕೊಂಡಿರುವ, ತೊದವರ ಪೂರ್ವಜರೇ ಎಂದು ಹೇಳುವುದಕ್ಕೆ ಈ ಪುರಾತನ ವಸ್ತುಗಳಿಂದ ಸಾಕಾದಷ್ಟು ನಿದರ್ಶನವಿಲ್ಲವಾದರೂ ಬ್ರಿಟಿಷರು ನೀಲಗಿರಿಗೆ ಬಂದಾಗ ಈ ಬೆಟ್ಟಕ್ಕೆ ತೊದವರೇ ಅಧಿಪತಿಗಳೆಂದು ಅಂಗೀಕರಿಸಿ ಮನೆಗಳನ್ನು ಕಟ್ಟುವುದಕ್ಕಾಗಿ ನಿವೇಶನಗಳನ್ನು ಉಪಯೋಗಿಸಿಕೊಳ್ಳಲು ಅವರ ಒಪ್ಪಿಗೆಯನ್ನು ಪಡೆದರೆಂದು ತಿಳಿದು ಬಂದಿರುವುದರಿಂದ, ಸ್ವಾತಂತ್ರ್ಯಾಭಿಮಾನಿಗಳಾದ ತೊದವರೇ ಇಲ್ಲಿಯ ಮೂಲನಿವಾಸಿಗಳೆಂದು ಎಣಿಸಬಹುದು. ಆದರೂ ಕ್ರಿ.ಶ. ೧೨ನೆಯ ಶತಮಾನದವರೆಗೂ ಇವರ ವಿಚಾರವೇನೂ ಶಾಸನಗಳಿಂದಲಾಗಲಿ ಇತರ ಯಾವ ಮೂಲಕವಾಗಲಿ ತಿಳಿದುಬಂದಿಲ್ಲ.

ಇನ್ನು ಶಾಸನಗಳಿಂದ[1] ನಮಗೆ ಈ ಬೆಟ್ಟದ ವಿಷಯದಲ್ಲಿ ತಿಳಿದಿರುವ ಸಂಗತಿಗಳನ್ನು ನೋಡೋಣ. ತಲಕಾಡಿನ ಗಂಗಮನೆತನದ ಮೂರನೆಯ ರಾಚಮಲ್ಲನು (ಕ್ರಿ.ಶ. ಸ. ೯೩೮) ಬಯಲ್ನಾಡನ್ನು ಆಳುತ್ತಿದ್ದನೆಂದು ಒಂದು ಶಾಸನವು ಹೇಳುತ್ತದೆ. ಈ ಬಯಲ್ನಾಡು ಈಗ ವೈನಾಡೆಂದು ಕರೆಯಲ್ಪಡುವ ಪ್ರದೇಶ. ಇದರ ಕೆಲಭಾಗವು ಈಗಿನ ಮಲಬಾರ್ ಜಿಲ್ಲೆಯಲ್ಲಿಯೂ ಕೆಲಭಾಗವು ನೀಲಗಿರಿಯಲ್ಲಿಯೂ ಇದೆ. ಮುಂದಕ್ಕೆ ಅಂದರೆ ಸುಮಾರು ೯೫೦ರಿಂದ ೧೨ನೆಯ ಶತಮಾನದ ಪ್ರಾರಂಭದವರೆಗೂ ಕದಂಬ ಮನೆತನದ ವಿಯಮ್ಮರಸ, ಕಂದವಮ್ಮ, ಕಂಠೀರವ, ಇರವಿಚಲ್ಲಮ್ಮ ಎಂಬ ಅರಸರು ಬಯಲ್ನಾಡಿಗೆ ಅಧಿಪತಿಗಳಾಗಿದ್ದರೆಂದು ತಿಳಿದುಬಂದಿದೆ. ನೀಲಗಿರಿಯನ್ನೂ ಅಲ್ಲಿನ ನಿವಾಸಿಗಳಾದ ತೊದವರನ್ನೂ ಕುರಿತು ಕೆಲಸಂಗತಿಗಳನ್ನು ಹೊಯ್ಸಳರಾಜರಲ್ಲಿ ಪ್ರಖ್ಯಾತನಾದ ವಿಷ್ಣುವರ್ಧನನ ಶಾಸನವೊಂದು ಹೇಳಿದೆ.

ಇದರಲ್ಲಿ ಈ ರಾಜನ ಚಮೂಪನಾದ ಪುಣಿಸನನ್ನು ವರ್ಣಿಸುವ ಪದ್ಯವನ್ನು ಇಲ್ಲಿ ಕೊಟ್ಟಿದೆ:—

[1] ಈ ಶಾಸನಗಳಲ್ಲಿ ಕೆಲವು *Epigraphia Carnatica* ದಲ್ಲಿ ಪ್ರಕಟವಾಗಿವೆ. ಉಳಿದವು ಇಂಡಿಯಾ ಸರ್ಕಾರದ ಶಾಸನ ಶಾಖೆಯವರಿಂದ ಪರಿಶೀಲಿಸಲ್ಪಟ್ಟಿವೆ.

ತೊದವನದಿರ್ಪಿ ಕೊಂಗರನಡಂಗಿಸಿ ಪೋಲುವರಂ ಪೊರಳ್ಚಿ ಮಾ
ಣದೆ ಮಲೆಯಾಳರಂ ಮಡಿಪಿ ಕಾಳನೃಪಾಲನ ತೋಳಬಿಂಕಮಂ |
ಬೆದರಿಸಿ ಪೊಕ್ಕು ನೀಳಸಿಳೆಯಂ ಜಯಲಕ್ಷ್ಮಿಗೆ ಕೀರ್ತಿ . . . ಮಾ
ಡಿದ ವಿಭುಬಿಟ್ಟಿದೇವನ ಮಹಾಸಚಿವಂ ಪುಣಿಸಂ ಬಳಾಧಿಕಂ ||
ಅದಟಿಂ ಪೊಯ್ಸಳಭೂಪನೊರ್ಮೆ ಬೆಸ . . . ನೀಲಾದ್ರಿಯಂಕೊಂಡ ತ
ನ್ನೊದವಿಂದಂ ಮಲೆಯಾಳರಂ ಕದನದೊಳ್ಬೆಂಕೊಂಡು ತತ್ಸಾಹಸಾ |
ಭ್ಯುದಯಂ ಕೈಕೊಳೆ ಕೇರಳಾಧಿಪತಿಯಾಗಿದ್ದೇರ್ಗಂ ಬಯಲಾಡನಂ
ಪದಪಿಂ ಕಾಣಿಸಿಕೊಂಡ (?) ನಿನ್ತು ಪುಣಿಸ ಶ್ರೀ ದಂಡನಾಥಾಧಿಪಂ ||

ಈ ಶಾಸನವು ಚಾಮರಾಜನಗರದ ಪಾರ್ಶ್ವನಾಥ ಬಸ್ತಿಯಲ್ಲಿದೆ. ಇದರ ಕಾಲವು ಶಕವರ್ಷ ೧೦೩೯ನೆಯ ದುರ್ಮುಖಿ ಸಂವತ್ಸರದ ಜ್ಯೇಷ್ಠಬಹುಳ ೧ ವ ಮೂಲಾರ್ಕವಾರ (= ೨೮ನೆಯ ಮೇ, ೧೧೧೭). ಇದರಿಂದ ೧೨ನೆಯ ಶತಮಾನದ ಪ್ರಾರಂಭದಲ್ಲಿ ಹೊಯ್ಸಳರು ನೀಲಗಿರಿಯ ಮೇಲೆ ದಾಳಿಯನ್ನು ಮಾಡಿದರೆಂದೂ ಆಗ ತೊದವರೇ ಈ ಪರ್ವತದ ಮೇಲಿನ ಮುಖ್ಯನಿವಾಸಿಗಳಾಗಿದ್ದರೆಂದೂ ಕೊಂಗರೂ ಮಲೆಯಾಳರೂ ಇವರ ನೆರೆಹೊರೆಯವರಾಗಿದ್ದರೆಂದೂ ಕಾಳನೆಂಬರಾಜನು ಹೊಯ್ಸಳರ ಸೈನ್ಯವನ್ನು ಎದುರಿಸಿದನೆಂದೂ ಸ್ಪಷ್ಟವಾಗುತ್ತದೆ. ಸುಮಾರು ೧೧೨೦ರ ಇನ್ನೊಂದು ಶಾಸನದಲ್ಲಿ ವಿಷ್ಣುವರ್ಧನನು ನೀಲಪರ್ವತವನ್ನು ಪಟ್ಟಣವನ್ನಾಗಿ ಮಾಡಿದನೆಂದು ಹೇಳಿದೆ. ಮೇಲಿನ ಪದ್ಯಗಳಲ್ಲಿ ನೀಲಗಿರಿಯು ಹೊಯ್ಸಳರ ಸ್ವಾಧೀನವಾಯಿತೆಂದು ಹೇಳಿದ್ದರೂ ಇನ್ನೂ ಹೊಯ್ಸಳರ ಆಧಿಪತ್ಯವು ಸಂಪೂರ್ತಿಯಾಗಿ ಸ್ಥಾಪಿತವಾಗಲಿಲ್ಲವೆಂದು ತೋರುತ್ತದೆ. ಇದೇ ವಿಷ್ಣುವರ್ಧನನ ಕಾಲದ ದುಂದುಭಿ ಸಂವತ್ಸರದ ಶಾಸನವೊಂದರಲ್ಲಿ "ನಿರುಗುನ್ದನಾಡಾಳ್ವ ಎಡೆನಾಡ ಹಿರಿಯನಾಡ ಬೆಸದಿಂ ನೀಲಗಿರಿಯ ಕೋಟೆಯ ಸಿಖರದ ಮೇಗಣ ಕೂಳ್ಕಲ್ಲಕೊಟೆಗೆ ಹಾಕಿ—ಮುತ್ತಿಕೊಟೆಯ ಸುಟ್ಟು ಕೋಟೆಯ ನಾಯಕನ ಮಗನಂ ಕೊನ್ದು ಮತ್ತಿದಿರಾಂತರಿಬಲಮಂ ಕೂಡಾಡಿಕೊಂದು ರಣಶೂರತೆಯಿಂ ಬಂಟನಾಗಿ ಸ್ವರ್ಗಸ್ತನಾದ"ನೆಂದು ಬರೆದಿದೆ. ಈ ಶಾಸನವು ಚಾಮರಾಜನಗರ ತಾಲ್ಲೂಕಿನ ಬಾಗಳಿಯೆಂಬ ಗ್ರಾಮದಲ್ಲಿದೆ. ಇದರಲ್ಲಿ ಉಕ್ತವಾದ ದುಂಧುಭಿ ಸಂವತ್ಸರವು ಕ್ರಿ.ಶ. ೧೧೪೨ನೆಯ ವರ್ಷಕ್ಕೆ ಹೊಂದುತ್ತದೆ. ನಿರುಗುಂದ ನಾಡಪ್ರಭುವು ಹೊಯ್ಸಳನ ಸಾಮಂತನಾದ್ದರಿಂದ ೧೧೪೨ರ ವರೆಗೂ ನೀಲಗಿರಿಯೆಲ್ಲವೂ ಹೊಯ್ಸಳರ ಕೈವಶವಾಗಿರಲಿಲ್ಲವೆಂದೂ ಆ ವರ್ಷ ಕೂಳಕಲ್ಲ ಕೋಟೆಗೆ ಮುತ್ತಿಗೆ ಹಾಕಬೇಕಾಯಿತೆಂದೂ ತಿಳಿಯುತ್ತದೆ. ಈ ಕೂಳಕಲ್ಲು ಈಗ ಕೋತಗಿರಿಯ ಸಮೀಪದಲ್ಲಿ ಕಿತ್ತಲೇಹಣ್ಣಿಗೆ ಪ್ರಸಿದ್ಧವಾಗಿರುವ ಕೂಕಲೆಂಬ ಗ್ರಾಮ. ಗಜ್ಜಲಹಟ್ಟಿ ಕಣಿವೆಯಿಂದ ನೀಲಗಿರಿಯ ಬೆಟ್ಟದ ಮೇಲೆ ಬರಬೇಕಾದರೆ

ಆಗ ಕೋತಗಿರಿಯ ಮಾರ್ಗವಾಗಿಯೇ ಬರಬೇಕಾಗಿತ್ತೆಂದು ತೋರುತ್ತದೆ. ಕೂಕಲಿನಲ್ಲಿ ಸತ್ತ ನಾಯಕನ ಮಗನು ಬಹುಶಃ ಚಾಮರಾಜನಗರದ ಶಾಸನದಲ್ಲಿ ಹೇಳಿದ ಕಾಳನ ಮಗನಾಗಿರಬೇಕು.

> ತುಳು ದೇಶಂ ಚಿತ್ರಕೂಟಂ ತಳವನ ಪುರವುಚ್ಚಂಗಿ ಕೋಳಾಲವೇಳುಂ
> ಮಲೆವಲ್ಲೂರ್ಕ್ಕಂಚಿ ಕೊಂಗವ್ವಿಸುವ ಹರಿಯಘಟ್ಟಂಬಯಲ್ನಾಡು ನೀಳಂ |
> ಚಳದುರ್ಗಂ ರಾಯ ರಾಯೋತ್ತಮ ಪುರಿತೆರೆಯೂಕ್ಕೋರ್ವತೂಗ್ರೋನ್ದವಾಡಿ
> ಸ್ಥಳವಂ ಭ್ರೂಭಂಗದಿಂ ಕೊಂಡತುಳಭುಜಬಲಾಟೋಪನೀ ವಿಷ್ಣುಭೂಪಂ ||

ಎಂದು ವಿಷ್ಣುವರ್ಧನನ ಶಾಸನಗಳು ಹೇಳುತ್ತಿದ್ದರೂ ಇವನ ಮಗನಾದ ನರಸಿಂಹ (೧೧೪೧-೧೧೭೩)ನ ಆಳಿಕೆಯಲ್ಲಿಯೂ ನೀಲಗಿರಿಗಾಗಿ ಯುದ್ಧ ನಡೆಯುತ್ತಿದ್ದಿತೆಂದು ಊಹಿಸುವುದಕ್ಕೆ ಅವಕಾಶವಿದೆ. ಶಕವರ್ಷ ಸಾವಿರದೆಂಬತ್ತನಾಲ್ಕನೆಯ ಚಿತ್ರಭಾನು ಸಂವತ್ಸರದ (=ಕ್ರಿ.ಶ. ೧೧೬೨) ನರಸಿಂಹನ ಶಾಸನವೊಂದರಲ್ಲಿ ಈ ರಾಜನ ದಂಡಾಧಿಪನಾದ ಬಿಟ್ಟಿಗನು

> ನೀಲಾಚಲಮಂ ಸಾಧಿಸಿ ಕಾಳನ ತಲೆಗೊಂಡನಿರದೆ ಕೊಂಗರಪಡೆಯಂ |
> ಧೂಳಿಪಟಮಾಡಿ ಕಾದಿಸಿದ ಕಾಳಾನ್ತಕನಲುತೆ ವಿಷ್ಣುದಂಡಾಧೀಶಂ ||

ಎಂದು ಹೊಗಳಲ್ಪಟ್ಟಿದ್ದಾನೆ. ಈ ಪದ್ಯದಲ್ಲಿ ನಿರ್ದಿಷ್ಟನಾದ ಕಾಳನು ವಿಷ್ಣುವರ್ಧನನ ದಂಡನ್ನು ಎದುರಿಸಿ ಹೋರಾಡಿದ ಕಾಳನೇ ಎಂದು ಹೇಳಿದರೆ ತಪ್ಪಾಗಲಾರದು. ಈ ಕಾಳನು ಯಾವ ಮನೆತನಕ್ಕೆ ಸೇರಿದವನೆಂದಾಗಲಿ ನೀಲಗಿರಿ ಬೆಟ್ಟದ ಮೇಲೆ ಆ ಕಾಲದಲ್ಲಿ ನೆಲಸಿದ್ದ ಯಾವ ಪಂಗಡಕ್ಕೆ ಸೇರಿದವನೆಂದಾಗಲಿ ಹೇಳುವುದಕ್ಕೆ ಆಧಾರಗಳಿಲ್ಲ. ಆದರೆ ಕಾಳ ಎಂಬ ಹೆಸರು ಈ ಪರ್ವತದ ಮೇಲೆ ಬಹುಕಾಲದಿಂದಲೂ ವಾಸಮಾಡುತ್ತಿರವ ಬಡಗರಲ್ಲಿ ಈಗಲೂ ಇದೆ. ಇವನು ಬಡಗನಾಗಿರಬಹುದೆ? ಹಾಗಿದ್ದರೆ ೧೨ನೆಯ ಶತಮಾನಕ್ಕೆ ಮುಂಚೆಯೇ ಬಡಗರು ಈ ಪರ್ವತವನ್ನು ತಮ್ಮ ವಾಸಸ್ಥಾನವಾಗಿ ಮಾಡಿಕೊಂಡಿದ್ದರೆಂತಲೂ ಇವರೂ ಇಲ್ಲಿಯ ಮೂಲನಿವಾಸಿಗಳಾದ ತೊದವರೂ ಸೌಹಾರ್ದದಿಂದಿದ್ದರೆಂತಲೂ ತೊದವರು ಹೊಯ್ಸಳರೊಡನೆ ಕಾದಲು ಸಾಧ್ಯವಾಗದೆ ಬಡಗರ ಅರಸನಾದ ಕಾಳನ ಸಹಾಯವನ್ನು ಬೇಡಿದರೆಂದೂ ತಿಳಿಯಬೇಕಾಗುತ್ತದೆ. ಅಥವಾ ಕಾಳ ಎಂಬ ಹೆಸರು ಈಗ ತೊದವರಲ್ಲಿ ಕಂಡು ಬರುವುದಿಲ್ಲವಾದರೂ ಆಗ ಇದ್ದಿರಬಹುದೆಂದು ಭಾವಿಸಿದರೆ ಅವರ ದೊರೆಯೇ ಕಾಳನಾಗಿದ್ದನೆನ್ನಬೇಕಾಗುತ್ತದೆ. ಅಂದರೆ ಅವರಿಗೆ ಒಬ್ಬ ರಾಜನೂ ಒಂದು ರಾಜ್ಯಭಾರ ಕ್ರಮವೂ ಇರುವಷ್ಟು ನಾಗರಿಕರು ಅವರಾಗಿದ್ದರೆಂದಂತಾಯಿತು. ಹಾಗಾದ ಪಕ್ಷದಲ್ಲಿ ಬಡಗರು ನೀಲಗಿರಿಗೆ ಬಡಗದಿಕ್ಕಿನಲ್ಲಿರುವ ಮೈಸೂರು ಪ್ರಾಂತದಿಂದ

ಹೊಯ್ಸಳ ಸೈನ್ಯದೊಂದಿಗೆ ಬಂದು ಈ ಬೆಟ್ಟದ ಮೇಲೆ ನೆಲಸಿದವರಾಗಿರಬಹುದು. ಅಂತೂ ಹೊಯ್ಸಳರು ಬಲಿಷ್ಠರಾದುದರಿಂದ ಬಿಟ್ಟಿಗನು ಕಾಳನನ್ನು ಕೊಂದು ನೀಲಾಚಲವನ್ನು ಸಾಧಿಸಿದನು. ಈ ಯುದ್ಧದಲ್ಲಿ ಕೊಂಗರು ನೀಲಗಿರಿಯ ನಿವಾಸಿಗಳಾದ ತೊದವರೊಂದಿಗೆ ಕಾದಿ ಸೋತರು. ಇವತ್ತಿಗೂ ಕೊಯಮುತ್ತೂರು ಸೇಲಂ ಜಿಲ್ಲೆಯ ಜನಗಳಿಗೆ ಕೊಂಗರೆಂಬ ಹೆಸರಿದೆ. ನೀಲಗಿರಿ ಜಿಲ್ಲೆಯ ಈಶಾನ್ಯ ದಿಕ್ಕಿನಲ್ಲಿ ಕೊಯಮುತ್ತೂರು ಜಿಲ್ಲೆಯೂ ಮತ್ತು ಮೈಸೂರು ಜಿಲ್ಲೆಗಳ ಎಲ್ಲೆಗಳೂ ಕೂಡುತ್ತವೆ. ಹೊಯ್ಸಳರ ಪಡೆಯು ಬೆಟ್ಟದ ಮೇಲೆ ದಂಡೆತ್ತಿ ಬಂದಾಗ ಬೆಟ್ಟದ ಬುಡದಲ್ಲಿಯೇ ಕೊಂಗರು ಅವರನ್ನು ಪ್ರತಿಭಟಿಸಿರಬೇಕು.

ಮುಂದಿನ ಹೊಯ್ಸಳ ರಾಜರ ಆಳಿಕೆಯಲ್ಲಿ ನೀಲಗಿರಿಯ ಚರಿತ್ರೆಯನ್ನು ಹೇಳುವುದಕ್ಕೆ ಮುಂಚೆ ವಿಶಿಷ್ಟಾದ್ವೈತಮತೋದ್ಧಾರಕರಾದ ರಾಮಾನುಜಾಚಾರ್ಯರು ಈ ಬೆಟ್ಟಕ್ಕೆ ಬಂದಿದ್ದರೆಂಬ ಕೆಲರ ಅಭಿಪ್ರಾಯವನ್ನು ಕುರಿತು ಒಂದು ಮಾತನ್ನು ಹೇಳಬೇಕಾಗಿದೆ. ಆಗಿದ್ದ ಚೋಳರಾಜನ ಬಾಧೆಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಆಚಾರ್ಯರು ಶ್ರೀರಂಗದಿಂದ ಮೇಲುಕೋಟೆಗೆ ಹೋದರೆಂಬುದು ಎಲ್ಲರಿಗೂ ತಿಳಿದ ವಿಷಯವೇ. ಅವರು ತಲೆತಪ್ಪಿಸಿಕೊಂಡು ಹೋಗುತ್ತಿರುವಾಗ ಒಂದು ದಿನ ದೊಡ್ಡ ಮಳೆಗೆ ಸಿಕ್ಕಿದರೆಂದೂ, ಆಗ ಬೆಟ್ಟದ ಬುಡದಲ್ಲಿ ಒಬ್ಬ ಬೇಡನ ಗುಡಿಸಿಲಿನಲ್ಲಿ ಅವರು ತಂಗಿದ್ದರೆಂದೂ, ಆ ಬೇಡನು ವೈಷ್ಣವನಾದ್ದರಿಂದ ಅವನು ಅವರನ್ನು ಆದರದಿಂದ ಬರಮಾಡಿಕೊಂಡು ಸತ್ಕಾರಗಳನ್ನು ನಡೆಸಿದನೆಂದೂ, ತಮಿಳು ಸಂಸ್ಕೃತ ಭಾಷೆಗಳಲ್ಲಿರುವ ಆಚಾರ್ಯರ ಜೀವನ ಚರಿತ್ರೆಗಳಲ್ಲಿ ಹೇಳಿದೆ. ಹೊಯ್ಸಳ ೧ನೆಯ ನರಸಿಂಹನ ಮಗನಾದ ಎರಡನೆಯ ಬಲ್ಲಾಳನಿಗೆ (ಕ್ರಿ.ಶ. ೧೧೭೩-೧೨೨೦) ನೀಲಗಿರಿ ಪುರವರಾಧೀಶ್ವರನೆಂಬ ಬಿರುದು ಇದ್ದಿತು. ಆದ್ದರಿಂದ ಇವನ ಕಾಲದಲ್ಲಿ ನೀಲಗಿರಿಯಲ್ಲಿ ಇವರ ಆಧಿಪತ್ಯವು ನಿರಾತಂಕವಾಗಿ ಇದ್ದಿತೆಂದು ಹೇಳಬಹುದು. ಇವನ ತರುವಾಯ ಆಳಿದ ಇಬ್ಬರು ರಾಜರ ಕಾಲದ, ಅಂದರೆ ಮೂರನೆಯ ನರಸಿಂಹನ ರಾಜ್ಯದ ವರೆಗಿನ ಶಾಸನಗಳಲ್ಲಿ ನೀಲಗಿರಿಯ ಪ್ರಸ್ತಾವವು ಕಂಡುಬರುವುದಿಲ್ಲವಾದುದರಿಂದ ಹೊಯ್ಸಳರ ಪ್ರಭುತ್ವವು ಅಲ್ಲಿ ಯಾವ ತೊಂದರೆಯೂ ಇಲ್ಲದೆ ನೆಲೆಗೊಂಡಿದ್ದಿತೆಂದು ಊಹಿಸಬಹುದು. ಗೂಡಲೂರಿಗೆ ಅನತಿದೂರದಲ್ಲಿರುವ ತೆರಕಣಾಂಬಿ ರಾಜಧಾನಿಯಿಂದ ಪದಿನಾಲ್ಕು ನಾಡಿನ ಪ್ರಭುವು ಈ ಬೆಟ್ಟದ ಮೇಲೆ ಅಧಿಕಾರವನ್ನು ನಡೆಸುತ್ತಿದ್ದಿರಬೇಕು. ಮೂರನೆಯ ಬಲ್ಲಾಳನ ದಂಡನಾಯಕನಾದ ಮಾಧವ ದಂಡನಾಯಕನು ಕ್ರಿ.ಶ. ೧೩೧೮ರಲ್ಲಿ ಈ ಪ್ರಾಂತಕ್ಕೆ ಅಧಿಪತಿಯಾಗಿದ್ದನು. ಇವನ ತಂದೆಯಾದ ಪೆರುಮಾಳೆ ದೇವದಂಡನಾಯಕನಿಗೂ, ಇವನಿಗೂ

ನೀಲಗಿರಿ ಸಾಧಾರ ಎಂಬ ಬಿರುದು ಇದ್ದಿತೆಂದು ಅನೇಕ ಶಾಸನಗಳಿಂದ ತಿಳಿದು ಬಂದಿದೆ. ಈ ಪೆರುಮಾಳೆ ದಂಡನಾಯಕನೇ ಕೊಯಮುತ್ತೂರು ಜಿಲ್ಲೆಗೆ ಸೇರಿದ ಸತ್ಯಮಂಗಲದಿಂದ ೧೨ ಮೈಲಿ ದೂರದಲ್ಲಿ ನೀಲಗಿರಿಯ ಬೆಟ್ಟದ ಬುಡದಲ್ಲಿ ಇರುವ ದಣಾಯಕನ ಕೋಟೆ ಎಂಬ ಗ್ರಾಮವನ್ನು ಸ್ಥಾಪಿಸಿದವನು. ಈ ಊರಿನಲ್ಲಿರುವ ಕೋಟೆಗೆ ನೀಲಗಿರಿ ಸಾದಾರನ್ ಕೋಟ್ಟೈ ಎಂಬ ಹೆಸರು ಈ ಊರಿನಲ್ಲಿರುವ ವಿಷ್ಣು ದೇವಸ್ಥಾನಕ್ಕೆ ನೀಲಾಚಲಾಧಿಪ ಗ್ರಾಮನಾಥ ಮಾಧವ ಎಂಬ ಹೆಸರೂ ಇಲ್ಲಿಯ ತಮಿಳು ಶಾಸನಗಳಲ್ಲಿ ಕಂಡುಬರುತ್ತವೆ. 'ನೀಲಗಿರಿ ಸಾಧಾರ', ಕೊಂಗರಮಾರಿ, 'ಕೊಂಗರ ದಿಶಾಪಟ್ಟ' ಎಂಬ ಬಿರುದುಗಳು ಈ ಮನೆತನದ ಮಾಧವದಂಡನಾಯಕ, ಕೇತಯ ದಂಡನಾಯಕ, ಸಿಂಗಯ ದಂಡನಾಯಕರಿಗೆ ಇದ್ದುವು. ಇವರ ಬಿರುದುಗಳಲ್ಲಿ ಇವು ಬಹು ಮುಖ್ಯವಾದುವೆಂದು ಕಾಣುತ್ತವೆ. ಇಷ್ಟು ಹೆಮ್ಮೆಯಿಂದ ಈ ಬಿರುದುಗಳನ್ನು ಹೇಳಿಕೊಳ್ಳಬೇಕಾದರೆ ಪೆರುಮಾಳದಂಡನಾಯಕನ ಕಾಲದಲ್ಲಿ ಅದುವರೆಗೆ ಶಾಂತವಾಗಿದ್ದ ನೀಲಗಿರಿಯ ನಿವಾಸಿಗಳು ದಂಗೆ ಎಬ್ಬಿಸಿರಬೇಕೆಂದೂ ಕೊಂಗರನ್ನು ಚೆದರಿಸಿ ಅವರ ನಾಯಕರನ್ನು ಕೊಂದು ಪುನಃ ನೀಲಗಿರಿಯನ್ನು ಅವನು ಸ್ವಾಧೀನಪಡಿಸಿಕೊಂಡನೆಂದೂ ಹೇಳಬಹುದು. ಈ ಮನೆತನದವರಲ್ಲದೆ ಇನ್ನೂ ಕೆಲವರಿಗೆ ಈ ಬಿರುದು ಇದ್ದಂತೆ ಶಾಸನಗಳಿಂದ ತಿಳಿದುಬರುವುದರಿಂದ ನೀಲಗಿರಿಯನ್ನು ಸಾಧಿಸಿ ಪುನಃ ಅದನ್ನು ಹೊಯ್ಸಳರಾಜ್ಯಕ್ಕೆ ಸೇರಿಸುವುದರಲ್ಲಿ ಇವರೆಲ್ಲರೂ ಪೆರುಮಾಳೆ ದಂಡನಾಯಕನಿಗೆ ಸಹಾಯಕರಾಗಿ ಈ ವಿಜಯದಲ್ಲಿ ಭಾಗ ವಹಿಸಿದ್ದರೆಂದು ಹೇಳಬಹುದು. ಶಕ ೧೧೯೮ (ಕ್ರಿ.ಶ. ೧೨೭೭)ರಲ್ಲಿ ಹುಟ್ಟಿದ ಶಾಸನವೊಂದು ಮಾಚಿದೇವನಿಗೆ ನೀಲಗಿರಿಸಾಧಾರನೆಂಬ ಬಿರುದನ್ನು ಕೊಟ್ಟಿದೆ. ಈ ಶಾಸನವು ಹೆಗ್ಗಡದೇವನಕೋಟೆಯ ತಾಲ್ಲೂಕಿನ ಮಲಿಯೂರಿನಲ್ಲಿದೆ. ಕೊಯಮುತ್ತೂರು ಜಿಲ್ಲೆಯಲ್ಲಿರುವ ಕೊಳುಮಂ ಅಥವಾ ಸಂಗ್ರಾಮನಲ್ಲೂರೆಂಬ ಗ್ರಾಮದಲ್ಲಿರುವ ಕ್ರಿ.ಶ. ಸು. ೧೩೪೨ರ ಒಂದು ಶಾಸನದಲ್ಲಿ ಮಾಧವದಂಡನಾಯಕನ ಮಗನಾದ ಕೇತಯದಂಡನಾಯಕನು ತನ್ನ ಸಿಂಗಯ ದಂಡನಾಯಕನ ವಿಜಯಾಭ್ಯುದಯಕ್ಕಾಗಿ ಒಟ್ಟೈಕ್ಕುಮಿಂಡಾನ್ ಅಥವಾ ಒಟ್ಟೈಮಿಂಡಾನ್ ಎಂಬ ಗ್ರಾಮದಲ್ಲಿ ಸ್ವಲ್ಪ ಭೂಮಿಯನ್ನು ಮಾಧವ ಚತುರ್ವೇದಿಮಂಗಲದ ಮಹಾಜನರಿಗೆ ದಾನ ಮಾಡಿದನೆಂದು ಹೇಳಿದೆ. ಇದರಿಂದ ನೀಲಗಿರಿಸಾಧಕರೆನಿಸಿಕೊಂಡ ದಣಾಯಕನ ಕೋಟೆಯ ನಾಯಕರ ವಂಶದ ಕೇತಯನ ಆಧಿಪತ್ಯಕ್ಕೆ ಈ ಒಟ್ಟೈಕ್ಕುಮಿಂಡಾನ್ ಗ್ರಾಮವು ಒಳಪಟ್ಟಿದ್ದಿತ್ತೆಂದು ಹೇಳಬಹುದು. ಆದುದರಿಂದ ಒಟ್ಟೈಕ್ಕುಮಿಂಡಾನ್ ಎಂದರೆ 'ಒಟ್ಟೆಯಪೀರ'ನೆಂಬ ಬಿರುದು ಕೇತಯನಿಗೋ, ಅವನ ಪೂರ್ವಿಕರಿಗೋ

ಇದ್ದಿತೆಂದು ಹೇಳುವುದಕ್ಕೆ ಅವಕಾಶವಿದೆ. ಈ ಬಿರುದಿಗೂ ನೀಲಗಿರಿಯ ಮುಖ್ಯ ಪಟ್ಟಣದ ಹೆಸರಾದ (ಇಂಗ್ಲಿಷ್‌ನಲ್ಲಿ) 'ಉಟಕಮಂಡ್'ಗೂ ಬಹಳ ಹೋಲಿಕೆ ಇದೆ. ಆದುದರಿಂದ ಈ ಇಂಗ್ಲೀಷ್ ಹೆಸರಿನ ಮೂಲವು ಒಟ್ಟೈಕುಮಿಂಡಾನ್ ಎಂಬ ಕೇತಯನ ಬಿರುದೇ ಆಗಿರಬಹುದೆಂದು ಕೀರ್ತಿಶೇಷರಾದ ರಾವ್‌ಬಹದ್ದೂರ್ ಹೊಸಕೋಟೆ ಕೃಷ್ಣಶಾಸ್ತ್ರಿಗಳು ಅಭಿಪ್ರಾಯಪಟ್ಟಿದ್ದಾರೆ. ಈಗಲೂ 'ಉಟಕ ಮಂಡ'ನ್ನು ತಮಿಳು ಜನಗಳು 'ಒತ್ತೈ' ಎಂದೂ ಬಡಗರು 'ಹೊತ್ತಕಮಂಡ್' ಎಂದೂ ಅನ್ನುತ್ತಾರೆ. ಈ ಕೇತಯನ ಹೆಸರನ್ನೇ ಉಟಕಮಂಡಿನ ಸಮೀಪದಲ್ಲಿರುವ ಕೇತ್ತಿ ಎಂಬ ಊರಿಗೆ ಕೊಟ್ಟಿರಬಹುದು.

ಹೀಗೆ ಹೊಯ್ಸಳ ರಾಜ್ಯಾರಂಭವಾದಾಗಿನಿಂದ ಅವರ ಅಳಿಗಾಲದ ವರೆಗೂ ನೀಲಗಿರಿಯು ಅವರ ರಾಜ್ಯಕ್ಕೆ ಸೇರಿತ್ತು. ಇವರ ತರುವಾಯ ಆಳಿದ ವಿಜಯ ನಗರದ ಅರಸರ ಕಾಲದಲ್ಲಿಯೂ ಅವರ ಅಧೀನದಲ್ಲಿಯೇ ಇದ್ದಿರಬೇಕೆಂದು ತೋರು ತ್ತದೆ. ಹರದನಹಳ್ಳಿಯ ಒಂದು ಶಾಸನದಲ್ಲಿ ಬುಕ್ಕಣೊಡೆಯರು ಪೃಥಿವೀರಾಜ್ಯವ ಮಾಡುವ ಕಾಲದಲ್ಲೂ, ಅವರ ಕೈಕೆಳಗಿನ ಅಧಿಕಾರಿಯೊಬ್ಬನು ಕಾವೇರಿಯ ದಕ್ಷಿಣ ಭಾಗದ ಅಧಿಕಾರ ಮಾಡುತ್ತಿದ್ದನೆಂದು ಹೇಳಿದೆ. ಗೂಡಲೂರು ಸಮೀಪದಲ್ಲಿರುವ ಬುಕ್ಕಾಪುರವೆಂಬ ಗ್ರಾಮವು ಬುಕ್ಕರಾಯನೆಂಬ ಹೆಸರಿನ ವಂಶದ ಅರಸರಲ್ಲಿ ಒಬ್ಬ ರಿಂದ ಸ್ಥಾಪಿಸಲ್ಪಟ್ಟಿರಬೇಕು. ಕ್ರಿ.ಶ. ೧೪೨೪ರ ಒಂದು ಶಾಸನದಲ್ಲಿ ೩ನೆಯ ಬುಕ್ಕರಾಯನು ರಾಜ್ಯವಾಳುತ್ತಿದ್ದಾಗ ಅವರ ಮಹಾ ಪ್ರಧಾನ ಬಯಿಚೆಯ ದಂಡನಾಥನ ಪಾದಪದ್ಮೋಪಜೀವಿಯಾದ ಬಯಿನಾಡ ಮಹಾಪ್ರಭು ಮಸನೆಯ ಹಳ್ಳಿಯ ಕೆಂಪಗೌಡರು ಒಂದು ಗ್ರಾಮವನ್ನು ದಾನಮಾಡಿದಂತೆ ಹೇಳಿದೆ. ಈ ಬಯಿನಾಡು ಬಯಲನಾಡಿನ ರೂಪಾಂತರವೆಂದು ತೋರುತ್ತದೆ. ಕ್ರಿ.ಶ. ೧೪೨೫ ರಲ್ಲಿ ತೆರಕಣಾಂಬಿ ರಾಜ್ಯವು ವಿಜಯರಾಯ ಮಹಾರಾಯನ ಮಗನಾದ ವೀರ ಪರ್ವತರಾಯ ಒಡೆಯನು ತೆರಕಣಾಂಬಿ ರಾಜ್ಯವನ್ನು ಆಳುತ್ತಿದ್ದನೆಂದು ಹೇಳುವ ಶಾಸನಗಳಿವೆ. ಈ ಪರ್ವತರಾಯ ಒಡೆಯನು ಸಂಗಮವಂಶದ ಎರಡನೆಯ ದೇವ ರಾಯನ ಸಹೋದರನು. ಇದೇ ತೆರಕಣಾಂಬಿ ಸೀಮೆಯು ಸು. ಕ್ರಿ.ಶ. ೧೫೧೩ ರಲ್ಲಿ ಸಾಳುವ ಗೋವಿಂದರಾಜನ ಅಧೀನದಲ್ಲಿತ್ತು. ಕ್ರಿ.ಶ. ೧೫೨೭ನೆಯ ವರ್ಷದ ಕೃಷ್ಣದೇವರಾಯನ ಶಾಸನವೊಂದರಲ್ಲಿ ಬಯನಾಡು, ಮಸಣಿಹಳ್ಳಿ, ದೇವರಾಯ ಪುರ ಇವುಗಳು ಉಕ್ತವಾಗಿವೆ. ಇವುಗಳಲ್ಲಿ ಮಸಣಿಹಳ್ಳಿಯು ಮೈಸೂರಿನಿಂದ ನೀಲಗಿರಿಗೆ ಬರುವ ದಾರಿಯಲ್ಲಿರುವ ಮಸಣಿ ಗುಡಿಯೆಂದೂ, ದೇವರಾಯಪುರವು ಅದರ ಸಮೀಪದಲ್ಲಿರುವ ದೇವರಾಯ ಪಟ್ಟಣವೆಂದೂ ಹೇಳಬಹುದು. ವಿಜಯ

ನಗರದ ಅರಸರಲ್ಲೊಬ್ಬನ ಹೆಸರನ್ನೇ ದೇವರಾಯಪುರಕ್ಕೆ ಇಟ್ಟಿರಬೇಕೆಂದು ಹೇಳಬಹುದು. ಈ ದೇವರಾಯ ಪಟ್ಟಣದ ಹೆಸರೇ ಬೆಟ್ಟದ ಮೇಲಕ್ಕೆ ಬರುವ ದಾರಿಗೆ. ಮೊದಮೊದಲು ಇಲ್ಲಿಗೆ ಬಂದ ಐರೋಪ್ಯರು ದೇವರಾಯ ಪಟ್ಟಣದ ಕಣಿವೆಯ ಮಾರ್ಗವೆಂದು ಹೆಸರಿಟ್ಟರು. ಹೊಯ್ಸಳರಾಜರ ಪ್ರಧಾನನಾಗಿದ್ದ ಪೆರುಮಾಳೆ ದಂಡನಾಯಕನ ವಂಶಸ್ಥರಾದ ಕೋಟೆಯ ಸೀಮೆ ಒಡೆಯರೂ, ನೀಲಗಿರಿ ಸಾಧಾರ ಕೊಡೆಯ ನೀಲಗಿರಿ ನಾಡಾಳ್ವ, ನೀಲಗಿರಿ ಉದ್ಧರಣ ಎಂಬ ಬಿರುದುಗಳನ್ನು ಧರಿಸಿದ್ದುದರಿಂದ ಇವರೇ ವಿಜಯನಗರದ ಅರಸರ ಕಾಲದಲ್ಲಿ ನೀಲಗಿರಿಯ ಮೇಲಿನ ಅಧಿಕಾರವನ್ನು ನಡೆಸುತ್ತಿದ್ದರೆಂದು ಹೇಳಬಹುದು. ಈ ಕೋಟೆಯು ಗುಂಡ್ಲುಪೇಟೆ ತಾಲ್ಲೂಕಿನಲ್ಲಿರುವ ಗೋಪಾಲಸ್ವಾಮಿ ಬೆಟ್ಟದ ಮೇಲಿನ ಬೆಟ್ಟದ ಕೋಟೆಯೆಂದೂ ರೈಸ್ ಸಾಹೇಬರು ಹೇಳಿದ್ದಾರೆ. ಇದರ ತರುವಾಯ ಉಮ್ಮತ್ತೂರಿನ ಒಡೆಯರಿಗೆ ನೀಲಗಿರಿಯು ಸೇರಿತ್ತೆಂದು ಹೇಳುವುದಕ್ಕೆ ಅವಕಾಶವಿದೆ. ಈ ಮನೆತನಕ್ಕೆ ಸೇರಿದ ವೀರನಂಜರಾಜ ಒಡೆಯರ ಕ್ರಿ.ಶ. ೧೪೯೪ರ ಶಾಸನವೊಂದು ದಣಾಯಕನ ಕೋಟೆಯಲ್ಲಿ ಸಿಕ್ಕಿದೆ. ಈ ಕಾಲದಲ್ಲಿ ವಿಜಯನಗರದಲ್ಲಿ ಸಾಳುವರು ಆಳುತ್ತಿದ್ದರು. ಆದರೆ ಅವರು ಈಗ ಬಲಹೀನರಾಗಿದ್ದರು. ಅವರ ಪ್ರಧಾನನಾದ ತುಳುವ ವಂಶದ ನರಸಣ ನಾಯಕನು ವಿಜಯನಗರದ ಸಿಂಹಾಸನವನ್ನು ಆಕ್ರಮಿಸುವುದರಲ್ಲಿದ್ದನು. ಈ ಸಂದರ್ಭದಲ್ಲಿ ಉಮ್ಮತ್ತೂರಿನ ಅರಸರು ಸ್ವತಂತ್ರರಾಗಲು ಪ್ರಯತ್ನಮಾಡಿದರು. ಆದರೆ ಇವರು ಬಹಳಕಾಲ ಸ್ವತಂತ್ರರಾಗಿರಲು ಸಾಧ್ಯವಾಗಲಿಲ್ಲ. ಸುಮಾರು ೧೫೧೦ ರಲ್ಲಿ ಸಾರ್ವಭೌಮನಾದ ಕೃಷ್ಣದೇವರಾಯನು ಇವರನ್ನು ಮುರಿಬಡೆದು ತನ್ನ ಅಧೀನರನ್ನಾಗಿ ಮಾಡಿದನು. ಈ ಬೆಟ್ಟದ ಮೇಲಿರುವ ಮಳೇಕೋಟೆಯಲ್ಲಿ ಈ ಮನೆತನದ ಅರಸರು ಇರುತ್ತಿದ್ದರೆಂದು ಹೇಳುತ್ತಾರೆ. ಇದರ ಸಮೀಪದಲ್ಲಿ ಇವರು ಕಟ್ಟಿದರೆಂದು ಹೇಳಲ್ಪಡುವ ಅವಶೇಷಗಳನ್ನು ಈಗಲೂ ಕಾಣಬಹುದು. ಕುನೂರಿನ ಸಮೀಪದಲ್ಲಿರುವ ಹುಲಿಕಲ್ಲು ದುರ್ಗವೂ, ಕೋತಗಿರಿಯಿಂದ ಸುಮಾರು ೪-೫ ಮೈಲಿ ದೂರದಲ್ಲಿರುವ ಉದಯರಾಯನ ಕೋಟೆಯೂ ಇವರಿಂದ ನಿರ್ಮಿತವಾದವುಗಳೇ. ನೆಲ್ಲಿಯಾಳವೆಂಬ ಇನ್ನೊಂದು ಗ್ರಾಮದಲ್ಲಿ ಇವರ ವಂಶದವರು ಈಗಲೂ ಇದ್ದಾರೆ. ಅವರು ಕನ್ನಡವನ್ನೇ ಮಾತನಾಡುತ್ತಾರೆ.

ತಾಳೀಕೋಟೆಯ ಯುದ್ಧಾನಂತರ ವಿಜಯನಗರ ಸಾಮ್ರಾಜ್ಯವು ಹೀನಸ್ಥಿತಿಗೆ ಬಂದು ವಿಜಯನಗರದ ರಾಜರ ಕೈಕೆಳಗಿನ ಸಣ್ಣ ಪುಟ್ಟ ಅರಸರು ಪ್ರಬಲರಾದರು. ಕ್ರಿ.ಶ. ೧೬೧೦ರಲ್ಲಿ ಮೈಸೂರು ದೊರೆಗಳು ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರದ ರಾಜಪ್ರತಿನಿಧಿಯನ್ನು ಓಡಿಸಿ ಶ್ರೀರಂಗಪಟ್ಟಣವನ್ನು ಸ್ವಾಧೀನಪಡಿಸಿಕೊಂಡರು.

ಉಮ್ಮತ್ತೂರು ಒಡೆಯರ ಮೇಲೆ ಇವರಿಗೆ ಹಗೆಯಿದ್ದುದರಿಂದ ಮೈಸೂರಿನ ರಾಜ ಒಡೆಯನು ಉಮ್ಮತ್ತೂರನ್ನು ಸುಮಾರು ೧೬೧೩ರಲ್ಲಿ ಅವರಿಂದ ಕಿತ್ತುಕೊಂಡನು. ಇಲ್ಲಿಂದ ಮುಂದಕ್ಕೆ ಉಮ್ಮತ್ತೂರು ಅರಸರು ಮೈಸೂರು ರಾಜರ ಅಧೀನರಾಗಿಯೇ ನೀಲಗಿರಿಯ ಆಡಳಿತವನ್ನು ನಡೆಸುತ್ತಿದ್ದರು.

ಇಲ್ಲಿಂದ ಮುಂದಕ್ಕೆ ಶಾಸನಗಳಿಂದ ನಮಗೆ ಈ ಬೆಟ್ಟಕ್ಕೆ ಸಂಬಂಧಪಟ್ಟ ಸಂಗತಿಗಳೇನೂ ತಿಳಿದಿಲ್ಲ. ಆದರೂ ಈ ಉಮ್ಮತ್ತೂರು ಅರಸರನ್ನು ಕುರಿತು ಕೆಲವು ಐತಿಹ್ಯಗಳನ್ನು ಬಡಗರು ಹೇಳುತ್ತಾರೆ. ಯಾವುದೋ ಒಂದು ಕಾಲದಲ್ಲಿ ಈ ಮನೆತನದ ಇಬ್ಬರು ಅಣ್ಣತಮ್ಮಂದಿರು ಉಟಕಮಂಡಿಗೆ ಸುಮಾರು ೧೦ ಮೈಲಿ ದೂರ ದೂರದಲ್ಲಿರುವ ಮಲೆಕೋಟೆಯಲ್ಲಿ ನೆಲೆಸಿದರಂತೆ. ಯಾವಾಗ ಇವರು ಇಲ್ಲಿಗೆ ಬಂದರೆಂಬುದು ಗೊತ್ತಿಲ್ಲದೆ ಹೋದರೂ ಉಮ್ಮತ್ತೂರು ರಾಜ್ಯವು ಮೈಸೂರು ಅರಸರ ವಶವಾದ ಮೇಲೆ ಉಮ್ಮತ್ತೂರಿನ ಒಡೆಯರು ಬಹಳ ಕಾಲದಿಂದಲೂ ಅವರಿಗೆ ಸೇರಿದ್ದ ನೀಲಗಿರಿಯ ಬೆಟ್ಟದ ಮೇಲೆ ಮಲೆಕೋಟೆಯನ್ನೇ ನೆಲೆವೀಡಾಗಿ ಮಾಡಿಕೊಂಡಂತೆ ತೋರುತ್ತದೆ. ಮೈಸೂರು ರಾಜರು ದುರ್ಬಲರಾಗಿ ಕ್ರಿ.ಶ. ೧೭೬೧ರಲ್ಲಿ ಹೈದರಾಲಿಯು ಮೈಸೂರು ರಾಜ್ಯವನ್ನು ಆಕ್ರಮಿಸಿಕೊಂಡ ಸಮಯದಲ್ಲಿ ಉಮ್ಮತ್ತೂರು ಅರಸರು ಸ್ವತಂತ್ರರಾಗಲು ಪ್ರಯತ್ನಿಸಿ ಮೈಸೂರಿನ ಮೇಲಾಳ್ಕೆಯನ್ನು ನಿರಾಕರಿಸಿದರೆಂದು ತೋರುತ್ತದೆ. ಹೈದರಾಲಿಯ ಮಗನಾದ ಟೀಪೂಸುಲ್ತಾನನು ಇವರ ಮೇಲೆ ದಂಡೆತ್ತಿ ಬಂದು ಮಲೆಯಕೋಟೆ, ಹುಲಿಕಲ್ಲು ದುರ್ಗಗಳಿಗೆ ಮುತ್ತಿಗೆ ಹಾಕಿದಾಗ ಇವರು ನೆಲ್ಲಿಯಾಳಕ್ಕೆ ಓಡಿಹೋದರು. ಆ ಮೇಲೆ ಟೀಪೂಸುಲ್ತಾನನಿಗೆ ಕಪ್ಪಕಾಣಿಕೆಗಳನ್ನು ಸಲ್ಲಿಸುತ್ತಿದ್ದರೆಂದೂ ಟೀಪೂಸುಲ್ತಾನನು ಹುಲಿಕಲ್ಲು ದುರ್ಗ ಮಲೆಕೋಟೆಗಳಲ್ಲಿ ತನ್ನ ಸೈನ್ಯವನ್ನು ಇಟ್ಟಿದ್ದನೆಂದೂ ಗೊತ್ತಾಗಿದೆ. ಟೀಪೂಸುಲ್ತಾನನು ಮಲೇಕೋಟೆಗೆ ಹುಸೇನಾಬಾದ್ ಎಂಬ ಹೆಸರನ್ನು ಕೊಟ್ಟು ಸೈಯದ್ ಬುಡನ್ ಎಂಬ ಅಧಿಕಾರಿಯನ್ನು ಅಲ್ಲಿಯ ಸೈನ್ಯಕ್ಕೆ ಕಿಲ್ಲೇದಾರನನ್ನಾಗಿಯೂ, ಹುಲಿಕಲ್ಲು ದುರ್ಗಕ್ಕೆ ಸೈಯದಾಬಾದ್ ಎಂಬ ಹೆಸರನ್ನಿಟ್ಟು ಅಲ್ಲಿ ಖಾನ್ ಎಂಬಾತನನ್ನು ಅಲ್ಲಿಗೆ ಕಿಲ್ಲೇದಾರನನ್ನಾಗಿಯೂ ಮಾಡಿದನು. ಇಲ್ಲಿದ್ದ ಸೈನ್ಯಗಳಿಗೆ ಹೆಚ್ಚು ತೊಂದರೆಯೂ ಬೇಜಾರೂ ಇಲ್ಲದಂತೆ ಆಗಾಗ್ಗೆ ಅವುಗಳನ್ನು ಇಲ್ಲಿಂದ ಬದಲಾಯಿಸಿ ದಣಾಯಕನ ಕೋಟೆಯಿಂದ ಬೇರೆ ಸೈನಿಕರನ್ನು ತಂದು ಇಲ್ಲಿ ಇಡುತ್ತಿದ್ದನು. ನೆಲ್ಲಿಯಾಳದ ಅರಸುಗಳು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದರೂ ಬಡಗರು ಮೊದಲಾದ ಬೆಟ್ಟದ ನಿವಾಸಿಗಳು ಅವರನ್ನೇ ಇಂದಿನವರೆಗೂ ತಮ್ಮ ಒಡೆಯರನ್ನಾಗಿ ಭಾವಿಸುತ್ತಾ ಬಂದಿದ್ದಾರೆ. ಬಡಗರಲ್ಲಿ ಏನಾದರೂ ಜಗಳಗಳಾಗಲಿ ಇತರ ತೊಡ

ಕಾದ ವ್ಯವಹಾರಗಳಾಗಲಿ ನಡೆದರೆ ಅವರು ಕಾಣಿಕೆಯನ್ನು ಕೊಂಡು ನೆಲ್ಲಿಯಾಳಕ್ಕೆ ಹೋಗಿ ಅಲ್ಲಿಯ ಅರಸು ಮನೆತನದ ಯಜಮಾನನಿಂದ ತೀರ್ಪನ್ನು ಪಡೆಯುತ್ತಾರಂತೆ. ಪಿತೃಗಳ ಜ್ಞಾಪಕಾರ್ಥವಾಗಿ ಆಗಾಗ್ಗೆ ನಡೆಯುವ 'ಮನವಲೆ' ಎಂಬ ಬಡಗರ ಉತ್ಸವಕಾಲದಲ್ಲಿ ನೆಲ್ಲಿಯಾಳಿದ ಅರಸುಗಳಿಗೆ ಆಹ್ವಾನವನ್ನು ಕಳಿಸುವ ಮರ್ಯಾದೆಯು ಇಂದಿಗೂ ನಡೆಯುತ್ತಿದೆಯಂತೆ.

ಕ್ರಿ.ಶ. ೧೭೯೯ರಲ್ಲಿ ಮೈಸೂರು ಮೂರನೆಯ ಯುದ್ಧದಲ್ಲಿ ಟೀಪೂವಿನ ಪತನಾನಂತರ ಅವನ ರಾಜ್ಯವೂ ಅದಕ್ಕೆ ಸೇರಿದ್ದ ನೀಲಗಿರಿಯೂ ಬ್ರಿಟಿಷರ ಕೈಗೆ ಬಂದುವು. ಆದರೂ ೧೮೧೯ರ ವರೆಗೆ ಇದರ ಮೇಲೆ ಐರೋಪ್ಯರು ಯಾರೂ ಮನೆಮಠಗಳನ್ನು ಕಟ್ಟಿಕೊಂಡಂತೆ ತೋರುವುದಿಲ್ಲ. ಆಗ ಕೊಯಮುತ್ತೂರಿನ ಕಲೆಕ್ಟರಾಗಿದ್ದ ಸಲ್ಲಿವನ್ನರು ನೀಲಗಿರಿಯ ಪರ್ವತದ ಪ್ರಕೃತಿ ಸೌಂದರ್ಯದಿಂದಲೂ, ಇಂಗ್ಲೆಂಡಿನ ವಾಯುಗುಣವನ್ನು ಹೋಲುವ ಅಲ್ಲಿಯ ಹಿತವಾದ ಹವೆಯಿಂದಲೂ ಮುಗ್ಧರಾಗಿ ಉಟಕಮಂಡಿನಲ್ಲಿ ಬಂಗಲೆಯನ್ನು ೧೮೨೨ರಲ್ಲಿ ಕಟ್ಟಿಸಿದರು. ಇದೇ ಈಗ 'ಕಲ್ಲು ಬಂಗಲೆ' (Stone House) ಎಂಬ ಹೆಸರಿನ ಮನೆ. ಸಲ್ಲಿವನ್ನರ ಸಲಹೆಯ ಪ್ರಕಾರ ಇದೇ ವರ್ಷದಲ್ಲಿ ಮದ್ರಾಸ್ ಸರ್ಕಾರದವರು ಉಟಕಮಂಡನ್ನು ನೀಲಗಿರಿ ಬೆಟ್ಟದ ಮುಖ್ಯಪಟ್ಟಣವನ್ನಾಗಿ ಮಾಡಿದರು. ಇದು ಐರೋಪ್ಯರಿಗೆ ಆರೋಗ್ಯಸ್ಥಾನವಾಗಿ (Sanatorium) ಬೆಳೆಯುತ್ತಾ ಬಂತು. ಕುನ್ನೂರು, ಕೋತಗಿರಿ ಮೊದಲಾದ ಊರುಗಳು ಅಭಿವೃದ್ಧಿಗೆ ಬಂದುವು. ಬೆಟ್ಟದಮೇಲಕ್ಕೆ ಮಲಬಾರ್ ಕಡೆಯಿಂದಲೂ, ಮೈಸೂರ್ ಕಡೆಯಿಂದಲೂ, ಮೇಟುಪಾಳ್ಯದ ಕಡೆಯಿಂದಲೂ ರಸ್ತೆಗಳು ಮಾಡಲ್ಪಟ್ಟುವು. ಉಟಕಮಂಡಿನಲ್ಲಿ ಮಾರ್ಕೆಟೂ ಇತರ ಸೌಕರ್ಯಗಳೂ ಕಲ್ಪಿಸಲ್ಪಟ್ಟುವು. ಇಲ್ಲಿಯ ಹವೆಯು ಇಂಗ್ಲೆಂಡಿನ ತರಕಾರಿ ಹಣ್ಣುಗಳನ್ನು ಬೆಳೆಯುವುದಕ್ಕೆ ಅನುಕೂಲವಾಗಿ ಕಂಡು ಬಂದದ್ದರಿಂದ ಸರ್ಕಾರದ ಉತ್ತೇಜನದಿಂದ ಅಲ್ಲಲ್ಲಿ ತೋಟಗಳಾದುವು. ಸುಮಾರು ೧೮೪೦ನೆಯ ಇಸವಿಯಲ್ಲಿ ಕಾಫೀ ಮತ್ತು ಟೀ ತೋಟಗಳು ಈ ಬೆಟ್ಟದ ಮೇಲೆ ಪ್ರಾರಂಭವಾದವು. ೧೮೪೮ರಲ್ಲಿ ಉಟಕಮಂಡಿನ ಸರ್ಕಾರದ ಉದ್ಯಾನವನವು ಕೆಲವು ಮಂದಿ ಐರೋಪ್ಯರಿಂದ ತಮ್ಮ ಸ್ವಂತ ಉದ್ಯಮದಿಂದ ಪ್ರಾರಂಭಿಸಲ್ಪಟ್ಟು ಅಭಿವೃದ್ಧಿಗೊಳ್ಳುತ್ತಾ ಬಂತು. ಕುನ್ನೂರಿನಲ್ಲಿರುನಲ್ಲಿರುವ ಸಿಮ್ಸ್‌ಪಾರ್ಕ್ ಎಂಬ ಉದ್ಯಾನವನವು ೧೮೭೦-೭೫ನೆಯ ವರ್ಷಗಳ ಮಧ್ಯೆ ಸ್ಥಾಪಿಸಲ್ಪಟ್ಟಿತು. ೧೮೬೦ರಲ್ಲಿ ವೆಲ್ಲಿಂಗ್‌ಟನ್ನಿನಲ್ಲಿ ಬ್ರಿಟಿಷ್ ಸೈನ್ಯಕ್ಕಾಗಿ ದಂಡು ಕಟ್ಟಲ್ಪಟ್ಟಿತು. ೧೮೭೦ರಲ್ಲಿ ಮದ್ರಾಸ್ ಸರ್ಕಾರದವರು ಉಟಕಮಂಡನ್ನು ಬೇಸಿಗೆಯ ರಾಜಧಾನಿಯನ್ನಾಗಿ ಮಾಡಿಕೊಂಡು ಈಗ ಕಲ್ಲುಬಂಗಲೆ ಬೆಟ್ಟದ ಮೇಲಿರುವ ಅವರ ಕಾರ್ಯಾಲಯದ

(Secretariat) ಕಟ್ಟಡವನ್ನು ಇದಕ್ಕಾಗಿ ನಿರ್ಮಿಸಿದರು. ಆಗಿನಿಂದ ಪ್ರತಿವರ್ಷವೂ ಮದ್ರಾಸಿನ ಗವರ್ನರೂ ಸರ್ಕಾರವೂ ಇಲ್ಲಿಗೆ ಬೇಸಿಗೆಯಲ್ಲಿ ಬರುತ್ತಿದ್ದರೂ ಗವರ್ನರ್ ಇರುವುದಕ್ಕೆ ಸರಿಯಾದ ಭವನವೊಂದು ಇಲ್ಲದ್ದರಿಂದ ೧೮೭೭ ರಲ್ಲಿ ಈಗಿನ ಅವರ ಬಂಗಲೆಯು ಪ್ರಾರಂಭವಾಗಿ ೧೮೭೯ ರಲ್ಲಿ ಪೂರೈಸಲ್ಪಟ್ಟಿತು. ಹೀಗೆ ಸರ್ವತೋಮುಖವಾಗಿ ಈ ಬೆಟ್ಟವು ಬೆಳೆಯುತ್ತಾ ಬಂದ ಮೇಲೆ ಮದ್ರಾಸ್ ಸರ್ಕಾರದವರು ಇದನ್ನು ಒಂದು ಜಿಲ್ಲೆಯನ್ನಾಗಿ ಮಾಡಿ ಉಟಕಮಂಡಿನಲ್ಲಿ ಕಲೆಕ್ಟರನ್ನು ನೇಮಕ ಮಾಡಿದರು. ಈ ಬೆಟ್ಟದ ತಂಪಾದ ಹವೆಯಿಂದಲೂ ರಮ್ಯವಾದ ಉದ್ಯಾನವನಗಳಿಂದಲೂ, ಜಲಪಾತಗಳೂ, ಶಿಖರಗಳೂ, ಸರೋವರಗಳೂ, ಅಡವಿಗಳೂ ಇವೇ ಮೊದಲಾದ ನಾನಾವಿಧವಾದ ಸೃಷ್ಟಿಸೌಂದರ್ಯದಿಂದಲೂ ಆಕರ್ಷಿತರಾದ ಅನೇಕ ದೇಶೀಯ ಸಂಸ್ಥಾನಗಳ ರಾಜರುಗಳು ಇಲ್ಲಿ ಭವ್ಯವಾದ ಭವನಗಳನ್ನು ಕಟ್ಟಿಕೊಂಡರು. ಇವರಲ್ಲಿ ಹೈದರಾಬಾದ್, ಮೈಸೂರು, ಬರೋಡ, ಜೋಧ್‌ಪೂರ್, ನವನಗರ್ ರಾಜರ ಅರಮನೆಗಳು ಉಟಕಮಂಡಿನಲ್ಲಿಯೂ, ತಿರುವಾಂಕೂರು ಕೊಚ್ಚಿನ್ ರಾಜರ ಅರಮನೆಗಳು ಕುನ್ನೂರಿನಲ್ಲಿಯೂ ಇವೆ. ಈ ಅರಮನೆಗಳಲ್ಲೆಲ್ಲಾ ಕರ್ಣಾಟಕ ಸಿಂಹಾಸನಾಧೀಶ್ವರರಾದ ನಮ್ಮ ಮೈಸೂರು ಮಹಾರಾಜರ ಅರಮನೆಯ ಆವರಣವೇ ಎಲ್ಲಕ್ಕಿಂತಲೂ ದೊಡ್ಡದು. ೧೮೯೯ ನೆಯ ಇಸವಿಯಲ್ಲಿ ಬೆಟ್ಟದ ಮೇಲಕ್ಕೆ ರೈಲ್ವೆ ದಾರಿಯೂ ಆಯಿತು. ೧೯೦೪ ರಲ್ಲಿ ಅರವನ ಕಾಡಿನಲ್ಲಿ ಕಾರ್ಡೈಟ್ ಎಂಬ ಸಿಡಿಮದ್ದಿನ ಕಾರ್ಖಾನೆಯು ಸ್ಥಾಪಿತವಾಯಿತು. ಮೊದಲು ಕನ್ನೂರಿನ ವರೆಗೆ ಮಾತ್ರ ಇದ್ದ ರೈಲುರಸ್ತೆಯು ೧೯೧೦ ರಲ್ಲಿ ಉಟಕಮಂಡಿನವರೆಗೂ ಬಂತು. ಬ್ರಿಟಿಷರ ಆಡಳಿತಕ್ಕೆ ಬಂದ ಮೇಲೆ ಆರೋಗ್ಯ ಸ್ಥಾನವಾಗಿ ನಿರ್ಮಿಸಿದ ಉಟಕಮಂಡಿನ ಶತಮಾನ ಮಹೋತ್ಸವವು ೧೯೨೨ ರಲ್ಲಿ ನೆರವೇರಿಸಲ್ಪಟ್ಟಿತು. ೧೯೩೦ ನೆಯ ವರ್ಷದಲ್ಲಿ ಪಾಯಿಕೆರೆ ಜಲಪಾತದ ಸಮೀಪದಲ್ಲಿ ನದಿಗೆ ಅಣೆಯನ್ನು ಕಟ್ಟಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಿ ಬೆಟ್ಟದ ಎಲ್ಲಾ ಭಾಗಕ್ಕೂ ಕೊಯಮುತ್ತೂರು ಜಿಲ್ಲೆಗೂ ವಿದ್ಯುಚ್ಛಕ್ತಿಯ ಉಪಯೋಗವಾಗುವಂತೆ ಮದರಾಸು ಸರ್ಕಾರದವರು ಏರ್ಪಾಡು ಮಾಡಿದರು. ಈಗ ಬೆಟ್ಟವು ಅನೇಕ ಬಗೆಯಾದ ಸೌಕರ್ಯಗಳಿಂದ ಕೂಡಿ, ಆಧುನಿಕ ನಾಗರಿಕತೆಯ ಮೇಲ್ಮಟ್ಟವನ್ನು ಮುಟ್ಟಿ ಹಿಂದೂದೇಶದ ಪರ್ವತಾವಾಸಸ್ಥಾನಗಳಲ್ಲಿ ಅತ್ಯುತ್ತಮವಾದುದೆಂದು ಪ್ರಸಿದ್ಧಿಯನ್ನು ಪಡೆದಿದೆ.

ಎನ್. ಲಕ್ಷ್ಮೀನಾರಾಯಣರಾವ್.

ಚೀನಾ ಚರಿತ್ರೆಯ ಚತುಷ್ಪಂಕ್ತಿಗಳು

ಚೀನರ ಚರಿತ್ರೆಯ ಇತ್ತೀಚೆಗಿನ ಒಂದು ಶತಮಾನದಷ್ಟನ್ನು ಓದಿದರೆ ಗ್ರೀಕ ಪುರಾಣಗಳಲ್ಲಿನ ಪ್ರೊಮಿಥಿಯಸನ ಆಖ್ಯಾನದ ನೆನಪಾಗುವುದು ಸಹಜ. ಪ್ರೊಮಿಥಿಯಸನು ಸ್ಥಿರಂಜೀವಿಯಾದ ಮಹಾಬಲಿ ದಾನವ; ಇತರ ದಾನವರಂತೆ ತನ್ನ ಬಲವನ್ನು ಮನುಷ್ಯರನ್ನು ಪೀಡಿಸಲಿಕ್ಕಾಗಿ ವಿನಿಯೋಗಿಸದೆ ಮಾನವರ ಮೇಲೆ ಮಮತೆಯಿಟ್ಟು ಅವರ ಸಹಾಯಾರ್ಥವಾಗಿ ದೇವಲೋಕದ ಅಗ್ನಿಯನ್ನು ಅಪಹರಿಸಿ ತಂದಿದ್ದನು. ಆ ತಪ್ಪಿಗಾಗಿ ದೇವರಾಜನು ಅವನನ್ನು ನಿರ್ಜನಪ್ರದೇಶದಲ್ಲಿರುವ ಬಂಡೆಗೆ ಬಿಗಿದುಹಾಕಿ ಹಪ್ಪುಗಳು ಅವನ ಕರುಳುಗಳನ್ನು ಕುಕ್ಕಿಕಿತ್ತು ತಿನ್ನಬೇಕೆಂದು ವಿಧಿಸಿದನು.

ಹಗಲೆಲ್ಲ ಹಪ್ಪುಗಳು ಕರುಳುಗಳನ್ನು ತಿನ್ನುವುವು, ರಾತ್ರಿಕಾಲದಲ್ಲಿ ಕರುಳುಗಳು ಮೊದಲಿನಂತೆ ಬೆಳೆದುಕೊಳ್ಳುವುವು. ಮರುದಿನ ಹಪ್ಪುಗಳು ಮರಳಿ ಕೊರೆಯುವುವು— ಈ ತೆರದಲ್ಲಿ ಸಾವಿಗಿಂತ ಸಾವಿರಪಾಲು ಸಹನಾತೀತ ಬೇನೆಯನ್ನು ಅವನು ಸಾವಿರ ವರ್ಷ ಅನುಭವಿಸಬೇಕಾಯಿತು. ಕಟ್ಟಕಡೆಗೆ ಮಹಾಸಾಹಸಿ ಹೆರಾಕ್ಲಿಸನು ಅಲ್ಲಿಗೆ ಬಂದು ಹಪ್ಪುಗಳನ್ನು ಹೊಡೆದೋಡಿಸಿ ಪ್ರೊಮಿಥಿಯಸನನ್ನು ಕಟ್ಟಿದ ಸಂಕೋಲೆಗಳನ್ನು ಕಡಿದು ಅವನನ್ನು ಬಂಧಮುಕ್ತನನ್ನಾಗಿ ಮಾಡಿದನು.

ಚೀನವು ಸ್ಥಿರಂಜೀವಿ. ಚೀನಾ ಚರಿತ್ರೆಯ ಉಗಮ ಇಂತಿಷ್ಟೇ ವರ್ಷಗಳ ಹಿಂದೆ ಆಯಿತೆಂದು ಯಾರೂ ಹೇಳುವುದು ಸಾಧ್ಯವಲ್ಲ. ಈಗ ಜಗತ್ತಿನಲ್ಲಿ ತಂತಮ್ಮ ತೋಳ್ಬಲವನ್ನು ಪ್ರದರ್ಶಿಸುತ್ತ ಮೆರೆಯುತ್ತಿರುವ ಜಂಬದ ಜನಾಂಗಗಳು ಹುಟ್ಟುವ ಮೊದಲೆ ಚೀನವು ಪ್ರಾಚೀನ ಜನಾಂಗಗಳ ಸಾಲಿಗೆ ಸೇರಿತ್ತು. ಹಾಗೆಂದು ಚೀನವೇನು ಹಳೆಯದಾಗಿ ಜರ್ಜರಿತವಾಗಿಲ್ಲ. ಚೀನದ ಬಾಲ್ಯಕಾಲದಲ್ಲಿ ಹೆಸರುಹೊಂದಿದ ಅನೇಕ ಜನಾಂಗಗಳು ನಾಮಾವಶೇಷವಾದರೂ ಚೀನವು ಈಗಲೂ ಜಗತ್ತಿನ ಉಚ್ಚ ಪಂಚರಾಷ್ಟ್ರಗಳಲ್ಲೊಂದೆಂದು ಗಣಿಸಲ್ಪಡುತ್ತಿದೆ.

ಚೀನದ ಕೀರ್ತಿ ಧವಲಕೀರ್ತಿ. ಇತರ ದೇಶಗಳ ಸುಲಿಗೆ ಮಾಡಿ ತನ್ನ ಮನೆಗೆ ಚಿನ್ನ ಮಡಗುವ 'ಪೌರುಷ' ವನ್ನು ಚೀನದವರು ಎಂದೂ ತೋರಿಸಿಲ್ಲ. ತಮ್ಮದೇ ಆದ ವಿಶಿಷ್ಟ ಚಿತ್ರಕಲೆಯಲ್ಲಿ ಮತ್ತು ಪಿಂಗಾಣಿಯ ರಚನೆಯಲ್ಲಿ ಚೀನದವರು ಎಲ್ಲೆಡೆಗಳಲ್ಲೂ ಕೀರ್ತಿ ಪಡೆದಿದ್ದಾರೆ. ಕೆತ್ತಿದ ಮೊಳೆಗಳನ್ನು ಉಪಯೋಗಿಸಿ ಬರಹ ಅಚ್ಚುಹಾಕು

ವುದು, ಅಯಸ್ಕಾಂತದ ಸಹಾಯದಿಂದ ದಿಕ್ಕುಗಳನ್ನು ಗುರ್ತಿಸುವುದು,—ಇಂಥ ಹತ್ತಾರು ಶೋಧನೆ ನಿರ್ಮಾಣಗಳಿಂದ ಚೀನವು ಜಗತ್ತಿನ ಸಂಸ್ಕೃತಿಗೆ ಸಹಾಯ ಮಾಡಿದೆ.

ಧರ್ಮಮಾರ್ಗದಲ್ಲೂ ಚೀನದ ಆದರ್ಶವನ್ನು ಇತರ ಜನಾಂಗಗಳು ಅನುಸರಿಸಿದರೆ ಲೋಕದಲ್ಲಿ ಈಗಿರುವ ಅನೇಕ ಮತ್ಸರಗಳು, ಕಲಹಗಳು, ಒಳಸಂಚುಗಳು ಇಲ್ಲವಾಗುವುವು. ಕನ್‌ಫ್ಯೂಸಿಯಸ್, ಲಾವೋತ್ಸಿಯರಂಥ ಧರ್ಮದಾಸಿಗಳು ೨,೫೦೦ ವರ್ಷಗಳ ಹಿಂದೆಯೆ ಶ್ರೇಷ್ಠರೀತಿಯ ಮಾರ್ಗವನ್ನು ತೋರಿಸಿಕೊಟ್ಟು ಚೀನಿಯರ ಜೀವನವನ್ನು ಸುಧಾರಿಸಿದ್ದರೂ ಇತರ ದೇಶದ ಮತಗಳು ಹೀನವೆಂದು ಚೀನರು ಯೋಚಿಸಿಲ್ಲ. ಭಾರತದಿಂದ ಹರಿದುಬಂದ ಬೌದ್ಧತೀರ್ಥವನ್ನು ಚೀನರು ಪ್ರಾಶನ ಮಾಡಿ ಭಾರತದಲ್ಲಿ ಅಳಿದುಹೋದ ಬುದ್ಧಪೂಜೆ ತಮ್ಮಲ್ಲಿ ಉಳಿಯುವಂತೆ ಮಾಡಿದಾರೆ. ಚೀನರಲ್ಲಿ ಅನೇಕಮಂದಿ ಕ್ರಿಸ್ತನ ಅಥವಾ ಮಹಮ್ಮದ ಪೈಗಂಬರನ ಅನುಯಾಯಿಗಳಾದರೂ ಅವರ ಉಡುಪು, ಊಟ, ಆಚಾರ—ಇವೆಲ್ಲ ಚೀನತ್ವವನ್ನು ತೊರೆದಿಲ್ಲ. ಒಂದೇ ಕುಟುಂಬದಲ್ಲಿ ವಿವಿಧಮತದ ಅನುಯಾಯಿಗಳಿದ್ದು ಅನ್ಯೋನ್ಯತೆಯಲ್ಲಿ ಇರುವ ನಿದರ್ಶನಗಳೂ ಇವೆ. 'ಅಲ್ಪಸಂಖ್ಯಾತರ ಪ್ರಶ್ನೆ'ಯೊಂದನ್ನು ಚೀನದಲ್ಲಿ ಹುಟ್ಟಿಸುವ ಬದಲು ಚೀನದ ಅಲ್ಪಸಂಖ್ಯಾಕರೇ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಸೇನೆಗಳ ನಾಯಕರಾಗಿದ್ದಾರೆ!

ಐಹಿಕದಲ್ಲೂ ಚೀನದ ಸ್ಥಾನಮಾನಗಳು ಬಹಳ ಮೇಲ್ತರದ್ದಿವೆ. ರಷ್ಯವೊಂದನ್ನು ಬಿಟ್ಟರೆ ಚೀನದಷ್ಟು ವಿಸ್ತಾರ ರಾಜ್ಯ ಬೇರೊಂದಿಲ್ಲ. ಜನಸಂಖ್ಯೆಯಲ್ಲಿ ಚೀನವು ಅಸಮಾನ; ಭಾರತೀಯರ ಸಂಖ್ಯೆಗಿಂತ ಚೀನರ ಸಂಖ್ಯೆ ಹೆಚ್ಚು. ಚೀನದ ಹೊಲಗಳಲ್ಲಿ ಅಕ್ಕಿ, ಹತ್ತಿ, ಮೊದಲಾದುವು ಹುಲುಸಾಗಿ ಬೆಳೆಯುತ್ತಿವೆ; ರೇಷ್ಮೆಯ ಹುಟ್ಟೂರು ಚೀನವಷ್ಟೆ! ಅತ್ಯುತ್ತಮ ಆಹಾರವಾಗಿದ್ದು, ಇತರ ರೀತಿಯ ಕೈಗಾರಿಕೆಗಳಿಗೆ ಮೂಲ ದ್ರವ್ಯವನ್ನು ಒದಗಿಸುವ ಸೋಯೊ ಅವರೆ ಚೀನದ ವಿಶಿಷ್ಟ ಪೈರು. ಚೀನದ ಭೂಗರ್ಭದಲ್ಲಿರುವ ಕಬ್ಬಿಣ, ಕಲ್ಲಿದ್ದಲುಗಳ ಬೆಲೆ ಇನ್ನೂ ಕಟ್ಟಿಲ್ಲ; ಪರರಾಷ್ಟ್ರಗಳ ದುರಾಶೆಯನ್ನು ಕೆಣಕುವಷ್ಟು ಖನಿಜಗಳು ಚೀನದಲ್ಲಿವೆ ಎಂದರೆ ಸಾಕು.

ಇಂಥ ಜನಾಂಗದ ಅವಸ್ಥೆ ಕರುಣಾಜನಕವಾಗಿ ಪರಿಣಮಿಸಿತು. ಕಳೆದ ಶತಮಾನದ ಅಂತ್ಯಭಾಗದಲ್ಲಿ—ಹಿಂದೆ ಹಿಂದುಸ್ಥಾನಕ್ಕೆ ಬಂದ ರೀತಿಯಲ್ಲಿ—ಯುರೋಪಿನ ತಕ್ಕಡಿಯವರು ಬಂದರು. ಚೀನರು ಅವರ ಸಂಪರ್ಕ ಬೇಡವೆಂದು ದೂರ ಮಾಡಿದರೂ ಇಂಗ್ಲಿಷರು ಬಲಾತ್ಕಾರದಿಂದ ಒಳಹೊಕ್ಕು ತಮ್ಮದೊಂದು ನೆಲೆಯನ್ನು ಸ್ಥಾಪಿಸಿದರು. ಅನಂತರ ಫ್ರೆಂಚರು, ಡಚ್ಚರು, ಜರ್ಮನರು—ಯುರೋಪಿನ

ಎಲ್ಲ ರಾಷ್ಟ್ರಗಳವರಂತೆ ಚೀನದಲ್ಲಿ ನೆಲೆಗಳನ್ನು ಸ್ಥಾಪಿಸಿದರು. ಹೋಂಗಕೋಂಗ, ಶಾಂಗಾಯಿ ಮೊದಲಾದ ಬಂದರು ಸ್ಥಳಗಳು ಪರಕೀಯರ ವಶವಾದುವು; ಒಳನಾಡಿನ ವ್ಯಾಪಾರೀ ಕೇಂದ್ರಗಳಲ್ಲೂ ಪರಕೀಯರ ಕೇರಿಗಳು ಹುಟ್ಟಿದವು. ಈ ಬಂದರುಗಳಲ್ಲೂ ಕೇರಿಗಳಲ್ಲೂ ಪರಕೀಯರದೇ ಸರಕಾರ; ಪರಕೀಯನೊಬ್ಬನು ಕಳ್ಳಾಟಿಕೆ ಮಾಡಿದರೆ ಅವನನ್ನು ಪರಕೀಯರ ಪೊಲೀಸರು ಬಂಧಿಸಬೇಕು. ಪರಕೀಯರ ಕೋರ್ಟುಗಳೆ ಅವನಿಗೆ ಶಿಕ್ಷೆ ವಿಧಿಸಬೇಕು; ಚೀನದ ಸರಕಾರಕ್ಕೆ ಅವನ ಮೇಲೆ ಒಂದಿಷ್ಟೂ ಅಧಿಕಾರವಿಲ್ಲ.

ಚೀನದ ಪ್ರಾಂತಗಳಿಗೆಲ್ಲ ಪಾಳೆಯಗಾರರಂಥ ನಾಯಕರಿದ್ದು ಅವರು ತಂತಮ್ಮ ಸೇಡನ್ನು ತೀರಿಸಿಕೊಳ್ಳಲಿಕ್ಕೆ ಹೊಡೆದಾಡುವಾಗ ಪರಕೀಯರು ಭಾಗವಹಿಸಿ ತಮ್ಮ ಸ್ವಾರ್ಥವನ್ನು ಸಾಧಿಸಿದರು. ಚೀನದ ಸರಕಾರಗಳಿಗೆ ಸಾಲಕೊಟ್ಟು ಉಪ್ಪಿನ ಸುಂಕ, ಅಕ್ಕಿಯ ಸುಂಕಗಳನ್ನು ಹೊರಿಸುವ ವ್ಯಾಪಾರದ ಮೇಲೆ ತಮ್ಮ ಮೇಲ್ವಿಚಾರ ನಡೆಸುವ ಅಧಿಕಾರ ಪಡೆದರು. ಅಲ್ಲಲ್ಲಿ ರೈಲುಮಾರ್ಗಗಳನ್ನು ರಚಿಸುವ ಅಧಿಕಾರ ಪಡೆದು ರೈಲಿನ ಕಾವಲಿಗೆಂದು ಸೇನೆಗಳನ್ನೂ ತಂದಿರಿಸಿದರು. ಈ ವ್ರಣಗಳ ಬೇನೆಯಿಂದ ಚೀನವು ಕರಗುತ್ತ ಬಂದಿತು.

ಹಾಗೆಂದು ಹಿಂದುಸ್ತಾನದ ಗತಿಯಾದಂತೆ ಚೀನವೆಲ್ಲ ಪರಕೀಯರ ಕೈವಶವಾಗಲಿಲ್ಲ. ಅಲ್ಲಿ ಯಾವುದೇ ಒಂದು ಜನಾಂಗ ಅತಿಬಲಿಯಾಗಿ ಇತರರನ್ನು ಹೊರದೂಡುವ ಶಕ್ತಿ ಪಡೆಯಲಿಲ್ಲ. ಯುರೋಪಿನ ರಾಷ್ಟ್ರಗಳು ಚೀನವನ್ನು ನುಂಗಿದರೆ ತಮ್ಮ ವ್ಯಾಪಾರಕ್ಕೆ ಅಡ್ಡಿಯಾಗುವುದು; ತಾವೇ ಚೀನದ ಒಂದು ಭಾಗವನ್ನು ಸೆಳೆದುಕೊಳ್ಳುವುದು ತಮ್ಮ ಧರ್ಮಕ್ಕೆ ವಿರೋಧ. ಹೀಗೆಂದು ತರ್ಕಮಾಡಿ ಅಮೇರಿಕದವರು ಚೀನವನ್ನು ವಶಮಾಡಿಕೊಳ್ಳುವ ಪ್ರಯತ್ನ ಯಾರೂ ಮಾಡಬಾರದೆಂದು ಹಟಹಿಡಿದ ಕಾರಣ ಸಹ ಚೀನದ ಸ್ವಾತಂತ್ರ್ಯ ಉಳಿಯಿತು.

ಕ್ರಮೇಣ ಚೀನದಲ್ಲಿ ಹೊಸತಾದ ಜೀವಕಳೆಯು ಹರಿಯುವಂತಾಯಿತು. ಪರಕೀಯರ ತುಳಿತ ಸಾಕಾಗಿ ಜನರೆಲ್ಲ ಸಿಟ್ಟಿಗೇಳುವಾಗ ಆಧುನಿಕ ವಿದ್ಯಾಭ್ಯಾಸ ಪಡೆದ ಮುಂದಾಳುಗಳೂ ಶಾಲಾಕಾಲೇಜುಗಳ ವಿದ್ಯಾರ್ಥಿಗಳೂ ಪರಕೀಯರನ್ನು ಹೊರದಬ್ಬುವ ಪ್ರಯತ್ನಕ್ಕೆ ಕೈಹಾಕಿದರು. ಚೀನದ ವಿದ್ಯಾಸಂಸ್ಥೆಗಳು ಅನ್ಯ ಸರಕಾರದ ಅಂಕೆಯಲ್ಲಿದ್ದರೆ ಆಳರಸರು ಹೇಳಿದ ಪಾಠಗಳನ್ನು ಬೋಧಿಸುತಿದ್ದುವು ಹಾಗಿಲ್ಲದುದರಿಂದ ಸ್ವತಂತ್ರ ಅಮೇರಿಕದ ಶಾಲೆಗಳಲ್ಲಿ ಓದಿ ಬಂದವರು ಸ್ವಾತಂತ್ರ್ಯದ ಬೋಧೆಯೊಂದೇ ಸರಿಯೆಂದು ಪಾಠವೋದುತ್ತಹೋದರು. ಪರದೇಶಿ ಸಾಮಾನುಗಳ ಬಹಿಷ್ಕಾರ ಪರಕೀಯರ ವಿರುದ್ಧ ಚಳವಳ—ಇಂಥವು ಹೆಚ್ಚುತ್ತ ಬಂದವು.

ಚೀನಕ್ಕೆ 'ಕಾಯಕಲ್ಪ' ಕೊಡುವ ಪ್ರಯತ್ನಮಾಡಿದವರ ನಾಯಕನೆಂದರೆ ಸನ್‌ಯತ್ ಸೇನ್. ಧರ್ಮದಲ್ಲಿ ಕ್ರೈಸ್ತನು, ಕಲಿತದ್ದು ಅಮೇರಿಕದ ಕಾಲೇಜುಗಳಲ್ಲಿ. ತನ್ನ ಸಹಪಾಠಿಗಳನ್ನೂ ಸಮಕಾಲೀನರನ್ನೂ ಒಂದುಗೂಡಿಸಿ ಚೀನದ ಯುವಕರನ್ನು ಹುರಿದುಂಬಿಸಿದನು. ಜರ್ಜರಿತ ಪ್ರಾಚೀನ ರಾಜಮನೆತನದ ಕೈಯಿಂದ ಅಧಿಕಾರವು ತಪ್ಪುವಂತೆಯೂ ಪ್ರಜಾಸತ್ತಾತ್ಮಕ ನವಚೀನವು ಜನನವಾಗುವಂತೆಯೂ ಸಾಧಿಸಿದನು.

ನವಚೀನವು ೧೯೧೧ರಲ್ಲಿ ಜನಿಸಿದರೂ ಅಂತಃಕಲಹಕ್ಕೆ ಬಲಿಬಿದ್ದು ಜನಹಿತವನ್ನು ಮರೆತ ಸ್ವಾರ್ಥಿಗಳ ಕೈಗೊಂಬೆಯಾಯಿತು; ಸನ್‌ಯತ್‌ಸೇನನನ್ನೇ ಮೂಲೆಗೊತ್ತಿದರು. ಆದರೆ ೧೯೧೪–೧೮ರ ಮಹಾಯುದ್ಧದ ಕಾಲದಲ್ಲಿ ಚೀನವನ್ನೆಲ್ಲ ಆಕ್ರಮಿಸುವ ದುರಾಶೆಯಿಂದ ಜಪಾನಿನವರ ಇಪ್ಪತ್ತೊಂದು ಶರ್ತಗಳ ಕರಾರಿಗೆ ಚೀನೀ ಸರಕಾರದಿಂದ ಒತ್ತಾಯದ ಒಪ್ಪಿಗೆ ಪಡೆದಾಗ ಚೀನರು ಅದನ್ನು ಸಹಿಸಲಾರದೆ ಹೋದರು. ಎಲ್ಲೆಡೆಗಳಲ್ಲೂ ಹರತಾಳವಾಯಿತು. ವಿದ್ಯಾರ್ಥಿಗಳು ಗಲಭೆಯೆಬ್ಬಿಸಿದರು; ಸನ್‌ಯತ್‌ಸೇನನು ತಿರುಗಿ ಮುಂದೆಬಂದು ೧೯೨೩ರಲ್ಲಿ ಹೊಸತೊಂದು ಸರಕಾರ ಸ್ಥಾಪನೆಯಾಯಿತು.

ಆಧುನಿಕ ಚೀನದ ಪಿತನಾದ ಸನ್‌ಯತ್‌ಸೇನನು ೧೯೨೫ರಲ್ಲಿ ಮಡಿದು ಹೋದರೂ ಅವನು ಚೀನಕ್ಕೆ ಬೋಧಿಸಿದ ಮಹಾಮಂತ್ರಗಳನ್ನು ಚೀನದ ನಾಯಕರು ಈಗಲೂ ಪಠಿಸುತ್ತಿದ್ದಾರೆ. ಪ್ರತಿಸಲ ಚೀನದ ಶಾಸನಸಭೆ ಸೇರಿದಾಗ ಸನ್‌ಯತ್‌ಸೇನನು ಬರೆದಿಟ್ಟ ಮಾರ್ಗದರ್ಶಿಯ ಪಾರಾಯಣವಾಗುತ್ತದೆ. ಚೀನದವರು ಜನಾಂಗವಾಗಬೇಕು, ಜನತೆಗೆ ಸ್ವಾತಂತ್ರ್ಯವಿರಬೇಕು, ಜನತೆಯ ಆರ್ಥಿಕಹಿತ ಸಾಧಿಸಬೇಕು—ಈ ಮೂರು ಮಹಾಮಂತ್ರಗಳನ್ನು ಯಾವ ಚೀನರೂ ಮರೆಯುವಂತಿಲ್ಲ. ಅದರಂತೆ ತಮ್ಮ ಉದ್ದೇಶಸಾಧನೆಗಾಗಿ ದೇಶದಲ್ಲಿ ಒಂದೇ ಪಕ್ಷವಿರಬೇಕು. ಹಿಂದಿನ ಸರಕಾರವನ್ನು ಕಿತ್ತೊಗೆಯುವುದು ಮೊದಲನೆಯ ಹೆಜ್ಜೆ, ಅನಂತರದ ಐದಾರು ವರ್ಷ ಅಂದರೆ ಜನತೆ ಪ್ರಜಾಸತ್ತೆಯ ರೀತಿಯನ್ನು ಕಲಿಯುವವರೆಗೆ ದೇಶಪ್ರೇಮಿಗಳ ನಾಯಕರೇ ಸರ್ವಾಧಿಕಾರಿಗಳಾಗಿರಬೇಕು, ಅನಂತರ ಅಮೇರಿಕದ ರೀತಿಯೇ ಪ್ರಜಾಸತ್ತೆ ಸ್ಥಾಪಿತವಾಗಬೇಕು ಎಂದು ಸನ್‌ಯತ್‌ಸೇನನು ಬರೆದಿಟ್ಟದ್ದನ್ನು ಈಗಲೂ ಆದರ್ಶವಾಗಿಟ್ಟುಕೊಂಡಿದ್ದಾರೆ. ಈಗ ಸರ್ವಾಧಿಕಾರಿ ನಾಯಕನ ಕಾಲ; ಮುಂದೆ ಪ್ರಜಾಸತ್ತೆ ಬರಬೇಕು.

ಸನ್‌ಯತ್‌ಸೇನನ ಬೋಧನೆಗಳನ್ನು ಆಚರಿಸುವ ಪ್ರಯತ್ನದಲ್ಲಿ ತೊಡಗಿರುವ ಚೀನದ ನಾಯಕರು ಸಹ ಅವನ ಸಂಗಾತಿಗಳು, ಬಂಧುಗಳು. ಸನ್‌ಯತ್‌ಸೇನನ

ಪತ್ನಿ, ಈಗಿನ ನಾಯಕ ಚಿಯಾಂಗನ ಪತ್ನಿ ಮತ್ತು ಚೀನಿ ಸರ್ಕಾರದ ಅರ್ಥ ಸಚಿವ ಡಾ. ಕುಂಗನ ಪತ್ನಿ—ಈ ಮೂವರೂ ಸೋದರಿಯರು, ಸೂಂಗ್ ಮನೆತನದವರು. ಅವರ ಸೋದರ ಟಿ. ವಿ. ಸೂಂಗನು ಚೀನದ ರಾಯಭಾರಿಯಾಗಿದ್ದಾನೆ.

ಯುರೋಪಿನ ಹದ್ದುಗಳೊಡನೆ ಹೋರಾಡುತಿದ್ದ ಚೀನರ ಸಹಾಯಕ್ಕೆ ನೆರೆ ನಾಡಿನ ಜಪಾನೀಯರು ಬರಬೇಕಿತ್ತು. ಚೀನಿಯರೂ ಜಪಾನರೂ ಮಾನವ ಕುಟುಂಬದ ಒಂದೇ ಕವಲಿನವರು, ಮಂಗೋಲರು. ಜಪಾನರ ಲಿಪಿ, ಚಿತ್ರಕಲೆ, ಬೌದ್ಧಧರ್ಮ—ಇವೆಲ್ಲ ಚೀನದಿಂದ ಹರಿದುಬಂದಂಥವು. ಆದರೆ ಜಪಾನು ಮಾತ್ರ ತನ್ನ ಕರ್ತವ್ಯವನ್ನು ಮರೆತುದಲ್ಲದೆ ಇತರರು ಸೂಜಿಯಿಂದ ಚುಚ್ಚಿದರೆ ತಾನು ಕತ್ತಿಯಿಂದ ಕಡಿಯಲಿಕ್ಕೆ ಹೊರಟಿತು.

ಹಿಂದೊಮ್ಮೆ ಕೊರೆಯಾ ಭಾಗವನ್ನು ಅದು ನಿಷ್ಕಾರಣವಾಗಿ ಸೆಳೆದದ್ದನ್ನು ಮರೆತರೂ ಮೊನ್ನೆಮೊನ್ನೆ ೧೯೩೧ರಲ್ಲಿ ತೋಳ ಕುರಿಮರಿಗಳ ನ್ಯಾಯ ಹಿಡಿದು ಜಗಳವೆಬ್ಬಿಸಿ ಚೀನದ ಮೇಲೆರಗಿ ಮಂಚೂರಿಯಾ ಪ್ರದೇಶವನ್ನು ಅಪಹರಿಸಿತು. ೧೯೩೩ರಲ್ಲಿ ಜೆಹೊಲ್ ಪ್ರಾಂತವನ್ನೂ ಆಕ್ರಮಿಸಿ ೧೯೩೭ರಲ್ಲಿ ಚೀನದ ಸರ್ವನಾಶಕ್ಕೆ ಹೊರಟಿತು.

ಇಷ್ಟೆಲ್ಲ ನಡೆಯುವಾಗ ಯಾವುದೊಂದು ಜನಾಂಗವಾಗಲಿ ಸರ್ವರಾಷ್ಟ್ರ ಸಂಘವಾಗಲಿ ಚೀನಕ್ಕೆ ನೆರವಾಗಲಿಲ್ಲ. ಅತ್ಯಾಧುನಿಕ ಶಸ್ತ್ರಗಳಿಂದ ಸುಸಜ್ಜಿತವಾದ ಜಪಾನು ಕೆಲವೇ ತಿಂಗಳೊಳಗೆ ಚೀನವನ್ನು ವಶಮಾಡಿಕೊಂಡು ಹಳಬರಾದ ಚೀನಿಯರಿಗೆ ಆಧುನಿಕ ತರಬೇತಿಯ ಇಂಜೆಕ್ಷನು ಕೊಟ್ಟು ಸುಧಾರಿಸುವರೆಂದೇ ಪಾಶ್ಚಾತ್ಯ ಜನಾಂಗಗಳು ಹೇಳಲಾರಂಭಿಸಿದುವು.

ಚೀನದ ಭಾಗ್ಯವಿಧಾತನು ಮಾತ್ರ ಬೇರೆ ಎಣಿಸಿದನು. ಚಿಯಾಂಗನ ಪಕ್ಷಕ್ಕೂ ಕಮ್ಯೂನಿಸ್ಟರಿಗೂ ಇದ್ದ ವೈಮನಸ್ಯ ತಾತ್ಪೂರ್ತಿಕವಾಗಿಯಾದರೂ ಮಾಯವಾಗಿ ಅವರು ಒಂದಾಗಿ ಜಪಾನೀಯರನ್ನು ವಿರೋಧಿಸಿದರು. ತಮ್ಮ ಶಸ್ತ್ರಬಲದಿಂದ ಜಪಾನೀಯರು ಸಮುದ್ರ ಕರಾವಳಿಯನ್ನೆಲ್ಲ ವಶಪಡಿಸಿಕೊಂಡು ಚೀನಕ್ಕೆ ಹೊರ ದೇಶದಿಂದ ಒಂದು ಸೂಜಿ ಕೂಡ ಬಾರದಂತೆ ಮಾಡಿದರೂ ಪ್ರತಿಯೊಂದು ಪಟ್ಟಣವೆಂಬಂತೆ ಜಪಾನೀಯರ ಬಾಂಬುಗಳಿಗೆ ಆಹುತಿಯಾದರೂ ಚೀನರು ಬಿಟ್ಟುಕೊಡಲಿಲ್ಲ.

ಒಂದೆಡೆಯಲ್ಲಿ ಯುದ್ಧ ಮುಗಿಯಿತೆಂದು ಜಪಾನೀಯರು ಮುಂಬರಿಯುವಷ್ಟರಲ್ಲೆ ಹಿಂದಿನಿಂದ ಚೀನಿ ಪ್ರಜೆಗಳು ಜಪಾನರ ಸಲಕರಣೆಗಳನ್ನು ಅಪಹರಿಸಿ ಅವರು ಹಿಂದೆ ಸರಿಯುವಂತೆ ಮಾಡಿದರು. ಜಪಾನರ ದಾಳಿಗೆ ಬಲಿಬಿದ್ದ ಶಾಲೆಗಳ ಮಕ್ಕಳನ್ನೆಲ್ಲ ನೂರಾರು ಮೈಲು ದೂರದ ಒಳನಾಡಿಗೆ ಒಯ್ದು ಅಲ್ಲಿ ಅವರ ವಿದ್ಯಾಭ್ಯಾಸ

ತಡೆಯಿಲ್ಲದೆ ನಡೆಯುವಂತೆ ಮಾಡಿದರು. ಚಿಕ್ಕಪುಟ್ಟ ಉದ್ಯಮಗಳೆಲ್ಲ ಸಹಕಾರಿ ರೀತಿಯಲ್ಲಿ ಒಂದುಗೂಡಿ ಸೈನ್ಯಕ್ಕೂ ನಾಗರಿಕರಿಗೂ ಬೇಕಾದ ವಸ್ತುಗಳನ್ನು ತಯಾರಿಸುವಂತಾಯಿತು.

ಹೀಗೆ ಪ್ರತಿ ಹಳ್ಳಿಯ ಪ್ರತಿಯೊಬ್ಬ ಚೀನಿಯನು ಎಡೆಬಿಡದೆ ಜಪಾನೀಯರನ್ನು ಪೀಡಿಸುತ್ತ ಬಂದು ಎಂಟು ವರ್ಷಗಳ ಯುದ್ಧ ಮಾಡಿಯೂ ಜಪಾನು ಇನ್ನೂ ಗುರಿಮುಟ್ಟದಂತಾಗಿದೆ. ತಮ್ಮ ವಶದಲ್ಲಿದ್ದ ಭಾಗದಲ್ಲಿ ಸಹ ಜಪಾನರ ಆಳ್ವಿಕೆ ನಡೆಯುತ್ತದೆಂದು ಹೇಳುವಂತಿಲ್ಲ.

ಅಕಾರಣವಾಗಿ ಚೀನವನ್ನು ಜಪಾನು ಆಕ್ರಮಿಸುವಾಗ ಸುಮ್ಮನಿದ್ದ ಇಂಗ್ಲಾಂಡು ಅಮೇರಿಕಗಳು ತಮ್ಮ ವಸಾಹತುಗಳನ್ನು ಜಪಾನು ಆಕ್ರಮಿಸಿದಂದಿನಿಂದ ಚೀನದ ಮಿತ್ರರಾಗಿದ್ದಾವೆ. ಮೈತ್ರಿಯು ಕಾರ್ಯರೂಪತಾಳಿದ್ದು ಕಡಮೆಯಾದರೂ ಅಲ್ಪಸ್ವಲ್ಪ ಸಹಾಯ ಸಿಕ್ಕಿತೆಂದು ಹೇಳಬಹುದು.

ಅಮೇರಿಕದ ಸಹಾಯಪಡೆದು ಚೀನವು ವಿಜಯಿಯಾಗುವುದೆಂಬುದರಲ್ಲಿ ಸಂಶಯವಿಲ್ಲ. ಅಷ್ಟರಲ್ಲಿ ಅದರ ದುರವಸ್ಥೆ ಹೋಗುವುದೆಂದು ಹೇಳಲಿಕ್ಕಾಗದು. ಎಂಟು ವರ್ಷಗಳ ಪರಿಣಾಮವನ್ನು ಮಾಸಲು ಜನತೆಯ ಒಮ್ಮತದ ಯತ್ನಬೇಕು. ಯುರೋಪಿನ ರಾಷ್ಟ್ರಗಳು ತಾವು ಅನುಭವಿಸಿದ ವಿಶೇಷ ಹಕ್ಕುಗಳನ್ನು ಬಿಟ್ಟುಕೊಡುತ್ತೇವೆಂದು ಹೇಳಿದ್ದರೂ ಅವರ ವಸಾಹತುಗಳು ಬಂದರು ಸ್ಥಳಗಳಿಂದ ಹೋಗುವವೇ ಎಂಬುದು ಇನ್ನೂ ಸಂಶಯ. ಚೀನದೊಳಗಿನ ಅಂತಃಕಲಹ ಕೊನೆಗೊಂಡು ಚಿಯಾಂಗನ ಪಕ್ಷದವರೂ ಕಮ್ಯೂನಿಸ್ಟರೂ ಒಂದಾಗಿ ದೇಶಕಾರ್ಯಕ್ಕೆ ತೊಡಗದಿದ್ದರೆ ಪ್ರೊಮಿಥಿಯಸನು ಬಂಧಮುಕ್ತನಾದಂತಾಗಲಿಲ್ಲ.

ಎಸ್. ಮುಕುಂದರಾವ್.

ಕಾವ್ಯಾವಲೋಕನ

೧. ಶಿಶು ಸಾಹಿತ್ಯ—ಬುಡುಬುಡುಕೆ (ಶಿಶು ಪದ್ಯಮಾಲೆ)—ಬರೆದವರು : ಶ್ರೀ ಜಿ. ವರದರಾಜರಾವ್; ಪ್ರಕಾಶಕರು : ಅಖಿಲ ಕರ್ನಾಟಕ ಮಕ್ಕಳ ಕೂಟ, ಬೆಂಗಳೂರು; ಪುಟ ೩೮ + ೪ ; ಬೆಲೆ, ಎರಡಾಣೆ.

ಪುಟ್ಟ ಪುಟ್ಟ ಪದ್ಯಗಳು ಶ್ರೀ ವರದರಾಜರಾಯರ ಲೇಖನಿಯಿಂದ ಹೊರ ಹೊಮ್ಮಿವೆ. ಸುಮಾರು ಹದಿನಾಲ್ಕು ವರ್ಷಗಳಿಂದ ಇವರು ಪದ್ಯ ಬರೆಯುತ್ತ ಇರುವರಂತೆ. ಮಕ್ಕಳ ಕೂಟದ ಅಧ್ಯಕ್ಷಿಣಿಯರಾದವರೇ ಈ ಬುಡಬುಡಕೆಯನ್ನು ಕನ್ನಡಿಗರ ಬಾಗಿಲಿಗೆ ಕಳಿಸಿದ್ದಾರೆ. ಕೋತಿಯ ಆಟದ ಬುಡಬುಡಕೆಯಂತೆಯೂ ಕಾಮನ ಹಬ್ಬದ ಬುಡಬುಡಕೆಯಂತೆಯೂ, ಈ ಗಡಿಬಿಡಿ ನುಡಿಗಳ ಬುಡಬುಡಕೆಯು ನಿರಪರಾಧಿ.

ಇದ್ದುದನ್ನು ಇದ್ದಹಾಗೆ ಬುಡಬುಡಕೆಯು ಹೇಳಿಬಿಡುತ್ತದೆ—ಶಾಲೆಯು ಮುಚ್ಚಿದೆ; ದಂಡಲಿ ಗುಂಡನು ಹೊಡೆಯುವರು; ಇಂದೇ ಬಂದಿದೆ ಹೊಸ ವರುಷ; ಆಡು ನಾಯಿ ಆಕಳು ಎಲ್ಲ ದೇವ್ರ ಮಕ್ಕಳು; ಮಿಠಾಯಿ ಹೆಸರನ್ನು ಕೇಳಿದ ಒಡನೆ ಸುರಿವುದು ಜೊಲ್ಲದು ಒಂದೇ ಸವನೆ; ಬುಗುರಿಯು ತಂಟೆಯ ಮಾಡದೊಲು ಮೈಮೇಲೆಲ್ಲಾ ಎಳೆದಿವೆ ಬರೆಗಳು. ಆದರೂ ನನ್ನೀ ಬುಗುರಿಗೆ ಪ್ರೇಮವಿದೆ; ಮಿಠಾಯಿ ಪೆಟ್ಟಿಗೆ ದೇವರ ನೆನೆಸುತ ಕೂತಿಹುದು, ಮತ್ತು ಬಿಸಿ ಬೈಗಳ ಮರೆತು ಮಕ್ಕಳೇ ದೇವರು ಮಕ್ಕಳ ಮಾತೇ ದೇವರ ನುಡಿ-ಎಂದು ಮುಂತಾಗಿ, ಎಲ್ಲರಿಗೂ ತಿಳಿದಿರುವ ಮಾತುಗಳನ್ನೇ ಮತ್ತೆಮತ್ತೆ. ದೊಡ್ಡವರು ಗದರಿಸಿ ಅಟ್ಟಿದರೂ ಮುಂದಕೆ ಹೋಗದೆ, ಕವಿಯ, ಕೈಬಿಡದೆ, ಬುಡಬುಡಕೆಯು ಮಕ್ಕಳ ಮನೆಯಬಾಗಿಲಲ್ಲಿಯೇ ಬಡಬಡಿಸುತ್ತ ಇರುತ್ತದೆ.

ಆದರೆ "ಹರಕೆಯಲ್ಲಿ ಸೂಚಿಸಿರುವ ಪದ್ಯಗಳು ಅದೇಕೋ ನಮ್ಮ ಕಿವಿಗೆ ಅಂದವಿಲ್ಲ; ಭಾವನೆಗೆ ಚೆಂದವಿಲ್ಲ.

ಮನೆಯಲ್ಲಿ ಅಪ್ಪನ ಚಾಟಿಯ ಏಟು ತಿನ್ನುವ ಗುಲ್ಡು ಗುಂಡಣ್ಣನಾದ ರಾಮಣ್ಣನ ಪದ್ಯವೂ, ಮಿತಿಯಿಲ್ಲದ ಹರುಷದಲ್ಲಿ ಗುರುಗಳು ಒಳಗಡೆ ಇರಲಿಲ್ಲದಾಗ ಓಹೋ! ಓಹೋ! ಎನ್ನುತ್ತ ಕುಣಿಯುತ್ತ ಇದ್ದ ಹುಡುಗರನ್ನು ದುರದುರ ನೋಡಿ ಪಟಪಟ ಏಟನ್ನು ತೀಡಿ, ತಿಮ್ಮನ ಕರಿ ಕೋಟನ್ನು ಹರಿದು, ಎಲ್ಲರ ಕಿವಿಗಳನ್ನೂ ಹಿಂಡಿ ನಂದಿ ಬೆಟ್ಟದಂತೆ ಕೆಂಪಗೆ ಮಾಡಿ ಹುಡುಗರ ಗಂಟಲು ಒಣಗಿಸಿದ ಲಟ್ಟೇಶ್ವರನ ಪೂಜಾರಿಯ ಪದ್ಯವೂ ಇನ್ನೂ ಇಂಥವೆಲ್ಲವೂ ಮಕ್ಕಳಿಗೆ ಬೇಕೆ?—ಎನ್ನಿಸುತ್ತದೆ.

"ಗೋಲಿ" ಪದ್ಯದಲ್ಲಿ "ಡಬ್ಬುಯ್‌ರಾಜ ದಶಕಾಂಗೇಲ" ಬೇಕಾಗಬಹುದು. ಆದರೆ ಲೇವಡಿ, ಸಾರ್, ದೀಪ್ತಿ, ಗುಲ್ಡು, ಕಳ್ಳೇಕಾಯಿ, ದೇವ್ರ ಮಕ್ಕಳು—ಮೊದಲಾದ ಕೆಲವು ಪದಗಳು ಇತರ ಪದ್ಯಗಲ್ಲಿ ಇಲ್ಲದಿದ್ದರೆ ಆಗುತ್ತಿತ್ತು. ಸಣ್ಣ ಮಕ್ಕಳು ತಮ್ಮ ಅವರಣದಲ್ಲಿ ಇರುವುದನ್ನೆಲ್ಲಾ ಅರಗಿಸಿಕೊಂಡು ಬೆಳೆಯುವವರಾದ್ದರಿಂದ, ಅವರಿಗೆ ನಾವು ಶುದ್ಧವಾದ ಭಾಷೆಯನ್ನು ಕೊಡಬೇಕು. ಹಾಗೆ, ಮನೋಹರವಾದ, ಉತ್ಸಾಹ ಯುತವಾದ ಭಾವಗಳನ್ನೇ ಅವರ ಮುಂದೆ ಬೆಳಗಿಸಬೇಕು.

"ಬುಡಬುಡಕೆ"ಯಲ್ಲಿ ಎಡೆಕೊಡಬಾರದಿದ್ದ ಕೆಲವು ಪದ್ಯಗಳಿವೆ; ಮತ್ತು ಇರ ಬಹುದಾದ ಪದ್ಯಗಳಲ್ಲಿ ಇರಬಾರದಾದ ಕೆಲವು ಭಾವನೆಗಳೂ ಇವೆ. ಆದರೂ ಇವು ಕೆಲವು ಪದ್ಯಗಳು ಒಂದಲ್ಲ ಒಂದು ರೀತಿಯಿಂದ ಚೆನ್ನಾಗಿವೆ—ಬುಡಬುಡಕೆಯವನು, ಗುಜ್ಜಾರಿ, ದೇವ್ರು ಬಂತು ದೇವ್ರು, ಲಾಲಿ ಗುಲಾಲಿ, ಗಾಳಿ ಪಠ, ತೊಟ್ಟಿಲು, ಮತ್ತು ಕೆಲವು, ಚುಟುಕಗಳು.

ಮಕ್ಕಳ ಪ್ರಪಂಚದಲ್ಲಿ ಮಿರುಮಿರುಗುವ—ಅಂಚೆ ಜವಾನ, ಸಾಬೋನು, ಗುಲಗಂಜಿ, ಕೋಡುಬಳೆ, ಕಿಂದರಿಜೋಗಿ, ಪೆಪರ್‌ಮಿಂಟು, ಆರತಿ, ನವಿಲು, ನಾಯಿ, ತಟ್ಟೆ, ಚಂದ್ರ–ಇವುಗಳ ವಿಷಯವಾಗಿ ಕೆಲವರಾಗಲೆ ಪದ್ಯಗಳನ್ನು ಬರೆದುಬಿಟ್ಟಿದ್ದಾರೆ. ಕಸ್ತೂರಿಯ ತುತ್ತೂರಿಯಂತೂ ಬಹಳವಾಗಿ ಮಗುಮೆಚ್ಚಿಕೆಯಾಗಿದೆ. ಈಗಾಗಲೆ ಮಕ್ಕಳ ಕವಿಗಳನೇಕರು ಯಾವ ವಿಷಯ ತೆಗೆದುಕೊಂಡರೂ ಅವುಗಳಲ್ಲಿ ಗೋಚರ ವಾಗುವ ಬಣ್ಣ, ರೂಪಗಳ ಜತೆಗೆ ಮಗು ಮನಸ್ಸು ಅನುಭವಿಸಬಹುದಾದ ಅನೇಕ ಭವ್ಯ ಭಾವಗಳನ್ನು ಸೇರಿಸಿ ಬರೆದಿದ್ದಾರೆ. ಅವು ಮಕ್ಕಳ ಮನಸ್ಸನ್ನು ಸೊಗಸಿನ ಪ್ರಪಂಚಕ್ಕೆ ಒಯ್ಯುತ್ತವೆ. ಮತ್ತು ಮಕ್ಕಳಿಗೆ ನಿತ್ಯ ಉತ್ಸಾಹವನ್ನು ಹುಟ್ಟಿಸುತ್ತವೆ.

ಹಾಗೆಯೇ ಯೂರೋಪಿನಲ್ಲಿ ಅನೇಕರು ಶಿಶುಗಳಿಗಾಗಿ—ಪಶು, ಪಕ್ಷಿ, ಸಸ್ಯ, ಪುಷ್ಪ, ಕ್ರಿಮಿ, ಕೀಟಗಳ ವಿಚಾರಗಳಲ್ಲಿ ಗೀತೆಗಳನ್ನು ಬರೆದಿದ್ದಾರೆ. ಅವುಗಳಲ್ಲಿ ವಿಚಾರಪರಿಪುಷ್ಟಿಯೂ, ಭಾವ ಸೌಂದರ್ಯವೂ, ಊಹೆಯ ಮಾಧುರ್ಯವೂ—ಉಕ್ಕು ತ್ತಿರುತ್ತವೆ. ಹಾಗಿರುವ ಗೀತೆಗಳನ್ನು ಮಕ್ಕಳು ಮಾತ್ರವಲ್ಲ, ಮಕ್ಕಳಂತೆ ನಿರ್ಮಲ ವಾಗಿ ಬೆಳೆವ ಮನಸ್ಸುಳ್ಳವರೆಲ್ಲರೂ ಓದಿ, ಹಾಡಿ, ಕಲಿತು, ನಿತ್ಯಾನಂದವನ್ನು ಪಡೆಯುವರು.

ಈಚೆಗೆ ಕನ್ನಡದಲ್ಲಿ ಶಿಶುಗೀತೆ ಬರೆವವರೆಲ್ಲರೂ ಅತಿ ಅವಸರಪಡುವವರಾಗಿದ್ದಾರೆ. ಯಾವೊಂದು ವಿಷಯವನ್ನೂ ಚೆನ್ನಾಗಿ ಗ್ರಹಿಸಿ ಮನನಮಾಡರು. ಯಾರದಾದರೂ ಸಿದ್ಧವಚನಗಳು ಸಿಕ್ಕಿದರೆ ಸಾಕು. ಅವನ್ನೇ ತಿರುವು ಮುರುವು ಮಾಡಿ ಬರೆದು, ತಮ್ಮ ಬಳಿ ಓಡಾಡುವ ಮಕ್ಕಳಿಗೆ ಕಲಿಸಿಬಿಡುತ್ತಾರೆ. ಅಷ್ಟೇ ಅವರ ಕವಿತಾವೇಶದ ಭಾವ

ವಿಲಾಸದ ವಿತರಣೆ. ಅಷ್ಟನ್ನೇ ಅವಸರದಲ್ಲಿ ಅಚ್ಚುಹಾಕಿಸಿಬಿಡುತ್ತಾರೆ. ಅಲ್ಲಿಗೆ ಅವರಿಗೆ ತೃಪ್ತಿ.

ಮಕ್ಕಳ ಪದ್ಯಗಳಲ್ಲಿ ಇಂದ್ರಿಯ ಪಟುತ್ವವನ್ನು ಹೆಚ್ಚಿಸುವ ವಿವರಣೆ ವಿತರಣೆಗಳಿರಬೇಕು. ಹೆಚ್ಚು ವಿಷಯಗಳನ್ನು ಮಕ್ಕಳು ಗ್ರಹಿಸಬೇಕಾಗಿಲ್ಲ. ಒಂದೆರಡಾದರೆ ಅವರ ಉತ್ಸಾಹವು ದಿನವೆಲ್ಲ ಉರಿಯುತ್ತಾ ಇರುತ್ತದೆ—ಗೋಲಿಯ ಗುರಿ, ಬುಡಬುಡಕೆಯವನ ಬಣ್ಣದ ಬಟ್ಟೆ, ಗಾಳಿಪಟದ ಏರಾಟ, ಹೀಗೆ ಒಂದೆರಡು ಮಗು ಮೆಚ್ಚುವ ವಿಚಾರಗಳೇ ಸಾಕು. ಎಲ್ಲದರಿಂದಲೂ ನೀತಿಯನ್ನೇನು ಹಿಂಡಿಡಬೇಕಾದುದೂ ಇಲ್ಲ!

ಕವಿಗಳು ಶಿಶುಗಳನ್ನು ನೋಡಿ ಬರೆಯಬಹುದು, ಮತ್ತು ತಮ್ಮ ಶಿಶುತನದ ನೆನವರಿಕೆಗಳಲ್ಲಿ ಅದ್ದಿ ಬರೆಯಬಹುದು. ಮತ್ತು ಒಂದೊಂದು ವೇಳೆ ಸಂಸ್ಕೃತಿಯ ಉದಾತ್ತ ಭಾವಗಳನ್ನು ಅಡಗಿಸಿಟ್ಟು ಬರೆಯಬಹುದು. ಕೆಲವು ವೇಳೆ ಶಿಶುಗಳು ಆಡುವ ಒಂದೆರಡು ಮಾತುಗಳನ್ನೇ ಕಳಶವಾಗಿ ಸೇರಿಸಿ ಮಾತಿನ ಗುಡಿಯನ್ನು ಕಟ್ಟಬಹುದು.

ಮಗು ಮಾತಿನ ಗಣಿ, ಭಾವಗಳ ವಿದ್ಯುದ್ ಯಂತ್ರ, ಮಾನವ ಸಂಸ್ಕೃತಿಯ ಹೊಸ ಚಿಗುರು, ಕುಲವೈಭವವನ್ನು ಕಂಪಿಡುವ ಬಿರಿಮುಗುಳು. ಅದರ ಸೊಗಸಿನ ಹರಳೊಂದನ್ನು ಆರಿಸಿ, ಸಾಣೆ ಕೊಟ್ಟು, ಲಲಿತಪದಕುಂದಣದಲ್ಲಿ ಕೂರಿಸಿದರೂ ಸಾಕು. ಅದೊಂದು ಅಮೂಲ್ಯ ತೊಡವಾಗಿ ಕನ್ನಡ ಸರಸ್ವತಿಯ ಕೊರಳಲ್ಲಿ ಮೆರೆಯುವುದು. ಮಗುವು ಪ್ರೀತಿ, ಭಕ್ತಿ, ಆಸೆ, ಕೋಪ ಅಥವ ಚಾಂಚಲ್ಯದ ಶಿಖರವನ್ನು ಮುಟ್ಟಿದಾಗ, ಅದರ ಭಾವಾವೇಶದ ನುಡಿಗಳಿಗಾಗಿ ಕವಿಯು ಕಾದಿರುವನು. ಹಾಗೆ ಕಾದು ಆರಿಸಿ ಪದಕಟ್ಟಿದಾಗ ಮಗು ತನ್ನ ಸಾಧಾರಣ ಜೀವನದಲ್ಲಿ ಅಂಥ ಪದಗಳನ್ನೇ ಹೇಳಿಕೊಂಡು ಕುಣಿಯಬಲ್ಲದು. ಏಕೆಂದರೆ ಮಾನವ ಶಿಶುವು ಮುಟ್ಟಬಹುದಾದ ಭಾವಗಿರಿ ಶಿಖರದ ಸುಖಾನುಭವವನ್ನು ಅವು ಸುಲಭವಾಗಿ ಒದಗಿಸುತ್ತವೆ. ಮೇಲೆ ಹೇಳಿದ ರೀತಿಯಲ್ಲಿ ಒಡಮೂಡಿಸಿದ ಪದ್ಯಗಳಲ್ಲಿರುವ ಅಮೃತ ಭಾವಗಳು, ಮಗುಜೀವನದಲ್ಲಿ ಬೆರೆಯುವುದಲ್ಲದೆ, ಅದರ ಮಾತಿನಲ್ಲೂ, ಕಾರ್ಯದಲ್ಲೂ ರೂಪಗೊಳ್ಳುತ್ತವೆ.

ಮಕ್ಕಳ ಪದ್ಯಗಳಲ್ಲಿ ಜಾತಿಭೇದಗಳಿರಬೇಕಾದ್ದಿಲ್ಲ. ಅವುಗಳ ಸಲಹೆಯೂ ಕೂಡದು. ಪಶು, ಪಕ್ಷಿ, ಪ್ರಾಣಿ, ಸಸ್ಯಗಳ ಗುಣ ವಿಭಾಗ, ವರ್ಣ ವಿಭೇದಗಳು, ವಸ್ತ್ರ ವೈಚಿತ್ರ್ಯಗಳು, ಅನುಕೂಲವಾಗಿ ಉಪಯೋಗಕ್ಕೆ ಬರುವವು. ಕವಿಗಳು ಅವುಗಳನ್ನು ಉಪಯೋಗಿಸಿಕೊಳ್ಳಬಹುದು.

ಒಟ್ಟಿನಲ್ಲಿ ಶ್ರೀ ವರದರಾಜಾರಾಯರು ಮಕ್ಕಳ ಹಾದಿಯಲ್ಲಿ ಹೊರಟು ಬಹು

ದೂರ ಸಾಗಿದ್ದಾರೆ. ಇವರ ಪದ್ಯಗಳು ಮಕ್ಕಳಿಗೆ ಮೆಚ್ಚಿಕೆಯಾಗಿವೆ; ಅಂತೇ ಕನ್ನಡ ಸಾಹಿತ್ಯಕ್ಕೂ ಮೆಚ್ಚಾಗಲಿ. ಕನ್ನಡ ಮಕ್ಕಳ ಕೂಟವು ಶಿಶು ಶಾಹಿತ್ಯದ ಬೆಳವಣಿಗೆಗೆ ಇನ್ನೂ ಹೆಚ್ಚಿನ ಮೆಚ್ಚಿನ ನೆಚ್ಚಿನ ಕೆಲಸಗಳನ್ನು ಮಾಡಲು ನಾಡಿನ ಮಹೋದಯರು ನೆರವಾಗಲಿ.

ಅ. ಲ. ಹೊಯಿಸಳ.

*
* *

೨. ಶಕ್ತಿಭದ್ರ ಮಹಾಕವಿಯ ಆಶ್ಚರ್ಯ ಚೂಡಾಮಣಿ (ಕನ್ನಡ)—ಬರೆದವರು: ವಿದ್ವಾನ್ ಎಂ. ರಾಮಕೃಷ್ಣಭಟ್ಟರು, ಎಂ.ಎ., ಸಂಸ್ಕೃತ ಲೆಕ್ಚರರ ಮತ್ತು ಸೂಪರಿಂಟೆಂಡೆಂಟ್ ಆಫ್ ಇಂಡಿಯನ್ ಲಾಂಗ್ವೇಜೀಸ್, ಸ್ಯೆಂಟ ಜೋಸೆಫ್ಸ ಕಾಲೇಜ್, ಬೆಂಗಳೂರು; ಪುಟಗಳು: ಕಿರೀಟಾಕಾರದ ೬+೯೦; ಕ್ರಯ. ರೂ. ೧—೪—೦; ಅಚ್ಚುಕೂಟ: ದೇಶಬಂಧು ಮುದ್ರಾಣಾಲಯ, ಕೋಟೆ, ಬೆಂಗಳೂರು ಸಿಟಿ; ದೊರೆಯುವ ಸ್ಥಳ: ಪಾಂಡೇಶ್ವರ ಸುಬ್ರಾವ್, ಪಾರ್ಕ್ ವ್ಯೂ, ಕೊಟ್ಟಿಗೆ ಲೈನ್, ಬೆಂಗಳೂರು ಸಿಟಿ ಮತ್ತು ಎಂ. ರಾಮಕೃಷ್ಣ ಭಟ್ಟ. ೨೮ ಈಸ್ಟ ರೋಡ್, ಬಸವನಗುಡಿ, ಬೆಂಗಳೂರು ಸಿಟಿ.

ಕನ್ನಡದಲ್ಲಿ ಸಾಂಪ್ರದಾಯಿಕ ನಾಟಕಗಳ ಕೊರತೆಯಿರುವಾಗ ವಿದ್ವಾನ್ ಎಂ. ರಾಮಕೃಷ್ಣ ಭಟ್ಟರು ಕನ್ನಡಿಗರ ಕೈಯಲ್ಲಿ ಈ ನಾಟಕವನ್ನಿರಿಸಿದುದಕ್ಕೆ ಅವರನ್ನು ನಾವು ಹೃತ್ಪೂರ್ವಕ ಅಭಿನಂದಿಸುತ್ತೇವೆ. ಬಹುತರವಾಗಿ ಸಂಸ್ಕೃತದೊಳಗಿನ ಎಲ್ಲ ನಾಟಕಗಳು ಕನ್ನಡಕ್ಕೆ ಪರಿವರ್ತಿತವಾಗಿವೆ. ತಪ್ಪಿ ಉಳಿದ ನಾಟಕಗಳನ್ನು ನಮ್ಮ ಪಂಡಿತರು ಕನ್ನಡಕ್ಕೆ ಪರಿವರ್ತಿಸುವ ಕಾರ್ಯವನ್ನು ಮರೆದಿರಲಿಲ್ಲವೆಂದು ನಮಗೆ ತುಂಬಾ ಸಂತೋಷವಾಗಿದೆ. **ಆಶ್ಚರ್ಯಚೂಡಾಮಣಿಯಲ್ಲಿ** ಆಶ್ಚರ್ಯಕ್ಕೆ ಕಾರಣವಾಗುವ ಕೆಲವು ವಸ್ತುಗಳೂ ಸಂಗತಿಗಳೂ ಇದ್ದರೂ ಇಡಿಯ ರಾಮಾಯಣದ ಮುಖ್ಯ ಭಾಗವನ್ನು ಒಂದು ಪುಟ್ಟ ನಾಟಕದಲ್ಲಿ ಸಂಕ್ಷೇಪಗೊಳಿಸಿದ **ಶಕ್ತಿಭದ್ರ ಮಹಾ ಕವಿಯ** ನಾಟ್ಯ ಸಾಮರ್ಥ್ಯವು ಸ್ತೋತ್ರಾರ್ಹವಾಗಿದೆ. ಓದುಗರನ್ನು ಚಕಿತಗೊಳಿಸುತ್ತಿದೆ. ಇಂತಹ ನಾಟಕವನ್ನು ಕನ್ನಡಿಗರಿಗೆ ಒದಗಿಸಿ ಕೊಟ್ಟ **ಶ್ರೀ ರಾಮಕೃಷ್ಣಭಟ್ಟರು** ಧನ್ಯರು.

ಈ ನಾಟಕವನ್ನು ಸಹೃದಯರಾದ ಓದುಗರ ಮುಂದಿಡುವಾಗ "ಹಳಗನ್ನಡದ ಸೊಬಗು ನನ್ನ ಮೆಚ್ಚುಗೆಗೆ ಪಾತ್ರವಾದುದರಿಂದ ಪದ್ಯಗಳನ್ನೆಲ್ಲ ಅದರಲ್ಲಿ ಬರೆದಿರುವೆನು. ಗದ್ಯಭಾಗವನ್ನು ಸ್ವಲ್ಪ ಮಿಶ್ರ ಭಾಷೆಯಲ್ಲಿ ಬರೆದೆನು. ಇದೊಂದು ನನ್ನ ಹೊಸ ದಾರಿಯಾಗಲೆಂದು ಹವಣಿಸುವೆನು" ಎಂದು ಪರಿವರ್ತನಕಾರರು ತಮ್ಮ ಮುನ್ನುಡಿಯಲ್ಲಿ ಹೇಳಿದ್ದಾರೆ. ಕನ್ನಡದ ವೃತ್ತ ಕಂದಗಳಿಗೆ ಹಳಗನ್ನಡದ ಭಾಷೆ ಆವಶ್ಯಕವಾ

ಗಿದೆ. ಅದು ಅವುಗಳಿಗೆ ಒಂದು ಮೆರಗು ಕೊಡುತ್ತಿದೆ ಎಂದಿಟ್ಟುಕೊಳ್ಳೋಣ. ಆದರೆ ಗದ್ಯದಲ್ಲಿ ಹೊಸ–ಹಳಗನ್ನಡಗಳ ಮಿಶ್ರಣವೇಕೆ? ಎಂಬುದು ತಿಳಿಯದು. ಅದು ಸಂಪೂರ್ಣವಾಗಿ ಹೊಸಗನ್ನಡವಾಗಿರಬಹುದು ಅಥವಾ ಸಂಪೂರ್ಣವಾಗಿ ಹಳಗನ್ನಡವಾಗಿರಬಹುದು. ಹೀಗಿರುವುದರಿಂದಲೇ ಆ ಭಾಷೆಗೆ ಒಂದು ಸೊಬಗು ಉಂಟಾಗುತ್ತದೆ. ಇದೊಂದು ತಮಗೆ ಹೊಸ ದಾರಿಯಾಗಬೇಕೆಂದು ಹವಣಿಸಿದ್ದಾರೆ ಅವರು. ಆದರೆ ಅಷ್ಟಕ್ಕೆ ತೃಪ್ತಿಯಿಲ್ಲದೆ ಮರುಕ್ಷಣಗ್ರಂಥದಲ್ಲಿ ಅಚ್ಚಗನ್ನಡವನ್ನು ಪ ಯೋಗಿಸಿ ಅದನ್ನು ಜನತೆಯಲ್ಲಿ ಪ್ರಚಾರಮಾಡುವುದು ಬರೆಹಗಾರನ ಹೆಗ್ಗುರಿಗಳ ಲ್ಲೊಂದಾಗಿರಬೇಕು ಎಂದು ಹೇಳುತ್ತಾರೆ. ಈ ಎಲ್ಲಾ ಮಾತುಗಳನ್ನು ಹೇಗೆ ಸಮನ್ವಯ ಮಾಡಿಕೊಳ್ಳಬೇಕೋ ತಿಳಿಯದು. ಇರಲಿ, ಇವರ ಆಶಯದಂತೆಯೇ ಹೊಸಹಳಗನ್ನಡಗಳ ಬೆರಕೆಯಿರಲಿ. ಅಲ್ಲಿ **ಹದ್ದುಗಳಿಗೆ ಹಚ್ಚುಗೊಡುವೆನು** (ಪು. ೧೬), ಹೆಚ್ಚುಗೆಯ ಪ್ರಣಾಮವು (ಪು. ೫೯), ಯಮಲೋಕಕ್ಕೆ ಹೊರಮಟ್ಟು (ಪು. ೭೧) ಎಂಬ ಮುಂತಾದ ಪ್ರಯೋಗಗಳಲ್ಲಿ ಪಕಾರಕ್ಕಾದೇಶವಾದ ಹಕಾರದ ಔಚಿತ್ಯ ತೋರುವುದಿಲ್ಲ. ಇಷ್ಟೇ ಅಲ್ಲ. ಇಲ್ಲಿ ಮುದುಕನು ತನ್ನ ನರೆಗೂದಲುಗಳಿಗೆ ಕಪ್ಪುಬಣ್ಣ ಹಚ್ಚಿಕೊಂಡು ಎರಡು ದಿನಗಳು ಕಳೆದ ಮೇಲೆ ಆತನ ಕೂದಲುಗಳು ವಿವರ್ಣವಾಗಿರುವಂತೆ, ಶಬ್ದ ಸೌಂದರ್ಯ ಕೆಟ್ಟುಹೋಗಿದೆ. 'ಪೊರಮಡು ಶಬ್ದ 'ಹೊರಮಡು' ಎಂದಾದುದು ಮತ್ತೆ ಮೂರು ಸಂದರ್ಭಗಳಲ್ಲಿ ಕಂಡುಬರುತ್ತದೆ. ಅಂದರೆ ಹೊಸಹಳಗನ್ನಡ ಶಬ್ದಗಳನ್ನು ಬೆರಸುವಾಗ, ಅವುಗಳ ಮಿಶ್ರಪ್ರಯೋಗ ಗಳಲ್ಲಿ ಹೊಸಗನ್ನಡದ ರೀತಿ ಕೆಡದಂತೆ ನೋಡಿಕೊಳ್ಳಬೇಕೆಂಬುದು ನಮ್ಮ ಅಭಿಪ್ರಾಯ. ಹಳಗನ್ನಡ ಪ್ರಯೋಗಗಳು ನಮಗೆ ಆವಶ್ಯಕವೇ. ಇಂತಹ ಶೈಲಿಯಿಂದ ಅಳಿದುಹೋದ ಶಬ್ದಗಳ ಅರಿವುಉಂಟಾಗುವುದಲ್ಲದೆ ಹಳಸಾಹಿತ್ಯದೊಳಗಿನ ಅವುಗಳ ಅರ್ಥ ತಿಳಿ ಯಲು ಒಂದು ಅನುಕೂಲತೆ ಉಂಟಾಗುತ್ತದೆ ಜನರಿಗೆ.

ನಾಟಕದಲ್ಲಿ ಕೆಲವು ಅಪಪ್ರಯೋಗಗಳಿವೆ. ಉದಾ: ನನಗೆ ಶರಣವು (ಪು. ೬೦), ಅವರಿಬ್ಬರ ನಡುವಿನಲ್ಲಿ ನಿಲ್ಲುವಳು (ಪು. ೬೦), ಪೊಲ್ಲದಿಳಿಯುಂ (ಪು. ೭೬, ಪ. ೭), ನೀನೆ ನಿನ್ನ ಕೆಳದಿಯನ್ನು ಕರೆದುತಾ (ಪು. ೭೭), ನಾಗರಿಕರ ತಲೆಗಳಿನ್ನೂ ನಿಗುರಲಿಲ್ಲ (ಪು. ೮೭) ಮುಂ. ಇವುಗಳನ್ನು ಮುಂದಿನ ಮುದ್ರಣಗಳಲ್ಲಿ ತಿದ್ದಿಕೊಳ್ಳಬಹುದು. 'ಹರೀಶ್ವರ' ಎಂದರೆ 'ಸುಗ್ರೀವ'ನೆಂದು ಅರ್ಥಮಾಡಬಹುದಾದರೂ, 'ನೀರ ಹಗೆ' ಎಂದರೆ 'ಅಗ್ನಿ, ಚಿತೆ' ಎಂದು ಬಲ್ಲವರು ಅರ್ಥಮಾಡಬಹುದಾದರೂ ಸಾಮಾನ್ಯರಿಗೆ ಆ ಅರ್ಥಹೊಳೆಯುವುದು ಕಷ್ಟ.

ಕಂದಪದ್ಯಗಳ ರಚನೆಯಲ್ಲಿ ಅಷ್ಟು ಸೊಗಸು, ಸೌಕರ್ಯ, ರಮ್ಯತೆ ಕಂಡುಬರಲಿಲ್ಲ.

ಹಾಡುವವರು ಅವುಗಳನ್ನು ಹೇಳುವಾಗ ತಡವರಿಸುವಂತಾಗುತ್ತದೆ. ಅರ್ಥ ಸರಿಯಾಗಿದೆ; ಛಂದೋದೋಷಗಳಿಲ್ಲ; ಪ್ರಾಸದೋಷಗಳಿಲ್ಲ. ಆದರೂ ಬಿಗಿವು ಕಡಿಮೆಯಾಗಿ ಶಿಥಿಲತೆ ಹೆಚ್ಚಿದಂತೆ ಅಲ್ಲಲ್ಲಿ ಕಂಡುಬರುತ್ತದೆ. ಅದನ್ನು ಗಾಯಕರೇ ವಿಶದಗೊಳಿಸಬೇಕು. ನಮಗೆ ಸಾಧ್ಯವಲ್ಲದ ಮಾತು ಅದು.

ಸಂಧಿದೋಷಗಳು ಅಲ್ಲಲ್ಲಿವೆ: ಉದಾ: **ಸುತ್ತಲು ನೋಡುಗುಂ** (ಪು. ೨೮, ಪ. ೧೫) ಇಲ್ಲಿ 'ನೋಡುಗುಂ' ಪದಕ್ಕೆ ಅರ್ಥವೇನು? **ಯುವಾನ ನದಟಿಂ** (ಪು. ೩೦, ಪ. ೨೨) ಇಲ್ಲಿ 'ನದಟಿಂ' ಪದಕ್ಕೆ ಅರ್ಥವೇನು? ಇಂತಹ ಅನೇಕ ದೋಷಗಳಿವೆ. ಇವುಗಳನ್ನು ಈ ನಾಟಕದಲ್ಲಿಯೇ ಕಾಣುತ್ತೇವೆಂದಲ್ಲ. ಮೈಸೂರು ಮದ್ರಾಸ ಭಾಗಗಳಲ್ಲಿ ಅಚ್ಚಾದ ಪುಸ್ತಕಗಳಲ್ಲಿ ಇವು ಸ್ವಾಭಾವಿಕ. ಪಂಡಿತರು ಈ ಕಡೆಗೆ ಏಕೆ ಗಮನಕೊಡುವುದಿಲ್ಲವೋ ತಿಳಿಯದು. ಮೈಸೂರು ವಿಶ್ವವಿದ್ಯಾಲಯ ಮತ್ತು ಕನ್ನಡ ಸಾಹಿತ್ಯ ಪರಿಷತ್ತುಗಳು ಇತ್ತ ಗಮನಕೊಟ್ಟರೆ ಇಂತಹ ದೋಷಗಳನ್ನು ಬೇಗನೆ ದೂರಮಾಡಲು ಬರಬಹುದು.

ಇಲ್ಲಿಯ ವರೆಗೆ ದೋಷಗಳನ್ನೇ ಬಯಲಿಗೆಳೆಯಲಾಗಿದೆ. ನಾಟಕದೊಳಗಿನ ಗುಣಗಳನ್ನು ಹೇಳದೆ ಬಿಟ್ಟರೆ ನಾವು ದೋಷೈಕದೃಷ್ಟಿಗಳಾಗುವ ಭಯವಿದೆ. ಶ್ರೀ ರಾಮಕೃಷ್ಣಭಟರು ಉಭಯ ಭಾಷಾವಿಶಾರದರಾಗಿರುವುದರಿಂದ ಸಂಸ್ಕೃತ ನಾಟಕದೊಳಗಿನ ರಸಭಾವಗಳನ್ನು ಅಚ್ಚಳಿಯದೆ ಉಳಿಸಿ ತೋರಿಸಿದ್ದಾರೆ. ಆ ಬಗ್ಗೆ ನಾವು ತುಂಬಾ ಅಭಿಮಾನಪಡುತ್ತೇವೆ. ಅವರ ಭಾಷೆಯಲ್ಲಿ ಒಂದು ಬಿಗುವಿದೆ, ಸ್ವಾರಸ್ಯವಿದೆ, ಮಾರ್ದವವಿದೆ, ರಮಣೀಯತೆಯಿದೆ. ಆದರೆ ಅದು ಅವರ ಒಂದು ಉದ್ದೇಶದ ಮೂಲಕ ಕೃತಕವಾಗಿದೆ. ತಮ್ಮ ಸ್ವಾಭಾವಿಕ ಭಾಷೆಯಿಂದ ಅವರು ಈ ನಾಟಕವನ್ನು ಬರೆದಿದ್ದರೆ ಅದನ್ನು ತಲೆಯಮೇಲಿಟ್ಟುಕೊಂಡು ಕುಣಿಯಬಹುದಿತ್ತೆಂದು ಹೇಳುವ ಹಾಗಿದೆ. ಸಂಸ್ಕೃತ ಭಾಷಾ ಪಂಡಿತರು ಯಾವಾಗಲೂ ರಸಿಕರಾಗಿರುತ್ತಾರೆ. ಶ್ರೀ ರಾಮಕೃಷ್ಣಭಟ್ಟರು ಅವರ ವರ್ಗಕ್ಕೆ ಸೇರಿದವರಾದುದರಿಂದ ಸಹೃದಯರ ಹೃದಯದೊಳಗಿನ ರಸತಂತಿಗಳನ್ನು ಈ ನಾಟಕದ ಮುಖಾಂತರ ಮಿಟುಕುತ್ತಿದ್ದಾರೆ. ಆದುದರಿಂದ ಇಂತಹ ಗ್ರಂಥಗಳನ್ನು ಒದಗಿಸಿಕೊಟ್ಟುದಕ್ಕಾಗಿ ಅವರನ್ನು ಮತ್ತೊಮ್ಮೆ ಅಭಿನಂದಿಸಿ ಅವರಿಂದ ಇಂತಹ ಹೊಸ ಹೊಸ ಕೃತಿಗಳು ನಮಗೆ ದೊರೆಯಬೇಕೆಂದು ಪ್ರತೀಕ್ಷಿಸುತ್ತೇವೆ.

ಕೆ.ಜಿ ಕೆ.

*
* *

೩. ಅನ್ನಪೂರ್ಣಾಮಂದಿರ (ನಿರುಪಮಾದೇವಿಯವರ ಸಾಮಾಜಿಕ ಕಾದಂಬರಿ)—ಅನುವಾದಿಸಿದವರು: ಶ್ರೀ ಮ. ಗ. ಶೆಟ್ಟಿ ಅವರು, ಅಂಕೋಲಾ; ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಧಾರವಾಡ; ಕಿರಣ ೩; ಪು. ೧೬೬; ಬೆಲೆ, ಎರಡು ರೂಪಾಯಿ.

ಇದೊಂದು ಸಮಾಜದ ಜೀವನಚಿತ್ರ; ಜೀವನದ ಸಿಹಿಕಹಿಗಳಿಂದ ತುಂಬಿದೆ. ಇಲ್ಲಿ ಸಿಹಿಗಿಂತ ಕಹಿಯೇ ಹೆಚ್ಚಾಗಿದೆ. ಮೂರು ಮನೆ ಮಂದಿಗಳೂ ಅವರ ಸಂಬಂಧಿಗಳೂ ಇಲ್ಲಿ ಬರುವ ಮುಖ್ಯ ವ್ಯಕ್ತಿಗಳು. "ಬಡತನದ ಭೂತವು" ಎಂತಹ ದಾರುಣ ಸ್ಥಿತಿಗೆ ಜನರನ್ನು ತಂದುಬಿಡುತ್ತದೆಂಬುದು ಇಲ್ಲಿ ಅತಿಮಾರ್ಮಿಕವಾಗಿ ಚಿತ್ರಿತವಾಗಿದೆ.

ರಾಮಶಂಕರನು ದಾರಿದ್ರ್ಯದಿಂದ ಪೀಡಿತನಾದ ಒಬ್ಬ ಬ್ರಾಹ್ಮಣ. ಅವನಿಗೆ ತನ್ನ ಬಡಕುಟುಂಬದ ಜೀವನವನ್ನು ನಿರ್ವಹಿಸುವುದು ಕಷ್ಟವಾಗುತ್ತದೆ. ಕುಟುಂಬವು ಬಡವರಿಗಿರುವಂತೆ ದೊಡ್ಡದಾಗಿಯೇ ಇದೆ—ಅವನ ಪಡಿನೆಳಲಂತಿರುವ ಹೆಂಡತಿ ಜಾಹ್ನವಿ, ಅವರ ನಾಲ್ವರು ಮಕ್ಕಳು—ಸತೀ, ಸಾವಿತ್ರಿ, ಹರಿಶಂಕರ, ಕಾಳಿಶಂಕರ—ಮತ್ತೊಬ್ಬ ವಿಧವೆ ಅತ್ತಿಗೆ. ಹೆತ್ತವರನ್ನು ಲೆಕ್ಕಿಸದೆ, ಹಿರಿಯ ಮಗನಾದ ಹರಿಶಂಕರನು ಚಾಂದಪುರ ಬಾಬುವಿನ ನಾಟಕ ಮಂಡಳಿಯಲ್ಲಿ ತನ್ನ ಆಯುಸ್ಸನ್ನು ಸವೆಯಿಸುವನು. ರಾಮಶರ್ಮನು ನಿರುದ್ಯೋಗಿ, ಕೊನೆಗೆ ಪರೋಪಕಾರಿಯಾದ ವಿಶ್ವೇಶ್ವರನ ಸಹಾಯದಿಂದ ಒಂದು ಪುಟ್ಟ ಉದ್ಯೋಗವನ್ನು ಪಡೆಯುವನು. ಆದರೆ ಅದೂ ಹೆಚ್ಚು ಕಾಲವಿರುವುದಿಲ್ಲ. ಮಗಳಾದ ಸತಿಯು ವಿವಾಹಕ್ಕೆ ಪ್ರಾಪ್ತವಯಸ್ಕಳಾದರೂ ಯೋಗ್ಯಸಂಬಂಧವು ಲಭಿಸದು. ವಿಶ್ವೇಶ್ವರನು ಸತಿಯನ್ನು ಮದುವೆಯಾಗುವನೆಂಬ ಹಿರಿಯಾಸೆಯು ನಿರಾಶೆಯಾಗಲು, ರಾಮಶಂಕರನು ಕಂಗಾಲಾದನು. ಆರೋಗ್ಯವು ತುಂಬಾ ಕೆಟ್ಟುಹೋಗುವುದು. ಹೇಗಾದರೂ ತನ್ನ ಜಾತಿಕುಲಮರ್ಯಾದೆಗಳನ್ನುಳಿಸಲು, ಸತಿಯನ್ನು ನವಗ್ರಾಮದ ಅರುವತ್ತು ವರುಷದ 'ಲಾಹಿಡಿ'ಗೆ ಇದ್ದ ಆಸ್ತಿಪಾಸ್ತಿಯನ್ನು ಅಡವು ಹಾಕಿ ಬಂದ ಮುನ್ನೂರು ರೂಪಾಯಿ ವರದಕ್ಷಿಣೆಯೊಂದಿಗೆ ಮದುವೆಮಾಡಿಕೊಡುವನು. ರಾಮಶಂಕರನ ಮರಣ. ಕರ್ತವ್ಯಭ್ರಷ್ಟನಾದ ಹರಿಶಂಕರನು ತಂದೆಯ ಉತ್ತರಕ್ರಿಯೆಗಳಿಗೂ ಬಾರದಿರುವುದು. ಮದುವೆಯಾದ ಕೆಲವೇ ದಿನಗಳಲ್ಲಿ (ಪತಿಗೃಹವನ್ನು ನೋಡುವುದಕ್ಕೂ ಮೊದಲೆ) ಸತಿಗೆ ವೈಧವ್ಯಪ್ರಾಪ್ತಿ. ಮನೆಯ ಭಾರವೆಲ್ಲಾ ಸತಿಯ ಮೇಲೆ. ಧೈರ್ಯಸ್ಥೈರ್ಯಗಳಿಂದ ಊರವರ ನಿಂದೆಯನ್ನು ಸಹಿಸುವಳು. "ಹೆರವರ ಎಂಜಲಿಗೇಕೆ ಕೈಯೊಡ್ಡಬೇಕು?" ಎಂಬ ಸದಭಿಮಾನದ ಧ್ಯೇಯದಿಂದ ಸತಿ ಸಾವಿತ್ರಿ ಸಹೋದರಿಯರು ಇತರರನ್ನು ಯಾಚಿಸರು, ಇತರರು ಅಂತೆಯೇ ಸಹಾಯ ನೀಡಬಂದರೆ ಒಲ್ಲರು. ಈ ರೀತಿಯಾಗಿ ಒಂದೊಂದು ಪಕ್ಷದಲ್ಲೂ ಎಷ್ಟೋ ಏಕಾದಶಿಗಳು. ಮನೆಯೊಳಗಿನ ಒಡವೆಗಳು ಒಂದೊಂದಾಗಿ

ಮಾಯವಾಗುವುವು. ಸತಿಯ ಸತ್ವಪರೀಕ್ಷೆಯ ಕೊನೆಯ ಘಟ್ಟ :—ಸರೇಂದ್ರಬಾಬು ವಿನ ಕೋಟಲೆ, ತನ್ನವರ ಶ್ರೇಯಸ್ಸಿಗೆ ತನ್ನನ್ನೇ ಅರ್ಪಿಸುವ ಸತಿಯ ನಿರ್ಧಾರ, ಅವಳ ಆತ್ಮಹತ್ಯೆ, ಸತಿಯ ದುರಂತದನಂತರ ಆ ಬಡ ಕುಟುಂಬದ ಜೀವನವು ತಕ್ಕಮಟ್ಟಿಗೆ ಉತ್ತಮವಾಗುತ್ತದೆ. ವಿಶ್ವೇಶ್ವರನ ಮತ್ತಿನ ಸಮಯೋಚಿತವರ್ತ ನೆಯು ಮುಂದಣ ಕಹಿಯನ್ನು ಸಿಹಿಯಾಗಿಸುವುದು.

ಈ ಕಾದಂಬರಿಯಲ್ಲಿ ಬರುವ ಪಾತ್ರಗಳೆಲ್ಲಾ ದಿನವಹಿ ನಮಗೆ ಕಾಣುವ ಆದರ್ಶ ಗಳೂ ಸಾಮಾನ್ಯ ವ್ಯಕ್ತಿಗಳೂ ಆಗಿವೆ. 'ಅತ್ತಿಗೆ' ಯಂತಹ ಆಲೋಚನಾವಿಹೀನ ರಾದ, ಮಾತ್ಸರ್ಯದ ಮೂರ್ತಿಗಳಾದ, ಮನುಷ್ಯತ್ವವಿಲ್ಲದ ಅಳ್ಳೆಯ ಮುಳ್ಳಿನಂತಿರುವ ವಿತಂತುಗಳು ನಮ್ಮ ಸಮಾಜದಲ್ಲಿ ಎಲ್ಲಿಯೂ ಕಾಣಬಹುದು. ಕಮಲೆ—ಸತಿಯರ ನಿರ್ಮಲವಾದ ಮೈತ್ರಿ, ಅವರ ಸಂಭಾಷಣೆಗಳೊಳಗಿನ ಹುಸಿ ಜಗಳ, ಆರ್ಥಿಕ ಸ್ಥಿತ್ಯಂತರವೆಷ್ಟಿದ್ದರೂ ಅವರೊಳಗಣ ಪರಸ್ಪರ ಸಖ್ಯ, ಮುಂತಾದವು ನಮ್ಮ ಸಮಾಜದ ಸಹೋದರಿಯರಿಗೆ ತಕ್ಕ ಆದರ್ಶಗಳು. ಸತಿಯ ಈ ನಿರ್ಮಲವಾದ ಮೈತ್ರಿಯಲ್ಲದೆ ಅವಳ ಮಾತಾಪಿತೃ ಭಕ್ತಿ, ಸಹೋದರ ವಾತ್ಸಲ್ಯ, ಅನ್ನಪೂರ್ಣೆಯರಂತಹ ಹಿರಿಯ ರಲ್ಲಿ ಗೌರವ, ವಿಶ್ವೇಶ್ವರನ ಮನಮೆಚ್ಚದ ಸಹಾಯವನ್ನು ಧಿಕ್ಕರಿಸುವುದರಲ್ಲಿ ತೋರಿ ಬರುವ ಸ್ವಾಭಿಮಾನ, ಆತ್ಮಾರ್ಪಣೆ ಮೊದಲಾದ ಗುಣರತ್ನಗಳು ಅವಳನ್ನು ಸ್ನೇಹ, ಭಕ್ತಿ, ಅಭಿಮಾನ, ಧೈರ್ಯ, ಸ್ಥೈರ್ಯಗಳ ಒಂದು ನಿರ್ಮಲ ಮೂರ್ತಿಯನ್ನಾ ಗಿಸಿಬಿಟ್ಟಿವೆ. ಅವಳಲ್ಲಿ ಹೆಕ್ಕಿ ತೆಗೆಯುವುದಕ್ಕೆ ಒಂದು ದುರ್ಗುಣವಿಲ್ಲ. ಹೀಗೆಯೇ, ತನ್ನ ಹೊಣೆಯನ್ನರಿಯದ ಸ್ವಾರ್ಥಿಯೂ ಸುಖಾಭಿಲಾಷೆಯೂ ಆದ ಹರಿಶಂಕರನ ದುರ್ವರ್ತನೆಗಳು; ಪುಟ್ಟ ಕಾಳಿ ಶಂಕರನ ಮಕ್ಕಳಾಟಿಕೆಗಳು; ಸಾಧ್ವೀ ಜಾಹ್ನವಿಯು ಉಸಿರೆತ್ತದೆ, ಕುಗ್ಗದೆ, ಹಿಗ್ಗದೆ ಅನುಭವಿಸುವ ದುಃಖಸುಖಗಳು; ಆರ್ಥಿಕ ದುಸ್ಥಿತಿ ಯಲ್ಲಿ ಹಿಂದಿನ ಕಟ್ಟಳೆಗಳಿಗೆ ಸಿಕ್ಕಿಬಿದ್ದು, ಕೈಲಾಗದೆ, ದಾರಿದ್ರ್ಯದ ಭಾರದಿಂದಲೇ ಕುಸಿದು ಬಿದ್ದ ರಾಮಶಂಕರನ ಜೀವನ; ಪರೋಪಕಾರಿಯಾದರೂ ಲೋಕಾನುಭವ ವಿಲ್ಲದ ವಿಶ್ವೇಶ್ವರನ ವಿಚಿತ್ರ ವರ್ತನೆಗಳು; ಹಳೆ ಮಟ್ಟಿನವಳಾದರೂ ತುಂಬಾ ವಿವೇ ಚನೆಯುಳ್ಳ ಅನ್ನಪೂರ್ಣೆಯ ಸದ್ವರ್ತನೆಗಳು ಈ ಪುಸ್ತಕದಲ್ಲಿ ಅತಿ ಮನೋಹರವಾಗಿ ವರ್ಣಿತವಾಗಿವೆ.

ಇನ್ನು ಈ ಗ್ರಂಥದ ಶೈಲಿಯ ವಿಚಾರವಾಗಿ ಹೇಳುವುದಾದರೆ, ಶೈಲಿಯು ಲಲಿತವಾಗಿಯೂ ಸತ್ವವತ್ತಾಗಿಯೂ ಇದೆ ಎಂಬುದು ನಿಶ್ಚಯ. ಭಾಷೆ, ನುಡಿಗಟ್ಟು, ಸಂಭಾಷಣೆಗಳು ಚೆನ್ನಾಗಿವೆ, ಪುಸ್ತಕವು ಮೂಲದಂತಿದೆ, ಅನುವಾದದಂತಿಲ್ಲವೆನ್ನ ಬಹುದು. ವರ್ಣನೆಗಳು ಹಿತಮಿತವಾಗಿವೆ. (ಉದಾ: ರಾಮಶಂಕರನ ಹರುಕು

ಮುರುಕು ಗುಡಿಸಿಲಿನ ಚಿತ್ರ, ೩೩, ೫೫, ೭೦ ನೆಯ ಪುಟಗಳಲ್ಲಿ ಬರುವ ಬಿಸಿಲು, ಬಿರುಗಾಳಿ, ಅಂಧಃಕಾರಗಳ ವರ್ಣನೆಗಳು), ಕೆಲವೆಡೆ 'ಸಂಭಾಳಿ,' 'ಕಾಳಜಿ' ಮುಂತಾದ ಪ್ರಾಂತಿಕ ಶಬ್ದಗಳು ಪ್ರಯೋಗವಾಗದಿರುತ್ತಿದ್ದರೆ ಚೆನ್ನಾಗಿತ್ತು. **ಹುಡುಗಿಗೆ** ತೆಗೆದುಕೊಂಡು ಹೋಗಬಹುದು. (ಪು. ೪೩) ಮುಂತಾದ ವಿಭಕ್ತಿ ಪಲ್ಲಟಗಳನ್ನೊಳಕೊಂಡ ಪ್ರಯೋಗಗಳೂ ಒಂದೆರಡು ನುಸುಳಿಕೊಂಡಿವೆ. ಆದರೆ ಈ ಪುಟ್ಟ ಅಂಶಗಳು ಕಾದಂಬರಿಯ ಇತರ ಗುಣಗಳ ಮುಂದೆ ನಿಲ್ಲವು. ಶ್ರೀ ಶೆಟ್ಟರು ಈ ಚೆಂದವಾದ ಕೃತಿಯಿಂದ ಕನ್ನಡ ಕಾದಂಬರಿ ಸಾಹಿತ್ಯದ ಐಸಿರಿಯನ್ನು ಹೆಚ್ಚಿಸಿದ್ದಾರೆ.

ಎಂ. ಮರಿಯಪ್ಪ ಭಟ್ಟ.

ವಸ್ತುಕೋಶ

ಹಳೆ ನಾಣ್ಯ ಶಾಸ್ತ್ರದ ಸಂಶೋಧನೆಗಳು

ಚರಿತ್ರೆ ಬರೆಯುವವರಿಗೆ ಹಲವಾರು ಆಧಾರಗಳಿವೆ. ಇವುಗಳಲ್ಲಿ ಹಳೆಯ ನಾಣ್ಯಗಳ ಶಾಸ್ತ್ರ ಬಹಳ ಮುಖ್ಯವಾದುದು. ಕೆಲವರಿಗೆ ಹಳೆಯ ನಾಣ್ಯಗಳನ್ನು ಸಂಗ್ರಹಿಸುವುದೇ ಗೀಳಾಗಿ ಹೋಗಿರುವುದನ್ನು ನಾವು ಕಂಡಿದ್ದೇವೆ. ಕೆಲವರು ಮಕ್ಕಳ ಆಟಕ್ಕಾಗಿಯೋ ಅಥವಾ ಪ್ರದರ್ಶನಕ್ಕಾಗಿಯೋ ಶೇಖರಿಸುವುದೂ ಉಂಟು. ಚಿನ್ನ ಮತ್ತು ಬೆಳ್ಳಿಯ ಹಳೆಯ ನಾಣ್ಯಗಳಲ್ಲದೆ ನಮ್ಮ ದೇಶದಲ್ಲಿ ತಾಮ್ರ ಮತ್ತು ಸೀಸದ ನಾಣ್ಯಗಳು ಚಲಾವಣೆಯಲ್ಲಿದ್ದ ವಿಷಯ ಎಲ್ಲರಿಗೂ ಗೊತ್ತಿದೆ. ಈ ತಾಮ್ರ ಮತ್ತು ಸೀಸದ ಹಳೇ ನಾಣ್ಯಗಳಿಂದ ಚರಿತ್ರಕಾರರನ್ನು ಬಿಟ್ಟು ಇತರರಾರಿಗೂ ಪ್ರಯೋಜನವಿಲ್ಲ. ಕೆಲಸಕ್ಕೆ ಬಾರದ ಈ ನಾಣ್ಯಗಳಲ್ಲಿ ರಾಜಕೀಯ ಚರಿತ್ರೆ, ಆರ್ಥಿಕ ಚರಿತ್ರೆ, ಸಾಮಾಜಿಕ ಚರಿತ್ರೆ ಮತ್ತು ಕಲೆಯ ಚರಿತ್ರೆ—ಇವುಗಳು ಅಡಕವಾಗಿವೆ. ನಮ್ಮ ದೇಶದ ಪುರಾತನ ಚರಿತ್ರೆಯ ಅನೇಕ ಹೊಸ ಅಧ್ಯಾಯಗಳು ಹಳೆಯ ನಾಣ್ಯಗಳ ಪರಿಶೀಲನೆ ಮತ್ತು ಸಂಶೋಧನೆಗಳಿಂದಲೇ ಹುಟ್ಟಿವೆ. ಎಲ್ಲಿ ನಮಗೆ ಶಾಸನಗಳು (Inscriptions) ದೇಶೀಯ ಮತ್ತು ವಿದೇಶೀಯ ಬರವಣಿಗೆಗಳು (Indigenous and Foreign Literary Works) ಇತಿಹಾಸದ ಆಧಾರಸ್ಥಂಭವಲ್ಲವೊ, ಅಲ್ಲಿ ಹಳೇ ನಾಣ್ಯಗಳ ಶಾಸ್ತ್ರವೇ ಚರಿತ್ರಕಾರನಿಗೆ ದಿಕ್ಕು. ಒಂದು ಉದಾಹರಣೆಯಿಂದ ಇದು ವ್ಯಕ್ತವಾಗುತ್ತದೆ. ನಮ್ಮ ದೇಶಕ್ಕೆ ಕ್ರಿ.ಪೂ. ೨ ನೇ ಶತಮಾನದಲ್ಲಿ ಗ್ರೀಕರು ರಾಜ್ಯ ಕಟ್ಟಲು ಸುಗ್ಗಲಾರಂಭಿಸಿದರು. ಕಾಬೂಲ್ ಕಣಿವೆಯು ಇವರ ವಶವಾಯಿತು. ಇವರು ಅಲ್ಲಿ ನೆಲೆಸಿದರು. ಅವರ ರಾಜರುಗಳ ಹೆಸರಾಗಲಿ ಮತ್ತು ಅವರು ಆಳಿದ ಕಾಲವಾಗಲಿ ನಮಗೆ ಬೇರೆ ಮತ್ಯಾವ ಆಧಾರಗಳಿಂದ ಪತ್ತೆಯಾಗಿರಲಿಲ್ಲ. "ಮಿಳಿಂದನ ಪ್ರಶ್ನೆ" ಎಂಬ ಬೌದ್ಧ ಗ್ರಂಥದಿಂದ ಮಿನಾಂಡರ್ ಎಂಬುವನ ವಿಷಯ ನಮಗೆ ತಿಳಿದಿತ್ತು. ಬೆಸನಗರದ ಶಾಸನದಿಂದ ಅಂಟಿ ಆಲ್ಕಿದಾಸ (Antialkidas) ಎಂಬುವನ ಕಾಲ ನಿರ್ಣಯವಾಗಿತ್ತು. ಆದರೆ ಕಾಬೂಲ್ ಕಣಿವೆಯಲ್ಲಿ ನೆಲೆಸಿದ ಗ್ರೀಕರ ನಾಣ್ಯಗಳ ಪರಿಶೀಲನೆಯಿಂದ ಸುಮಾರು ಮುವತ್ತು ಅಥವಾ ನಲವತ್ತು ಹೊಸ ರಾಜರುಗಳ ಹೆಸರುಗಳು ಸಿಕ್ಕಿದುದಲ್ಲದೆ, ಅವರು ಸಿಂಹಾಸನಕ್ಕೆ ಬಂದ ವರುಷಗಳು ಕೂಡಾ ಗೊತ್ತಾಗಿವೆ. ಚರಿತ್ರೆಯಲ್ಲಿ ಹಳೆಯ ನಾಣ್ಯದ ಪಾತ್ರ ಇಷ್ಟೇ ಅಲ್ಲ. ನಮಗೆ ಗೊತ್ತಿ

ರುವ ಅನೇಕ ಐತಿಹಾಸಿಕ ವಿಷಯಗಳನ್ನು ಹಳೇ ನಾಣ್ಯಗಳ ಶಾಸ್ತ್ರವು ಪುಷ್ಟೀಕರಿಸುತ್ತದೆ. ಸಮುದ್ರಗುಪ್ತನು ಸಂಗೀತದಲ್ಲಿ ತುಂಬುರು ಮತ್ತು ನಾರದನಂತೆ ಪಂಡಿತನಾಗಿದ್ದನೆಂದು ಅಲಹಾಬಾದ್ ಸ್ತಂಭದ ಶಾಸನದಿಂದ ಗೊತ್ತಾಗುತ್ತದೆ. ಸಮುದ್ರಗುಪ್ತನು ಹಾಕಿಸಿದ ಕೆಲವು ಚಿನ್ನದ ನಾಣ್ಯಗಳ ಮೇಲೆ ಅವನು ತೊಡೆಯ ಮೇಲೆ ವೀಣೆಯನ್ನಿಟ್ಟುಕೊಂಡು ನುಡಿಸುವ ಚಿತ್ರವಿದೆ. ಇದರಿಂದ ಅವನು ವೀಣೆ ನುಡಿಸುವುದರಲ್ಲಿ ಎಷ್ಟು ನಿಪುಣನಾಗಿದ್ದನೆಂಬ ವಿಷಯ ಖಚಿತ (confirm) ವಾಗುತ್ತದೆ. ಹೀಗೆ ಉದಾಹರಣೆಗಳು ಬೇಕಾದಷ್ಟು ಇವೆ.

ಕಳೆದ ಇಪ್ಪತ್ತೈದು ವರ್ಷಗಳಿಂದ ಹಳೆಯ ನಾಣ್ಯಗಳ ಶಾಸ್ತ್ರದಲ್ಲಿ ಸಂಶೋಧನೆಗಳು ಎಷ್ಟರ ಮಟ್ಟಿಗೆ ಮುಂದುವರಿದಿದೆ ಎನ್ನುವ ವಿಷಯವನ್ನು ಪರಿಶೀಲನೆ ಮಾಡೋಣ. ಹಳೆಯ ನಾಣ್ಯಗಳ ಸಂಶೋಧನೆ ನಡೆಸಲು ೧೯೧೦ ರಲ್ಲಿ ಭಾರತೀಯ ಹಳೆಯ ನಾಣ್ಯಗಳ ಸಂಸ್ಥೆಯು (Numismatic Society of India) ಸ್ಥಾಪಿತವಾಯಿತು. ೧೯೩೫ ರಲ್ಲಿ ಈ ಸಂಸ್ಥೆಯು ತನ್ನ ರಜತ ಮಹೋತ್ಸವವನ್ನು ನೆರವೇರಿಸಿತು. ಈ ಸಂಸ್ಥೆಯು ಭಾರತೀಯ ಪುರಾತನ ಚರಿತ್ರೆಗೆ ಅನೇಕ ಹಳೆಯ ನಾಣ್ಯಗಳ ವಿಷಯವಾಗಿ ಗ್ರಂಥಗಳನ್ನು ಪ್ರಕಟಿಸುವುದರ ಮೂಲಕ ಬಹಳ ಉಪಕಾರವಾಡಿದೆ. ಕ್ಷತ್ರಪರು, ಆಂಧ್ರರು, ಗುಪ್ತರು, ಮೊಗಲರು—ಇವರುಗಳ ನಾಣ್ಯಗಳಿಂದ ಅವರ ಚರಿತ್ರೆಯ ಅನೇಕ ವಿಷಯಗಳು ಬೆಳಕಿಗೆ ಬಂದಿವೆ.

ಆದರೆ ಈ ೨೫ ವರ್ಷಗಳಲ್ಲಿ ದಕ್ಷಿಣ ದೇಶದ ಮತ್ತು ಕರ್ನಾಟಕದ ಚರಿತ್ರೆಯನ್ನು ಕಟ್ಟಲು ಸಹಾಯಕವಾದ ಹಳೆಯ ನಾಣ್ಯಗಳ ಪರಿಶೀಲನೆಯು ಸಾಕಾದಷ್ಟು ನಡೆದಿಲ್ಲ. ೧೮೮೮ ರಲ್ಲಿ ಸರ್ ವಾಲ್ಟರ್ ಎಲಿಯಟ್‌ರವರು (*Numismata Orientalia*) ದಲ್ಲಿ ದಕ್ಷಿಣ ದೇಶ ಮತ್ತು ಕರ್ನಾಟಕದ ಹಳೆಯ ನಾಣ್ಯಗಳ ವಿಚಾರವಾಗಿ ಬರೆದರು. ಅವರ ಗ್ರಂಥ ತುಂಬಾ ಹಳೆಯದಾದರೂ ಅದರ ಉಪಯೋಗ ಕಡಿಮೆಯಾಗಿಲ್ಲ. ಇತ್ತೀಚೆಗೆ ದಕ್ಷಿಣ ದೇಶದ ಮತ್ತು ಕರ್ನಾಟಕದ ಹಳೆಯ ನಾಣ್ಯಗಳ ಹೆಚ್ಚು ಸಂಶೋಧನೆ ಡಾ. ಕೃಷ್ಣರವರಿಂದ ನಡೆಸಲ್ಪಟ್ಟಿದೆ.[1]

ಇದಲ್ಲದೆ ಮೈಸೂರು ಆರ್ಕಿಯಾಲಾಜಿಕಲ್ ವಾರ್ಷಿಕ ವರದಿಗಳಲ್ಲಿ ಈ ವಿಷಯದಲ್ಲಿ ಸಂಶೋಧನೆಗಳು ಸ್ವಲ್ಪ ಮಟ್ಟಿಗೆ ಹೊರಬಿದ್ದಿವೆ. ರಾವ್ ಬಹದ್ದೂರು ನರಸಿಂಹಾಚಾರ್ಯರ ಕಾಲದ ವರದಿ ಗಳಲ್ಲಿ ಗಂಗರ ಮತ್ತು ಹೊಯಿಸಳರ ನಾಣ್ಯಗಳ ಮೇಲೆ ಲೇಖನವಿದೆ. ೧೯೨೯ ರಿಂದ ಈಚೆಗೆ ಕರ್ನಾಟಕದ ನಾಣ್ಯಗಳಿಗೆ ಸಂಬಂಧಪಟ್ಟ

---

[1] ಅವರ ಅಮೂಲ್ಯವಾದ (*Deccan Numismatics*) ಪ್ರಕಟಿತವಾಗದೆ ಹಸ್ತಪ್ರತಿಯಾಗಿಯೇ ಉಳಿದಿದೆ.

ಲೇಖನಗಳು ಈ ವರದಿಗಳಲ್ಲಿ ಹೆಚ್ಚು ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯುತ್ತಾ ಬಂದವು. ೧೯೨೯, ೧೯೩೦, ೧೯೩೧, ೩೨, ೩೩, ೩೯, ೪೦, ೪೧ ನೇ ವರದಿಗಳಲ್ಲಿ ಹೊಯಿಸಳ, ವಿಜಯನಗರ, ಮೈಸೂರು, ಬಾದಾಮಿ ಚಾಲುಕ್ಯ, 'ಕಲ್ಯಾಣಿ ಚಾಲುಕ್ಯ,' ಕದಂಬ ಮತ್ತು ಪೂರ್ವ ಚಾಲುಕ್ಯ ಮೊದಲಾದ ಚಕ್ರವರ್ತಿಗಳು ಹಾಕಿಸಿದ ನಾಣ್ಯಗಳು, ಅವುಗಳ ತೂಕ, ಪ್ರಮಾಣ, ಅವುಗಳ ಮೇಲಿರುವ ಆಕೃತಿ ಆಗಿನ ಚಕ್ರವರ್ತಿಗಳಿಗಿದ್ದ ಬಿರುದು ಮುಂತಾದುವೆಲ್ಲಾ ವಿಶದವಾಗಿ ನಮೂದಿಸಲ್ಪಟ್ಟಿವೆ. ಈ ಲೇಖನೆಗಳ ಕರ್ನಾಟಕ ಚರಿತ್ರೆಗೆ ಬಹಳ ಉಪಯುಕ್ತವಾಗಿವೆ. ಮೈಸೂರಿನ ಹಳೇ ನಾಣ್ಯಗಳ ವಿಷಯವಾಗಿ ಅನೇಕ ಗ್ರಂಥಗಳು ಹೊರಬಿದ್ದಿವೆ.[1]

ಎಲಿಯಟ್, ಮಾರ್ಸ್ಡನ್, ರೈಸ್, ಥರ್ಸ್ಟನ್, ಹಾಕ್ಸ್ ಹೆಂಡರ್‌ಸನ್, ಮೇಜರ್ ಜಾಕ್‌ಸನ್, ಡಾ. ಹುಲಷ್ (Hultzsch), ಕ್ಯಾಪ್ಟನ್ ಟಫನೆಲ್ ಮೊದಲಾದವರು ಹೇರಳವಾದ ಸಂಶೋಧನೆ ನಡೆಸಿ ಕರ್ನಾಟಕದ ಹಳೆಯ ನಾಣ್ಯಗಳ ಶಾಸ್ತ್ರಕ್ಕೆ ಬಹಳ ಉಪಕಾರಮಾಡಿದ್ದಾರೆ. ಆದರೆ ದಕ್ಷಿಣ ಭಾರತದ ಇತಿಹಾಸದಂತೆ ದಕ್ಷಿಣ ದೇಶದ ಹಳೆಯ ನಾಣ್ಯ ಶಾಸ್ತ್ರ ತುಂಬಾ ಮುಂದುವರಿದಿಲ್ಲ. ಇನ್ನೂ ಕೆಲಸ ಹೆಚ್ಚಾಗಿ ನಡೆಯಬೇಕಾಗಿದೆ.

—ಎಂ. ಶೇಷಾದ್ರಿ.

***

ಕರ್ಣಾಟಕದ ಆರ್ಥಿಕ ಭವಿತವ್ಯ[2]

ಯುದ್ಧಾನಂತರ ಪುನರ್ವ್ಯವಸ್ಥೆಯ ಮತ್ತು ಕೈಗಾರಿಕೆಯ ಅಭಿವೃದ್ಧಿಯನ್ನು ಕುರಿತು ಎಲ್ಲ ಕಡೆಯಲ್ಲೂ ಯೋಜನೆಗಳು ಸಿದ್ಧವಾಗುತ್ತಿರುವಾಗ ಕರ್ನಾಟಕಸ್ಥರಾದ ನಾವೂ—ಕರ್ನಾಟಕದ ಔದ್ಯೋಗೀಕರಣವನ್ನು ಕುರಿತು ಯೋಚಿಸುವುದು ಸಹಜ.

---

[1] 1. ELLIOT.—*Numismata Orientalia—Coins of South India.*
2. MARSDEN.—*Numismata Orientalia—Pt. 2, MXLIX*
3. LEWIS RICE.—*Mysore Gazetteer.*
4. EAGAR THURSTON.—*Govt. Central Museum, Madras, Coin Catalogue No. 1—Mysore.*
5. H. P. HAWKES.—*Coins of Mysore 1856.*
6. J. R. HENDERSON.—*Coins of Haider Ali and Tippu Sultan 1921.*
7. MAJOR R. P. JACKSON.—*Coin Collecting in Mysore 1909.*
8. CAPT. R. H. TUFNELL.—*Catalogue of Mysore Coins in the Collection of the Govt. Museum, Bangalore, 1889.*

[2] ತಾ. ೧೦-೮-೪೫ರಲ್ಲಿ ಮುಂಬಯಿಯ ಮಾಜಿ ಅರ್ಥಸಚಿವರಾದ ಬೆಳಗಾಮಿನ ಶ್ರೀ ಎ. ಬಿ. ಲಠ್ಠೆಯವರು ಆಕಾಶವಾಣಿಯಿಂದ ಮಾಡಿದ ರೇಡಿಯೋ ಭಾಷಣದ ಸಾರ.

ಕರ್ನಾಟಕದ ಮುಖ್ಯಾಂಗವಾದ ಮೈಸೂರು ಕೈಗಾರಿಕೆಯ ವಿಷಯದಲ್ಲಿ ಗಮನಾರ್ಹ ವಾದ ಮುನ್ನಡೆಯನ್ನು ಸಾಧಿಸಿರುವುದು ನಿಜ; ಒಟ್ಟಿನಲ್ಲಿ ನೋಡಿದರೆ ಕೈಗಾರಿಕೆ ಯಲ್ಲಿ ಕರ್ನಾಟಕ ಇನ್ನೂ ಹಿಂದುಳಿದಿದೆ. ಬಟ್ಟೆ ಕೈಗಾರಿಕೆಗೆ ಬೇಕಾದ ಉತ್ತಮ ಹತ್ತಿಯನ್ನು ಕರ್ನಾಟಕ ಹೇರಳವಾಗಿ ಬೆಳೆಯುತ್ತಿದ್ದರೂ, ಬಟ್ಟೆಯ ಪೂರೈಕೆಗಾಗಿ ನಾವು ಮುಂಬಯಿ, ಅಹಮದಾಬಾದ್ ಮುಂತಾದ ನಗರಗಳನ್ನೂ ಲಾಂಕಾಷೈರ್, ಜಪಾನ್ ಮುಂತಾದ ಹೊರಪ್ರದೇಶಗಳನ್ನೂ ಅವಲಂಬಿಸಿದ್ದೇವೆ. ಕೈಮಗ್ಗದ ನೆಯ್ಗೆ ಯಲ್ಲಿ ಕುಶಲರಾದ ನೇಕಾರ ಜನಸಂಖ್ಯೆ ನಮ್ಮ ನಾಡಿನಲ್ಲಿ ಅಧಿಕವಾಗಿದೆ. ಆದರೆ ಪರಂಪರೆಯಿಂದ ಬಂದಿರುವ ಈ ನೆಯ್ಗೆಯ ಕಸಬು ಕ್ರಮಕ್ರಮವಾಗಿ ಇವರ ಕೈಬಿಡುತ್ತಿದೆ. ಹುಬ್ಬಳ್ಳಿ ಮುಂತಾದ ನಗರಗಳಲ್ಲಿ ಬಟ್ಟೆ ಗಿರಣಿಗಳಿವೆ. ಆದರೆ ಅವುಗಳ ಒಡೆಯರು ಕನ್ನಡಿಗರಲ್ಲ. ಅಲ್ಲಿ, ಕನ್ನಡಿಗರ ಏಕಮಾತ್ರ ಹಿತವೆಂದರೆ ಆ ಗಿರಣಿಗಳಲ್ಲಿ ಕೂಲಿ ಕೆಲಸಮಾಡುವ ಕನ್ನಡ ದುಡಿಯಾಳುಗಳವರದು. ಕರ್ನಾಟಕದಲ್ಲಿರುವ ಅಪಾರ ಅರಣ್ಯಸಂಪತ್ತಿನಿಂದ ಆಯಾ ಪ್ರಾಂತ ಸರ್ಕಾರಗಳು ಅಲ್ಪಸ್ವಲ್ಪ ಲಾಭ ಪಡೆಯು ತ್ತಿದ್ದರೂ ಅದು ಅಷ್ಟು ತೃಪ್ತಿಕರವಾಗಿಲ್ಲ. ಹೀಗೆಯೆ ಇಂದಿನ ಕೈಗಾರಿಕೆಗೆ ಆವಶ್ಯಕ ವಾಗಿ ಬೇಕಾದ ಅನೇಕ ಅಸಿದ್ಧ ಧಾತುಗಳು ನಮ್ಮಲ್ಲಿ ಪುಷ್ಕಲವಾಗಿ ಲಭಿಸುತ್ತವೆ. ಉದಾಹರಣೆಗಾಗಿ—ಗಾಜನ್ನು ತಯಾರಿಸಲು ಬೇಕಾದ ಕಚ್ಚಾ ಪದಾರ್ಥಗಳಿಗೆ ನಮ್ಮಲ್ಲಿ ಕೊರತೆಯಿಲ್ಲ. ಇದರಂತೆ ಕಾಗದ ತಯಾರಿಕೆಗೂ ಬೇಕಾದ ಪದಾರ್ಥಗಳು ಅಪರಿಮಿತವಾಗಿವೆ. ಈ ನಿಸರ್ಗಸೌಲಭ್ಯವನ್ನು ಪಡೆದ ಕರ್ನಾಟಕ ಇವುಗಳ ಸಾದ್ಯಂತ ಸದುಪಯೋಗ ಮಾಡಿಕೊಳ್ಳಬೇಕು. ಕಾಂಗ್ರೆಸ್ ಮಂತ್ರಿಮಂಡಲಗಳು ಅಧಿಕಾರದಲ್ಲಿದ್ದಾಗ ಮುಂಬಯಿ ಕರ್ಣಾಟಕದಲ್ಲಿ ಕಾಗದ ಮತ್ತು ಕೃತಕ ರೇಷ್ಮೆಯ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸುವ ಪ್ರಯತ್ನ ನಡೆದರೂ, ಇಲ್ಲಿಯ ವರೆಗೂ ಅದರಿಂದೇನೂ ಪ್ರಯೋಜನವಾಗಿಲ್ಲ.

ಸುದೈವದಿಂದ ಮೈಸೂರಿನ ಪರಿಸ್ಥಿತಿಯೇ ಬೇರೆ. ಸದವಕಾಶಗಳನ್ನು ಸರಿಯಾಗಿ ಉಪಯೋಗಮಾಡಿಕೊಳ್ಳದಿರುವ ಮುಂಬಯಿಯ ಪರಿಸ್ಥಿತಿ ಮೈಸೂರಿನಲ್ಲಿ ಪುನರಾ ವರ್ತನವಾಗಿಲ್ಲ. ಮೈಸೂರಿನ ಪ್ರಗತಿಶೀಲರಾದ ರಾಜರೂ ಮತ್ತು ದೂರದೃಷ್ಟಿ ಯುಳ್ಳ ಮಂತ್ರಿವರ್ಯರೂ ಯುದ್ಧ ಆರಂಭವಾಗುವುದಕ್ಕೆ ಮುಂಚಿನಿಂದಲೂ ಮುಖ್ಯ ಕೈಗಾರಿಕಾಭಿವೃದ್ಧಿಗೆ ಗಮನಕೊಡುತ್ತಾ ಬಂದಿದ್ದಾರೆ. ಇತ್ತೀಚಿನ ಯುದ್ಧದ ಕಷ್ಟಕಾಲದಲ್ಲಿ ಸಹ ಮೈಸೂರು, ಕರ್ನಾಟಕವೇ ಹೆಮ್ಮೆಪಡುವಂತಹ ಕೈಗಾರಿಕಾ ಪ್ರಗತಿಯನ್ನು ಸಾಧಿಸಿದೆ. ಮೈಸೂರಿನ ಅನೇಕ ಕೈಗಾರಿಕೆಗಳು ನಾಡಿನ ಎಲ್ಲಾ ಕಡೆಗಳಲ್ಲಿಯೂ ಸುಪ್ರಸಿದ್ಧವಾಗಿವೆ. ಸಂಸ್ಥಾನದ ಸರ್ಕಾರ ಈ ಕೈಗಾರಿಕೆಗಳಿಂದ

ಗಣನೀಯವಾದ ವರಮಾನವನ್ನು ಪಡೆಯುತ್ತಿದೆ. ಗೇರುಸೊಪ್ಪೆ ಜಲಪಾತದ ಸಹಾಯದಿಂದ ವಿದ್ಯುಚ್ಛಕ್ತಿಯ ಉತ್ಪಾದನೆಯನ್ನು ಅಧಿಕಗೊಳಿಸಲು ಇತ್ತೀಚೆಗೆ ಮೈಸೂರು ಸಿದ್ಧತೆ ಮಾಡಿಕೊಳ್ಳುತ್ತಿದೆ. ಈ ವಿದ್ಯುಚ್ಛಕ್ತಿಯನ್ನು ಸಂಸ್ಥಾನದ ಕೈಗಾರಿಕಾಭಿವೃದ್ಧಿಗೆ ಹೇಗೆ ಬಳಸಿಕೊಳ್ಳಬೇಕೆಂದು ಸರ್ಕಾರವು ಹಂಚಿಕೆಗಳನ್ನು ಮಾಡುತ್ತಿದೆ. ಮೈಸೂರಿನ ಈ ಗೇರುಸೊಪ್ಪಾ ಜಲಪಾತದಿಂದ ಮುಂಬಯಿ ಕರ್ನಾಟಕವು ಉಪಕಾರ ಪಡೆದೀತೆಂದು ನಂಬಬಹುದು.

ಇತ್ತೀಚೆಗೆ ಹೈದರಾಬಾದ್ ಮತ್ತು ಮದ್ರಾಸ್ ಸರ್ಕಾರಗಳ ಒಪ್ಪಂದದ ಫಲವಾಗಿ ತುಂಗಭದ್ರಾ ನೀರಿನ ಯೋಜನೆ ಹೊರಬಿದ್ದಿದೆ. ಇದು ಬರಗಾಲದ ಬವಣೆಗೆ ತುತ್ತಾಗುತ್ತಿರುವ ಮದ್ರಾಸ್ ಕರ್ನಾಟಕ ಪ್ರದೇಶಗಳಿಗೆ ಹೆಚ್ಚು ಪರಿಹಾರ ಕೊಡಬಲ್ಲದೆಂದು ಆಶಿಸಬಹುದು. ಈ ಯೋಜನೆ ಪೂರ್ಣವಾಗಿ ಕಾರ್ಯಕಾರಿಯಾದರೆ, ಮದ್ರಾಸ್ ಕರ್ಣಾಟಕದ ಸಂತಪ್ತ ಪ್ರದೇಶದಲ್ಲಿ ಸಕ್ಕರೆ ಕೈಗಾರಿಕೆ ಪ್ರಬಲಿಸಬಹುದು. ವಿದ್ಯುಚ್ಛಕ್ತಿ ಉತ್ಪಾದನೆಯ ಕೆಲವು ಯೋಜನೆಗಳು ಮುಂಬಯಿ ಸರ್ಕಾರದ ಪರಿಶೀಲನೆಯಲ್ಲಿವೆ. ಇವು, ಕಾರ್ಯಕ್ಕೆ ಬಂದರೆ ಕರ್ನಾಟಕದ ಕೈಗಾರಿಕಾ ಪ್ರಗತಿಗೆ ಸಹಾಯವಾಗಬಹುದು.

ನಮ್ಮ ಭವಿಷ್ಯ ಆರ್ಥಿಕ ಜೀವನವನ್ನು ಕುರಿತ ಕೆಲವು ಸಮಾಧಾನಕರ ಸಂಗತಿಗಳಿವು. ಕರ್ಣಾಟಕದ ಕೈಗಾರಿಕೆಯ ಬೆಳವಣಿಗೆಗೆ ನಿಸರ್ಗದತ್ತ ಅನುಕೂಲಗಳು ಚೆನ್ನಾಗಿವೆ. ಆದರೆ, ನಮ್ಮ ಪ್ರಾಂತದ ಆರ್ಥಿಕಾಭಿವೃದ್ಧಿಯನ್ನು ಸಾಧಿಸಲು ಈ ಅನುಕೂಲಗಳನ್ನು ಸರಿಯಾಗಿ ನಾವು ಉಪಯೋಗಿಸಿಕೊಳ್ಳಬಲ್ಲೆವೇ ಎಂಬುದು ನಮ್ಮ ಮುಂದಿರುವ ದೊಡ್ಡ ಪ್ರಶ್ನೆ. ಇದಕ್ಕೆ ಉತ್ತರಕೊಡುವಾಗ ಕೆಲವು ಸಂಗತಿಗಳನ್ನು ನೆನಪಿನಲ್ಲಿಡಬೇಕು—ಬ್ರಿಟಿಷ್ ಕರ್ಣಾಟಕದಲ್ಲಿರುವ ಅನೇಕ ಕೈಗಾರಿಕೆಗಳು ಕನ್ನಡಭೂಮಿಯ ಮೇಲೆ ಸ್ಥಾಪಿತವಾಗಿವೆ. ಆದರೆ ಇಲ್ಲಿ ಇವುಗಳನ್ನು ಸ್ಥಾಪಿಸಿದ ಗೌರವ ಹೊರಗಿನವರಿಗೆ ಹೋಗುತ್ತದೆ. ಮೈಸೂರಿನಲ್ಲಿ ಸಹ, ಕನ್ನಡೇತರರ ಮುಂದಾಳುತ್ವ, ಸಾಹಸ, ಪ್ರತಿಭೆಗಳೇ ಕೆಲವು ಕೈಗಾರಿಕೆಗಳನ್ನು ನಡೆಸುತ್ತಿವೆ. ಕರ್ಣಾಟಕ ವ್ಯಾಪಾರದ ಬಹುಭಾಗ, ಹಣಸಂಪಾದಿಸಲು ಇಲ್ಲಿಗೆ ಬಂದಿರುವ, ಹೊರಗಿನವರ ಕೈಯಲ್ಲಿದೆ. ಅವರ ಮೇಲೆ ಆಕ್ರೋಶ ಬೇಡ. ಅಸೂಯೆ ಬೇಡ. ಬರ್ಮಾ, ದಕ್ಷಿಣ ಆಫ್ರಿಕಾ, ಪ್ಯಾರಿಸ್, ಲಂಡನ್ ಮುಂತಾದ ದೂರಪ್ರದೇಶಗಳಿಗೆ ಹೋಗಿ ವ್ಯಾಪಾರ ಮಾಡುವವರು ನಮ್ಮ ಪ್ರಾಂತದಲ್ಲಿಯೂ ತಮ್ಮ ವ್ಯಾಪಾರವನ್ನು ಹಬ್ಬಿಸುವುದು ಆಕ್ಷೇಪಣೀಯವಲ್ಲ. ನಾವು ಇವರಿಂದ ಪಾಠ ಕಲಿತು ನಮ್ಮ ಪ್ರಾಂತದ ಕೈಗಾರಿಕಾ ಬೆಳವಣಿಗೆಯಲ್ಲಿ ನಾವೇ ಹೆಚ್ಚಿನ ಭಾಗ ವಹಿಸಬೇಕು. ನಾವು ಎಚ್ಚರಗೊಳ್ಳಬೇಕು.

ನಿದ್ರಿಸುವ ನಮಗಾಗಿ ಓಡುತ್ತಿರುವ ಜಗತ್ತು ನಿಲ್ಲಲಾರದು. ನಾವು ಸಕಾಲದಲ್ಲಿ ಜಾಗ್ರತರಾಗದಿದ್ದರೆ ನಮ್ಮ ಸ್ಥಾನವನ್ನು ಇತರರು ಆಕ್ರಮಿಸುತ್ತಾರೆ. ನಮ್ಮ ಕೈಗಾರಿಕಾಭಿವೃದ್ಧಿಗೆ ಅನೇಕ ಅಡ್ಡಿ ಆತಂಕಗಳು ಇರುವುದು ನಿಜ. ಕನ್ನಡ ಪ್ರಾಂತ ತುಂಡರಿಸಲ್ಪಟ್ಟು, ಅನೇಕರ ಆಳ್ವಿಕೆಗೆ ಒಳಗಾಗಿದೆ. ಇದು ದೊಡ್ಡ ಅಡ್ಡಿ. ಆದಾಗ್ಯೂ ಇವೆಲ್ಲವನ್ನು ನೀಗಿ ನಾವು ನಮ್ಮ ಕೈಗಾರಿಕೆಗಳನ್ನು ಕಟ್ಟಬೇಕು.

ವ್ಯಾಪಾರದಲ್ಲಿ ಮುಂದುವರಿಯಲು ಮುಖ್ಯವಾಗಿ ಬೇಕಾದ ದೂರದೃಷ್ಟಿ, ಮುಂಬರುವ ಘಟನೆಗಳ ಬಗ್ಗೆ ಒಂದು ನಿರ್ದಿಷ್ಟವಾದ ಯೋಜನೆ, ವ್ಯವಹಾರಜ್ಞಾನ, ವ್ಯಾಪಾರ ಕೌಶಲ್ಯ ಮತ್ತು ಸ್ಪರ್ಧೆಯನ್ನು ತಡೆದುಕೊಳ್ಳುವ ಶಕ್ತಿ ಈ ಗುಣಗಳನ್ನು ಕನ್ನಡ ವ್ಯಾಪಾರಸ್ಥರು ಅಳವಡಿಸಿಕೊಳ್ಳಬೇಕು. ಹಾಗಾದರೆಯೇ ಕನ್ನಡ ಪ್ರಾಂತದ ಆರ್ಥಿಕ ಉತ್ಕರ್ಷ. ಕನ್ನಡನಾಡಿನ ಇಂದಿನ ಬೇರೆಬೇರೆ ಸರ್ಕಾರಗಳು ಕೈಗಾರಿಕೆಗಳನ್ನು ಆದಷ್ಟು ಬೆಳೆಸಬೇಕು, ಅವುಗಳ ಬೆಳವಣಿಗೆಗೆ ಉತ್ತೇಜನವು ಕೊಡಬೇಕು. ಉದ್ಯೋಗ (Industry) ಗಳಲ್ಲೆಲ್ಲಾ ದೊಡ್ಡ ಉದ್ಯೋಗವಾದ ಒಕ್ಕಲತನದ ಏಳ್ಗೆಗೆ ಸರಕಾರದವರ ಸಹಾಯ ಬಹಳವಾಗಿ ಆಗಬೇಕು. ಸ್ವರಾಜ್ಯವಿಲ್ಲದೆ ಈ ಪ್ರಶ್ನೆಗಳೆಲ್ಲಾ ತೃಪ್ತಿಕರವಾಗಿ ಬಗೆಹರಿಯಲಾರವು. ಆದರೆ ಸರಕಾರವೇ ಎಲ್ಲಾ ಮಾಡಲಿ ಎಂದು ನಾವು ಕೈಕಟ್ಟಿಕೊಂಡು ಕುಳಿತುಕೊಳ್ಳಕೂಡದು. ನಮ್ಮ ಶಕ್ತಿ ಮೀರಿ ನಾವೇ ನಮ್ಮ ಕೈಗಾರಿಗೆಗಳನ್ನು ಬೆಳಸಲು ಪ್ರಯತ್ನಿಸಬೇಕು. ನಮ್ಮ ಈ ಕೈಗಾರಿಕಾಭಿವೃದ್ಧಿ ಕೇವಲ ಬಂಡವಾಳಗಾರಿಕೆಯ ಸ್ಥಾಪನೆಗಿಂಬುಕೊಡಕೂಡದು. ಇದಕ್ಕಾಗಿ ನಾವು ಸಹಕಾರಪದ್ಧತಿಯ ಕಡೆ ಹೆಚ್ಚು ಗಮನಕೊಡಬೇಕು. ಪಾಶ್ಚಾತ್ಯ ದೇಶಗಳಲ್ಲಿ ಈ ಪದ್ಧತಿಯಿಂದಲೂ ಬಹುಮಟ್ಟಿಗೆ ಕೈಗಾರಿಕೆ ಮುಂದುವರಿದಿದೆ. ಆದರೆ ನಮ್ಮ ದೇಶದಲ್ಲಿ ಈ ಪದ್ಧತಿ ಅಷ್ಟೊಂದು ರೂಢಿಯಲ್ಲಿಲ್ಲ. ವ್ಯವಸಾಯ ಮತ್ತು ಗೃಹಕೈಗಾರಿಕೆಗಳು ಮತ್ತು ಭಾರಿ ಭಾರಿ ಉದ್ಯಮಗಳನ್ನು ಸಹ ಸಹಕಾರಪದ್ಧತಿಯಿಂದ ನಡೆಸಬಹುದು. ಕರ್ಣಾಟಕದ ಆರ್ಥಿಕ ಮುನ್ನಡೆಗೆ ಈ ಸಹಕಾರಪದ್ಧತಿ ಆವಶ್ಯಕ. ಭವಿಷ್ಯ ಕರ್ಣಾಟಕ ಆರ್ಥಿಕ ಬೆಳವಣಿಗೆ ಸಹಕಾರತತ್ವಗ ಮೇಲೆ ನಿಂತಿದೆ. ಇದಲ್ಲದೆ ಸ್ವಯಂ ಆಡಳಿತ ಪಡೆದ ಏಕೀಕೃತ ಕರ್ಣಾಟಕವೂ ಕೈಗಾರಿಕಾಪ್ರಗತಿಯನ್ನು ಕಾಣಲಾರದು.

ಕನ್ನಡನಾಡು ಬೇರೆ ಬೇರೆಯಾಗಿ ಒಡೆಯಲ್ಪಟ್ಟು ಭಿನ್ನ ಭಿನ್ನ ಆಳ್ವಿಕೆಗೊಳಗಾಗಿರುವುದು ಕರ್ಣಾಟಕದ ಆರ್ಥಿಕ ಏಳ್ಗೆಗೆ ಅಡ್ಡವಾಗುವುದು ಎಂದು ಮೇಲೆ ತಿಳಿಸಿದ್ದೇನೆ. ಹೀಗೆ ವಿಚ್ಛೇದಿಸಲ್ಪಟ್ಟ ಕರ್ಣಾಟಕ ಪ್ರಾಂತ, ಅನೇಕ ಪ್ರಾಂತಗಳು ಮತ್ತು ಸಂಸ್ಥಾನಗಳಸ್ನೊಳಗೊಂಡಿದೆ. ಸಂಸ್ಥಾನಗಳನ್ನು ಬಿಟ್ಟರೆ, ಬ್ರಿಟಿಷ್ ಭಾರತದಲ್ಲಿ ಬೇರೆ ಬೇರೆ ಆಡಳಿತದ ಕೆಳಗಿರುವ ಕನ್ನಡ ಪ್ರದೇಶಗಳ ಏಕೀಕರಣ

ಅಷ್ಟೇನು ಕಷ್ಟವಲ್ಲ. ಮುಂಬಯಿ ಮತ್ತು ಮದ್ರಾಸಿನ ಕನ್ನಡ ಜಿಲ್ಲೆಗಳು ಮತ್ತು ಕೊಡಗು ಇವನ್ನು ಒಂದುಗೂಡಿಸಬಹುದು. ಇಷ್ಟೇ ಅಲ್ಲ. ಇವುಗಳೊಂದಿಗೆ ಕನ್ನಡ ಸಂಸ್ಥಾನಗಳೂ ಸಹಕರಿಸಲು ಸಾಧ್ಯ. ಆರ್ಥಿಕ ವಿಷಯಗಳಲ್ಲಿ ಈ ಬಗೆಯ ಪರಸ್ಪರ ಸಹಕಾರ ಬೇಕೇ ಬೇಕು; ಸಾಧ್ಯವೂ ಸಾಧ್ಯ. ತುಂಗಭದ್ರಾ ಅಣೆಕಟ್ಟೆಯ ವಿಷಯದಲ್ಲಿ ಮದ್ರಾಸ್, ಹೈದರಾಬಾದ್‌ಗಳು ಸಹಕರಿಸಲು ಮುಂದೆ ಬಂದಿಲ್ಲವೆ? ಹಾಗೆಯೇ ಆರ್ಥಿಕ ವಿಷಯಗಳಲ್ಲಿ ಬ್ರಿಟಿಷ್ ಪ್ರಾಂತಗಳೂ ದೇಶೀಯ ಸಂಸ್ಥಾನಗಳೂ ಸಹಕರಿಸುವ ಸಂದರ್ಭಗಳು ಅನೇಕ. ಈ ಸಹಕಾರವಾದರೋ ಪರಸ್ಪರ ಲಾಭಕ್ಕಾಗಿ. ಅದರಲ್ಲಿಯೂ ಕೈಗಾರಿಕಾಭಿವೃದ್ಧಿಗೆ ಸಂಬಂಧಿಸಿದ ಸಂಶೋಧಾಲಯ ಮತ್ತು ಶಿಕ್ಷಣ ಕೇಂದ್ರಗಳನ್ನು ಪ್ರಾಂತ ಮತ್ತು ಸಂಸ್ಥಾನಗಳು ಸಹಕಾರದಿಂದ ಸ್ಥಾಪಿಸುವುದರ ಪ್ರಯೋಜನ ಅಷ್ಟಿಷ್ಟಲ್ಲ. ಉದಾ: ಬೊಂಬಾಯಿ ಮತ್ತು ಮೈಸೂರು ಒಂದೇ ಕಡೆ ದಟ್ಟವಾದ ಕಾಡನ್ನು ಪಡೆದಿವೆ. ಈ ಅರಣ್ಯಗಳನ್ನು ಸರಿಯಾಗಿ ಉಪಯೋಗಿಸುವ ಮಾರ್ಗಗಳನ್ನು ಕಂಡುಹಿಡಿಯಲು ಈ ಎರಡು ಸರ್ಕಾರಗಳೂ ಕೂಡಿ ಒಂದು ಅರಣ್ಯ ಸಂಪದಭಿವೃದ್ಧಿ ಸಂಸ್ಥೆಯನ್ನು ತೆರೆಯುವುದರಿಂದ ಉಭಯತ್ರರಿಗೂ ಉಳಿತಾಯವಲ್ಲವೆ? ಲಾಭದಾಯಕವಲ್ಲವೆ? ಮೈಸೂರಿನಲ್ಲಿ ಈಗಾಗಲೇ ಗಂಧದೆಣ್ಣೆ ಕೈಗಾರಿಕೆ ಇದೆ. ಉತ್ತರ ಕರ್ಣಾಟಕದ ಕಾರವಾರ ಜಿಲ್ಲೆಯ ಗಂಧದ ಮರಗಳನ್ನು ಉಪಯೋಗಿಸುವಂತೆ, ಮೈಸೂರಿನ ಈ ಗಂಧದೆಣ್ಣೆ ಕೈಗಾರಿಕೆಯನ್ನು ವಿಸ್ತರಿಸಬಹುದಲ್ಲವೆ? ಮತ್ತು ಹಾಗೆ ಮಾಡುವದು ಹೆಚ್ಚು ಲಾಭವಲ್ಲವೆ? ಈ ರೀತಿಯಲ್ಲಿ ಪ್ರಾಂತ ಮತ್ತು ಸಂಸ್ಥಾನಗಳು ಆರ್ಥಿಕ ಪ್ರಗತಿಗೆ ಸಹಕರಿಸಬೇಕಾದ ಸಂದರ್ಭಗಳೂ ಅನೇಕ.

ಕೊನೆಯದಾಗಿ ಇನ್ನೊಂದು ವಿಚಾರ: ಭಾರತ ಸರ್ಕಾರದ ಕೈಗಾರಿಕಾ ನೀತಿ ಸಂಸ್ಥಾನಗಳ ಆರ್ಥಿಕ ಪ್ರಗತಿಗೆ ಆತಂಕವಾಗಿದೆ ಎಂಬ ಕೂಗು ಕೇಳಿಬರುತ್ತಿದೆ. ಇದಕ್ಕೆ ಒಂದೇ ಒಂದು ಪರಿಹಾರ ಸಹಕಾರ ಆರ್ಥಿಕ ಪ್ರಗತಿಗಾಗಿ ಕೇಂದ್ರ ಮತ್ತು ಸಂಸ್ಥಾನ ಸರ್ಕಾರಗಳು ಸಹಕರಿಸತಕ್ಕದ್ದು. ಇದರಂತೆ ಕರ್ಣಾಟಕದ ವಿವಿಧ ವಿಭಾಗಗಳೂ ಆರ್ಥಿಕೋನ್ನತಿಗಾಗಿ ಸಹಕರಿಸಬೇಕಾದುದು ಅಗತ್ಯ. ಈ ಸಹಕಾರದ ಮಹತ್ವವನ್ನು ಎಲ್ಲರೂ ಗಮನಿಸುವರೆಂದು ನಂಬುತ್ತೇನೆ.

—ಎ. ಬಿ. ಲಠ್ಠೆ.

(ಕನ್ನಡಿಸಿದವರು: ಜಿ. ಎಸ್. ಹಾಲಪ್ಪ).

ಸಂಪಾದಕೀಯ

೨೭ ನೆಯ ವರ್ಷದ ವಿನಾಯಕ ಸಂಚಿಕೆ ಇದು. ಪ್ರಬುದ್ಧ ಕರ್ಣಾಟಕ ಪತ್ರಿಕೆ ಈ ಸುಸಂದರ್ಭದಲ್ಲಿ ತನ್ನ ಪೋಷಕರಿಗೂ ಮಿತ್ರರಿಗೂ ಎಲ್ಲರಿಗೂ ತನ್ನ ಭಕ್ತಿಯನ್ನೂ ಪ್ರೀತಿಯನ್ನೂ ಅರ್ಪಣೆ ಮಾಡುತ್ತಿದೆ. ಇಷ್ಟು ದಿನ ಕನ್ನಡಿಗರ ಸೇವೆ ಮಾಡಿದಂತೆ ಮುಂದಕ್ಕೂ ಅದಕ್ಕೆ ಶಕ್ತಿ ದೊರಕಲೆಂದು ಅದರ ಅಭಿಮಾನಿಗಳೆಲ್ಲರೂ ಹರಸಬೇಕು. ಅದಕ್ಕೆ ಬೇಕಾದ ಲೇಖನ ಮತ್ತು ಸೌಹಾರ್ದಗಳ ನೆರವನ್ನು ಕೊಡಬೇಕು.

ಸಲ ಸಲವೂ ತಡವಾಗಿ ಬರುವುದಕ್ಕಾಗಿ ಸಲ ಸಲವೂ ಕ್ಷಮೆ ಬೇಡುವುದು ಚೆನ್ನಲ್ಲವೆಂದು ಆ ಗೋಜಿಗೆ ಹೋಗಿಲ್ಲ. ಸಮಯ ಮೀರಿ ಬರುವುದು ಯಾರಿಗೂ ಸಂತೋಷವಲ್ಲ. ಅನಿವಾರ್ಯ ಕಾರಣಗಳು ನಡೆ ತಡೆದರೆ ತಡವಾದೀತೇ ಹೊರತು ವೃಥಾ ಆಗದು.

ಮತ್ತೊಮ್ಮೆ ಎಲ್ಲರಿಗೂ ವಂದನೆಗಳು.

ಪ್ರಾಚ್ಯಲೇಖನಮಾಲೆ

Jaina Antiquary—X, 2. January, 1942.

1. 'A Critical Examination of Svetambara and Digambara Chronological Traditions'—PROF. H. C. SETH, M.A., Ph.D.
2. 'Tavanidhi and Its Inscriptions'—Prof. Dr. A. N. UPADHYE.

   —A Jaina holy place to south of Nipani, Belgaum District.

Islamic Culture—XIX, 3. July, 1943.

1. 'The Arab's Knowledge of Ceylon'—PROF. NAFIS AHMAD.
2. 'Poetry and Architecture in the Time of Allāuddīn Khiljī'—DHARM PAL.

Bharatiya Vidya—VI, 7-8. July, August.

1. 'Jain view of Karma'—DR. B. C. LAW.
2. 'Mehrauli Iron Pillar Inscription of Candra'—PROF. D. R. MANKAD.

   Candragupta must be taken to have crossed the *Indus* and defeated the Vahlikas in the region of the modern Las Bela State, on the western border of Sind skirted on the south by the Arabian Sea.

   Vahlikas—in Sind not Punjab.

   Toyanidhi—here not the seas but rivers: likely, Brahmaputra and Indus.

3. 'Studies in the history of Indian Cosmetics and Perfumery. The Champaka oil (500-1850)'—PROF. P. H. GODE.

   based on Gandha Sara of Gangadhara and Gandhavada.

4. 'Juridical Studies in Ancient Indian Law. 7. Pledge (ಆಧಿ) (as titles to revovery of debt'—DR. LUDWIK STERNBACH.

   Called also ಬಂಧ or ಬಂಧಕ.

   ಜಂಗಮ, ಸ್ಥಾವರ, ಗೋಪ್ಯ, ಭೋಗ್ಯ, ಯಾದೃಚ್ಛಿಕ (with no time limits) ಸಾವಧಿ (with a time limit) ಲೇಖ್ಯಾರೂಢ (stipulated in writing) and ಸಾಕ್ಷಿಮಾನ್ (stipulated before witness).

5. 'Some Buddhist Acāryas and the Imperial Guptas'—SRI D. MOOKERJEE.

SYNCHRONISTIC TABLE

BUDDHIST AND OTHER ACARYAS	IMPERIAL GUPTAS	KUSANAS	ANDHRA KINGS
ಅಶ್ವಘೋಷ ವಸುಮಿತ್ರ	ಚಂದ್ರಗುಪ್ತ I (ಸಂ. I.c. ಸಂ. 26)	ಕನಿಷ್ಕ ಸಂ. I 23 ವಸಿಷ್ಕ (ಸಂ. 24-9)	ಹಾಲ (c ಸಂ. 6-10) ಮಂತಲಕ =ಮಂಟರಾಜ (ಕೌರಾಲದ) (ಕರ್ನೂಲ್)
ದಿನ್ನಾಗ— ವಸುಮಿತ್ರನ ಒಬ್ಬ ಶಿಷ್ಯ, ವಸುಬಂಧುವಿನ ಶಿಷ್ಯನಲ್ಲ	ಸಮುದ್ರಗುಪ್ತ ಸು. ಸಂ. 27-58		
ಕಾಲಿದಾಸ ನಾಗಾರ್ಜುನ ಆರ್ಯದೇವ	ರಾಮಗುಪ್ತ (ಸು. ಸಂ. 59) ಚಂದ್ರಗುಪ್ತ II ಸಂ. 60-93	ಹುವಿಷ್ಕ ಸು. ಸಂ. 30-60 ಕನಿಕ ವಾ. ಕನಿಷ್ಕ II ಸು. ಸಂ. 61-73 ವಾಸುದೇವ (ಸಂ. 74-98)	ಗೌತಮೀಪುತ್ರ ಸಾತಕರ್ಣಿ (ಸಂ. 46)
ಬುದ್ಧಮಿತ್ರ ಸು. ಸಂ. 120-155	ಕುಮಾರಗುಪ್ತ (ಸಂ. 93-136)		ಯಜ್ಞಶ್ರೀಶಾತಕರ್ಣಿ (ಸಂ. 109-138)
ಶೂರ ಶಾಂತಿದೇವ	ಸ್ಕಂದಗುಪ್ತ (ಸಂ. 136-c. ಸಂ. 155)		
ಅಸಂಗ	ಪುರು (ರವಸ್) ಗುಪ್ತ		
ವಸುಬಂಧು (ಸು. ಸಂ. 155-200)	=ಬುಧ (—ಪುತ್ರ) ಗುಪ್ತ (ಸಂ. 157—ಸ. ಸಂ. 180) ಘಟೋತ್ಕಚಗುಪ್ತ (ಸು. ಸಂ. 181-184) ನರಸಿಂಹಗುಪ್ತ ಬಾಲಾದಿತ್ಯ (ಸು. ಸಂ. 185-210) ಕುಮಾರಗುಪ್ತ II (ಸು. ಸಂ. 211-230)		
ಸ್ಥಿರಮತಿ (ಸು. ಸಂ. 200-245)	ವಿಷ್ಣುಗುಪ್ತ (ಸು. ಸಂ. 230-240) ಶ್ರೀ ಗುಪ್ತ (ಚೆಲಿ-ಕಿ-ತೊ) ಸು. ಸಂ. 241		

Journal of the Literary Committee of the L.E. Dharwar—Vol. V, 1. May, 1944.

ಶ್ರೀ ಅಲ್ಲಮಪ್ರಭು ದೇವರು—ಶ್ರೀ ಪುರಾಣೀಕ ಬುದ್ಧಯ್ಯಸ್ವಾಮಿಗಳು.

The I.H.Q.—XXI, 1. March, 1945.

'Historicity of the Kānci-Kaveri Tradition' (Purushottama's march to Kanci)—P. MUKHERJI, M.A.

Deals incidentally with the relation of Orissa with Karṇāta—sixties of the 15th century.

Miscellany—

1. 'The Vākāṭakas and the Daśārṇa Country'—D. C. SIRCAR.

   The V-kings reigned in Vidarbha from the second half of the third century to the first half fo the Sixth. They were not only responsible for some of the magnificent caves at Ajantā but it was apparently at their court that the celebrated ವೈದರ್ಭೀ ರೀತಿ or the Berar Style of composition originated and flourished. . . . The other important style . . . ಗೌಡೀ has to be associated with the court of the ಗೌಡ kings represented by ಗೋಪಚಂದ್ರ and ಶಶಾಂಕ.

2. 'Narayana Dikshita's Commentary on the Prakrtapingala Sutra'—K. M. Krishna Sarma.

   Later than sixteenth century.

(from the I.H.Q. Collection of items in Oriental Journals)

Journal of the Ganganatha Jha R.I.—II, 1. Nov., 1944.

1. 'Aesthetic Experience in the Light of Abhasavada'—KALI PANDEY.
2. 'The orgin of the Buddhist Image'—S. N. CHAKRAVARTI.

   —Idea originated with an Indian artist of Mathura.

Poona Orientalist—IX, 3-4. July-October, 1944.

1. 'Rgvedic Theory and Treatment of Rasas and Dhvani'—P. S. SASTRI.
2. 'Observations of sanskrit Literary critics an poetic imagination'—KRISHNA MOOTY.



ಶ್ರೀ ಟಿ. ಪಿ. ಕೈಲಾಸಂ
೨೯ ನೆಯ ಕನ್ನಡಸಾಹಿತ್ಯ ಪರಿಷತ್ ಸಮ್ಮೇಳನದ ಅಧ್ಯಕ್ಷರು

ಪ್ರಬುದ್ಧ
ಕರ್ಣಾಟಕ

ಪಾರ್ಥಿವ ಸಂವತ್ಸರ — ೧೦೪ — ದೀಪಾವಳಿ ಸಂಚಿಕೆ

ದೇವರ ಹೆಜ್ಜೆ

ಹಬ್ಬ ಹೋಳಿಗೆ ಹೂವು ದೀಪಗಳ ಬೆಡಗಿನಲಿ
ಹಬ್ಬಿಹುದು ಒಂದು ಅಧ್ವಾನ: ಧರ್ಮದ ಕರೆಗೆ
ದೇವರೇ ಒಲಿದು ವಾಮನನಾಗಿ ಯುಕ್ತಿಯಲಿ
ಬಲಿಚಕ್ರವರ್ತಿಯನು ತುಳಿದು, ಪಾತಾಳದಲಿ
ಸೆರೆಯಿಟ್ಟು ತಾನು ಕಾದಿಹನಂತೆ ಬಾಗಿಲಲಿ!—

ತುಳಿದ ಆ ಹೆಜ್ಜೆ ಮತ್ತೊಮ್ಮೆ ಈ ಭೂಮಿಯಲಿ
ಕಂಗೊಳಿಸಿ ಬದುಕ ಹರಸಿತೆ? ಇಲ್ಲ. ಪುಣ್ಯಕ್ಕೆ
ದಾನವನ ದಾನ ಉಳಿಯಿತು ಜನದ ಕಣ್ಣಿನಲಿ.
ಇನ್ನು ದೇವರೆ ಬಂದು ಹೊಸತೊಂದು ವೇಷದಲಿ
ಭಿಕ್ಷೆ ಬೇಡಿದರೆ ಹುಟ್ಟುವುದೆ ಈ ಕಾಲದಲಿ?

ಯಾವ ಧರ್ಮದ ಕಳೆಗೆ ಈ ಸೊಡರ ದೀಪವೆಲ್ಲ?
ಸೆರೆ, ತುಳಿತ, ಹಿಂಸೆ ಪಾವನವಲ್ಲ. ಗೆಲುವ ಹೆಜ್ಜೆ
ರಾಜಬೀದಿಗಳಲ್ಲಿ ಬಾರದಿದೆ. ಧರ್ಮವೆಲ್ಲ
ಅಲ್ಪಯುಕ್ತಿಗಳಿಂದ ತನ್ನನ್ನೆ ತಾನಿರಿಯುತ್ತಿದೆ.

ಕೆ.ಎಸ್.ನ.

ತಮೋಭೀತಿ

ತವಸಿ ಶಿವ ಪಾರ್ವತಿಯ ನಸುನೋಡುತೆವೆಮುಚ್ಚಿ
ದಂದದೊಳು ಸಂಜೆಯಚ್ಚರಿ ಹೊನ್ನ ಬೆಳಕು,
ಮಲೆ ಕಣಿವೆ ಬನ ಸರಸಿಯೆಲ್ಲವೂ ತೇಜಗೊಳೆ
ತುಸಕಾಲ ಬೆಳಗುತಳಿಯಿತು—ಆಯ್ತು ನಸುಕು.

ಕತ್ತಲೆಲ್ಲೆಡೆ ಈಗ—ಇದಿರು ಮಲೆ ಕರಗಿತಿಗೊ,
ಬಾನಿನೊಳು ಕದಡಿತಿಗೊ—ಬರಿ ಧೂಳುಗುಪ್ಪೆ—
ಇರುಳ ಹಾವಸೆಯಂತೆ ರೂವಳಿದು ತೇಲುತಿದೆ
ಕೆರೆಯ ಕರೆ ಮಾವು ನೇರಿಳೆ ಹೊಂಗೆ ಹಿಪ್ಪೆ.

ಜಗ ಮೆಲ್ಲನಳಿಯುತಿದೆ; ಮುಗಿಲ ಮರೆಯೊಳಗಾರೊ
ನಗುವ ತೆರನಾಯ್ತು ತಾರೆಗಳಟ್ಟಹಾಸ—
ಜೀವಕ್ಕೆ ಬಯಲಾಸೆ ತೀರಿದುದು, ಜನವಿಡುವ
ದೀಪದಿಂ ದೇಶಕ್ಕೆ ಕಿಂಚಿದವಕಾಶ.

ಕಮಲ ಕೊಕ್ಕರೆಯಿಂದ ಅಂದವಿದು, ಬಳಕೆಯಿಂ-
ದೆನಗಿನಿದು ಈ ಸರಸಿ, ಎಂತಾಗುತಿಹುದು!
ಬೂತವಾಡಿಸುತಿರುವ ರಾಜಕುವರಿಯ ತೆರದಿ
ನೀರಜಡೆ ಬಿಚ್ಚಿ ಹರಡಿರೆ ಭೀತಿಯಹುದು.

ಬೆಟ್ಟ ಕೆರೆ ಬನ ಬಾನು ಬಯಲೆಲ್ಲವೊಂದೀಗ,
ನನಗಿವಕು ಮುದದ ಬೇಹರ ತೀರಿತೀಗ,
ಸುತ್ತನೋಡೆನ್ನೆದೆಗು ದಾಳಿಯಿಡೆ ಬರುತಿಹೀ
ತಮಕೆ ನಾನೆದೆಗೆಟ್ಟು ಕಾಲ್ತೆಗೆವೆ ಬೇಗ.

ಪು ತಿ ನ.

ಭಾಷಾ ಶುದ್ಧಿ

೧

(ಸಮಸ್ಯೆಯ ಸ್ಥೂಲ ನಿರೂಪಣೆ)

ನುಡಿಕಟ್ಟಡಕ್ಕೆ ಮಾತುಗಳು ಇಟ್ಟಿಗೆ ಕಲ್ಲು, ವಾಕ್ಯಗಳು ಗೋಡೆಯ ವರಿಸೆಗಳು. ಕಟ್ಟಡದ ಬಿಗಿ ಭದ್ರತೆಗಳು, ಅಂದ ಚೆಂದಗಳು ಬಳಸುವ ಸಾಮಾಗ್ರಿಗಳ ಮೇಲೂ ಅವುಗಳ ಜೋಡಣೆಯ ಮೇಲೂ ಅವಲಂಬಿಸುವಂತೆ ಭಾಷೆಯದೂ ಮಾತುಗಳ ಮೇಲೆ, ಅವುಗಳ ಹೆಣಿಗೆಯ ಮೇಲೆ ಅವಲಂಬಿಸುತ್ತದೆ. ಶತಮಾನ ಶಾಶ್ವತ ಭವ್ಯ ಭವನಗಳುಂಟು—ಕೋಟೆ ಕೊತ್ತಳಗಳು, ಗುಡಿ ಗೋಪುರಗಳು. ತಲೆಮಾರಿನಲ್ಲಿ ತೇಲಿಹೋಗುವ ಮಣ್ಣು ಮನೆಗಳುಂಟು. ಒಂದೆರಡು ವರ್ಷ ತಡೆಯುವ ಬಿದಿರು ಸೋಗೆಗಳ ಗುಡಿಸಿಲುಗಳೂ ಬೆಳಗ್ಗೆ ಹಾಕಿ ಬೈಗು ಕೀಳುವ ಗೂಡಾರಗಳೂ ಉಂಟು. ಹಾಗೆಯೇ ಸಾರೋದ್ಧಾರ ಸಾಹಿತ್ಯ, ತಾತ್ಕಾಲಿಕ ಸಾಹಿತ್ಯ, ಅಂದಂದಿನ ಬಳಕೆಯ ಬರವಣಿಗೆ, ಆಡುಮಾತು.

ಯಾವ ದಡ್ಡ ಒಡ್ಡನಾದರೂ ತನ್ನ ಒಡ ಗುಡಿಸಿಲನ್ನು ತನಗೆ ತೋರಿದಂತೆ ಕಟ್ಟಿಕೊಳ್ಳಬಹುದು. ಆ ಗೂಡಿನಲ್ಲಿಯೇ ಅವನ ಬಾಳೆಲ್ಲ ಸಾಗಿಯೂ ಹೋಗುತ್ತದೆ. ಮೂಗನಲ್ಲದ ಯಾವ ಮನುಷ್ಯನೇ ಆಗಲಿ ಶಾಸ್ತ್ರಸಾಹಿತ್ಯಗಳನ್ನೋದದೆ ಸಂಸ್ಕಾರ ಪರಿಷ್ಕಾರಗಳ ಸೋಂಕೂ ಇಲ್ಲದೆ ದಿನದಿನದ ವ್ಯವಹಾರವನ್ನು ತನ್ನ ಒಡಕು ಮುರುಕು ಆಡುಮಾತುಗಳಿಂದ ಸಾಗಿಸಬಲ್ಲನು. ಚಿರಸ್ಥಿರ ಭವ್ಯ ಭವನದ ನಿರ್ಮಾಪಕನಿಗೆ ವಾಸ್ತುಶಿಲ್ಪದ ಅರಿವು ಬೇಕು. ಸಾಹಿತ್ಯ ಕರ್ತೃವಿಗೆ ತನ್ನ ಶಾಸ್ತ್ರ ಕಲೆಗಳ ಅರಿವು ಬೇಕು. ಮಾನಮುಚ್ಚಿಕೊಳ್ಳುವುದಕ್ಕಾಗಿ ಬಟ್ಟೆ ಸುತ್ತಿಕೊಳ್ಳುವುದೂ ಹಸಿವು ನೀಗುವುದಕ್ಕಾಗಿ ಹೊಟ್ಟೆಗೆ ಹಾಕಿಕೊಳ್ಳುವುದೂ ಒಂದು ಪರಿ. ಉಡುವುದನ್ನು ಸೊಗಸಾಗಿ ಉಡಬೇಕು, ಉಣುವುದನ್ನು ಸವಿದು ಉಣಬೇಕು ಎಂಬ ರಸಿಕತೆ ಮತ್ತೊಂದು ಪರಿ. ಹಾಗೆಯೇ, ಹೇಳಿದ್ದು ಹೇಗೋ ಅರ್ಥವಾದರೆ ಸರಿ ಎಂದು ಹರುಕು ಮುರುಕು ಮಾತುಗಳಿಂದ ಅಡ್ಡಾದಿಡ್ಡಿ ಒದರಾಟಗಳಿಂದ, ತನ್ನ ಅಭಿಪ್ರಾಯವನ್ನು ಮತ್ತೊಬ್ಬನಿಗೆ ಮುಟ್ಟಿಸುವ ಪ್ರಯತ್ನ ಒಂದು ರೀತಿ. ಉಸಿರಿದೊಡನೆ ಮನ ಮುಟ್ಟಿ ಭಾವ ಕೆರಳಿ ರಸಮಗ್ನನಾಗುವಂತೆ ಆಡಬೇಕೆಂಬುದು ಮತ್ತೊಂದು ರೀತಿ. ಈ ಸಂಸ್ಕೃತ ಪರಿಷ್ಕೃತರೀತಿಯೇ ಸಾಹಿತ್ಯ. ಸಾಹಿತ್ಯದ ಸಾರ್ವತ್ರಿಕ ಅನುಭೋಗಕ್ಕಾಗಿ ಕೆಲವು ಸಾಮಾನ್ಯಸಂಕೇತಗಳು ನಿಯಮಗಳು ಉಂಟು, ಕಟ್ಟುಗಳುಂಟು;

ವ್ಯಕ್ತಿವೈಶಿಷ್ಟ್ಯ ತೋರಿಸುವ ವಿಶೇಷ ಲಕ್ಷಣಗಳೂ ಉಂಟು. ಈ ಸಾಮಾನ್ಯ ನಿಯಮಗಳಲ್ಲಿ ಮಾತು, ಮಾತಿನ ರೂಪ, ಮಾತುಗಳ ಬಳಕೆ—ಇವಕ್ಕೆ ಸಂಬಂಧಪಟ್ಟಂತೆ ವ್ಯಾಕರಣ ನಿಯಮ ಒಂದು. ಭಾಷಾಪ್ರಪಂಚದಲ್ಲಿ ಮಾನವನ ಪ್ರಯೋಗ ಪರೀಕ್ಷೆ ಅನುಭವಗಳಿಂದ ಹೊರಟ ಕೆಲವು ಸಾಮಾನ್ಯ ಸಾರ್ವತ್ರಿಕ ನಿಯಮಗಳೇ ವ್ಯಾಕರಣ. ಆದ್ದರಿಂದ, ಭಾಷಾಶುದ್ಧಿಗೆ ವ್ಯಾಕರಣಭಾವ ಆವಶ್ಯಕ.

ದೇವ ಸೃಷ್ಟಿ ಮನುಷ್ಯ ಸೃಷ್ಟಿಗಳ ಉಳಿದೆಲ್ಲವಂತೆ ವ್ಯಾಕರಣವೂ ಕಾಲಕಾಲಕ್ಕೆ ಬದಲಾಯಿಸುತ್ತದೆ. ಬದಲಾಯಿಸುವುದು ಹೊರ ರೂಪ, ಪ್ರಕಾರಗಳು, ಜೀವಾಳ ಸೂತ್ರಗಳು ಯಾವ ಕಾಲಕ್ಕೂ ಯಾವ ಭಾಷೆಗೂ ಹೆಚ್ಚು ಕಡಮೆ ಒಂದೇ. ಹಿಂದಿನ ಫಲಪರಿಣಾಮಗಳಾದ ಪ್ರಯೋಗ ಪರೀಕ್ಷೆಗಳೂ ಅನುಭವ ಆಶಯಗಳೂ ಇಂದಿನ ಶಾಸ್ತ್ರ, ಕಲೆ. ಇಂದಿನ ಹೊಸ ಅನುಭವ, ನೋಟ, ಗುರಿ ಮುಂದಕ್ಕೆ ಜಾಡು. ನಿಯಮ ನಿಬಂಧಗಳು ಮುಂದಿನ ಕಟ್ಟಿಗಿಂತ ಹೆಚ್ಚಾಗಿ ಹಿಂದೆ ತುಳಿದ ಹಾದಿಯನ್ನು ಗುರುತಿಸುವ ಗೆರೆಗಳು. ಭಾಷೆ ಬೆಳೆದಂತೆಲ್ಲ ಬದಲಾಯಿಸುತ್ತಲೇ ಇರುತ್ತದೆ. ಬದಲಾದಂತೆಲ್ಲ ಹಳ ಕಟ್ಟುಗಳು ಸಡಿಲಿ ಹೊಸಕಟ್ಟುಗಳು ಏರ್ಪಡುತ್ತವೆ. ಪ್ರತಿ ವ್ಯಕ್ತಿಯಲ್ಲಿಯೂ ಜನತೆಯಲ್ಲಿಯೂ ಎರಡು ಒಲವುಂಟು—ಹಳದನ್ನು ಅಳಿಯಗೊಡದೆ ಆರೈಕೆಮಾಡುವುದು ; ಹೊಸದನ್ನು ಅರಸಿ ಆನಂದಿಸುವುದು. ಒಂದು ಜನತೆಯ ಒಂದು ಕಾಲದ ಅನುಭವ ಸಾರ್ವಕಾಲಿಕವಾಗಿ ನಿಲ್ಲಬೇಕಾದರೆ ಮೊದಲನೆಯ ಪ್ರವೃತ್ತಿ ನೆರವಾಗುತ್ತದೆ. ಅದೇ ಅನುಭವಪ್ರವಾಹ ಎಲ್ಲಿಯೂ ತಡೆದು ಮಲೆತು ನಿಲ್ಲದೆ ಸಂತತವಾಗಿ ಮುನ್ಸಾಗಬೇಕಾದರೆ ಎರಡನೆಯದು ಆವಶ್ಯಕ.

ಒಂದು ಜನತೆಯ ಸಾಹಿತ್ಯ ಸಾರೋದ್ಧಾರವಾದ್ದು. ಆ ಆಸ್ತಿಯ ಸಂಪೂರ್ಣ ಸಾಫಲ್ಯವನ್ನು ಪಡೆಯಬೇಕಾದರೆ, ಹಿಂದಿನದನ್ನು ಇಂದಿನವರೂ ಇಂದಿನದನ್ನು ಮುಂದಿನವರೂ ತಿಳಿಯಬೇಕಾದರೆ ಒಂದು ಸರ್ವಸಮ್ಮತ ಸಂಕೇತ, ನಿಯಮ, ಮಾರ್ಗ ಅಗತ್ಯ. ಇದಕ್ಕಾಗಿಯೇ ಪದರೂಪದಲ್ಲಿಯೂ ಪದಪ್ರಯೋಗದಲ್ಲಿಯೂ ಒಮ್ಮತ, ಕಟ್ಟು ಇರಬೇಕಾದ್ದು. ಈ ಕಟ್ಟಿಗೆ ಒಳಪಟ್ಟ ಬಳಕೆ ಶುದ್ಧವೆಂದೂ ಕಟ್ಟು ಮೀರಿದ್ದು ಅಥವಾ ಕಟ್ಟು ಕಾಣದ್ದು ಅಶುದ್ಧವೆಂದೂ ಸಾಮಾನ್ಯವಾಗಿ ವ್ಯವಹರಿಸುವುದು ಪದ್ಧತಿ. ಈ ಕಟ್ಟಿನ ಕಾಪಾಟ ಆಡುಮಾತಿಗಿಂತ ಬರವಣಿಗೆಯಲ್ಲಿ ಹೆಚ್ಚು ಅಗತ್ಯ. ವ್ಯಾಕರಣ ಭಾಷಾಶಾಸ್ತ್ರಗಳ ಸಹಾಯ, ಪ್ರಯೋಜನ ಇಲ್ಲಿ. ಇವೆರಡೂ ನುಡಿಯ ಜಾಯಮಾನ ಜಾಡುಗಳನ್ನು ತೋರಿಸುತ್ತವೆ. ಭಾಷೆ ಮುಂದು, ವ್ಯಾಕರಣ ಹಿಂದು. ವ್ಯಾಕರಣ ನಿಯಮಪಾಲಕನೇ ಹೊರತು ನಿಯಮ ಕರ್ತೃವಲ್ಲ. ನಿಯಮ ಕರ್ತೃ ಜನರ ಭಾಷಾ ಬುದ್ಧಿ, ಭಾಷಾ ಸಂಸ್ಕಾರ. ಭಾಷೆ ಪ್ರಭು, ವ್ಯಾಕರಣ ಸೇವಕ.

ಈ ಇಬ್ಬರನ್ನೂ ಮೇಲಾಳತಕ್ಕದ್ದು ಮಾನವ ಮನಸ್ಸು, ಬುದ್ಧಿ. ಕವಿಗಳು ಕೆಲವು ವೇಳೆ ಕಟ್ಟು ಮೀರುವಂತೆ ತೋರುವರಾದರೂ, ಬರಿಯ ಕಟ್ಟು ಮೀರಿದ ಮಾತ್ರದಿಂದಲೇ ಕವಿಗಳಾಗುವುದಿಲ್ಲ. ವ್ಯಾಕರಣಬೇತಾಳದ ಬೆದರಿಕೆಯಿಂದ ಭಾವ ತಿರುಚಿ ಕುಗ್ಗ ಬೇಕಾಗಿಲ್ಲ. ಆದರೆ, ವ್ಯಾಕರಣವನ್ನು ತೆಗಳಿ ಕಡೆಗಂಡದ್ದರಿಂದಲೇ ಕವಿತಾ ಪ್ರತಿಭೆಯನ್ನು ಸೂಸಿದಂತಾಗಲಿಲ್ಲ. ಮತ್ತೆ, ಅವಿವೇಕದ ಸ್ವಾಚ್ಛಂದ್ಯವನ್ನು ತಡೆಯುವುದಕ್ಕೆ ಕಟ್ಟೇ ಹೊರತು ಜೀವ ಹಿಂಡಿ ಕೊಲ್ಲುವುದಕ್ಕಲ್ಲವೆಂಬುದನ್ನು ಮರೆಯಕೂಡದು. ಭಾಷೆ ಜಡವಲ್ಲ; ಜೀವ, ಸಚೇತನ. ಕಲ್ಲಿಗೆ ಸಡಿಲದ ಕಟ್ಟು ಹಾಕಿದರೆ ಬಿಗಿ, ಭದ್ರ. ಅದನ್ನೇ ಬೆಳೆವ ಮರಕ್ಕೆ ಬಿಗಿದರೆ ಮರ ಕೊಳೆತೀತು, ಬತ್ತೀತು. ಬೆಳೆವ ಜೀವಿಗೆ ಸಡಿಲುವ ಕಟ್ಟು ಬೇಕು. ಈ ದೃಷ್ಟಿಯಿಂದ, ವ್ಯಾಕರಣ ನೆರವೂ ಆಗಬಲ್ಲದು ಹೊರೆಯೂ ಆಗಬಲ್ಲದು. ಹಾವು ಪರೆಯುರ್ಚಿ ಹೊಸಹರಯ ತಾಳುವಂತೆ, ನುಡಿ ಹಿಂದಿನ ಹೆಕ್ಕಳಿಕೆಗಳನ್ನು ಕಳಚಿ ಒಗೆಯುತ್ತ ಹೊಸ ಕಳೆಗಳನ್ನು ತಾಳುತ್ತ ಚಿರನವ ಯೌವನ ಶಾಲಿಯಾಗಿರಬೇಕು.

ಭಾಷೆಗಳನ್ನು ಸಾಮಾನ್ಯವಾಗಿ ಪ್ರಚಲಿತ, ಅಪ್ರಚಲಿತ ಎಂದು ಎರಡಾಗಿ ವಿಂಗಡಿಸುವುದುಂಟು. ಒಂದು ನಿರಂತರ ವ್ಯತ್ಯಯಿ, ಚಲಪ್ಲವ, ಪ್ರವಾಹಿ. ಮತ್ತೊಂದು ನಿರ್ದಿಷ್ಟ, ನಿಷ್ಕೃಷ್ಟ, ಸ್ಥಾಯಿ. ಪ್ರಚಲಿತವಾಗಿದ್ದಾಗ, ಜೀವಂತವಾಗಿದ್ದಾಗ ಎಲ್ಲ ಭಾಷೆಗಳೂ ವ್ಯತ್ಯಯಿಗಳೇ. ವೇದ, ಉಪನಿಷತ್, ಕಾವ್ಯ—ಈ ಕಾಲಗಳ ಸಂಸ್ಕೃತಗಳಲ್ಲಿ ವ್ಯತ್ಯಾಸವುಂಟು. ಹಾಗೆಯೇ ಗ್ರೀಕಿನಲ್ಲಿಯೂ ಹೋಮೇರಿಕ್, ಆ್ಯಟಿಕ್, ನ್ಯೂಟೆಸ್ಟಮೆಂಟ್ ಭಾಷಾಪ್ರಕಾರಗಳು ಬೇರೆಬೇರೆ. ಪ್ರಚಲಿತ ಭಾಷೆಗಳಂತೂ ಕಾಲಕಾಲಕ್ಕೆ ಮಾರ್ಪಡುತ್ತಿರುವುದು ಹಳಗನ್ನಡ—ಹೊಸಗನ್ನಡ, ಸಂಗದ ತಮಿಳು—ಈಗಿನ ತಮಿಳು, ಹಳೆಯ ಇಂಗ್ಲಿಷ್—ಆಧುನಿಕ ಇಂಗ್ಲಿಷ್, ಇವೇ ಮೊದಲಾದ ಭೇದಗಳನ್ನು ನೋಡಿದರೆ ತಿಳಿಯುತ್ತದೆ. ಒಂದು ದೃಷ್ಟಿಯಿಂದ, ಅಪ್ರಚಲಿತ ಭಾಷೆಯ ವ್ಯಾಕರಣ ನಿಯಮಗಳ ಪಾಲನೆ ಸುಲಭ. ಅಲ್ಲಿ ನಿಯಮಗಳು ನಿರ್ದಿಷ್ಟ, ನಿಷ್ಕೃಷ್ಟ, ಜಡ. ಪ್ರಚಲಿತ ಭಾಷೆ ನಿರಂತರ ಪ್ರವರ್ಧಮಾನ. ಹಳೆಯ ಕಟ್ಟುಗಳು ಸಡಿಲುತ್ತಲೇ ಇರುತ್ತವೆ; ಹೊಸವು ರೂಪಗೊಳ್ಳುತ್ತಲೇ ಇರುತ್ತವೆ. ಮೊದಮೊದಲು ಅಶುದ್ಧವಾಗಿದ್ದ ಪ್ರಯೋಗಗಳು ಬರುಬರುತ್ತ ಸಹ್ಯವಾಗುತ್ತವೆ; ಕೊನೆಗೆ, ಶಿಷ್ಟವಾಗಿಬಿಡುತ್ತವೆ.

ಭಾಷೆಗಳನ್ನು ಧ್ವನಿಲಿಪಿಯುಳ್ಳವು ಉಳ್ಳದವು ಎಂದೂ ವಿಂಗಡಿಸುವುದುಂಟು. ಧ್ವನಿಲಿಪಿ ಎಲ್ಲ ಭಾಷೆಗಳಿಗೂ ಇರಬೇಕಾದ್ದು ಅಪೇಕ್ಷಣೀಯವಾದರೂ, ಬರವಣಿಗೆಯಲ್ಲಿ ಅದನ್ನು ಅತಿಗೆ ತೆಗೆದುಕೊಂಡು ಹೋದರೆ ಕೆಲವು ತೊಡಕುಗಳೂ ಉಂಟು.

ಲೋಕದಲ್ಲಿ ಎಷ್ಟು ನಾಲಗೆಗಳೋ ಅಷ್ಟು ಬಗೆಯ ನುಡಿತ ಒಂದು ಸ್ವರಕ್ಕೆ ಉಂಟು. ಅವುಗಳಿಗೆಲ್ಲ ಆಕಾರ ಕೊಡಲೆಳಸುವುದು ಮುಗಿಲಗಲಕ್ಕೆ ಹಂದರ ಹಾಕಲೆಳಸುವಂತೆ. ವ್ಯಕ್ತಿ, ವಯಸ್ಸು, ಕಾಲ, ದೇಶ, ಮೊದಲಾದುವಕ್ಕೆ ಅನುಸಾರವಾಗಿ ಒಂದೇ ಮಾತು ಬೇರೆಬೇರೆಯಾಗಿ ಉಚ್ಚಾರವಾಗುತ್ತದೆ. ಈ ಒಂದೊಂದು ಬೇರ್ಪಾಟನ್ನು ಹಿಡಿದು ರೂಪವೂ ಮಾರ್ಪಡುತ್ತ ಹೋದರೆ, ಆ ರೂಪಾಂತರಗಳೆಲ್ಲ ಒಂದೇ ಮಾತಿನ ಹಲವು ಪರ್ಯಾಯರೂಪಗಳೆಂದು ಗೊತ್ತುಹಚ್ಚುವುದು ಕಷ್ಟವಾದೀತು. ಸಂಪೂರ್ಣ ಪರಿಶುದ್ಧ ಧ್ವನಿಲಿಪಿ ಭಾಷೆ ಇಲ್ಲವೂ ಇಲ್ಲ. ಬರವಣಿಗೆಯೇ ಒಂದು ಸಂಕೇತ. ಆ ಸಂಕೇತದಲ್ಲಿ ಒಳ ಸಂಕೇತಗಳು ಹಲವು ಕೆಲವು ಇದ್ದೇ ಇರುತ್ತವೆ. ಬ್ರಾಹ್ಮಣ, ಜ್ಞಾನ, ಪ್ರಹ್ಲಾದ, ಮಧ್ಯಾಹ್ನ ಇವೇ ಮೊದಲಾದ ಪದಗಳ ಉಚ್ಚಾರ ಯಾವ ಯಾವ ಕಾಲದಲ್ಲಿ ಹೇಗೆ ಹೇಗೆ ಇತ್ತೊ? ನನ್ನ ತಂದೆ—ಹಣ್ಣು ತೆಂದೆ; ಅಟ್ಟ ಹಾಲು—ಅಟ್ಟ ಕಟ್ಟು; ಕದ್ದ ಕಳ್ಳ; ಈ ಎಲ್ಲೆಡೆಯೂ 'ಅ' ಒಂದೇ ಬಗೆಯಾಗಿ ಉಚ್ಚಾರವಾಗುವುದಿಲ್ಲ. ಸಾಹಚರ್ಯದಿಂದ ಬೇರೆ ಬೇರೆಯಾಗಿ ನುಡಿಯುತ್ತದೆ. ಅಲ್ಲದೆ, ವ್ಯಕ್ತಿಯಿಂದ ವ್ಯಕ್ತಿಗೆ, ಮನೆಯಿಂದ ಮನೆಗೆ, ವರ್ಗದಿಂದ ವರ್ಗಕ್ಕೆ, ಊರಿನಿಂದ ಊರಿಗೆ, ನಾಡಿಂದ ನಾಡಿಗೆ, ತಲೆಮಾರಿಂದ ತಲೆಮಾರಿಗೆ ಉಚ್ಚಾರ ಮಾರ್ಪಡುತ್ತಲೇ ಇರುವಾಗ, ಉಚ್ಚರಿಸುವಂತೆಯೇ ಬರೆದು ಆ ಬರಹವನ್ನು ಎಲ್ಲರೂ ಎಲ್ಲ ಕಾಲದಲ್ಲೂ ಒಂದೇ ರೀತಿಯಾಗಿ ಅರ್ಥಮಾಡಿಕೊಳ್ಳುವುದು ಕಷ್ಟವಾದೀತು. ಉಚ್ಚಾರದಲ್ಲಿ ಹಲವು ಛಾಯೆಗಳು ಕಂಡುಬಂದರೂ ಬರವಣಿಗೆಯಲ್ಲಿ ನಿಷ್ಕೃಷ್ಟತೆ, ಏಕಪ್ರಕಾರತೆ ಇರುವುದು ಮೇಲು. ಈ ಏಕಪ್ರಕಾರತೆ ನಿಷ್ಕೃಷ್ಟತೆಗಳ ನಿರ್ದೇಶದಲ್ಲಿ ಭಾಷಾಶಾಸ್ತ್ರ, ವ್ಯುತ್ಪತ್ತಿಶಾಸ್ತ್ರ, ವ್ಯಾಕರಣ ಮೊದಲಾದವು ಸಹಾಯವಾಗುತ್ತವೆ.

ಏಕಪ್ರಕಾರತೆಗೂ ಪ್ರಾಂತಭೇದಗಳಿಗೂ ಸಮನ್ವಯ ಹೇಗೆ? ಸಾರ್ವಕಾಲಿಕ ಸಾರ್ವದೇಶಿಕ ನಿಯಮ ಸಾಧ್ಯವೆ? ಇಷ್ಟವೆ? ಕೇಶಿರಾಜ ಭಟ್ಟಾಕಳಂಕರ ನಿಯಮಗಳು ಈಗ ಸಡಿಲಿಲ್ಲವೆ? ಆಗಿಹೋದ ಮಾರ್ಪಾಡುಗಳನ್ನು ಸಭ್ಯತೆಯಿಂದ ಒಪ್ಪಿಕೊಳ್ಳ ಬೇಡವೆ? ಹರಿವನ್ನು ಮತ್ತೆ ಮರಳಿಸಲು ಸಾಧ್ಯವೆ? ಇವೇ ಮುಂತಾದ ಪ್ರಶ್ನೆಗಳೂ ಸಮಸ್ಯೆಗಳೂ ಏಳುತ್ತವೆ ಈ ಸಂದರ್ಭದಲ್ಲಿ. ಇವನ್ನು ಬಗೆಹರಿಸುವುದು ಹೇಗೆ? ಯಾರು ಬಗೆಹರಿಸಬೇಕು?

ಜನದ ಬಾಯಿಗೆ ತಡೆಯಿಲ್ಲವೆಂಬುದು ಒಂದಕ್ಕಿಂತ ಹೆಚ್ಚು ಅರ್ಥದಲ್ಲಿ ನಿಜ. ಱ ೞ ಗಳು ಅಳಿದೇ ಹೋಗಲಿಲ್ಲವೆ? ಕೇಶಿರಾಜರ ಕಟ್ಟುಗಳು ತಡೆದವೆ? ನಿತ್ಯ ಬಿಂದು, ವಿಕಲ್ಪ ಬಿಂದುಗಳೆಲ್ಲ ಈಗ ಏನಾದವು? ಗುರೂಪಧೆಗಳೂ ಸರೇಫಗಳೂ ಎಲ್ಲಿ? ವೈಯಾಕರಣಿಗಳ ನೊಂದು ಕೆರಳಿದ ಆತ್ಮದ ಕೂಗು ಬಯಲಕೂಗಾಯಿತಲ್ಲವೆ?

ಇಂದು ಹಿಂದಿನ ವ್ಯಾಕರಣ ಸೂತ್ರಗಳನ್ನೇ ಹಿಡಿದುಕೊಂಡು ಆ ತೆರನ ಭಾಷಾಶುದ್ಧಿಯನ್ನು ಸಾಧಿಸಹೋದರೆ ಅದು ಮೂರ್ಖತನವೆನಿಸದೀತಲ್ಲವೆ? ಹೀಗೆ ಹಿಂದಕ್ಕೇ ಹೋಗುತ್ತಿದ್ದರೆ ತಂಗುವುದಕ್ಕೆ, ನೆಲೆ ನಿಲ್ಲುವುದಕ್ಕೆ ಹಿಂಗಡಿಯಾದರೂ ಯಾವುದು? ರೆಕ್ಕೆಯನ್ನು ಎಱಂಕೆಯೆಂದೂ ಲೆಂಕವನ್ನು ಎಲಂಕವೆಂದೂ ರೊಪ್ಪವನ್ನು ಒಱಪವೆಂದೂ ಹಾಗೆ ಮೊದಲಾದುವನ್ನು ಅಹಗೆ ಮುಂತಾಗಿಯೂ ಈಗ ಬರೆಯಲೆಳಸುವುದು ತಕ್ಕದ್ದೆ? ಆಯ್ತು, ಪೊಯ್ತು ಮುಂತಾದ ರೂಪಗಳನ್ನು ಕೇಶಿರಾಜನಂಥ ವೀರ ವೈಯಾಕರಣಿಯೇ ಒಪ್ಪಿಕೊಂಡಿಲ್ಲವೆ? ಈಗ ಬಂತು, ಬಿತ್ತು, ಇತ್ತು ಮೊದಲಾಗಿ ಬರೆದರೆ ತಪ್ಪೇಕೆ? ಇಂಥ ಕೇಳಿಕೆಗಳಿಗೆ ಕೊನೆಯೇ ಇಲ್ಲ.

ಮನಿ, ಕುದುರಿ, ಅತ್ತಿ ಮುಂತಾದ ರೂಪಗಳು ಕೆಲವರಿಗೆ ವಿಲಕ್ಷಣವಾಗಿ ಕಾಣಬಹುದು. ಅಂಥವರು ತಂಗೆ, ಮಡದೆ ಎಂದೇ ಉಚ್ಚರಿಸಬೇಕಾದೀತು? 'ಅ**ಡು**ಗೆ' ಅತಿಗ್ರಾಂಥಿಕ, 'ಅ**ಡಿ**ಗೆ'ಯೇ ಉಚಿತ ಎನ್ನುವವರು ಬೆಳಿಗ್ಗೆ, ನಾಲಿಗೆಗಳನ್ನು ಏಕೆ ಸುಲಭವಾಗಿ ಒಪ್ಪರು? **ಯಾ**ರು, **ಯಾ**ವಾಗ ಸರಿಯೇಕೆ? **ಯಾ**ಕೆ, **ಯಾ**ತರಿಂದ ತಪ್ಪೇಕೆ? ವ್ಯುತ್ಪತ್ತಿಯೇ ಋಜುರೂಪನಿರ್ಣಾಯಕವಾದರೆ ಗಂ**ಡು**ಸು, ಹೆಂ**ಗು**ಸು, ವರುಮಾನ ಎಂದೇ ಬರೆಯಬೇಕು. ವರಮಾನ ಸರಿಯಾದರೆ ಅರವತ್ತು ಏಕೆ ತಪ್ಪು? ಹರಿಕು, ಹರುಕು, ಹರಕು—ಇಲ್ಲಿ ಯಾವುದು ಸರಿ? ದ್ರಾವಿಡ ಮಾತುಗಳಲ್ಲಿಯ ನಡುಸ್ವರ ಅದೃಢವಾದ್ದು, ಸಾಹಚರ್ಯದಿಂದ ಮಾರ್ಪಡುತ್ತದೆ ಎಂಬ ಸೂತ್ರದ ಸ್ವೇಚ್ಛಾಪ್ರಯೋಗದಿಂದ ಎಲ್ಲವೂ ಸರಿಯೆಂದು ಬಿಡುವುದೆ? ಹ**ರಿ**ಕು→ಹ**ರೆ**ಕು, ಹ**ರು**ಕು→ಹ**ರೊ**ಕು ಎಂದೂ ಮಾಡಿ ಇ→ಎ ಆಗುವುದೂ ಉ→ಒ ಆಗುವುದೂ ದ್ರಾವಿಡ ಸ್ವರವ್ಯತ್ಯಾಸ ನಿಯಮವೆಂದು ಹೇಳಿ ಸೂತ್ರಗಳ ದುರ್ವಿನಿಯೋಗ ಅಪಪ್ರಯೋಗಗಳಿಂದ ನಾನಾ ಸಮಸ್ತರೂಪಗಳನ್ನೂ ಸಾಧಿಸಿಬಿಡುವುದು ಶಕ್ಯವಲ್ಲವೆ? ಮತ್ತೆ, ವ್ಯುತ್ಪತ್ತಿ ಹೇಳುವುದರಲ್ಲಿಯೇ ಭಿನ್ನಾಭಿಪ್ರಾಯ ಕಂಡರೆ ಏನುಮಾಡಬೇಕು? ಕಡಿ (ಕತ್ತರಿಸು)+ಮೆ→ಕಡಿಮೆ, ಕಡೆ (ಕೊನೆಯದು) +ಮೆ→ಕಡಮೆ, ಕಡ (ಸಾಲ)+ಮೆ→ಕಡಮೆ ಎಂದು ಹಲವು ಪ್ರಕಾರ ಮಾತಿನ ಬರುವಳಿಯನ್ನು ಸೂಚಿಸಿದರೆ ಎರಡು ರೂಪಗಳೂ ಸಾಧುವಾಗಬೇಕಲ್ಲವೆ? ಹಾಗೆಯೇ ಯುತ→ಜೊತೆ; ಯತಿ→ಜತಿ→ಜತೆ. ಬೇಸಗೆ ವೈಶಾಖದ ತದ್ಭವವಲ್ಲವೆಂದೂ ಅದು ಅಚ್ಚಕನ್ನಡವೆಂದೂ ಬೇಯ್ಗೆ→ಬೇಯಿಗೆ→ಬೇಸಿಗೆ ಎಂದೂ ಸಾಧಿಸಿದರೆ, ಬೇ**ಸ**ಗೆ ತಪ್ಪಾಗಿ ಬೇಸಿಗೆಯೇ ಸರಿಯಾದೀತಲ್ಲವೆ? ಬರುವಳಿಯನ್ನೇ ಹಿಡಿದು ಬರೆಯುವುದಾದರೆ ವರದಿ, ಇವತ್ತು, ಹಾಳತ, ವರಸೆಗಳನ್ನು ಕ್ರಮವಾಗಿ ಬರದಿ (ಬರೆ=ಹೇಳು), ಇವೊತ್ತು (ಈ+ಪೊೞ್ತು), ಹಾಳಿತ (ಪಾಟಿ=ಕ್ರಮ, ರೀತಿ),

ವರಿಸೆ (ಪರಿ=ಕ್ರಮ, ತಮಿಳಿನಲ್ಲಿ ಪರಿಶು) ಎಂದಲ್ಲವೇ ಬರೆಯಬೇಕು? ನೆರವಿ ಸರಿಯಾಗಿ ಚೆದರದೆ ಕೆಟ್ಟು ಚೆದುರುತ್ತಿದೆಯಲ್ಲಾ! ಚೆಲುವು ಚೆಂದಗಳ ಎ→ಅ ಆಗುತ್ತಿದೆಯಲ್ಲ! ಏನುಮಾಡುವುದು? ಕೆಡೆ→ಕೆಡವು→ಕೆಡವಿಸು ಎಂಬ ಹೋಲಿಕೆಯ ಮೇಲೆ ತಿಳಿ→ತಿಳುಹು→ತಿಳುಹಿಸು, ಕಳಿ→ಕಳುಹು→ಕಳುಹಿಸು ಎಂದು ಮಾಡುವುದು ಸರಿಯೆ? ಆವಶ್ಯಕವೆ? ತಿಳಿಸು, ಕಳಿಸು ಎಂದು ಹೇಳಿದರೆ ತಪ್ಪೆನ್ನುವವರನ್ನು ಏನೆನ್ನಬೇಕು? ನಡೆಯಿಸು, ನಡೆಸು, ನಡಸು, ನಡಿಸು—ಈ ನಾನಾ ರೂಪಗಳ ಅವಾಂತರವೇನು? ನಡುಸು, ನಡೊಸು ಎಂದು ಬರೆದರೂ ಸಾಗೀತೇನೊ? ಒರಸು, ಬಳಸು, ಪರಸು ಮೊದಲಾದ ಪ್ರಾಚೀನ ರೂಪಗಳನ್ನೂ ಆಡುಮಾತಿನ ಒಲವನ್ನೂ ನೋಡಿದರೆ ನಡಸು ಸರಿಯಲ್ಲವೆ? ಮರತು, ಹೊಡದು, ನಡದು ಮೊದಲಾದ ರೂಪಗಳು ಅಯೋಗ್ಯವೆ? (ಹಿಂದಿನ ಓಲೆಗರಿಗಳಲ್ಲೂ ತಮಿಳಿನಲ್ಲೂ ಈ ರೂಪಗಳು ಕಾಣಿಸುತ್ತವೆಯಲ್ಲ). ಬೆಳವಣಿಗೆ ಬರವಣಿಗೆಗಳೋ ಬೆಳೆವಣಿಗೆ ಬರೆವಣಿಗೆಗಳೋ? ಮೆಟ್ಟಲು ತೊಟ್ಟಲುಗಳೋ ಮೆಟ್ಟಿಲು ತೊಟ್ಟಿಲುಗಳೋ? ನಡು→ನಟ್ಟನಡುವೆ, ಕಡೆ→ಕಟ್ಟಕಡೆ ಆದರೆ ತುದಿ, ಮೊದಲುಗಳ ವೀಪ್ಸಾರೂಪ ಏನು? ಈಗ್ಯೆ, ಬಗ್ಯೆ ಎಂಬ ಬಳಕೆಯ ರೂಪಗಳನ್ನು ಈಗ್ಗೆ, ಬಗ್ಗೆ ಎಂದೋ ಇನ್ನೂ ಮುಂದೆ ಹೋಗಿ ಈಗಿಗೆ, ಬಗೆಗೆ ಎಂದೋ ಮಾಡಲೇಬೇಕೆ? ಹೊಡೆಯಲೇಬೇಕೊ? ಹೊಡೀಲೂಬಹುದೊ? ಎಳೀ, ಬರೀ, ಕೊನೇ ಮೊದಲಾದ ರೂಪಗಳು ಗ್ರಾಮ್ಯವೆ? ಅವ ಹೋದ, ನಾ ಬಂದೆ ಮೊದಲಾಗಿ 'ನು' ಲೋಪವಾಗಿ ಬರೆದರೆ ಕೆಲವರ ಕಣ್ಣೇಕೆ ಕೆರಳಬೇಕು? ಮಾಡೋನ್, ಬಂದೋನ್ ಮೊದಲಾದ ರೂಪಗಳು ಹಳಗನ್ನಡ ಗ್ರಂಥಗಳಲ್ಲಿಯೂ ಮಾಡೋನು, ಬಂದೋನು ಮೊದಲಾದ ರೂಪಗಳು ಈಗಲೂ ಆಡುಮಾತಿನಲ್ಲಿಯೂ ಇರುವಾಗ ಮಾಡುವವನು, ಬಂದವನು ಎಂದೇ ಬರೆಯಬೇಕೆಂಬ ಹಟವೇಕೆ? ಹೊರವಂಟ (ಪೊಱ+ಪಡು→ಹೊರವಟ್ಟ) ಕಾವ್ಯಯೋಗ್ಯವೇನು! ಬರುವ ಗಂಟ (ಬರುವ ಗಟ್ಟ; ಗಟ್ಟ→ಗಡಿ, ಮೇರೆ) ಗ್ರಾಮ್ಯವೇನು! ಕೈಲಿ, ಮನೇಲಿ; ತಗೋ ಕಳಕೋ ಮೊದಲಾದ ರೂಪಗಳನ್ನು ಸಾಹಿತ್ಯಕ್ಕೆ ಸ್ವೀಕರಿಸಬೇಕೋ, ಇನ್ನೂ ಬಾರದೊ? ಆಡಿದ್ದೆಲ್ಲ ಸರಿಯಾದರೆ ಒಂಭತ್ತು, ಅಥಟು, ಧಾಳಿ, ಥೇಟು, ಭಾವಿ, ಮೊದಲಾದ ಮಾತುಗಳಲ್ಲಿಯ ಒತ್ತುಸಿರನ್ನು ಒಪ್ಪಿಕೊಂಡು ಬರವಣಿಗೆಯಲ್ಲಿ ತರಬಹುದೆ? ಮತ್ತೊಂದು ಕಡೆ ಕೂಡಹಾಕು, ತೂಗಹಾಕುಗಳಿಗೂ ಕೂಡಿಹಾಕು, ತೂಗಿಹಾಕುಗಳಿಗೂ ಅರ್ಥ ರೂಪ ವ್ಯತ್ಯಾಸಗಳನ್ನು ಮಾಡಬೇಡವೆ? ತೇಲಿಬಿಡುವುದಕ್ಕೂ ತೇಲಬಿಡುವುದಕ್ಕೂ, ಕೇಳಿಬರುವುದಕ್ಕೂ ಕೇಳಬರುವುದಕ್ಕೂ ಭೇದವಿಲ್ಲವೆ? ಮಾಡಮಾಡುತ್ತ ಬರಬರುತ್ತ ಮೊದಲಾಗಿ ಬರೆಯುವವರು ಮಾಡ

ಮಾಡತ, ಬರಬರತ ಮೊದಲಾಗಿಯೇ ಆಡುವಂತೆ ಏಕೆ ಬರೆಯಬಾರದು? ಕಿವಿಯೊಂದೇ ಪ್ರಮಾಣವೆ? ವ್ಯಕ್ತಿಗಳ ಎರಡರಷ್ಟು ಕಿವಿಗಳಿರುವಾಗ ಯಾರ, ಯಾವ ಕಿವಿ ನಮಗೆ ಪ್ರಮಾಣ? ಆಡುಮಾತಿನ ರೂಪಗಳು ಅನಿಷ್ಕೃಷ್ಟವೂ ಲಿಪಿ ಸಾಧ್ಯವಲ್ಲದ ಬಹು ಪ್ರಕಾರದವೂ ಆಗಿದ್ದ ಮಾತ್ರಕ್ಕೆ ಎಲ್ಲರ ಸೌಕರ್ಯಕ್ಕಾಗಿ ಬರವಣಿಗೆಯಲ್ಲಾದರೂ ಒಂದು ಗೊತ್ತುಪಾಡು ಬೇಡವೆ?

ಇನ್ನು ಪ್ರಯೋಗದ ಕಡೆಗೆ ತಿರುಗಿದರೆ ಅಲ್ಲಿಯೂ ಗೊಂದಲವೆ? ಗಿಳಿಯು, ಕರುವು, ತೆನೆಯು ಮುಂತಾದ ಪ್ರಥಮಾವಿಭಕ್ತಿ ರೂಪಗಳು ಎಲ್ಲಿಯವು? 'ಉ' ಪ್ರಥಮಾವಿಭಕ್ತಿ ಪ್ರತ್ಯಯವೆಂದು ಯಾವ ಕನ್ನಡ ಪಾಣಿನಿ ಮಾಡಿದ! ಈ ರೂಪಗಳು ವಿಜಾತೀಯವಾದರೆ, ಆಡುವಾಗ ಉಚ್ಚಾರ ವಿರಾಮ ಭೇದದಿಂದ ಕರ್ತೃವನ್ನು ಪ್ರತ್ಯೇಕಿಸಿ ತೋರಿಸುವುದನ್ನು ಬರವಣಿಗೆಯಲ್ಲಿ ಹೇಗೆ ತೋರಿಸಬೇಕು? ಬಲು ಮಾತಿನ ನಿಡುಪೋಣಿಕೆಯಲ್ಲಿ ಒಮ್ಮೊಮ್ಮೆ ಉಕಾರಾಂತ ಕರ್ತೃರೂಪ ಅನುಕೂಲವಲ್ಲವೆ? ವ್ಯಾಕರಣ ಶುದ್ಧವಾಗಿ ಬರೆಯಬೇಕಾದರೆ ದ್ವಿತೀಯಾ ವಿಭಕ್ತಿರೂಪ ಎಲ್ಲಡೆಯಲ್ಲೂ ಅತ್ಯಗತ್ಯವೇ ಅನಿವಾರ್ಯವೇ? ಕುರಿಯನ್ನು ಕಾಯಿ, ಮನೆಯನ್ನು ಕಟ್ಟು ಎಂದೇ ಹೇಳಬೇಕೋ? ಕುರಿ ಕಾಯಿ, ಮನೆ ಕಟ್ಟು ಸಾಕೊ? ಕುರೀಕಾಯಿ, ಮನೇಕಟ್ಟು ತಪ್ಪೆ? ಇನ್ನು ಕನ್ನಡದಲ್ಲಿ ಕರ್ಮಣಿಪ್ರಯೋಗ ಉಂಟೆ? ಆವಶ್ಯಕವೆ? ಹಣ್ಣುಗಳನ್ನು ಮಾರಲ್ಪಡುತ್ತವೆ; ಅತಿಕ್ರಮಿಸುವವರನ್ನು ಶಿಕ್ಷೆಗೆ ಗುರಿಪಡಿಸಲ್ಪಡುತ್ತದೆ; ಮೀರುವವರನ್ನು ದಂಡಿಸಲ್ಪಡುತ್ತಾರೆ—ಇವೇ ಮೊದಲಾದ ವಿಕಾರ ವಿಚಿತ್ರ ವಿಲಕ್ಷಣ ಪ್ರಯೋಗಗಳು ಕರ್ಮಣಿ ಕನ್ನಡಕ್ಕೆ ಅಷ್ಟಾಗಿ ಒಗ್ಗದು ಎಂದು ತೋರಿಸುವುದಿಲ್ಲವೆ? ವೀರದ್ರಾವಿಡ ತಮಿಳಿನಲ್ಲಿ ಕೂಡ ಶೊಲ್ಲಪ್ಪಡು, ಶೆಯ್ಯಪ್ಪಡು ಮೊದಲಾದ ರೂಪಗಳು ಬಳಕೆಯಲ್ಲಿರುವಾಗ ಕನ್ನಡದಿಂದ ಕರ್ಮಣಿಪ್ರಯೋಗಗಳನ್ನು ನಿರ್ದಾಕ್ಷಿಣ್ಯವಾಗಿ ಅಟ್ಟಿಬಿಡುವ ಹಟವೇಕೆ? ಅರ್ಥಸ್ಪಷ್ಟತೆಗಾಗಿ ಕೆಲವೊಮ್ಮೆ ಕರ್ಮಣಿ ಪ್ರಯೋಗ ಮಾಡಿದರೆ ಪಾಪವೇನು? ಸಮರ್ಥನಾಗಿದ್ದಾನೆ, ಸಮರ್ಥಳಾಗಿದ್ದಾಳೆ, ಸಮರ್ಥವಾಗಿದೆ ಎಂದೇ ಬರೆಯಬೇಕೆ? ಸಮರ್ಥವಾಗಿ ದ್ದಾನೆ,—ದ್ದಾಳೆ,—ದೆ ಎಂದು ಸುಲಭಮಾಡಿದರೆ ಏಕಾಗಬಾರದು? ಈ ಪ್ರಶ್ನೆಗಳಿಗೆಲ್ಲ ಉತ್ತರ ಹೇಳುವವರು ಯಾರು?

ಭಾಷಾಶಾಸ್ತ್ರ, ವ್ಯುತ್ಪತ್ತಿ ಶಾಸ್ತ್ರ, ವ್ಯಾಕರಣ—ಇವೇ ಮೊದಲಾದುವುಗಳ ದೃಷ್ಟಿಯಿಂದ ಭಾಷಾಶುದ್ಧಿಯ ವಿಷಯವಾಗಿ ಏಳಬಹುದಾದ ಸಮಸ್ಯೆಗಳಲ್ಲಿ ಕೆಲವನ್ನು ಹೆಗ್ಗುರುತಿಸಿದ್ದಾಯಿತು ಇಲ್ಲಿಯ ವರೆಗೆ. ಭಾಷಾಶುದ್ಧಿ ಎಂದರೇನು ಎಂಬುದನ್ನು ಈಗ ಮತ್ತೊಂದು ದೃಷ್ಟಿಯಿಂದ ವಿಚಾರ ಮಾಡಬಹುದಾಗಿದೆ. ಭಾಷಾಶುದ್ಧತೆಗೂ

ಶುದ್ಧ ಭಾಷೆಗೂ ಅರ್ಥವ್ಯತ್ಯಾಸ ಮಾಡಬೇಕು. ಶುದ್ಧ ಶ್ವೇತ ವರ್ಣವನ್ನು ತರಬಹುದು. ಆದರೆ ಶ್ವೇತ ಅಮಿಶ್ರಶುದ್ಧವರ್ಣವಲ್ಲ. ಪ್ರಪಂಚದಲ್ಲಿ ಅಮಿಶ್ರ ಶುದ್ಧ ಜನಕುಲ ಹೇಗೆ ಇಲ್ಲವೋ ಹಾಗೆಯೇ ಅಮಿಶ್ರ ಶುದ್ಧ ಭಾಷೆಯೂ ಇಲ್ಲ. ಶುದ್ಧ ಭಾಷಾ ವಾದಿಗಳು ಭಾಷಾಮೂಲವನ್ನು — ದೇವ ನದೀ ಋಷಿಮೂಲಗಳಂತೆ — ಅರಸದಿರು ವುದು ಮೇಲು. ಬೆರಕೆಯಿಲ್ಲದ ಅಚ್ಚ ನುಡಿಗಳಿಂದಲೇ ತುಂಬಿದ್ದೆಂದು ಸಾಮಾನ್ಯ ವಾಗಿ ನಂಬಿರುವ ಸಂಸ್ಕೃತದಲ್ಲಿಯೂ ಹಲವಾರು ಭಾಷೆಗಳ ಪದಗಳು ಸೇರಿವೆ. ಅಚ್ಚ ನುಡಿಗಳಿಗಾಗಿಯೇ ಹೆಣಗುವವರು ಪ್ರತಿಯೊಂದು ಭಾಷೆಗೂ ಹೇಗೋ ನುಸುಳಿರುವ ಅರ್ಥವತ್ತೂ ಭಾವ ಗರ್ಭಿತವೂ ಆದ ಹಲವು ವಿಶಿಷ್ಟ ಅನ್ಯಭಾಷಾ ಪದಗಳನ್ನು ಬಿಡಬೇಕಾದೀತು. ಇಲ್ಲವೇ, ತಮ್ಮ ಭಾಷೆಯಲ್ಲಿ ಬಳಕೆಯಾಗುವ ಮಾತುಗಳೆಲ್ಲವೂ ತಮ್ಮ ಸ್ವಂತದ್ದೇ ಎಂದು ಸಾಧಿಸಲು ಕುಂಟುದಾರಿಗಳನ್ನು ಹುಡುಕ ಬೇಕಾದೀತು. ಶಂಖದಿಂದ ಬಂದರೆ ತೀರ್ಥ, ವಸಿಷ್ಠರ ಬಾಯಿಂದ ಬಂದರೆ ಬ್ರಾಹ್ಮಣ ಎಂಬಂತೆ ಕನ್ನಡದಲ್ಲಿ ಬಳಕೆಗೆ ಬಂದುಬಿಟ್ಟಿರುವ ಮಾತುಗಳಿಗೆ ಸಂಸ್ಕೃತದ ಇಲ್ಲವೇ ದ್ರಾವಿಡದ ವ್ಯುತ್ಪತ್ತಿ ಮೂಲಗಳನ್ನು ಹೇಳಿಕೊಂಡು ಸಮಾಧಾನ ಮಾಡಿ ಕೊಳ್ಳುವುದುಂಟು ಕೆಲವರು. ರದ್ದು (ಸಂಸ್ಕೃತ: ರುಧ್), ಹಕ್ಕು (ಕನ್ನಡ: ಪಕ್), ಕಾಯಿಲೆ (ಕನ್ನಡ: ಕಾಯ್), ಕಲಾಸಿ (ದ್ರಾವಿಡ: ಕಲವಾಸಿ; ಕಲ = ಕಪ್ಪಲು, ಹಡಗು), ಮಾಡುಕಟ್ಟು (ಕನ್ನಡ: ಮಾರುವ ಕಟ್ಟೆ)—ಈ ತೆರನ ಬರುವಳಿಗಳೆಲ್ಲವೂ ಈ ಸಮಾಧಾನ ಪಂಥದವರ ಏರ್ಪಾಡುಗಳು.

ಕನ್ನಡ ಹಲವು ಭಾಷೆಗಳಿಂದ ಮಾತುಗಳನ್ನು ಎರವಲು ತಂದುಕೊಂಡು ತುಂಬಿ ಕೊಂಡಿದೆ. ಸಂಸ್ಕೃತ, ಪ್ರಾಕೃತ, ಪಾರಸಿ, ಉರ್ದು, ಇಂಗ್ಲಿಷ್ ಇವೇ ಮೊದಲಾ ದುವುಗಳಿಂದ ನೆರವು ಪಡೆದಿದೆ, ಪುಷ್ಟಿಗೊಂಡಿದೆ. ಹೆರನುಡಿಗಳನ್ನು ನೇರವಾಗಿ ಬಳಸ ಬಹುದು; ರೂಪಾಂತರಿಸಿ ಇಲ್ಲವೇ ಅರ್ಥಾಂತರಿಸಿ ಬಳಸಬಹುದು. ದೇವತೆ, ಭಕ್ತಿ, ಧರ್ಮ, ಜ್ಞಾನ, ಮೋಕ್ಷ ಮೊದಲಾದುವು ನೇರಬಳಕೆ. ತದ್ಭವಗಳೆಲ್ಲವೂ ರೂಪಾಂತರ ಗಳು. ಇವುಗಳದೇ ಒಂದು ದೊಡ್ಡ ಚರಿತ್ರೆಯಾದ್ದರಿಂದ ಈ ವಿಷಯಕ್ಕೆ ಇಲ್ಲಿ ತೊಡ ಗಿಲ್ಲ. ಅನುಮಾನ (ಸಂದೇಹ), ವಿಶ್ವಾಸ (ಪ್ರೀತಿ), ಭದ್ರ (ದೃಢ, ಬಿಗಿ)— ಈ ಪ್ರಯೋಗಗಳು ಅರ್ಥಾಂತರಗಳು. ಈ ಮೂರನೆಯ ಜಾತಿಯ ಪ್ರಯೋಗಗಳು ಕೆಲವು ವೀರಪಂಡಿತರಿಗೆ ರುಚಿಸದು. ಅಂಥವರಿಗೆ ಹೆದರಿ ಜನ ಆ ಪ್ರಯೋಗಗಳನ್ನು ಬಿಟ್ಟಾರೆ? ಬಿಡಲಾದೀತೆ? ಯಾವ ಭಾಷೆಯ ಪದವೇ ಆಗಲಿ ನಮ್ಮ ನುಡಿ ಬಳಗಕ್ಕೆ ಸೇರುವವರೆಗೂ ಹೊರಗಿನದು. ನಮ್ಮಲ್ಲಿ ಸೇರಿಸಿಕೊಂಡ ಒಡನೆಯೇ ಅದಕ್ಕೆ ನಮ್ಮ ವೇಷ ಹಾಕಿ ನಮ್ಮ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳುವ ಅಧಿಕಾರ

ನಮ್ಮದು. ಆದರೆ ಈ ಅಧಿಕಾರವನ್ನು ಆವಶ್ಯಕತೆಯರಿತು ವಿಚಕ್ಷಣೆಯಿಂದ ಪ್ರಯೋಗಿಸಬೇಕೇ ಹೊರತು ಸ್ವೇಚ್ಛೆಯಾಗಿ ಅರ್ಥಪಲ್ಲಟಕ್ಕಾಗಲಿ ವೃಥಾ ಗೊಂದಲಕ್ಕಾಗಲಿ ಎಡೆಗೊಡುವಂತೆ ಪ್ರಯೋಗ ಮಾಡಬಾರದು ಅಷ್ಟೆ. ಎರವಲನ್ನು ಎಷ್ಟುಮಟ್ಟಿಗೆ ತೆಗೆದುಕೊಳ್ಳಬಹುದು, ಎಂಥವನ್ನು ಎರವಲು ತರಬಹುದು ಎಂಬುದೂ ಒಂದು ಪ್ರಶ್ನೆ. ಬಿಡಿಮಾತು, ಸಮಾಸ, ನುಡಿಗಟ್ಟು, ವಾಕ್ಯ—ಈ ಎಲ್ಲ ತೆರನವನ್ನೂ ಬಳಸಿಕೊಳ್ಳಬಹುದೆ? ಮಿತಿ ಏನಾದರೂ ಉಂಟೆ? "ಮುತ್ತುಂ ಮೆಳಸುಂ ಕೋದಂತಿರೆ", "ಕರ್ಮಣಿ ಸರದೊಳ್ ಚೆಂಬವಳಂ ಕೋದಂತಿರೆ" ಈ ಎರಡು ಉಪಮೆಗಳ ಭಾವವನ್ನೂ ಮರೆಯದಿದ್ದರೆ ಸರಿ ಈ ಎರವಲು ವ್ಯಾಪಾರದಲ್ಲಿ. ಎಲ್ಲ ಹೆರನುಡಿಗಳೂ ಒಂದೇ ಬಗೆಯಲ್ಲಿ ಒಮ್ಮೆಗೇ ಪಳಗಿಬಿಡುವುದಿಲ್ಲ. ಭಿನ್ನ ಜಾತಿಯರ ಪರಸ್ಪರ ವಿವಾಹವಿದ್ದಂತೆ ಕೆಲವು ಬೇಗ ಒಗ್ಗುತ್ತವೆ, ಕೆಲವು ಕಾಲ ತೆಗೆದುಕೊಳ್ಳುತ್ತವೆ. ಮತ್ತೆ ಕೆಲವು ಕೊನೆಯ ವರೆಗೂ ಒಡೆದೇ ನಿಂತುಬಿಡುತ್ತವೆ. ಮದುವೆಯಲ್ಲಿ ಮನೆಗೆ ಹೆಣ್ಣನ್ನು ತಂದುಕೊಳ್ಳುವುದು ಸಾಮಾನ್ಯ. ಕೆಲವೊಮ್ಮೆ ಕಾರಣಾಂತರಗಳಿಂದ ಗಂಡನ್ನು ತಂದುಕೊಳ್ಳುವುದೂ ಉಂಟು. ಹೆಣ್ಣು ಬಂದರೆ ಒಬ್ಬಳೇ ಬಂದು, ಬಂದು ಸೇರಿದ ಮನೆಯವರ ಕೂಡ ಹೊಂದಿಕೊಂಡು ಮಿಕ್ಕವರನ್ನೂ ಬಾಳಿಸಿ ತಾನೂ ಬಾಳುತ್ತಾಳೆ. ಗಂಡುಬಂದರೆ ಬಂದು ಸೇರಿದ ಮನೆಯಲ್ಲಿ ಮೆಲ್ಲಮೆಲ್ಲಗೆ ತಾನೇ ಬೇರುಬಿಟ್ಟು ಅಲ್ಲಿದ್ದವರನ್ನು ಸಡಿಲಿಸಿ ಓಡಿಸುವ ಪ್ರಯತ್ನಮಾಡಿ ತಾನೇ ಸರ್ವಾಧಿಕಾರಿಯಾಗಿಬಿಡುವುದುಂಟು. ನುಡಿಗಳಲ್ಲಿಯೂ ಹೀಗೆಯೇ. ಹೆಣ್ಣುನುಡಿಗಳು ಒಂಟೊಂಟಿಯಾಗಿ ಬಂದು ನಾವು ಹೇಳಿದಂತೆ ಕೇಳುತ್ತವೆ. ಕೆಲವು ಗಂಡು ನುಡಿಗಳು ಬಂದುಬಿಟ್ಟರೆ ಮನೆಯ ಬಡನುಡಿಗಳನ್ನು ಕಾಡಟ್ಟಿಬಿಟ್ಟು ತನ್ನ ಪೂರ್ವಪರಿವಾರಗಳ ತಂಡಗಳನ್ನು ತಂದು ಸೇರಿಸಿಕೊಂಡು ಹಾವಳಿಯೆಬ್ಬಿಸುತ್ತವೆ. ಸಂಸ್ಕೃತದ ದೇವರು ಬಂದು ಕನ್ನಡದ ಅಱಿವನ್ನೂ ಪತ್ತುಗೆಯನ್ನೂ ಓಡಿಸಿ ತನ್ನ ಧರ್ಮವನ್ನೂ ಭಕ್ತಿಯನ್ನೂ ತಂದಿಟ್ಟುಕೊಂಡಿಲ್ಲವೆ? ಎರವಲು ವಿಷಯದಲ್ಲಿ ಎಚ್ಚರಿಕೆಯಿಂದ ಇರಬೇಕು. ಅನಾವಶ್ಯಕವಾದ ಎರವಲು ಆತ್ಮಹತ್ಯದಂತೆ. ಪುರಸತ್ತು ಬಂದು ಬಿಡುವಿಲ್ಲವಾಯಿತು. ಬಯಲು ಮೈದಾನದಲ್ಲಿ ಮರೆಯಾಯಿತು. ನಲಿಯುವುದು ತಪ್ಪಿ ಖುಷಿಪಡುವುದೇ ಮಾದರಿಯಾಯಿತು. ಕನ್ನಡದ ಹಣೇಬರಹ, ನಸೀಬು ಬಂತು. ಜಾಗ ತುಂಬಿಕೊಂಡು ಎಡೆ ಕುಗ್ಗಿತು. ಏನು ಮಾರ್ಪಾಟೊ! ಬದಲಾಯಿಸಿಹೋಯಿತು. ಬೆಳೆವ ಬೆಳೆ ಫಸಲಾಯಿತು. ರಸ್ತೆ ಬಂದು ಹಾದಿ ಕೆಡಬೇಕೆ? ಅಪಭ್ರಂಶ **ಬೇಗ** ಶಿಷ್ಟವಾಯಿತು; ಅಚ್ಚಕನ್ನಡ **ಬಿರ್‍ರನೆ** ಗ್ರಾಮ್ಯವಾಯಿತು. ಇವೆಲ್ಲ ನಮ್ಮ ಪೂರ್ವಾರ್ಜಿತ. ಇನ್ನು ನವಾರ್ಜನೆಯ ಆಸ್ತಿ ಬೇರೆ. ಇಂಗ್ಲಿಷ್ ನುಡಿಗಳ ಹಾವಳಿಯನ್ನಂತೂ ಹೇಳತೀರದು. ಕ್ಲೀನ್, ರೆಡಿ, ರೋಡ್, ಟೈಮ್, ಮೀಟಿಂಗ್-ಓ! ಎಷ್ಟುಬೇಕು ಇಂಥ ಮಾತುಗಳು

ನಮ್ಮ ಕನ್ನಡಿಗರ ಬಾಯಲ್ಲಿ ? ಪಾರಿಭಾಷಿಕ ಶಬ್ದಗಳ ವಿಷಯ ಬೇರೆ. ಅದರ ವಿಚಾರ ಇಲ್ಲಿ ಬೇಕಿಲ್ಲ.

ಒಟ್ಟಿನಲ್ಲಿ ಹೇಳುವುದಾದರೆ, ಭಾಷಾಶುದ್ಧಿಗೆ ನಮ್ಮ ಮಾತುಗಳನ್ನೂ ಎರವಲು ಮಾತುಗಳನ್ನೂ ಉಪಯೋಗಿಸುವುದರಲ್ಲಿ ಗೊತ್ತುಪಾಡಿರಬೇಕಾದ್ದು ಎಷ್ಟು ಅಪೇಕ್ಷಣೀಯವೋ ಆವಶ್ಯಕವೋ ಅನ್ಯಭಾಷೆಗಳಿಂದ ಎರವಲು ತರುವುದರಲ್ಲಿಯೂ ಕಟ್ಟುಪಾಡಿರಬೇಕಾದ್ದು ಅಷ್ಟೇ ಆವಶ್ಯಕ, ಅಪೇಕ್ಷಣೀಯ.

ಕ. ವೆಂ. ರಾಘವಾಚಾರ್.

ಬುದ್ಧನ ಮತ್ತು ಮಹಾವೀರನ ಪರಿನಿರ್ವಾಣಗಳ ಕಾಲ*

೩

ಪ್ರಾಚೀನ ಬೌದ್ಧಧರ್ಮ ಗ್ರಂಥಗಳಲ್ಲಿ ಮಹಾವೀರನ ಹೆಸರು ಕೆಲವೆಡೆ ದೊರಕುತ್ತದೆ. ಅವಲ್ಲೆಲ್ಲ ಆತನನ್ನು ನಿಗಂಠ ನಾತಪುತ್ತ ಎಂದದೆ. ಆತನು ಜ್ಞಾತ,[35] ಜ್ಞಾತೃ ಅಥವಾ ಜ್ಞಾತ್ರಿ ಎಂಬ ಕ್ಷತ್ರಿಯ ವಂಶದಲ್ಲಿ ಹುಟ್ಟಿದ ಕಾರಣ ಜ್ಞಾತ ಪುತ್ರನೆಂದು ಕರೆಯಲ್ಪಟ್ಟನು. ಆ ಹೆಸರು ಪಾಲಿ ಭಾಷೆಯಲ್ಲಿ ನಾತಪುತ್ತ ಎಂದೂ, ಜೈನ ಪ್ರಾಕೃತದಲ್ಲಿ ಣಾತಪುತ್ತ, ನಾತಪುತ್ತ ಎಂದೂ ಆಯಿತು. ಆತನು ನಿಗಂಠ ಅಂದರೆ ನಿರ್ಗ್ರಂಥರೆಂಬ ಜೈನಸಂಘದ ಮೊದಲಿಗನಾಗಿದ್ದ ಕಾರಣ ನಿಗಂಠ ನಾತಪುತ್ತ ಎಂದೂ ಹೆಸರಾದನು. ಆತನನ್ನು ಕುರಿತು ಬೌದ್ಧರ ದೀಘನಿಕಾಯದ (೨ನೆಯ) ಸಾಮಞ್ಞ ಫಲಸುತ್ತ (ಶ್ರಾಮಣ್ಯಫಲಸೂತ್ರ) ದಲ್ಲಿ† ಹೀಗದೆ—

ಮಗಧ ದೇಶದ (ಶಿಶುನಾಗ ವಂಶದ) ಅರಸನಾದ ಅಜಾತಶತ್ರು ತನ್ನ ತಂದೆಯಾದ ಬಿಂಬಿಸಾರನನ್ನು ಕೊಂದು ಪಟ್ಟವೇರಿದನು. ಆ ಕಾರಣ ತನ್ನ ಮನಃಶಾಂತಿಯನ್ನು ಕಳಕೊಂಡು ಅದನ್ನು ಮರಳಿ ಹೇಗೆ ಸಂಪಾದಿಸಲೆಂದು ಆತನು ತನ್ನ ಆರು ಮಂದಿ ಅಮಾತ್ಯರೊಂದಿಗೆ ವಿಚಾರಿಸಿದನು. ಅವರಲ್ಲಿ ಒಬ್ಬೊಬ್ಬನಂತೆ ಆ ಅಮಾತ್ಯರು, (೧) ಪೂರಣ ಕಸ್ಸಪ (ಪೂರ್ಣಕಶ್ಯಪ), (೨) ಮಕ್ಖಲಿ ಗೋಸಾಲ (ಮಸ್ಕರೀ ಗೋಶಾಲ), (೩) ಅಜಿತ ಕೇಸಕಂಬಲಿ (ಅಜಿತ ಕೇಶಕಂಬಲಿ), (೪) ಸಂಜಯ ಬೆಲಟ್ಠಿಪುತ್ತ (ಸಂಜಯ ಬೇಲಟ್ಠೀಪುತ್ರ), (೫) ಪಕುಧ (ಅಥವಾ ಕಕುಧ) ಕಚ್ಚಾಯನ (ಪಕುಧ ಅಥವಾ ಕಕುಧ ಕಾತ್ಯಾಯನ) ಮತ್ತು (೬) ನಿಗಂಠ ನಾತಪುತ್ತ (ನಿರ್ಗ್ರಂಥ ಜ್ಞಾತಪುತ್ರ) ಅಂದರೆ ಮಹಾವೀರ, ಇವರಲ್ಲಿ ಒಬ್ಬೊಬ್ಬರಂತೆ ಈ ಅರುವ

---

* ಕಳೆದ ಸಂಚಿಕೆಯಿಂದ ಮುಂದುವರಿದುದು.

35 ಪೂಜ್ಯಪಾದಾಚಾರ್ಯನ 'ಚಾರಿತ್ರಭಕ್ತಿ' ಯಲ್ಲಿ ಮಹಾವೀರನನ್ನು 'ಶ್ರೀಮಜ್ಜ್ಞಾತ ಕುಲೇಂದು' ಎಂದದೆ.

† ಈ ಶ್ರಾಮಣ್ಯಫಲ ಸೂತ್ರವನ್ನು ಪಾಲಿವಿದ್ವಾನ್ ಶ್ರೀ ಜ. ಪಿ. ರಾಜರತ್ನರವರು ಬಹಳ ಸೊಗಸಾಗಿ ಕನ್ನಡಿಸಿರುತ್ತಾರೆ (ಪ್ರಬುದ್ಧ ಕರ್ಣಾಟಕ, XVII, ಯುವ ಸಂ|, ವಿನಾಯಕನ ಸಂಚಿಕೆ, ಪು. ೫೨-೯೦).

ರನ್ನು ಹೆಸರಿಸಿ ಅವರನ್ನು ಪರ್ಯುಪಾಸಿಸಿದರೆ ಅರಸನ ಚಿತ್ತವು ಪ್ರಸನ್ನವಾದೀತೆಂದು ಅರಿಕೆ ಮಾಡಿದರು.

ಇವರಾರು ಮಂದಿಯನ್ನೂ ಅಲ್ಲಿ ಹೀಗೆ ವರ್ಣಿಸಿದೆ—

ಸಂಘೀ ಚೇವ ಗಣೀ ಚ ಗಣಾಚರಿಯೋ ಚ ಞಾತೊ
ಯಸಸ್ಸೀ ತಿತ್ಥಕರೊ ಸಾಧುಸಮ್ಮತೊ ಬಹುಜನಸ್ಸ
ರತ್ತಞ್ಞೂ ಚಿರಪಬ್ಬಜಿತೊ ಅದ್ಧಗತೊ ವಯೊ ಅನುಪ್ಪತ್ತೊ[36]

ಅಂದರೆ ಅವರಲ್ಲಿ ಪ್ರತ್ಯೇಕ ವ್ಯಕ್ತಿ ಸಂಘದಿಂದ ಒಡಗೂಡಿದಾತನು, ಗಣದಿಂದ ಒಡಗೂಡಿದಾತನು, ಅಂದರೆ ಅವರಲ್ಲಿ ಪ್ರತ್ಯೇಕ ಆ ಗಣಕ್ಕೆ ಆಚಾರಗಳನ್ನು ಕಲಿಸುವಾತನು (ಅಂದರೆ ಆ ಗಣದ ಮುಖಂಡನು), ಲೋಕವಿಶ್ರುತನು, ಯಶಸ್ವಿ, ತೀರ್ಥಕರನು, ಈತನು ಸಾಧುವೆಂದು ಬಹು ಜನರು ಸಮ್ಮತಿಸಿದಾತನು, ಪ್ರವ್ರಜ್ಯದಾರಭ್ಯ ಕಳದುಹೋದ ಅನೇಕ ರಾತ್ರಿಗಳನ್ನು ಬಲ್ಲವನಾದ ಕಾರಣ ರಾತ್ರಜ್ಞನು, ಬಹುಕಾಲದಿಂದ ಪ್ರವ್ರಜಿತನಾದವನು, (ಜೀವನದ) ಹಾದಿಯಲ್ಲಿ ಹೋದವನು, ವಯಸ್ಸಾದವನು.[36] ಅತಏವ ಈ ಆರೂ ಮಂದಿ ಆ ಮೊದಲೇ ಅವರವರ ಮಟ್ಟಿಗೆ ಜ್ಞಾನಸಿದ್ಧಿಯನ್ನು ಪಡೆದಿರಲೂ ಬೇಕು, ಈ ವಚನದಲ್ಲಿ ಅವರೆಲ್ಲರನ್ನು ಬಹುಕಾಲದಿಂದ ಪ್ರವ್ರಜಿತರಾದವರೆಂದೂ, ವಯಸ್ಸಾದವರೆಂದೂ, ಅಂದರೆ ಅಪರವಯಸ್ಸಿನಲ್ಲಿ ಇರುವವರೆಂದೂ, ಹೇಳಿರುವ ಕಾರಣ ಅವರೆಲ್ಲರೂ ಆಗ್ಗೆ ಸಾಕಷ್ಟು ಮುದುಕರಾಗಿದ್ದಿರಲೂ ಬೇಕು.

ಅಮಾತ್ಯರು ಹಾಗೆ ಹೇಳುವಾಗ ಅಜಾತಶತ್ರು ಸುಮ್ಮನಿದ್ದನು. ಏಕೆಂದರೆ ಆ ಸೂತ್ರದಲ್ಲಿ ಮುಂದೆ ಹೇಳಿರುವಂತೆ ಆತನು ಬುದ್ಧನಿಗೆ ನಿವೇದಿಸಿದ ಮೇರೆಗೆ ಆ ಆರೂ ಶ್ರಮಣರ ಬಳಿಗೆ ಆತನು ಆ ಮೊದಲೇ ಹೋಗಿದ್ದನು, ಆದರೆ ಅವರೊಂದಿಗೆ

[36] ಈ ವಚನದ ಕೊನೆಯಲ್ಲಿಯ 'ಅದ್ಧಗತೊ' ಮತ್ತು 'ವಯೊ ಅನುಪ್ಪತ್ತೊ' ಎಂಬ ಮಾತುಗಳು ತೀರ ಬೇರೆಬೇರೆಯೇ ಆದರೂ, 'ಅದ್ಧಗತೊ ವಯೊ' ಎಂಬುದನ್ನು ಒಂದೇ ಮಾತೆಂದು ಭಾವಿಸಿ ಶ್ರೀ ಮುನಿ ಕಲ್ಯಾಣವಿಜಯರೂ (ಕಾಶಿಯ 'ನಾಗರೀ ಪ್ರಚಾರಿಣೀಪತ್ರಿಕೆ,' X: 'ವೀರನಿರ್ವಾಣಸಂವತ್,' ಪು. ೫೮೮) ಶ್ರೀ ಪಂಡಿತ ಜುಗಲಕಿಶೋರ ಮುಖ್ತಾರರೂ ('ಭಗವಾನ್ ಮಹಾವೀರ ಔರ ಉನಕಾ ಸಮಯ,' ಪು. ೫೧) ಅದನ್ನು 'ಅರ್ಧಗತ ವಯಾಃ'=ಅರ್ಧಪ್ರಾಯವಾದವನು ಅಂದರೆ ಹೆಚ್ಚು ಕಡಿಮೆ ೫೦ ವರ್ಷಗಳಷ್ಟರ ವಯಸ್ಸಿನವನು ಎಂದು ಅರ್ಥವಿಸಿರುವುದು ಸರ್ವಥಾ ಸರಿಯಲ್ಲ. ಪ್ರಾಯಶಃ ಅವರು ಆ ವಚನಕ್ಕೆ ಬುದ್ಧಘೋಷನು ಬರೆದ (ಸುಮಂಗಲವಿಲಾಸಿನೀ) ಅಟ್ಠಕಥಾವ್ಯಾಖ್ಯಾನವನ್ನು ಕಂಡಿಲ್ಲವೇನೋ. ಏಕೆಂದರೆ ಅದರಲ್ಲಿ 'ಅದ್ಧಗತೊ ತಿ ಅದ್ಧಾನಂ ಗತೊ'='ಅದ್ಧಗತೊ' ಎಂದರೆ (ಜೀವನದ) ಮಾರ್ಗದಲ್ಲಿ ಹೋದವನು ಎಂದೂ, 'ವಯೊ ಅನುಪ್ಪತ್ತೊ ತಿ ಪಚ್ಛಿಮವಯಂ ಅನುಪ್ಪತ್ತೊ'='ವಯೊ ಅನುಪ್ಪತ್ತೊ' ಎಂದರೆ ಅಪರವಯಸ್ಸನ್ನು ಹೊಂದಿದಾತನು ಎಂದೂ ಸ್ಪಷ್ಟವಾಗಿ ಹೇಳಿದೆ.

ಆತನು ಕೇಳಿದ ಪ್ರಶ್ನೆಗೆ ಅವರಿತ್ತ ಉತ್ತರವು ಆತನ ಮನಸ್ಸಿಗೆ ಒಡಂಬಡದೆ ಭಗ್ನಾಶನಾಗಿ ಮನೆಗೆ ಮರಳಿದ್ದನು. ಅನಂತರ ಆತನು ಮಕ್ಕಳ ವೈದ್ಯನಾದ ಜೀವಕನೊಂದಿಗೆ ಅದೇ ಪ್ರಶ್ನೆಯನ್ನು ಕೇಳುವುದೇ. ಆ ವೈದ್ಯನು ಬುದ್ಧನ ಪರ್ಯು ಪಾಸನೆಯಿಂದ ಅರಸನ ಚಿತ್ತವು ಪ್ರಸನ್ನವಾಗುವುದೆಂದು ಬಿನ್ನವಿಸಿದನು. ಬುದ್ಧನನ್ನು ಕುರಿತು ಆ ಎಡೆಯಲ್ಲಿ ಹೀಗೆಂದದೆ—

ಅರಹಂ ಸಮ್ಮಾ ಸಂಬುದ್ಧೋ ವಿಜ್ಜಾ ಚರಣ ಸಂಪನ್ನೊ
ಸುಗತೊ ಲೋಕವಿದೂ ಅನುತ್ತರೊ ಪುರಿಸದಮ್ಮ ಸಾರಥಿ
ಸತ್ಥಾ ದೇವ ಮನುಸ್ಸಾನಂ ಬುದ್ಧೋ ಭಗವಾ

ಅಂದರೆ ಅರ್ಹಂತನು, ಸಮ್ಯಕ್ಸಂಬುದ್ಧನು, ವಿದ್ಯಾಚರಣ ಸಂಪನ್ನನು, ಸುಗತನು, ಲೋಕಜ್ಞನು, ಅನುತ್ತರನಾದ ಪುರುಷದಮ್ಯ ಸಾರಥಿ (ಅಂದರೆ ದಮನವನ್ನು ಬಯಸುವ ಜನರನ್ನು ಸಾರಥಿಯಂತೆ ನಡಸುವುದರಲ್ಲಿ ಎಲ್ಲರನ್ನು ಮೀರಿದವನು), ದೇವತೆಗಳ ಹಾಗೂ ಮನುಷ್ಯರ ಗುರು, ಭಗವಂತನಾದ ಬುದ್ಧನು. ಈ ಕಾರಣ ನಾತಪುತ್ತನಾದ ಮಹಾವೀರನೂ ಬುದ್ಧನೂ ಸಮಕಾಲಿಕರೆಂದೇ ಅಲ್ಲ, ಹಿಂದಣ ವಚನದಲ್ಲಿ ಪೂರಣ ಕಸ್ಸಪನಿಂದ ನಾತಪುತ್ತನ ಪರ್ಯಂತ ಅವರಾರೂ ಮಂದಿಯನ್ನು ವಯಸ್ಸಾದವರೆಂದು ಹೇಳಿರುವಂತೆ ಈ ವಚನದಲ್ಲಿ ಬುದ್ಧನನ್ನು ವಯಸ್ಸಾದವನು ಎಂದಿಲ್ಲದುದರಿಂದ, ಬುದ್ಧನು ಆಗ್ಗೆ ಇನ್ನೂ ಮುಪ್ಪಾಗಿದ್ದಿಲ್ಲ ಎಂದೂ, ಹೇಗೂ ಬುದ್ಧನಿಗೆ ಆಗ್ಗೆ ಅವರಷ್ಟು ವಯಸ್ಸಾಗಿದ್ದಿಲ್ಲ, ಅತಏವ ಆತನು ಆ ಆರೂ ಮಂದಿಗಿಂತ ಚಿಕ್ಕವನಾಗಿರಬೇಕು ಎಂದೂ, ಆತನನ್ನು ಇಲ್ಲಿ ಭಗವಂತನಾದ ಬುದ್ಧನೆಂದಿರುವ ಕಾರಣ ಆತನು ಆ ಮುಂಚೆಯೇ ಸಂಬೋಧಿಜ್ಞಾನ ಪಡೆದು ಬುದ್ಧನಾಗಿರಬೇಕೆಂದೂ ಕಂಡಿತವಾಗಿ ನಿಷ್ಪನ್ನವಾಗುತ್ತದೆ.

ಜೀವಕನ ಮಾತನ್ನು ಮನ್ನಿಸಿ ಅಜಾತಶತ್ರು ಆ ಬಳಿಕ ಬುದ್ಧನಿದ್ದಲ್ಲಿಗೆ ಹೋಗಿ ಆತನಿಂದ ಶ್ರಾಮಣ್ಯಫಲ ಸೂತ್ರವನ್ನು ಕೇಳಿಕೊಂಡು ಪ್ರಸನ್ನಚಿತ್ತನಾಗಿ ಅರಮನೆಗೆ ಮರಳುತ್ತಾನೆ.

ಪೂರಣ ಕಸ್ಸಪನಿಂದ ನಿಗಂಠ ನಾತಪುತ್ತನ ವರೆಗಣ ಆ ಅರುವರ ಹೆಸರುಗಳು ಬೌದ್ಧರ ಸುತ್ತನಿಪಾತದ (೩೨ನೆಯ) ಸಭಿಯಸುತ್ತದಲ್ಲೂ ಹೀಗೆ ದೊರೆಯುತ್ತವೆ—

ಏಕಂ ಸಮಯಂ ಭಗವಾ ರಾಜಗಹೆ ವಿಹರತಿ ವೇಳುವನೆ
ಕಲಂದಕ ನಿವಾಪೆ. ತೇನ ಖೊ ಪನ ಸಮಯೇನ ಸಭಿಯಸ್ಸ
ಪರಿಬ್ಬಾಜಕಸ್ಸ ಪುರಾಣಸಾಲೋಹಿತಾಯ ದೇವತಾಯ
ಪಞ್ಹಾ ಉದ್ದಿಟ್ಠಾ ಹೊಂತಿ—ಯೋ ತೇ ಸಭಿಯ ಸಮಣೊ

> ವಾ ಬ್ರಾಹ್ಮಣೊ ವಾ ಇಮೆ ಪಞ್ಹೆ ಪುಟ್ಠೊ ವ್ಯಾಕರೋತಿ, ತಸ್ಸ ಸಂತಿಕೆ ಬ್ರಹ್ಮಚರಿಯಂ ಚರೆಯ್ಯಾಸೀತಿ. ಅಥ ಖೊ ಸಭಿಯೊ ಪರಿಬ್ಬಾಜಕೊ ತಸ್ಸಾ ದೇವತಾಯ ಸಂತಿಕೆ ತೇ ಪಞ್ಹೇ ಉಗ್ಗಹೆತ್ವಾ, ಯೇ ತೇ ಸಮಣ ಬ್ರಾಹ್ಮಣಾ ಸಂಘಿನೊ ಗಣಿನೊ ಗಣಾಚಾರಿಯಾ ಞಾತಾ ಯಸಸ್ಸಿನೊ ತಿತ್ಥಕರಾ ಸಾಧುಸಮ್ಮತಾ ಬಹುಜನಸ್ಸ ಸೆಯ್ಯಥೀದಂ—ಪೂರಣೊ ಕಸ್ಸಪೊ, ಮಕ್ಖಲಿ ಗೋಸಾಲೊ, ಅಜಿತೊ ಕೇಸಕಂಬಲೀ, ಪಕುಧೊ ಕಚ್ಚಾಯನೊ, ಸಂಜಯೊ ಬೆಲಟ್ಠಿಪುತ್ತೊ, ನಿಗಂಠೊ ನಾತಪುತ್ತೊ, ತೇ ಉಪಸಂಕಮಿತ್ವಾ ತೇ ಪಞ್ಹೇ ಪುಚ್ಛತಿ. ತೇ ಸಭಿಯೇನ ಪರಿಬ್ಬಾಜಕೇನ ಪಞ್ಹೆ ಪುಟ್ಠಾ ನ ಸಂಪಾಯಂತಿ . . . . . ಅಥ ಖೊ ಸಭಿಯಸ್ಸ ಪರಿಬ್ಬಾಜಕಸ್ಸ ಏತದಹೋಸಿ—ಅಯಂ ಪಿ ಸಮಣೊ ಗೋತಮೊ ಸಂಘೀ ಚೇವ ಗಣೀ ಚ ಗಣಾಚಾರಿಯೊ ಚ ಞಾತೊ ಯಸಸ್ಸೀ ತಿತ್ಥಕರೊ ಸಾಧುಸಮ್ಮತೊ ಬಹುಜನಸ್ಸ, ಯನ್ನೂನಾಹಂ ಸಮಣಂ ಗೋತಮಂ ಉಪಸಂಕಮಿತ್ವಾ ಇಮೇ ಪಞ್ಹೇ ಪುಚ್ಛೇಯಂತಿ.

ಅಂದರೆ ಒಮ್ಮೆ ಭಗವಂತನಾದ ಬುದ್ಧನು ರಾಜಗೃಹದ ಕಲಂದಕನಿವಾಪದ ವೇಣುವನದಲ್ಲಿ ಇದ್ದಾಗ, ಪರಿವ್ರಾಜಕನಾದ ಸಭಿಯ ಎಂಬವನ ಪೂರ್ವಜನ್ಮದಲ್ಲಿ ನೆಂಟನಾಗಿದ್ದ ಯಾರೊಬ್ಬ ದೇವತೆ ಆತನಿಗೆ ಕೆಲವು ಪ್ರಶ್ನೆಗಳನ್ನು ಹೇಳಿ, ಸಭಿಯನೇ ಶ್ರಮಣನಾಗಲಿ ಬ್ರಾಹ್ಮಣನಾಗಲಿ ಯಾವಾತನು ಈ ಪ್ರಶ್ನೆಗಳನ್ನು ವ್ಯಾಕರಿಸುವನೊ ಅವನ ಬಳಿಯಲ್ಲಿ ನೀನು ಬ್ರಹ್ಮಚರ್ಯವನ್ನು ಆಚರಿಸು ಎಂದಿತು. ಆಗ್ಗೆ ಪರಿವ್ರಾಜಕನಾದ ಸಭಿಯನು ಆ ದೇವತೆಯಿಂದ ಆ ಪ್ರಶ್ನೆಗಳನ್ನು ತಕ್ಕೊಂಡು ಪೂರಣ ಕಸ್ಸಪ, ಮಕ್ಖಲಿ ಗೋಸಾಲ, ಅಜಿತ ಕೇಸಕಂಬಲಿ, ಪಕುಧ ಕಚ್ಚಾಯನ, ಸಂಜಯ ಬೆಲಟ್ಠಿಪುತ್ತ ಹಾಗೂ ನಿಗಂಠ ನಾತಪುತ್ತರಂಥಾ ಯಾರೆಲ್ಲ ಶ್ರಮಣರು, ಬ್ರಾಹ್ಮಣರು, ಸಂಘದಿಂದ ಒಡಗೂಡಿದವರು, ಗಣದಿಂದ ಒಡಗೂಡಿದವರು, ಗಣಾಚಾರ್ಯರು, ಲೋಕವಿಜ್ಞಾತರು, ಯಶಸ್ವಿಗಳು, ತೀರ್ಥಕರರು, ಸಾಧುಗಳೆಂದು ಬಹುಜನರಿಂದ ಸಮ್ಮತಿಸಲ್ಪಟ್ಟವರು ಇದ್ದರೊ ಅವರಲ್ಲಿಗೆ ಹೋಗಿ ಅವರಿಗೆ ಆ ಪ್ರಶ್ನೆಗಳನ್ನು ಕೇಳಿದನು. ಆದರೆ ಪರಿವ್ರಾಜಕನಾದ ಸಭಿಯನು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ಕೊಡಲು ಅವರಿಂದಾಗಲಿಲ್ಲ. ಆಗ್ಗೆ ಪರಿವ್ರಾಜಕನಾದ ಸಭಿಯನಿಗೆ—ಶ್ರಮಣನಾದ ಗೌತಮನೂ ಸಂಘದಿಂದಲೂ ಗಣದಿಂದಲೂ ಒಡಗೂಡಿರುತ್ತಾನೆ, ಆತನೂ ಗಣಾಚಾರ್ಯ, ಆತನೂ ಲೋಕವಿಶ್ರುತ, ಆತನೂ ಯಶಸ್ವಿ, ತೀರ್ಥಕರ, ಸಾಧುವೆಂದು

ಬಹುಜನರಿಂದ ಸಮ್ಮತನಾದವನು, ಅತಏವ ಶ್ರಮಣ ಗೌತಮನ ಬಳಿಗಯ್ದಿ ಆತನಿಗೆ ಈ ಪ್ರಶ್ನೆಗಳನ್ನು ಕೇಳೋಣ ಎಂದೆನಿಸಿತು.

ಅತಏವ ಈ ವಚನದಿಂದಲೂ ನಾತಪುತ್ತನಾದ ಮಹಾವೀರನೂ ಶ್ರಮಣ ಗೌತಮನೆಂಬ ಬುದ್ಧನೂ ಸಮಕಾಲೀನರೆಂದು ದೃಢವಾಗುವಂತೆಯೇ, ಈ ಸೂತ್ರದಲ್ಲಿ ಅಲ್ಲಿಯೇ ಮುಂದೆ ಪೂರಣಕಸ್ಸಪನಿಂದ ನಿಗಂಠ ನಾತಪುತ್ತನ ಪರ್ಯಂತ ಅವರೆಲ್ಲರೂ 'ಜಿಣ್ಣಾ ವುದ್ಧಾ ಮಹಲ್ಲಕಾ' = ಹಳಬರು, ಮುದುಕರು, ದುರ್ಬಲರು ಎಂದೂ, 'ಸಮಣೊ ಹಿ ಗೋತಮೊ ದಹರೊ ಚೇವ ಜಾತಿಯಾ ನವೋ ಚ ಪಬ್ಬಜ್ಜಾಯ' = ಶ್ರಮಣ ಗೌತಮ ಅಂದರೆ ಬುದ್ಧನಾದರೊ ಆ ಅರುವರಿಗಿಂತಲೂ ವಯಸ್ಸಿನಲ್ಲಿ ಚಿಕ್ಕವನೂ ಪ್ರವ್ರಜ್ಯೆಯಲ್ಲಿ ಹೊಸಬನೂ ಎಂದೂ ಹೇಳಿರುವುದರಿಂದ, ಬುದ್ಧನು ಮಹಾವೀರನಿಗಿಂತ ಪ್ರಾಯದಲ್ಲೂ ಪ್ರವ್ರಜ್ಯದಲ್ಲೂ ಕಿರಿಯನೆಂದು ನಿಷ್ಕೃಷ್ಟವಾಗಿ ತಿಳಿಯುತ್ತದೆ.

ಆ ಮುಂದೆ ಬೌದ್ಧರ ಮಜ್ಝಿಮನಿಕಾಯದ (೧೦೪ನೆಯ) ಸಾಮಗಾಮ ಸುತ್ತದಲ್ಲಿಯೂ—

ಏಕಂ ಸಮಯಂ ಭಗವಾ ಸಕ್ಕೇಸು ವಿಹರತಿ ಸಾಮಗಾಮೆ
ತೇನ ಖೊ ಪನ ಸಮಯೇನ ನಿಗಂಠೊ ನಾತಪುತ್ತೊ
ಪಾವಾಯಂ ಅಧುನಾ ಕಾಲಕತೊ ಹೋತಿ

ದೀಘನಿಕಾಯದ (೨೯ ನೆಯ) ಪಾಸಾದಿಕ ಸುತ್ತಂತದಲ್ಲಿಯೂ—

ಏಕಂ ಸಮಯಂ ಭಗವಾ ಸಕ್ಕೇಸು ವಿಹರತಿ (ವೇಧಞ್ಞಾ
ನಾಮ ಸಕ್ಯಾ ತೇಸಂ ಅಂಬವನೆ ಪಾಸಾದೆ) ತೇನ ಖೊ
ಪನ ಸಮಯೇನ ನಿಗಂಠೊ ನಾತಪುತ್ತೊ ಪಾವಾಯಂ
ಅಧುನಾ ಕಾಲಕತೊ ಹೋತಿ

ಅಂದರೆ ಒಮ್ಮೆ ಬುದ್ಧನು ಶಾಕ್ಯರೊಂದಿಗೆ ಇದ್ದಾಗ, ಆಗ್ಗೆ ನಿಗಂಠ ನಾತಪುತ್ತನೆಂಬ ಮಹಾವೀರನು ಪಾವಾಪುರಿಯಲ್ಲಿ ಇತ್ತೀಚೆ ಕಾಲವಾದನು ಎಂದಿದೆ. ಇದರಿಂದ ಮಹಾವೀರನ ಪರಿನಿರ್ವಾಣವು[37] ಬುದ್ಧನ ಜೀವಮಾನದಲ್ಲೇ ಸಂಭವಿಸಿತೆಂದು

[37] ಸುರಲೋಕಾವತರೋತ್ಸವಂ ಪರಿಕೃತಂ ಜನ್ಮಾಭಿಷೇಕೋತ್ಸವಂ
ಪರಿನಿಷ್ಕ್ರಾಂತಿ ಮಹೋತ್ಸವಂ ಪ್ರವಿಮಲಂ ಕೈವಲ್ಯಬೋಧೋತ್ಸವಂ |
ಪರಿನಿರ್ವಾಣ ಮಹೋತ್ಸವಂ ಜಿನಮಹಾಕಲ್ಯಾಣಮಯ್ದುಂ . . . ||
(ರನ್ನನ ಅಜಿತಪುರಾಣ, I. ೯೫).

ಇದರಿಂದ ಜೈನ ತೀರ್ಥಂಕರರ, ಅತಏವ ಮಹಾವೀರನ, ಕಾಯೋತ್ಸರ್ಗಕ್ಕೂ ಪರಿನಿರ್ವಾಣ ಎನ್ನುತ್ತಾರೆಂದು ತಿಳಿಯುತ್ತದೆ.

ಸಿದ್ಧವಾಗುತ್ತದೆ. ಈಗ ಬುದ್ಧನ ಬೋಧಿಜ್ಞಾನವೆಂಬ ನಿರ್ವಾಣವು ಕ್ರಿ.ಪೂ. 546 ರಲ್ಲೂ ಆತನ ಪರಿನಿರ್ವಾಣವು ಕ್ರಿ.ಪೂ. 501 ರಲ್ಲೂ ಆಯಿತೆಂದು ಮೇಲೆ ಕಂಡಿರುವುದರಿಂದ, ಅದಕ್ಕೆ ಸರಿಯಾಗಿ ಮಹಾವೀರನ ಪರಿನಿರ್ವಾಣವು ಕ್ರಿ.ಪೂ. 546 ರಿಂದ 501 ರ ವರೆಗಣ ಆ ४೫ ವರ್ಷಗಳೊಳಗೆ ಆಗಿರಬೇಕು. ಅದು ಎಂದಾಯಿತೆಂದು ಇನ್ನು ನೋಡೋಣ.

೪

(೧) ಮೇರುತುಂಗಾಚಾರ್ಯನ ವಿಚಾರಶ್ರೇಣಿಯಲ್ಲಿ[38]—

ವಿಕ್ಕಮ ರಜ್ಜಾರಂಭಾ ಪುರಓಸಿರಿ ವೀರ ನಿವ್ವುಈ ಭಣಿಯಾ |
ಸುನ್ನ-ಮುಣಿ-ವೇಯ-ಜುತ್ತೋ ವಿಕ್ಕಮ ಕಾಲಾಉ ಜಿಣಕಾಲೊ ||

ಅಂದರೆ ವಿಕ್ರಮಾದಿತ್ಯನ ರಾಜ್ಯಾರಂಭಕ್ಕೆ ಮುಂಚೆ ಶ್ರೀ ಮಹಾವೀರನ ನಿರ್ವಾಣವಾಯಿತು. ವಿಕ್ರಮಕಾಲದಿಂದ ಜಿನಕಾಲಕ್ಕೆ, ಅಂದರೆ ಮಹಾವೀರ ಜಿನನ ಪರಿನಿರ್ವಾಣಕಾಲಕ್ಕೆ, ಸುನ್ನ (=ಶೂನ್ಯ=೦), ಮುಣಿ (=ಮುನಿ, ಅಂದರೆ ಸಪ್ತರ್ಷಿಗಳು=೭), ವೇಯ (=ವೇದ=४), 'ಅಂಕಾನಾಂ ವಾಮತೋ ಗತಿಃ' ಎಂಬ ನಿಯಮಾನುಸಾರವಾಗಿ ४೭೦ ವರ್ಷಗಳಾಗುತ್ತವೆ.

(೨) ನಂದಿಸಂಘದ ಪಟ್ಟಾವಲಿಯಲ್ಲಿ ಹಾಗೂ ವಿಕ್ರಮಪ್ರಬಂಧದಲ್ಲಿ[39]—

ಸತ್ತರಿ ಚದುಸದ ಜುತ್ತೋ ಜಿಣಕಾಲಾ ವಿಕ್ಕಮೋ ಹವಇ ಜಮ್ಮೊ ||

ಅಂದರೆ ಮಹಾವೀರ ಜಿನನ ಪರಿನಿರ್ವಾಣಕಾಲದಿಂದ ४೭೦ ವರ್ಷಗಳಲ್ಲಿ ವಿಕ್ರಮಾದಿತ್ಯನು ಜನ್ಮವೆತ್ತುವನು.

(೩) ತಪಾಗಚ್ಛದ ಪಟ್ಟಾವಲಿಯಲ್ಲಿ[40]—

ಶ್ರೀ ವೀರಾತ್ ೮४೫ ವಿಕ್ರಮಾತ್ ೩೭೫ ವಲಭೀನಗರೀ ಭಂಗಃ |

ಅಂದರೆ ಶ್ರೀ ಮಹಾವೀರನ ಪರಿನಿರ್ವಾಣದಿಂದ ೮४೫ನೆಯ ವರ್ಷದಲ್ಲೂ ವಿಕ್ರಮಾದಿತ್ಯನಿಂದ ೩೭೫ನೆಯ ವರ್ಷದಲ್ಲೂ ವಲಭೀನಗರಿ ಭಗ್ನವಾಯಿತು. ಅತಏವ ವಿಕ್ರಮಕಾಲವು ಮಹಾವೀರನ ಪರಿನಿರ್ವಾಣದಿಂದ ೮४೫ — ೩೭೫ = ४೭೦ನೆಯ ವರ್ಷದಲ್ಲಿ ಹುಟ್ಟಿತೆಂದು ವ್ಯಕ್ತವಾಗುತ್ತದೆ.

---

[38] ಪಂಡಿತ ಶ್ರೀ ಜುಗಲಕಿಶೋರ ಮುಖ್ತಾರರ 'ಭಗವಾನ್ ಮಹಾವೀರ ಔರ ಉನಕಾ ಸಮಯ', ಪು. ४४, ಅಡಿಬರೆಹ*.

[39] ಅದೇ, ಪು. ४೩.

[40] ಕಾಶಿಯ 'ನಾಗರೀ ಪ್ರಚಾರಿಣೀ ಪತ್ರಿಕೆ'ಯಲ್ಲಿ (ಸಂ. X) ಶ್ರೀ ಮುನಿಕಲ್ಯಾಣ ವಿಜಯರ 'ವೀರನಿರ್ವಾಣ ಸಂವತ್', ಪು. ೭೦೧, ಅಡಿಬರೆಹ ೭೯.

ಈ ಉದ್ಧಾರಗಳಿಂದ ಮಹಾವೀರನ ಪರಿನಿರ್ವಾಣವು ವಿಕ್ರಮ ಸಂವತ್ ಎಂಬ ವಿಕ್ರಮಕಾಲಕ್ಕೆ ೪೭೦ ವರ್ಷಗಳ ಮುಂಚೆ ಆಯಿತೆಂದು ತಿಳಿಯುತ್ತದೆ. ವಿಕ್ರಮ ಕಾಲವು ಕ್ರಿ.ಪೂ. 58-57 ರಲ್ಲಿ ಮೊದಲಾಯಿತೆಂದು ಕಂಡಿತವಿರುವುದರಿಂದ ಮಹಾ ವೀರನು ಕ್ರಿ.ಪೂ. 528-527 ರಲ್ಲಿ ಪರಿನಿರ್ವಾಣ ಹೊಂದಿದನೆಂದು ಸಿದ್ಧವಾಗುತ್ತದೆ.

(೧) 'ತಿತ್ಥೋಗಾಲೀ ಪಇನ್ನಯ'ದಲ್ಲಿ[41]—

ಪಂಚ ಯ ಮಾಸಾ ಪಂಚ ಯ ವಾಸಾ ಛಚ್ಚೇವ ಹೊಂತಿ ವಾಸ ಸಯಾ |
ಪರಿನಿಬ್ಬುಅಸ್ಸಽರಿಹತೋ ತೋ ಉಪ್ಪನ್ನೋ ಸಗೋ ರಾಯಾ || ೬೨೩ ||

ಅಂದರೆ ಅರ್ಹಂತ ಮಹಾವೀರನ ಪರಿನಿರ್ವಾಣದಿಂದ ಶಕರಾಜನ ಕಾಲಕ್ಕೆ ೬೦೫ ವರ್ಷ ೫ ತಿಂಗಳಾಗುತ್ತವೆ.

(೨) 'ತಿಲೋಯ ಪನ್ನತ್ತಿ'ಯಲ್ಲಿ[42]

ಣಿವ್ವಾಣೇ ವೀರಜಿಣೇ ಛವ್ವಾಸ ಸದೇಸು ಪಂಚ ವರಿಸೇಸು |
ಪಣ ಮಾಸೇಸು ಗದೇಸು ಸಂಜಾದೋ ಸಗ ಣಿಓ ಅಹವಾ || ೧೪೯೯ ||

ಅಂದರೆ ಮಹಾವೀರ ಜಿನನ ಪರಿನಿರ್ವಾಣಾನಂತರ ೬೦೫ ವರ್ಷ ೫ ತಿಂಗಳು ಕಳೆಯುತ್ತಲೆ ಶಕನೃಪನಾದನು, ಅಂದರೆ ಶಕಕಾಲ ಆರಂಭಿಸಿತು.

(೩) ಮೇರುತುಂಗಾಚಾರ್ಯನ ವಿಚಾರಶ್ರೇಣಿಯಲ್ಲಿ[43]

ಶ್ರೀ ವೀರನಿರ್ವೃತೇರ್ವರ್ಷೈಃ ಷಡ್ಭಿಃ ಪಂಚೋತ್ತರೈಃ ಶತೈಃ |
ಶಾಕ ಸಂವತ್ಸರಸ್ಯೈಷಾ ಪ್ರವತ್ತಿರ್ಭರತೇಽಭವತ್ ||

ಅಂದರೆ ಮಹಾವೀರನು ಪರಿನಿರ್ವೃತನಾದ ೬೦೫ ವರ್ಷಗಳಲ್ಲಿ ಶಕಕಾಲವು ಭರತಖಂಡದಲ್ಲಿ ಪ್ರವೃತ್ತವಾಯಿತು.

(೪) ವೀರಸೇನಾಚಾರ್ಯನ ಧವಲ ಸಿದ್ಧಾಂತ ಭಾಷ್ಯದಲ್ಲಿ[44]

ಪಂಚ ಮಾಸಾಹಿಯ ಪಂಚುತ್ತರ ಛಸ್ಸದವಾಸಾಣಿ (೬೦೫—೫)
ಹವಂತಿ, ಏಸೋ ವೀರಜಿಣಿಂದ ಣಿವ್ವಾಣಗದ ದಿವಸಾದೋ ಜಾವ
ಸಗಕಾಲಸ್ಸ ಆದೀ ಹೋದಿ ತಾವದಿಯ ಕಾಲೋ |

---

41 ಅದೇ, ಪು. ೬೧೫.

42 *Jaina Antiquary*, X, 2, ಪು. 44, ಅಡಿಬರೆಹ 1.

43 ಪಂಡಿತ ಶ್ರೀ ಜುಗಲಕಿಶೋರ ಮುಖ್ತಾರರ 'ಭಗವಾನ್ ಮಹಾವೀರ ಔರ ಉನಕಾ ಸಮಯ' (ಜುಗಲಕಿಶೋರ), ಪು. ೩೩.

44 ಅದೇ, ಪು. ೩೪.

ಅಂದರೆ ಮಹಾವೀರ ಜಿನೇಂದ್ರನ ಪರಿನಿರ್ವಾಣದ ದಿನದಿಂದ ಶಕಕಾಲವು ಮೊದಲಾದ ವರೆಗೆ ೬೦೫ ವರ್ಷ ೫ ತಿಂಗಳಾಗುತ್ತವೆ.

(೫) ಜಿನಸೇನಾಚಾರ್ಯನ ಹರಿವಂಶ ಪುರಾಣ (೬೦ ನೆಯ ಅಧ್ಯಾಯ) ದಲ್ಲಿ—

ವರ್ಷಾಣಾಂ ಷಟ್‌ಶತೀಂ ತ್ಯಕ್ತ್ವಾ ಪಂಚಾಗ್ರಾಂ ಮಾಸಪಂಚಕಮ್ ।
ಮುಕ್ತಿಂಗತೇ ಮಹಾವೀರೇ ಶಕರಾಜಸ್ತತೋಽಭವತ್ ॥ ॥ ೫೪೯ ॥

ಅಂದರೆ ಮಹಾವೀರನು ಮುಕ್ತನಾದ ೬೦೫ ವರ್ಷ ೫ ತಿಂಗಳಲ್ಲಿ ಶಕರಾಜನಾದನು.

(೬) ಚಾವುಂಡರಾಯನ ಗುರುವಾಗಿದ್ದ ನೇಮಿಚಂದ್ರಾಚಾರ್ಯನ ತ್ರಿಲೋಕಸಾರದಲ್ಲಿ—

ಪಣ ಛಸ್ಸಯ ವಸ್ಸಂ ಪಣ ಮಾಸ ಜುದಂ ಗಮಿಯ ವೀರ ಣಿವ್ವುಇದೋ ।
ಸಗರಾಜೋ [45] . . . . ॥ ೮೫೦ ॥.

ಅಂದರೆ ಮಹಾವೀರನ ಪರಿನಿರ್ವಾಣದಿಂದ ೬೦೫ ವರ್ಷ ೫ ಮಾಸಗಳು ದಾಟುತ್ತಲೆ ಶಕರಾಜನಾದನು, ಅಂದರೆ ಶಕಕಾಲ ಆರಂಭಿಸಿತು.

ಈ ಉದ್ಧಾರಗಳಿಂದ ಶಕಕಾಲ ಪ್ರಾರಂಭಿಸುವ ೬೦೫ ವರ್ಷ ೫ ತಿಂಗಳ ಮುಂಚೆ ಮಹಾವೀರನ ಪರಿನಿರ್ವಾಣವಾಯಿತೆಂದು ತಿಳಿಯುತ್ತದೆ. ಈಗ, ಶಕಕಾಲ ಆರಂಭಿಸಿದುದು ಕ್ರಿ.ಶ. 78 ರಲ್ಲಿ ಚೈತ್ರ ಶುದ್ಧ ಪಾಡ್ಯದಂದು, ಅಂದರೆ ಕ್ರಿ.ಶ. 78 ಮಾರ್ಚಿ 3 ನೆಯ ತಾರೀಕು ಕುಜವಾರ. ಅತಏವ ಮಹಾವೀರನು ಕ್ರಿ.ಪೂ. 528 ರಲ್ಲಿ, ಅದರ ಮೂರನೆಯ ಅಥವಾ ಕೊನೆಯ ಪಾದದಲ್ಲಿ, ಪರಿನಿರ್ವಾಣಕ್ಕೆ ಸಂದನೆಂದು ಸಿದ್ಧವಾಗುತ್ತದೆ

---

[45] ಈ ಗಾಹೆಗೆ ನೇಮಿಚಂದ್ರನ ಶಿಷ್ಯನಾದ ಮಾಧವಚಂದ್ರ ತ್ರೈವಿದ್ಯನು ಬರೆದ ವ್ಯಾಖ್ಯೆಯಲ್ಲಿ (ಮಾಣಿಕಚಂದ ದಿಗಂಬರಜೈನ ಗ್ರಂಥಮಾಲಾ, ನಂ. ೧೨, ಪು. ೩೪೧) 'ಶ್ರೀ ವೀರ ನಿರ್ವೃತೇಃ ಸಕಾಶಾತ್ ಪಂಚೋತ್ತರ ಷಟ್ಛತ ವರ್ಷಾಣಿ ೬೦೫ ಪಂಚಮಾಸ ಯುತಾನಿ ೫ ಗತ್ವಾ ಪಶ್ಚಾತ್ ವಿಕ್ರಮಾಂಕ ಶಕರಾಜಾ ಜಾಯತೇ' ಅಂದರೆ ಶ್ರೀ ಮಹಾವೀರನ ಪರಿನಿರ್ವಾಣದಿಂದ ೬೦೫ ವರ್ಷ ೫ ಮಾಸ ದಾಟುತ್ತಲೆ ವಿಕ್ರಮಾಂಕನೆಂಬ ಶಕರಾಜನಾದನು ಎಂದಿರುವಲ್ಲಿ ಆ ಶಕರಾಜನನ್ನು ವಿಕ್ರಮಾಂಕನೆಂದಿರುವುದು ತೀರ ತಪ್ಪು. ವಿಕ್ರಮಾಂಕನು ಶಕಾರಿಯೇ ವಿನಾ ಸರ್ವಥಾ ಶಕರಾಜನಲ್ಲ; ಉದಾ: 'ಸಾಹಸಾಂಕಃ ಶಕಾರಿಃ ಸ್ಯಾದ್ವಿಕ್ರಮಾದಿತ್ಯ ಇತ್ಯಪಿ' (ಜಟಾಧರ), 'ಯೋ . . . ಶಕೇಶ್ವರಂ ಜಿತ್ವಾ ಗೃಹಿತ್ವೋಜ್ಜಯಿನೀಂ ಮಹಾಹವೇ . . . ಶ್ರೀ ವಿಕ್ರಮಾರ್ಕಃ' (ಜ್ಯೋತಿರ್ವಿದಾಭರಣ). ಅದಲ್ಲದೆ ಅವನ ವಿಕ್ರಮಕಾಲ ಆರಂಭಿಸಿದುದು ಕ್ರಿ.ಪೂ. 58-57 ರಲ್ಲಿ, ಶಕಕಾಲ ಆರಂಭಿಸಿದುದು ಕ್ರಿ.ಶ. 78ರಲ್ಲಿ; ಹೀಗೆ ಅವುಗಳ ನಡುವೆ ೧೩೫ ವರ್ಷಗಳ ಅಂತರವೂ ಇದೆ.

ಭದ್ರಬಾಹುವಿನ ಕಲ್ಪಸೂತ್ರದಲ್ಲಿ (§ ೧೨೩ ಮತ್ತು § ೧೪೭) ಮಹಾವೀರನ ಪರಿನಿರ್ವಾಣದ ತೇದಿಯನ್ನು ಕುರಿತು ಹೀಗದೆ—

> ತಸ್ಸಣಂ ಅಂತರಾವಾಸಸ್ಸ ಜೇ ಸೇ ವಾಸಾಣಂ ಚಉಚ್ಛೆ
> ಮಾಸೆ ಸತ್ತಮೆ ಪಖೆ ಕತ್ತಿಅ ಬಹುಲೆ ತಸ್ಸಣಂ ಕತ್ತಿಯ
> ಬಹುಲಸ್ಸ ಪನ್ನರಸೀ ಪಖೇಣಂ ಜಾ ಸಾ ಚರಮಾ ರಯಣೀ
> ತಂ ರಯಣಿಂ ಚಣಂ ಸಮಣೆ ಭಗವಂ ಮಹಾವೀರೆ
> ಪಾವಾಏ . . . ಸಾಇಣಾ ನಕ್ಖತ್ತೇಣ . . . ಪಚ್ಚೂಸಕಾಲ
> ಸಮಯಂಸಿ . . . ಕಾಲಗಏ . . . ಪರಿನಿವ್ವುಡೆ

ಅಂದರೆ ಭಗವಂತನಾದ ಮಹಾವೀರನು ವರ್ಷಾಕಾಲದ[46] ನಾಲ್ಕನೆಯ ತಿಂಗಳ ಏಳನೆಯ ಪಕ್ಷದಲ್ಲಿ ಸ್ವಾತೀ ನಕ್ಷತ್ರಯುಕ್ತವಾದ (ಪೂರ್ಣಿಮಾಂತ) ಕಾರ್ತಿಕ (ಅಂದರೆ ಅಮಾಂತ ಆಶ್ವಯುಜ) ಬಹುಳ ೧೫ನೆಯ ದಿನದ, ಅಂದರೆ ಅಮಾವಾಸ್ಯೆಯ, ರಾತ್ರಿಯ ಕೊನೆಯಲ್ಲಿ, ಅಂದರೆ ಅಂದಿನ ಬ್ರಾಹ್ಮ್ಯಮುಹೂರ್ತದಲ್ಲಿ, ಪಾವಾನಗರದಲ್ಲಿ ಕಾಲವಾದನು, ಪರಿನಿರ್ವೃತನಾದನು.

ಅದನ್ನೇ ಕುರಿತು ಧವಲಸಿದ್ಧಾಂತದಲ್ಲಿ[47]—

> ಪಚ್ಛಾ ಪಾವಾಣಯರೇ ಕತ್ತಿಯ ಮಾಸೇ ಯ ಕಿಣ್ಹ ಚೊದ್ದಸಿಏ|
> ಸಾದೀಏ ರತ್ತೀಏ ಸೇಸರಯಂ ಛೇತ್ತು ಣಿವ್ವಾಓ ||

ಅಂದರೆ ಮಹಾವೀರನು (ಪೂರ್ಣಿಮಾಂತ) ಕಾರ್ತಿಕಮಾಸದ, (ಅಂದರೆ ಅಮಾಂತ ಆಶ್ವಯುಜ ಮಾಸದ) ಕೃಷ್ಣಪಕ್ಷದ ಚತುರ್ದಶಿಯ ರಾತ್ರಿ ಸ್ವಾತೀ ನಕ್ಷತ್ರದಲ್ಲಿ

---

[46] ಬಹಳ ಹಳೆಯ ಕಾಲಗಣನೆಯ ಮೇರೆಗೆ ಸಂವತ್ಸರವು ಗ್ರೀಷ್ಮ, ವರ್ಷಾ ಮತ್ತು ಹೇಮಂತ ಎಂದು ೪-೪ ತಿಂಗಳಿನ ೩ ಪಾಲಾಗಿ ವಿಭಾಗಿಸಲ್ಪಟ್ಟಿತ್ತು. ಅದರಲ್ಲಿ ವರ್ಷಾಕಾಲವೆಂದರೆ ಪೂರ್ಣಿಮಾಂತ ಶ್ರಾವಣ ಬಹುಳ ಪಾಡ್ಯ (ಅಂದರೆ ಅಮಾಂತ ಆಷಾಢ ಬಹುಳ ಪಾಡ್ಯ) ದಿಂದ ಕಾರ್ತಿಕ ಹುಣ್ಣಿಮೆಯ ವರೆಗೆ. ಅದರ ೭ ನೆಯ ಪಕ್ಷವೆಂದರೆ ಪೂರ್ಣಿಮಾಂತ ಕಾರ್ತಿಕ ಬಹುಳ ಪಾಡ್ಯ (ಅಂದರೆ ಅಮಾಂತ ಆಶ್ವಯುಜ ಬಹುಳ ಪಾಡ್ಯ) ದಿಂದ ಪೂರ್ಣಿಮಾಂತ ಕಾರ್ತಿಕ ಬಹುಳ ಅಮಾವಾಸ್ಯೆ (ಅಂದರೆ ಅಮಾಂತ ಆಶ್ವಯುಜ ಬಹುಳ ಅಮಾವಾಸ್ಯೆ) ವರೆಗೆ. ಆ ಸಂವತ್ಸರದಲ್ಲಿ ಗ್ರೀಷ್ಮಕಾಲವೆಂದರೆ, ಪೂರ್ಣಿಮಾಂತ ಚೈತ್ರ ಬಹುಳ ಪಾಡ್ಯ (ಅಂದರೆ ಅಮಾಂತ ಫಾಲ್ಗುಣ ಬಹುಳ ಪಾಡ್ಯ) ದಿಂದ ಆಷಾಢ ಹುಣ್ಣಿಮೆಯ ವರೆಗೆ. ಅದರ ೨ ನೆಯ ಪಕ್ಷವೆಂದರೆ, ಪೂರ್ಣಿಮಾಂತವೂ ಅಮಾಂತವೂ ಚೈತ್ರ ಶುಕ್ಲ ಪಾಡ್ಯದಿಂದ ಚೈತ್ರ ಹುಣ್ಣಿಮೆಯ ವರೆಗೆ. ವಿಂಧ್ಯಾದುತ್ತರ ಭಾರತದಲ್ಲಿ ಪೂರ್ಣಿಮಾಂತ ಗಣನೆಯೂ, ದಕ್ಷಿಣದಲ್ಲಿ ಅಮಾಂತ ಗಣನೆಯೂ ಬಳಕೆಯಲ್ಲಿವೆ.

[47] ಜುಗಲಕಿಶೋರ, ಪು. ೧೨, ಅಡಿ ಬರೆಹ *

ಪಾವಾನಗರದಲ್ಲಿ ಪರಿನಿರ್ವಾಣ ಹೊಂದಿದನು ಎಂದೂ, ಪೂಜ್ಯಪಾದಾಚಾರ್ಯನ ನಿರ್ವಾಣಭಕ್ತಿಯಲ್ಲಿ[48] —

ಪದ್ಮವನ ದೀರ್ಘಿಕಾಕುಲ ವಿವಿಧದ್ರುಮಖಂಡಮಂಡಿತೇ ರಮ್ಯೇ |
ಪಾವಾನಗರೋದ್ಯಾನೇ ವ್ಯುತ್ಸರ್ಗೇಣ ಸ್ಥಿತಃ ಸ ಮುನಿಃ ||೧೬||
ಕಾರ್ತಿಕ ಕೃಷ್ಣಸ್ಯಾಂತೇ ಸ್ವಾತಾವೃಕ್ಷೇ ನಿಹತ್ಯ ಕರ್ಮರಜಃ |
ಅವಶೇಷಂ ಸಂಪ್ರಾಪದ್ ವ್ಯಜರಾಮರಮಕ್ಷಯಂ ಸೌಖ್ಯಮ್ ||೧೭||

ಅಂದರೆ ಮಹಾವೀರನು (ಪೂರ್ಣಿಮಾಂತ) ಕಾರ್ತಿಕಮಾಸದ (ಅಮಾಂತ ಆಶ್ವಯುಜ ಮಾಸದ) ಕೊನೆಯಲ್ಲಿ ಸ್ವಾತೀ ನಕ್ಷತ್ರದಲ್ಲಿ ಪಾವಾನಗರದ ಉದ್ಯಾನದಲ್ಲಿ ಪರಿನಿರ್ವಾಣ ಹೊಂದಿದನು ಎಂದೂ, ಗುಣಭದ್ರಾಚಾರ್ಯನ ಉತ್ತರಪುರಾಣ (೭೪ ನೆಯ ಪರ್ವ) ದಲ್ಲಿ—

ಕೃಷ್ಣ ಕಾರ್ತಿಕ ಪಕ್ಷಸ್ಯ ಚತುರ್ದಶ್ಯಾಂ ನಿಶಾತ್ಯಯೇ ||೫೧೦||
ಸ್ವಾತಿಯೋಗೇ ತೃತೀಯೇದ್ಧ ಶುಕ್ಲಧ್ಯಾನ ಪರಾಯಣಃ ||೫೧೧||
ಗತಃ . . . . ನಿರ್ವಾಣಂ ಸರ್ವವಾಂಛಿತಮ್ ||೫೧೨||

ಅಂದರೆ ಮಹಾವೀರನು (ಪೂರ್ಣಿಮಾಂತ) ಕಾರ್ತಿಕ ಮಾಸದ (ಅಮಾಂತ ಆಶ್ವಯುಜ ಮಾಸದ) ಕೃಷ್ಣಪಕ್ಷದ ಚತುರ್ದಶಿಯ ರಾತ್ರಿಯ ಕೊನೆಯಲ್ಲಿ ಸ್ವಾತಿ ನಕ್ಷತ್ರದಲ್ಲಿ ಪರಿನಿರ್ವಾಣ ಹೊಂದಿದನು ಎಂದೂ ಇದೆ.

ಹೀಗೆ ಮಹಾವೀರನ ಪರಿನಿರ್ವಾಣವು ಕ್ರಿ.ಪೂ. 528 ನೆಯ ವರ್ಷದಲ್ಲಿ ಪೂರ್ಣಿಮಾಂತ ಕಾರ್ತಿಕ ಮಾಸದ, ಅಂದರೆ ಅಮಾಂತ ಆಶ್ವಯುಜ ಮಾಸದ, ಕೃಷ್ಣಪಕ್ಷದ ಚತುರ್ದಶಿಯ ದೀಪಾವಳಿಯ ದಿನದ ರಾತ್ರಿಯ ಕೊನೆಯ ಜಾವದಲ್ಲಿ, ಅಂದರೆ ಮಾರನೆಯ ಅಮಾವಾಸ್ಯೆಯ ಬ್ರಾಹ್ಮ್ಯ ಮುಹೂರ್ತದಲ್ಲಿ ಆಯಿತೆಂದು ತಿಳಿಯುವುದರಿಂದ, ಆತನ ಪರಿನಿರ್ವಾಣದ ತೇದಿ **ಕ್ರಿ. ಪೂ. 528 ನೆಯ ಸಪ್ತಂಬರ 22 ನೆಯ ತಾರೀಕು ಕುಜವಾರದ** ಸ್ವಾತಿ ನಕ್ಷತ್ರಯುಕ್ತವಾದ ರಾತ್ರಿಯ ಕೊನೆಯ ಜಾವ ಅಂದರೆ ಮಾರನೆಯ **ಸಪ್ತಂಬರ 23 ನೆಯ ತಾರೀಕು ಬುಧವಾರದ** ಮುಂಜಾವವಾಗುತ್ತದೆ.

ಮಹಾವೀರನ ಜನನವನ್ನು ಕುರಿತು ಕಲ್ಪಸೂತ್ರದಲ್ಲಿ (§೯೬) ಹೀಗದೆ—

ತೇಣಂ ಕಾಲೇಣಂ ತೇಣಂ ಸಮಏಣಂ ಮಹಾವೀರೆ
ಜೇ ಸೇ ಗಿಹ್ಮಾಣಂ ಪಢಮೆ ಮಾಸೆ ದುಚ್ಚೆ ಪಕ್ಖೆ
ಚಿತ್ತ ಸುದ್ಧೆ ತಸ್ಸಣಂ ಚಿತ್ತ ಸುದ್ಧಸ್ಸ ತೇರಸೀ ದಿವಸೇಣಂ

[48] ಅದೇ, ಪು. ೧೩ ಅಡಿಬರೆಹ *

. . . . ಪುವ್ವರತ್ತಾವರ ಕಾಲ ಸಮಯಂಸಿ ಹಚ್ಚುತ್ತರಾಹಿಂ
ನಕ್ಖತ್ತೇಣಂ . . . . ಅರುಗ್ಗಂ ದಾರಯಂ ಪಯಾಯಾ

ಅಂದರೆ ಗ್ರೀಷ್ಮಕಾಲದ[46] ಮೊದಲ ಮಾಸದ ಎರಡನೆಯ ಪಕ್ಷದಲ್ಲಿ ಚೈತ್ರ ಶುದ್ಧ ತ್ರಯೋದಶಿಯಂದು ಹಸ್ತೋತ್ತರೆ ಎಂದೂ ಕರೆಯಲ್ಪಡುವ ಉತ್ತರಾಫಲ್ಗುನೀ ನಕ್ಷತ್ರದಲ್ಲಿ ಪೂರ್ವರಾತ್ರಿಯ ಸಮಯದಲ್ಲಿ (ಮಹಾವೀರನ ತಾಯಿಯಾದ ತ್ರಿಶಲೆ) ಆರೋಗ್ಯಶಾಲಿಯಾದ ಮಗುವನ್ನು, ಅಂದರೆ ಮಹಾವೀರನನ್ನು ಹೆತ್ತಳು.

ಅದನ್ನೇ ಕುರಿತು ಪೂಜ್ಯಪಾದನ ನಿರ್ವಾಣ ಭಕ್ತಿಯಲ್ಲಿ[49]—

ಚೈತ್ರ ಸಿತ ಪಕ್ಷ ಫಾಲ್ಗುನಿ ಶಶಾಂಕಯೋಗೇ ದಿನೇ ತ್ರಯೋದಶ್ಯಾಮ್ ||
ಜಜ್ಞೇ ಸ್ವೋಚ್ಚಸ್ಥೇಷು ಗ್ರಹೇಷು ಸೌಮ್ಯೇಷು ಶುಭಲಗ್ನೇ ||೫||

ಅಂದರೆ ಚೈತ್ರಮಾಸದ ಶುಕ್ಲಪಕ್ಷದ ತ್ರಯೋದಶಿಯ ತಿಥಿಯಲ್ಲಿ ಚಂದ್ರನು ಉತ್ತರಾಫಲ್ಗುನೀ ನಕ್ಷತ್ರದಲ್ಲಿದ್ದಾಗ ಮಹಾವೀರನು ಹುಟ್ಟಿದನು ಎಂದೂ, ಗುಣಭದ್ರನ ಉತ್ತರ ಪುರಾಣ (೭೪ ನೆಯ ಪರ್ವ) ದಲ್ಲಿ—

ನವಮೇ ಮಾಸಿ ಸಂಪೂರ್ಣೇ ಚೈತ್ರೇ ಮಾಸಿ ತ್ರಯೋದಶೀ |
ದಿನೇ ಶುಕ್ಲೇ ಶುಭೇ ಯೋಗೇ ಸತ್ಯರ್ಯಮಣಿ ನಾಮನಿ ||೨೬೨||
. . . . ಮಹಾವೀರೋತ್ರ ಜಾತವಾನ್ ||೨೬೩||

(ಅರ್ಯಮಣಿ = ಉತ್ತರಾಫಲ್ಗುನೀ ನಕ್ಷತ್ರದಲ್ಲಿ)

ಅಂದರೆ ಚೈತ್ರಮಾಸದ ಶುಕ್ಲಪಕ್ಷದ ತ್ರಯೋದಶಿಯಲ್ಲಿ ಉತ್ತರಾಫಲ್ಗುನೀ ನಕ್ಷತ್ರದಲ್ಲಿ ಮಹಾವೀರನು ಹುಟ್ಟಿದನು ಎಂದೂ ಹೇಳಿದೆ.

ಕಲ್ಪಸೂತ್ರದಲ್ಲಿ (§೧೪೭) ಆತನು 'ಬಾವಾತ್ತರಿ ವಾಸಾಇಂ ಸವ್ವಾಉಯಂ ಪಾಲಇತ್ತಾ' ಅಂದರೆ **ಒಟ್ಟಾರೆ ೭೨ ವರ್ಷ ಬದುಕಿದ**ನೆಂದೂ, ಉತ್ತರಪುರಾಣ (೭೪ ನೆಯ ಪರ್ವ) ದಲ್ಲಿ—

ದ್ವಾಸಪ್ತತಿ ಸಮಾಃ ಕಿಂಚಿದೂನಾಸ್ತಸ್ಯಾಯುಷಃ ಸ್ಥಿತಿಃ ||೨೮೦||

ಆತನ ಆಯುಷ್ಕಾಲವು ೭೨ ವರ್ಷಕ್ಕೆ ಕೊಂಚ ಕಡಿಮೆಯಾಗಿತ್ತೆಂದೂ ಹೇಳಿರುವುದರಿಂದ, ಮಹಾವೀರನು ಕ್ರಿ.ಪೂ. 599 ರಲ್ಲಿ ಹುಟ್ಟಿರಬೇಕು. ಆ ವರ್ಷದಲ್ಲಿ ಚೈತ್ರ ಶುದ್ಧ ತ್ರಯೋದಶಿ ಕ್ರಿ.ಪೂ. 599 ಮಾರ್ಚಿ 8 ನೆಯ ತಾರೀಕು ಕುಜವಾರ ಬಂದಿದ್ದು ಉತ್ತರಾಫಲ್ಗುನೀ ನಕ್ಷತ್ರದಿಂದಲೂ ಕೂಡಿತ್ತು. ಮಹಾವೀರನು ಅದೇ ರಾತ್ರಿಯ ಮುಂಭಾಗದಲ್ಲಿ ಹುಟ್ಟಿರಬೇಕು.

---

49 ಅದೇ, ಪು. ೧.

ಕೊನೆಯದಾಗಿ ಇದೊಂದು ಮಾತನ್ನೂ ಇಲ್ಲಿ ಹೇಳಬಹುದು ; ಅದೇನೆಂದರೆ— ಅಶೋಕನು ಬುದ್ಧನ ಪರಿನಿರ್ವಾಣಾನಂತರ ೨೧೮ನೆಯ ವರ್ಷದಲ್ಲಿ ಪಟ್ಟಾಭಿಷಿಕ್ತನಾದನೆಂದು ಸಿಂಹಲದ್ವೀಪದ ಮಹಾವಂಸ (೫ನೆಯ ಪರಿಚ್ಛೇದ)ದಲ್ಲಿ ಹೇಳಿರುವುದನ್ನು—

ಅಸೋಕೋ ಆಸಿ ತೇಸಂ ತು ಪುಞ್ಞತೇಜೋ ಬಲಿದ್ಧಿಕೋ || ೧೯ ||
ಸಕಲೇ ಜಂಬುದೀಪಸ್ಮಿಂ ಏಕರಜ್ಜಂ ಅಪಾಪುಣಿ || ೨೦ ||
ಜಿನ ನಿವ್ವಾಣತೋ ಪಚ್ಛಾ ಪುರೇ ತಸ್ಸಾಭಿಸೇಕತೋ |
ಸಾಟ್ಠಾರಸಂ ವಸ್ಸ ಸತದ್ವಯಂ ಏವಂ ವಿಜಾನಿಯಂ || ೨೧ ||

(ಜಿನ = ಬುದ್ಧ)

ಒಪ್ಪಲಾಗುವುದಿಲ್ಲ. ಏಕೆಂದರೆ ಹಾಗಾದರೆ ಅಶೋಕನ ೧ನೆಯ ಲಘುಶಿಲಾಲೇಖದಲ್ಲಿಯ ಬುದ್ಧಪರಿನಿರ್ವಾಣ ಶಕದ ವರ್ಷಸಂಖ್ಯೆಯಾದ ೨೫೬ ಆತನ ಆಳೊತ್ತಿನ ೩೯ನೆಯ ವರ್ಷವಾಗುತ್ತದೆ. ಆದರೆ ಆತನ ಒಟ್ಟಾರೆ ಆಳೊತ್ತೇ ಪುರಾಣಗಳಲ್ಲಿ ಹೇಳಿರುವ ಮೇರೆಗೆ ೩೬ ವರ್ಷ, ಮಹಾವಂಸ—ದೀಪವಂಸಗಳ ಮೇರೆಗೆ ೩೭ ವರ್ಷವಷ್ಟೇ. ಹೇಗೂ ಮಹಾವಂಸದಲ್ಲಿ ಆತನ ಪಟ್ಟಾಭಿಷೇಕದ ವರ್ಷವನ್ನು ಹೀಗೆ ಬುದ್ಧನ ಪರಿನಿರ್ವಾಣಶಕದಲ್ಲಿ ತೇದಿಸಿರುವುದರಿಂದ, ಆತನ ಆ ಶಿಲಾಲೇಖದಲ್ಲಿಯ ೨೫೬ ಎಂಬ ಸಂಖ್ಯೆ ಬುದ್ಧನ ಪರಿನಿರ್ವಾಣದಿಂದ ಲೆಕ್ಕಿಸಿದ ವರ್ಷಸಂಖ್ಯೆ ತಾನೆ ಎಂದು ಮೇಲೆ ಮಾಡಿರುವ ಊಹೆಯಾದರೂ ಸಮಾಚೀನವೆಂದು ನಿಷ್ಪನ್ನವಾಗುತ್ತದೆ.

ಗೋವಿಂದ ಪೈ.

ಈಚೆಗೆ ನಡೆದಿರುವ ಪ್ರಾಚ್ಯವಿದ್ಯಾ ಪರಿಶೀಲನೆ

೧

ಪ್ರಾಚ್ಯವಿದ್ಯೆಯ ಪುನರುಜ್ಜೀವನವು ಭಾರತೀಯ ನವೀನ ಯುಗದ ಮುಖ್ಯ ಕುರುಹು. ರಾಜಕೀಯ ವಿಪ್ಲವಗಳ ದೆಸೆಯಿಂದ ದೇಶೀಯ ಸಂಸ್ಕೃತಿಯ ಪ್ರಗತಿಯು ಸ್ವಲ್ಪಕಾಲ ನಿಂತಿತ್ತು. ಈ ಅವಧಿಯಲ್ಲಿ ಹೊಸ ಆಡಳಿತ, ಹೊಸ ಸಂಸ್ಕೃತಿಗಳ ಪರಿಚಯ ಇವು ಏರ್ಪಟ್ಟು ಇಲ್ಲಿನ ಸಂಸ್ಕೃತಿಯೂ ಹೊಸ ರೂಪ ತಾಳಿತು. ಹಿಂದಿನ ಭಾರತೀಯ ಸಂಸ್ಕೃತಿಯಲ್ಲಿ ಪಾಶ್ಚಾತ್ಯರಿಗೆ ಆಸಕ್ತಿ ಹುಟ್ಟಿದ್ದರಿಂದ ಅದರ ಪುನರುಜ್ಜೀವನ ಕಾರ್ಯವೂ ಅವರ ಕುತೂಹಲ, ಉತ್ಸಾಹ, ಆಸಕ್ತಿಗಳಿಂದಲೇ ಮೊದಲಾಯಿತು. ಆದರೂ ಭಾರತೀಯರು ಇದರಲ್ಲಿ ಶ್ರೇಷ್ಠಪಾತ್ರ ವಹಿಸಲು ತಡವಾಗಲಿಲ್ಲ. ಆಧುನಿಕ ಪರಿಸ್ಥಿತಿಗನುಸಾರವಾಗಿ ಗ್ರಂಥರಚನೆ, ವ್ಯಾಖ್ಯಾನ, ತತ್ವಗಳ ಆವಿಷ್ಕರಣ, ಖಂಡನೆ, ಮಂಡನೆ ಮೊದಲಾದ ಕೆಲಸಗಳು ನಡೆಯತೊಡಗಿದವು. ಆಂಗ್ಲ ವಿದ್ಯಾಭ್ಯಾಸ ಹೊಂದಿದವರೂ ಸಂಸ್ಕಾರ ಬಲದಿಂದಲೋ ಎಂಬಂತೆ ತಮ್ಮ ಸಂಸ್ಕೃತಿ ಮತ್ತು ಸಾಹಿತ್ಯಗಳ ಸತ್ವವನ್ನು ಮನಗಂಡು ಪುನರುಜ್ಜೀವನ ಕಾರ್ಯದಲ್ಲಿ ಬದ್ಧಕಂಕಣರಾದರು. ಹೀಗೆ, ರಾಷ್ಟ್ರೀಯ ಜಾಗೃತಿಗೆ ಸಹಕರಿಸಿದ ಪ್ರಾಚ್ಯವಿದ್ಯೆಯ ಪ್ರಗತಿಯು ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಯಾವ ರೀತಿ ನಡೆದಿದೆ ಯೆಂಬುದನ್ನು ಇಲ್ಲಿ ಸಂಗ್ರಹಿಸಲು ಪ್ರಯತ್ನಿಸಿದೆ.[1]

ಪ್ರಾಚ್ಯವಿದ್ಯೆಯ ವಿಷಯದಲ್ಲಿ ನಡೆದಿರುವ ಕೆಲಸವನ್ನು ಮೂರು ವಿಧವಾಗಿ ವಿಂಗಡಿಸಿ ಗಮನಿಸಬಹುದು.

(೧) ಗ್ರಂಥಗಳ ಸಂಶೋಧನ, ಮುದ್ರಣ ಮತ್ತು ಪ್ರಕಾಶನ.

(೨) ತತ್ವಗಳ ಪ್ರಸಾರ, ವಿವರಣ ಮತ್ತು ವಿಮರ್ಶೆ.

(೩) ಸ್ವತಂತ್ರ ಗ್ರಂಥರಚನೆ.

ಮೂರು ವಿಧವಾದ ಕೆಲಸಗಳಿಗೂ ಆರ್ಥಿಕ ಮತ್ತು ಸಾಮಾಜಿಕ ಸಹಾಯ ಚೆನ್ನಾಗಿ ದೊರಕುತ್ತಿದೆ. ಸರಕಾರಗಳ ಅವಲಂಬನವಲ್ಲದೆ ಖಾಸಗಿ ಮಹನೀಯರ ಉದಾರ

---

[1] ೧೯೪೨ ರಲ್ಲಿ ಭಾಂಡಾರಕರ್ ಸಂಶೋಧನಾಲಯದವರು ತಮ್ಮ ಸಂಸ್ಥೆಯ ರಜತೋತ್ಸವದ ಸಂದರ್ಭದಲ್ಲಿ "*Progress of Indic Studies*" (ಪ್ರಾಚ ವಿದ್ಯೆಯ ಪ್ರಗತಿ) ಎಂಬ ಗ್ರಂಥವನ್ನು ಪ್ರಕಟಿಸಿರುತ್ತಾರೆ. ಆದರಿಂದ ಅನೇಕ ವಿಷಯಗಳನ್ನು ಗ್ರಹಿಸಿದ್ದೇನೆ.

ಸಹಾಯದಿಂದ ಅನೇಕ ಸಂಸ್ಥೆಗಳು ಹುಟ್ಟಿ ಕೆಲಸಮಾಡುತ್ತಿವೆ. ಐತಿಹಾಸಿಕ ಸಂಶೋಧನೆ ಚುರುಕಾಗಿ ಸಾಗಿ ಭರತಖಂಡದ ಇತಿಹಾಸವು ದಿನದಿನಕ್ಕೆ ಪೂರ್ಣಗೊಳ್ಳುತ್ತಿದೆ. ಹಳೆಯ ಮಾತೃಕೆಗಳ ಶೇಖರಣ, ವರ್ಣನಾತ್ಮಕ ಸೂಚಿಗಳ ತಯಾರಿಕೆ, ಸಂಶೋಧನ ಮತ್ತು ಪ್ರಕಾಶನ, ಶಾಸನಗಳ ಪತ್ತೆ, ಮೊದಲಾದ ಕೆಲಸಗಳನ್ನು ಅನೇಕ ಪ್ರಮುಖ ವಿದ್ವಾಂಸರೂ ಸಂಸ್ಥೆಗಳೂ ಕೈಕೊಂಡು ಯಶಸ್ವಿಯಾಗಿ ನೆರವೇರಿಸುತ್ತಿರುವರು. ಭರತಖಂಡದ ಪ್ರತಿಯೊಂದು ಮುಖ್ಯ ವಿಶ್ವವಿದ್ಯಾನಿಲಯದಲ್ಲೂ ಮಾತೃಕೆಗಳ ಸಂಗ್ರಹಾಲಯ ಮತ್ತು ಗ್ರಂಥಪ್ರಕಾಶನ ಸಮಿತಿಗಳೂ ಇವೆ. ವೇದ, ಪುರಾಣ, ಇತಿಹಾಸ, ಧರ್ಮಶಾಸ್ತ್ರ, ಜ್ಯೋತಿಷ, ಆಯುರ್ವೇದ, ದರ್ಶನ ಮೊದಲಾಗಿ ಎಲ್ಲ ಶಾಖೆಗಳಲ್ಲೂ ಗ್ರಂಥಪ್ರಕಾಶನ ಕಾರ್ಯವು ನಡೆದಿದೆ.

ತತ್ವಗಳ ವಿವರಣ ಮತ್ತು ವಿಮರ್ಶೆಯಲ್ಲಿಯೂ ಅನೇಕ ಪ್ರಮುಖ ವ್ಯಕ್ತಿಗಳು ಕೆಲಸಮಾಡಿದ್ದಾರೆ. ಮೊದಲಿಗೆ ಈ ವಿಷಯಗಳಲ್ಲೆಲ್ಲ ಪಾಶ್ಚಾತ್ಯಪಂಡಿತರ ಅಭಿಪ್ರಾಯಗಳಿಗೆ ಹೆಚ್ಚು ಮನ್ನಣೆ ದೊರಕುತ್ತಿತ್ತು. ಈಚೆಗೆ ಭಾರತೀಯರು ಆಸಕ್ತಿ ವಹಿಸುವುದು ಹೆಚ್ಚಾದಮೇಲೆ ಇವರ ಅಭಿಪ್ರಾಯಗಳೇ ಅನೇಕವೇಳೆ ಹೆಚ್ಚು ಮಾನ್ಯವಾಗಿವೆ. ಇಲ್ಲಿನ ಸಂಸ್ಕೃತಿಯಲ್ಲಿ ಬೆಳೆದಿರುವವರೇ ಅದನ್ನು ವಿವರಿಸುವುದರಲ್ಲಿ ಹೆಚ್ಚು ಶಕ್ತರೆಂದು ಅನೇಕ ನಿದರ್ಶನಗಳಿಂದ ತೋರಿಸಬಹುದು. ಇದನ್ನು ಪಾಶ್ಚಾತ್ಯರೂ ಒಪ್ಪಿ ಇಲ್ಲಿನ ಪಂಡಿತರ ಸಹಕಾರವನ್ನು ಮೆಚ್ಚಿದ್ದಾರೆ.

೨

ಈಗ ಪ್ರಾಚ್ಯವಿದ್ಯೆಯ ಹಲವು ಭಾಗಗಳಲ್ಲಿ ನಡೆದಿರುವ ಮುಖ್ಯ ಕೆಲಸಗಳನ್ನು ವಿಶೇಷ ದೃಷ್ಟಿಯಿಂದ ಪರಿಶೀಲಿಸಬಹುದು.

ವೇದ—ಪುಣೆಯ ವೈದಿಕ ಸಂಶೋಧನ ಮಂಡಲಿಯವರು ಸಾಯಣ ಭಾಷ್ಯ ಸಹಿತ ಋಗ್ವೇದ ಸಂಹಿತೆಯ ಮೂರು ಸಂಪುಟಗಳನ್ನು ಹೊರಗೆಡಹಿದ್ದಾರೆ. ಸ್ಕಂದ ಸ್ವಾಮಿ ಮತ್ತು ವೆಂಕಟಮಾಧವ ಇವರ ಭಾಷ್ಯಗಳೊಡನೆ ಅಳವಡಿಸಿ ಋಕ್ಸಂಹಿತೆಯನ್ನು ಪ್ರಕಟಿಸುವ ಉದ್ಯಮಗಳೂ ಯಶಸ್ವಿಯಾಗಿ ನಡೆದಿವೆ.

ಕಲ್ಕತ್ತಾ ಸಂಸ್ಕೃತ ಗ್ರಂಥಮಾಲೆಯಲ್ಲಿ ಸಭಾಷ್ಯ ಸಾಮಸಂಹಿತೆ; ಡಾ. ರಘುವೀರ ಅವರ ಜೈಮಿನೀಯ ಸಂಹಿತೆ ಇವೆರಡೂ ಸಾಮವೇದಕ್ಕೆ ಸಂಬಂಧಿಸಿದವು. ಮಾಧವ ಮತ್ತು ಭರತಸ್ವಾಮಿ ಇವರ ಭಾಷ್ಯಗಳೊಡನೆ ಸಾಮಸಂಹಿತೆಯು ಅಡಿಯಾರ್ ಸಂ. ಗ್ರಂಥಮಾಲೆಯಲ್ಲಿ ಮುದ್ರಣಹೊಂದಿದೆ. ಕೃಷ್ಣ ಯಜುರ್ವೇದದಲ್ಲಿ, ಷ್ರೋರಾಡರ್ ಅವರು ಸಂಪಾದಿಸಿದ ಮೈತ್ರಾಯಣೀ ಸಂಹಿತೆ ಅಮೂಲ್ಯವಾದದ್ದು.

ಡಾ. ರಘುವೀರರ ಶ್ಲಾಘನೀಯ ಉದ್ಯಮದಿಂದ ೧೯೩೨ರಲ್ಲಿ ಕಪಿಷ್ಠಲಸಂಹಿತೆ ಹೊರಬಿದ್ದಿತು.

ಇದು ಭಾರತೀಯ ಸಂಶೋಧನೆಗೆ ಕೀರ್ತಿತಂದ ಗ್ರಂಥಗಳಲ್ಲಿ ಒಂದು. ಶುಕ್ಲ ಯಜುರ್ವೇದ ಸಂಹಿತೆ ಮೂರು ಕಡೆ ಮುದ್ರಣ ಹೊಂದಿದೆ. ಡಾ. ಎಲ್. ಸಿ. ಬ್ಯಾರೆಟ್ ಅವರು ವಹಿಸಿದ ಶ್ರಮದಿಂದ ಅಥರ್ವವೇದದ ಕಾಶ್ಮೀರಪಾಠವು ಪೂರ್ಣ ವಾಗಿ ಪ್ರಕಾಶನಹೊಂದಿತು. ಡಾ. ರಘುವೀರರು ಪೈಪ್ಪಲಾದ ಸಂಹಿತೆಯ ಪಾಠವನ್ನು ನಿರ್ಣಯಿಸಿ ಅಚ್ಚು ಹಾಕಿಸಿದ್ದಾರೆ.

ಇದಲ್ಲದೆ ಎಲ್ಲ ವೇದಗಳ ಮೂಲ ಗ್ರಂಥಮಾತ್ರವನ್ನೊಳಗೊಂಡ ಸಣ್ಣ ಸಂಪುಟ ಗಳೂ ಈಚೆಗೆ ಸಿಕ್ಕುವಂತಾಗಿದೆ. ಸಾಮಾನ್ಯ ಜನರ ಉಪಯೋಗಕ್ಕೆ ಇವು ಪ್ರಶಸ್ತ ವಾಗಿವೆ; ಸುಲಭ ಬೆಲೆಗೆ ಸಿಕ್ಕುವುವು. ಈ ಉದ್ಯಮದ ಕೀರ್ತಿ ಔಂಧ್ ದೇಶದ ಶ್ರೀ ಸಾತವಳೇಕರ್ ಅವರಿಗೂ ಅಜ್ಮೀರಿನ ವೈದಿಕ ಯಂತ್ರಾಲಯದವರಿಗೂ ಸೇರಿದುದು.

ಬ್ರಾಹ್ಮಣ ಗ್ರಂಥ ಭಂಡಾರಕ್ಕೆ ಕೆಲವು ಮುಖ್ಯ ಗ್ರಂಥಗಳು ಸೇರಿಸಲ್ಪ ಟ್ಟಿರುವುವು.

ಶ್ರೀ ಕಾಲಂಡ್ ಅವರು ಸಂಪಾದಿಸಿದ ಶತಪಥ ಬ್ರಾಹ್ಮಣದ ಕಾಣ್ವಪಾಠ, (ಇದುವರೆಗೆ ಉಪಲಬ್ಧವಾಗಿದ್ದುದು ಮಾಧ್ಯಂದಿನ ಪಾಠ) ಮತ್ತು ತಾಂಡ್ಯ ಮಹಾ ಬ್ರಾಹ್ಮಣ (೨) ಡಾ. ರಘುವೀರರಿಂದ ಪ್ರಕಾಶಹೊಂದಿದ ಜೈಮಿನೀಯ ಬ್ರಾಹ್ಮಣ. (೩) ಶ್ರೀಯುತ ಗಾಸ್ಟ್ರ ಅವರು ಪ್ರಕಟಿಸಿದ ಗೋಪಥ ಬ್ರಾಹ್ಮಣ.

ಉಪನಿಷದ್ಗ್ರಂಥಾವಳಿಯು ಹೊಸದಾಗಿ ಪ್ರಕಾಶಹೊಂದಬೇಕಾದ ಅಗತ್ಯವಿಲ್ಲ. ಈ ಕಡೆಗೆ ಪಾಶ್ಚಾತ್ಯರ ಗಮನ ಹೋಗುವುದಕ್ಕೆ ಮೊದಲೇ ನಮ್ಮವರ ಗಮನವೂ ಹೋಗಿದ್ದುದರಿಂದ ಮುಖ್ಯಗ್ರಂಥಗಳು ಅನುಪಲಬ್ಧವಾಗುವ ಸ್ಥಿತಿಗೆ ಬರಲಿಲ್ಲ. ಅಂತು ಕಳೆದ ೨೫ ವರ್ಷಗಳಲ್ಲಿ ವಿವಿಧ ಭಾಷ್ಯ ಮತ್ತು ಟೀಕಾ ಸಾಮಾಗ್ರಿಗಳೊಡನೆ ಅನೇಕ ಉಪನಿಷತ್ತುಗಳು ಪುನಃ ಪ್ರಕಾಶನಹೊಂದಿವೆ. ಛಾಗಲೇಯ, ಆರ್ಷೇಯ, ಶೌನಕ ಮತ್ತು ಬಾಷ್ಕಲ ಮಂತ್ರೋಪನಿಷತ್ತುಗಳು ಹೊಸದಾಗಿ ಪ್ರಕಟವಾಗಿವೆ.

ವೇದಾಂಗಗಳು: (೧) ನಿರುಕ್ತಭಾಗದಲ್ಲಿ ಉತ್ತಮಸಂಶೋಧನೆ ನಡೆದು, ಬೇರೆ ಬೇರೆ ವ್ಯಾಖ್ಯಾನಗಳೊಡನೆ ಗ್ರಂಥವು ಅಚ್ಚುಕಟ್ಟಾಗಿ ಪ್ರಕಟಿಸಲ್ಪಟ್ಟಿದೆ. ಈ ಉದ್ಯಮದಲ್ಲಿ ಶ್ರೀಗಳಾದ ರಾಜವಾಡೆ, ಲಕ್ಷ್ಮಣ ಸರೂಪ್, ಎಚ್. ಸ್ಕೋಲ್ಡ್ ಇವರು ವಂದನಾರ್ಹರು.

(೨) ಕಲ್ಪಭಾಗದಲ್ಲಿ ನಾನಾ ಶಾಖೆಗಳಿಗೆ ಸಂಬಂಧಪಟ್ಟ ಶ್ರೌತ, ಗೃಹ್ಯ ಮತ್ತು ಧರ್ಮ ಸೂತ್ರಗಳು (ಕೆಲವು ವೇಳೆ ವ್ಯಾಖ್ಯಾನ ಸಹಿತ) ಮುದ್ರಣಹೊಂದಿವೆ.

ಈ ಭಾಗದಲ್ಲಿ, ಡಾ. ಕಾಲಂಡ್ ಮತ್ತು ಅವರಿಂದ ಸ್ಫೂರ್ತಿಹೊಂದಿ ಅವರ ಶಿಷ್ಯರಾದ ಶ್ರೀಮತಿ ಗೆಲ್ಡರ್ ಮತ್ತು ಡಾ. ರಘುವೀರ ಇವರು ಕೆಲಸಮಾಡಿರುವರು.

(೩) ವ್ಯಾಕರಣ ಮತ್ತು ಶಿಕ್ಷೆ:—ಈ ಭಾಗದಲ್ಲಿ ಋಕ್ ಪ್ರಾತಿಶಾಖ್ಯ, ಕಾತ್ಯಾಯನರ ಶುಕ್ಲಯಜುಃ ಪ್ರಾತಿಶಾಖ್ಯ, ಪಾಣಿನೀಯ ಶಿಕ್ಷಾ, ಅಥರ್ವವೇದ ಪರಿಶಿಷ್ಟ ಮಾಹಿಷೇಯ ಭಾಷ್ಯದೊಡನೆ ತೈತ್ತಿರೀಯ ಪ್ರಾತಿಶಾಖ್ಯ ಮೊದಲಾದ ಅನೇಕ ಗ್ರಂಥಗಳು ಈಗಾಗಲೇ ಹೊರಬಿದ್ದಿವೆ.

(೪) ವೇದಾಂಗ ಜ್ಯೋತಿಷದಲ್ಲೂ ತಕ್ಕಮಟ್ಟಿನ ಕೆಲಸ ನಡೆದಿದೆ. ಕೀ. ಶೇ. ಡಾ. ಆರ್. ಶಾಮಶಾಸ್ತ್ರಿ ಅವರ ಸಂಶೋಧನೆಗಳು ಪ್ರಸಿದ್ಧ.

(೫) ವೇದಾಂಗ ಛಂದಸ್ಸಿನಲ್ಲಿ ಹೆಚ್ಚು ಸಂಶೋಧನೆ ನಡೆದಿಲ್ಲ.

ಗ್ರಂಥ ಸಂಶೋಧನ ಮತ್ತು ಪ್ರಕಾಶನದ ಜೊತೆಗೆ, ಆಧುನಿಕ ವ್ಯಾಸಂಗಕ್ಕೆ ಬೇಕಾದ ಕೋಶಸಂಕಲನ, ವ್ಯಾಖ್ಯಾನ ಪರಂಪರೆಗಳ ಒದಗಣೆ, ತತ್ವ ವಿಚಾರ, ವಿಮರ್ಶೆ ಮತ್ತು ಭಾಷಾಂತರಕರಣದಲ್ಲಿ ಅನುಸರಿಸಬೇಕಾದ ಮಾರ್ಗ ಮೊದಲಾದ ಭಾಗಗಳಲ್ಲೆಲ್ಲ ಮಹತ್ತರ ಉದ್ಯಮಗಳನ್ನು ಕೈಕೊಳ್ಳಲಾಗಿದೆ. ಒಟ್ಟಿನಲ್ಲಿ ವೈದಿಕ ಭಾಗದ ಸಂಶೋಧನೆ ಬಹುವಾಗಿ ಮುಂದುವರಿದಿದೆ. ಗ್ರಂಥಸಂಪಾದನೆಯ ಮುಖ್ಯತೆಯನ್ನು ಕುರಿತು ಒಂದು ಮಾತನ್ನು ಇಲ್ಲಿ ಹೇಳಬಹುದು. ಭಾರತೀಯ ಸಂಸ್ಕೃತಿಯ ನವೀಕರಣದಲ್ಲಿ ಆಸಕ್ತರಾದವರು ಅದರ ಹಿಂದಿನ ಸಂಸ್ಕೃತಿಯನ್ನು ಅವಶ್ಯ ತಿಳಿಯಬೇಕು. ಇದಕ್ಕೆ ನಮಗಿರುವ ಏಕಮಾತ್ರ ಆಧಾರ ಗ್ರಂಥವೆಂದರೆ ವೇದಾದಿಗಳು. ಇವು ಅಳಿಯದಂತೆ ನೋಡಿಕೊಂಡು ಪಾಠವನ್ನು ನಿಶ್ಚಯಿಸಿ ಆ ತಳಹದಿಯ ಮೇಲೆ ಯಾವ ವಿಚಾರ ಸೌಧವನ್ನು ಕಟ್ಟಿದರೂ ಗ್ರಾಹ್ಯವಾದೀತು. ಇಲ್ಲದಿದ್ದರೆ ಎಲ್ಲ ಗಾಳಿಗೋಪುರವಾಗುವುದು. ಆದುದರಿಂದ ನಿರ್ದುಷ್ಟವಾದ ಗ್ರಾಂಥಿಕ ಆಧಾರಗಳ ಮೇಲೆ ವಿಮರ್ಶೆಯನ್ನು ಬೆಳಸಿ ಪ್ರಕೃತ ಜೀವನಕ್ಕೆ ಉಪಯೋಗವಾಗುವ ಅಂಶಗಳನ್ನು ಮನಗಂಡು ಆಧುನಿಕ ಸಂಸ್ಕೃತಿಯನ್ನು ರೂಪುಗೊಳಿಸುವುದು ನಮ್ಮ ಕರ್ತವ್ಯ. ಇದೇ ಪ್ರಾಚ್ಯ ಸಂಶೋಧನೆಯ ಮುಖ್ಯ ಪ್ರಯೋಜನ.

ವೈದಿಕ ಸಂಸ್ಕೃತಿಯ ಸ್ವರೂಪ, ವೇದಗಳ ಕಾಲ, ಕರ್ತೃಗಳು, ಮೊದಲಾದ ವಿಚಾರಗಳನ್ನು ಕುರಿತು ವಿಸ್ತಾರವಾಗಿ ಸಾಹಿತ್ಯ ಬೆಳೆದಿದೆ. ಭೂಸಂಶೋಧನೆಯ ತೀವ್ರತೆಯಿಂದಲೂ ಅನೇಕ ವಿಷಯಗಳು ಬೆಳಕಿಗೆ ಬಂದಿವೆ. ಹರಪ್ಪ, ಮೊಹೆಂಜೊದರೋ ಮೊದಲಾದ ಕಡೆಗಳ ಸಂಶೋಧನೆಯಿಂದ ಗಹನವಾದ ಪ್ರಶ್ನೆಗಳೆದ್ದಿವೆ. ತುಲನಾತ್ಮಕ ಭಾಷಾಶಾಸ್ತ್ರ, ದೈವಮೀಮಾಂಸೆ (Comparative Mythology) ಮತವಿಜ್ಞಾನ (Religion) ಮೊದಲಾದ ಆಧುನಿಕ ಶಾಸ್ತ್ರಗಳು ಅನೇಕ ವಿಷಯ

ಗಳಿಗೆ ಪರಿಪೋಷವನ್ನು ಒದಗಿಸುತ್ತಿವೆ. ವೈದಿಕ ಸಂಸ್ಕೃತಿಗೂ ಹರಪ್ಪ, ಮೊಹೆಂಜೊದರೋ ಸಂಸ್ಕೃತಿಗೂ ಇರುವ ಸಂಬಂಧವೆಂತಹದು? ಇವೆರಡರಲ್ಲಿ ಯಾವುದು ಹಿಂದಿನದು? ಸಿಂಧೂ ವೈದಾನದ ಪುರಾತನ ಸಂಸ್ಕೃತಿ ದ್ರಾವಿಡ ಸಂಸ್ಕೃತಿಯೆಂದು ನಿರ್ಧರಿಸಬಹುದೆ? ಎಂಬ ಅನೇಕ ವಿಚಾರಗಳನ್ನು ಮಥಿಸಿ ನಾನಾ ವಿಧವಾದ ಅಭಿಪ್ರಾಯಗಳನ್ನು ಹೊರಗೆಡಹಲಾಗಿದೆ. ಆದರೆ ಸಿದ್ಧಾಂತವೆಂದು ಎಣಿಸಬಹುದಾದ ಅಂಶಗಳು ಕಡಿಮೆ. ನಾನಾಭಾಗಗಳಲ್ಲಿ ನಡೆದಿರುವ ಸಂಶೋಧನೆಯನ್ನೆಲ್ಲ ಕ್ರೋಢೀಕರಿಸಿ ನಿಷ್ಪಕ್ಷಪಾತ ದೃಷ್ಟಿಯಿಂದ ಎಲ್ಲವನ್ನೂ ವಿಮರ್ಶಿಸಿ ನಿರ್ಣಯಾತ್ಮಕವಾದ ಗ್ರಂಥಗಳು ರಚಿತವಾಗಬೇಕು.

ವೈದಿಕ ಭಾಗದಲ್ಲಿ ಇನ್ನೂ ಅನೇಕ ಬಗೆಯ ಸಂಶೋಧನೆ ನಡೆದು ಅಸಂಖ್ಯಾತ ಲೇಖನಗಳು ಸಿಕ್ಕುತ್ತವೆ. ಈ ವಿವರಗಳನ್ನೆಲ್ಲ ಬಿಟ್ಟು ಕಾವ್ಯ ಪ್ರಪಂಚದಲ್ಲಿನ ಮುನ್ನಡೆಯನ್ನು ಪರಿಶೀಲಿಸೋಣ.

ಒಂದೇ ಮಾತಿನಲ್ಲಿ ಶ್ರೀ ಎಮ್. ಕೃಷ್ಣಮಾಚಾರ್ಯರ "ಸಂಸ್ಕೃತ ಸಾಹಿತ್ಯ ಚರಿತ್ರೆ"ಯು ಈ ಭಾಗದಲ್ಲಿ ನಡೆದಿರುವ ಕೆಲಸವನ್ನೆಲ್ಲ ನಿರೂಪಿಸುತ್ತದೆನ್ನಬಹುದು.

ರಾಠೋಡ ವಂಶ, ವಸಂತವಿಲಾಸ, ಸಾಹಿತ್ಯರತ್ನಾಕರ ಮೊದಲಾದ ಐದಾರು ಮಹಾ ಕಾವ್ಯಗಳೂ, ಮೋಹಪರಾಜಯ, ಹಮ್ಮೀರಮದಮರ್ದನ ಮೊದಲಾದ ಸುಮಾರು ಹದಿಮೂರು ನಾಟಕಗಳೂ ಹೊಸದಾಗಿ ಬೆಳಕಿಗೆ ಬಂದಿವೆ. ಐದಾರು ಚಂಪೂ ಗ್ರಂಥಗಳ ಮುದ್ರಣವಾಗಿದೆ. ಕವಿಗಳ ದೇಶ, ಕಾಲ, ಸಾಮರ್ಥ್ಯಗಳನ್ನು ಕುರಿತ ವಿಮರ್ಶೆ ನಡೆದಿದೆ. ಭಾಸನಿಗೆ ಹೆಚ್ಚು ಪ್ರಾಮುಖ್ಯ ದೊರಕಿದೆಯೆನ್ನಬಹುದು. ಕಡೆಯದಾಗಿ, ಮೂಲ ಗ್ರಂಥಗಳ ಪಾಠ ಸಂಶೋಧನ, ಭಾಷಾಂತರಕರಣ, ಆಧುನಿಕ ವ್ಯಾಸಂಗಕ್ಕೆ ಬೇಕಾದ ಟೀಕೆ ಮೊದಲಾದ ಪರಿಷ್ಕರಣವೂ ಚೆನ್ನಾಗಿ ಮಾಡಲ್ಪಟ್ಟಿದೆ. ಅಲಂಕಾರ ಭಾಗದಲ್ಲಿ ವಕ್ರೋಕ್ತಿಜೀವಿತ, ವ್ಯಕ್ತಿವಿವೇಕ, ಸರಸ್ವತೀ ಕಂಠಾಭರಣ, ಅಲಂಕಾರ ಕೌಸ್ತುಭ, ಧ್ವನ್ಯಾಲೋಕ, ಮೊದಲಾದ ಅನೇಕ ಗ್ರಂಥಗಳು ಬೆಳಕಿಗೆ ಬಂದಿವೆ. ಪ್ರಾಚೀನ ಆಚಾರ್ಯರಾದ ಭಾಮಹ, ದಂಡಿ ಮೊದಲಾದವರ ಗ್ರಂಥಗಳು ವ್ಯಾಖ್ಯಾನಗಳೊಡನೆ ದ್ವಿತೀಯ ತೃತೀಯ ಮುದ್ರಣಗಳನ್ನೂ ಹೊಂದಿವೆ. ಕರ್ತೃಗಳ ದೇಶ ಕಾಲ ವಿಚಾರವೂ ನಿರರ್ಗಳವಾಗಿ ಬೆಳೆದಿದೆ. ಅನೇಕ ಗ್ರಂಥಗಳಿಗೆ ಆಧುನಿಕರಿಂದಲೇ ವ್ಯಾಖ್ಯಾನಗಳು ರಚಿಸಲ್ಪಟ್ಟಿರುವುದು ಪ್ರಶಂಸಾರ್ಹ. ಹೀಗೆ ನಾನಾವಿಧ ಪ್ರಯತ್ನಗಳಿಂದ ಕಾವ್ಯಪ್ರಕಾಶ, ಧ್ವನ್ಯಾಲೋಕ, ವ್ಯಕ್ತಿವಿವೇಕ, ರಸಗಂಗಾಧರ ಮೊದಲಾದ ಉದ್ಗ್ರಂಥಗಳು ಓದುಗರಿಗೆ ಹೆಚ್ಚು ಹೆಚ್ಚು ಪರಿಚಿತವಾಗುತ್ತಿರುವುದು ಒಂದು ಸಂತೋಷದ ವಿಚಾರ. ನಾಟ್ಯಶಾಸ್ತ್ರದ ಪುನರುಜ್ಜೀವನದ ವಿಷಯದಲ್ಲಿ ಆಸಕ್ತಿ

ಹೆಚ್ಚುತ್ತಿದೆ. ನಾಟ್ಯದರ್ಪಣ, ಅಭಿನಯದರ್ಪಣ, ನಾಟಕಲಕ್ಷಣ, ರತ್ನಕೋಶ ಮೊದಲಾದ ಮುಖ್ಯ ಗ್ರಂಥಗಳು ಪ್ರಕಟವಾಗಿವೆ. ಭರತನ 'ನಾಟ್ಯಶಾಸ್ತ್ರ'ದ ಪಾಠವನ್ನು ಸಮರ್ಪಕವಾಗಿ ನಿರ್ಧರಿಸಿ ಉತ್ತಮವಾದ ಅಭಿನವ ಭಾರತೀ ವ್ಯಾಖ್ಯಾನ ದೊಡನೆ ಪ್ರಕಟಿಸುವ ಉದ್ಯಮವು ಇನ್ನೂ ಚೆನ್ನಾಗಿ ನೆರವೇರಿಲ್ಲ. ಒಟ್ಟಿನಲ್ಲಿ, ಅಲಂಕಾರ ಭಾಗದಲ್ಲಿ ಡಾ. ಎಸ್. ಕೆ. ದೇ; ಮ. ಮ. ಕುಪ್ಪಸ್ವಾಮಿ ಶಾಸ್ತ್ರಿಗಳು; ಪ್ರೊ. ಎಂ. ಹಿರಿಯಣ್ಣ, ಶಂಕರನ್, ರಾಘವನ್, ಶ್ರೀಗಳಾದ ಪಿ. ಕೆ. ಗೋಡೆ, ಪಂಚಾಪಗೇಶ ಶಾಸ್ತ್ರಿಯಾರ್, ವಿ. ಎ. ರಾಮಸ್ವಾಮಿ ಶಾಸ್ತ್ರಿಯಾರ್, ಡಾ. ಲಾಹಿರಿ, ಮ. ಮ. ಪಿ. ವಿ. ಕಾಣೆ ಮೊದಲಾದ ಅನೇಕರು ಕೆಲಸಮಾಡಿರುತ್ತಾರೆ.

ಇಷ್ಟಲ್ಲದೆ, ಸಂಸ್ಕೃತ ಕವಯಿತ್ರಿಗಳು, ಸಂಸ್ಕೃತ ವಾಙ್ಮಯಕ್ಕೆ ಮುಸಲ್ಮಾನ ರಿಂದ ಆಗಿರುವ ಉಪಕಾರ, ಸಂಸ್ಕೃತ ನಾಟಕಗಳಿಂದ ಊಹಿಸಬಹುದಾದ ಸಾಮಾ ಜಿಕ ಪರಿಸ್ಥಿತಿ—ಮೊದಲಾದ ನಾನಾ ವಿಷಯಗಳನ್ನು ಕುರಿತ ಹಲವಾರು ಲೇಖನಗಳು ಹೊರಬಿದ್ದಿವೆ. ಕವಿ ಕಾವ್ಯವಿಚಾರದಲ್ಲೂ ಭಿನ್ನಾಭಿಪ್ರಾಯಗಳು ಇಲ್ಲದೆ ಇಲ್ಲ. ನಾನಾ ಅಭಿಪ್ರಾಯಗಳು ಹರಡುತ್ತಿವೆ. ಎಲ್ಲವನ್ನೂ ಪುನಃ ವಿಮರ್ಶಿಸಿ ಸಮಸ್ಯೆ ಗಳನ್ನು ಪರಿಹರಿಸುವ ಕೆಲಸ ಇನ್ನೂ ಸಮರ್ಪಕವಾಗಿ ನಡೆಯಬೇಕಾಗಿದೆ.

ಭಾಷಾಶಾಸ್ತ್ರ—ಪ್ರಾಚ್ಯ ವಿದ್ಯೆಯೆಂದರೆ ಬರಿಯ ಸಂಸ್ಕೃತ ವಾಙ್ಮಯವೆಂಬ ತಪ್ಪುಭಾವನೆ ಪ್ರಾಯಃ ಈಗ ಇರಲಾರದು. ಇದಕ್ಕೆ ಮೂಲಕಾರಣ ಭಾಷಾ ಶಾಸ್ತ್ರದ ಬೆಳವಣಿಗೆಯೆಂದು ಹೇಳಬಹುದು. ವೈದಿಕಭಾಷೆಯ ಸಂಶೋಧನೆಯು ಪ್ರಾರಂಭವಾದ ಮೇಲೆ ಭಾಷಾ ಶಾಸ್ತ್ರದಲ್ಲಿ ಪ್ರಗತಿ ಹೆಚ್ಚಿತು. ಇದರ ಜೊತೆಗೆ ಈಚೆಗೆ ಉಂಟಾಗಿರುವ ಸಂಸ್ಕೃತಿಗಳ ಮಿಲನವೂ ನಾನಾ ಭಾಷೆಗಳಲ್ಲಿ ಪಂಡಿತರಿಗೆ ಆಸಕ್ತಿ ಹುಟ್ಟಿಸಿತು. ಮೊಟ್ಟಮೊದಲು ಭಾಷಾಶಾಸ್ತ್ರ ಪಾಶ್ಚಾತ್ಯರಲ್ಲಿ ಹುಟ್ಟಿತು. ಭಾರತೀಯರ ಪೈಕಿ ಡಾ. ರಾ. ಗೋ. ಭಾಂಡಾರಕರ್ ಅವರು ಮೊದಲು ಆಸಕ್ತಿ ವಹಿಸಿ ಕೆಲಸಮಾಡಿದರು. ಅನಂತರ ಈ ಶಾಸ್ತ್ರವು ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ಪಠ್ಯಭಾಗವಾಗಿ ಸಂಶೋಧನಕಾರ್ಯವು ಚುರುಕಾಗಿ ಸಾಗಿತು. ಶ್ರೀಗಳಾದ ಐ. ಜೆ. ಎಸ್. ತಾರಾಪುರ್ವಾಲ ಮತ್ತು ಪಿ. ಡಿ. ಗುಣೆ ಇವರು ಆದರ್ಶಪ್ರಾಯ ವಾದ ಗ್ರಂಥಗಳನ್ನು ರಚಿಸಿದರು. ಭರತಖಂಡದ ಭಾಷೆಗಳ ವಿಚಾರದಲ್ಲಿ ಸಂಶೋಧನೆ ನಡಸಿ ಒಂದು ವರದಿಯನ್ನು ಒಪ್ಪಿಸುವುದಕ್ಕಾಗಿ ಸರ್ಕಾರದಿಂದ ಒಂದು ಸಮಿತಿಯು ನೇಮಕವಾಯಿತು. ಭಾಷಾಶಾಸ್ತ್ರದ ಅಧ್ಯಯನಕ್ಕೆ ಸಂಸ್ಕೃತ, ಪ್ರಾಕೃತ, ವೈದಿಕ ಸಂಸ್ಕೃತ ಇವು ಮಾತ್ರವಲ್ಲದೆ ಜರ್ಮನ್, ಫ್ರೆಂಚ್, ಅವೆಸ್ತನ್, ಹಳೆಯ ಪರ್ಷಿ ಯನ್, ಹಳೆಯ ಇಂಗ್ಲಿಷ್, ಗ್ರೀಕ್, ಲ್ಯಾಟಿನ್ ಮೊದಲಾದ ಅನೇಕ ಪಾಶ್ಚಾತ್ಯ

ಭಾಷೆಗಳ ಜ್ಞಾನವು ಆವಶ್ಯಕವೆನಿಸಿತು. ಹೀಗೆ ಸಂಸ್ಕೃತದ ಪರಿಚಯದಿಂದ ಪಾಶ್ಚಾತ್ಯರಲ್ಲಿ ಅಂಕುರಿಸಿದ ಭಾಷಾಶಾಸ್ತ್ರದ ಎಲ್ಲೆ ದಿನದಿನಕ್ಕೂ ಹೆಚ್ಚಿತು. ತುಲನಾತ್ಮಕ ಭಾಷಾಶಾಸ್ತ್ರದಿಂದ ಸಂಸ್ಕೃತಿಗೆ ಸಂಬಂಧಪಟ್ಟ ಸಮಸ್ಯೆಗಳು ಬಗೆಹರಿಯುವ ಸೂಚನೆ ಕಂಡುಬಂದಿತು. ಸಂಸ್ಕೃತದ ತಿಳಿವಳಿಕೆ ಆವಶ್ಯಕವೆಂಬುದೂ ವ್ಯಕ್ತಪಟ್ಟಿತು.

ಈ ಒಟ್ಟು ಸಹಾಯಕ ವ್ಯುತ್ಪತ್ತಿಯನ್ನು ಹೊಂದಿದವರು ಈಗಲೂ ಇಲ್ಲಿ ಕಡಿಮೆ. ಒಂದೊಂದು ಭಾಗದಲ್ಲಿ ಕೆಲಕೆಲವರು ಅಳಿಲ ಸೇವೆ ಸಲ್ಲಿಸುತ್ತಿರುವರು.

ದ್ರಾವಿಡ ಭಾಗದಲ್ಲಿ ಶ್ರೀ ಆರ್. ಕೃಷ್ಣಮಾಚಾರ್ಯ, ಎಲ್. ವಿ. ರಾಮಸ್ವಾಮಿ ಐಯರ್, ಸಿ. ಆರ್. ಶಂಕರನ್, ಡಾ. ನಾರಾಯಣರಾವ್, ಕೆ. ರಾಮಕೃಷ್ಣಯ್ಯ, ಡಾ. ಎ. ಎನ್. ನರಸಿಂಹಯ್ಯ ಇವರು ಗಮನಾರ್ಹವಾದ ಗ್ರಂಥಗಳನ್ನು ರಚಿಸಿರುತ್ತಾರೆ. ಈ ಎಲ್ಲದರ ದೃಷ್ಟಿಯಿಂದ ಮೂಲ ದ್ರಾವಿಡ ಭಾಷೆ ಹೇಗಿದ್ದಿರಬಹುದೆಂದು ನಿರ್ಣಯಿಸಿ ಅದಕ್ಕೂ ಆರ್ಯ ಭಾಷೆಗೂ ಇರುವ ಸಂಬಂಧವನ್ನು ನಿಶ್ಚಯಿಸುವುದು ಮುಂದಿನ ಕೆಲಸ. ಈ ಎರಡು ಭಾಷೆಗಳ ಪೌರ್ವಾಪರ್ಯ, ಒಂದು ಇನ್ನೊಂದರ ಮೇಲೆ ಬೀರಿರುವ ಪ್ರಭಾವ ಇವು ನಿರ್ಣೀತವಾದಲ್ಲಿ ಈ ಎರಡು ಸಂಸ್ಕೃತಿಗಳಿಗೆ ಸಂಬಂಧಿಸಿದ ಅನೇಕ ಸಮಸ್ಯೆಗಳು ಬಗೆಹರಿದಾವು. ಭಾಷಾಶಾಸ್ತ್ರದ ಇತರ ಭಾಗಗಳಲ್ಲಿ ಡಾ. ಸಿದ್ಧೇಶ್ವರವರ್ಮ, ಡಾ. ಬನಾರಸಿದಾಸ್ ಜೈನ್, ಡಾ. ಬಾಬುರಾಮ್ ಸಾಕ್ಸೇನ, ಡಾ. ಎನ್. ಎಮ್. ಕತ್ರೇ, ಡಾ. ಮೊಹಿಯುದ್ದೀನ್ ಖಾದ್ರಿ ಮೊದಲಾದ ಕೆಲವರು ಅಲ್ಲಲ್ಲಿ ಭಾಷಾಶಾಸ್ತ್ರ ಸಂಘಗಳ ಆಶ್ರಯದಲ್ಲಿ ಸಂಶೋಧನೆ ನಡಸಿರುವರು.

ಆದರೂ ಒಟ್ಟಿನಲ್ಲಿ, ಭಾಷಾಶಾಸ್ತ್ರದ ವಿಸ್ತಾರವನ್ನೂ ಭಾರತೀಯ ಭಾಷೆಗಳ ಸಂಖ್ಯೆ ಮತ್ತು ವೈವಿಧ್ಯವನ್ನೂ ಗಮನಿಸಿದಲ್ಲಿ ಈಗ ನಡೆದಿರುವ ಕೆಲಸ ಸ್ವಲ್ಪ. ಇಲ್ಲಿನ ಸಂಶೋಧನೆ ಪಾಶ್ಚಾತ್ಯರ ಮಹತ್ತರವಾದ ಸಂಶೋಧನೆಯೊಡನೆ ಸರಿದೂಗುವಂತಿಲ್ಲ.

ಪ್ರಾಕೃತ ಭಾಷೆಗಳ ಪರಿಚಯವೂ ಅಷ್ಟಾಗಿ ಹೆಚ್ಚುತ್ತಿಲ್ಲ. ಈಗಿರುವ ತಿಳಿವು ಪ್ರಾಯಶಃ ಅನಿವಾರ್ಯವಾಗಿಯೋ ಎಂಬಂತೆ ಉಂಟಾಗಿದೆ. ಸಂಸ್ಕೃತ ನಾಟಕಗಳಲ್ಲಿ ಪ್ರಾಕೃತವಿರುವುದರಿಂದಲೂ ಹಿಂದಿನ ಜನಪದ ಸಾಹಿತ್ಯವು ಪ್ರಾಕೃತದಲ್ಲಿ ಹೆಚ್ಚಾಗಿ ಸಿಕ್ಕುವುದರಿಂದಲೂ ಪ್ರಾಕೃತದಲ್ಲಿ ಆಸಕ್ತಿ ಉಳಿದಿದೆಯೆನ್ನಬಹುದು.

ಭಾಸನ ನಾಟಕಗಳು ಬೆಳಕಿಗೆ ಬಂದಮೇಲೆ ಪ್ರಾಕೃತ ಹೆಚ್ಚು ಪರಿಚಿತವಾಯಿತು. ಅದರ ನಾನಾ ಪ್ರಭೇದಗಳ ವೈಶಿಷ್ಟ್ಯ, ವ್ಯತ್ಯಾಸ ಇವುಗಳನ್ನು ಮನಗಂಡು ಭಾಷಾಶಾಸ್ತ್ರದ ದೃಷ್ಟಿಯಿಂದ ಅಲ್ಲಿನ ಪದಗಳ ನಿಷ್ಪತ್ತಿಯನ್ನು ವಿವೇಚಿಸುವ ಶಾಂತಿ ಬಂದಿತು. ಸಾತವಾಹನ ಹಾಲನ 'ಗಾಥಾಸಪ್ತಶತಿ' ಯಿಂದ ಪ್ರಾಕೃತ ಹೆಚ್ಚು ಆದರಕ್ಕೆ ಪಾತ್ರವಾಯಿತು. ಕರ್ಪೂರಮಂಜರೀ, ಸೇತುಬಂಧ ಮೊದಲಾದ

ಗ್ರಂಥಗಳು ಬೆಳಕಿಗೆ ಬಂದುವು. ಇಷ್ಟಾದರೂ ಭಾಷಾಶಾಸ್ತ್ರದ ದೃಷ್ಟಿಯಿಂದ ಪ್ರಾಕೃತದ ಒಂದೊಂದು ಪ್ರಭೇದದ ಇತಿಹಾಸವನ್ನೂ ಪರಿಶೀಲಿಸಿ ಅದರ ಆವಿರ್ಭಾವ ಮತ್ತು ಬೆಳವಣಿಗೆಯನ್ನೂ ರೇಖಿಸುವ ಕೆಲಸ ಇನ್ನೂ ಸಮರ್ಪಕವಾಗಿ ನಡೆಯ ಬೇಕು. ಭರತಖಂಡದ ಆಧುನಿಕ ಭಾಷೆಗಳು ಹಿಂದಿನ ಭಾಷೆಗಳಿಂದ ಹೇಗೆ ಉತ್ಕ್ರಾಂತಿ ಹೊಂದಿದುವೆಂಬುದನ್ನು ವಿಮರ್ಶಿಸಬೇಕಾಗಿದೆ. ಪಾಶ್ಚಾತ್ಯರಲ್ಲಿ ಡಾ. ಎ. ಬಿ. ಕೀತ್, ಎ. ಸಿ. ವುಲ್ನರ್, ಸ್ಟೆನ್ ಕೊನೊ, ವೆಬರ್, ಸೀಗ್‌ಫ್ರೀಡ್, ಗೋಲ್ಡ್‌ಷ್ಮಿಟ್, ಕವೆಲ್, ಹೊಅರ್ನ್‌ಲೇ ಮೊದಲಾದವರವೂ, ಭಾರತೀಯರಲ್ಲಿ ಶ್ರೀಗಳಾದ ಕೆ. ಪಿ. ತ್ರಿವೇದಿ, ಎನ್. ಪಿ. ಪಂಡಿತ್, ಎಸ್. ಪಿ. ವಿ. ರಾಮಾನುಜ ಸ್ವಾಮಿ, ಡಾ. ಎ. ಎನ್. ಉಪಾಧ್ಯೆ ಮೊದಲಾದವರ ಸಂಶೋಧನೆಗಳೂ ಮುಖ್ಯವಾಗಿವೆ. ಡಾ. ಎಚ್. ಡಿ. ವೇಲಂಕರರ ಸೇವೆ ಸ್ತುತ್ಯವಾದ್ದು. ಅಪಭ್ರಂಶ ಪ್ರಾಕೃತ ಛಂದಸ್ಸಿನ ಸಂಬಂಧ ದಲ್ಲಿಯೂ ಇವರ ಕೆಲಸ ಗಣ್ಯವಾದುದು.

ಕಡೆಯದಾಗಿ, ಪ್ರಾಕೃತದಲ್ಲಿನ ಸಂಶೋಧನೆಯ ಬೆಳವಣಿಗೆಗೆ ಜೈನ ಪಂಡಿತರ ಬೆಂಬಲ ಬಹಳವಾಗಿ ದೊರಕಿದೆ. ಅನೇಕ ಜೈನ ಗ್ರಂಥಗಳು ಪ್ರಾಕೃತದಲ್ಲಿರುವುದ ರಿಂದ ಜೈನ ವಾಙ್ಮಯದ ಪುನರುಜ್ಜೀವನಕ್ಕಾಗಿ ಶ್ರಮಿಸುತ್ತಿರುವ ಆಧುನಿಕ ಜೈನ ಪಂಡಿತರು ಎರಡು ವಿಧದಲ್ಲಿಯೂ ಉಪಕಾರ ಮಾಡುತ್ತಿರುವರು. ಇತ್ತೀಚಿನವರೆಗೆ ಪ್ರಾಕೃತದಲ್ಲಿ ಅರ್ಧಮಾಗಧೀ, ಮಹಾರಾಷ್ಟ್ರೀ, ಶೌರಸೇನೀ ಎಂಬ ಭೇದಗಳು ಮಾತ್ರ ಪ್ರಾಮುಖ್ಯ ಹೊಂದಿದ್ದುವು. ಈಚೆಗೆ ಪೈಶಾಚೀ ಮತ್ತು ಅಪಭ್ರಂಶಗಳ ಲ್ಲಿಯೂ ಆಸಕ್ತಿ ಹೆಚ್ಚಿದೆ.

ಸಂಸ್ಕೃತ ವ್ಯಾಕರಣದಲ್ಲಿ ಸ್ವತಂತ್ರಸಂಶೋಧನೆ ಅಷ್ಟಾಗಿ ಮುಂದು ವರಿದಿಲ್ಲ. ಭಾಷಾಶಾಸ್ತ್ರದ ಮಿಶ್ರಣದಿಂದ ಶುದ್ಧ ವ್ಯಾಕರಣದ ಬೆಳವಣಿಗೆಗೆ ತಡೆ ಯುಂಟಾಗಿದೆ. ವ್ಯಾಕರಣದಲ್ಲಿ ನಡೆಯಬೇಕಾದ ಮುಖ್ಯ ಕೆಲಸವೇನೆಂದರೆ—(೧) ಭಿನ್ನವ್ಯಾಕರಣ ಸಂಪ್ರದಾಯಗಳ ಹೃದಯವನ್ನು ಕಂಡು ವಿವರಿಸುವುದು; (೨) ವ್ಯಾಕರಣದ ಸುಲಭತೆಗೆ ಮಾರ್ಗವನ್ನು ಹುಡುಕುವುದು. ಇದು ಕೇವಲ ಕೆಲವು ಪಠ್ಯ ಪುಸ್ತಕಗಳ ರಚನೆಯಿಂದ ನಡೆಯತಕ್ಕುದಲ್ಲ. ಭಾಷಾಶಾಸ್ತ್ರಜ್ಞಾನದಿಂದ ವ್ಯಾಕರಣ ನಿಯಮಗಳನ್ನು ಒರೆಹಚ್ಚಿ ಅವುಗಳ ತತ್ವವನ್ನು ತಿಳಿಸುವಂತಹ ಗ್ರಂಥ ಗಳು ಹೊರಬೀಳಬೇಕು. ವ್ಯಾಕರಣ ನಿಯಮಗಳು ಅಡಿಗಡಿಗೆ ತೊಂದರೆಕೊಡದೆ ಶುದ್ಧಪ್ರಯೋಗಗಳು ಅನಾಯಾಸವಾಗಿ ಉಪಯೋಗಕ್ಕೆ ಬರುವಂತೆ ವ್ಯಾಕರಣ ಶಾಸ್ತ್ರದ ಅಧ್ಯಯನ ನಡೆಯಬೇಕು.

ಪುರಾಣ ಮತ್ತು ಇತಿಹಾಸ

ಇತಿಹಾಸ ಪುರಾಣಗಳಿಗೆ ಭರತಖಂಡದಲ್ಲಿ ಐದನೆಯ ವೇದವೆನ್ನುವರು. ಇದಕ್ಕೆ ತಕ್ಕಂತೆ ಪುನರುಜ್ಜೀವನ ಕಾರ್ಯವೂ ಚೆನ್ನಾಗಿ ನಡೆದಿದೆ. ಕಳೆದ ೨೫ ವರ್ಷಗಳಲ್ಲಿ ನಡೆದಿರುವ ಮುಖ್ಯವಾದ ಕೆಲಸವೆಂದರೆ ಮಹಾಭಾರತದ ಸಂಸ್ಕರಣಕ್ಕೂ ಪ್ರಕಟನೆಗೂ ಭಾರತೀಯರು ಕೈಹಾಕಿದ್ದು. ಇಡಿಯ ಭರತಖಂಡಕ್ಕೆ ಗೌರವ ತರತಕ್ಕ ಈ ಮಹೋದ್ಯಮವನ್ನು ಕೈಕೊಂಡುದಕ್ಕಾಗಿ ಭಾಂಡಾರಕರ್ ಸಂಸ್ಥೆಯನ್ನು ಎಷ್ಟು ಅಭಿನಂದಿಸಿದರೂ ಸಾಲದು. ಗತಿಸಿದ ಶ್ರೀಯುತ ಡಾ. ಸುಕಥನಕರ್ ಅವರ ಮುಖ್ಯನೇತೃತ್ವದಲ್ಲಿ ಈ ಕೆಲಸ ೧೯೨೫ರಲ್ಲಿ ಮೊದಲಾಯಿತು. ಬಹು ಯಶಸ್ವಿಯಾಗಿ ನಡೆದು ಅರಣ್ಯಕಪರ್ವ ಪೂರ್ತಿ ಪ್ರಕಟನೆ ಹೊಂದಿತು. ದುರದೃಷ್ಟವಶದಿಂದ ಆ ಮಹನೀಯ ವಿದ್ವಾಂಸರು ಮಧ್ಯದಲ್ಲೇ ಕಾಲವಶರಾದರು. ಆದರೂ ಅವರು ತೋರಿಸಿರುವ ಪಾಠನಿರ್ಧಾರಣ ಮಾರ್ಗವು ಅವರ ಯಶಶ್ಶರೀರದಂತೆ ನಿಂತಿರುವುದರಿಂದ ಈ ಮಹೋದ್ಯಮವು ಕೊನೆಗಾಣಬಹುದೆಂದು ಆಶಿಸಬಹುದಾಗಿದೆ. ಶ್ರೀ ಸುಕಥನಕರ್ ಅವರ ಪೀಠಿಕೆಯನ್ನೂ ಅವರ ಸಂಶೋಧನಾ ಮಾರ್ಗವನ್ನೂ ಮೆಚ್ಚದವರಿಲ್ಲ. ಇವರ ಜೊತೆಯಲ್ಲಿ ಮೊದಲಿನಿಂದ ಕೆಲಸಮಾಡಿದ ಅನೇಕ ಪ್ರಸಿದ್ಧ ಸಂಶೋಧಕರು ಈಗಲೂ ಈ ಕೆಲಸವನ್ನು ತಮ್ಮ ಅಮೂಲ್ಯ ಅನುಭವ ಬಲದಿಂದ ಮುಂದುವರಿಸುತ್ತಿರುವರು. ಒಟ್ಟಿನಲ್ಲಿ ಮಹಾಭಾರತದ ಸಂಸ್ಕರಣವು ಭಾರತೀಯ ಸಂಶೋಧನೆಗೆ ಕಿರೀಟಪ್ರಾಯವಾಗುವುದು.

ಭಗವದ್ಗೀತೆಯ ವಿಚಾರದಲ್ಲಿ ಅಸಂಖ್ಯಾತ ವ್ಯಾಖ್ಯಾನ ಮತ್ತು ವಿವರಣೆಗಳು ಹುಟ್ಟಿವೆ. ಭಾಷಾಂತರಕರಣ, ಪುನರ್ಮುದ್ರಣ ಕಾರ್ಯಗಳೂ ಎಂದಿನಂತೆ ನಡೆಯುತ್ತಲೇ ಇವೆ. ಆದರೂ ಇಡಿಯ ಪ್ರಪಂಚದಲ್ಲಿ ನೋಡಿದರೆ ಗೀತೆಯ ರಹಸ್ಯಾರ್ಥವು ಇನ್ನೂ ಬಹಳ ಮಂದಿಗೆ ತಿಳಿದಿಲ್ಲವೆಂಬಂತೆ ಗೀತಾಪ್ರಚಾರ, ಸಂಶೋಧನೆಗಳು ನಡೆಯುತ್ತಲೇ ಇವೆ. ಇದೇ ಸಮಯದಲ್ಲಿ ಬೃಹದ್ಭಾರತದ ಗೀತಾಪಾಠಗಳು ಮುಂತಾದ ಅಂಶಗಳಲ್ಲಿಯೂ ವಿಚಾರ ನಡೆದಿದೆ.

ರಾಮಾಯಣದ ಪಾಠನಿರ್ಧಾರಣದ ವಿಷಯದಲ್ಲೂ ಒಂದೆರಡು ಉದ್ಯಮಗಳು ತಲೆದೋರಿವೆ. ಆದರೆ ತೃಪ್ತಿಕರವಾಗಿಲ್ಲ.

ಪುರಾಣಗಳ ಪಾಠವನ್ನು ನಿರ್ಣಯಿಸಿ ಪ್ರಕಟಿಸುವ ಉದ್ಯಮವನ್ನು ಇದುವರೆಗೆ ಯಾರೂ ಕೈಕೊಂಡಿಲ್ಲ. ಶ್ರೀಯುತ ಪಾರ್ಗಿಟರ್ ಅವರು ಅಭಿಪ್ರಾಯಪಡುವಂತೆ, ಪುರಾಣಗಳ ಕೂಲಂಕಷ ಸಂಶೋಧನೆಯಿಂದ, ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಅನೇಕ ಸಮಸ್ಯೆಗಳು ಬಗೆಹರಿಯಬಹುದು. ಈ ದೃಷ್ಟಿಯಿಂದ ಪುರಾಣಗಳ ಪರಿಚಯ ಇನ್ನೂ ಹೆಚ್ಚಬೇಕು.

ಮೈಸೂರಿನಲ್ಲಿ ನಮ್ಮ ಶ್ರೀಮನ್ಮಹಾರಾಜರವರ ಆಶ್ರಯದಲ್ಲಿ ಪುರಾಣಗಳ ಪ್ರಕಟನೆಯೂ ಪ್ರಚಾರವೂ ನಡೆಯುತ್ತಿರುವುದು ಶ್ಲಾಘನೀಯವಾಗಿದೆ. ಪರೀಕ್ಷಾರ್ಥವಾಗಿ ಎಂಬಂತೆ ಮುದ್ರಣ ಮತ್ತು ಪ್ರಚಾರ ಕೆಲಸಗಳು ಮಿತವಾಗಿ ನಡೆಯುತ್ತಿವೆಯೆಂದು ಭಾವಿಸಬಹುದು. ಈ ಉದ್ಯಮಕ್ಕೆ ವಿದ್ವಾಂಸರ ಪ್ರೋತ್ಸಾಹ ಮತ್ತು ಸಹಕಾರಗಳು ಚೆನ್ನಾಗಿ ದೊರೆತು ಪುರಾಣಗಳ ಪಾಠವನ್ನು ಕ್ರಮವಾಗಿ ಪ್ರಮಾಣಬದ್ಧವಾಗಿ ನಿರ್ಣಯಿಸಿ ಪ್ರಕಟಿಸಿದಲ್ಲಿ ಒಂದು ಮಹಾಕಾರ್ಯವನ್ನು ಸಾಧಿಸಿದಂತಾಗುವುದು. ಹಾಗೆಯೇ ಕನ್ನಡ ಭಾಷಾಂತರ ಮತ್ತು ವ್ಯಾಖ್ಯಾನಗಳೂ ಈಗಿನಂತೆ ಪ್ರಕಟವಾದರೆ ಅದರ ಪ್ರಯೋಜನ ಹಲವು ಮಡಿಯಾಗುವುದು.

ಪುರಾಣಗಳಿಗೆ ಸಂಬಂಧಿಸಿದ ಇತರ ಅನೇಕ ವಿಚಾರಗಳನ್ನು ಕುರಿತ ಉಪನ್ಯಾಸಗಳು, ಚರ್ಚೆಗಳು ಬೇರೆಬೇರೆಯಾಗಿ ಸಿಕ್ಕುತ್ತವೆ. ಇಂತಹ ವಿವೇಚನಾತ್ಮಕ ಲೇಖನಗಳನ್ನೆಲ್ಲ ಪರಿಶೀಲಿಸಿ ಸಿದ್ಧಾಂತರೂಪವಾದ ಗ್ರಂಥವನ್ನು ರಚಿಸಿ ಇದುವರೆಗಿನ ಸಂಶೋಧನೆಗಳನ್ನೆಲ್ಲ ಒಂದುಗೂಡಿಸುವುದು ಮುಂದಿನ ಕೆಲಸ. ಪ್ರಾಚ್ಯ ಸಂಶೋಧನೆಯಲ್ಲಿ ಸಾಮಾನ್ಯವಾಗಿ ಅನೇಕ ಮುಖ್ಯಾಂಶಗಳು ಲೇಖನಗಳಲ್ಲಿ ಹೊರಪಟ್ಟಿವೆ. ಇಂತಹ ಲೇಖನಗಳನ್ನೆಲ್ಲ ಚೆನ್ನಾಗಿ ಪರಿಶೀಲಿಸಿ ನಿರ್ಣೀತಾಂಶಗಳನ್ನೆಲ್ಲ ಗ್ರಂಥಗಳ ಮೂಲಕ ಪ್ರಕಾಶಗೊಳಿಸುವ ಕೆಲಸ ಎಲ್ಲ ಭಾಗಗಳಲ್ಲೂ ನಡೆಯಬೇಕಾಗಿದೆ.

ಶಾಸ್ತ್ರ, ವಿಜ್ಞಾನ ಮತ್ತು ದರ್ಶನ

'ಶಾಸ್ತ್ರ' 'ವಿಜ್ಞಾನ' 'ದರ್ಶನ' ಈ ಪದಗಳ ಅರ್ಥದಲ್ಲಿ ಒಂದು ನಿಯಂತ್ರಣದ ಆವಶ್ಯಕತೆಯನ್ನು ಇಲ್ಲಿ ಸೂಚಿಸಿದೆ. ಈಗ ವೇದಾಂತ, ವಿಜ್ಞಾನ, ಧರ್ಮಶಾಸ್ತ್ರ, ಎಲ್ಲಕ್ಕೂ ಶಾಸ್ತ್ರವೆಂದೇ ವ್ಯವಹಾರ. ಅಲ್ಲದೆ, ವೇದಾಂತಕ್ಕೆ ವೈಜ್ಞಾನಿಕವಾದ ಉಪಪತ್ತಿ ಕೊಡುವುದೂ ವಿಜ್ಞಾನಕ್ಕೆ ದಾರ್ಶನಿಕ ಪ್ರಾಮುಖ್ಯವನ್ನು ಕೊಡುವುದೂ ಕಂಡುಬರುತ್ತದೆ. 'ಧರ್ಮ ವಿಜ್ಞಾನ'ಕ್ಕೂ 'ಧರ್ಮ ಶಾಸ್ತ್ರ'ಕ್ಕೂ ವ್ಯತ್ಯಾಸವಿದೆಯೆಂದರೆ, ಹೇಗೆ? ಎನ್ನುವವರೂ ಇರಬಹುದು. ಶಾಸನ, ಶಿಷ್ಟ ಮೊದಲಾದ ಸಂಸ್ಕೃತ ಪದಗಳನ್ನು ಪರೀಕ್ಷಿಸಿದರೆ ಶಾಸ್ತ್ರವೆಂಬುವುದು ಯಾವ ಭಾಗದಲ್ಲಾದರೂ ಒಂದು ಕಟ್ಟು ಅಥವಾ ಕಟ್ಟಳೆಯನ್ನು ವಿಧಿಸತಕ್ಕುದೆಂದು ಸುಲಭವಾಗಿ ನಿರ್ಧರಿಸಬಹುದು. ಈ ಕಟ್ಟು ಅಥವಾ ಶಾಸ್ತ್ರ ಸಾಮಾಜಿಕವಾಗಬಹುದು. ಆರ್ಥಿಕವಾಗಬಹುದು. ರಾಜಕೀಯ ಅಥವಾ ಮತ್ತಾವ ಭಾಗಕ್ಕಾದರೂ ಅನ್ವಯಿಸಬಹುದು. 'ವಿಜ್ಞಾನ' ವೆಂಬುದು ಶಾಸ್ತ್ರಕ್ಕೆ ಮೂಲಭೂತವಾದ ಜ್ಞಾನ ಪ್ರಪಂಚಕ್ಕೆ ಸಂಬಂಧಿಸಿದ್ದು. ವಿಜ್ಞಾನದಿಂದ ಶಾಸ್ತ್ರ ಬಲಗೊಳ್ಳಬೇಕು. ಅವಶ್ಯವಿದ್ದಲ್ಲಿ ಮಾರ್ಪಾಡನ್ನು

ಹೊಂದಬೇಕು. ಯಾವ ಭಾಗದಲ್ಲಾಗಲಿ ಶುದ್ಧವಾದ ತಿಳಿವಳಿಕೆ ಫಲತಃ ಮತ್ತು ಉಪಾಯತಃ ವಿಜ್ಞಾನವೆನಿಸಿಕೊಳ್ಳುವುದು. ಆದುದರಿಂದ ವಿಜ್ಞಾನವೆಲ್ಲ ಶಾಸ್ತ್ರವಾಗುವುದಿಲ್ಲ. ಶಾಸ್ತ್ರದಂತೆಯೇ ವಿಜ್ಞಾನವೂ ಭೌತಿಕವಾಗಬಹುದು, ಸಾಮಾಜಿಕವಾಗಬಹುದು, ರಾಜಕೀಯವೂ ಆಗಬಹುದು. 'ದರ್ಶನ' ವೆಂಬುದು ಇದಕ್ಕೂ ಮೇಲಿನ ಮಟ್ಟದ್ದು. ಶಾಸ್ತ್ರ, ವಿಜ್ಞಾನ ಇವೆರಡನ್ನೂ ಮೀರಿ ಕೇವಲ ಆಧ್ಯಾತ್ಮಿಕ ಭಾಗಕ್ಕೆ ಸಂಬಂಧಿಸಿದ್ದು. ದಾರ್ಶನಿಕನು ಶಾಸ್ತ್ರಜ್ಞನೂ, ವೈಜ್ಞಾನಿಕನೂ ಆಗಬಹುದು. ಶಾಸ್ತ್ರ ಮತ್ತು ವಿಜ್ಞಾನಗಳು ದರ್ಶನಕ್ಕೆ ಸಾಧನವಾಗಬಹುದು. ಆದರೂ ಇವನ ದರ್ಶನ ಅವೆರಡನ್ನೂ ಮೀರಿದ್ದು. ಇದು ಒಂದು ವಿಚಾರ. ದರ್ಶನದಲ್ಲಿ ಹೆಚ್ಚು ವೈವಿಧ್ಯ ಸಾಧ್ಯ. ಒಬ್ಬೊಬ್ಬರೂ ಯೋಗ್ಯತೆಯನ್ನು ಸಂಪಾದಿಸಿದಲ್ಲಿ ದಾರ್ಶನಿಕರಾಗಬಹುದು. ಒಂದೊಂದು ದರ್ಶನವೂ ಒಂದೊಂದು ವಿಧವಾಗಬಹುದು. ಒಬ್ಬರ ದರ್ಶನ ಇನ್ನೊಬ್ಬರಿಗೆ 'ಶಾಸ್ತ್ರವಾಗಬಹುದು', 'ದರ್ಶನ' ವಾಗಲೂಬಹುದು. ಅಂತು ಒಟ್ಟಿನಲ್ಲಿ ದರ್ಶನವೆಂಬುದು ಆತ್ಮಸಂಸ್ಕೃತಿಗೆ ಸಂಬಂಧಿಸಿದ್ದೆಂದು ಭಾವಿಸಬಹುದು.

ಧರ್ಮಶಾಸ್ತ್ರ :—ಮ. ಮ. ಪಿ. ವಿ. ಕಾಣೆ ಅವರ ಸಂಶೋಧನೆಗಳು ಗಮನಾರ್ಹವಾಗಿವೆ. ಇವರು ಇಡಿಯ ಧರ್ಮಶಾಸ್ತ್ರದ ಚರಿತ್ರೆಯನ್ನು ರಚಿಸಿ ಅಲ್ಲಿನ ಸಿದ್ಧಾಂತಗಳ ಹುಟ್ಟು, ಬೆಳವಣಿಗೆಗಳನ್ನು ಆಧುನಿಕ ದೃಷ್ಟಿಯಿಂದ ನಿರೂಪಿಸಿರುತ್ತಾರೆ. ಅನೇಕ ಕಡೆಗಳಲ್ಲಿ ಧಮಶಾಸ್ತ್ರದೃಷ್ಟಿಯಿಂದ ಆಧುನಿಕ ನಿಬಂಧನೆಗಳನ್ನೂ ಒರೆ ಹಚ್ಚಿರುತ್ತಾರೆ. ಈಗ 'ಸಮಾಜ ಶಾಸ್ತ್ರ' (Sociology) ಎಂದು ವ್ಯವಹರಿಸಲ್ಪಡುತ್ತಿರುವ ಭಾಗದಲ್ಲಿ ಅನೇಕ ಧರ್ಮಶಾಸ್ತ್ರದ ಸಮಸ್ಯೆಗಳು ಚರ್ಚಿತವಾಗಿವೆ. ಆದರೆ ಇಲ್ಲಿ ಒಂದಂಶವನ್ನು ಮಾತ್ರ ಸೂಚಿಸಬಹುದು. ಇದುವರೆಗಿನ ಸಂಶೋಧನೆಯೆಲ್ಲ 'ವಿಜ್ಞಾನ' ಭಾಗಕ್ಕೆ ಸೇರುವುದೇ ಹೊರತು 'ಶಾಸ್ತ್ರ' ಭಾಗಕ್ಕೆ ಹೆಚ್ಚು ಉಪಕಾರ ಮಾಡಿಲ್ಲ. ಧರ್ಮದ ಸ್ವರೂಪ, ಸಮಾಜದ ಹುಟ್ಟು, ಬೆಳವಣಿಗೆ, ಅದರ ನಿಯಮಗಳ ವಿಮರ್ಶೆ ಮೊದಲಾದ ಸರಣಿಯಿಂದ ಭಾರತೀಯರ ಹಿಂದಿನ ಸಮಾಜದ ಮತ್ತು ಧರ್ಮದ ಆವಿಷ್ಕರಣ ಮಾತ್ರ ನಡೆದಿದೆ. ಕೆಲವರಿಗೆ ಇದರಲ್ಲಿ ಅಭಿಮಾನ, ಆಸಕ್ತಿ; ಮತ್ತೆ ಕೆಲವರಿಗೆ ಅಸಮ್ಮತಿ, ತಿರಸ್ಕಾರ, ಅಥವಾ ಔದಾಸೀನ್ಯ; ಇತರರಿಗೆ ಆಂಶಿಕ ಒಪ್ಪಿಗೆ; ಈ ಮಧ್ಯೆ ವೈಯಕ್ತಿಕ ಟೀಕೆ, ಪ್ರತಿ ಟೀಕೆ; ಈ ವಿಧವಾದ ಶಾಸ್ತ್ರೀಯ ವ್ಯಾಪಾರವೂ ಒಂದೊಂದುವೇಳೆ ಕೆಲವರನ್ನು ಕಾರ್ಯರಂಗಕ್ಕಿಳಿಸಿದೆ. ಆದರೆ ಸರ್ವಗ್ರಾಹ್ಯವಾದ ತೃಪ್ತಿಕರವಾದ ಧಾರ್ಮಿಕ ಜೀವನಕ್ಕೆ ಅನುವಾಗುವ ಯಾವ ಸಲಹೆಯೂ ಅಷ್ಟಾಗಿ ಆಚರಣೆಗೆ ಬಂದಿಲ್ಲ. ಆಧುನಿಕ ಜೀವನದ ವೈವಿಧ್ಯ, ವೈಪರೀತ್ಯ

ಗಳಿಂದ ಧರ್ಮಕ್ಕೆ ನೆಲೆಯೇ ಇಲ್ಲದಂತಾಗಿದೆ. ಹಿಂದಿನ ಧರ್ಮಶಾಸ್ತ್ರಗಳಂತೆ ವಿಧಿ ರೂಪವಾದ ಮತ್ತು ಆಧುನಿಕ ಪರಿಸ್ಥಿತಿಗಳಿಗೆ ಸರಿಯಾದ ಧರ್ಮಶಾಸ್ತ್ರವೊಂದು ಹುಟ್ಟಿ ಸಮಗ್ರ ಭಾರತದ ಧಾರ್ಮಿಕ ಜೀವನವನ್ನು ಏಕಮುಖವನ್ನಾಗಿ ಮಾಡ ಬೇಕಾಗಿದೆ. ಇಲ್ಲಿನ ವಿವಿಧ ಜನಾಂಗಗಳ ತಾತ್ವಿಕ ತಳಹದಿಯನ್ನು ಸಡಿಲಿಸದಂತೆ ಇದು ನಡೆದಲ್ಲಿ ಮತದ ಹೆಸರಿನಲ್ಲೂ ಧರ್ಮದ ಹೆಸರಿನಲ್ಲೂ ನಡೆಯುತ್ತಿರುವ ಅನೇಕ ಕಲಹಗಳು ಬಗೆಹರಿದಾವು. ಮೂಲತತ್ವಗಳ ಪುನರ್ವಿಮರ್ಶೆ ನಡೆಯಬೇಕು. ತತ್ವ ಶಾಸ್ತ್ರ ಬೇರೆಬೇರೆಯಾದರೂ ಧಾರ್ಮಿಕ ಜೀವನದಲ್ಲಿ ಒಂದು ವಿಧವಾದ ಐಕ್ಯ ಮತ್ತು ಸಾಮರಸ್ಯಗಳು ಸಾಧ್ಯವೆಂಬುದು ಸ್ಪಷ್ಟಪಡಬೇಕು.

ವಿಜ್ಞಾನ ಭಾಗದಲ್ಲಿ ಬೆಳವಣಿಗೆ ನಿಂತುಹೋಗಿ ಬಹಳ ಕಾಲವಾಯಿತು. ಇದಕ್ಕೆ ಮುಖ್ಯಕಾರಣ ಆಧುನಿಕ ಭಾಷೆಗಳ ಸೌಲಭ್ಯ. ಜ್ಯೋತಿಷ, ಆಯುರ್ವೇದ ಈ ಎರಡು ಭಾಗಗಳಲ್ಲಿ ಮಾತ್ರ ಈಗಲೂ ಗಮನಾರ್ಹವಾಗುವಷ್ಟು ಮುಖ್ಯವಾದ ಅಂಶಗಳಿವೆ. ಕ್ರಮವಾಗಿ ಈ ಶಾಸ್ತ್ರಗಳು ತಕ್ಕ ಗಣ್ಯತೆ ಹೊಂದುತ್ತಿವೆ. ಪ್ರಾಚೀನ ಸಂಸ್ಕೃತಿ ಯಲ್ಲಿ ಮಂತ್ರಶಾಸ್ತ್ರಕ್ಕೆ ಪ್ರಾಶಸ್ತ್ಯವಿದ್ದಂತೆ ತೋರುತ್ತದೆ. ಈಗಿನ ಅವಶೇಷಗಳೂ ಈ ಭಾಗದಲ್ಲಿ ಕುತೂಹಲವನ್ನು ಹುಟ್ಟಿಸುತ್ತವೆ. ವೈಜ್ಞಾನಿಕ ದೃಷ್ಟಿಯಿಂದ ಈ ಸಂಶೋಧನೆಗಳು ಮುಂದುವರಿಯಬೇಕು.

ದರ್ಶನಗಳು :—ವೈದಿಕ ಭಾಗದಂತೆ ಈ ಭಾಗದಲ್ಲಿ ನಡೆದಿರುವ ಕೆಲಸವೂ ಅಧಿಕ ಮತ್ತು ಮುಖ್ಯ. ಪೂರ್ವಮೀಮಾಂಸಾ, ನ್ಯಾಯ, ಸಾಂಖ್ಯ, ಬೌದ್ಧ, ಜೈನ, ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಈ ಎಲ್ಲ ಭಾಗಗಳಲ್ಲೂ ಹೆಚ್ಚಿನ ಸಂಶೋಧನೆ ನಡೆದಿದೆ. ಮೂಲಗ್ರಂಥಗಳ ಭಾಷಾಂತರ ಪೀಠಿಕೆ ಮತ್ತು ಟೀಕೆಗಳೊಡನೆ ಮುದ್ರಣ, ಪಾಠಶೋಧನ, ಸಿದ್ಧಾಂತಗಳ ವಿಮರ್ಶೆ, ವಿವರಣ ಮೊದಲಾಗಿ ಎಲ್ಲ ವಿಧವಾದ ಸಂಶೋಧನೆಯೂ ಸಮರ್ಪಕವಾಗಿ ನಡೆದು ಇಲ್ಲಿನ ಆಧ್ಯಾತ್ಮಿಕ ಶಾಸ್ತ್ರದ ಹಿರಿಮೆಯು ಮೊದಲಿಗಿಂತ ಚೆನ್ನಾಗಿ ವ್ಯಕ್ತಪಟ್ಟಿದೆ. ಆದರೂ ಪ್ರಕೃತ ಜೀವನದ ಮೇಲೆ ಅದರ ಪ್ರಭಾವ ಸಾಲದು. ಶಾಸ್ತ್ರದ ಹಿರಿಮೆ ವ್ಯಕ್ತಪಟ್ಟಂತೆ ಅದನ್ನು ನಂಬಿರುವ ಜನರ ಆಧ್ಯಾತ್ಮಿಕ ಜೀವನದ ಹಿರಿಮೆಯೂ ವ್ಯಕ್ತಪಡಬೇಕು. ಭಾರತೀಯ ತತ್ವಶಾಸ್ತ್ರವು ಪ್ರಯೋಜಕವಲ್ಲ, ವೈರಾಗ್ಯ ಮಾತ್ರ, ಲೋಕಸಂಗ್ರಹದ ಕಡೆಯೂ ಅದರ ಗಮನ ಪೂರ್ತಿಯಾಗಿದೆಯೆಂಬ ತಿಳಿವು ಹರಡಬೇಕು.

ಉಪಸಂಹಾರ :—ಕಡೆಯದಾಗಿ ಮೈಸೂರಿಗೆ ಸಂಬಂಧಿಸಿದಂತೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಇಲ್ಲಿ ನಮ್ಮ ಶ್ರೀಮನ್ಮಹಾರಾಜರವರ ಆಶ್ರಯದಲ್ಲಿ ಪ್ರಾಚ್ಯವಿದ್ಯೆಗೆ ಅದರಲ್ಲೂ ಸಂಸ್ಕೃತಕ್ಕೆ ಅತಿಶಯ ಪ್ರೋತ್ಸಾಹ ದೊರಕುತ್ತಿದೆ.

ಅನೇಕ ಸಂಸ್ಕೃತ ಪಾಠಶಾಲೆಗಳಲ್ಲಿ ಸಂಸ್ಕೃತದ ಅಧ್ಯಯನವು ಸಂಪ್ರದಾಯಕ್ಕನುಸಾರವಾಗಿ ನಡೆಯುತ್ತಿದೆ. ಆದರೆ ಪ್ರಗತಿ ಪಥದಲ್ಲಿ ಕೊನೆಯೆಂಬುದೆಲ್ಲಿ?

ಇಲ್ಲಿನ ಸಂಸ್ಕೃತ ವಿದ್ಯಾಭ್ಯಾಸದಲ್ಲಿ ಕಂಡುಬರುವ ಎರಡು ಮಾರ್ಗಗಳಲ್ಲಿ ಪರಸ್ಪರ ವ್ಯತ್ಯಾಸ ಅಧಿಕವಾಗಿದೆ. ಎರಡು ಸಂಪ್ರದಾಯಗಳೂ ನಮ್ಮಲ್ಲಿವೆಯೆಂದು ಹೇಳುವುದಕ್ಕೆ ಸಾಧ್ಯವಾಗಿದೆಯೇ ಹೊರತು ಸಂಸ್ಕೃತ ವಿದ್ಯೆಯ ಪ್ರಗತಿಗೆ ಸದ್ಯದಲ್ಲಿ ಆಗಬೇಕಾದಷ್ಟು ಪ್ರಯೋಜನ ಆಗಿಲ್ಲ. ದೃಷ್ಟಿವೈಶಾಲ್ಯ, ವಿಚಾರಪರತೆ, ವಿಮರ್ಶದೃಷ್ಟಿ, ಗ್ರಂಥಪಾಂಡಿತ್ಯ, ತೀಕ್ಷ್ಣತೆ, ಸಮದೃಷ್ಟಿ ಎಲ್ಲವೂ ಅಧ್ಯೇತೃಗಳಲ್ಲಿ ಒಂದುಗೂಡುವಂತಾಗಬೇಕು. ಸಂಸ್ಕೃತವನ್ನೋದಿದ ಮಾತ್ರಕ್ಕೆ ಪ್ರಾಪಂಚಿಕ ವಿಷಯಗಳನ್ನು ಮರೆಯುವಂತಾಗಬಾರದು. ಆಧುನಿಕ ಜ್ಞಾನಭಂಡಾರವನ್ನೂ ಸವಿದು ತಮ್ಮ ಕೂಲಂಕಷವಾದ ಪಾಂಡಿತ್ಯದಿಂದ ಯಾವ ವಿಷಯವನ್ನಾದರೂ ಪರಿಶೀಲಿಸುವ ಶಕ್ತಿ ಅವರಿಗೆ ಬರಬೇಕು. ಸಂಸ್ಕೃತವನ್ನೋದಿದವರು ನಿಜವಾದ ಸಂಸ್ಕೃತಿಪ್ರೇಮವನ್ನು ಹೊಂದಿ ದೇಶಕ್ಕಾಗಿ ದುಡಿಯುವ ಸುಸಂಸ್ಕೃತ ಪ್ರಜೆಗಳಾಗಬೇಕು. ಇದಕ್ಕೆ ತಕ್ಕಂತೆ ವಿದ್ಯಾಭ್ಯಾಸಕ್ರಮ ಮಾರ್ಪಡಬೇಕು. ಇದೇ ಸಂಸ್ಕೃತಕ್ಕೆ ಈಗ ಅವಶ್ಯ ಬೇಕಾದ ಪ್ರೋತ್ಸಾಹ. ಸಂಸ್ಕೃತವನ್ನು ಓದಿದವರು ಇತರ ವಿಷಯಗಳಲ್ಲಿ ಹಿಂದಾಗದಂತೆಯೂ ಇತರ ಶಾಸ್ತ್ರಗಳನ್ನು ಓದಿದವರಂತೆ ಅವರೂ ಎಲ್ಲ ಪದವಿಗಳಿಗೂ ಅರ್ಹರಾಗುವಂತೆಯೂ ಅವೇ ಸ್ಥಾನಮಾನ ವೇತನಗಳನ್ನು ಪಡೆಯುವಂತೆ ಏರ್ಪಡಿಸಿದರೆ, ವಿದ್ಯಾಭ್ಯಾಸಕ್ರಮವನ್ನು ಪರಿಷ್ಕರಿಸಿದರೆ ನ್ಯಾಯವಾಗುವುದು.

ಪ್ರಾಚ್ಯವಿದ್ಯೆಯ ಪ್ರಗತಿಯು ಕನ್ನಡದ ಮೂಲಕ ನಡೆಯಬೇಕೆಂಬುದು ಮತ್ತೊಂದು ವಿಚಾರ. ಕನ್ನಡವು ಕಳೆದ ೨೫ ವರ್ಷಗಳಲ್ಲಿ ಬಹುವಿಧದಲ್ಲಿ ಮುಂದುವರಿದಿದೆಯೆಂಬುದಕ್ಕೆ ಈ ಪತ್ರಿಕೆಯ ಬೆಳ್ಳಿಯ ಸಂಚಿಕೆಯೇ ಒಂದು ನಿದರ್ಶನ. ಕವಿತೆ, ಸಣ್ಣಕತೆ, ಕಾದಂಬರಿ, ನಾಟಕ ಮೊದಲಾದ ಶುದ್ಧಸಾಹಿತ್ಯದ ಜೊತೆಗೆ ಅನೇಕ ಆಧುನಿಕ ಶಾಸ್ತ್ರೀಯ ವಿಷಯಗಳಲ್ಲೂ ಕನ್ನಡದಲ್ಲಿ ಗ್ರಂಥಗಳು ರಚಿತವಾಗಿವೆ. ಜನರ ತಿಳಿವಳಿಕೆ ಹೆಚ್ಚಿದೆಯಾದರೂ ಇನ್ನೂ ಬಹಳ ಕೆಲಸ ಉಳಿದಿದೆ. ವಿದ್ಯಾಭ್ಯಾಸ ಮತ್ತು ಅಕ್ಷರತೆಗಳು ಸಹ ಇನ್ನೂ ಹೆಚ್ಚು ಪ್ರಮಾಣದಲ್ಲಿ ನೆಲೆಗೊಳ್ಳಬೇಕಾಗಿದೆ. ಹಾಗೆಯೇ ಸಂಸ್ಕೃತ ವಾಙ್ಮಯದಲ್ಲಿ ಅಭಿರುಚಿಯೂ ಹೆಚ್ಚಬೇಕು. ಭಾರತೀಯ ಸಂಸ್ಕೃತಿಯು ಒಂದಾಗಿ ಉಳಿಯಬೇಕಾದರೆ ಪ್ರಾಂತಪ್ರೇಮವು ದೇಶಪ್ರೇಮಕ್ಕೂ ಸಂಸ್ಕೃತಿಪ್ರೇಮಕ್ಕೂ ಪರಿಪೋಷಕವಾಗಬೇಕು. ಕರ್ಣಾಟಕದಲ್ಲಿ ಕನ್ನಡದ ಮೂಲಕ ಪ್ರಾಚ್ಯವಿದ್ಯೆ ಬೆಳೆಯಬೇಕು. ಆ ಮೂಲಕ ಮಾತ್ರವೇ ಬೆಳೆಯಬಲ್ಲದು. ಕನ್ನಡ, ಸಂಸ್ಕೃತ ಇವುಗಳ ಪರಸ್ಪರ ಹಿರಿಮೆಯ ವಿಚಾರದಲ್ಲಿ ಉಭಯ ಪಕ್ಷದ ವಿದ್ವಾಂಸ

ರಲ್ಲಿ ಸೌಹಾರ್ದ ಸಹಕಾರಗಳು ಬೆಳೆಯಬೇಕು. ಸಂಸ್ಕೃತಕ್ಕೂ ಪ್ರಾಂತೀಯ ಭಾಷೆಗಳಿಗೂ ವಿರೋಧವಿಲ್ಲ. ವಂಗಭಾಷೆ, ಮರಾಠಿ, ತಮಿಳು, ಹಿಂದಿ ಮೊದಲಾದ ಹಲವು ಭಾಷೆಗಳಲ್ಲಿ ಸಂಸ್ಕೃತದ ಪುನರುಜ್ಜೀವನಕ್ಕಾಗಿ ಬಹಳ ಪ್ರಯತ್ನ ನಡೆದಿದೆ. ಇದೆಲ್ಲ ಅಲ್ಲಲ್ಲಿನ ಜನರ ಕಣ್ದೆರೆಯುತ್ತಿದೆ. ಕನ್ನಡದಲ್ಲೂ ಈ ವಿಧವಾದ ಕೆಲಸ ಇನ್ನೂ ಹೆಚ್ಚಾಗಿ ನಡೆಯಬೇಕೆಂದು ಆಶಿಸಬಹುದು. ಕಾವ್ಯಪ್ರಪಂಚದಲ್ಲಿ ನಡೆದಿರುವಂತೆ ಮೂಲ ಗ್ರಂಥಗಳ ಭಾಷಾಂತರ, ವ್ಯಾಖ್ಯಾನ ಮಾತ್ರವಲ್ಲದೆ, ಆಂಗ್ಲ ಮತ್ತಿತರ ಭಾಷೆಗಳಲ್ಲಿ ಹುಟ್ಟಿರುವ ಗ್ರಂಥಗಳ ಅನುವಾದವಾಗಲಿ ಸಂಗ್ರಹವಾಗಲಿ ಕನ್ನಡದ ಮೂಲಕ ಹೊರಬೀಳಲು ಅವಕಾಶವಿದೆ. ನಾನಾ ಭಾಷೆಗಳಲ್ಲಿರುವ ಎಲ್ಲ ಗ್ರಂಥಗಳನ್ನೂ ಪರಿಶೀಲಿಸಿ ಸ್ವತಂತ್ರ ಗ್ರಂಥವನ್ನು ರಚಿಸುವವರು ರಚಿಸಲಿ. ಆದರೆ ಈ ಕೆಲಸ ಸುಲಭ ಸಾಧ್ಯವೂ ಅಲ್ಲ; ಶೀಘ್ರವಾಗಿ ನಡೆಯತಕ್ಕುದೂ ಅಲ್ಲ. ಆದುದರಿಂದಲೇ ಸ್ವತಂತ್ರ ಸಂಶೋಧನೆಗೆ ಬೇಕಾದ ಸಲಕರಣೆಗಳನ್ನು ಒದಗಿಸುವ ಉದ್ಯಮವಾದರೂ ಸತತ ನಡೆಯುತ್ತಿರಬೇಕು. ಈ ದೃಷ್ಟಿಯಿಂದ ವೇದ, ವೇದಾಂಗ ಮೊದಲಾದ ಎಲ್ಲ ಭಾಗಗಳಲ್ಲೂ ಮಹತ್ತರವಾದ ಕೆಲಸ ನಡೆಯಬೇಕಾಗಿದೆ. ಇದಕ್ಕೆ ಜನರ ಪ್ರೋತ್ಸಾಹ ಬೇಕು; ಸರ್ಕಾರದ ಬೆಂಬಲ ಬೇಕು. ಅಧಿಕವಾದ ಉತ್ಸಾಹ, ಶ್ರದ್ಧೆ, ಪಾಂಡಿತ್ಯ ಇವೂ ಬೇಕು. ಅದಕ್ಕಾಗಿ ಒಂದು ಪ್ರಾಚ್ಯವಿದ್ಯಾಸಂಶೋಧನ ಮಂದಿರ ಆದಷ್ಟು ಬೇಗ ನಿರ್ಮಾಣವಾಗಬೇಕು. ಎಲ್ಲ ದೊರೆತು ಕನ್ನಡದ ಮೂಲಕ ಸಂಸ್ಕೃತ ವಾಙ್ಮಯದ ಸಾರವು ಜನರನ್ನು ಮುಟ್ಟಿ ಭಾರತೀಯ ಸಂಸ್ಕೃತಿಯಲ್ಲೂ, ಸಂಸ್ಕೃತ ಭಾಷೆಯಲ್ಲೂ ನಿಜವಾದ ಪ್ರೀತಿ ಹುಟ್ಟುವಂತಾದರೆ ಪುನರುಜ್ಜೀವನ ಉದ್ಯಮವು ಸಫಲವಾಗುವುದು.

ಎಸ್. ವಿ. ಶ್ರೀನಿವಾಸರಾಘವಾಚಾರ್.

ಹೆಂಡತಿಯ ಹೆಸರು*

ನಮ್ಮಲ್ಲಿ ಮದುವೆಯ ದಿನ ಧಾರೆಯಾದ ಮೇಲೆ ವರನು ವಧುವಿನ ಕೈಹಿಡಿದು ದೇವರಮನೆಗೆ ಕರೆದುಕೊಂಡು ಹೋಗಿ ದೇವರಿಗೂ ಹಿರಿಯರಿಗೂ ನಮಸ್ಕಾರಮಾಡಿ ಬರುವ ಪದ್ಧತಿ. ಸಾಧಾರಣವಾಗಿ ದೇವರ ಸನ್ನಿಧಿಗೆ ಹೋಗುವ ಮಾರ್ಗ ಸುಗಮವಾದದ್ದಲ್ಲ. ಈ ಸಂದರ್ಭದಲ್ಲೂ ಹಾಗೆಯೇ. ದೇವರಮನೆಯ ಹೊಸಲ ಬಳಿ ನಿಮ್ಮನ್ನು ಅಡ್ಡಗಟ್ಟಿ ಯುವತಿಯರ ಸೈನ್ಯವೊಂದು ನಿಂತಿರುತ್ತದೆ. ಈ ಪ್ರಮಿಾಳೆಯರಿಗೆ ಹಿಂಗಾವಲಾಗಿ ಮಧ್ಯವಯಸ್ಸಿನ ಹೆಂಗಸರೂ ಕೆಲವರು ಸೇರಿರುತ್ತಾರೆ. ಗುಂಪಿನಲ್ಲಿ ಮುಕ್ಕಾಲುಪಾಲು ಜನ ನಿಮಗೆ ಅಪರಿಚಿತರು; ನೀವು ಧೂರ್ತರಾಗಿ ಅವರನ್ನು ತಳ್ಳಿಕೊಂಡು ಒಳಗೆ ಹೋಗುವುದು ಸಾಧ್ಯವಿಲ್ಲ. ಇಂಥ ಕಷ್ಟಕಾಲದಲ್ಲಿ ನಿಮಗೆ ಸಹಾಯಮಾಡಬಹುದಾದ ನಿಮ್ಮ ತಾಯಿ ಮತ್ತು ಅಕ್ಕತಂಗಿಯರೂ ಸಹ ತಾತ್ಕಾಲಿಕವಾಗಿ ಶತ್ರುಪಕ್ಷವನ್ನೇ ಅವಲಂಬಿಸಿರುತ್ತಾರೆ. ನಿಮ್ಮ ಜೀವನದ ಗೆಳತಿಯಾಗಿರಲು ಒಪ್ಪಿ ಕೈಹಿಡಿದು ನಿಂತಿರುವ ಆ ಹುಡುಗಿಯ ಬೆಂಬಲವನ್ನೂ ನೀವು ನೆಚ್ಚುವಹಾಗಿಲ್ಲ. ನೀವು ಹೆಂಡತಿಯ ಹೆಸರು ಹೇಳುವ ವರೆಗೆ ಹೊಸಲು ದಾಟಕೂಡದೆಂದು ಆ ಯುವತಿಯರ ಷರತ್ತು. ಅದಕ್ಕೆ ಒಪ್ಪಿದರೇ ನಿಮಗೆ ದೇವರ ಸಾನ್ನಿಧ್ಯ ದೊರಕೀತು. ವಧು ಗಂಡನ ಹೆಸರು ಹೇಳಬೇಕೆಂಬ ನಿಯಮವೂ ಉಂಟು. ಆದರೆ ಆ ಹೆಂಗಸರು ಸ್ವಜಾತಿವಾತ್ಸಲ್ಯದಿಂದ ಅವಳನ್ನು ಅಷ್ಟೊಂದು ಪೀಡಿಸುವುದಿಲ್ಲ. ಅವಳು ತಲೆ ತಗ್ಗಿಸಿಕೊಂಡು ಏನೋ ಗೊಣಗಿದರೂ ತೃಪ್ತರಾಗಿ ಅವಳ ಗೊಡವೆ ಬಿಟ್ಟು ತಮ್ಮ ಶಕ್ತಿಯನ್ನೆಲ್ಲಾ ನಿಮ್ಮ ಮೇಲೆಯೇ ಪ್ರಯೋಗಿಸುತ್ತಾರೆ. "ಹೆಂಡತಿಯ ಹೆಸರು ಹೇಳುವ ಧೈರ್ಯವಿದೆಯೇ ಈ ಗಂಡಿಗೆ" ಎಂದು ಪರೀಕ್ಷೆಮಾಡಿ ನೋಡುವುದು ಮದುವೆಯ ಕಲಾಪದಲ್ಲಿ ಅವಶ್ಯವಾದ ಅಂಗವಾಗಿಹೋಗಿದೆ. ಹೆಸರು ಹೇಳುವುದು ಅಷ್ಟೇನೂ ಕಷ್ಟವಲ್ಲ. ಆ ಹೆಸರಿಗೆ ಹೆದರಬೇಕಾದ ಪ್ರಮೇಯವೇನೋ ಮುಂದೆ ಬರಬಹುದು, ಆದರೆ ಈಗಲೇ ಇಲ್ಲ. ಅವಳು ನಮ್ಮನ್ನು ಕಾಡಿ ಪ್ರಾಣ ತೆಗೆಯಬೇಕಾದರೆ ಒಂದೆರಡು ವರ್ಷ ಕಳೆದು ಈಗ ಮುಗ್ಧೆಯಾಗಿರುವವಳು ಪಳಗಿದ ಗೃಹಿಣಿಯಾಗಬೇಕು; ಅಲ್ಲಿಯವರೆಗೆ ಭಯವಿಲ್ಲ. ಆದರೂ ಬಾಗಿಲಿನಲ್ಲಿ ನಿಮ್ಮನ್ನು ತಡೆದು ನಿಂತಿರುವ ಈ ಕೇವಲ ಹೆಂಗಸರ ಆಜ್ಞಾಧಾರಕನಾಗಿ ಅವರು ಹೇಳಿದಂತೆ ಕುಣಿದರೆ ಗಂಡಸಿನ ಮಾನ ಏನಾಗಬೇಕು! ಅಲ್ಲದೆ ನಿಮ್ಮ ಹೆಂಡತಿಯ ಹೆಸರು

* ಆಕಾಶವಾಣಿಯ ಕೃಪೆಯಿಂದ.

ಅವರಿಗೇನು ತಿಳಿಯದೆ ಇಲ್ಲ. ಹೆಸರು ಹೇಳಲು ನಾಚುವ ಯುವಕರನ್ನು ಪೀಡಿಸಿ, ಗೇಲಿಮಾಡಿ, ಅವನ ಬಾಯಿಂದ ಅದನ್ನು ಹೊರಡಿಸುವುದರಲ್ಲಿ ಅವರಿಗೆ ಸ್ವಲ್ಪ ವಿನೋದ. ನೀವು ಸ್ವಲ್ಪವೂ ಅನುಮಾನಿಸದೆ ಅವರು ಕೇಳಿದ ಕ್ಷಣವೇ ಹೆಸರನ್ನು ಕೂಗಿಬಿಟ್ಟರೆ ಆ ವಿನೋದಕ್ಕೆ ಭಂಗಬಂದೀತು. ಕದನದಲ್ಲಿ ಸ್ವಲ್ಪಹೊತ್ತು ಹೋರಾಟ ನಡೆದ ಮೇಲೆ ಸೋಲಾದರೆ ಅವಮಾನವಿಲ್ಲ. ಯುದ್ಧಕ್ಕೆ ನಿಲ್ಲದೆಯೇ ಹೋದರೆ ನಿಮಗೆ ಮಾನವಿಲ್ಲ, ಎದುರಾಳಿಗೆ ಗೆಲವಿನ ಸಂತೋಷವೂ ಇಲ್ಲ. ಆದ್ದರಿಂದ ಆ ಸನ್ನಿವೇಶದಲ್ಲಿ ಹೆಂಡತಿಯ ಹೆಸರು ಹೇಳಲು ಸಂಕೋಚಪಡುವುದು ಅಥವಾ ಸಂಕೋಚವನ್ನು ನಟಿಸುವುದು ನಮ್ಮ ಕರ್ತವ್ಯವೆಂದರೂ ಎನ್ನಬಹುದು.

ಇನ್ನು ಮೊದಲ ಬಾರಿ ದೀಪಾವಳಿಗೆ ಅವಳ ಮನೆಗೆ ಹೋದಾಗ, ಮನೆಯವರೆಲ್ಲ ಬೇರೆ ಕೆಲಸದಲ್ಲಿದ್ದು ಮಧ್ಯಾಹ್ನದ ಕಾಫಿಯನ್ನು ಅವಳೇ ತಂದುಕೊಟ್ಟರೆ, ನೀವು ಅರ್ಧನಾಚಿಕೆಯಿಂದ, ಅರ್ಧ ಯಾರಾದರೂ ಕಂಡಾರೆಂಬ ಭಯದಿಂದ ಹಿಂದೆಮುಂದೆ ನೋಡಿ ಕೊನೆಗೆ ಹೇಗೋ ಧೈರ್ಯ ತಂದುಕೊಂಡು ಅವಳ ಕೈಹಿಡಿದು, ಹೆಸರಿಟ್ಟು ಕೂಗಿ ಕುಳಿತುಕೋ ಎನ್ನಬಹುದು: ಆದರೆ ಅತ್ತೆಮಾವಂದಿರ ಎದುರಿಗೆ "ನೀವೆಲ್ಲಾ ಹಿಂದಿನ ಕಾಲದವರು, ನಾವು ಹಳೆಯ ಪದ್ಧತಿಗಳಿಗೆ ಸೊಪ್ಪುಹಾಕುವವರಲ್ಲ" ಎನ್ನುವಂತೆ ನಿರ್ಲಕ್ಷ್ಯವಾಗಿ ನಿಮ್ಮವಳ ಹೆಸರನ್ನು ಕೂಗಿ ನಿಮ್ಮ ಯುವನಾಗರಿಕತೆಯನ್ನು ಮೆರೆಸುವುದು ನ್ಯಾಯವಲ್ಲ. ಆದ್ದರಿಂದ ಅವರೆದುರಿಗೆ "ಅವಳು" ಅವಳಾಗಿಯೇ ಉಳಿಯುತ್ತಾಳೆ. ಆಕೆ ನಿಮ್ಮ ಮನೆಗೇ ಬಂದಮೇಲೆಯಾದರೂ ತಂದೆತಾಯಿಯರೆದುರಿಗೆ ಅವಳೊಡನೆ ಅಷ್ಟು ಸಲಿಗೆಯಿಂದ ವರ್ತಿಸುವುದು ಧರ್ಮವಲ್ಲ, ಅದಕ್ಕಿಂತಲೂ ಹೆಚ್ಚಾಗಿ ಲೌಕಿಕವಲ್ಲ. ಯಾವಾಗಲೂ ಅವಳ ಹೆಸರು ಉಚ್ಚರಿಸಿ ಅಭ್ಯಾಸವಿಲ್ಲದ್ದರಿಂದ ಅವಳೊಡನೆ ಏಕಾಂತದಲ್ಲಿರುವಾಗಲೂ ಅದು ಸ್ವಲ್ಪ ವಿಚಿತ್ರವಾಗಿಯೇ ಕಾಣುತ್ತದೆ. ಆದ್ದರಿಂದ ಬಹುಮಟ್ಟಿಗೆ ಜನರು ಆ ಹೆಸರು ಹೇಳದೆಯೇ ಸಂಭಾಷಣೆ ನಡೆಸುವ ಅಭ್ಯಾಸಮಾಡಿಕೊಂಡಿರುತ್ತಾರೆ.

ಹಿಂದಿನ ಕಾಲದವರಿಗೆ ತಮ್ಮ ಸಹಧರ್ಮಿಣಿಯನ್ನು ಹೆಸರಿಟ್ಟು ಕರೆಯುವುದು ಅವಮಾನಕರ, ನಾಚಿಕೆಗೇಡು, ಇಲ್ಲವೆ ಶೀಲಕ್ಕೆ ತಕ್ಕುದಲ್ಲ, ಎಂಬ ಭಾವನೆ ಹೇಗೋ ಬಂದುಹೋಗಿರಬೇಕು. ಇಲ್ಲದಿದ್ದರೆ ಆ ನಿಯಮವನ್ನು ಅಷ್ಟು ನಿಷ್ಠುರವಾಗಿ ಪಾಲಿಸಿಕೊಂಡು ಬರುತ್ತಿರಲಿಲ್ಲ. ಒಂದೊಂದು ವೇಳೆ ಅವರ ಹಿಂಜರಿಕೆಯನ್ನು ನೋಡಿದರೆ ನಿಜವಾಗಿಯೂ ಕನಿಕರ ಹುಟ್ಟುತ್ತದೆ. ನನ್ನ ಬಂಧುಗಳೊಬ್ಬರು, ವಯಸ್ಸಾದವರು, ಐದಾರು ಮಕ್ಕಳ ತಂದೆ, ಹೆಂಡತಿಯೊಡನೆ ಮೂವತ್ತು ವರ್ಷಕಾಲ ಸಂಸಾರಮಾಡಿ ಜೀವನದ ಸುಖದುಃಖಗಳನ್ನೆಲ್ಲಾ ಜೊತೆಯಾಗಿ ಅನುಭವಿಸಿದವರು—ಇಷ್ಟಾದರೂ

ಅವರು ಆಕೆಯ ಹೆಸರುಹಿಡಿದು ಕೂಗುವುದು ಹಾಗಿರಲಿ, ನೇರವಾಗಿ ಅವರನ್ನು ದ್ದೇಶಿಸಿ ಮಾತು ಸಹ ಆಡುವುದಿಲ್ಲ. ಆಕೆಯ ಭಾಗಕ್ಕೆ ತಂದೆತಾಯಿಯರಿಟ್ಟ ಹೆಸರಿಲ್ಲದೆ ಹೋದರೂ ಪತಿಯ ಬಾಯಿಂದ 'ನೀನು' ಎಂಬ ಸರ್ವನಾಮ ಪದವನ್ನು ಕೇಳುವ ಭಾಗ್ಯ ಸಹ ಇಲ್ಲ. ಹೆಂಡತಿಗೆ ಏನಾದರೂ ತಿಳಿಸಬೇಕಾದರೆ ಅವರು ಎದುರಿಗಿಲ್ಲದ ಮತ್ತೆ ಯಾರನ್ನಾದರೂ ಉದ್ದೇಶಿಸಿ ಮಾತಾಡುತ್ತಾರೆ. ಅವರ ಮಕ್ಕಳೆಲ್ಲರೂ ಬೇರೆ ಬೇರೆ ಊರುಗಳಲ್ಲಿ ಕೆಲಸಮಾಡಿಕೊಂಡಿದ್ದಾರೆ. ಆದರೆ ಅವರಿಗೆ ಕುಡಿಯಲು ನೀರು ಬೇಕಾದಾಗ "ಲೋ ರಾಮು, ಒಂದು ಪಂಚಪಾತ್ರೆ ಗಂಗಾಮೃತ ತಗೊಂಡು ಬಾ ಅನ್ನೋ" ಎಂದು ಕೂಗುತ್ತಾರೆ. ರಾಮು ಮನೆಯಲ್ಲಿಲ್ಲವೆಂದು ಅವರಿಗೂ ಗೊತ್ತು, ಹೆಂಡತಿಗೂ ಗೊತ್ತು. ಆದರೆ ಅವನು ಇದ್ದರೆ ಹೇಗೋ ಹಾಗೆಯೇ ಭಾವಿಸಿ ಇಬ್ಬರೂ ಈ ಬಗೆಯ ನಾಟಕವನ್ನಾಡುತ್ತಾರೆ. ಪತಿಯ ಮಾತು ನೇರವಾಗಿ ಹೆಂಡತಿಗೆ ತಲಪಿದ ದಿನವೇ ಇಲ್ಲ; ಯಾವುದೋ ಊರಿನಲ್ಲಿರುವ ಮಗನನ್ನು ಸುತ್ತು ಹಾಕಿಕೊಂಡು ಆಕೆಯ ಕಿವಿಗೆ ಬಂದು ಬೀಳಬೇಕು. ಯಾರಾದರೂ ಹೊರಗಿನವ ರೆದುರಿಗೆ ಹೆಂಡತಿಯ ವಿಷಯ ಮಾತಾಡಬೇಕಾಗಿ ಬಂದಾಗ ಆಕೆಯನ್ನು "ನಮ್ಮ ಮನೆಯಲ್ಲಿ" ಎಂದೋ, ಇಲ್ಲವೆ "ಯಜಮಾನಿತಿ" ಎಂದೋ ಕರೆಯುತ್ತಾರೆ. ಕೆಲವು ದಿನಗಳ ಹಿಂದೆ ಅವರು ನನ್ನನ್ನು ಕರೆದು "ನಿನ್ನ ಯಜಮಾನಿತಿಯನ್ನು ಯಾವಾಗಲಾದರೂ ನಮ್ಮ ಮನೆಗೆ ಕರೆದುಕೊಂಡು ಬಾ" ಎಂದಾಗ ನನಗೆ ಸ್ವಲ್ಪ ಅಸಮಾಧಾನವಾಯಿತು. ಲಲಿತೆಗೆ ನನ್ನ ಮೇಲೆ ಯಜಮಾನಿಕೆ ಕೊಟ್ಟವರು ಯಾರು! ಅವಳನ್ನು ನನಗೆ ಕೊಟ್ಟು ಮದುವೆ ಮಾಡಿದರೇ ಹೊರತು ನನ್ನನ್ನು ಅವಳಿಗೆ ಕೊಡಲಿಲ್ಲ. ಈ ವಿಷಯದಲ್ಲಿ ಯಾರಿಗಾದರೂ ಸಂದೇಹವಿದ್ದರೆ ಅದರ ಪರಿಹಾರಕ್ಕೆ ಲಗ್ನಪತ್ರಿಕೆಯ ಸಾಕ್ಷ್ಯವೇ ಇದೆ. ಯಾವ ಹೆಂಗಸಿನ ಯಜಮಾನಿಕೆಗೂ ತಲೆಬಾಗಿ ನಡೆಯುವ ಸ್ವಭಾವವಲ್ಲ, ನನ್ನದು. ಇದುವರೆಗೂ ನಾನು ಲಲಿತೆಯ ಮಾತಿಗೆ ಪ್ರತಿಯಾಗಿ ನಡೆದಿಲ್ಲ, ನಿಜ. "ಇದಂ ಕೃಷ್ಣಂ ಕೃಷ್ಣಂ ನನು ಶ್ವೇತಮಥ ಕಿಂ" ಎನ್ನುವ ಹುಚ್ಚಿಗೆ ಹೋಗದಿದ್ದರೂ ಒಬ್ಬರು ಶ್ವೇತ ಎಂದದ್ದನ್ನು ಇನ್ನೊಬ್ಬರು ಬೇಕು ಬೇಕಾಗಿ, ಕೇವಲ ಯಜಮಾನಿಕೆಯ ಪ್ರದರ್ಶನಕ್ಕಾಗಿ ಕೃಷ್ಣ ಎನ್ನುವುದಿಲ್ಲ. ಅಲ್ಲದೆ ಲಲಿತೆ ಏನೇ ಆಗಲಿ, ನನ್ನವಳು; ಮೃದುವಾದ ಅವಳ ಮನಸ್ಸು ನೋಯದಿರ ಲೆಂದು ಕರುಣೆಯ ದೃಷ್ಟಿಯಿಂದ, ಪ್ರೇಮದ ದೃಷ್ಟಿಯಿಂದ, ಅವಳ ಮಾತಿಗೆ ಮನ್ನಣೆ ಕೊಡುತ್ತೇನೆಯೇ ಹೊರತು, ಅವಳಿಗೆ ಯಜಮಾನಿತಿಯ ಪಟ್ಟವನ್ನು ಕಟ್ಟಿದರೆ ಆತ್ಮ ಗೌರವಕ್ಕೆ ಚ್ಯುತಿ ಬಂದೀತು. ಒಂದು ವೇಳೆ ಯಜಮಾನಿಕೆ . . . ಹೆಂಡತಿಯದೇ ಆದರೂ ಅದನ್ನು ಪ್ರಪಂಚಕ್ಕೆಲ್ಲಾ ಡಂಗುರ ಹೊಡೆಯಲಾಗುತ್ತದೆಯೆ!

ಹಿಂದಿನ ಸಮಾಜದ ಕಟ್ಟು ಸಡಿಲವಾಗಿರುವ ಈ ಕಾಲದಲ್ಲಿ ಕೂಡ ಹೊಸ ಪ್ರಾಯದ ರಸಿಕರು ತಮ್ಮ ನಲ್ಲೆಯ ನಾಮಾಕ್ಷರಗಳನ್ನು ಏಕಾಂತದಲ್ಲಿ ಎಷ್ಟು ಪಾರಾಯಣ ಮಾಡಿದರೂ ಎಲ್ಲರೆದುರಿಗೆ ಧೈರ್ಯವಾಗಿ ಹೇಳಲು ನಾಚುವುದುಂಟು. ಆದರೆ ಇದಕ್ಕೆ ಕಾರಣ ಬೇರೆ; ನಮಗೆ ಹೆಂಗಸರ ವಿಷಯದಲ್ಲಿ ಲಘು ಭಾವನೆ ಯೇನೂ ಇಲ್ಲ. ಬಲ್ಲವರು ತಮಗೆ ಪ್ರಿಯವಾದ ವಸ್ತುವನ್ನು ಅಪರೂಪಕ್ಕೆ ಒಂದೊಂದು ಬಾರಿ ಮಾತ್ರ ಉಪಯೋಗಿಸಿ ಅದರ ಸವಿ ಇಳಿಯದಂತೆ ನೋಡಿ ಕೊಳ್ಳುತ್ತಾರೆ. ನಮ್ಮ ನಲ್ಲೆಯ ಹೆಸರು ದಿನಚರಿಯ ಸಾವಿರ ಮಾತುಗಳಲ್ಲಿ ಒಂದಾಗಿ ಬೆರೆದುಹೋಗಬಾರದು. ಅದು ನಾಲಗೆಗೆ ಅಷ್ಟು ಸವಿ, ಕಿವಿಗೆ ಅಷ್ಟು ಇಂಪು. ಹೊಸದಾಗಿ ಮದುವೆಯಾದ ಹೆಂಡತಿಯನ್ನು ತಾತ್ಕಾಲಿಕವಾಗಿ ಅಗಲಿದವರಿಗಂತೂ ಅದರ ಬೆಲೆ ನೂರು ಮಡಿ ಹೆಚ್ಚುತ್ತದೆ. ಒಬ್ಬರೇ ಇರುವಾಗ ಆ ಹೆಸರನ್ನು ನಮಗೆ ನಾವೇ ಮೆಲುದನಿಯಿಂದ ಹೇಳಿಕೊಂಡು ಸಾವಧಾನವಾಗಿ ಆಸ್ವಾದಿಸಿ ಮೆಲುಕು ಹಾಕುತ್ತೇವೆ. ಅನ್ಯಮನಸ್ಕರಾಗಿ ಮೇಜಿನ ಬಳಿ ಕುಳಿತು ಸಿಕ್ಕಿದ ಕಾಗದದ ಮೇಲೆ ಅದನ್ನು ನೂರು ಬಾರಿ ಬರೆದು, ಆ ನಾಮಾವಳಿ ಪ್ರಪಂಚದ ಕೀಳು ದೃಷ್ಟಿಗೇನಾದರೂ ಬಿದ್ದೀತೆಂಬ ಶಂಕೆಯಿಂದ ಕೂಡಲೇ ಅದನ್ನು ನಾಶಮಾಡುತ್ತೇವೆ. ಒಂದೊಂದು ವೇಳೆ ರಸ್ತೆಯಲ್ಲಿ ಯಾರೊಡನೆಯೋ ಮಾತನಾಡುತ್ತಿರುವಾಗ ನಮಗೇ ತಿಳಿಯ ದಂತೆ ಉಂಗುಷ್ಠವು ನೆಲದ ಮೇಲೆ ಪ್ರಿಯಳ ಹೆಸರನ್ನು ಚಿತ್ರಿಸುತ್ತಿರುತ್ತದೆ. ಪೂರ್ವ ಕಾಲದ ಪ್ರೇಮ ಕಥೆಗಳಲ್ಲಿ ಬರುವ ನಾಯಕರು ಮರದ ತೊಗಟೆಯ ಮೇಲೆಲ್ಲಾ ತಮ್ಮ ಪ್ರೇಯಸಿಯರ ಹೆಸರು ಕೆತ್ತುತ್ತಿದ್ದರಂತೆ. ಕೆಲವರು ಇದನ್ನೆಲ್ಲಾ ಅತಿಶಯೋಕ್ತಿ ಯೆನ್ನಬಹುದು—ಪ್ರೇಮರಹಿತುಲಕು ನಾಮರುಚಿದೆಲುಸುನಾ! ನಾಮಾಮೃತದ ರುಚಿ ಪ್ರಣಯಿಗಳಿಗೆ ಗೊತ್ತು, ಭಕ್ತರಿಗೆ ಗೊತ್ತು. ಇವರಿಬ್ಬರ ಹೃದಯದಲ್ಲೂ ಅದರ ಪಾಕ ಒಂದೇ ಬಗೆಯದು. ಕೆಲವು 'ಅನಾಗರಿಕ' ಜನಾಂಗಗಳಲ್ಲಿ ತಮಗೆ ಅತ್ಯಂತ ಪ್ರಿಯವಾದ ಹೆಸರನ್ನು ಉಚ್ಚರಿಸಬಾರದೆಂಬ ವಿಧಿಯುಂಟಂತೆ. ನಮ್ಮ ಹೆಂಡತಿಯ ಹೆಸರು ಪವಿತ್ರವೂ ಹೌದು, ಪ್ರಿಯವೂ ಹೌದು. ಅದನ್ನು ಮಳೆಯಲ್ಲಿ ನೆನೆಸಿ ಬಿಸಿಲಲ್ಲಿ ಒಣಗಿಸುವುದು ಅಷ್ಟೇನೂ ನಾಗರಿಕತೆಯ ಚಿಹ್ನೆಯಲ್ಲ. ನಾಲಗೆ ಮೊದಲು ಆ ಹೆಸರನ್ನು ನುಡಿದಾಗ ನಮ್ಮ ಹೃದಯದಲ್ಲಾದ ಅಲ್ಲೋಲಕಲ್ಲೋಲ, ಮೈಯ ರೋಮಾಂಚ, ಬಹುಶಃ ನಮ್ಮೆಲ್ಲರ ನೆನಪಿನಲ್ಲಿದೆ. ಅದನ್ನು ದಿನಸಾಮಾನ್ಯದ ಬಳಕೆಗಿಟ್ಟುಕೊಂಡರೆ ಆ ಮೋಹಕಶಕ್ತಿ ನಾಶವಾಗುತ್ತದೆ. ಅದಕ್ಕಾಗಿಯೇ ಸುವರ್ಣ ಪಾತ್ರೆಗಳನ್ನೂ ಮುತ್ತುರತ್ನಗಳನ್ನೂ ಜೋಪಾನವಾಗಿಡುವಂತೆ ನಾವು ಅದನ್ನು ಹೃದಯದ ಸಂದಕದಲ್ಲಿಟ್ಟು ಉತ್ಸವಕಾಲದಲ್ಲಿ ಮಾತ್ರ ಬಳಸಿಕೊಳ್ಳುತ್ತೇವೆ.

ಅಂತೂ ಕಾರಣವೇನಾದರೂ ಇರಲಿ, ಕನ್ನಡಿಗರಿಗೆ ಹೆಂಡತಿಯ ಹೆಸರು ಇದ್ದೂ ಇಲ್ಲವಾಗಿದೆ. ಅನೇಕವೇಳೆ ತಂದೆತಾಯಿಯರು ಇಡುವ ಹೆಸರುಗಳು ಉಪಯೋಗಕ್ಕೆ ಅರ್ಹವೂ ಅಲ್ಲ. ಕಮಲ, ಶಾರದ, ಲಲಿತ, ಮೊದಲಾದ ಹೆಸರುಗಳು ಎಷ್ಟು ಮನೋಹರವಾಗಿದ್ದರೂ ಔಚಿತ್ಯವರಿಯದ ಜನರ ಕೈಗೆ ಸಾವಿರ ಬಾರಿ ಸಿಕ್ಕಿ ತಮ್ಮ ಸತ್ವವನ್ನೆಲ್ಲಾ ಕಳೆದುಕೊಂಡಿವೆ. ಮತ್ತೆ ಕೆಲವು ಹಳೆಯ ಕಾಲದ ಹೆಸರುಗಳಂತೂ ಕೇಳಿದರೆ ಕಿವಿ ನೋಯುವಂಥವು ; ಅವುಗಳ ಒಡತಿಯರಿಗೆ ಅಪ್ಸರೆಯರ ಸೌಂದರ್ಯವಿದ್ದರೂ ಅವರನ್ನು ಹೆಸರಿಟ್ಟು ಕರೆಯುವುದಕ್ಕೆ ಬೇಸರವಾಗುತ್ತದೆ. ಹೆಂಡತಿಯೆಂಬ ಪದದಲ್ಲಿಯೇ ಸ್ತ್ರೀಸಹಜವಾದ ಸರಳತೆಯಿಲ್ಲ, ಮಾರ್ದವವಿಲ್ಲ. ಈ ವಿಷಯದಲ್ಲಿ ಬಂಗಾಳಿಗಳು ನಮಗಿಂತ ಎಷ್ಟೋ ಮುಂದುವರಿದಿದ್ದಾರೆ. ನಮ್ಮವರಿಗೆ ಧಾರ್ಮಿಕ ಶ್ರದ್ಧೆ ಹೆಚ್ಚಾದ್ದರಿಂದಲೋ ಏನೋ, ನಾಮಕರಣ ಸಮಯದಲ್ಲಿ ಅವರ ಗಮನ ಶಬ್ದಮಾಧುರ್ಯದ ಕಡೆಗೆ ಹರಿಯುವುದೇ ಇಲ್ಲ. ಬಂಗಾಳಿ ಕಥೆಗಳನ್ನೋದುವಾಗ ಕಥೆಯ ಸ್ವಾರಸ್ಯ ಹೇಗಾದರೂ ಇರಲಿ, ಅಲ್ಲಿಯ ಸ್ತ್ರೀಯರ ಹೆಸರುಗಳೇನೋ ನಮ್ಮನ್ನು ಸೆಳೆಯುತ್ತವೆ. ಲಾವಣ್ಯ, ಹೇಮಾಂಜಿನಿ, ಹೇಮಲತಾ, ಕಿರಣಮಾಲಾ, ರೂಪಲೇಖಾ—ನಮ್ಮಲ್ಲಿಯೂ ಇಂಥ ಹೆಸರುಗಳನ್ನೇಕೆ ಉಪಯೋಗಕ್ಕೆ ತರಬಾರದು ! ತಂದೆತಾಯಿಯರು ನಾಮಕರಣಕಾಲದಲ್ಲಿ ಮಾಡಿದ ತಪ್ಪನ್ನು ಸರಿಪಡಿಸುವ ಭಾರ ಪ್ರಿಯನ ಮೇಲೆ ಬೀಳುತ್ತದೆ. ಅವನು ಅದನ್ನು ಉತ್ಸಾಹದಿಂದ ವಹಿಸುತ್ತಾನೆಂದೂ ಹೇಳಬಹುದು. ಏಕೆಂದರೆ ಹೆಂಡತಿಯ ಹುಟ್ಟು ಹೆಸರು ಎಷ್ಟೇ ಸುಂದರವಾಗಿರಲಿ, ಲಲಿತವಾಗಿರಲಿ, ಅದು ಪ್ರಿಯನ ಮನಸ್ಸೊಪ್ಪುವಷ್ಟು ಭಾವಪೂರಿತವಾಗಿರಲಾರದು. ಹೆಸರು ಕೇವಲ ಗುರುತಿಸುವುದಕ್ಕೆ ಸಾಧನ ಮಾತ್ರವಾದರೆ ಯಾವ ಹೆಸರಿಟ್ಟರೂ ಸಾಕು. ಆದರೆ ನಮಗೆ ಬೇಕಾದದ್ದು ಅಷ್ಟು ಮಾತ್ರವಲ್ಲ. ಅವಳನ್ನು ಕಂಡಾಗ, ಅವಳ ಯೋಚನೆ ಬಂದಾಗ, ಕೊನೆಗೆ ಅವಳು ಧರಿಸಿದ ವಸ್ತ್ರದ ನೆನಪಾದಾಗ, ನಮ್ಮ ಆದ್ಯಂತ ದೇಹವನ್ನು ಕಂಪಿಸಿ ಹೃದಯವನ್ನು ದಹಿಸುವಂತೆ ಬರುವ ಒಲುಮೆಯ ಉದ್ವೇಗಕ್ಕೆ ನಾವು ಶಬ್ದರೂಪವನ್ನು ಕೊಡಬೇಕು. ಆದ್ದರಿಂದ ನಾವು ಪ್ರಿಯೆಗೆ ಬೇರೆ ಮುದ್ದಿನ ಹೆಸರೊಂದನ್ನು ಇಟ್ಟುಕೊಳ್ಳುವುದು ಅನಿವಾರ್ಯ. ಅದು ಹುಟ್ಟು ಹೆಸರಿನ ರೂಪಾಂತರವಿರಬಹುದು ; ಅದಕ್ಕಿಂತ ಕರ್ಕಶವಾಗಿ ಕಂಡರೂ ಕಾಣಬಹುದು ; ನಮ್ಮ ಮೆಚ್ಚುಗೆ ಪಡೆದ ಯಾವುದೋ ವಸ್ತುವಿನ, ಪ್ರಾಣಿಯ, ಹಕ್ಕಿಯ ಹೆಸರಿರಬಹುದು. ಯಾವುದೇ ಆಗಲಿ ಅದರ ರೂಪವನ್ನು ಬೇರೆ ಯಾರೂ ನಿರ್ಣಯಿಸಲಾರರು. ಆ ಹೆಸರು ಪ್ರೇಮದ ಕುಲುಮೆಯಿಂದ ತಾನಾಗಿ ಹಾರಿದ ಕಿಡಿ ; ಮೇಘಮಿಲನದಿಂದ ಮಿಂಚು ಹೊಳೆದಂತೆ ಪ್ರಿಯಪ್ರೇಯಸಿಯರ ಹೃದಯಮಿಲನದಿಂದ

ಮೂಡಿಬರುತ್ತದೆ. ಇತರರಿಗೆ ಅದರಲ್ಲಿ ಯಾವ ವಿಧವಾದ ವೈಶಿಷ್ಟ್ಯವೂ ಕಾಣದಿರಬಹುದು, ಆದರೆ ನಮ್ಮಲ್ಲಿರುವ ಭಾವೋದ್ರೇಕದಿಂದ ಅದಕ್ಕೆ ಶಕ್ತಿ ಸೌಂದರ್ಯಗಳು ಕೂಡಿಬರುತ್ತವೆ. ಚಿನ್ನ ಎಂಬ ಪದದಲ್ಲಿ ಏನಿದೆ! ಸುಸಂಸ್ಕೃತರಿಗೆ ಚಿನ್ನ ನಿಕೃಷ್ಟವಾದ ಪದಾರ್ಥವೆಂದರೂ ಎನ್ನಬಹುದು. ಆದರೆ ನಾನು ನನ್ನ ಜೀವದ ಗೆಳತಿಯನ್ನು ಚಿನ್ನಾ ಎಂದು ಕರೆಯುವಾಗ ನನಗೆ ಆ ಲೋಹದ ನೆನಪಿಲ್ಲ. ನನ್ನೆದುರಿಗೆ ಆಗ ರೂಪುಗೊಳ್ಳುವುದು ಕೇವಲ ಒಂದು ಸ್ತ್ರೀ ರೂಪವೂ ಅಲ್ಲ, ಚಿನ್ನದಂತಿರುವ ಅವಳ ಮುಖರಾಗ ಮಾತ್ರವಲ್ಲ, ಅವಳ ನಿಲುವಿನ ಬೆಡಗು, ನಡಿಗೆಯ ವಿಲಾಸ, ವಸ್ತ್ರ ಭೂಷಣಗಳು, ಸುಗಂಧ ದ್ರವ್ಯ, ಕೊರಳದನಿ—ಇಷ್ಟುಮಾತ್ರವೂ ಅಲ್ಲ. ಆ ಮುದ್ದಿನ ಹೆಸರು ಇಂದ್ರಿಯಗಳಿಗೆ ಗೋಚರವಾದ ವಸ್ತುಗಳ ಸಂಕೇತ ಮಾತ್ರವಲ್ಲ. ಇವೆಲ್ಲವನ್ನೂ ಒಳಗೊಂಡು, ಜಗತ್ತೆಲ್ಲವನ್ನೂ ಆವರಿಸಿ, ವೇದಾಂತಿಗಳು ಪರವಸ್ತುವಿನಲ್ಲಿ ಕಾಣುವ ಆನಂದವನ್ನು ನಮ್ಮ ಹೃದಯದಲ್ಲಿ ತುಂಬಿ, ತನ್ನದೇ ಒಂದು ಲಯಕ್ಕೆ ನಮ್ಮನ್ನು ಕುಣಿಸುತ್ತಿರುವ ಅದ್ಭುತ ಶಕ್ತಿಯೊಂದರ ಸಂಕೇತ.

ಮುದ್ದಿನ ಹೆಸರುಗಳೂ ಕನ್ನಡದಲ್ಲಿ ನಮಗೆ ಸಿಕ್ಕುವುದು ಅಪರೂಪ. ಸಂಸ್ಕೃತದಲ್ಲಿ ದಿವ್ಯವಾದ ಪದಗಳೇನೋ ಇವೆ. ರಾಮನು ಸೀತೆಯನ್ನು ಪ್ರಿಯದರ್ಶಿನಿ, ವರವರ್ಣಿನಿ ಎಂದು ಮುಂತಾಗಿ ಕರೆದಿದ್ದಾನೆ. ಆ ಕಾಲದಲ್ಲಿ ಇಂಥ ಪದಗಳು ಮನೆಮಾತಾಗಿದ್ದು ಅವುಗಳಲ್ಲಿ ಭಾವ ತುಂಬಿ ತುಳುಕುತ್ತಿದ್ದಿತೋ ಏನೊ. ಆದರೆ ಈಗ ಅವನ್ನು ಕಾವ್ಯದ ಕಳಂಕ ಮುಸುಕಿದೆ. ಸಂಸ್ಕೃತದಲ್ಲಿ ಓದಲು ಸೊಗಸೇ ಹೊರತು ಕನ್ನಡದಲ್ಲಿ ಉಪಯೋಗಿಸಲು ಸಾಧ್ಯವಿಲ್ಲ. ಪ್ರಿಯೆ, ಕಾಂತೆ, ನಲ್ಲೆ, ಮುಂತಾದ ಪದಗಳು ಬಳಕೆಯಲ್ಲಿದ್ದರೂ ಅವು ಸಹ ಭಾವಗೀತಗಳ, ನಾಟಕಗಳ ಪಾಲಾಗಿ ಹೋದವು. ಯಾರನ್ನಾದರೂ ಪ್ರಿಯೆ ಎಂದು ಕರೆಯಬೇಕಾದರೆ ನಾವು ಚಮಕಿ ಅಂಗಿಯನ್ನು ತೊಟ್ಟು, "ಹೊಸ ಡ್ರೆಸ್ಸು ಹೊಸ ಸೀನರಿ" ಗಳಿಂದ ಮೆರೆಯುವ ರಂಗಸ್ಥಳದ ಆವರಣದಲ್ಲಿ ಹೋಗಿ ನಿಲ್ಲಬೇಕು. ಇಂಗ್ಲಿಷಿನವರೇನೋ ಡಾರ್ಲಿಂಗ್, ಡಿಯರ್, ಸ್ವೀಟ್, ಲವ್, ಮುಂತಾದ ಪದಗಳನ್ನು ಸ್ವಾಭಾವಿಕವಾಗಿ ಉಪಯೋಗಿಸುತ್ತಾರೆ. ಆದರೆ ನಾವು ಅಂಥ ಪದಗಳನ್ನು ಬಹಳ ಕಷ್ಟಪಟ್ಟರೆ ಪ್ರಣಯ ಪತ್ರಗಳಲ್ಲಿ ಉಪಯೋಗಿಸಬಹುದಾದರೂ ಅವುಗಳ ಬಳಕೆ ಸ್ವಾಭಾವಿಕ ಜೀವನಕ್ಕೆ ಹೊರತು. ಇಲ್ಲ, ನಮ್ಮ ನಲ್ಲೆಯರು ಒಳ್ಳೆಯ ಸವಿನುಡಿಗಳಿಂದ ಕರೆಸಿಕೊಳ್ಳುವ ಭಾಗ್ಯವನ್ನು ಪಡೆದು ಬರಲಿಲ್ಲ. ಕೊನೆಗೆ ಇಂಥ ಪದಗಳು ನಮಗೂ ಇಲ್ಲದೆ ನಾಟಕದವರಿಗೂ ಇಲ್ಲದೆ ನಿಘಂಟಿನಲ್ಲಿ ಗೋರಿಯಾಗುವ ಕಾಲ ಸಮೀಪಿಸುತ್ತಾ ಇದೆ.

ಕನ್ನಡಿಗರೆಲ್ಲರಿಗೂ ಇರುವಂತೆ ನನಗೂ ಮಾತೃಭಾಷೆಯಲ್ಲಿ ಅಮಿತವಾದ

ಭಕ್ತಿ. ಆದರೂ ಇದೊಂದು ವಿಷಯದಲ್ಲಿ ಮಾತ್ರ ಕನ್ನಡಮಾತೆಯನ್ನು ದೂರದೆ ಇರಲಾರೆ. ಆಕೆಯನ್ನು ವರ್ಷಗಟ್ಟಲೆ ಅರ್ಚಿಸಿಯಾಯಿತು; ಹುಟ್ಟಿದಾರಭ್ಯ ಆಕೆ ಕಲಿಸಿದ ಮಾತುಗಳನ್ನು ತೊದಲಿಯಾಯಿತು. ಆದರೂ ಹೆಂಡತಿಯನ್ನು ಕರೆಯುವುದಕ್ಕೆ ಒಂದು ಪದ ಬೇಕಾದರೆ ನಾವು ಇಂಗ್ಲಿಷಿನ ಶರಣು ಹೋಗಬೇಕು. ತನ್ನ ಮೇಲಿರುವ ಪ್ರೇಮ ಸೊಸೆಯ ಕಡೆ ತಿರುಗುತ್ತಿರುವುದನ್ನು ನೋಡಿದರೆ ತಾಯಿಗೆ ಅಸಹನೆ ಬರುತ್ತದೆಂದು ಮನಶ್ಶಾಸ್ತ್ರಜ್ಞರು ಹೇಳುತ್ತಾರೆ. ಕನ್ನಡಮ್ಮನಿಗೂ ನಮ್ಮ ಹೆಂಡತಿಯರನ್ನು ಕಂಡರೆ ಈ ಬಗೆಯ ಮಾತ್ಸರ್ಯವಿರಬಹುದು:—ಅಂತೂ ತಾಯ್ನುಡಿಯಲ್ಲಿ ಅವರನ್ನು ಸಂಬೋಧಿಸುವುದು ಕಷ್ಟವಾಗಿದೆ.

ಎ. ಎನ್. ಮೂರ್ತಿರಾವ್.

ಇಂದಾಗಲಿ !

೧. ಮಲಗು ಮನದನ್ನೆ, ಮಲಗೆಲೆಗೆ ಚೆನ್ನೆ :
ಕೊಳದ ತಾವರೆಯ ಹೃದಯದಲಿ ತುಂಬಿ
ಸೆರೆಯಾಗಿದೆ.
ಮಲಗು ಮನದನ್ನೆ, ಮಲೆಯ ಜೇನನ್ನೆ,
ದಣಿದ ರವಿಬಿಂಬವದ್ರಿಮಂಚದಲಿ
ಮರೆಯಾಗಿದೆ.

೨. ಮಲಗು ಮನದನ್ನೆ, ನನ್ನಿನಿಯ ಕನ್ನೆ,
ಬನಬನವ ತೇಲಿ ಅಲೆವ ತೆಂಗಾಳಿ
ತಂಪಾಗಿದೆ.
ತಿಂಗಳಿನ ಸೊಂಪು ; ತೇನೆಯುಲಿಯಿಂಪು ;
ಕೇತಕಿಯ ಧೂಳಿ ತುಂಬಿದೀ ಗಾಳಿ
ಕಂಪಾಗಿದೆ.

೩. ಮಲಗು ಮನದನ್ನೆ, ಮಲಗೆನ್ನ ಚೆನ್ನೆ ;
ನಿನ್ನ ಹೂಗೆನ್ನೆಗಳಲೆನ್ನ ಕೆನ್ನೆ
ಒಂದಾಗಲಿ.
ಮಲಗು ಮಲಗೆನ್ನೆ, ಬಾಳಿರುಳ ಜೊನ್ನೆ ;
ಅಂದಿಂದು ನಿನ್ನೆ ನಾಳೆಯಲಿ ಸೊನ್ನೆ :
ಇಂದಾಗಲಿ !

ಕುವೆಂಪು.

ರಾಧೆಯ ಕ್ಷಮೆ

"ಕುಲಸತಿಗೆ ಕ್ಷಮೆಯೊಳ್
ನೆಲವೆಣ್ಣೆ ಎಣೆಯಲ್ತೆ!"

—ಆರ್ಯೋಕ್ತಿ.

ಬೆಳಗಾಗಿತ್ತು. ಗಡಿಯಾರ ನೋಡಿಕೊಂಡೆ. ಆಗಲೇ ಎಂಟುಗಂಟೆಯ ಹತ್ತಿರವಾಗಿದೆ. ಪದ್ಮ ಆರು ಗಂಟೆಗೇ ಎದ್ದು, ಅಲ್ಲೇ ತೊಟ್ಟಿಲಲ್ಲಿ ನಿದ್ರಿಸುತ್ತಿದ್ದ ಅರುಣ ಮರಿಯನ್ನು ಒಂದುಸಲ ನೋಡಿ, ಅವನ ಹೊದ್ದಿಕೆ ಸರಿಮಾಡಿ ಹೋಗಿದ್ದಳು. ಯಾವಾಗಲೂ ಬೆಳಗಿನ ಜಾವ ಐದು ಗಂಟೆಗೇ ಎದ್ದುಬಿಡುತ್ತಿದ್ದ ನಾನು, ಈ ದಿನ ಆ ಹೊತ್ತಿಗೇ ಎಚ್ಚರವಾದರೂ ಹಾಗೆಯೇ ಹಾಸಿಗೆಯ ಮೇಲೆ ಮಲಗಿ ಯೋಚಿಸುತ್ತಿದ್ದೆ. ಸಮಯ, ಅದರಲ್ಲೂ ಕಡೇ ಎರಡು ಗಂಟೆಗಳು ನಿರಾತಂಕವಾಗಿ ಶಾಂತವಾಗಿತ್ತು. ಮೂರು ದಿನಗಳಿಂದ ಮನಸ್ಸಿನಲ್ಲೇ ಒಂದು ಚಿತ್ರರಚನೆಗೆ ಪ್ರಾರಂಭಿಸಿದ್ದೆ. ವಿಷಯ—ರಾಧೆಯ ಕ್ಷಮೆ. . . . ಲೋಕಕ್ಕೆ ಮದನನನ್ನು ಕೊಟ್ಟ ಶ್ರೀ ಕೃಷ್ಣ ರಾಧೆಯ ವಿಷಯದಲ್ಲಿ ಒಂದುಸಲ ಅಪರಾಧಿಯಾಗುತ್ತಾನೆ. ಬರುವುದಾಗಿ ಹೇಳಿ ಬಾರದೆ ನಿಂತ ಪ್ರಿಯಸಿಗಾಗಿ ಹಿಂದಿನ ರಾತ್ರಿಯೆಲ್ಲಾ ಕಾದು ಕಾದು, ಕೋಪದಲ್ಲಿ ಬೆಂದು, ಕಣ್ಣೀರಿನಲ್ಲಿ ತೊಯ್ದು, ನಿಡುಸುಯ್ಲಲ್ಲಿ ಬಾಡಿದ ಪ್ರಿಯತಮೆಯನ್ನು ಮಾರನೆ ಬೆಳಿಗ್ಗೆ ಕೃಷ್ಣ ಸಮಾಧಾನ ಮಾಡುತ್ತ ಕ್ಷಮಾಭಿಕ್ಷೆ ಬೇಡುತ್ತಾನೆ. ತನ್ನಿದಿರಲ್ಲಿ ಜಗದೊಡೆಯನೂ, ಮುರವೈರಿಯೂ, ಸಹಸ್ರ ಸಹಸ್ರ ಗೋಪಿಕಾ ಮನೋವಲ್ಲಭನೂ ಆದ ಗಂಡುಗಲಿಯ ಅತಿದೈನ್ಯವನ್ನು ಕಂಡು, ಹೆಮ್ಮೆಯಿಂದ ಹೆಣ್ಣುಹೃದಯ ಕರಗುತ್ತದೆ. ರಾಧೆ ಪ್ರಸನ್ನಳಾಗಿ ಕ್ಷಮಿಸುತ್ತಾಳೆ. . . . ಯೋಚಿಸಿದಷ್ಟೂ ಸುಂದರವಾಗುತ್ತ ಬರುವ ಈ ಮನೋಹರವಾದ ಸನ್ನಿವೇಶವನ್ನು ಹೇಗೆ ರೂಪಿಸಲಿ? . . . ಯಾವ ಹಿನ್ನೆಲೆ? . . . ವರ್ಣವಿನ್ಯಾಸ ಯಾವ ರೀತಿ ಇರಬೇಕು? ಕೃಷ್ಣರಾಧೆಯರ ಆಕೃತಿಗಳ ಪರಸ್ಪರ ಸಂಬಂಧವನ್ನೂ ಸಮತೂಕವನ್ನೂ ಅಳವಡಿಸುವ ನಾನಾ ರೇಖೆಗಳ ಓಟ—ಸಮನ್ವಯಗಳು ಹೇಗಿರಬೇಕು? . . . ಇವೆಲ್ಲಾ ಚಿತ್ರಶಿಲ್ಪಿಯ ಸಮಸ್ಯೆಗಳು. ಈ ದಿನ ಬೆಳಿಗ್ಗೆ ಎರಡು ಮೂರು ಗಂಟೆ ಮನಸ್ಸಿನಲ್ಲೇ ವಿಷಯವನ್ನು ತಿರುವಿಹಾಕುವುದರಲ್ಲಿ ಸಮಸ್ಯೆಗಳನ್ನೆಲ್ಲಾ ಬಿಡಿಸಿಕೊಂಡಿದ್ದೆ. ಇನ್ನು ಚಿತ್ರರಚನೆಗೆ ಕೈಹಾಕುವುದೊಂದೇ ಉಳಿದಿತ್ತು. ಪುನಃ ಗಡಿಯಾರ ನೋಡಿದೆ; ಎಂಟು ಗಂಟೆಗೆ ನಾಲ್ಕು ನಿಮಿಷ ಇತ್ತು. ಎಂಟಕ್ಕೆ ಸರಿಯಾಗಿ ಎದ್ದುಬಿಡುವುದೆಂದು ನನಗೆ ನಾನೇ

ಇನ್ನು ಸ್ವಲ್ಪ ರಿಯಾಯಿತಿ ತೋರಿಸಿದೆ. ಆ ವೇಳೆಗೆ ಕೊಠಡಿಯ ಬಾಗಿಲಲ್ಲಿ ಕಾಣಿಸಿಕೊಂಡಳು ರಾ—ಅಲ್ಲ ಪದ್ಮ. "ಛಿ! ಇದೇನು, ಬೆಳಗಾಗತ್ಲೂ ಬಲ್ಗಾಲ್ಕಡೀತಾ ಇದೆ ಇವತ್ತು!" ಎಂದು ಕಡೀತಿದ್ದ ಅಂಗಾಲನ್ನು ಹೊಸಲಿಗೆ ತೀಡತೊಡಗಿದಳು. ನಾನು "ಓಹೋ! ಹಾಗಾದ್ರಿವತ್ತು ಹುಷಾ—ಆ—ಆ—ಹ್ಛಿ!" ಎಂದು, ಹೇಳಬೇಕೆಂದಿದ್ದ ಮಾತನ್ನೂ ಒಂಟಿಸೀನನ್ನೂ ಬೆರಕೆಮಾಡಿಬಿಟ್ಟೆ! ಅರುಣಮರಿ ತಾರಸಿ ತೂರಿಕೊಂಡು ಹೋಗುವ ಹಾಗೆ ಚಿಟಾರನೆ ಚೀರಿ ಅಳತೊಡಗಿದ. ಪದ್ಮ ಕೂಡಲೆ ಹೋಗಿ ಅವನನ್ನು ಎತ್ತಿಕೊಂಡು, ಕೈಯಲ್ಲಿ ತೂಗಿ ಸಮಾಧಾನ ಮಾಡುತ್ತ ಮಂಚದ ಸಮಿಾಪಕ್ಕೆ ಬಂದಳು. ನಾನು,

"ಲೇ, ಇವತ್ಯಾಕೋ ಚೆನ್ನಾಗಿಲ್ಲ! ನಿನಗ್ಬಲ್ಗಾಲ್ಕಡಿತ!—ನನ್ಮೊಗ್ನಿಂದ ಒಂಟಿ ಅಟಾಮಿಕ್ ಬಾಂಬು!! ಇವತ್ತೆಲ್ಲಾ ಇಬ್ರೂ ಬಲು ಹುಷಾರಾಗಿರ್ಬೇಕು—ನೋಡ್ಕೋ!"

—ಎಂದೆ.

"ಹೀಗೆಲ್ಲಾ ಯಾಕಾದ್ದು ಗೊತ್ತೇ?"

"ಹೇಳು—ಯಾಕೆ?"

"ಎಂದೂ ಇಲ್ದ ಸೋಮಾರ್ತನ ಇವತ್ನಿಮ್ಗೆ! ಅದಕ್ಕೇ!"

"ಏನು ಹಾಗಂದ್ರೆ!—ಕೆಲ್ಸಾ ಮಾಡ್ತಿದ್ದೆ!"

—ಎಂದು ಬಹಳ ಗಂಭೀರವಾಗಿ ಹೇಳಲು ಪ್ರಯತ್ನಪಟ್ಟೆ.

"ಅಬ್ಬಾ!—ಅದೆಂಥಾ ಕೆಲಸ್ವೋ! ಕೈಕಾಲ್ಕೂಡಾ ಆಡಸ್ದೆ ಪಿಳ್ಪಿಳಾಂತ ಕಣ್ಬಿಟ್ಕೊಂಡು!"

"ಅದೆಲ್ಲಾ ನಿಮುಗ್ಗೊತ್ತಾಗೊಲ್ಲಾ ಪದ್ಮಾ. ನಮ್ಕಸಬ್ನಲ್ಲಿ ಕೈಕೆಲಸಕ್ಕಿಂತ ತಲೇಕೆಲಸ್ವೇ ಹೆಚ್ಚು ಕಣೇ!"

"ಹುಂ!—ಇರ್ಲಿರ್ಲಿ! ನಿಮ್ಕೈಕೆಲ್ಸಾ ತಲೇಕೆಲ್ಸಾ ಎಲ್ಲಾ. ಸದ್ಯ ಮೈ ಕೊಡವ್ಕೊಂಡೇಳಿ!—ಅಲ್ಲೀ, ನಿಂಬಾಯ್ಕೆಲ್ಸಕ್ಕಾದಿದೆ ಬಟಾಣ ಉಸ್ಲಿ."

ಪದ್ಮ ಆ ಕೊನೇಮಾತಿನ ಕೊನೇ ಅಕ್ಷರವನ್ನು ಉಚ್ಚಾರಮಾಡುವುದರೊಳಗಾಗಿ ನನ್ನ ದೇಹಾದ್ಯಂತವೂ ವಿದ್ಯುತ್ ಪ್ರವಹಿಸಿ, ಎಲ್ಲೂ ಇಲ್ಲದ ಚಟುವಟಿಕೆಯಿಂದ ಏಳುವುದರಲ್ಲಿದ್ದೆ. ಅಷ್ಟರಲ್ಲಿ ಪದ್ಮ,

"ಹಾ! ಹಾ! ಹಾಗೇ ಮಲಕ್ಕೊಳ್ಳಿ ಸ್ವಲ್ಪ!"

—ಎಂದು ನನ್ನನ್ನು ಒಂದು

ಕೈಯಿಂದ ಹಿಂದಕ್ಕೆ ತಳ್ಳಿದಳು. ನನಗೆ ಆಶ್ಚರ್ಯವಾಯಿತು. ಬಟಾಣಿ ಉಸಲಿ ಆರಿ ಹೋದರೆ ಚೆನ್ನಾಗಿರೊಲ್ಲ.

"ಯಾಕೇ ?"—ಎಂದು ದಿಗ್ಭ್ರಾಂತನಾಗಿ ಕೇಳಿದೆ.

"ಅಲ್ಲಾಂದ್ರೇ, ಹೊತ್ತಿಷ್ಟಾದ್ರೂ ಹಾಸ್ಗೆ ಬಿಟ್ಟೇಳ್ದೆ—ಒಂಟ್ಸೀನ್ಸೀತು—ಈಗ ಎಡಮಗ್ಲಲ್ಬೇರೇ ಏಳ್ಬೇಕೇ !"

—ಎಂದು, ಅರುಣನನ್ನು ಕೆಳಗಿಳಿಸಿ, ನನ್ನನ್ನು ಬಲ ಮಗ್ಗುಲಿಗೆ ಹೊರಳಿಸಿ, ಎಬ್ಬಿಸಿ, ಪರಿಹಾರಮಾಡಿದಳು. ಆದರೇನು ?—ಎಡಮಗ್ಗುಲಿಂದ ಮುಕ್ಕಾಲುಪಾಲು ಎದ್ದುಬಿಟ್ಟಿದ್ದೆ !

* * * * *

ಈ ದಿನ ನಾನು ಚಿತ್ರ ಬರೆಯುವುದಕ್ಕೆ ಕುಳಿತುಕೊಳ್ಳುವುದಾಗಿಯೂ, ನನ್ನ ಕೆಲಸಕ್ಕೆ ಯಾವ ಅಡ್ಡಿಯೂ ಆಗಕೂಡದೆಂದೂ, ನನ್ನನ್ನು ಹುಡುಕಿಕೊಂಡು ಯಾರು ಬಂದರೂ ನಾನಿಲ್ಲ—ಎಂದು ಹೇಳಬೇಕೆಂದೂ ಪದ್ಮಳಿಗೆ ಕಟ್ಟಪ್ಪಣೆಮಾಡಿದ್ದೆ. "ಕಟ್ಟಪ್ಪಣೆ" ಅನ್ನುವ ಮಾತನ್ನು ನನ್ನ ತೃಪ್ತಿಗೆ ನಾನು ಹೇಳಿಕೊಳ್ಳುತ್ತಿದ್ದೇನೆ—ಅಷ್ಟೆ; ಇಂತಹ ಅಪ್ಪಣೆಗಳಿಂದ ಪದ್ಮಳಿಗೆ ಯಾವತ್ತೂ ವಿನಾಯಿತಿ ! ಅದನ್ನು ಅವಳೇ ಮಾಡಿಕೊಂಡು ಅಪ್ಪಣೆ ನಡೆಸುತ್ತಾಳೆ—ಸಾಧ್ಯವಾದ ಮಟ್ಟಿಗೆ.

* * * * *

ಬೆಳಿಗ್ಗೆ ಒಂಬತ್ತು ಗಂಟೆಗೆ, ಬಟಾಣಿ ಉಸಲಿ ತಿಂದು ಕಾಫಿ ಕುಡಿದು ನನ್ನ "ಸ್ಟೂಡಿಯೋ"ದಲ್ಲಿ ಚಿತ್ರ ಬರೆಯಲು ಕುಳಿತವನು ಮಧ್ಯಾಹ್ನ ಮೂರು ಗಂಟೆಯ ತನಕ ಜಾಗಾಬಿಟ್ಟು ಕದಲಿರಲಿಲ್ಲ. ಚಿತ್ರದ ಕೆಲಸ ಮುಕ್ಕಾಲುಪಾಲು ಮುಗಿದಿತ್ತು. . . . ಒಂದು ವನದ ಹಿನ್ನೆಲೆ. ಮುನ್ನೆಲೆಯ ಬಲಮೂಲೆಯ ಕಡೆ ಒಂದು ಬಕುಳ ವೃಕ್ಷ. ಅದಕ್ಕೆ ಒರಗಿ, ಮೇಲೆತ್ತಿದ ಬಲತೋಳನ್ನು ಮರದ ಕಾಂಡಕ್ಕೆ ಒತ್ತಿಕೊಂಡು, ಎಡಗೈಯನ್ನು ಸೊಂಟದ ಮೇಲಿಟ್ಟು, ಕೃಷ್ಣನಕಡೆ ಅರೆಬೆನ್ನು ತಿರುಗಿಸಿ, ರೂಪಸಿಯ ತನುಲತೆಗೆ ಮಾತ್ರ ಸಾಧ್ಯವಾದ ಒಂದು ನಿಲುವಿನಲ್ಲಿ ಹಬ್ಬಿನಿಂತಿದ್ದಾಳೆ—ಗೋಪಿಕಾ ರತ್ನ ರಾಧೆ. ನಿಂತ ನಿಲವಿನಲ್ಲಿ, ದೇಹಪರಾಙ್ಮುಖವಾಗಿದ್ದರೂ ಹೃದಯ ಪ್ರಸನ್ನವಾಗಿದೆ—ಎಂಬಂತೆ ಮುಖವನ್ನು ತಿರುಗಿಸಿ, ಕೊರಳನ್ನು ಕೊಂಕಿಸಿ, ಕಡೆಗಣ್ಣ ಕೆಳನೋಟದಿಂದಲೇ ಪರಮಾತ್ಮನನ್ನು ಆತ್ಮಗತಮಾಡಿಕೊಳ್ಳುತ್ತ, ತನ್ನ ರಸಾಧರಗಳ ಮೆಲುನಗೆಯ ಅಮೃತದಿಂದ ಪೂರ್ಣಾಭಿಷೇಕ ಮಾಡುತ್ತಿದ್ದಾಳೆ—ಅಚ್ಯುತನಿಗೆ. ಒಂದು ಅವತಾರದಲ್ಲಿ, ಮೂರು ಲೋಕವನ್ನೂ ಮೂರೇ ಹೆಜ್ಜೆಗಳಲ್ಲಿ ಅಳೆದ ಬಲಿಮರ್ದನನು ನೆಲದ ಮೇಲೆ, ರಾಧೆಯ ಚರಣತಲದಲ್ಲಿ ಕುಳಿತು, ಅವಳ ಎಡಪಾದ

ಪದ್ಮವನ್ನು ತನ್ನ ಬಲತೊಡೆಯ ಮೇಲಿರಿಸಿಕೊಂಡು, ಅದರ ಮೇಲೆ ಚರಾಚರ ಜಗತ್ತನ್ನೂ ಜುಂ!—ಎನಿಸುವ ತನ್ನ ಮುರಳಿಯನ್ನು ಕಾಣಿಕೆಯಾಗಿ ಅರ್ಪಿಸಿ, ದೈನ್ಯ ಉಕ್ಕುತ್ತಿರುವ ಕಣ್ಣುಗಳನ್ನು ಮೇಲೆತ್ತಿ, ರಾಧೆಯನ್ನು ನೋಡುತ್ತಿದ್ದಾನೆ—ಬೇಡುತ್ತಿದ್ದಾನೆ. ಕೃಷ್ಣ ಏನು ಹೇಳುವನೋ—ರಾಧೆ ಏನು ಉತ್ತರ ಕೊಡುವಳೋ—ಎಂದು ಕೌತುಕದಿಂದ ಆಲಿಸಿ ಕೇಳುತ್ತಿರುವಂತೆ, ಬಕುಳವೃಕ್ಷದ ಒಂದು ರೆಂಬೆ, ಹೂವೆಲ್ಲ ಕಣ್ಣಾಗಿ, ಎಲೆಯೆಲ್ಲ ಕಿವಿಯಾಗಿ ರಾಧೆಯ ತಲೆಯ ಮೇಲು ಭಾಗದಲ್ಲಿ ಹರಡಿ ನಿಂತಿದೆ. . . . ಪ್ರತಿಭೆ ಹರಿದಷ್ಟೂ—ಊಹೆ ಓಡಿದಷ್ಟೂ—ರಸಪೂರ್ಣವಾಗುವ, ಯುಗಾಂತರದ್ದಾದರೂ ಚಿರನೂತನವಾಗಿಯೇ ಇರುವ, ಈ ಅನುಪಮ ಪ್ರಣಯಪ್ರಸಂಗವನ್ನು, ಕಾಗದದ ಮೇಲೆ ವರ್ಣಗಳಲ್ಲಿ ವ್ಯಕ್ತಗೊಳಿಸಲು ನನ್ನ ಕಲ್ಪನಾಶಕ್ತಿಯೆಲ್ಲವನ್ನೂ ಧಾರೆಯೆರೆದಿದ್ದೆ. ಇನ್ನು ಒಂದು ಗಂಟೆ ಕೆಲಸಮಾಡಿದರೆ ಚಿತ್ರಮುಗಿಯುವಂತಿತ್ತು. ಆ ಸಮಯದಲ್ಲಿ ನಾನು ಹಾಗೆಯೇ ಹಿಂದಕ್ಕೆ ಒರಗಿಕೊಂಡು, ಚಿತ್ರದ ಮೇಲೆ ಕಣ್ಣಾಡಿಸುತ್ತ, ಕೈಲಿದ್ದ ಕುಂಚವನ್ನು ಆಗಾಗ ಬೇಕಾದ ಬಣ್ಣದಲ್ಲಿ ಅದ್ದಿ, ಬೇಕೆಂದು ತೋರಿದ ಕಡೆ ನೋಂಕಿಸುತ್ತ ಅದನ್ನು ಮುಕ್ತಾಯಗೊಳಿಸುತ್ತಿದ್ದೆ. ಆ ವೇಳೆಗೆ ನನ್ನ ಕಟ್ಟಪ್ಪಣೆಗಳ "ವಿನಾಯಿತಿ"ಯ ಅನಿರೀಕ್ಷಿತ ಆಗಮನವಾಯಿತು! ಪದ್ಮ ಬಂದದ್ದಕ್ಕೆ ಆಶ್ಚರ್ಯಸೂಚನೆಯೇಕೆ?—ಎಂದು ಯಾರಿಗಾದರೂ ತೋರತಕ್ಕದ್ದೇ. ಆದರೆ ಅದಕ್ಕೆ ಕಾರಣ—ಬಲವಾದ ಕಾರಣ—ಇದೆ. ಪದ್ಮ ನನ್ನೆಡೆಗೆ ಬರುವುದರಲ್ಲಿ, ಎಂದೂ ಸಾಧಾರಣ—ನೀರಸ—ಗದ್ಯಶೈಲಿಯಲ್ಲಿ ಸುಮ್ಮನೆ ನಡೆದುಬಂದಿಲ್ಲ. ಪದ್ಮಕ್ಕೆ ಎಷ್ಟು ದಳಗಳಿವೆಯೋ ಅಷ್ಟು ವೈವಿಧ್ಯವಿದೆ ಅವಳು ನನ್ನ ಬಳಿಗೆ ಬರುವ ರೀತಿಯಲ್ಲಿ. ಚಿಲ್ಲರೆಕಾಸು ಕೇಳಬೇಕೆಂದಿದ್ದರೆ ಒಂದು ಶೈಲಿ; "ಪ್ರಭಾತ್" ಸೀರೆ, "ಬಂಧನ್" ಬಳೆ—ಇಂತಹ ಸ್ವಲ್ಪ ಹೆಚ್ಚು ಖರ್ಚಿನ ಬಾಬಿಗೇ ಬೇರೇ ನೋಗು. ಬೆಳಗಿನ ಹೊತ್ತು ಅವಳು ಬರುವ ಒಂದು ರೀತಿಯಿಂದಲೇ, ಆ ದಿನ ಮಧ್ಯಾಹ್ನ "ಭೂಪೇಂದ್ರಾ" ಟಾಕೀಸ್‌ನಲ್ಲಿ ಲೀಲಾ ಸಮರ್ಥಳೋ ಶೋಭನಾ ಚಟ್ನೀಸೋ ಪ್ರತ್ಯಕ್ಷ ಎಂದು ಊಹಿಸಬಹುದು. ನನ್ನ ಮೇಲೆ ಏನಾದರೂ ಕುಚೇಷ್ಟೆಯನ್ನು ತೀರ್ಮಾನಿಸಿದ್ದರೆ ಆಗೊಂದು ವಿಧ. ಕ್ಷೌರುಮನೆಗೆ ಹೋಗುವ ಏರ್ಪಾಡು ಮಾಡಿಕೊಂಡಿದ್ದರೆ ಆಗಿನ ವರಿಸೆಯೇ ಬೇರೆ. ಅರುಣನ ವಿಷಯ ಏನಾದರೂ ವರದಿ ಮಾಡುವುದಿದ್ದರೆ ಆಗ ಹೊತ್ತು-ಗೊತ್ತು ಏನೂ ಇಲ್ಲ! ಬರುವ ಶೈಲಿಯೋ, ವರದಿ ಮಾಡುವ ವಿಷಯದ ಗುರುಲಾಘವಗಳಿಗನುಗುಣವಾಗಿ, ತರಹೇವಾರಿ ಛಂದೋಬದ್ಧಶೈಲಿ! ಇಷ್ಟಾದರೂ ಅವಳಿಗೆ ನವನವೀನವಾದ "ಸರಳರಗಳೆ"ಯ ಪರಿಚಯವೇ ಇಲ್ಲ! ಆದರೆ ಇಂದು ಪದ್ಮ ಬಂದ ಶೈಲಿ ಈ ಎಲ್ಲ ರೀತಿಗಳಿಂದಲೂ ಬೇರೆಯಾಗಿತ್ತು. ಅದು "ಚಂಡ

ಮೂರುತಾಕ್ರಾಂತ"ದ ರುದ್ರಶೈಲಿ—ಎಂದರೆ ಬಹಳ ಸಮಂಜಸವಾಗಿರುವುದು. ಪದ್ಮ ನನ್ನ ಬಳಿಗೆ ಬರುವಾಗ ಯಾವ ರೀತಿಯನ್ನನುಸರಿಸಿದರೂ ಸಾಧಾರಣವಾಗಿ ಅದು ನನಗೆ ಸುಖವನ್ನುಂಟುಮಾಡುವುದೇ ಹೌದು; ಆದರೆ ಈ ದಿನ ಈ ಹೊತ್ತಿನಲ್ಲಿ ಅವಳು ಬರದೆ ಇನ್ನು ಅರ್ಧ-ಮುಕ್ಕಾಲು ಗಂಟೆ ತಡೆದುಬಂದಿದ್ದರೆ ಚೆನ್ನಾಗಿತ್ತು. ನನ್ನ ಚಿತ್ರ ಮುಗಿದು, ಅವಳ ಯಾವ ರೀತಿಯ ಬರವಿಗೂ ನಾನು ಸಿದ್ಧವಾಗಿರುತ್ತಿದ್ದೆ; ಎಲ್ಲಾ ಸರಿಯಾಗುತ್ತಿತ್ತು. ಈ ಸಮಯದಲ್ಲಿ ಅವಳು ಬಂದದ್ದರಿಂದ ನನಗೆ ಅಹಿತವಾಗದಿದ್ದರೂ ನನ್ನ ಕೆಲಸಕ್ಕೆ—ಅದೂ ಕೊನೆಗಾಣುವುದರಲ್ಲಿದ್ದ ಕೆಲಸಕ್ಕೆ—ಅಡ್ಡಿಯಾಯಿತು. ತನ್ನನ್ನು ಬಿಟ್ಟು ಮತ್ತಾವುದಕ್ಕೂ ನನ್ನಿಂದ ಅಗ್ರಪೂಜೆ ಸಲ್ಲಕೂಡದು—ಎಂಬ ಮನೋಭಾವದ ಹೆಣ್ಣು ಪದ್ಮ. ಬಹುಮಟ್ಟಿಗೆ ಇಂತಹ ಭಾವನೆ, ಹೆಣ್ಣಿಗೆ ತಾನೊಲಿದ ಗಂಡಿನ ವಿಷಯವಾಗಿ ಇರಬೇಕಾದ್ದೇ. ರಾಧಾಕೃಷ್ಣರ ಪ್ರಣಯ ಚಿತ್ರವನ್ನು ನಾನು ಕಲ್ಪಿಸಿಕೊಂಡ ರೀತಿಯಲ್ಲೂ, ಇದೇ ತೆರನಾದ ಭಾವನೆ ಒಂದು ಬಗೆಯಾಗಿ ಪ್ರಕಟಿತವಾಗಿತ್ತು. ಹದಿನಾರು ಸಾವಿರ ಹೆಣ್ಣು ಹೃದಯಗಳ ಏಕಮಾತ್ರ ಗುರಿ—ಅನನ್ಯಬಯಕೆ—ಕೃಷ್ಣ, ರಾಧೆಯ ಪದತಲದಲ್ಲಿ ಕುಳಿತು—ತಾತ್ಕಾಲಿಕವಾಗಿಯಾದರೂ!—ಈ ಮಾತನ್ನು ಒಪ್ಪಿಕೊಂಡಿದ್ದಾನೆ. ಅಂದಮೇಲೆ ಇದನ್ನು ಆಗಮಾಡಿದ ನನ್ನ ಮಾತೇನು! ಅಂದಿನ ರಾಧೆ—ಇಂದಿನ ಪದ್ಮ; ಯುಗಭೇದ—ಅಷ್ಟೆ! ಹೆಣ್ಣು ಹೆಣ್ಣೇ! ಆದರೂ, ದಿನದಿನದ ಲೌಕಿಕ ವ್ಯವಹಾರಕ್ಕೂ ಈ ಭಾವನೆ ವ್ಯಾಪಿಸಿದರೆ ಏನುಗತಿ! ದಿನದಲ್ಲಿ ಪದ್ಮಳ ಅಸಂಖ್ಯಾತ—ಅನಿರೀಕ್ಷಿತ—ಆಗಮನ ನಿರ್ಗಮನಗಳ ಅವಾಂತರದಲ್ಲಿ ನನ್ನ ಕೆಲಸವೆಲ್ಲಾ ತಿರುಪತಿ ಕ್ಷೌರ! ನಾನು ಮಾಡುತ್ತಿರುವ ಕೆಲಸದ ರೀತಿಯೇನು—ಅದಕ್ಕೆ ಅನುಕೂಲ—ಅನನುಕೂಲಗಳೇನು —ಅಡ್ಡಿಯೇನು?—ಎಂದು ಸ್ವಲ್ಪ ತಡೆದು, ಯೋಚಿಸಿ ನಡೆದುಕೊಳ್ಳುವುದು ಅವಳ ಸ್ವಭಾವಕ್ಕೆ ತೀರ ವಿರುದ್ಧ. ನಾವಿಬ್ಬರೂ ಮನೆಯ ರಾಜಕೀಯ ಸುಸೂತ್ರವಾಗಿರಲಿ ಎಂದು, ಒಂದು ಪವಿತ್ರವಾದ ಕರಾರನ್ನು ಮಾಡಿಕೊಂಡು ರುಜು ಹಾಕಿದ್ದೇವೆ. ಅದರಲ್ಲಿ, ಇಬ್ಬರೂ ಒಬ್ಬರೊಬ್ಬರ ಕೆಲಸ—ಮನಸ್ಸಿನ ಸ್ಥಿತಿ ಇವುಗಳ ಅನುಕೂಲ ಅನನುಕೂಲಗಳನ್ನು ಗಮನಿಸಿ ಸಂದರ್ಭಾನುಸಾರ ಗೌರವ ರೀತಿಯಿಂದ ವರ್ತಿಸತಕ್ಕದ್ದೆಂದು ಖುದ್ದುರಾಜಿಯಿಂದ ಒಪ್ಪಲಾಗಿದೆ. ಇದು ನಾಲ್ಕು ವರ್ಷಗಳ ಹಿಂದೆಯೇ ಮದುವೆಯಾದ ಹೊಸದರಲ್ಲಿ ಆದ ಕರಾರು. ಇದುವರೆಗೂ ನಾನೇನೋ ನನ್ನ ಪಕ್ಷದಿಂದ ಆ ಕರಾರಿನ ಪ್ರತಿ ಪ್ರಕರಣವನ್ನೂ ಬಹುಮಟ್ಟಿಗೆ ಬಿಡದೆ ಪಾಲಿಸಿಕೊಂಡು ಬಂದಿದ್ದರೂ, ಈ ನಾಲ್ಕು ವರ್ಷಗಳಲ್ಲಿ—ವರ್ಷದ ಹನ್ನೆರಡು ತಿಂಗಳೂ—ತಿಂಗಳ ನಾಲ್ಕು ವಾರಗಳೂ—ದಿನಕ್ಕೆ ಹತ್ತುಸಲ ಆ ಪವಿತ್ರವಾದ (ಯಾರಿಗೆ

ಪವಿತ್ರವೋ !) ಕರಾರಿನ ಪ್ರತಿ ಪ್ರಕರಣವನ್ನೂ ತನ್ನದೇ ಆದ ಒಂದು ದಿಟ್ಟತನದಿಂದ—ತುಂಟತನದಿಂದ—ಮುರಿಯುತ್ತ ಬಂದಿದ್ದಾಳೆ—ಈ ಹೆಣ್ಣು ಹಿಟ್ಲರು ! ಸಾಲದುದಕ್ಕೆ ತಾನು ಮಾಡುವುದೆಲ್ಲ ಸರಿ—ಎಂದು ಎಲ್ಲೂ ಇಲ್ಲದ ಚಮಕಿನಿಂದ ಸಾಧಿಸುತ್ತಾಳೆ. ಆಹಾ ? ದೇವರು ಗಂಡಸನ್ನು ಸೃಷ್ಟಿಸಿದ ; ಅವನ ಬುದ್ಧಿ ಪರೀಕ್ಷೆಮಾಡುವುದಕ್ಕೆ ಒಂದು ಸಮಸ್ಯೆಯನ್ನೂ ಒಡ್ಡಿದ—ಅದೇ ಹೆಣ್ಣು !—ಎಂದು ಯಾರೋ ಎಲ್ಲೋ ಹೇಳಿದ ಮಾತನ್ನು ಓದಿ ಮರೆತಿದ್ದೆ. ಯಾರೋ ಬಡಪಾಯಿ ಪಾಪ ! ಆದರೆ ಎಂತಹ ಚಿನ್ನದಂತಹ ಮಾತುಗಳು !

* * * * *

ಈ ದಿನ ಈ ಹೊತ್ತಿನಲ್ಲಿ, ಪದ್ಮ ನನ್ನ "ಸ್ಟೂಡಿಯೋ" ಒಳಕ್ಕೆ ಅಷ್ಟು ರಭಸದಿಂದ ದಾಳಿ ಬಂದದ್ದಕ್ಕೆ ಬಹಳ ತುರುತಾದ ಕಾರಣವಿತ್ತು. ಅವಳು ಬಂದ ಕ್ಷಣದಲ್ಲಿ ನಾನು ತಿರುಗಿ, ಅರೆನೋಟದಲ್ಲೇ ಕಂಡೆ—ಅವಳ ತೋಳಿನ ಮೇಲೆ ವಿರಾಜಿಸುತ್ತಿದ್ದ "ತುರುತುಕಾರಣ"ವನ್ನ ! ನಿಜವಾಗಿಯೂ ನಮ್ಮ ಅರುಣಮರಿ ವಿಲಕ್ಷಣ ರೂಪವನ್ನ ತಾಳಿದ್ದ. ಪದ್ಮ ಅಷ್ಟು ಅವಸರದಲ್ಲಿ ನುಗ್ಗಿಬಂದದ್ದು ಆಶ್ಚರ್ಯವೇನೂ ಅಲ್ಲ. ಎರಡು ವರ್ಷಗಳ ಆ ಕುನ್ನಿ ಎಷ್ಟು ತುಂಟತನ ಗಳಿಸಿದ್ದಾನೆಂದು ನಾನು ಬಲ್ಲೆ—ನನಗಿಂತ ಚೆನ್ನಾಗಿ—ಹೆಚ್ಚಾಗಿ ಪದ್ಮ ಬಲ್ಲಳು. ಅವನ ನೂರಾರು ತುಂಟತನಗಳನ್ನು ನೂರಾರು ಪ್ರತ್ಯೇಕಸಲ ನನ್ನ ಬಳಿ ವರದಿ ಹೇಳಬೇಕೆಂದರೆ ಅವಳಿಗೆ ಬಹಳ ಇಷ್ಟವಾದ ಕೆಲಸ. ಎಲ್ಲಾ ಒಟ್ಟು ಸೇರಿಸಿ ಒಂದೇ ವರದೀಲಿ ಮುಗಿಸು ಅಂದರೆ ಕೇಳಳು. ವಿಷಯ ತಂಗಳಾಗುವುದಕ್ಕೆ ಬಿಡೊಲ್ಲ ಅವಳು. ಈ ದಿನ ಅರುಣ ದೇವರ ಮನೆಗೆ ದಾಳಿ ನುಗ್ಗಿದ್ದಾಂತ ಕಾಣುತ್ತೆ. ಅವನ ಕೈಗಳು, ಪೂರ್ತಿ ಮುಖ, ಹಾಕಿಕೊಂಡಿದ್ದ ರೇಷ್ಮೆ ಜುಬ್ಬದ ಮುಂಭಾಗ—ಎಲ್ಲ ಯಥೇಚ್ಛವಾಗಿ ಅರಿಶಿನ ಕುಂಕುಮಮಯವಾಗಿ ಅಪೂರ್ವ ತೇಜಸ್ಸಿನಿಂದ ರಂಜಿಸುತ್ತಿದ್ದ. ಪದ್ಮ,

"ನಿಮ್ ಚಿತ್ರಾನ ಒಂದ್‌ಕ್ಷಣಹಾಗ್ಬಿಡಿ ! ಇಲ್ನೋಡಿ !—ಈ ಚಿತ್ರಾನ !" —ಎನ್ನುತ್ತ ಅರುಣನನ್ನು ತೋಳಿನಮೇಲೆ ಕುಣಿಸಿಕೊಂಡು ಹತ್ತಿರಕ್ಕೆ ಬಂದಳು.

"ಆಹಾ ! ಚಿತ್ರಾನೇ ಸರಿ ! ಚಿತ್ರಗಾರ—ಚಿತ್ರ ಎರ್ಡೂ ಏಕವಾಗಿರೋ ಹಾಗಿದೆಯಲ್ಲಾ !—ಏನು ಸಮಾಚಾರ ?"—ಎಂದು ಕೇಳಿದೆ.

"ಏನೂ ಇಲ್ಲ, ನಿಮ್ಮ ಸುಪುತ್ರ ಇವತ್ತು ದೇವರ್ಪೂಜೆಗೆ ಹೊರಟಿದ್ದ ! ಇದು ಅವನ ಪೂಜಾಸಂಭ್ರಮ !—ಅಷ್ಟೆ"—ಎಂದು ತಾಯ್ತನದ ಒಂದು ಹೆಮ್ಮೆಯಿಂದ ನಗುತ್ತ ಹೇಳಿದಳು—ನನ್ನ ಸುಪುತ್ರನ ತಾಯಿ.

"ಪೂಜಾಸಾಮಗ್ರೀನ ಸ್ವಂತಕ್ಕೇ ಧಾರಾಳವಾಗಿ ಉಪಯೋಗಿಸಿರೋದ

ನ್ನೋಡಿದ್ರೆ, ನಿಮ್ಮಗ ದೇವರನ್ನ ಲೆಕ್ಕಕ್ಕೇ ಇಟ್ಟಿಲ್ಲಾಂತ ಕಾಣುತ್ತೆ!"—ಎಂದು ತಲೆ ಅಲ್ಲಾಡಿಸಿದೆ.

"ಅದನ್ನೀಗ್ಲೇ ಹೇಳೋದ್ಕಷ್ಟ; ಆದರೆ ಒಂದ್ಮಾತು ಖಂಡಿತ! . . ."

"ಅದೆಂಥಾ ಮಾತೋ!"

"ಅಪ್ಪನ್ಮೀರಿಸ್ತಾನೆ, ಬಣ್ಣ ಬಳಿಯೋದ್ರಲ್ಲಿ!—ಅಲ್ವೇನೋ ಮರಿ?" —ಎನ್ನುತ್ತ, ಇನ್ನೂ ಹತ್ತಿರ ಬಂದು ನನ್ನ ಬೆನ್ನಹಿಂದೆ ನಿಂತಳು.

ಅರುಣನಿಗೆ ನಮ್ಮ ಮಾತು ಅರ್ಥವಾಗಲಿಲ್ಲವೋ—ಸರಿಬೀಳಲಿಲ್ಲವೋ—ಬೇಕಿರಲಿಲ್ಲವೋ—ಏನೋ ಅಂತು, ತನ್ನ ಅಸಮಾಧಾನವನ್ನು ಸೂಚಿಸುವುದಕ್ಕಾಗಿ ತನ್ನ ಕಾಲಿನಿಂದ ನನ್ನ ಬಲ ಮೊಳಕೈಗೆ ಒದ್ದ; ಅನಾಹುತವಾಯಿತು!

ಬಣ್ಣ ಬಳಿಯುತ್ತಿದ್ದ ಕುಂಚ ನನ್ನ ಕೈಯಲ್ಲೇ ಇತ್ತು. ಅರುಣನ ಒದೆಯಿಂದ ನನ್ನ ಕೈ ಮುಂದಕ್ಕೆ ಸಿಡಿದು, ಕುಂಚ ಚಿತ್ರಕ್ಕೆ ತಗುಲಿ, ಅದರ ಮೇಲೆ ಅಡ್ಡವಾಗಿ—ವಿಕಾರವಾಗಿ ಒಂದು ಬಣ್ಣದ ಪಟ್ಟೆ ಬಿತ್ತು. ತಿದ್ದಲು ಸಾಧ್ಯವೇ ಇಲ್ಲದ ರೀತಿಯಲ್ಲಿ ಚಿತ್ರ ಕೆಟ್ಟುಹೋಯಿತು. ಆರು ಗಂಟೆಗಳ ಅವಿಚ್ಛಿನ್ನವಾದ ಶ್ರಮ ಕಣ್ಣು ಮಿಟಿಕಿಸುವಷ್ಟರಲ್ಲಿ ಮಣ್ಣುಪಾಲಾಯಿತು!

ಬಲು ಕೋಪ ಬಂತು ನನಗೆ—ಬರಸಿಡಿಲಿನಂತೆ ಗರ್ಜಿಸಿ ಸಿಡಿದೆ. ಕೈಲಿದ್ದ ಕುಂಚವನ್ನ ಮುರಿದೆಸೆದೆ. ಬಣ್ಣದ ಪೆಟ್ಟಿಗೇನ ಕಾಲಿನಿಂದ ಒದ್ದೆ. ಚಿತ್ರವನ್ನು ಪರಪರ ಹರಿದು ಪದ್ಮಳಮೇಲೆ ಎಸೆದೆ. ಮಾತಿಗೂ ಮೀರಿತ್ತು ನನ್ನ ಸಿಡಿರೋಷ. ಅಂಗೈಗಳಲ್ಲಿ ರಕ್ತ ಚಿಮ್ಮುವಂತೆ ಮುಷ್ಟಿ ಕಟ್ಟಿಕೊಂಡು, ಕಿಡಿಗಣ್ಣುಗಳಿಂದ ಅವಳನ್ನು ದುರುಗುಟ್ಟಿ ನೋಡುತ್ತ ನಿಂತೆ. ಅರುಣ ಇದನ್ನೆಲ್ಲಾ ನೋಡಿ ನಗತೊಡಗಿದ. ನನ್ನ ಕೋಪಾಟೋಪಕ್ಕೆ ಪದ್ಮ ತೀರ ಭೀತಳಾಗಿದ್ದಳು. ಕೋಪದಲ್ಲಿ ನಾನು ಮಗುವಿಗೆ ಏನುಮಾಡುವೆನೋ—ಎಂಬ ಭಯದಲ್ಲಿ, ಅವನನ್ನು ಎರಡು ತೋಳುಗಳಿಂದಲೂ ತಬ್ಬಿ ಎದೆಗೆ ಒತ್ತಿಕೊಂಡು ಉಂಗುಷ್ಟದಿಂದ ನೆತ್ತಿಯವರೆಗೆ ನಡುಗುತ್ತ ನಿಂತಳು. ಒಂದು ಕ್ಷಣಕ್ಕೆ ನನ್ನ ಕಣ್ಣಿನ ಕಿಚ್ಚಿನಲ್ಲಿ ಬಾಡಿತು-ಬೆಂದಿತು ಸೊರಗಿಹೋಯಿತು!—ನನ್ನ ಪದ್ಮ.

ಸ್ವಲ್ಪಹೊತ್ತು ಇಬ್ಬರೂ ಮಾತನಾಡಲಿಲ್ಲ. ಅರುಣ ಕಕಬಿಕಿಯಾಗಿ, ಒಂದುಸಲ ಅವಳ ಮುಖವನ್ನೂ ಒಂದುಸಲ ನನ್ನ ಮುಖವನ್ನೂ ನೋಡಲಾರಂಭಿಸಿದ. ಪದ್ಮಳೇ ಮೊದಲು ಮಾತನಾಡಿದಳು. ನನ್ನ ಉರಿನೋಟಕ್ಕೆ ತನ್ನ ಕಣ್ನೋಟವನ್ನು ಬೆರಸುತ್ತ, ಬಲು ಮೆದುವಾದ ಕೊರಳಲ್ಲಿ,

"ಯಾ-ಕೇ-ಅಂದ್ರೇ . . . ಇಷ್ಟು ಕೋಪಾ?"

—ಎಂದು ಕೇಳಿದಳು.

"ಯಾಕೇಂದ್ರೆ!—ಯಾ-ಕೇ-ಅಂದ್ರೆ!! . . . ಕಣ್ಣಿಲ್ವೇ ನಿನಗೆ! ಕೇಳ್ತೀಯಲ್ಲ! 'ಯಾಕೇಂದ್ರೇ'—ಅಂತೆ! . . . ತೊಲಗಾಚೆ!!"

—ಎಂದು ಮುಖ ಚಿಮ್ಮಿ ಅಬ್ಬರಿಸಿದೆ.

"ಈಗ ಆಗಿಹೋಯ್ತಲ್ಲಾಂದ್ರೇ—ಏನ್ಮಾಡೋದು?"

—ಎಂದು ಹತ್ತಿರಕ್ಕೆ ಬಂದು, ನನ್ನ ಭುಜದಮೇಲೆ ಕೈಯಿಟ್ಟು, ಇನ್ನೂ ಮೆದುವಾದ ದನಿಯಲ್ಲಿ ಕೇಳಿದಳು.

"ಹುಂ! ಆಗ್ಹೋಯ್ತು—ನನ್ಧಣಾ ಆಗೇಹೋಯ್ತು!—ತಿಥಿ ಮಾಡಿನ್ನು!"

—ಎಂದು ಗರ್ಜಿಸಿದೆ.

ಪದ್ಮ ಸಾಧಾರಣವಾಗಿ ನನ್ನ ಕೋಪಕ್ಕೆ ಹೆದರುವವಳಲ್ಲ—ಜಗ್ಗುವವಳಲ್ಲ. ನಾಲ್ಕು ವರ್ಷಗಳಿಂದ ಅದಕ್ಕೆ ಪಳಗಿದ್ದಳು—ಅದನ್ನು ಪಳಗಿಸಿಯೂ ಇದ್ದಳು—ಎಷ್ಟೋ ಬಾರಿ. ಆದರೆ ಹಿಂದೆ ಎಂದೂ ಇಲ್ಲದ ರೀತಿಯಲ್ಲಿ ಈ ದಿನ ದಾರಿ ತಪ್ಪಿತ್ತು ನನ್ನ ಕೋಪ. ಹಾಗೆಯೇ ಅದರ ಅಂಧೋನ್ಮತ್ತಗತಿಯಲ್ಲಿ, ಯಾವತ್ತೂ ಆಡದ—ಯಾವತ್ತಿಗೂ ಆಡಬಾರದ—ಎರಡು ಮಾತುಗಳು ಉಚಾಯಿಸಿ ನನ್ನ ಬಾಯಿಂದ ಹೊರಬಿದ್ದವು. ನನ್ನ ಕೊನೇ ಮಾತುಗಳನ್ನು ಕೇಳಿ ಝುರ್ಝುರಿತಳಾಗಿಹೋದಳು, ಮಾಂಗಲ್ಯ ಕಟ್ಟಿ ಕರೆತಂದ ನನ್ನ ಜೀವನಮಂಗಳೆ. ಅವಳು ಒಂದು ಕೈಯಿಂದ ಕಿವಿ ಮುಚ್ಚಿಕೊಳ್ಳುತ್ತ,

"ಅಯ್ಯೋ!—ರಾಮರಾಮಾ! . . . ನಾನು ಬಾಳಲಾರೆ ಇನ್ನು!"

—ಎಂದು ಹೇಳಿ, ಮಗುವನ್ನೂ ಎತ್ತಿಕೊಂಡು ಬಂದಂತೆಯೇ ಹೊರಟುಹೋದಳು.

ಪದ್ಮ "ಸ್ಟೂಡಿಯೋ" ಬಿಟ್ಟುಹೋದ ಮರುಕ್ಷಣ ನನ್ನ ಸಿಟ್ಟಿನ ಅಮಲೆಲ್ಲಾ ಇಳಿದುಹೋಯಿತು. ಅವಳ ಉದ್ಗಾರದ ತೀವ್ರವಾದ ಯಾತನೆ ನನ್ನ ದೇಹವನ್ನೆಲ್ಲ ವ್ಯಾಪಿಸಿತು. ಕ್ಷಣಕಾಲ ಅಲುಗದೆ ನಿಂತು, ತುಂಡಾಗಿ ಬಿದ್ದಿದ್ದ ಕುಂಚವನ್ನು ನೋಡಿದೆ; ನನ್ನ ಚಿತ್ರದ ಚೂರುಗಳು ಚೆಲ್ಲಾಪಿಲ್ಲಿಯಾಗಿ ನೆಲದಮೇಲೆ ಬಿದ್ದಿದ್ದನ್ನು ನೋಡಿದೆ—ನನ್ನ ಒದೆತಕ್ಕೆ ಒಡೆದುಹೋಗಿದ್ದ ಬಣ್ಣದ ಪೆಟ್ಟಿಗೆಯನ್ನು ನೋಡಿದೆ. ದೊಡ್ಡದಾಗಿ ಒಂದುಸಲ ನಿಟ್ಟುಸಿರುಬಿಟ್ಟೆ . . . ನಾಲ್ಕು ದಿನಗಳಿಂದ ಮನಸ್ಸಿನಲ್ಲೆ ಮಥಿಸಿ, ಮಥಿಸಿ, ಆರು ಗಂಟೆಗಳು ಪ್ರಪಂಚವನ್ನೇ ಮರೆತು ರಚಿಸಿದ್ದ ನನ್ನ ಚಿತ್ರ ಇನ್ನೇನು ಮುಗಿಯಿತು—ಅನ್ನುವ ವೇಳೆಗೆ ಕೆಟ್ಟುಹೋಯಿತಲ್ಲಾ!—ಎಂಬ ನೋವು ಒಂದು; ನಾನು ಕಟ್ಟಿದ ತಾಳಿಗೇ ಕೈಹಾಕಿದಂತಹ ಮಾತುಗಳನ್ನಾಡಿದೆನಲ್ಲಾ!—ಎಂಬ ನೋವು ಒಂದು, ಇವೆರಡೂ ಸೇರಿ ಸ್ವಲ್ಪ ಹೊತ್ತು ನನ್ನ ಮನಸ್ಸೂ ಮೂಕ

ವಾಯಿತು. ನನ್ನ ನಾಡಿನಾಡಿಯಲ್ಲೂ ರಕ್ತದ ಬದಲು ನೋವೇ ಹರಿಯುತ್ತಿರುವಂತೆ ಭಾಸವಾಯಿತು. ಇನ್ನು ನಿಲ್ಲಲಾರದೆ, ಹೋಗಿ ಮೂಲೆಯಲ್ಲಿದ್ದ ಸೋಫಾದ ಮೇಲೆ ಚಾಚಿಕೊಂಡು ಯೋಚಿಸಲಾರಂಭಿಸಿದೆ. . . . ನನಗಾದ ನಷ್ಟವಾದರೂ ಏನು? ಒಂದಿಷ್ಟಗಲ ಕಾಗದ—ಒಂದಷ್ಟು ಬಣ್ಣ!—ಚಿತ್ರ ನಾನು ಕಟ್ಟಿದ್ದೇ! . . . ಮತ್ತೆ ಆರುಗಂಟೆ ಕುಳಿತರೆ ಅದೇ ಚಿತ್ರವನ್ನು ಬರೆಯಲಾರೆನೇ? . . . ಆಗದಿದ್ದರೆ ನಾನೆಂತಹ ಚಿತ್ರಗಾರ!—ಹುಂ! ಬಹುಶಃ ಇನ್ನೊಂದು ಪ್ರಯತ್ನ ಅದಕ್ಕೂ ಚೆನ್ನಾಗಬಹುದು! . . . ನನ್ನ ಶಕ್ತಿಯ ದೃಷ್ಟಿಯಿಂದ ಈ ನಷ್ಟ ತೀರ ಅಲ್ಪವೇ—ಇದಕ್ಕೆ ನಾನ್ಯಾಕೆ ಇಷ್ಟು ತಾಳ್ಮೆ ತಪ್ಪಿದೆ? . . . ಇದಕ್ಕೂ ಹೆಚ್ಚಿನ ನಷ್ಟಹೊಂದಿದ ಸಂದರ್ಭದಲ್ಲಿ ಎಣೆಯಿಲ್ಲದ ತಾಳ್ಮೆಯನ್ನು ತೋರಿದ ನ್ಯೂಟನ್ನಿನ ಒಂದು ಕಥೆ ಜ್ಞಾಪಕಕ್ಕೆ ಬಂತು. . . . ಇಳಿವಯಸ್ಸಿನಲ್ಲಿ, ತಾನು ಮಾಡಿದ್ದೆಲ್ಲಾ ತನ್ನ ನಾಯಿಯ ದೆಸೆಯಿಂದ ಆಕಸ್ಮಿಕವಾಗಿ ಸುಟ್ಟು ನಾಶವಾಗಲು ನ್ಯೂಟನ್ ಆ ಮೂಕುಜೀವಿಗೆ ತೋರಿದ ಕ್ಷಮೆಯ ರೀತಿಯೇನು?—ಕೇವಲ ಆರು ಗಂಟೆ ಕುಳಿತು ಬಳಿದ ಚಿತ್ರ, ಅಷ್ಟೇ ಆಕಸ್ಮಿಕವಾಗಿ ಅರುಣಮರಿ ದೆಸೆಯಿಂದ ಕೆಟ್ಟುಹೋದಾಗ—ಪಾಮರನಾದ ನಾನು—ಆ ನಮ್ಮ ಸಾರಸರ್ವಸ್ವವನ್ನು ಹೆತ್ತವಳ ಮೇಲೆ, ಹುಚ್ಚೆದ್ದು ಕಾರಿದ ಕಿಡಿಗೋಪದ ಪರಿಯೇನು? . . . ಈ ತಾರತಮ್ಯ ಮನಸ್ಸಿಗೆ ಬಂದ ಕೂಡಲೆ, ಸ್ವಲ್ಪ ಗಟ್ಟಿಯಾಗಿಯೇ "ಥತ್ತೇರಿ!" ಅಂದುಕೊಂಡೆ. . . . ಪದ್ಮ ಯಾರು ನನಗೆ? . . . ನನ್ನನ್ನು ಪೂರ್ಣಗೊಳಿಸಿದವಳು; ಕನಸು ಮನಸಿನಲ್ಲೂ ನನ್ನ ಮಂಗಳವೇ ಮೊದಲ ಬಯಕೆ—ಅವಳಿಗೆ. ನಾಯಿಗಿಂತ ಕಡೆ ಮಾಡಿದೆನಲ್ಲಾ ಅವಳನ್ನು! . . . ಎಂತಹ ಚಂಡಾಲ ಕೋಪ! . . . ಹಾಗೇ ಯೋಚಿಸಿದರೆ, ನನ್ನ ಚಿತ್ರ ಎಷ್ಟರದು?—ಕಾಗದದ ಮೇಲೆ ಬಣ್ಣ! ಒಂದು ನಿರ್ಜೀವ ಪದಾರ್ಥ! . . . ನನ್ನ ಬಾಳಿನಲ್ಲಿ ಕಣಕ್ಕಿಂತ ಕಡೆ! ಏನೂ ಅರಿಯದ ಮಗು ಅಕಸ್ಮಾತ್ತಾಗಿ ಅದನ್ನು ಕೆಡಿಸಿತು; ಆದರೆ—ನಾನು, ಅದರ ಅಪ್ಪ—ಅರಿತವನು—ಮಾಡಿದ್ದೇನು! . . . ಆಹಾ! ಆ ಕೆಟ್ಟ ಘಳಿಗೆಯಲ್ಲಿ ಕೋಪದಿಂದ ನನ್ನ ಕಣ್ಣು ಇಂಗದೇ ಹೋಗಿದ್ದಿದ್ದರೆ, ಎಷ್ಟು ಚೆಲುವಾದ ಜೀವಿತ ಚಿತ್ರ ಒಂದು ನನ್ನ ಕಣ್ಣುತುಂಬಿ ತುಳುಕುತ್ತಿತ್ತು! . . . ಮುದ್ದುಮಗುವನ್ನು ತೋಳ ಮೇಲೆ ಕುಣಿಸುತ್ತ ಬಂದ ಹೆಣ್ಣಿನ ಸಂಭ್ರಮ—ತಾಯಿಯ ಹೆಮ್ಮೆ! . . . ತನಗೆ ತಾನೇ ಮೈತಳೆದು ನಿಂತ ಈ ರಸಪೂರ್ಣ ಚಿತ್ರವನ್ನ ಒಂದು ಕೆಟ್ಟ ಮಾತಿನಿಂದ ಭಂಗಪಡಿಸಿದೆನಲ್ಲಾ—ಪಾಪಿ! . . . ಹುಂ! ಅರುಣ ಒಂದು ಚಿತ್ರ ಕೆಡಿಸಿದ—ನಾನೂ ಒಂದು ಚಿತ್ರ ಕೆಡಿಸಿದೆ! ಅವನಪ್ಪನಲ್ಲವೆ! . . . ಆಹಾ! ಹಗಲಿರುಳೂ, ಎಷ್ಟು ಕಡೆ, ಎಷ್ಟು ವಿಧದಲ್ಲಿ ಸೃಷ್ಟಿಶಿಲ್ಪಿಯ ಚಿತ್ರಗಳು ಛಿದ್ರಛಿದ್ರವಾಗುತ್ತಿರಬಹುದು! ಆ ತಂದೆಯೂ ನನ್ನಂತೆಯೇ ಮುಂಗೋಪಿಯಾಗಿದ್ದಿದ್ದರೆ ಗತಿಯೇನು! . .

ಚಿತ್ರ ಭಂಗವಾಯಿತು, ಇನ್ನು ಚಿತ್ರೋದ್ಧಾರವಾಗಬೇಕು!—ಎದ್ದೆ. ಪದ್ಮಳನ್ನು ಹುಡುಕಿಕೊಂಡು ಹೋದೆ. ಅವಳು ಮಲಗುವ ಮನೆಯಲ್ಲಿ ಹಾಸಿಗೆಯ ಮೇಲೆ ಮುಖವಡಿಯಾಗಿ ಮಲಗಿ ಬಿಕ್ಕಿಬಿಕ್ಕಿ ಅಳುತ್ತಿದ್ದಳು. ಅರುಣ ಅವಳ ಆಚೆ ಪಕ್ಕದಲ್ಲಿ ಕುಳಿತು ಒಂದು ಜಪಾನೀರಬ್ಬರುಕೃಷ್ಣನ ರುಚಿ ನೋಡುತ್ತಿದ್ದ. ಒಂದು ಕ್ಷಣ ಕೊಠಡಿಯ ಬಾಗಿಲಲ್ಲೇ ನಿಂತು ಆ ದೃಶ್ಯವನ್ನು ಜೀವಗತಮಾಡಿಕೊಂಡೆ. ಒಳಗೆ ಹೋಗಲು ಕಾಲೇ ಬಾರದು. ಆ ಹೊತ್ತಿನಲ್ಲಿ ಪದ್ಮ ನನ್ನ ಹೆಂಡತಿ, ನಾನು ಅವಳ ಯಜಮಾನ ಅನ್ನುವ ಭಾವನೆಯಿಂದ ಬಹಳ ದೂರವಾಗಿದ್ದೆ. ಮಂದಿರದಲ್ಲಿ, ನ್ಯಾಯವಾದ ಕೋಪದಿಂದ ಪರಾಙ್ಮುಖಳಾಗಿದ್ದ ನನ್ನ ಬಾಳಿನ ಭಾಗ್ಯದೇವತೆಯ ಸನ್ನಿಧಿಯಲ್ಲಿದ್ದೆ—ಅಕ್ಷಮ್ಯ ಅಪರಾಧಿಯಾಗಿ. . . . ಪದ್ಮ ತಲೆಯೆತ್ತಿ ನೋಡುವಳೇನೋ ಎಂದುಕೊಂಡು ನಿಂತಲ್ಲಿಯೇ ಒಂದೆರಡು ಸಲ ಕೆಮ್ಮಿದೆ.—ಭ್ರಮೆ! ಕರುಳು ಈಚೆಗೆ ಬರೋತನಕ ಬೆಳಗಿನ ವರೆಗೆ—ಉಸಿರು ಕಟ್ಟೋಹಾಗೆ ಕೆಮ್ಮಿದ್ದರೂ ಜಗ್ಗುವಂತಿರಲಿಲ್ಲ ಅವಳ ದುಃಖ. ನಿಧಾನವಾಗಿ ಹೋಗಿ ಮಂಚದ ಮೇಲೆ ಅವಳ ಪಕ್ಕದಲ್ಲಿ ಕುಳಿತೆ; ಮೆಲ್ಲಗೆ ಹೆಗಲಮೇಲೆ ಕೈಯಿಟ್ಟೆ—ಅಲ್ಲಾಡಲಿಲ್ಲ. ನಾನು ಮುಟ್ಟಿದೊಡನೆಯೇ ಅವಳ ದುಃಖ ಇಮ್ಮಡಿಸಿತು; ಇನ್ನೂ ಚೆನ್ನಾಗಿ ಮುಖ ಮುಚ್ಚಿಕೊಂಡು ನಿಶ್ಯಬ್ದವಾಗಿ ಅಳತೊಡಗಿದಳು. ನನ್ನ ಶಾಂತಿಪ್ರಯತ್ನವನ್ನ ಹೇಗೆ ಮುಂದುವರಿಸಬೇಕೆಂದು ತೋಚದೆ, ಕ್ಷಣಕಾಲ ಅತ್ತ ಇತ್ತ ಮೇಲೆ ಕೆಳಗೆ ನೋಡಿ ಅರುಣನ ಕಡೆ ತಿರುಗಿದೆ. "ಲೋ ನೀನಾದರೂ ಸ್ವಲ್ಪ ಸಹಾಯ ಮಾಡೋ"—ಅನ್ನುವ ತೆರದಲ್ಲಿ ಒಂದು ರೀತಿಯಾಗಿ ಹಲ್ಲುಕಿರಿದೆ. ಅವನು ಪುಟ್ಟ ಬಾಯನ್ನು ದೊಡ್ಡದಾಗಿ ತೆರೆದು "ಅ—ಹ್ಹಿ" ಎಂದು ಉತ್ತರಕೊಟ್ಟ! ದಿಗಿಲುಬಿದ್ದೆ. ಇದ್ಯಾಕೋ . . . ಅಂದುಕೊಳ್ಳುವಷ್ಟರಲ್ಲಿ "ಹೆದರಬೇಡ!" ಅನ್ನುವಂತೆ ಇನ್ನೊಂದು ಸಲ "ಆ—ಹ್ಹಿ!" ಮಾಡಿದ. "ಬದುಕಿಸ್ದೇ ಕಣೋ!" ಎನ್ನುತ್ತ ಅವನನ್ನು ಎತ್ತಿ ತೊಡೆಯಮೇಲೆ ಕೂರಿಸಿಕೊಂಡೆ. ತಾಯಿಯನ ಒಲಿಸಿಕೊಳ್ಳಬೇಕಾದರೆ ಅವಳ ಮಗುವನ್ನ ಮುದ್ದಿಸೋದು ಬಹಳ ಖಾತ್ರಿಯಾದ ಮಾರ್ಗ. ನಾನೂ ಅದೇ ದಾರಿ ಹಿಡಿಯೋಣಾಂತ ಅವನಿಗೆ ಸಶಬ್ದವಾಗಿ ಒಂದು ಮುತ್ತುಕೊಟ್ಟು "ಏನೋ ಮರಿ!" ಎಂದೆ. ನನ್ನ ಪ್ರಶ್ನೆಗೂ ಅವನ ಉತ್ತರಕ್ಕೂ ಲಗತ್ತೇ ಇಲ್ಲ! ಕೈಲಿದ್ದ ರಬ್ಬರು (ಒಳ್ಳೇ ರಬ್ಬರು!) ಕೃಷ್ಣನಿಂದ ನನ್ನ ಮುಖದ ಮೇಲೆ ಎರಡು ಮೂರು ಸಲ ರಪ-ರಪಾಂತ ಹೊಡೆದು, ರುಚಿತೋರಿಸಿ ನೆಲದ ಮೇಲೆ ಎಸೆದ. ಆದರೆ ಎಷ್ಟು ಭೇದ—ಅವನ ನಾಲಗೆಗೂ ನನ್ನ ಮುಖಕ್ಕೂ—ರುಚಿ ಕಾಣುವುದರಲ್ಲಿ! ಆಮೇಲೆ ಅರಿಶಿನಕುಂಕುಮಾಚ್ಛಾದಿತವಾಗಿ ಜೋಲ್ಲಿನಲ್ಲಿ ಒದ್ದೆಯಾಗಿದ್ದ ಅವನ ಪುಟ್ಟ

ಕೈಗಳಿಂದ ನನ್ನ ಷರಟಿನ ಮೇಲೆಲ್ಲಾ ಲಕ್ಷಣವಾಗಿ ಚಟ್ಟುಹೊಡೆದ. ಅನಂತರ, ಏನೋ ಆಟದ ಸಾಮಾನು—ಎಂದು ನನ್ನ ಮೂಗನ್ನು ಮುಖದಿಂದ ಬೇರ್ಪಡಿಸಲು ಪ್ರಯತ್ನ ಪಟ್ಟ; ಸಾಧ್ಯವಾಗದೆ ಬಾಯಿ ಹಾಕಿದ. "ಅಯ್ಯೋ!" ಎಂದು ಚೀರಿದೆ. ಅಬ್ಬಾ! ಎಳೇಮಗು—ಪುಟ್ಟ ಬಾಯಿ—ಮೊಳಕೆ ಹಲ್ಲು—ಎಲ್ಲಾ ಸರಿ! ಆದರೆ ಕಚ್ಚಿದ್ದೋ?—ಮುಟ್ಟಿಮುಟ್ಟಿ ನೋಡಿಕೊಳ್ಳೋ ಹಾಗೆ!... ನೋವು ತಕ್ಕ ಮಟ್ಟಿಗಿತ್ತು—ಆದರೂ ಹಂಗಾಮಿ; ಗುರುತೋ? ಕಡೇಪಕ್ಷ ಎಂಟು ದಿನವಾದರೂ ಖಾಯಂ! ಅಂದರೆ, ಎಂಟು ದಿನ ಸಜ—ಹೊರಕ್ಕೆ ಮುಖ ಹಾಕೋ ಹಾಗಿಲ್ಲ—ಈ ಪೋಲಿ ಮಾಡಿದ ಕೆಲಸದಿಂದ!... ಅಲ್ಲದೆ, ಎಂತಹ ನಾಚಿಕೆಗೇಡು!—ನೋಡಿದವರ ಮುಂದೆ! ನಗುಬಂತು. ಅರುಣನನ್ನು ಕುರಿತು, "ನೀನು ಮಾಡಿದ ಕೋತಿ ಕೆಲಸ!—ಹೆಸರು ಯಾರಿಗೋ!... ಭಗವದ್ಗೀತೆ ತಲೇಮೇಲಿಟ್ಕೊಂಡು ಜನಿವಾರ್ದಾಣೇ ಇಟ್ರೂ ಯಾರೂ ನಂಬೊಲ್ಲ ನೀ ಮಾಡಿದ ಗುರ್ತೂಂತ!... ಅಂತು ಒಟ್ಟಿನಲ್ಲಿ ಎಂಟು ದಿನ ಸಜ—ನಿನ್ನಿಂದ!" ಎಂದೆ. ಎಂಟು ದಿನ ಸಾಲದು, ತಿಂಗಳಿಗಾದರೂ ಏರಿಸಬೇಕು—ಎನ್ನುವಂತೆ ಇನ್ನೊಂದು ಸಲ ನನ್ನ ಮೂಗಿನ ಮೇಲೆ ಕಣ್ಣಿಟ್ಟ. ನಾನು ಈ ಬಾರಿ ಹುಷಾರಾಗಿ, "ನೋಡು ಮರಿ, ಇವತ್ತಿಷ್ಟೆಲ್ಲಾ ಅನಾಹುತ್ವಾಗಿದ್ದು ನಿನ್ನಿಂದ—ನೀನೇ ರಿಪೇರಿ ಮಾಡ್ಬೇಕೀಗ" ಎಂದೆ. ಅವನು ಈ ದಿನ ನಡೆದ ಸಂಗತಿಗೂ ತನಗೂ ಸುತರಾಂ ಸಂಬಂಧವಿಲ್ಲ—ಎನ್ನುವಂತೆ "ಗೀ—ಗೀ—ಗೀಡ್ಳ್" ಎಂದು ತಲೆಯನ್ನ ಹಾಗೆ ಹೀಗೆ ಅಲ್ಲಾಡಿಸಿ, ಒಂದೆರಡು ಚಪ್ಪಾಳೆ ತಟ್ಟಿ ಕೊನೆಗೆ "ಬುರ್" ಎಂದು ನನ್ನ ಮುಖದ ತುಂಬ ತನ್ನ ಜೊಲ್ಲಿನ ಪ್ರೋಕ್ಷಣೆ ಮಾಡಿದ. "ಸರಿಯಪ್ಪ—ಆಗ್ಲಿ ನಂದೇ ತಪ್ಪು—ಒಪ್ಕೊಂಡೆ... ಅದಕ್ಕೆ ಹೊಡೆಸ್ಕೊಂಡೆ, ಕಚ್ಚಿಸ್ಕೊಂಡೆ, ಉಗುಳಿಸ್ಕೊಂಡೆ—ಎಂಟ್ದಿನ ಸಜಾನೂ ಸಂಪಾದಿಸ್ದೆ! ಇನ್ನೂ ಯಾಕೋ ಕೋಪಾ ನಿಂಗೆ?—ಮುಖಾ ತೋರಿಸ್ದಷ್ಟು?" ಎಂದು, ಅವನಲ್ಲಿ ಅವನ ಅಮ್ಮನನ್ನು ಆವಾಹನೆ ಮಾಡಿ, ಕೇಳಿದೆ. ಪದ್ಮ ನೀರವ—ನಿಶ್ಚಲ! ಮತ್ತೆ ಅರುಣನನ್ನುದ್ದೇಶಿಸಿ, "ನೋಡಪ್ಪ, ಏನಾದ್ರೂಮಾಡಿ ನಿಮ್ಮಮ್ಮ ನನ್ಕಡೆ ನೋಡೋ ಹಾಗ್ಮಾಡು—ನಿಂಗೆ ಬೆಣ್ಣೆಬಿಸ್ಕತ್ತು!—ಬೆಳ್ಳಿಗಿಲಗಚ್ಚಿ!—ಶಾಂತಾ ಆಪ್ಟೇ ಸೀರೇ!—ಎಲ್ಲ ತಂದ್ಕೊಡ್ತೀನಿ!" ಎಂದು ಅವನನ್ನು ಪದ್ಮಳ ಹೆಗಲ ಮೇಲೆ ಕೂರಿಸಿದೆ. ಅವನು ಅವಳ ಜಡೆಗೆ ಕೈಹಾಕಿ "ಹೇ!—ಹೇ!" ಅಂತ ಜಗ್ಗುಹಾಕುವುದಕ್ಕಾರಂಭಿಸಿದ. ನಿರ್ವಾಹವಿಲ್ಲದೆ ಈಗ ಪದ್ಮ ತಿರುಗಬೇಕಾಯಿತು. ಅವನ ಕೈಯಿಂದ ಜಡೆ ಬಿಡಿಸಿಕೊಂಡು, ಮೆಲ್ಲಗೆ ಹೊರಳಿ ಅವನನ್ನು ಆಚೆಪಕ್ಕಕ್ಕೆ ಜಾರಿಸಿದಳು. ಹೀಗೆ ಮಾಡುವಾಗ ಅವಳು ಮುಖವನ್ನು ತಿರುಗಿಸಲೇಬೇಕಾಯಿತು, ನನ್ನ ಕಡೆ ನೋಡಲೇ

ಬೇಕಾಯಿತು. ನನ್ನ ಅವಸ್ಥೆ—ಅವತಾರ ನೋಡಿ ಅವಳಿಗೆ ನಗು ಉಕ್ಕುವ ಹಾಗಾಗಿರಬೇಕು. ಆದರೆ ನಗಲಿಲ್ಲ. ನಕ್ಕರೆ (ರುದ್ರ!) ನಾಟಕ ಕೆಟ್ಟುಹೋಗುತ್ತೆ! ಹೆಣ್ಣು ಯಾವಾಗಲೂ ಸುಲಭಳಲ್ಲ! ಇನ್ನು ಇಂತಹ ಸಂದರ್ಭದಲ್ಲಿ!—ಸಿಕ್ಕಿಕೊಂಡವನಿಗೇ ಗೊತ್ತು—ಆ ಕಷ್ಟ! ನೋಡುತ್ತಿದ್ದರಲ್ಲವೆ ನಗು ಉಕ್ಕುವುದು? ನಗಬಾರದು—ಎಂದು ಪ್ರತಿಜ್ಞೆ; ಆದ್ದರಿಂದ ಪದ್ಮ ಪುನಃ ಮುಖ ಮುಚ್ಚಿಕೊಂಡಳು. ಅವಳು ಮುಖ ತೋರಿಸಿದ ಒಂದು ಕ್ಷಣದಲ್ಲಿ, ಇನ್ನು ಸ್ವಲ್ಪ ಪ್ರಯತ್ನಕ್ಕೆ ಪ್ರಸನ್ನಳಾಗುತ್ತಾಳೆಂದು ಭರವಸೆಯಾಯಿತು. ಮೌನವಾಗಿದ್ದರೂ ಅವಳ ಮೈ ಮೆಲ್ಲಗೆ ಕುಲುಕುತ್ತಿತ್ತು. ಇನ್ನೂ ಅಳುತ್ತಲೇ ಇದ್ದಳೋ ಅಥವಾ ಮಗ ನನ್ನ ಮೂಗಿನ ಮೇಲೆ ಮಾಡಿದ ರುಜುವನ್ನು ಮನಸ್ಸಿನಲ್ಲೇ ಒಂದು ತರಹ ಫೋರ್ಜರಿ ಮಾಡಿಕೊಂಡು ನಗುತ್ತಿದ್ದಳೋ ಗೊತ್ತಾಗುವಂತಿರಲಿಲ್ಲ. ಅಂತೂ ಪದ್ಮ ದಾರಿಗೆ ಬರುತ್ತಿದ್ದಳು. ನಾನು ಇನ್ನೂ ಸ್ವಲ್ಪ ಮುಂದಕ್ಕೆ ಸರಿದು, ಸ್ವಲ್ಪ ಬಾಗಿ, ಅವಳ ಹೆಗಲ ಮೇಲೆ ಕೈ ಇಟ್ಟು,—ಕಲ್ಲೂ ಕರಗಬೇಕು, ಹಾಗೆ ಕರೆದೆ "ಪದ್ಮಾ!"—ಎಂದು.

ಮಾತಿಲ್ಲ. ಒಂದುಸಲ ಭುಜ ಕೊಡವಿದಳು—ಅಷ್ಟೆ.

"ಪದ್ಮಾಜೀ"

ಇನ್ನೊಂದುಸಲ ಭುಜ ಒದರಿದಳು.

"ಪದ್ಮೂ, ಪದ್ಮರಾಣೀ, ಪದ್ಮಸುಧಾ, ಪದ್ಮಾಕ್ಷೀ, ಪದ್ಮಾಂಬಾ, ಪದ್ಮದೇವೀ,"—ಎಂದು ಮಾತುಮಾತಿಗೂ ಅವಳ ಭುಜವನ್ನು ಸವರುತ್ತ "ಏನು, ದೇವೀ ಅಷ್ಟೋತ್ತರಾನ ಪೂರ್ತಿ ಹೇಳ್ಬೆಕೇನೇ?"—ಎಂದು ಕೇಳಿದೆ.

ದೇವಿ ಮೌನದ ಪಟ್ಟು ಹಿಡಿದಿದ್ದಳು. ಬರೀ ಮಾತಿನಿಂದೇನು!—ಅಂದುಕೊಂಡು, ಬಲವಂತದಿಂದ ಅವಳ ಮುಖವನ್ನು ನನ್ನ ಕಡೆಗೆ ತಿರುಗಿಸಿಕೊಂಡೆ. ಆದರೇನು? ಮುಖಕ್ಕೆ ಮುಖ್ಯ ಕಣ್ಣು—ಅದನ್ನ ಮುಚ್ಚಿಕೊಂಡಿದ್ದಳು! ಅತ್ತು ಅತ್ತು ಮುಖವೆಲ್ಲಾ ಕಣ್ಣೀರಿನಲ್ಲಿ ತೊಯ್ದು ಕೆಂಪೇರಿ, ನಿಜವಾಗಿಯೂ ಹೆಸರಿನ ಸಾರ್ಥಕತೆ ಹೆಚ್ಚಿತ್ತು. ನಗು ತುಟಿ ತುಂಬಿ ನಿಂತಿತ್ತು. ಅದನ್ನು ಹೊರಗೆಳೆಯಬೇಕೆಂದು ಮೆಲ್ಲಗೆ ಮುಂದಕ್ಕೆ ಬಾಗಿದೆ. ಅಷ್ಟರಲ್ಲಿ ಕಣ್ಣು ಮುಚ್ಚಿಕೊಂಡಿದ್ದರೂ ಅದೇನು ಸುಳುವು ಹಿಡಿದಳೋ, ಬಾಯಮೇಲೆ ಕೈ ಇಟ್ಟುಕೊಂಡು,

"ಹೋಗಿ!"

—ಎಂದಳು. ಮುಚ್ಚಿದ ಕಣ್ಣು ಮುಚ್ಚಿದ ಹಾಗೆಯೇ!

"ಎಲ್ಲೀಗ್ಹೋಗ್ಲೇ—ಇದ್ಯಾ—ಕಿಷ್ಟು ಕೋಪ ಪದ್ಮಾ?"

—ಎಂದು ಅವಳ

ಕೈಹಿಡಿದೆಳೆದೆ. ಅದನ್ನು ಸರ್‍ರನೆ ಬಿಡಿಸಿ ಎಳೆದುಕೊಳ್ಳುತ್ತ, ಕಣ್ಣು ಮುಚ್ಚಿಕೊಂಡೇ,

"ಹೋಗೀಂದ್ರೇ!—ನಾನಿರ್‍ಬಾರ್ದಿನ್ನು!"

—ಎಂದಳು.

"ಇನ್ನೇನ್ಗತಿ!"

"ನನ್ಮಾತಾಡಿಸ್ಬೇಡಿ!—ನಾನಿಲ್ಲ!—ನಾನಿಲ್ವೇ—ಇಲ್ಲ!!

"ಅಪ್ಪ್ಯಾಗ್ಣಂಬೋದು—ಮುಟ್ಟಿದ್ರೆ ಕೈಗ್ಸಿಗ್ತೀಯ!"

"ನನ್ಮುಟ್ಲೇಬೇಡಿ!"

"ಅದ್ಸಾಧ್ಯವೇ ಇಲ್ಲ!—ಓ—ಹೋ!"

"ಓ—ಹೋನೂ ಇಲ್ಲ—ಗೀ ಹೋನೂ ಇಲ್ಲ!"

"ಲೇ, ಪದ್ಮಾ! ಸಾಕ್ಮಾಡೇ ನಿನ್ನಾಟ್ಕಾನ!—ಇದೆಲ್ಲ ಬರೀಸುಳ್ಳು!—ನಂಗೊತ್ತು"

ಯಾವುದು ಅವಳಿಗೆ ತೀರ ನಿಜವಾಗಿತ್ತೋ ಅದನ್ನು ನಾನು "ನಾಟಕ" ಎಂದೆನಲ್ಲ! ಈಗ ಕಣ್ಣುಬಿಟ್ಟಳು—ಎದ್ದು ಕುಳಿತುಕೊಂಡಳು.

"ಇನ್ನು ನನ್ನಾಟ್ಕಾ ಎಲ್ಲೀಂದ್ರೇ? . . . ಒಂದೇ ಮಾತಿಗೆ ಮುಗಿಸಿದ್ರಿ—ನನ್ನಾಟ್ಕಾನಾ!"

—ಎನ್ನುತ್ತಿದ್ದ ಹಾಗೇ ಅವಳ ಕಣ್ಣೀರು ಕಟ್ಟೆಯೊಡೆದು ಹರಿಯಿತು.

"ಹೋಗ್ಲಿಬಿಡು—ಇಷ್ಟ್ಕೋಪಾ ಆದರ್‍ಹ್ಹೇಗೆ ಹೇಳು?"

"ಏನ್ಮಾತೂಂತಾಡ್ತೀರೀಂದ್ರೇ! ಚೆನ್ನಾಯ್ತು! ಕೋಪಮಾಡ್ದೋರ್‍ಯಾರು? . . . ನಾನು ಕೋಪಿಸ್ಕೊಳ್ಳೋಕೆ ನಿಮ್ಕೈ ಹಿಡಿದ್ನೇ!"

"ಈಗ್ನೋಡಿದ್ರೆ ಅದೇ ಮುಖ್ಯ—"

"ನಿಮ್ಕೋಪ್ದಲ್ಲೀ—ಬೆಂದೂ—ಬೂದ್ಯಾಗೋಕೆ ನಿಮ್ಮನ್ಸೇರ್ದೆ!"

"ಶಿವ-ಶಿವಾ!—ಶಿವ-ಶಿವಾ!! ಎಂಥಾ ಮಾತಾಡ್ತೀಯೆ—ಪದ್ಮಾ!"

"ಹೌದ್ಹೌದು! ನಂದು 'ಎಂಥಾ ಮಾತು'—ನಿಂಬಾಯಿಂದ ಬಿತ್ತಲ್ಲಾ ಅಲ್ಲೀ—ಅದಾಣಿ ಮುತ್ತು!—ಅಲ್ವೇ?"

"ನಾನೇನ್ಹಾಗ್ಹೇಳ್ಕೊಳ್ಲಿಲ್ಲ"

"ಏನಾದ್ರೂ ಮಾಡ್ಕೊಳ್ಳಿ—ನಾಬೆಂದ್ಮೇಲೆ!"

"ಇಲ್ಲ ಪದ್ಮಾ, ನಾನಾಡಿದ್ಮಾತು ಕೆಟ್ಟ್ದೇ—ನಿಜ—ಒಪ್ಕೊಳ್ಳೋಣ; ಈಗ ನಿಧಾನ್ವಾಗಿ ಯೋಚ್ನೆಮಾಡಿದ್ರೆ ಬಹಳ ಕೆಟ್ಟು! . . . ಆದರೆ—"

"ಹುಂ, ಆದರೆ—ಏನು?"

"—ಕೋಪ ಬಂದಾಗ—ಅದರಲ್ಲೂ—ಇದ್ದಕ್ಕಿದ್ದಂತೆ—ಅಕಸ್ಮಾತ್ತಾಗಿ!—ಏಕ್ದಂ!!—ಕೋಪಾಬಂದಾಗ ಯೋಚ್ನೆ-ಗೀಚ್ನೇಗೆ 'ಟೈಮೇ' ಇರೊಲ್ಲ—ಗೊತ್ತೇ? . . . ಬಂದ್ಮಾತ್ಬಂದ್ಹಾಗೇ! . . ."

"ಒಳ್ಳೇ ಅಕಸ್ಮಾತ್ತು—ಒಳ್ಳೇ ಏಕ್ದಮ್ಮು—ಆದ್ರೂ! . . . ಅಲ್ಲಾಂದ್ರೇ, ಮಾಡಿದ್ಕೆಲ್ಸಾ ಹಾಳಾಯ್ತು—ನಿಜ. ನಾನು ಉದ್ದೇಶ್ಪಟ್ಟು ನಿಮ್ಜಿತ್ರಾನ ಹಾಳ್ಮಾಡ್ಬೇಕೂಂತ ಬಂದ್ನೇ?—ಅಥ್ವಾ ಮಗೂ ಬೇಕೂಂತ ಒದೀತೆ?—ನೀವೇ ಹೇಳಿ"

"ಹೋ—ಗ್ಲಿ ಪದ್ಮಾ ಮರೆತ್ಬಿಡು."

"ಅಹ-ಹ-ಹ-ಹ! ಈಗ!—'ಪ್ಯದ್ಮ! ಮ್ಯರತ್ಬಿಡು'—ಅಂತ!"

"ಏನೇ ಪದ್ಮಾ, ಇದ್ದಕ್ಕಿದ್ದ ಹಾಗೇ ಉಂಟಾದ್ಕೋಪ್ದಲ್ಲಿ ಮಾಡಿದ್ತಪ್ಗೆ—ಎಂಥೆಂಥಾ ಕೋರ್ಟ್ನಲ್ಲೂ ರಿಯಾಯ್ತಿ ತೋರಿಸ್ತಾರೆ! ನೀನು. . . ."

"ನಿಮ್ಕೋರ್ಟು—ಕಚೇರಿ ಮಾತ್ನಂಗ್ಬೇಡ! ಈ ಕೋರ್ಟ್ನಲ್ಲೀಗೇ! . . . ಇನ್ಮೇಲೆ . . ."

"ಏನೋ?—ಇನ್ಮೇಲೆ!"

"ನಾನ್ನಿಮ್ಮನೇ ಮುಸ್ರೇ ತಿಕ್ಕೋಳು!—ಕಸಾ ಗುಡ್ಸೋಳು!"

"ಹಾಗಾದ್ರೆ ಕೆಂಪಿ 'ಡಿಸ್ಮಿಸ್ಸೂ' ಅನ್ನು!"

"ಡಿಸ್ಮಿಸ್ಸೇ! ಇನ್ಯಾಕವಳು?"

"ಆಯ್ತು; ಅಡಿಗೆ ಮಾಡೋರು?"

"ಹುಂ! ಅಡಿಗೇನೂ ಮಾಡೋಳು—ಅಷ್ಟೆ!—ಇನ್ನೇನು?"

ನನಗೇಕೋ ನಗು ಬರುವ ಹಾಗಾಯಿತು. ನಗುತ್ತ,

"ಅದ್ಹ್ಯಾಗಷ್ಟೇ ಆಗುತ್ತೆ—ಪದ್ಮಾ?"

—ಎಂದು ಕೇಳಿದೆ.

"ಅಷ್ಟಲ್ದೇ ಇನ್ನೇನೂಂದ್ರೇ?"

"ಮರೆತ್ಬಿಟ್ಯೋ—ಮದುವೇ ಸಮಯ್ದಲ್ಲಾದ್ಕರಾರ್ನಲ್ಲಿ—"

"ಏನ್ಕರಾರು?—"

"ಮಂತ್ರಾ ಹೇಳಸ್ತಾ ಹೇಳಸ್ತಾ ಪುರೋಹಿತ್ರು, ಧರ್ಮ—ಅರ್ಥ—ಕಾಮ—ಮೋಕ್ಷ—ಪ್ರಜೆ—ಗಿಜೆ ಅಂತ ಏನೇನೋ ಘಟ್ಯಾಗಿ ಹೇಳ್ಸಿದ್ರಲ್ಲ! ಈಗಿನ್ನೂ ಹೇಳ್ತಿರೋ ಹಾಗಿದೆ ನನಗೆ!"

"ಓಹೋ! ಏನಡ್ವಿ! ಧರ್ಮಕ್ಕರ್ಮಾರ್ಥವಾಯ್ತು—ನಿಮ್ಮುರಿಗೋಪ್ದಲ್ಲಿ ಕಾಮ್ದುಹನ್ನಾಯ್ತು—ನನಗೊಂದೇಮಾತ್ನಲ್ಲಿ ಮೋಕ್ಷವೂ ಆಯ್ತು! ಇಗೋ

ಇವನೊಬ್ಬ ಪ್ರಜೆ! ಎಲ್ಲಾ ಸಾಂಗ್ವಾಗಿ ನೆರವೇರ್‍ಸಿದೀರಲ್ಲ ಕರಾರ್‍ನ! ಇನ್ಮೇಲೆ ನೀವೇನ್ಬೇಕಾದ್ರೂ ಹೇಳಿಕೊಳ್ಳಿ—"

"ನೀನು?"

"ಹೇಳಿದ್ನಲ್ಲ—ಆಗ್ಲೇ—"

"ಎಷ್ಟ್ದಿನ?—ಅಥ್ವಾ—ಎಷ್ಟೊತ್ತು?"

"ಎಷ್ಟ್ದಿನ ನಾನ್ನಿಮ್ಮನೇ ದಾಸೀ ಮಾತ್ರ ಆಗಿರ್‍ತಿನೋ ಅಷ್ಟ್ದಿನ!"

"ನೀನುದಾಸೀ ಮಾತ್ರಾಂತ ನಾನೇನ್ಹೇಳಿಲ್ಲ"

"ಮತ್ತಿನ್ನೇನ್ನಾನು?—ಹೇಳ್ಬೇಕೇ ಬಾಯ್ಬಿಟ್ಟು!"

"ಎಲ್ಲಾದ್ರೂ ಉಂಟೇ! 'ಕೆಲಸೇಷು ದಾಸೀ, ಕಿವಿಯೇಷು ಮಂತ್ರೀ, ಊಟೇಷು ಅಮ್ಮಾ, ನೋಟೇಷು ಪದ್ಮಾ—ಪದ್ಮಾ—ಪದ್ಮಾ'—ಆಮೇಲೆ ಕೊನೇಲಿ 'ಧರಿತ್ರೀ'ಂತ್ಬರುತ್ತೆ—ಹುಂ! 'ಕ್ಷಮಯಾ ಧರಿತ್ರೀ'ಂತ ಏನೇನೋ ಎಲ್ಲಾ ಒಟ್ಟು ಆರಿಲಾಖೆ ಒಂದ್ಮೂಟೇಲಿ!—ಗೊತ್ತೇ?—ನನ್ಪದ್ಮ!"

ನಾನಿನ್ಮೇಲ್ನಿಮ್ಪದ್ಮ ಅಲ್ಲ—ಸೌದೆ, ನಿಮ್ಸಿಟ್ಗೆ!"

ನೊಡ್ದ್ಯಾ! ಮತ್ತದೇಮಾತು! . . . ಕಾಸಿನ್ಕೋಪಕ್ಕೆ ರೂಪಾಯ್ಬೆಲೆ ಕಟ್ತೀಯಲ್ಲ ಪದ್ಮಾ!"

"ಕಾಸಿನ್ಕೋಪ! ಓಹೋ! ಇವತ್ತಿಂದು ಕಾಸಿನ್ಕೋಪ್ವೇ! ಹಾಗಾದ್ರೆ ರೂಪಾಯ್ಕೋಪಾ ಹ್ಯಾಗಿರುತ್ತೊ!"

—ಎಂದು ಹುಬ್ಬು ಎತ್ತಿ ತಲೆ ಅಲ್ಲಾಡಿಸಿದಳು.

ನಾನು ನಗುತ್ತ,

"ಅದೇನ್ಮಹಾ ಕಷ್ಟ! ನೂರ್‍ತೊಂಬತ್ತೆರಡರಿಂದ ಗುಣಿಸಿದ್ರಾಯ್ತು!"

—ಎಂದೆ.

"ಹಾಗಾದ್ರೆ ರೂಪಾಯ್ಕೋಪಾನೂ ಇದೆ ಅನ್ನಿ—ಉಗ್ರಾಣದಲ್ಲಿ! ಬಾಳಿ ದ್ಹಾಗೇ ಆಯ್ತು ನಾನು!"

—ಎನ್ನುತ್ತ ಹಣೆ ಮುಟ್ಟಿಕೊಂಡಳು.

"ನೋಡು ಪದ್ಮಾ, ಅದೆಲ್ಲಾ ಅವರವರ್ಕಟ್ಟೋ ಬೆಲೆ—ನೋಡೋರೀತೀ ಮೇಲಿದೆ—ಮುಖ್ಯವಾಗಿ. ಈಗ್ನೋಡು, ನಿಂಬೆಕಾಯಿದೆ, ಭೂತ್ಗನ್ನಡೀಲ್ನೋಡಿದ್ರೆ ಕುಂಬಳ್ಕಾಯ್ಹಾಗ್ತ್ರ ಕಾಣುತ್ತೆ—ಆದ್ರೇನು?—ಕುಂಬಳ್ಕಾಯ್ಕುಂಬಳ್ಕಾಯೇ—ನಿಂಬೇಕಾಯ್ನಿಂಬೇ ಕಾಯೇ!"

"ಸರಿ, ಒಪ್ದೆ. ಆದ್ರೆ, ಎಷ್ಟ್ರುಪಾಯ್ಕೊಟ್ರೆ—ಯಾವ್ಕಣ್ಣಲ್ನೋಡಿದ್ರೆ ಹಾಗ ಲ್ಕಾಯಿ ಮಾವಿನ್ಹಣ್ಣಾಗುತ್ತೆ—ಅದ್ಹೇಳಿ?"

"ಅದೇನಸಾಧ್ಯಾಂತ ತಿಳ್ಕೊಳ್ಬೇಡ; ಯೋಗಶಕ್ತ್ಯೇಗದೆಲ್ಲಾ ನೀರ್ಕುಡಿದ್ಹಾಗೆ!"

"ನೀರ್ಕುಡಿದ್ಹಾಗೋ—ಕಾಫೀ ಕುಡಿದ್ಹಾಗೋ—ಹೋಗ್ಲೀ, ಈಗ್ನಿಧಾನ್ವಾಗಿ ಯೋಚ್ನೆಮಾಡಿ . . . ನಂತಪ್ಪಾದ್ರೂ ಏನ್ಹೇಳಿ—ತಿದ್ದಿಕೊಳ್ತೇನಿ."

"ಛೆ! ಛೆ! ಛೆ! ಛೆ! ತಪ್ಪೆಲ್ಲಾ ನಂದೇ! ಒಪ್ಕೊಂಡ್ಬಿಟ್ಟೆ! ಅದರ್ಮೇಲಪ್ಪಿಲೇ ಇಲ್ಲ. ಆದ್ರೆ ಇವತ್ತು ಹೀಗೆಲ್ಲಾ ಆಗ್ಬೇಕೂಂತ ಬೆಳಿಗ್ಗೇನೇ ತೀರ್ಮಾನವಾಗ್ಬಿಟ್ಟಿದ್ರಿಲ್ವೇ—ನಿನ್ನಂಗಾಲ್ನಲ್ಲಿ—ನನ್ಮೂಗ್ನಲ್ಲಿ!"

—ಎಂದು ಮೂಗು ಮುಟ್ಟಿಕೊಂಡೆ—

ಇನ್ನೂ ಸ್ವಲ್ಪ ಚುಮು-ಚುಮೂ ಅಂತಿತ್ತು. ಪದ್ಮ ನನ್ನ ಮೂಗು ನೋಡಿ ಘೊಳ್ಳೆಂದು ನಕ್ಕು,

"ಸರಿಯಾಗ್ಮಾಡಿದ!—ಬೆಳಗಾಗತ್ಲೂ ಒಂಟಿ ಸೀನು ಸೀತದ್ದಕ್ಕೆ!"

—ಎಂದಳು.

"ಇನ್ನೆಂಟ್ದಿನ, ಒಂಟಿ ಸೀನಲ್ಲ—ಅರ್ಧ ಸೀನೂ!—ಕಾಲ್ಸೀನೂ!—ಸೀನೋ ಹಾಗಿಲ್ಲ!"

ಇನ್ನೆಂದೆಂದ್ಗೂ ಒಂಟಿಸೀನ್ನ ಸೀನ್ದೇ ಇರ್ಲಿ!—ಆ ಮೂಗು!"

"ಕೋಪ ಮೂಗಿಂತುದೀಲೇ ಇರುತ್ತೇ ಅನ್ನೋ ಮಾತ್ನಿಜ್ವಾಗಿದ್ರೆ—ಅದಿವತ್ತು ನಿರ್ನಾಮ್ವಾಗ್ಹೋಯ್ತು ಪದ್ಮ—ಇನ್ನೇನ್ಭಯವಿಲ್ಲ!"

"ನಾನಂಬೊಲ್ಲ ಆ ಮಾತ್ನ!"

"ಏನ್ಮಾಡಿದ್ರೆ ನಂಬ್ತಿ?"

"ಹಾಗಂತ ಬರ್ಕೊಡಿ!"

"ಓಹೋ! ಅಗತ್ಯವಾಗಿ!—ನೀ ಬರಿ—ನಾ ರುಜು ಹಾಕ್ತೇನಿ."

ಪದ್ಮ ಎದ್ದುಹೋಗಿ ಒಂದು ಕಾಗದ ಪೆನ್ನು ತಂದಳು—ಸ್ವಲ್ಪ ಹೊತ್ತು ಯೋಚಿಸಿ ಬರೆಯತೊಡಗಿದಳು. ಕಾಗದದ ಮೇಲುಗಡೆ ಬಲದ ಮೂಲೆಯಲ್ಲಿ ಊರು—ಕೇರಿ—ಮನೆ ನಂಬ್ರು—ತಾರೀಕು ಎಲ್ಲಾ ನಮೂದಿಸಿ, ಆಮೇಲೆ ಬರೆಯಲಾರಂಭಿಸಿದಳು :—

". . . ನಾದ ನಾನು ನನ್ನ ಸಹಧರ್ಮಿಣಿಯಾದ ಪದ್ಮಾದೇವಿಗೆ ಯಾವ ಬಲವಂತವೂ ಇಲ್ಲದೆ ಬರೆದುಕೊಟ್ಟ ಒಪ್ಪಂದದ ಪತ್ರ ಏನೆಂದರೆ, ಇವತ್ತೇ ಕಡೆ—ಇನ್ನು ಮೇಲೆ ಏನೇ ಆಗಲಿ ಕೋಪಮಾಡೋದೇ ಇಲ್ಲ—"

"ಲೇ ಏನೇ ಇದು! ಬಹಳ ಅನ್ಯಾಯ! ಹುಳಿ—ಉಪ್ಪು—ಖಾರಾ ತಿ—"

"ನೀವು ಸ್ವಲ್ಪ ಸುಮ್ನಿರಿ! ಮಧ್ಯೆ ಮಧ್ಯೆ ಬಾಯಿ ಹಾಕ್ಬೇಡಿ!"

—ಎಂದು

ಮುಂದುವರಿಸಿದಳು :—

“ —ಒಂದುವೇಳೆ ಅಪ್ಪಿ ತಪ್ಪಿ ಮಾಡಿದರೂ, ‘ ಹೆಣ—ತಿಥಿ ’— ”

“ ಥತ್ ! ಬಿಡ್ತೂ ಅನ್ನು !—ಜ್ಞಾಪಿಸ್ಬೇಡ ! ”

“ ಚುಪ್ ! ” ಎಂದು ನನ್ನ ಕಡೆ ತಿರುಗಿ, ತುಟೀ ಮೇಲೆ ಬೆರಳಿಟ್ಟುಕೊಂಡು ತೆಗೆದು,

“ — ಅಂತ ನಿನ್ನಾಣೆಗೂ ಅನ್ನೊಲ್ಲ. ಇದಕ್ಕೆ ತಪ್ಪಿ ನಡೆದರೆ ಒಂದೊಂದು ಸಲಕ್ಕೂ ನೂರು ರೂಪಾಯಿ ದಂಡ— ”

“ ಬಹಳ ದುಬಾರಿ ಮಾಡ್ಬಿಟ್ಟೆ ! ”

“ — ಕೊಡುತ್ತೇನೆ. ”

—ಎಂದು ಬರೆದು, ನಗುತ್ತ ನನ್ನ ಮುಂದೆ ಹಿಡಿದು,

“ ಹಾಕಿ—ರುಜು ”

—ಎಂದಳು. ನಾನು ರುಜು ಮಾಡಿ,

“ ಇದಕ್ಕೆ ಸಾಕ್ಷಿ ? —ಪತ್ರಕ್ಕೆ ಸಾಕ್ಷಿ ಇಲ್ದೇ ಇದ್ರೆ ಜಾರೀಗೆ ಬರೋ ಹಾಗೇ ಇಲ್ಲ ! ”

—ಎಂದೆ.

“ ಓಹೋ ! ಸಾಕ್ಷೀನೂ ಹಾಕಸ್ತೀನಿ ! ”

—ಎಂದು ಅರುಣನನ್ನೆತ್ತಿಕೊಂಡು, ಅವನ ತೋಳುಗಳ ಮೇಲಿದ್ದ ಅರಿಶಿನ ಕುಂಕುಮವನ್ನೆಲ್ಲಾ ಬಳಿದು ತೆಗೆದು, ಅವನ ಜೊಲ್ಲಿನಲ್ಲೇ ಕಲಸಿ, ಅವನ ಬಲ ಅಂಗೈಗೆ ಬಳಿದು ಪತ್ರದ ಕೆಳಭಾಗದಲ್ಲಿ ಚೆನ್ನಾಗಿ ಒಂದು ಚಟ್ಟು ಒತ್ತಿಸಿ, ಅದರ ಕೆಳಗೆ “ ಅರುಣನ ಸಾಕ್ಷೀ ಕೈಗುರ್ತು ” ಎಂದು ಬರೆದಳು. ಅದನ್ನು ಬಹಳ ಜೋಪಾನಮಾಡುವಂತೆ, ಮಡಿಸಿ ರವಿಕೆ ಒಳಗೆ ಸೇರಿಸಿಕೊಂಡಳು.

*   *   *   *   *

ಮಾರನೆಯ ದಿನವೆಲ್ಲಾ ಕುಳಿತು “ ರಾಧೆಯ ಕ್ಷಮೆ ”ಯನ್ನು ಪುನರ್ನಿರ್ಮಾಣ ಮಾಡಿದೆ. ರಾಧೆಯ ನಿಲವಿಗೆ ಪದ್ಮಳ ಆಕೃತಿಯನ್ನು ಉಪಯೋಗಿಸಿದ್ದೆ. ಚಿತ್ರ ಮುಗಿದಮೇಲೆ ಪದ್ಮ ಬಂದು ನೋಡಿ,

“ ಅಹಹಹಹಾ ! ಏನು ಜಾಣ್ರೋ ! ”

—ಎಂದಳು.

“ ಯಾಕೆ ? ”

—ಎಂದು ಕೇಳಿದೆ.

" ನನ್ನೇನೋ ರಾಧೆ ಮಾಡಿದ್ರಿ !—ನೀವು ?

" ಏನು—ನಾವು ? "

" ಪಾಪ ! ನಿಮಗವಮಾನ್ವೇನೋ ರಾಧೆ ಕಾಲ್ಹಿಡಿಯೋಕೆ ! "

" ನಾ ಕೃಷ್ಣನಾಗ್ಬೇಕೂಂತೀಯಾ—ಹಾಗಾದ್ರೆ ? "

" ಚಿತ್ರದಲ್ಲಿ—ಅಷ್ಟೆ ! "

* * * * *

ನೆನ್ನೆ ನಾನಾಡಿದ ಒಂದು ಮಾತು ನನಗೆ ಮರೆತುಹೋಗಿತ್ತು. ಆದರೆ ಪದ್ಮಳಿಗೆ ಅಂಥಾ ವಿಚಾರಗಳಲ್ಲಿ ಬಲು ನಿಗಾ! ಸಾಯಂಕಾಲ ಪೇಟೆಗೆ ಹೋಗಿ ಬಂದು, ನನ್ನ ಕೈಗೆ ಒಂದು " ಬಿಲ್ಲು " ಕೊಟ್ಟಳು.

ಒಂದು ಪೌಂಡು ಬೆಣ್ಣೆ ಬಿಸ್ಕತ್ತು, ಒಂದು ಬೆಳ್ಳಿ ಗಿಲಗಚ್ಚಿ—ಒಂದು "ಶಾಂತಾ ಆಪ್ಟೆ" ಅಥವಾ, ಬಂಧನ್ " ಅಥವಾ " ಕಂಗನ್ " ಸೀರೆಗೆ, ಜುಮ್ಲಾ ಎಪ್ಪತ್ತೆಂಟು ರೂಪಾಯಿ ಹನ್ನೆರಡಾಣೆ ಮಾತ್ರ !

ಪರವಾಗಿಲ್ಲ! ಇಪ್ಪತ್ತೊಂದೂಕಾಲು ರೂಪಾಯಿ ಸೋಡಿ ಬಿಟ್ಟಿದ್ದಳು—ಮೊದಲನೇ ಅಪರಾಧ ಅಂತ !

ಆನಂದ

ಶಿಲಾಹಾರರ ಒಂದು ಪ್ರಾಚೀನ ಶಾಖೆ

೧೯೩೩ನೆಯ ಕ್ರೈಸ್ತ ವರ್ಷದ ಬೇಸಗೆಯ ಬಿಡುವಿನಲ್ಲಿ ಶಾಸನಗಳನ್ನು ಪರಿಶೋಧಿಸುವ ಉದ್ದೇಶದಿಂದ ಸೋಲಾಪೂರ ಜಿಲ್ಲೆಯಲ್ಲಿಯ ಅಕ್ಕಲಕೋಟ ಎಂಬ ಚಿಕ್ಕ ಸಂಸ್ಥಾನದ ಮುಖ್ಯಸ್ಥಳವಾದ ಅಕ್ಕಲಕೋಟ ಗ್ರಾಮಕ್ಕೆ ನಾನು ಕಲಬುರ್ಗಿಯ ನನ್ನ ಗೆಳೆಯರಾದ ಶ್ರೀಮಾನ್ ಕಪಟರಾಳ ಕೃಷ್ಣರಾಯರೊಂದಿಗೆ ಹೋಗಿದ್ದೆನು. ಅಲ್ಲಿ ಹಳೆಯ ಅರಮನೆಯ ನಜರಬಾಗ ಎಂಬ ಹಾಳು ತೋಟದ ಒಂದು ಮೂಲೆಯಲ್ಲಿರುವ ತಗಡಿನ ಚಪ್ಪರದ ಒಂದು ಗುಡಿಸಿಲಿನಲ್ಲಿ ಅವ್ಯವಸ್ಥಿತವಾಗಿ ಇರಿಸಿದ್ದ ಅನೇಕ ಶಿಲಾಶಾಸನಗಳನ್ನು ಕಂಡು ಅವುಗಳನ್ನು ಪ್ರತಿಮಾಡಿಕೊಂಡೆವು. ಈ ಸಂಸ್ಥಾನದ ಹಿಂದಿನ ದೊರೆಗೆ ಶಾಸನಗಳ ವಿಷಯದಲ್ಲಿ ಒಂದು ಬಗೆಯ ಕುತೂಹಲವು ಉಂಟಾಗಿ ಆತನು ತನ್ನ ಭಾಗದ ಬೇರೆ ಬೇರೆ ಊರುಗಳಿಂದ ಈ ಶಾಸನಗಳನ್ನು ತರಿಸಿ ಶೇಖರಿಸಿದನೆಂತಲೂ, ಇವುಗಳನ್ನು ತನ್ನ ಅರಮನೆಯ ವಸ್ತು ಸಂಗ್ರಹಾಲಯದಲ್ಲಿ ಜೋಕೆಯಿಂದ ಇರಿಸಬೇಕೆಂದು ಎಣಿಸಿದ್ದನೆಂತಲೂ, ಅಷ್ಟರಲ್ಲಿ ಆತನು ಕಾಲವಶವಾದುದರಿಂದ ಆತನ ಯೋಜನೆ ಅಲ್ಲಿಗೇ ನಿಂತು ಹೋಯಿತೆಂತಲೂ, ಈ ಶಾಸನಗಳ ಕುರಿತ ಕಥೆಯನ್ನು ಜನಗಳು ಹೇಳಿದರು!

ಮುಂದೆ ಮುದ್ರಾಪ್ರತಿಗಳ ಸಹಾಯದಿಂದ ಈ ಶಾಸನಗಳ ಅಧ್ಯಯನವನ್ನು ಮಾಡುತ್ತಿರುವಾಗ, ಅವುಗಳಲ್ಲಿ ಕೆಲವು ಶಿಲಾಹಾರರೆಂಬ ಸಾಮಂತ ಅರಸರನ್ನು ಸಂಬಂಧಿಸಿದುವು ಆಗಿದ್ದು, ಇವುಗಳಿಂದ ಇದುವರೆಗೆ ಜ್ಞಾತವಾಗಿರುವ ಶಿಲಾಹಾರರ ಶಾಖೆಗಳಿಗಿಂತ ಪ್ರಾಚೀನವಾದ ಒಂದು ಶಾಖೆಯ ಚರಿತ್ರೆ ಪ್ರಕಾಶಿತವಾಗುವುದು ಎಂಬ ಸಂಗತಿ ತಿಳಿಯಬಂದಿತು. ಅದು ಹೇಗೆ ಎಂಬುದನ್ನು ಈ ಮುಂದೆ ವಿವರಿಸಲಿರುವೆ.

ಇಂಡಿಯಾ ಸರ್ಕಾರದ ಶಾಸನ ಇಲಾಖೆಯ ಸೇವೆಯಲ್ಲಿ ಸೇರುವುದಕ್ಕೆ ಮುನ್ನ ನಾನು ನನ್ನ ಸ್ವಂತದ ಅಭಿರುಚಿಯಿಂದ ನೈಜಾಂ ಮತ್ತು ಬೇರೆ ಪ್ರದೇಶಗಳಲ್ಲಿ ಸುತ್ತಿ ಅನೇಕ ಶಾಸನಗಳನ್ನು ಸಂಗ್ರಹಮಾಡಿರುವೆನು. ಅವುಗಳ ತಾತ್ಪೂರ್ತಿಕ ಪಟ್ಟಿಯೊಂದು ಧಾರವಾಡದ ಕರ್ನಾಟಕ ಇತಿಹಾಸ ಸಂಶೋಧಕ ಮಂಡಲದ ಪತ್ರಿಕೆಯಲ್ಲಿ ಪ್ರಕಟವಾಗಿದೆ. (*Karnatak Historical Review* Vol. II, No. 2, Appendix). ಅದರಲ್ಲಿ ಅಕ್ಕಲಕೋಟದ ಈ ಶಾಸನಗಳಿಗೆ ೧ ರಿಂದ ೧೦ ರ ವರೆಗೆ ಅನುಕ್ರಮಾಂಕಗಳನ್ನು ಕೊಟ್ಟದೆ. ಈ ಮುಂದಿನ ವಿವೇಚನೆಯಲ್ಲಿ ಸಂದರ್ಭದ ಸೌಕರ್ಯಕ್ಕಾಗಿ ಈ ಅಂಕಗಳ ಮೂಲಕ ಈ ಶಾಸನಗಳನ್ನು ನಿರ್ದೇಶಿಸುವೆ.

ಪ್ರಸ್ತುತ ಪ್ರತಿಪಾದನೆಗೆ ನಾಲ್ಕನೆಯ ಅಂಕದ ಶಾಸನ ಆಧಾರಭೂತವಾಗಿದೆ. ಈ ಶಾಸನದ ಮೇಲೆ ವ್ಯಾಖ್ಯಾನ ಹೇಳುವ ಮೊದಲು ಅದರ ಸಾರಾಂಶವನ್ನು ತಿಳಿಸುವುದು ಲೇಸು. ಇವರಲ್ಲಿ ಉಕ್ತನಾದ ಮಹಾರಾಜ ಕಲ್ಯಾಣ ಚಾಲುಕ್ಯರ ತ್ರಿಭುವನಮಲ್ಲ ಆರ್ವಡಿ ವಿಕ್ರಮಾದಿತ್ಯ. ಕಾಲ ಆತನ ಆಳಿಕೆಯ ೩೯ನೆಯ ವರ್ಷದ ಜಯಸಂವತ್ಸರದ ಪುಷ್ಯ ಬಹುಳ ೧೨, ಶುಕ್ರವಾರ, ಉತ್ತರಾಯಣ ಸಂಕ್ರಮಣ ವ್ಯತೀಪಾತ. ಇದು ಕ್ರೈ.ಶ. ೧೧೧೪ನೆಯ ಡಿಸೆಂಬರ ೨೫ ಶುಕ್ರವಾರ, ಈ ದಿನಕ್ಕೆ ಸರಿಹೋಗುತ್ತದೆ. ಈ ಭೂವಲಯದಲ್ಲಿ ಶೌರ್ಯವೇ ಮೊದಲಾದ ಸದ್ಗುಣಗಳಿಂದ ನಾಮಾಂಕಿತರೂ, ಖೇಚರ ವಂಶಭೂಷಣರೂ, ಶಿಲಾಹಾರ ಕುಲೋತ್ಪನ್ನರೂ, ತಗರ ಪುರವರಾಧೀಶ್ವರರೂ ಆದ ಕ್ಷತ್ರಿಯ ಅರಸರು ಬಾಳಿದರು. ಅವರಲ್ಲಿ ಪಿಟ್ಟಮ ನೆಂಬವನು ಅರಸನಾಗಿ ಅಸಿತಾದ್ರಿ ಮತ್ತು ಕಾಳಾಂಜರ ಇವುಗಳೇ ಮೇರೆಯಾಗಿದ್ದ ಭೂಮಿಯನ್ನು ಪರಿಪಾಲಿಸಿದನು. ಆತನ ಮಗ ಅಜ್ಜ. ಹೀಗೆ ಅನುಕ್ರಮವಾಗಿ ಕೆಲವರಾಳಿದ ಬಳಿಕ ಧನಸಂಗ್ರಹನೆಂಬವನು ಬಹಳ ಬಲಶಾಲಿಯಾಗಿ ಹೆಸರು ಪಡೆದನು. ಆತನ ಸೈನ್ಯದಲ್ಲಿ ಬರಿಯ ಕುದುರೆಪಡೆಯೇ ಹದಿನೆಂಟು ಸಾವಿರ; ಪ್ರಸಿದ್ಧಿವೆತ್ತ ವೀರರೇ ಎಂಬತ್ತು ಸಾವಿರ; ಕಾಲಾಳುಗಳೇ ಮುಂತಾದ ಮಿಕ್ಕ ಪಡೆಯವರ ಲೆಕ್ಕವಿಲ್ಲ! ಈತನ ಸಂತತಿಯಲ್ಲಿ ಮುಂದೆ ಕವಿಲಾಸನೆಂಬವನು ಉದಯಿಸಿದನು. ಕವಿಲಾಸನ ಪತ್ನಿ ಮೊರಂಬದ ಉದ್ವಾನಿ ರಾಜರಾಜನ ಮಗಳಾದ ಚಂದಲ ದೇವಿ. ಇವರ ಮಗನೇ ಚಾಲುಕ್ಯ ವಿಕ್ರಮಾದಿತ್ಯನ ಪಾದಪದ್ಮೋಪಜೀವಿಯಾದ ಮಹಾಮಂಡಲೇಶ್ವರ ಇಂದರಸ.

ತಗರಪುರವರಾಧೀಶ್ವರ, ಜೀಮೂತವಾಹನಾನ್ವಯಶರಚ್ಚಂದ್ರ ಸೆಳಟಿಕುಳಕಮಳ ಮಾರ್ತಂಡ, ಚಾಮುಂಡಿಕಾ ದೇವೀಲಬ್ಧವರಪ್ರಸಾದ, ಮುಂತಾದ ಬಿರುದುಗಳಿಂದ ಅಂಕಿತನಾದ ಈ ಇಂದರಸನು ಮೇಲೆ ನಿರ್ದಿಷ್ಟವಾದ ದಿನ, ರಾಜ್ಯಾಂಗದ ಇನ್ನಿಬ್ಬರು ಅಧಿಕಾರಿಗಳೊಡನೆ ಸೇರಿ ಕರಂಜಿಗೆಯ ಶ್ರೀ ಸಿದ್ಧಗಜ್ಜೇಶ್ವರದೇವರ ಅಂಗಭೋಗ, ನಿವೇದ್ಯಾದಿಗಳ ನಿಮಿತ್ತವಾಗಿ, ಆ ದೇವರ ಮಠದ ಆಚಾರ್ಯರಾದ ಶ್ರೀ ಜ್ಞಾನಸಿದ್ಧದೇವರ ಪಾದಗಳನ್ನು ತೊಳೆದು, ಆಣನೂ್ರು-ಮುನ್ನೂರು ಈ ಭಾಗಕ್ಕೆ ಸೇರಿದ ಅಂಕುಲಗೆ-ಐವತ್ತು ಈ ಪ್ರದೇಶದೊಳಗಣ ಕರಂಜಿಗೆ ಎಂಬ ಗ್ರಾಮದಲ್ಲಿ ಭೂಮಿಯೇ ಮೊದಲಾದ ವಸ್ತುಗಳನ್ನು ಸರ್ವನಮಸ್ಯವಾಗಿ ದತ್ತಿ ಬಿಡುವನು.

ಈ ಶಾಸನದಲ್ಲಿ ಮೇಲೆ ಸೂಚಿಸಿದ ರೀತಿಯಲ್ಲಿ ವಿವರಿಸಲಾದ ಶಿಲಾಹಾರ ಮನೆತನದ ಮೂಲಪುರುಷನು ಪಿಟ್ಟಮನೆಂಬುದು ವ್ಯಕ್ತವಾಗುತ್ತದೆ. ಪಿಟ್ಟಮನಿಂದ

ಆರಂಭವಾದ ಈ ವಂಶದಲ್ಲಿ ಶಾಸನಕಾಲದಲ್ಲಿ ಬಾಳಿದ ಇಂದರಸನ ವರೆಗೆ ಹದಿನಾರು ಸಂತತಿಯವರು ತಲೆದೋರಿದರು. ಈ ಪ್ರತಿಯೊಂದು ತಲೆಮಾರಿನ ಪುರುಷರು ಮತ್ತು ಅವರ ಆನುವಂಶಿಕ ಸಂಬಂಧವು ಈ ಶಾಸನದಲ್ಲಿ ನಿರ್ದೇಶಿಸಲಾಗಿದೆ. ಈ ವಂಶಕ್ರಮವನ್ನು ಈ ಲೇಖನದ ಕೊನೆಯಲ್ಲಿ ಪೂರ್ತಿಯಾಗಿ ಕಾಣಿಸಿರುವೆನು. ಅದನ್ನು ನೋಡುತ್ತಿರಲಾಗಿ ಶಿಲಾಹಾರರ ಈ ಮನೆತನವು ಇದುವರೆಗೆ ಜ್ಞಾತವಾಗಿರುವ ಅವರ ಶಾಖೆಗಳಲ್ಲಿ ಯಾವೊಂದಕ್ಕೂ ಸಂಬಂಧಿಸಿದುದು ಆಗಿರದೆ ನೂತನವೂ ಸ್ವತಂತ್ರವೂ ಆಗಿದೆ ಎಂಬ ಸಂಗತಿ ಬಲ್ಲವರಿಗೆ ಅರಿಕೆಯಾಗದಿರಲಾರದು.

ಈ ಮನೆತನದ ಇಂದರಸನ ಕಾಲವು ನಮಗೆ ತಿಳಿದಿದೆ. ಆತನು ಈ ಶಾಸನದ ಕಾಲದಲ್ಲಿ ಎಂದರೆ ಕ್ರಿ.ವ. ೧೧೧೪ರಲ್ಲಿ ಬಾಳಿದ್ದನು. ಆತನಿಗೆ ಹಿಂದೆ ೧೫ ತಲೆಮಾರುಗಳ ಆಚೆಗೆ ಪಿಟ್ಟಮನು ಬಾಳಿದ್ದನು. ಒಂದೊಂದು ತಲೆಮಾರಿಗೆ ಸಾಧಾರಣ ಪ್ರಮಾಣದಿಂದ ೨೫ ವರ್ಷಗಳಂತೆ ಲೆಕ್ಕವನ್ನು ಹಿಡಿದು ಗಣಿತ ಹಾಕಿದರೆ, ೧೧೧೪—೧೫ × ೨೫ = ೭೩೯ ಈ ಕ್ರೈಸ್ತವರ್ಷದ ಅಕ್ಕಪಕ್ಕದಲ್ಲಿ ಪಿಟ್ಟಮನು ಬಾಳಿದ್ದನು ಎಂದು ಊಹಿಸಲಿಕ್ಕೆ ಅವಕಾಶವಿದೆ.

ಇದುವರೆಗೆ ಶಿಲಾಹಾರರ ಮೂರು ಶಾಖೆಗಳ ಚರಿತ್ರೆ ವಿದಿತವಾಗಿದೆ.[1] ಇವುಗಳಲ್ಲಿ ಉತ್ತರ ಕೊಂಕಣದ ಶಾಖೆಯ ಪ್ರಾರಂಭಕಾಲ ಕ್ರೈ.ವ. ೮೭೧ ; ಕೊಲ್ಹಾಪುರ ಶಾಖೆಯದು ೯೫೦ ; ಮತ್ತು ದಕ್ಷಿಣ ಕೊಂಕಣ ಶಾಖೆಯದು ೭೮೩. ಈ ವರೆಗಿನ ತಿಳಿವಳಿಕೆಯಂತೆ ದಕ್ಷಿಣ ಕೊಂಕಣದ ಶಾಖೆಯೇ ಪ್ರಾಚೀನವೆಂದು ಎಣಿಸಲಾಗಿತ್ತು. ಆದರೆ ಇದೀಗ ಕಂಡಂತೆ ಪಿಟ್ಟಮನಿಂದ ಮುಂದುವರಿದ ಪ್ರಸ್ತುತ ಶಾಖೆಯ ಪ್ರಾರಂಭಕಾಲ ದಕ್ಷಿಣಕೊಂಕಣದ ಶಾಖೆಗಿಂತ ಸುಮಾರು ೫೦ ವರ್ಷ ಹಿಂದಕ್ಕೆ ಹೋಗುತ್ತದೆ.

ಸುಪರಿಚಿತವಾದ ಈ ಮೂರು ಶಾಖೆಗಳಲ್ಲದೆ ಇನ್ನೂ ಮೂರು ನಾಲ್ಕು ಶಿಲಾಹಾರ ಅರಸರ ಶಾಖೆಗಳು ಬೇರೆ ಬೇರೆ ಪ್ರದೇಶಗಳಲ್ಲಿ ಹಬ್ಬಿದ್ದುವು ಎಂದು ಈಚೆಯ ಅನ್ವೇಷಣಗಳಿಂದ ಕಂಡುಬಂದಿದೆ. ಇವುಗಳ ಸೂತ್ರಬದ್ಧವಾದ ಚರಿತ್ರೆಯನ್ನು ಬರೆವ ಪ್ರಯತ್ನವು ನಡೆದಿಲ್ಲ. ಇವುಗಳಲ್ಲಿ ಒಂದು ಶಾಖೆಯವರು ವಿಜಾಪುರ ಪ್ರದೇಶದ ಮಹಾ ಸಾಮಂತರಾಗಿದ್ದು ಎಳಮೇಲ ಎಂಬ ಊರಲ್ಲಿ ೧೧-೧೨ ಶತಮಾನಗಳಲ್ಲಿ ಆಳುತ್ತಿದ್ದರು.[2] ಇನ್ನೊಂದು ಶಾಖೆಯವರು ಮಹಾಮಂಡಲೇಶ್ವರರಾಗಿ

---

[1] *Bombay Gazetteer*—Vol. I, pt. II, pp. 535-49 and *Indian Culture*, Vol. II, pp. 393 ff.

[2] ಶಾಸನ ಇಲಾಖೆಯ ಮದ್ರಾಸ ಆಫೀಸಿನವರು ಪ್ರಕಟಿಸಿದ ೧೯೩೬-೩೭ ಇಸ್ವಿಯ ಮುಂಬಯಿ-ಕರ್ನಾಟಕದ ಶಾಸನಗಳ ಪಟ್ಟಿಯಲ್ಲಿಯ ಈ ಮುಂದಿನ ಅಂಕಗಳನ್ನು ನೋಡಿರಿ: ೬, ೭೬, ೬೮, ೩೮, ೨೧, ೮೮, ೮೯, ೩೭, ೩೪, ೩೦ ಮತ್ತು ೮೫.

ದ್ದರು. ಕೊಪಣಪುರವರಾಧೀಶ್ವರ ಎಂಬ ವಿಶಿಷ್ಟವಾದ ಬಿರುದಿನಿಂದ ಅವರನ್ನು ವಿಂಗಡಿಸಬಹುದಾಗಿದೆ. ಇವರ ಶಾಸನಗಳು ವಿಜಾಪುರ ಮತ್ತು ಕಲಬುರ್ಗಿ ಜಿಲ್ಲೆಯ ನೆರೆಯ ಪ್ರದೇಶದಲ್ಲಿ ದೊರಕುತ್ತವೆ. ಕಂಚಿಗನೆಂಬವನು ಈ ಮನೆತನದ ಪ್ರಾಚೀನ ಪುರುಷನಾಗಿದ್ದು, ಆತನ ನಿರ್ದೇಶವು ಸು. ೯೪೫ನೆಯ ಕ್ರೈ.ವ.ದ. ಸಾಲೊಟಗಿ ಶಾಸನದಲ್ಲಿ ಸಿಕ್ಕುತ್ತದೆ[3]. ಮತ್ತೊಂದು ಮನೆತನದವರು ಮಹಾಸಾಮಂತರೆನಿಸಿ ಧಾರವಾಡ ಜಿಲ್ಲೆಯ ಹಾವೇರಿಯ ಭಾಗದಲ್ಲಿ ೧೧-೧೨ ಶತಮಾನಗಳಲ್ಲಿ ನಾಡಗೌಡಿಕೆಯನ್ನು ಆಳುತ್ತಿದ್ದರು[4]. ಈ ಶಾಖೆಗಳಾದರೂ ಇದೀಗ ನೋಡಿದ ಪಿಟ್ಟಮನ ಮನೆತನದಷ್ಟು ಪ್ರಾಚೀನವಾದುವಲ್ಲ.

ಶಿಲಾಹಾರರ ಅನೇಕ ಶಾಸನಗಳು ಇದು ವರೆಗೆ ಉಪಲಬ್ಧವಾಗಿದ್ದರೂ ಅವುಗಳಿಂದ ಅವರನ್ನು ಕುರಿತ, ಸಂದಿಗ್ಧವಾದ ಕೆಲವು ಸಮಸ್ಯೆಗಳ ಬಿಡುಗಡೆಗೆ ಸಹಾಯವಾಗಿಲ್ಲ. ಇವುಗಳಲ್ಲಿ ಮುಖ್ಯವಾದುದು ಇವರ ಮೂಲಸ್ಥಾನ ಯಾವುದು ಮತ್ತು ಇವರು ತಮ್ಮ ಕುಲದ ವಿಷಯವಾಗಿ ಹೇಳಿಕೊಳ್ಳುವ ಐತಿಹ್ಯದಲ್ಲಿ ಚರಿತ್ರಾಂಶವು ಎಷ್ಟರಮಟ್ಟಿಗೆ ಇದೆ ಎಂಬುದು. ಈ ಸಮಸ್ಯೆಗೆ ಪ್ರಸ್ತುತ ಶಾಸನ ಮತ್ತು ಇತರ ಪ್ರಮಾಣದಿಂದ ಏನಾದರೂ ನೆರವು ದೊರಕುವುದೇ ಎಂಬುದನ್ನು ಸಂಕ್ಷೇಪವಾಗಿ ಪರೀಕ್ಷಿಸುವ.

ಶಿಲಾಹಾರ ಅರಸರೆಲ್ಲರು ಸಾಮಾನ್ಯವಾಗಿ ತಾವು ಜೀಮೂತವಾಹನ ಎಂಬ ವಿದ್ಯಾಧರ ರಾಜಪುತ್ರನ ವಂಶಜರು ಎಂದು ಹೇಳಿಕೊಳ್ಳುವರು. ಚರಿತ್ರೆಯಲ್ಲದ ಪೌರಾಣಿಕ ಗ್ರಂಥಗಳಲ್ಲಿ ಯಕ್ಷ, ಗಂಧರ್ವ ಮೊದಲಾದ ಅಮಾನುಷ ಜೀವಿಗಳಲ್ಲಿ ವಿದ್ಯಾಧರರ ನಿರ್ದೇಶವು ಬರುತ್ತಿರುವುದರಿಂದ ಅವರಾ ಹೇಳಿಕೆ ದಂತಕಥೆಯೆಂದು ಅನಿಸುವಂತಿದೆ. ಆದರೆ ವಿಮರ್ಶಾಪೂರ್ವಕವಾಗಿ ನೋಡಿದರೆ ಅದರಲ್ಲಿಯ ಚರಿತ್ರಾಂಶವು ತೋರಿಬರುತ್ತದೆ. ಕಥಾಸರಿತ್ಸಾಗರದಲ್ಲಿ ಹಿಮವತ್ ಪ್ರದೇಶದಲ್ಲಿ ನೆಲಸಿ ರಾಜ್ಯಗಳನ್ನು ಕಟ್ಟಿಕೊಂಡಿದ್ದ ವಿದ್ಯಾಧರರ ವರ್ಣನೆ ಬರುವುದು[5]. ಇವರನ್ನು ವತ್ಸದೇಶದ ನರವಾಹನದತ್ತರಾಜನು ಸೋಲಿಸಿದಂತೆ ಅದೇ ಗ್ರಂಥದಿಂದ ತಿಳಿಯುತ್ತದೆ.[6]

[3] *Ep. Ind.* Vol. IV, p. 59. ಈ ಶಾಖೆಗೆ ಸಂಬಂಧಿಸಿದ ಕೆಲವು ವಿಶೇಷ ಸಂಗತಿಗಳು ನಾನು ಸಂಗ್ರಹಿಸಿದ ಶಾಸನಗಳಿಂದ ವೇದ್ಯವಾಗುತ್ತವೆ.

[4] ಶಾಸನ ಇಲಾಖೆಯ ಮದ್ರಾಸ ಕಚೇರಿಯ ೧೯೩೨-೩೩ ಈ ವರ್ಷದ ಮುಂಬಯಿ ಕರ್ನಾಟಕದ ಶಾಸನಗಳ ಪಟ್ಟಿಯಲ್ಲಿ ಈ ಮುಂದಿನ ಅಂಕಗಳನ್ನು ನೋಡುವುದು: ೧೦, ೧೨, ೧೬, ೧೯, ೨೧, ೨೩, ೨೪, ೨೮, ೨೯, ೩೨, ೩೩, ೩೪, ೩೭, ಇತ್ಯಾದಿ.

[5] ಕ.ಸ.ಸಾ. ನಿರ್ಣಯಸಾಗರ ಆವೃತ್ತಿ; ಶಕ ೧೮೫೨, ಪು. ೫೧೮.

[6] ಅದೇ, ಪು. ೫೧೦.

ವಿದ್ಯಾಧರ ಚಕ್ರವರ್ತಿಯಾದ ಜೀಮೂತವಾಹನನ ಚರಿತ್ರೆಯೂ ಈ ಗ್ರಂಥದಲ್ಲಿ ಉಕ್ತವಾಗಿದೆ[7]. ಚಾರಿತ್ರಕ ಅಂಶಗಳಿಂದ ಕೂಡಿದುದು ಎಂದು ಸಿದ್ಧವಾದ ನವ ಸಾಹಸಾಂಕ ಚರಿತ ಎಂಬ ಕಾವ್ಯದಿಂದ ವಿದ್ಯಾಧರ ರಾಜನೊಬ್ಬನು ದಕ್ಷಿಣ ದೇಶದಲ್ಲಿ ಆಳುತ್ತಿದ್ದಂತೆ ಕಂಡುಬಂದಿದೆ[8]. ಇಂತಹ ಉದಾಹರಣಗಳ ಮೇಲಿಂದ ವಿದ್ಯಾಧರರ ವಿಷಯದಲ್ಲಿಯ ಅಮಾನುಷತ್ವಕಲ್ಪನೆ ಯಥಾರ್ಥವಲ್ಲವೆಂತಲೂ ಅವರು ಚಾರಿತ್ರಕ ಜನಾಂಗವೇ ಆಗಿದ್ದಾರೆಂತಲೂ ತಿಳಿದುಕೊಳ್ಳುವುದು ಸಮಂಜಸ.

ಮೇಲ್ಕಂಡ ಅಕ್ಕಲಕೋಟ ಶಾಸನದಲ್ಲಿ ಪಿಟ್ಟಮನ ರಾಜ್ಯವು ಅಸಿತಾದ್ರಿಯಿಂದ ಕಾಲಂಜರ ವರೆಗೆ ಹಬ್ಬಿದ್ದಿತು ಎಂದು ನಿರೂಪಿಸಿದೆ. ಈ ವಿಧವಾದ ವರ್ಣನೆ ಮುಂದೆ ಅದೇ ಶಾಸನದಲ್ಲಿ ಧನಸಂಗ್ರಹರಸನ ರಾಜ್ಯ ವಿಸ್ತಾರವನ್ನು ಹೇಳುವಾಗಲೂ ಬರುತ್ತದೆ. ಈ ವಿಧಾನದ ಪ್ರತಿಧ್ವನಿ ೧೨ಲಲನೆಯ ಕ್ರೈ.ವ.ದ ಇನ್ನೊಂದು ಶಿಲಾಹಾರರ ಶಾಸನದಲ್ಲಿ ದೊರಕುತ್ತದೆ[9]. ಈ ಶಾಸನವು ಕಲಬುರ್ಗಿ ಜಿಲ್ಲೆಯ ಚಿನಮಳ್ಳಿ ಎಂಬ ಗ್ರಾಮದ ಮಲ್ಲಿಕಾರ್ಜುನ ದೇವಾಲಯದಲ್ಲಿದ್ದು, ಅದರಲ್ಲಿ ಕೊಪಣಪುರ ಶಿಲಾಹಾರರ ಒಬ್ಬ ಮಾಂಡಲಿಕನಾದ ಧನಸಂಗ್ರಹರಸನ ಬಿರುದುಗಳನ್ನು ವಿವರಿಸುವಾಗ 'ಕಾಲಂಜರಪರಿಯಂತ ದೇಶಾಧೀಶ್ವರಂ' ಎಂದು ನಿರ್ದೇಶಿಸಲಾಗಿದೆ. ಮೇಲ್ಕಂಡ ಅಕ್ಕಲಕೋಟ ಶಾಸನದಲ್ಲಿಯ ವಿಧಾನಗಳ ಬೆಳಕಿನಲ್ಲಿ ಮುಂದುವರಿದರೆ, ಸಂಕ್ಷಿಪ್ತವಾದ ಈ ಬಿರುದಿನ ಸಮಗ್ರ ಅಭಿಪ್ರಾಯವು 'ಅಸಿತಾದ್ರಿಯಿಂದ ಕಾಲಂಜರ ಪರಿಯಂತ ದೇಶಾಧೀಶ್ವರಂ' ಎಂಬುದು ಆಗಿರಬೇಕೆಂದು ಸ್ಫುಟವಾಗುವುದು.

ಇದರಲ್ಲಿ ಕಾಲಂಜರ ಎಂಬುದು ಸುವಿಶ್ರುತವಾದ ಬುಂದೇಲಖಂಡದ ಬೌಂದಾ ಜಿಲ್ಲೆಯಲ್ಲಿಯ ಗ್ರಾಮವು,[10] ಸಂಸ್ಕೃತದಲ್ಲಿ ಕೃಷ್ಣ, ನೀಲ ಎಂಬ ಪದಗಳು ಅಸಿತ (ಕಪ್ಪು) ಎಂಬುದಕ್ಕೆ ಸಮಾನವಾಗಿರುವುದರಿಂದ ಅಸಿತಾದ್ರಿ ಎಂಬ ಬೆಟ್ಟವು ಹಿಮಾಲಯಕ್ಕೆ ಸಂಬಂಧಿಸಿದ ಪರ್ವತಾವಳಿ ಎಂದು ಪುರಾಣಸಾಹಿತ್ಯದಿಂದ ವೇದ್ಯವಾಗುತ್ತದೆ.[11] ಇದರ ಮೂಲಕ ಪಿಟ್ಟಮನ ರಾಜ್ಯವು ಹಿಮಾಲಯದಿಂದ ಮಧ್ಯ ಹಿಂದೂಸ್ಥಾನದ ವರೆಗೆ ಹಬ್ಬಿದ್ದಿತು ಎಂದು ಹೇಳಿದಂತೆ ಆಗುತ್ತದೆ. ಆದರೆ ಇಂತಹ

[7] ಅದೇ, ಪು. ೮೪.

[8] *Ind. Ant.* Vol. LXII, p. 104.

[9] ಅಪ್ರಕಾಶಿತವಾದ ಈ ಶಾಸನದ ಪ್ರತಿ ನನ್ನ ಸಂಗ್ರಹದಲ್ಲಿ ಇದೆ; ಅಂಕ ೧೬೯.

[10] Dey's, *Geographical Dictionary of Ancient and Mediaeval India;* Vide Kalanjara.

[11] *Ibid*, Kṛishṇādri and Nīlāchala.

ವಿಸ್ತಾರವಾದ ಪ್ರದೇಶಕ್ಕೆ ಒಡೆಯನಾದ ಪಿಟ್ಟಮನ ಅಸ್ತಿತ್ವವು ಸಮಸಾಮಯಿಕವಾದ (೮ ನೆಯ ಶತಮಾನದ ಮಧ್ಯದ) ಯಾವೊಂದು ವಿಶ್ವಸನೀಯ ಪ್ರಮಾಣಗಳಿಂದ ಸಿದ್ಧವಾದುದಿಲ್ಲ; ಮಾತ್ರವಲ್ಲದೆ ಅದು ಇತರ ಪ್ರಮಾಣಗಳಿಂದ ಸಿದ್ಧವಾದ ಚಾರಿತ್ರಕ ಪರಂಪರೆಗೆ ವಿರೋಧಿಯಾಗಿರುವುದರಿಂದ[12] ಇದೊಂದು ಅತ್ಯುಕ್ತಿಯ ಐತಿಹ್ಯವೆಂದೇ ಇಟ್ಟುಕೊಳ್ಳಬೇಕು. ಆದರೆ ಇದರಿಂದ ಚಾರಿತ್ರಕ ಸತ್ಯಕ್ಕೆ ಸಹಾಯಕಾರಿಯಾಗಬಹುದಾದ ಒಂದು ಧ್ವನಿಯು ಮಾತ್ರ ಹೊರಡುವಂತಿದೆ. ಅದೇನೆಂದರೆ, ತಮ್ಮ ಪೂರ್ವಜನಾದ ಪಿಟ್ಟಮನಾಗಲಿ, ಆತನ ಪ್ರಾಚೀನ ಪೂರ್ವಜರಾಗಲಿ ಉತ್ತರದಿಂದ ಬಂದವರು—ಹಿಮಾಲಯ ಪ್ರದೇಶಕ್ಕೆ ಸಂಬಂಧ ಪಟ್ಟವರು—ಎಂಬ ರೀತಿಯ ಒಂದು ಅಸ್ಪಷ್ಟವಾದ ಐತಿಹ್ಯವು ೧೨—೧೩ ನೆಯ ಶತಮಾನಗಳಲ್ಲಿಯು ಈ ಶಿಲಾಹಾರರ ವಂಶದಲ್ಲಿ ಪಾರಂಪರಿಕವಾಗಿ ಪ್ರಚಲಿತವಾಗಿತ್ತು.

ಈ ಮಾದರಿಯ ಇನ್ನೊಂದು ಐತಿಹ್ಯವು ಸು. ೧೧ ನೆಯ ಶತಮಾನದ 'ಕರಕಂಡ ಚರಿಉ' ಎಂಬ ಜೈನ ಗ್ರಂಥದಲ್ಲಿ ಸಿಕ್ಕುತ್ತದೆ. ಅದು ಹೇಗೆಂದರೆ ನೀಲ ಮತ್ತು ಮಹಾನೀಲ ಎಂಬ ವಿದ್ಯಾಧರಕುಲದ ಸೋದರರು ಹಿಮಾಲಯದಿಂದ ಹೊರಟು ದಕ್ಷಿಣದಲ್ಲಿ ತೇರಾಪುರಕ್ಕೆ ಬಂದು ನೆಲಸಿ ರಾಜ್ಯವಾಳಿದರು ಎಂಬುದು[13] ಈ ತೇರಾಪುರವು ನೈಜಾಂ ರಾಜ್ಯದ ಉಸ್ಮಾನಾಬಾದ ಜಿಲ್ಲೆಯ ತೇರ ಎಂಬ ಗ್ರಾಮವಾಗಿದ್ದು, ಇದುವೇ ಶಿಲಾಹಾರರ ಶಾಸನಗಳಲ್ಲಿ ತಲೆದೋರುವ ಅವರ ಮೂಲ ನಿವಾಸದ ತಗರಪುರವು ಎಂಬುದು ನಿಸ್ಸಂದಿಗ್ಧವಾಗಿದೆ.[14] ಇಂತು ಹಿಮಾಲಯದಿಂದ ಬಂದ, ವಿದ್ಯಾಧರ ವಂಶದ ನೀಲ ಮಹಾನೀಲರು ತಗರ ಪುರವರಾಧೀಶ್ವರರಾದ ಶಿಲಾಹಾರರ ಮೂಲಪುರುಷರು ಆಗಿರಬೇಕು ಎಂದು ಈ ಐತಿಹ್ಯದಿಂದ ಊಹಿಸಲು ಅವಕಾಶವಿದೆ. ಈ ಮೇರೆಗೆ ಈ ಆಖ್ಯಾಯಿಕೆಯಲ್ಲಿಯೂ ಶಿಲಾಹಾರರ ಮೂಲ ಪುರುಷರು ಉತ್ತರದವರು—ಹಿಮವತ್ ಪ್ರದೇಶಕ್ಕೆ ಸಂಬಂಧಿಸಿದವರು—ಎಂಬ ಧ್ವನಿ ಹೆಚ್ಚು ಸ್ಪಷ್ಟವಾಗಿ ಕೇಳಬರುತ್ತದೆ.[15]

---

[12] ೮ ನೆಯ ಶತಮಾನದ ಮಧ್ಯದಲ್ಲಿ ಬಾದಾಮಿಯ ಚಾಲುಕ್ಯನ ಸಾಮ್ರಾಜ್ಯವು ದಕ್ಷಿಣದಲ್ಲಿ ಬಾಳಿತ್ತು. ಉತ್ತರದಲ್ಲಿ ಕನೋಜ ಮೊದಲಾದ ರಾಜ್ಯಗಳು ಉದಯವಾಗಿದ್ದುವು.

[13] ಕರಕಂಡ ಚರಿಉ, Intro. p. 47

[14] *Imp. Gaztr*, Vol. II, 1908, p. 82 and J.R.A.S. 1901, p. 537 H.

[15] ಸಂಸ್ಕೃತದಲ್ಲಿ ಅಸಿತ, ನೀಲ, ಕೃಷ್ಣ, ಈ ಶಬ್ದಗಳು ಸಮಾನಾರ್ಥಕವಾಗಿವೆ. ಮೇಲೆ ೧೧ ನೆಯ ಅಡಿ ಟಿಪ್ಪಣಿಯಲ್ಲಿ ತೋರಿಸಿದಂತೆ ವಾಯುಪುರಾಣದ ಕೃಷ್ಣಗಿರಿ ಮತ್ತು ಮಹಾಭಾರತದ ನೀಲಾಚಲ ಇವುಗಳೊಡನೆ ಈ ಆಖ್ಯಾಯಿಕೆಯ ನೀಲ ಮಹಾನೀಲರ ಹೆಸರಿನ ಹೋಲಿಕೆಯನ್ನು ಗಮನಿಸಬಹುದು.

ಹಿಮವತ್ ಪ್ರದೇಶವಾಸಿಗಳಾದ ಶಿಲಾಹಾರರು ತಗರಪುರಕ್ಕೆ ಬಂದ ನಿಶ್ಚಿತಕಾಲವನ್ನು ಊಹಿಸಲು ಸುಲಭವಾಗಿಲ್ಲ. ಪಿಟ್ಟಮನ ವಂಶದ ಶಿಲಾಹಾರರ ಮನೆತನದಲ್ಲಿ ತಗರ ಪುರಾವರಾಧೀಶ್ವರ ಎಂಬ ಬಿರುದು ಪ್ರರೂಢವಾಗಿದ್ದಂತೆ ಕಂಡು ಬರುವುದರಿಂದ ಈ ಮನೆತನದ ಪ್ರಾಚೀನರೂ ಮಿಕ್ಕ ಮನೆತನದವರಂತೆ ತಗರ ಪುರದಲ್ಲಿ ನೆಲಸಿದರು ಎಂಬ ನಂಬುಗೆ ಈ ಶಾಖೆಯವರಲ್ಲಿ ಪ್ರಚುರವಾಗಿರಬೇಕು. ಸು. ೨ ರಿಂದ ೭ ನೆಯ ಶತಮಾನಗಳಲ್ಲಿ ತಗರಪುರವು ಖ್ಯಾತಿವೆತ್ತ ಪಟ್ಟಣವಾಗಿತ್ತು.[16] ಈ ಕಾಲಾವಧಿಯಲ್ಲಿಯಾಗಲಿ, ಅದರ ಅಕ್ಕಪಕ್ಕದಲ್ಲಿಯಾಗಲಿ, ಶಿಲಾಹಾರರು ತಗರಪುರದಲ್ಲಿ ಆಳುತ್ತಿದ್ದಂತೆ ನಿಶ್ಚಿತವಾದ ಪ್ರಮಾಣಗಳು ಇದುವರೆಗೆ ದೊರೆತಿಲ್ಲ. ಈ ವಿಷಯವನ್ನು ಮೇಲೆ ಕಂಡಂತೆ ಕೇವಲ ಐತಿಹ್ಯಗಳನ್ನು ಅವಲಂಬಿಸಿ ಊಹಿಸಿಕೊಳ್ಳಬೇಕಾಗಿದೆ.

ಖಚಿತವಾದ ಚಾರಿತ್ರಕ ಕಾಲದ ೮-೯ ನೆಯ ಶತಮಾನದತ್ತ ತೆರಳಿದಾಗ ಈ ಶಿಲಾಹಾರರೆಲ್ಲರು ತಗರಪುರವನ್ನು ಬಿಟ್ಟು, ಉತ್ತರಕೊಂಕಣ, ಕೊಲ್ಲಾಪುರ, ವಿಜಾಪುರ, ಮೊದಲಾದ ಪ್ರದೇಶಗಳಲ್ಲಿ ನೆಲೆಯಾಗಿ, ಅಲ್ಲಲ್ಲಿ ಚಿಕ್ಕ ಪ್ರದೇಶಗಳ ಒಡೆತನವನ್ನು ಸಂಪಾದಿಸಿ, ತಮ್ಮ ಪೂರ್ವಿಕರ ತಗರಪುರದ ಆಳಿಕೆಯ ನೆನಪನ್ನು ಇಟ್ಟುಕೊಂಡು ಬಾಳಿದಂತೆ ವ್ಯಕ್ತವಾಗುತ್ತದೆ. ಹೀಗೆ ಹಬ್ಬಿದ ಶಾಖೆಗಳಲ್ಲಿ ಪಿಟ್ಟಮನ ಮನೆತನವು ಒಂದು.

ಈ ಮನೆತನವನ್ನು ಅಕ್ಕಲಕೋಟ ಶಾಖೆಯೆಂದು ಹೆಸರಿಸುವುದು ಯುಕ್ತ. ಅದು ಹೀಗೆ. ಮೇಲ್ಕಂಡ ಶಾಸನದಲ್ಲಿ ಮೈದೋರುವ ಇಂದರಸನು ಅಕ್ಕಲಕೋಟದಲ್ಲಿಯ ಇನ್ನೊಂದು (ಅಂಕ ೧೦) ಶಾಸನದಲ್ಲಿಯೂ ಮೈದೋರುವನು. ಅಲ್ಲಿ ಆತನನ್ನು 'ಅಂಕುಲಗೆ ನಾಡ ಮನ್ನೆಯ ಇಂದರಸರ್ ಎಂದು ನಿರ್ದೇಶಿಸಲಾಗಿದೆ. ಮೇಲ್ಕಂಡ ೪ ನೆಯ ಅಂಕದ ಶಾಸನದಿಂದಲೂ ಇಂದರಸನು ಅಂಕುಲಗೆ ನಾಡಿಗೆ ಆನುವಂಶಿಕ ಅಧಿಕಾರಿಯಾಗಿದ್ದಂತೆ ತಿಳಿಯಬರುತ್ತದೆ. ಈ ಶಾಸನದಲ್ಲಿ ಅಂಕುಲಗೆ ನಾಡು ಅಣಂದೂರು-ಮುನ್ನೂರು ಈ ಪ್ರದೇಶದಕ್ಕೆ ಒಳಪಟ್ಟಿದ್ದಿತು ಎಂದು ಹೇಳಿದೆ. ನೈಜಾಂ ರಾಜ್ಯದ ಉಸ್ಮಾನಾಬಾದ ಜಿಲ್ಲೆಯಲ್ಲಿ ನಳದುರ್ಗದಿಂದ ಸು. ೨ ಮೈಲಿನಲ್ಲಿ ಈಗಲೂ ಅಣದೂರು ಎಂಬ ಗ್ರಾಮವಿದೆ. ಇದು ಹಿಂದೆ ಅಣಂದೂರು–೩೦೦ ಈ ಪ್ರದೇಶದ ಮುಖ್ಯ ಸ್ಥಳವಾಗಿರಬೇಕು. ಈ ಗ್ರಾಮವು ಅಕ್ಕಲಕೋಟದಿಂದ ಸು. ೧೯ ಮೈಲು ಉತ್ತರಕ್ಕೆ ಆಗುವುದು.[17] ಅಂಕುಲಗೆ ನಾಡಿನ ಮುಖ್ಯ ಸ್ಥಳವು ಇಂದಿನ ಅಕ್ಕಲಕೋಟ ಗ್ರಾಮವಾಗಿರಬೇಕು. ಇಂದಿನ ಅಕ್ಕಲಕೋಟ

[17] ಈ ಭೌಗೋಲಿಕ ವಿವರಗಳಿಗೆ ಕಲಬುರ್ಗಿಯ ನನ್ನ ಅಣ್ಣಂದಿರಾದ ಶ್ರೀ. ಸಂಜೀವರಾವ ದೇಸಾಯಿ ವಕೀಲ ಇವರಿಗೆ ಋಣಿಯಾಗಿದ್ದೇನೆ—

ಇದ್ದ ಸ್ಥಳದಲ್ಲಿ ಅಂಕಲಗಿ ಎಂಬ ಊರು ಇದ್ದು ಅದಕ್ಕೆ ಕೋಟೆಯಿದ್ದಿತೆಂಬ ಆಖ್ಯಾಯಿಕೆಯನ್ನು ಅಲ್ಲಿಯ ಸ್ಥಳಿಕರು ಈಗಲೂ ಹೇಳುವರು. ಅಕ್ಕಲಕೋಟ ಎಂಬುದನ್ನು ಹಳ್ಳಿಯ ಜನರು ಇಂದಿಗೂ ಅಂಕಲಕೋಟೆ ಎಂದು ಹೆಸರಿಸುವರು.[18] ಇದಲ್ಲದೆ ಅಕ್ಕಲಕೋಟದ ೪ ನೆಯ ಅಂಕದ ಮತ್ತು ಇನ್ನೂ ಕೆಲವು ಶಾಸನಗಳಲ್ಲಿ ಈ ಅರಸರು ದತ್ತಿ ಬಿಟ್ಟ ಕರಂಜಿಗೆ (ಕರಜಗಿ) ಮೊದಲಾದ ಊರುಗಳು ಇಂದಿನ ಅಕ್ಕಲಕೋಟ ಸಂಸ್ಥಾನದಲ್ಲಿ ಅಕ್ಕಲಕೋಟದಿಂದ ಸಮೀಪದಲ್ಲಿ ಸಿಕ್ಕುವುವು. ಆದುದರಿಂದ ಈ ಮನೆತನಕ್ಕೆ ಅಕ್ಕಲಕೋಟ ಶಾಖೆಯೆಂದು ಕರೆಯುವುದು ಸಮಂಜಸ.

ಮೇಲ್ಕಂಡ ೪ ನೆಯ ಅಂಕದ ಶಾಸನದಲ್ಲಿ ಪಿಟ್ಟಮನಿಂದ ಇಂದರಸನ ವರೆಗಿನ ಈ ಶಾಖೆಯ ವಂಶಕ್ರಮವು ಉಕ್ತವಾಗಿದೆ. ೧೦ ನೆಯ ಅಂಕದ, ೧೧೨೩ ನೆಯ ಕ್ರೈ. ವ. ದ ಇನ್ನೊಂದು ಶಾಸನದಲ್ಲಿ ಇಂದರಸನ ಮತ್ತು ಆತನ ಮುಂದಿನ ತಲೆಮಾರಿನ ಕೆಲವು ಪುರುಷರ ಹೆಸರುಗಳನ್ನು ನಿರ್ದೇಶಿಸಿದೆ. ಇವೆರಡನ್ನೂ ಸೇರಿಸಿ ಸಿದ್ಧಪಡಿಸಿದ ಈ ಶಾಖೆಯ ವಂಶಾವಳಿ ಇಂತು :

೧. ಪಿಟ್ಟಮ I
|
೨. ಅಜ್ಜ (ಅಜ್ಜಗ) I
|
೩. ನಾಗಾರ್ಜುನ
|
೪. ಇಂದ I
|
೫. ಕವಿಲಾಸ I — ಕಂಚ
|
೬. ಬಿಬ್ಬಸ
|
೭. ರಕ್ಕಸ
|
೮. ಇಂದ II
|
೯. ಸೋವಣ
|

[18] ಅಂಕಲಗಿ ಎಂಬ ಇನ್ನೊಂದು ಚಿಕ್ಕ ಊರು ಈ ಸಂಸ್ಥಾನದಲ್ಲಿ ಇದೆ. ಆದರೆ ಅದು ಅಲಕ್ಷಣೀಯ.

- ೯. ಸೋವಣ
  - ೧೦. ಪಿಟ್ಟುಮ II
  - ಕವಿಲಾಸ II
    - ೧೧. ಧನಸಂಗ್ರಹ
      - ೧೨. ಅಜ್ಜ II
        - ೧೩. ಕವಿಲಾಸ III
          - ೧೪. ಡಾಂಕ I
            - ೧೫. ಕವಿಲಾಸ IV
              - ೧೬. ಇಂದರಸ III
                - ೧೭. ಡಾಂಕರಸ
                  - ೧೮. ಇಂದರಸ V
                - ಕವಿಲಾಸ V
                - ಮಲ್ಲಿದೇವ
                - ಅಜ್ಜ III
              - ರಾಜರಸ
                - ಕಪ್ಪದೇವ
                - ಇಂದರಸ IV

ಪಾಂ. ಭೀ. ದೇಸಾಯಿ.

ಕೋಗಿಲೆಯೊಂದನ್ನು ಕಂಡಾಗ

ಚೈತ್ರತುದಿಯ ಹಿರಿಯಬಯಲು
ಕಾದು ಕಾದು ಹಬ್ಬಿದೆ,
ಬಿಸಿಲಭೂತವಿಳೆಯ ಕಳೆಯ
ಹೀರಿ ಹೀರಿ ಕೊಬ್ಬಿದೆ. ॥ ೧ ॥

ಊರು ದಾರಿ ಬಾನ್ಗಳೆಲ್ಲ
ಸೂರ್ಯಸ್ನಾನಗೈದಿವೆ,
ಆಲಸ್ಯದ ಜೋಂಪನೀಂಟಿ
ಮೂರ್ಛೆ ಮೋನಕ್ಕೈದಿವೆ. ॥ ೨ ॥

ಇಂಥ ಹಗಲೊಳಾವ ಭಾವ—
ವುಣ್ಮಿಬಹುದು, ಕೋಗಿಲೆ ;
ನೊಂದ ಹೃದಯ ನಲ್ಮೆಮೂಡಿ
ಸ್ವರ್ಗಕೇರ್ವ ಬಾಗಿಲೆ? ॥ ೩ ॥

ಯಾವ ಗುರಿಯ ಸೇರಲೆಂದು
ಇಂತು ಗಾನಗೈದಿಹೆ?
ನಿಂತು ಕೇಳ್ವ ಕವಿಯನೆನ್ನ
ಸ್ವಪ್ನರಾಜ್ಯಕೊಯ್ದಿಹೆ! ॥ ೪ ॥

ದೇವನಾವನೊಲಿದು ನಿನಗೆ
ಇಂಥ ಕೊರಲನಿತ್ತನು?
ಯಾವ ತಪದಿ ಪಡೆದೆ ನೀನು
ಗಾನವಿದರ ಮತ್ತನು? ॥ ೫ ॥

ದುಃಖ ನಿನ್ನೊಳಿಂಬುಗಾಣ—
ದೆಂಬ ತೆರದೊಲೂಳುವೆ!
ಜನವಿಹೀನ ಬಯಲನಾಳ್ವ
ಮೌನವನ್ನು ಸೀಳುವೆ! ॥ ೬ ॥

ಯಾವ ಸೊಗದ ಮಡಿಲೊಳಿಹುದು
ಚೆಲುವೆ, ನಿನ್ನಬಾಳುವೆ?
ಸಾವು ನೋವು ಬಾರವೆಂಬ
ಗೆಲವೆ ನಿನಗೆ? ಕೇಳುವೆ. ॥ ೭ ॥

ಅಯ್ಯೊ, ಮರುಳೆ, ಅರಿಯೆಯೇನು?
ಚೈತ್ರವಳಿದು ಸರಿವುದು.
ಕ್ಷಣಗಳೆರಡು ತಡೆದು ನೋಡು—
ಚಳಿಯ ಕೊರೆತ ಮೆರೆವುದು! ॥ ೮ ॥

ಎನಿತು ಹರ್ಷವೀಯಲೇನು?
ಯಾರ ಜೀವ ನಿತ್ಯವು?
ನಲ್ಮೆಯೊಂದನರಸುತಲೆವ
ನೀನು ಸಾಯ್ವೆ, ಸತ್ಯವು! ॥ ೯ ॥

ಆದರೇನು? ಹಾಡು, ಹಕ್ಕಿ,
ನಿತ್ಯ ನಿನ್ನ ಗಾನವು!
ಮನುಜನಳಿಯಲುಳಿಯವೇನು
ಅವನ ಸ್ಥಾನಮಾನವು? ॥ ೧೦ ॥

ಗ್ರೀಷ್ಮಕಳೆಯೆ, ಭೀಷ್ಮಮಳೆಯು
ಸುರಿವ ಸಮಯ ಉದಿಸಲು,
ಕಾರ್ಮೋಡವು ಬಾಂದಳದಲಿ
ತಿರೆಗೆ ತಮವ ಹೊದಿಸಲು ॥ ೧೧ ॥

ಮನೆಯೊಳಾನು ಮರೆವೆನೇನು
ನಿನ್ನ ಭವ್ಯಗೀತವ?
ಪಿಕವೆ ಹಾಡು, ಸುಖವನೂಡು,
ನಾನು ನಿನಗೆ ಸೋತವ! ॥ ೧೨ ॥

ಹಾಡು ಪಿಕವೆ ನೀಡುತ ತವೆ
ನಿನ್ನ ಪರಮಭಕ್ತಿಯು
ಮಂದಿಯೆದೆಯನಂದಿಪಳಲ
ದಿವ್ಯ ಗಾನಶಕ್ತಿಯು ॥ ೧೩ ॥

ಎಂ. ರಾಮರಾವ್.

ಕಾವ್ಯಾವಲೋಕನ

೧. ನಾನು ಕಂಡ ಕೈಲಾಸಂ—ಶ್ರೀ ಕಂದಾಡೆ ಕೃಷ್ಣಯ್ಯಂಗಾರ್ ಅವರಿಂದ.

೨. ಕೈಲಾಸ ಕಥನ ಅಥವಾ ಗುಂಡೂಭಂಡಾರ ಮಥನ—ಶ್ರೀ ಜಿ. ಪಿ. ರಾಜರತ್ನಂ ಅವರಿಂದ (ಪ್ರಕಾಶಕರು: ಬೆಂಗಳೂರು ಬಿ.ಬಿ.ಡಿ. ಪವರ್ ಪ್ರೆಸ್ಸಿನ ಶ್ರೀ ನರಸಿಂಹ ಮಲ್ಯರಿಂದ).

ತ್ಯಾಗರಾಜ ಪರಮಶಿವ ಕೈಲಾಸಂ ಅವರು ಕನ್ನಡದ ಹಿರಿಯ ತಲೆಗಳಲ್ಲಿ ಒಬ್ಬರು. ಅವರಿಗೆ ಇದೇ ವರ್ಷ ಜುಲೈ ಇಪ್ಪತೊಂಬತ್ತಕ್ಕೆ ೬೦ ವರುಷ ತುಂಬಿತು. ಅವರ ಅರುವತ್ತನೆ ಹುಟ್ಟಿದ ಹಬ್ಬದ ದಿನ ಅವರ ಗೆಳೆಯರಿಬ್ಬರು ಅವಳಿ-ಜವಳಿಯಂತಿರುವ ಈ ಎರಡು ನೀಲಿ-ಹೊತ್ತಗೆಗಳನ್ನು ಅವರಿಗೆ ಪ್ರೀತಿಯಿಂದ ಉಡುಗೊರೆಯಾಗಿ ಅರ್ಪಿಸಿದ್ದಾರೆ. ಈ ಎರಡು ಹೊಸ ಪುಸ್ತಕಗಳನ್ನು ಬೆಳಕಿಗೆ ತಂದು ಶ್ರೀ ನರಸಿಂಹ ಮಲ್ಯರು ಕನ್ನಡ ಜನತೆಗೆ ಉಪಕಾರಮಾಡಿದ್ದಾರೆ.

ಶ್ರೀ ಕೃಷ್ಣಯ್ಯಂಗಾರ್ಯರ ಗದ್ಯಶೈಲಿ ಶಕ್ತಿಯುತವಾಗಿದೆ; ದೃಢವಾಗಿ ಹೆಜ್ಜೆಯಿಡುತ್ತ ಅವರ ಮನಸ್ಸು ತನ್ನ ನೋಟವನ್ನು ಸ್ಪಷ್ಟವಾಗಿ ನೋಡಿ ಅದರ ಅನುಭವಗಳನ್ನು ಧೈರ್ಯವಾಗಿ ಹೇಳುತ್ತಿದೆ. ಶ್ರೀ ರಾಜರತ್ನಂ ಅವರಂತೂ 'ರತ್ನನ ಪದ'ಗಳ ಕವಿಗಳು, ಆ ಕಾರಣದಿರದಲೇ ಸಮರ್ಥರಾದ ವಿಮರ್ಶಕರು. ಕೈಲಾಸಂ ಅವರ ನಾಟಕಗಳ ಒಳ-ನೋಟವನ್ನು ಜನಕ್ಕೆ ತೋರಿಸಿಕೊಡಲು ಇಂಥವರು ಬೇಕು. ಅಲ್ಲದೆ ಬೇರೆ ಕಡೆ ಶ್ರೀ ರಾಜರತ್ನಂ ಅವರು ಕೈಲಾಸಂ ಅವರ ಕೃತಿಗಳಿಂದ ಘನಸಾರವಾದ ವಚನಗಳನ್ನಾಯ್ದು ಕಾನ್‌ಫೂಷಸಿನ ವಚನ ಕ್ರಮದಲ್ಲಿ, ಜೋಡಿಸಿ, ಟಿಪ್ಪಣಿ ಬರೆದು ತಾವು ಕಂಡ ಚೆಲುವಿನ ಬಳ್ಳಿಯಲ್ಲಿ ಎಂಥ ಗೆಲವಿನ ಹೂಗಳಿವೆ ಎಂಬುದನ್ನು ತೋರಿಸಿದ್ದಾರೆ. ಜನಕ್ಕೂ ಕವಿಗೂ ನಡುವೆ ಅಡ್ಡಗೋಡೆಯಂತೆ ಎದ್ದು ನಿಲ್ಲುವ ಒಂದು ಬಗೆಯ ವಿಮರ್ಶೆಯ ಹೀನ ಸುಳಿಯನ್ನು ಕಂಡು ಬೇಸತ್ತಿರುವ ನಮ್ಮ ಜನಕ್ಕೆ ಇಂಥ ಮಿಂಚಿನ ಗೊಂಚಲುಗಳನ್ನು ಕಂಡರೆ ಅಳಿಸಿಹೋದ ಐಶ್ವರ್ಯ ಮರಳಿ ಬಂದಷ್ಟು ಸಂಭ್ರಮ. ಕೈಲಾಸಂ ಅವರು ತಮ್ಮ ನೆಲೆಯನ್ನೂ ನಿಲವನ್ನೂ ಬಲ್ಲ ದಕ್ಷಸಾಹಿತಿಗಳು. ಅವರದೇ ಒಂದು ವಿಶೇಷ ಶೈಲಿ. ಅವರದೇ ಒಂದು ವಿಚಿತ್ರ ಮಾರ್ಗ. ತಮಗಿಂತ ದೊಡ್ಡದು ಎಂದು ತಾವು ತಿಳಿದ ಎಲ್ಲಕ್ಕೂ ಗೌರವವನ್ನು ಸಲ್ಲಿಸಿ, ತಮ್ಮ ಕೆಲಸದ ಹಣ್ಣು ಹೂಗಳು ಮುಂದಿನ ತಲೆಮಾರಿನ ಮಕ್ಕಳ ಕಾಲಕ್ಕೆ ಆದಾವು ಎಂದು ಸಂತೋಷದಿಂದ ನಂಬಿದ್ದಾರೆ. ಅವರ ಬುದ್ಧಿ ತುಂಬ ಎತ್ತರದಲ್ಲಿ

ಕೆಲಸ ಮಾಡುತ್ತಿದ್ದರೂ ಜನತೆಯೊಡನೆ ಸಂಪರ್ಕವನ್ನಿಟ್ಟುಕೊಂಡಿದೆ. ಕೈಲಾಸಂ ತಮ್ಮ ಕೆಲಸವನ್ನು ಆತ್ಮ ವಿಶ್ವಾಸದಿಂದ ಮುಂದುವರಿಸುತ್ತಿದ್ದಾರೆ; ಅವರಿಗೆ ಹುಟ್ಟು ಕವಿಗೆ ತಕ್ಕ ನಿರಹಂಕಾರತೆಯಿದೆ. ಒಂದು ಸಾಹಿತ್ಯಶಾಖೆಯಲ್ಲಿ ಹತ್ತು ಜನ ದುಡಿದರೂ ಮುಗಿಯದ ಕೆಲಸವನ್ನು ಇವರು ಒಬ್ಬರು ಮಾಡುತ್ತಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ಪಂಗಡಗಳು ಪಾಳೆಯಗಳು ಇದ್ದರೆ ಅವೆಲ್ಲ ಅಶಕ್ತರಿಗಾಗಿಯೇ ಹೊರತು, ಇಂಥ ಕ್ರಾಂತಿ ಪುರುಷರಿಗಲ್ಲ. ನಶಿಸಿ ಸವೆದು ಕಡ್ಡಿಯಾಗಿ ಒಣಗಿ ನಿಂತಿದ್ದ ನಾಟಕಲತೆಗೆ ಇಂದಿನ ಸಮಾಜದ ಜೀವಕಳೆಯನ್ನೆರೆದು, ಅದನ್ನು ಬೇರೆ ದಿಕ್ಕಿಗೆ ತಿರುಗಿಸಿ, ನಿಲ್ಲಿಸಿ ಹೂಬಿಡಿಸಿದ ಕೀರ್ತಿ ಕೈಲಾಸಂ ಅವರಿಗೆ ಸೇರಿದ್ದು. ಆ ಕೀರ್ತಿಗೆ ಈ ಎರಡು ಪ್ರಶಸ್ತಿ ಗ್ರಂಥಗಳು ಕನ್ನಡದ ಮುತ್ತಿನಾರತಿಯ ಜೋಡಿ-ಹಣತೆಗಳು.

ಇಲ್ಲೊಂದು ಮೊನೆಯಾದ ಮಾತು ಹೀಗೆ ಬಂದಿದೆ. "ಕೈಲಾಸಂ ರಚಿಸಿದ ಕೃತಿಗಳನ್ನು ಯೋಗ್ಯರೀತಿಯಲ್ಲಿ ಮುದ್ರಿಸಿಕೊಂಡು ಆನಂದಪಡಲು ಕನ್ನಡಿಗರಿಗೆ ಇಪ್ಪತ್ತು ವರುಷಕಾಲ ಕಳೆಯಬೇಕಾಯಿತು. ಆ ಇಪ್ಪತ್ತು ವರ್ಷಕಾಲ ಕೈಲಾಸಮಿನ ರಚನೆಗಳು ಯಾವ ಯಾವ ಮೂಲೆಗಳಲ್ಲಿಯೋ ತಪಸ್ಸು ಮಾಡಬೇಕಾದ ಹಾಗಿತ್ತೆಂದರೆ ಅತ್ಯುಕ್ತಿಯಾಗಲಿಲ್ಲ." ಈ ಸತ್ಯದ ಸುತ್ತ ನೋವಿದೆ. ಯಾವ ಕವಿಯು ಎಂಥ ದೊಡ್ಡ ಕಾವ್ಯವಾಗಲಿ ಈಗಲೂ ಅದು ತನ್ನ ಶಕ್ತಿಯಿಂದ ಜನತೆಯನ್ನು ಹೊಡೆದು ಎಬ್ಬಿಸಿ ವಶಪಡಿಸಿಕೊಳ್ಳಬೇಕಾಗಿದೆಯೇ ಹೊರತು ಕವಿ ಅರ್ಧ ದಾರಿ ನಡೆದು, ಜನ ಅರ್ಧ ದಾರಿ ಹತ್ತಿರ ಬಂದು ಆದರಿಸಿ, ಕಾವ್ಯವನ್ನು ಕೈಗೆ ಕರೆದುಕೊಳ್ಳುವ ಸ್ವರ್ಣ ಯುಗ ಕಾಲಗರ್ಭದಲ್ಲಿ ತೆಳ್ಳನೆಯ ಕನಸಾಗಿಯೇ ಉಳಿದಿದೆ. ಹೀಗಿದ್ದರೂ ಕೈಲಾಸಂ ನಾಟಕಗಳ ನೂತನದೃಷ್ಟಿಗೆ ನಮ್ಮ ಜನ ಸೋತು, ಆಡಿ, ಆಡಿಸಿ, ಟಿಕೆಟ್ಟನ್ನು ಕೊಂಡು, ನೋಡಿ, ಸಂತೋಷಪಟ್ಟಿದ್ದಾರೆ ಎಂಬುದನ್ನು ಮರೆಯುವ ಹಾಗಿಲ್ಲ. ಅವರನ್ನು ಲೋಕವೆಲ್ಲ ಬಾಯಿತುಂಬ ಹೊಗಳುತ್ತಿದಾರೆ. ಇನ್ನೂ ನಮ್ಮಲ್ಲಿ ಕೆಲವು ನಾಟಕಗಳು ಈಗ ಬರುತ್ತಿವೆ; ಪುಸ್ತಕಗಳಾಗಿ ಹೊರಬಿದ್ದು ಪುಸ್ತಕಭಂಡಾರಗಳ ಗಾಜಿನ ಉಪ್ಪರಿಗೆಗಳಲ್ಲಿ ಸಾಲುಸಾಲಾಗಿ ಕಾದು ನಿಂತಿವೆ. ಅವುಗಳಿಗೆ ರಂಗಸ್ಥಳದ ಮೋಹವೇ ಇಲ್ಲ. ಪರೀಕ್ಷೆಗಾಗಿ ಆಡಿದರೆ ಹರ್ಷನಾಟಕಗಳು ದುಃಖದಲ್ಲಿ ಕೊನೆಗಂಡು, ಸಭಿಕರೇ ಇಲ್ಲದ ಸಭೆಗಳನ್ನು ನೋಡಿ ನಟನಟಿಯರಿಗೆ ಸಭಾಕಂಪವಾದರೂ ಆಗಬಹುದು. ಕೈಲಾಸಂ ನಾಟಕಗಳಾದರೋ ಕಾಲ ಕಳೆದಂತೆಲ್ಲ ಜನ ಎಚ್ಚತ್ತು ಮುಂಬರಿದಂತೆಲ್ಲ ಇನ್ನೂ ಪ್ರಿಯತರವಾಗುವುದರಲ್ಲಿ ಸಂಶಯವಿಲ್ಲ. ಓದುವ ನಾಟಕಗಳ ಭಕ್ತಮಂಡಲಿಗಿಂತ, ನೋಡಬೇಕಾದ ನಾಟಕಗಳ ಪ್ರೇಕ್ಷಕವರ್ಗ ನಾಟಕ ವಿಮರ್ಶೆಗೆ ಹೆಚ್ಚು ಅಧಿಕಾರವುಳ್ಳದ್ದೆಂದರೆ ತಪ್ಪೇನಿಲ್ಲ. ಕೈಲಾಸಂ ನಾಟಕಗಳ ತಪಸ್ಸು

ಇಷ್ಟು ಬೇಗ ಜನಪ್ರಿಯವಾಗಿ ಬೆಳಕಿಗೆ ಬಂದದ್ದು, ಜನತೆಯ ಕಷ್ಟಕಾರ್ಪಣ್ಯಗಳನ್ನು ಕಂಡ ಕಣ್ಣಿಗೆ ಆನಂದವನ್ನು ತಂದಿದೆ.

ಕೈಲಾಸಂ ನಾಟಕಗಳ ಭಾಷೆಯ ವಿಚಾರದಲ್ಲಿ ಒಂದೆರಡು ಮಾತು ಬಂದಿದೆ. ಹೊಸದಾಗಿ ಹಿಂದೆ ಅವರ ನಾಟಕಗಳನ್ನು—ನೋಡದೆ—ಓದಿದವರಿಗೆ 'ಈ ಭಾಷೆ ಕನ್ನಡವೆ?' ಎಂಬ ಸಂಶಯ ಬಂದಿರಬಹುದು. ಶುದ್ಧ ಸಾಹಿತಿಗಳು—ಅಂಥವರು ಇದ್ದರೆ ಮಾತ್ರ—ಸರ್ವನಾಶವಾಯಿತು ಎಂದಿರಬಹುದು. ಕೈಲಾಸಂ ಅವರು ಅನೇಕ ಭಾಷೆಗಳನ್ನು ಬಲ್ಲವರು; ಮತ್ತು ಒಂದುಕಾಲದ, ಒಂದು ಜನತಾವರ್ಗದ ಜೀವನದ ಪ್ರತಿನಿಧಿಗಳಾದ ಅವರು ಬೆಳಸಿದ ಪಾತ್ರಗಳೂ ಅಂಥವರೇ. ಪಾತ್ರಗಳಿಗೆ ತಕ್ಕಂತೆ ಭಾಷೆಯನ್ನು ಕಟ್ಟಿಕೊಂಡು ಆಡಿಸುವುದು ಕವಿಯ ಕರ್ತವ್ಯ. ಅವರು ಕಟ್ಟಿದ ಸೇನೆಯಲ್ಲಿ ಕನ್ನಡಿಗರಿಗೇ ಪ್ರವೇಶವುಂಟೆಂದು ಹೇಳಿಲ್ಲ. ಅಲ್ಲದೆ, ವ್ಯಾಕರಣವನ್ನು ಅನುಸರಿಸಿ ಬರೆದದ್ದೆಲ್ಲ ಕಾವ್ಯವಾಗಿಲ್ಲ; ಜನತೆಯ ಅಂತಃಕರಣವನ್ನು ಮುಟ್ಟುವ ಧ್ವನಿ ಕಾವ್ಯವಾಗುತ್ತದೆ. ವ್ಯಾಕರಣ ವಿರುದ್ಧ ಪ್ರಯೋಗಗಳನ್ನು ಸಹಿಸದ ಘಂಟಾಕರ್ಣನೂ 'ಬಹಿಷ್ಕಾರ' ನಾಟಕವನ್ನು ನೋಡಿ ಕಣ್ಣೀರಿಡುತ್ತ "ವ್ಯಾಕರಣದ ತಲೆ ಬೋ . . . ಸಿದರು" ಎಂದಿದ್ದಾನೆ. ವ್ಯಾಕರಣಕ್ಕೂ ಜೀವವಿದೆ; ಅದೇನು ಅತ್ತಿತ್ತ ಅಲ್ಲಾಡದ ಕಲ್ಲು ಸೂತ್ರಗಳ ವ್ಯಾಜಿನೋ ಲೈಸಲ್ಲ. ತನ್ನ ಸೂತ್ರಗಳನ್ನು ದಾಟಿಹೋದರೂ ಭಾಷೆಗೆ ಅಮೃತವನ್ನು ತರುವ ಕವಿಗೆ ಅದು ಗೌರವ ಕೊಡುತ್ತದೆ. 'ನಂತಿಪ್ಪಾರಳ್ಳಿ ಬಲು ದೂರ' ಎನ್ನುವ 'ಭರ್ಜರಿ'ಯಾದ ಹಾಡನ್ನು ವ್ಯಾಕರಣದ ಸಹಾಯದಿಂದ ಬೇರೆ ರೀತಿಯಲ್ಲಿ ಕಟ್ಟುವುದಕ್ಕೆ ಕೈಲಾಸಂ ಹೊರಟಿದ್ದರೆ—? ತಿಪ್ಪಾರಳ್ಳಿ ಬಲು ದೂರವಾಗುತ್ತಿತ್ತು. ಈಗ ಅದು ಇರುವಂತೆ ಆ ಹಾಡು ಬಂದದ್ದರಿಂದ ಅದು ದಾಳಿಯಿಟ್ಟ ಮೊದಲಸಲ ನಮ್ಮ ಜನತೆಯ ಸಂತೆಯ ನಡುವೆ ಒಂದು ಆನೆ ಎಲ್ಲಿಂದಲೋ ಬಂದು ನುಗ್ಗಿದಂತಾಗಿರಬೇಕು. "ದುಡ್ಡೂಂದ್ರೆ ದೂರ ಹೋಗು; ಹೃದಯಾಂದ್ರೆ ಹತ್ತಿರ ಬಾ" ಎನ್ನುವ ತೂಕವಾದ ಮಾತನ್ನು ಆಡಿದ ಕೈಲಾಸಂ ಅವರನ್ನು "Do you believe that you are immortal?" ಎಂದು ಶ್ರೀ ಡಿ. ವಿ. ಗುಂಡಪ್ಪನವರೊಂದಿಗೆ ಕನ್ನಡಿಗರು ಕೇಳಲೇಬೇಕು; ಅವರು ಮಾತ್ರ "No, I believe in the luck of Posterity" ಎಂದು ತಟ್ಟನೆ ನುಡಿಯುತ್ತಾರೆ. ಕೈಲಾಸಂ ಕೃತಾರ್ಥರು.

ಕೆ.ಎಸ್.ನ.

*
* *

೩. ಚಕಮುಕಿ (ಒಂದು ವಿಮರ್ಶೆ)—ಬರೆದವರು: ಬೇಂದ್ರೆ ಲಕ್ಷ್ಮಣರಾಯರು; ಪ್ರಕಾಶಕರು: ಬಾಲಚಂದ್ರ ಘಾಣೇಕರ, ಸಮಾಜಪುಸ್ತಕಾಲಯ, ಧಾರವಾಡ; ಬೆಲೆ, ೨ ರೂಪಾಯಿ.

ಇದೊಂದು 'ಕಥಾಸಂಕಲನ; ೧೨ ಸಣ್ಣ ಕತೆಗಳನ್ನೊಳಗೊಂಡಿದೆ. ಬರೆದವರ ಹೆಸರನ್ನು ಕೇಳಿದ ಕೂಡಲೆ ಕವಿವರ್ಯ ಶ್ರೀ ಬೇಂದ್ರೆಯವರ ನೆನಪಾಗಿ ಕತೆಗಳನ್ನು ಚೆನ್ನಾಗಿಯೇ ಬರೆದಿರಬಹುದು ಎನ್ನುವಂತಾಗುತ್ತದೆ. ಜೊತೆಗೆ ಕವಿಭೂಷಣರೂ ನುರಿತ ಲೇಖಕರೂ ಆದ ಬೆಟಗೇರಿ ಕೃಷ್ಣಶರ್ಮರ ವಿಮರ್ಶಾತ್ಮಕ ಮುನ್ನುಡಿಯೂ ಕೂಡಿ ಪುಸ್ತಕದ ಉಪಯುಕ್ತತೆಯನ್ನು ಹೆಚ್ಚಿಸಿದೆ.

ಇಂದಿನ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಸಣ್ಣಕತೆಗಳ ಬೆಳೆ ಬಲು ಹುಲುಸಾಗಿದೆ. ಶ್ರೀ ಬೇಂದ್ರೆ ಲಕ್ಷ್ಮಣರಾಯರೂ ಇದಕ್ಕೆ ನೀರೆರೆಯುವವರ ಗುಂಪಿಗೆ ಸೇರಿದುದು ಸಂತೋಷದ ವಿಷಯ.

ಮೊದಲನೆಯ ಕತೆ 'ಚಕಮುಕಿ' ಎಂಬುದು. ಪುಸ್ತಕಕ್ಕೂ ಅದೇ ಹೆಸರು ಬಂದಿದೆ. ದಂಪತಿಗಳ ನಡುವೆ ಹಾರಿದ ಚಕಮುಕಿಯ ಕಿಡಿಗಳು ಹಲವು, ನಯನ ಮನೋಹರವಾಗಿದ್ದರೂ ಕೆಲವು ಮಾತ್ರ ಕೆಂಡದ ಕಾವ್ಯನ್ನೊಳಗೊಂಡಿವೆ. "ಯಾಕ, ಬಹಾಳ ಬಾಯಿ ಬಿಟ್ಟೇರಿವತ್ತ" "ಈ ಮಂಗನ ಮಲ್ಲಿನಾಥತನ ಸಾಕು" ಎಂಬ 'ಆಕೆ'ಯ ಮಾತುಗಳನ್ನು ಈ ಸಂದರ್ಭದಲ್ಲಿ ಉದಾಹರಿಸಬಹುದು. ಸಂಭಾಷಣೆಯ ಬಿನ್ನಾಣವೇನೋ ಚಿತ್ತಾಕರ್ಷಕವಾಗಿದೆ. ಕಥಾತಂತ್ರ ಮತ್ತು ಪಾತ್ರ ಸ್ವಭಾವಗಳ ಬೆಳವಣಿಗೆಯ ದೃಷ್ಟಿಯಿಂದ ಮಾತ್ರ ಇದು ಸಣ್ಣ ಕತೆಯೇ ಎಂಬ ಸಂಶಯ ತಲೆದೋರದಿರದು. ನೂತನವಾದ ಕಥಾತಂತ್ರ ಎಂಬ ಸಮಾಧಾನ ಸಾಲದು.

'ಎರಡನೆಯ ಸಂಬಂಧವಲ್ಲ; ಹೆಂಡತಿ ಜೇರೆ' ಎಂಬುದು ಎರಡನೆಯ ಕತೆ. ಇದರಲ್ಲಿ ದೇವದತ್ತರ ಆತ್ಮಚರಿತ್ರೆಯು ಸೊಗಸಾಗಿದೆ. ಸಾವೇರಿಯೊಡನೆ ದೇವದತ್ತರ ಲಗ್ನವಿಧಿಯು ಮಾತ್ರ ಎಲ್ಲಿಯೂ ನಡೆದಂತೆ ವರ್ಣಿಸಿಲ್ಲ. ಎರಡನೆಯ ಸಂಬಂಧವಲ್ಲ; ಹೆಂಡತಿ ಜೇರೆ' ಎಂಬ ಮಾತಿನ ಅರ್ಥವು ಕತೆಯ ಒಡಲಲ್ಲಿ ಅದನ್ನು ಎರಡುಸಲ ತಿಳಿಸಲು ಪ್ರಯತ್ನಪಟ್ಟರೂ ಕೊನೆಯವರೆಗೂ ಒಗಟಾಗಿಯೇ ಉಳಿದಂತಿದೆ. "ನಿನಗೆ ಕುದುರೆಯಾಗಲಿಕ್ಕೆ ಬೇಸರವೆನಿಸಿದ್ದರೆ ಮತ್ತೇನಾದರೂ ಆಗು" "ಕೈಯಲ್ಲಿ ಕಾರಿದೆ" ಎಂಬ ಮಾತುಗಳು ಸಮರ್ಪಕವಾಗಿವೆ. ಸಾವೇರಿಯ ಜಡ್ಡಿನವರ್ಣನೆಯೂ ಚಿತ್ರಕಲೆಯ ಅಭ್ಯಾಸದ ವರ್ಣನೆಯೂ ಅರ್ಥಪೂರ್ಣವಾಗಿವೆ. ಆದರೆ ಕತೆಯ ಉದ್ದಕ್ಕೂ ಸಾವೇರಿಯನ್ನು ಕೇವಲ ಪ್ರೇಮದ ಹುಚ್ಚಾಟದ ಗೊಂಬೆಯಂತೆಯೂ ಯಾವ ವಿದ್ಯೆಯನ್ನೂ ಕಲಿಯಲು ಅವಳು ಅಯೋಗ್ಯಳೆಂಬಂತೆಯೂ ವರ್ಣಿತವಾದುದು ವಾಸ್ತವವಾಗಿ ಕಾಣುವುದಿಲ್ಲ. ಈ ಸಂದರ್ಭವು ಪದವೀಧರರಾದ ಮಹಿಳೆಯರನ್ನು ಕೆರಳಿಸುವಂತಿದೆ!

ಮೂರನೆಯ ಕತೆಯಾದ "ಬದುಕುಬಾಳು" ಎಂಬುದು ಕತೆಯೇ ಅಲ್ಲ. ಈ ಸಂಕಲನದಲ್ಲಿ ಇದು ಹೇಗೆ ನುಸುಳಿಕೊಂಡು ಬಂದಿತೋ!

ಕಲಾದೃಷ್ಟಿಯಿಂದ 'ಸರಸೀಕೂಡ ಸಿನೆಮಾ' ಎಂಬ ಕತೆಯು ಉತ್ತಮವಾದುದು. ಅದರ ಬೆಳವಣಿಗೆಯು ವಿದ್ಯುದ್ವೇಗದಿಂದ ಸಾಗಿ ವಾಚಕರ ಚಿತ್ತವನ್ನು ಹಿಡಿದು ನಿಲ್ಲಿಸುತ್ತದೆ. ನೂತನ ದಂಪತಿಗಳು ಸ್ವಾತಂತ್ರ್ಯದ ಸವಿಯೂಟವನ್ನುಣಲು ಯತ್ನಿಸಿ ಕೊನೆಗೆ ಹತಾಶರಾಗುತ್ತಾರೆ. ಅವರ ಪ್ರಯತ್ನದ ಮಾರ್ಗದಲ್ಲಿ ಉಂಟಾದ ತಡೆಗಳು ವಿನೋದಪೂರ್ಣವಾಗಿ ಚಿತ್ರಿಸಲ್ಪಟ್ಟಿವೆ. ಆದರೆ ಇಂದಿನ ಕಾಲದಲ್ಲಿ ಒಂದು ಸಿನೆಮಾ ನೋಡಲು ಹೋಗಬೇಕಾದರೆ ನವದಂಪತಿಗಳಿಗೆ ಇನಿತೊಂದು ಸಾಹಸವನ್ನು ಮಾಡಬೇಕಾಗುವುದೇ?

ಸಂಸಾರದ ಬೇರೊಂದು ಸಾಮಾನ್ಯ ಚಿತ್ರವನ್ನು ನಮ್ಮ ಮುಂದಿರಿಸುವುದೆಂದರೆ 'ಕುಡಿದ ಕಣ್ಣೀರು' ಎಂಬ ಕತೆಯು. ಅತ್ತೆಯ ಆಕ್ರೋಶ, ಸೊಸೆಯ ಸಹನೆ, ಗಂಡನು ತಾಯಿಯ ಮಾತು ಕೇಳಿ ಮೊದಲು ಹೆಂಡತಿಯನ್ನು ಹೊಡೆದು ಆಮೇಲೆ ಪಶ್ಚಾತ್ತಾಪಪಡುವುದು, ಇವೆಲ್ಲ ವಾಸ್ತವವಾಗಿ ಚಿತ್ರಿಸಲ್ಪಟ್ಟಿವೆ. 'ಕಣ್ಮರೆಯಾದ ಬಂದೂಕು' ಎಂಬ ಕತೆಯ ವಸ್ತುವು ಚರ್ವಿತಚರ್ವಣವಾಗಿರದೆ ೧೯೪೨ರಲ್ಲಿ ನಮ್ಮ ದೇಶದಲ್ಲಿ ಉದ್ಭವಿಸಿದ ವಿಧ್ವಂಸಕ ಆಂದೋಲನವನ್ನು ಸ್ಮರಣೆಗೆ ತರುವುದರಿಂದ ನಾವೀನ್ಯ ಪೂರ್ಣವಾಗಿದೆ. ಸಾಹಿತ್ಯಮಂದಿರದಲ್ಲಿ ರಾಮಬುದ್ಧರಿಗೆ ಸ್ಥಾನವಿರುವಂತೆ ರಾವಜಿ ಬುದ್ಧಪ್ಪನವರಿಗೂ ಉಂಟೆಂಬುದನ್ನು ಲೇಖಕರು ತೋರಿಸಿಕೊಟ್ಟಿದ್ದಾರೆ.

'ಜಟಕ ಸಾಬಿ' ಮತ್ತು 'ನೀಲಪ್ಪ' ಎಂಬುವು ಇದೇ ಮಾದರಿಯ ಕತೆಗಳು, ಜಟಕಾ ನಡೆಸುವವರಲ್ಲಿಯೂ ಸತ್ಯ ನಿಷ್ಠುರತೆ, ಪರೋಪಕಾರ ಬುದ್ಧಿ, ಕೃತಜ್ಞತಾ ಭಾವಗಳಿರುತ್ತವೆ ಎಂಬುದನ್ನು ಮೊದಲನೆಯ ಕತೆಯನ್ನೋದಿ ಮನಗಾಣಬಹುದು. ವಸುದೇವನಂಥ ವಾಸುಕೀ ವಂಶದವರಿಂದ ನಾವು ಹುಷಾರಾಗಿರಬೇಕು! ಕತೆ ಓದಿ ಮುಗಿಸಿದ ಮೇಲೂ ಬಹು ಕಾಲದ ವರೆಗೆ ನೀಲಪ್ಪನನ್ನು ನಾವು ಮರೆಯುವಂತಿಲ್ಲ. ಅವನ ಮಾತುಗಳನ್ನು ಕೇಳುತ್ತಿರುವ ಹಾಗೆ ಓದುಗರ ಕಣ್ಣುಗಳು ಒಮ್ಮೊಮ್ಮೆ ಒದ್ದೆಯಾಗುತ್ತವೆ. 'ಅಣ್ಣ ತಮ್ಮ' ಚಿತ್ತವೇಧಕವಾಗಿದೆ. ಸಂಸಾರದ ತಾಪತ್ರಯಗಳನ್ನು ಲೆಕ್ಕಿಸದೆ ಕಣ್ಣೀರನ್ನೇ ಕುಡಿದು ತಮ್ಮನನ್ನು ಮುಂಬಯಿಯಲ್ಲಿಟ್ಟು ಓದಿಸಿದ ಪ್ರಹ್ಲಾದನಿಗೆ ಮುಂದೆ ಅವನಿಂದ ಆದ ಅಪಚಾರವು ಅನ್ಯಾಯವೆನಿಸಿದರೂ ಇಂಥ ಉದಾಹರಣೆಗಳು ಅಸಂಭಾವ್ಯವಲ್ಲ. ಉಪೇಂದ್ರನು ಕೊನೆಗೆ ಪಶ್ಚಾತ್ತಾಪ ಹೊಂದಿ ಅಣ್ಣನಿಗೆ ನೂರು ರೂಪಾಯಿಯ ನೋಟನ್ನು ಕಳಿಸಿಕೊಟ್ಟರೆ ಅವನಿಗೆ ಮಾತ್ರ ಯಾರೂ ವೋಟನ್ನು ಕೊಡುವಂತಿಲ್ಲ! "ಗರತಿಯಾಗುವ ಆಶೆ"

ಯೆಂಬ ಕತೆಯಲ್ಲಿ ಮಾಸ್ತರು ವೇಶ್ಯಾವೃತ್ತಿಯನ್ನವಲಂಬಿಸಿದ ಸೇವಂತಿಯನ್ನು ಮದುವೆಯಾಗಲು ತಮ್ಮ ಒಬ್ಬ ಶಿಷ್ಯನನ್ನು ಒಪ್ಪಿಸಿದುದೂ, ಆ ವೃತ್ತಿ ಹೇಯ ವೆಂದೆನ್ನಿಸಿದ ಆವಳು ಲಗ್ನವಾಗಲು ಒಪ್ಪದಿದ್ದುದೂ ಸಂಭವನೀಯವಾಗಿ ತೋರು ವುದಿಲ್ಲ. ಕತೆಯು ಬೇರೊಂದು ರೀತಿಯಲ್ಲಿ ಕೊನೆಗೊಂಡಿದ್ದರೆ ಚೆನ್ನಾಗುತ್ತಿತ್ತು.

ಶ್ರೀ ಬೇಂದ್ರೆಯವರು ಸಾಹಿತಿಗಳಾಗಿಯೂ ವಿಮರ್ಶಕರಾಗಿಯೂ 'ಸಾಹಿತಿ ಗೊಂದು ಸಮಾಧಾನ' ವೆಂಬ ಕತೆಯಲ್ಲಿ ಕಂಡುಬರುತ್ತಾರೆ. ಸಾಹಿತ್ಯದ ಸಾರ್ಥ ಕತೆಯನ್ನು ಸ್ವಲ್ಪದರಲ್ಲಿಯೇ ಸ್ವಾರಸ್ಯವಾಗಿ ಹೇಳಿದಾರೆ. "ವಿಾರೆಯ ಮುದ್ದು" ಕಥಾತಂತ್ರದ ದೃಷ್ಟಿಯಿಂದ ಶ್ರೇಷ್ಠವಾದ ಕತೆಯೆಂದು ಹೇಳಬಹುದು. ಪಾತ್ರ ಸ್ವಭಾವದಲ್ಲಿ ಸಂಯಮವೂ ಕತೆಯ ಬೆಳವಣಿಗೆಯಲ್ಲಿ ತೀವ್ರತೆಯೂ ವರ್ಣನೆಯಲ್ಲಿ ಕಲ್ಪಕತೆಯೂ ರಮ್ಯವಾಗಿವೆ. ಆದರೆ "ಹೀsಗೆ ಹಣೆಯಿಕ್ಕಿ ನೋಡಿದ" "ವಿಕ ವಿಕಾರದ ರೂಪಗಳು" ಎಂದು ಮುಂತಾಗಿ ಬರೆಯುವುದರ ಔಚಿತ್ಯ ಗೊತ್ತಾಗಲಿಲ್ಲ.

ಒಟ್ಟಿನಲ್ಲಿ ಈ ಕಥಾಸಂಕಲನವು ಶ್ರೀ ಬೇಂದ್ರೆ ಲಕ್ಷ್ಮಣರಾಯರ ಪಾಂಡಿತ್ಯ ಪ್ರತಿಭೆ ಪ್ರಪಂಚಜ್ಞಾನಗಳಿಗೆ ಸಾಕ್ಷಿಯಾಗಿದೆ. ಉತ್ತರ ಕರ್ನಾಟಕದ ಮಾತಿನ ರೀತಿಯು ಇತರ ಭಾಗದ ಕನ್ನಡಿಗರಿಗೆ ಹೊಸದಾಗಿ ಕಂಡರೂ ಸಹಜತೆಯಲ್ಲಿ ಈ ಪುಟ್ಟದೋಷಗಳು ಲೀನವಾಗಿ ಹೋಗುವುವು. ಆದ್ದರಿಂದ ರಾಯರು ತಮ್ಮ ಸರಸ ಸಾಹಿತ್ಯದ ಸವಿಯೂಟವನ್ನು ಇದಕ್ಕಿಂತ ಹೆಚ್ಚಾಗಿ ಕನ್ನಡಿಗರಿಗೆ ಉಣಬಡಿಸುವ ರೆಂದು ನಾವು ಹಾರೈಸುತ್ತೇವೆ.

ತವಗ ಭೀಮಸೇನರಾವ.

***

೪. ವಿಶ್ವಕವಿ ರವೀಂದ್ರರು—ಗ್ರಂಥಕರ್ತರು: ಶ್ರೀ ಎಲ್. ಎಸ್. ಶೇಷಗಿರಿರಾಯರು; ಪ್ರಕಾಶಕರು: ? ಕ್ರೌನ್ ಅಷ್ಟಪತ್ರ; ಪುಟಗಳು vi + ೨೧; ಬೆಲೆ ?

ಪ್ರಚಂಚದ ಅತ್ಯಂತ ಹಿರಿಯಕವಿ ಗುರುದೇವ ರವೀಂದ್ರರ ಮತ್ತು ಅವರ ಕೃತಿಗಳ ಸ್ಥೂಲ ಪರಿಚಯ ಮಾಡಿಕೊಡುವ ಸಣ್ಣ ಹೊತ್ತಿಗೆ ಇದು. ಶ್ರೀ ಸಿ. ಕೆ. ವೆಂಕಟರಾಮಯ್ಯನವರು ಮುನ್ನುಡಿಯನ್ನು ಬರೆದು ಹರಸಿದ್ದಾರೆ. ಒಂದು ಸಮಯ ದಲ್ಲಿ ಗ್ರಂಥಕರ್ತರಿಗೆ ಬಹುಮಾನ ಸಂಪಾದಿಸಿಕೊಟ್ಟ ಪ್ರಬಂಧವನ್ನು ಲಂಬಿಸಿ ಪುಸ್ತಕರೂಪದಲ್ಲಿ ಈಗ ಪ್ರಕಟಮಾಡಿದ್ದಾರೆ. ವಿಶ್ವಕವಿ ರವೀಂದ್ರರ ವಿಷಯ ಎಷ್ಟು ಬೇಕಾದರೂ ಬರೆಯಬಹುದು. ಸಾಹಿತ್ಯ ಅಥವಾ ಕಲಾನೈಪುಣ್ಯದಲ್ಲಿ ಕೀರ್ತಿ ಗಳಿಸಿದವರು ಯಾವುದಾದರೊಂದು ಭಾಗದಲ್ಲಿ ತಮ್ಮ ವಿಸ್ಮಯಕರ ಸಾಮರ್ಥ್ಯ ದಿಂದ ಕೀರ್ತಿಕಾಯರಾದವರು. ರವೀಂದ್ರರ ಜೀವನ ಪರಿಚಯ ಈ ಪ್ರಬಂಧದಿಂದ

ಹೆಚ್ಚೇನೂ ತಿಳಿದುಬರುವುದಿಲ್ಲ. ಸಾಹಿತ್ಯದಲ್ಲಿ ಅವರ ಜೀವನ, ಅವರ ಕೃತಿಗಳು ಯಾವುವು, ಅವುಗಳ ಲಕ್ಷಣಗಳೇನು, ಇವು ಮೊದಲರ್ಧವನ್ನು ಒಳಗೊಂಡಿವೆ. ಕವಿವರ್ಯರ ಗುಣಸ್ವಭಾವ, ಅವರ ಜೀವಮಾನದಲ್ಲಿ ಅವರು ವಿಶ್ವಕ್ಕಾಗಿ ಮಾಡಿದ ಉಪಕಾರ ಸ್ಮಾರಕಗಳು, ಶಾಂತಿನಿಕೇತನ, ಅಲ್ಲಿ ವಿದ್ಯಾರ್ಥಿಗಳ ನಿಯಮಗಳು, ಶಿಸ್ತು ಇವುಗಳ ವಿವರಣೆ ಇದೆ. ಗೀತಾಂಜಲಿಯಿಂದ ಕೆಲವು ಉತ್ತಮ ಭಾಗಗಳ ಅನುವಾದ ಕೊಟ್ಟು ಉಪಕಾರ ಮಾಡಿದ್ದಾರೆ. ತುಂಬುಜೀವನದ ಗುರುದೇವರ ಸಾಹಿತ್ಯಾಭಿಮಾನ, ದೇಶಾಭಿಮಾನ, ಇವುಗಳ ಪರಿಚಯು ತಕ್ಕಮಟ್ಟಿಗೆ ವಾಚಕವರ್ಗಕ್ಕೆ ಆಗುವುದು. ಗುರುವರ್ಯರ ಆದ್ಯಜೀವನಚರಿತ್ರೆಯನ್ನೂ ಒಂದೆರಡು ಪುಟಗಳಷ್ಟು ಸೇರಿಸಿದ್ದರೆ ಇನ್ನೂ ಉತ್ತಮವಿರುತ್ತಿತ್ತು. ಸರಳವಾದ ತಿಳಿಗನ್ನಡದಲ್ಲಿ ವರ್ಣಿಸಿ ಈ ಕಿರಿಯ ಕಾಣಿಕೆಯನ್ನು ಗುರುದೇವರ ಸನ್ನಿಧಿಯಲ್ಲರ್ಪಿಸಿ ರಾಯರು ಕೃತಕೃತ್ಯರಾಗಿರುತ್ತಾರೆ.

ಎಂ. ಎಸ್. ಅನಂತಪದ್ಮನಾಭರಾವ್.

***

೫. ಸತೀ ಕಸ್ತೂರಿಬಾ—ಬರೆದವರು: ಗೊರೂರು ರಾಮಸ್ವಾಮಿ ಐಯಂಗಾರ್ಯರು, ಗೊರೂರು ರಾಷ್ಟ್ರೀಯ ಸಮಿತಿಯ ಪ್ರಕಟಣೆ; ಪುಟಗಳು ೫೦+೪; ಬೆಲೆ, ೧೦ ಆಣೆ.

ತಾಯಿ ಕಸ್ತೂರಿಬಾ ರವರು ೨೨-೨-೪೪ ರಲ್ಲಿ ಕಣ್ಮರೆಯಾಗುವ ವರೆಗೆ ಆಕೆಯ ಸ್ವಂತ ಚೈತನ್ಯದ ಅರಿವು ಹೊರಪ್ರಪಂಚಕ್ಕೆ ಆಗಿರಲಿಲ್ಲ. ಆ ದಿನ ಕಸ್ತೂರಿಬಾ ಅವರ ಐಹಿಕ ದೇಹ ನಾಶವಾದಂತೆಯೇ, ಆಕೆಯ ಕೀರ್ತಿ ಜ್ಯೋತಿಯೂ ಕ್ರಮ ಕ್ರಮವಾಗಿ ಮೂಡಿಬಂದು, ತನ್ನ ಹೊಂಬೆಳಕನ್ನು ಎಲ್ಲೆಡೆಗೂ ಹರಡಿತು. ಆಕೆ ಗಾಂಧೀಜಿಯ ಜೀವನದಲ್ಲಿ ಇದ್ದುದು ಮೂರ್ತಿಗೆ ಪ್ರಭೆಯಿದ್ದಂತೆ, ನಾಯಕನಿಗೆ ಮಂತ್ರಿಯಿದ್ದಂತೆ, ಯಜ್ಞಕರ್ತೃವಿಗೆ ಪಾಲುಗಾರ್ತಿಯಿದ್ದಂತೆ ಎಂಬ ನಿಜಸ್ಥಿತಿಯನ್ನು ಎಲ್ಲರೂ ತಿಳಿಯು ವಂತಾಯಿತು.

ಕಸ್ತೂರಿಬಾ ಗಾಂಧೀಜಿಯವರ ಸರಿಸಮಕ್ಕೂ ದುಡಿದರು. ಕೀರ್ತಿ ಬಯಸದ ದುಡಿತ ದುಡಿದರು. ಆತ ಒಮ್ಮೊಮ್ಮೆ ಕೊಟ್ಟ ಕಿರುಕುಳವನ್ನು ಅದ್ವಿತೀಯ ಸಹನೆ ಯಿಂತ ತಾಳಿದರು; ಹಟಯೋಗಿಯೆನಿಸಿದ ಆತನನ್ನೂ ಸರಿಯೆಂದು ತೋರಿದಾಗ ಎದುರಿಸಿ ಗೆದ್ದರು. ಆತ ಪ್ರಪಂಚಕ್ಕೇ ಗುರುವಾದರೆ, ಆ ಗುರುವಿಗೂ ಸಮಯದಲ್ಲಿ ಮಾರ್ಗದರ್ಶಕಳಾದಳು ಈಕೆ. ಆದರ್ಶ ಭಾರತ ಪತ್ನಿ, ಅಥವಾ ತಾಯಿಯಂತೆ ಕಟ್ಟೆನಲ್ಲೇ ಇದ್ದೂ ನಾಡಹಿತ ಹೇಗೆ ಸಾಧಿಸಬಹುದೆಂಬ ಬಗೆ ತೋರಿಕೊಟ್ಟಳು.

ಆಕೆಯ ಸಹನೆ ಹೇಗೋ, ತ್ಯಾಗವೂ ಅಷ್ಟೇ ಅದ್ವಿತೀಯ. ಕಸ್ತೂರಿಬಾ ಅವರ ತ್ಯಾಗ ಅನಾಸಕ್ತಿಯ ಸೋಂಕಲ್ಲ, ವಿರಕ್ತಿಯ ಪರಿಣಾಮವಲ್ಲ. ಎಲ್ಲ ಹೆಣ್ಣಿಗೆ, ಅದ

ರಂತೆ ತನಗೆ ಸಹಜವಾಗಿದ್ದ ಆಸೆ ಆಕಾಂಕ್ಷೆಗಳನ್ನೆಲ್ಲ ಆಕೆ ಪ್ರಯತ್ನಪೂರ್ವಕವಾಗಿ ಬಿಟ್ಟುಕೊಟ್ಟಿದ್ದಾಳೆ. ಗಂಡನಿಗಾಗಿ ದೇಶಕ್ಕಾಗಿ ತನ್ನದೆಂಬುದನ್ನೆಲ್ಲ ಧಾರೆ ಎರೆದಿದಾಳೆ. ಮಾತನಾಡದೆ, ನಗುಮೊಗದಿಂದ, ಇನ್ನೊಬ್ಬರ ಕಣ್ಣಿಗೆ ಬೀಳದಂತೆ ಧಾರೆ ಎರೆದಿದಾಳೆ. ಕಷ್ಟಮಯ ಜೀವನದಲ್ಲೂ ಶಾಂತಿ ಸಮಾಧಾನ ಗೆಲವುಗಳನ್ನು ತಂದುಕೊಂಡಿದಾಳೆ. ಇದು ನಮ್ಮಲ್ಲೆಷ್ಟು ಮಂದಿಗೆ ಸಾಧ್ಯ? ಎಷ್ಟರಮಟ್ಟಿಗೆ ಸಾಧ್ಯ?

ಸತ್ಯಶೋಧನೆಯಲ್ಲಿ ಸಹ ಆಕೆಯದು ಒಂದು ಹೆಜ್ಜೆ ಮುಂದೆ ಎಂದು ಹೇಳ ಬಹುದು. ಗಾಂಧೀಜಿಯವರದು ಪಾಶ್ಚಾತ್ಯ ವಿದ್ಯೆಯ ಸಂಪರ್ಕದಿಂದ ಕೆರಳಿ ವಿಚಾರ ವಿನಿಮಯ ಅನುಭವಗಳ ಮೂಲಕ ಸತ್ಯಕ್ಕೆ ತಲಪಿದ ದಾರಿಯಾದರೆ, ಕಸ್ತೂರಿಬಾ ಅವರದು ಅಜ್ಞಾನ, ಸಂಪ್ರದಾಯ ಶರಣತೆ ಇವುಗಳ ಬಂಧನ ಬಿಡಿಸಿಕೊಂಡು, ಹಾಗೆಯೇ ಸ್ತ್ರೀಗೆ ಸಹಜವಾದ ಧರ್ಮಕಟ್ಟನ್ನು ಮೀರದೆಯೆ ಸತ್ಯಕ್ಕೆ ಮುಟ್ಟಿರುವ ದಾರಿ. ಭಾರತ ಮಹಿಳಾಕೋಟಿಗೆ ಏಕಮಾತ್ರ ಆದರ್ಶ ಸ್ವರೂಪವಾಗಿರುವ ಹೆದ್ದಾರಿ.

ಆದರೆ ಕಸ್ತೂರಿಬಾರವರ ಸತ್ಯಶೋಧನೆಯ ವಿಷಯ ನಮಗೆ ಹೆಚ್ಚಾಗಿ ತಿಳಿದಿಲ್ಲ. ಅವರ ಬಾಯಿಂದಲೇ ಅದನ್ನು ಕೇಳಿ ತಿಳಿದುಕೊಳ್ಳುವ ಲಭ್ಯ ನಾವು ಪಡೆದಿಲ್ಲ. ಇನ್ನುಳಿದಿರುವ ಒಂದೇ ಮಾರ್ಗವೆಂದರೆ, ಮಹಾತ್ಮಾ ಗಾಂಧೀಜಿ ಮತ್ತವರ ಇಷ್ಟ ಮಿತ್ರರ ಮೂಲಕ ಆಕೆಯ ಬಗ್ಗೆ ತಿಳಿದಿರುವುದನ್ನು ಸಂಗ್ರಹಿಸಿಟ್ಟುಕೊಂಡು ವ್ಯಾಸಂಗಮಾಡುವುದು. ಈ ಸಂಗ್ರಹ ಕಾರ್ಯವನ್ನು ಈಗಾಗಲೇ ಅನೇಕರು ಮಾಡುತ್ತಿದಾರೆ. ಹಿಂದೀ, ಗುಜರಾತಿ, ತಮಿಳು, ತೆಲುಗು, ಮಲೆಯಾಳಿ ಹೀಗೆ ನುಡಿ ನುಡಿಯಲ್ಲೂ ಆಕೆಯ ಪುಣ್ಯಚರಿತ್ರೆ ರಚಿತವಾಗುತ್ತಿದೆ. ಕನ್ನಡ ನಾಡಿನಲ್ಲಿ, ಅದೂ ಶಿವರಾತ್ರಿ ಕಳೆದ ಕೇವಲ ನಾಲ್ಕು ತಿಂಗಳಲ್ಲೇ ಭಾವನೋದ್ದೀಪಿತವಾದ ಈ ಚಿಕ್ಕ ಪುಸ್ತಕವನ್ನು ನಮಗೆ ನೀಡಿದ ಗೊರೂರರವರು ವಂದನಾರ್ಹರು. ಮೊದಲ ಮಾತು ಬರೆದ ಶ್ರೀ ಭಾಷ್ಯಂ ಅವರು ಹೇಳಿರುವಂತೆ "ಈ ಪುಸ್ತಕವನ್ನು ಹುಡುಗರಿಗಾಗಿಯೂ ಸ್ತ್ರೀಯರಿಗಾಗಿಯೂ, ಹಳ್ಳಿಯವರಿಗಾಗಿಯೂ ಬರೆದಿದ್ದೇನೆಂದು ಗ್ರಂಥಕರ್ತರು ಹೇಳುತ್ತಾರೆ. ವಿಷಯದ ಘನತೆಗೆ ಅರ್ಹವಾಗಿದೆ ಶೈಲಿಯ ಗಾಂಭೀರ್ಯ. ಶ್ರೀ ಗೊರೂರು ರಾಮಸ್ವಾಮಿ ಐಯಂಗಾರ್ ಅವರು ಕನ್ನಡ ಸಾಹಿತ್ಯದಲ್ಲಿ ಕೀರ್ತಿಯುತವಾದ ಸ್ಥಾನವನ್ನೂ ಹೆಸರನ್ನೂ ಸಂಪಾದಿಸಿರುವ ಪ್ರತಿಭಾವಂತರು. ಅವರ ಬರವಣಿಗೆ ಜನಕ್ಕೆ ಹಿತವಾಗುತ್ತದೆ. ಜನದ ಮೆಚ್ಚುಗೆ ಪಡೆಯುತ್ತದೆ. ಪುಸ್ತಕದಲ್ಲಿ ಪ್ರತಿಪಾದಿತವಾದ ಮಹದ್ವ್ಯಕ್ತಿಯ ಜೀವನದಿಂದ ಗ್ರಂಥದ ಯೋಗ್ಯತೆ ಇನ್ನೂ ಹೆಚ್ಚಿದೆ . . . ಈ ಪುಸ್ತಕದ ಲಾಭವನ್ನು ಕಸ್ತೂರಿಬಾ ಸ್ಮಾರಕಕ್ಕಾಗಿ ಉಪಯೋಗಿಸಲಾಗುತ್ತದೆ. ವಾಚಕರಿಗೆ ಅದಕ್ಕಿಂತ ಮತ್ತೇನು ಬೇಕು?"

ಒಂದೆರಡು ಮಾತುಗಳನ್ನು ಹೇಳದೆ ವಿಧಿಯಿಲ್ಲ. ಇದನ್ನು ಜೀವನಚರಿತ್ರೆ ಎನ್ನುವುದಕ್ಕಿಂತ, ಜೀವನದ ರೇಖಾಚಿತ್ರ ಎನ್ನುವುದು ಹೆಚ್ಚೊಪ್ಪು. ಅಲ್ಲಲ್ಲಿ ರೇಖೆಗಳು ಮೈಗೂಡಿ ಬಂದಿಲ್ಲ. ಉದಾಹರಣೆಗೆ ೧೫ನೆಯ ಪುಟದ ಎರಡನೆಯ ಪ್ಯಾರ, ಇದು ಅವಸರದ ಪರಿಣಾಮವಿರಬಹುದು.

ಎರಡನೆಯದಾಗಿ, ಮುದ್ರಣದ ತಪ್ಪುಗಳು ಸರಿ ಸುಮಾರಿವೆ. ಕೆಸಲ, ಸತಿತ್ವ ಬರಲಿಲ್ಲವೆಲ್ಲ, ' ದುಃಖಃ ಮೊದಲಾದುವೂ, ಒಂದೇ ಪುಟದಲ್ಲಿ ಸಿಕ್ಕುವ ಮಡಕೆ, ಮಡಿಕೆ, ಮಡಕ್ಕೆ ಎಂಬ ವಿವಿಧ ಪ್ರಯೋಗಗಳೂ ಕಣ್ಣಿಗೆ ಅಹಿತವಾಗಿವೆ. ಇದೂ ಅವಸರದ ಪರಿಣಾಮವೇ ಇರಬೇಕು. ಮುಂದಣ ಮುದ್ರಣದಲ್ಲಿ ಈ ಎಲ್ಲವೂ ನೇರ್ಪಟ್ಟೀತು.

ಎಂ. ಆರ್. ಲ.

***

೬. ಸಂಗಮ—ಲೇಖಕರು : ಶ್ರೀ ಸಿ. ಕೆ. ನಾಗರಾಜ ರಾವ್ ; ಪ್ರಕಾಶಕರು : ಶರತ್ ಏಜನ್ಸೀಸ್, ಬೆಂಗಳೂರು ನಗರ ; ಪುಟಗಳು ೬೪ ; ಬೆಲೆ ಹನ್ನೆರಡಾಣೆ.

ಇದು ಸಂಗಮ, ಹರಿವ ನೀರು, ಕರುಳು, ಸುಮಿತ್ರ ? ಎಂಬ ನಾಲ್ಕು ಸಣ್ಣ ಕಥೆಗಳ ಒಂದು ಸಂಗ್ರಹ. ಮೊದಲನೆಯ ಕಥೆಯ ಹೆಸರನ್ನೇ ಪುಸ್ತಕಕ್ಕೂ ಇಡಲಾಗಿದೆ.

ಕೇವಲ ಚಿಕ್ಕ ವಯಸ್ಸಿನಲ್ಲಿಯೆ ತಂದೆತಾಯಿಗಳನ್ನೂ ಗಂಡನನ್ನೂ ಕಳೆದುಕೊಂಡ ಅನಾಥೆಯೊಬ್ಬಳು ತನ್ನನ್ನೂ ತನ್ನ ಹಸುಗೂಸೊಂದನ್ನೂ ಕಾಪಾಡಿಕೊಳ್ಳುವ ಸಲುವಾಗಿ ತನ್ನ ಅಣ್ಣಂದಿರ ಮೊರೆಹೊಕ್ಕಾಗ ಆ ಅಣ್ಣಂದಿರ ಅಪಾರವಾದ ಸೋದರ ಸ್ನೇಹ ಸೌಹಾರ್ದಗಳ ಪರಿಣಾಮವಾಗಿಯೆ ಆ ತಬ್ಬಲಿ ತಾಯಿ ಏನು ಪಾಡುಪಟ್ಟಳು ಎಂಬುದರ ಚಿತ್ರ ' ಸಂಗಮ 'ದಲ್ಲಿದೆ. ಒಂಟಿಯಾಗಿ ರೈಲಿನಲ್ಲಿ ಪ್ರಯಾಣಮಾಡುವ ಹೆಂಗಸೊಬ್ಬಳ ವಿಷಯದಲ್ಲಿ ವಿಲಾಸಿಗಳೂ ಸ್ವಾರ್ಥಿಗಳೂ ಆದವರು ಎಂತಹ ಅಸಹ್ಯಕರವಾದ ರೀತಿಯಲ್ಲಿ ನಡೆದುಕೊಳ್ಳುವರೆಂಬುದರ ಚಿತ್ರ ' ಹರಿವ ನೀರು ' ಎಂಬ ಕಥೆಯಲ್ಲಿದೆ. ಪೂರ್ವಕಾಲದ ಅರಬ್ಬೀದೇಶದ ಜನರು ಹೆಣ್ಣಿನ ವಿಷಯದಲ್ಲಿ ಎಂತಹ ಕ್ಷುದ್ರವೂ ಕ್ರೂರವೂ ಆದ ರೀತಿಯಲ್ಲಿ ವರ್ತಿಸುತ್ತಿದ್ದರೆಂಬುದರ ಚಿತ್ರ ' ಕರುಳು ' ಎಂಬ ಕಥೆಯಲ್ಲಿದೆ. ಸಾಹಿತ್ಯ ಸೇವೆಗಾಗಿ ಮುಂದೆ ಬರುವ ಹೆಂಗಸಿನ ವಿಷಯದಲ್ಲಿ ಹಿರಿಯರೆನ್ನಿಸಿಕೊಂಡ ಜನ ಹೇಗೆ ಹೇಯವಾಗಿ ನಡದಾರೆಂಬುದರ ಕಲ್ಪನೆ ' ಸುಮಿತ್ರ ? ' ಎಂಬ ಕಥೆಯಲ್ಲಿದೆ. ಆಧುನಿಕ ನಾಗರಿಕತೆಯ ಆದರ್ಶಮೂರ್ತಿಯಾಗಿದ್ದ ಶ್ರೀಧರನ ಮನೋಭಾವವೂ ವೈದಿಕ ಸಂಸ್ಕೃತಿಯ ಪ್ರತೀಕವಾಗಿದ್ದ

ಮನೋಹರನ ಮನೋಧರ್ಮವೂ ಮೊದಮೊದಲು ಪರಸ್ಪರ ವಿರುದ್ಧವಾದವುಗಳಾಗಿದ್ದರೂ ಹೇಗೆ ಕಡೆಯಲ್ಲಿ ಮಧುರವಾದ ಸಂಗಮದಲ್ಲಿ ಪರ್ಯವಸಾನಗೊಂಡವೆಂಬುದರ ವಿವರ ಮೊದಲನೆಯ ಕಥೆಯಲ್ಲಿದೆ. ವೃದ್ಧನಾದರೂ ಅಲಂಕಾರಪ್ರಿಯನಾದ ನಿವೃತ್ತ ರೈಲ್ವೆ ಸ್ಟೇಷನ್ ಮಾಸ್ತರನ ಸೌಜನ್ಯದ ಸೋಗಿನ ಚಿತ್ರ ಎರಡನೆಯ ಕಥೆಯಲ್ಲಿದೆ. ಉಪಮಾನನ ಉಜ್ವಲವಾದ ಪುಗಳ ಮೇಲಣ ಪ್ರೇಮವೂ ಆ ಮಗಳ ಮಧುರವೂ ಮುಗ್ಧವೂ ಆದ ಶೀಲಸ್ವಭಾವವೂ ಮೂರನೆಯ ಕಥೆಯಲ್ಲಿ ಒಡಮೂಡಿವೆ. ಸುಮಿತ್ರನ ಸೋಗು ಹಾಕಿ ಅಸಹಾಯಳಾದ ಹೆಣ್ಣುಮಗಳೊಬ್ಬಳ ಮಾನಭಂಗ ಮಾಡಲೆಳದಸಿ ಕಾಮುಕ ಕಪಿನೀಪತಿಯ ಕೌಟಿಲ್ಯದ ಚಿತ್ರ ಕೊನೆಯ ಕಥೆಯಲ್ಲಿ ಚೆನ್ನಾಗಿ ಬಂದಿದೆ.

ಈ ನಾಲ್ಕು ಕಥೆಗಳೂ ಒಂದೇ ಉದ್ದೇಶ ಸಾಧನೆಗಾಗಿ ಹೊರಟಿವೆ. ಹೆಂಗಸು ಕೇವಲ ಭೋಗವಸ್ತುವಲ್ಲ; ಗಂಡಸಿನಿಂದ ಹೇಗೋ ಹಾಗೆ ಹೆಂಗಸಿನಿಂದಲೂ ಸಾಹಿತ್ಯ ಸಂಗೀತಾದಿ ಕಲಾಸೇವೆ ಸಾಧ್ಯ; ದೇಶ, ಸಮಾಜ, ಜನಜೀವನಗಳ ಅಭಿವೃದ್ಧಿಗೆ ಆಕೆ ಸಹಾಯಕಳಾಗಿ ನಿಲ್ಲಬಲ್ಲಳು. ಅವಳನ್ನು ಗೌರವ ಬುದ್ಧಿಯಿಂದಲೂ ವಿನಯದಿಂದಲೂ ಪುರುಷವರ್ಗ ಕಾಣಬೇಕು. ಈ ವರೆಗೆ ಹೆಣ್ಣು ಸಮಾಜದಲ್ಲಿ ತನ್ನ ಗೌರವನ್ನೂ ಶೀಲವನ್ನೂ ಉಳಿಸಿಕೊಂಡಿರುವುದು ಅವಳು ತೋರಿಸಿರುವ ಸಹನೆ ಸೌಶೀಲ್ಯಗಳಿಂದ, ಧೈರ್ಯ ಸ್ಥೈರ್ಯಗಳಿಂದ. ಈ ಮುಂತಾದ ಅಭಿಪ್ರಾಯಗಳನ್ನು ಮಹಾಜನಗಳ ಮುಂದಿಡುವ ಸಲುವಾಗಿ ಶ್ರೀ ನಾಗರಾಜರಾಯರು ಈ ಕಲಾಕೃತಿಯನ್ನು ರಚಿಸಿದ್ದಾರೆ.

ಕಥೆಯ ಉದ್ದೇಶ, ಕಥೆ ಹೇಳುವ ರೀತಿ, ಸನ್ನಿವೇಶ, ರಚನೆ ಇವುಗಳೆಲ್ಲ ಒಟ್ಟಿನಲ್ಲಿಯೂ ವಿವರಗಳಲ್ಲಿಯೂ ಚೆನ್ನಾಗಿವೆ. ಆದರೆ ಅಲ್ಲಲ್ಲಿ ತಲೆಹಾಕಿರುವ ಪದದೋಷ ವಾಕ್ಯದೋಷಗಳು ಕಥೆಗಳ ಸೊಗಸನ್ನು ತಗ್ಗಿಸಿವೆ. ಲೇಖಕರೂ ಮುದ್ರಕರೂ ಪ್ರಕಾಶಕರೂ ಇನ್ನೂ ಹೆಚ್ಚಿನ ಪರಿಶ್ರಮ ವಹಿಸಿದಲ್ಲಿ ಈ ವಿಧವಾದ ದೋಷ ಕಡಮೆಯಾದೀತೆಂದು ತೋರುವುದು. ಬಾದಾಮಿ ಕಾಗದದಲ್ಲಿ ಅಚ್ಚು ಮಾಡಿರುವ ಈ ಪುಟ್ಟ ಪುಸ್ತಕಕ್ಕೆ ಇಟ್ಟಿರುವ ಬೆಲೆ ಮಾತ್ರ ಹೆಚ್ಚೆಂದೆ ತೋರುತ್ತದೆ.

ಶರಚ್ಚಂದ್ರರ ಕೃತಿಗಳ ಅನುವಾದಗಳಿಂದಲೂ ಸ್ವತಂತ್ರವಾದ ಕಥೆ ಕಾದಂಬರಿ ನಾಟಕಾದಿಗಳ ನಿರ್ಮಾಣದಿಂದಲೂ ಕನ್ನಡದ ಸೇವೆ ಸಲ್ಲಿಸಿ ಹೆಸರು ಪಡೆದಿರುವ ಶ್ರೀ ನಾಗರಾಜರಾಯರ ಈ ಪುಸ್ತಕವನ್ನು ನಮ್ಮ ಜನ ಆದರದಿಂದ ಬರಮಾಡಿಕೊಳ್ಳುವರೆಂದು ನಂಬಿದ್ದೇವೆ.

ಎಸ್. ವಿ. ಪರಮೇಶ್ವರಭಟ್ಟ.

* * *

೭. **ಭಕ್ತಿಸುಧಾಸಾರ**—ಶ್ರೀ ಘನಮಠ ಶಿವಯೋಗಿಗಳು ; ಸಂಪಾದಕರು : ಪ್ರೊ. ಸಂ. ಶಿ. ಭೂಸನೂರುಮಠ, ಎಂ.ಎ. ಅವರು ; ಪ್ರಕಾಶಕರು : ಶ್ರೀ ಮ. ನಿ. ಪ್ರ. ಮೃತ್ಯುಂಜಯ ಸ್ವಾಮಿಗಳು, ಮುರುಘಾಮಠ; ಕ್ರೌನ್ ಅಷ್ಟಪತ್ರ; ಪುಟಗಳು iii+೧೭೮; ಬೆಲೆ, ರೂ. ೧-೮-೦.

ವೀರಶೈವ ಮತಪ್ರಚಾರವೆಲ್ಲ ಕನ್ನಡದಲ್ಲಿ ಬಹುಮಟ್ಟಿಗೆ ವಚನಕಾರರಿಂದ ನೆರವೇರಿದ ಸಂಗತಿಯೂ, ಆ ಮೂಲಕ ಕನ್ನಡ ಸಾಹಿತ್ಯಕ್ಕೆ ಆಗಿರುವ ಸೇವೆಯೂ ಸರ್ವರಿಗೂ ತಿಳಿದ ವಿಷಯವೇ ಆಗಿದೆ. ಜನಪ್ರಿಯವಾದ ಕೀರ್ತನೆಯ ಮಾರ್ಗದಲ್ಲಿಯೂ ಸ್ವಲ್ಪ ಕೆಲಸ ನಡೆದಿದೆಯೆಂಬುದಕ್ಕೆ ಶ್ರೀ ಘನಮಠ ಶಿವಯೋಗಿಗಳಿಂದ ರಚಿತವಾದ ಈ ತತ್ವಪದಗಳೂ ಒಂದು ನಿದರ್ಶನ. ನಿಜಗುಣ ಶಿವಯೋಗಿಗಳೂ, ಮುಪ್ಪಿನ ಷಡಕ್ಷರಿಯೂ ಈ ಸಾಹಿತ್ಯಪ್ರಕಾರದಲ್ಲಿ ಈಗಾಗಲೇ ಮಾಡಿರುವ ಕಾರ್ಯವನ್ನು ಮರೆಯುವಂತಿಲ್ಲ.

ಶ್ರೀ ಘನಮಠ ಶಿವಯೋಗಿಗಳ ಜೀವನ ಪರಿಚಯವನ್ನು ಸಂಪಾದಕರು ಅವರ ಕೃತಿಗಳ ಆಧಾರದ ಮೇಲೆ ರೇಖಿಸಿರುತ್ತಾರೆ. ಇವರು ನೂತನ ಪುರಾತನರ ಗಣದಲ್ಲಿ ಸೇರತಕ್ಕ ಒಬ್ಬ ಶಿವಶರಣರು. ಕ್ರಿ.ಶ. ೧೯ನೆಯ ಶತಮಾನದಲ್ಲಿ ಬಾಳಿ, ಬದುಕಿ, ಶಿವೈಕ್ಯರಾದ ಶಿವಭಕ್ತರಲ್ಲೊಬ್ಬರು.

ಈ ಸಂಕಲನದಲ್ಲಿ ಒಟ್ಟು ನೂರ ನಲ್ವತ್ತೆಂಟು ಕೀರ್ತನೆಗಳಿವೆ. ಈ ಕೀರ್ತನೆಗಳೆಲ್ಲವೂ ಗುರು ಲಿಂಗ ಜಂಗಮರ ಮಾಹಾತ್ಮ್ಯವನ್ನು ಸಾರಿ ಒತ್ತಿ ಹೇಳುತ್ತವೆ. ಶಿವಯೋಗಿಗಳು ಹೇಗೆ ಶಿವಭಕ್ತಿ, ಶಿವಜ್ಞಾನ, ಶಿವಾನುಭವ, ಶಿವಾಚಾರಗಳನ್ನು ಪ್ರಚಾರಮಾಡಿದರೆಂಬುದನ್ನು ವರ್ಣಿಸಿ ಹೇಳುತ್ತವೆ. ಘನಮಠ ಶಿವಯೋಗಿಗಳು ಮಾಡಿರುವ ಬಸವಸ್ತುತಿ ಅಚ್ಚುಮೆಚ್ಚಾಗಿದೆ. ಬಸವೇಶ್ವರರು ಅವರಿಗೆ ಗುರುಸಮಾನ. ಭಕ್ತಿಸರ್ವಸ್ವವೇ ಮೂರ್ತಿವೆತ್ತಂತಿದ್ದ ಆತನ ಅನನ್ಯ ಶಿವಭಕ್ತಿಯ ಹಿರಿಮೆಯನ್ನೂ ಶಿವಯೋಗಿಗಳು "ಬಸವ ಮಹಿಮಾ ತ್ರಿವಿಧಿ" ಎಂಬ ಕೃತಿಯಲ್ಲಿ ಹಲವು ಬಗೆಯಾಗಿ ನಿರೂಪಿಸಿರುತ್ತಾರೆ. ಇಲ್ಲಿರುವ ಒಟ್ಟು ನೂರು ತ್ರಿವಿಧಿಗಳಲ್ಲಿ, ಒಂದೊಂದೂ ಒಂದೊಂದು ವಿಧವಾಗಿ ಚೆನ್ನಾಗಿದೆ. ಅವುಗಳಲ್ಲಿನ ಕೆಲವು ಸಂಗತಿಗಳಿಗೂ, ಬಸವಣ್ಣನವರನ್ನು ಕುರಿತ ಇತರ ಗ್ರಂಥಗಳಲ್ಲಿ ಕಂಡುಬರುವ ಕೆಲವು ಸಂಗತಿಗಳಿಗೂ ಸಾಮ್ಯವಿದೆ. ಸಂಪಾದಕರು ಈ ಸಾಮ್ಯಗಳನ್ನು ಪಟ್ಟಿಮಾಡಿ ತೋರಿಸಬಹುದಾಗಿತ್ತು. ಅದರಿಂದ ಗ್ರಂಥ ಮತ್ತು ಗ್ರಂಥಕರ್ತರ ಕಾಲನಿರ್ಣಯಕ್ಕೆ ತಕ್ಕಮಟ್ಟಿಗೆ ಸಹಕಾರವಾಗುತ್ತಿತ್ತು. ಸಂಶೋಧನೆ ಪರಿಷ್ಕರಣಗಳ ಕಾರ್ಯವೂ ಸಮರ್ಪಕವಾಗುತ್ತಿತ್ತು. ಬಸವೇಶ್ವರನನ್ನು ಕುರಿತು ರಚಿಸಿರುವ "ಬಸವೇಶ್ವರನ ಜೋಗುಳ ಪದ" "ಎಣ್ಣೆ ಹಚ್ಚುವ ಪದ" "ಶೋಭಾನದ ಹಾಡು" ಎಂಬುವು ಹೆಣ್ಣು

ಮಕ್ಕಳ ಕಾಯಕದೃಷ್ಟಿಯಿಂದ ಹೇಗೆ ಹರಭಕ್ತನ ಸೇವೆ ಸಲ್ಲಬಲ್ಲುದೆಂಬುದಕ್ಕೆ ಒಳ್ಳೆಯ ನಿದರ್ಶನಗಳಾಗಿವೆ. ಚೆನ್ನಬಸವಣ್ಣ, ಅಲ್ಲಮ, ಸಿದ್ಧರಾಮ, ತೋಂಟದ ಸಿದ್ಧಲಿಂಗ, ರೇವಣ ಸಿದ್ಧೇಶ್ವರ, ಪಂಡಿತಾರಾಧ್ಯರನ್ನು ಕುರಿತು ಒಂದೊಂದು ಕೀರ್ತನೆಗಳುಂಟು. ಬಸವಾದಿ ಪುರಾತನರನ್ನೂ ಶರಣಸತಿಯರನ್ನೂ ಕುರಿತು ರಚಿಸಿರುವ ಭಾಮಿನೀಷಟ್ಪದಿಗಳು ಕೇವಲ ಭಕ್ತಿಯ ದೃಷ್ಟಿಯಿಂದಲ್ಲದೆ, ಐತಿಹಾಸಿಕ ದೃಷ್ಟಿಯಿಂದಲೂ ಮುಖ್ಯವಾಗಿವೆ.

ದಾಸರ ಕೀರ್ತನೆಗಳಿಗೂ ಶಿವಯೋಗಿಗಳ ಕೃತಿಗಳಿಗೂ ಹೋಲಿಕೆಯುಂಟೆ ಎಂಬುದನ್ನು ಸಂಗ್ರಹವಾಗಿ ವಿಚಾರಮಾಡಬಹುದು. ರೂಪ, ರಚನೆ, ವಿಷಯ, ವಿಧಾನಗಳಲ್ಲಿ ಎರಡಕ್ಕೂ ಸಾಮ್ಯವಿರುವುದು ಸ್ವವಿದಿತವಾಗುತ್ತದೆ. ಇಲ್ಲಿನ ಯಾವ ಕೃತಿಗೂ, ರಾಗ, ತಾಳಗಳ ಹೆಸರನ್ನು ಸೂಚಿಸಿಲ್ಲ. (೫೨ನೆಯ ಪದಕ್ಕೆ ಮಾತ್ರ ರಾಗ: ಶಂಕರಾಭರಣ; ತಾಳ: ಆದಿ ಎಂದು ಇದೆ). ಈ ಬಗ್ಗೆ, ಸಂಪಾದಕರೂ ತಮ್ಮ ಪ್ರಸ್ತಾವನೆಯಲ್ಲಿ ಏನನ್ನೂ ಹೇಳಿಲ್ಲ. ದಾಸರ ಪದಗಳಲ್ಲಿಯಾದರೋ ಎಲ್ಲಕ್ಕೂ ರಾಗ ತಾಳಗಳನ್ನು ಸೂಚಿಸಿದ್ದರು ಸಹ, ಕೆಲವು ಕಡೆಗಳಲ್ಲಿ ಭಿನ್ನಪಾಠಗಳು ಕಂಡು ಬರುತ್ತವೆ. ಆದ್ದರಿಂದ, ಕೀರ್ತನಕಾರರಿಗೆ ಸಂಗೀತಜ್ಞಾನ ಪರಿಚಯವಿದ್ದಿತೆ ಇಲ್ಲವೆ ಎಂಬುದನ್ನು ನಾವು ಬೇರೆ ಸಾಧನಗಳಿದ್ದಲ್ಲಿ ಆ ಮೂಲಕ ತಿಳಿಯಬೇಕಾಗಿದೆ. ಶಿವಯೋಗಿಗಳ ಕೀರ್ತನೆಗಳಿಗೆ, ರಾಗ, ತಾಳಗಳನ್ನು ಎಲ್ಲಿಯಾದರೂ ಸೂಚಿಸಿರುವುದುಂಟೆ; ಹಾಗೆ ಇಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು; ಮೊದಲಾದವುಗಳನ್ನು ಕುರಿತು ಸಂಪಾದಕರು ನಾಲ್ಕು ಮಾತುಗಳನ್ನು ಬರೆದಿದ್ದರೆ ಚೆನ್ನಾಗಿತ್ತು. ಶಿವಯೋಗಿಗಳು ಬಳಸಿರುವ ಭಾಷೆ ಬಹುಮಟ್ಟಿಗೆ ಹೊಸಗನ್ನಡವೆಂದು ಹೇಳಬಹುದು. ದಾಸರ ಪದಗಳಲ್ಲಿ ಕಂಡುಬರುವ ನಡುಗನ್ನಡದ ರೂಪಗಳಾವುವೂ ಇಲ್ಲಿ ಕಂಡುಬರುವುದಿಲ್ಲ. ರಚನೆ ಬಹುಮಟ್ಟಿಗೆ ಚೊಕ್ಕವಾಗಿದೆ. ಎಷ್ಟೋ ಕಡೆ ಪಾಂಡಿತ್ಯದ ಪ್ರಭಾವವೂ ಸಹ ಕಂಡುಬರುತ್ತದೆ. ಮಾತುಗಳಲ್ಲಿ ಒಮ್ಮೊಮ್ಮೆ ಬಹು ದೀರ್ಘವಾದ ಸಮಾಸಗಳೂ, ಸಂಸ್ಕೃತ ಪದಗಳೂ ಹೆಣೆದುಕೊಂಡು ಬಂದಿವೆ. (ಉದಾ. ಪದ ೮೬.)

ವಿಷಯ ನಿರೂಪಣೆಯಲ್ಲಿಯಾದರೋ, ಶಿವಯೋಗಿಗಳ ಪದಗಳಲ್ಲಿ ಹೆಚ್ಚು ವೈವಿಧ್ಯವಿಲ್ಲ. ಕಾವ್ಯವಾಣಿಯೂ ಕಡಮೆಯೆಂದೇ ಹೇಳಬೇಕು. ಜನಸಾಮಾನ್ಯರಲ್ಲಿ ಬಳಕೆಯಲ್ಲಿರುವ ನಾಣ್ಣುಡಿಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸುವುದರಲ್ಲಿ ಶಿವಯೋಗಿಗಳ ಕೈ ಚೆನ್ನಾಗಿ ಪಳಗಿದೆಯೆಂದು ಹೇಳಬಹುದು. "ಬಾಲೆಗಿಡವ ಕಡಿದು ಕಳ್ಳಿಗೆ ಬೇಲಿಯಿಕ್ಕುವಸಂತೆ ಪ್ರಮಥರ| ಮೇಲೆ ಭಕ್ತಿಯುಕ್ತ ಕರ್ಮಜಾಲಕ್ಕೆಡೆಯಾಡುವನೆ ಹೆಡ್ಡ‖" (೯೬-೧೨); "ಕುರಿಯ ಬಗಲೊಳಿಟ್ಟು ಜಗದೊಳ್

ಕುರುಬ ಹುಡುಕುವನಂತೆ" (೯೬-೧೫); "ಸತ್ತವರ ಕುಣಿಗೈದಿ ಸುತ್ತಿ ಸುತ್ತಿ ನಮಗಾಯುಷ್ಯ ಭಾಗ್ಯ| ವಿತ್ತು ಪೊರೆವುದೆಂದು ಜಗದೊಳರ್ಥಿಯಲ್ಲಿ ಬೇಡುವನೆ ಹೆಡ್ಡ (೯೬-೧೮)" ಎಂಬ ಹೋಲಿಕೆಗಳು ನಿತ್ಯಜೀವನಕ್ಕೆ ಸಂಬಂಧಪಟ್ಟ ಸಂದರ್ಭಗಳಾದ್ದರಿಂದ ಇವು ಯಾರ ಮನಸ್ಸನ್ನಾದರೂ ಸೆಳೆಯಬಲ್ಲವು, ಡಂಭಾಚಾರ, ಬೂಟಾಟಿಕೆ ಮೊದಲಾದವನ್ನು ಖಂಡಿಸುವುದಕ್ಕಾಗಲಿ, ಜಡರನ್ನು ಬಡಿದೆಬ್ಬಿಸುವಂತೆ ಬಿರುನುಡಿಗಳನ್ನಾಡುವುದಕ್ಕಾಗಲಿ ಶಿವಯೋಗಿಗಳು ಹಿಂದೆಗೆಯುವುದಿಲ್ಲ.

ಶಿವಯೋಗಿಗಳಿಗೆ ವಚನಸಾಹಿತ್ಯ ಕರತಲಾಮಲಕವಾಗಿತ್ತು ಎನ್ನುವುದಕ್ಕೂ ಅವುಗಳನ್ನು ಹೇಗೆ ಅವರು ತಮ್ಮ ಕೀರ್ತನೆಗಳಲ್ಲಿ ಬಳಸಿದ್ದಾರೆಯೆಂಬುದಕ್ಕೂ, ಹಲವಾರು ಉದಾಹರಣೆಗಳನ್ನು ಕೊಡಬಹುದು.

ಈ ಇಡಿ ಸಂಗ್ರಹದಲ್ಲಿ ಅನ್ಯಮತ ದೂಷಣೆಯಾಗಲಿ, ಅವಹೇಳನವಾಗಲಿ ಎಲ್ಲಿಯೂ ಕಂಡುಬರುವುದಿಲ್ಲ. ಇದು ಶಿವಯೋಗಿಗಳ ದೊಡ್ಡ ಗುಣಕ್ಕೆ ದೊಡ್ಡ ಗುರುತು.

ಸಂಪಾದಕರಾದ ಪ್ರೊ. ಸಂ. ಶಿ. ಭೂಸನೂರಮಠ, ಎಂ.ಎ., ಅವರು ಈ ಗ್ರಂಥಕ್ಕೆ ವಿಚಾರಪರಿಪ್ಲುತವಾದ ಪ್ರಸ್ತಾವನೆಯನ್ನು ಬರೆದಿರುತ್ತಾರೆ. ಕವಿಯ ವಿಷಯವಾಗಿಯೂ, ಆತನೇ ಬರೆದಿರಬಹುದೆಂದು ಭಾವಿಸಿರುವ ಇತರ ಗ್ರಂಥಗಳ ವಿಚಾರವಾಗಿಯೂ ಅನೇಕ ಸಂಗತಿಗಳನ್ನು ಶೇಖರಿಸಿ, ಸಂಶೋಧಿಸಿ, ವಿವೇಚನೆ ಮಾಡಿರುತ್ತಾರೆ. ಶಿವಭಕ್ತರೊಬ್ಬರ ಹೃದಯಾಂತರಾಳದಲ್ಲಿ ತೆರೆತೆರೆಯಾಗಿ ಎದ್ದ ಹರಭಕ್ತಿಯ ಮಂಥನದಿಂದ ಉಂಟಾದ ಭಾವಗಳನ್ನು ಇಲ್ಲಿ ನಿರೂಪಿಸಿದೆಯೆಂದು ಹೇಳುವುದರಲ್ಲಿ ಯಾವ ಸಂಶಯವೂ ಇಲ್ಲ.

ಜಿ. ವರದರಾಜಾರಾವ್.

***

೮. ಶಿವನ ಸೋಲು (ಗೀತಾನಾಟಕ)—ಬರೆದವರು: ಶ್ರೀ "ಅಮರವಾಣಿ"; ಪ್ರಕಾಶಕರು: ಕಾವ್ಯ ಕಲಾ ಸಂಘ, ಬೆಂಗಳೂರು; ಕ್ರೌನ್ ೧/೮, XIII+೬೧; ಬೆಲೆ, ೧೩ ಆಣೆ.

ಇದು ಪೌರಾಣಿಕ ವೃತ್ತಾಂತವುಳ್ಳ ಒಂದು ನಾಟಕ. ಪಾರ್ವತಿಯ ಪರಿಣಯ ಇದರ ವಸ್ತು. ಈ ವಸ್ತುವನ್ನು ಬಳಸಿಕೊಂಡು ಕಾಳಿದಾಸನು "ಕುಮಾರ ಸಂಭವ"ವನ್ನೂ, ಹರಿಹರನು "ಗಿರಿಜಾ ಕಲ್ಯಾಣ"ವನ್ನೂ ಬರೆದಿರುತ್ತಾರೆ. ಆ ಪ್ರಾಚೀನ ಕವಿಗಳ ದೃಷ್ಟಿ ಬೇರೆ; ಇಂದಿನ ಕವಿಗಳ ದೃಷ್ಟಿ ಬೇರೆ. ಕಾಳಿದಾಸನ ಲಕ್ಷ್ಯವೆಲ್ಲ ಕುಮಾರ ಜನನದ ಕಡೆಗಿದ್ದರೆ, ಹರಿಹರನ ಗಮನ ಗಿರಿಜೆಯ ಪರಿಣಯದ ಕಡೆಗಿದೆ. ಪ್ರಸ್ತುತ ಕೃತಿಯ ದೃಷ್ಟಿಯೂ, ಬಹುಮಟ್ಟಿಗೆ ಗಿರಿಜೆಯ ವಿವಾಹವನ್ನೇ

ಅವಲಂಬಿಸಿದ್ದರೂ ಒಟ್ಟು ಪ್ರಸಂಗವನ್ನು ಶಿವನ ದೃಷ್ಟಿಯಿಂದ ವಿಚಾರಮಾಡಿ, ಇಡಿ ಸಂದರ್ಭವನ್ನು "ಶಿವನ ಸೋಲು" ಎಂದು ಲೇಖಕರು ಕರೆದಿರುತ್ತಾರೆ. ಮನ್ಮಥನ ಹೂಬಾಣಕ್ಕೆ ಕಿಡಿಕಿಡಿಯಾದ ಶಿವನೇ, ಕಡೆಗೆ ಪಾರ್ವತಿಯಲ್ಲಿ ಅನುರಕ್ತ ನಾಗಿ ಆಕೆಯನ್ನು ವರಿಸುವುದೇ ಈ ಕಥಾನಕದ ಸ್ವಾರಸ್ಯ. ಪಾರ್ವತಿಯ ತಪಸ್ಸಿಗೂ, ಅಚಲ ಭಕ್ತಿಗೂ ಸೋತ ಶಿವನ ವೃತ್ತಾಂತವೇ ಈ ಕೃತಿಯ ತಿರುಳು.

ವಸ್ತುವನ್ನು ಮಾತ್ರ ಗಮನಿಸಿದರೆ, ಒಟ್ಟು ಸನ್ನಿವೇಶದಲ್ಲಿ ಕಂಡುಬರುವ ಪ್ರಧಾನ ಪಾತ್ರಗಳು ನಾಲ್ವರು. ಹರ-ಪಾರ್ವತಿಯರು ಒಂದು ಕಡೆ ; ಮದನ ರತಿಯರು ಒಂದು ಕಡೆ. ಹರ-ಪಾರ್ವತಿಯರ ಪ್ರೇಮ, ಮದನ-ರತಿಯರ ಪ್ರೇಮದ ಆಹುತಿ ಯಲ್ಲಿ ಜಾಜ್ವಲ್ಯಮಾನವಾಗುತ್ತದೆ. ದೇವತೆಗಳ ಕಲ್ಯಾಣಕ್ಕಾಗಿ ತನ್ನ ಜೀವವನ್ನೇ ಮುಡಿಪಿಟ್ಟ ಮದನನ ಚಿತ್ರ ; ತಪೋಬಲದಲ್ಲಿ ಮದನನನ್ನು ಬೂದಿ ಮಾಡಿ ತರುವಾಯ ಪಶ್ಚಾತ್ತಾಪಪಟ್ಟು, ಪ್ರೇಮಪರವಶನಾದ ಪರಮೇಶ್ವರನ ಪಾತ್ರ ; ಪ್ರಪಂಚದ ಕ್ಷೇಮಲಾಭಕ್ಕಾಗಿ, ಘೋರ ತಪಸ್ಸನ್ನು ಕೈಕೊಂಡು ಈಶ್ವರನನ್ನು ಮನಮೆಚ್ಚಿಸಿದ ಪಾರ್ವತಿಯ ಮೇಲ್ಮೆ, ಕ್ಷಣಕಾಲವೂ ಮನದನ್ನನನ್ನು ಅಗಲಿರಲಾರದ ರತಿಗೆ ಒದಗಿದ ವಿರಹ, ಇವೇ ಇಲ್ಲಿನ ಮುಖ್ಯ ಚಿತ್ರಗಳು.

ಇಷ್ಟು ವಿಷಯಗಳನ್ನು, ಲೇಖಕರು ಒಟ್ಟು ಹನ್ನೆರಡು ದೃಶ್ಯಗಳಲ್ಲಿ ನಿರೂಪಿಸಿರು ತ್ತಾರೆ. ನಾಟಕದಲ್ಲಿ, ಹತ್ತೊಂಬತ್ತಕ್ಕೆ ಮೀರಿ ಪಾತ್ರಗಳಿವೆ. ಸಂವಿಧಾನ ದೃಷ್ಟಿ ಯಿಂದ ವಿಚಾರಮಾಡಿ ನೋಡಿದರೆ, ನಾಟಕವು, ಮಿತಿಮೀರಿ ಬೆಳೆದಿದೆಯೆನ್ನಬೇಕು. ಯಾವ ನಾಟಕವಾದರೂ ತನ್ನ ಗುರಿಯನ್ನು ಸಾಧಿಸಬೇಕಾದರೆ, ವಸ್ತುವಿನ ಪ್ರಾರಂಭ, ಉತ್ಕರ್ಷ ಮುಕ್ತಾಯಗಳು ಪರಿಣಾಮಕಾರಿಯಾಗಿರಬೇಕು. ಪ್ರಧಾನ ಪಾತ್ರಗಳ ಪುಷ್ಟಿಗಾಗಿ ಗೌಣ ಪಾತ್ರಗಳನ್ನು ರಚಿಸಬೇಕಾದುದು ಕವಿಯ ಕರ್ತವ್ಯ. ಈ ಬಗೆಯ ವಸ್ತು ಸನ್ನಿವೇಶಗಳ ರಚನೆಗಳು ಸಮರ್ಪಕವಾಗಿಲ್ಲದಿದ್ದರೆ, ಕೃತಿಯ ರಸಾನುಭವಕ್ಕೂ, ಘನತೆಗೂ ಕುಂದುಂಟಾಗಿ ನಾಟಕದ ಗುರಿಯನ್ನು ಸಾಧಿಸ ದಂತಾಗುವುದಿಲ್ಲ. ಇಲ್ಲಿಯೋ, ಕೇವಲ ಗೌಣ ಪಾತ್ರಗಳನ್ನೊಳಗೊಂಡ ದೃಶ್ಯಗಳು ಸ್ವಲ್ಪ ಹೆಚ್ಚೇ. ಗ್ರಂಥಕರ್ತರ ದೃಷ್ಟಿ, ಶಿವನ ತಪೋಭಂಗ, ಪಾರ್ವತಿಯ ಕಾರ್ಯ ಸಾಫಲ್ಯ, ರತಿಯ ಮನೋರಥ ಸಿದ್ಧಿ, ಇವುಗಳ ಕಡೆಗೆ ಹೆಚ್ಚಾಗಿದ್ದು, ಕುಮಾರನ ಜನನವನ್ನು ಕೇವಲ ಸೂಕ್ಷ್ಮವಾಗಿ ಸೂಚಿಸಿಬಿಟ್ಟಿದ್ದರೆ, ವಸ್ತುವಿನಲ್ಲಿ ರಸೈಕ್ಯ ವುಂಟಾಗುತ್ತಿತ್ತು.

ಪಾತ್ರಗಳ ಸ್ವಭಾವನಿರೂಪಣೆಯಲ್ಲಿ, ಗಿರಿಜೆಯ ಪಾತ್ರ ತಕ್ಕಮಟ್ಟಿಗೆ ಸ್ಫುಟ ವಾಗಿದೆ. ಆಕೆಯ ದೃಢಭಕ್ತಿ ಮತ್ತು ಉಗ್ರ ತಪಶ್ಚರ್ಯೆಗಳು ಮನರಂಜಕವಾಗುವಂತೆ

ಚಿತ್ರಿತವಾಗಿವೆ. ಶಿವನ ಮನಸ್ಸಿನಲ್ಲಿ ಉಂಟಾದ ಆಂದೋಲನ, ಆತನ ನಿಯಮ ಸಂಯಮಗಳ ಪರಾಭವ, ಮೊದಲಾದವು ಚೆನ್ನಾಗಿ ನಿರೂಪಿತವಾಗಿವೆ. ರತಿ, ಮನ್ಮಥರ ಗುಣಶೀಲಗಳು ಮಾತ್ರ, ಸಾಕಾದಷ್ಟು ಸ್ಪಷ್ಟವಾಗಿ ಒಡಮೂಡಿಲ್ಲ. ಗೌಣ ಪಾತ್ರಗಳಲ್ಲಿ ವೈಶಿಷ್ಟ್ಯವೇನೂ ಕಾಣದು.

ಬಳಸಿರುವ ಭಾಷೆ, ಅನುಸರಿಸಿರುವ ಧಾಟಿಗಳನ್ನು ಕುರಿತು ನಾಲ್ಕು ಮಾತು ಹೇಳಬಹುದು. ಲೇಖಕರ ಶೈಲಿ ಸರಳವಾಗಿದೆ, ಲಲಿತವಾಗಿದೆ. ಸ್ವಾಭಾವಿಕವಾದ ಮಾತುಗಳು ಬೆರೆತು ತಕ್ಕಮಟ್ಟಿಗೆ ಹಿತವಾಗಿದೆ. ಒಮ್ಮೊಮ್ಮೆ ಉದಾ. "ಅಳಿಹೆದೆ" "ಏಕೆನಿತು" "ಪೆಳಗಿಸು" (ಬೆಳಗಿಸು ಎಂಬ ಅರ್ಥದಲ್ಲಿ), "ತೂರಾಯಿ" "ಪತಿ ಮರಣದಳ್ಕುರಿ" "ಕಾರಿನೊಳು" "ಚಂದ್ರಮಾನ ಮಂದಿರ" "ತೊರೆದಲೆ" (ಗಂಗಾಧರ) "ಸುಂದರ ಸುತರು" (ಒಳ್ಳೆಯ ಗಿಡ ಎಂಬ ಅರ್ಥದಲ್ಲಿ) "ವಿಪ್ರಿಯ" (ಅಪ್ರಿಯ ?) "ಗೃಹಿಗಳು" ಎಂಬ ಮಾತುಗಳು ಸಂದಿಗ್ಧ ; ಅಸಾಧು ಉಪಮಾನಗಳಲ್ಲಿ ಹಲವು ಶತಮಾನಗಳ ಬಳಕೆಯಲ್ಲಿ ಸವೆದ ಶಕ್ತಿಯವು. ಆಧುನಿಕ ಮನೋಭಾವದ ಹೋಲಿಕೆಗಳು ಕಡಮೆ.

ಇಡಿ ಕೃತಿಯನ್ನು ಲೇಖಕರು ಸರಳ ರಗಳೆಯಲ್ಲಿ ಬರೆದಿರುತ್ತಾರೆ.

ಶ್ರೀ "ಅಮರವಾಣಿ" ಯವರಾದರೋ ಸರಳರಗಳೆಯ ಲಕ್ಷಣಗಳನ್ನು ಚೆನ್ನಾಗಿ ಪಾಲಿಸಿರುತ್ತಾರೆ. ಅವರ ವಾಕ್ಸಂಪತ್ತು, ವಾಕ್ಸರಣಿಗಳು ಮೆಚ್ಚತಕ್ಕವು. ಆದರೆ, ಕಾವ್ಯದ ಮಟ್ಟವನ್ನು ಮುಟ್ಟುವ ಉತ್ಕೃಷ್ಟವಾದ ಸಂಭಾಷಣೆಯನ್ನಾಗಲಿ, ಪಾತ್ರಗಳ ಗುಣಾವಗುಣಗಳನ್ನು ಸ್ಪಷ್ಟಗೊಳಿಸುವ ಸನ್ನಿವೇಶವನ್ನಾಗಲಿ ಈ ಕೃತಿಯಲ್ಲಿ ಕಾಣುವುದು ಸ್ವಲ್ಪ ಪ್ರಯಾಸವೇ ಸರಿ. ಛಂದಸ್ಸಿನಲ್ಲಿ ವೈವಿಧ್ಯ ಕಡಮೆ. ಕೆಲವು ಕಡೆಗಳಲ್ಲಿ ನಾಟಕದ ಓಟವೂ ಮಂದವಾಗುತ್ತದೆ.

ಇದನ್ನು ಗೀತಾನಾಟಕವೆಂದು ಲೇಖಕರು ಕರೆದಿರುವುದರಲ್ಲಿ ಔಚಿತ್ಯವೇನೂ ಕಂಡುಬರುವುದಿಲ್ಲ. ನಾಟಕ ರಚನೆಯಲ್ಲಿ, ಪದ್ಯದ ಧಾಟಿಯನ್ನು ಬಳಸಿರುವ ಮಾತ್ರಕ್ಕೆ ಕೃತಿ ಕೇವಲ ಕಾವ್ಯವಾಗಬೇಕೆಂಬ ನಿಯಮವಿಲ್ಲ. ಹಾಗೂ ಕೇವಲ ಗೀತಾನಾಟಕವೆಂದು ಇತ್ತೀಚಿಗೆ ಕೆಲವು ನಾಟಕಗಳು ಕನ್ನಡದಲ್ಲಿ ರಚಿತವಾಗಿವೆ. ಶ್ರೀ. ಶಿವರಾಮ ಕಾರಂತರ, "ಮುಕ್ತದ್ವಾರ", ಶ್ರೀ. ಪು. ತಿ. ನರಸಿಂಹಾಚಾರ್ಯರ "ಅಹಲ್ಯೆ" 'ಶ್ರೀ' ಅವರ ಗ್ರೀಕ್ ನಾಟಕದ ಅನುವಾದಗಳು ಇವಕ್ಕೆ ಉದಾಹರಣೆಗಳು. ಈ ಕೃತಿಗಳ ವೈಶಿಷ್ಟ್ಯವೇ ಬೇರೆ, ಸರಳರಗಳೆಯ ನಾಟಕಗಳ ವೈಶಿಷ್ಟ್ಯವೇ ಬೇರೆ.

"ಅಮರವಾಣಿ"ಯವರ ಪುಸ್ತಕಕ್ಕೆ ಶ್ರೀ ಅ. ನ. ಕೃಷ್ಣರಾಯರು ವಿಚಾರ ಪರಿಪ್ಲುತವಾದ ಮುನ್ನುಡಿಯನ್ನು ಬರೆದುಕೊಟ್ಟಿರುತ್ತಾರೆ. ಅವರು ತಮ್ಮ

ಮುನ್ನುಡಿಯಲ್ಲಿ ಸೂಚಿಸಿರುವಂತೆ, "ಶಿವನ ಸೋಲು" ನಾಟಕ ವಸ್ತುವಿನಲ್ಲಿ ಉದಾತ್ತ ಧ್ಯೇಯವೂ ಉಚ್ಚ ವಿಚಾರವೂ ಕಂಡುಬರುತ್ತವೆ. ಆಧುನಿಕ ದೃಷ್ಟಿಯೂ, ಆಧುನಿಕ ಧಾಟಿಯೂ ಹದವರಿತು ಬೆರೆತು ಬಂದಿವೆ. ಈ ಎಲ್ಲ ಗುಣಗಳೊಂದಿಗೆ, ಕೃತಿಯ ಕಥಾಸಂವಿಧಾನದಲ್ಲಿ ಮತ್ತು ಪಾತ್ರ ರಚನೆಗಳಲ್ಲಿ ಮತ್ತಷ್ಟು ಪುಷ್ಟಿಯೂ, ಸಮಷ್ಟಿದೃಷ್ಟಿಯೂ ಕೂಡಿದ್ದರೆ ಒಟ್ಟು ಕೃತಿಗೆ ಇನ್ನೂ ಹೆಚ್ಚು ಕಳೆಯುಂಟಾಗುತ್ತಿತ್ತು.

ಜಿ. ವರದರಾಜರಾವ್.

ಸಂಪಾದಕೀಯ

ಮುಂದಿನ ತಿಂಗಳು ಕಡೆಯ ವಾರದಲ್ಲಿ, ಮದರಾಸು ಪಟ್ಟಣದಲ್ಲಿ ಕನ್ನಡಸಾಹಿತ್ಯ ಪರಿಷತ್ತಿನ ೨೧ನೆಯ ಸಮ್ಮೇಳನ ನಡೆಯಲಿದೆ. ಕನ್ನಡನಾಡಿನ ಬೇರೆಬೇರೆ ಭಾಗ ಗಳವರು ಸಂಭ್ರಮದಲ್ಲಿ ಸೇರಿ ನಾಡಿನ ಹಿತಕ್ಕೆ ಸಂಬಂಧಿಸಿದ ಆಲೋಚನೆಗಳನ್ನು ಅಲ್ಲಿ ಮಾಡುವವರಾಗಿದ್ದಾರೆ. ಮದರಾಸು ದೊಡ್ಡಪಟ್ಟಣ. ಅದನ್ನು ಕನ್ನಡಪಟ್ಟಣ ವೆಂದು ಕರೆಯುವುದು ಶಕ್ಯವಿಲ್ಲವಾದರೂ ಕನ್ನಡಜನ ಬಹುಮಂದಿ ಅಲ್ಲಿ ವಾಸವಾಗಿ ದ್ದಾರೆ. ಅದು ಯಾವ ಆಧಿಪತ್ಯದ ಮುಖ್ಯಪಟ್ಟಣವೋ ಆ ಪ್ರಾಂತಾಧಿಪತ್ಯದಲ್ಲಿ ಕನ್ನಡ ಜಿಲ್ಲೆಗಳೆರಡು ಮೂರಿವೆ. ಕನ್ನಡ ಪ್ರಾಂತವೊಂದು ನಿರ್ಮಾಣವಾಗ ಬೇಕಾಗಿರುವ ಇನ್ನು ಮುಂದಿನ ಕಾಲಗಳಲ್ಲಿ ಇಂಥ ಪ್ರಾಂತಪಟ್ಟಣಗಳಲ್ಲಿ ಅಧಿಕಾರಿ ಗಳ ಮತ್ತು ಜನವರ್ಗದವರ ಕಣ್ಣಿಗೆ ಕನ್ನಡದ ಕೆಲಸ ಬೀಳಬೇಕು. ಕನ್ನಡಿಗರ ಮಾತಿನಲ್ಲಿಯೂ, ಆಶೋತ್ತರಗಳಲ್ಲಿಯೂ, ಕೇಳಿಕೆಗಳಲ್ಲಿಯೂ ಹುರುಳು ಹುರುಡು ಇವೆಯೆಂದು ಅವರಿಗೆ ಗೊತ್ತಾಗಬೇಕು. ಹಿಂದೆ ಮುಂಬಯಿ ಪಟ್ಟಣದಲ್ಲಿ ಸಮ್ಮೇಳನ ನಡೆದದ್ದು ಇದರ ನಿದರ್ಶನವಾಗಿಯೇ, ಇದರ ಸಲುವಾಗಿಯೇ. ಅಂದು ಅಲ್ಲಿ ಮಾನ್ಯರಾದ ಕೀ. ಶೇ. ರಾಜಕಾರ್ಯಪ್ರವೀಣ ಎನ್. ಎಸ್. ಸುಬ್ಬರಾಯರವರು ಅಧ್ಯಕ್ಷರಾಗಿದ್ದರು. ಮದರಾಸಿನಲ್ಲಿ ನಡೆಯಲಿರುವ ಸಮ್ಮೇಳನಕ್ಕೆ ನಾಡಿನ ಮಾನ್ಯ ರಾದ ಶ್ರೀ ಟಿ. ಪಿ. ಕೈಲಾಸಂ ಅವರು ಅಧ್ಯಕ್ಷರಾಗುತ್ತಾರೆ. ಅವರಿಬ್ಬರೂ ತಮ್ಮವಾದ ಒಂದೊಂದು ಬೇರೆ ರೀತಿಯಲ್ಲಿ ಸಮಾನಸತ್ವರು. ಬಹುಶಃ ಒಂದೇ ಕಾಲದಲ್ಲಿ ಕಾಲೇಜು ಗಳಲ್ಲಿ ವ್ಯಾಸಂಗಮಾಡಿದವರು. ಕೈಲಾಸಂ ಅವರ ಮುಂದಾಳ್ತನದಲ್ಲಿ ಈ ಸಲದ ಕನ್ನಡ ಉತ್ಸವ ಬಹುಮುಖವಾದ ಸಂಪನ್ನತೆಯಿಂದ ನಡೆಯುವುದೆಂಬುದರಲ್ಲಿ ಸಂದೇಹವಿಲ್ಲ.

ಕೈಲಾಸಂ ಅವರು ವಿಶೇಷ ವ್ಯಕ್ತಿ. ಅವರು ಹುಟ್ಟು ತಮಿಳರು. ಮದರಾಸಿನಲ್ಲಿ ಕೀರ್ತಿಪಡೆದ ಮೇಧಾವಿಗಳೂ ಹೈಕೋರ್ಟು ನ್ಯಾಯಾಧೀಶರೂ ಆಗಿ ಬೆಳಗಿದವರು ಅವರ ಹಿರಿಯರು. ಅವರ ತಂದೆಯವರು ಅತಿಶಯ ಮೇಧಾವಿಗಳೂ ಮೈಸೂರು ಚೀಫ್ ಕೋರ್ಟಿನ ನ್ಯಾಯಾಧೀಶರೂ ಆಗಿದ್ದ ಜಸ್ಟಿಸ್ ಟಿ. ಪರಮಶಿವ ಅಯ್ಯರ್ ಅವರು. ಅವರ ಮನೆ ಹೀಗೆ ತಿಳಿವಳಿಕೆಗೂ ಪ್ರಭಾವಶೀಲತೆಗೂ ತವರು. ಅಂಥಲ್ಲಿ ಹುಟ್ಟಿ ಬೆಳೆದು ವಿಲಾಯಿತಿಗೆ ವ್ಯಾಸಂಗಕ್ಕೆ ಹೋಗಿ ಅಲ್ಲಿ ಬಹುಕಾಲವಿದ್ದು ಬಂದ ವರು ಕೈಲಾಸಂ. ಅಲ್ಲಿನ ವಿದ್ಯಾಶಾಲೆಗಳಲ್ಲಿಯೂ ಆಟದ ಮೈದಾನಗಳಲ್ಲಿಯೂ

ಸಾಮಾಜಿಕ ಗೋಷ್ಠಿಗಳಲ್ಲಿಯೂ ಅವಿಶ್ರಾಂತವಾಗಿ ಸೇರಿ ಅಲ್ಲಿನ ಕಾರ್ಯಗಳಲ್ಲಿ ತಮ್ಮ ಮನಸ್ಸನ್ನೂ ಅನುಭವ ಪ್ರಪಂಚವನ್ನೂ ವಿಸ್ತರಿಸಿಕೊಂಡಿರುವವರು. ಯಾವುದೋ ಒಂದು ರೀತಿ ಮಾತ್ರ ಬುದ್ಧಿ ಬೆಳೆದರೆ ಸಾಕೆಂದು ಅವರು ಎಂದಿಗೂ ತೃಪ್ತಿಪಟ್ಟವರಲ್ಲ. ಪಾದರಸದಂತೆ ಚಲಿಸುವ, ಬೆಳಗುವ ಅವರ ಮನಸ್ಸು ಅದರಂತೆಯೇ ಪ್ರಬಲವಾದ ಶೋಧಕ, ಮಾಪಕ ಸತ್ವ. ರಸಶಕ್ತಿ, ರಸಶುದ್ಧಿ ಎರಡೂ ಅವರ ಜೀವಾಂಶವಾದ ಗುಣಗಳು. ಅವರ ತಾಯ್ನುಡಿ ತಮಿಳಾದರೆ ವ್ಯಾಸಂಗದ ಭಾಷೆಗಳು ಇಂಗ್ಲಿಷ್ ಮತ್ತು ಸಂಸ್ಕೃತ; ಆದರೂ ತಾವು ಸಂಚರಿಸಿದ ನಾಡುಗಳಲ್ಲಿ ಜನರಾಡುವ ಅನೇಕ ಭಾಷೆಗಳ ಮರ್ಮವನ್ನೂ ಸ್ವರೂಪವನ್ನೂ ಅವರು ಬಲ್ಲರು. ಆ ಯಾವುದರಲ್ಲಿಯೂ ಧಾರಾಳವಹಿಸಿ ಮಾತನಾಡಬಲ್ಲ ಭಾರತೀಯರಲ್ಲಿ ಅವರ ಸ್ಥಾನ ಹಿರಿದು. ಇತರ ದ್ರಾವಿಡ ಭಾಷೆಗಳ ಮೇಲೆಯೂ ಹಿಂದುಸ್ತಾನಿಯ ಮೇಲೆಯೂ ಅವರ ಅಧಿಕಾರ ಉಂಟು. ಆದುದರಿಂದಲೇ ಒಂದು ವಿಶೇಷ ಬಗೆಯ ತುಂಬು, ಜೀವಕಳೆ ಅವರ ಮಾತಿನಲ್ಲಿರುತ್ತವೆ; ಬಗೆಬಗೆಯ ಮಾತಿನ ಜನರನ್ನು ಅವರು ತಮ್ಮ ಗ್ರಂಥಗಳಲ್ಲಿ ಬೆರಸಿ ಆಡಿಸಬಲ್ಲವರಾಗಿರುವುದು.

ಕನ್ನಡನಾಡಿಗೆ ಹಿಂದಿರುಗಿ ಇಲ್ಲಿ ನೆಲಸಿದ ಕಾರಣದಿಂದ ಅವರು ನಮ್ಮ ನುಡಿಸೇವೆ ನಮ್ಮ ಜನತೆಯ ಸೇವೆ ಮಾಡಲು ಶಕ್ಯವಾಯಿತು. ಅದು ಕನ್ನಡಿಗರ ಪುಣ್ಯ. ಅವರು ಮದರಾಸಿಗೋ ತಿರುವಾಂಕೂರಿಗೋ ಬೊಂಬಾಯಿಗೋ ಹೋಗಿ ನೆಲಸಿದ್ದರೆ ಫಲಿತಾಂಶ ಬೇರೆಯಾಗುತ್ತಿತ್ತು. ಕನ್ನಡ ಸಾಹಿತ್ಯದ ಅದೃಷ್ಟವನ್ನು ನಡಸುವ ಮಹಾಶಕ್ತಿ ಯಾವುದೋ ನಮ್ಮ ಮೇಲೆ ಕೃಪೆಮಾಡಿ ಅವರನ್ನು ನಮ್ಮಲ್ಲಿ ಬಳಸಿತು. ಆದುದರಿಂದಲೇ ಅವಿಚ್ಛಿನ್ನವಾಗಿ ಈ ೨೦-೨೫ ವರ್ಷಗಳ ಪೂರ್ತ ಅವರ ಪ್ರಭಾವವು—ಅವರ ಮಾತಿನ, ಬರಹದ, ಆಟಪಾಟಗಳ ಪ್ರಭಾವವು—ಸಾಹಿತಿಗಳ ಮೇಲೆಯೂ ಕಲಿತ ಜನವರ್ಗದ ಮೇಲೆಯೂ ಬಿದ್ದಿವೆ. ಅವಕ್ಕೆ ಹೊಸ ಧಾತುವೊಂದನ್ನು ಸೇರಿಸಿವೆ.

ಮಹಾಕವಿ ರಬೀಂದ್ರನಾಥ ಠಾಕೂರರು ಬೆಂಗಳೂರಿಗೆ ಬಂದ ೧೯೧೯ರ ಸಮಯದಲ್ಲಿ ಸುಮಾರು ಇವರ ಶಕ್ತಿ ಜನರ ಕಣ್ಣಿಗೆ ಬಿದ್ದಿತು; ಗಮಕ, ಭಾಷಣ, ವಿನೋದವಿಹಾರ, ಸಂಭಾಷಣೆ, ಇಂಗ್ಲಿಷ್ ಕನ್ನಡ ನಾಟಕಗಳಲ್ಲಿ ಪಾತ್ರಸಾಧನೆ—ಈ ಎಲ್ಲದರಲ್ಲಿಯೂ ಅವರ ಹೆಸರು ಮುಂದೆ ಬಂತು; ಅವರ ವಿಶಿಷ್ಟ ರೀತಿ ಜನಮನವನ್ನು ಆಕರ್ಷಿಸಿತು. ಅಂದಿನಿಂದ ಹಿಡಿದು ಅವರು ವೇದಿಕೆಗಳ ಮೇಲೂ, ರಂಗಸ್ಥಳದಿಂದಲೂ ಜನರ ಮನಸ್ಸಿಗೂ ಹೃದಯಕ್ಕೂ ತಣಿವು ನಲಿವು ತಿಳಿವುಗಳನ್ನು ಒದಗಿಸಿ ಉಪಕಾರ ಮಾಡಿದ್ದಾರೆ. ಅವರ ಸಂಭಾಷಣೆ, ಗೀತ, ನಾಟಕಗಳು ರಂಜಕವಾಗಿರು

ವುವಲ್ಲದೆ ತಮ್ಮವೇ ಆದ ವಿಶೇಷ ರೀತಿಯನ್ನು ಕನ್ನಡ ಲೋಕಕ್ಕೆ ಹೊಸದಾಗಿ ಕೊಟ್ಟಿವೆ. ಹಾಸ್ಯಸಂಮಿತಿ ಎಂದು ಶ್ರೀಮಾನ್ ಎಂ. ಆರ್. ಕೃಷ್ಣಶಾಸ್ತ್ರಿಗಳವರು ಕರೆದ ಒಂದು ನೂತನ ರೀತಿ ಅವರಿಂದ ಆರಂಭವಾಗಿದೆ. ಸಮಾಜ ಜೀವನಕ್ಕೆ ಕನ್ನಡಿ ಹಿಡಿದು ಅದರ ವಿಕಾರಗಳೂ ಲೋಪದೋಷಗಳೂ ಅದಕ್ಕೇ ವಿನೋದಕರವಾಗಿ ಕಾಣುವಂತೆ ಅಲ್ಲಿನ ಆ ವೈರೂಪ್ಯಗಳು ಅದಕ್ಕೆ ತಿಳಿದು ಅವನ್ನು ತಿದ್ದಿಕೊಳ್ಳುವ ಪ್ರವೃತ್ತಿ ಉಂಟಾಯಿತು. ಅವರ ಕೃತಿಗಳು ಹೀಗೆ ಸಮಾಜಸಂಸ್ಕಾರಕ ಸತ್ವವಾಗಿವೆ.

ಅವರ ಕಣ್ಣು ಬಹು ವಿಸ್ತಾರವಾದ ಲೋಕವನ್ನು ಕಾಣಬಲ್ಲುದು; ಬಹು ಆಳವಾಗಿ ನೋಡಿ, ನೋಡಿದ್ದರ ಒಳಗನ್ನು ಬೆಳಗಬಲ್ಲುದು. ಮನಸ್ಸಿನ ಮರ್ಮಗಳನ್ನು ಅಳೆದು, ಬಿಡಿಸಿ ತೋರಿಸಬಲ್ಲುದು; ಮೃದುಹೃದಯದ ವಿಮರ್ಶೆಯನ್ನು ಮಾಡಿ ಸಂಗತಿಗಳಿಗೂ, ಸಂಸ್ಥೆಗಳಿಗೂ, ವ್ಯಕ್ತಿ ರೀತಿಗಳಿಗೂ ಬೆಲೆ ಕಟ್ಟಬಲ್ಲುದು; ನಕ್ಕು ನಗಿಸುವ, ನಗುವಿಂದ ನಯಗೊಳಿಸುವ, ಮೃದುಗೊಳಿಸುವ, ಲೋಕ ಕಾರುಣ್ಯ ವನ್ನೂ ಉದಾರವಾದ ನಡತೆಯನ್ನೂ ತೋರಿಸುವ ಅವರ ಸಾಹಿತ್ಯ ಮಾರ್ಗ ಒಂದು ಬಹು ದೊಡ್ಡ ಸಂಪ್ರದಾಯವನ್ನು ನಮಗೆ ತಂದುಕೊಟ್ಟಿದೆ. ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ಒಂದು ಕ್ರಾಂತಿಯನ್ನೇ ಉಂಟುಮಾಡಿದೆ.

ಆ ರೀತಿ, ಆ ತಂತ್ರ, ಆ ಸಂಭಾಷಣಾ ರಚನೆ, ಆ ದೃಷ್ಟಿ, ಆ ವಿಮರ್ಶೆ ಇವುಗಳ ಸ್ಫೂರ್ತಿಯಿಂದ ಹಲವು ಮಂದಿ ನಾಟಕಕಾರರು ನಮ್ಮಲ್ಲಿ ಹುಟ್ಟಿ ಮೇಲ್ತರದ ಸಾಹಿತ್ಯ ಕೃತಿಗಳನ್ನು ನಿರ್ಮಾಣಮಾಡುತ್ತಿದ್ದಾರೆ. ಹೀಗೆ ಒಂದು ಮಾರ್ಗದ ನಾಯ ಕರೂ ಪ್ರಚಾರಕರೂ ನಿರ್ಮಾತರೂ ಆಗಿರುವ ಮಾನ್ಯರು ಈ ಸಲ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದುದು ಕನ್ನಡಿಗರಿಗೆ ಸಂತೋಷದ ಸಂಗತಿ.

ಕನ್ನಡ ನಾಡು ಇದಕ್ಕಿಂತ ಹೆಚ್ಚು ಗೌರವವನ್ನು ಸದ್ಯಕ್ಕೆ ಯಾರಿಗೂ ತೋರಿಸ ಲಾರದು. ಇದು ಒಣಮರ್ಯಾದೆಯೆಂದು ಭಾವಿಸದೆ, ನಾಡಿನ ಮನಸ್ಸೆಲ್ಲ ಈ ರೀತಿ ಯಾಗಿ ಅವರಿಗೆ ಒಲಿಯುತ್ತಿರುವುದರ ಪ್ರಮಾಣವೆಂದು ಭಾವಿಸಿ ಅವರು ನಮ್ಮ ಸಂತೋಷದ ಕಾಣಿಕೆಯನ್ನು ಸ್ವೀಕರಿಸಬೇಕೆಂದೂ ಉತ್ಸವಗಳನ್ನು ನಡಸಿಕೊಡ ಬೇಕೆಂದೂ ಎಲ್ಲರೊಡನೆ ಪ್ರಬುದ್ಧ ಕರ್ಣಾಟಕವೂ ಬಯಸುತ್ತದೆ.

ಈ ವರ್ಷ ಅವರು ನಮ್ಮ ಸಾಹಿತ್ಯಲೋಕದ ಮೊದಲ ಪ್ರಜೆ. ಅವರಿಗೆ ನಮ್ಮ ವಂದನೆಗಳು, ಅಭಿನಂದನೆಗಳು. ಅವರ ಅಧ್ಯಕ್ಷತೆಯ ಅವಧಿಯಲ್ಲಿ ಕನ್ನಡದ ಕೆಲಸ ಅನಂತವಾಗಲಿ; ಕನ್ನಡದ ಕೀರ್ತಿ ಅತಿಶಯವಾಗಿ ಬೆಳಗಲಿ.

***

ಕಳೆದ ಅಕ್ಟೋಬರ್ ೨೦–೨೨ನೆಯ ತಾರೀಕುಗಳಲ್ಲಿ ಅಖಿಲಭಾರತ ಪೆನ್-P.E.N.–ಮೊದಲನೆಯ ಸಮ್ಮೇಳನ ಜಯಪುರದಲ್ಲಿ ನಡೆಯಿತು. ನಮ್ಮ ಸಂಸ್ಥಾನದಲ್ಲಿ ಮಾಸ್ಸ ದಿವಾನರಾಗಿದ್ದ ಸರ್ ಮಿರ್ಜಾ ಎಂ. ಇಸ್ಮೈಯಿಲ್ ಅವರು ಆ ಸಂಸ್ಥಾನದ ಪರವಾಗಿ ಎಲ್ಲ ಏರ್ಪಾಡುಗಳನ್ನೂ ಅತಿ ಸಮರ್ಪಕವಾಗಿ ಮಾಡಿಸಿ ಅತಿಥಿಗಳನ್ನು ಬಹು ಚೆನ್ನಾಗಿ ನೋಡಿಕೊಂಡರು. ಉತ್ಸವದ ಮೂರು ದಿನವೂ ಆರು ಹೊತ್ತು ಗೊತ್ತಾದ ಸಮಯಕ್ಕೆ ಇತರರಂತೆ ದಯಮಾಡಿಸಿ ಕಡೆಯವರೆಗೂ ಇದ್ದು ಹೋಗುತ್ತಿದ್ದರು. ಸಂಸ್ಥೆಯ ಅಧ್ಯಕ್ಷೆಯರಾದ ಶ್ರೀಮತಿ ಸರೋಜಿನೀ ನಾಯಿಡು ಅವರು ಸಮ್ಮೇಳನದ ಅಧ್ಯಕ್ಷೆಯರಾಗಿದ್ದರು. ಭಾರತೀಯಭಾಷೆಗಳಲ್ಲಿ ಹೊಸ ಸಾಹಿತ್ಯ ನಿರ್ಮಾಣಕಾರರೂ, ವಿಮರ್ಶಕರೂ, ಪ್ರಕಾಶಕರೂ ಆದ ಹಲವು ಮಂದಿ ಪ್ರತಿನಿಧಿಗಳು ಪ್ರತಿ ಪ್ರಾಂತದಿಂದಲೂ ಅಲ್ಲಿಗೆ ದಯಮಾಡಿಸಿದ್ದರು. ಸರ್ ಮಿರ್ಜಾ ಅವರ ಸ್ವಾಗತಭಾಷಣ, ಅಧ್ಯಕ್ಷ ಭಾಷಣ—ಇವುಗಳಿಂದ ಮೊದಲಾಗಿ ೨೨ರ ಸಂಜೆಯ ವರೆಗೂ ಬಹು ವಿಜೃಂಭಣೆಯಿಂದ ಉತ್ಸವ ನಡೆಯಿತು. ೧೬ ಭಾರತೀಯ ಭಾಷಾ ಸಾಹಿತ್ಯಗಳಲ್ಲಿ ನಡೆದಿರುವ ಸಾಹಿತ್ಯ ಪರಿಚಯವನ್ನು ವಿದ್ವಾಂಸರು ಮಾಡಿಕೊಟ್ಟರು. ಹೊಸ ಕನ್ನಡಸಾಹಿತ್ಯದ ಪರಿಚಯವನ್ನು ಪ್ರೊ. ವಿ. ಕೃ. ಗೋಕಾಕರು ಉಜ್ವಲವಾಗಿ ಮಾಡಿಕೊಟ್ಟರು. ಮಥಿತಾಂಶವೆಂದರೆ ಒಂದು : ಅದನ್ನು ಸಿಂಧೀ ಸಾಹಿತ್ಯದವರು ಹೀಗೆ ನುಡಿದರು : "ಈ ವರೆಗೆ ಕೇಳಿದ ಸಾಹಿತ್ಯಚರಿತ್ರೆಗಳನ್ನು ಅರಿತರೆ ನಮ್ಮದರ ಪರಿಚಯವೂ ಆಗುತ್ತದೆ; ಆ ಎಲ್ಲದರ ಸ್ವರೂಪವೂ, ಚರಿತ್ರೆಯೂ ಒಂದೇ ಬಗೆ: 'ಡಿಟ್ಟೋ'—'ತದ್ವತ್' ಎಂದರು. ಅದು ಅಲ್ಲಿ ಸೇರಿದ್ದ ಎಲ್ಲರಿಗೂ ವೇದ್ಯವಾದ ಸಂಗತಿ. ಸುಮಾರು ಪ್ರಾಂತಭಾಷೆಗಳಲ್ಲಿ ನಡೆದಿರುವ ಸಾಹಿತ್ಯ ನಿರ್ಮಾಣಕಾರ್ಯ, ಪ್ರಕಾರ, ರೀತಿ, ದೃಷ್ಟಿ ಎಲ್ಲ ಒಂದೇ ಬಗೆಯವಾಗಿವೆ. ಈ ಅಂಶದ ಸ್ಥಿರೀಕರಣವೋ ಎಂಬಂತೆ ಭಾರತವೀರ ಪಂಡಿತ್ ಶ್ರೀ ಜವಾಹರಲಾಲ್ ನೆಹ್ರು ಅವರು ಆರಂಭಮಾಡಿದ ಚರ್ಚೆಯ ಭಾಷಣದಲ್ಲಿ ಪ್ರಾಂತಸಾಹಿತ್ಯಗಳ ಬೆಳವಣಿಗೆಯು ಭರತಖಂಡದ ಐಕಮತ್ಯಕ್ಕೆ ವಿರೋಧವಲ್ಲ; ಸಾಧಕವಾಗಬಲ್ಲುದು—ಎಂಬುದು ಇಂಥ ನುಡಿಗಳ ಮುಡಿಮಣಿಯಾಯಿತು. ಡಾಕ್ಟರ್ ಕೆ. ಆರ್. ಶ್ರೀನಿವಾಸಯ್ಯಂಗಾರ್ಯರು ಪ್ರಾಂತ ಸಾಹಿತ್ಯಗಳಲ್ಲಿ ಭಾವ ಆಶಯಗಳ ಕ್ರಿಯೆಪ್ರತಿಕ್ರಿಯೆ ಮತ್ತು ಅವುಗಳ ಪರಿಚಲನೆ ಎಂಬ ವಿಷಯದಲ್ಲಿ ಚರ್ಚೆಯನ್ನು ಆರಂಭಿಸಿದರು. [ವಿಷಯ ದೊಡ್ಡದು. ಸಾಕಷ್ಟು ಜನ ವಿದ್ವಾಂಸರು ಯೋಚನೆಮಾಡಿ ಇವೊತ್ತು ಭರತಖಂಡದಲ್ಲಿ—ಭಾರತೀಯವಾದ ಆಶಯ ಭಾವ ಯಾವುವು? ಯಾವ ಬೌದ್ಧಿಕ ಆಧ್ಯಾತ್ಮಿಕ ಆವರಣದಲ್ಲಿ ಇವು ರೂಪುಗೊಳ್ಳಬೇಕಾಗಿದೆ, ಬೆಳೆಯಬೇಕಾಗಿದೆ? ಇವುಗಳ ಪರಿಚಲನೆಯ ವಿಧಾನ,

ರೀತಿ ಯಾವುವು? ಯಾವ ಫಲಪರಿಣಾಮಗಳನ್ನು ಹೇಗೆ ಸಾಧಿಸಬೇಕು ಎಂಬಂಶಗಳನ್ನು ಪರಿಶೀಲಿಸುವುದು ಒಳಿತು.] ಪ್ರಾಚ್ಯದೇಶಗಳಲ್ಲಿ ಭಾರತೀಯ ಸಂಸ್ಕೃತಿಯ ಪ್ರಚಾರ ಎಂಬುದನ್ನು ಕುರಿತು ಶ್ರೀಮತಿ ಡಾ. ಗುಪ್ತ ಅವರು ಸುದೀರ್ಘವಾದ, ವಿಷಯ ಸಾಕಲ್ಯದಿಂದಲೂ, ವಿದ್ವತ್ತಿನಿಂದಲೂ ಕೂಡಿದ ಭಾಷಣ ಮಾಡಿದರು. ಮುಖ್ಯ ಭಾಷಣಗಳಲ್ಲಿ ಡಾ. ಸರ್ ಎಸ್. ರಾಧಾಕೃಷ್ಣನ್ ಅವರು 'ಸಾಹಿತ್ಯದಲ್ಲಿ ಧಾರ್ಮಿಕ ದೃಷ್ಟಿ ಪ್ರಮಾಣಗಳು' ಎಂಬುದನ್ನು ಕುರಿತ ಭಾಷಣ ಉನ್ನತಾಶಯದಿಂದ ಕೂಡಿತ್ತು. ಆ ಮಹನೀಯರ ವರ್ಚಸ್ವಿತೆಯೂ, ಪಾಂಡಿತ್ಯ, ಶಕ್ತಿ, ಆತ್ಮವಿಶ್ವಾಸಗಳೂ ಅದರಲ್ಲಿ ತುಂಬಿದ್ದವು. ಉಪನಿಷತ್ತುಗಳಲ್ಲಿ ವರ್ಣಿತವಾದ ಜೀವದ ಪಂಚಪದಗಳನ್ನು (ಅನ್ನ, ಪ್ರಾಣ, ಮನ, ವಿಜ್ಞಾನ, ಆನಂದ) ವರ್ಣಿಸಿ ಅವಕ್ಕೆ ಅನುಗುಣವಾಗಿ ಅವನ್ನು ಹೊಮ್ಮಿಸುವ ಕೃತಿನಿರ್ಮಾಣ, ರಸಸಾಧನೆ ಆಗಬೇಕು. ಇಂದಿನ ಸಾಹಿತಿಗಳು ಆತ್ಮದ ಅಗತ್ಯಗಳ ಎತ್ತಿಗೆ ಏರಿ ಋಷಿಗಳಂತೆ ಜೀವನದ ದರ್ಶನವನ್ನು ಕೊಡುತ್ತಿಲ್ಲ; ಬಾಳನ್ನು, ಶುಚಿಮಾಡುತ್ತಿಲ್ಲ, ಪುಷ್ಟಿಗೊಳಿಸುತ್ತಿಲ್ಲ; ಅಷ್ಟೇ ಏಕೆ, ಬಹಳವೆಂದರೆ ಬೌದ್ಧಿಕ ವಿವೇಚನೆಗಳಲ್ಲಿ, ವಿಜ್ಞಾನದ ಮಟ್ಟಕ್ಕೆ ನಿಂತು ಕೃತಕಾರ್ಯರಾಗುತ್ತಿದ್ದಾರೆಯೇ ಹೊರತು ಆತ್ಮಸಾಧನೆಯ, ಮತ್ತು ಮಾನವನ ಮಹಾಮೂರ್ತಿತ್ವದ ರೂಪಣಕ್ಕೆ ಒದಗಿಲ್ಲ; ತಮ್ಮ ಹೊಣೆಗೆ ವಂಚನೆಮಾಡಿದ್ದಾರೆ ಎಂಬಂತೆ ನುಡಿದರು. ಮಾತು ಕಠಿಣವೆನ್ನಿಸಿದರೂ ಧರ್ಮಕ್ಕೂ ಸಾಹಿತ್ಯಕ್ಕೂ ಇರುವ ಸಂಬಂಧಗಳನ್ನು ವಿಶದಪಡಿಸಿ, ಧ್ಯೇಯಗಳನ್ನು ನಿರ್ದೇಶಿಸಿ ದೊಡ್ಡ ಉದ್ದೇಶದ ಮತ್ತು ಸಾಧನದ ಕಡೆ ಕಣ್ಣಿಡಬೇಕು ಶ್ರದ್ಧೆ ಹರಿಸಬೇಕು ಎಂದು ನುಡಿದ ಆ ಮಾತು ಹಿರಿದೇ ಸರಿ. ಉರ್ದು ಕವಿಗಳ ಇಂದಿನ ಪರಿಸ್ಥಿತಿ ಎಂಬುದನ್ನು ಕುರಿತು ಡೆಲ್ಲಿಯಲ್ಲಿನ A.I.R. ಸಂಚಾಲಕರೂ ವ್ಯವಸ್ಥಾಪಕರೂ ಆದ ಪ್ರೊ. ಬೊಖಾರಿಯವರೂ, ದೇಶೀಯ ಭಾಷೆಗಳಲ್ಲಿ ಬರೆಯುವರ ಮನಸ್ಸು ಮತ್ತು ವಿಶ್ವಾಸ ಎಂಬುದನ್ನು ಕುರಿತು ಶ್ರೀ ಮಾಸ್ತಿಯವರೂ ಚೆನ್ನಾಗಿ ಮಾತನಾಡಿದರು. ಶ್ರೀ ಇ. ಎಂ. ಫಾರ್ಸ್ಟರ್ ಅವರ ಭಾಷಣದಲ್ಲಿಯೂ ಒಂದು ಬಗೆಯಾಗಿ ರಾಧಾಕೃಷ್ಣನ್ ಅವರ ಮಾತಿಗೆ ಪೂರಕವಾಗಬಲ್ಲ ವಾದವಿತರಣೆಯೂ ಸ್ಥಿತಿನಿವೇದನೆಯೂ ಇದ್ದವೆನ್ನಬಹುದು. ಬೊಖಾರಿಯವರು ಇಂದಿನ ಮಾನಸಿಕ ಮತ್ತು ಲೋಕಪರಿಸ್ಥಿತಿ ಹೀಗೆ ಆವರಣ ಕಟ್ಟಿರುವಾಗ ಕೃತಿ ನಿರ್ಮಾತರ ಕಷ್ಟವೇನೆಂಬುದರ ಸ್ಥಿತಿಪರಿಚಯ ಮಾಡಿಕೊಟ್ಟರು. ಫಾರ್ಸ್ಟರ್ ಅವರು ಎರಡು ಮಹಾಯುದ್ಧಗಳ ನಡುವಣ ಕಾಲದಲ್ಲಿ ಇಂಗ್ಲಂಡಿನಲ್ಲಿ ನಡೆದಿರುವ ಸಾಹಿತ್ಯ ನಿರ್ಮಾಣ ಕಾರ್ಯವೇನೆಂಬುದನ್ನು ವಿವರಿಸುತ್ತ, ಮಹಾಕೃತಿಗಳೆನ್ನಬಹುದಾದ ಉದ್ದಾಮ ಗ್ರಂಥಗಳು ಹುಟ್ಟದಿದ್ದರೂ (!) ಹಾಗಾಗದಿರುವುದಕ್ಕೆ ಕಾರಣಗಳನ್ನು ಹೇಳಿ ಈ

ಪರಿಸ್ಥಿತಿಯಲ್ಲಿ ಇನ್ನೇನೂ ಹೆಚ್ಚಾಗಿ ಶಕ್ಯವಾಗಲಿಲ್ಲವೆಂದೂ, ಇದ್ದದ್ದರಲ್ಲಿ ಸಾಹಿತಿಗಳು ಸನ್ನಿವೇಶ ಅವಕಾಶಗಳನ್ನು ಪೂರ್ತಿಯಾಗಿ ಉಪಯೋಗಿಸಿಕೊಂಡಿದ್ದಾರೆ, ಮಾನ್ಯ ಕೃತಿಗಳನ್ನು ನಿರ್ಮಿಸಿಕೊಟ್ಟದ್ದಾರೆ ಎಂದು ಹೇಳಿದರು.[1]

ಹೀಗೆ ಬಹು ಮುಖವಾದ ಅಭಿಪ್ರಾಯ ವಿನಿಮಯ, ಪರಸ್ಪರ ಪರಿಚಯಗಳು ನಡೆದವು. ಭರತಖಂಡದ ಬೇರೆಬೇರೆ ಪ್ರಾಂತಗಳಲ್ಲಿ, ಪ್ರಾಂತಸಾಹಿತ್ಯ ರಂಗದಲ್ಲಿ ದುಡಿಯುವವರ ಕೆಳೆತನ ಹುಟ್ಟಿ ಬೆಳೆಯಲು ಅವಕಾಶ ದೊರೆತದ್ದು ಇದೇ ಮೊದಲ ಸಲ ವೆನ್ನಬೇಕು. ಇದಕ್ಕೆಲ್ಲ ಅಖಿಲ ಭಾರತ 'ಪೆನ್' ಸಂಸ್ಥೆಯ ಸಂಸ್ಥಾಪಕರಾದ ಶ್ರೀಮತಿ ಸೋಫಿಯಾ ವಾಡಿಯಾ ಅವರ ಕಾರ್ಯಶಕ್ತಿ, ವಿಚಕ್ಷಣೆ, ವಿನಯ, ಔದಾರ್ಯಗಳೇ ಕಾರಣ. ಅವರಿಗೆ ಸಾಹಿತಿಗಳ ಅನಂತ ವಂದನೆ ಸಲ್ಲತಕ್ಕದ್ದಿದೆ.

ಅದೇ ಸಮಯದಲ್ಲಿಯೇ ಸರ್ ಮೋರಿಸ್ ಗ್ವಯರ್ ಅವರು ಮಂಡಿಸ ಬೇಕಾಗಿದ್ದ ಒಂದು ಸೂಚನೆಯನ್ನು ಅವರು ಅಲ್ಲಿ ಇರಲಾಗದ ಪ್ರಯುಕ್ತ ಶ್ರೀ

---

[1] ಇಂಥ ಆಕ್ಷೇಪಣೆಯ ಸಂದರ್ಭದಲ್ಲಿ ಒಂದು ಮಾತನ್ನು ಆಡಬಹುದೇನೋ : ರಾಜಕೀಯ, ಆರ್ಥಿಕರಂಗ, ಸಮಾಜಹಿತಸಾಧನೆ, ಧಾರ್ಮಿಕ ಅಥವಾ ವಿಜ್ಞಾನ ಪ್ರಪಂಚ ಇವು ಯಾವುದರ ಮೇಲೂ ಇಲ್ಲದಸಲ್ಲದ ಹೊಣೆಗಾರಿಕೆ ಸಾಹಿತ್ಯಕಲೆಗಳ ಮೇಲೆ ಮಾತ್ರ ಏಕೆ ಹೊರಬೇಕು? ಆ ಅವರು ಯಾವ ಮಹಾಕೃತಿಗಳನ್ನು (Epics) ನಿರ್ಮಾಣಮಾಡಿ ಸಾಧನೆಯ ಸಾರಗಳನ್ನು ರಚಿಸಿದ್ದಾರೆ? ಜೀವನವೆಲ್ಲ ಒಂದು ತೊಳಲಿಗೆ ಸಿಕ್ಕಿ ದಿಕ್ಶೂನ್ಯವಾದಂತಿರುವ ಅಥವಾ ನೂರು ದಾರಿ ಕಾಣುತ್ತಿರುವ ಈ ಕಾಲದಲ್ಲಿ ಎಲ್ಲ ಸಂಪರ್ಕಗಳಿಗೂ ವಿಶಿಷ್ಟ ವಿಶಿಷ್ಟವಾಗಿ ಮಿಡಿಯುವ ಸಾಹಿತ್ಯ, ಕಲೆ ಸಮಗ್ರ ದೃಷ್ಟಿಯನ್ನು ಹೆಚ್ಚು ಸುಲಭವಾಗಿ ತೋರಬಲ್ಲುದೆ? ಜೀವನದ ಒಂದು ಸಮಗ್ರತೆ ಖಚಿತವಾಗಿ ರೂಪುಗೊಂಡು ನಿಲ್ಲುವವರೆಗೂ ಒಂದು ಉತ್ಕೃತಿ ನಿರ್ಮಾಣವಾಗಬಲ್ಲುದೆ? ಜೀವನಕ್ಕೆ ಇಂದು ಒಂದು ಗುರಿ, ಒಂದು ದೃಷ್ಟಿ, ಒಂದು ಶ್ರದ್ಧೆ ಇವೆಯೆ? ಯಾವೊಂದು ನಿಶ್ಚಯವೂ ಸಿದ್ಧಾಂತವೂ ದೊರೆಯದ ಕಾಲದಲ್ಲಿ ಆ ಕಾಲದ ಎಪಿಕ್ ಹೇಗೆ ಹುಟ್ಟೀತು? ಹಿಂದಿನ ಕಾಲಗಳ ಎಪಿಕ್ ರೀತಿ ಯನ್ನು ಅನುಸರಿಸಿ ಬರೆದ ಮಾತ್ರದಿಂದ ಅದು ಪ್ರಾಮಾಣಿಕವಾದ ಆಧುನಿಕ ಸತ್ವವಾಗಿ, ನಮ್ಮ ಕಾಲದ ಎಪಿಕ್ ಆದೀತೆ? —ಸಹಜವಾಗಿ, ಸ್ವಾಯತ್ತವಾಗಿ, ಸ್ವರಸತಯಾ? ಹಿಂದಿನಕಾಲದ ಎಪಿಕ್ ಪ್ರಕಾರ ಹುಟ್ಟಿದುದು ಒಂದೊಂದು ನಾಗರಿಕತೆ ಪೂರ್ತಿಯಾಗಿ ಪ್ರತಿಷ್ಠವಾಗಿ ಬೆಳಗಿದಾಗ; ವಿಜೃಂಭಿಸಿದ್ದಾಗ; ಆ ಸಮಗ್ರತೆಯ ಪ್ರತಿನಿಧಿ—ಪ್ರತಿಬಿಂಬವಾಗಿ; ಅದರ ಸ್ಮಾರಕವಾಗಿ. ಅವಿಶ್ವಾಸವೂ ನಿಶ್ಚಯವೂ ಇಲ್ಲದ ಕಾಲದಲ್ಲಿ ಯಾವ ಕವಿದರ್ಶನವೇ ಆಗಲಿ ಸುತ್ತಲ ಪ್ರಪಂಚವನ್ನು ತಾನೇ ತೋರಿಸಬಲ್ಲದು? ಅದರ ಮುಖಗಳನ್ನು ತಾನೇ ಚಿತ್ರಿಸೀತು? ವಿಮರ್ಶಿಸೀತು? ಸುತ್ತಲದೆಂದ ಮಾತ್ರಕ್ಕೆ ಅದರ ನಿರ್ಜೀವ ಅನುಕರಣ ಅಥವಾ ಫೋಟೋ ಅಲ್ಲ. ಸ್ಥಿತಿಚಿತ್ರವೆಂಬಲ್ಲಿಯೂ ಅಲ್ಲಿ ಒಳಗೆ ಅಡಗಿರುವ ಆಶೆ, ಆಕಾಂಕ್ಷೆ, ಗುರಿಮುಟ್ಟದ ಸೋಲು, ಧ್ಯೇಯದ ದೃಢ, ಭಂಗ ಈ ಎಲ್ಲವೂ ಪ್ರಕಾಶವಾಗಲಿರುತ್ತವೆಂಬುದನ್ನು ಯಾರೂ ಮರೆಯಬಾರದು. ಸಲ್ಲದ ಆಕ್ಷೇಪಣೆಗಳನ್ನು ಹೊರಿಸುವುದರಿಂದ ಸತ್ಯಸ್ವರೂಪ ಬೆಳಗದು.

ಮಿನು ಮಾಸಾನಿಯವರು ಮಂಡಿಸಿದರು. ಭರತಖಂಡದಲ್ಲೆಲ್ಲ ಸಾರ್ವತ್ರಿಕವಾಗಿ ವ್ಯಾಪಕವಾದ ಒಂದು 'ಕಾಪಿರೈಟ್' ಕಾನೂನು ಇರಬೇಕೆಂದೂ ಈಗಿನ ಅದರ ನ್ಯೂನತೆ, ಅವ್ಯಾಪ್ತಿ ಅತಿವ್ಯಾಪ್ತಿಗಳಿಂದ ಲೇಖಕರಿಗೂ ಪ್ರಕಾಶಕರಿಗೂ ಆಗುತ್ತಿರುವ ತೊಂದರೆ, ನಷ್ಟ ನಿಲ್ಲುವಂತಾಗಬೇಕೆಂದೂ ವಿವರಿಸಿದರು. ಅದನ್ನು ತಿದ್ದಿ ಸರಿಪಡಿಸಲು ಒಂದು ಸಲಹೆಯ ಮಂಡಲಿ ನಿಯಮಿತವಾಯಿತು. ಆ ನಾಲ್ವರು ಈ ಬಗ್ಗೆ ಅಂಶಗಳನ್ನು ಕ್ರೋಢೀಕರಿಸಿ ಸಲಹೆ ಕೊಟ್ಟಕೂಡಲೆ ಕಾನೂನು ಸರ್ವಸಮಾನ ವ್ಯಾಪಕತೆಯುಳ್ಳದ್ದಾಗುವಂತೆ ಮಾಡಲು ಕಾರ್ಯಕ್ರಮ ಕೈಕೊಳ್ಳಬಹುದೆಂದು ಸರ್ವಾನುಮತದಿಂದ ಅಂಗೀಕೃತವಾಯಿತು. ಬರ್ನಿನ ಇಂಟರ್‌ನ್ಯಾಷನಲ್ ಕನ್ವೆಂಷನ್‌ಗಳಿಗೆ ಅನುಗುಣವಾಗಿ ಇಲ್ಲಿನ ಕಾನೂನೂ ರಕ್ಷಣೆ ಪೋಷಣೆಗಳನ್ನು ಸಮವಾಗಿ ಹಂಚುವಂತಾದರೆ ಇಂದಿನ ಹಲವಾರು ತೊಂದರೆಗಳು ತಪ್ಪಿಯಾವು.

***

ಪ್ರಾಂತ ವಿಶ್ವವಿದ್ಯಾನಿಲಯಗಳಲ್ಲಿಯೂ ನಾಡಿನ ಎಲ್ಲ ಪ್ರೌಢ ವಿದ್ಯಾಶಾಲೆಗಳಲ್ಲಿಯೂ ಶಿಕ್ಷಣ ಮಾಧ್ಯಮ ಯಾವ ಭಾಷೆಯಾಗಬೇಕು ಎಂಬ ಚರ್ಚೆ ಬಹುವಾಗಿ ನಡೆದಿದೆ. ಭರತಖಂಡದ ಭಾಷಾ ಸಮಸ್ಯೆಯನ್ನು ಕುರಿತು ಈಗಾಗಲೆ ಬೇಕಾದಷ್ಟು ವಿಷಯ ಸಂಗ್ರಹಿಸಿಯೂ ಆಗಿದೆ; ಪ್ರಚಾರ ನಡೆದಿದೆ. ವಿಷಯದ ವ್ಯಾಪ್ತಿಗೂ ಜಟಿಲತೆಗಳಿಗೂ ಹೊಂದಿಕೊಂಡು ಭಾಷೆಗಳ ಸಮಸ್ಯೆ ನಾಲ್ಕು ಮಟ್ಟದಲ್ಲಿ ನೆಲಸಿದೆಯೆನ್ನಬಹುದು.

(೧) ಅಂತರ್‌ರಾಷ್ಟ್ರೀಯ ಸಂಪರ್ಕ ವ್ಯವಹಾರಗಳಿಗೆ ಸಂಬಂಧಿಸಿದಂತೆ ಯಾವ ಭಾಷೆ ಅಗತ್ಯ?

(೨) ಅಖಿಲಭಾರತ ಕಾರ್ಯಗಳಿಗೆ ಅನ್ವಯಿಸುವ ರಾಷ್ಟ್ರಭಾಷೆಯ ಪ್ರಶ್ನೆ—ಅದು ರಾಜಭಾಷೆ ಆದಾಗ ಹೇಗೆ ಆಗದಿರುವಾಗ ಹೇಗೆ? ಎಂಬಂಶ.

(೩) ಪ್ರಾಂತ ಭಾಷೆಗಳು, ಅವುಗಳ ಪರಸ್ಪರ ಸಂಬಂಧ; ಅವಕ್ಕೂ ರಾಷ್ಟ್ರಭಾಷೆಗೂ, ಈ ಎಲ್ಲಕ್ಕೂ ಅಂತರ್‌ರಾಷ್ಟ್ರೀಯ ಸಂಪರ್ಕದ ಭಾಷೆಗೂ ಇರಬೇಕಾದ ಸಂಬಂಧ.

(೪) ಪ್ರಾಂತ ಅಥವಾ ಪ್ರಾದೇಶಿಕ ಭಾಷೆಗಳಿಗೂ ತಾಯ್ನುಡಿಗೂ—ಈ ಎಲ್ಲಕ್ಕೂ ಆಯಾ ಜನವರ್ಗದ ಧರ್ಮಗ್ರಂಥ ಮತ್ತು ಪ್ರಾಚೀನ ಮೂಲಭಾಷೆಗಳಿಗೂ ಇರಬೇಕಾದ ಸಂಬಂಧ

—ಇದೂ ತನ್ನ ತೊಡಕನ್ನು ತಂದು ಸೇರಿಸುತ್ತಿದೆ.

ಇವನ್ನೆಲ್ಲ ಕುರಿತು ಉದ್ವೇಗವಿಲ್ಲದೆ, ನಾಡಿನ ಪರಮ ಪ್ರಯೋಜನ ಸಾಧನೆ ಮಾಡುವ ಅಗತ್ಯ ಈಗ ಅವಸರ. ಪೂರ್ವಗ್ರಹ, ವಿಶ್ವಾಸ, ಪಕ್ಷಪಾತ, ಲಾಭಸಂಭವ, ಸ್ಥಿತಿಸಂರಕ್ಷಣೆ ಇವುಗಳ ತಾಂಡವ ಬಲವಾಗಿರುವಲ್ಲಿ ಒಮ್ಮತ ಎಷ್ಟು ಕಷ್ಟವೆಂಬು ದನ್ನು ಊಹಿಸಿಕೊಳ್ಳಬಹುದು. ಆ ಎಲ್ಲವನ್ನು ಕುರಿತು ಏನನ್ನು ಹೇಳಲೂ ನಾವು ಇಲ್ಲಿ ಬಯಸುತ್ತಿಲ್ಲ. ಬಹುಮಟ್ಟಿಗೆ ಕೆಳತರಗತಿಗಳ ಶಿಕ್ಷಣಮಾಧ್ಯಮ ಆಯಾ ಪ್ರಾಂತ ಭಾಷೆಗಳಲ್ಲೆ ನಡೆಯತಕ್ಕದ್ದು ಸರಿ, ಹೆಚ್ಚು ಫಲಪ್ರದ ಎಂದು ನಂಬಿ ಆ ಬಗ್ಗೆ ಕಾರ್ಯಪ್ರಪಂಚ ಈಗಾಗಲೇ ಬಲಿತಿದೆ. ವಿಶ್ವವಿದ್ಯಾನಿಲಯದ ಶಿಕ್ಷಣ ಇಂಗ್ಲಿಷಿ ನಲ್ಲಾಗಬೇಕೊ? ರಾಷ್ಟ್ರಭಾಷೆಯಲ್ಲಿಯೊ? ಪ್ರಾಂತಭಾಷೆಯಲ್ಲಿಯೊ ಎಂಬುದರಲ್ಲಿ ನಿಂತಿದೆ ಈಗ ವಾದ. ಇಂಗ್ಲಿಷಿನಲ್ಲಿ ನಡೆದರೆ ಸುಲಭವಾಗುತ್ತದೆ; ಅಂತರ್‌ರಾಷ್ಟ್ರೀಯ ಸಂಪರ್ಕ ಸುಲಭ; ಪರಿಭಾಷೆ ಲೋಕಕ್ಕೆಲ್ಲ ಒಂದೇ ಆಗುತ್ತದೆ; ಈವರೆಗೆ ಆಗಿರುವ ಶಿಕ್ಷಣದ ಫಲವೆಲ್ಲ ಉಳಿಯುತ್ತದೆ. ಭಾರತೀಯ ಭಾಷೆಗಳಲ್ಲಿ ಪರಿಭಾಷೆ ಇನ್ನೂ ಹುಟ್ಟಿಲ್ಲ; ಬೆಳೆದಿಲ್ಲ; ತೊಡಕು ಹೆಚ್ಚಾಗುತ್ತದೆ; ಒಂದು ಪ್ರಾಂತಭಾಷೆಯಲ್ಲಿ ಶಿಕ್ಷಣ ಪಡೆದವರು ಭರತಖಂಡದ ಬೇರೆ ಕಡೆ ವಿದ್ಯೆಗೊ, ವ್ಯಾಪಾರಾದಿ ವೃತ್ತಿಗಳಿಗೊ, ಸ್ಪರ್ಧೆಗಳಿಗೊ ಹೋಗಿ ಜಯಶೀಲರಾಗಬೇಕಾದರೆ ಅಡಚಣೆ ಉಂಟಾಗುವುದು— ಇತ್ಯಾದಿ ವಾದಗಳು ಈ ಸಂಬಂಧದಲ್ಲಿ ಸಾಮಾನ್ಯವಾಗಿ ಹಬ್ಬಿರುವುವು.

ಕನ್ನಡದ ದೃಷ್ಟಿಯಿಂದ ಉತ್ತರವನ್ನು ಹೀಗೆ ಹೇಳಬಹುದು:

ಕನ್ನಡ ನಾಡಿನಲ್ಲಿ ಕನ್ನಡ ಬೋಧನೆಯ ಭಾಷೆಯಾಗುವುದು ಸಹಜ; ಕನ್ನಡಿಗ ರಲ್ಲಿ ಆಯಾ ಶಾಸ್ತ್ರಗಳನ್ನು ಅರಿತವರಿದ್ದಾರೆ. ಬೋಧನೆ ಅವರಿಗೆ ಶಕ್ಯ. ಈ ವರೆಗೆ ಕೆಲವು ಪುಸ್ತಕಗಳು ಬೇರೆ ಬೇರೆ ಶಾಸ್ತ್ರಗಳಲ್ಲಿ ಹುಟ್ಟಿವೆ; ಪರಿಭಾಷೆಯ ನಿರ್ಮಾಣ, ಪ್ರಯೋಗ ತಿಳಿದವರಿಗೆ ಒಪ್ಪುಗೆಯಾಗಬಹುದೆಂಬಂತೆ ನಡೆಯುತ್ತಿದೆ. ಆದುದರಿಂದ ವಿದ್ಯಾರ್ಥಿಗಳಿಗೆ ಪಾಠ ಹೇಳುವಾಗ, ಸಲಹೆ ಕೊಡುವಾಗ ಕನ್ನಡವನ್ನು ಬಳಸಬಹುದು. ಹಿಂದೆ ಇಂಗ್ಲಿಷಿನಲ್ಲಿ ಕಲಿತವರಿಗೆ ಹೊಸಮಾರ್ಗ ವಿಚಿತ್ರವಾಗಿ ಕಾಣುತ್ತಿದ್ದರೂ ವಿಷಯವನ್ನು ಹೊಸದಾಗಿ ಕಲಿಯುವವರಿಗೆ ಎರಡೂ 'ಸಹಜ'ವಾಗುವುವು; ಕೃತಕವಾದರೆ ಎರಡೂ ಕೃತಕವಾಗುವುವು. ಯಾವುದನ್ನು ಕಲಿಸಿದರೆ ಅದನ್ನು ಅವರು ಕಲಿವರಾದ್ದರಿಂದ ವಿಕೃತಿಯೇನೂ ಉಂಟಾಗದು. ವರ್ಣನಾ ಭಾಗ, ವಿವರಣ ಭಾಗ, ವಿಷಯ ಪ್ರತಿಪಾದನೆಯ ಭಾಗ ಇವು ಮಾತ್ರ ನಾವು ಕನ್ನಡದಲ್ಲಿ ಇರಬೇಕೆನ್ನುವುದು; ಗಣಿತವಾಗಲಿ, ಸಂಕೇತ ಪದಗಳಾಗಲಿ, ಸಮೀಕರಣಗಳೂ ಪರಿಭಾಷೆಯೂ ಆಗಲಿ ಅಂತರ್‌ರಾಷ್ಟ್ರೀಯವಾಗಿಯೇ ಉಳಿಯಲಿ. ಉದಾ.— ಇಂಗ್ಲಿಷರು Fe ಎಂಬ ಸಂಕೇತವನ್ನೊ Hg ಎಂಬುದನ್ನೊ NaCl ಎಂಬುದನ್ನೊ

ಉಪಯೋಗಿಸುತ್ತಾರೆ. ಒಂದಕ್ಕೆ ಐರನ್, ಕಬ್ಬಿಣ ಎಂಬ ಅರ್ಥದ ಮಾತಿದೆ; ಇನ್ನೊಂದಕ್ಕೆ ಮರ್ಕ್ಯುರಿ, ಕ್ವಿಕ್ ಸಿಲ್ವರ್ (ಪಾದರಸ), ಎಂಬ ಎರಡು ಪದಗಳಿವೆ; ಇನ್ನೊಂದಕ್ಕೆ ಕಾಮನ್ ಸಾಲ್ಟ್ (ಉಪ್ಪು) ಎಂಬುದಿದೆ. ಈ ಮಾತುಗಳನ್ನು ಬಳಸಿಕೊಂಡು ವಿಷಯ ವಿವರಣೆ ಇಂಗ್ಲಿಷಿನಲ್ಲಿ ಮಾಡುತ್ತಾರೆ. ಸಂಕೇತಗಳಾಗಿ ಯೂರೋಪಿಗೆಲ್ಲ ಸಾಧಾರಣವಾದ Fe, Hg, NaCl ಸದ್ಯ ಈಗ ಯಾವ ಐರೋಪ್ಯ ಮಾತುಗಳೂ ಅಲ್ಲದ ಪರಿಭಾಷೆಯ ಸಂಕೇತ ಪದಗಳನ್ನು ಉಪಯೋಗಿಸುತ್ತಾರೆ. ಅವಾವುವೂ ಇಂಗ್ಲಿಷಲ್ಲ. ಹಾಗೆಯೇ ಭರತಖಂಡದಲ್ಲಿಯೂ ನಡೆಯಬಹುದು. ಬಂಗಾರ, ಹೊನ್ನು, ಚಿನ್ನ ಒಂದು ಮಟ್ಟದ 'ದೇಶೀ' ಮಾತು; ಸ್ವರ್ಣ ಅಖಿಲ ಭಾರತೀಯ; ಗೋಲ್ಡ್ ಎಂಬುದು ಇಂಗ್ಲಿಷ್; ಅದಕ್ಕೆ ಶಾಸ್ತ್ರ ಪರಿಭಾಷೆ Ag. ಆಗಲಿ. ಕಲಿಯುವವರು ಸಂಕೇತವನ್ನು ಕಲಿಯುವರು, ಅರ್ಥ ದೇಶಭಾಷೆಯಲ್ಲಾಗುವುದು.

ಬೋಧಿಸುವವರಿಗೆ ವಿಷಯ ವಿಧೇಯವಾಗಿದ್ದರೆ ತಮ್ಮ ನಾಡಭಾಷೆಯಲ್ಲಿ ವಿವರಣೆ, ಬೋಧನೆ ಕಷ್ಟವಾಗಬಾರದು. ಆಗಲಾರದು. ಕನ್ನಡ ತಮ್ಮ ಭಾಷೆಯಲ್ಲದ, ನಾಡಭಾಷೆಗೆ ಸರ್ವಥಾ ಒಲಿಯದ, ಇತರ ಬಗೆಯ ದುರಾರಾಧ್ಯತೆ ಬಲಿಯುವ ಕಡೆಯಿಂದ ಮಾತ್ರ ಅಡ್ಡಿ ಬಂದೀತು. ಪುಸ್ತಕಗಳಿಲ್ಲವೆಂಬುದನ್ನು ಸರಕಾರದವರೊ ವಿಶ್ವವಿದ್ಯಾನಿಲಯದವರೊ ಮನಸ್ಸು ಮಾಡಿದರೆ, ಹಣವೊದಗಿಸಿದರೆ ಹತ್ತು ಮಂದಿ ಪ್ರತ್ಯಂಶದಲ್ಲಿಯೂ ನಾಮುಂದೆ ತಾಮುಂದೆ ಎಂದು ಬಂದು ಬರೆದುಕೊಡುತ್ತಾರೆ. ಆ ನ್ಯೂನತೆ ಎಂದಿಗೂ ದೊಡ್ಡದೇನಲ್ಲ. ಬರೆದ ಒಂದು ಗ್ರಂಥಕ್ಕೆ ಒಂದೆರಡು ಸಾವಿರ ರೂಪಾಯಿ ಸಂಭಾವನೆ ಕೊಟ್ಟರೆ ಯಾವ ಸರಕಾರದ ಅಥವಾ ವಿಶ್ವವಿದ್ಯಾನಿಲಯದ ಕೋಶವೂ ಬರಿದಾಗುವುದಿಲ್ಲ.

ಸ್ಪರ್ಧೆಗಳಲ್ಲಿ ತೇರಲೋ, ವೃತ್ತಿಗಳಲ್ಲಿ ಬದುಕಲೋ ಹೊರಗೆ ಹೋಗುವವರಿಗೆ ಅಡ್ಡಿ, ಲೋಪ ಎಂಬ ವಾದ:—ಅಂಥವರು ಅಖಿಲಭಾರತದ ಭಾಷೆಗಳನ್ನು ಕಲಿಯಲು ವಿದ್ಯಾಪದ್ಧತಿಯಲ್ಲಿ ಎಲ್ಲಕ್ಕೂ ಏರ್ಪಾಡು ಮಾಡಲಾದೀತೆ? ವ್ಯಾಪಾರಾದಿಗಳಿಗೆ ಹೋಗುವವರು ಜನರೊಡನೆ ಬೆರೆದು ಬಹುಬೇಗ ಆಯಾ ಭಾಷೆಗಳನ್ನು ಈಗಲೂ ಕಲಿಯುವರು. ಹಾಗೆ ಕಲಿಯುವುದೇ ಮೇಲು. ಅವಕಾಶಗಳನ್ನು ಹೆಚ್ಚು ಮಾಡುವುದು ಯಾವಾಗಲೂ ಶಕ್ಯವೇ. ಮತ್ತು ಇಂಗ್ಲಿಷ್ ಭಾಷೆ ಭರತಖಂಡದ ಎಲ್ಲ ಪ್ರಾಂತಗಳಲ್ಲಿಯೂ ಕಡ್ಡಾಯವಾದ ಎರಡನೆಯ ಭಾಷೆಯಾಗಿ ಉಳಿಸುವುದು ಅಗತ್ಯ; ಸರ್ವಥಾಶಕ್ಯ. ಅದರಲ್ಲಿ ಈಗಿನಂತೆಯೇ ೧೦೦ ಕ್ಕೆ ೪೦ ಅಂಕ ಪಡೆದ ಹೊರತು ಪರೀಕ್ಷೆಗಳಲ್ಲಿ ಪದವೀಧರರಾಗಲು ಅವಕಾಶವಿಲ್ಲವೆಂದರೆ ಆಯಿತು. ಭರತಖಂಡದಲ್ಲಿರುವ ಎಲ್ಲರಿಗೂ ಈ ಅಂಶದಲ್ಲಿ ಸಮಾನತೆ ದೊರಕುವಂತಾಗುವುದು. ಇಂಗ್ಲಿಷಿ

ನಲ್ಲಿಯೇ ವಿಶೇಷ ಪಾಂಡಿತ್ಯ ಪಡೆಯಬೇಕೆನ್ನುವವರಿಗೆ ಅದರ ಐಚ್ಛಿಕವ್ಯಾಸಂಗಾನುಕೂಲಗಳನ್ನು ಬೇಕುಬೇಕಾದಷ್ಟು ಏರ್ಪಡಿಸಬಹುದಲ್ಲ! ಹಾಗೆಯೇ ಫ್ರೆಂಚ್, ಜರ್ಮನ್, ರಷ್ಯನ್ ಮುಂತಾದವುಗಳಲ್ಲಿಯೂ ವ್ಯಾಸಂಕ್ಕೆ ಏರ್ಪಾಡು ಮಾಡಲವಕಾಶವುಂಟು. ಇಂದಿನ ಲೋಕವನ್ನು ಅರ್ಥಮಾಡಿಕೊಳ್ಳ ಬಯಸುವ ಜೀವಂತ ಜನ ಇದಕ್ಕೆಲ್ಲ ಹಿಂಜರಿಯಬಾರದು.

ವಿದ್ಯಾರ್ಥಿಗಳು ಕಲಿಯಬೇಕಾದ್ದು ಭಾಷೆಯಲ್ಲ: ಶಾಸ್ತ್ರವಿಷಯ. ಮುಖ್ಯವಾಗಿ ಈ ದೇಶದ ಜನಕ್ಕೆ ವಿಷಯಪರಿಜ್ಞಾನ ಆದಷ್ಟು ಸುಲಭವಾಗಿ, ಆದಷ್ಟು ಬೇಗ, ಅದಷ್ಟು ಸಹಜವಾಗಿ ಆಗಬೇಕಾಗಿದೆ. ಮಾಧ್ಯಮ ನಾಡನುಡಿಯಾದರೆ ಎರಡು ವರ್ಷದ ಶ್ರಮಫಲವನ್ನು ಒಂದು ವರ್ಷದ ಅದೇ ಪ್ರಯತ್ನದಿಂದ ಸಾಧಿಸಬಲ್ಲೆವು. ನಮ್ಮದಲ್ಲದ, ಎಂದಿಗೇ ಆಗಲಿ ಪೂರ್ತಿ ನಮ್ಮದಾಗದ, ೨೦ ವರ್ಷ ಪ್ರೀತಿಯ ವ್ಯಾಸಂಗ ನಡೆದಮೇಲೆ ಕೂಡ ಶ್ರದ್ಧಾಳುಗಳಿಗೂ ವಿಧೇಯವಾಗದೆ, ಶುಷ್ಕ ಪುಸ್ತಕದ ತೊಡಕಲು ಭಾಷೆಯಾಗಿ ಉಳಿಯುವ ಭಾಷೆಯ ಸಂಪಾದನೆಗಾಗಿ, ವಿದ್ಯಾರ್ಥಿಗಳ ಬದುಕನ್ನು ವ್ಯಯಮಾಡೆನ್ನುವುದು ಬಾಳಿನ ಅಪವ್ಯಯ. ಈ ಪೋಲು ತಪ್ಪುವುದು ಅಗತ್ಯ. ಈಗ ನಡೆಯುವ ರೀತಿ ಕೃತಕ, ಅಸಹಜ; ಹುಡುಗರ ಬುದ್ಧಿಶಕ್ತಿಯನ್ನು ಅಪವ್ಯಯ ಮಾಡುತ್ತಿದೆ ಸಂರಕ್ಷಿಸುತ್ತಿಲ್ಲ ಎಂಬುದನ್ನು ಮಾತ್ರ ಇಲ್ಲಿ ಸೂಚಿಸಿದೆ.

*
* *

ಪ್ರ. ಕ. ಕ್ಕೆ ಬರಹಗಳನ್ನು ಕಳುಹಿಸುತ್ತಿರುವ ಮಾನ್ಯ ಗೆಳೆಯರಿಗೆ ಒಂದು ಅರಿಕೆ. ದಯಮಾಡಿ ಅವರು ತಮ್ಮ ಬರಹದ ಒಂದು ಪ್ರತಿ ತಮ್ಮಲ್ಲೇ ಇರಿಸಿಕೊಂಡು ಇನ್ನೊಂದನ್ನು ನಮ್ಮಲ್ಲಿಗೆ ಕಳಿಸಿಕೊಡುವ ಉಪಕಾರ ಮಾಡಬೇಕು. ಅಂಚೆ ಚೀಟಿಯನ್ನು ಇಟ್ಟು ಅವುಗಳನ್ನು ಹಿಂದಕ್ಕೆ ಕಳಿಸಬೇಕೆಂದು ಯಾರೂ ಬೇಡಬಾರದು. ಸಂಪಾದಕರು ಪೂರ್ತಿ ಈ ಕೆಲಸಕ್ಕೇ ತಮ್ಮ ಸಮಯವನ್ನೆಲ್ಲ ವಿನಿಯೋಗಿಸಲಾಗಿಡುವಂತಿಲ್ಲ. ಸಂಪಾದಕ ಮಂಡಲಿಯ ಅಭಿಮತ ದೊರಕದೆ ಅಚ್ಚು ಮಾಡಲಾಗದಿರುವ ಪ್ರತಿ ಒಂದು ಲೇಖನಕ್ಕೂ ೨—೩ ಕಾಗದ ಬರೆಯುವ ಅಗತ್ಯ ಬೀಳದಂತೆ ಈ ನೆರವು ನೀಡಬೇಕೆಂದು ಬೇಡುತ್ತೇವೆ. ಅಚ್ಚಾದರೆ ಪ್ರ. ಕ. ದಲ್ಲಿ ಪ್ರಕಟವಾಗುವುದು. ಲೇಖಕರಿಗೆ ಪತ್ರಿಕೆಯ ಒಂದು ಪ್ರತಿ ಬರುವುದು. ಅಚ್ಚಾಗದುದನ್ನು ಆಗಲಿಲ್ಲವೆಂದು ಸುಲಭವಾಗಿ ಅರಿತುಕೊಳ್ಳಬಹುದು. ನಮ್ಮಿಂದ ಆ ಅರ್ಥಕ್ಕೆ ಪತ್ರ ತರಿಸಿಕೊಳ್ಳಬೇಕಾದ ಪ್ರಸಂಗ ಅನಿವಾರ್ಯವಾಗಕೂಡದೆಂದು ಹೇಳ ಬಯಸುತ್ತೇವೆ. ಈ ನಮ್ಮ ಪ್ರಾರ್ಥನೆ ದುಷ್ಟವಾದ್ದೇನೂ ಅಲ್ಲ. ಅದನ್ನು ದಯವಿಟ್ಟು ನಡಸಿಕೊಡಬೇಕೆಂದು ಮಾತ್ರ ವಿನಯದಿಂದ ಬೇಡುತ್ತೇವೆ.

Language XXI, 1. January—March, 1945

1. 'Grammatical Categories'—BENJAMIN LEE WHORF.
2. 'Linguistic Borrowing and Historical Evidence'—MYLES DILLON.
3. 'Tocharian Palatalization'—G. S. LANE.

(What are the original and what the secondary consonants). The affricates c [tś] and *ts*, the sibilants ś and ṣ, the nasal ñ and the lateral *ly* have in most instances at least arisen secondarily. Both c and ts arise from dentals which are normally reflected by Tocharian t; ṣ arises from s, and ś from Velars, labio Velars and Palatals which appear usually as k. ñ and ly reflect normal n and l.

Less agreement: that my and py bear a similar relationship to m and p or that y may be actually the palatalized form of w.

Caution: avoid use of forms from preterit, subjunctive and imperfect stems where palatalization seems to have acquired a functional significance.

Considers c, ts, ś and ṣ, ñ ly, my, py, y.

1. C a reflex of Toch t.
2. ts < dental.
3. ś—several origins. The most immediate . . . any of the various 1E gutturals, though apparently by chance, clear-cut examples of a few of these are lacking.

For the plain velars, little definite evidence. The Labio Velars are well attested.

1E k^w is clear for A śtwar, B śtwer (four)

: for ten = A. śäk

Explanation is assimilation-e.g. P1E * dek >

PToch. *tek — > *Kek — > *Sek.

In a number of forms, A ś is actually of a dental origin, but only as a secondary development of more original ts or perhaps c.

Most important here are the verbal forms which show parallel stems in ts and ś.

A third w origin of ś=original st—(normally B st—but A ṣt —)

4. Original s > ṣ.
5. n > ñ a following w does not seem to prevent change.
6. 1 > ly. occurs also in the verb.

Palatalization of 1 not prevented by intervening w or labials.

7. Mutation of labials more difficult:

Perhaps these two were subject at one time to similar changes of articulation.

Re: palatalization of initial labials, expected in certain verbal forms. Palatalization of stem-final m or p in some preterit forms, in dialect B.

8. Palatalization of w is even more complex.

'The Pitch Phonemes of English'—RULON S. WELLS.

Bulletin of the Deccan College R.I.—Vol, VI. 1-2 Dec. 1944.

'Historical Grammar of Old Kannada'—G. S. GAI, 8-9 and 10th Centuries.

(The work of descriptive and Historical Grammar made for the earlier centuries by Dr. A. N. Narasimhia is carried forward here.)

ಸಾದರ ಸ್ವೀಕಾರ

೧. **ನಗೆ** (ರಸವಿಮರ್ಶೆ)—ಶ್ರೀರಂಗ; ರಂಗಮಂಗಪ್ರಕಾಶನ, ಧಾರವಾಡ; ಕ್ರೌನ್ ಅ. ಪು. ೮೦ ; ಬೆಲೆ, ರೂ. ೧-೮-೦.

೨. **ಆಹ್ವಾನ** (ಕವನಸಂಗ್ರಹ)—ಶ್ರೀರಂಗ; ರಂಗಮಂಗಪ್ರಕಾಶನ, ಧಾರವಾಡ; ಕ್ರೌನ್ ಅ. ಪು. ೩೭ ; ಬೆಲೆ, ರೂ. ೧-೦-೦.

೩. **ಅರುವತ್ತೆರ ಒಸಗೆ**—ಶ್ರೀಮನ್ನಿರಂಜನ ಜಗದ್ಗುರು ಗುರುಸಿದ್ಧ ಪ್ರಭುದೇವರ ರನ್ನಮಹೋತ್ಸವ ಸವಿನೆನಪು, ನವಕಲ್ಯಾಣಮಠ, ಧಾರವಾಡ ; ಡೆಮಿ, ಅ. ಪು. ೪೩ ; ಬೆಲೆ, ರೂ. ೧-೦-೦.

೪. **ವೀರಶೈವ ದರ್ಶನ** (ಶ್ರೀ ಕುಮಾರಸ್ವಾಮಿಗಳ ಉಪನ್ಯಾಸಗಳ ಸಂಗ್ರಹ)—ಸಂಪಾದಕ: ವಿ. ಆರ್. ಕೊಪ್ಪಳ್, ಎಂ.ಎ., ಬಿ.ಟಿ, ಧಾರವಾಡ; ಬೆಲೆ, ರೂ. ೨-೮-೦.

೫. **ಭಾರತದ ವೀರ ಮಹಿಳೆಯರು**—ಸೌ. ಸರಸ್ವತಿ ದೇವಿಗೌಡರ; ಕ. ಚಾ. ರಾ. ಭಾ. ವಿ., ಹುಬ್ಬಳ್ಳಿ ; ಪು. ೧೨೮ ; ಬೆಲೆ, ರೂ. ೧-೮-೦.

೬. **ಶಿವನಸೋಲು** (ಗೀತನಾಟಕ)—ಅಮರವಾಣಿ; ಪ್ರಕಾಶಕರು, ಕಾವ್ಯಕಲಾ ಸಂಘ, ಬೆಂಗಳೂರು ನಗರ; ಕ್ರೌನ್ ಅ. ಪ. ೬೧ ; ಬೆಲೆ, ರೂ. ೦-೧೨-೦.

೭. **ರವೀಂದ್ರರ ಕಥೆಗಳು**—ಅನುವಾದಕರು : ಅ. ನಾರಾಯಣಸ್ವಾಮಿ ಅಯ್ಯರ್ ; ಪ್ರಕಾಶಕರು, ಸತ್ಯಶೋಧನ ಪುಸ್ತಕಭಂಡಾರ, ಕೋಟೆ, ಬೆಂಗಳೂರು ನಗರ; ಕ್ರೌನ್ ಅ. ಪ. ೧೦೪ ; ಬೆಲೆ, ರೂ. ೧-೦-೦.

೮. **ಶ್ರೀ ಘನಮಠ ಶಿವಯೋಗಿಗಳ ಭಕ್ತಿಸುಧಾಸಾರ**—ಸಂಪಾದಕರು : ಪ್ರೊ. ಸಂ. ಶಿ. ಭೂಸನೂರಮಠ, ಎಂ.ಎ.; ಪ್ರಕಾಶಕರು, ಶ್ರೀ. ಮ. ನಿ. ಪ್ರ. ಮೃತ್ಯುಂಜಯ ಸ್ವಾಮಿಗಳು, ಮುರುಘಾಮಠ; ಕ್ರೌನ್ ಅ. ಪು. ೧೪೨ ; ಬೆಲೆ, ರೂ. ೧-೮-೦.

೯. **ವೀರಶೈವ ವಾಙ್ಮಯ ವಿಸ್ತಾರ**—ಶರಣಸಾಹಿತ್ಯ ಗ್ರಂಥಮಾಲಾ ೧೦, ೧೯೪೫ ; ಪು. ೩೪ ; ಬೆಲೆ, ರೂ. ೧-೮-೦.

೧೦. **ಗಾಂಧೀಯೋಜನೆ**—ಶ್ರೀಮನ್ನಾರಾಯಣ ಅಗರವಾಲ್, ಎಂ.ಎ., ಎಫ್.ಆರ್. ಇ.ಎಸ್., ವರ್ಧಾ. ಮುನ್ನುಡಿ ಮಹಾತ್ಮಾ ಗಾಂಧೀಜಿ ; ಅನುವಾದಕರು : ಸಿದ್ದವನಹಳ್ಳಿ ಕೃಷ್ಣ ಶರ್ಮ ; ಕ್ರೌನ್ ಅ. ಪು. ೧೩೪ ; ಬೆಲೆ, ರೂ. ೧-೮-೦.

೧೧. **ಪ್ರಾಣಿಶಾಸ್ತ್ರ** (ಪ್ರಥಮಪರಿಚಯ)—ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ ೨೦ ; ಪ್ರಧಾನ ಸಂಪಾದಕ : ಪ್ರೊ. ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ., ಲೇಖಕರು : ಡಾ. ಎ. ಸುಬ್ಬರಾವ್, ಬಿ.ಎ., ಡಿ.ಎಸ್‌ಸಿ., (ಲಂಡನ್) ಮತ್ತು ಎ. ನಾರಾಯಣರಾವ್. ಎಂ.ಎಸ್‌ಸಿ.; ಬೆಲೆ, ಸಾದಾಪ್ರತಿ ರೂ. ೧-೮-೦ ; ಕ್ಯಾಲಿಕೊಪ್ರತಿ ರೂ. ೧-೧೨-೦.

೧೨. ಚಕಮಕಿ—ಬೇಂದ್ರೆ ಲಕ್ಷ್ಮಣರಾಯರು; ಪ್ರತಿಭಾ ಗ್ರಂಥಮಾಲೆ ನಂ. ೭; ಕ್ರೌನ್ ಅ. ಪು. ೧೪೪; ಬೆಲೆ, ರೂ. ೨-೦-೦.

೧೩. ವಿಶ್ವಕವಿ ರವೀಂದ್ರರು—ಎಲ್. ಎಸ್. ಶೇಷಗಿರಿರಾವ್, ಬೆಂಗಳೂರು; ಶ್ರೀ ಸಿ. ಕೆ. ವೆಂಕಟರಾಮಯ್ಯ ಎಂ.ಎ., ಎಲ್‌ಎಲ್.ಬಿ. ಅವರ ಮುನ್ನುಡಿಯೊಡನೆ ೨೧ ಪುಟಗಳು.

೧೪. ನನ್ನ ಗೀತೆಗಳು—ಗೀತಾಪ್ರಿಯ, ಪ್ರಕಾಶಕರು: ಸಾಧನ ಮುದ್ರಣಾಲಯ, ಧಾರವಾಡ; ಕ್ರೌನ್ ಅ. ಪು. ೪೪; ಬೆಲೆ, ರೂ. ೧-೦-೦.

೧೫. ಸಾಹಿತ್ಯದಲ್ಲಿ ಪ್ರಗತಿ—ಪ್ರೊ. ವಿ. ಕೃ. ಗೋಕಾಕ್, ಬಿ.ಎ. (ಆಕ್ಸನ್); ಸಾಧನ ಮುದ್ರಣಾಲಯ, ಧಾರವಾಡ; ಕ್ರೌನ್ ಅ. ಪು. ೧೦೨; ಬೆಲೆ, ರೂ. ೧-೮-೦.

೧೬. ಕನ್ನಡ ಯಾತ್ರೆ—ಹೈದರಾಬಾದು ಕರ್ಣಾಟಕ ಸಾಹಿತ್ಯಮಂದಿರ ಪ್ರಕಟನೆ; ಗ್ರಂಥ ೧; ಮಾನ್ವಿ ನರಸಿಂಗರಾವ್, ಎಂ.ಎ., ಪಿ.ಒ.ಎಲ್.; ಕ್ರೌನ್ ಅ. ಪು. ೧೧೪; ಬೆಲೆ, ರೂ. ೧-೮-೦.

೧೭. ಗ್ರಾಮ ನೈರ್ಮಲ್ಯ—ಎಸ್. ಡಿ. ನಾರಾಯಣಗೌಡ, ಎಂ.ಬಿ., ಬಿ.ಎಸ್., ಡಿ.ಪಿಎಚ್. ಸರ್ ಕೆ. ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನಮಾಲೆ, ೯; ಮೈಸೂರು ವಿಶ್ವವಿದ್ಯಾನಿಲಯ; ಫೂಲ್ಸ್‌ಕ್ಯಾಪ್ ಅ. ಪು. ೬೮; ಬೆಲೆ, ೨ ಆಣೆ.

೧೮. ಹೆತ್ತಳಾತಾಯಿ—ಶಿವರಾಮ ಕಾರಂತ; ಪ್ರಕಾಶಕರು: ಸಮಾಜ ಪುಸ್ತಕಾಲಯ, ಧಾರವಾಡ; ಪ್ರತಿಭಾಗ್ರಂಥಮಾಲೆ ಕಿರಣ ೧, ವರ್ಷ ೨; ಕ್ರೌನ್ ಅ. ಪು. ೧೪೮; ಬೆಲೆ, ರೂ. ೨-೦-೦.

೧೯. ಒಡನಾಡಿ—ಆನಂದಕಂದ; ಜಯಂತಿ ಕಾರ್ಯಾಲಯ; ಪು. ೫೨; ಬೆಲೆ, ರೂ. ೨-೦-೦.

೨೦. ಶ್ರೀ ಮಹದೇವದೇಸಾಯಿಯವರ ಕೃತಿಗಳು—ಗೊರೂರು ರಾಮಸ್ವಾಮಿ ಅಯ್ಯಂಗಾರ್, ರಾಷ್ಟ್ರೀಯ ಸಾಹಿತ್ಯಸಮಿತಿ, ಗೊರೂರು; ಕ್ರೌನ್ ಅ. ಪು. ೧೯೯.

೨೧. ತಾಯ್ನುಡಿಯಲ್ಲಿ ಶಿಕ್ಷಣ—ಶ್ರೀ ನಾರಾಯಣ ಅಗರವಾಲ್; ಅನುವಾದಕರು: ಗೊರೂರು ರಾಮಸ್ವಾಮಿ ಅಯ್ಯಂಗಾರ್; ಪು. ೩೭; ಬೆಲೆ, ೬ ಆಣೆ.

೨೨. ಶ್ರೀ ಬೇಂದ್ರೆಯವರ ವಿಚಾರಮಂಜರಿ—ಮಿಂಚಿನಬಳ್ಳಿ; ೭ ನೆ ವರ್ಷದ ೨ ನೆ ಕುಡಿ; ಕ್ರೌನ್ ಅ. ಪು. ೧೪೮; ಸಾದಾಪ್ರತಿ ಬೆಲೆ, ರೂ. ೨-೦-೦; ಸುಂದರಪ್ರತಿ ಬೆಲೆ, ರೂ. ೨-೮-೦.

೨೩. ಜಾಗ್ರತ ಚೀನ—ಎ. ಎಸ್. ಕುಲಕರ್ಣಿ, ಎಲ್‌ಎಲ್.ಬಿ., ಮಿಂಚಿನಬಳ್ಳಿ ೭ ನೆ ವರ್ಷದ ೩ ನೆ ಕುಡಿ; ಕ್ರೌನ್ ಅ. ಪು. ೧೫೭; ಬೆಲೆ, ರೂ. ೨-೦-೦.

೨೪. ಆಧುನಿಕ ಚೀನಾ—ಎಸ್. ಅನಂತನಾರಾಯಣ ಬಿ.ಎ. (ಆನರ್ಸ್); ಪ್ರಕಾಶಕರು: ಪ್ರಚಲಿತ ಸಾಹಿತ್ಯ, ಬೆಂಗಳೂರು ನಗರ; ಕ್ರೌನ್ ಅ. ಪು. ೮೪.

೨೫. ಮೈಲಾರದ ಶ್ರೀ ಬಸವಲಿಂಗ ಶರಣರ ಕೃತಿಗಳು—ಸಂಪಾದಕರು: ಶಿ. ಶಿ. ಬಸವನಾಳ, ಎಂ.ಎ.; ಪ್ರಕಾಶಕರು: ಶ್ರೀ. ಮ. ನಿ. ಪ್ರ. ಮೃತ್ಯುಂಜಯ ಸ್ವಾಮಿಗಳು, ಮುರುಘಾಮಠ, ಧಾರವಾಡ; ಪು. ೨೩೩; ಬೆಲೆ, ರೂ. ೨-೮-೦.

೨೬. ಅಹಿಂಸೆಯ ಅಗ್ನಿಕುಂಡ—ಗಾಂಧೀಜಿ; ವಿಚಾರಸಾಹಿತ್ಯ, ಮುನ್ನುಡಿ ಸಿದ್ಧವನಹಳ್ಳಿ ಕೃಷ್ಣಶರ್ಮ; ಪು. ೪೦; ಬೆಲೆ, ೮ ಆಣೆ.

೨೭. ಭಕ್ತರಾಜ ಬಸವಣ್ಣ—ವೀರಶೈವ ಸಾಹಿತ್ಯ ಭಾಂಡಾರ; ಗ್ರಂಥಮಾಲೆ, ೫. ಶ್ರೀ ಸಿಂಪಿ. ಲಿಂಗಣ್ಣನವರು; ಕ್ರೌನ್ ಅ. ಪು. ೬೨; ಬೆಲೆ, ೧೨ ಆಣೆ.

೨೮. ಬಸವ ಚರಿತ್ರೆಯ ಲಾವಣಿ—ವೀರಶೈವ ಸಾಹಿತ್ಯ ಭಾಂಡಾರ; ಗ್ರಂಥಮಾಲೆ, ೬; ಶ್ರೀ ಮಾ. ನಂ. ನಂಜಪ್ಪನವರು; ಬೆಲೆ, ೪ ಆಣೆ.

೨೯. ಕಾಂಗ್ರೆಸ್ ಸ್ವರೂಪದರ್ಶನ (ಅಸ್ಪೃಶ್ಯತಾ ನಿವಾರಣೆ)—ಪಾಟೀಲ ಕಲ್ಲನಗೌಡರು, ಬಿ.ಎ.; ಸಂಯುಕ್ತ ಕರ್ಣಾಟಕ ಮುದ್ರಣಾಲಯ, ಹುಬ್ಬಳ್ಳಿ; ಕ್ರೌನ್ ಅ. ಪು. ೧೦೦; ಬೆಲೆ, ೧೨ ಅಣೆ.

೩೦. ರಾಷ್ಟ್ರೀಯ ಶಿಕ್ಷಣ—ರಂಗನಾಥ ದಿವಾಕರ; ಸಂಯುಕ್ತ ಕರ್ಣಾಟಕ ಮುದ್ರಣಾಲಯ, ಹುಬ್ಬಳ್ಳಿ; ಕ್ರೌನ್ ಅ. ಪು. ೮೮; ಬೆಲೆ, ೮ ಆಣೆ.

೩೧. ಸತ್ಯಾಗ್ರಹ-ಇತಿಹಾಸ ಮತ್ತು ತಂತ್ರ—ರಂಗನಾಥ ದಿವಾಕರ; ಪ್ರಕಾಶಕರು: ಬೋಧರಾವ್ ದಿವಾಕರ, ಆಧ್ಯಾತ್ಮ ಕಾರ್ಯಾಲಯ, ಹುಬ್ಬಳ್ಳಿ; ಬೆಲೆ, ರೂ. ೩-೮-೦.

೩೨. ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜನಾಥ್, ಎಂ.ಎ.; ಪ್ರಚಾರ ಪುಸ್ತಕಮಾಲೆ ೫೫, ಮೈಸೂರು ವಿಶ್ವವಿದ್ಯಾನಿಲಯ; ಫೂಲ್ಸ್ಕ್ಯಾಪ್ ೩೬ ಪುಟಗಳು; ಬೆಲೆ, ೩ ಆಣೆ.

೩೩. ಸುಗ್ಗಿಯ ಮೈಸೂರು—ದೀಪಾವಳಿ ಸಂಚಿಕೆ; ೧೯೪೫.

೩೪. ಗಾಂಧಿ ಶಕ್ತಿಯ ಮೂಲ ಎಂಬ ಪ್ರಾರ್ಥನಾ ಪುಸ್ತಕ—ಜಿ. ಪಿ. ರಾಜರತ್ನಂ, ಎಂ.ಎ., ವಿಚಾರಸಾಹಿತ್ಯ, ಬೆಂಗಳೂರು ನಗರ; ಕ್ರೌನ್ ಅ. ಪು. ೪೦; ಬೆಲೆ, ೮ ಆಣೆ.

೩೫. ನಿಮ್ಮ ಆಹಾರ—ಎಂ. ಆರ್. ಮಸಾನಿ; ವಿಚಾರಸಾಹಿತ್ಯ, ಬೆಂಗಳೂರು ನಗರ; ಕ್ರೌನ್ ಅ. ಪು. ೯೦; ಬೆಲೆ, ರೂ. ೧-೦-೦.

೩೬. ರತಿದೇವಿ ಮತ್ತು ಇತರ ಕಥೆಗಳು—ಎಂ. ವಿ. ಸೀತಾರಾಮಯ್ಯ, ಎಂ.ಎ.

೩೭. ಹಕ್ಕಿಯ ನೋಟ—ದತ್ತಾತ್ರೇಯ ಕುಲಕರ್ಣಿ.

೩೮. ಪ್ರಬಂಧ ಪುಷ್ಪಾಂಜಲಿ—ಪಿ. ಬಿ. ನರೆಗಲ್, ಎಂ.ಎ., ಬಿ.ಟಿ.

೩೯. ಗುಲಿಸ್ತಾನ್ ಕಥೆಗಳು—ಪ್ರಕಾಶಕರು: ಮಧುಗಿರಿ ವಾಸುದೇವಮೂರ್ತಿ, ಬೆಂಗಳೂರು ಪ್ರೆಸ್, ಬೆಂಗಳೂರು; ಪು. ೪೦; ಬೆಲೆ, ೮ ಆಣೆ.

೪೦. ಹುಣ್ಣಿಮೆಯ ರಾತ್ರಿ—ಧನ್ವಂತ; ಹೆಚ್. ಎನ್. ರಾವ್ ಬ್ರದರ್ಸ್; ಚಿಕ್ಕಪೇಟೆ, ಬೆಂಗಳೂರು ನಗರ; ಕ್ರೌನ್ ಅ. ಪು. ೬೪; ಬೆಲೆ, ೧೨ ಆಣೆ.

೪೧. ಬಿರುಗಾಳಿ ಭಾಗ ೧ ಮತ್ತು ೨—ಲೇಖಕರು: ಪ್ರೊ. ನಾ. ಸಿ. ಫಡಕೆ, ಎಂ.ಎ.; ಅನುವಾದಕರು: ರಘುನಾಥ ಮೋಡಿ ಮಿಶ್ರೀಕೋಟಿ ಬಾಲಚಂದ್ರ ಘಾಣೇಕರ; ಕ್ರೌನ್ ಅ. ಪು. ೧೩೪+೧೯೫; ಬೆಲೆ, ರೂ. ೩-೮-೦.

೪೨. ಪರಮಹಂಸ ಸ್ವಾಮಿ ರಾಮತೀರ್ಥರು—ಓ. ಎನ್. ಲಿಂಗಣ್ಣಯ್ಯ, ಬಿ.ಎ. ಆನರ್ಸ್; ಶೈಲಕುಮಾರೀ ಗ್ರಂಥಮಾಲೆ, ೬ ನೆ ಕುಸುಮ; ಕ್ರೌನ್ ಅ. ಪು. ೧೧೨; ಬೆಲೆ, ರೂ. ೧-೦-೦

೪೩. ಶ್ರೀ ರಾಮಕೃಷ್ಣ ಲೀಲಾ ಪ್ರಸಂಗ ಗುರುಭಾವ—೧ನೆಯ ಭಾಗ—ಪರಿವರ್ತನಕಾರರು: ಸ್ವಾಮಿ ಪ್ರಣವೇಶಾನಂದ; ಶ್ರೀರಾಮಕೃಷ್ಣ ಗ್ರಂಥಮಾಲಾ; ಶ್ರೀ ರಾಮಕೃಷ್ಣಾಶ್ರಮ, ಬಸವನಗುಡಿ, ಬೆಂಗಳೂರು; ಕ್ರೌನ್ ಅ. ಪು. ೨೯೨.

೪೪. ಮುಗಿದ ಯುದ್ಧ—ಶಿವರಾಮ ಕಾರಂತ; ಪುತ್ತೂರು ದ. ಕ. ಕ್ರೌನ್ ಅ. ಪು. ೪೦೫; ಬೆಲೆ, ರೂ. ೩-೮-೦.

೪೫. ಮಲೆನಾಡಿನ ಚಿತ್ರಗಳು—ಕುವೆಂಪು; ಪ್ರಕಾಶಕರು: ಕಾವ್ಯಾಲಯ, ಮೈಸೂರು.

೪೬. ರಕ್ತಾಕ್ಷಿ—ಕುವೆಂಪು; ಕಾವ್ಯಾಲಯ, ಮೈಸೂರು; ಬೆಲೆ, ರೂ. ೧—೧೨—೦.

೪೭. ಬೊಮ್ಮನಹಳ್ಳಿಯ ಕಿಂದರಿಜೋಗಿ (ಸಚಿತ್ರ)—ಕುವೆಂಪು; ಪ್ರಕಾಶಕರು: ಕಾವ್ಯಾಲಯ, ಮೈಸೂರು; ಬೆಲೆ, ೬ ಆಣೆ.

೪೮. ಆಷಾಡಭೂತಿ—ಎ. ಎನ್. ಮೂರ್ತಿರಾವ್, ಎಂ.ಎ.; ಪ್ರಕಾಶಕರು: ಕಾವ್ಯಾಲಯ, ಮೈಸೂರು; ಬೆಲೆ, ರೂ. ೧-೦-೦.

೪೯. ರಥಸಪ್ತಮಿ ಮತ್ತು ಇತರ ಚಿತ್ರಗಳು—ಪು. ತಿ. ನರಸಿಂಹಾಚಾರ್; ಪ್ರಕಾಶಕರು: ಕಾವ್ಯಾಲಯ, ಮೈಸೂರು; ಬೆಲೆ, ರೂ. ೧-೦-೦.

೫೦. ಸ್ವಪ್ನಜೀವಿ ಮತ್ತು ಇತರ ಕಥೆಗಳು—ಆನಂದ; ಪ್ರಕಾಶಕರು: ಕಾವ್ಯಾಲಯ, ಮೈಸೂರು; ಬೆಲೆ, ೧೨ ಆಣೆ.

೫೧. ತೊರವೆ ರಾಮಾಯಣ ಸಾರಸಂಗ್ರಹ—ವೀ. ಬಿ. ಬಿಳಿ ಅಂಗಡಿ; ಸೆಂಟ್ ಜಾರ್ಜ್ ಆಸ್ಪತ್ರೆ, ಮುಂಬಯಿ; ಬೆಲೆ, ೧೦ ಆಣೆ.

೫೨. ಗುಡಿಸಿಲ ಗುರು—ಎನ್. ಸಿ. ಅಣ್ಣಯ್ಯ; ಬೆಲೆ, ರೂ. ೧-೦-೦.

೫೩. ಇಂದಿನ ಕರ್ನಾಟಕ—ಸಂಪಾದಕರು: ವಿ. ಕೃ. ಗೋಕಾಕರು; ಲಲಿತಸಾಹಿತ್ಯ ಮಾಲೆ ೧೨, ಧಾರವಾಡ; ಬೆಲೆ, ರೂ. ೧-೮-೦.

೫೪. ಹಕ್ಕಿಯ ನೋಟ—ದತ್ತಾತ್ರೇಯ ಕುಲಕರ್ಣಿ; ಲಲಿತ ಸಾಹಿತ್ಯಮಾಲೆ ೧೩; ಬೆಲೆ, ೧೨ ಆಣೆ.



ಬಿ. ಎಂ. ಶ್ರೀಕಂಠಯ್ಯನವರು

ಪ್ರಬುದ್ಧ ಕರ್ಣಾಟಕ

ಪಾರ್ಥಿವ ಸಂವತ್ಸರ — ೧೦೫ — ಸಂಕ್ರಾಂತಿ ಸಂಚಿಕೆ

ಶ್ರೀಗುರು ಚರಣಕೆ

ತುಳಿ! ತುಳಿ! ಹತ್ತಿ ತುಳಿ!
ಮತ್ತೆ ತುಳಿ, ಒತ್ತಿ ತುಳಿ,
ಅಹಂಕಾರವಳಿಯಲಿ!
ನಾನು ಎಂಬುದೆಲ್ಲ ಉದುರಿ
ನೀನು ಮಾತ್ರ ಉಳಿಯಲಿ!

ಹೆಡೆಹೆಡೆಗಳನೆಡೆಬಿಡದೆಯೆ
ಕಾಳೀಯನ ತುಳಿದಂದದಿ
ಗೋವಿಂದನ ಚರಣ,
ತನ್ನ ನಿತೂ ವಿಷ ವಮನದಿ
ನನ್ನಂತಃಕರಣ
ಮಮತಾಫಣೆ ಲಯಹೊಂದುತೆ
ಬರಲಮೃತದ ಮರಣ!

ತುಳೀ ಹತ್ತಿ! ತುಳೀ ಒತ್ತಿ!
ಅಹಂಕಾರವಳಿಯಲಿ!
ನನ್ನ 'ಸತ್ತ'ದೆಲ್ಲ ಸತ್ತು
ನಿನ್ನ ಸೊತ್ತು ಉಳಿಯಲಿ!

ಕುವೆಂಪು.

ರಕ್ತನಿಧಿ

ಪ್ರವೇಶ

ರಕ್ತನಿಧಿಯೆಂದರೆ ಅನುಕೂಲವಾದಾಗ ರಕ್ತವನ್ನು ಶೇಖರಿಸಿ ಆವಶ್ಯಕಬಿದ್ದಾಗ ಅದನ್ನು ಉಪಯೋಗಿಸುವ ವ್ಯವಸ್ಥೆ. ಹೀಗೆಂದಕೂಡಲೆ ರಕ್ತವನ್ನು ಶೇಖರಿಸುವ ದೆಂದರೇನು, ಏಕೆ ಶೇಖರಿಸಬೇಕು ಎಂಬ ಪ್ರಶ್ನೆಗಳು ಹುಟ್ಟುತ್ತವೆ. ಮೊದಲು ರಕ್ತದ ಉಪಯೋಗಗಳನ್ನು ವಿವರಿಸಿದರೆ ಈ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರ ದೊರೆಯುತ್ತದೆ.

ರಕ್ತವು ಪ್ರಾಣಧಾರಣೆಗೆ ಅತ್ಯಾವಶ್ಯಕವಾದ ದ್ರವವೆಂದು ಎಲ್ಲರಿಗೂ ತಿಳಿದ ವಿಷಯವೇ. ಆಕಸ್ಮಾತ್ ಭಾರಿ ಆಘಾತಗಳಾದಾಗ ರಕ್ತವನ್ನು ಕಳೆದುಕೊಂಡೋ ಅಥವಾ ರಕ್ತಪರಿಚಲನೆಗೆ ಕುಂದಕ ಬಂದೋ ಮನುಷ್ಯರು ಚೈತನ್ಯ ಕುಗ್ಗಿದವರಾಗು ತ್ತಾರೆ. ಆದ್ದರಿಂದ ರಕ್ತ ತುಂಬುವುದು ಗಾಯಗೊಂಡವರ ಚಿಕಿತ್ಸೆಯಲ್ಲಿ ಮುಖ್ಯ ವಾದದ್ದೆಂದು ಹೇಳಬೇಕಾದ್ದಿಲ್ಲ. ಗಾಯಗೊಂಡವರಿಗೆ ಮಾತ್ರವೇ ಅಲ್ಲ. ಕೆಲವು ರೋಗಪೀಡಿತರಾದವರಿಗೂ ರಕ್ತ ತುಂಬುವುದು ಸಂಜೀವಿನಿ.

ರಕ್ತನಿಧಿಯ ವಿಚಾರ ತಿಳಿಯುವ ಮುನ್ನ ರಕ್ತದ ರಚನೆಯ ಪರಿಚಯವನ್ನು ಮಾಡಿಕೊಳ್ಳುವುದು ಆವಶ್ಯಕ. ದೇಹದಿಂದ ರಕ್ತವನ್ನು ತೆಗೆದು ಒಂದು ಪ್ರನಾಳದಲ್ಲಿ ಹಾಕಿ, ಅದು ಗಡ್ಡೆ ಕಟ್ಟಿಕೊಳ್ಳದಂತೆ ಮಾಡಿ ಅಲ್ಲಾಡದಂತೆ ಒಂದು ಸ್ಥಳದಲ್ಲಿಟ್ಟಿದ್ದರೆ ಸ್ವಲ್ಪ ಕಾಲದಲ್ಲಿ ಕೆಂಪಾದ ಘನ ಪದಾರ್ಥವು ಕೊಳವಿಯ ಕೆಳಭಾಗಕ್ಕೆ ಇಳಿಯುತ್ತದೆ. ಇದೇ ಕೆಂಪು ಮತ್ತು ಬಿಳಿಯ ಕಣಗಳ ರಾಶಿ. ಮಾಸಲು ಹಳದಿ ಬಣ್ಣದ ನೀರಾದ ಭಾಗವು ಪ್ರನಾಳದ ಮೇಲ್ಭಾಗದಲ್ಲಿ ನಿಲ್ಲುತ್ತದೆ. ಇದೇ ರಕ್ತದ್ರವ (Plasma). ಕೆಂಪು ಕಣಗಳು ದೇಹಕ್ಕೆ ಆವಶ್ಯಕವಾಗಿ ಬೇಕಾದ ಆಮ್ಲಜನಕವನ್ನು ಅಂಗಾಂಶ ಗಳಿಗೆ ತೆಗೆದುಕೊಂಡು ಹೋಗುವುವು. ಇಂಗಾಲಾಮ್ಲವನ್ನು ಅಂಗಾಂಶಗಳಿಂದ ಹೊರಗೆ ತರುವುವು. ಬಿಳಿಯ ಕಣಗಳು ದೇಹಕ್ಕೆ ಸೇರಬಹುದಾದ ಕ್ರಿಮಿ ಮತ್ತಿತರ ವಿಜಾತೀಯ ಪದಾರ್ಥಗಳನ್ನು ಜೀರ್ಣಮಾಡಿ ದೇಹವನ್ನು ರಕ್ಷಿಸುತ್ತವೆ.

ರಕ್ತವು ರಕ್ತನಾಳವನ್ನು ಬಿಟ್ಟ ೫-೧೦ ನಿಮಿಷಗಳಲ್ಲಿ ಗಡ್ಡೆ ಕಟ್ಟಿಕೊಳ್ಳುವುದು. ಗಡ್ಡೆ ಕಟ್ಟಿದ ರಕ್ತದಿಂದ ನೆಲ್ಲುಹುಲ್ಲು ಬಣ್ಣದ ದ್ರವವು ಜಿನುಗುವುದು. ಇದೇ ರಕ್ತ ವಸೆ (Serum). ರಕ್ತದ್ರವದಲ್ಲಿ ಸಸಾರಜನಕ ಪದಾರ್ಥಗಳೂ ಉಪ್ಪು ಮತ್ತು ಇತರ ಲವಣ

ಗಳೂ ಸೇರಿವೆ. ಸಸಾರಜನಕ ಪದಾರ್ಥಗಳಲ್ಲಿ ಫೈಬ್ರಿನೋಜೆನ್ (Fibrinogen) ಒಂದು. ಇದರಿಂದ ರಕ್ತವು ಗಡ್ಡೆ ಕಟ್ಟುವುದು. ರಕ್ತ ವಸೆಯಲ್ಲಿ ಫೈಬ್ರಿನ್ ಇಲ್ಲದಿರುವುದರಿಂದ ವಸೆಯು ಗಡ್ಡೆ ಕಟ್ಟಲಾರದು. ರಕ್ತ ಕಣಗಳು ರಹಿತವಾದ ರಕ್ತಕ್ಕೆ ರಕ್ತ ದ್ರವವೆಂದೂ (Plasma) ಫೈಬ್ರಿನ್ ರಹಿತವಾದ ರಕ್ತ ದ್ರವವನ್ನು ರಕ್ತವಸೆಯೆಂದೂ ಈ ಪುಸ್ತಕದಲ್ಲಿ ಕರೆದಿದೆ.

ಆಧುನಿಕರು ರಕ್ತವನ್ನು ತುಂಬುವುದರಲ್ಲಿ ಯಾವ ಕ್ರಮವನ್ನು ಉಪಯೋಗಿಸುತ್ತಾರೆಂದು ವಿವರಿಸುವುದಕ್ಕೆ ಮುಂಚೆ ಹಿಂದಿನ ಕಾಲದಲ್ಲಿ ಜನರು ಈ ರಕ್ತದ ಉಪಯೋಗದಲ್ಲಿ ಯಾವ ತಿಳಿವಳಿಕೆಯನ್ನು ಹೊಂದಿದ್ದರೆಂದೂ ಮತ್ತು ಆ ತಿಳಿವಳಿಕೆಯು ಹೇಗೆ ಬೆಳೆಯಿತೆಂದೂ ನೋಡೋಣ.

ರಕ್ತವನ್ನು ಚಿಕಿತ್ಸಾ ಪದಾರ್ಥವನ್ನಾಗಿ ಉಪಯೋಗಿಸಲು ನಾಗರಿಕತೆಯ ಆದಿಯಿಂದಲೂ ಪ್ರಯತ್ನಗಳು ನಡೆದಿವೆ. ರೋಮಿನಲ್ಲಿ ಜಟ್ಟಿಗಳು ಕೊಲ್ಲಲ್ಪಟ್ಟಾಗ ಬಲಹೀನರಾದವರು ಶಕ್ತಿ ಬರಲೆಂದು ಆ ಜಟ್ಟಿಗಳ ರಕ್ತವನ್ನು ಕುಡಿಯುವ ಪದ್ಧತಿ ಇತ್ತಂತೆ. ಈಜಿಪ್ಟಿನಲ್ಲಿ ದೊರೆಗಳು ತಮ್ಮ ಶತ್ರುಗಳ ಮತ್ತು ಜೀತಗಾರರ ರಕ್ತವನ್ನು ತಮ್ಮ ಮೈಮೇಲೆ ಸುರಿಸಿಕೊಳ್ಳುತ್ತಿದ್ದರಂತೆ. ಕಿ.ಶ. ೧೪೯೦ ರಲ್ಲಿ ಪೋಪ್ ಇನ್ನೊಸೆಂಟರಿಗೆ ಸಾವು ಸಮೀಪಿಸಿದಾಗ ಮೂರು ಯುವಕರ ರಕ್ತವನ್ನು ಕೊಟ್ಟರೆಂದು ವರದಿಯಾಗಿದೆ. ಆದರೆ ಈಗಿನ ತಿಳಿವಳಿಕೆಯಿಂದ ಆಲೋಚಿಸಿದರೆ ರಕ್ತ ಸೇವನೆಯ ಈ ರೀತಿಗಳು ಪ್ರಾಣವನ್ನುಳಿಸುವುದರಲ್ಲಿ ಸಹಾಯಕಗಳಾಗಲಿಲ್ಲವೆಂದು ಚೆನ್ನಾಗಿ ಊಹಿಸಬಹುದು. ೧೭ ನೆಯ ಶತಮಾನದಲ್ಲಿ ಹಾರ್ವೆಯವರು (Harvey) ರಕ್ತ ಪರಿಚಲನೆಯ ಕ್ರಮವನ್ನು ಹೊರಗೆಡವಿದರು. ಔಷಧಿಗಳನ್ನು ಇಂಜೆಕ್ಷನ್ ಮೂಲಕ ರಕ್ತಕ್ಕೆ ಸೇರಿಸುವ ವಿಧಾನವನ್ನು ಶಾಸ್ತ್ರಜ್ಞರು ತಿಳಿದರು. ರಕ್ತವನ್ನು ದೇಹದ ರಕ್ತ ನಾಳಗಳಲ್ಲಿ ತುಂಬುವ ಆಲೋಚನೆಯೂ ಹೀಗೆಯೇ ಹೊಳೆಯಿತು. ಒಬ್ಬ ಮನುಷ್ಯನಿಂದ ತೆಗೆದ ರಕ್ತವು ಚಿಕಿತ್ಸೆಯಲ್ಲಿ ಫಲಕಾರಿಯಾಗಬೇಕಾದರೆ ರೋಗಿಯ ರಕ್ತ ಪ್ರವಾಹಕ್ಕೆ ಸೇರಿಸಬೇಕೆಂದು ವಿದಿತವಾಯಿತು. ಇನ್ಯಾವ ರೀತಿ ಉಪಯೋಗಿಸಿದರೂ—ಅಂದರೆ ಮೈಗೆ ಸವರಿದರೂ ಕುಡಿದರೂ ಪ್ರಯೋಜನವಿಲ್ಲ. ಮೊದಲು ಪ್ರಾಣಿಗಳ ಮೇಲೆ ವೈಜ್ಞಾನಿಕರು ಪ್ರಯೋಗಗಳನ್ನು ನಡೆಸಿದರು. ಕ್ರಿ.ಶ. ೧೬೬೫ ರಲ್ಲಿ ರಿಚರ್ಡ್ ಲೋಯರ್ ಎಂಬುವರು ಒಂದೇ ವರ್ಗದ ಎರಡು ಪ್ರಾಣಿಗಳಿಗೆ ಒಂದರಿಂದ ಮತ್ತೊಂದಕ್ಕೆ ರಕ್ತ ಕೊಟ್ಟು ಜಯಶೀಲರಾದರು. ಕೂಡಲೆ ಮನುಷ್ಯರ ಮೇಲೂ ಪ್ರಯೋಗಗಳು ನಡೆದವು. ಮನುಷ್ಯರಲ್ಲಿ ರಕ್ತ ತುಂಬುವಿಕೆಯನ್ನು ಮೊಟ್ಟ ಮೊದಲು ಪ್ರಯತ್ನಿಸಿದವರು ಫ್ರಾನ್ಸಿನ ಚಕ್ರವರ್ತಿ ೧೪ ನೆಯ ಲೂಯಿಯವರ

ವೈದ್ಯರಾಗಿದ್ದ ಡೆನಿಸ್ ದ ಮೊಂಟ್ ಪಿಲ್ಲಿಯಯರ್ ರವರು. ಅನಂತರ ಇಂಗ್ಲೆಂಡಿನಲ್ಲಿಯೂ ಜರ್ಮನಿಯಲ್ಲಿಯೂ ಇದರ ಪ್ರಯತ್ನಗಳು ನಡೆದವು. ವೈದ್ಯರು ಗಾಯಗೊಂಡ ಹಲವರಿಗೆ ರಕ್ತ ತುಂಬಿದರು. ಮೃತಪ್ರಾಯರಾದ ಕೆಲವರು ಪುನರುಜ್ಜೀವಿತರಾದರು. ಇದು ಒಂದು ಪವಾಡವೆಂದು ಭಾವಿಸಲ್ಪಟ್ಟಿತು. ಆದರೂ ಇನ್ನೂ ಕೆಲವರು ಚಿಕಿತ್ಸೆಯ ಫಲವಾಗಿ ಮೃತಹೊಂದಿದರು. ಈ ವಿಪರೀತಕ್ಕೆ ಕಾರಣ ವ್ಯಕ್ತವಾಗಲಿಲ್ಲ. ಇದನ್ನು ನೋಡಿ ವೈದ್ಯರು ಹೆದರಿದರು. ಇಂಗ್ಲೆಂಡ್, ಫ್ರಾನ್ಸ್, ಇಟಲಿ ದೇಶಗಳಲ್ಲಿ ರಕ್ತ ತುಂಬುವ ಚಿಕಿತ್ಸೆ ನಿಲ್ಲಿಸಬೇಕೆಂಬ ಕಾನೂನು ಜಾರಿಗೆ ಬಂದಿತು. ಇದಾದ ಸುಮಾರು ೧೫೦ ವರ್ಷಗಳು ರಕ್ತ ತುಂಬುವ ಚಿಕಿತ್ಸೆಯ ಹೆಸರೇ ಮರೆತುಹೋಯಿತು.

ರಕ್ತ ಗುಂಪುಗಳು (Blood Groups)

ಆದರೆ ಸುದೈವದಿಂದ ಈ ಶತಮಾನದ ಪ್ರಾರಂಭದಲ್ಲಿ ರಕ್ತದ ಚಿಕಿತ್ಸೆಯಿಂದ ಆದ ಅನಾಹುತಕ್ಕೆ ಕಾರಣ ಗೊತ್ತಾಯಿತು. ೧೯೦೧ರಲ್ಲಿ ಲಾಂಡ್ ಸ್ಟೀನರು ರಕ್ತದ ಮೇಲೆ ಪರಿಶೋಧನೆಗಳನ್ನು ನಡೆಸಿ ಅದರ ಸಲುವಾಗಿ ನೊಬೆಲ್ ಪಾರಿತೋಷಕವನ್ನು ಪಡೆದರು. ಲಾಂಡ್ ಸ್ಟೀನರು ರಕ್ತ ಕಣಗಳ ಮತ್ತು ರಕ್ತ ವಸೆಯಲ್ಲಿರುವ ಕೆಲವು ತತ್ವಗಳ ದೃಷ್ಟಿಯಿಂದ ಮನುಷ್ಯರ ರಕ್ತವನ್ನು ನಾಲ್ಕು ಪಂಗಡಗಳಾಗಿ ವಿಭಾಗಿಸಿದರು. ದಾತನ (Donor) ಮತ್ತು ಪರಿಗ್ರಾಹಕನ (Recipient) ರಕ್ತದ ಗುಂಪುಗಳು ಸರಿಬರದಿದ್ದಲ್ಲಿ ನಾವು ದಾತನ ರಕ್ತವನ್ನು ಪರಿಗ್ರಾಹಕನಿಗೆ ತುಂಬಿದರೆ ತುಂಬಿದ ರಕ್ತ ಕಣಗಳು ಒಂದಕ್ಕೊಂದು ಅಂಟಿಕೊಂಡೋ, ಅಥವಾ ಕಣಭಂಗವೋ ಆಗಿ ಪರಿಗ್ರಾಹಕನ ಸಾವಿನಲ್ಲಿ ಪರಿಣಮಿಸಬಹುದೆಂದು ತಿಳಿದುಬಂದಿತು. ಯಾರ ರಕ್ತವನ್ನಾದರೂ ತೆಗೆದು ಮತ್ತೊಬ್ಬನಿಗೆ ತುಂಬುವುದು ಪ್ರಾಣಾಪಾಯವೆಂದೂ, ರಕ್ತ ತುಂಬುವುದು ಜಯಪ್ರದವಾಗಬೇಕಾದರೆ ದಾತರ ಮತ್ತು ಪರಿಗ್ರಾಹಕರ ರಕ್ತದ ಗುಂಪುಗಳೆರಡೂ ಸರಿಹೊಂದಿಕೊಳ್ಳಬೇಕೆಂದೂ, ಮನುಷ್ಯರಲ್ಲಿ ಕೆಲವು ಪಂಗಡದವರ ರಕ್ತಗಳು ಇತರ ಕೆಲವರ ರಕ್ತದೊಂದಿಗೆ ಬೆರೆತರೆ ಸರಿಹೋಗುವವೆಂದೂ ಮತ್ತೆ ಕೆಲವರ ರಕ್ತದೊಂದಿಗೆ ಬೆರೆತರೆ ಸರಿಹೋಗದೆ ಪ್ರಾಣಾಪಾಯವಾಗಬಹುದೆಂದೂ ರಕ್ತ ತುಂಬುವದಕ್ಕೆ ಮುಂಚೆ ದಾತರ ರಕ್ತವು ಪರಿಗ್ರಾಹಕರ ರಕ್ತಕ್ಕೆ ಸರಿಬರುತ್ತದೆಯೇ ಎಂಬ ಪರೀಕ್ಷೆಯನ್ನು ನಡೆಸಬೇಕಾದುದು ಮುಖ್ಯವೆಂದೂ ಲಾಂಡ್ ಸ್ಟೀನ್ ಮತ್ತು ಅವರ ಶಿಷ್ಯವರ್ಗದವರಿಂದ ತಿಳಿಯಿತು. ರಕ್ತದ ಗುಂಪುಗಳನ್ನು ಕಂಡು ಹಿಡಿದ ವಿಷಯವು ರಕ್ತ ತುಂಬುವ ವಿಧಾನದಲ್ಲೂ ವೈದ್ಯ ಶಾಸ್ತ್ರದ ಮುನ್ನಡೆಯಲ್ಲಿಯೂ ಒಂದು ದೊಡ್ಡ ಹೆಜ್ಜೆಯಾಗಿ ಪರಿಣಮಿಸಿತು.

ದಾತರಲ್ಲಿ ಯಾವ ಯಾವನ ರಕ್ತ ಯಾವಯಾವ ಪರಿಗ್ರಾಹಕನ ರಕ್ತಕ್ಕೆ ಸಾಟಿಯಾಗುವುದು, ಯಾವ ಯಾವುದಕ್ಕೆ ಸಾಟಿಯಾಗುವದಿಲ್ಲವೆಂಬುದನ್ನು ಈ ಕೆಳಗಣ ಪಟ್ಟಿಯಲ್ಲಿ ತೋರಿಸಿದೆ.

A ರೋಗಿಗಳ ರಕ್ತವಸೆ B ದಾತರ ಕಣಗಳು

	ಪಂಗಡ I	ಪಂಗಡ II	ಪಂಗಡ III	ಪಂಗಡ IV
ಪಂಗಡ I	V	V	V	V
ಪಂಗಡ II	X	V	X	V
ಪಂಗಡ III	V	X	X	V
ಪಂಗಡ IV	X	X	X	V

V:—ರಕ್ತ ಸರಿಬರುವುದೆಂದು ಸೂಚಿಸುತ್ತದೆ.
X:—ರಕ್ತ ಸರಿಬರುವುದಿಲ್ಲವೆಂದು ಸೂಚಿಸುತ್ತದೆ.

ರೋಗಿಗಳಲ್ಲಿ ಮೊದಲನೆಯ ಗುಂಪಿನವರು ಇತರ ಎಲ್ಲ ಗುಂಪಿನವರಿಂದ ರಕ್ತ ತೆಗೆದುಕೊಳ್ಳಬಹುದು. ದಾತರಲ್ಲಿ IV ನೆಯ ಪಂಗಡದವರು ಯಾರಿಗೆ ಬೇಕಾದರೂ ರಕ್ತ ಕೊಡಬಹುದು. II ನೆಯ ಪಂಗಡದ ದಾತರು I ನೆಯ ಮತ್ತು II ನೆಯ ಗುಂಪಿನ ರೋಗಿಗಳಿಗೆ ಮಾತ್ರ ರಕ್ತ ಕೊಡಬಹುದು. III ನೆಯ ಗುಂಪಿನ ದಾತರು I ನೆಯ ಮತ್ತು III ನೆಯ ಗುಂಪಿನ ರೋಗಿಗಳಿಗೆ ಮಾತ್ರ ರಕ್ತಕೊಡಲು ಸಾಧ್ಯ. ರಕ್ತ ಕೊಡುವವರ ಕಣಗಳನ್ನು ಪರೀಕ್ಷಿಸಿ ಅವರು ಈ ನಾಲ್ಕರಲ್ಲಿ ಯಾವ ಗುಂಪಿಗೆ ಸೇರಿದವರೆಂದೂ, ರಕ್ತ ತೆಗೆದುಕೊಳ್ಳುವರ ವಸೆಯನ್ನು ಪರೀಕ್ಷಿಸಿ ಅವರು ಯಾವ ಗುಂಪಿಗೆ ಸೇರಿದವರು ಎಂದೂ ತಿಳಿಯಬಹುದು.

ಆಸ್ಪತ್ರೆಯಲ್ಲಿ ಒಬ್ಬ ರೋಗಿಗೆ ರಕ್ತವನ್ನು ತುಂಬಬೇಕೆಂದು ನಿರ್ಧರಿಸುತ್ತಾರೆಂದು ಊಹಿಸೋಣ. ಆ ರೋಗಿಯ ರಕ್ತದ ವಸೆಯನ್ನು ತೆಗೆದುಕೊಳ್ಳುತ್ತಾರೆ. ರೋಗಿಗೆ ರಕ್ತಕೊಡಲು ಇಚ್ಛಿಸುವ ರಕ್ತದಾತರ ರಕ್ತವನ್ನೂ ತೆಗೆದುಕೊಂಡು, ಅದರೊಳಗಣ ಕೆಂಪುಕಣಗಳನ್ನು ರೋಗಿಯ ವಸೆಗೆ ಮಿಶ್ರಮಾಡಿ ಕಣಗಳು ಒಟ್ಟುಗೂಡುವುವೇ ಇಲ್ಲವೇ ಎಂಬುದನ್ನು ಸೂಕ್ಷ್ಮದರ್ಶಕದ ಸಹಾಯದಿಂದ ಪರೀಕ್ಷಿಸುತ್ತಾರೆ. ಯಾವ ಸಂಬಂಧಿ ಅಥವಾ ಸ್ನೇಹಿತನ ಕಣಗಳು ಒಟ್ಟುಗೂಡುವದಿಲ್ಲವೋ ಅವನನ್ನೇ ರಕ್ತಕೊಡಲು ಚುನಾಯಿಸುತ್ತಾರೆ.

ರಕ್ತಕೊಡುವವರಿಗೆ ಮೇಹಸಂಬಂಧದ ಕಾಹಿಲೆಗಳೂ ಮಲೇರಿಯಾ ಇತ್ಯಾದಿ ರಕ್ತದಿಂದ ಹರಡತಕ್ಕ ಕಾಹಿಲೆಗಳೂ ಇರಕೂಡದು. ರಕ್ತದ ಜೊತೆಗೆ ಈ ಕಾಹಿಲೆಗಳನ್ನೂ ನಾವು ದಾನಮಾಡಿದಂತಾಗುತ್ತದೆ. ಇದು ದುರ್ದಾನವಾಗುವುದು. ಆದ್ದರಿಂದ ರಕ್ತವು ಸರಿಬರುವುದೇ ಇಲ್ಲವೇ ಎಂಬ ಪರೀಕ್ಷೆ ಒಂದಲ್ಲ. ದಾತರ ರಕ್ತದಲ್ಲಿ ಹರಡಬಹುದಾದ ರೋಗಗಳು ಉಂಟೇ ಇಲ್ಲವೇ ಎಂದು ನಿಶ್ಚಯಿಸಲೂ ಪರೀಕ್ಷೆಗಳು ರಕ್ತತುಂಬುವದಕ್ಕೆ ಮುಂಚೆ ನಡೆಸಬೇಕಾಗಿರುತ್ತದೆ.

ಇಷ್ಟಕ್ಕೆಲ್ಲಾ ಹೊತ್ತೆಲ್ಲಿ ತರಬೇಕು ? ರಕ್ತತುಂಬುವುದು ಒಂದೊಂದು ನಿಮಿಷ ತಡವಾದರೂ ರೋಗಿಗೆ ಗುಣವಾಗುವ ಸಂಭವವು ದೂರವಾಗುತ್ತ ಹೋಗುತ್ತದೆ. ಆದ್ದರಿಂದ ದೊಡ್ಡ ಆಸ್ಪತ್ರೆಗಳಲ್ಲಿ ಖಾಯಂ ಕೆಲಸವಿರುವ ವೈದ್ಯರ ಮತ್ತು ದಾದಿಯರ ರಕ್ತವನ್ನು ಪರೀಕ್ಷಿಸಿ ಅವರವರ ಗುಂಪನ್ನು ಮೊದಲೇ ಗೊತ್ತುಮಾಡಿರುತ್ತಾರೆ. ಉದಾಹರಣೆಗೆ ಒಬ್ಬ ದಾದಿಯ ರಕ್ತ IV ನೆಯ ಗುಂಪಿಗೆ ಸೇರಿದ್ದಲ್ಲಿ ಆಕೆ ಯಾವ ಗುಂಪಿಗೆ ಸೇರಿದವನಿಗಾದರೂ ರಕ್ತಕೊಡಬಹುದು. ಕಾಲವಿಳಂಬವಿಲ್ಲದೆ ತಕ್ಷಣ ರಕ್ತ ತುಂಬಬೇಕಾದಾಗ ದಾತರ ಮತ್ತು ಪರಿಗ್ರಾಹಕರ ಗುಂಪು ಗೊತ್ತಿದ್ದರೆ ಬಹು ಸುಲಭ. ತಕ್ಷಣ ರಕ್ತತುಂಬುವದನ್ನು ಕೈಕೊಳ್ಳಬಹುದು. ಈಗಿನ ಕಾಲದಲ್ಲೋ ಪ್ರತಿಯೊಬ್ಬರೂ ಅವರು ಯಾವ ರಕ್ತಗುಂಪಿಗೆ ಸೇರಿದವರೆಂದು ತಿಳಿದಿರುವುದು ಆವಶ್ಯಕ. ನಮ್ಮ ಎತ್ತರ ತೂಕ ಎದೆಯ ಅಳತೆಯನ್ನು ತಿಳಿದಿರುವಂತೆ ನಮ್ಮ ರಕ್ತದ ಗುಂಪನ್ನೂ ತಿಳಿದಿರಬೇಕು. ಹೀಗೆ ತಿಳಿದುಕೊಂಡಿದ್ದರೆ ಸಮಯ ಒದಗಿದಾಗ ಪರೋಪಕಾರ—ಎಂತಹ ಪರೋಪಕಾರ!—ಪ್ರಾಣದಾನ ಮಾಡುವಂಥ ಪರೋಪಕಾರ ಮಾಡಿದಂತಾಗುತ್ತದೆ. ಹಾಗಿಲ್ಲದಿದ್ದರೂ ಸ್ವಾರ್ಥ ದೃಷ್ಟಿಯಿಂದಾದರೂ ನಾವು ಯಾವ ಗುಂಪಿಗೆ ಸೇರಿದವರೆಂದು ತಿಳಿದಿರುವುದು ಒಳ್ಳೆಯದಲ್ಲವೇ ? ಮುಂಜಾಗ್ರತೆಯ ಕುರುಹಲ್ಲವೇ ?

ಅಚ್ಚ ರಕ್ತ (Whole Blood)

ರಕ್ತವು ದೇಹದಿಂದ ತೆಗೆದ ೫-೧೦ ನಿಮಿಷಗಳಲ್ಲಿ ಗಡ್ಡೆಕಟ್ಟಿಕೊಳ್ಳುವುದು. ಆದ್ದರಿಂದ ರಕ್ತವನ್ನು ತೆಗೆದ ೫-೧೦ ನಿಮಿಷಗಳೊಳಗಾಗಿಯೇ ರೋಗಿಯ ರಕ್ತನಾಳದಲ್ಲಿ ತುಂಬಬೇಕಾಗಿರುತ್ತದೆ. ಅನೇಕ ಸಂದರ್ಭಗಳಲ್ಲಿ ಇಷ್ಟು ಸ್ವಲ್ಪ ಅವಕಾಶದಲ್ಲಿ ರಕ್ತ ತುಂಬುವುದು ಕಷ್ಟ. ರಕ್ತಕ್ಕೆ ಕರಗುವ ಆಕ್ಸಲೇಟ್ ಅಥವಾ ಸಿಟ್ರೇಟ್ ಉಪ್ಪನ್ನು ಬೆರಸಿದರೆ ಅದು ಗಡ್ಡೆಕಟ್ಟಿಕೊಳ್ಳದೆ ದ್ರವರೂಪದಲ್ಲಿಯೇ ಇರುವುದು. ಸರ್ವೇಸಾಧಾರಣವಾಗಿ ರಕ್ತವು ಗಡ್ಡೆಕಟ್ಟಿಕೊಳ್ಳದಿರಲು ಸೋಡಿಯಂ ಸಿಟ್ರೇಟ್ ಲವಣವನ್ನು ರಕ್ತಕ್ಕೆ ಸೇರಿಸುತ್ತಾರೆ. ಸಿಟ್ರೇಟ್ ರಕ್ತವನ್ನು ಕೊಂಚಕಾಲವಿಟ್ಟು ಉಪಯೋಗಿಸಬಹುದು.

ಮಂಜಿನ ಗಡ್ಡೆಯಿಂದ ತಣ್ಣಗೆ ಮಾಡಿದ ಪಾತ್ರೆಗಳಲ್ಲಿ ರಕ್ತವನ್ನಿಡುವದರಿಂದಲೂ ರಕ್ತವು ಹೆಪ್ಪುಗಟ್ಟಿಕೊಳ್ಳುವದಿಲ್ಲ. ಸಿಟ್ರೇಟ್ ರಕ್ತವನ್ನು ರೆಫ್ರಿಜರೇಟರುಗಳಲ್ಲಿಟ್ಟರಂತೂ ಅದು ಅನೇಕ ದಿನಗಳು ದ್ರವರೂಪದಲ್ಲಿಯೇ ಇರುತ್ತದೆ.

ಕಳೆದ ಘೋರ ಯುದ್ಧದಲ್ಲಿ ಸಿಟ್ರೇಟ್ ರಕ್ತವನ್ನು ಕೆಲವು ದಿನಗಳು ರೆಫ್ರಿಜರೇಟರುಗಳಲ್ಲಿಟ್ಟು ಉಪಯೋಗಿಸುವದಕ್ಕೆ ಆರಂಭವಾಯಿತು. ರಕ್ತವನ್ನು ಹೆಚ್ಚು ದಿನಗಳು ಇಟ್ಟಷ್ಟೂ ಇದರ ಪ್ರಯೋಜನವು ಕಡಿಮೆ ಕಡಮೆಯಾಗುತ್ತದೆಂದು ವೈದ್ಯರ ಅನುಭವಕ್ಕೆ ಬಂತು. ಕೂಡಿಟ್ಟ ರಕ್ತದಲ್ಲಿ ದಿನಕ್ರಮೇಣ ರಕ್ತದ ಕೆಲವಂಶಗಳ ಸತ್ವ ಕುಗ್ಗುವುದೆಂದೂ, ಕೆಲವು ಲವಣಗಳ ಪ್ರಮಾಣದಲ್ಲಿ ಬದಲಾವಣೆಯುಂಟಾಗುವುದೆಂದೂ ತಿಳಿಯಿತು. ಸುಮಾರು ೧೦ ದಿನಗಳಾದ ಮೇಲೆ ಕೂಡಿಟ್ಟ ಅಚ್ಚ ಸಿಟ್ರೇಟ್ ರಕ್ತವು ಪಾಂಡುರೋಗ (Anaemia) ಮತ್ತು ಇತರ ಕೆಲವು ಕಾಹಿಲೆಗಳಲ್ಲಿ ಹೆಚ್ಚು ಫಲಕಾರಿಯಾಗಲಾರದೆಂದು ವ್ಯಕ್ತವಾಯಿತು. ಇಂದಿನಿಂದಾಚೆ ಕೂಡಿಟ್ಟ ಸಿಟ್ರೇಟ್ ರಕ್ತವನ್ನು ಎಷ್ಟು ದಿನಗಳಾದ ಮೇಲಾದರೂ ಉಪಯೋಗಿಸಬಹುದೆಂದು ತಿಳಿದಿದ್ದ ವೈಜ್ಞಾನಿಕರ ಆಸೆಯು ನಿರಾಶೆಯಾಯಿತು. ಇದೇ ಕಾಲದಲ್ಲಿ ಯುದ್ಧಪ್ರಕರಣ: ರಕ್ತದ ಸರಬರಾಜು ಹೆಚ್ಚು ಹೆಚ್ಚಾಗಿ ಬೇಕಾಗುತ್ತಾ ಬಂತು. ಬೇಕಾದಷ್ಟು ರಕ್ತವು ಸಿಕ್ಕುವುದು ಕಷ್ಟವಾಗಿ ಕಂಡಿತು. ಈ ವಿಷಮ ಪರಿಸ್ಥಿತಿಯಲ್ಲಿ ರಷ್ಯಾ ದೇಶದ ಕೆಲವು ವೈಜ್ಞಾನಿಕರು ಆಕಸ್ಮಿಕವಾಗಿ ಮರಣ ಹೊಂದಿದ ಅಥವಾ ಕೊಲ್ಲಲ್ಪಟ್ಟ ಹೆಣದಿಂದ ಕೂಡಲೇ ರಕ್ತವನ್ನು ತೆಗೆದು ಉಪಯೋಗಿಸಬಹುದೆಂದು ಸಲಹೆಯಿತ್ತರು. ರಷ್ಯಾ ದೇಶದಲ್ಲಿ ಇದು ಆಚರಣೆಗೆ ಬಂತು. ಇತರ ದೇಶದವರಿಗೆ ಹೆಣಗಳಿಂದ ರಕ್ತವನ್ನು ತೆಗೆದು ಉಪಯೋಗಿಸುವುದು ಮನಸ್ಸಿಗೆ ಹಿತಕರವಾಗಿ ತೋರಲಿಲ್ಲ.

ಶಿಶುವು ಹುಟ್ಟಿದ ಕೂಡಲೇ ತಾಯಿಯ ಮಾಯೆಯಿಂದ (Placenta) ಬರುವ ರಕ್ತವನ್ನು ಕೂಡಲೇ ಶೇಖರಿಸಿ ಹೆರಿಗೆಯ ಆಸ್ಪತ್ರೆಗಳಲ್ಲಿ ಉಪಯೋಗಿಸುವುದು ಆಚರಣೆಗೆ ಬಂತು.

ರಕ್ತಕ್ಕೆ ಬದಲಾಗಿ ಇತರ ರಾಸಾಯನಿಕ ದ್ರವಗಳನ್ನು ಉಪಯೋಗಿಸಲು ಸಾಧ್ಯವೇ ಎಂದು ಪರಿಶೋಧನೆಗಳನ್ನು ವೈಜ್ಞಾನಿಕರು ನಡೆಸಿದರು. ಗಮ್, ಅಕೇಸಿಯಾ, ಜಿಲೆಟಿನ್, ಪೆಕ್ಟಿನ್, ಸಸಾರಜನಕ ಪದಾರ್ಥಗಳು ರಕ್ತಕ್ಕೆ ಬದಲಾಗಿ ಉಪಯೋಗಿಸಲ್ಪಟ್ಟವು. ದನದ ರಕ್ತದ್ರವದ ಮೇಲೂ ಪ್ರಯೋಗಗಳು ನಡೆದವು. ಆದರೆ ಇವು ಯಾವುವೂ ಹೆಚ್ಚು ಪ್ರಯೋಜನಕಾರಿಗಳಲ್ಲವೆಂದು ತಿಳಿದುಬಂದಿತು. ಮನುಷ್ಯರ ರಕ್ತವನ್ನು ಪಡೆಯುವುದು ಸುಲಭಸಾಧ್ಯವಲ್ಲವೆಂಬ ದೃಷ್ಟಿಯಿಂದ, ಇನ್ನು ಮುಂದೆಯೂ ಮನುಷ್ಯರ ರಕ್ತಕ್ಕೆ ಬದಲಾಗಿ ತುಂಬಬಹುದಾದ ರಾಸಾಯನಿಕ ದ್ರವಗಳ ಮೇಲೆ ಹೆಚ್ಚು ಪರಿಶೋಧನೆಗಳು ನಡೆಯುವುದರಲ್ಲಿ ಸಂದೇಹವಿಲ್ಲ.

ರಕ್ತದ್ರವ ಮತ್ತು ರಕ್ತವಸೆ

ಯಾವ ಬಗೆಯಾಗಿ ಶೇಖರಿಸಿದ ರಕ್ತವಾದರೂ, ರೆಫ್ರಿಜರೇಟರುಗಳಲ್ಲಿಟ್ಟಿದ್ದರೆ ಕೂಡ ಹತ್ತು ದಿನಗಳ ಮೇಲೆ ಉಪಯೋಗಿಸಲಾಗುವುದಿಲ್ಲ. ಅದೂ ಅಲ್ಲದೆ ಶತ್ರುದಾಳಿ ಯಿಂದ ಅನೇಕರಿಗೆ ಏಕಕಾಲದಲ್ಲಿ ಆಘಾತಗಳಾದಾಗ ಅಷ್ಟು ಜನರಿಗೂ ಒಟ್ಟಿಗೇ ರಕ್ತ ತುಂಬಬೇಕಾದ ಪ್ರಸಂಗ ಬಂದಲ್ಲಿ ಮೇಲೆ ಹೇಳಿದ ಕ್ರಮಗಳಿಂದ ಎಷ್ಟು ಸಾಧ್ಯ? ದಾತರನ್ನು ಒದಗಿಸುವುದೆಲ್ಲಿ? ರಕ್ತ ಪರೀಕ್ಷೆಗಳು ಯಾವಾಗ? ಈ ತೊಂದರೆಗಳನ್ನು ನಿವಾರಣೆ ಮಾಡಿ ಶೇಖರಿಸಿದ ರಕ್ತವನ್ನು ಎಷ್ಟು ದಿನಗಳಾದರೂ ಇಟ್ಟು, ಸಮಯ ಬಿದ್ದಾಗ ಉಪಯೋಗಿಸಿಕೊಳ್ಳುವಂತೆ ಮಾಡುವ ಆಲೋಚನೆಗಳು ಹೊರಟವು.

ವಿಮಾನ ದಾಳಿಗಳಲ್ಲಿ ಗಾಯಗೊಂಡವರಿಗೆ, ಮತ್ತು ಯುದ್ಧರಂಗಗಳಲ್ಲಿ ಗಾಯಗೊಂಡವರಿಗೆ ಭಯಾವೇಶ (Shock) ವುಂಟಾಗಿ ರಕ್ತ ತುಂಬುವ ಪರಿಸ್ಥಿತಿಯು ಅತಿ ಹೆಚ್ಚಾಗಿ ಒದಗುವುದೆಂಬ ವಿಷಯವು ಎಲ್ಲರಿಗೂ ತಿಳಿದದ್ದೇ ಆಗಿದೆ. ಈ ಭಯಾ ವೇಶ ಸಮಯದಲ್ಲಿ ಕಂಡುಬರುವ ಚಿಹ್ನೆಗಳು ಮುಖ್ಯವಾಗಿ ರಕ್ತದ ಪ್ರಮಾಣವು ಕುಗ್ಗುವಿಕೆಯಿಂದಲೇ ಹೊರತು, ರಕ್ತದಲ್ಲಿರುವ ಕೆಂಪು ಕಣಗಳ ಅಥವಾ ಆಮ್ಲಜನಕದ ಅಭಾವದಿಂದಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ಚಿಕಿತ್ಸೆ ನಡೆಸಲು ರಕ್ತದ ಮೂರು ಅಂಗಗಳಾದ ಕಣಗಳು, ಸಸಾರಜನಕ ಪದಾರ್ಥಗಳು, ಮತ್ತು ರಕ್ತದ್ರವ—ಇವು ಮೂರೂ ಆವಶ್ಯಕವಲ್ಲವೆಂದೂ, ರಕ್ತದ್ರವ ಮತ್ತು ಸಸಾರಜನಕ ಪದಾರ್ಥಗಳೆರಡೇ ಆವಶ್ಯಕವೆಂದೂ ತಿಳಿಯಿತು.

ಮನುಷ್ಯ ದೇಹವು ಕೋಟ್ಯಂತರ ಜೀವಕಣಗಳಿಂದ ಮಾಡಲ್ಪಟ್ಟಿದೆ. ರಕ್ತದ ಪ್ರಮುಖ ಕಾರ್ಯವು ಈ ಜೀವಕಣಗಳಿಗೆ ಪೋಷಕ ಪದಾರ್ಥಗಳನ್ನು ಒದಗಿಸಿ ಅವುಗಳಿಂದ ಉತ್ಪತ್ತಿಯಾದ ಕಶ್ಮಲ ಪದಾರ್ಥಗಳನ್ನು ಹೊತ್ತುಕೊಂಡು ಹೋಗು ವುದು. ಈ ಕಾರ್ಯವು ರಕ್ತವಸೆಯಲ್ಲಿರುವ ಸಸಾರಜನಕ ಪದಾರ್ಥಗಳ ಸಹಾಯ ದಿಂದ ನಡೆಯುವುದು. ಭಯಾವೇಶದ ಚಿಹ್ನೆಗಳಿಗೆ ಸಸಾರಜನಕ ನಷ್ಟವೂ ಒಂದು ಕಾರಣ. ಸುರಿದುಹೋದ ರಕ್ತದ ಪ್ರಮಾಣವನ್ನು ಗ್ಲೂಕೋಸ್ ನೀರು ಅಥವಾ ಗ್ಲೂಕೋಸ್ ಲವಣ ಮಿಶ್ರಿತ ದ್ರವಗಳನ್ನು ಇನ್‌ಜೆಕ್ಷನ್ ಮೂಲಕ (Osmosis) ತುಂಬುವುದರಿಂದ ಸರಿಪಡಿಸಬಹುದು. ದೇಹದ "ಆಸ್ಮೋಸಿಸ್" ಕಾರ್ಯವು ಸುಸೂತ್ರವಾಗಿ ನಡೆಯಲು ಸಸಾರಜನಕ ಪದಾರ್ಥಗಳುಳ್ಳ ರಕ್ತ ಅಥವಾ ರಕ್ತವಸೆ ಅಥವಾ ರಕ್ತದ್ರವವನ್ನು ತುಂಬಬೇಕು.

ಈಗ ರಕ್ತವನ್ನು ಈ ಕೆಳಗೆ ಸೂಚಿಸಿರುವ ಮುಖ್ಯ ಸಂದರ್ಭಗಳಲ್ಲಿ ಚಿಕಿತ್ಸಾ ರೂಪವಾಗಿ ಕೊಡುತ್ತಾರೆ.

A. (೧) ರಕ್ತ ಸ್ರಾವವಾದಾಗ.

(೨) ಕೆಲವು ಶಸ್ತ್ರ ಚಿಕಿತ್ಸೆಗೆ ಮೊದಲು ಅಥವಾ ತರುವಾಯ.

(೩) ಪಾಂಡುರೋಗ ಮತ್ತು ಇತರ ಕೆಲವು ಕೆಂಪು ಕಣಗಳ ಅಭಾವ.

(೪) ಬಿಳಿಯ ಕಣಗಳ ಮತ್ತಿತರ ರಕ್ತದ ರಕ್ಷಣಾಂಶಗಳ ಅಭಾವ.

(೫) ರಕ್ತೋತ್ಪತ್ತಿಗೆ ಸಂಬಂಧಿಸಿದ ಕಾಹಿಲೆಗಳು.

ಮೇಲಣ ಸಂದರ್ಭಗಳಲ್ಲಿ ರಕ್ತದಲ್ಲಿರುವ ಕಣಗಳ ಅಭಾವವಿರುತ್ತದೆ. ಅದರಿಂದ ಅಚ್ಚರಕ್ತವನ್ನಾಗಲೀ ಅಥವಾ ಪ್ರತ್ಯೇಕಿಸಿದ ರಕ್ತದ ಕಣಗಳನ್ನಾಗಲೀ ಉಪಯೋಗಿಸಬೇಕು.

B. ಗಾಯಗೊಂಡೋ, ಮೈ ಸುಟ್ಟುಕೊಂಡೋ, ಅಥವಾ ಇತರ ಕಾರಣಗಳಿಂದಲೋ ಭಯಾವೇಶವುಂಟಾಗಿ ರಕ್ತ ಪರಿಚಲಸೆಯಲ್ಲಿ ರಕ್ತದ್ರವವೂ ಸಸಾರಜನಕ ವಸ್ತುಗಳೂ ಕಮ್ಮಿಯಾಗುವಿಕೆ. ಈ ಸಂದರ್ಭದಲ್ಲಿ ಹಿಂದೆ ತಿಳಿಸಿದಂತೆ ಕೂಡಲೇ ರಕ್ತದ್ರವ ಅಥವಾ ರಕ್ತವಸೆಯನ್ನು ತುಂಬಬೇಕು. ಕೆಂಪುಕಣಗಳ ಆವಶ್ಯಕತೆ ಇಲ್ಲ. ರಕ್ತತುಂಬುವ ಸನ್ನಿವೇಶಗಳನ್ನು ಸರಿಯಾಗಿ ಅರಿತು ರಕ್ತಕಣಗಳನ್ನೋ, ರಕ್ತದ್ರವವನ್ನೋ ಉಪಯೋಗಿಸುವುದು ಶಾಸ್ತ್ರೀಯವಾದದ್ದು.

ಸಿಟ್ರೇಟ್ ರಕ್ತವನ್ನು ಒಂದು ಪಾತ್ರೆಯಲ್ಲಿ ಅಲುಗಾಡದೆ ರೆಫ್ರಿಜರೇಟರುಗಳಲ್ಲಿ ೩-೪ ದಿನಗಳಿಟ್ಟಿದ್ದರೆ ರಕ್ತದ ಕಣಗಳು ಕೆಳಗಿಳಿಯುವುವು. ತೆಳುವಾದ ರಕ್ತದ್ರವ ಮೇಲೆ ನಿಲ್ಲುತ್ತದೆ. ಕಣಗಳು ವಿನಾ ಮಿಕ್ಕ ರಕ್ತಾಂಶಗಳೆಲ್ಲವೂ ರಕ್ತದ್ರವದಲ್ಲಿರುವುದರಿಂದ ರಕ್ತದ್ರವವನ್ನೇ ಅಚ್ಚರಕ್ತಕ್ಕೆ ಬದಲಾಗಿ ಮೇಲೆ ತಿಳಿಸಿದ ಭಯಾವೇಶ ಸಂದರ್ಭಗಳಲ್ಲಿ ವೈದ್ಯರು ಉಪಯೋಗಿಸತೊಡಗಿದರು. ಈ ರಕ್ತದ್ರವದ ಉಪಯೋಗದಲ್ಲಿ ಅನೇಕ ಸೌಕರ್ಯಗಳು ಕಂಡುಬಂದವು. ರಕ್ತದ್ರವವನ್ನು ರೆಫ್ರಿಜರೇಟುಗಳಲ್ಲಿ (೪°-೫°c ಶಾಖದಲ್ಲಿ) ಕೆಡದಂತೆ ಎಷ್ಟು ದಿನಗಳಾದರೂ ಇಟ್ಟಿರಬಹುದು. ಇದು ಕಾಲಕ್ರಮದಲ್ಲಿ ಅಚ್ಚರಕ್ತದಂತೆ ಕೆಡುವುದಿಲ್ಲ. ರಕ್ತದ್ರವವು ಬಗ್ಗಡವಾಗಿದ್ದರೆ ಅದನ್ನು ಶೋಧಿಸುವರು. ಶೋಧಿಸಿದಾಗ ರಕ್ತದ್ರವದಿಂದ ಪ್ರತ್ಯೇಕಗೊಳ್ಳಬಹುದಾದ ಫೈಬ್ರಿನ್ (Fibrin) ಮತ್ತು ರಕ್ತದ್ರವದಲ್ಲಿ ಅಡಗಿರಬಹುದಾದ ಕೆಲವು ಕ್ರಿಮಿಗಳು ಸೋಸುವ ರಟ್ಟಿನಮೇಲೆ ನಿಲ್ಲುವುವು. ಈ ರೀತಿ ದೊರೆತ ರಕ್ತದ್ರವವು ಸ್ವಚ್ಛವಾಗಿರುವುದು. ಈ ಸ್ವಚ್ಛದ್ರವವನ್ನು ಯಾವ ಭಯವೂ ಇಲ್ಲದೆ ತುಂಬಬಹುದು.

ರಕ್ತದ್ರವವನ್ನು ಅತಿ ಶೈತ್ಯಪೆಟ್ಟಿಗೆಗಳಲ್ಲಿಟ್ಟರೆ (—೧೫ ರಿಂದ—೨೦°c ಶಾಖ) ಘನ ರೂಪವನ್ನು ತಾಳುವುದು. ಈ ಘನ ರೂಪದಲ್ಲಿ (Frozen State) ಅತ್ಯಂತ ಶೀತವಾದ ಈ ಸನ್ನಿವೇಶದಲ್ಲಿ ರಕ್ತದ್ರವವನ್ನು ಎಷ್ಟು ವರ್ಷಗಳ ಕಾಲವಾದರೂ

ಕೆಡದಂತಿಟ್ಟಿರಬಹುದು. ಬೇಕಾದಾಗ ಘನರೂಪದ ರಕ್ತವನ್ನು ಕರಗಿಸಿ ಪುನಃ ದ್ರವ ರೂಪಕ್ಕೆ ತಂದು ತುಂಬಲು ಉಪಯೋಗಿಸಬಹುದು. ರಕ್ತದ್ರವವನ್ನು ಘನರೂಪಕ್ಕೆ ತರಲು ಬೇಕಾದ ಸಲಕರಣವು ಬಹು ತೊಡಕಾದ್ದರಿಂದಲೂ ಮತ್ತು ಘನರೂಪದಿಂದ ದ್ರವರೂಪಕ್ಕೆ ತರಲು ಸ್ವಲ್ಪಕಾಲ ಹಿಡಿಯುವುದರಿಂದಲೂ ಈ ರೀತಿ ರಕ್ತದ್ರವ ವನ್ನು ರಕ್ಷಿಸುವುದು ಹೆಚ್ಚು ರೂಢಿಯಲ್ಲಿಲ್ಲ.

ರಕ್ತದ್ರವವನ್ನು ಉಪಯೋಗಿಸುವಾಗ ದಾತರ ಮತ್ತು ಪರಿಗ್ರಾಹಕರ ರಕ್ತ ಪರೀಕ್ಷೆ ಅನಾವಶ್ಯಕ. ರಕ್ತಕಣರಹಿತವಾದ ದ್ರವವನ್ನು ಪಯೋಗಿಸುವಾಗ ಈ ಪರೀ ಕ್ಷೆಯ ಆವಶ್ಯಕತೆ ಎಲ್ಲಿಂದ ಬಂತು ?

ಕೂಡಿಟ್ಟ ರಕ್ತದ್ರವವನ್ನು ಯಾರಿಗಾದರೂ ಕೊಡಬಹುದು. ಸಾವಿರಾರು ಜನರಿಂದ ತೆಗೆದ ರಕ್ತವನ್ನು ಒಟ್ಟುಕೂಡಿಸಿ ಆದರಿಂದ ಬಂದ ದ್ರವವನ್ನು ರೆಫ್ರಿಜ ರೇಟರುಗಳಲ್ಲಿಟ್ಟು ಕಾಪಾಡಬಹುದು. ರಕ್ತತುಂಬುವ ವೇಳೆಯಲ್ಲಿ ದಾತರನ್ನು ಹುಡುಕಿಕೊಂಡು ಹೋಗುವ ಹವ್ಯಾಸವಿಲ್ಲ. ಹೀಗೆ ಮಾಡಿದ ರಕ್ತದ್ರವದ ಶೇಖ ರಣೆಯನ್ನೇ ರಕ್ತದ ನಿಧಿ ಅಥವಾ ರಕ್ತದ ಬ್ಯಾಂಕ್ ಎನ್ನುವುದು.

ರಕ್ತನಿಧಿಯ ಉದ್ದೇಶ ಮತ್ತು ತತ್ವಗಳು

ರಕ್ತನಿಧಿಯ ಉದ್ದೇಶ ಮತ್ತು ತತ್ವಗಳು ಸಾಧಾರಣವಾಗಿ ಒಂದು ಬ್ಯಾಂಕಿನ ಉದ್ದೇಶ ಮತ್ತು ತತ್ವಗಳೇ ಆಗಿವೆ. ವೈಯಕ್ತಿಕವಾಗಿ ಯಾರು ಬೇಕಾದರೂ ಈ ನಿಧಿಯಲ್ಲಿ ಠೇವಣಿಯಾಗಿ ಸ್ವಲ್ಪ ರಕ್ತವನ್ನಿಟ್ಟು ಸಮಯ ಒದಗಿದಾಗ ಅದನ್ನು ಉಪಯೋಗಿಸಬಹುದು. ಬ್ಯಾಂಕುಗಳಲ್ಲಿ ಹಣವನ್ನು ಕೂಡಿಸುವಂತೆ ರಕ್ತದ ಬ್ಯಾಂಕಿ ನಲ್ಲಿ ರಕ್ತದ್ರವವನ್ನು ಕೂಡಿಸುತ್ತಾರೆ. ಬ್ಯಾಂಕಿನಿಂದ ಹಣವನ್ನು ಬೇಕಾದಾಗ ಹಿಂದಕ್ಕೆ ತೆಗೆಯುವಂತೆ, ರಕ್ತದ್ರವವನ್ನು ಬೇಕಾದಾಗ ತೆಗೆದು ಉಪಯೋಗಿಸು ತ್ತಾರೆ. ಆದರೆ ಹಣದ ಬ್ಯಾಂಕಿನಲ್ಲಿ ಲೇಣೆದೇಣೆಗಳು ಲಾಭದ ಆಸೆಯಿಂದ ಜರುಗು ತ್ತವೆ. ರಕ್ತದ ನಿಧಿಯಲ್ಲಾದರೋ ಪರೋಪಕಾರವೇ ದೊಡ್ಡಲಾಭ. ವಾಣಿಜ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಬ್ಯಾಂಕೇ ಆಗಲಿ ಅಥವಾ ವೈದ್ಯಕೀಯ ಕ್ಷೇತ್ರದ ರಕ್ತ ನಿಧಿಯೇ ಆಗಲಿ ತೃಪ್ತಿಕರವಾಗಿ ಕೆಲಸಮಾಡಲು ಕಾಲಕಾಲಕ್ಕೆ ಅದರ ಸದಸ್ಯರಿಂದ ಠೇವಣಾತಿಗಳು ಒದಗಬೇಕಾದುದು ಅತ್ಯಗತ್ಯ. ರಕ್ತನಿಧಿಗೆ ಬೇಕಾಗುವ ಈ ಠೇವ ಣಾತಿಯನ್ನು ದಾನಿಗಳು ದೊಡ್ಡ ಮನಸ್ಸಿನಿಂದಲೂ ಸಂಪೂರ್ಣ ಸಮ್ಮತಿಯಿಂದಲೂ ಕೊಡುವ ರಕ್ತದಿಂದ ಪಡೆಯಬೇಕು. ರಕ್ತನಿಧಿ ದೊಡ್ಡದಾದಷ್ಟೂ ನಾವು ಏಕ ಕಾಲದಲ್ಲಿ ಅನೇಕರಿಗೆ ಚಿಕಿತ್ಸೆ ನಡೆಸಬಹುದು.

ರಕ್ತದ ಪುಡಿ (Plasma Powder)

ಹೀಗೆ ಶೇಖರಿಸಿಟ್ಟ ನಿಧಿಯಿಂದ ದ್ರವವನ್ನು ಉಪಯೋಗಿಸುವುದರಲ್ಲಿಯೂ ಸ್ವಲ್ಪ ತೊಂದರೆಯಿದೆ. ಈ ಬಂಡವಾಳವು ದ್ರವರೂಪದಲ್ಲಿರುವುದರಿಂದ ಇದನ್ನು ಒಂದು ಊರಿನಿಂದ ಮತ್ತೊಂದು ಊರಿಗೆ ಸಾಗಿಸುವುದು ಕಷ್ಟ. ಮತ್ತು ಇದನ್ನು ಯಾವಾಗಲೂ ರೆಫ್ರಿಜರೇಟರುಗಳಲ್ಲಿಯೇ ಇಟ್ಟಿರಬೇಕು. ಈ ಕಷ್ಟವನ್ನು ಪರಿಹರಿಸಲು ಈಚಿಗೆ ರಕ್ತತುಂಬುವ ಕ್ರಮದಲ್ಲಿ ಮತ್ತೊಂದು ಸುಧಾರಣೆ ತಂದಿದ್ದಾರೆ. ಸೀರಿನ ಭಾಗ ಮಾತ್ರ ಹೋಗುವಂತೆ ರಕ್ತದ್ರವವನ್ನು ಶೋಷಿಸಿದರೆ ರಕ್ತದ ಪುಡಿಯು ಸಿಕ್ಕುತ್ತದೆ. ಈ ಪುಡಿಗೆ ಬೇಕಾದಾಗ ಬೇಕಾದ ಪ್ರಮಾಣದಲ್ಲಿ ನೀರನ್ನು ಬೆರಸಿ ಪುನಃ ದ್ರವರೂಪಕ್ಕೆ ತಂದು ದೇಹಕ್ಕೆ ತುಂಬಲು ಸಾಧ್ಯ. ಈ ಪುಡಿಯನ್ನು ಎಷ್ಟು ಕಾಲವಾದರೂ ಇಡಬಹುದು. ಇದನ್ನು ರೆಫ್ರಿಜರೇಟರುಗಳಲ್ಲಿಡುವ ಆವಶ್ಯಕವಿಲ್ಲ. ಇದು ಘನರೂಪದಲ್ಲಿರುವುದರಿಂದ ಇದರ ಪ್ರಮಾಣವು ಹೆಚ್ಚಾಗಿ ಕಾಣುವುದಿಲ್ಲ. ಪುಡಿಯನ್ನು ಗಾಜಿನ ಸೀಸೆಗಳಲ್ಲಿಟ್ಟು ಸಾವಿರಾರು ಮೈಲಿಗಳು ದೂರವಿರುವ ಊರುಗಳಿಗೆ ಸುಲಭವಾಗಿ ಸಾಗಿಸಬಹುದು. ರಕ್ತ ಪುಡಿಯನ್ನು ಹೆಚ್ಚು ತಯಾರಿಸಬೇಕಾದಲ್ಲಿ ಹೆಚ್ಚು ಜನರು ರಕ್ತಕೊಡಲು ಸಿದ್ಧರಾಗಿರಬೇಕು. ಇಂಗ್ಲೆಂಡ್ ಅಮೆರಿಕಾ, ರಷ್ಯಾ ಮತ್ತಿತರ ಮುಂದುವರಿದ ದೇಶಗಳಲ್ಲೆಲ್ಲಾ ನೂರಾರು ರಕ್ತ ನಿಧಿಗಳು ಸ್ಥಾಪಿಸಲ್ಪಟ್ಟಿವೆ. ಮತ್ತು ಈ ದೇಶಗಳ ಸಾಮಾನ್ಯ ಜನರಿಗೂ ರಕ್ತನಿಧಿಯ ವಿಚಾರ ತಿಳಿದಿದೆ. ನಮ್ಮ ದೇಶದಲ್ಲಿ ಈಚೆಗೆ ರಕ್ತನಿಧಿಯನ್ನು ಕಲ್ಕತ್ತಾ, ಲಾಹೋರ್, ಬೊಂಬಾಯಿ, ಮದ್ರಾಸು, ಬೆಂಗಳೂರು ಪಟ್ಟಣಗಳಲ್ಲಿ ಸ್ಥಾಪಿಸಿದ್ದಾರೆ. ರಕ್ತತುಂಬುವ ಪ್ರಮೇಯಗಳು ಯುದ್ಧದಲ್ಲಿ ತೊಡಗಿರುವ ಕೆಲವು ರಾಷ್ಟ್ರಗಳಷ್ಟು ಇಂಡಿಯಾದಲ್ಲಿ ಬಂದಿಲ್ಲ. ಇಂಡಿಯಾದಲ್ಲಿ ಸಾಕಾದಷ್ಟು ಪ್ರಯೋಗ ಶಾಲೆಗಳೂ ಇಲ್ಲ. ಈ ಕಾರಣಗಳಿಂದ ರಕ್ತನಿಧಿಯ ಉದ್ದೇಶ, ಕಾರ್ಯಕ್ರಗಳಲ್ಲಿ ನಮ್ಮ ಸಾಮಾನ್ಯ ಜನಗಳಿಗೆ ಹೆಚ್ಚು ತಿಳಿವಳಿಕೆಯಿಲ್ಲ.

ರಕ್ತನಿಧಿಗಳ ಕಾರ್ಯಕ್ರಮ

ಈಗ ನಮ್ಮ ದೇಶದ ಯಾವುದಾದರೂ ಒಂದು ರಕ್ತನಿಧಿಯ ಕಾರ್ಯಕ್ರಮವನ್ನು ತಿಳಿಯೋಣ. ಕಲ್ಕತ್ತಾ ನಗರದ ರಕ್ತನಿಧಿಯು ಇಂಡಿಯಾ ಸರ್ಕಾರ ಮತ್ತು ಬಂಗಾಳಾ ಪ್ರಾಂತೀಯ ರೆಡ್-ಕ್ರಾಸ್ ಸಂಸ್ಥೆಯ ಸಹಕಾರದಿಂದ ಸ್ಥಾಪಿತವಾದ ಸಂಸ್ಥೆ. ಈ ರಕ್ತನಿಧಿಯ ನಿಯುಕ್ತಮಂಡಲಿಯು ತನ್ನ ಈಗಿನ ಕಾರ್ಯಕ್ರಮಗಳನ್ನು ೧೯೪೨ರ ಜನವರಿ ತಿಂಗಳಲ್ಲಿ ಮೊದಲುಮಾಡಿತು. ಇದು ಅಖಿಲ ಭಾರತ ಹೈಜೀನ್ ಮತ್ತು ಪಬ್ಲಿಕ್ ಹೆಲ್ತ್ ಇನ್ ಸ್ಟಿಟ್ಯೂಟಿನಲ್ಲಿ ಸ್ಥಾಪಿತವಾಗಿದೆ. ೧೯೪೩ನೆಯ ಇಸವಿ

ಜನವರಿ ೯ನೆಯ ತಾರೀಖಿನ ವರೆಗೆ ಈ ನಿಧಿಗೆ ೨೨,೬೧೧ ದಾನಿಗಳು ರಕ್ತಕೊಟ್ಟರು. ಈ ರಕ್ತಶೇಖರಣೆಯಿಂದ ೩,೮೮೫ ಸೇರು ರಕ್ತವಸೆಯನ್ನು ತಯಾರ್ಮಾಡಲಾಯಿತು. ಶಾಂತಿ ಸಮಯದಲ್ಲಿ ಪ್ರತಿಯೊಂದು ಲಕ್ಷ ಪ್ರಜೆಗೂ ಒಂದು ವರ್ಷಕ್ಕೆ ಸುಮಾರು ೧,೨೫೦ ಸೇರು ರಕ್ತಚಿಕಿತ್ಸೆಗೆ ಬೇಕಾಗುವುದೆಂದು ಅಂದಾಜು ಮಾಡಲ್ಪಟ್ಟಿದೆ. ಈ ಪ್ರಕಾರ ೨೦ ಲಕ್ಷ ಪ್ರಜಾಸಂಖ್ಯೆಯುಳ್ಳ ಕಲ್ಕತ್ತಾಕ್ಕೆ ಒಂದು ವರ್ಷಕ್ಕೆ ೨೫,೦೦೦ ಸೇರು ರಕ್ತ ಬೇಕು. ಅಂದ ಮೇಲೆ ವಿಮಾನಧಾಳಿಗಳಿಂದ ಕೂಡಿದ ಈ ಯುದ್ಧದಲ್ಲಿ ಎಷ್ಟು ಅಪಾರವಾಗಿ ರಕ್ತ ಬೇಕೆಂದು ನೀವೇ ಊಹಿಸಬಹುದು. ಲಂಡನ್, ಮಾಸ್ಕೋ ನಗರಗಳ ರಕ್ತನಿಧಿಗೆ ಹೋಲಿಸಿದರೆ ಕಲ್ಕತ್ತೆಯ ಒಂದು ವರ್ಷದ ಕಾರ್ಯವು ಬಹು ಅಲ್ಪವೆಂದು ತಿಳಿದುಬರುವುದು. ಆದರೆ ಕಲ್ಕತ್ತೆಯು ಉಳಿದ ಇಂಡಿಯಾಕ್ಕಿಂತ ಹೆಚ್ಚು ರಕ್ತವನ್ನು ಶೇಖರಿಸಿದೆ ಎಂಬುದು ಪ್ರಶಂಸನೀಯವಾದ ಅಂಶ.

ಕಲ್ಕತ್ತಾ ರಕ್ತನಿಧಿಯು ಮಾಡುತ್ತಿರುವ ಕಾರ್ಯಕ್ರಮಗಳನ್ನು ಮೂರು ಮುಖ್ಯ ವಿಭಾಗಗಳಾಗಿ ವಿಂಗಡಿಸಬಹುದು. (೧) ದಾತರನ್ನು ಚುನಾಯಿಸಿಕೊಳ್ಳುವುದು. (೨) ರಕ್ತವನ್ನು ಶೇಖರಿಸುವುದು. (೩) ಶಾಸ್ತ್ರೀಯ ರಕ್ತಪರೀಕ್ಷೆ ಮತ್ತು ರಕ್ತವನ್ನು ಹದಗೊಳಿಸುವುದು (Processing). ಹದಗೊಳಿಸಿದ ರಕ್ತವನ್ನು ಸಿವಿಲ್ ಮತ್ತು ಮಿಲಿಟರಿ ಆಸ್ಪತ್ರೆಗಳಿಗೆ ತುರತುಬಿದ್ದಾಗ ಒದಗಿಸುವುದೇ ಈ ತಯಾರಿಕೆ ಮತ್ತು ಶೇಖರಣೆಯ ಅಂತ್ಯೋದ್ದೇಶ.

ದಾತರನ್ನು ಒದಗಿಸಿಕೊಳ್ಳುವುದು :—ಈ ಸಂಸ್ಥೆಯವರು ಪ್ರಚಾರ ಕಾರ್ಯದ ಮೂಲಕವಾಗಿಯೇ ದಾನಮಾಡಲು ಮುಂಬರುವ ದಾತರನ್ನು ಚುನಾಯಿಸಿಕೊಳ್ಳುವರು. ತತ್ಕಾಲದಲ್ಲಿ ರಕ್ತವನ್ನು ಕೊಡಲು ಸಿದ್ಧವಿರುವವರಿಗೆಲ್ಲಾ ಧನಸಹಾಯ ಮಾಡಲು ಸಾಧ್ಯವಾಗಿಲ್ಲ. ಪ್ರತಿಯೊಬ್ಬ ದಾತನೂ ತಾನು ರಕ್ತವೀಯುವುದು ತನ್ನ ಆರೋಗ್ಯಕ್ಕಾಗಿಯೂ, ಪರೋಪಕಾರಕ್ಕಾಗಿಯೂ ಎಂಬುದನ್ನು ತಿಳಿಯಬೇಕು. ನಮ್ಮಲ್ಲಿಯೇ ಯಾರಾದರೂ ಶತ್ರು ವಿಮಾನ ದಾಳಿಗೊಳಗಾಗಿ ರಕ್ತವನ್ನು ತುಂಬಿಸಿಕೊಳ್ಳುವ ಸಮಯ ಒದಗಬಹುದು. ಲೋಕ ಕ್ಷೇಮಕ್ಕಾಗಿ ಕೊಂಚ ರಕ್ತವನ್ನೂ ಸಹ ಕೊಡದವನು ಇತರರಿಂದ ಶೇಖರವಾದ ರಕ್ತವನ್ನು ಉಪಯೋಗಿಸಲು ಯಾವ ಹಕ್ಕೂ ಪಡೆದಿರುವುದಿಲ್ಲ.

ಸ್ವಾರ್ಥತ್ಯಾಗಿ ದಾತರುಗಳನ್ನು ಸಾಮೂಹಿಕ ಗುಂಪುಗಳಿಂದ—ಕಾರ್ಖಾನೆಗಳು, ಕ್ಲಬ್ಬುಗಳು, ಆಫೀಸುಗಳು, ರೈಲ್ವೆ ಸಂಸ್ಥೆಗಳಿಂದ ಫಲಕಾರಿಯಾಗಿ ಶೇಖರಿಸಲಾಗಿದೆ. ಈರೀತಿ ಶೇಖರಿಸಲು ಆ ಸಂಸ್ಥೆಗಳ ಒಡೆಯರೊಡನೆ ಭೇಟಿ, ನೌಕರರುಗಳಿಗೆ ರಕ್ತನಿಧಿಯ ಉದ್ದೇಶ, ಕಾರ್ಯಕ್ರಮಗಳ ವಿವರಣೆ ಮೊದಲು ನಡೆಯಬೇಕು. ರಕ್ತ

ನಿಧಿಯ ಉದ್ದೇಶ, ಕಾರ್ಯಕ್ರಮ, ದಾತರ ಸಹಾಯ ಇವುಗಳನ್ನು ವಿವರಿಸುವುದು ಅತ್ಯಾವಶ್ಯಕವೆಂದು ಕಲ್ಕತ್ತಾ ರಕ್ತನಿಧಿಯವರ ಪರಿಶ್ರಮದಿಂದ ತಿಳಿದುಬಂದಿದೆ. ಇವೆಲ್ಲವನ್ನೂ ನೋಡಿದರೆ ರಕ್ತನಿಧಿಯ ಕಚೇರಿಯ ಕೆಲಸವು ರಕ್ತ ಶೇಖರಣೆಯ ಕಾರ್ಯದಲ್ಲಿಯೂ, ದಾತರ ಜಮಾವಣೆಯಲ್ಲಿಯೂ ಎಷ್ಟು ಗುರುತರವಾದುದೆಂದು ತಿಳಿಯುವುದು. ರಕ್ತನಿಧಿ ಕಚೇರಿಯ ಕಾರ್ಯಕ್ರಮವಿಷ್ಟೇ ಅಲ್ಲ. ಪ್ರಚಾರಕಾರ್ಯದ ಜೊತೆಗೆ ಸಾವಿರಾರು ದಾತರ ಹೆಸರುಗಳನ್ನು ಪುಸ್ತಕಗಳಲ್ಲಿ ದಾಖಲೆ ಮಾಡುವುದು, ಅವರಿಗೆ ರಕ್ತ ಕೊಡಲು ಅನುಕೂಲವಾದ ದಿನಗಳನ್ನು ಗೊತ್ತುಮಾಡುವುದು, ಮತ್ತು ಈ ವಿಚಾರದಲ್ಲಿ ಅವರುಗಳಿಗೆ ತಿಳಿವಳಿಕೆ ಚೀಟಿಗಳನ್ನು ಕಳುಹಿಸುವುದು, ರಕ್ತನಿಧಿಯ ದಾತರುಗಳ ವಿಚಾರವಾಗಿ ನಡೆದ ರಕ್ತ ಪರೀಕ್ಷೆ ವಿಚಾರಗಳನ್ನು ಬರೆದಿಡುವುದು ಮೊದಲಾದ ಕಾರ್ಯಕ್ರಮಗಳೆಲ್ಲವೂ ರಕ್ತನಿಧಿಯ ಕಚೇರಿ ವರ್ಗದವರಿಗೇ ಸೇರಿದುದು.

ರಕ್ತಶೇಖರಣೆ :—ರಕ್ತಶೇಖರಣೆಯು ರಕ್ತನಿಧಿಯ ಕಟ್ಟಡದಲ್ಲಿಯೂ ಮತ್ತು ಹೊರಗಡೆಯಲ್ಲಿಯೂ ನಡೆಯುತ್ತದೆ. ಒಂದು ದಿನಕ್ಕೆ (ಅಂದರೆ ಎಂಟು ಗಂಟೆಗಳ ಕಾಲ) ೬೦-೭೦ ದಾತರ ರಕ್ತವನ್ನು ಶೇಖರಿಸುತ್ತಾರೆ. ಒಂದೇ ಕಾಲದಲ್ಲಿ ಒಟ್ಟಿಗೆ ನಾಲ್ಕು ಜನ ದಾತರಿಂದ ರಕ್ತ ತೆಗೆಯಲು ಸೌಕರ್ಯವಿದೆ. ರಕ್ತ ಕೊಟ್ಟ ಮೇಲೆ ದಾತರುಗಳಿಗೆ ಟೀ, ಕಾಫೀ, ಹಾಲು ಮುಂತಾದುವುಗಳನ್ನು ಕೊಡಲಾಗುತ್ತದೆ. ಮೊದಲನೆಯದಾಗಿ ದಾತರ ರಕ್ತದ ಸಾಧಾರಣ ಪರೀಕ್ಷೆಗಳನ್ನು ನಡೆಸಿ ಅವುಗಳನ್ನು ಒಂದು ಪಟ್ಟಿಯಲ್ಲಿ ಗುರ್ತಿಸಿಕೊಳ್ಳುವರು. ಆ ಮೇಲೆ ದಾತರನ್ನು ಅವರಿಗೆ ಈಚೆಗೇನಾದರೂ ಆಗಿದ್ದ ಕಾಹಿಲೆಗಳ ವಿಚಾರ ಪ್ರಶ್ನಿಸುವರು. ಗೂರಲು, ಮಲೇರಿಯಾ, ಮೇಹಸಂಬಂಧ ಮುಂತಾದ ಕಾಹಿಲೆಗಳಿದ್ದರೆ ಅಂತಹವರಿಂದ ರಕ್ತವನ್ನು ತೆಗೆಯುವುದಿಲ್ಲ. ಅನಂತರ ದಾತರ ಹೃದಯ ಮತ್ತು ರಕ್ತನಾಳಗಳ ಪರೀಕ್ಷೆ ನಡೆಯುವುದು. ಹೃದಯದ ಕಾಹಿಲೆಯವರ ಮತ್ತೂ ರಕ್ತದ ಒತ್ತಡವು ಕಮ್ಮಿಯಾಗಿರುವವರ, ರಕ್ತವನ್ನು ಸಾಮಾನ್ಯವಾಗಿ ತೆಗೆದುಕೊಳ್ಳುವುದಿಲ್ಲ. ಅನಂತರ ದಾತರ ದೇಹತೂಕವನ್ನು ಪರೀಕ್ಷಿಸುವರು. ಬಹಳ ತೂಕ ಕಮ್ಮಿಯಾಗಿರುವವರು ಮತ್ತು ನಿಸ್ತೇಜರಾಗಿರುವವರು ದಾತರಾಗಲು ಅನರ್ಹರು. ದಾತರ ವಯಸ್ಸೂ ಒಂದು ಮುಖ್ಯಾಂಶ. ಸಾಮಾನ್ಯವಾಗಿ ೧೮ ರಿಂದ ೬೦ ವಯಸ್ಸಿನೊಳಗಿರುವವರನ್ನೇ ದಾತರನ್ನಾಗಿ ಚುನಾಯಿಸುವರು.

ಈ ಪರೀಕ್ಷೆಗಳೆಲ್ಲವೂ ನಡೆದ ಮೇಲೆ ದಾತರನ್ನು ಒಂದು ಮಂಚದ ಮೇಲೆ ಮಲಗಿಸಿ ಅವರ ಮೊಣಕೈ ಬಳಿಯಿರುವ ಒಂದು ಮಲಿನ ರಕ್ತನಾಳಕ್ಕೆ ಸೂಜಿ ಚುಚ್ಚಿ ರಕ್ತ ತೆಗೆಯುವರು. ತೆಗೆದ ರಕ್ತವು ರಬ್ಬರ್ ಕೊಳವಿಯ ಮೂಲಕ ಒಂದು ಗಾಜಿನ ಸೀಸೆಗೆ ಬೀಳುವುದು. ಈ ಸೀಸೆ, ಇದಕ್ಕೆ ಸಂಬಂಧಿಸಿದ ರಬ್ಬರ್ ಕೊಳವಿ,

ಗಾಜಿನ ಕೊಳವೆಗಳನ್ನು ಚೆನ್ನಾಗಿ ತೊಳೆದು ಒಣಗಿಸಿ, ೧೨೦°C ಸೆಂ. ಶಾಖದ ಪೆಟ್ಟಿಗೆಗಳಲ್ಲಿ ಸುಮಾರು ೩ ಘಂಟೆಯ ಕಾಲ ಇಟ್ಟಿರುವುದರಿಂದ ಇವುಗಳಲ್ಲಿ ಯಾವ ವಿಧದ ಕಶ್ಮಲವಾಗಲೀ ಕ್ರಿಮಿಗಳಾಗಲೀ ಸೇರಲವಕಾಶವಿರುವುದಿಲ್ಲ. ಸೀಸೆಯಲ್ಲಿ ರಕ್ತ ತೆಗೆಯುವುದಕ್ಕೆ ಮುಂಚೆ ಸ್ವಲ್ಪ ಸೋಡಿಯಂ ಸಿಟ್ರೇಟ್ ಲವಣದ ನೀರನ್ನಿಟ್ಟಿರುವರು. ಸಾಮಾನ್ಯವಾಗಿ ಒಬ್ಬರಿಂದ ೧ಷ್ಟೆ ಪಾವಿಗಿಂತ ಹೆಚ್ಚು ರಕ್ತವನ್ನು ತೆಗೆಯುವುದಿಲ್ಲ. ತೆಗೆಯುವ ರಕ್ತವು ಗಂಡಸರಲ್ಲಿ ಅವರ ಒಂದು ಪೌಂಡ್ ದೇಹ ತೂಕಕ್ಕೆ, ಸರಾಸರಿ ೩ ಸಿ.ಸಿ. ಗಳಿಗಿಂತಲೂ ಹೆಚ್ಚಾಗಿರುವುದಿಲ್ಲ. ಅಂದರೆ ೧೦೦ ಪೌಂಡು ತೂಕವಿರುವ ಗಂಡಸಿನಿಂದ ೩೦೦ ಸಿ.ಸಿ. ಮತ್ತು ಅದೇ ತೂಕದ ಹೆಂಗಸೊಬ್ಬಳಿಂದ ೨೫೦ ಸಿ.ಸಿ. ರಕ್ತ ತೆಗೆಯುತ್ತಾರೆ.

ರಕ್ತ ತುಂಬಿದ ಸೀಸೆಗಳನ್ನು ಭದ್ರವಾಗಿ ಮುಚ್ಚಿ ಪ್ರಯೋಗಾಲಯಕ್ಕೆ ಕಳುಹಿಸುವರು. ಪ್ರಯೋಗಶಾಲೆಗಳಲ್ಲಿ ಅದನ್ನು ಮುಂದೆ ಹದಗೊಳಿಸುವ (Processed) ತನಕ ರೆಫ್ರಿಜರೇಟರುಗಳಲ್ಲಿಟ್ಟಿರುವರು.

ಇಲ್ಲಿನ ವರೆಗೂ ರಕ್ತನಿಧಿಯ ಕಟ್ಟಡದಲ್ಲಿಯೇ ರಕ್ತವನ್ನು ತೆಗೆದುಕೊಳ್ಳುವ ವಿಧಾನವನ್ನು ವಿವರಿಸಿದ್ದಾಯಿತು. ರಕ್ತವನ್ನು ಕೊಡಲು ಸಾಕಾದಷ್ಟು ದಾತರು ಮುಂಬರುವಾಗ ಅಂದರೆ ಯಾವುದಾದರೂ ಆಫೀಸಿನ ಅಥವಾ ಸಂಸ್ಥೆಯ ನೌಕರರು ಒಟ್ಟಾಗಿ ರಕ್ತಕೊಡಲು ಒಪ್ಪಿದರೆ ಅವರುಗಳಿರುವ ಜಾಗಕ್ಕೆ ವೈದ್ಯ ಸಿಬ್ಬಂದಿಯನ್ನು ಕಳುಹಿಸಿ ರಕ್ತ ತೆಗೆಯುವ ಏರ್ಪಾಟು ಮಾಡಲಾಗುವುದು. ಮೊದಲು ರಕ್ತನಿಧಿಯ ಆಫೀಸಿನವರು ಆ ಆಫೀಸು ಅಥವಾ ಸಂಸ್ಥೆಗೆ ಒಂದು ಪಟ್ಟಿಯನ್ನು ಕಳುಹಿಸಿ ಕೊಡುವರು. ಆ ಸಂಸ್ಥೆಯವರು ಆ ಪಟ್ಟಿಯಲ್ಲಿ ದಾತರ ಹೆಸರುಗಳು ಮತ್ತಿತರ ವಿವರಗಳನ್ನು ನಮೂದಿಸಿದ ಮೇಲೆ ಅದನ್ನು ಪುನಃ ರಕ್ತನಿಧಿಯ ಆಫೀಸಿಗೆ ಕಳುಹಿಸುವರು. ಅನಂತರ ದಾತರುಗಳಿಗೆ ತಿಳಿವಳಿಕೆ ಚೀಟಿಗಳನ್ನು ಕಳುಹಿಸಲಾಗುವುದು. ಕಲ್ಕತ್ತಾ ನಗರದ ಹೊರ ಪ್ರದೇಶಗಳಿಗೆ ಪಟ್ಟಿಗಳನ್ನು ಸ್ಥಳೀಯ ವ್ಯವಸ್ಥಾಪಕರುಗಳಿಗೆ ಕಳುಹಿಸಲಾಗುತ್ತದೆ. ಕಲ್ಕತ್ತಾ ನಗರದಲ್ಲಿರುವಂತೆಯೇ ದಾತರುಗಳಿಗೆ ರಕ್ತಕೊಟ್ಟ ಮೇಲೆ ಕಾಫೀ ಹಾಲು ಮುಂತಾದವುಗಳನ್ನು ಕೊಡುವ ಏರ್ಪಾಡು ಮಾಡುವರು.

ಹೊರಗಡೆ ರಕ್ತ ತೆಗೆಯುವ ಕಟ್ಟಡದ ಚುನಾವಣೆಯಲ್ಲಿ ಕೆಲವು ವಿಷಯಗಳನ್ನು ನೆನಪಿನಲ್ಲಿಡಬೇಕು. ರಕ್ತ ತೆಗೆಯುವ ಕೋಣೆಯು ಕಶ್ಮಲವಿಲ್ಲದೆ ದೊಡ್ಡದಾಗಿ ಗಾಳಿ ಬೆಳಕುಗಳಿಂದ ಕೂಡಿರಬೇಕು. ಪಕ್ಕದಲ್ಲೇ ಒಂದು ಕೊಠಡಿಯಲ್ಲಿ ಕೊಳಾಯಿ ಇರಬೇಕು.

ರಕ್ತ ತೆಗೆಯುವ ದಿನ ಬೆಳಿಗ್ಗೆ ವೈದ್ಯಕೀಯ ಸಿಬ್ಬಂದಿಯು ರಕ್ತ ತೆಗೆಯುವ ಹೊತ್ತಿಗಿಂತ ಒಂದು ಗಂಟೆ ಮುಂಚೆ ಸಲಕರಣೆಗಳೊಡನೆ ಆ ಜಾಗವನ್ನು ಸೇರಿ ಸಿದ್ಧರಾಗುವರು. ರಕ್ತ ತುಂಬಿದ ಸೀಸೆಗಳನ್ನು ಉಪ್ಪು ಮತ್ತು ಮಂಜುಗಡ್ಡೆಯಿಂದ ತುಂಬಿರುವ ಶೀತ ಪೆಟ್ಟಿಗೆಗಳಲ್ಲಿ ಹಿಂದಕ್ಕೆ ತರಲಾಗುವುದು.

ಕಲ್ಕತ್ತಾ ನಗರದ ಹೊರಗಿನ ಪ್ರದೇಶಗಳಲ್ಲಿ ರಕ್ತ ತಗೆಯಬೇಕಾದರೆ ಆ ಪ್ರದೇಶಗಳ ಸ್ಥಳೀಯ ವ್ಯವಸ್ಥಾಪಕರು ಎಳೆಂಟು ದಿನಗಳ ಮುಂಚೆಯೇ ರಕ್ತತೆಗೆಯಲು ಸರಿಯಾದ ದಿನ, ರಕ್ತಕೊಡಲು ಸಿದ್ಧರಾಗಿರುವ ದಾತರುಗಳು ಮುಂತಾದ ವಿಷಯಗಳನ್ನು ರಕ್ತನಿಧಿಗೆ ತಿಳಿಸುವರು.

ಆ ಮೇಲೆ ವಿವರಿಸಿದ ವಿಧಾನವನ್ನು ಯಾವ ಕೇಂದ್ರದಲ್ಲಾಗಲೀ ನಡೆಸಬಹದು. ರಕ್ತ ತುಂಬುವ ಸೀಸೆಗಳನ್ನು ರಕ್ತನಿಧಿಯಿಂದ ತರಿಸಿಕೊಂಡು ಯಾವ ವೈದ್ಯನಾದರೂ ರಕ್ತವನ್ನು ತೆಗೆದು, ರಕ್ತನಿಧಿಗೆ ವಿಧಾನಗೊಳಿಸಲು ಕಳುಹಿಸಕೊಡಬಹುದು.

ರಕ್ತ ತುಂಬುವಿಕೆ

ಮನುಷ್ಯರಿಂದ ಮನುಷ್ಯರಿಗೆ ರಕ್ತ ತುಂಬುವ ವಿಧಾನದಲ್ಲಿ ಮುಖ್ಯವಾದುವು ಎರಡು. (೧) ನೇರವಾಗಿ ದಾತರ ರಕ್ತನಾಳದಿಂದ ತೆಗೆದ ರಕ್ತವನ್ನು ಪರಿಗ್ರಾಹಕರ ರಕ್ತನಾಳಕ್ಕೆ ತುಂಬುವುದು. (೨) ದಾತರಿಂದ ತೆಗೆದ ರಕ್ತವನ್ನು ಒಂದು ಗಾಜಿನ ಪಾತ್ರೆಯಲ್ಲಿ ಶೇಖರಿಸಿ ಅನಂತರ ಅಚ್ಚರಕ್ತವನ್ನೋ ಅಥವಾ ಹದಗೊಳಿಸಿದ ರಕ್ತವನ್ನೋ ಪರಿಗ್ರಾಹಕರಿಗೆ ಕೊಡುವುದು.

ಕೂಡಿಟ್ಟ ರಕ್ತವನ್ನು ಹೆಪ್ಪುಗಟ್ಟಿಕೊಳ್ಳುವುದಕ್ಕೆ ಮುಂಚೆ ತುಂಬಬಹುದು. ಅಥವಾ ಸಿಟ್ರೇಟ್ ಲವಣದ ನೀರಿನೊಡನೆ ಬೆರಸಿ ೧೦-೧೫ ನಿಮಿಷಗಳು ತಡಮಾಡಿ ಕೊಡಬಹುದು. ಅಥವಾ ಸಿಟ್ರೇಟ್ ರಕ್ತವನ್ನು ೭-೮ ದಿನಗಳವರೆಗೆ ರೆಫ್ರಿಜರೇಟರುಗಳಲ್ಲಿಟ್ಟು ಅನಂತರ ಉಪಯೋಗಿಸಬಹುದು. ರೆಫ್ರಿಜರೇಟರುಗಳಲ್ಲಿಟ್ಟ ರಕ್ತದಿಂದ ಪ್ರತ್ಯೇಕವಾದ ರಕ್ತದ್ರವವನ್ನೋ ರಕ್ತವಸೆಯನ್ನೋ, ಅಥವಾ ರಕ್ತ ಕಣಗಳನ್ನೋ ಸಮಯವರಿತು ಉಪಯೋಗಿಸಬಹುದು. ಯಾವ ರೂಪದ ರಕ್ತವನ್ನು ಉಪಯೋಗಿಸಿದರೂ ತುಂಬುವ ದ್ರವವನ್ನು ನಿಧಾನವಾಗಿ (ಸುಮಾರು ಒಂದು ಸೆಕೆಂಡಿಗೆ ಒಂದು ತೊಟ್ಟು ರಕ್ತದಂತೆ) ತುಂಬುವುದು ಕ್ಷೇಮಕರ. ಕಾಹಿಲೆಗಳಿಗೆ ಅನುಗುಣವಾಗಿ ೧೦೦ ಸಿ.ಸಿ.ಯಿಂದ ೧೦೦೦ ಸಿ.ಸಿ.ಗಳ ವರೆಗೆ (ಸುಮಾರು ೧/೪ ಪಾವಿನಿಂದ ೩ ಪಾವಿನ ವರಿಗೆ) ರಕ್ತ ತುಂಬುವರು. ಪುನಃ ಪುನಃ ಒಬ್ಬ ರೋಗಿಗೆ ರಕ್ತ ತುಂಬುವ ಪ್ರಮೇಯಗಳೂ ಒದಗುವುವು. ರಕ್ತವನ್ನು ತುಂಬುವಾಗ ಪರಿಗ್ರಾಹಕನ ಸ್ಥಿತಿಯನ್ನು

ಪರೀಕ್ಷಿಸುತ್ತಿರಬೇಕು. ಕುಸಿದುಬೀಳುವ (Collapse) ಯಾವ ಚಿಹ್ನೆಗಳು ತೋರಿದರೂ ಕೂಡಲೆ ರಕ್ತ ತುಂಬುವುದನ್ನು ನಿಲ್ಲಿಸುವರು.

ದಾನಿಗಳಲ್ಲಿ ವಿನಂತಿ

ವಿಮಾನದಾಳಿಗೆ ತುತ್ತಾದವರಲ್ಲಿ ಸೇಕಡ ಹತ್ತರಷ್ಟು ಜನಗಳಿಗೆ ಗಾಯಗೊಂಡ ತಕ್ಷಣ ರಕ್ತ ತುಂಬದಿದ್ದಲ್ಲಿ ಬದುಕುವುದು ಅಸಾಧ್ಯ. ಎಷ್ಟು ಜನ ವಿಮಾನದಾಳಿಗೆ ತುತ್ತಾಗಿ ಗಾಯಗೊಳ್ಳುವರೆಂಬ ಸಂಖ್ಯೆಯನ್ನು ಮೊದಲೇ ನಿಷ್ಕರ್ಷಿಸುವುದು ಅಸಾಧ್ಯ. ಯುದ್ಧರಂಗದಲ್ಲಿ ಗಾಯಗೊಂಡವರಲ್ಲಿ ಸೇಕಡ ೫ ರಷ್ಟು ಜನರಿಗಾದರೂ ರಕ್ತ ತುಂಬಬೇಕಾಗುವುದು. ಪ್ರತಿ ತಿಂಗಳೂ ಸೇಕಡ ೬ ರಷ್ಟು ಯೋಧರು ಈ ರೀತಿ ಗಾಯಗೊಳ್ಳುವರು. ಇವರಿಗೆಲ್ಲಾ ರಕ್ತ ತುಂಬಲು ಎಷ್ಟು ರಕ್ತ ಒದಗಿಸಬೇಕಾಗಿದೆಯೆಂಬುದನ್ನು ಸುಲಭವಾಗಿ ಆಲೋಚಿಸಬಹುದು. ಶಾಂತಿಸಮಯಗಳಲ್ಲಿಯೂ ರಕ್ತ ತುಂಬುವುದು ಸುಸೂತ್ರವಾಗಿ ನಡೆಯಬೇಕಾದರೆ ರಕ್ತನಿಧಿಗಳು ಹೆಚ್ಚಾಗಿರಬೇಕು.

ಸಾಮೂಹಿಕ ಗುಂಪುಗಳಾದ ಆಫೀಸು, ಕಾರ್ಖಾನೆ ಮುಂತಾದ ಕಡೆಗಳಿಂದ ಫಲಕಾರಿಯಾಗಿ ರಕ್ತವನ್ನು ಶೇಖರಿಸಬಹುದು. ಅಂತಹ ಕಡೆಗಳಲ್ಲಿ ಮೊದಲು ಒಂದು ಕಾರ್ಯಕಾರೀ ಸಮಿತಿಯು ಸ್ಥಾಪಿತವಾಗಬೇಕು. ಸಾಮಾನ್ಯವಾಗಿ ಅಂತಹ ಜಾಗಗಳಲ್ಲಿ ಹಿರಿಯ ಆಫೀಸರುಗಳನ್ನು ಮುಂಬರಮಾಡಿಕೊಳ್ಳುವುದರಿಂದ, ಕೆಳಗಿನ ನೌಕರರುಗಳಿಗೆ ಸಂಶಯ ನಿವೃತ್ತಿಯಾಗಿ ಅನೇಕರು ದಾನಿಗಳಾಗಲೊಪ್ಪುವರು. ಒಬ್ಬ ವೈದ್ಯರು ಒಂದು ದಿನಕ್ಕೆ ೩೦—೪೦ ಜನರ ರಕ್ತ ತೆಗೆಯಬಹುದು. ಅನೇಕ ದಾತರು ರಕ್ತ ಕೊಡಲು ಸಿದ್ಧರಾಗಿರುವುದಾದರೆ ಅವರು ರಕ್ತನಿಧಿಗೆ ಬಂದು ರಕ್ತ ಕೊಡಬೇಕಾದ ತೊಂದರೆ ಏನೂ ಇರುವುದಿಲ್ಲ. ಅವರಿದ್ದ ಜಾಗಕ್ಕೆ ರಕ್ತ ಸಂಗ್ರಹಿಸುವ ಸಿಬ್ಬಂದಿಯನ್ನು ಕಳುಹಿಸಿಕೊಡಬಹುದು. ರಕ್ತ ತುಂಬುವ ಸಾಧನಗಳಿರುವ ಕಡೆಗಳಿಗೆಲ್ಲಾ ತುರ್ತು ಆವಶ್ಯಕತೆ ಬಿದ್ದಾಗ ಸಾಕಾದಷ್ಟು ರಕ್ತವನ್ನು ಕೊಡಲುರಕ್ತ ನಿಧಿಯು ಯಾವಾಗಲೂ ಸಿದ್ಧವಾಗಿರುತ್ತದೆ.

ರಕ್ತ ಕೊಡುವಿಕೆಯಿಂದ ನೋವಾಗಲೀ ಅಥವಾ ಕೆಡುಕಾಗಲೀ ಉಂಟಾಗುವುದಿಲ್ಲ. ರಕ್ತವನ್ನು ಮೊಳಕೈಯಿನ ಒಂದು ಮಲಿನ ರಕ್ತನಾಳವನ್ನು ಸೂಜಿಯಿಂದ ಚುಚ್ಚಿ ತೆಗೆಯುತ್ತಾರೆ. ಈ ನೋವು, ಒಂದು ಸೂಜಿಯನ್ನು ಚುಚ್ಚುವ ನೋವಿಗಿಂತ ಹೆಚ್ಚಾಗುವುದಿಲ್ಲ. ಹಾಗೂ ಕ್ಷಣಿಕವಾದುದು. ಅನೇಕ ಸಂದರ್ಭಗಳಲ್ಲಿ ಕೊಂಚ ರಕ್ತವನ್ನು ಕೊಡುವುದರಿಂದ ದಾತರ ದೇಹಕ್ಕೆ ಹಲವು ಉಪಯೋಗಗಳುಂಟಾಗುತ್ತವೆ. ರಕ್ತದ ಒತ್ತಡವು ಹೆಚ್ಚಾಗಿದ್ದಲ್ಲಿ ರಕ್ತ ಕೊಡುವುದು ಬಹಳ ಒಳ್ಳೆಯದು.

ರಕ್ತ ಕೊಟ್ಟಲ್ಲಿ ಪ್ರಾಣಕ್ಕೆ ಖಂಡಿತ ಭಯವಿಲ್ಲ. ಯಾವ ಬಗೆಯ ಅನಾರೋಗ್ಯವೂ ದೇಹದಲ್ಲಿ ಹುಟ್ಟುವುದಿಲ್ಲ. ರಕ್ತ ಕೊಟ್ಟಮೇಲೆ ದಾತರಲ್ಲಿ ಹುಟ್ಟುವ ಚಿಹ್ನೆಗಳು ಮನಸ್ಸಿನ ಹೆದರಿಕೆಯಿಂದ ಹುಟ್ಟುವುದೇ ಹೊರತು ರಕ್ತ ಕಮ್ಮಿಯಾದ್ದರಿಂದಲ್ಲ. ರಕ್ತ ಕೊಟ್ಟು ತಕ್ಷಣವೇ ದಾತರು ತಮ್ಮ ಸಾಧಾರಣ ಕಾರ್ಯಗಳಲ್ಲಿ ಯಾವ ತೊಂದರೆಗಳೂ ಇಲ್ಲದೆ ನಿರತರಾಗಬಹುದು. ರಕ್ತ ಕೊಟ್ಟಕೂಡಲೇ ವಿದ್ಯಾರ್ಥಿಗಳು ಟೆನ್ನಿಸ್, ಫುಟ್‌ಬಾಲ್ ಆಟಪಾಟಗಳಲ್ಲಿ ಕೂಡ ಭಾಗವಹಿಸಿದ ಉದಾಹರಣೆಗಳಿವೆ. ಅಂದರೆ ರಕ್ತವನ್ನು ದೇಹದಿಂದ ತೆಗೆದರೆ ನಮಗೆ ಹೆಚ್ಚು ನಿತ್ರಾಣವು ಆಗುವುದಿಲ್ಲೆಂದು ಹೇಳಿದಂತಾಯಿತು.

ಸ್ಥೂಲವಾಗಿ ಹೇಳುವದಾದರೆ ಮನುಷ್ಯರಲ್ಲಿ ಸುಮಾರು ೪ ಅಳತೆ ಸೇರಿನಷ್ಟು ರಕ್ತವಿದೆ. ಎಷ್ಟು ರಕ್ತ ದಾನ ಮಾಡಬಹುದೆಂಬುದು ಆ ಜೀವಿಯ ದೇಹ ತೂಕವನ್ನನುಸರಿಸಿದೆ. ಒಂದುಸಲಕ್ಕೆ ಒಬ್ಬರಿಂದ ೧½ ಪಾವಿಗಿಂತ ಹೆಚ್ಚು ರಕ್ತವನ್ನು ತೆಗೆದುಕೊಳ್ಳುವುದಿಲ್ಲ. ಇಷ್ಟು ರಕ್ತವನ್ನು ದಾತರು ಒಂದು ವಾರದೊಳಗಾಗಿ ಕೂಡಿಸಿಕೊಳ್ಳಬಹುದು. ಎರಡು ತಿಂಗಳಿಗೆ ಮುಂಚೆ ದಾತರಿಂದ ಪುನಃ ರಕ್ತ ತೆಗೆದುಕೊಳ್ಳುವುದಿಲ್ಲ. ಒಬ್ಬ ದಾತನು ಪದೇ ಪದೇ ರಕ್ತವನ್ನು ತನ್ನ ಆರೋಗ್ಯಕ್ಕೆ ಸ್ವಲ್ಪವೂ ಕುಂದು ಬರದಂತೆ ದಾನಮಾಡಬಹುದು. ಒಬ್ಬ ಕೂಲಿಗಾರನು ೧೨ ವರ್ಷಗಳ ಅವಧಿಯಲ್ಲಿ ಯಾವ ದುಷ್ಪರಿಣಾಮವೂ ಇಲ್ಲದಂತೆ ೨೧೫ ಸೇರು ರಕ್ತವನ್ನು ಕೊಟ್ಟಿರುವನೆಂದು ವರದಿಯಾಗಿದೆ. ಒಬ್ಬ ಹೆಂಗಸು ೭ ವರ್ಷಗಳಲ್ಲಿ ಒಂದು ಸಲಕ್ಕೆ ೧½ ಪಾವು ರಕ್ತದಂತೆ ೧೪೦ ಸಾರಿ ರಕ್ತ ಕೊಟ್ಟಿರುವಳೆಂದು ತಿಳಿದಿದೆ. ಅಂತೆಯೇ ಇನ್ನೊಬ್ಬಾಕೆಯು ೬ ವರ್ಷಗಳಲ್ಲಿ ೧೨೦ ಸೇರು ರಕ್ತವನ್ನು ಕೊಟ್ಟಿರುವಳೆಂದು ಗೊತ್ತಾಗಿದೆ. ನಮ್ಮ ಇಂಡಿಯಾ ದೇಶದಲ್ಲಿ ಶ್ರೀ ಕಾಮಾರವರು ೧೨೬ ಸಾರಿ ರಕ್ತ ದಾನಮಾಡಿ ೩೩ ಸೇರಿನಷ್ಟು ರಕ್ತವನ್ನು ಕೊಟ್ಟಿರುವುದು ನಮಗೆ ಹೆಮ್ಮೆಯ ವಿಷಯ. ಇವರ ತ್ಯಾಗವನ್ನು ಮೆಚ್ಚಿ ಇವರ ಸ್ನೇಹಿತರು ಇವರಿಗೆ ೫೦೦ ರೂ. ಗಳ ಒಂದು ನಿಧಿಯನ್ನು ಅರ್ಪಿಸಬೇಕೆಂದು ನಿರ್ಧರಿಸಿದ್ದಾರೆಂದು ವರದಿಯಾಗಿದೆ. ಇವೆಲ್ಲವನ್ನೂ ನೋಡಿದರೆ ನಮಗೆ ರಕ್ತಕೊಡುವಿಕೆಯ ಭಯಗಳೆಲ್ಲವೂ ಕೂಡಲೆ ತೊಲಗಬೇಕು. ನಮ್ಮ ಊರಿನ ದಾತರುಗಳು ೨ ತಿಂಗಳಿಗೊಂದು ಸಲ ರಕ್ತಕೊಡಲು ಹಿಂಜರಿಯಕೂಡದು.

ಅನೀಮಿಯಾ, ಹೃದಯ ಮತ್ತು ಶ್ವಾಸಕೋಶದ ಕಾಹಿಲೆಗಳು, ಗೂರಲು, ರಕ್ತದ ಕಮ್ಮಿ ಒತ್ತಡ ಮತ್ತಿತರ ಯಾವ ತರಹ ಕ್ರೂರ ಕಾಹಿಲೆಗಳಿರುವವರನ್ನೂ ದಾನಿಗಳಾಗಿ ಖಂಡಿತ ಚುನಾಯಿಸುವುದಿಲ್ಲ. ಪ್ರತಿಯೊಬ್ಬ ದಾತನನ್ನೂ ಅವನು ರಕ್ತ ಕೊಡುವ ಮುಂಚೆ ಪರೀಕ್ಷಿಸುತ್ತಾರೆ.

ರಕ್ತ ತೆಗೆಯುವ ಕಾರ್ಯವು ೧೫-೨೦ ನಿಮಿಷಗಳಿಗಿಂತ ಹೆಚ್ಚಾಗಿ ಹಿಡಿಯುವುದಿಲ್ಲ. ದಾಸಿಗಳು ತಮ್ಮ ಕಚೇರಿ ಮತ್ತಿತರ ಕೆಲಸಗಳಿಂದ ರಜಾ ಪಡೆಯಬೇಕಾದ್ದಿಲ್ಲ. ಕೆಲಸದ ಮಧ್ಯೆ ಬಂದು ½ ಘಂಟೆ ಅಥವಾ ಒಂದು ಘಂಟೆ ಅವಕಾಶ ಪಡೆದು ರಕ್ತವನ್ನು ಕೊಟ್ಟು ತಮ್ಮ ಕೆಲಸಕ್ಕೆ ಹಿಂತಿರುಗಬಹದು.

ನಮ್ಮ ದೇಶದ ಮೇಲೂ ಕವಿದಿದ್ದ ಯುದ್ಧದ ಮೋಡಗಳು ಸ್ವಲ್ಪ ಸ್ವಲ್ಪ ತೆರಪಿಗೆ ಕೊಡುತ್ತಿವೆ. ಆದರೂ ಇಂತಹ ಸ್ಥಿತಿಗಳನ್ನು ಇದಿರಿಸುವದಕ್ಕೆ ನಾವು ಸಿದ್ಧರಾಗಿಯೇ ಇದ್ದು ಅಂಥಹ ಸಮಯಗಳಲ್ಲಿ ಉಂಟಾಗಬಹುದಾದ ಸಾವುನೋವುಗಳನ್ನು ಆದಷ್ಟು ಕಡಮೆ ಮಾಡಬೇಕು. ಇದಕ್ಕೆ ರಕ್ತನಿಧಿಯನ್ನು ಸ್ಥಾಪಿಸುವುದೂ ಒಂದು ಮುಖ್ಯ ಏರ್ಪಾಟು. ನಮ್ಮ ದೇಶದ ಬ್ಯಾಂಕುಗಳಿಗೆ ರಕ್ತವನ್ನು ಕೊಡುವ ಕೋಟ್ಯಂತರ ಪ್ರಜೆಗಳು ಬೇಕು.

ನಮ್ಮಲ್ಲಿ ಕೆಲವರು ರಕ್ತವನ್ನು ಕೊಡಲು ಒಪ್ಪುವುದಿಲ್ಲ. ತಂದೆತಾಯಿಗಳು ಕಾಹಿಲೆಯಿಂದ ನರಳುತ್ತಿರುವಾಗ, ಮಕ್ಕಳು ಮಾತಾಪಿತೃವಾತ್ಸಲ್ಯಕ್ಕೆ ಕಟ್ಟುಬಿದ್ದು ರಕ್ತ ಕೊಡಲು ಮುಂದಾಳುಗಳಾಗಿ ಬರುವರು. ಇತರ ವೇಳೆಗಳಲ್ಲಿ ರಕ್ತಕೊಡಲು ಹಿಂಜರಿಯುವರು.

ವೈದ್ಯರುಗಳೂ, ಪುರಪ್ರಮುಖರುಗಳೂ, ರೆಡ್-ಕ್ರಾಸ್ ಮತ್ತಿತರ ಸಂಸ್ಥೆಗಳೂ ಜನಗಳಿಗೆ ರಕ್ತಕೊಡಬೇಕೆಂದು ಮೊರೆಯಿಟ್ಟಿದ್ದಾರೆ. ಅನೇಕರು ಉದಾರ ಬುದ್ಧಿಯಿಂದ ರಕ್ತ ಕೊಡುತ್ತಿದಾರೆ. ಇತರ ಪ್ರಜೆಗಳಿಗೆ ಮೇಲ್ಪಂಙ್ಕ್ತಿಯಾಗಿ ಗವರ್ನರುಗಳೂ ರಾಜರುಗಳೂ ರಕ್ತದ ನಿಧಿಗೆ ತಮ್ಮ ರಕ್ತಕೊಟ್ಟಿದ್ದಾರೆ. ಆದರೂ ರಕ್ತನಿಧಿಯ ಪ್ರಯತ್ನ ಇನ್ನೂ ಪೂರ್ತಿ ಫಲದಾಯಕವಾಗಿಲ್ಲ. ರಕ್ತವನ್ನು ಎಷ್ಟು ಹೆಚ್ಚು ಕೂಡಿಸಿ ಅದರಿಂದ ದ್ರವವನ್ನೂ, ಪುಡಿಯನ್ನೂ ಎಷ್ಟು ಹೆಚ್ಚು ತೆಗೆದರೂ ಅಷ್ಟು ನಮಗೆ ಅನುಕೂಲ. ರಕ್ತಕೊಡುವ ಪ್ರತಿಯೊಬ್ಬ ಪ್ರಜೆಯೂ, ಇನ್ನೊಬ್ಬ ಪ್ರಜೆಯ ಪ್ರಾಣವನ್ನು ಉಳಿಸುವನೆಂದು ತಿಳಿಯಲಿ.

ಈ ರಕ್ತ ತುಂಬುವಿಕೆಯ ವಿಷಯದಲ್ಲಿ ಹಲವು ಮೂಢ ಅಭಿಪ್ರಾಯಗಳಿವೆ. ಈ ಅಭಿಪ್ರಾಯಗಳು ಮೊದಲು ತೊಲಗಬೇಕು. ಒಬ್ಬನ ದೇಹದಿಂದ ಮತ್ತೊಬ್ಬನ ದೇಹಕ್ಕೆ ರಕ್ತವನ್ನು ತುಂಬುವುದರಿಂದ ಪ್ರತಿಗ್ರಾಹಕನ ನಡತೆ ಮತ್ತು ಅನುವಂಶೀಯ ಗುಣಗಳು (Hereditary characteristics) ಬದಲಾಯಿಸುವುದಿಲ್ಲ. ನಮ್ಮ ನಡತೆ ಮತ್ತು ಗುಣಗಳು ವಂಶಾನುಗತೆ ಮತ್ತು ಹೊರಗಿನ ಪರಿಸ್ಥಿತಿಗಳಿಗೆ ಸೇರಿದುವು. ಆದುದರಿಂದ ವೈಜ್ಞಾನಿಕ ದೃಷ್ಟಿಯಿಂದ ಒಬ್ಬ ನೀಗ್ರೋವೂ ಮತ್ತು ಒಬ್ಬ ಆಂಗ್ಲೇಯನೂ ಪರಸ್ಪರ ರಕ್ತಕೊಡುವುದು ಅಥವಾ ಹಿಂದೂ ಮಹಮ್ಮದೀಯರುಗಳು ಪರಸ್ಪರ ರಕ್ತಕೊಡುವುದು ತಪ್ಪೆಂಬ ಭಾವನೆಗೆ ಮೂಢತನವೇ ಕಾರಣ.

ಈ ಸಂದರ್ಭಗಳಲ್ಲಿ ನೇಪಿಯರ್ ಅವರು ವೈದ್ಯರುಗಳಿಗೆ ಹೇಳಿರುವ ವಿಷಯವನ್ನು ವೈದ್ಯರೂ (ಇತರ ವಿದ್ಯಾವಂತರೂ) ನೆನಪಿಗೆ ತಂದುಕೊಳ್ಳಬೇಕು. "ವೈದ್ಯರು ರಕ್ತ ಕೊಡುವ ಜನಗಳ ಮೌಢ್ಯವನ್ನು ಹೋಗಲಾಡಿಸಬೇಕು. ೧ ಪೈಂಟ್ ರಕ್ತವನ್ನು ಕೊಟ್ಟಲ್ಲಿ, ರಕ್ತಕೊಟ್ಟವರು ಬಲಹೀನರಾಗುವುದಿಲ್ಲ. ಕಾಹಿಲೆಗೆ ತುತ್ತಾಗುವುದಿಲ್ಲ. ಅವರ ಪುಂಸ್ತ್ವವು ಕಮ್ಮಿಯಾಗುವುದಿಲ್ಲ ಎಂದು ಘಂಟಾಘೋಷವಾಗಿ ಹೇಳಬೇಕು. ರಕ್ತಕೊಡುವವರ ಕುಂಟು ಪ್ರಶ್ನೆಗಳಿಗೆ ಸದುತ್ತರಗಳನ್ನು ಕೊಡಬೇಕು. ಉದಾ.— ಕೆಲವರು "ನನಗೇ ರಕ್ತವಿಲ್ಲ. ನಾನು ಇತರರಿಗೆ ಹೇಗೆ ರಕ್ತಕೊಡಲಿ" ಎಂದು ಹೇಳುವರು. ಅದಕ್ಕೆ ಉತ್ತರವಾಗಿ "ನಿನಗೆ ಹೆಚ್ಚು ರಕ್ತಬರುವುದಕ್ಕೆ ನೀನು ಆರೋಗ್ಯವಂತನಾಗುವುದಕ್ಕೆ ನಿನ್ನಿಂದ ರಕ್ತ ತೆಗೆಯುವುದೇ ಸರಿಯಾದ ಚಿಕಿತ್ಸೆ" ಎಂದು ಹೇಳಬೇಕು. ಇನ್ನು ಕೆಲವರು "ನನಗೆ ಶಕ್ತಿ ಇಲ್ಲ. ಶಕ್ತಿ ಇಲ್ಲದವನ ರಕ್ತ ದಿಂದ ಇತರರಿಗೇನು ಪ್ರಯೋಜನ" ಎಂದು ಕೇಳುವರು. ಅವರಿಗೆ ಉತ್ತರವಾಗಿ "ನಿನಗೆ ಹೆಚ್ಚು ಶಕ್ತಿ ಇಲ್ಲದಿರಬಹುದು. ಊಟಮಾಡುವುದಕ್ಕೂ ಸಾಧಾರಣವಾಗಿ ಓಡಾಡಿಕೊಂಡಿರುವುದಕ್ಕೂ ತಕ್ಕಮಟ್ಟಿಗೆ ಶಕ್ತಿ ಇದೆ. ನಿನ್ನ ರಕ್ತ ತೆಗೆದುಕೊಂಡವ ನಿಗೂ ಮೊದಲು ಇಷ್ಟು ಶಕ್ತಿ ಬಂದರೆ ಸಾಕು" ಎಂದು ತಿಳಿಸಬೇಕು. ಇನ್ನೂ ಕೆಲವರು "ನಾನೇನೋ ರಕ್ತಕೊಡಲು ಸಿದ್ಧ. ಆದರೆ ನನ್ನ ತಾಯಿತಂದೆ, ಹೆಂಡತಿ ಒಪ್ಪುವುದಿಲ್ಲ"ವೆಂದು ವಾದಿಸುವರು. ಆಗ ವೈದ್ಯರು "ದೇಶದ ಎಲ್ಲಾ ತಾಯಿ ತಂದೆಗಳೂ ಹೀಗೆ ಹೇಳಿದರೆ ರಕ್ತಕೊಡುವವರು ಯಾರು? ನಿನ್ನ ತಾಯಿ, ತಂದೆ ಹೆಂಡತಿಗೆ ರಕ್ತ ಬೇಕಾದಾಗ ಏನು ಮಾಡುವುದು"? ಎಂದು ಉತ್ತರ ಹೇಳಬೇಕು. ವೈದ್ಯರೂ ಇತರ ವಿದ್ಯಾವಂತರೂ ತೋಳುಗಳಲ್ಲಿ ರಕ್ತ ತೆಗೆದ ಜಾಗವನ್ನು ತೋರಿಸಿ "ನಾನು ಮೊನ್ನೆ ರಕ್ತಕೊಟ್ಟೆ. ನನಗದರಿಂದ ಏನೂ ಅವಗುಣ ತೋರಿಬರಲಿಲ್ಲ. ನಾನಿನ್ನೂ ಗಟ್ಟಿಮುಟ್ಟಿಯಾಗಿದ್ದೇನೆ" ಎಂದು ಹೇಳಿದಲ್ಲಿ ಮೂಢಜನರಿಗೆ ನಾಚಿಕೆ ಯಾಗಿ ಅವರು ರಕ್ತಕೊಡಲು ಒಪ್ಪುವರು.

ರಕ್ತವನ್ನು ತುಂಬುವ ಆವಶ್ಯಕತೆಯು ಯುದ್ಧಕಾಲದಲ್ಲಿ ಮಾತ್ರ ಉಂಟಾಗು ತ್ತದೆಂದು ತಿಳಿಯಬಾರದು. ಸಾಮಾನ್ಯ ಕಾಲದಲ್ಲಿಯೂ ಈ ಚಿಕಿತ್ಸೆಯನ್ನು ಕೈಕೊಳ್ಳ ಬೇಕಾದ ಸಂದರ್ಭಗಳು ಹೇರಳವಾಗಿ ಇದ್ದೇ ಇರುತ್ತವೆ—ಮೋಟಾರಿಗೋ, ರೈಲಿಗೋ, ಸಿಕ್ಕಿಯಾಗಲೀ ಇನ್ನಾವ ಕಾರಣದಿಂದಾಗಲೀ ಗಾಯಗೊಂಡು ರಕ್ತ ವನ್ನು ಕಳೆದುಕೊಂಡಾಗಲೂ ಮೈಸುಟ್ಟುಕೊಂಡಾಗಲೀ ಅಥವಾ ಇನ್ನಾವ ಕಾರಣ ದಿಂದಾಗಲೀ ಭಯಾವೇಶವುಂಟಾದಾಗಲೂ, ಹೆಂಗಸರಿಗೆ ಪ್ರಸವಕಾಲದಲ್ಲಿ ಮಿತಿ ಮೀರಿ ರಕ್ತಸ್ರಾವವಾದಾಗಲೂ, ಪಾಂಡುರೋಗವೇ ಮೊದಲಾದ ಕಾಹಿಲೆಗಳ

ಉಲ್ಬಣಸ್ಥಿತಿಯಲ್ಲಿಯೂ ಪ್ರಾಣವನ್ನುಳಿಸಬೇಕಾದರೆ ರಕ್ತವನ್ನು ತುಂಬಲೇಬೇಕು. ಈ ಸಂಜೀವನ ಚಿಕಿತ್ಸೆಯನ್ನು ತಕ್ಷಣವೇ ಕೈಕೊಳ್ಳದಿದ್ದರೆ ರೋಗಿಯು ಉಳಿಯುವುದೇ ಕಷ್ಟ. ರಕ್ತನಿಧಿಯು ಇಲ್ಲದಿದ್ದರೆ ಇಂತಹ ಸಂದರ್ಭಗಳಲ್ಲಿ ಬಹು ಅಪಾಯ. ಆದ್ದರಿಂದ ಯುದ್ಧಕಾಲದಲ್ಲಿ ಹೇಗೋ ಶಾಂತಿಕಾಲದಲ್ಲೂ ಹಾಗೇ ರಕ್ತನಿಧಿ ಆವಶ್ಯಕ.

ಕೊನೆಯದಾಗಿ ಒಂದು ವಿನಂತಿ. ಯುದ್ಧಾದಿ. ವಿಪತ್ತುಗಳು ಎಲ್ಲರಿಗೂ ಸಮಾನವಾಗಿ ಬಾಧಿಸುತ್ತವೆ. ರೋಗಾದ್ಯುಪದ್ರವಗಳು ಯಾರಿಂಗಾದರೂ ಬರಬಹುದು ಎಂಬುದನ್ನು ನೆನಪಿನಲ್ಲಿಟ್ಟು, ಶಾಸ್ತ್ರಜ್ಞರೂ ಅನುಭವಶಾಲಿಗಳೂ, ನಮ್ಮ ಹಿತೈಷಿಗಳೂ ಹೇಳಿದಂತೆ ಕೇಳಿ, ಜನಗಳು ಹೆಚ್ಚು ಹೆಚ್ಚಾಗಿ ಮುಂದಕ್ಕೆ ಬಂದು ಧಾರಾಳವಾಗಿ ರಕ್ತಕೊಟ್ಟು ನಮ್ಮ ದೇಶದ ರಕ್ತನಿಧಿಗಳು ಜಯಪ್ರದವಾಗಿ ಅಭಿವೃದ್ಧಿ ಹೊಂದಲೆಂದು ಹಾರೈಸೋಣ.

ಡಿ. ಶಾಮಣ್ಣ.

ನಿರ್ಲಿಪ್ತ

ಥಾಳೈಸಿ ಬೆಳಕು ಪರಿ-
ಮಳವ ಬೀರಿದ ದೀಪ
ತನಗೆ ತಾನೇ ಕುಂದಿ ನಂದಿತಿಂದು.
ತನ್ನ ಸುತ್ತಲು ಮುತ್ತಿ
ಬಂದ ಕತ್ತಲೆಯೊಡನೆ
ಹೋರಾಡಿ ಮರಣವನ್ನೈದಿತಿಂದು.

ಗಂಟೆ ಬಾರಿಸಲಿನ್ನು
ಗಣಗಣನೆ, ಎದೆತಮಟೆ
ಕೊನೆಯ ತಾಳವ ಹಿಡಿಯಲಿನ್ನು ಮುಂದೆ.
ಅಂಕು ಮುಗಿಯುವ ಮುನ್ನ
ತೆರೆಯು ಜಾರಿತು ಕೆಳಗೆ.
ಬಂದನೇ ಕಾಯ್ವೆನೆಂದೊರೆದ ತಂದೆ?

ಸುಖದೊಳೋಲಾಡಿರಲು
ಹರುಷದಲಿ ಹಿಗ್ಗಿದ್ದೆ.
ದುಃಖದಲಿ ಕುಗ್ಗಿ ನರಳಿರುವೆನಿಂದು.
ಅದು—ಅಂತೆ; ಇದು—ಇಂತೆ
ಕೈಬೀಸಿ ನಡೆದಿಹೆನು
ಸುಗ್ಗಿ ಕುಳಿರುಗಳು ಬರಿ ಋತುಗಳೆಂದು.

ಬಾಳುವೆಯು ಬಯಲುಗನ-
ಸೆಂದು ತಿಳಿದಿರಲಿಲ್ಲ.
ಇಂದು ತಿಳಿದರು ಕೂಡ ಚಿಂತೆಯಿಲ್ಲ.
ಸಂತೆಯಲ್ಲಲೆದಾಡಿ
ಸುಖಿಸಿ ದುಃಖಿಸಿ ನರರು
ಮತ್ತೆ ಮರಳುವರಲ್ಲ? ಅಂತೆ ಎಲ್ಲ.

ನಿರ್ಲಿಪ್ತನಂಜನವ
ನನ್ನ ಕಣ್ಣಿಗೆ ತೊಡೆದೆ.
ಉತ್ಸಾಹ-ಪ್ರತಿಭೆಗಳು ಕುಸಿದವಿಲ್ಲಿ
ಇರಲೇನು ? ಹಣ್ಣು ಹಣ್-
ಆಗಿಸುವ ದುಃಖಗಳು
ಮಣ್ಣುಗೂಡುತ ತಾವೆ ಹುಸಿದವಿಲ್ಲಿ.

ಈ ಅಂಜನದ ಲೇಪ-
ವಿದ್ದ ನಯನದಿ ನೋಡೆ
ಸೌಂದರ್ಯ ಹೊಳಪು ಕಳೆದಿರುವ ಮಣ್ಣಾಯ್ತು.
ಮಂಗಳವು ವಿಶ್ವಚ-
ಕ್ರದ ಗತಿಯ ತಿರುಗಾಯ್ತು.
ಸಣ್ಣದಾಗಿರೆ ಸತ್ಯ, ಸಾವ್ ನುಣ್ಣಗಾಯ್ತು.

ಮಾಯವಾಗಿದೆ ಮೋಹ.
ಪ್ರಖರವಾಗಿಹ ಬುದ್ಧಿ
ಹಿಡಿತದಲ್ಲಿಹುದು. ಮನ ಸುಮ್ಮನಿಹುದು.
ಜೀವವಿದು ಪಯಣ ಬೆಳ-
ಸಿರುವ ಮಳಲಿನರಣ್ಯ
ಹೂಗಳಿಲ್ಲದೆ ಕೂಡ ಕಮ್ಮಗಿಹುದು.

ಸಾಯ್ವೆನೆನುವೆಯಾ ? ನಿನಗೆ
ಮುಳ್ಳೆ ಮುಳುವಾಗುವದು.
ಬಾಳ್ವೆನೆನೆ ಮರಣವೇ ಶರಣವಿಹುದು.
ದೈವಗತಿಯಿಂದ ತಿಳಿ-
ವಿಂಗೆ ಚ್ಯುತಿ ಬಂತೆನಲು
ಅದಕು ಹಿರಿ ತಿಳಿವಿನಾ ಸ್ಫುರಣವಿಹುದು.

ನಿರ್ಲಿಪ್ತನಂಜನದ
ಮಹಿಮೆಯರಿದರಿದೀಗ.
ಈವುದು ನಿಲಿಂಪರಾನಂದವನ್ನು ;

ಆತುಮನ ಸಿರಿನಾಡಿ-
ನಲ್ಲಿ ಸಂಚರಿಸೆ ಬಹ
ಶಾಂತಿ ಕಾಂತಿಯನಂದ ಚೆಂದವನ್ನು.

ಮಾನವರ ನಡುವೆ ನಿರ್-
ಲಿಪ್ತ ನಿಂತಿರುವನವ
ಶ್ರವಣಬೆಳ್ಗೊಳದಿ ಗೊಮ್ಮಟನ ತೆರದಿ.
ತನಗಿಂತ ಮುಂದಿನ್ನು
ಬೆಳಕಿಲ್ಲವೆನಲವನು
ತಮವಾಗಿ ಕವಿಯುವನು ಜಗವ ಭರದಿ.

—ವಿನಾಯಕ

ಧರ್ಮಶಾಸ್ತ್ರ ವಿಚಾರ

ಧರ್ಮನಿರ್ಣಯದಲ್ಲಿ ಶ್ರುತಿ ಸ್ಮೃತಿ ಶಿಷ್ಟಾಚಾರಗಳ ಸಂಬಂಧ

ಶ್ರುತಿ ಸ್ಮೃತಿ ಸದಾಚಾರ ಇವುಗಳ ಧರ್ಮನಿರ್ಣಯದಲ್ಲಿನ ಪರಸ್ಪರ ಸಂಬಂಧವನ್ನು ವಿಚಾರಮಾಡುವಾಗ ಮೂರು ವಿಧವಾದ ವಿರೋಧಗಳು ಬರುತ್ತವೆ. ಮೊದಲನೆಯದು ಶ್ರುತಿ ವಿರುದ್ಧ ಶ್ರುತಿ, 'ಅತಿರಾತ್ರೇ ಷೋಡಶಿನಂ ಗೃಹ್ಣಾತಿ'—'ನಾತಿರಾತ್ರೇ ಷೋಡಶಿನಂ ಗೃಹ್ಣಾತಿ'—ಈ ರೀತಿ ಎರಡು ಪರಸ್ಪರ ವಿರೋಧ ಶ್ರುತಿಗಳು ಕಂಡುಬಂದಾಗ ವಿಕಲ್ಪಮಾಡಬೇಕು. ಆದರೆ ವಿಕಲ್ಪ ಎಂಟು ವಿಧವಾಗಿ ದುಷ್ಟವಾಗಿರುತ್ತದೆ. ಆದ್ದರಿಂದ ಇಂಥ ವಿರೋಧವಚನಗಳನ್ನು ವಿಷಯ ವ್ಯವಸ್ಥೆಯಿಂದ ಪರಿಹರಿಸಬೇಕೆಂದು ಮೀಮಾಂಸಾ ಶಾಸ್ತ್ರದಲ್ಲಿ ಹೇಳಿದೆ. 'ಮನುಃ ಪುತ್ರೇಭ್ಯೋದಾಯಂ ವ್ಯಭಜತ್ (ತೈ. ಸಂ. ೩-೧-೯-೪)—ಇದರಲ್ಲಿ ಎಲ್ಲಾ ಗಂಡುಮಕ್ಕಳಿಗೂ ತಂದೆಯ ಆಸ್ತಿ ಒಂದೇ ಪ್ರಮಾಣದಲ್ಲಿ ಹಂಚಿಕೊಡಬೇಕೆಂದು ಇದೆ. ಅದೇ ಶ್ರುತಿಯಲ್ಲಿ (ತೈ. ಸಂ. ೨, ೫-೨-೭) 'ತಸ್ಮಾಜ್ಜ್ಯೇಷ್ಠಂ ಪುತ್ರಂ ಧನೇನ ನಿರವಸಾಯಯಂತಿ'—ಎಲ್ಲಾ ಆಸ್ತಿಯೂ ಹಿರಿಯ ಮಗನಿಗೆ ಮಾತ್ರ ಸಲ್ಲತಕ್ಕದೆಂದು ಹೇಳಿದೆ. ಈ ವಿರೋಧದಲ್ಲಿ ವಿಕಲ್ಪಮಾಡದೆ ಮೊದಲನೆಯ ನಿಯಮವನ್ನೇ ತೆಗೆದುಕೊಳ್ಳಬೇಕೆಂದು ಆಪಸ್ತಂಬರು ಹೇಳಿದ್ದಾರೆ. ಎರಡನೆಯ ವಿರೋಧ ಸ್ಮೃತಿ ವಿರುದ್ಧ ಸ್ಮೃತಿ. ಇಂಥ ವಿರೋಧಗಳಲ್ಲಿ ತರ್ಕದಿಂದ ಗ್ರಾಹ್ಯಾಗ್ರಾಹ್ಯವನ್ನು ನಿಶ್ಚಯಿಸಬೇಕೆಂದು ಹೇಳಲಾಗಿದೆ. 'ಸ್ಮೃತ್ಯೋರ್ವಿರೋಧೇ ನ್ಯಾಯಸ್ತು ಬಲವಾನ್ ವ್ಯವಹಾರತಃ' (ಯಾಜ್ಞವಲ್ಕ್ಯ). ಮೂರನೆಯ ವಿರೋಧ ಶಿಷ್ಟಾಚಾರ ವಿರುದ್ಧ ಶಿಷ್ಟಾಚಾರ. ಇಲ್ಲೂ ಸ್ಮೃತಿ ಸ್ಮೃತಿವಿರೋಧ ಪರಿಹಾರದ ನಿಯಮವನ್ನೇ ಅನುಸರಿಸಬೇಕು. ಇವಲ್ಲದೆ, ಇತರ ವಿರೋಧಗಳು ಬಂದಾಗ, ಸ್ಮೃತಿಗಿಂತ ಶ್ರುತಿಶ್ರೇಷ್ಠ, ಶಿಷ್ಟಾಚಾರಕ್ಕಿಂತ ಸ್ಮೃತಿ ಶ್ರೇಷ್ಠ—ಹೀಗೆ ನಿರ್ಣಯಮಾಡಿಕೊಳ್ಳಬೇಕಾದುದು ಸಾಮಾನ್ಯ ನಿಯಮ.

ಒಂದೇ ಜಾತೀಯ ಅಂದರೆ, ಶ್ರುತಿ ಶ್ರುತಿ, ಸ್ಮೃತಿ ಸ್ಮೃತಿ ಅಥವಾ ಶಿಷ್ಟಾಚಾರ ಶಿಷ್ಟಾಚಾರ ವಿರೋಧ ಬಂದಾಗ ವಿಕಲ್ಪವನ್ನು ಮಾಡಬೇಕೆಂಬ ಒಂದು ಪಕ್ಷವನ್ನು ಹಿಂದೆಯೇ ಹೇಳಿದೆ. ಆದರೆ ಈ ವಿಕಲ್ಪದ ಉಪಯೋಗ ಎಲ್ಲಾ ಸ್ಥಳಗಳಲ್ಲೂ ಆಗುತ್ತೆಂದಲ್ಲ. ಅದಕ್ಕಾಗಿ 'ಏಕವಶೇನ ಇತರಾ ನೀಯೇರನ್' ಅಂದರೆ ಯಾವುದಾದರೂ ಒಂದು ವಚನವನ್ನು ಶ್ರೇಷ್ಠವೆಂದು ಭಾವಿಸಿ ಮತ್ತೊಂದನ್ನು

ಗೌಣವೆಂದು ಭಾವಿಸಬೇಕೆಂಬ ನ್ಯಾಯವು ಹುಟ್ಟಿಕೊಂಡಿತು. ಇದರ ಉದಾಹರಣೆ ತೆಗೆದುಕೊಳ್ಳೋಣ. ಗಂಡುಮಕ್ಕಳಿಲ್ಲದೆ ಯಾರಾದರೂ ಮೃತರಾದರೆ ಮೃತನ ಆಸ್ತಿ ಯಾರಿಗೆ ಸೇರಬೇಕೆಂಬ ವಿಚಾರವನ್ನು ಮಾಡುವಾಗ ಯಾಜ್ಞವಲ್ಕ್ಯರು ಹೆಂಡತಿ, ಮಗಳು, ತಾಯಿ, ತಂದೆ ಇವರಿಗೆ ಕ್ರಮವಾಗಿ ಆಸ್ತಿ ಸಲ್ಲಬೇಕೆಂದು ಹೇಳಿದ್ದಾರೆ. 'ಪತ್ನೀದುಹಿತರಶ್ಚೈವ ಪಿತರೌ ಭ್ರಾತರಸ್ತಥಾ| . . . ಸ್ವರ್ಯಾತಸ್ಯ ಹ್ಯಪುತ್ರಸ್ಯ ಸರ್ವವರ್ಣೇಷ್ವಯಂ ವಿಧಿಃ (೨, ೧೩೫-೧೩೬). ಬೇರೆ ಸ್ಮೃತಿಯಲ್ಲಿ ಹೆಂಡತಿಗೆ ಈ ಕ್ರಮದಲ್ಲಿ ಸ್ಥಾನವನ್ನು ಕೊಟ್ಟಿಲ್ಲ. ಕಾಳಿದಾಸ, ತನ್ನ ಶಾಕುಂತಲ ನಾಟಕದಲ್ಲಿ ಒಬ್ಬ ನಿಪುತ್ರಕ ವ್ಯಾಪಾರಿಯ ಮರಣಾನಂತರ ಆತನ ಆಸ್ತಿಯನ್ನು ಏನುಮಾಡ ಬೇಕೆಂಬ ಪ್ರಶ್ನೆಯನ್ನು ಮುಂದಿಟ್ಟಿರಲಾಗಿ ದುಷ್ಯಂತನ ಅಮಾತ್ಯನು ಆ ಆಸ್ತಿ ರಾಜನಿಗೆ ಸೇರಿದ್ದೆಂದು ಹೇಳುತ್ತಾನೆ. ದುಷ್ಯಂತ ಅದನ್ನು ಒಪ್ಪದೆ ಗರ್ಭಸ್ಥಪುತ್ರನಿಗೆ ಪಿತೃಧನದ ಮೇಲೆ ಅಧಿಕಾರವಿದೆಯೆಂದು ನಿರ್ಧರಿಸಿದ್ದಾನೆ. (ನನು ಗರ್ಭಃ ಪಿತ್ರ್ಯಂ ರಿಕ್ಥಮರ್ಹತಿ.—ಶಾಕುಂತಲ ೬, ೨೩). ಇಬ್ಬರೂ ಸ್ತ್ರೀಯರಿಗೆ ಸ್ಥಾನಕೊಡಲಿಲ್ಲ; ಈ ರೀತಿ ಸ್ಮೃತಿ ಸ್ಮೃತಿಗಳ ವಿರೊಧವಿದ್ದರೆ ಯಾಜ್ಞವಲ್ಕ್ಯರನ್ನೇ ಆಶ್ರಯಿಸಿ, ಇತರ ಸ್ಮೃತಿಗಳಿಗೆ ಅರ್ಥಮಾಡಬೇಕೆಂದು ನಿಶ್ಚಯಿಸಲಾಯಿತು.

ಈಗ ಶ್ರುತಿ ಮತ್ತು ಸ್ಮೃತಿ ಇವುಗಳ ವಿರೋಧವನ್ನು ಪರಿಹರಿಸುವ ವಿಚಾರ ವನ್ನು ನೋಡೋಣ:

ಶ್ರುತಿಸ್ಮೃತಿವಿರೋಧೇ ತು ಶ್ರುತಿರೇವ ಗರೀಯಸೀ |
ಅವಿರೋಧಂತು ಕರ್ತವ್ಯಂ ಸ್ಮಾರ್ತಂ ವೈದಿಕವತ್ಸದಾ ||

ಈ ಜಾಬಾಲ ವಚನವನ್ನು ಕುಲ್ಲೂಕ ಭಟ್ಟರು ಮನುಸ್ಮೃತಿ ಟೀಕೆಯಲ್ಲಿ ಉದಾಹರಿ ಸಿದ್ದಾರೆ. ಇದರಂತೆ ಸ್ಮೃತಿ ಶ್ರುತಿ ವಿರೋಧವಾಗಿದ್ದರೆ ಅದು ತ್ಯಾಜ್ಯ. 'ಜಾತಪುತ್ರಃ ಕೃಷ್ಣ ಕೇಶೋಽಗ್ನೀನಾದಧೀತ' ಹೀಗೆಂದು ಶ್ರುತಿ ಇದೆ. ಯಾವನಿಗೆ ಗಂಡುಮಗು ವಾಗಿದೆಯೋ ಅಂಥಾ ಕಪ್ಪುಕೂದಲು ಪುರುಷನು ಅಗ್ನ್ಯಾಧಾನ ಮಾಡಬೇಕು. ಇದರಲ್ಲಿ ಜಾತಪುತ್ರ ಮತ್ತು ಕೃಷ್ಣಕೇಶ ವಿಶೇಷಣಗಳು ಅಗ್ನ್ಯಾಧಾನಕ್ಕೆ ವಿಶಿಷ್ಟ ಕಾಲಮರ್ಯಾದೆ ಸೂಚಕವಾಗಿದೆಯೆ ಹೊರತು ಪ್ರತ್ಯಕ್ಷ ಮಕ್ಕಳನ್ನು ಪಡೆದಿರುವವನೇ ಆಗಿರಬೇಕೆಂದಲ್ಲ. ಯೌವನದಲ್ಲಿ ಅಗ್ನ್ಯಾಧಾನವನ್ನು ಮಾಡಬೇಕು. ಇಷ್ಟೇ ಇದರ ಆಶಯ. ಈ ಶ್ರುತಿವಚನಕ್ಕೆ ವಿರೋಧವಾಗಿ ಸ್ಮೃತಿ ವಚನ ಈ ರೀತಿ ಇದೆ: 'ಅಷ್ಟಾಚತ್ವಾರಿಂಶದ್ವರ್ಷಾಣಿ ವೇದ ಬ್ರಹ್ಮಚರ್ಯಂ (ಬೋ. ಧ. ಸೂ.) ಈಗ ಮನು ಹೇಳಿರುವಂತೆ ಎಂಟನೆಯ ವರ್ಷದಲ್ಲಿ ಉಪನಯನವನ್ನು ಮಾಡಿ. 'ಗರ್ಭಾಷ್ಟಮೇಽಬ್ದೇ ಕುರ್ವೀತ ಬ್ರಾಹ್ಮಣಸ್ಯೋಪನಯನಮ್ (೨. ೩೬) ಮುಂದೆ ಬೋಧಾಯನರ

ಮತಪ್ರಮಾಣದಂತೆ ನಲವತ್ತೆಂಟುವರ್ಷ ಬ್ರಹ್ಮಚರ್ಯವನ್ನು ಪಾಲನೆ ಮಾಡಬೇಕೆಂದರೆ ಗೃಹಸ್ಥಾಶ್ರಮವನ್ನು ಆರಂಭಿಸಬೇಕಾದರೆ ಐವತ್ತಾರು ವರ್ಷಗಳು ಕಳೆದು ಹೋಗುತ್ತವೆ. ಕ್ಷತ್ರಿಯ ಮತ್ತು ವೈಶ್ಯ ಇವರಿಗೆ ಇನ್ನೂ ಹೆಚ್ಚಾಗಿ ಕಳೆದುಹೋಗುತ್ತವೆ. ಕಾರಣ, ಅವರ ಉಪನಯನ ಕಾಲ ಬ್ರಾಹ್ಮಣರಿಗಿಂತಲೂ ಹೆಚ್ಚು ಕಾಲದ ಮೇಲೆಂದು ಹೇಳಿದೆ. ಇಂಥಾ ಸ್ಥಿತಿಯಲ್ಲಿ ಅಗ್ನ್ಯಾಧಾನ ಯಾವಾಗ ಮಾಡಬೇಕು ? ಈ ಮಾತು ಶ್ರುತಿವಿರುದ್ಧವೆಂದು ಸ್ಮೃತಿಕಾರರು ಕಂಡು ಬೋಧಾಯನರ ವಚನವನ್ನು ದುರ್ಲಕ್ಷ್ಯಮಾಡಿದರು.

ಸ್ಮೃತಿ ಒಂದುವೇಳೆ ವೇದವಿರೋಧೀ ಆಗಿರದಿದ್ದರೆ, ಸ್ಮೃತಿಯಲ್ಲಿ ಹೇಳಿದ ವಿಧಿಯ ಉಲ್ಲೇಖವು ಉಪಲಬ್ಧ ಶ್ರುತಿಯಲ್ಲಿ ಇಲ್ಲದೇ ಇದ್ದರೂ, ಸ್ಮೃತಿಗೆ ಅನುಕೂಲವಾದ ಶ್ರುತಿ ಇತ್ತೆಂದು ಅನುಮಾನ ಮಾಡಬೇಕೆಂದು ಮೀಮಾಂಸಕರು ಹೇಳುತ್ತಾರೆ. ವಿರೋಧೇತ್ವನಪೇಕ್ಷ್ಯಂ ಸ್ಯಾತ್ ಅಸತಿಹಿ ಅನುಮಾನಮ್.—ಹೀಗೆ ಈ ವಿಷಯದಲ್ಲಿ ಮೀಮಾಂಸಾ ಸೂತ್ರವಿದೆ. (ಜೈ. ೧, ೩, ೩—೪). ಯಾವಜ್ಜೀವಮಗ್ನಿಹೋತ್ರಂ ಜುಹುಯಾತ್ ' ಎಂಬ ಈ ಶ್ರುತಿ ನಲವತ್ತೆಂಟು ವರ್ಷ ಬ್ರಹ್ಮಚರ್ಯವನ್ನು ಪಾಲಿಸಬೇಕೆಂಬ ಸ್ಮೃತಿಗೆ ವಿರೋಧವಾಗಿದೆ. ಅಗ್ನಿಹೋತ್ರ ಗೃಹಸ್ಥನಿಗೆ ಹೊರತು ಬ್ರಹ್ಮಚಾರಿಗೆ ಅಲ್ಲ. ಆದರೆ ಈ ಸ್ಮೃತಿ ಹೇಗೆ ಮತ್ತು ಯಾರು ಮಾಡಿದರೆಂಬ ಪ್ರಶ್ನೆಯನ್ನು ಮಾಡಿ ಅದರ ಉತ್ತರವನ್ನು ಪೂರ್ವಮೀಮಾಂಸಾ ಸೂತ್ರಗಳಭಾಷ್ಯಕಾರ ಶಬರಸ್ವಾಮಿಗಳು ಬಹಳ ಸ್ವಾರಸ್ಯವಾಗಿ ಹೇಳಿದ್ದಾರೆ. ಸ್ಮೃತಿಯಲ್ಲಿ ಕಂಡುಬರುವ ಈ ನಿಯಮ ' ಆತ್ಮನಃ ಅಪುಂಸ್ತ್ವಂ ಪ್ರಚ್ಛಾದಯದ್ಭಿಃ '—ತಮ್ಮ ಪೌರುಷ ಹೀನತ್ವವನ್ನು ಮುಚ್ಚಿಕೊಳ್ಳಲು ಇಚ್ಛಿಸುವವರು ಯಾರೋ ಮಾಡಿದರು. ಆದ್ದರಿಂದ ತ್ಯಾಜ್ಯ ! ಹೀಗೆಂದು ಶಬರಸ್ವಾಮಿಗಳು ಹೇಳಿದ್ದಾರೆ. ಸ್ಮೃತಿವಿರೋಧದ ಮತ್ತೊಂದು ಉದಾಹರಣೆಯನ್ನು ತೆಗೆದುಕೊಳ್ಳೋಣ: ಹೆಂಡತಿ, ಮಗ, ದಾಸ, ಇವರು ಗಳಿಸಿದ ಹಣ ಯಾರದೆಂದು ಪ್ರಶ್ನೆ ತೆಗೆದುಕೊಂಡು ಯಾವ ಪುರುಷನಿಗೆ ಈ ಸ್ತ್ರೀ, ಮಗ, ದಾಸ ಇವರು ಸಂಬಂಧ ಉಳ್ಳವರೋ ಅಂಥ ಪುರುಷನಿಗೆ ಆ ಹಣ ಸೇರತಕ್ಕದೆಂದು ಸ್ಮೃತಿ ಹೇಳುತ್ತದೆ.

ಅವರ ಮತದಲ್ಲಿ ಭಾರ್ಯಾ, ಪುತ್ರ ಮತ್ತು ದಾಸ ಇವರಿಗೆ ಧನದ ಅಧಿಕಾರವೇ ಇಲ್ಲ.

ಭಾರ್ಯಾ ಪುತ್ರಶ್ಚ ದಾಸಶ್ಚ ತ್ರಯ ಏವಾಧನಾಃ ಸ್ಮೃತಾಃ
ಯತ್ತೇ ಸಮಧಿಗಚ್ಛಂತಿ ಯಸ್ಯತೇ ತಸ್ಯತದ್ಧನಂ ||

—ಹೀಗೆ ಮನು ಸ್ಮೃತಿ (ಮ. ೮. ೪೧೬) ಶ್ಲೋಕ ವಿರುವುದಲ್ಲದೆ ಮಹಾಭಾರತದಲ್ಲೂ ಬಂದಿದೆ. ಇದೇ ವಿಷಯದಲ್ಲಿ ' ಪತ್ನೀಹಿ ಪಾರಿಣಾಹ್ಯಸ್ಯೇಶೇ '—ಮನೆಯ ವಸ್ತು

ಗಳ ಮೇಲೆ ಹೆಂಡತಿಯ ಸ್ವಾಮಿತ್ವವಿದೆ ಎಂಬುದು ಶ್ರುತಿ ವಚನ. ಹಿಂದೆ ಸ್ತ್ರೀಯರಿಗೆ ಸ್ವಾತಂತ್ರ್ಯವೇ ಇಲ್ಲದಿದ್ದರೂ, ಪತಿಯೊಡನೆ ಕೂಡಿ ಯಜ್ಞಮಾಡುವ ಅಧಿಕಾರವಿತ್ತು. ಅಲ್ಲದೆ ದ್ರವ್ಯವಿಲ್ಲದೆ ಯಜ್ಞಮಾಡುವುದು ಶಕ್ಯವಿರಲಿಲ್ಲ. ಆದ್ದರಿಂದ ಸ್ತ್ರೀಯರಿಗೆ ಧನದ ಅಧಿಕಾರ ಶ್ರುತಿಕೊಟ್ಟಿರುವುದಾಗಿ 'ಸ್ವವತ್ತಾಮಪಿ ದರ್ಶಯತಿ' ಎಂಬ ಮೀಮಾಂಸಾ ಸೂತ್ರದಲ್ಲಿ ಸ್ಪಷ್ಟವಾಗಿ ಹೇಳಿದೆ. ತಂದೆ ಆಸ್ತಿ ಮತ್ತು ಸಾಲಗಳನ್ನು ಹಂಚುವ ವಿಷಯದಲ್ಲೂ ಇದೇ ಬಗೆಯ ವಿರೋಧ ಕಂಡುಬರುತ್ತದೆ. ತಂದೆಯ ಆಸ್ತಿ ಮತ್ತು ಸಾಲ (ರಿಕ್ಥ ಮತ್ತು ಋಣ) ಗಳನ್ನು ಮಕ್ಕಳು ಸಮವಾಗಿ ಹಂಚಿಕೊಳ್ಳಬೇಕೆಂದು ಸ್ಮೃತಿ ಹೇಳುತ್ತದೆ. ಹಿಂದೆ ಒಂದುಸಲ ಹೇಳಿರುವಂತೆ 'ತಸ್ಮಾಜ್ಜ್ಯೇಷ್ಠಂಪುತ್ರಂ ಧನೇನ ನಿರವಸಾಯಯಂತಿ'—ಹಿರಿಯ ಮಗನಿಗೆ ಮಾತ್ರ ಆಸ್ತಿ ಕೊಡಬೇಕೆಂದು ಹೇಳುವ ಶ್ರುತಿ ಇದೆ. ಈ ಶ್ರುತಿ ವಿರುದ್ಧವಾಗಿ 'ಮನುಃ ಪುತ್ರೇಭ್ಯೋ ದಾಯಂ ವ್ಯಭಜತ್'—ಎಂಬ ತೈತ್ತಿರೀಯ ಶ್ರುತಿ ಎಲ್ಲಾ ಗಂಡು ಮಕ್ಕಳಿಗೂ ಸಮನಾಗಿ ಆಸ್ತಿ ಕೊಡಬೇಕೆಂದು ಹೇಳುತ್ತಿದೆ. ಮತ್ತು ಅದೇ ಗ್ರಾಹ್ಯವೆಂದೂ ಹೇಳಲಾಗಿದೆ. ಇಂಥ ಮಹತ್ವ ವಿಷಯಗಳ ಮೇಲೆ ಶ್ರುತಿ ಸ್ಮೃತಿಗಳಲ್ಲಿ ವಿರೋಧ ಕೊಂಚ ಬರುತ್ತಾದರೂ ಶ್ರುತಿ ಮತ್ತು ಸ್ಮೃತಿ ಇವುಗಳಿಗೆ ವಿರುದ್ಧವಾದ ಶಿಷ್ಟಾಚಾರಗಳ ಉದಾಹರಣೆಗಳು ಮಾತ್ರ ಪುಷ್ಕಳವಾಗಿರುವುವಲ್ಲದೆ ಆ ವಿಷಯ ಬಹಳ ಜಿಕ್ಕಟ್ಟಿನಿಂದ ಕೂಡಿದುದೂ ಆಗಿದೆ. ಯಾವ ಶಿಷ್ಟಾಚಾರದ ಉಲ್ಲೇಖ ಶ್ರುತಿಯಲ್ಲಿ ಇಲ್ಲವೋ ಆ ಸಂಬಂಧದಲ್ಲಿ ಅದು ಶ್ರುತಿಗೆ ವಿರೋಧವೇ ಅಥವಾ ಅನುಕೂಲವೇ ಎಂಬ ಪ್ರಶ್ನೆಗೆ ಉತ್ತರವಾಗಿ 'ಪರಮತಂ ಅಪ್ರತಿಷಿದ್ಧಂ ಅನುಮತಂ ಭವತಿ'—ಬೇರೆ ಮತದ ಪ್ರತ್ಯಕ್ಷ ನಿಷೇಧವಿಲ್ಲದಿದ್ದರೆ ಅದನ್ನು ಅನುಮತಿಯೆಂದು ತಿಳಿಯುತ್ತಾರೆ'—ಎಂದು ಕೊಡಲಾಗಿದೆ. ಇದೇ ನ್ಯಾಯವನ್ನು ಇತರ ಕಡೆಗಳಲ್ಲೂ ಹೊಂದಿಸಿಕೊಳ್ಳಬೇಕು. ಇಂಗ್ಲಿಷಿನಲ್ಲೂ ಇದೇ ಅರ್ಥವನ್ನು Silence shows consent when it is a duty to speak ಎಂದು ಹೇಳುವ ವಾಡಿಕೆ ಉಂಟು. ಈ ವಿಷಯದಲ್ಲಿ 'ದೇಶಜಾತಿಕುಲಧರ್ಮಾಶ್ಚಾಮ್ನಾಯೈರವಿರುದ್ಧಾಃ ಪ್ರಮಾಣಮ್' (ಗೌ. ಧ. ಸೂ. ೧೧, ೨೦)—ವೇದಗಳಿಗೆ ಯಾವ ದೇಶಧರ್ಮ, ಜಾತಿಧರ್ಮ ಮತ್ತು ಕುಲಧರ್ಮಗಳು ವಿರೋಧವಲ್ಲವೊ ಅವು ಪ್ರಮಾಣಗಳಾಗುತ್ತವೆಂದು ಗೌತಮರು ಹೇಳಿದ್ದಾರೆ. 'ದೇಶಧರ್ಮಜಾತಿಧರ್ಮಕುಲಧರ್ಮಾನ್ ಶ್ರುತ್ಯಭಾವಾದಬ್ರವೀನ್ಮನುಃ'—(ವ. ಧ. ಸೂ ೧, ೧೭) ದೇಶಧರ್ಮ—ಮುಂತಾದವು ವೇದದಲ್ಲಿ ಇಲ್ಲದಿರುವುದರಿಂದ ಮನು ಅವು ಪ್ರಮಾಣಗಳೆಂದು ಹೇಳಿರುವುದಾಗಿ ವಸಿಷ್ಠರು ಹೇಳಿದ್ದಾರೆ. ವೇದದಲ್ಲಿ ಹೇಳಿರುವ ಆಚಾರ ಧರ್ಮಗಳ ಹೊರತು ದೇಶ

ಧರ್ಮ, ಜಾತಿಧರ್ಮ, ಕುಲಧರ್ಮ ಅಲ್ಲದೆ ಪಾಷಂಡೀ—ಅಂದರೆ ವೇದವಿರೋಧೀ ಜನರ ಧರ್ಮವನ್ನೂ ಮನು ತಮ್ಮ ಸ್ಮೃತಿಯಲ್ಲಿ ಹೇಳಿದ್ದಾರೆ.

ದೇಶಧರ್ಮಾನ್ ಜಾತಿಧರ್ಮಾನ್ ಕುಲಧರ್ಮಾಂಶ್ಚ ಶಾಶ್ವತಾನ್
ಪಾಷಂಡಗಣಧರ್ಮಾಂಶ್ಚ ಶಾಸ್ತ್ರೇಽಸ್ಮಿನ್ ಉಕ್ತವಾನ್ಮನುಃ
(ಮ. ೧-೧೧೮)

ಈ ರೀತಿ ಮನು ವೇದಗಳಿಗೆ ಅವಿರೋಧವಾದ ಪಾಷಂಡೀ ಜನರ ಆಚಾರಗಳಿಗೂ ಮಾನ್ಯತೆ ಕೊಡುತ್ತಾರೆ.

ಆಶ್ವಲಾಯನ ಗೃಹ್ಯಸೂತ್ರದಲ್ಲೂ 'ಅಥ ಖಲೂಚ್ಚಾವಚಾ ಜನಪದಧರ್ಮಾ ಗ್ರಾಮಧರ್ಮಾಶ್ಚ ತಾನ್ ವಿವಾಹೇ ಪ್ರತೀಯಾತ್'। ಯತ್ತು ಸಮಾನ ತದ್ವಕ್ಷ್ಯಾಮಃ'—ಈ ರೀತಿ ಹೇಳಿ ದೇಶಾಚಾರಗಳಿಗೆ ವಿವಾಹದಲ್ಲಿ ಮಾನ್ಯತೆ ಕೊಟ್ಟು ಸರ್ವಸಾಧಾರಣ ಆಚಾರಗಳನ್ನು ಮಾತ್ರ ತಾವು ಹೇಳಿರುವುದಾಗಿ ಆಶ್ವಲಾಯನರು ಹೇಳುತ್ತಾರೆ. ವಿವಾಹ ಪ್ರಸಂಗದಲ್ಲಿ ಸ್ತ್ರೀಯರು ಹೇಳುವ ಮಾತಿಗೂ ಮಾನ್ಯತೆ ಕೊಡಬೇಕೆಂದು ಆಪಸ್ತಂಬರು ಧರ್ಮಸೂತ್ರದಲ್ಲಿ ಹೇಳಿದ್ದಾರೆ.

'ಸ್ತ್ರೀಭ್ಯಃ ಸರ್ವವರ್ಣೇಭ್ಯಶ್ಚ ಶೇಷಧರ್ಮಾನ್ಪ್ರತೀಯಾತ್'।
(ಆ. ೨, ೧೧, ೨೯)

ಮದುವೆಯಲ್ಲಿ ಅಡಕೆಯನ್ನು ಬಚ್ಚಿಡುವ ಧರ್ಮವನ್ನು ಸ್ತ್ರೀಯರೇ ಹೇಳಿರಬೇಕು. ಇಂಥ ಧರ್ಮಗಳ ಉಲ್ಲೇಖ ಶ್ರುತಿ ಸ್ಮೃತಿಗಳಲ್ಲಿ ಕಂಡುಬರುವುದು ಕಠಿಣವಾದುದರಿಂದ ಅವುಗಳನ್ನು ಆಯಾ ಸ್ಥಳಗಳಲ್ಲಿ ಪರಿಗಣಿಸಬೇಕೆಂದು ನಿಶ್ಚಯಿಸಲಾಯಿತು. ಈ ರೀತಿ ಬೇರೆ ಬೇರೆ ಪರಿಸ್ಥಿತಿಗಳಲ್ಲಿನ ಆಚಾರಗಳಿಗೆ ಧರ್ಮದಲ್ಲಿ ಸ್ಥಾನ ದೊರೆತದ್ದರಿಂದ ಮುಂದೆ ಬಹಳ ಗೋಜಲುಂಟಾಗಿದೆ. ಶಿಷ್ಟನೆಂದರೆ ಆರ್ಯಾವರ್ತದಲ್ಲಿನ ವೇದಜ್ಞ ಬ್ರಾಹ್ಮಣನೆಂದು ಮೊದಲು ಹೇಳಲಾಯಿತು. ಆದರೆ ಆರ್ಯಾವರ್ತದ ಮೊದಲಿನ ಸಂಕುಚಿತ ಅರ್ಥ ಮುಂದೆ ಬೆಳೆದು ಬೆಳೆದು ಅದರ ಕ್ಷೇತ್ರ ಇಂದು ಸಮಗ್ರ ಭರತ ಖಂಡದಷ್ಟು ಹೇಗೆ ಆಯಿತೆಂಬುದು ಈಗ ಗೊತ್ತೇ ಆಗಿದೆ. ಇಂಥ ವಿಸ್ತಾರವಾದ ಕ್ಷೇತ್ರದಲ್ಲಿ ಬೇರೆ ಬೇರೆ ದೇಶ ಧರ್ಮಗಳಿಗೆ ಮಾನ್ಯತೆ ಸಿಕ್ಕಿರುವುದರಿಂದ ಸ್ಥಿತಿ ಹೇಗಾಗಿದೆಯೆಂಬುದನ್ನು ಈಗ ನೋಡೋಣ: ಭಿನ್ನ ಆಚಾರಗಳನ್ನು ಹಿಂಬಾಲಿಸಿ, ಒಬ್ಬರನ್ನೊಬ್ಬರು ದೂರುವುದು ಸ್ವಾಭಾವಿಕವಾಗಿಯೇ ಬರುತ್ತದೆ. ಉದಾಹರಣೆಗೆ ದಕ್ಷಿಣ ಮತ್ತು ಉತ್ತರ ಭಾಗಗಳ ಸಂಬಂಧವಾಗಿ ಬೋಧಾಯನರು ಐದು ವಿಧವಾದ ವಿರೋಧೀ ಆಚಾರಗಳನ್ನು ಹೇಳಿದ್ದಾರೆ.

(ಬೋಧಾ. ೧. ೧, ೧೭-೨೪)

ಪಂಚಧಾ ವಿಪ್ರತಿಪತ್ತಿಃ ದಕ್ಷಿಣ ತಸ್ತಥೋತ್ತರತಃ ಯಾನಿ ದಕ್ಷಿಣತಸ್ತಾನಿ ವ್ಯಾಖ್ಯಾಸ್ಯಾಮಃ | ಯಥೈ ತದನುಪೇತೇನ ಸಹ ಭೋಜನಂ ಸ್ತ್ರಿಯಾಸಹ ಭೋಜನಂ ಪರ್ಯುಷಿತ ಭೋಜನಂ ಮಾತುಲಪಿತೃಸ್ವಸೃದುಹಿತೃಗಮನಮಿತಿ—ತಂದೆ ತನ್ನ ತಟ್ಟೆಯಲ್ಲೆ ಮಗನೊಡನೆ ಊಟಮಾಡುವುದು, ಹೆಂಡತಿಯೊಡನೆ ಊಟಮಾಡುವುದು, ಹಳಸಿದ ಅನ್ನವನ್ನು ತಿನ್ನುವುದು, ಸೋದರತ್ತೆಯ ಮಗಳು ಮತ್ತು ಸೋದರ ಮಾವನ ಮಗಳು ಇವರೊಡನೆ ಮದುವೆಮಾಡಿಕೊಳ್ಳುವುದು, ಇವು ದಕ್ಷಿಣ ದೇಶದಲ್ಲಿವೆ. ಉತ್ತರ ದೇಶದಲ್ಲಿಲ್ಲ. ಉಣ್ಣೆ ಮಾರುವುದು, ಮದ್ಯಪಾನ, ಬ್ರಾಹ್ಮಣರು ಶಸ್ತ್ರ ಹಿಡಿಯುವುದು, ಸಮುದ್ರಗಮನ ಮುಂತಾದವು ಉತ್ತರದಲ್ಲಿ ಇವೆ. ಈ ವಿಚಾರಗಳಲ್ಲಿ ಪರಸ್ಪರ ದೋಷಾರೋಪಣೆ ಮಾಡುತ್ತಾರೆ. ಆಯಾ ದೇಶಗಳಿಗೆ ಅವು ಪ್ರಮಾಣಗಳಾಗುತ್ತವೆಂದು ಕೆಲವರು ಹೇಳುತ್ತಾರೆ. ಆದರೆ ಗೌತಮರು ಅವು ಸುಳ್ಳೆಂದು ಹೇಳಿರುವುದಲ್ಲದೆ ಶಿಷ್ಟವಾದ ಆಗಮಗಳಿಗೂ, ಸ್ಮೃತಿಗಳಿಗೂ ಅವು ವಿರೋಧವಾಗಿವುದರಿಂದ ಅವಷ್ಟೂ ಅನಾದರಣೀಯವೆಂದು ಬೋಧಾಯನರೇ ಹೇಳಿದ್ದಾರೆ. ಉತ್ತರದಲ್ಲಿ ಹಲವು ಬ್ರಾಹ್ಮಣ ರಾಜಮನೆತನಗಳು ಆಗಿಹೋದವೆಂದು ಇತಿಹಾಸದಿಂದ ಕಾಣುತ್ತದೆ. ಕಾಲಿದಾಸನ ಮಾಲವಿಕಾಗ್ನಿಮಿತ್ರದಲ್ಲಿ ಹೇಳಿರುವ ಪುರಾಣ ಪ್ರಸಿದ್ಧವಾದ ಶುಂಗ ಮನೆತನ ಬ್ರಾಹ್ಮಣರದಾಗಿದ್ದು, ಅದರಲ್ಲಿ ಪುಷ್ಯಮಿತ್ರ, ಅಗ್ನಿಮಿತ್ರ ಮತ್ತು ವಸುಮಿತ್ರ—ಈ ರೀತಿ ಮೂವರು ಪ್ರಸಿದ್ಧ ರಾಜರಾದರು. (ಪೇಷ್ವೆಗಳ ಮನೆತನವೂ ಬ್ರಾಹ್ಮಣರದೇ ಆಗಿತ್ತು. ಆದರೆ ಅವರು ರಾಜರೆಂದು ಹೇಳಿಕೊಳ್ಳುತ್ತಿರಲಿಲ್ಲ).

ಸೋದರಮಾವನ ಮಗಳ ಮದುವೆ ಮತ್ತು ಸಮುದ್ರಯಾನ ಈ ವಿಷಯಗಳು ಪ್ರಾಚೀನಕಾಲದಿಂದಲೂ ವಾದಗ್ರಸ್ತ. ಇವುಗಳ ಸಮರ್ಥನಕ್ಕಾಗಿ ಶ್ರುತಿ ಆಧಾರವನ್ನು ತೋರಿಸುವ ಖಟಾಟೋಪವನ್ನು ಹಲವರು ಮಾಡಿದ್ದಾರೆ. ಸೋದರಮಾವನ ಮಗಳ ಮದುವೆ ಎಲ್ಲಾ ಶ್ರುತಿ ಸ್ಮೃತಿಗಳಿಗೂ ವಿರುದ್ಧವಾಗಿದೆ. "ಒಬ್ಬ ಮನುಷ್ಯನಿಂದ ಹುಟ್ಟುವ ಮಗ ಮಗಳು ಇವರಿಬ್ಬರೂ ತಮ್ಮ ಮನಸ್ಸಿನಲ್ಲಿ ಮೂರನೆಯ ಅಥವಾ ನಾಲ್ಕನೆಯ ಪೀಳಿಗೆಯಲ್ಲಿ ತಮ್ಮ ಸಂಯೋಗವಾಗುವುದೆಂದು" ಹೇಳಿಕೊಳ್ಳುವುದಾಗಿ ಶಥಪಥ ಬ್ರಾಹ್ಮಣದಲ್ಲಿ ಕಂಡುಬರುವ ವಚನಕ್ಕೆ ಅವರ ಮಕ್ಕಳಲ್ಲಿ ಮುಂದೆ ಮದುವೆ ಆಗುವುದೆಂದು ಮಾತುಲಕನ್ಯಾಪರಿಣಯವಾದಿಗಳು ಅರ್ಥಮಾಡುತ್ತಾರೆ. ಋಗ್ವೇದದ ಖಿಲಸೂಕ್ತದ ಒಂದು ಋಕ್ಕಿನಲ್ಲಿ 'ಸೋದರಮಾವನ ಮಗಳು' ಎಂದು ಕಂಡುಬರುವ ಶಬ್ದದಿಂದ ಮಾತುಲಕನ್ಯಾವಿವಾಹವಿತ್ತೆಂದು ಅವರು ಹೇಳುತ್ತಾರೆ. ಆದರೆ ಯಾಜ್ಞವಲ್ಕ್ಯಸ್ಮೃತಿ ಟೀಕಾಕಾರರಲ್ಲಿ ಒಬ್ಬರಾದ ಅಪರಾರ್ಕರು ಆ ಋಕ್ಕಿನಲ್ಲಿ ಮಾತುಲಕನ್ಯಾವಿವಾಹದ ನಿಷೇಧವಿದೆಯೆಂದು ಹೇಳುತ್ತಾರೆ. ಮತ್ತೊಬ್ಬರು,

ಮಾತುಲಕನ್ಯಾದಾನವಾಗುತ್ತಿತ್ತೆಂದು ಹೇಳುತ್ತಾರೆ. ತಾತ್ಪರ್ಯದಲ್ಲಿ ಈ ವೇದ ಮಂತ್ರಕ್ಕೆ ಅರ್ಥಮಾಡುವವರು ಅದಕ್ಕೆ ಬಹಳ ಕ್ಲೇಶಕೊಟ್ಟಿದ್ದಾರೆ, ಇಷ್ಟುಮಾತ್ರ ನಿಜ.

ಒಟ್ಟಿನಲ್ಲಿ ಮಾತುಲಕನ್ಯಾವಿವಾಹವು ಹಲವು ದೇಶಗಳಲ್ಲಿ ಶಿಷ್ಟಾಚಾರವೆಂದು ಪರಿಗಣಿಸಲಾಗಿದ್ದರೂ ಎಲ್ಲಾ ಸ್ಮೃತಿಗಳಿಗೂ ವಿರೋಧವಾಗಿದೆ. ಅದಕ್ಕಾಗಿಯೇ ತಂತ್ರವಾರ್ತಿಕಕಾರರಾದ ಕುಮಾರಿಲಭಟ್ಟರು ಅರ್ಜುನಸುಭದ್ರಾವಿವಾಹ, ಕೃಷ್ಣ ರುಕ್ಮಿಣೀವಿವಾಹ ಮುಂತಾದವು ಹೇಗೆ ಧರ್ಮ್ಯವೆಂಬ ಪೂರ್ವಪಕ್ಷಮಾಡಿ ಉತ್ತರ ಕೊಡುವುದಕ್ಕೆ ಪ್ರಯತ್ನಿಸಿದ್ದಾರೆ. ಶ್ರೀ ಕೃಷ್ಣ ಎಲ್ಲರಿಗೂ ಮಾರ್ಗದರ್ಶಕ, ಅರ್ಜುನ ಅವನ ಮಿತ್ರ ಮತ್ತು ಶಿಷ್ಯ. ಯದ್ಯದಾಚರತಿಶ್ರೇಷ್ಠಸ್ತತ್ತದೇವೇತರೋಜನಃ| ಸಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ| (ಗೀತಾ ೩-೨೧.) ಹೀಗೆ ಸ್ವತಃ ಹೇಳುವ ಶ್ರೀ ಕೃಷ್ಣ ಅಧರ್ಮ್ಯವನ್ನು ಹೇಗೆ ಆಚರಿಸುವನು? ಅರ್ಥಾತ್ ಹಾಗೆ ಆಚರಿಸುವುದಿಲ್ಲವೆಂದು ಉತ್ತರಕೊಡಲಾಗಿದೆ. ದುಹಿತಾ ವಸುದೇವಸ್ಯ ವಾಸುದೇವಸ್ಯ ಚ ಸ್ವಸಾ' ಹೀಗೆಂದು ಮಹಾಭಾರತ ಆದಿಪರ್ವದಲ್ಲಿದ್ದಾಗ್ಯೂ ಸುಭದ್ರೆ ಅರ್ಜುನನ ಸ್ವಂತ ಸೋದರಮಾವನ ಮಗಳಲ್ಲವೆಂದು ಹೇಳಿ ವಿರೋಧ ಪರಿಹಾರ ಮಾಡಲಾಗಿದೆ.

ಮಹಾಭಾರತದ ಉದ್ಯೋಗ ಪರ್ವದಲ್ಲಿ ಕೃಷ್ಣಾರ್ಜುನರು ಮದ್ಯಪಾನಮಾಡಿ ಮತ್ತರಾಗಿದ್ದರೆಂದು ವರ್ಣಿತವಾಗಿದೆ. 'ಉಭೌಮಧ್ವಾಸವಕ್ಷೀಬೌ ದೃಷ್ಟೌಮೇ ಕೇಶವಾರ್ಜುನೌ.' ಇದರ ಮೇಲೂ ಪೂರ್ವಪಕ್ಷ ಸ್ವರೂಪದ ಆಕ್ಷೇಪಣೆ ಎತ್ತಿ ಅದರ ಖಂಡನೆಯನ್ನು ಈ ರೀತಿ ಮಾಡಲಾಗಿದೆ. ಸುರಾ ಬಂದುವೇಳೆ ವರ್ಜ್ಯವೆಂದು ಹೇಳಿದ್ದರೂ ಮಧು ಮತ್ತು ಸೀಧು ಇವು ಕ್ಷತ್ರಿಯರಿಗೆ ನಿಷಿದ್ಧವಾಗಿರಲಿಲ್ಲ. ಆದ್ದರಿಂದಲೆ ಕೃಷ್ಣಾರ್ಜುನರು ಮಧುಪಾನ ಮಾಡಿದರು. ಇದರಲ್ಲಿ ಅಧರ್ಮ್ಯವೇನೂ ಇಲ್ಲ. ಕಾರಣ: ಅವರು ಕ್ಷತ್ರಿಯರು. ಶಿಷ್ಟಾಚಾರ ಶ್ರುತಿ ಸ್ಮೃತಿಗಳಿಗೆ ವಿರೋಧವಿದ್ದರೂ ಅದರ ಸಮರ್ಥನೆಗಾಗಿ ಖಟಾಟೋಪ ಮಾಡಲಾಗಿದೆಯೆಂಬುದು ಇದರಿಂದ ಕಂಡುಬರುತ್ತದೆ. ಶ್ರುತಿಗಳಲ್ಲಿ ಅವಶ್ಯ ಮತ್ತು ಐಚ್ಛಿಕವೆಂದು ಹೇಳಿರುವ ಆಚಾರಗಳನ್ನು ಶಿಷ್ಟಾಚಾರದಿಂದ ಅವು ನಿಷಿದ್ಧವೆಂದು ಪರಿಗಣಿಸಿರುವ ಉದಾಹರಣೆಗಳನ್ನು ತೆಗೆದುಕೊಳ್ಳೋಣ. 'ಗಾಮನುವಂಧ್ಯಾಮಾಲಭೇತ'-ಕರು ಇಲ್ಲದಿರುವ ಹಸುವನ್ನು ಕೊಲ್ಲಬೇಕೆಂದು ಶ್ರುತಿ ಹೇಳುತ್ತದೆ. ಮಧುಪರ್ಕಪೂಜೆ ವೇಳೆಯಲ್ಲೂ ಶಿಷ್ಟ ಅತಿಥಿಗಳ ಪ್ರೀತ್ಯರ್ಥವಾಗಿ ಪ್ರಾಣಿಹತ್ಯವನ್ನು ಹೇಳಿದೆ. ಹಿರಿಯ ಮಗನಿಗೆ ಮಾತ್ರ ತಂದೆಯ ಆಸ್ತಿ ಸಲ್ಲತಕ್ಕದೆಂದು ವಿಧಿ ಹೇಳಿದೆ. ಪಾಶ್ಚಾತ್ಯ ದೇಶದಲ್ಲಿ ಈ ಹೊತ್ತಿಗೂ ಈ ಪದ್ಧತಿ ಇದೆ. ಇದಕ್ಕೆ ಪ್ರೈಮೊಜೆನಿಚರ್ (Primogeniture) ಎಂದು ಹೇಳುತ್ತಾರೆ. ರಾಜ್ಯದ ಸಂಬಂಧದಲ್ಲಿ ಮಾತ್ರ ನಮ್ಮಲ್ಲಿ ಈ ನಿಯಮವಿದ್ದು "ನಹಿ ರಾಜಸುತಾಃಸರ್ವೇ ರಾಜ್ಯೇ ತಿಷ್ಠಂತಿ

ಭಾಮಿನಿ" ಈ ರೀತಿ ರಾಮಾಯಣದಲ್ಲಿ ಅನುವಾದ ಮಾಡಲಾಗಿದೆ. ಆದರೆ ಶಿಷ್ಟಾಚಾರಗಳು ಇವನ್ನು ನಿಷಿದ್ಧವೆಂದು ನಿಶ್ಚಯಿಸಿವೆ. ಶ್ರುತಿಯಲ್ಲೂ, ಹಲವು ಸ್ಮೃತಿಗಳಲ್ಲೂ ನಿಯೋಗದ ವಿಧಿ ಹೇಳಿದೆ. ಆದರೆ ಮನು ಅದನ್ನು ಪಶುಧರ್ಮವೆಂದು ಹೇಳಿದ್ದಾರೆ. ಊಢಾಯಾಃ ಪುನರುದ್ವಾಹಂ ಜ್ಯೇಷ್ಠಾಂಶಂ ಗೋವಧಂ ತಥಾ ಕಲೌ ಪಂಚ ನಕುರ್ವೀತ ಭ್ರಾತೃಜಾಯಾಂ ಕಮಂಡಲುಂ (ಆದಿತ್ಯಪುರಾಣ) ಶ್ರುತಿಕಾಲೀನ ಈ ಐದು ವಿಷಯಗಳನ್ನು ಕಲಿಯುಗದಲ್ಲಿ ನಿಷೇಧಿಸಲಾಗಿದೆ.

ಈಗ ಇದರ ಮೇಲೆ, ಯಾರು ಯಾತಕ್ಕೆ ಈ ನಿಷೇಧ ಮಾಡಿದರೆಂಬ ಪ್ರಶ್ನೆ ಬರುತ್ತದೆ. ಜ್ಞಾನವಂತರು ಸಮಾಜ ರಕ್ಷಣೆಗಾಗಿ (ಲೋಕಗುಪ್ತ್ಯರ್ಥ) ಈ ನಿಷೇಧ ಮಾಡಿದರೆಂದು ಉತ್ತರ ಕೊಡಲಾಗಿದೆ. ಅಂದರೆ ಜ್ಞಾನವಂತರು ಮಾತ್ರ ಲೋಕ ರಕ್ಷಣೆಗಾಗಿ ಶ್ರುತಿ ವಿಹಿತ ವಿಷಯಗಳನ್ನೂ ನಿಷೇಧಿಸುತ್ತಾರೆಂದು ಹೇಳಿದ ಹಾಗಾಯಿತು. ತನ್ನ ಮತ್ತು ಸಮಾಜದ ರಕ್ಷಣೆ ವಿಷಯ ಬಹಳ ಮಹತ್ವದ್ದು. ಸರ್ವತ ಆತ್ಮಾನಂ ಗೋಪಯೇತ್—ಸರ್ವ ಪ್ರಕಾರದಿಂದಲೂ ತನ್ನ ರಕ್ಷಣೆ ಮಾಡಿಕೊಳ್ಳಬೇಕು' ಹೀಗೆಂದು ಶ್ರುತಿ ಹೇಳುತ್ತದೆ. ಆತ್ಮಾನಂ ಸತತಂ ರಕ್ಷೇದ್ದಾರೈರಪಿ ಧನೈರಪಿ—ಈ ಮಹಾಭಾರತದ ವಚನಕ್ಕೂ ಇದೇ ಅರ್ಥ. ತಾತ್ಪರ್ಯದಲ್ಲಿ, ಧರ್ಮವನ್ನು ಅಧರ್ಮವೆಂದು, ಅಧರ್ಮವನ್ನು ಧರ್ಮವೆಂದು ಕಾಲಕ್ಕೆ ತಕ್ಕಂತೆ ನಿಶ್ಚಯಿಸಲು ಸಾಧ್ಯವಾಗಿದೆ. ಆದರೆ ತನಗೆ ತೋರಿದ್ದೆಲ್ಲ ಮಾಡುವುದಕ್ಕೆ ಸಾಧ್ಯವಿಲ್ಲ, ಜ್ಞಾನವಂತರಿಗೆ ಮಾತ್ರ ಇದು ಸಾಧ್ಯ ಎಂಬ ಸಿದ್ಧಾಂತಕ್ಕೆ ಪ್ರಾಚೀನರು ಮಾನ್ಯತೆ ಕೊಟ್ಟಿದ್ದಾರೆ. ಮನು ಮತ್ತು ಯಾಜ್ಞವಲ್ಕ್ಯರು ಈ ಪದ್ಧತಿಯನ್ನು ಹಾಕಿದರು. ಪರಿತ್ಯಜೇದರ್ಥಕಾಮೌ ಯೌಸ್ಯಾತಾಂ ಧರ್ಮವರ್ಜಿತೌ || ಕಾಮವಾದುದು ಧರ್ಮಕ್ಕೆ ವಿರೋಧವಾದರೆ ಅದನ್ನು ಬಿಡಬೇಕೆಂದು ಮನು ಹೇಳಿದ್ದಾರೆ. ಆದರೆ ಮುಂದೆ ಅದೇ ಮನು, ಧರ್ಮಂ ಚಾಪ್ಯಸುಖೋದರ್ಕಂ ಲೋಕವಿಕ್ರುಷ್ಟಮೇವಚ—ಧರ್ಮ ದುಃಖದಾಯಕ ಅಥವಾ ದುಃಖಪರಿಣಾಮಿ ಮತ್ತು ಜನರಿಗೆ ಅತ್ಯಂತ ಅಪ್ರಿಯವಾಗುವದಾದರೆ, ಅದನ್ನು ಬಿಡಬೇಕೆಂದು ಹೇಳಿದ್ದಾರೆ. ಯಜ್ಞಮಾಡುವುದು ಧರ್ಮ. ಆದರೆ ಇದಕ್ಕೆ ತಗಲುವ ದ್ರವ್ಯ ಕಳ್ಳತನದ ವಿನಾ ಸಿಗದಿದ್ದರೆ ಅದನ್ನು ಬಿಡಬೇಕು. ವಿಶ್ವಜಿತ್ ಯಜ್ಞವನ್ನು ಮಾಡಿ ಸರ್ವಸ್ವವನ್ನು ದಾನ ಮಾಡಬೇಕು, ಇದು ಧರ್ಮವೆಂದು ವೇದದಲ್ಲಿ ಹೇಳಿದೆ. ಆದರೆ ಸರ್ವಸ್ವದಲ್ಲಿ ನೆಂಟರಿಷ್ಟರ ಮತ್ತು ದಾಸಾದಿಗಳ ಅಂತರ್ಭಾವ ಮಾಡಕೂಡದು. ಎಲ್ಲಾ ಧನವನ್ನು ದಾನಮಾಡಿ ಹೆಂಗಸು ಮಕ್ಕಳು ಉಪವಾಸ ಬೀಳುವ ಪ್ರಸಂಗ ಒದಗುವುದಾದರೆ ಅದನ್ನು ಅಧರ್ಮವೆಂದು ತಿಳಿಯಬೇಕು. ಈ ವಿಷಯದಲ್ಲಿ ಯಾಜ್ಞವಲ್ಕ್ಯಸ್ಮೃತಿಯ ಮಿತಾಕ್ಷರ ಟೀಕೆಯಲ್ಲಿ ಬಹಳ ಚೆನ್ನಾಗಿ ವಿವೇಚನಮಾಡಲಾಗಿದೆ.

ತಾಯಿತಂದೆಗಳ ಮರಣಾನಂತರ ಮಕ್ಕಳು ಅವರ ಆಸ್ತಿ ಮತ್ತು ಸಾಲಗಳನ್ನು ಸಮನಾಗಿ ಹಂಚಿಕೊಳ್ಳಬೇಕೆಂದು ಯಾಜ್ಞವಲ್ಕ್ಯರು ಹೇಳಿದ್ದಾರೆ. ವಿಭಜೇರನ್ಸುತಾಃ ಪಿತ್ರೋರೂರ್ಧ್ವಂ ರಿಕ್ಥಮೃಣಂ ಸಮಮ್ | (ಯಾ. ೨, ೧೧೭). ಮನು, 'ಜ್ಯೇಷ್ಠ ಮಗನಿಗೆ ಎಲ್ಲಾ ಆಸ್ತಿಯನ್ನು ಕೊಡಬೇಕು, ಕೊನೆಯಪಕ್ಷ ದೊಡ್ಡ ಭಾಗ ಕೊಡಬೇಕು'—ಎಂದು ಹೇಳಿದ್ದಾರೆ (ಮನು. ೯, ೧೧೨). ಹಾಗಾದರೆ ಮನುಗೆ ವಿರೋಧವಾಗಿ ಯಾಜ್ಞವಲ್ಕ್ಯರು ಹೇಗೆ ಹೆಳಿದರೆಂದು ಪ್ರಶ್ನೆ ಮಾಡಿ ಮಿತಾಕ್ಷರಕಾರರು "ವಿಷಮ ವಿಭಾಗವನ್ನು ಶಾಸ್ತ್ರ (ಶ್ರುತಿ) ಹೇಳಿವೆ, ನಿಜ. ಆದರೆ ಅದು ಲೋಕವಿದ್ವಿಷ್ಟವಾಗಿರುವುದರಿಂದ ಅದರ ಅವಲಂಬನೆ ಮಾಡಕೂಡದು. ಕಾರಣ ಧರ್ಮವಾದರೂ ಅದು ಅಸ್ವರ್ಗ್ಯ ಮತ್ತು ಲೋಕವಿದ್ವಿಷ್ಟವಾಗಿದ್ದರೆ ಅದರ ಆಚರಣೆ ಮಾಡಕೂಡದು"—ಎಂದು ಹೇಳಿ ಮುಂದೆ ಮಧುಪರ್ಕಾದಿ ಪ್ರಸಂಗದ ಗೋವಧೆ, ನಿಯೋಗದಿಂದ ಪುತ್ರೋತ್ಪತ್ತಿ ಮುಂತಾದವು ನಿಷೇಧವಾಗಿರುವುದರ ಉದಾಹರಣೆಗಳನ್ನು ಕೊಟ್ಟಿದ್ದಾರೆ. ವಿಷಮವಿಭಾಗವನ್ನು ಬಿಟ್ಟು ಸಮಾನವಿಭಾಗವನ್ನು ಮಾಡಬೇಕೆಂದು ನಿರ್ಣಯಕೊಟ್ಟಿದ್ದಾರೆ. ಇವೆಲ್ಲವೂ ಶಾಸ್ತ್ರಶುದ್ಧವಾಗಿದ್ದರೂ ಜನರಿಗೆ ಅದು ಬೇಕಿಲ್ಲವಾಗಿ ಅವನ್ನು ಬಿಡಬೇಕೆಂಬ ಸಿದ್ಧಾಂತವನ್ನೇ ಮಿತಾಕ್ಷರಕಾರರು ಮಂಡಿಸಿದ್ದಾರೆ. ಇದರಮೇಲೆ ಹಲವರು ಶಾಸ್ತ್ರಿಗಳು (ಶಾಸ್ತ್ರ ತಿಳಿದವರು) 'ಗವಾಲಂಬಾದಿ ವೇದವಿಹಿತ ಕಾರ್ಯಗಳು ಕಾಮ್ಯವಾದ್ದರಿಂದ ಅವನ್ನು ಮಾಡಲೇಬೇಕೆಂಬುದಿಲ್ಲವೆಂದು' ಹೇಳುತ್ತಾರೆ. ಆದರೆ, ಯಾರಾದರೂ ಶ್ರುತಿಯಲ್ಲಿ ಹೇಳಿರುವಂತೆ ಕಾಮ್ಯಬುದ್ಧಿಯಿಂದ ಅದನ್ನು ಈ ಹೊತ್ತು ಮಾಡುವುದಕ್ಕೆ ಹೊರಟರೆ ನೀವು (ಶಾಸ್ತ್ರಿಗಳು) ಅವರನ್ನು ಮಾಡಗೊಡಿಸುವಿರಾ? ಸ್ವರ್ಗದ ಇಚ್ಛೆ ತನಗೆ ಇದೆಯೆಂದು, ಇಂದು ಯಾವನಾದರೂ ಗವಾಲಂಬನ ಮಾಡುವೆನೆಂದರೆ ಅವನು ಜನರಿಂದ ಕಲ್ಲಿನ ಏಟನ್ನು ತಿನ್ನದೆ ಇರುವುದಿಲ್ಲ. ಗೋಹತ್ಯೆ ಪೂರ್ವದಲ್ಲಿ ಕಾಮ್ಯಧರ್ಮವಾಗಿದ್ದಿರಬಹುದು. ಆದರೆ ಇಂದು ಅದಕ್ಕೆ ಉಪಪಾತಕಗಳಲ್ಲಿ ಮೊದಲನೆಯ ಸ್ಥಾನ ದೊರೆತಿದೆ. ಆದ್ದರಿಂದಲೇ ಅದನ್ನು ನಿಷಿದ್ಧವೆಂದು ಪರಿಗಣಿಸಲಾಯಿತು. ಜ್ಞಾನವಂತರು ಲೋಕರಕ್ಷಣದ ಕಡೆಗೆ ದೃಷ್ಟಿ ಕೊಟ್ಟು ಈ ನಿಷೇಧವನ್ನು ಮಾಡಿದರು.

ಇದರ ಮೇಲೆ ಯಾರಾದರೂ ಹೇಳಬಹುದು: 'ಈ ಹಳೆಯ ವಿಷಯಗಳನ್ನು ನಾವೇ ಯಾಕೆ ಕೆದಕಿ ತೆಗೆಯಬೇಕು?' ಎಂದು. ನಾವು ಅದನ್ನು ತೆಗೆಯದೆ ಇದ್ದರೆ ಪ್ರಪಂಚ ಅವನ್ನು ಹೊರಗೆಡವಿದ ಹೊರತು ಸುಮ್ಮನೆ ಇರುತ್ತದೆಯೆ? ಈಗ ಶ್ರುತಿ ಸ್ಮೃತಿ ಗ್ರಂಥಗಳು ಎಲ್ಲರಿಗೂ ಎಲ್ಲ ಕಡೆಗಳಲ್ಲೂ ಸಿಕ್ಕುತ್ತವೆ. ಅವುಗಳ ಅಭ್ಯಾಸವನ್ನು ಹೆಚ್ಚುಮಂದಿ ಮಾಡುತ್ತಾರೆ. ಇಂತಹ ಸ್ಥಿತಿಯಲ್ಲಿ ನಮ್ಮ ದೋಷವನ್ನು

ನಾವು ಹುಡುಕಿ ತೆಗೆದು ಅದನ್ನು ದೂರ ಹಾಕುವುದಕ್ಕೆ ಪ್ರಯತ್ನಮಾಡದಿದ್ದರೆ ಕಣ್ಣುಮುಚ್ಚಿಕೊಂಡು ಹಾಲನ್ನು ಕದ್ದು ಕುಡಿಯುವ ಬೆಕ್ಕಿನಂತೆ ನಮ್ಮ ಸ್ಥಿತಿ ಆಗುವುದು. ತನ್ನ ಕಣ್ಣನ್ನು ಮುಚ್ಚಿಕೊಂಡು, ಯಾರೂ ತನ್ನನ್ನು ನೋಡುವುದಿಲ್ಲವೆಂದು ಬೆಕ್ಕು ತನ್ನ ಮನಸ್ಸಿನಲ್ಲಿ ನಿಶ್ಚಯಿಸಿದರೂ ಅದರ ತಲೆಯ ಮೇಲೆ ದೊಣ್ಣೆ ಏಟು ಬೀಳದೇ ಇರುವುದಿಲ್ಲವೆಂಬುದನ್ನು ನೀವು ಲಕ್ಷ್ಯದಲ್ಲಿ ಇಡಬೇಕು. ಇಂದು ಉತ್ಪನ್ನವಾಗಿರುವ ಪರಿಸ್ಥಿತಿಯನ್ನು ಚೆನ್ನಾಗಿ ನೋಡಿ, ಮುಂದಿನ ೨೫ ವರ್ಷಗಳಲ್ಲಿ ನಮಗೆ ಯಾವದು ಪರಿವರ್ತನೆ ಮಾಡುವುದು ಜರೂರಾಗಿದೆ ಮತ್ತು ಯಾವುದನ್ನು ನಾವು ಮಾಡಿಯೇವು ಎಂಬುದರ ವಿಚಾರವನ್ನು ಎಲ್ಲರೂ ಅವಶ್ಯವಾಗಿ ಮಾಡಬೇಕಾದ ಕಾಲ ಈಗ ಬಂದಿದೆ. ಇರಲಿ.

ಶ್ರುತಿಮಾನ್ಯವಾದ ಅನೇಕ ಧರ್ಮಗಳು ಇಂದು ಬಂದುಮಾಡಲ್ಪಟ್ಟಿವೆ. ಇವುಗಳ ಉದಾಹರಣೆ ಮೊದಲೇ ಕೊಟ್ಟಿದೆ. ಈಗ ಇನ್ನೂ ಕೆಲವನ್ನು ನೋಡೋಣ. ಹೇಮಾದ್ರಿಗಳು ತಮ್ಮ ಚತುರ್ವರ್ಗಚಿಂತಾಮಣಿಯಲ್ಲೂ, ಮಾಧವರು ಪರಾಶರ ಸ್ಮೃತಿಯ ಮೇಲಣ ತಮ್ಮ ಟೀಕೆಯಲ್ಲೂ ಇಂತಹ ಅನೇಕ ಧರ್ಮಗಳ ನಾಮಾವಳಿ ಕೊಟ್ಟಿದ್ದಾರೆ. ನಿಯೋಗ, ಅಕ್ಷತಯೋನಿ ಕನ್ಯೆಯ ವಿವಾಹ, ಅಸವರ್ಣ ಕನ್ಯೆಯ ವಿವಾಹ, ಆತತಾಯಿಯಾದ ಬ್ರಾಹ್ಮಣನನ್ನೂ ಕೊಲ್ಲದಿರುವುದು, ಹಡಗಿನಿಂದ ಪರದೇಶಕ್ಕೆ ಹೊಗುವವರಿಗೆ ಶುದ್ಧಿ, ಸತ್ರದೀಕ್ಷಾ, ಕಮಂಡಲು ಧಾರಣ (ಸಂನ್ಯಾಸ), ಮಹಾಪ್ರಸ್ಥಾನ, ಸೌತ್ರಾಮಣಿಯಲ್ಲಿ ಸುರಾಪಾನ, ಅಗ್ನಿಹೋತ್ರ, ವಾನಪ್ರಸ್ಥಾಶ್ರಮ, ದತ್ತಕ ಮತ್ತು ಔರಸ (ಗಂಡು) ಮಕ್ಕಳನ್ನು ಳಿದು, ಇತರ ವಿಧವಾದ ಗಂಡು ಮಕ್ಕಳಿಗೆ ಮಾನ್ಯತೆ; ಸೋಮವಿಕ್ರಯ, ಶೂದ್ರಾನ್ನಗ್ರಹಣ, ಮುಂತಾದ ಅನೇಕ ವಿಷಯಗಳನ್ನು ಜ್ಞಾತೃಗಳು ಕೂಡದೆಂದಿರುವುದರಿಂದ ಆ ನಿಷೇಧ ಈಗ ವೇದಾಜ್ಞೆಗೆ ಸಮಾನವಾಗಿ ಆಗಿದೆ.—ಈ ರೀತಿ ಆ ಗ್ರಂಥಕರ್ತರು ತಮ್ಮ ಮತವನ್ನು ಕೊಟ್ಟಿದ್ದಾರೆ.

ಏತಾನಿ ಲೋಕಗುಪ್ತ್ಯರ್ಥಂ ಕಲೇರಾದೌ ಮಹಾತ್ಮಭಿಃ
ನಿವರ್ತಿತಾನಿ ಕರ್ಮಾಣಿ ವ್ಯವಸ್ಥಾಪೂರ್ವಕಂ ಬುಧೈಃ
ಸಮಶ್ಚಾಪಿ ಸಾಧೂನಾಂ ಪ್ರಮಾಣಂ ವೇದವದ್ಭವೇತ್

(ಪರಾಶರಮಾಧವೀಯ)

ಆದರೆ ಇಲ್ಲಿನ ಹಲವು ವಿಷಯಗಳಿಂದ ಇಂದು ನಮ್ಮ ಸ್ಥಿತಿ ಏನಾಗಿದೆಯೆಂಬುದನ್ನು ಯಾರೂ ವಿಚಾರಮಾಡುವುದಿಲ್ಲ. ಬಲಿ ಮತ್ತು ಜಾವಾ ದ್ವೀಪಗಳಲ್ಲಿ ಈ ಹೊತ್ತಿಗೂ ನಾಲ್ಕು ವರ್ಣಗಳು ಕಂಡುಬರುತ್ತವೆ. ಸಮುದ್ರಪ್ರಯಾಣ ನಮಗೆ

ನಿಷಿದ್ಧವಾಗಿರುವುದರಿಂದ ನಮ್ಮ ಅವರ ಸಂಬಂಧ ಕಿತ್ತುಹೋಯಿತು. ನಾನಾ ಧರ್ಮಪಂಥಗಳು ಹುಟ್ಟಿಕೊಂಡಿರುವುದರಿಂದ ಪರಸ್ಪರ ಜಗಳವಾಗಿ ಒಬ್ಬರು ಮತ್ತೊಬ್ಬರನ್ನು ಕೀಳುತನದಿಂದ ನೋಡಿದರು. ಉದಾಹರಣೆಗೆ: ಶೈವರ ಪಾಶುಪತ ಶಾಸ್ತ್ರಕ್ಕೆ ವರಾಹ ಪುರಾಣದಲ್ಲಿ 'ವಿಶ್ವಮೋಹನ'ವೆಂದು ಹೇಳಿದೆ. ಇದಕ್ಕೆ ವಿಪರೀತ ವಾಗಿ ಶೈವಾಗಮದಲ್ಲಿ

ಚಾತುರ್ವೇದೋऽಪಿಯೋವಿಪ್ರೋ ದೀಕ್ಷಿತೋ ನ ಶಿವಧ್ವರೇ |
ಸತುಶೂದ್ರಃ ಪ್ರಮಂತವ್ಯೋ ನದೇಯಂ ತಸ್ಯ ಶಾಸನಮ್ ||

—ನಾಲ್ಕು ವೇದಗಳನ್ನು ಅಧ್ಯಯನಮಾಡಿದ ಬ್ರಾಹ್ಮಣನು ಶಿವದೀಕ್ಷೆಯನ್ನು ತೆಗೆದುಕೊಳ್ಳದಿದ್ದರೆ ಆತನು ಶೂದ್ರನೆಂದು ತಿಳಿಯಬೇಕೆಂದು ಹೇಳಿದೆ. ಈ ರೀತಿ ಶೈವರು ಹೇಳಿದರೆ, ಕಾಪಾಲಿಕ, 'ಪಾಶುಪತ, ಶೈವ ಮತ್ತು ಕ್ಷುದ್ರಕೆಲಸಗಾರ, ಇವರು ದೃಷ್ಟಿಗೆ ಬಿದ್ದರೆ ಸೂರ್ಯದರ್ಶನಮಾಡಿ ಪ್ರಾಯಶ್ಚಿತ್ತ ಮಾಡಬೇಕು. ಅವರ ಸ್ಪರ್ಶವಾದರೆ ಸ್ನಾನವೇ ಮಾಡಬೇಕೆಂದು' ಸ್ಮೃತಿಹೇಳುತ್ತದೆ. ಹಲವು ವೈಷ್ಣವರು ಶಿವನಿಗೆ ರಾಕ್ಷಸನೆಂದು ಹೇಳುತ್ತಾರೆ. ಇಂಥ ವಿಕೋಪಕ್ಕೆ ನಮ್ಮಲ್ಲಿನ ಪಂಥ ಭೇದಗಳು ಹೋಗಿವೆ. ಈ ವಿಷಯ ವಿಚಾರ ಮಾಡುವಾಗ, ಎಲ್ಲಾ ದೇವದೇವತೆಗಳನ್ನು ಬಂದುಮಾಡಿ ಅಗ್ನಿ ಮತ್ತು ಸೂರ್ಯ ಇವೆರಡೇ ದೇವತೆಗಳನ್ನು ಮಾನ್ಯ ಮಾಡಿದರೆ ಸಾಕೆಂದು ನನಗೆ ತೋರುತ್ತದೆ. ಅಗ್ನಿ ಮತ್ತು ಸೂರ್ಯ ಇವುಗಳ ಹೊರತು ನಮಗೆ ಬದುಕುವುದಕ್ಕೆ ಆಗುವುದಿಲ್ಲವಾಗಿ ಅವುಗಳನ್ನು ಮಾತ್ರ ಪರಮೇಶ್ವರ ಪ್ರತೀಕಗಳೆಂದು ಉಪಾಸನೆ ಮಾಡಬೇಕು. ಇತರ ಎಲ್ಲವನ್ನೂ ಬಂದು ಮಾಡಬೇಕು. ವಿಶಿಷ್ಟ ದೇವತೆಗಳ ಭಕ್ತರ ಇಂಥ ಅಭಿಮಾನ ನೋಡಿ ಹೀಗೆ ಮಾಡಬೇಕೆನ್ನಿಸುತ್ತದೆ.

ಭಿನ್ನಭಿನ್ನ ಆಚಾರಗಳಿಂದ ಧರ್ಮನಿರ್ಣಯ ಮಾಡುವ ಕೆಲಸ ಎಷ್ಟು ಕಠಿಣವಾಗಿದೆಯೆಂಬುದು ಈ ಮೇಲಣ ವಿವೇಚನೆಯಿಂದ ತಿಳಿದುಬರುವುದು. ಹೀಗೆ ಮಾಡುವಾಗ ಕೇವಲ ಶಾಸ್ತ್ರಗ್ರಂಥಗಳ ಕಡೆ ಬೆರಳನ್ನು ತೋರಿಸುವುದು ಹುಚ್ಚುತನವಾದೀತು. ಬೃಹಸ್ಪತಿಗಳು ತಮ್ಮ ಸ್ಮೃತಿಯಲ್ಲಿ ಈ ವಿಷಯವನ್ನು ಸ್ಪಷ್ಟಶಬ್ದಗಳಿಂದ ಹೇಳಿದ್ದಾರೆ. ಈ ಸ್ಮೃತಿ ಸುಮಾರು ನಾಲ್ಕನೆಯ ಶತಮಾನದ್ದಾಗಿದ್ದು ಅದರ ಸ್ವರೂಪ ಮನುಸ್ಮೃತಿಯ ಮೇಲಣ ವಾರ್ತಿಕದಂತಿದೆ. ಅದರಲ್ಲಿ ವ್ಯವಹಾರಶಾಸ್ತ್ರವನ್ನು (Administration of Justice) ಉತ್ತಮ ಪ್ರಕಾರವಾಗಿ ಹೇಳಿದೆ.

ಕೇವಲಂ ಶಾಸ್ತ್ರಮಾಶ್ರಿತ್ಯ ನಕರ್ತವ್ಯೋ ಹಿ ನಿರ್ಣಯಃ |
ಯುಕ್ತಿಹೀನೇ ವಿಚಾರೇತು ಧರ್ಮಹಾನಿಃ ಪ್ರಜಾಯತೇ ||

ದೇಶ ಜಾತಿ ಕುಲಾನಾಂಚ ಯೇಧರ್ಮಾಃ ಪ್ರಾಕ್ಪ್ರವರ್ತಿತಾಃ |
ತಥೈವ ತೇ ಪಾಲನೀಯಾಃ ಪ್ರಜಾಃ ಪ್ರಕ್ಷುಭ್ಯತೇಽನ್ಯಥಾ ||

—ಹೀಗೆಂದು ಬೃಹಸ್ಪತಿಗಳು ಹೇಳುತ್ತಾರೆ. ಧರ್ಮನಿರ್ಣಯ ಮಾಡುವಾಗ ಶಾಸ್ತ್ರದ ಕಡೆಗೆ ಬೆರಳು ತೋರಿಸಕೂಡದು. ಯುಕ್ತಿಬಿಟ್ಟು ನಿರ್ಣಯಮಾಡಿದರೆ ಧರ್ಮದ ಹಾನಿಯಾಗುತ್ತದೆ. ದೇಶ, ಜಾತಿ, ಕುಲ ಮುಂತಾದ ಧರ್ಮಗಳನ್ನು ಹಿಂದೆ ನಿಶ್ಚಯಿಸಿರುವಂತೆ ಪಾಲಿಸಬೇಕು; ಇಲ್ಲದಿದ್ದರೆ ಜನರಲ್ಲಿ ಕ್ಷೋಭೆ ಹುಟ್ಟಿ ಅನರ್ಥವಾದೀತು. ಸಮುದ್ರಗುಪ್ತನಂಥ ಸಾರ್ವಭೌಮ ದೊರೆ ಉತ್ತರದ ಕಡೆಯಿಂದ ದಕ್ಷಿಣದ ಕಡೆಗೆ ರಾಜ್ಯಗಳನ್ನು ಗೆಲ್ಲುತ್ತ ಬಂದು ಉತ್ತರದ ಕಡೆಯ ಆಚಾರವನ್ನು ದಕ್ಷಿಣದ ಕಡೆ ಮೇಲೆ ಹೊರಿಸಿದ್ದೇ ಆದರೆ ಜನಾಪರಕ್ತಿ ಅಂದರೆ ರಾಜನ ವಿಷಯದಲ್ಲಿ ಜನರ ಮನಸ್ಸಿನಲ್ಲಿ ದ್ವೇಷ ಹುಟ್ಟೀತು. ಉತ್ತರದ ಕಡೆ ಬ್ರಾಹ್ಮಣರು ಮೀನು ತಿನ್ನುತ್ತಾರೆ. ದೊಡ್ಡ ದೊಡ್ಡ ಮಹಾಮಹೋಪಾಧ್ಯಾಯರು ನದಿಯಲ್ಲಿ ಸ್ನಾನಮಾಡಿ ಶುಚಿರ್ಭೂತರಾಗಿ ಬರುವಾಗ ಶಾಲುಜೋಡಿಯಲ್ಲಿ ಹೊಸದಾದ ಮೀನುಗಳನ್ನು ತೆಗೆದುಕೊಂಡು ಬರುತ್ತಾರೆ. ನಾವು ಅದನ್ನು ಅವರಲ್ಲಿ ದೋಷವೆಂದೆಣಿಸಿದರೆ, ಅವರು, ನಾವು ಉಪಯೋಗಿಸುವ ಈರುಳ್ಳಿ ಬೆಳ್ಳುಳ್ಳಿಗಳ ಕಡೆ ಬೆರಳುತೋರಿಸಿ, ನಮ್ಮ ಮೇಲೆ ದೋಷಹೊರಿಸುತ್ತಾರೆ. ಉತ್ತರದ ಕಡೆ ಮದ್ಯಪಾನ ನಿಷಿದ್ಧವಲ್ಲ. ರಜಸ್ವಲಾ ಸ್ತ್ರೀಯರೂ ಮುಟ್ಟುವುದಕ್ಕೆ ಯೋಗ್ಯರಾಗಿರುತ್ತಾರೆ—ಹೀಗೆಂದು ಬೃಹಸ್ಪತಿಗಳು ಹೇಳುತ್ತಾರೆ. ಅಲ್ಲಿ ಚಳಿಗಾಲದಲ್ಲಿ ಶೀತದ ತೊಂದರೆ ಬಹಳವಿರುವುದರಿಂದ ಹಾಗೆ ಪದ್ಧತಿ ಬಂದಿರಬೇಕು. 'ನಮ್ಲೇಚ್ಛಭಾಷಾಂ ಶಿಕ್ಷೇತ'—ಎಂದು ವಸಿಷ್ಠ ಧರ್ಮಸೂತ್ರ ಹೇಳುತ್ತದೆ. (೬. ೪೧) ಆದರೆ ನಾವೆಲ್ಲ ಇಂದು ಏನು ಮಾಡುತ್ತಿದ್ದೇವೆ? ಅಕ್ಬರನ ಫಡ್ನೀಸ್ ರಾಜಾ ತೋಡರಮಲ್ಲನು ಧರ್ಮಶಾಸ್ತ್ರದ ಮೇಲೆ ಗ್ರಂಥರಚಿಸಿದ್ದಾನೆ. ಆತನೂ ಮ್ಲೇಚ್ಛಭಾಷೆ ಪರ್ಷಿಯನ್ ಕಲಿತಿದ್ದ. 'ನಮ್ಲೇಚ್ಛಾಶುಚ್ಯಧಾರ್ಮಿಕೈಃ ಸಹ ಸಂಭಾಷೇತ'—ಈ ನಿಷೇಧವನ್ನು ನೀವು ಎಷ್ಟರಮಟ್ಟಿಗೆ ಪಾಲಿಸುತ್ತೀರಿ? ಇದನ್ನೊಂದುವೇಳೆ ಬದಿಗೊತ್ತಿದ್ದರೂ 'ನಶೂದ್ರರಾಜ್ಯೇ ನಿವಸೇತ್'—ಶೂದ್ರನ ರಾಜ್ಯದಲ್ಲಿ ಇರಕೂಡದು ಎಂಬ ವಚನವನ್ನು ಏನು ಮಾಡಬೇಕು? ನಾವೆಲ್ಲಿ ಅವರ ರಾಜ್ಯದಲ್ಲಿ ವಾಸಮಾಡುವುದಕ್ಕೆ ಹೋದೆವು, ಅವರೇ ನಮ್ಮನ್ನು ಗೆದ್ದು ಇಲ್ಲಿ ಇದ್ದುಬಿಟ್ಟಿದ್ದಾರೆ'—ಎಂದು ಹಲವರು ಉಪಾಯ ಹೂಡುತ್ತಾರೆ. ಇದರ ಅರ್ಥ ಇಷ್ಟೇ. ನಾವು ನಮಗಿಂತ ಬಲಾಢ್ಯರಿಂದ ಒದೆ ತಿನ್ನೋಣ, ನಮಗಿಂತ ದುರ್ಬಲರಾದವರನ್ನು ಒದೆಯೋಣ. ಇದರಲ್ಲಿ ಏನಾದರೂ ಬುದ್ಧಿವಂತಿಕೆ ಇದೆಯೇ? ಅಗ್ನಿಹೋತ್ರವನ್ನು ಮಾಡದಿರುವವನು ದೊಡ್ಡ ಪಾತಕಿಯೆಂದು ಹೇಳಿದೆ;—("ವೀರಹಾವಾ ಏಷ ದೇವಾನಾಂ ಯೋಗ್ನಿ

ಮುದ್ವಾಸಯತೇ "). ಆದರೆ ಇಂದು ಬ್ರಾಹ್ಮಣರಲ್ಲಿ ಒಂದು ತಾಲ್ಲೂಕಿಗೂ ಒಬ್ಬ ಅಗ್ನಿಹೋತ್ರೀ ಕಾಣದ ಹಾಗೆ ಇದೆ. ಪವಿತ್ರ ಭಸ್ಮಕ್ಕಾಗಿ ಕಂಪೆನಿಗೆ ಕಾಂಟ್ರಾಕ್ಟ್ ಕೊಡುವ ಹೊತ್ತು ಬಂದಿದೆ. ಶ್ರೌತ ಮತ್ತು ಸ್ಮಾರ್ತಗಳ ಬಹಳವಾದ ವಿಧಿಗಳು ಇಂದು ಬಂದಾಗಿವೆ. ಅವೆಲ್ಲವನ್ನೂ ಸ್ವಂತ ಇಚ್ಛೆಯಿಂದ ನಾವು ಬಿಟ್ಟಿದ್ದೇವೆ. ವೇದಾಧ್ಯಯನದ್ದೂ ಅದೇಸ್ಥಿತಿ. ನಿತ್ಯ ವೇದಾಧ್ಯಯನ ನಿಂತಿತು. ಒಂದೇ ಋಕ್ ನಿತ್ಯ ಹೇಳಬೇಕೆಂಬ ರಿಯಾಯಿತಿ ದೊರೆತರೆ, ಅಷ್ಟನ್ನಾದರೂ ನಿಯಮವಾಗಿ ಎಷ್ಟುಮಂದಿ ಮಾಡುತ್ತಾರೆ? 'ಸೇವಾಶ್ವವೃತ್ತಿರಾಖ್ಯಾತಾ | ಯದ್ಯತ್ಪರವಶಂ ಕರ್ಮ ತತ್ತದ್ಯತ್ನೇನ ವರ್ಜಯೇತ್ | (ಮನು ೪, ೧೫೯)—ಹೀಗೆ ಹೇಳಿದೆ: ಇದರ ಗತಿ ಏನು? ಧರ್ಮದ ಆಚರಣೆ ಮನಃಪೂರ್ವಕವಾಗಿ ಮಾಡಬೇಕು, ಆ ಧರ್ಮ 'ಹೃದಯೇನ ಅಭ್ಯನುಜ್ಞಾತ'—ಅಂದರೆ ಹೃದಯಕ್ಕೆ (Conscience) ಒಪ್ಪುವಂಥಾದ್ದಾಗಿರಬೇಕು. ಅದು ಕೇವಲ ರುಪಾಯಿ, ಆಣೆ, ಪೈ. (Balance Sheet) ಅಂತಹ ಧರ್ಮವಿರಬಾರದೆಂದು ಧರ್ಮವಿಷಯದಲ್ಲಿ ಹೇಳಿದೆ.

ಇಂದ್ರ ಅಹಲ್ಯೆಯಲ್ಲಿ ಜಾರಕರ್ಮಮಾಡಿದ, ಆತ್ಮಜ್ಞಾನಿ ವಸಿಷ್ಠ ಪುತ್ರವಧೆಗಾಗಿ ಶೋಕಪಟ್ಟು ಆತ್ಮಹತ್ಯ ಮಾಡಿಕೊಂಡ. ವಿಶ್ವಾಮಿತ್ರ ಕ್ಷತ್ರಿಯನಾಗಿದ್ದು, ಆ ಚಂಡಾಲನಾದ ತ್ರಿಶಂಕುವಿನ ಪೌರೋಹಿತ್ಯವನ್ನು ನಡಸಿದ. ಕೃಷ್ಣ ಸಾವಿರಾರು ಸ್ತ್ರೀಯರನ್ನು ಮದುವೆಮಾಡಿಕೊಂಡ. ಯುಧಿಷ್ಠಿರ ದ್ರೌಪದಿಯನ್ನು ಐದು ಅಣ್ಣತಮ್ಮಂದಿರ ಹೆಂಡತಿಯನ್ನಾಗಿ ಮಾಡಿದ. ವ್ಯಾಸ ನೈಷ್ಠಿಕ ಬ್ರಹ್ಮಚಾರಿಯಾಗಿದ್ದರೂ ವಿಚಿತ್ರವೀರ್ಯನ ಹೆಂಡತಿಯಲ್ಲಿ ಸಂತತಿ ಉತ್ಪನ್ನಮಾಡಿದ. ಭೀಷ್ಮ ಆಜನ್ಮ ಬ್ರಹ್ಮಚಾರಿಯಾಗಿದ್ದರೂ ಯಜ್ಞಮಾಡಿದ. ರಾಮ ಸೀತೆಯಿಲ್ಲದೆ ಯಜ್ಞಮಾಡಿದ. ಧೃತರಾಷ್ಟ್ರ ಅಂಧನಾದರೂ ಯಜ್ಞಮಾಡಿದ. ಇವೆಲ್ಲವೂ ಧರ್ಮವಿರುದ್ಧವಾದವು. ಹಲವರು ಇವುಗಳ ಸಮರ್ಥನೆ ಮಾಡುವುದಕ್ಕಾಗಿ ಆ ಪೈಕಿ ಕೆಲವನ್ನು ಲಾಕ್ಷಣಿಕವೆಂದು ಹೇಳಿದ್ದಾರೆ.

ಇಂದ್ರನೆಂದರೆ ಪರಮೇಶ್ವರ, ಅಹಲ್ಯೆ ಎಂದರೆ ರಾತ್ರಿ; ಆದ್ದರಿಂದ ಇವರಿಬ್ಬರ ಸಮಾಗಮಕ್ಕೆ ವ್ಯಭಿಚಾರವೆಂದು ಕೇವಲ ಲಕ್ಷಣದಿಂದ ಹೇಳಿದೆ; ವಿಶ್ವಾಮಿತ್ರ ತಪಸ್ಸಿನ ಜೋರಿನಿಂದ ತ್ರಿಶಂಕುವಿನಿಂದ ಯಜ್ಞಮಾಡಿಸಿದ; ದ್ರೌಪದಿ ಒಬ್ಬಳಲ್ಲ ಐವರು ದ್ರೌಪದಿಯರು ಇದ್ದರು; ವ್ಯಾಸರು ದೊಡ್ಡವರ ಹೇಳಿಕೆಯ ಮೇಲೆ ಮಾಡಿದರು; ಭೀಷ್ಮನಿಗೆ ಯಜ್ಞಕ್ಕೆ ಮಾತ್ರ ಸ್ತ್ರೀ ಇದ್ದಳು; ರಾಮ ಸೀತೆಯ ಸುವರ್ಣಪ್ರತಿಮೆಯನ್ನು ಹತ್ತಿರ ಇಟ್ಟುಕೊಂಡು ಯಜ್ಞಮಾಡಿದ; ಧೃತರಾಷ್ಟ್ರನಿಗೆ ಯಜ್ಞಕ್ಕೆ ಮಾತ್ರ ದೃಷ್ಟಿಬಂದಿತ್ತು—ಈ ರೀತಿ ಧರ್ಮವಿರೋಧೀ ವಿಷಯಗಳನ್ನು ಸ್ಪಷ್ಟಪಡಿಸುವ

ಖಟಾಟೋಪವನ್ನು ಕುಮಾರಿಲಭಟ್ಟ ಮುಂತಾದ ಮೀಮಾಂಸಕರು ಮಾಡಿದ್ದಾರೆ. ಆದರೆ ಕೊನೆಯಲ್ಲಿ, "ದೊಡ್ಡವರ ದೋಷಗಳನ್ನು ನಾವು ಅನುಸರಿಸಬಾರದು; ಹಾಗೆ ಮಾಡಿದರೆ ಕೆಸರಿನಲ್ಲಿ ಮುಳುಗುವ ಹಸುವಿನಂತೆ ನಮ್ಮ ಸ್ಥಿತಿ ಆದೀತು; ಆದ್ದರಿಂದ ಅವರು ಲೋಕರಕ್ಷಣಾರ್ಥವಾಗಿ ಎಷ್ಟು ಮಾಡಿದರೂ ಅವುಗಳ ಅನುಕರಣ ಮಾಡ ಬೇಕು"—ಹೀಗೆಂದು ನಿಷ್ಕರ್ಷೆ ಮಾಡಿದ್ದಾರೆ. ಇದನ್ನು ಲಕ್ಷ್ಯದಲ್ಲಿ ಇಡಬೇಕು. (ಗೌ. ಧ. ಸೂ. ೧-೩-೪; ಆಪ. ಧ. ಸೂ. ೨-೬, ೧೩. ೭-೯, ಭಾಗವತಪುರಾಣ ದಶಮ ಸ್ಕಂಧ ಪೂರ್ವಾರ್ಧ ೩೩-೩೦), ಧರ್ಮವ್ಯತಿಕ್ರಮೋ ದೃಷ್ಟ ಈಶ್ವರಾಣಾಂಚ ಸಾಹ ಸಮ್ ತೇಜೀಯಸಾಂ ನದೋಷಾಯ ವಹ್ನೇಃ ಸರ್ವಭುಜೋ ಯಥಾ) ಆಚಾರಗಳ ಪರಿವರ್ತನೆ ಬೇಕೆನ್ನುವವರಿಗೆ ವೈಯಕ್ತಿಕಚಿತ್ತ ಹೇಗೆ ತಿರುಗುತ್ತದೆಯೊ ಅಂಥ ಪರಿವರಿವರ್ತನೆ ಬೇಕಿಲ್ಲ. ಆದರೆ ಸಾಮಾನ್ಯಜನರ ಕೃತಿ ಮತ್ತು ವಿಚಾರ ಇವುಗಳಲ್ಲಿ ಏಕಾಭಿಪ್ರಾಯವಿರಬೇಕು. ಘೋಂಗಿತನ ಇರಬಾರದು. ದೇಶ ಕಾಲ ಪರಿಸ್ಥಿತಿ ನೋಡಿ ಸಮಾಜರಕ್ಷಣೆಯಾಗಬೇಕು. ಸಮಾಜ ಮೂಲತಃ ಧರ್ಮತತ್ವವಿಮುಖವಾಗಬಾರದು. ಇದಕ್ಕಾಗಿ ಹೊಸ ಆಚಾರವನ್ನು ಆರಂಭಿಸಲು (ಒಂದು ವ್ಯಕ್ತಿಗಾಗಿ ಅಲ್ಲ), ಅನೇಕ ಮಂದಿ ಆಸಕ್ತರಾಗುವರು. ಇದೇ ಕಾರಣದಿಂದ ಆದದ್ದು ಅಧರ್ಮ್ಯವಲ್ಲ. ಇಷ್ಟನ್ನು ಮಾತ್ರ ಹೇಳುವಷ್ಟು ಪರಿವರ್ತನವಾದಿಗಳ ಆಗ್ರಹವಿದೆ ಸನಾತನಿಗಳಾದ ಪಂಡಿತ ರಲ್ಲಿ ಇಷ್ಟೇ ನಮ್ಮ ವಿನಂತಿ.

ಪಾಂಡುರಂಗ ವಾಮನ ಕಾಣೆ

(ಶ್ರೀ: ಪಿ. ವಿ. ಕಾಣೆ ಅವರ 'ಧರ್ಮಶಾಸ್ತ್ರವಿಚಾರ' ಎಂಬ ಮರಾಠಿ ಗ್ರಂಥದಿಂದ—ಕನ್ನಡಿಸಿದವರು: ಕೌಲಗಿ ಶೇಷಾಚಾರ್ಯ).

ಆಧುನಿಕ ಮಹಾರಾಷ್ಟ್ರ ರಂಗಭೂಮಿ

ಕಳೆದ ವರ್ಷ ಮಹಾರಾಷ್ಟ್ರದ ಬೇರೆ ಬೇರೆ ಭಾಗಗಳಲ್ಲಿ ಮರಾಠಿ ನಾಟಕದ ಶತಸಾಂವತ್ಸರಿಕ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿದರು. ಕಳೆದ ನೂರು ವರ್ಷಗಳಲ್ಲಿ ನಮ್ಮ ನೆರೆಯವರಾದ ಮರಾಠಿಗರು ತಮ್ಮ ನಾಟ್ಯ ಸಾಹಿತ್ಯವನ್ನು, ತಮ್ಮ ರಂಗಭೂಮಿಯನ್ನು, ಯಾವ ರೀತಿಯಲ್ಲಿ ಬೆಳಸಿಕೊಂಡು ಬಂದರೆಂಬುದನ್ನು ಸ್ಥೂಲವಾಗಿ ತಿಳಿಸುವುದೇ ಈ ಲೇಖನದ ಉದ್ದೇಶ.

೧೮೪೪ರ ವರೆಗೆ ಎಂದರೆ ಪೇಶ್ವೆಯರ ಆಳಿಕೆ ಇಲ್ಲದಾಗಿ ಬ್ರಿಟಿಶರ ರಾಜ್ಯಭಾರ ಅಸ್ತಿತ್ವದಲ್ಲಿ ಬಂದು ಕೆಲಕಾಲವಾಗುವವರೆಗೂ ಮಹಾರಾಷ್ಟ್ರದಲ್ಲಿ ನಾಟಕವಾಗಲಿ ರಂಗಭೂಮಿಯಾಗಲಿ ಹೇಳಿಕೊಳ್ಳಬಹುದಾದ ಬಗೆಯಲ್ಲಿ ಇದ್ದಿತೆಂದು ಹೇಳಲು ಬರುವಂತಿಲ್ಲ. ಅದಕ್ಕೂ ಮೊದಲು ಬಹುಜನ ಸಮಾಜಕ್ಕೆ ಮನರಂಜನೆಯ ಮುಖ್ಯವಾದ ಸಾಧನಗಳೆಂದರೆ ಸಾಮಾನ್ಯವಾದ ಧಾರ್ಮಿಕ ಕಥೆ ಕೀರ್ತನೆಗಳು, "ತಮಾಶೆ" ಎಂಬ ಹೆಸರಿನ ಜಾನಪದ ರೀತಿ ನೀತಿಯ ದೃಶ್ಯಗಳು "ಲಳಿತ"ಗಳೆಂಬ ಬಯಲಾಟದ ಮಾದರಿಯ ಸಂವಾದಗಳು—ಸ್ಥೂಲದೃಷ್ಟಿಯಿಂದ ಜನ ಸಾಮಾನ್ಯರ ಮನರಂಜನೆಗಾಗಿ ಏರ್ಪಡುತ್ತಿದ್ದ ಈ ಕಾರ್ಯಕ್ರಮಗಳಲ್ಲಿಯೇ ಮಹಾರಾಷ್ಟ್ರ ನಾಟಕದ ಉದಯವಾಯಿತೆಂದು ಹೇಳಲಾಗಿದೆ. ಆದರೆ ಇದು ಸ್ಥೂಲವಾಗಿ ಹೇಳಬಹುದಾದ ವಿಷಯವಷ್ಟೇ. ಸಂಶೋಧಕನ ದೃಷ್ಟಿಯಿಂದ ವಿಚಾರಿಸಲಾಗಿ ಮಹಾರಾಷ್ಟ್ರದ ಆದ್ಯನಾಟಕಕಾರರೆಂದರೆ ವಿಷ್ಣುದಾಸ ಭಾವೆ ಅವರೆಂದು ಈಗ ಸಾಮಾನ್ಯವಾಗಿ ಮಹಾರಾಷ್ಟ್ರದ ಸಂಶೋಧಕರು ಒಪ್ಪಿದ್ದಾರೆ.[1] ವಿಷ್ಣುದಾಸ್ ಭಾವೆ ಅವರು ನಮ್ಮ ಗಡಿನಾಡಿನಲ್ಲಿಯ ಸಾಂಗ್ಲಿಯವರು. ೧೮೪೪ರ ಸುಮಾರಿಗೆ ಸಾಂಗ್ಲಿ ಸಂಸ್ಥಾನದ ಒಡೆಯರಾದ ಅಣ್ಣಾ ಸಾಹೇಬ ಪಟವರ್ಧನ ಅವರು ಆ ಸುಮಾರಿನಲ್ಲಿ ಅಲ್ಲಲ್ಲಿ ಆಡಲ್ಪಡುತ್ತಿದ್ದ ಕನ್ನಡ ನಾಟಕಗಳನ್ನು ನೋಡಿ ತಮ್ಮನ್ನಾಶ್ರಯಿಸಿದ ವಿಷ್ಣುದಾಸ ಭಾವೆ ಅವರಿಗೆ ಕನ್ನಡ ನಾಟಕಗಳಂಥ ನಾಟಕಗಳನ್ನು ಮರಾಠಿಯಲ್ಲಿ ಬರೆಯುವುದಕ್ಕೂ ಬರೆದು ಅವುಗಳನ್ನು ರಂಗಭೂಮಿಯ ಮೇಲೆ ತರುವ ಏರ್ಪಾಡು ಮಾಡುವುದಕ್ಕೂ ಅಪ್ಪಣೆ ಮಾಡಿದರು. ಅದರಂತೆ ೧೮೪೪ರಲ್ಲಿ ಭಾವೆ ಅವರು

---

[1] ಕೆಲವು ವಿದ್ವಾಂಸರು ಮರಾಠಿ ನಾಟಕದ ಪೂರ್ವೇತಿಹಾಸವನ್ನು ಶಿವಾಜಿಯ ಕಾಲದ ವರೆಗೂ ಕಂಡುಹಿಡಿಯಲು ಯತ್ನಿಸುತ್ತಿದ್ದಾರೆ.

“ ಸೀತಾಸ್ವಯಂವರ ” ಎಂಬ ಹೆಸರಿನ ನಾಟಕ ಬರೆದು ಅದನ್ನು ಪ್ರಯೋಗ ಮಾಡಿ ತೋರಿಸಿದರು. ಅದರಂತೆ ಮುಂದೆ ಅಲ್ಪಾವಧಿಯಲ್ಲಿಯೇ ಹೆಚ್ಚಾಗಿ ಪೌರಾಣಿಕ ಕಥೆಗಳನ್ನು ಮೂಲವಾಗಿಟ್ಟುಕೊಂಡು ಹತ್ತು ಹನ್ನೆರಡು ನಾಟಕಗಳನ್ನು ಮಹಾರಾಷ್ಟ್ರದ ಬೇರೆ ಬೇರೆ ಭಾಗಗಳಲ್ಲಿ ಆಡಿ ತೋರಿಸಿದರು. ಇದರ ಮೇಲಿಂದ ಅಧುನಿಕ ಮರಾಠಿ ನಾಟಕಕ್ಕೆ ಸ್ಫೂರ್ತಿಕೊಟ್ಟ ಶ್ರೇಯಸ್ಸು ಕನ್ನಡ ನಾಟಕಗಳಿಗೆ ಸಲ್ಲತಕ್ಕದ್ದೆಂಬ ಮಾತು ನಿರ್ವಿವಾದವಾಗಿದ್ದು ಅದನ್ನು ಹೆಚ್ಚು ಕಡಮೆ ಎಲ್ಲರೂ ಒಪ್ಪುತ್ತಾರೆ. ಇದರ ಮೇಲಿಂದ ಇನ್ನೂ ಒಂದು ವಿಷಯವಾದರೂ ಸ್ಪಷ್ಟವಾಗುವಂತಿದೆ. ಅದೆಂದರೆ, ಮರಾಠಿ ನಾಟಕಗಳು ಮತ್ತು ಅವುಗಳನ್ನು ಪ್ರಯೋಗಿಸುವುದಕ್ಕೆ ಬೇಕಾದ ಮರಾಠಿ ರಂಗಭೂಮಿ ಇವೆರಡೂ ಒಂದೇ ಕಾಲಕ್ಕೆ ಎಂದರೆ ಹತ್ತೊಂಬತ್ತನೆಯ ಶತಮಾನದ ಐದನೆಯ ದಶಕದಲ್ಲಿ ಉದಯಿಸಿದುವು ಎಂಬುದು. ಅಲ್ಲದೆ ತಾವು ಬರೆದ ನಾಟಕಗಳಲ್ಲಿ ಭಾವೆ ಅವರು ಸ್ವತಃ ಪಾತ್ರವಹಿಸುತ್ತಿದ್ದರೆಂಬುದರ ಮೇಲಿಂದ ಮಹಾರಾಷ್ಟ್ರದ ಮೊದಲ ನಾಟಕಕಾರ ನಟನೂ ಆಗಿದ್ದನೆಂಬ ವಿಷಯವೂ ಸ್ಪಷ್ಟವಾಗುವುದು.

ಭಾವೆ ಅವರು ಬರೆದು ಆಡಿ ತೋರಿಸುತ್ತಿದ್ದ ಹತ್ತು ಹನ್ನೆರಡು ನಾಟಕಗಳು ಬರವಣಿಗೆಯಲ್ಲಿದ್ದರೂ ಅವು ಅಚ್ಚಾಗಿ ಪ್ರಕಟವಾಗಲಿಲ್ಲ. ಇಂದಿಗೆ ಆ ನಾಟಕಗಳ ಅವಶೇಷಗಳೆಂದರೆ ಅವುಗಳಲ್ಲಿಯ ಗೀತಪದ್ಯಗಳು. ಅಲ್ಲದೆ ಆ ನಾಟಕಗಳನ್ನು ಸಾಹಿತ್ಯ ಅಥವಾ ಬರವಣಿಗೆಯ ದೃಷ್ಟಿಯಿಂದ ನೋಡಿದರೆ ಅವು ಸಾಧಾರಣ ತರಗತಿಯವೇ ಆಗಿದ್ದವೆಂದೂ ಸಂಶೋಧಕರು ಹೇಳುವುದುಂಟು. ಅವರ ಕೃತಿಗಳ ಯೋಗ್ಯತೆ ಹೇಗಿದ್ದರೂ ಮಹಾರಾಷ್ಟ್ರದಲ್ಲಿ ನಾಟಕ ಸಂಪ್ರದಾಯವನ್ನು ಮೊದಲು ಮಾಡಿದ ಕೀರ್ತಿ ಅವರಿಗೆ ಸಲ್ಲಬೇಕಾದದ್ದು. ಆದ್ದರಿಂದ ಭಾವೆ ಅವರ ನಾಟಕಗಳ ಲೋಕಪ್ರಿಯತೆಯಿಂದ ಸ್ಫೂರ್ತಿಗೊಂಡು ಕೆಲಕಾಲದಲ್ಲಿಯೇ ಪೌರಾಣಿಕ ನಾಟಕಗಳನ್ನಾಡುವ ಇನ್ನೆಷ್ಟೋ ಕಂಪನಿಗಳು ಸಾಂಗ್ಲಿಯ ಆಸುಪಾಸಿನಲ್ಲಿ ಹುಟ್ಟಿಕೊಂಡವು. ಈ ಸಂದರ್ಭದಲ್ಲಿ ಈ ಪೌರಾಣಿಕ ನಾಟಕಗಳ ಬಗೆಯಲ್ಲಿ ಒಂದು ಮಾತನ್ನು ಹೇಳುವುದು ಆ ನಾಟಕಗಳ ಬೆಳವಣಿಗೆಯ ದೃಷ್ಟಿಯಿಂದ ಅವಶ್ಯವಿದೆ. ಈ ನಾಟಕಗಳಿಗೆ “ ಅನುಬಂಧ ” ರೂಪವಾಗಿ ಕೊನೆಯಲ್ಲಿ ಒಂದರ್ಧ ಪ್ರಹಸನ ಸ್ವರೂಪದ ದೃಶ್ಯವನ್ನು ಜೋಡಿಸಿಕೊಳ್ಳಲಾಗುತ್ತಿತ್ತೆಂದು ತಿಳಿದುಬರುತ್ತದೆ. ಮೊದಮೊದಲು ಈ ಪ್ರಹಸನ ದೃಶ್ಯಗಳು ಅಭಿರುಚಿಯ ದೃಷ್ಟಿಯಿಂದ ಕಡಮೆ ತರಗತಿಯವಾಗಿದ್ದು ಕೇವಲ ಜನಸಾಮಾನ್ಯರ ವಿನೋದಕ್ಕಾಗಿಯೆಂದೇ ನಾಟಕಾಂತ್ಯದಲ್ಲಿ ಪವಣಿಸಲ್ಪಡುತ್ತಿದ್ದವೆನ್ನುತ್ತಾರೆ. ಈ ದೃಶ್ಯಗಳ ಭಾಷೆ ಬಳಕೆಯ ಭಾಷೆಯಾಗಿರು

ತ್ತಿತ್ತಲ್ಲದೆ ಕೆಲವುವೇಳೆ ತೀರ ಗ್ರಾಮ್ಯದ ಮಟ್ಟಕ್ಕೆ ಇಳಿಯುತ್ತಿತ್ತು. ಬರಬರುತ್ತ, ನಾಟಕದ ವ್ಯಾಪ್ತಿ ವಿಸ್ತಾರಗಳು ಬೆಳೆಯುತ್ತ ಬಂದ ಹಾಗೆ, ನಾಟಕ ನೋಡು ವವರ ಅಭಿರುಚಿಯಾದರೂ ಕಾಲಾನುಗುಣವಾಗಿ ಬದಲಾಯಿಸುತ್ತ ಹೋದ ಹಾಗೆ ಪೌರಾಣಿಕ ನಾಟಕಗಳ ಕೊನೆಯಲ್ಲಿನ ಈ ಪ್ರಹಸನ ಪ್ರಕಾರಗಳು ತೀರ ಕಡಮೆ ಯಾಗುತ್ತ ಬಂದು ಒಂದು ಕಾಲದಲ್ಲಿ ನಿಂತುಹೋದುವು.

ಪೌರಾಣಿಕ ನಾಟಕದ ಈ ಕಾಲಾವಧಿಯ ನಂತರ ಸಾಮಾನ್ಯವಾಗಿ ಸಂಸ್ಕೃತ ನಾಟಕಗಳ ಭಾಷಾಂತರದ ಕಾಲ ಬಂದಿತೆಂದು ಹೇಳಬಹುದು. ಕೃಷ್ಣಶಾಸ್ತ್ರೀ, ರಾಜ ವಾಡೆ, ಕೃಷ್ಣಶಾಸ್ತ್ರೀ ಚಿಪಳೂಣಕರ, ಲೇಲೆ ಮುಂತಾದವರು ಹೆಚ್ಚು ಕಡಮೆ ಸಂಸ್ಕೃ ತದಲ್ಲಿ ಉಪಲಬ್ಧವಾದ ಯಾವತ್ತೂ ನಾಟಕಗಳನ್ನು ಮರಾಠಿಗೆ ಭಾಷಾಂತರಿಸಿದರು. ಈ ನಾಟಕಗಳಾದರೂ ಪೌರಾಣಿಕ ನಾಟಕಗಳಂತೆ ಲೋಕಪ್ರಿಯವಾಗಿದ್ದುವಲ್ಲದೆ ಆದೇ ಬೆಳೆಯುತ್ತಿದ್ದ ಮಹಾರಾಷ್ಟ್ರ ರಂಗಭೂಮಿಗೆ ಒಂದು ಸ್ಥಿರಸ್ವರೂಪವನ್ನು ತಂದುಕೊಡುವ ಕೆಲಸದಲ್ಲಿ ಹೆಚ್ಚಾಗಿ ಸಹಕಾರಿಯಾದವು. ಅಲ್ಲದೆ ಮರಾಠಿ ನಾಟ ಕವು ಮುಂದೊಂದು ಮಹತ್ವದ ಹೆಜ್ಜೆಯನ್ನು ಇಡುನಂತೆ ರಂಗಭೂಮಿಯನ್ನು ಜನರಲ್ಲಿ ನಾಟಕಗಳ ಬಗೆಯಲ್ಲಿ ಹೊಸ ಅಭಿಲಾಷೆಗಳನ್ನು ಬೆಳಸಿಕೊಂಡು ಬಂದವು. ಈ ಅನುವಾದಿತ ನಾಟಕಗಳನಂತರ ಸ್ವಲ್ಪ ಕಾಲವಕಾಶದಲ್ಲಿಯೇ ಸಾಮಾಜಿಕ ಮತ್ತು ಐತಿಹಾಸಿಕ ನಾಟಕಗಳೂ ರಂಗಭೂಮಿಯ ಮೇಲೆ ಬರಲು ಮೊದಲು ಮಾಡಿ ದವು. ೧೮೫೭ ರಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯದ ಮುಖಾಂತರವಾಗಿ ಬೆಳೆಯು ತ್ತಿದ್ದ ಹೊಸತೆರದ ಶಿಕ್ಷಣಪದ್ಧತಿಯ ಫಲವಾಗಿ ಪಾಶ್ಚಿಮಾತ್ಯ ಸಾಹಿತ್ಯಪ್ರಕಾರ ಗಳಲ್ಲಿ ಆ ಕಾಲದ ವಿದ್ಯಾವಂತರು ಹೊಸಹೊಸ ಆಸೆ ಆಕಾಂಕ್ಷೆಗಳನ್ನು ಕಾಣತೊಡ ಗಿದರು. ಆಂಗ್ಲ ಸಾಹಿತ್ಯದಲ್ಲಿಯ ಕೃತಿಗಳ ಮೂಲಕ ವಾಚನಾಭಿರುಚಿಯು ಹೊಸ ದೊಂದು ರೀತಿಯಲ್ಲಿ ಬೆಳೆಯುತ್ತ ಹೋದಂತೆ ಜನಗಳಿಗೆ ಪೌರಾಣಿಕ ನಾಟಕಗಳಲ್ಲಿ ವಿಶೇಷವಾದ ಆದರ ಮೊದಲಿನಂತೆ ಉಳಿಯದಾಯಿತು. ಈ ಅಸಮಾಧಾನದ ಮೂಲಕ ವಿದ್ಯಾವಂತರಾದ ಕೆಲ ಯುವಕರು ಆಂಗ್ಲ ನಾಟಕಗಳನ್ನು ಆಗಾಗ ಆಡಿ ನೋಡಿ ಸಮಾಧಾನಪಡುತ್ತಿದ್ದರಲ್ಲದೆ ಆ ನಾಟಕಗಳನ್ನು ಮರಾಠಿ ಭಾಷೆಗೆ ಪರಿವರ್ತನೆ ಮಾಡು ವುದಕ್ಕೂ ಪ್ರಾರಂಭಿಸಿದರು. ಕೆಲಕೆಲವುಸಾರೆ ಪರಭಾಷೆಯಲ್ಲಿಯ ಕೃತಿಗಳನ್ನು ಕೇವಲ ಭಾಷಾಂತರಿಸದೆ ತಮ್ಮ ಸುತ್ತಮುತ್ತಲಿನ ಸಾಮಾಜಿಕ ಜೀವನಕ್ಕೆ ಸರಿಹೋಗುವಂತೆ ಮಾರ್ಪಡಿಸಿಕೊಂಡು ಹೊಸ ಹೊಸ ರೂಪಾಂತರಗಳನ್ನೂ ಮಾಡತೊಡಗಿದರು. ಇದರ ಮೂಲಕ ಮಹಾರಾಷ್ಟ್ರ ರಂಗಭೂಮಿಯ ಮೇಲಿನ ಆ ಕಾಲದ ಕೃತಿಗಳಿಗೆ ಒಂದು ತೆರದ ನವೀನವಾದ ವಿಷಯವೈವಿಧ್ಯ ದೊರಕಿತಲ್ಲದೆ ಮುಂಬರುವ ಸಾಮಾಜಿಕ

ನಾಟಕಗಳಿಗೆ ಪೂರ್ವಸಿದ್ಧತೆಯನ್ನು ಮಾಡಿಕೊಟ್ಟಂತಾಯಿತು. ಆದ್ದರಿಂದ ಈ ಕಾಲ (೧೮೬೦-೧೮೭೫) ಅರ್ವಾಚೀನ ಮಹಾರಾಷ್ಟ್ರ ನಾಟಕ ಮತ್ತು ರಂಗಭೂಮಿಗಳ ಇತಿಹಾಸದಲ್ಲಿ ತೀರ ಮಹತ್ವದ ಸಂಧಿಕಾಲವೆಂದು ಹೇಳಬಹುದು.

ಈ ಕಾಲಾವಧಿಯಲ್ಲಿಯೇ ಮೊಟ್ಟಮೊದಲನೆಯ ಸ್ವತಂತ್ರವಾದ ಐತಿಹಾಸಿಕ ನಾಟಕವೂ ಹೊರಬಿದ್ದಿತು. ಈ ನಾಟಕವೆಂದರೆ ವಿನಾಯಕ ಜನಾರ್ದನ ಕೀರ್ತನೆ ಅವರ "ಥೋರಲೆ ಮಾಧವರಾವ ಪೇಶ್ವೆ." ಇದರನಂತರ ಅವರಿಂದಲೇ ರಚಿತವಾದ "ರಾಜಾ ಜಯಪಾಲ" ನಾಟಕವೂ ರಂಗಭೂಮಿಯ ಮೇಲೆ ಬಂದಿತು. ಇದೇ ಸುಮಾರಿಗೆ ಶೇಕ್ಸಪಿಯರನ ಎಷ್ಟೋ ನಾಟಕಗಳು ಮರಾಠಿಯಲ್ಲಿ ಭಾಷಾಂತರಿಸಲ್ಪಟ್ಟವು. ಈ ಭಾಷಾಂತರಗಳ ವಿಚಾರದಲ್ಲಿ ಮುಖ್ಯವಾದ ಅಂಶವೆಂದರೆ ಇವೆಲ್ಲವೂ ಮಹಾರಾಷ್ಟ್ರದ ಉತ್ತಮ ಸಾಹಿತಿಗಳ ಕೈಯಿಂದ ಅನುವಾದಿತವಾಗಿದ್ದರಿಂದ ಆಗಿನ ಅನುವಾದಗಳನ್ನು ಮೀರಿಸುವಂಥ ಅನುವಾದಗಳು ಇದುವರೆಗೂ ಮರಾಠಿಯಲ್ಲಿ ಬಂದಿಲ್ಲವೆಂದು ಹೇಳುವರು. ಮರಾಠಿ ಸಾಹಿತ್ಯದಲ್ಲಿ ಅಳಿಯದ ಹೆಸರು ಗಳಿಸಿದ ಅಗರಕರ, ಮಹಾದೇವಶಾಸ್ತ್ರಿ, ಕೋಲ್ಹಟಕರ, ಪ್ರೊ. ಕೇಳಕರ ಮುಂತಾದವರೆಲ್ಲರೂ ಈ ಕೆಲಸವನ್ನು ಅದ್ವಿತೀಯವಾಗಿ ನೆರವೇರಿಸಿದರು. ೧೮೮೦-೧೮೮೧ ರ ಸುಮಾರಿಗೆ ಮರಾಠಿ ನಾಟಕಗಳಲ್ಲಿ ಹೊಸದೊಂದು ಪರಿವರ್ತನೆ ತಲೆದೋರತೊಡಗಿತು. ಈ ಪರಿವರ್ತನೆ ಮುಂದೆ ಕೆಲವು ಕಾಲ ಒಂದು ಬಲವಾದ ಶಕ್ತಿಯಾಗಿ ಪರಿಣಮಿಸಿತಲ್ಲದೆ ಇಪ್ಪತ್ತನೆಯ ಶತಮಾನದ ಮರಾಠಿ ನಾಟಕಕ್ಕೆ ಒಂದು ವಿಶಿಷ್ಟ ಸ್ವರೂಪವನ್ನು ತಂದುಕೊಟ್ಟಿತು. ಈ ಪರಿವರ್ತನೆಯೆಂದರೆ ಆ ಕಾಲದ ನಾಟಕಗಳಲ್ಲಿ ಸಂಗೀತದ ಪ್ರವೇಶ. ಅಂದು ನಾಟಕದಲ್ಲಿ ಸೇರಿಕೊಂಡ ಸಂಗೀತದ ಪ್ರಭಾವ ಇಂದಿನವರೆಗೂ ಕಂಡುಬರುತ್ತಲ್ಲದೆ ಈ ಶತಮಾನದ ಮೊದಲಿನ ಇಪ್ಪತ್ತು ಇಪ್ಪತ್ತೈದು ವರ್ಷಗಳಲ್ಲಿ ಅತಿಯಾದ ಪ್ರಮಾಣದಲ್ಲಿ ಬೆಳೆದು ನಿಂತು ನಾಟಕ ಮುಖ್ಯವೋ ಸಂಗೀತ ಮುಖ್ಯವೋ ಎಂದು ಕೇಳುವಷ್ಟರ ಮಟ್ಟಿಗೆ ಆಗಿತ್ತು. ತೀರ ಮೊದಲಿನ ನಾಟಕಗಳಲ್ಲಿಯೂ ಸಂಗೀತವಿರುತ್ತಿದ್ದಿತಾದರೂ ಅಲ್ಲಿಯ ಗೀತಪದ್ಯಗಳನ್ನು ಸೂತ್ರಧಾರನೊಬ್ಬನೇ ಹೇಳುತ್ತಿದ್ದ. ಆದರೆ ಅಣ್ಣಾ ಕಿರ್ಲೋಸ್ಕರ ಮತ್ತು ತ್ರಿಲೋಕೆಕರ್ ಅವರ ನಾಟಕಗಳು ರಂಗಭೂಮಿಯ ಮೇಲೆ ಬರತೊಡಗಿದಾಗಿನಿಂದ ಸಂಗೀತವು ನಾಟಕದಲ್ಲಿಯ ಪ್ರತಿಯೊಂದು ಪಾತ್ರವನ್ನೂ ಆವರಿಸಿಕೊಂಡಿತು. ಈ ಸಂದರ್ಭದಲ್ಲಿ ತ್ರಿಲೋಕೇಕರ ಅವರ "ನಳದಮಯಂತಿ" ಮತ್ತು "ಹರಿಶ್ಚಂದ್ರ" ನಾಟಕಗಳನ್ನು ಉಲ್ಲೇಖಿಸದಿರಲಾಗುವುದಿಲ್ಲ.

ಮಹಾರಾಷ್ಟ್ರನಾಟಕಕ್ಕೂ ರಂಗಭೂಮಿಗೂ ಅಣ್ಣಾ ಕಿರ್ಲೋಸ್ಕರರು

ಮಾಡಿದ ಸೇವೆ ಅಪಾರವಾದದ್ದು. ೧೮೮೦ ರ ಸುಮಾರಿಗೆ ಅವರು ಸುವಿಖ್ಯಾತವಾದ ಕಿರ್ಲೋಸ್ಕರ ನಾಟಕ ಮಂಡಲಿಯನ್ನು ಸ್ಥಾಪಿಸಿದರು. ಆ ಕಂಪನಿಗಾಗಿ ತಾವೇ ನಾಟಕಗಳನ್ನು ಬರೆಯಹತ್ತಿ ಆಧುನಿಕ ಮಹಾರಾಷ್ಟ್ರ ರಂಗಭೂಮಿಯ ಇತಿಹಾಸದಲ್ಲಿ ಒಂದು ಮಹತ್ವದ ಯುಗವನ್ನೇ ಪ್ರಾರಂಭಿಸಿದರೆಂದು ನಿಶ್ಶಂಕವಾಗಿ ಹೇಳಬಹುದು. ಕಿರ್ಲೋಸ್ಕರರು ಕಾಳಿದಾಸನ ಶಾಂಕುತಲದಿಂದ ತಮ್ಮ ನಾಟ್ಯ ವ್ಯವಸಾಯವನ್ನಾರಂಭಿಸಿ ಮಹಾರಾಷ್ಟ್ರ ರಂಗಭೂಮಿಯ ಮೇಲೆ ಅಳಿಯದ ಕೀರ್ತಿಯನ್ನು ಗಳಿಸಿದರು. ಅದರ ತರುವಾಯ ಬಂದ "ಸೌಭದ್ರ" ನಾಟಕ ಅವರ ಸ್ವತಂತ್ರ ಕೃತಿ. ಈ ನಾಟಕದಿಂದ ಕಿರ್ಲೋಸ್ಕರ ಅವರು ತಮಗಲ್ಲದೆ ಮರಾಠಿ ನಾಟಕಕ್ಕೆ ಒಂದು ವಿಶಿಷ್ಟವಾದ ಸ್ಥಾನವನ್ನು ಸಂಪಾದಿಸಿದರು. ಈ ನಾಟಕ ಅಸಾಮಾನ್ಯವಾಗಿ ಲೋಕಪ್ರಿಯವಾಯಿತು. ಇದರಲ್ಲಿಯ, ಕಿರ್ಲೋಸ್ಕರರಿಗೇ ವಿಶಿಷ್ಟವಾದ ಸರಲ ಮನೋಹರ ಭಾಷೆಯ ಸೊಬಗು, ಸಹಜವಾದ ವಿನೋದ, ಮನಸೆಳೆಯುವ ಸಂಗೀತ, ನೋಟಕರ ಕುತೂಹಲವನ್ನು ಕೆಣಕುವ ರೀತಿಯಲ್ಲಿ ನಾಟ್ಯಸನ್ನಿವೇಶಗಳನ್ನು ಕೊನೆಯವರೆಗೂ ಹೊಂದಿಸಿಕೊಂಡು ಹೋಗುವ ಜಾಣ್ಮೆ ಎಲ್ಲವೂ ಸೇರಿ "ಸೌಭದ್ರ" ನಾಟಕಕ್ಕೆ ಇಂದಿನವರೆಗೂ ಜನರ ಪ್ರೀತ್ಯಾದರಗಳನ್ನು ತಂದುಕೊಟ್ಟಿವೆ. ಅಣ್ಣಾ ಕಿರ್ಲೋಸ್ಕರರ ಮೂರನೆಯ ನಾಟಕವಾದ "ರಾಮರಾಜ್ಯವಿಯೋಗ"ವು ಅಪೂರ್ಣವಾಗಿಯೇ ಉಳಿಯಿತು.

ಕಿರ್ಲೋಸ್ಕರರ ತರುವಾಯ ಬರುವ ಮಹತ್ವದ ನಾಟಕಕಾರನೆಂದರೆ ಗೋವಿಂದ ಬಲ್ಲಾಳ ದೇವಲ. ನಾಟ್ಯವನ್ನೂ ಸಂಗೀತವನ್ನೂ ಸರಸವಾಗಿ ಹೆಣೆದು ಲೋಕಾಭಿರಾಮವಾದ ನಾಟಕಗಳನ್ನು ಬರೆದವರಾದ ಇವರ ಹೆಸರನ್ನು ಕಿರ್ಲೋಸ್ಕರರ ಜೊತೆಯಲ್ಲಿಯೇ ಹೇಳಬೇಕು. ಇವರಿಬ್ಬರೂ ಆಧುನಿಕ ಮರಾಠಿ ರಂಗಭೂಮಿಯ ನಾಟ್ಯಾಚಾರ್ಯರು. ಕಿರ್ಲೋಸ್ಕರರಂತೆ ದೇವಲರಾದರೂ ಭಾಷಾಂತರದಿಂದಲೇ ಮೊದಲು ಮಾಡಿದರು. ಅವರ ಮೊದಲ ಕೃತಿಯಾದ "ದುರ್ಗಾ" ನಾಟಕದ ಲೋಕಪ್ರಿಯತೆಯನ್ನು ಅನಂತರ ಬರೆದ ಅವರ "ಮೃಚ್ಛಕಟಿಕ", ಬಾಣ ಕಾದಂಬರಿಯ ಕಥಾನಕವನ್ನೊಳಗೊಂಡ "ಶಾಪಸಂಭ್ರಮ" ನಾಟಕಗಳು ಇನ್ನಷ್ಟು ಹೆಚ್ಚಿಸಿದವು. ಅವರ ಕೈಯಲ್ಲಿಯೇ "ಝುಂಝಾರ ರಾವ್" ಎಂಬ ಹೆಸರಿನಲ್ಲಿ ಓಥೆಲ್ಲೋವಿನ ಅವತಾರವಾಯಿತಲ್ಲದೆ ಫ್ರೆಂಚ ಭಾಷೆಯಲ್ಲಿಯ ಪ್ರಹಸನವೊಂದರ ಆಧಾರದ ಮೇಲೆ ಸುಪ್ರಸಿದ್ಧವಾದ "ಸಂಶಯಕಲ್ಲೋಲ"ವೂ ಹೊರಬಂದಿತು. ಪರಸಾಹಿತ್ಯದ ಕೃತಿಗಳನ್ನು ಮಹಾರಾಷ್ಟ್ರ ಸಮಾಜದ ರೀತಿನೀತಿಗಳಿಗೆ ಸರಿಯಾಗಿ ಮಾರ್ಪಡಿಸಿಕೊಂಡು ರೂಪಾಂತರ ಮಾಡುವುದರಲ್ಲಿ ದೇವಲರದು ಅಸಾಮಾನ್ಯ

ಕೌಶಲ. ಅದಕ್ಕೂ ಹೆಚ್ಚಾಗಿ ಸಂವಾದವನ್ನು ಸುಲಭವಾಗಿ ಸಹಜವಾಗಿ ಬೆಳಸಿಕೊಂಡು ಹೋಗುವುದರಲ್ಲಿ ಅವರನ್ನು ಮೀರಿಸಿದವರಿಲ್ಲ. ಮರಾಠಿ ನಾಟಕದ ಬೆಳವಣಿಗೆಗೆ ದೇವಲರ ಮುಖ್ಯವಾದ ಕಾಣಿಕೆಯೆಂದರೆ ಅವರ ಸ್ವತಂತ್ರ ಕೃತಿಯಾದ "ಶಾರದಾ" ನಾಟಕ. ಮೊತ್ತಮೊದಲನೆಯ ಸಾರೆ ಒಂದು ಸಮಾಜ ಪದ್ಧತಿಯ ವಿಮರ್ಶೆಯನ್ನೊಳಗೊಂಡು ಸಾಮಾಜಿಕ ಜೀವನದಲ್ಲಿಯ ಸಮಸ್ಯೆಗಳನ್ನು ವಿವೇಚಿಸುವ ನಾಟಕಗಳ ಬರವಣಿಗೆಗೆ ಈ ನಾಟಕ ತಳಪಾಯ ಹಾಕಿಕೊಟ್ಟು ಹೊಸದಾರಿಯೊಂದನ್ನು ತೋರಿಸಿಕೊಟ್ಟಿತು.

ಕಿರ್ಲೋಸ್ಕರ ದೇವಲರ ತರುವಾಯ ಬಂದ ಪ್ರತಿಭಾವಂತ ನಾಟಕಕಾರರೆಂದರೆ ಶ್ರೀಪಾದ ಕೃಷ್ಣ ಕೋಲ್ಹಟಕರ ಮತ್ತು ಕೃಷ್ಣಾಜಿ ಪ್ರಭಾಕರ ಖಾಡಿಲಕರ ಅವರು. ಖಾಡಿಲಕರರ ಮುಖ್ಯ ಕೃತಿಗಳೆಂದರೆ "ಕಾಂಚನಗಡಚೀ ಮೋಹನಾ," "ಸವಾಯೀ ಮಾಧವರಾವಾಚಾ ಮೃತ್ಯು," "ಭಾವೂಬಂದಕೀ," "ಕೀಚಕವಧ." ಇವೆಲ್ಲವುಗಳ ವೈಶಿಷ್ಟ್ಯವೆಂದರೆ ಇವು ಕೇವಲ ಗದ್ಯ ನಾಟಕಗಳು. ಸಂಗೀತದಿಂದ ಕೀಸರುಗೊಂಡ ಮರಾಠಿ ನಾಟಕಗಳ ಭಕ್ತರಿಗೆ ಸಂಗೀತದ ಸಹಾಯವಿಲ್ಲದೆಯೂ ನಾಟಕಗಳನ್ನು ಮನಮೆಚ್ಚುವಂತೆ ಬರೆಯಬಹುದೆಂಬುದನ್ನು ತೋರಿಸಿಕೊಟ್ಟರು. ಖಾಡಿಲಕರರ ನಾಟ್ಯಪ್ರತಿಭೆ ಈ ನಾಟಕಗಳಲ್ಲಿ ಕಣ್ಣು ಕುಕ್ಕಿಸುವಂಥದಾಗಿದೆ. ಸನ್ನಿವೇಶಗಳ ಜೋಡಣೆ, ವಿಷಯವನ್ನು ಬೆಳಸಿ ಕುತೂಹಲವನ್ನು ಕಾಯ್ದುಕೊಂಡು ಹೋಗುವ ರೀತಿ, ರಸೋತ್ಕರ್ಷವನ್ನು ಸಾಧಿಸುವ ಹಂಚಿಕೆಗಳನ್ನು ಮನಸೆಳೆಯುವ ರೀತಿಯಲ್ಲಿ ಖಾಡಿಲಕರರು ಉಪಯೋಗಿಸಿ ತೋರಿಸಿದರು. ಅವರ ಕೃತಿಗಳಲ್ಲಿ ಅನಾವಶ್ಯಕವಾದ ವಿಸ್ತಾರವಾಗಲಿ, ಅಪ್ರಸ್ತುತವಾದ ಸನ್ನಿವೇಶಗಳಾಗಲಿ ಇನ್ನಿತರರಲ್ಲಿ ಅಲ್ಲಲ್ಲಿ ಸಿಗಬಹುದಾದಂತೆ ಎಲ್ಲಿಯೂ ಸಿಕ್ಕುವುದಿಲ್ಲ. "ಮಾನಾಪಮಾನ" ನಾಟಕವು ಅವರ ವಿಖ್ಯಾತವಾದ ಸಂಗೀತಮಯ ಕೃತಿ. ಅದರನಂತರ ಬಂದ ಕೃತಿಗಳಾದರೂ "ಮಾನಾಪಮಾನ" ದಂತೆ ಸಂಗೀತಕ್ಕೆ ಸಂಪೂರ್ಣವಾಗಿ ಮಾರುಹೋದವುಗಳು. ಅವುಗಳಲ್ಲಿ "ಮೇನಕಾ," "ವಿದ್ಯಾಹರಣ," "ದ್ರೌಪದಿ," "ಸಾವಿತ್ರಿ," ಮುಖ್ಯವಾದವುಗಳು. ಈ ಎಲ್ಲ ನಾಟಕಗಳೂ ನಾಯಿಕಾಪ್ರಧಾನವಾದವುಗಳೆಂಬುದನ್ನು ಆ ಹೆಸರುಗಳ ಮೇಲಿಂದಲೇ ತಿಳಿಯಬಹುದು. ಇದಕ್ಕೊಂದು ಮಹತ್ವದ ಕಾರಣವಿದೆಯಲ್ಲದೆ ನಾಟಕಗಳ ಸ್ವರೂಪ ಯಾವ ರೀತಿಯಲ್ಲಿ ರಂಗಭೂಮಿಯ ಪರಿಸ್ಥಿತಿಗಳಿಗನುಗುಣವಾಗಿ ಬದಲಾಯಿಸಬಹುದೆಂಬ ವಿಷಯವನ್ನು ತೋರಿಸಿಕೊಡುವ ನಿದರ್ಶನವಾಗಿದೆ. ಖಾಡಿಲಕರರು ಈ ಯಾವತ್ತೂ ನಾಟಕಗಳನ್ನು ಮಹಾರಾಷ್ಟ್ರದ ಸುಪ್ರಸಿದ್ಧ ನಟರಾದ ಬಾಲಗಂಧರ್ವ

(ನಾರಾಯಣರಾವ ರಾಜಹಂಸ)ರ ಕಂಪನಿಗಾಗಿ ಬರೆದರು. ಈ ಎಲ್ಲ ನಾಯಿಕಾ ಪಾತ್ರಗಳನ್ನು ಬಾಲಗಂಧರ್ವರೇ ನಿರ್ವಹಿಸುತ್ತಿದ್ದರೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಖಾಡಿಲಕರರ ನಾಟಕಗಳ ಇನ್ನೊಂದು ವೈಶಿಷ್ಟ್ಯ ಗಮನಾರ್ಹವಾಗಿದೆ. ಪೌರಾಣಿಕ ಕಥೆಗಳ ಮೂಲಕ ಸಮಕಾಲೀನ ರಾಜಕೀಯ ವಿಚಾರಗಳನ್ನು ಸೂಕ್ಷ್ಮವಾಗಿಯಾದರೂ ಸ್ಪಷ್ಟವಾಗಿ ಎತ್ತಿ ತೋರಿಸಿ ನಿರ್ದಾಕ್ಷಿಣ್ಯವಾಗಿ ಅವುಗಳನ್ನು ಟೀಕೆಗೆ ಎಳೆಯುತ್ತಿದ್ದರು. ಈ ವಿಶೇಷ ರೀತಿಯನ್ನು ಅವರು ಬರೆದ "ಕೀಚಕ ವಧ" ನಾಟಕದಲ್ಲಿಯೂ ಅದರ ತರುವಾಯದ ಕೆಲವು ಕೃತಿಗಳಲ್ಲಿಯೂ ಕಾಣಬಹುದು. ಇದಕ್ಕಾಗಿಯೇ ಅವರ "ಕೀಚಕವಧ" ನಾಟಕ ಎಷ್ಟೋ ಕಾಲ ಸರಕಾರದ ಅವಕೃಪೆಗೆ ಪಾತ್ರವಾಗಿತ್ತಲ್ಲದೆ ಆಕ್ಷೇಪಾರ್ಹವಾಙ್ಮಯವೆಂದು ಜಪ್ತಮಾಡಲ್ಪಟ್ಟಿತ್ತು.

ಕಲ್ಪನಾಶಕ್ತಿಯಲ್ಲಿ, ವಿನೋದದಲ್ಲಿ, ವಿಚಾರ ವಿಮರ್ಶೆಗಳನ್ನು ಮಂಡಿಸುವುದರಲ್ಲಿ ಶ್ರೀಪಾದ ಕೃಷ್ಣ ಕೋಲ್ಹಟಕರರು ಖಾಡಿಲಕರರನ್ನು ಮೀರಿಸಿದವರು. "ಗುಪ್ತ ಮಂಜೂಷ," "ವಧೂಪರೀಕ್ಷಾ," "ಪತಿವಿಕಾರ," "ಜನ್ಮರಹಸ್ಯ," "ಸಹಚಾರಿಣೀ," "ಪ್ರೇಮಶೋಧನ," ಮುಂತಾದ ನಾಟಕಗಳನ್ನು ಮರಾಠಿ ರಂಗಭೂಮಿಗೆ ನೀಡಿದರು. ಪ್ರತಿಯೊಂದು ನಾಟಕದಲ್ಲಿಯೂ ಕೋಲ್ಹಟಕರರ ಕಲ್ಪನಾವಿಲಾಸ, ಶಬ್ದ-ವಿಚಾರಗಳ ಚಮತ್ಕೃತಿ ಬೆರಗುಗೊಳಿಸುವಂಥವಾಗಿವೆ. ಖಾಡಿಲಕರರಂತೆ ನಾಟಕಗಳಲ್ಲಿ ಸಾಮಾಜಿಕ ಪ್ರಶ್ನೆಗಳನ್ನು ಬಿಚ್ಚಿ ತೋರಿಸುವ ಯತ್ನವನ್ನು ಇವರಾದರೂ ಮಾಡಿದರು. ಆದರೆ ನಾಟ್ಯರಚನಾತಂತ್ರದ ದೃಷ್ಟಿಯಿಂದ ಕೋಲ್ಹಟಕರರು ಖಾಡಿಲಕರರನ್ನು ಮರೆಸಲಿಲ್ಲ. ನಾಟಕಗಳನ್ನು ಬರೆದರೆಂದ ಮಾತ್ರಕ್ಕೆ ಅವರಿಗೆ ನಾಟಕಕಾರರೆನ್ನಬೇಕಲ್ಲದೆ ನಾಟ್ಯಕೌಶಲದ ದೃಷ್ಟಿಯಿಂದಲ್ಲವೆಂಬ ಮಾತನ್ನು ಮಹಾರಾಷ್ಟ್ರ ನಾಟಕ ಸಾಹಿತ್ಯದ ವಿಮರ್ಶಕರು ಆಗಾಗ ಹೇಳುವುದುಂಟು. ಕೋಲ್ಹಟರರ ಹೆಸರು ಮರಾಠಿ ಸಾಹಿತ್ಯದ ಇತಿಹಾಸದಲ್ಲಿ ಅಪ್ರತಿಮ ಗದ್ಯಲೇಖಕರೆಂದು ಉಳಿಯಬಹುದಲ್ಲದೆ ನಾಟಕಕಾರರೆಂದಲ್ಲವೆಂದೂ ಹೇಳುವರು. ಆದರೆ ಖಾಡಿಲಕರರೊಂದು ರೀತಿಯಲ್ಲಾದರೆ ಕೋಲ್ಹಟಕರರು ಇನ್ನೊಂದು ರೀತಿಯಲ್ಲಿ ಮರಾಠಿ ನಾಟಕಗಳಿಗೆ ಸಾಹಿತ್ಯದ ಸ್ವರೂಪವನ್ನು ನಿಶ್ಚಯವಾಗಿ ತಂದುಕೊಟ್ಟರು. ಇವರಿಬ್ಬರ ಕೃತಿಗಳು ಮೊದಲಿನವರ ಕೃತಿಗಳಂತೆ ಕೇವಲ ರಂಗಭೂಮಿಗಾಗಿ ಬರೆದ ನಾಟಕಗಳಾಗಿರದೆ ಉಚ್ಚತರಗತಿಯ ಸಾಹಿತ್ಯ ಕೃತಿಗಳೂ ಆಗಿದ್ದವು. ಇವರಿಬ್ಬರ ಕೃತಿಗಳು ಮುಂದಿನ ಹತ್ತಿಪ್ಪತ್ತು ವರ್ಷ ರಂಗಭೂಮಿಯ ಮೇಲೆ ಬರುತ್ತಿದ್ದರೂ ಅವರ ನಾಟ್ಯ ಲೇಖನದ ವಿಸ್ತಾರ ಮತ್ತು ಸ್ವರೂಪ ೧೯೦೦ ರ ಸುಮಾರಿಗೆ ಒಂದು ಹಂತಕ್ಕೆ ಬಂದು ಮುಟ್ಟಿದವೆಂದೂ, ಆಮೇಲೆ ಅವರಿಂದ—ವಿಶೇಷವಾಗಿ

ಕೋಲ್ಹಟಕರರಿಂದ—ಸ್ಫೂರ್ತಿಗೊಂಡ ಇನ್ನೊಬ್ಬ ನಾಟಕಕಾರನ ಉದಯದ ಮೂಲಕ ಮರಾಠಿ ನಾಟಕವು ಆ ಸುಮಾರಿಗೆ ಒಂದು ಪರಿಣತಾವಸ್ಥೆಯನ್ನು ಸಮಾಪಿಸಿತ್ತೆಂದೂ ಹೇಳಬಹುದು.

ಕೋಲ್ಹಟಕರರಿಂದ ಸ್ಫೂರ್ತಿಗೊಂಡ ಈ ನಾಟಕಕಾರರೆಂದರೆ ಮಹಾರಾಷ್ಟ್ರ ಸಾಹಿತ್ಯದಲ್ಲಿ ಅಜರಾಮರವಾದ ಕೀರ್ತಿಯನ್ನು ಗಳಿಸಿದ ರಾಮ ಗಣೇಶ ಗಡಕರಿ ಅವರು. ಗಡಗರಿ ಅವರ "ಪ್ರೇಮಸಂನ್ಯಾಸ" ನಾಟಕವು ೧೯೧೨ರಲ್ಲಿ ಮೊದಲುಬಾರಿ ರಂಗಭೂಮಿಯ ಮೇಲೆ ಬಂದಿತು. ಆಗಲೇ ಅವರು "ಗೋವಿಂದಾಗ್ರಜ" ಮತ್ತು "ಬಾಲಕ ರಾಮ" ಮುಂತಾದ ಗುಪ್ತ ನಾಮಗಳಿಂದ ಕವಿಗಳೆಂದೂ ಶ್ರೇಷ್ಠ ಸಾಹಿತಿಗಳೆಂದೂ ಹೆಸರಾಗಿದ್ದರು. ೧೯೨೦ ರಲ್ಲಿ ಗಡಕರಿಯವರು ತೀರ ಚಿಕ್ಕ ವಯಸ್ಸಿನಲ್ಲಿಯೇ ಕಾಲವಶರಾದರು. ಆದರೆ ಈ ಎಂಟು ವರ್ಷಗಳ ಅಲ್ಪಾವಧಿಯಲ್ಲಿಯೇ ಅವರು "ಪುಣ್ಯಪ್ರಭಾವ," "ಏಕಚ ಪ್ಯಾಲಾ," "ಭಾವಬಂಧನ" ಮತ್ತು "ರಾಜಸಂನ್ಯಾಸ" (ಅಪೂರ್ಣ) ಈ ನಾಟಕಗಳನ್ನು ಬರೆದರು. ಅಸಾಮಾನ್ಯವಾದ ಕಲ್ಪನಾಶಕ್ತಿ ಮತ್ತು ಅದ್ಭುತವಾದ ವಿನೋದ ಸಾಮರ್ಥ್ಯ ಭಾವನಾಪೂರ್ಣವಾದ ಸನ್ನಿವೇಶಗಳನ್ನು ಕೊನೆಯ ವರೆಗೂ ಹಿಡಿತದಲ್ಲಿಟ್ಟುಕೊಂಡು ಇಡಿಯ ನಾಟಕಕ್ಕೆ ಉತ್ಕಟ ಸ್ವರೂಪವನ್ನು ಕೊಡುವ ಚಾತುರ್ಯ ಮುಂತಾದ ಶ್ರೇಷ್ಠಗುಣಗಳ ಫಲವಾಗಿ ಗಡಕರಿಯವರನ್ನು ಸಾಮಾನ್ಯವಾಗಿ ಮಹಾರಾಷ್ಟ್ರದ ಶೇಕ್ಸಪಿಯರನೆಂದು ಕರೆಯಲಾಗಿದೆ. ಕಲ್ಪಕತೆ, ಚಮತ್ಕೃತಿ, ಉಪಮೆ ಉತ್ಪ್ರೇಕ್ಷೆಗಳಿಂದ ತುಂಬಿತುಳುಕುವ ಅವರ ಬರವಣಿಗೆಯಲ್ಲಿ ಒಂದು ಅಗಾಧವಾದ ಚಪಲ ಸಾಮರ್ಥ್ಯವಿದೆ. ಗಡಕರಿಯವರ ನಾಟ್ಯ ಚಾತುರ್ಯದಲ್ಲಿ, ಅವರ ಅಸಾಧಾರಣವಾದ ಭಾಷಾಪ್ರಭುತ್ವದಲ್ಲಿ ಮರಾಠಿ ನಾಟಕವು ತನ್ನ ಅತ್ಯುಚ್ಚ ಶಿಖರವನ್ನು ಮುಟ್ಟಿತು.

ಗಡಕರಿಯವರ ಮರಣದನಂತರ ಮರಾಠಿ ನಾಟಕವು ಇಳಿಮುಖದ ದಾರಿ ಹಿಡಿಯಿತೆಂದೇ ಹೇಳಬೇಕು. ಆದರೂ ೧೯೨೦ ರಿಂದ ೧೯೩೦ ರ ವರೆಗೆ ಎಷ್ಟೋ ಒಳ್ಳೆಯ ನಾಟಕಗಳು ರಂಗಭೂಮಿಯ ಮೇಲೆ ಬಂದವು. ಇವುಗಳನ್ನು ಪೂರೈಸಿದ ಪ್ರಮುಖ ನಾಟಕಕಾರರೆಂದರೆ ಮಾಧವರಾವ ಜೋಶಿ, ಮಾಮಾ ವರೇರಕರ, ಪ್ರಹ್ಲಾದ ಕೇಶವ ಅತ್ರೆ, ವರ್ತಕ, ಕಮತನೂರಕರ ಮತ್ತು ರಾಂಗಣೇಕರ ಅವರು. ಗಡಕರಿಯವರನಂತರ ಮರಾಠಿ ನಾಟಕವನ್ನೂ ರಂಗಭೂಮಿಯನ್ನೂ ಬದುಕಿಸಿಕೊಂಡ ಶ್ರೇಯಸ್ಸು ಈ ನಾಟಕಕಾರರಿಗೆ ಅವಶ್ಯವಾಗಿ ಸಲ್ಲುವುದು. ಮಾಧವರಾವ ಜೋಶಿ ಮತ್ತು ಮಾಮಾ ವರೇರಕರ ಅವರು ಬರೆದ ನಾಟಕಗಳ ಸಂಖ್ಯೆ ದೊಡ್ಡದು. ನಗರ ಸಭೆಗಳ ಆಡಳಿತದಲ್ಲಿಯ ವಿನೋದ ವಿಪರೀತಗಳನ್ನು ಚಿತ್ರಿಸುವ ಜೋಶಿಯವರ

"ಸ್ಥಾನಿಕ ಸ್ವರಾಜ್ಯ" ನಾಟಕವು ತೀರ ಲೋಕಪ್ರಿಯವಾಯಿತು. ನಾಟಕದಲ್ಲಿಯ ಹಾಸ್ಯ ತೀರ ಮನ ಹಿಡಿಯುವಂಥದಾದರೂ ಅಲ್ಲಲ್ಲಿ ಬರುವ ಗ್ರಾಮ್ಯ ಇಡಿಯ ನಾಟಕಕ್ಕೆ ಸಾಹಿತ್ಯದೃಷ್ಟಿಯಿಂದ ಕುಂದುತರುತ್ತದೆ. ಮಾಮಾ ವರೇರಕರರ ಸಾಹಿತ್ಯಸೇವೆ ವಿಸ್ತಾರವಾದಷ್ಟೂ ವಿವಿಧವಾಗಿದೆ. "ಕಂಪನಿ" ನಾಟಕಗಳಿಂದ ಮೊದಲುಮಾಡಿ ಸಾಮಾಜಿಕ ಆರ್ಥಿಕ ಸಮಸ್ಯೆಗಳನ್ನೊಳಗೊಂಡ ನಾಟಕಗಳ ವರೆಗೆ ಅವರ ನಾಟ್ಯ ನಿರ್ಮಿತಿ ಹಬ್ಬಿಕೊಂಡಿದೆ. "ಸತ್ತೇಚಾ ಗುಲಾಮ," "ಹಾಚ ಮುಲಾಚಾ ಬಾಪ" "ಸೋನ್ಯಾಚಾ ಕಳಸ" ಇವು ಇವರ ಉತ್ತಮ ಕೃತಿಗಳು. "ಸೋನ್ಯಾಚಾ ಕಳಸ" ನಾಟಕವು ಗಾಲ್ಸವರ್ದಿಯವರ "ಸ್ಟ್ರಾಯ್ಫ್" ನಾಟಕದಷ್ಟೇ ಪ್ರಭಾವಶಾಲಿಯಾಗಿದೆ. ವರೇರಕರರ ನಾಟಕಗಳಲ್ಲಿ ಸಂವಿಧಾನಕೌಶಲವಿದೆ; ಮಿಂಚಿನಂಥ ಮಾತುಗಾರಿಕೆಯಿಂದ ಕೂಡಿದ ಸಂವಾದ ಚಾತುರ್ಯವಿದೆ. ಇವೆರಡರಿಂದ ಅವರ ನಾಟಕಗಳಿಗೆ ಜೀವಕಳೆ ತುಂಬಿಕೊಳ್ಳುತ್ತದೆ. ಶಕ್ತಿಯುತವಾಗಿ, ನಿರರ್ಗಳವಾಗಿ ಹರಿಯುವ ಅವರ ಬರವಣಿಗೆಯಿಂದ ಅವರು ಆಗಾಗ ಗಡಕರಿ, ಕಿರ್ಲೋಸ್ಕರ, ದೇವಲ ಖಾಡಿಲಕರರನ್ನು ನೆನಪಿಗೆ ತಂದುಕೊಡುತ್ತಿದ್ದರೂ ಅವರ ನಾಟಕಗಳಲ್ಲಿ ಅಲ್ಲಲ್ಲಿ ಕಂಡುಬರುವ ಕೃತ್ರಿಮತೆಯ ಮೂಲಕ ಅವರ ಸ್ಥಾನಮಾನಗಳ ವಿಷಯದಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶವಿದೆ ಎಂದು ವಿಮರ್ಶಕರು ಹೇಳುವುದುಂಟು. ಆದರೆ ಅವರ ನಾಟ್ಯಸೇವೆಯ ಕಾಲಾವಧಿಯ ದೃಷ್ಟಿಯಿಂದ ಮತ್ತು ಅವರ ಕೃತಿಗಳ ವೈವಿಧ್ಯ ವಿಸ್ತಾರಗಳ ದೃಷ್ಟಿಯಿಂದ ನೋಡಲಾಗಿ ವರೇರಕರರು ಇಂದಿನ ಮರಾಠಿ ನಾಟಕಕಾರರಲ್ಲಿ ಅಗ್ರಗಣ್ಯರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

೧೯೩೦ ರ ನಂತರ ವಿಶೇಷವಾಗಿ ಖ್ಯಾತಿಪಡೆದ ನಾಟಕಕಾರರೆಂದರೆ ಪ್ರಹ್ಲಾದ ಕೇಶವ ಅತ್ರೆ ಅವರು. "ಸಾಷ್ಟಾಂಗ ನಮಸ್ಕಾರ," "ಭ್ರಮಾಚಾ ಭೋಪಳಾ," "ಪರಾಚಾ ಕಾವಳಾ" ಈ ಹಾಸ್ಯ ಪ್ರಧಾನ ನಾಟಕಗಳ ಮೂಲಕ ಕುಗ್ಗುತ್ತಿರುವ ಮರಾಠಿ ರಂಗಭೂಮಿಯನ್ನು ಮತ್ತೆ ಜಾಗ್ರತಗೊಳಿಸಿದರು. ಅವರ "ಉದ್ಯಾಚಾ ಸಂಸಾರ" ನಾಟಕ ಗಂಭೀರವಾದ ವಿಚಾರ ಪ್ರಧಾನವಾದ ನಾಟಕ. "ವಂದೇ ಮಾತರಂ," ಲಗ್ನಾಚೀ ಬೇಡೀ," "ಮೀ ಉಭಾ ಆಹೆ," ಇವು ಅವರ ಇತ್ತೀಚಿನ ನಾಟಕಗಳು. ಹಾಸ್ಯವನ್ನೂ ಕರುಣವನ್ನೂ ಬೆಳಸಿಕೊಂಡು ಹೋಗುವುದರಲ್ಲಿ ಅತ್ರೆ ಅವರದು ಎತ್ತಿದ ಕೈ. ವಿನೋದದಿಂದ ತುಂಬಿ ತುಳುಕುವ, ಬಳಕೆಯದಾದರೂ ರಸಪೂರ್ಣವಾದ ಅವರ ಬರವಣಿಗೆಯ ಶೈಲಿಯಿಂದ ಹರಿತಾದ ಸಂಭಾಷಣೆಯಿಂದ ಅವರ ಕೃತಿಗಳು ಹೆಚ್ಚಾಗಿ ಜನರ ಮನಸೆಳೆದಿವೆ. ನಾಟ್ಯತಂತ್ರದಲ್ಲಿ ಆಧುನಿಕ ಪಾಶ್ಚಿಮಾತ್ಯ ನಾಟಕಗಳಿಂದ ಅವರು ಎಷ್ಟೋ ವಿಷಯಗಳನ್ನು ಬಳಸಿಕೊಂಡು ನಾಟಕಗಳಲ್ಲಿ ಸ್ಥಲ

ಕಾಲಗಳ ಏಕಮುಖತೆಯನ್ನು ಸಾಧಿಸಿ ಹೊಸ ದಾರಿಯನ್ನು ತೋರಿಸಿದ್ದಾರೆ. ಗಡಕರಿ ಯವರ ತರುವಾಯ ಮಹಾರಾಷ್ಟ್ರವನ್ನು ಹೊಟ್ಟೆತುಂಬ ನಗಿಸಿದ ನಾಟಕಕಾರ ರೆಂದರೆ ಅತ್ರೆ ಅವರೇ. ಈಗ ಅವರು ಚಿತ್ರ ವ್ಯವಸಾಯಕ್ಕೆ ಶರಣುಹೋಗಿ ಮರಾಠಿ ನಾಟಕಕ್ಕೆ ತುಂಬ ಹಾನಿಯಾಗಿದೆ. ಇನ್ನೊಂದು ಹೆಸರನ್ನು ಹೇಳದೆ ಮರಾಠಿ ನಾಟಕದ ಈ ಸಿಂಹಾವಲೋಕನ ಪೂರ್ಣವಾಗುವಂತಿಲ್ಲ. ಆ ಹೆಸರೆಂದರೆ ಮಹಾ ರಾಷ್ಟ್ರ ಸಾಹಿತ್ಯಕ್ಕೆ ಹತ್ತಾರು ರೀತಿಗಳಲ್ಲಿ ಸೇವೆ ಸಲ್ಲಿಸಿದ ಶ್ರೀ ನರಸಿಂಹ ಚಿಂತಾಮಣ ಕೇಳಕರ ಅವರದು. "ತೋತಯಾಚೆ ಬಂಡ," "ಕೃಷ್ಣಾರ್ಜುನ ಯುದ್ಧ," "ಅಮಾತ್ಯ ಮಾಧವ," "ಚಂದ್ರಗುಪ್ತ" ಮುಂತಾದ ಒಳ್ಳೆಯ ನಾಟಕಗಳನ್ನು ಅವರು ಸಲ್ಲಿಸಿ ದ್ದಾರೆ. ಇದೀಗ ಉದಯೋನ್ಮುಖ ನಾಟಕಕಾರರೆಂದರೆ ಶ್ರೀ ರಾಂಗಣೇಕರ ಅವರು. ಅವರು ಬರೆದ "ಕುಲವಧೂ," "ಆಶೀರ್ವಾದ," "ನಂದನವನಾಂತ," "ಅಲಂಕಾರ" ನಾಟಕಗಳು ಲೋಕಪ್ರಿಯವಾಗಿವೆ. ಪ್ರತಿ ವಾರವೂ ಇವುಗಳಲ್ಲಿ ಯಾವುದಾದ ರೊಂದು ನಾಟಕದ ಪ್ರಯೋಗ ನಡೆದೇ ಇರುತ್ತದೆ.

ಪೌರಾಣಿಕ ನಾಟಕ, ಅನುವಾದಿತ ನಾಟಕ, ಕಥಾಪೂರ್ಣವಾಗಿ ಸಂಗೀತ ಮಯವಾದ ನಾಟಕ, ಐತಿಹಾಸಿಕ ನಾಟಕ, ಕೊನೆಯಲ್ಲಿ ಸಾಮಾಜಿಕ ಸಮಸ್ಯಾ ತ್ಮಕ ನಾಟಕ, ಈ ರೀತಿಯಾಗಿ ಕಳೆದ ನೂರು ವರ್ಷಗಳಲ್ಲಿ ಮರಾಠಿ ನಾಟ್ಯ ಸಾಹಿತ್ಯವು ಬೆಳೆದು ನಿಂತಿದೆ. ಚಿತ್ರಪಟದ ಪ್ರಭಾವ ಇತರ ಪ್ರಾಂತಗಳಲ್ಲಿಯಂತೆ ಮಹಾರಾಷ್ಟ್ರ ನಾಟಕದ ಮೇಲೂ ಆಗದೆ ಇರದಿದ್ದರೂ ಅತ್ರೆ, ವರೇರಕರ, ರಾಂಗ ಣೇಕರರ ನಾಟಕಗಳನ್ನು ಅಲ್ಲಲ್ಲಿ ಆಡಿ ರಂಗಭೂಮಿಯನ್ನು ಬದುಕಿಸಿಕೊಳ್ಳಲು ಯತ್ನಿಸ ಲಾಗುತ್ತಿದೆ. ಸುಮಾರು ೧೫ ವರ್ಷಗಳ ಹಿಂದೆ ಮಹಾರಾಷ್ಟ್ರದ ವಿಖ್ಯಾತ ನಾಟಕ ಕಂಪನಿಗಳು ಇಲ್ಲವಾದನಂತರ ಮರಾಠಿ ನಾಟಕದ ವೈಭವಕ್ಕೆ ಬಂದ ಚ್ಯುತಿ ಇನ್ನೂ ವರೆಗೂ ತುಂಬಿ ಬರಲಿಲ್ಲ. ಆದರೆ ಅಂದಿನಿಂದ ನಾಟಕವು ವಾಸ್ತವಿಕತೆಯ ದಾರಿಯಲ್ಲಿ ಬೇರೆ ಹವಣಗಳನ್ನು ಸಾಧಿಸುವುದರಲ್ಲಿದೆ. ಮರಾಠಿ ನಾಟಕದ ಮುಖ್ಯ ವೈಶಿಷ್ಟ್ಯ ಗಳಲ್ಲೊಂದಾದ ಹಾಸ್ಯವನ್ನು ಹೊಸ ಹೊಸ ರೀತಿಯಲ್ಲಿ ಉಪಯೋಗಿಸಿ ನಾಟಕ ಸ್ವರೂಪವನ್ನು ಇಂದಿನ ಬೇಡಿಕೆಗಳಿಗೆ ಸರಿಹೋಗುವಂತೆ ಮಾರ್ಪಡಿಸುವ ಪ್ರಯೋಗ ಗಳು ಎಷ್ಟೋ ಕಡೆಗೆ ನಡೆದಿವೆ. ವಿಶೇಷವಾಗಿ ನಾಟಕಗಳನ್ನು ರಂಗಭೂಮಿಯಮೇಲೆ ತರುವುದರಲ್ಲಿ ಮಹಾರಾಷ್ಟ್ರವು ಭಾರತದ ಇನ್ನಷ್ಟೂ ಪ್ರಾಂತಗಳನ್ನು ಮೀರಿಸಿದೆ ಎಂದು ಸಹಜವಾಗಿ ಹೇಳಬಹುದು. ಅಭಿನಯದಲ್ಲಿ, ರಂಗವ್ಯವಸ್ಥೆಯಲ್ಲಿ, ವಾಸ್ತವಿಕತೆ ಯನ್ನು ಅಚ್ಚಳಿಯದೆ ತಂದುಕೊಂಡಿದ್ದಾರೆ. ಆದರೆ ಚಿತ್ರಪಟ ವ್ಯವಸಾಯಕ್ಕೆ ನಟ ನಟಿಯರಂತೆ ನಾಟಕಕಾರರೂ ಬಲಿಬೀಳತೊಡಗಿದಂದಿನಿಂದ ನಾಟಕದ ಕಡೆಗೆ ಅವಶ್ಯ

ವಾದ ಲಕ್ಷ್ಯವನ್ನು ಪೂರೈಸಲಾಗಿಲ್ಲ. ಹೀಗೆ ನೂರು ವರ್ಷ ಕಾಲದಲ್ಲಿ ನಾಟಕವು ಹುಟ್ಟಿ ಮುಂದುವರಿದು ಗಡಕರಿಯವರ ಪ್ರತಿಭೆಯಲ್ಲಿ, ಗಂಧರ್ವ ಪೆಂಢಾರಕರರ ನಟನಾ ಸಾಮರ್ಥ್ಯದಲ್ಲಿ, ಒಂದು ಅತ್ಯುಚ್ಚ ಶಿಖರವನ್ನು ಮುಟ್ಟಿ ಇದೀಗ ಒಂದು ವಿಪರೀತ ವಾದ ನಿರುತ್ಸಾಹದಲ್ಲಿ ತೊಳಲಾಡುತ್ತಿದೆ. ಆದರೂ ಮಹಾರಾಷ್ಟ್ರದಲ್ಲಿ ನಾಟಕವೂ ರಂಗಭೂಮಿಯೂ ಇನ್ನಿತರ ಪ್ರಾಂತಗಳಲ್ಲಿಯಕಿಂತಲೂ ಇಂದು ಹೆಚ್ಚಾಗಿ ಬದುಕಿವೆ ಬದುಕಿ ಬೆಳೆಯಲು ಹವಣಿಸುತ್ತಿವೆ ಎಂಬ ವಿಷಯ ವಿಶೇಷ ಗಮನಾರ್ಹವಾಗಿದೆ.[1]

ವಿ. ಎಂ. ಇನಾಮದಾರ.

---

[1] ಈ ಲೇಖನವನ್ನು ಬರೆಯುವುದರಲ್ಲಿ ಮುಂಬಯಿಯ ವಿಲ್ಸನ್ ಕಾಲೇಜಿನಲ್ಲಿ ಮರಾಠಿಯ ಪ್ರೊಫೆಸರರೂ ಮಹಾರಾಷ್ಟ್ರದ ಶ್ರೇಷ್ಠ ಸಾಹಿತಿಗಳಲ್ಲೊಬ್ಬರೂ ಆದ ಪ್ರೊ. ಎಂ. ಡಿ. ಅಳತೆಕರ ಅವರು ತುಂಬ ಸಹಾಯಮಾಡಿದ್ದಾರೆ.

ಶ್ರೀ ಅರವಿಂದರಿಗೆ

ಪ್ರಾಚ್ಯ ಪಾಶ್ಚಾತ್ಯ ತತ್ತ್ವಜ್ಞಾನ ಖನಿಗಳಲಿ
ತ್ರೈಲೋಕತೊಳಲಿ ಹುಡುಕಿ ಬಹುವಜ್ರಗಳನಾಯ್ದು ನಾಂ
ಶ್ರೀಮಂತನಾಗಿರ್ದೊಡಂ, ಹೇ ಪೂರ್ಣ ಯೋಗೀಂದ್ರ
ಕೊನೆಗೆ ನಿನ್ನೀ ಮೇರುಕೃತಿಯ[1] ದರ್ಶನ ಶಿರದ
ಮೇರುವುನ್ನತ ಮತಿಯ ಮಾನಸ ಸರೋವರದಿ
ಪೂರ್ಣತೃಪ್ತಿಯನಿಂಟಿ ಶಾಂತವಾದುದು ನನ್ನ
ಧೀತೃಷ್ಣೆ. ಬುದ್ಧಿ ತಣಿವನ್ನೆಗಂ ಸಿದ್ಧಿ ತಾಂ
ಸಂದಿಗ್ಧಮೈಸೆ? ಮತಿಯನುಮತಿಯೆ ಸಾಧನೆಗೆ
ಅಗ್ನಿಸೋಪಾನಂ : ಆ ಜ್ಞಾನದಿಂ ಮೇಲಲ್ತೆ, ಪೇಳ್,
ದಿವ್ಯ ವಿಜ್ಞಾನ!
ಹೃದಯಕೆ ತೃಪ್ತಿಯಂ ತಂದ
ಗುರುದೇವ ಪರಮಹಂಸನ ಸಮನ್ವಯ ದೃಷ್ಟಿ,
ಮರ್ತ್ಯತತ್ತ್ವದ ಮನೋಮಯದ ರೀತಿಯೊಳಿಂದು
ತಾನಾಯ್ತು ತಾರ್ಕಿಕ ಸಮರ್ಪಕಂ, ನಿನ್ನ ಈ
ಲೋಕಲೋಕಂಗಳಂ ಲೋಕಾಂತರಂಗಳಂ
ತನ್ನ ಮುಷ್ಟಿಯೊಳಾಂತ ಪೂರ್ಣದೃಷ್ಟಿಯ ಕೃತಿಯ
ದರ್ಶನದಿ : ಬುದ್ಧಿತಿಮಿರಂ ಮಾಣ್ದುದಿನ್ನೆನಗೆ!
ಸಿದ್ಧಿ ಸೂರ್ಯೋದಯಕೆ ಚೈತ್ಯಾಕ್ಷಿ ಪಕ್ಷ್ಮಂಗಳಂ
ತೆರೆದು ಗರಿಗೆದರಿರುವ ನನ್ನಾತ್ಮ ಪಕ್ಷೀಂದ್ರನಂ
ದಿಕ್ಕುಕೆಡದಂತೆ ಮಿಂಚುಂಜೆರಳ ದೀಪ್ತಿಯಿಂ
ಸನ್ನೆಗೆಯ್ದಾಶೀರ್ವದಿಸು, ಓ ಗುರುವೆ, ಗುರುದೇವ
ಪರಮಹಂಸನ ಶಿವಾನಂದ ಚರಣಾಬ್ಜಕೆ!

ಕುವೆಂಪು

---

[1] "The Life Divine."

ಹಿಂದುಸ್ತಾನದಲ್ಲಿ ಭೌತಶಾಸ್ತ್ರದ ಬೆಳವಣಿಗೆ

ಹಿಂದುಸ್ತಾನ ಮತ್ತು ಪಾಶ್ಚಾತ್ಯ ದೇಶಗಳ ತುಲನೆ ಮಾಡುವಾಗ ಭಾರತ ದೇಶವು ಆಧ್ಯಾತ್ಮಿಕವೆಂದೂ, ಪಾಶ್ಚಾತ್ಯ ದೇಶಗಳು ಭೌತ ಮತ್ತು ವಿಜ್ಞಾನ ದೃಷ್ಟಿಯುಳ್ಳವೆಂದೂ ಹೇಳುವುದು ವಾಡಿಕೆ. ಅಧ್ಯಾತ್ಮದ ಬೆನ್ನು ಹತ್ತಿ ಭೌತಶಾಸ್ತ್ರಗಳನ್ನು ನಮ್ಮವರು ಪೋಷಿಸಲಿಲ್ಲ, ಬೆಳೆಯಿಸಲಿಲ್ಲವೆಂದು ಹಲಾವರು ವಿದ್ವಾಂಸರು—ಭಾರತೀಯರು, ಇತರರು—ಹೇಳುತ್ತಾರೆ. ಕ್ರಿಸ್ತಪೂರ್ವ ಯುಗದಿಂದ ೧೨, ೧೩ ನೆಯ ಶತಮಾನಗಳ ವರೆಗಿನ ವಿಜ್ಞಾನೇತಿಹಾಸವು ಮೇಲಿನ ಹೇಳಿಕೆಯು ಸರಿಯಲ್ಲವೆಂದು ಸಾರುತ್ತದೆ. ಆ ಬಗ್ಗೆ ಹಲವು ಗ್ರಂಥಗಳು ಈಗಾಗಲೆ ಬರೆದುಬಂದಿವೆ. ಭಾರತೀಯರ ಸಾಧನೆ ಹಿಂದೆಯೂ ಸಮರ್ಪಕವಾಗಿತ್ತೆಂಬುದು ಅವುಗಳಿಂದ ತಿಳಿದರೆ ಕಳೆದ ೫೦ ವರ್ಷಗಳಲ್ಲಿ ನಮ್ಮ ವೈಜ್ಞಾನಿಕರು ಮತ್ತೊಮ್ಮೆ ತಲೆಯೆತ್ತಿ, ಕೆಲವು ಮಹತ್ವದ ಸಂಶೋಧನೆಗಳನ್ನು ವೈಜ್ಞಾನಿಕ ಜಗತ್ತಿಗೆ ಕಾಣಿಕೆಯಾಗಿ ಒಪ್ಪಿಸಿದಾರೆ; ಅಂತರ್ ರಾಷ್ಟ್ರೀಯ ಮೆಚ್ಚುಗೆಯನ್ನು ಪಡೆದಿದಾರೆ ಎಂಬುದು ತಿಳಿಯುತ್ತದೆ. ೧೯೧೪ ರಲ್ಲಿ ಕಲ್ಕತ್ತೆಯಲ್ಲಿ ನೆರೆದ ಮೊದಲನೆಯ ವೈಜ್ಞಾನಿಕರ ಸಭೆಯಲ್ಲಿ ೩೫ ಸಂಶೋಧನಾ ಪ್ರಬಂಧಗಳು ಬಂದಿದ್ದವು. ಅವುಗಳಲ್ಲಿ ಹೆಚ್ಚು ಸಂಖ್ಯೆ ಐರೋಪ್ಯ ಸಂಶೋಧಕರವು ಇದ್ದವು. ೧೯೩೮ ರಲ್ಲಿಯ ೨೫ ನೆಯ ಸಭೆಯಲ್ಲಿ ೮೦೦ಕ್ಕಿಂತಲು ಹೆಚ್ಚು ಸಂಖ್ಯೆಯ ಪ್ರಬಂಧಗಳು ಓದಲಾದವು. ಅವುಗಳಲ್ಲಿಯ ಬಹು ಸಂಖ್ಯೆ ಭಾರತೀಯ ಶಾಸ್ತ್ರಜ್ಞ ದಿಂದ ಬಂದವು. ೧೯೧೮ ರಿಂದ ೧೯೪೩ ರ ವರೆಗೆ ಎಂಟು ಭಾರತೀಯ ವಿಜ್ಞಾನಿಗಳಿಗೆ ಪಾಶ್ಚಾತ್ಯ ವೈಜ್ಞಾನಿಕರು ಮನ್ನಣೆಯನ್ನಿತ್ತು ಅವರನ್ನು 'ರಾಯಲ್ ಸೊಸಾಯಟಿ ಆಫ್ ಲಂಡನ್' ಎಂಬ ಹಿರಿಯ ವೈಜ್ಞಾನಿಕ ಸಂಸ್ಥೆಯ ಸದಸ್ಯರನ್ನಾಗಿ ಆರಿಸಿದಾರೆ.

೧. ಶ್ರೀನಿವಾಸ ರಾಮಾನುಜನ್ (ಗಣಿತ—೧೯೧೮), ೨. ಜಗದೀಶ ಚಂದ್ರ ಬೋಸ್ (ಪದಾರ್ಥ ವಿಜ್ಞಾನ ಮತ್ತು ಸಸ್ಯಶಾಸ್ತ್ರ—೧೯೨೧), ೩. ಸಿ. ವಿ. ರಾಮನ್ (ಪದಾರ್ಥ ವಿಜ್ಞಾನ—೧೯೨೪), ೪. ಎಂ. ಎನ್. ಸಾಹಾ (ಪದಾರ್ಥ ವಿಜ್ಞಾನ—೧೯೨೭), ೫. ಕೆ. ಎಸ್. ಕೃಷ್ಣನ್ (ಪದಾರ್ಥ ವಿಜ್ಞಾನ—೧೯೩೮), ೬. ಎಚ್. ಜೆ. ಭಾಬಾ (ಪದಾರ್ಥ ವಿಜ್ಞಾನ—೧೯೪೧), ೭. ಬೀರಬಲ್ ಸಹಾನಿ (ಸಸ್ಯ ಶಾಸ್ತ್ರ), ೮. ಎಸ್. ಎಸ್. ಭಟ್‌ನಾಗರ (ರಸಾಯನ ಶಾಸ್ತ್ರ—೧೯೪೩),

೧೯೩೦ ರಲ್ಲಿ ಜಗದ್ವಿಖ್ಯಾತ ನೊಬೆಲ್ ಪಾರಿತೋಷಿಕವು ಮೊದಲನೆಯ ಸಲ ಸುಏಜ ಕಾಲುವೆಯ ಪೂರ್ವ ದೇಶಕ್ಕೆ—ಭಾರತಕ್ಕೆ—ದೊರೆಯಿತು.

ಇಂದಿನ ಭಾರತದಲ್ಲಿ ತರುಣ ವಿದ್ಯಾರ್ಥಿಗಳಿಗೆ ಬೆನ್ನೆಲುಬಾಗಿ ನಿಂತುಕೊಂಡು, ಉದಾಹರಣೆಯಿಂದ, ಉಪದೇಶದಿಂದ, ಭಾರತೀಯ ಸಂಶೋಧಕರ ಒಂದು ಗುಂಪನ್ನೇ ಕಟ್ಟಿದವರಲ್ಲಿ ಸರ್ ಜಗದೀಶ ಚಂದ್ರ ಬೋಸ್, ಮತ್ತು ಸರ್ ಪ್ರಫುಲ್ಲ ಚಂದ್ರ ರಾಯ್ ಇವರಿಬ್ಬರು ಮೊದಲಿಗರು. ೧೮೯೬ ರಲ್ಲಿ ಲಿವರ್‌ಪೂಲದ 'ಬ್ರಿಟಿಷ್ ಅಸೋಸಿಯೇಷನ್'ದ ಮುಂದೆ ಒರ್ವ ತರುಣ ಭಾರತೀಯ ವೈಜ್ಞಾನಿಕನು—ಜೆ. ಸಿ. ಬೋಸ—ಚಿಕ್ಕ ಅಲೆಗಳ ಪ್ರಾಯೋಗಿಕ ದಿಗ್ದರ್ಶನವನ್ನು ಮಾಡಿದನು. ಇಂತಹ ಅಲೆಗಳನ್ನೆ ಆಕಾಶವಾಣಿಯ 'ಕೋಹಿಯರರ್' ಗಳಲ್ಲಿ ಉಪಯೋಗಿಸಿದರು. ಮಾರ್ಕೊನಿಯ ಪ್ರಯೋಗಗಳಿಗಿಂತಲು ಎಷ್ಟೋ ವರ್ಷ ಮೊದಲೆಯೇ ಬೋಸರು ತಂತಿಗಳ ಆಧಾರವಿಲ್ಲದೆಯೇ ೭೫ ಅಡಿ ಉದ್ದಳತೆಯ ವರೆಗೂ ಅಲೆಗಳನ್ನು ಪ್ರಸರಿಸಿದರು.[21] ಮುಂದೆ ಬೋಸರು ಪದಾರ್ಥ ವಿಜ್ಞಾನದ ಕ್ಷೇತ್ರದಿಂದ ಸಸ್ಯ ಶಾಸ್ತ್ರದ ಕ್ಷೇತ್ರಕ್ಕಿಳಿದರು. ಪ್ರಾಣಿಗಳಂತೆ ಸಸಿಗಳು ಕೂಡ ತಮ್ಮ ಮೇಲಾಗುವ ಕ್ರಿಯೆಗಳಿಗೆ ಪ್ರತ್ಯುತ್ತರವಾಗಿ ಕಾರ್ಯ ಮಾಡುವುವೆಂದು ಸಿದ್ಧಮಾಡಿದರು. ಇದನ್ನು ತೋರಿಸುವುದಕ್ಕಾಗಿ 'ಕ್ರೆಸ್ಕೊಗ್ರಾಫ್' ಎಂಬ ಯಂತ್ರವನ್ನು—ತಮ್ಮ ಪ್ರಯೋಗಶಾಲೆಯಲ್ಲಿಯೇ—ಕಟ್ಟಿದರು. ಮೊದಮೊದಲು 'ರಾಯಲ್ ಸೊಸಾಯಟಿ' ಯವರು ಬೋಸರ ಸಿದ್ಧಾಂತವನ್ನು ಒಪ್ಪಲಿಲ್ಲ. ಮುಂದೆ ೧೯೨೦ರಲ್ಲಿ ತಮ್ಮ ಒಪ್ಪಿಗೆಯನ್ನಿತ್ತು ಇವರನ್ನು ಸಂಸ್ಥೆಯ ಸದಸ್ಯರನ್ನಾಗಿ ಆರಿಸಿ ಮರ್ಯಾದೆ ಮಾಡಿದರು. ಇವರಿರುವಾಗಲೆ ಕಲ್ಕತ್ತೆಯಲ್ಲಿ 'ಬೋಸ್ ಸಂಶೋಧನಾ ಮಂದಿರ'ವನ್ನು ಸ್ಥಾಪಿಸಿದರು.

ಭಾರತೀಯ ವೈಜ್ಞಾನಿಕರಿಗೆ ಆದ್ಯಾಚಾರ್ಯರಾಗಿ ರಸಾಯನ ಶಾಸ್ತ್ರ ಮತ್ತು ರಾಸಾಯನಿಕ ವ್ಯವಸಾಯದ ಬೆಳವಣಿಗೆಗಾಗಿಯೇ ತಮ್ಮ ಸರ್ವಸ್ವವನ್ನು ವಿನಾಸಲಾಗಿರಿಸಿದರು ಆಚಾರ್ಯ ಪ್ರಫುಲ್ಲಚಂದ್ರ ರಾಯರವರು. ೧೮೯೬ ರಲ್ಲಿ 'ಮರ್ಕ್ಯುರಸ್ ನೈಟ್ರೇಟ್' $HgNo_3$ ಹುಡುಕಿ ಮುಂದೆ 'ಕ್ಷಾರ ಭೂಮಿಗಳ ಶುದ್ಧ ನೈಟ್ರೇಟ್ಸ್‌ಗಳನ್ನು ಸಿದ್ಧಮಾಡಿದರು. I-Hg-s-s-Hg-I ಎಂಬ ಹೊಸ ಸಂಯುಕ್ತವನ್ನು ಸಿದ್ಧಮಾಡಿ ಇದರ ಗುಣಧರ್ಮಗಳನ್ನು ಕಂಡುಹಿಡಿದರು. ಬೆಳಕಿನಲ್ಲಿ ಇದರ ಬಣ್ಣ ಮಾರ್ಪಟ್ಟು, ಪುನಃ ಕತ್ತಲೆಯಲ್ಲಿ ಹಿಂದಿರುಗುವದೆಂದು ತೋರಿಸಿದರು. ಆಚಾರ್ಯ ರಾಯರವರಿಂದ ಸಿದ್ಧವಾದ ನೈಟ್ರಸಾಮ್ಲವನ್ನು ಉಪಯೋಗಿಸಿ 'ವರ್ನರನು' ಯೂರಿಯಾ ಸಂಯುಕ್ತದ ಅಂತರ್‌ರಚನೆಯನ್ನು ತೋರಿಸಿದನು.

[21] *Speeches and Works*, by J. C. Bose.

ಕೇವಲ ೫೦೦ ರೂಪಾಯಿಗಳ ನಿಧಿಯಿಂದ ಆರಂಭ ಮಾಡಿ 'ಬೆಂಗಾಲ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್' ಎಂಬ ರಾಸಾಯನಿಕ ಕಾರ್ಖಾನೆಯನ್ನು ಕಟ್ಟಿದರು. ಇದೇ ಕಾರ್ಖಾನೆಯಲ್ಲಿ ಇಂದು ೨,೦೦೦ ಜನರು ಕೆಲಸಮಾಡುವರಲ್ಲದೆ ಅದರ ನಿಧಿಯು ಅರ್ಧಕೋಟಿ ರೂಪಾಯಿಗಳಿಗೇರಿದೆ.

ಆಚಾರ್ಯರಾಯರ ಶಿಷ್ಯಕೋಟಿಯಲ್ಲಿ ಸರ್ ಜೆ. ಸಿ. ಘೋಷ, ಡಾ. ಎನ್. ಆರ್. ಧಾರ ಮತ್ತು ಡಾ. ಎಚ್. ಕೆ. ಸೇನ ಮುಂತಾದವರು ರಸಾಯನಶಾಸ್ತ್ರದಲ್ಲಿಯ ತಮ್ಮ ಸಂಶೋಧನೆಗಳಿಂದ ಹೆಸರುವಾಸಿಯಾಗಿದಾರೆ. ಪ್ರಬಲ ವಿದ್ಯುತ್ ರಸಾಯನಗಳಲ್ಲಿ ಸಂಪೂರ್ಣ ವಿಭಜನೆಯಾಗುವುದೆಂದು ಡಾ. ಘೋಷರು ಪ್ರತಿಪಾದಿಸಿದಾಗ ರಸಾಯನಶಾಸ್ತ್ರಜ್ಞರಲ್ಲಿ ಒಂದು ಕೋಲಾಹಲವೆದ್ದಿತ್ತು. ಇವರ ಸಿದ್ಧಾಂತವನ್ನು ಗಣಿತಶಾಸ್ತ್ರದ ಒರೆಗಲ್ಲಿಗೆ ಹಚ್ಚಿ ಅದರ ಸತ್ಯತೆಯನ್ನು ಎತ್ತಿತೋರಿಸಿದ ಮೇಲಂತೂ ಘೋಷ್ ಸಿದ್ಧಾಂತವು ರಸಾಯನಶಾಸ್ತ್ರದಲ್ಲಿ ಒಂದು ಹೊಸ ಪ್ರಕರಣವನ್ನೇ ಆರಂಭಿಸಿತು. ಡಾ. ನೀಲರತ್ನ ಧಾರರವರು ಸಾರಜನಕದ ಸ್ಥಿರೀಕರಣದ ಬಗ್ಗೆ ಮಹತ್ವದ ಪ್ರಯೋಗಗಳನ್ನು ಮಾಡಿ ಹಿಂದುಸ್ತಾನದ ಬಡ ಒಕ್ಕಲಿಗನ ಮೇಲೆ ಉಪಕಾರಮಾಡಿದಾರೆ. ಡಾ. ಎಚ್. ಕೆ. ಸೇನರವರು ರಾಂಚಿಯಲ್ಲಿ ಅರಗಿನ ಪ್ರಯೋಗಶಾಲೆಗೆ ಮುಖ್ಯರಾಗಿದ್ದುಕೊಂಡು, ದೇಶದಲ್ಲಿಯ ಅರಗಿನ ವ್ಯವಸಾಯವನ್ನು ಮುಂದುವರಿಸಹತ್ತಿದಾರೆ.

ಇಂದಿನ ಭಾರತೀಯ ರಸಾಯನಶಾಸ್ತ್ರಜ್ಞರಲ್ಲಿ ಇನ್ನೊಂದು ಗಣ್ಯವ್ಯಕ್ತಿ ಸರ್ ಶಾಂತಿಸ್ವರೂಪ ಭಟನಾಗರರದು. ಈ ಸಲದ ಯುದ್ಧವು ಆರಂಭವಾದ ಮೇಲೆ ಭಾರತದ ಕೇಂದ್ರಸರಕಾರವು 'ವೈಜ್ಞಾನಿಕ ಮತ್ತು ವ್ಯವಸಾಯ ಸಂಶೋಧನೆಯ' ಖಾತೆಯನ್ನು ಆರಂಭಿಸಿ, ಭಟನಾಗರರನ್ನು ಅದರ ಮುಖ್ಯರನ್ನಾಗಿ ನೇಮಿಸಿತು. ಕಲಿಲ ಮತ್ತು ಅಯಸ್ಕಾಂತ ರಸಾಯನಶಾಸ್ತ್ರದಲ್ಲಿ ಇವರದು ಎತ್ತಿದ ಕೈ. ಪದಾರ್ಥಗಳ ಕಲಿಲ ರೂಪಾಂತರದಿಂದ ಅವುಗಳ ಅಯಸ್ಕಾಂತ ಗುಣಗಳಲ್ಲಿ ವ್ಯತ್ಯಾಸವಾಗುವುದೆಂದು ತಮ್ಮ ಸೂಕ್ಷ್ಮವಾದ ಸಲಕರಣೆಗಳಿಂದ ತೋರಿಸಿದರು. ಲಂಡನ್‌ದ 'ಆಡಮ ಹಿಲ್ಗರ್ ಮತ್ತು ಕಂಪನಿ'ಯವರು ಈ ಸಲಕರಣೆಯನ್ನು 'ಭಟ್‌ನಾಗರ-ಮಾಥುರ್ ಅಯಸ್ಕಾಂತ ತಕ್ಕಡಿ' ಎಂಬ ಹೆಸರಿನಿಂದ ವೈಜ್ಞಾನಿಕ ಪೇಟೆಯಲ್ಲಿ ಮಾರಹತ್ತಿದಾರೆ.

ಕಳೆದ ೨೫ ವರ್ಷಗಳ ಅವಧಿಯಲ್ಲಿ ಭಾರತೀಯ ವೈಜ್ಞಾನಿಕರು ಪದಾರ್ಥವಿಜ್ಞಾನದ ಕ್ಷೇತ್ರದಲ್ಲಿ ಅಂತರ್‌ರಾಷ್ಟ್ರೀಯ ಮನ್ನಣೆಯನ್ನು ಗಳಿಸಿದ್ದಾರೆ. ಆಧುನಿಕ ಪದಾರ್ಥವಿಜ್ಞಾನದಲ್ಲಿ 'ರಾಮನ್‌ಪರಿಣಾಮ' 'ಸಾಹಾ ಸಿದ್ಧಾಂತ' 'ಬೋಸ್-

ಐನ್‌ಸ್ಟೀನ್ ಅಂಕಿಸಂಖ್ಯೆ' ಮುಂತಾದವುಗಳನ್ನು ಓದದೆ ಇರುವ ಭೌತವಿಜ್ಞಾನದ ವಿದ್ಯಾರ್ಥಿಗಳು ವಿರಳ.

ಮೊದಲು ಇಂಡಿಯನ್ ಆಡಿಟ್ ಖಾತೆಯಲ್ಲಿ ಸೇರಿ, ಮುಂದೆ ಕಲ್ಕತ್ತೆಯ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿ ಕೆಲಸಮಾಡಿ ಇಂದು ಬೆಂಗಳೂರಲ್ಲಿಯ ಟಾಟಾ ಭೌತಶಾಸ್ತ್ರ ಮಂದಿರದಲ್ಲಿ ಪದಾರ್ಥವಿಜ್ಞಾನ ಶಾಖೆಯ ಪ್ರಮುಖರಾಗಿ ಕೆಲಸಮಾಡುತ್ತಿದಾರೆ, ಸರ್ ಚಂದ್ರಶೇಖರ ವೆಂಕಟರಾಮನ್ ಅವರು. ಪದಾರ್ಥ ವಿಜ್ಞಾನದ ಪ್ರತಿಯೊಂದು ಶಾಖೆಯಲ್ಲಿ ಇವರ ಸಂಶೋಧನೆಗಳು ಹೆಸರಾಗಿವೆ. ಧ್ವನಿಶಾಸ್ತ್ರದಲ್ಲಿ ತಂತಿಗಳ ಮಿಡಿಯುವಿಕೆಯ ಬಗ್ಗೆ, ಭಾರತೀಯ ತಂತುವಾದ್ಯಗಳ ಬಗ್ಗೆ ಸಂಶೋಧನೆಗಳನ್ನು ಮಾಡಿದಾರೆ. ಅಸಮಪ್ರಮಾಣ ಅಣುಗಳ ಪ್ರತಿಕ್ರಿಯೆ ಯನ್ನು ತಿಳಿಸಿದಾರೆ. ಸಮುದ್ರದ ನೀಲಿಬಣ್ಣದ ಬಗ್ಗೆ ಇರುವ ಹಳೆಯ ಸಿದ್ಧಾಂತ ಗಳನ್ನು ತಪ್ಪೆಂದು ಹೇಳಿ, ಸಮುದ್ರದ ನೀರಿನ ಅಣುಗಳು ಬೆಳಕನ್ನು ಚೆದರಿಸುವುದರಿಂದ ಈ ನೀಲಿ ಬಣ್ಣ ಕಾಣಿಸುತ್ತದೆಂದು ಹೊಸ ಸಿದ್ಧಾಂತವನ್ನು ಮುಂದುವರಿಸಿದ್ದಾರೆ. ೧೯೨೮ರ ವರೆಗೆ ಘನ, ದ್ರವ ಮತ್ತು ಅನಿಲಗಳಿಂದ ಚೆದರಿಸಲ್ಪಟ್ಟ ಬೆಳಕಿನ ಅಲೆ ಯಳತೆಯು ಮಾರ್ಪಡುವುದಿಲ್ಲೆಂದು ಒಪ್ಪಲಾಗಿತ್ತು. ಫೆಬ್ರುವರಿ ೨೯, ೧೯೨೮ ನೆಯ ದಿನ ರಾಮನ್ ಅವರು ತಮ್ಮ ಪ್ರಯೋಗ ಕೌಶಲದಿಂದ, ಚೆದರಿಸಲ್ಪಟ್ಟ ಬೆಳಕಿನ ಅಲೆಯಳತೆ ಮಾರ್ಪಟ್ಟು ಬಣ್ಣ ಬದಲಾಯಿಸುವುದೆಂದು ತೋರಿಸಿದರು. ಇದುವೆ 'ರಾಮನ್ ಪರಿಣಾಮ.' ಇದಕ್ಕಾಗಿಯೆ ರಾಮನ್ ಅವರಿಗೆ ೧೯೩೦ ರಲ್ಲಿ ನೊಬೆಲ್ ಪಾರಿತೋಷಿಕವು—ಪೌರ್ವಾತ್ಯ ವಿಜ್ಞಾನಿಗೆ ಮೊದಲನೆಯಸಲ—ದೊರಕಿತು. ಪದಾರ್ಥ ಗಳ ಅಂತರ್‌ರಚನೆಯನ್ನು ಕಂಡುಹಿಡಿಯಲಿಕ್ಕೆ ರಾಮನ್ ಪರಿಣಾಮವು ಒಂದು ಹೊಸ ಸಾಧನವಾಯಿತು. 'ರಾಮನ್ ಪರಿಣಾಮ'ದ ಶೋಧದ ಶ್ರೇಯದ ಬಗ್ಗೆ ಆಂಗ್ಲ ವೈಜ್ಞಾನಿಕರಲ್ಲಿ ಮತ್ತು ಇನ್ನುಳಿದ ಪಾಶ್ಚಾತ್ಯ ವೈಜ್ಞಾನಿಕರಲ್ಲಿ ಮತಭೇದವಿದೆ. ಕೆಲವರು ಇದನ್ನು 'ಶ್ಮೆಕಲ್-ರಾಮನ್ ಪರಿಣಾಮ'ವೆಂದು ಕರೆದಿದಾರೆ[22]. ಮತಭೇದ ವೇನೆ ಇರಲಿ ಸಂಶೋಧನೆಯ ಬಹ್ವಂಶ ಶ್ರೇಯವು ರಾಮನರಿಗೆ ಸಲ್ಲತಕ್ಕದ್ದು. ಸರ್ ರಾಮನ್‌ರ ಸಹೋದ್ಯೋಗಿಗಳಾದ ಡಾ. ಕೆ. ಎಸ್. ಕೃಷ್ಣನ್ ಅವರು ಸ್ಫಟಿಕಗಳ ಅಯಸ್ಕಾಂತತೆಯ ಬಗ್ಗೆ ಮಹತ್ವದ ಸಂಶೋಧನೆಗಳನ್ನು ನಡೆಯಿಸಿ, ರಾಯಲ್ ಸೊಸಾಯಟಿಯ ಸದಸ್ಯರಾಗಿ ಆರಿಸಿ ಬಂದಿದಾರೆ. 'ರಾಮನ್ ಪರಿಣಾಮ' ಶೋಧದ ಶ್ರೇಯದ ಕೆಲಭಾಗವಾದರೂ ಇವರಿಗೆ ಸಲ್ಲತಕ್ಕದ್ದೆಂದು ಕೆಲವರ ಅಭಿಪ್ರಾಯ[23].

---

[22] *Der-Smekal-Raman Effect*—Kolransch.

[23] S. Datta, *Modern Review*, LXXIV, No. 6.

ಪದಾರ್ಥವಿಜ್ಞಾನದ ವಿಸ್ತಾರದಲ್ಲಿಯ ಇನ್ನೊಂದು ದೊಡ್ಡ ವ್ಯಕ್ತಿಯೆಂದರೆ ಡಾ. ಮೇಘನಾದ ಸಾಹಾ ಇವರು. ಬಡತನದಲ್ಲಿ ಹುಟ್ಟಿ, ಹೆಸರಾದ ವಿದ್ಯಾರ್ಥಿಯಾಗಿ, ಮುಂದೆ ಕಲ್ಕತ್ತ ವಿಶ್ವವಿದ್ಯಾನಿಲಯದಲ್ಲಿ ಗಣಿತಶಾಸ್ತ್ರದ ಅಧ್ಯಾಪಕರಾದರು. ಈಗ ಅಲ್ಲಿಯೇ ಪದಾರ್ಥವಿಜ್ಞಾನ ಶಾಖೆಯ ಮುಖ್ಯರಾಗಿದ್ದಾರೆ. ೧೯೧೯ ರಲ್ಲಿ ಸಾಹಾರವರು 'ವಿಸರಣದ ಒತ್ತಡ'ದ ಮೇಲೆ ಕೆಲಸಮಾಡಿ, ಒತ್ತಡವು ಪದಾರ್ಥದ ರಚನೆಯನ್ನವಲಂಬಿಸಿರುತ್ತದೆಂದು ಪ್ರತಿಪಾದಿಸಿದರು. ಅಂತರಿಕ್ಷದಲ್ಲಿಯ ಜ್ಯೋತಿಗಳ ಮೇಲೆ ಈ ಒತ್ತಡದ ಪರಿಣಾಮವು ಹೇಗಾಗುವುದೆಂಬುದನ್ನು ತಿಳುಹಿದರು. ೧೯೨೦ ರಲ್ಲಿ ಮಾಡಿದ ಇವರ ಸಂಶೋಧನೆಗಳು ಇವರಿಗೆ ಅಂತರ್‌ರಾಷ್ಟ್ರೀಯ ಕೀರ್ತಿಯನ್ನು ತಂದವು. ಅಂತರಿಕ್ಷದಲ್ಲಿಯ ಜ್ಯೋತಿಗಳು ಪ್ರಬಲ ಉಷ್ಣತೆಯಲ್ಲಿರುವ ಮೂಲಕ ಅವುಗಳ ಆವರಣವೆಲ್ಲವು ವಿದ್ಯುದಣುಗಳಿಂದ ತುಂಬಿರುತ್ತದೆಂದೂ ಕೇವಲ ಉಷ್ಣತೆಯಿಂದಲೇ ಅಣೂಕರಣವು ಶಕ್ಯವೆಂದೂ ಪ್ರತಿಪಾದಿಸಿದರು. ಬರ್ಲಿನ್ ವಿಶ್ವವಿದ್ಯಾನಿಲಯದಲ್ಲಿ ಪ್ರೊ. ನರ್ನಸ್ಟರವರು ತಮ್ಮ ಪ್ರಯೋಗಶಾಲೆಯಲ್ಲಿ 'ಸಾಹಾಸಿದ್ಧಾಂತ'ದ ಬಗ್ಗೆ ಬೇರೆ ಬೇರೆ ಪ್ರಯೋಗಗಳನ್ನು ಮಾಡಿ ತಮ್ಮ ಮನ್ನಣೆಯನ್ನು ಸಲ್ಲಿಸಿದರು. "ಗೆಲಿಲಿಯೋ ದೂರದರ್ಶಕದ ತರುವಾಯ ಖಗೋಲಶಾಸ್ತ್ರ, ಮತ್ತು ಖಗೋಲಿಕ ಪದಾರ್ಥವಿಜ್ಞಾನದಲ್ಲಿಯ ಹನ್ನೆರಡು ಮೊದಲನೆಯ ತರಗತಿಯ ಶೋಧನೆಗಳಲ್ಲಿ 'ಸಾಹಾಸಿದ್ಧಾಂತ' ಒಂದಾಗಿದೆ" ಎಂದು ಸರ್ ಆರ್ಥರ್ ಎಡಿಂಗ್ಟನ್ ಅವರು ಹೇಳಿದಾರೆ.

ಕಲ್ಕತ್ತ ವಿಶ್ವವಿದ್ಯಾನಿಲಯದಲ್ಲಿ 'ಸೈಕ್ಲೊಟ್ರಾನ್' ಎಂಬ ಸಲಕರಣೆಯನ್ನು ಕಟ್ಟಿ ಲೋಹಪರಿವರ್ತನೆಯ ಕೆಲಸದಲ್ಲಿ ಇಂದು ಡಾ. ಮೇಘನಾದರು ತೊಡಗಿದಾರೆ. ಪೌರ್ವಾತ್ಯ ದೇಶಗಳಲ್ಲಿ ಇಂತಹ ಸಲಕರಣೆ ಇದೊಂದೇ.

ಡಾ. ಸಾಹಾರವರ ಶಿಷ್ಯರಾದ ಡಾ. ಡಿ. ಎಸ್. ಕೋಠಾರಿಯವರು ನಕ್ಷತ್ರಗಳ ಅಂತರ್‌ರಚನೆಯ ಬಗ್ಗೆ ಮಹತ್ವದ ಸಂಶೋಧನೆಗಳನ್ನು ಮಾಡಿದ್ದಾರೆ. ಇವರ ಸಿದ್ಧಾಂತದ ಮೇರೆಗೆ ಗುರುವಿಗಿಂತಲು ದೊಡ್ಡ ಗ್ರಹವು ಇನ್ನಾವುದೂ ಇಲ್ಲವೆಂದು ಸಿದ್ಧವಾಗುವುದು.

ಪ್ರೊ. ಎಸ್. ಎನ್. ಬೋಸ, ಡಾ. ಎಸ್. ಕೆ. ಮಿತ್ರ, ಡಾ. ಎಂ. ಆರ್. ಸಿದ್ದೀಕಿ, ಡಾ. ಜೆ. ಎಚ್. ಭಾಭಾ, ಮುಂತಾದವರು ತಮ್ಮ ವಿವಿಧ ಸಂಶೋಧನೆಗಳಿಂದ ದೇಶಕ್ಕೆ ಕೀರ್ತಿಯನ್ನು ತಂದಿದ್ದಾರೆ. ಪದಾರ್ಥವಿಜ್ಞಾನದಲ್ಲಿ ಪ್ರಯೋಗದ ಭಾಗವೊಂದನ್ನು ಬಿಟ್ಟರೆ, ಸೈದ್ಧಾಂತಿಕ ಭಾಗದಲ್ಲಿಯೂ ಸಾಕಷ್ಟು ಕಾರ್ಯ ನಡೆದಿದೆ. ಪ್ರೊ. ಸತ್ಯೇಂದ್ರನಾಥ ಬೋಸರವರು ಈ ವಿಭಾಗದಲ್ಲಿ ಸಂಶೋಧನೆಗಳನ್ನು ಮಾಡಿ

'ಬೋಸ್-ಐನ್‌ಸ್ಟೀನ್ ಅಂಕಿಸಂಖ್ಯೆ' ಎಂಬ ಹೊಸ ವಿಷಯವನ್ನು ಆರಂಭಿಸಿದರು. ಡಾ. ಭಾಭಾರವರು 'ವಿಶ್ವಕಿರಣ' ಸಿದ್ಧಾಂತದಲ್ಲಿ ಸರಿಯಾದ ಮಾರ್ಪಾಟನ್ನು ಮಾಡಿ ತಮ್ಮ ವಯಸ್ಸಿನ ೩೨ನೆಯ ವರ್ಷದಲ್ಲಿಯೇ ರಾಯಲ್ ಸೊಸಾಯಟಿಯ ಸದಸ್ಯತ್ವದ ಮರ್ಯಾದೆಯನ್ನು ಪಡೆದಿದ್ದಾರೆ. ಡಾ. ಎಂ. ಆರ್. ಸಿದ್ದೀಕಿಯವರು ಜರ್ಮನಿಯ ಪ್ರೊ. ಹೈಸನ್‌ಬರ್ಗ್‌ರಲ್ಲಿ ಅಭ್ಯಾಸಮಾಡಿ 'ಕ್ವಾಂಟ್‌ಮ್' ಪದಾರ್ಥ ವಿಜ್ಞಾನಕ್ಕೆ ತಮ್ಮ ಸಂಶೋಧನೆಯ ಕಾಣಿಕೆಯನ್ನು ಸಲ್ಲಿಸಹತ್ತಿದಾರೆ. ಫೆಡರಲ್ ಕೋರ್ಟಿನ ನ್ಯಾಯಾಧೀಶರಾಗಿದ್ದ ದಿವಂಗತ ಸರ್ ಶಹಾ ಮಹಮದ ಸುಲೇಮಾನ ರವರು ಸೈದ್ಧಾಂತಿಕ ಪದಾರ್ಥವಿಜ್ಞಾನದಲ್ಲಿ ಸಂಶೋಧನೆಗಳನ್ನು ಮಾಡಿ ಗುರುತ್ವ ಶಕ್ತಿ ಮತ್ತು ವಿದ್ಯುಚ್ಛಕ್ತಿಯ ಏಕರೂಪತೆಯನ್ನು ತೋರಿಸುವ ಸಾಹಸಮಾಡಿದರು. ಅವರ ಸಿದ್ಧಾಂತಕ್ಕೆ ವೈಜ್ಞಾನಿಕ ಜಗತ್ತಿನ ಮನ್ನಣೆಯ ಸಿಗುವುದಕ್ಕೂ ಮೊದಲೇ ಸುಲೇಮಾನ್‌ರವರು ಪರಲೋಕವಾಸಿಗಳಾದುದು ದೇಶದ ದುರ್ದೈವವೇ ಸರಿ.

ಉಚ್ಚ ಗಣಿತಶಾಸ್ತ್ರದಲ್ಲಿ ಶ್ರೀನಿವಾಸ ರಾಮಾನುಜನ್ ಅವರ ಹೆಸರು ಕೇಳದವರಿಲ್ಲೆನ್ನಬಹುದು. ಕೆಂಬ್ರಿಜ್ ವಿಶ್ವವಿದ್ಯಾನಿಲಯದಲ್ಲಿ ಇವರ ಗುರುಗಳಾಗಿದ್ದ ಪ್ರೊ. ಹಾರ್ಡಿಯವರು ಇವರ ಬಗ್ಗೆ ಹೇಳುತ್ತ "Of his extraordinary gifts there can be no question. . . . I owe more to him than to anybody else in the world with one exception and my association with him is the one romantic incident in my life." ತೀರ ಚಿಕ್ಕ ವಯಸ್ಸಿನಲ್ಲಿಯೇ—ವಯಸ್ಸಿನ ೩೩ನೆಯ ವರ್ಷದಲ್ಲಿ—ಕಾಲವಶರಾದುದರಿಂದ ಭಾರತವು ತನ್ನ ಒಬ್ಬ ಪ್ರಚಂಡ ಮೇಧಾವಿಯನ್ನು ಕಳೆದುಕೊಂಡು ದುಃಖಪಡುವದರಲ್ಲಿ ಏನಾಶ್ಚರ್ಯ?

ಹಿಂದು ವಿಶ್ವವಿದ್ಯಾನಿಲಯದ ದಿವಂಗತ ಡಾ. ಗಣೇಶ ಪ್ರಸಾದರು, ಅವರ ಸ್ಥಾನದಲ್ಲಿಯೇ ಈಗ ಕೆಲಸ ಮಾಡುತ್ತಿರುವ ಡಾ. ನಾರಳಿಕರರು, ಮದ್ರಾಸ ವಿಶ್ವವಿದ್ಯಾನಿಲಯದ ಡಾ. ವೈದ್ಯನಾಥ ಸ್ವಾಮಿಯವರು ಗಣಿತಶಾಸ್ತ್ರದಲ್ಲಿ ಮಹತ್ವದ ಸಂಶೋಧನೆಗಳನ್ನು ಮಾಡಿದ್ದಾರೆ. ಪ್ರೊ. ಪಿ. ಸಿ. ಮಹಲಾನೊಬಿಸ್ ಮತ್ತು ಪ್ರೊ. ಕೆ. ಬಿ. ಮಾಧವ ಅವರು 'ಅಂಕಿಸಂಖ್ಯೆ'ಯ ಶಾಸ್ತ್ರಗಳಲ್ಲಿ ನಮ್ಮ ದೇಶದ ಪ್ರತಿನಿಧಿಗಳು.

ಸಸ್ಯಶಾಸ್ತ್ರ ವಿಭಾಗದಲ್ಲಿ ಡಾ. ಬೀರ್‌ಬಲ್ ಸಹಾನಿಯವರ ಹೆಸರು ಎದ್ದು ಕಾಣುತ್ತದೆ. ಇಂದಿನ ವರೆಗೆ ೧೦೦ ಕ್ಕಿಂತಲು ಹೆಚ್ಚು ಸಂಖ್ಯೆಯಲ್ಲಿ ಇವರ ಸಂಶೋಧನಾ ನಿಬಂಧಗಳು ಪ್ರಸಿದ್ಧ ವೈಜ್ಞಾನಿಕ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. 'ಉತ್ಖಾತ—ವನಸ್ಪತಿಶಾಸ್ತ್ರ'ದ ಮೇಲಣ ಇವರ ಪ್ರಭುತ್ವವನ್ನು ಗುರುತಿಸಿ, ವನಸ್ಪತಿಶಾಸ್ತ್ರಜ್ಞರ ಅಂತರ್‌ರಾಷ್ಟ್ರೀಯ ಪರಿಷತ್ತಿಗೆ ಎರಡು ಸಲ—೧೯೩೦ರಲ್ಲಿ

ಕೇಂಬ್ರಿಜ್‌ದಲ್ಲಿ, ೧೯೩೫ರಲ್ಲಿ ಅಮಸ್ಟರ್‌ಡಮ್‌ನಲ್ಲಿ—ಉಪಾಧ್ಯಕ್ಷರಾದರು. ಇವರ ಸಂಶೋಧನೆಗಳಲ್ಲಿ 'ನ್ಯೂಕಾಲಿಡೋನಿಯ ದೇಶದಲ್ಲಿಯ ಕೆಲವು ವನಸ್ಪತ್ಯಾವಶೇಷಗಳು' 'ಗೋಂಡವನ ಭೂಮಿಯಲ್ಲಿಯ ಅವಶೇಷ ಭೂತ ಮರಗಳು' ರಾಜಮಹಲ ಪರ್ವತದಲ್ಲಿಯ ಪ್ರಾಚೀನ ಸಬೀಜ ವನಸ್ಪತಿಗಳು, 'ದಕ್ಷಿಣದೇಶದ ಪರ್ವತಗಳ ವಯಸ್ಸು' 'ಸಸ್ಯಸೃಷ್ಟಿಯಲ್ಲಿಯ ಕ್ರಾಂತಿ' ಮುಂತಾದ ಹಲವಾರು ವಿಷಯಗಳು ಇವರ ಮೇಲ್ಮಟ್ಟದ ಸಂಶೋಧಕ ವೃತ್ತಿಯನ್ನು ಎತ್ತಿ ತೋರಿಸುತ್ತವೆ. ಹಿಂದುಸ್ತಾನದ ಸಸ್ಯ ಶಾಸ್ತ್ರಜ್ಞರಲ್ಲಿ ಇವರೊಬ್ಬರೇ ರಾಯಲ್ ಸೊಸಾಯಟಿಯ ಸದಸ್ಯರು. ಭಾರತೀಯ ಸಸ್ಯಶಾಸ್ತ್ರಜ್ಞರಲ್ಲಿ ಅಗ್ರಪೂಜೆಯ ಮಾನ ಇವರದೇ.[24]

ಕಲ್ಕತ್ತೆಯಲ್ಲಿ 'ಸ್ಕೂಲ ಆಫ್ ಟ್ರಾಪಿಕಲ್ ಮೆಡಿಸಿನ್' ಎಂಬ ಸಂಸ್ಥೆಯ ಸ್ಥಾಪನೆಯಿಂದ ಔಷಧಿ ಶಾಸ್ತ್ರದಲ್ಲಿ—ಸರ್ ಆರ್. ಎನ್. ಚೋಪ್ರಾ ಇವರ ನೇತೃತ್ವದಲ್ಲಿ—ಸಂಶೋಧನೆಗಳು ಭರದಿಂದ ಸಾಗಿವೆ. ಸಿಂಕೋನಾ ಕ್ಷಾರಕಗಳು, ಎಮಿಟೈನ್ ಆ್ಯಂಟಿಮನಿಯ ಸಾವಯವ ಸಂಯುಕ್ತಗಳು, ಭಾರತೀಯ ಆರ್ಟೆಮೆಸಿಯಾ ಮುಂತಾದವುಗಳ ಬಗ್ಗೆ—ವಿಶೇಷವಾಗಿ ಹಿಂದುಸ್ತಾನದಲ್ಲಿಯ ಔಷಧಿಗಳ ಬಗ್ಗೆ—ಉಪಯುಕ್ತ ಶೋಧನೆಗಳು ಹೊರಬಿದ್ದಿವೆ. ಭಾರತೀಯ ಔಷಧಿ ಶಾಸ್ತ್ರದ ವೈಜ್ಞಾನಿಕ ಪರಿಶೀಲನೆಯ ಕಾರ್ಯವೂ ನಡೆದಿದೆ.

ಡಾ. ವೈ. ಸುಬ್ಬರಾವ್ ಅವರು ಅಮೇರಿಕೆಯಲ್ಲಿ ಔಷಧಿ ಶಾಸ್ತ್ರದ 'ಲೆಡರ್ಲೆ ಕಂಪೆನಿ'ಯ ಸಂಶೋಧಕ ಪ್ರಮುಖರಾಗಿದ್ದುಕೊಂಡು 'ಪೆನಿಸಿಲಿನ್' ಎಂಬ ಮಹತ್ವದ ಔಷಧಿಯ ಬಗ್ಗೆ ಸಂಶೋಧನ ನಡೆಸಿದಾರೆ.[25]

ಕಳೆದ ೫೦ ವರ್ಷಗಳಲ್ಲಿ ವೈದ್ಯಶಾಸ್ತ್ರದಲ್ಲಿಯೂ ಧಾರಾಳವಾಗಿ ಸಂಶೋಧನೆಗಳು ನಡೆದು ಜನಸಾಮಾನ್ಯದ ಆರೋಗ್ಯರಕ್ಷಣೆಯ ಕಾರ್ಯವು ತಕ್ಕಮಟ್ಟಿಗೆ ನಡೆದಿದೆ. ಪ್ಲೇಗದ ಬೇನೆಯು ಹಿಂದುಸ್ಥಾನದಲ್ಲಿ ಪ್ರತಿ ವರ್ಷ ಒಂದುಲಕ್ಷ ಮನುಷ್ಯರ ಪ್ರಾಣಗಳನ್ನು ಆಹುತಿಯಾಗಿ ತೆಗೆದುಕೊಳ್ಳುತ್ತದೆ. ಮುಂಬಯಿಯ 'ಹಾಪ್ಕಿನ್ಸ್' ಸಂಸ್ಥೆಯಲ್ಲಿ ಡಾ. ನಾಯಿಡು ಮತ್ತು ಕರ್ನಲ್ ಸೊಖೆಯವರು 'Anti Plague Vaccine' ಎಂಬ ಮದ್ದನ್ನು ಸಿದ್ಧಪಡಿಸಿದಾರೆ. ಇದರ ಉಪಯೋಗದಿಂದ ಮೃತ್ಯುಸಂಖ್ಯೆ ಅರ್ಧಕ್ಕಿಂತಲು ಕಡಮೆಯಾಗಬಹುದೆಂದು ನಂಬಲಾಗಿದೆ.

೧೯೧೫ರಕ್ಕಿಂತ ಮೊದಲು ಬಂಗಾಲ ಮತ್ತು ಆಸಾಮ ಪ್ರಾಂತಗಳಲ್ಲಿ 'ಕಾಲಾ-ಅಜಾರ್' ಎಂಬ ರೋಗದಿಂದ ಬಹಳ ಹಾವಳಿಯಾಗಿ ರೋಗಪೀಡಿತರಲ್ಲಿ

---

[24] *Report, Madras Science Congress*, 1938.

[25] *Usowi*, Nov, 1943.

೧೦೦ಕ್ಕೆ ೯೫ ಜನ ಸಾಯುತ್ತಿದ್ದರು. ಸರ್ ಯು. ಎನ್. ಬ್ರಹ್ಮಚಾರಿಯವರು ಈ ರೋಗ ನಿವಾರಣೆಗಾಗಿ 'ಯೂರಿಯಾಸ್ಟೆಬ್ ಅಮೈನ್' ಎಂಬ ಔಷಧಿಯನ್ನು ಮೊದಲುಸಲ ಉಪಯೋಗಿಸಿ ಪ್ರಯೋಗಮಾಡಿದರು. ೧೯೩೩ರಲ್ಲಿ ಆಸಾಮ ಪ್ರಾಂತದ ಆರೋಗ್ಯಖಾತೆಯ ವರದಿಯಲ್ಲಿ "ಯೂರಿಯಾಸ್ಟೆಬ್ ಅಮೈನ್'ದ ಉಪಚಾರದಿಂದ ೩೨,೫೦೦ ಪ್ರಾಣಗಳು ಬದುಕಿದವು ಎಂದು ಉಲ್ಲೇಖವಿದೆ. ಇದುವೆ ಭಾರತೀಯ ವೈಜ್ಞಾನಿಕರ ಕಾರ್ಯವಿಸ್ತಾರದ ಸಂಕ್ಷಿಪ್ತ ಅವಲೋಕನ.

ವೈಜ್ಞಾನಿಕ ಸಂಶೋಧನೆಯ ಮುನ್ನೋಟ

೧೯೩೯ರ ಯುದ್ಧದ ಆರಂಭದಲ್ಲಿ ಹಿಂದುಸ್ತಾನದ ಮುಖ್ಯ ಸೇನಾಪತಿಗಳಾದ ಸರ್ ರಾಬರ್ಟ್ ಕ್ಯಾಸಲ್ಸರು ಹಿಂದುಸ್ತಾನವು ಒಳ್ಳೆಯ ಸೈನಿಕರನ್ನು ಕೊಡಬಹುದು. ಆದರೆ ಆಧುನಿಕ ಸೈನ್ಯದ ಯಾಂತ್ರಿಕ ಸಾಮಾಗ್ರಿಗಳನ್ನು ಮತ್ತು ಅವುಗಳನ್ನು ಕಟ್ಟುವುದಕ್ಕಾಗಿ ಯಂತ್ರಜ್ಞಾನವುಳ್ಳ ಜನರನ್ನು ಕೊಡಲಾರದೆಂದು ಹೇಳಿದರು. ಅದೇ ಕಾಲದಲ್ಲಿ ಕೇಂದ್ರ ಆಡಳಿತದ ವಾಣಿಜ್ಯಖಾತೆಯ ಅಧಿಕಾರಿಗಳು ತಮ್ಮ ಮಂತ್ರಿಗಳ ಮುಂದೆ, ಆಗ್ಗೆ ಇರುವ 'ವೈಜ್ಞಾನಿಕ ಸಂಶೋಧನಾ ಸಮಿತಿ'ಯನ್ನು ಹಣದ ಅಭಾವದ ಮೂಲಕ ತಗೆದುಬಿಡಬೇಕೆಂದು ಸೂಚನೆ ತಂದರು. ಮಂತ್ರಿಗಳಾದ ಮಾನ್ಯ ಸರ್ ಎ. ರಾಮಸ್ವಾಮಿ ಮೊದಲಿಯಾರರು 'ವೈಜ್ಞಾನಿಕ ಸಂಶೋಧನಾ' ಸಮಿತಿಯನ್ನು, 'ವೈಜ್ಞಾನಿಕ ಮತ್ತು ವ್ಯವಸಾಯ ಸಂಶೋಧನಾ ಸಮಿತಿಯಲ್ಲಿ' ಮಾರ್ಪಡಿಸಬೇಕೆಂದು ಅಪ್ಪಣೆ ಕೊಡಿಸಿ ನಾಡಿನ ಮೇಲೆ ದೊಡ್ಡ ಉಪಕಾರ ಮಾಡಿದರು. ೧೯೪೦ರ ಎಪ್ರಿಲ್ ತಿಂಗಳಲ್ಲಿ ಈ ಸಂಸ್ಥೆಯು ಜನ್ಮತಾಳಿತು. ಕೇಂದ್ರ ಸರಕಾರವು ವರ್ಷ ಒಂದಕ್ಕೆ ಹತ್ತುಲಕ್ಷ ರೂಪಾಯಿ ಧನಸಹಾಯವು ಈ ಸಮಿತಿಗೆ ಒದಗಿಸುತ್ತದೆ. ಇಲ್ಲಿಯ ವಿಶ್ವವಿದ್ಯಾನಿಲಯಗಳು, ತಾತಾ ಭೌತಶಾಸ್ತ್ರ ಮಂದಿರ, ಮತ್ತು ಬೋಸ ಸಂಶೋಧನಾ ಸಂಸ್ಥೆಯಂತಹ ದಾನ ನಿಧಿಯಿಂದ ನಡೆಯುವ ಸಂಸ್ಥೆಗಳು ಮತ್ತು ಕೇಂದ್ರ ಆಡಳಿತಕ್ಕೆ ಒಳಪಟ್ಟ ಸಂಶೋಧನ ಸಮಿತಿಗಳು, ಇವೆಲ್ಲ ದೇಶದಲ್ಲಿ ಬೇರೆ ಬೇರೆ ಸಂಶೋಧನೆಗಳಲ್ಲಿ ತೊಡಗಿವೆ. ಈ ಎಲ್ಲ ಸಂಸ್ಥೆಗಳಿಗಾಗಿ ಪ್ರತಿ ವರ್ಷ ೭೫ ಲಕ್ಷ ರೂಪಾಯಿಗಿಂತಲು ಹೆಚ್ಚು ಹಣ ಖರ್ಚಾಗುವುದಿಲ್ಲ. ರಶಿಯನ್ ಸರಕಾರವು ವಿವಿಧ ಸಂಶೋಧನೆಗಳ ಮೇಲೆ ತನ್ನ ವಾರ್ಷಿಕ ಉತ್ಪನ್ನದ ೧% ಹಣ ಅಂದರೆ ೧೦೦ ಕೋಟಿ ರುಬಲ್ಸ ವೆಚ್ಚಮಾಡುತ್ತದೆ. ರಶಿಯಾ ದೇಶದಲ್ಲಿ ೯೦೨ ಸಂಶೋಧನ ಸಂಸ್ಥೆಗಳಿದ್ದು ಒಟ್ಟು ೨೯,೦೦೦ ಸಂಶೋಧಕರು ದಿನಾ ಕೆಲಸ ನಡಸುತ್ತಾರೆ. ಅಮೇರಿಕಾ ದೇಶದಲ್ಲಿ ವಾರ್ಷಿಕ ಉತ್ಪನ್ನದ ೦.೩% ಹಣವು ಸಂಶೋಧನೆಗಾಗಿ

ವಿಸ್ತಾಸಲಾಗಿರುತ್ತದೆ. ಅಲ್ಲಿ ೭೦,೦೦೦ ಸಂಶೋಧಕರು ತಮ್ಮ ದೇಶದ ವೈಜ್ಞಾನಿಕ ಸಂಪತನ್ನು ಬೆಳೆಸಹತ್ತಿದ್ದಾರೆ. ಇಂಗ್ಲಂಡಿನಲ್ಲಿ ವೈದ್ಯಕೀಯ ವಿಭಾಗದ ಸಂಶೋಧನೆಗಳ ಮೇಲೆಯೇ ಪ್ರತಿ ವರ್ಷ ೫೦ ಲಕ್ಷ ಪೌಂಡು ಹಣ ವೆಚ್ಚ ಮಾಡುತ್ತಾರೆ. ಈ ಅಂಕಿಸಂಖ್ಯೆಗಳೆಲ್ಲಿ, ಹಿಂದುಸ್ಥಾನದಲ್ಲಿ ಸಂಶೋಧನೆಗಾಗಿ ವೆಚ್ಚಾಗುವ ಹಣದ ಪ್ರಮಾಣವೆಲ್ಲಿ!

[26]ದೇಶದ ಯುದ್ಧೋತ್ತರ ರಚನೆಯ ಕಾಲಕ್ಕೆ ಇಂಗ್ಲಂಡಿನಲ್ಲಿ ಮನೆಗಳನ್ನು ಕಟ್ಟುವ ಕಾರ್ಯದ ಸಂಶೋಧನೆಗಾಗಿ ಮುಂಬರುವ ಇಪ್ಪತ್ತು ವರ್ಷಗಳಲ್ಲಿ ೨,೬೦೦ ಕೋಟಿ ರೂಪಾಯಿ ವೆಚ್ಚ ಮಾಡಲಿದಾರೆ. ಲಾರ್ಡ್ ಹೇಲೆಯವರ ಅಧ್ಯಕ್ಷತೆಯಲ್ಲಿ ಬ್ರಿಟಿಷ ವಸಾಹತುಗಳಿಗಾಗಿ ಒಂದು ಸಂಶೋಧನ ಸಮಿತಿಯನ್ನು ನೇಮಿಸಲಾಗಿದೆ. ಸಂಶೋಧಕರು ಯುದ್ಧದ ಕೆಲಸದಿಂದ ಬಿಡುಗಡೆ ಹೊಂದಿದ ಮೇಲೆ, ಈ ಸಮಿತಿಯವರು ಪ್ರತಿವರ್ಷ ೫ ಲಕ್ಷ ಪೌಂಡು ಹಣ ವೆಚ್ಚ ಮಾಡುವವರಿದಾರೆ. ಬ್ರಿಟಿಷ್ ಕಾಲನಿಗಳಲ್ಲಿ ೬ ಕೋಟಿ ಜನರಿದ್ದಾರೆ. ಆದುದರಿಂದ ವೆಚ್ಚವಾಗಲಿರುವ ಈ ಹಣವು ತಲೆಯೊಂದಕ್ಕೆ ೧ ಅಥವಾ ೨ ಆಣೆಗಿಂತಲು ಹೆಚ್ಚಾಗುವುದಿಲ್ಲ. ಹಿಂದುಸ್ಥಾನದಲ್ಲಿ ವೆಚ್ಚಾಗುವ ಹಣವು ತಲೆಯೊಂದಕ್ಕೆ ಒಂದಾಣೆಯ ೧/೨೫ ರಷ್ಟು ಕೂಡ ಬೀಳುವುದಿಲ್ಲ. ರಾಯಲ್ ಸುಸಾಯಟಿಯ ಕಾರ್ಯದರ್ಶಿಗಳಾದ ಪ್ರೊ. ಎ. ವಿ. ಹಿಲ್ಲರು ಹಿಂದುಸ್ಥಾನದ ವಾರ್ಷಿಕ ಉತ್ಪನ್ನದ ೧% ಹಣವನ್ನು ವೈಜ್ಞಾನಿಕ ಸಂಶೋಧನೆಯಲ್ಲಿ ಉಪಯೋಗಿಸಬೇಕೆಂದು ಕೇಂದ್ರ ಸರಕಾರಕ್ಕೆ ಸೂಕ್ತ ಸಲಹೆಯನ್ನು ಕೊಟ್ಟಿದ್ದಾರೆ. ವಾರ್ಷಿಕ ಹಣ ಕಾಸಿನ ಅಂದಾಜ ಪತ್ರಿಕೆಯಲ್ಲಿ ತೋರಿಸಿದಂತೆ ೬೦೦ ಕೋಟಿ ರೂಪಾಯಿಯ ೧% ಅಂದರೆ ೬ ಕೋಟಿ ರೂಪಾಯಿ ಭಾರತದಂತಹ ದೊಡ್ಡ ರಾಷ್ಟ್ರದಲ್ಲಿ ಸಂಶೋಧನೆಗಾಗಿ ವೆಚ್ಚ ಮಾಡುವುದು ಹೆಚ್ಚೇನೂ ಅಲ್ಲ.

ಪದ್ಮನಾಭ ಪುರಾಣಿಕ.

ಪಾರಿಭಾಷಿಕ ಶಬ್ದಗಳು

೧. ಅನೂಕರಣ = Ionization
೨. ಅಸಮಪ್ರಮಾಣ = Assymetrical
೩. ಉತ್ಖಾತ ವನಸ್ಪತಿಶಾಸ್ತ್ರ = Fossil Botany
೪. ಕಲಿಲ = Colloids
೫. ಖಗೋಲಿಕ ಪದಾರ್ಥವಿಜ್ಞಾನ = Astrophysics
೬. ಚದರುವಿಕೆ = Scattering

[26] *Science and Culture*, Vol. IX, 6.

೭. ಬೋಸ್ ಐನ್‌ಸ್ಟೀನ ಅಂಕಿಸಂಖ್ಯೆ = Bose-Eienstien's Statistics
೮. ರಾಮನ್ ಪರಿಣಾಮ = Raman Effect
೯. ವಿದ್ಯುತ್ ರಸಾಯನ = Electrolytes
೧೦. ವಿಭಜನೆ = Dissociation
೧೧. ವಿಸರಣದ ಒತ್ತಡ = Radiation Pressure
೧೨. ಸ್ಥಿರೀಕರಣ = Fixation

ಹಿಂದುದೇಶದ ರಾಜಕೀಯ ಚಿತ್ರ

೧೯೨೦-೧೯೪೫

೧

ಪ್ರವೇಶ—ಭರತದೇಶಕ್ಕೆ ಇಪ್ಪತ್ತನೆಯ ತತಮಾನವು ಬಹು ಆಶಾದಾಯಕವಾಗಿ ಉದಯವಾಯಿತು. ನಾಡಿನ ಮುಖಂಡರು ಶಾಂತಿಯಿಂದ ಮೃದುವಾದ ರೀತಿಯಲ್ಲಿ ತಮ್ಮ ಗುರಿಯನ್ನು ಸಾಧಿಸಲು ಯತ್ನಿಸಿದರು. ಕರ್ಝನ್ ದೊರೆಯ ವಂಗ ವಿಭಜನೆಯು ಒಂದು ಚಂಡಮಾರುತವಾಗಿ ಪರಿಣಮಿಸಿತು. ನಮ್ಮ ದೇಶೀಯರ ರೀತಿ ನೀತಿಗಳು ಮಾರ್ಪಟ್ಟು ಹೊಸ ಕ್ರಾಂತಿಯು ಉತ್ಪನ್ನವಾಯಿತು. "ಅಸಹಕಾರ" "ಬಹಿಷ್ಕಾರ" ಮುಂತಾದ ಶಬ್ದಗಳು ದೇಶದಲ್ಲಿ ಕೇಳಿಸಿದವು. ಮಿಂಟೋ—ಮಾರ್ಲೆ (೧೯೦೮) ಸುಧಾರಣೆಗಳು ಜನರ ಉದ್ರೇಕವನ್ನು ಸ್ವಲ್ಪಮಟ್ಟಿಗೆ ತಗ್ಗಿಸಿದರೂ ಈ ಕಾನೂನಿನ ಫಲವಾಗಿ ರಾಜ್ಯಾಂಗದಲ್ಲಿ ಕೋಮುವಾರು ಪ್ರಾತಿನಿಧ್ಯ ವಿಧಾನ ಏರ್ಪಟ್ಟು ದೇಶದ ಐಕ್ಯಕ್ಕೆ ಭಂಗ ಮೊದಲಾಯಿತು.

೧೯೧೪-೧೮ನೆಯ ಘೋರ ಯುದ್ಧವು ಭಾರತದೇಶದ ನೆಮ್ಮದಿಯನ್ನು ಕದಡಿ ಜನರಲ್ಲಿ ಸ್ವರಾಜ್ಯದ ಆಶೆಯನ್ನು ಬೀರಿತು. ಲೋಕಮಾನ್ಯ ತಿಲಕರು ತಮ್ಮ ಕಾರಾಗೃಹದ ಅನುಭವಗಳನ್ನು ಬದಿಗೊತ್ತಿ, ಸರ್ಕಾರದೊಂದಿಗೆ ಸಹಕರಿಸಲು ಸಿದ್ಧರಾದರು; ಜನಗಳನ್ನು ಯುದ್ಧದ ಕೆಲಸಕ್ಕೆ ಸೇರಿಸುವ ರೆಕ್ರೂಟಿಂಗ್ ಆಫೀಸರಂತೆ ಓಡಿಯಾಡಿದರು. ಮಹಾತ್ಮಾ ಗಾಂಧೀಜಿಯವರು ವೈದ್ಯದ ಒಂದು ಶಾಖೆಯನ್ನು ನಿರ್ಮಾಣಮಾಡಿ ಆಳರಸರ ಸಹಾಯಕ್ಕೆ ನಿಂತರು. ಆದರೆ ಇವರ ಹಂಗು ಅರಸುಗಳಿಗೆ ಬೇಕಾಗಿರಲಿಲ್ಲ—ಸ್ವಾತಂತ್ರ್ಯಪ್ರೇಮ, ಭಾರತೀಯರನ್ನು ಬಲವಾಗಿ ಪೀಡಿಸಿತು. ೧೯೧೬ರಲ್ಲಿ ಆನ್ನೀ ಬೆಸಂಟರು 'ಹೋಮ್‌ರೂಲ್ ಸಂಘವನ್ನು ಸ್ಥಾಪಿಸಿ ಜನರಲ್ಲಿ ಹೊಸ ಹುರುಪಿನ ಉತ್ಸಾಹದ, ಆಶಾಯುಕ್ತವಾದ ಚೈತನ್ಯವನ್ನು ನೆಟ್ಟರು. ಅದೇ ವರ್ಷ ಲಕ್ನೋ ನಗರದಲ್ಲಿ ನಡೆದ ಕಾಂಗ್ರೆಸ್ಸಿನ ಸಮಯ ಮುಸಲ್ಮಾನರನ್ನು ಒಲಿಸಿ, ಅವರ ವಿಶೇಷ ಬೇಡಿಕೆಗಳನ್ನು ಕೊಟ್ಟು, ಸ್ವರಾಜ್ಯದ ಹೋರಾಟಕ್ಕೆ ಮುಸಲ್ಮಾನರನ್ನೂ ಎಳೆದು ತಂದರು.

ಆಗಿನ ಯುದ್ಧಕಾರ್ಯದಲ್ಲಿ ಹಿಂದುದೇಶದವರು ಏಕಮನಸ್ಕರಾಗಿ ತಮ್ಮ ಧನ, ಮನ, ಜೀವನವನ್ನು ರಾಜಕಾರ್ಯಕ್ಕೆ ಅರ್ಪಿಸಿ ರಾಜರ ಮೆಚ್ಚಿಕೆಯನ್ನು ಪಡೆದರು.

ಇವರ ಸಹಾಯಕ್ಕೆ ತಕ್ಕ ಪ್ರತಿಫಲವೋ ಎಂಬಂತೆ ೧೯೧೯ರಲ್ಲಿ ಮಾಂಟೆಗ್ಯೂ—ಚೆಲ್ಮ್ಸ್‌ಫರ್ಡ್ ಸುಧಾರಣೆಗಳು ಭಾರತಕ್ಕೆ ಬಂದುವು. ರಾಜ್ಯದ ಘಟನೆಗಳು ಬದಲಾದುವು. ಕೇಂದ್ರ ಮತ್ತು ಪ್ರಾಂತದ ಕಾಯಿದೆ ಮಂಡಲಗಳಲ್ಲಿ ಜನರ ಪ್ರತಿನಿಧಿಗಳ ಸಂಖ್ಯೆಯು ಹೆಚ್ಚಿತು. ರಾಜ್ಯಾಡಳಿತದ ಮುಖ್ಯ ಭಾಗಗಳು ಬ್ರಿಟಿಷ್ ಸರ್ಕಾರದ ಅಧಿಕಾರಿಗಳ ಕೈಗೂ ಅಮುಖ್ಯ ಭಾಗಗಳು ಭಾರತೀಯ ಮಂತ್ರಿಗಳ ವಶಕ್ಕೂ ನಿಲ್ಲುವಂತಹ ನಿರ್ಣಯವಾಯಿತು. ಇದನ್ನೇ ಡೈಯಾರ್ಕಿ (Dyarchy) ಎನ್ನುವರು.

ಈ ಸುಧಾರಣೆಗಳು ವಿಷಲಗ್ನದಲ್ಲಿ ಹುಟ್ಟಿದುವು. ಇದರ ಪೂರ್ವ 'ರೌಲತ್ ಆಕ್ಟ್' ಜಾರಿಯಾಗಿ ಜನರ ಮನಸ್ಸು ಉದ್ರೇಕಗೊಂಡಿತ್ತು. ಹಿಂದೂಗಳಿಗೆ ಕೇವಲ ಅವಮಾನಕರವೆಂದು ಭಾವಿಸಿ ಮಹಾತ್ಮರು ಆ ಕಾನೂನನ್ನು ವಿರೋಧಿಸಿ ಸತ್ಯಾಗ್ರಹ ಶಸ್ತ್ರವನ್ನು ಪ್ರಯೋಗಮಾಡಿದರು. ಅವರ ತತ್ವವನ್ನರಿಯದ ಜನರು ದಂಗೆಯೆದ್ದರು. ಅಮೃತಸರದಲ್ಲಿನ ಪೋಸ್ಟ್ ಆಫೀಸ್, ಪೊಲೀಸ್ ಸ್ಟೇಷನ್, ರೈಲ್ವೆ ಸ್ಟೇಷನ್, ಮತ್ತು ಇತರ ಕಟ್ಟಡಗಳು ಕೋಪಗೊಂಡ ಜನರಿಂದ ಅಗ್ನಿದೇವನಿಗೆ ಆಹುತಿಯಾದವು. ಜಾಲಿಯನ್‌ವಾಲಾ ಬಾಗಿನಲ್ಲಿ ಸಾವಿರಾರು ಜನ ಜನರಲ್ ಡೈಯರವರ ಗುಂಡಿನ ಏಟಿಗೆ ಗುರಿಯಾದರು. ತರುವಾಯ ದಂಡನಾಳಿಕೆಯಿಂದ ಜನರು ಬಹಳವಾಗಿ ಅವಮಾನಕ್ಕೂ ತೊಂದರೆಗಳಿಗೂ ಈಡಾಗಿ ಬಳಲಿದರು. ಪ್ರಜೆಗಳ ಕೋಪವು ಮಿತಿಮೀರಿತ್ತಾದರೂ ಅದು ದುರ್ಬಲರ ಕೋಪ.

೨

೧೯೨೦ ರಲ್ಲಿ ಖಿಲಾಫತ್‌ಪ್ರಕರಣವು ಹುಟ್ಟಿ ಹಿಂದೂ ಮುಸಲ್ಮಾನರು ಒಮ್ಮೆ ಒಂದಾಗುವ ಸಂಭವವು ತಲೆದೋರಿತು. ತುರ್ಕಿಸ್ಥಾನವನ್ನು ಐರೋಪ್ಯ ಜನರು ಚೂರು ಚೂರಾಗಿ ಹರಿಯಲು ಉಪಕ್ರಮಿಸಿದರು. ಇದನ್ನು ತಡೆದು ತುರ್ಕಿಯ ಸ್ವಾಧೀನವನ್ನು ಉಳಿಸಲು ಖಿಲಾಫತ್ ಚಳುವಳಿಯನ್ನು ಭಾರತೀಯರು ಕೈಕೊಂಡರು. ಹಿಂದೂ ಮುಸಲ್ಮಾನರು ಕೂಡಿ ಸರ್ಕಾರದೊಡನೆ ಅಸಹಕಾರ ಮಾಡಿದರು. ಇವರ ಕೂಗು ವಿಲಾಯತಿಯವರೆಗೂ ಕೇಳಿತು. ಆದರೆ ತುರ್ಕಿಯೇ ಮುಸ್ತಫಾ ಕೆಮಾಲ್ ಪಾಷಾ ಅವರ ನಾಯಕತ್ವದಲ್ಲಿ ತನ್ನ ಆತ್ಮಬಲ ಸಾಹಸದಿಂದ ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಂಡು, ಬಲಪ್ರಯೋಗದಿಂದ ಅನ್ಯರನ್ನು ತನ್ನ ದೇಶದಿಂದ ಓಡುವಂತೆ ಮಾಡಿತು. ಇದರ ಪರಿಣಾಮ—ಇಲ್ಲಿ ರಾಜರಿಗೂ ಭಾರತೀಯರಿಗೂ ಇದ್ದ ಅಂತರ ಮತ್ತಷ್ಟು ಹೆಚ್ಚಿತು.

ಪರಸ್ಪರ ದ್ವೇಷಗಳನ್ನು ತಗ್ಗಿಸಿ, ಮೈತ್ರಿಯನ್ನು ಬೀರಲು, ೧೯೨೧ ರಲ್ಲಿ ಡ್ಯೂಕ್ ಆಫ್ ಕನ್ನಾಟ್ ಅವರು ಹೊಸ ಸುಧಾರಣೆಯ ಪ್ರಾರಂಭೋತ್ಸವದಲ್ಲಿ ಪಂಜಾಬಿನ ದುರಂತ ಪ್ರಕರಣಕ್ಕೆ ತಮ್ಮ ಅನುತಾಪವನ್ನು ಸೂಚಿಸಿ, ಅದನ್ನು

ಮರೆತು ರಾಜರೊಡನೆ ಸೌಹಾರ್ದದಿಂದ ವರ್ತಿಸಬೇಕೆಂದು ಭಾರತೀಯರಲ್ಲಿ ಪ್ರಾರ್ಥನೆಯನ್ನು ಮಾಡಿದರು. ಹಂಟರ್ ಕಮಿಟಿಯವರೂ ಡೈಯರನ್ನು ಖಂಡಿಸಿದರು. ಆದರೆ ಇಂಗ್ಲಂಡಿನ ಮುಖಂಡರನೇಕರು ಡೈಯರಿಗೆ ಬೆನ್ನುತಟ್ಟಿ ಪುರಸ್ಕರಿಸಿದರು. ಇದರಿಂದ ಹಿಂದುಸ್ತಾನದವರ ಅಸಮಾಧಾನವು ಮತ್ತಷ್ಟು ಉದ್ದೀಪ್ತವಾಯಿತು. ಅದೇ ವರ್ಷ ಬ್ರಿಟನಿನ ಯುವರಾಜರು ಭಾರತ-ದೇಶಕ್ಕೆ ಬಿಜಯ ಮಾಡಿದರು. ಮುಖ್ಯ ನಗರಗಳಲ್ಲಿ ಹರತಾಳವಿದ್ದುದರಿಂದ ಜನರು ಅವರನ್ನು ಆದರಿಸಲಿಲ್ಲ. ಈ ಮಧ್ಯೆ ಕೆಲವೆಡೆಗಳಲ್ಲಿ ಹಿಂದೂ ಮುಸಲ್ಮಾನರ ತಿಕ್ಕಾಟ ನಡೆಯಿತು. ಮಲೆಯಾಳದಲ್ಲಿ ಮಾಪಿಳ್ಳೆಗಳು ದಂಗೆಯೆದ್ದು ಸಾವಿರಾರು ಹಿಂದೂಗಳು ಕೆಟ್ಟರು. ಈ ಎಲ್ಲ ಸಂಗತಿಗಳಿಂದ ದೇಶದ ಐಕ್ಯವು ಸ್ವಪ್ನವೆಂದು ಭಾಸವಾಯಿತು.

ದೇಶದ ನಾನಾ ಭಾಗಗಳಲ್ಲಿ ಹರತಾಳ, ಅಸಹಕಾರಗಳಿಗೆ ಪ್ರತಿಯಾಗಿ ಸರಕಾರವು ಕಾರ್ಯಕ್ರಮ ಕೈಕೊಂಡಿತು. ಲಾಠೀಪ್ರಹಾರ, ಜೈಲಿನ ವಾಸ ಇವನ್ನು ಪ್ರಜೆಗಳು ಅನುಭವಿಸಬೇಕಾಯಿತು. ಇದರ ನಡುವೆ ಚೌರಿ ಚೌರಾದಲ್ಲಿ ಸತ್ಯಾಗ್ರಹಿಗಳು ನಡಸಿದ ಕ್ರೂರ ಕೃತ್ಯಗಳು ಮಹಾತ್ಮರನ್ನು ಎಚ್ಚರಗೊಳಿಸಿದವು. ಹಿಂದುಸ್ತಾನದವರು ಸತ್ಯಾಗ್ರಹದ ತತ್ವವನ್ನು ಸರಿಯಾಗಿ ಅರಿತಿಲ್ಲವೆಂದು, ತಮ್ಮ ಸತ್ಯಾಗ್ರಹವನ್ನು ಉಪಸಂಹಾರ ಮಾಡಿದರು. ಅನುಯಾಯಿಗಳ ಪಾಪಕೃತ್ಯಕ್ಕೆ ಪ್ರಾಯಶ್ಚಿತ್ತರೂಪವಾಗಿ ತಾವೇ ಉಪವಾಸವನ್ನು ಕೈಗೊಂಡರು.

ಭಾರತದ ಚರಿತ್ರೆಯಲ್ಲಿ ಈಗಿನ ಕಾಲವನ್ನು ಗಾಂಧೀ ಯುಗವೆಂದು ಕರೆಯುವುದು ಸಹಜ. ಗೋಖಲೆ (೧೯೧೫) ತಿಲಕರ (೧೯೩೦) ಮರಣಾನಂತರ ಇಡಿಯ ಭರತಖಂಡದಲ್ಲಿ ಸರ್ವರಿಂದಲೂ ಮಾನ್ಯವಾದ ವ್ಯಕ್ತಿಯೆಂದರೆ ಮೋಹನದಾಸ್ ಕರಮಚಂದ್ ಗಾಂಧೀಯವರೇ. ರಾಜಕೀಯ ಸಾಮಾಜಿಕ ಸಮಸ್ಯೆಗಳಲ್ಲಿ ಗಾಂಧೀಯವರ ವರ್ಚಸ್ಸು ಸ್ಪಷ್ಟವಾಗಿ ಕಂಡುಬರುವುದು. ದುರ್ಭಾಗ್ಯರಾದ ನಮ್ಮ ಹಳ್ಳಿಯ ಜನಗಳು ಉದ್ಧಾರವಾಗಲು ತಮ್ಮ ಸರ್ವಸ್ವವನ್ನೂ ಪೂರ್ಣವಾಗಿ ವಿನಿಯೋಗಿಸಿದವರಲ್ಲಿ ಇವರೇ ಅಗ್ರಗಣ್ಯರು. ಇದಕ್ಕೆ ಪ್ರತಿಯಾಗಿ ಭಾರತೀಯರು ಗಾಂಧೀಯವರನ್ನು ಅವತಾರಪುರುಷರೆಂದು ಭಾವಿಸಿರುವುದು ಸಹಜವೇ. ಇವರ ನೇತೃತ್ವದಲ್ಲಿ ೧೯೨೧ ನೆಯ ಸತ್ಯಾಗ್ರಹದ ಪ್ರಯೋಗವು ಭರತಖಂಡದಲ್ಲಿ ಮೊತ್ತಮೊದಲು ಜರುಗಿತು. ಆದರೆ ಯಶಸ್ವಿಯಾಗಲಿಲ್ಲ. ಸಾಮಾನ್ಯ ಜನರಲ್ಲಿ ಮಹಾತ್ಮರ ರೀತಿನೀತಿಗಳು ಹೇಗೆ ಬಂದಾವು ?

ವೈಸರಾಯಿ ಲಾರ್ಡ್ ರೀಡಿಂಗ್‌ರು ಅಸಹಕಾರ ಚಳುವಳಿಯನ್ನು ಅಡಗಿಸುವ ಉದ್ಯೋಗವನ್ನು ಕೈಗೊಂಡರು. ಸಾವಿರಾರು ಜನ ನಿರ್ಬಂಧಕ್ಕೊಳಗಾದರು. ಲಾಠೀ

ಪೆಟ್ಟಿಗೆ ಗುರಿಯಾದರು. ಆದರೂ ಸಾಮಾನ್ಯ ಜನರ ಉತ್ಸಾಹವೇನೂ ಕುಂದಲಿಲ್ಲ. ಅನೇಕರು ತಮ್ಮ ಪದವಿ, ಬಿರುದುಗಳನ್ನು ತ್ಯಜಿಸಿದರು. ವಕೀಲರು ಕಚೇರಿಗೆ ಬಹಿಷ್ಕಾರವಿತ್ತರು, ಪರದೇಶೀಯ ವಸ್ತ್ರಗಳನ್ನು ಸುಟ್ಟರು. ಈ ತ್ಯಾಗ, ಸತ್ಯಾಗ್ರಹ, ಲಾಠೀ ಪ್ರಹಾರಗಳನ್ನು ಎದುರಿಸಿದವರು ಬಹುಶಃ ಹಿಂದೂಗಳೆ! ತಮ್ಮ ಅನುಯಾಯಿಗಳ ಕ್ರೌರ್ಯವನ್ನು ಕಂಡು ಮಹಾತ್ಮರು ಸತ್ಯಾಗ್ರಹವನ್ನು ಮುಕ್ತಾಯಗೊಳಿಸಿದರು.

ಇಷ್ಟರಲ್ಲಿ ಕಾಂಗ್ರೆಸ್ಸಿನಲ್ಲಿ ಮತಭೇದ ಹುಟ್ಟಿತು. ಗಾಂಧೀಜಿಯವರ ಅಸಹಕಾರ ಮಾರ್ಗವು ದೇಶಕ್ಕೆ ಅನರ್ಥಕಾರಿಯೆಂದು ಚಿತ್ತರಂಜನ ದಾಸ್, ಮೋತಿಲಾಲ್ ನೆಹರು ಮುಂತಾದವರು ಕಾಯಿದೆ ಮಂಡಲವನ್ನು ಪ್ರವೇಶಮಾಡಿದರು! ಮುಸಲ್ಮಾನರು ಕಾಂಗ್ರೆಸ್ಸಿನಿಂದ ಹೊರಗೆ ಬಂದರು. ೧೯೨೨, ೧೯೩೧ರಲ್ಲಿ ಹಿಂದು ಮುಸಲ್ಮಾನರ ಘರ್ಷಣೆಯಿಂದ ಸಾವಿರಾರು ಜನ ಮಡಿದರು. ಕಾಂಗ್ರೆಸ್ಸಿನ ಮಹತ್ವವು ಸೊರಗಿದಂತೆ ತೋರಿತು.

೧೯೨೬ರಲ್ಲಿ ಲಾರ್ಡ್ ಅರ್ವಿನರು ವೈಸರಾಯಾದರು. ಮರುವರ್ಷ ಭಾರತೀಯರ ರಾಜಕೀಯ ಅರ್ಹತೆಯನ್ನು ಪರಿಗಣಿಸಲೆಂದು ಸೈಮನ್ ಸದಸ್ಯರು ಇಲ್ಲಿಗೆ ಬಂದರು. ಈ ಕಮಿಷನ್ನಿನಲ್ಲಿ ಭಾರತೀಯರು ಯಾರೂ ಇಲ್ಲವೆಂದು, ಸರ್ವಪಕ್ಷಗಳಿಂದಲೂ ಇವರು ಬಹಿಷ್ಕೃತರಾದರು. ಹರತಾಳ, ಸೆರೆವಾಸ, ಲಾಠೀಪ್ರಹಾರಗಳು ದೇಶದಲ್ಲಿ ಪುನಃ ತಾವೇ ತಾವು. ಈ ಆಡಳಿತವು ವೈಸರಾಯರ ಮನಸ್ಸಿಗೆ ಅಸಹ್ಯವಾಗಿ, ಇಂಗ್ಲಂಡಿನ ಅಧಿಕಾರಿಗಳನ್ನು ಒತ್ತಾಯಪಡಿಸಿ ರಾಜನೀತಿಯಲ್ಲಿ ಹೊಸ ದಾರಿ ಹಿಡಿಯಬೇಕೆಂದು ಸಲಹೆಕೊಟ್ಟರು. Dominion Status ಎಂಬ ಬಗೆಯ ವಸಾಹತಿನ ಸ್ವರಾಜ್ಯವೇ ಭಾರತೀಯ ರಾಜ್ಯದ ಗುರಿಯೆಂದೂ, ಹೊಸದಾಗಿ ಬರಲಿರುವ ರಾಜ್ಯಘಟನೆಗಳಲ್ಲಿ ಭಾರತೀಯರ ಸಲಹೆಗಳು ಅವಶ್ಯವಾಗಿ ಕೇಳಲ್ಪಡುವವೆಂದೂ ಘೋಷಣೆ ಮಾಡಿದರು. ಕೂಡಲೆ ನಮ್ಮ ಮುಖಂಡರನ್ನು ಭೇಟಿಮಾಡಿದರು. ಸ್ವರಾಜ್ಯವನ್ನು ಮರುಕ್ಷಣವೆ ಕೊಟ್ಟರೆ ತಾವು ಸಹಕರಿಸುವರೆಂದು ಕೇಳಿ, ನಿರಾಶರಾಗಿ, ಗಾಂಧೀಜಿ, ನೆಹರುಗಳು ತಿರುಗಿ ಬಂದು ಆವೇಶದೊಡನೆ ಸತ್ಯಾಗ್ರಹವನ್ನು ಹೂಡಿದರು. (೧೯೩೦) ಇದನ್ನು 'ಉಪ್ಪಿನ—ಸತ್ಯಾಗ್ರಹ'ವೆನ್ನುವರು. ಕಾನೂನು ಭಂಗವನ್ನು ಜನರು ಬಹು ಉತ್ಸಾಹದಿಂದ ನಡಸಿದರು. ಆಬಾಲವೃದ್ಧರು ಜೈಲು, ಲಾಠಿಗಳ ರುಚಿ ನೋಡಿದರು. ಅನೇಕ ಸ್ಥಳಗಳಲ್ಲಿ ಗುಂಡುಗಳ ಪ್ರಯೋಗವಾದವು. ಸಾಮಾನ್ಯರ ಉತ್ಸಾಹವು ಮಿತಿಮೀರಿತು. ಈ ವಿಧವಾದ ರಾಜ್ಯಭಾರವು ಅರ್ವಿನ್ ದೊರೆಗೆ ಸಮ್ಮತವಿರಲಿಲ್ಲ. ೧೯೩೧ರಲ್ಲಿ ಅವರು ಮಹಾತ್ಮರೊಡನೆ ಸಂಧಾನಮಾಡಿದ ಫಲವಾಗಿ ಅವರಿಬ್ಬರಿಗೂ ಒಂದು ಒಪ್ಪಂದವಾಯಿತು. ಸತ್ಯಾಗ್ರಹ ಮುಕ್ತಾಯಗೊಂಡಿತು.

ರಾಜಕೀಯಸ್ಥಿತಿ ಉತ್ತಮಪಡಿಸಲು ಪ್ರತಿನಿಧಿಗಳ ಚಕ್ರಗೋಷ್ಠಿ ಕರೆಯಲಾಗುವುದೆಂದೂ ಅಲ್ಲಿ—ತೀರ್ಮಾನವಾದಂತೆ ರಾಜ್ಯಾಂಗ ವ್ಯವಸ್ಥೆಮಾಡಲಾಗುವುದೆಂದೂ ಘೋಷಿಸಿ ಚಕ್ರಗೋಷ್ಠಿಯನ್ನು ನೆರಸಿದರು. ಚಕ್ರಗೋಷ್ಠಿಗೆ ಹೋಗಿ ಭಾಗವಹಿಸಲು ಗಾಂಧೀಜಿಯವರು ಕೂಡ ಒಪ್ಪಿದರು.

ಅತ್ತ ಲಂಡನ್ ನಗರದಲ್ಲಿ ಒಂದನೆಯ ದುಂಡು ಮೇಜಿನ ಪರಿಷತ್ತು ಜರುಗಿತು (೧೯೩೦). ಇದರ ಫಲವಾಗಿ ಹಿಂದುಸ್ತಾನಕ್ಕೆ ವಸಾಹತಿನ ಸ್ವರಾಜ್ಯವು ಕೊಡಲ್ಪಡುವುದೆಂದು ಪ್ರಧಾನಿ ರ್ಯಾಮ್ಸೆ ಮೆಕ್ಡಾನಲ್ಡ್ ಅವರು ಹೇಳಿದರು. ಎರಡನೆಯ ಗೋಷ್ಠಿ ೧೯೩೧ರಲ್ಲಿ ನಡೆದಾಗ ಕಾಂಗ್ರೆಸ್ಸಿನ ಪರವಾಗಿ ಮಹಾತ್ಮರು ಪ್ರಾತಿನಿಧ್ಯವನ್ನು ವಹಿಸಿದರು. ಅವರು ನಮ್ಮ ದೇಶಕ್ಕೆ ತಿರುಗಿ ಬರುವಷ್ಟರಲ್ಲಿ ಇಲ್ಲಿನ ರಾಜಕೀಯವು ಪುನಃ ಹದಗೆಟ್ಟುಹೋಗಿತ್ತು. ವಾಯವ್ಯಪ್ರಾಂತ, ಸಂಯುಕ್ತಪ್ರಾಂತ, ಬಂಗಾಳಗಳಲ್ಲಿ 'ಅಧಿಕಾರಿಗಳ ದರ್ಪದ ಸರ್ಕಾರವು' ಸ್ಥಾಪನೆಯಾಗಿತ್ತು. ಇದನ್ನು ಸಹಿಸಲಾರದೆ ಮಹಾತ್ಮರು ಸರ್ಕಾರದವರನ್ನು ಎದುರಿಸಿದರು. ಮಹಾತ್ಮರೂ ಅವರ ಅನುಯಾಯಿಗಳೂ ಬಂಧನದಲ್ಲಿಡಲ್ಪಟ್ಟರು. ಅಪಾರವಾದ ಬಲಪ್ರಯೋಗದಿಂದ ದೇಶಬಾಂಧವರು ನಿಸ್ತೇಜರಾದರು, ನಿರ್ಜೀವರಾದರು. ಟೋರಿ ಪಂಗಡದ ಮಂತ್ರಿಗಳಾದ ಬಾಲ್ಡ್ವಿನ್ ಅವರು ೧೯೩೫ರಲ್ಲಿ ಹೊಸರಾಜ್ಯ ಘಟನೆಯನ್ನು ಪ್ರಚುರಪಡಿಸಿದರು. ಈ ಸುಧಾರಣೆಯನ್ನು ಬೆರಿಡೇಲ್ ಕೀತ್ ಎಂಬಾತನು (A. Berriedale Keith) ಖಂಡಿಸಿರುವುದು ಸರ್ವರಿಗೂ ವೇದ್ಯವಾಗಿದೆ.

೧೯೩೭ನೆಯ ಚುನಾವಣೆಯಲ್ಲಿ ಕಾಂಗ್ರೆಸ್ಸು ಏಳು ಪ್ರಾಂತಗಳಲ್ಲಿ ಜಯಶಾಲಿಯಾಯಿತು. ಇದರ ಮುಖಂಡರು ಮಂತ್ರಿಮಂಡಲವನ್ನು ರಚಿಸಿದರು. ಅನೇಕ ಆಶಾದಾಯಕವಾದ ಸುಧಾರಣೆಗಳನ್ನು ಅಮಲಿಗೆ ತಂದರು. ಜನರಲ್ಲಿ ಉತ್ಸಾಹವೂ ಆತ್ಮಗೌರವವೂ ಹೆಚ್ಚಿದುವು. ಕಾಂಗ್ರೆಸ್ಸಿನ ಆಡಳಿತವು ಸರ್ವ ಸಮರ್ಪಕವೆಂದು ವಿದೇಶೀಯ ಗೌರ್ನರುಗಳು ಕೂಡ ಒಪ್ಪಿದರು.

ಆದರೆ ಕಾಂಗ್ರೆಸ್ಸಿನ ಅಧಿಕಾರವು ಮುಸ್ಲಿಮ್ ಲೀಗಿನವರಿಗೆ ಸರಿಹೋಗಲಿಲ್ಲ. ಅವರಿಗೆ ಅಧಿಕಾರದಲ್ಲಿ ಅರ್ಧಭಾಗ ಕೊಡಲಿಲ್ಲವೆಂಬುದೇ ಇದಕ್ಕೆ ಕಾರಣ. ಇತ್ತ ಜೊತೆ ಸೇರಿ ಹೋರಾಟದಲ್ಲಿ ಭಾಗವಹಿಸಲಿಲ್ಲವೆಂದು ಬೇಡಿದುದನ್ನು ಕೊಡದಿದ್ದದ್ದು ಸಹಜವೆಂದು ಇವರು ವಾದಿಸಿದರು.[1]

[1] ಅದಕ್ಕಿಂತ ಹೆಚ್ಚಾಗಿ ಬಹುಮತ ಪಕ್ಷ ತತ್ತ್ವದ ಮೇಲೆ ನಡೆಯುವ ಪ್ರಜಾಸತ್ತಾ ಪದ್ಧತಿಗೆ ಶಕ್ಕಂತೆ ಬಹುಮತದ ಬಲವುಳ್ಳ ಕಾಂಗ್ರೆಸ್ಸಿಗೇ ಅಧಿಕಾರ ದೊರಕಿತು. ಆದುದರಿಂದ ಮುಂದೆ ಈ ಬಹುಮತ ತತ್ತ್ವದ ಪ್ರಜಾತಂತ್ರ ಪದ್ಧತಿಯೇ ನಮ್ಮ ದೇಶಕ್ಕೆ ಸಲ್ಲಕೂಡದೆಂಬ ವಾದವು ಬೆಳೆದು ವಿಷಮಿಸಲು ಕೂಡ ಅವಕಾಶವಾಯಿತು.

೧೯೩೯ ರಲ್ಲಿ ಎರಡನೆಯ ಮಹಾಯುದ್ಧದ ಘೋಷಣೆಯಾಯಿತು. ತಮ್ಮ ಅನುಮತಿಯಿಲ್ಲದೆ ಯುದ್ಧಕ್ಕೆ ಭಾರತವನ್ನು ಎಳೆಯುವುದು ಅನ್ಯಾಯವೆಂದು ರಾಷ್ಟ್ರ ಪಕ್ಷದವರು ಮಂತ್ರಿಮಂಡಲವನ್ನು ತ್ಯಾಗಮಾಡಿದರು. ಮತ್ತೆ ಬ್ರಿಟಿಷರ ಕೇಂದ್ರಾಡಳಿತ ಪದ್ಧತಿಯು ಸ್ಥಾಪನೆಯಾಯಿತು.

೩

ಹಿಂದೂ ಮುಸಲ್ಮಾನರ ವೈಮನಸ್ಯ.—ಈ ರಾಜಕೀಯ ಚಳುವಳಿಯ ಆರಂಭದಲ್ಲಿ ಮುಸಲ್ಮಾನರು ಸಹಜವಾಗಿಯೇ ಕಾಂಗ್ರೆಸ್ಸಿನೊಡನೆ ಸಹಕರಿಸಿದರು. ನಮ್ಮ ದೇಶದ ಐಕ್ಯವನ್ನು ಮುರಿಯುವಂತಾಯಿತು ಲಾರ್ಡ್ ಮಿಂಟೋ ಅವರು ಮುಸಲ್ಮಾನರಿಗೆ ಪ್ರತ್ಯೇಕ ಸ್ಥಾನವನ್ನು ಕೊಟ್ಟದ್ದು. ಅಂದಿನಿಂದ ಭೇದ ಬುದ್ಧಿಯು ಉತ್ಪನ್ನವಾಯಿತೆನ್ನಬೇಕು. ೧೯೦೬ ರಲ್ಲಿ ಮುಸ್ಲಿಂ ಲೀಗ್ ಸ್ಥಾಪನೆಯಾಯಿತು. ಇವರ ಸಂತೋಷ ಶೀಘ್ರದಲ್ಲೆ ಕೊನೆಗೊಂಡಿತು. ೧೯೧೪-೧೮ ರ ಯುದ್ಧದಲ್ಲಿ ಮುಸಲ್ಮಾನ ರಾಜ್ಯಗಳು ಅನೇಕವಾಗಿ ನಷ್ಟವಾದವು. ಇದರಿಂದ ಭಾರತೀಯ ಮುಸಲ್ಮಾನರಿಗೆ ಮನಃಖೇದವುಂಟಾಯಿತು. ಇವರ ತುರ್ಕಿಸ್ಥಾನದ ಪುನರುಜ್ಜೀವನದ ಯೋಜನೆಗೆ ಗಾಂಧೀಜಿಯವರು ಹಿಂದುಗಳ ಬೆಂಬಲವನ್ನಿತ್ತರು. ಖಿಲಾಫತಿನ ಐಕ್ಯವು ಸ್ವಪ್ನಪ್ರಾಯವಾಗಿದ್ದು ೧೯೨೧ ರಲ್ಲಿ ಅಸಹಕಾರ ಹೂಡಿದಾಗ ಗಾಂಧೀಜಿಯವರಿಗೆ ಮುಸಲ್ಮಾನರ ಸಹಕಾರವು ದೊರೆಯಲಿಲ್ಲ. ಆದಾಗ್ಯೂ ಷೀಯಾ ಪಂಗಡ, ಅಹರಾರ್ ಪಾರ್ಟಿ, ಜಮೆಯತ್-ಉಲ್-ಉಲೆಮಾ ಪಂಗಡಗಳು ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿ ಕಾಂಗ್ರೆಸ್ಸಿಗೆ ಪ್ರೋತ್ಸಾಹ ಕೊಟ್ಟವು. ಲೀಗ್ ಪಕ್ಷದ ಅನುಯಾಯಿಗಳಿಗೂ ಕಾಂಗ್ರೆಸ್ಸಿನವರಿಗೂ ದೇಶದ ನಾನಾ ಕಡೆಗಳಲ್ಲಿ ಮಾರಾಮಾರಿಯಾಯಿತು. ನಾಗಪುರ, ಗುಲ್ಬರ್ಗ, ಲಕ್‌ನೌ, ಶಹಜಾನ್ಪುರ, ಅಲಹಬಾದ್, ಕೋಹಾಟ್ ಮುಂತಾದ ಸ್ಥಳಗಳಲ್ಲಿ ಪರಸ್ಪರ ಹೋರಾಟ ಬೆಳೆದು ಸಾವಿರಾರು ಜನ ಮಡಿದರು. ೧೯೨೬ ರಲ್ಲಿಯೂ ೨೫ ಕಡೆ ಕದನಗಳಾದವು. ೧೯೩೦ ರಲ್ಲಿ ಜಿನ್ನಾ ಅವರು ಪ್ರಸಿದ್ಧವಾದ ತಮ್ಮ ೧೪ ಬೇಡಿಕೆಗಳನ್ನಿಟ್ಟರು. ಅವುಗಳೆಲ್ಲಕ್ಕೂ ಕಾಂಗ್ರೆಸ್ಸಿನವರು ಒಪ್ಪಿದರು. ಅದೂ ಸಾಲದು, ತಮ್ಮದೇ ಪ್ರತ್ಯೇಕವಾದ ರಾಷ್ಟ್ರ ಸ್ಥಾಪನೆಯಾಗಬೇಕು, ಮುಸಲ್ಮಾನರು ಪ್ರತ್ಯೇಕ ಜನಾಂಗ ಎಂದು ತಿಳಿಸಿ ಸರ್ವ ಸ್ವತಂತ್ರವಾದ ತಮ್ಮ ಪಾಕಿಸ್ಥಾನದ ಬೇಡಿಕೆಯನ್ನು ಈಗ ನಾಡಿನ ಮುಂದಿಟ್ಟಿದ್ದಾರೆ.

ಹಿಂದೂ ಮಹಾಸಭೆಯು ಹಿಂದೂಗಳ ಹಕ್ಕುಗಳನ್ನು ರಕ್ಷಣೆಮಾಡಿಕೊಳ್ಳಲು, ಮದನಮೋಹನ ಮಾಳವೀಯ, ಸಾವರಕರ, ಮುಂಜೇ ಮುಂತಾದವರಿಂದ ಸ್ಥಾಪಿತವಾಯಿತು. ಈ ಸಂಸ್ಥೆಗೆ ಕಾಂಗ್ರೆಸ್ಸಿನ ಧೋರಣೆಯಲ್ಲಿ ಬಹಳವಾಗಿ ಅಪ್ರೀತಿ.

'ಕಾಂಗ್ರೆಸ್ಸಿನವರು ಹಿಂದೂಗಳ ಹಕ್ಕುಬಾಧ್ಯತೆಗಳನ್ನು ಮುಸಲ್ಮಾನರಿಗೆ ಬಿಟ್ಟು ಕೊಡುತ್ತಾರೆಂ'ಬ ಅಭಿಪ್ರಾಯವೇ ಇದಕ್ಕೆ ಮುಖ್ಯ ಕಾರಣ. ಈ ಸಂಸ್ಥೆಯ ಸಭಿಕರಿಗೆ ಕ್ಷಾತ್ರದಲ್ಲಿ ಅಭಿಮಾನ ಬಹಳ ಹೆಚ್ಚು. ಬಂಗಾಳದಲ್ಲಿಯೂ ಪಂಜಾಬಿನಲ್ಲಿಯೂ ಇದರ ಅನುಯಾಯಿಗಳು ಅನೇಕರಾಗಿರುವರು. ಆ ಎರಡು ಪ್ರಾಂತಗಳಲ್ಲಿ ಹಿಂದೂಗಳಿಗೆ ನ್ಯಾಯ್ಯವಾದ ಪ್ರಾತಿನಿಧ್ಯವು ದೊರೆಯದಿರುವುದರಿಂದ ಅವರಿಗೆ ತುಂಬಾ ಬೇಸರ ವುಂಟಾಗಿದೆ. ಹೀಗೆ ಅಖಿಲ ಭಾರತ ವರ್ಷದ ಪಕ್ಷವಾದ ಕಾಂಗ್ರೆಸ್ ಒಂದು ಕಡೆಯೂ ಕೋಮುವಾರು ಶಾಖಾ ಪಕ್ಷಗಳಾದ ಮುಸ್ಲಿಮ್ ಲೀಗ್ ಒಂದು ಕಡೆ ಹಿಂದೂ ಮಹಾಸಭೆಯ ಪಕ್ಷ ಒಂದು ಕಡೆಯೂ ಭರತಖಂಡದಲ್ಲಿ ಪ್ರಬಲಿಸಲು ಬಯಸುತ್ತಿವೆ.

ರಾಜಕೀಯ ಜೀವನ ಹೀಗಾದರೆ ಸಮಾಜದಲ್ಲಿಯೂ ಆರ್ಥಿಕ ವಿಚಾರಗಳಲ್ಲಿಯೂ ಇನ್ನೊಂದು ಅಸಮಾಧಾನ, ಅವ್ಯವಸ್ಥೆ ಉಂಟಾಗಿದೆ. ದಕ್ಷಿಣ ದೇಶದಲ್ಲಿ ವರ್ಣಾಶ್ರಮ ವ್ಯವಸ್ಥೆಯನ್ನು ಪ್ರತಿಭಟಿಸಿ ಆತ್ಮಗೌರವ ಪಂಥ, ಜಸ್ಟಿಸ್ ಪಕ್ಷ ಎಂಬ ಪಂಗಡ ಹುಟ್ಟಿದೆ. ಕಾಂಗ್ರೆಸ್ ಪಂಥ ಬ್ರಾಹ್ಮಣರ ಮತ್ತು ಮೇಲ್ಪಂಗಡದವರದು, ಸರಕಾರ ದೊಡನೆ ಸಹಕರಿಸುವ ವರ್ಗವಾಗಿದೆ, ಬ್ರಾಹ್ಮಣವಲ್ಲದ ವರ್ಗಕ್ಕೇ ಆಡಳಿತದ ಸಮಸ್ತ ಅಧಿಕಾರಗಳನ್ನು ನಾಳೆಗೆ ತೆಗೆದುಕೊಳ್ಳಬೇಕು ಎಂದು ವೈಮನಸ್ಯದ ಧ್ವಜ ಎದ್ದಿದೆ. ಆ ವಾದ ಪಂಥಗಳ ಸತ್ಯಾಸತ್ಯತೆ ಏನೇ ಇರಲಿ ರಾಜಕೀಯದ ತೊಡಕು ಇದರಿಂದ ಮತ್ತಷ್ಟು ಸಿಕ್ಕಾಗಿರುವುದು ಸ್ಪಷ್ಟ. ಕಾಂಗ್ರೆಸ್ಸಿಂದಲಾಗಲಿ ಬ್ರಿಟಿಷ್ ಸರಕಾರ ದಿಂದಾಗಲಿ ತಮಗೆ ನ್ಯಾಯವೂ ಬಿಡುಗಡೆಯೂ ದೊರೆಯವೆಂದು ಕಿಸಾನ್ ಪಾರ್ಟಿ ಹುಟ್ಟಿಕೊಂಡು ಜಮೀನುದಾರಿ ಪದ್ಧತಿಯನ್ನು ಪ್ರತಿಭಟಿಸಿದೆ. ಕಾಂಗ್ರೆಸ್ ಕೂಡ ಬಂಡವಾಳಶಾಹೀಪೋಷಕ, ಬ್ರಿಟಿಷ್ ಸರಕಾರ ಸಾಮ್ರಾಜ್ಯಶಾಹೀ ಎಂದು ಅವೆರ ಡನ್ನೂ ಪ್ರತಿಭಟಿಸುವ ಕಾಮ್ಯುನಿಸ್ಟ್ ಎಂಬ ಉಗ್ರಸಮಾಜಸಮತಾಪಂಥವೊಂದು ಪ್ರಬಲಿಸಿ ರಾಜಕೀಯದ ಬಿಕ್ಕಟ್ಟಿಗೆ ತನ್ನ ಕಠಿನಾಂಶವನ್ನು ಸೇರಿಸುತ್ತಿದೆ. ಇವೆಲ್ಲ ದರ ತುಮುಲ ಕೋಲಾಹಲದಲ್ಲಿ ರಾಜಕೀಯವು ವಿಷಮಿಸಿ ಮತ್ತಷ್ಟು ಹದಗೆಟ್ಟಿದೆ ಯೆನ್ನಬೇಕು.

ವಿ. ರಾಘವೇಂದ್ರರಾವ್.

ಅಲರೊಸಗೆ

ಕಣ್ಣತಾರೆಯಂಚಿನಿಂದ ಚಿಮ್ಮಿಬಂದು ಮಿಂಚುವಂದ
ಎಲ್ಲರೀತಿಯಲ್ಲ—ಹೊಸತು ಹೊಸತು ಅದರ ಭಾವಬಂಧ
ಹರೆಯದ ಗಿರಿಶೃಂಗದಲ್ಲಿ ಹರಹಿ ಬೆಳೆದ ಕಲ್ಪವಲ್ಲಿ
ಜೊಟ್ಟಿಹ ಹೂ ಜಲ್ಲಿ ಜಲ್ಲಿ ಅರಳಿತ್ತಹ ಕಾಣೆಯಾ ?
ಕಾಮುದೆಲರಿನೊಸಗೆ ಹೀರಿ ತುಂಬಿತುಂಬಿ ಬೆಡಗುದೋರಿ
ಬಂದೆರಗಿದವತ್ತಲಿಂದ ಬಂಡುಣಲುತ್ಕಂಠೆಯಿಂದ !
ಅವುಗಳಲ್ಲದೊಂದು ಕುಸುಮ ಸ್ವಾರ್ಥಕಂಡು ಹೇಸಿತಮಮ
ತುಂಬಿಗಳನು ಸ್ವಾಗತಿಸಲು ತುಟಿ ತೆರೆಯದಿರೆ—
ಮೌನದಲ್ಲಿ ತಪವಗೈದು ತನ್ನ ಕಂಪ ಬೀರಬಗೆದು
ಆ ಮಲ್ಲಿಗೆ ಆವೊಂದನು ಆರಿಸದಾ ಆರಡಿಗಳ
ಸೇರಿಕೆಗೆಂದಿತು, "ಗೆಳೆಯರೆ, ತೋರಿಕೆಯೊಲವಿನಸಕ್ಕರೆ
ಸೇರದು ನಿಃಸ್ವಾರ್ಥರಾಗಿ ಬನ್ನಿರಿ ಹೋಗಿ !"
ತುಂಬಿಗಳಿದೆ ತುಂಬಿತಾಗ ಕಣ್ಕದ ತೆರೆ ತೆರೆಯೆ ರಾಗ
ಹರಹಿತಲರ ಸುತ್ತಮುತ್ತ ಅಲರದರಳುತಿರಲು ಚಿತ್ತ
ಗಿರಿಶಿಖರಗಳೆಲ್ಲೆ ಮೀರಿ ಬುವಿ ಬಾಂದಳವೆಲ್ಲ ಹಾರಿ
ಅರಳೆದೆಯಾ ಪ್ರಣಯನಾದ ಭ್ರಮರಗೀತವಾಯಿತು !
ತಾರುಣ್ಯದ ಎದೆಬನದಲಿ ಪ್ರಣಯವೇದವಂದಿನಿಂದ
ದನಿಗೊಡುವೀ ಪ್ರಣವನಾದ '**ನಿನಗೊಲಿಯುವೆ**'ನೆಂಬುದೆ !
"ನಿನಗೊಲಿಯುವೆ ನಿನಗೊಲಿಯುವೆ ಒಬ್ಬಗಲ್ಲ ಇಬ್ಬಗಲ್ಲ
ಕಾಮಕಳೆದ ಲೋಕಕೆ, ಪ್ರೇಮದಮಲ ಪಾಕಕೆ !
"ತುಂಬಿರೂಪದಾತ್ಮಗಳೇ ಸಂಜಿದೀಶಬಿಂಬಗಳೇ,
ಸೃಷ್ಟಿಯತಿಯಹಂಬುಗಳೇ ನಿಃಸ್ವಾರ್ಥತೆಯಂಬುಗಳೇ,
ರವಿಶಶಿತಾರಗೆಗಳಂತೆ ಬೆಳಗಿ ನಿಮ್ಮ ಸ್ವಾಗತಿಸುವೆ
ಎಂದಿಗು" ಎಂದಲರೊಸಗೆಯ ಬಲ್ಲೆಯ ರಸಿಕ ?

ಬಿ. ಎಚ್. ಶ್ರೀಧರ.

ಸಂನ್ಯಾಸಿ ಜಾದ್ರೂಪ ಮತ್ತು ಸಾರ್ವಭೌಮ ಜಹಾಂಗೀರ್

ಜಹಾಂಗೀರನು ಅವನ ತಂದೆ ಅಕ್ಬರನಂತೆ ಹಿಂದೂ ಮತಪ್ರೇಮಿ. ಅದರ ಸತ್ವವನ್ನು ಮುಸ್ಲಿಮರಿಗೆ ತಿಳಿಸಲು ಅವನು ಮಾಡಿದ ಪ್ರಯತ್ನ ಚರಿತ್ರೆಯಲ್ಲಿ ಪ್ರಸಿದ್ಧವಾಗಿದೆಯಾದರೂ ಅವನ ಜೀವನಚರಿತ್ರೆಯಲ್ಲಿ ಅಡಗಿರುವ ಅಪೂರ್ವ ಸಂದರ್ಭಗಳೂ ಸನ್ನಿವೇಶಗಳೂ ಜನರ ಗಮನಕ್ಕೆ ಬಂದಿಲ್ಲ. ಅಂಥ ಸನ್ನಿವೇಶಗಳನ್ನು ಚಿತ್ರದಲ್ಲಿ ಕಾಣುವ ಸುಯೋಗವಂತೂ ಇನ್ನೂ ಅಪೂರ್ವ. ಸಾರ್ವಭೌಮ ಜಹಾಂಗೀರ್ ಸಂನ್ಯಾಸಿ ಜಾದ್ರೂಪನ ಸಂಗ ಬಯಸಿದ ವೃತ್ತಾಂತ ಅನೇಕರಿಗೆ ತಿಳಿಯದು. ಇದು ಜಹಾಂಗೀರನ ಆತ್ಮಕಥೆಯ ಮೂಲಕವೂ ಅವನ ಕಾಲದ ಒಂದೆರಡು ಚಿತ್ರಪಟಗಳ ಮೂಲಕವೂ ತಿಳಿಯಬಹುದಾಗಿದೆ. ಆ ಚಿತ್ರಗಳನ್ನೂ ಆತ್ಮಕಥೆಯ ಕೆಲವು ಭಾಗಗಳನ್ನೂ ಇಲ್ಲಿ ಕೊಟ್ಟಿದೆ.


ಜಹಾಂಗೀರನ ದಿನಚರಿಯ ಪುಸ್ತಕದಿಂದ

೧. "ಜಾದ್ರೂಪನೆಂಬ ಉಗ್ರತಪಸ್ವಿಯ ವಿಷಯವನ್ನು ನಾನು ಪದೇಪದೇ ಕೇಳುತ್ತಿದ್ದೆ. ಅವನು ಅನೇಕ ವರ್ಷಗಳ ಹಿಂದೆ ಉಜ್ಜಯಿನಿ ನಗರವನ್ನು ಬಿಟ್ಟು ಕಾಡುಪ್ರದೇಶದ ಒಂದು ಮೂಲೆಯಲ್ಲಿ ನೆಲಸಿ ಅಲ್ಲಿ ತನ್ನ ಇಷ್ಟದೇವತೆಯ ಉಪಾಸನೆಯಲ್ಲಿ ನಿರತನಾಗಿದ್ದಾನೆ. ಆತನ ಪರಿಚಯಮಾಡಿಕೊಳ್ಳಬೇಕೆಂದು ನನಗೆ ತುಂಬ ಆಸೆ. ರಾಜಧಾನಿಯಾದ ಆಗ್ರದಲ್ಲಿ ನಾನು ಇದ್ದಾಗ ಆತನನ್ನು ನಾನಿದ್ದೆಡೆಗೆ ಕರಸಿ ನೋಡಬೇಕೆಂದು ಬಯಸಿದ್ದೆ. ಆದರೆ ಹೀಗೆ ಕರೆಯಕಳುಹಿದರೆ ಆತನಿಗೆ ತೊಂದರೆಯಾಗಬಹುದೆಂದು ಶಂಕಿಸಿ ಆತನನ್ನು ಕರೆಯಕಳುಹಲಿಲ್ಲ. ನಾನೇ ಹೊರಟೆ. ಉಜ್ಜಯಿನಿ ನಗರವನ್ನು ಸಮೀಪಿಸುತ್ತಲೆ ದೋಣಿಯಿಂದ ಇಳಿದು ೧½ ಕೋಸ್ ನೌಕಾಮೈಲಿಯು ದೂರ ನಡೆದುಕೊಂಡು ಅವನನ್ನು ಕಾಣಹೋದೆ. ಆತನು ತನ್ನ ವಾಸಕ್ಕಾಗಿ ಗುಡ್ಡದ ಪಕ್ಕದಲ್ಲಿ ಒಂದು ಬಿಲವನ್ನು ಮಾಡಿಕೊಂಡಿದ್ದಾನೆ. ಬಿಲವನ್ನು ಕೊರೆದು ಅದಕ್ಕೆ ಬಾಗಿಲು ಇಟ್ಟಿದೆ. ಬಾಗಿಲಿನಲ್ಲಿ ಕಮಾನನ್ನು (ಮಿಹ್ರಾಬ್) ಹೋಲುವ ಒಂದು ಕಂಡಿ ಇದೆ. ತೆಳ್ಳಗಿರುವ ಮನುಷ್ಯನು ಕೂಡ ಅದರ ಮೂಲಕ ತೂರಿಹೋಗಬೇಕಾದರೆ ನೂರಾರು ಕಷ್ಟಗಳನ್ನು ಸಹಿಸಬೇಕಾಗುವುದು. ಬಿಲದ ಉದ್ದ ೫⅔ ಅಡಿ, ಅಗಲ ೩⅓ ಅಡಿ. ನೆಲಕ್ಕೆ ಚಾಪೆಯೂ

ಇಲ್ಲ, ಕೊನೆಗೆ ಹುಲ್ಲಿನ ಹೊದಿಕೆ ಕೂಡ ಇಲ್ಲ. ಇಕ್ಕಟ್ಟಾದ ಈ ಕತ್ತಲೆಯ ಬಿಲದಲ್ಲಿ ಏಕಾಕಿಯಾಗಿ ವಾಸಿಸುತ್ತಾನೆ. ಒಂದು ಲಂಗೋಟಿ ವಿನಾ ಮೈಮೇಲೆ ಬಟ್ಟೆಬರೆ ಯಾವುದೂ ಇಲ್ಲ. ಚಳಿಗಾಲದ ಚಳಿಯ ದಿನಗಳಲ್ಲು ಕೂಡ ಅವನು ಬೆಂಕಿ ಹೊತ್ತಿಸುವುದಿಲ್ಲ. ರುಮ್‌ಸಮುಲ್ಲಾ (ಜಲಾಲ್-ಉದ್-ದೀನ್) ಒಬ್ಬ ದರ್ವಿಷನ ಮಾತನ್ನು ಪದ್ಯರೂಪದಲ್ಲಿ ಬರೆದಿರುತ್ತಾನೆ. ಅದನ್ನು ಜಾದ್ರೂಪ ನಿಗೂ ಅನ್ವಯಿಸಬಹುದು: 'ಹಗಲಲ್ಲಿ ಸೂರ್ಯರಶ್ಮಿ ನಮ್ಮ ಉಡುಪು, ರಾತ್ರಿಯಲ್ಲಿ ನಮ್ಮ ಹಾಸುಹೊದಿಕೆಗಳು ಚಂದ್ರನ ಕಿರಣಗಳು'. ತನ್ನ ವಸತಿಯ ಬಳಿಯಲ್ಲಿ ರುವ ಒಂದು ಕುಂಜೆಯಲ್ಲಿ ನಿತ್ಯವೂ ಎರಡುಬಾರಿ ಸ್ನಾನಮಾಡುತ್ತಾನೆ. ದಿವಸಕ್ಕೆ ಒಂದು ಸಲ ಉಜ್ಜಯಿನಿಗೆ ಭಿಕ್ಷಕ್ಕಾಗಿ ಹೋಗುತ್ತಾನೆ. ಅಲ್ಲಿ ಏಳು ಬ್ರಾಹ್ಮಣರ ಮನೆಗಳ ಪೈಕಿ ಮೂರು ಬ್ರಾಹ್ಮಣರ ಮನೆಗಳನ್ನು ಭಿಕ್ಷೆಗಾಗಿ ಆರಿಸಿಕೊಂಡಿರು ತ್ತಾನೆ. ಅವರು ಹೆಂಡತಿ ಮಕ್ಕಳಿಂದೊಡಗೂಡಿ ಭಕ್ತಿಯಿಂದ ತೃಪ್ತಿಯಿಂದ ಬಾಳು ತ್ತಿರುವುದೇ ಅವರನ್ನು ಆರಿಸಿದುದಕ್ಕೆ ಕಾರಣ. ತನಗಾಗಿ ಮಾಡಿಕೊಂಡಿರುವ ಅಡಿಗೆಯಲ್ಲಿ ಐದು ತುತ್ತು ಭಿಕ್ಷೆಯನ್ನು ತೆಗೆದುಕೊಳ್ಳುತ್ತಾನೆ. ಬಾಯಿಗೆ ಹಾಕಿ ಕೊಂಡ ತುತ್ತನ್ನು ಹಾಗೆಯೇ ನುಂಗಿಬಿಡುತ್ತಾನೆ. ಕಾರಣ: ಅಗಿದರೆ ಅದರ ರುಚಿ ಹಲ್ಲಿಗೆ ಇಳಿಯುತ್ತದೆಂಬ ಭೀತಿ. ಆ ಸಂಸಾರಗಳಲ್ಲಿ ಆಶೌಚ ಒದಗಿದಾಗ, ಹೆರಿಗೆಯಾದ ಕಾಲದಲ್ಲಿ, ಅಥವಾ ಹೆಂಗಸರು ಹೊರಗಾದ ದಿವಸಗಳಲ್ಲಿ ಅವನು ಅಲ್ಲಿ ಭಿಕ್ಷೆ ಬೇಡುವುದಿಲ್ಲ. ಇಲ್ಲಿ ಬರೆಯುವುದೇ ಅವನ ಜೀವನಕ್ರಮ. ನಾನು ಆರು ಘಳಿಗೆಯ (ಘರಿ) ಕಾಲ ಆತನೊಡನೆ ಸಂಭಾಷಣೆಯಲ್ಲಿ ಕಳೆದೆ. ಬಹು ಚೆನ್ನಾಗಿ ಮಾತನಾಡಿದ; ಅವನ ಮಾತು ನನ್ನ ಮನಸ್ಸಿನ ಮೇಲೆ ಮಹತ್ತರವಾದ ಪರಿ ಣಾಮವುಂಟುಮಾಡಿದೆ. ನನ್ನ ಸಹವಾಸವೂ ಕೂಡ ಆತನಿಗೆ ಹಿಡಿಸಿತು. ನನ್ನ ತಂದೆ ಖಾನ್ ದೇಶಕ್ಕೆ ಸೇರಿದ ಅಸಿರ್ ಕೋಟೆಯನ್ನು ಜಯಿಸಿ ಆಗ್ರಾಕ್ಕೆ ಹಿಂತಿರುಗುವಾಗ ಆತನನ್ನು ಅದೇ ಸ್ಥಳದಲ್ಲೇ ಕಂಡನಂತೆ. ಅದನ್ನು ಸದಾ ನೆನೆದುಕೊಳ್ಳುತ್ತಿದ್ದನು."

ಇಲ್ಲಿ ಮುದ್ರಿಸಿರುವ ಚಿತ್ರ ೧ರಲ್ಲಿ ಜಾದ್ರೂಪನೊಬ್ಬನೆ ಇದ್ದಾನೆ. ಅದರ ಮೇಲೆ ಈ ಲಿಖಿತವಿದೆ. ೧೦೨೬ (ಹಿಜ್ರ) ಕುನ್ವಾರ್ ಧನಸಿಂಗ್ ಬರೆದ ಉಜ್ಜಯಿನಿ ನಿವಾಸಿಯಾದ ಗೋಸಾಯಿ ಜಾದ್ರೂಪನ ಚಿತ್ರ.

ಸಮಯ ಸಿಕ್ಕಿದಾಗಲೆಲ್ಲಾ ಜಹಾಂಗೀರನು ಜಾದ್ರೂಪನ ಬಳಿಗೆ ಹೋಗು ವುದು ವಾಡಿಕೆಯಾಗಿತ್ತು. ಅವನ ದಿನಚರಿಯ ಪುಸ್ತಕದ ಇನ್ನೊಂದು ಭಾಗದಲ್ಲಿ ಹೀಗೆ ಜಹಾಂಗೀರನು ಜಾದ್ರೂಪನಿದ್ದೆಡೆಗೆ ಹೋದ ವಿವರಣೆ ಇದೆ.



ಗೋಸಾಯಿ ಜಾದ್ರೂಪ

(ಕುನ್ವಾರ್ ಧನಸಿಂಗ್ ಬರೆದ ಚಿತ್ರದ ಅಚ್ಚು, ೧೦೨೬ ಹಿಜಿರ)



ಸಂನ್ಯಾಸಿ ಜಾದ್ರೂಪ ಮತ್ತು ಸಾರ್ವಭೌಮ ಜಹಾಂಗೀರ್

(೭೩ ನೇ ಪುಟವನ್ನು ನೋಡಿ)

"ಮೂರನೆಯ ದಿವಸ—ಅದು ತಂಗುವ ದಿವಸ—ಮಧ್ಯಾಹ್ನ ಕಳೆದಮೇಲೆ ಜಾದ್ರೂಪನೊಡನೆ ಕಾಲ ಕಳೆಯಬೇಕೆಂಬ ಬಯಕೆಯಿಂದ ಅವನನ್ನು ನೋಡಲು ಹೋದೆ. ಆರು ಘಳಿಗೆಯ (ಘರಿ) ಕಾಲ ಅವನೊಡನೆ ಸಂತೋಷವಾಗಿ ಕಳೆದೆ. ಆ ದಿವಸವೂ ದಿವ್ಯವಾದ ಮಾತನ್ನಾಡಿದ. ನಾನು ಅರಮನೆಗೆ ಹೋಗುವ ಹೊತ್ತಿಗೆ ಸಂಧ್ಯಾಕಾಲ ಸಮೀಪಿಸಿತ್ತು."

ಇನ್ನೊಂದು ಭೇಟಿ

"೨೯ ನೆಯ ತೇದಿ ಬುಧವಾರ ಜಾದ್ರೂಪನನ್ನು ನೋಡಿದೆ. ಅವನ ವಿಚಾರ ಹಿಂದಿನ ಪುಟಗಳಲ್ಲಿ ವರ್ಣಿಸಿದೆ. ಈ ದಿವಸ ಅವನ ಜೊತೆಯಲ್ಲಿ **ಕಾಲೀಯದಹ** ವನ್ನು ನೋಡಹೋದೆ. ಆತನ ಸಹವಾಸ ಒಂದು ಸುಯೋಗ."

ದಿನಚರಿಯ ಪುಸ್ತಕದಲ್ಲಿ ಮತ್ತೊಂದು ಭೇಟಿಯ ವಿವರಗಳಿವೆ.

"ಶನಿವಾರ ಜಾದ್ರೂಪನನ್ನು ಇನ್ನೊಂದು ಬಾರಿ ಸಂದರ್ಶಿಸಬೇಕೆಂಬ ಬಯಕೆ ಬಲಿಯಿತು. ಮಧ್ಯಾಹ್ನದ **ನಾವಾಜ್** ಮುಗಿಸಿಕೊಂಡು ದೋಣಿಯಲ್ಲಿ ಕುಳಿತು ಅತ್ಯಾತುರದಿಂದ ಆತನನ್ನು ನೋಡಹೊರಟೆ. ಆತನಿದ್ದೆಡೆಗೆ ಓಡಿಹೋಗಿ ಆತನೊಡನೆ ಸುಖವಾಗಿ ಕಾಲ ಕಳೆದೆ. ಧರ್ಮ ಮತ್ತು ದೈವಜ್ಞಾನ ಇವು ಗಳನ್ನು ಕುರಿತು ಅವನು ಆಡಿದ ಉದಾತ್ತವಾದ ಮಾತುಗಳನ್ನು ಕೇಳಿದೆ. ಸಾಧುವಾದ ಸೂಫೀ ತತ್ವಗಳನ್ನು ಅತಿಯಾಗಿ ಹೊಗಳದೆ ಸ್ಪಷ್ಟವಾಗಿ ನಿರೂಪಿ ಸುತ್ತಾನೆ. ಅವನ ಸಹವಾಸದಿಂದ ಯಾರುಬೇಕಾದರೂ ಸಂತೋಷ ಪಡೆಯ ಬಹುದು. ಅವನಿಗೆ ವಯಸ್ಸು ಅರುವತ್ತಾಗಿದೆ. ಪ್ರಾಪಂಚಿಕ ಸುಖಗಳನ್ನು ತೊರೆದು ಸಂನ್ಯಾಸಪಥದಲ್ಲಿ ಅವನು ದೃಢಮನಸ್ಸಿನಿಂದ ಅಡಿ ಇಟ್ಟಾಗ ಅವನಿಗೆ ೨೨ ವರ್ಷ ವಯಸ್ಸು. ೩೮ ವರ್ಷಕಾಲ ಬೈರಾಗಿಯಾಗಿ ಬಾಳನ್ನು ಬೆಳೆಸಿದ್ದಾನೆ. ನನ್ನನ್ನು ಬೀಳ್ಕೊಡುವ ಮುಂಚೆ ನನ್ನನ್ನು ಕುರಿತು ಈ ಮಾತುಗಳನ್ನು ಆಡಿದ: 'ಧರ್ಮಿಷ್ಠನಾದ ಇಂಥಾ ದೊರೆಯ ಆಳ್ವಿಕೆಯಲ್ಲಿ ಶಾಂತಿಯಿಂದ (ತುಷ್ಟಿಯಿಂದ) ತೃಪ್ತನಾಗಿ ನನ್ನ ಅಭೀಷ್ಟದ ಸೆರಗಿನ ಅಂಚು ಅಡಚಣೆಗಳೆಂಬ ದೂಳಿನಿಂದ ಮಾಸದೆ ನಾನು ಬಯಸಿದ ದೇವರನ್ನು ಆರಾಧಿಸಲು ನನಗೆ ದೊರೆತಿರುವ ಅಲ್ಲಾ ವಿನ ಈ ವರಕ್ಕಾಗಿ ನನ್ನ ಕೃತಜ್ಞತೆಯನ್ನು ನಾನು ಹೇಗೆ ವಿವರಿಸಲಿ?' "

ದಿನಚರಿಯ ಪುಸ್ತಕದ ಮತ್ತೊಂದು ಭಾಗದಲ್ಲಿ ಇನ್ನೊಂದು ವಿವರಣೆಯಿದೆ.

"ಹಿಂದಿನ ಪುಟಗಳಲ್ಲಿ ಉಜ್ಜಯಿನಿ ನಿವಾಸಿಯಾದ ಗೋಸಾಯಿ ಜಾದ್ರೂ ಪನ ವಿಚಾರ ಸ್ವಲ್ಪ ಹೇಳಿದೆ. ಈಗ ಆತನು ತನ್ನ ವಾಸಸ್ಥಳವನ್ನು ಬಿಟ್ಟು

ಹಿಂದೂಗಳ ಪುಣ್ಯಕ್ಷೇತ್ರಗಳಲ್ಲಿ ಅತಿ ಹಿರಿದಾದ ಮಥುರೆಯಲ್ಲಿ ಯಮುನಾ ನದಿಯ ತಡಿಯಲ್ಲಿ ವಿಹರಿಸುತ್ತಿದ್ದಾನೆ. ಅವನ ಸಹವಾಸ ಅಮೂಲ್ಯವಾದುದೆಂದು ಬಗೆದಿರುವೆನಾದುದರಿಂದ ಅವನ ಸಮಯ ಕಾದು ಅವನಿದ್ದೆಡೆಗೆ ಹೋದೆ. ಅವನೊಡನೆ ಏಕಾಂತದಲ್ಲಿ ಬಹಳ ಹೊತ್ತು ಸಂತೋಷವಾಗಿ ಕಳೆದೆ. ನಿಜವಾಗಿಯೂ ಆತನಿರುವುದು ನನಗೊಂದು ದೊಡ್ಡ ಸೌಭಾಗ್ಯ. ಆತನ ಸಂಗದಿಂದ ಬಹುವಾಗಿ ಪ್ರಯೋಜನವನ್ನೂ ಪಡೆಯಬಹುದು, ಸಂತೋಷವನ್ನೂ ಪಡೆಯಬಹುದು."

ಜಾದ್ರೂಪನ ಉಪದೇಶದ ಮಹಿಮೆಯಿಂದ ಪ್ರೇರಿತನಾಗಿ ಜಹಾಂಗೀರನು ಪ್ರಾಣಹತ್ಯ ಮಾಡುವುದಿಲ್ಲವೆಂದು ವ್ರತ ತೊಟ್ಟನು. ಈ ವ್ರತ ತೊಟ್ಟಮೇಲೆ ಅವನು ನೂರ್ಜಹಾನಳೊಡನೆ ಹುಲಿಯ ಬೇಟೆಗೆ ಹೋಗಬೇಕಾಯಿತು. ಆದರೆ ಅವನು ಹುಲಿಯನ್ನು ಹೊಡೆಯಲಿಲ್ಲ; ನೂರ್ಜಹಾನಳು ಹೊಡೆಯಬೇಕಾಯಿತು. ಇದಕ್ಕೆ ಕಾರಣವನ್ನು ದಿನಚರಿಯ ಪುಸ್ತಕದಲ್ಲಿ ಹೇಳಿರುತ್ತಾನೆ.

"ಯಾವ ಜೀವಜಂತುವನ್ನೂ ನಾನು ಹಿಂಸಿಸುವುದಿಲ್ಲವೆಂದು ನಾನು ವ್ರತ ತೊಟ್ಟಿರುವೆನಾದುದರಿಂದ ನೂರ್ಜಹಾನಳಿಗೆ ಹುಲಿಯನ್ನು ಹೊಡೆಯಹೇಳಿದೆ. ನೂರ್ಜಹಾನಳು ಹೊಡೆದ ಒಂದೇ ಏಟಿಗೆ ಹುಲಿ ಪ್ರತಿಕ್ಷಣದಲ್ಲೇ ಸತ್ತುಬಿತ್ತು."*

ಹುಲಿಬೇಟೆಯಿಂದ ಜಹಾಂಗೀರನ ಮನಸ್ಸಿಗೆ ಸುಖ ದೊರೆಯಲಿಲ್ಲ. ಜಾದ್ರೂಪನನ್ನು ನೋಡಬೇಕೆಂಬ ತವಕ ಹುಟ್ಟಿತು.

೧೨ನೆಯ ತೇದಿ ಸೋಮವಾರ "ಗೋಸಾಯಿ ಜಾದ್ರೂಪನನ್ನು ನೋಡಬೇಕೆಂಬ ಬಯಕೆ ಪುನಃ ತೀವ್ರವಾಯಿತು. ವಿಹಿತಕ್ರಮವನ್ನು ಲೆಕ್ಕಿಸದೆ ತ್ವರೆಗೊಂಡು ಹೊರಟೆ. ಅವನ ಸನ್ನಿಧಿಯಲ್ಲಿ ಸುಖಪಟ್ಟೆ. ನಮ್ಮಿಬ್ಬರ ಬಾಯಿಂದಲೂ ಉದಾತ್ತವಾದ ಮಾತುಗಳು ಹೊರಜಿದ್ದವು. ಸರ್ವಶಕ್ತನಾದ ಭಗವಂತನು ಆತನಿಗೆ ಅಪೂರ್ವವಾದ ಗಾಂಭೀರ್ಯವನ್ನೂ ಉದಾತ್ತವಾದ ತಿಳಿವಳಿಕೆಯನ್ನೂ ಉಚ್ಚವಾದ ಗುಣವನ್ನೂ, ತೀಕ್ಷ್ಣವಾದ ಬುದ್ಧಿಶಕ್ತಿಯನ್ನೂ, ದೈವಿಕವಾದ ಜ್ಞಾನವನ್ನೂ, ಪ್ರಾಪಂಚಿಕ ಸುಖಗಳ ಸಂಕೋಲೆಯಿಂದ ಬಿಡುಗಡೆಯಾದ ಹೃದಯವನ್ನೂ ದಯಪಾಲಿಸಿದ್ದಾನೆ. ಅದರ ಮಹಿಮೆಯಿಂದ ಅವನು ಈ ಲೋಕದ ಕಡೆಗೆ ಅದರಲ್ಲಿರುವ ಸಮಸ್ತ ವಸ್ತುಗಳ ಕಡೆಗೆ ಬೆನ್ನು ತಿರುಗಿಸಿ ನಿರ್ಜನ ಪ್ರದೇಶದ ಒಂದು ಮೂಲೆಯಲ್ಲಿ ತೃಪ್ತನಾಗಿ ಕುಳಿತಿರುತ್ತಾನೆ. ಹೆಂಗಸರು ಮುಖ ಮುಚ್ಚಿಕೊಳ್ಳಲು ಉಪಯೋಗಿಸುವಂಥ ಒಂದು ಗಜ ಹಳೆಯ ಬಟ್ಟೆ,

* ನೂರ್‌ಜಹಾನಳಿಗೆ ಬೇಟೆಯಲ್ಲಿ ಬಲು ಆಸಕ್ತಿ. ಇದಕ್ಕಾಗಿ ಒಂದುಸಲ ಜಹಾಂಗೀರನು ತನ್ನ ಪ್ರಾಣವನ್ನೇ ಕೊಡಬೇಕಾದ ಪ್ರಸಂಗ ಒದಗಿತ್ತು.

ನೀರು ಕುಡಿಯುವುದಕ್ಕೆ ಒಂದು ಮಣ್ಣಿನ ಕುಡಿಕೆ—ಇವು ಇವನ ಐಹಿಕಸರ್ವಸ್ವ. ಬೇಸಗೆಯಾಗಲಿ ಚಳಿಗಾಲವಾಗಲಿ ಮೈಮೇಲೆ ಬಟ್ಟೆಯಿಲ್ಲ; ಬರಿಯ ತಲೆ, ಬರಿಯ ಕಾಲು. ಹಕೀಂ ಸನೈ ತನ್ನ ದ್ವಿಪದಿಗಳಲ್ಲಿ ಹೇಳಿರುವುದು ಅಕ್ಷರಶಃ ಅವನಿಗೆ ಅನ್ವಯಿಸುತ್ತದೆ.

'ಲಬ್ಮನನಿಗೆ ಕೊಳಲಿನ ನಾಳದಷ್ಟು ಅಥವಾ ಸಾರಂಗದ ನಾಭಿಯಷ್ಟು ಕಿರಿದಾದ ಗುಡಿಸಿಲಿದೆ. ಹೆಡ್ಡನೊಬ್ಬ ಅವನಿಗೆ ಈ ಪ್ರಶ್ನೆ ಹಾಕಿದ—ಇದೇನು ಮನೆ ಎರಡಡಿ ಒಂದು ಗೇಣು? ಕಣ್ಣಿನಲ್ಲಿ ನೀರು ಸುರಿಸುತ್ತ ಆ ಯೋಗಿ ಹೇಳಿದ: 'ಸಾಯಬೇಕಾದವಗೆ ಸಾಲದೆ ಇಷ್ಟು?'"

ಜಾದ್ರೂಪನ ಇನ್ನೊಂದು ಚಿತ್ರ (ಪ್ಯಾರಿಸ್ ಪಟ್ಟಣದಲ್ಲಿ) ಲೂವರ್ ವಸ್ತು ಪ್ರದರ್ಶನಶಾಲೆಯಲ್ಲಿದೆ. ಅದರ ಮೇಲೆ ತಾರೀಖಿಲ್ಲ, ಚಿತ್ರಕಾರನ ಹೆಸರೂ ಇಲ್ಲ. ಇದು ಚರಿತ್ರೆಯದೃಷ್ಟಿಯಿಂದಲ್ಲದೆ ಕಲಾದೃಷ್ಟಿಯಿಂದಲೂ ಅಪೂರ್ವವಾದುದು. ಈ ಎರಡು ಚಿತ್ರಗಳೂ ಹಿಂದೂ ಮುಸ್ಲಿಮರು ಹೆಮ್ಮೆ ಪಡಬಹುದಾದಂಥವು. ನೀನು ಸತ್ತಾಗ ನಿನ್ನ ಶವವನ್ನು ದಹನಮಾಡಲು ಹಿಂದುಗಳೂ ಮಣ್ಣುಮಾಡಲು ಮುಸ್ಲಿಮರೂ ಕೇಳುವಂತೆ ಬಾಳು ಎಂದು ಒಂದು ಹಿಂದೂಸ್ತಾನಿ ಗಾದೆಯಿದೆ. ಜಾದ್ರೂಪ ಮತ್ತು ಜಹಾಂಗೀರ್ ಇವರಿಬ್ಬರ ಜೀವನಚರಿತ್ರೆಗಳು ಅದಕ್ಕನುಸಾರವಾಗಿವೆ.

ಇಂಥ ಚಾರಿತ್ರಕ ಪ್ರಸಂಗಗಳನ್ನು ಓದಿದಾಗ ಹಿಂದೂ ಮುಸ್ಲಿಂ ಸಮಸ್ಯೆಯ ಭಾರದಿಂದ ಕುಗ್ಗಿಹೋಗಿರುವ ಹೃದಯ ಸ್ವಲ್ಪ ಹಗುರವಾಗುವುದು, ಉತ್ಸಾಹಭರಿತವಾಗುವುದು.

ಜಿ. ಹನುಮಂತರಾವ್.

ಸೀತೆಯ ಸಂದೇಶ

ಹೊಕ್ಕು ಬಳಸಿದ ಊರೆ, ಪಾಪನಗರಿಯು ಲಂಕೆ?
ಕಂಡು ಕೇಳಿದ್ದೆಲ್ಲ ತಂತ್ರವೆನ್ನುವ ಶಂಕೆ
ತಾಯ್ಗೆ. ಕೊಂಡ, ಹೊಂಡ, ಬಳ್ಳಿ, ಹೂ, ಮಿಡಿ, ಜಿಂಕೆ,
ಏನಿದ್ದು ತಾಯ್ಗೆ ಸುಖವೆ? ಬಾನ್ ಹೊಳೆದು,
ಬಿಸಿಲಾಡಿ, ಕಡಲ ತಂಗಾಳಿ ಮೆಲ್ಲನೆ ಸುಳಿದು,
ಕಾರ್ಮುಗಿಲು ನೆರೆದು, ಮಳೆಸುರಿದು, ಕುಡಿಮಿಂಚೊಡೆದು,
ಋತು ಚಕ್ರ ಸಾಗಿ, ಏನಾಗಿ, ಹರುಷವೆ ತಾಯ್ಗೆ?
ವಿಧಿಯ ತೋಳ್ ಬಳಸಿನಲಿ ದಿವಿಜರಿಪು ತಲೆದೂಗೆ,—
ಚಿಂತೆಯಲಿ ಮುಳುಗಿ ರಾಮಧ್ಯಾನದಲಿ ಸೀತೆ
ಬಂಧನವನೆಂತು ಸಹಿಸಿದಳೋ ಜಗನ್ಮಾತೆ!
ಕ್ರೌಂಚಮಿಥುನದಲಿ ಒಂದರ ಕೊಲೆಗೆ ವಾಲ್ಮೀಕಿ
ಶಪಿಸಿದ ನಿಷಾದ, ರಾವಣನಾಗಿ ಭೂಮಿಯಲಿ
ಹುಟ್ಟಿ, ಕಾಡಿದನು ಸೀತೆಯನು. ಭಾರತಲಕ್ಷ್ಮಿ
ದ್ವೀಪವಾಸಿಗಳ ಬಂಧನದ ದುರ್ಭಿಕ್ಷದಲಿ
ಚಿರಕಾಲ ನೊಂದು, ದಿಟವನು ಕಂಡು, ಲಂಕೆಯನು
ಸುಡುವುದೇ ಧರ್ಮ, ಹಿಂಸಾಜೀವಿಗಳ ತೊಡೆದು
ಗೆದ್ದು ಬಾಳುವುದೇ ಅಹಿಂಸೆ,—ಸತ್ಪಥವೆಂದು
ಕ್ಷಾತ್ರವನು ಬೆಳಗಿ, ರಾಮಾಯಣದ ಹೃದಯದಲಿ
ಬಿಡುಗಡೆಯ ಬೀಜಮಂತ್ರವ ಹಾಡಿ, ನಾಡಹರಸಿ
ನೆಲಸಿ ನಗುತಿಹಳು ಧ್ರುವಶಾಂತಿಯಲಿ ನವಶಕ್ತಿಯಾಗಿ.

ಕೆ.ಎಸ್.ನ.

ಪ್ರಚಾರ

ಪ್ರಚಾರಪದದ ಅರ್ಥ ವಿಶಾಲವಾದುದು. ಯಾವ್ರದಾದರೂ ಒಂದು ಸಂದರ್ಭಕ್ಕೆ ಇದನ್ನು ಸರಿಹೊಂದಿಸಿಕೊಳ್ಳದಿದ್ದರೆ ಇದರ ಅರ್ಥ ವಿವರಣೆ ಕಠಿಣವಾಗುವುದು. ಏನು ಪ್ರಚಾರ? ಎಲ್ಲಿ? ಏತಕ್ಕೆ? ಮುಂತಾದ ಪ್ರಶ್ನೆಗಳು ಬೇರೆ ಏಳುವುವು. ಆದುದರಿಂದಲೇ ಸಾಹಿತ್ಯಪ್ರಚಾರ, ಅಕ್ಷರಪ್ರಚಾರ, ಗ್ರಾಮಾಭಿವೃದ್ಧಿ ಪ್ರಚಾರ—ಮುಂತಾಗಿ ಇದನ್ನು ವಿಭಾಗಮಾಡಲಾಗಿದೆ. ಗ್ರಾಮಾಭಿವೃದ್ಧಿ ಪ್ರಚಾರ ಎಂದರೆ, ಗ್ರಾಮಾಭಿವೃದ್ಧಿಯ ವಿಷಯದಲ್ಲಿ ರೈತರು ಏನೇನು ತಿಳಿಯಬೇಕೋ ಅವನ್ನೆಲ್ಲಾ ಅವರ ಮನಸ್ಸಿಗೆ ಹಿಡಿಯುವ ರೀತಿಯಲ್ಲಿ ಸರಿಯಾದ ಜ್ಞಾನ ಅವರಿಗುಂಟುಮಾಡುವ ರೀತಿಯಲ್ಲಿ ಹೇಳುವುದು ಎಂದರ್ಥ.

ಪ್ರಚಾರಕಾರ್ಯವು ನಾವು ಊಹಿಸುವಷ್ಟು ಸುಲಭವಲ್ಲ. ಇದೊಂದು ಮಹಾಕಾರ್ಯ. ಇದನ್ನು ಸಾಂಗವಾಗಿ ನೆರವೇರಿಸುವುದಕ್ಕೆ ಬುದ್ಧಿ ಬೇಕು; ಜ್ಞಾನ ಬೇಕು; ವಿಷಯ ಬೇಕು; ಸಹಾಯ ಸಂಪತ್ತಿಗಳು ಬೇಕು; ಇವುಗಳ ಜೊತೆಗೆ ಒಂದು ಬಗೆಯ ಸ್ವಾತಂತ್ರ್ಯ ಬೇಕು. ಇಷ್ಟೇ ಅಲ್ಲ. ಪ್ರಚಾರವೆಂಬುದು ಜಾಹಿರಾತು ಪ್ರಕಟನೆಯೆ? ಮಾತಿನ ಹೋರಾಟವೆ? ಅಥವಾ ಮಿಷನರಿ ವೃತ್ತಿಯಂತೆ ಮತಪ್ರಚಾರವೇ? ಈ ಮೂರು ಬಗೆಯ ಚಲನವಲನಗಳು ಇದರಲ್ಲಿವೆಯೆ? ಇದು ಕಲೆಯೆ ಅಥವಾ ವಿಜ್ಞಾನವೆ? ಮುಂತಾದ ತೊಡಕು ಪ್ರಶ್ನೆಗಳು ಏಳುತ್ತವೆ. ಸ್ವಲ್ಪ ಮಟ್ಟಿಗೆ ಇವನ್ನು ಇಲ್ಲಿ ವಿಚಾರಮಾಡುವುದು ಆವಶ್ಯಕ.

ಜಾಹಿರಾತು ಇಂದಿನ ವ್ಯಾಪಾರೋದ್ಯಮದ ಮುಖ್ಯಸಾಧನ. ಈಗಿನ ಪೈಪೋಟಿ ಪ್ರಪಂಚದಲ್ಲಿ ವಿಜ್ಞಾನಕ್ಕಿರುವಷ್ಟು ಪ್ರಾಶಸ್ತ್ಯ ಇದಕ್ಕೆ ದೊರೆತಿದೆ. ಪ್ರಚಾರವೇ ಜಾಹಿರಾತಿನ ಅಂಗ ಎನ್ನುವಷ್ಟು ದೂರ ಪ್ರಕಟನಕಾರರು ಹೋಗಿದ್ದಾರೆ. ಆದರೆ ವಸ್ತುಸ್ಥಿತಿಯಲ್ಲಿ ಪ್ರಚಾರ ಮೊದಲು ಆ ಮೇಲೆ ಜಾಹಿರಾತು. ಪ್ರಚಾರ ತಂದೆ ಜಾಹಿರಾತು ಮಗ: ಕೆಲವು ಸಂದರ್ಭಗಳಲ್ಲಿ ಪ್ರಚಾರದಿಂದ ಪ್ರಕಟನೆ ಕಲಿಯಬೇಕಾದುದಿದೆ. ಇನ್ನು ಕೆಲವು ಸಂದರ್ಭಗಳಲ್ಲಿ ಪ್ರಕಟನೆಯಿಂದ ಪ್ರಚಾರ ಕಲಿಯಬೇಕಾದುದೂ ಇದೆ. ಪ್ರಕಟನೆಯಿಂದ ತಾತ್ಕಾಲಿಕ ಫಲವುಂಟಾಗುವುದಿಲ್ಲ. ಜನರು ಅದನ್ನು ಓದಬೇಕು. ಇತರರಿಗೆ ಹೇಳಬೇಕು. ಅವರಿಗೆ ವಿಷಯಜ್ಞಾನವುಂಟಾಗಬೇಕು. ಅದು ಅವರ ಅನುಭವದಲ್ಲಿ ಬರಬೇಕು. ಹೀಗೆಲ್ಲಾ ಆಗಬೇಕಾದರೆ ನಿಧಾನ.

ಪ್ರಚಾರದ ವಿಷಯ ಹಾಗಲ್ಲ. ಜನರು ಪ್ರಚಾರಭಾಷಣ ಕೇಳಿದ ತಕ್ಷಣ ವಿಷಯ ಗ್ರಹಣವಾಗಬಹುದು. ಕೂಡಲೆ ಅವರಲ್ಲಿ ನಿರೀಕ್ಷಿಸಿದ ಪರಿಣಾಮವುಂಟಾಗಬಹುದು. ಪ್ರಕಟನೆಗೆ ಓದಬಲ್ಲವರೇ ಬೇಕು. ಜ್ಞಾನವುಳ್ಳವರಾಗಬೇಕು. ಪ್ರಚಾರ ಎಲ್ಲರಲ್ಲಿಯೂ ಯಾವ ಭೇದವೂ ಇಲ್ಲದೆ ಸಾಧ್ಯವಾಗಬಹುದು.

ಪ್ರಚಾರಕ್ಕೂ ಪ್ರಕಟನೆಗೂ ಒಂದು ವ್ಯತ್ಯಾಸವಿದೆ. ಪ್ರಕಟನೆ ಲಾಯರ ಕೆಲಸದ ಹಾಗೆ. ಇಂದು ಒಬ್ಬ ನಾಳೆ ಇನ್ನೊಬ್ಬ ತನ್ನ ಕಕ್ಷಿಗಾರ ತಪ್ಪಿತಸ್ಥನೆಂದು ತಿಳಿದಿದ್ದರೂ ಲಾಯರು, ಅವನು ತಪ್ಪಿತಸ್ಥನಲ್ಲವೆಂದು ನ್ಯಾಯಾಸ್ಥಾನದಲ್ಲಿ ವಾದಿಸಲು ಸಿದ್ಧನಿರುತ್ತಾನೆ. ಪ್ರಕಟನೆಯ ಕೆಲಸವೂ ಹಾಗೆಯೇ. ಜಾಹಿರಾತಿಗೆ ವಸ್ತುಜ್ಞಾನ, ಸ್ವರೂಪ, ಗುಣ, ಉಪಯೋಗ, ಇವೊಂದೂ ಬೇಕಿಲ್ಲ. ಜನರ ಮನಸ್ಸನ್ನು ಆಕರ್ಷಿಸುವಂತೆ, ಅವರ ಗಮನವನ್ನು ಸೆಳೆಯಲು ಅನುಕೂಲವಾಗುವ ಹಾಗೆ, ಬಣ್ಣಬಣ್ಣದ ಚಿತ್ರದಲ್ಲಿ, ದೊಡ್ಡ ದೊಡ್ಡ ಅಕ್ಷರದಲ್ಲಿ, ಪ್ರಕಟವಾದರೆ ಸಾಕು. ಅಲ್ಲಿಗೆ ಅದರ ಕೆಲಸ ಪೂರ್ತಿಯಾದಂತೆ. ಪ್ರಚಾರ ಹಾಗಲ್ಲ. ಇದಕ್ಕೆ ನಂಬಿಕೆ ಬೇಕು, ಆತ್ಮವಿಶ್ವಾಸವಿರಬೇಕು, ಸತ್ಯವಾಗಿರಬೇಕು. ಇವೇ ಪ್ರಚಾರದ ಅಡಿಪಾಯ. ಈ ದೃಷ್ಟಿಯಿಂದ ಪ್ರಚಾರಕನ ಕೆಲಸ ಕಠಿಣ. ಕಷ್ಟಸಾಧ್ಯ ಎಂಬುದು ಗೋಚರವಾಗುವುದು.

ಪ್ರಚಾರವು ಯಶಸ್ವಿಯಾಗಬೇಕಾದರೆ, ಪ್ರಚಾರಕನಲ್ಲಿ ಕೆಲವು ಗುಣಗಳಿದ್ದೇ ಇರಬೇಕು. ಅವುಗಳಲ್ಲಿ ಮುಖ್ಯವಾದುವು, ಧರ್ಮ, ಸತ್ಯ, ತ್ಯಾಗ, ವಿಶ್ವಾಸ. ತಾನು ಮಾಡುವ ಪ್ರಚಾರದಲ್ಲಿ ಅವನಿಗೆ ಪೂರ್ಣ ನಂಬಿಕೆ ಇರಬೇಕು. ಅದು ದೇಶದ ಏಳಿಗೆಗಾಗಿ ಎಂಬ ವಿಶಾಲ ಭಾವನೆ ಹುಟ್ಟಬೇಕು, ನಟನು ರಂಗದ ಮೇಲೆ ಬಂದಾಗ, ತನ್ನ ವ್ಯಕ್ತಿತ್ವವನ್ನು ಮರೆತು, ನಾಟಕದ ಪಾತ್ರವೆಂದು ಹೇಗೆ ತಿಳಿಯಬೇಕೋ ಹಾಗೆಯೇ ಪ್ರಚಾರಕನು ಕೂಡ ಪ್ರಚಾರ ಮಾಡುವಾಗ ತನ್ನ ವ್ಯಕ್ತಿತ್ವವನ್ನು ಮರೆಯಬೇಕು. ತಾನು ಮಾಡುವುದು ಒಂದು ಸಾಧನೆಗಾಗಿ ಎಂಬ ಭಾವನೆ ಇರಬೇಕು. ಪ್ರಚಾರಕನಿಗೆ ಪ್ರಚಾರದಲ್ಲಿ ಆತ್ಮ ವಿಶ್ವಾಸ ಹುಟ್ಟದಿದ್ದರೆ ಅವನು ಇತರರ ವಿಶ್ವಾಸವನ್ನೂ, ನಂಬಿಕೆಯನ್ನೂ, ಗಳಿಸಲು ಸಾಧ್ಯವಿಲ್ಲ. ಪ್ರಚಾರಕನಿಗೆ ಆತ್ಮವಿಶ್ವಾಸವಿದ್ದರೆ, ಅವನ ಪ್ರಚಾರ ಸಫಲವಾಗುವುದು.

ಪ್ರಚಾರವು ವಿಜ್ಞಾನವೇ ಕಲೆಯೇ ಎಂಬುದು ಮುಂದಿನ ಪ್ರಶ್ನೆ. ವಿಜ್ಞಾನದಲ್ಲಿ ಒಂದು ಬಗೆಯ ನಿಯಮವಿದೆ. ಶಾಸನ ವಿಧಿ ಇದೆ. ತತ್ವ ಪ್ರತಿಪಾದನವೇ ಇದೆ. ಅವುಗಳನ್ನು ಎಲ್ಲ ವಿಜ್ಞಾನಿಯೂ ಪಾಲಿಸಲೇಬೇಕು. ಅದರಂತೆ ನಡೆಯಬೇಕು. ಪ್ರಚಾರದಲ್ಲಿ ಅಂತಹ ವಿಶ್ವವ್ಯಾಪಕನಿಯಮ ಯಾವುದೂ ಇಲ್ಲ. ಇದೊಂದು ಬಗೆಯ ಕಲೆ, ಸೊಗಸಾದ ಚಿತ್ರಪಠರಚನೆಗೆ ಬೇಕಾದುದು ಬಣ್ಣ, ಕುಂಚ, ಪಠ ಅಥವಾ

ಕಾಗದ. ಬುದ್ಧಿವಂತನಾದವನು, ಕಲಾಕೌಶಲವುಳ್ಳವನು, ಯಾವಯಾವ ಬಣ್ಣವನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಮಿಶ್ರಮಾಡಬೇಕು, ಯಾವಯಾವ ಭಾಗಕ್ಕೆ ಎಂತೆಂತಹ ಬಣ್ಣ ಹಚ್ಚಬೇಕು, ಎಂಬ ಸಾಮಾನ್ಯ ನಿಯಮವನ್ನು ತಿಳಿದೇ ಇದ್ದಾನೆ. ಬರಿಯ ಈ ನಿಯಮ ತಿಳಿದರೆ ಸಾಲದು. ಚಿತ್ರಪಟ ಅಂದವಾಗುವುದಿಲ್ಲ. ಜೊತೆಗೆ ಕೈಚಳಕ ಬೇಕು. ಆತ್ಮವಿಶ್ವಾಸ ಬೇಕು. ರಚನಾ ಶಕ್ತಿ ಇರಬೇಕು. ಅನುಭವವೂ ಬೇಕು.

ಹೀಗೆ ಪ್ರಚಾರ ಒಂದು ಕಲೆ. ಪ್ರಚಾರಕನಿಗೆ ಬೇಕಾದುದು ಆತ್ಮಜ್ಞಾನ, ಪ್ರೇರೇಪಣ ಶಕ್ತಿ. ಹುದುಗಿರುವ ಗುಣಗಳನ್ನು ವಿಕಾಸಪಡಿಸಬೇಕು. ಗುಪ್ತವಾಗಿರುವ ಗುಣಗಳು ಮೊದಲೇ ಅಲ್ಲಿರದಿದ್ದರೆ, ಅವನ್ನಲ್ಲಿ ವೃದ್ಧಿಪಡಿಸುವುದಕ್ಕಾಗುವುದಿಲ್ಲ. ಚಿತ್ರಗಾರನ ಕಲ್ಪನಾಶಕ್ತಿ ಪರಿಪೂರ್ಣವಾದಂತೆಲ್ಲ ಚಿತ್ರಹೇಗೆ ಉತ್ತಮವಾಗುವುದೋ, ಹಾಗೆಯೇ ಪ್ರಚಾರ ಕೂಡ ಕಲಾಕೌಶಲದಿಂದ ಕೂಡಿರಬೇಕು. ಆದುದರಿಂದ ಎಲ್ಲರೂ ಪ್ರಚಾರಕರಾಗಲು ಸಾಧ್ಯವಿಲ್ಲ. ಶಕ್ಯವಿದ್ದಿದ್ದರೆ ಎಲ್ಲರೂ ಚಿತ್ರಗಾರರೇ ಆಗುತ್ತಿದ್ದರು. ಎಷ್ಟು ಪ್ರಯತ್ನಪಟ್ಟರೂ, ಕೆಲವರು ಚಿತ್ರಗಾರರೇಕಾಗುವುದಿಲ್ಲ? ಅವರಲ್ಲಿ ಅಂತಹ ಗುಣವಿಲ್ಲ ಎಂಬ ಅರ್ಥವಾಗುವುದು. ಅಂತೆಯೇ ಪ್ರಚಾರಕನಿಗೆ ಕೂಡ ಕೆಲವು ವಿಶೇಷಗುಣ ಇರಲೇಬೇಕು.

ಪ್ರಚಾರದ ಸ್ವರೂಪ

ಮತಾಭಿಮಾನಿಗಿರುವಂತೆ ಪೂರ್ಣ ವಿಶ್ವಾಸವೂ ಆಚಾರನಿಷ್ಠೆಯೂ ಪ್ರಚಾರಕನಿಗಿರಬೇಕು. ಹೆಜ್ಜೆಹೆಜ್ಜೆಗೂ ಅವನೂ ಅಧಿಕಾರಿಗಳ ಆಜ್ಞೆಯನ್ನಾಗಲಿ ಸಹಾಯವನ್ನಾಗಲಿ ನಿರೀಕ್ಷಿಸುತ್ತಿರಬಾರದು. ತನ್ನ ಕಾರ್ಯದಲ್ಲಿ ಅವನಿಗೆ ಸ್ವಾತಂತ್ರ್ಯವಿರಬೇಕು. ತಾತ್ಕಾಲಿಕವಾದ ನಿರ್ಧರಜ್ಞಾನ ಅವನಿಗಿರಬೇಕು. ದೇಶಭಾಷೆ, ರಾಜಕೀಯ ಶ್ರದ್ಧೆ, ಅನುಭವ, ವಾಕ್ಪಟುತ್ವ—ಇವೆಲ್ಲ ಗುಣಸಂಪುಷ್ಟಿಯೂ ಬೇಕು. ಉತ್ತಮ ಶಿಕ್ಷಣವಿಲ್ಲದೆ ಇವೊಂದೂ ಬರುವಹಾಗಿಲ್ಲ. ಆದುದರಿಂದ ಪ್ರಚಾರಕನ ಯೋಗ್ಯತೆ ಇಷ್ಟೇ ಎಂದು ನಿಶ್ಚಯಮಾಡುವಹಾಗಿಲ್ಲ.

ಪ್ರಚಾರಕ್ಷೇತ್ರವು ಎಲ್ಲರಿಗೂ ತೆರೆದಿದೆ. ಆದರೆ ಎಲ್ಲರೂ ಉತ್ತಮ ಪ್ರಚಾರಕರಾಗುವುದಿಲ್ಲ. ಸಾಮಾನ್ಯವಾಗಿ ಉಪನ್ಯಾಸಕರು, ಪತ್ರಿಕಾಕರ್ತರು, ಆಕಾಶವಾಣಿಗಳ ಭಾಷಣಕಾರರು,—ಅವರಲ್ಲಿ ಕಲವರು ಮಾತ್ರ ಉತ್ತಮ ಪ್ರಚಾರಕರಾಗಬಲ್ಲರು. ಪತ್ರಿಕಾಕರ್ತನಿಗೆ ಪ್ರಚಾರದ ಔದ್ಯೋಗಿಕ ಗುಣ ತಿಳಿದಿರುತ್ತದೆ. ತಾತ್ಕಾಲಿಕ ವಿಷಯನಿರ್ಧಾರ ಜ್ಞಾನವಿರುತ್ತದೆ. ರಾಜಕೀಯ, ಸಾಮಾಜಿಕ, ಆರ್ಥಿಕ ವಿಷಯ ವಾಸನೆ ಇರುತ್ತದೆ. ಮತಾಚಾರ್ಯರಿಗೂ, ಮಿಷನರಿಗಳಿಗೂ ಇರುವಂತಹ ಉತ್ಸಾಹ

ಅವನಿಗಿದೆಯೆಂದು ಹೇಳಲಾಗುವುದಿಲ್ಲ. ಆದರೂ ಇದನ್ನು ಕುದುರಿಸಿಕೊಳ್ಳಬಹುದು. ಒಟ್ಟಿನಲ್ಲಿ ಪ್ರಚಾರಕನಿಗೂ ಪತ್ರಿಕಾಕರ್ತನಿಗೂ ಸಮೀಪ ಸಂಬಂಧವಿದೆ.

ಉತ್ತಮ ಪ್ರಚಾರಕರು ಪತ್ರಿಕಾಕರ್ತರ ಗುಂಪಿನಿಂದ ಬಂದಿರುವ ನಿದರ್ಶನಗಳು ಬೇಕಾದಷ್ಟಿವೆ. ಲಾರ್ಡ್ ನಾರ್ತ್‌ಕ್ಲಿಫ್ಫರು ಮೊದಲು ಶ್ರೇಷ್ಠ ಪತ್ರಿಕಾಕರ್ತರಾಗಿದ್ದವರು. ಆ ಮೇಲೆ ಅವರು ಪ್ರಚಾರಕಾರ್ಯದ ಮುಖ್ಯಾಧಿಕಾರಿಗಳಾದರು. ಪ್ರಚಾರದ ಶ್ರೇಷ್ಠತೆಯನ್ನು ಪ್ರಚಾರಕರ ಸಂಖ್ಯೆಯ ಆಧಾರದ ಮೇಲೆ ನಿಶ್ಚಯಮಾಡುವುದಕ್ಕಾಗುವುದಿಲ್ಲ. ಗುಣಮುಖ್ಯವೇ ಹೊರತು ಸಂಖ್ಯೆಯಲ್ಲಿ ಕೆಲಸಕ್ಕೆ ಬಾರದ ದೊಡ್ಡ ತಂಡಕ್ಕಿಂತ, ನಿಪುಣರಾದ ಕೆಲವು ಪ್ರಚಾರಕರೇ ಬೇಕಾದಷ್ಟು ಕೆಲಸ ಸಾಧಿಸಬಹುದು. ಕಳೆದ ಮಹಾ ಯುದ್ಧದಲ್ಲಿ, ಶತ್ರುರಾಜ್ಯಗಳಲ್ಲಿ ಪ್ರಚಾರಮಾಡುವುದಕ್ಕೆ ಬಹು ಸಣ್ಣ ತಂಡವೊಂದು ಇದ್ದಿತು. ಇದ್ದವರು ಒಬ್ಬ ಡೈರೆಕ್ಟರು. ಇಬ್ಬರು ಅಸಿಸ್ಟೆಂಟು ಡೈರಕ್ಟರು. ಐವತ್ತು ಜನ ಪ್ರಚಾರಕರು. ಅವರ ಕೆಲಸ ಅಗಾಧವಾದುದು. ವಿಷಯ, ಭಾಷೆ, ದೇಶಪರಿಸ್ಥಿತಿಗಳನ್ನು ಚೆನ್ನಾಗಿ ತಿಳಿದ ಹತ್ತು ಹನ್ನೆರಡು ಜನ ಉತ್ತಮಪ್ರಚಾರಕರು ಬೇಕಾದಷ್ಟು ಕಾರ್ಯಸಾಧನೆ ಮಾಡಬಹುದು. ಇಷ್ಟು ಜನರೇ ಇಡಿಯ ದೇಶಕ್ಕೆ ಸಾಕಾಗುವಷ್ಟು ಪತ್ರಿಕಾಪ್ರಕಟನೆ ಮಾಡಬಹುದು. ಆಕಾಶವಾಣಿ ಭಾಷಣಮಾಡಬಹುದು. ಒಂದು ವ್ಯವಸ್ಥೆಬೇಕು, ಅಷ್ಟೇ! ಗಾಯ್‌ಬೆಲ್ಸ್ ಒಬ್ಬಾತನ ಪ್ರಚಾರ ಸಾಹಸ ಹತ್ತು ಸೈನ್ಯಗಳ ಕೆಲಸದ ಸಮಾನವಾಯಿತು ಜರ್ಮನಿಯಲ್ಲಿ.

ಪ್ರಚಾರದ ರಚನೆ

ವಿಷಯಸಂಗ್ರಹ ಸಂಸ್ಥೆ, ಸರ್ಕಾರದ ಅಂಗವಾದ ಸಾರ್ವಜನಿಕ ಸಂಸ್ಥೆ, ಸಾಂಸ್ಕೃತಿಕ ಮತ್ತು ಶಿಕ್ಷಣಪ್ರಚಾರ ಸಂಸ್ಥೆ, ಆಕಾಶವಾಣಿ ಮತ್ತು ಪತ್ರಿಕಾ ಪ್ರಕಟನಾ ಸಂಸ್ಥೆ—ಇವೆಲ್ಲ ಪ್ರಚಾರದ ರಚನೆ. ಈ ಎಲ್ಲ ಪ್ರಚಾರಕಾರ್ಯವೂ ಒಬ್ಬ ಮೇಲಧಿಕಾರಿ ವ್ಯಕ್ತಿಯ ಅಧೀನದಲ್ಲಿರಬಹುದು. ಇದ್ದರೆ ಪತ್ರವ್ಯವಹಾರ ಸುಲಭವಾಗುವುದು. ಕೆಲಸಕ್ಕೆ ಹಿಡಿಯುವ ಕಾಲಾವಕಾಶ ಕಡಮೆಯಾಗುವುದು. ವ್ಯವಸ್ಥಿತ ಕಾರ್ಯಕ್ರಮವೇರ್ಪಡುವುದು. ಮೈಸೂರು ಸಂಸ್ಥಾನದಲ್ಲಿ ಬಿ.ಬಿ.ಸಿ. ಅಂತಹ ಒಂದು ಪ್ರಚಾರ ಸಂಸ್ಥೆ ಇದ್ದರೆ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಂಡಪ್ರಚಾರ ನಡೆಸಬಹುದು.

ಪ್ರಚಾರದ ರೂಪ

ಪ್ರಚಾರ ಹೀಗೆಯೇ ಇರಬೇಕು, ಇಷ್ಟನ್ನೇ ಹೇಳಬೇಕು ಎಂದು ನಿರ್ಧರ ಮಾಡುವುದು ಕಷ್ಟ. ಇದರ ರೂಪ ಪ್ರಚಾರಕನ ಬುದ್ಧಿಬಲದ ಆಧಾರದ ಮೇಲಿದೆ.

ಶ್ರೇಷ್ಠ ಪ್ರಚಾರಕನು, ತನ್ನದೇ ಆದ ಒಂದು ಹೊಸ ರೂಪನ್ನು ಅದಕ್ಕೆ ಕೊಡಬಹುದು. ಒಂದು ಸಲ ಒಬ್ಬ ರಾಜನೀತಿಜ್ಞನು, ಒಬ್ಬ ಕ್ರಾಂತಿಕಾರಕ ಮಹಾಪುರುಷನ ಪ್ರಚಾರೋಪನ್ಯಾಸವನ್ನು ಅಚ್ಚುಹಾಕಿಸಿ, ಇಟ್ಟಿಗೆಯೊಳಗಿಟ್ಟು, ಕೆಲವು ಪ್ರಾಂತಗಳಿಗೆ ಕಳಿಹಿಸಿದನಂತೆ. ಅದನ್ನು ಜನರು ಓದಿದ ಮೇಲೆ ಅವರಲ್ಲಿ ಉತ್ತಮ ಪರಿಣಾಮವುಂಟಾಯಿತಂತೆ. ಹೀಗೆ ಗುಪ್ತರೀತಿಯಲ್ಲಿ ಪ್ರಚಾರಮಾಡುವ ರೂಪಗಳು ಅನೇಕ ವಿಧವಾಗಿವೆ. ಕಾರ್ಯಸಾಧನೆಯಾಗುವ ವರೆಗೆ ಪ್ರಚಾರದ ರೂಪ ಬಹು ಗುಟ್ಟಾಗಿರಬೇಕು.

ಎಲ್ಲರಿಗೂ ತಿಳಿದಿರುವ ಹಾಗೆ ಪ್ರಚಾರದ ರೂಪ ಎರಡು: ಒಂದು ಆಕಾಶವಾಣಿಯ ಭಾಷಣ ಅಥವಾ ನೇರವಾದ ಉಪನ್ಯಾಸ; ಇನ್ನೊಂದು ಪ್ರಕಟನಾ ಪತ್ರಿಕೆಯನ್ನು ಹಂಚುವುದು. ಮಾತನಾಡುವುದು ಬರೆಯುವುದು—ಇವೆರಡೂ ಪ್ರಚಾರದ ಎರಡು ಪಕ್ಕಗಳು. ಇವೆರಡಕ್ಕೂ ಇರುವ ಪರಸ್ಪರ ಸಂಬಂಧವನ್ನು ಸ್ವಲ್ಪ ಮಟ್ಟಿಗೆ ವಿಚಾರಮಾಡೋಣ.

ಉಪನ್ಯಾಸದಿಂದ ಹೇಳುವವರಿಗೂ, ಕೇಳುವವರಿಗೂ ಒಂದುವಿಧ ಪರಸ್ಪರ ಸಂಬಂಧ ಬೆಳೆಯುತ್ತದೆ. ರಾಜನೀತಿ ಮುಖಂಡರು, ಮಹಾನಾಯಕರು ಮಾತನಾಡುವಾಗ, ಕೇಳುವವರ ಮನಸ್ಸಿನಲ್ಲಿ ಪ್ರಚಂಡ ಬದಲಾವಣೆಯಾಗಬಹುದು. ಅಂತಹ ಪ್ರಚಾರ ಅನೇಕವೇಳೆ ಯಶಸ್ವಿಯಾಗುವುದು. ಇಂಗ್ಲೆಂಡ್ ದೇಶದ ಪ್ರಧಾನಿಯಾಗಿದ್ದ ಚರ್ಚಿಲ್ ಅವರು, ಇಟಲಿ ದೇಶವನ್ನು ಕುರಿತು, ೧೯೪೦ನೆಯ ಡಿಸೆಂಬರು ೨೩ನೆ ತಾರೀಖು ಪ್ರಚಾರಮಾಡಿದರು. ೧೯೪೨ನೆ ಜೂನ್ ೧೦ನೆಯ ದಿವಸ ಆರ್ಥರ್ ಗ್ರೀನ್‌ವುಡ್, ಬಿ.ಬಿ.ಸಿ. ಮೂಲಕ ಪ್ರಚಾರಮಾಡಿದರು. ಈ ಪ್ರಚಾರೋಪನ್ಯಾಸದ ಪರಿಣಾಮ ಬಹು ಯಶಸ್ವಿಯಾಯಿತು. ನಿರೀಕ್ಷಿಸಿದಂತೆ ಉತ್ತಮ ವಾತಾವರಣ ಉಂಟಾಯಿತು.

ಆಕಾಶವಾಣಿಯ ಉಪನ್ಯಾಸಕ್ಕೆ ಒಂದು ಕಾಲ ಬೇಕು. ನಿರ್ದಿಷ್ಟವಾದ ಸ್ಥಳಬೇಕು. ಕೇಳುವವರ ಮನಸ್ಸಿನಲ್ಲಿ ತತ್‌ಕ್ಷಣ ಪರಿಣಾಮವುಂಟಾಗುವುದು. ವೆಚ್ಚ ಬಹು ಕಡಮೆ. ಹೆಚ್ಚು ಸಿಬ್ಬಂದಿ ಬೇಕಾಗಿಲ್ಲ. ಅಕ್ಷರಸ್ಥರಿಗೂ, ಅನಕ್ಷರಸ್ಥರಿಗೂ ಎಲ್ಲರಿಗೂ ಒಂದೇ ಬಗೆಯ ಭಾಷಣ ಮಾಡಬಹುದು. ಆದರೆ ಇದಕ್ಕೆ ಯಂತ್ರ ಸೌಕರ್ಯಬೇಕು, ರೇಡಿಯೋ ಸಜ್ಜುಗಳಿರಬೇಕು; ಇವನ್ನೆಲ್ಲಾ ಎಲ್ಲ ಕಡೆಯೂ ಹೊಂದಿಸುವುದು ಕಷ್ಟ. ಇವು ಇರುವ ಕಡೆ ಸಭೆ ಕೂಡಿಸಬೇಕು. ಇಲ್ಲದಿದ್ದರೆ ಜನರು ಸಭೆ ಸೇರುವ ಸ್ಥಳಕ್ಕೆ ಯಂತ್ರಗಳನ್ನು ಒಯ್ಯಬೇಕು. ಇಷ್ಟೆಲ್ಲಾ ಮಾಡಿದರೂ ಆಕಾಶವಾಣಿಯ ಮೂಲಕ ಪ್ರಚಾರಮಾಡುತ್ತಿರುವಾಗ ಶತ್ರುವರ್ಗದವರು ಉಪನ್ಯಾಸ ಕೇಳದಂತೆ ತೊಂದರೆಮಾಡಲು ಅವಕಾಶವಿದೆ.

ಪ್ರಕಟನಪತ್ರಿಕೆ ಹಂಚುವುದು ಪ್ರಚಾರದ ಇನ್ನೊಂದು ರೂಪ, ಇಂತಹ ಪತ್ರಿಕೆಯನ್ನು ಪ್ರತಿಯೊಬ್ಬನಿಗೂ ಹಂಚಬಹುದು. ಆದರೆ ಲಕ್ಷಾಂತರ ಪ್ರತಿಗಳನ್ನು ಅಚ್ಚು ಹಾಕಿಸಬೇಕಾಗುವುದು. ಹಂಚುವುದಕ್ಕೆ ಹೆಚ್ಚು ಸಿಬ್ಬಂದಿ ಬೇಕು. ವಿಮಾನ, ಬಸ್ಸು, ಮೋಟಾರು, ರೈಲು, ಬೈಸಿಕಲ್—ಮುಂತಾದ ಸಾಧನಗಳನ್ನು ಉಪಯೋಗಿಸಬೇಕು. ಹಾಗೆ ಹಂಚಿದ ಪ್ರತಿಗಳನ್ನು ಜನರು ಓದಬೇಕು. ಓದಿ ಇತರರಿಗೆ ಹೇಳಬೇಕು. ಜನರು ಓದುವಂತೆ ಪ್ರೇರೇಪಿಸಬೇಕು. ಅವಕಾಶ ದೊರೆತಾಗ, ಮನಸ್ಸು ಬಂದಾಗ ಅವರು ಓದಿಕೊಳ್ಳಬಹುದು. ಆಕಾಶವಾಣಿಯ ಅಸೌಕರ್ಯ, ಅನನುಕೂಲಗಳು ಇದರಲ್ಲಿ ಇಲ್ಲ. ಮೇಲೆ ಹೇಳಿದ ಎರಡು ರೂಪಗಳು ಒಂದಕ್ಕೊಂದು ವಿರೋಧವಲ್ಲ. ಅನ್ಯೋನ್ಯದಿಂದ ಕೆಲಸ ಮಾಡಬಹುದು. ಪ್ರಕಟನ ಕೆಲಸದಿಂದ ಚಿತ್ರ, ನಕ್ಷೆ, ಅಂಕಿ, ಮುಂತಾದವನ್ನು ಬಣ್ಣಬಣ್ಣದಲ್ಲಿ ಅಚ್ಚುಹಾಕಿಸಿ, ದಪ್ಪದಪ್ಪ ಅಕ್ಷರದಲ್ಲಿ ಬರೆದು, ಜನರನ್ನು ಆಕರ್ಷಿಸುವ ರೀತಿಯಲ್ಲಿ ಹಂಚಿದರೆ ಆಕಾಶವಾಣಿಯ ಮೂಲಕ ಜನರಲ್ಲಿ ಹುಮ್ಮಸ್ಸು ಹುಟ್ಟುವಂತೆ ಭಾಷಣ ಮಾಡಬಹುದು.

ಪ್ರಚಾರದ ಆವಶ್ಯಕತೆ

ಪ್ರಚಾರಕ್ಕೆ ಅಗತ್ಯವಾದುದು ಮೂರು. ಒಂದು ನೀತಿ ಅಥವಾ ತತ್ವಪ್ರತಿಪಾದನೆ. ಇನ್ನೊಂದು ಭರವಸೆಯಾದ ಜ್ಞಾನ ಮತ್ತೊಂದು ಹೋರಾಟದ ಕೌಶಲ. ಸಾಮಾನ್ಯವಾಗಿ ಪ್ರಚಾರದ ಉದ್ದೇಶ ಎಚ್ಚರಿಕೆ ಕೊಡುವುದು; ಮುಂದೆ ಒಳ್ಳೆಯ ಪರಿಣಾಮವುಂಟಾಗುವಂತೆ ಮಾಡುವುದು. ಜನಾಂಗದಲ್ಲಿ ಬೇರೂರಿರುವ ಕೆಟ್ಟ ಅಭ್ಯಾಸಗಳನ್ನು ಬಿಡಿಸುವುದು; ಜನತೆಯ ಜೀವನವು ಸುಗಮವಾಗುವಂತೆ ಸೂಚನೆ ಕೊಡುವುದು. ಹೀಗೆಯೇ ಇನ್ನೂ ಎಷ್ಟೋ ಇವೆ. ಉದಾಹರಣೆಗಾಗಿ ಒಂದೆರಡನ್ನು ಇಲ್ಲಿ ಸೂಚಿಸಬಹುದು. 'ಶತ್ರುಸಹಾಯಕ ಕಾರ್ಯಗಳಲ್ಲಿ ಕೈಹಚ್ಚಬೇಡಿ.' 'ದೇಶೋದ್ಧಾರ ಕಾರ್ಯಗಳಲ್ಲಿ ನೆರವಾಗಿ' 'ಅನಾರೋಗ್ಯಕರವಾದ ದುರಭ್ಯಾಸಗಳನ್ನು ದೂರಮಾಡಿ'. ಹೇಳುವಾಗ ಒಂದು ನೀತಿ, ಅಥವಾ ತತ್ವ ಇದೆಯೇ? ಪ್ರಚಾರ ಮಾಡುವುದರ ಫಲವೇನಾಗುವುದು? ಎಂಬುದನ್ನು ಗಮನಿಸಬೇಕು.

ಪ್ರಚಾರಕ್ಕೆ ಅಗತ್ಯವಾದುದು ನಿಶ್ಚಯವಾದ ಜ್ಞಾನ. ಯಾವ ಕೆಲಸಕ್ಕಾದರೂ ತಿಳಿವು ಇರಲೇಬೇಕು. ಆದರೆ ಪ್ರಚಾರಕ್ಕೆ ಹೆಚ್ಚಿನ ಮಟ್ಟದ ಜ್ಞಾನ ಬೇಕು. ಇಂತಹ ತಿಳಿವಿನಲ್ಲಿ ಎರಡು ಬಗೆ ಇವೆ. ಒಂದು ತಾತ್ಕಾಲಿಕವಾದ ಫಲ ಗಳಿಸುವಂತಹ ಜ್ಞಾನ. ಇನ್ನೊಂದು ಶಾಶ್ವತವಾದ ಪರಿಣಾಮವುಂಟಾಗುವ ರೀತಿಯಲ್ಲಿ ಮಾಡುವ ತಿಳಿವು. ನಿಜವಾದ ಮತ್ತು ಶಾಶ್ವತವಾದ ಫಲ ಗಳಿಸಬೇಕಾದರೆ, ಪ್ರಚಾರಕನಿಗೆ

ದೇಶದ ರಚನೆ, ಜನಾಂಗದ ಸ್ವಭಾವ, ಅವರ ಮನೋಭಾವ ಅವರ ಮನಸ್ಸನ್ನಾಕರ್ಷಿಸುವ ವಿಧಾನ—ಎಲ್ಲವೂ ತಿಳಿದಿರಬೇಕು. ಇದರ ಜೊತೆಗೆ ವಿಷಯಸಂಗ್ರಹ, ಅಂಕಿಪಟ್ಟಿ, ಮುಂತಾದ ಸಾಮಗ್ರಿಗಳು ಸಿದ್ಧವಾಗಿರಬೇಕು. ಒಂದು ವಿಷಯದಲ್ಲಿ ನಿಜವಾದ, ನಿರ್ದಿಷ್ಟವಾದ ಜ್ಞಾನವಿಲ್ಲದೆ ಪ್ರಚಾರಮಾಡುವುದು ಕಷ್ಟ.

ಒಂದು ದೇಶವನ್ನು ರಕ್ಷಿಸಬೇಕಾದರೆ, ಸೈನ್ಯ, ನಾವೆ ಮತ್ತು ವಿಮಾನ, ಈ ಮೂರು ಅಂಗವಿರಬೇಕಲ್ಲವೇ ? ಹಾಗೆಯೇ ಪ್ರಚಾರವು ನಾಲ್ಕನೆಯ ಅಂಗ ಎಂದು ಹೇಳಲಾಗಿದೆ. ಇದು ಸುಳ್ಳಲ್ಲ. ದೇಶವನ್ನು ಶತ್ರುವಿನ ಕೈಯಿಂದ ರಕ್ಷಿಸಬೇಕಾದರೆ ಪ್ರಚಾರ ಬೇಕು. ಹಾಗೆಯೇ ದೇಶವನ್ನು ಬಡತನದ ಬೇಗೆಯಿಂದ ರಕ್ಷಿಸಬೇಕಾದರೂ ಪ್ರಚಾರ ಆವಶ್ಯಕ. ಪ್ರಚಾರವು ಮಾತಿನ ಪ್ರಯೋಗ, ನಿಜ. ಆದರೆ ಈ ಹೋರಾಟದಲ್ಲಿ ಗುರಿ ಚೆನ್ನಾಗಿರಬೇಕು. ನಿರ್ದಿಷ್ಟ ಜ್ಞಾನವಿರಬೇಕು. ಸೈನ್ಯವು ದಾಳಿಮಾಡಿ ವಿಜಯಗಳಿಸುವಂತೆ, ಪ್ರಚಾರವು ಮಾತಿನ ಹೋರಾಟದಿಂದ ತನ್ನ ಉದ್ದೇಶಸಾಧನೆಯ ವಿಜಯಗಳಿಸಬೇಕು. ಈ ಒಳಶತ್ರುವನ್ನು ನಾಶಮಾಡುವ ಕಾರ್ಯಕ್ರಮ ಕೈಗೊಳ್ಳಬೇಕು. ಇಂತಹ ಪ್ರಚಾರದಲ್ಲಿ ಸತ್ಯವಿರಬೇಕು. ಸತ್ಯವೇ ಎಲ್ಲಕ್ಕೂ ಮೂಲ. ಸತ್ಯಕ್ಕೆ ಎಂದಿಗೂ ಚ್ಯುತಿ ಇಲ್ಲ. ಪ್ರಚಾರದಲ್ಲಿ ವಿಷಯ ಲಂಬಿಸಿರಬಾರದು. ಅತಿಶಯೋಕ್ತಿಯಿಂದ ಅದನ್ನು ದೂರವಾಗಿಡಬೇಕು.

ಇಷ್ಟೆಲ್ಲ ಆದರೂ, ಪ್ರಚಾರವು ಇನ್ನೊಂದು ಕಾರ್ಯದ ಪರಿಣಾಮಕ್ಕೆ ಹೇತುವೇ ವಿನಾ ಅದೇ ಪರಿಣಾಮವಾಗಲಾರದು. ಪ್ರಚಾರದ ಕೆಲಸ, ತಾನು ಹೇಳುವುದನ್ನು ಹೇಳಿದರೆ ಆಯಿತು ಎಂಬುದಲ್ಲ. ಆಡುವ ಮಾತಿನಲ್ಲಿ ವಿನೋದವಿರಬಹುದು. ಹೇಳುವ ಉಪನ್ಯಾಸದಲ್ಲಿ ಬುದ್ಧಿಕುಶಲತೆ ಇರಬಹುದು. ಆದರೆ ಅದರಿಂದ ಉತ್ತಮ ಪರಿಣಾಮವುಂಟಾಗದಿದ್ದರೆ, ಅಷ್ಟುಮಾಡಿದ್ದು ವ್ಯರ್ಥ. ನಿರೀಕ್ಷಿಸಿದ ಫಲ ದೊರೆಯದಿದ್ದರೆ, ಉದ್ದೇಶ ಸಾಧನೆಯಾದಂತಾಗುವುದಿಲ್ಲ. ಪ್ರಚಾರದ ಕೆಲಸ ಉದ್ದೇಶ ಸಾಫಲ್ಯ ಹೊಂದಬೇಕಾದುದು. ಅದಕ್ಕಾಗಿಯೇ ಇದನ್ನು ಕಲೆ ಎಂದು ಹೇಳುವುದು. ಇದನ್ನು ಎಷ್ಟು ಶ್ರೇಷ್ಠರೀತಿಯಲ್ಲಿ ಅಭ್ಯಾಸಮಾಡಿದರೆ, ಅಷ್ಟುಬೇಗ ದೇಶೋದ್ಧಾರವಾಗುವುದು. ಜನಜೀವನದಲ್ಲಿಯೂ ಹೊಸ ತತ್ವದೃಷ್ಟಿಗಳ ಪ್ರಚಾರದಲ್ಲಿಯೂ ಬೇಗ ಒಂದು ಮಾರ್ಪಾಟನ್ನು ತರಬೇಕೆನ್ನುವವರು ಇಂದು ಪ್ರಚಾರವನ್ನು ವಿಶೇಷವಾಗಿ ಕೈಕೊಳ್ಳುವರು. ಜನಸಾಮಾನ್ಯರ ಮನಸ್ಸನ್ನೂ ಅವರ ಪಕ್ಷಪಾತಗಳನ್ನೂ ಉದ್ರೇಕಿಸಿ ಅವಕ್ಕೆ ಬೇಕಾದ ರೂಪಕೊಟ್ಟು ತಮ್ಮ ಉದ್ದೇಶಕ್ಕೆ ತಿರುಗಿಸಿಕೊಳ್ಳುವ, ದುಡಿಸುವ ಅವಕಾಶ ಇಂದು ಬಹಳವಿದೆ. ಆ ತಂತ್ರಸಾಧನದಿಂದ ನಾಗರಿಕತೆಯನ್ನು ಅಳಿಸುವುದಕ್ಕೆ, ಉಳಿಸುವುದಕ್ಕೆ, ಮುಂದುವರಿಸಿ ನಡಸುವದಕ್ಕೆ ಎಲ್ಲಕ್ಕೂ ಒಗ್ಗುವ ಅವಕಾಶ

ಉಂಟು. ಆದ್ದರಿಂದ ಸಾತ್ವಿಕರಾದವರ ಮತ್ತು ಸಾಮೂಹಿಕ ಹಿತವನ್ನೂ ನಾಲ್ಕು ಕಾಲದ ಹಿತವನ್ನೂ ಶುಚಿಯಾಗಿ ಸಾಧಿಸುವ ಅಭಿಲಾಷೆ ಇರುವವರ ಕೈಗೆ ಆ ಸಾಧನ ಸಿಕ್ಕಿದರೆ ಮಂಗಳ. ಇಲ್ಲವಾದರೆ ಲೋಕಜೀವನದ ಹದವನ್ನು ನಾಲ್ಕು ವರ್ಷದಲ್ಲಿ ಕೆಡಿಸಬಹುದು. ಲೋಕದ ಬಾಳನ್ನು ವಿರೂಪಗೊಳಿಸಿ ಅಶುಭ ಪ್ರವೃತ್ತಿಗಳನ್ನೇ ಬಿತ್ತಿ ನಾಶಕರವಾಗಬಹುದು. ಸಾವಿರ ವರ್ಷಗಳ ಸಂಸ್ಕಾರದ ಅಚ್ಚನ್ನು ಅಳಿಸಬಲ್ಲ ತಿರಿಚಬಲ್ಲ ಸಾಧನವೆಂದರೆ ಪ್ರಚಾರ. ವಿದ್ಯಾಶಾಲೆಗಳಲ್ಲಿ, ವೇದಿಕೆಗಳ ಮೇಲಿಂದ ಮತವಳರ ಮೂಲಕ, ಅಚ್ಚುಮಾಡುವ ಪುಸ್ತಕಗಳ ಮೂಲಕ, ವೃತ್ತಪತ್ರಿಕೆಗಳ ಮೂಲಕ, ದಿನದ ೨೪ ಘಂಟೆಯೂ ಮಾಡುವ ಬಾನುಲಿಯ ಘೋಷಣ ಮತ್ತು ಸ್ಥಿತಿ ವಿವರಣ ವ್ಯಾಖ್ಯಾನಗಳ ಮೂಲಕ, ಈ ವಿಶೇಷ ಗುರಿಯನ್ನು ಸಾಧಿಸಲು ಶಕ್ಯ. ಹತ್ತು ವರ್ಷಕ್ಕೆ ಮೇಲ್ಪಟ್ಟ ಹುಡುಗರನ್ನೆಲ್ಲ ಆರಿಸಿಕೊಂಡು ಒಂದು ಬಗೆಯ ಹೊಸರೀತಿಯ ಮನಃಪ್ರವೃತ್ತಿಗಳನ್ನೇ ಮುಂದಿನ ತಲೆಮಾರುಗಳಲ್ಲಿ ನಿರ್ಮಾಣ ಮಾಡಬಹುದೆನ್ನುವುದಕ್ಕೆ ನಾಟ್ಸಿ ಜರ್ಮನಿಯೇ ನಿದರ್ಶನ.

ಇಂದು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಪ್ರಚಾರ ಆವಶ್ಯಕ. ವ್ಯವಸಾಯ ವೃತ್ತಿಯೇ ಮುಖ್ಯವಾಗಿರುವ ನಮ್ಮ ದೇಶದಲ್ಲಿ, ಗ್ರಾಮಾಭಿವೃದ್ಧಿ ಪ್ರಚಾರ ಅಗತ್ಯವಾಗಿ ನಡೆಯಬೇಕಾಗಿದೆ. ಎಲ್ಲರೂ ಸುಲಭವಾಗಿ ನಡೆಸುವ ಕೆಲಸ ಇದಲ್ಲ. ಇದಕ್ಕೆ ಅಸಾಧಾರಣ ಶಕ್ತಿ ಬೇಕು. ವಿಶೇಷರೀತಿಯ ಚಾತುರ್ಯ ಬೇಕು. ನಿಷ್ಕಪಟವಾದ ಅಂತಶ್ಶುದ್ಧಿ ಬೇಕು.

ರೈತರ ಮನಸ್ಸನ್ನಾಕರ್ಷಿಸಿ, ಪುನರುದ್ಧಾರ ಕಾರ್ಯಗಳಲ್ಲಿ ಅವರಿಗೆ ಮಮತೆಯನ್ನೂ, ಶ್ರದ್ಧೆಯನ್ನೂ ಹುಟ್ಟಿಸಿದರೆ, ಅಭಿವೃದ್ಧಿಕಾರ್ಯಗಳು ಸುಲಭವಾಗುವುವು. ಸರಾಗವಾಗುವುವು. ಪ್ರಚಾರಕರಿಗೆ, ರೇಡಿಯೋ ಯಂತ್ರದಿಂದ ಕೂಡಿದ ಮೋಟಾರು, ಪ್ರಕಟನಸೌಕರ್ಯ ಚಿತ್ರಪಟ ಪ್ರದರ್ಶನ, ಮುಂತಾದ ಸಹಾಯ ಸಂಪತ್ತಿಗಳನ್ನು ಸರ್ಕಾರವು ಒದಗಿಸಿಕೊಟ್ಟರೆ ಪ್ರಚಾರಕಾರ್ಯ ಸುಗಮವಾಗಿ ನಡೆಯಬಹುದು.

ಡಿ. ಕೃಷ್ಣ ಐಯಂಗಾರ್.

ಬೆಸ್ತರ ಕರಿಯ ನಿಜವಾಗಿ ಯೋಗಿಯೆ?

ಈ ಪ್ರಶ್ನೆಯೇ ನಿಮಗೆ ಆಶ್ಚರ್ಯವಾಗಿ ತೋರಬಹುದು. ಕರಿಯನನ್ನು ನೋಡುವ ವರೆಗೆ ನನಗೂ ಹಾಗೆಯೇ ತೋರುತ್ತಿದ್ದಿತು. ಆದರೆ ಈಚೆಗೆ ಈ ಪ್ರಶ್ನೆಗೆ ಅಹುದು ಎಂಬ ಉತ್ತರವೇ ನನ್ನ ಮನಸ್ಸಿನಲ್ಲಿ ದಿನದಿನಕ್ಕೂ ಹೆಚ್ಚು ಸ್ಥಿರವಾಗುತ್ತಿದೆ.

ಮೊದಲನೆಯದಾಗಿ ಬೆಸ್ತರ ಕರಿಯ ಅಮರಲೋಕಕ್ಕೆ ಸೇರಿದವನು. ಅವನ ಕಸಬನ್ನು ನೋಡಿ ವರುಣಲೋಕಕ್ಕೆ ಎಂದು ಬೇಕಾದರೂ ಅನ್ನಿ. ಅವನಿಗೆ ಮುಪ್ಪೂ ಇಲ್ಲ. ಬಾಲ್ಯವೂ ಇಲ್ಲ. ಅವನಿಗಿರುವುದು ಯೌವನ ಒಂದೇ. ನಾನು ನೋಡಿದ ನಲವತ್ತು ವರುಷದಿಂದಲೂ ಅವನು ಒಂದೇ ಸಮನಾಗಿದ್ದಾನೆ. ಒಂದೊಂದು ಸಲ ೮೦ ವರುಷದ ಮುಪ್ಪಿನ ನಮ್ಮ ತಂದೆಯವರು ಸಹ ನಾನು ನೋಡಿದಂದಿನಿಂದ ಕರಿಯ ಹೀಗೆಯೇ ಇದ್ದಾನೆ ಎಂದು ಹೇಳಿದುದುಂಟು.

ಕರಿಯ ಎಂಬುದು ಅವನಿಗೆ ನಿಜವಾದ ಅನ್ವರ್ಥವಾದ ಹೆಸರು. ಭಗವಂತ ಯಾವ ಕೆಲಸವನ್ನೂ ಪೂರ್ಣವಾಗಿ ಕುಂದಕವಿಲ್ಲದೆ ಮಾಡುತ್ತಾನೆ. ಅವನು ಪೂರ್ಣ ಕಲೆಗಾರ. ಕರಿಯನ ಕಪ್ಪು ಆ ಭಗವಂತನ ಪರಿಪೂರ್ಣ ದೋಷರಹಿತ ಕಲೆ. ನಮ್ಮಲ್ಲಿ ಯಂತೂ ಭಗವಂತನಿಗೆ ಇಷ್ಟವಾದ ಬಣ್ಣ ಕಪ್ಪೇ. ದೇವರು ಮನುಷ್ಯನನ್ನು ತನ್ನ ಆಕೃತಿಯಲ್ಲಿ ಸೃಷ್ಟಿಸಿದನೆಂದು ಕ್ರಿಸ್ತರು ಹೇಳುತ್ತಾರೆ. ದೇವರು ತನ್ನ ಭಕ್ತರನ್ನು ತನ್ನ ಬಣ್ಣದಲ್ಲಿ ಸೃಷ್ಟಿಸಿದ್ದಾನೆ ಎಂಬುದರಲ್ಲಿ ನನಗೇನೂ ಸಂದೇಹವಿಲ್ಲ. ನಮ್ಮೂರ ನರಸಿಂಹಸ್ವಾಮಿ ಮೂಲ ವಿಗ್ರಹ ನೋಡಿ, ಟಾರು. ದೇವರ ಪೂಜಾರಿಯ ಬಣ್ಣ ನೋಡಿ, ನಮ್ಮೂರಮುಂಧಲ ಆಂಜನೇಯನನ್ನು ನೋಡಿ. ಆಜಾನುಬಾಹುವಾದ ಇದ್ದಲುಗೊಂಬೆ. ಶ್ರೀರಂಗಪಟ್ಟಣ, ಮೇಲುಕೋಟೆ, ಶ್ರೀರಂಗ ಎಲ್ಲಿ ಬೇಕಾದರೂ ನೋಡಿ. "ಚಿಗಳಿ" ಬೊಂಬೆಗಳು. ಕ್ಷೀರಸಾಗರದಲ್ಲಿ ಮಲಗಿರುವ ಭಗವಂತನೂ ಕಪ್ಪು. ಆದರೆ ದೇವರ ಕಪ್ಪು ಶ್ಯಾಮವರ್ಣ. ದೊಡ್ಡವರ ಕಪ್ಪು ಎಣ್ಣೆಗೆಂಪು. ಬೆಸ್ತರ ಕರಿಯನದು ಐನ್ ಟಾರು.

ಬೆಸ್ತರ ಕರಿಯ ಬಾಲ್ಯದಿಂದಲೂ ಹುಡುಗರ ಅಕೃತ್ರಿಮವಾದ ಮನಸ್ಸನ್ನೆಳೆದ ಭೀಕರ ಅದ್ಭುತ ವ್ಯಕ್ತಿ. ನಾವು ಹುಡುಗರಾಗಿದ್ದಾಗ ಅವನು ನಮಗೆ ಯಾವಾಗಲೂ ಒಂದು ಬಗೆಯ ಕಾಪಾಲಿಕನಾಗಿ ಮಾಂತ್ರಿಕನಾಗಿ ಮಾಟಗಾರನಂತೆ ತೋರುತ್ತಿದ್ದನು. ಅವನು ಮೀನು ಹಿಡಿಯಲು ನೇಯುತ್ತಿದ್ದ ಬಲೆ ಜಗತ್ತಿನ ಮೇಲೆ ಬೀಸುವ

ಒಂದು ಜಾಲದಂತೆಯೇ ತೋರುತ್ತಿದ್ದಿತು. ಆ ಬಲೆಗೆ ಮೀನುಗಳು ಮಾತ್ರವೇ ಅಲ್ಲ. ಯಾವುದು ಬೇಕಾದರೂ ಬೀಳುತ್ತದೆ ಎಂಬುದು ನಮ್ಮ ಆಗಿನ ನಂಬಿಕೆ. ಕರಿಯನ ಆಕೃತಿಯಲ್ಲಿಯೇ ಅವನು ಸರ್ವಶಕ್ತ ಎಂಬುದನ್ನು ತೋರಿಸುವ ಒಂದು ಅದ್ಭುತ ಇದೆ. ಅವನು ನಮ್ಮಂತೆ ಅಲ್ಪ ಪ್ರಾಣಿಯಲ್ಲ. ಅವನ ತಲೆ ಒಂದು ಭಾರಿ ಮಡಕೆ. ಎರಡು ಕಾಲುಗಳು ಎರಡು ತೆಂಗಿನ ಮರದ ಬೊಡ್ಡೆಗಳು. ದೇಹವನ್ನು ನೋಡಿದ ಕೂಡಲೆ ಇದು ಕಂಚು ವಜ್ರಕಾಯ. ವಸಿಷ್ಠನ ಬ್ರಹ್ಮದಂಡಕ್ಕೆ ತಗುಲಿ ನಿರ್ವೀರ್ಯ ವಾಗಿ ಕೆಳಕ್ಕೆ ಬಿದ್ದ ಕೌಶಿಕನ ಅಸ್ತ್ರದಂತೆ ರೋಗಗಳು ಇದನ್ನು ಸೋಕಿದ ಕೂಡಲೇ ನಿರ್ವೀರ್ಯವಾಗುತ್ತವೆ ಎಂಬುದು ಯಾರಿಗಾದರೂ ಗೊತ್ತಾಗುತ್ತಿದ್ದಿತು. ಕರಿಯ ಸಮಸ್ತ ರೋಗಗಳನ್ನೂ ಜೀರ್ಣಿಸಿಕೊಂಡು ಬಿಡುತ್ತಾನೆ. ಪ್ಲೇಗು, ಕಾಲರ, ಇನ್‌ಫ್ಲೂಯೆಂಜ, ಪಕ್ಕೆರೋಗ, ಕಜ್ಜಿ, ತುರಿ ಯಾವಯಾವುದು ನಮ್ಮ ಊರಿನಲ್ಲಿ ತಾಂಡವವಾಡುತ್ತಿದೆಯೋ ಅವೊಂದೂ ಕರಿಯನ ಹತ್ತಿರ ಸುಳಿಯುವುದಿಲ್ಲ. ಬ್ರಾಹ್ಮಣರು ಕಾಲರ ಪ್ಲೇಗಿನ ಭಯದಿಂದ ಸಹಸ್ರ ನಾಮಾರ್ಚನೆ ಪೊಂಗಲು ಕೈಂಕರ್ಯಾದಿ ಭಗವತ್ ಸೇವೆಯಲ್ಲಿ ತೊಡಗಿರುವಾಗ ಒಕ್ಕಲಿಗರು ಕನ್ನಂಬಾಡಿ ಅಮ್ಮ ಕತ್ತರಿಗಟ್ಟದ ಅಮ್ಮಗಳಿಗೆ ತಳಿಗೆ ಪನಿವಾರಗಳನ್ನು ಹೊರುತ್ತಿರುವಾಗ ಕರಿಯ ತನ್ನ ಪಾಡಿಗೆ ತಾನು ಮೀನು ಹಿಡಿಯುವುದರಲ್ಲಿಯೇ ನಿರತನಾಗಿರುತ್ತಾನೆ.

ಕರಿಯನ ಆರೋಗ್ಯಕ್ಕೆ ಅವನ ಕಸಬೇ ಕಾರಣವೆಂದು ನಮ್ಮೂರ ಸಾಬಿ ಹೇಳುತ್ತಿದ್ದುದು ನನಗೆ ಬಹುದಿವಸ ಅರ್ಥವಾಗಿರಲಿಲ್ಲ. ಮೀನು ಅತ್ಯುತ್ತಮವಾದ ಆಹಾರವೆಂಬುದು ಸಾಬಿಯ ಮತ. ನಮ್ಮೂರ ಬಂಡಿ ಹಬ್ಬದಲ್ಲಿ ಒಕ್ಕಲಿಗರು ಒಂದು ರಾತ್ರಿ ನಾಲ್ಕು ಐದು ಹಂದಿ ಹುಯಿದು ಹೊಡೆದುಬಿಡುತ್ತಾರೆ. ಮಾರನೆಯ ದಿನ ಅಥವಾ ಅದರ ಮಾರನೆಯ ದಿನ ಅವಸರದಾಳು ಬಂದು ಊರಿನಲ್ಲಿ ನಾಲ್ಕಾರು ಆಳು ಖಾಲಿಯಾಗುತ್ತಾರೆ. "ಈ ಕರ್ನಾಟ್ಕೆ ಜನ್ಗಳ್ಗೆ ಎಷ್ಟು ಹೇಳಿದರೂ ತಿಳಿಯೋದಿಲ್ಲ. ಹಂದಿ ತಿನ್ನಬೇಡಿ ಅಂದರೆ ಕೇಳೋದಿಲ್ಲ. ಹಂದಿ ತಿನ್ತಾರೆ ಸಾಯ್ತಾರೆ" ಎಂಬುದು ಸಾಬಿಯ ದೂರು. ಈ ಮಾತಿನಲ್ಲಿ ಸತ್ಯಾಂಶವಿಲ್ಲದೆ ಇಲ್ಲ. ನಮ್ಮಲ್ಲಿ ವಯಸ್ಕರಾದ ಒಕ್ಕಲಿಗರೂ ಈ ಮಾತನ್ನು ಒಪ್ಪುತ್ತಾರೆ. ಹಿಂದುಗಳಿಗೂ ತುರುಕರಿಗೂ ಹೋಲಿಸಿ ಕೊಂಡರೆ ತುರುಕರ ದೇಹಾರೋಗ್ಯವೂ ಶಕ್ತಿಯೂ ಹೆಚ್ಚಾಗಿರುವುದಕ್ಕೆ ಕಾರಣ ಅವರು ಹೆಚ್ಚಾಗಿ ತಿನ್ನುವ ಆಡಿನ ಮಾಂಸವೇ. ಆಡಿನ ಮಾಂಸ ಆಹಾರದಲ್ಲೆಲ್ಲ ಅತ್ಯುತ್ತಮವಾದದ್ದು. ವೈದಿಕರಾದ ನಮ್ಮ ಪೂರ್ವಿಕರೂ ಇದನ್ನು ಔತಣದ ವಸ್ತುವಾಗಿ ಪರಿಗಣಿಸಿದ್ದರಂತೆ. ಶ್ರಾದ್ಧದ ದಿನ ಈ ಮಾಂಸವಿಲ್ಲದಿದ್ದರೆ ಪಿತೃಗಳಿಗೆ ತೃಪ್ತಿಯುಂಟಾಗುತ್ತಿರಲಿಲ್ಲವಂತೆ. ಮನೆಗೆ ಬಂದ ಅತಿಥಿಗೆ ಇದು ವಿಶೇಷವಾದ ಆದರ.

ಆಡಿನ ಮಾಂಸ ಇಂತಹ ಭೋಗ್ಯ ವಸ್ತುವಾದುದರಿಂದ ಅರಮನೆಯಲ್ಲಿ ಸಹ ಇದನ್ನು ಅಪರೂಪವಾಗಿ ಮಾಡುತ್ತಿದ್ದರು. ಹಬ್ಬ ಹರಿದಿನ ನೆಂಟರ ಬರವು ಮುಂತಾದ ಕಾರಣಗಳಿದ್ದ ಹೊರತು ಇದನ್ನು ಅರಮನೆಯಲ್ಲಿಯೂ ತಿನ್ನುತ್ತಿರಲಿಲ್ಲ. ರಾಮಾಯಣದಲ್ಲಿ ಕೌಸಲ್ಯೆಯ ಎದುರಿಗೆ ಭರತ "ಯಾರ ಅನುಮತಿಯಂತೆ ರಾಮನು ಕಾಡಿಗೆ ಹೋದನೋ ಅವನಿಗೆ ಕಾರಣವಿಲ್ಲದೆ ಪಾಯಸವನ್ನೂ ಚಿಗಳಿಯನ್ನೂ ಆಡಿನ ಮಾಂಸವನ್ನೂ ತಿನ್ನುವವನ ಗತಿಯುಂಟಾಗಲಿ ಎಂದು ಪ್ರತಿಜ್ಞೆ ಮಾಡುತ್ತಾನೆ."

ಸಾಬಿಯ ಈ ವಾದ ಅನೇಕ ವೇಳೆ ವೈದಿಕರ ಮುಂದೆ ಸಹ ನಡೆದರೂ ಬೆಸ್ತರ ಕರಿಯ ಈ ವಾದಕ್ಕೆ ಪೂರ್ಣವಾಗಿ ಸಮ್ಮತಿಸುವುದಿಲ್ಲ. ಕರಿಯ ತನ್ನ ಆರೋಗ್ಯಕ್ಕೆ ಮೀನು ಮುಖ್ಯಕಾರಣವೆಂದು ಹೇಳುತ್ತಾನೆ. ಕರಿಯನನ್ನು ನೋಡಿದರೆ ಅವನ ಮಾತು ನಿಜವಿರಬೇಕು ಎಂದು ತೋರುತ್ತದೆ. ಕರಿಯನ ಅಭಿಪ್ರಾಯದಲ್ಲಿ ಮೀನು ಮಾಂಸಕ್ಕೆ ಸೇರಿದುದೇ ಅಲ್ಲ. ಅದು ಯಾರು ಬೇಕಾದರೂ ಉಪಯೋಗಿಸಬಹುದಾದ ನೀರು-ತರ್ಕಾರಿ.

ನಮ್ಮ ಬಾಲ್ಯದಲ್ಲಿ—ನನ್ನ ಬಾಲ್ಯವೆಂದು ಯಾಕೆ ಹೇಳುತ್ತೇನೆಂದರೆ ಕರಿಯನಿಗೆ ಬಾಲ್ಯವೂ ಇಲ್ಲ ಮುಪ್ಪೂ ಇಲ್ಲ—ನಾವು ಸ್ಕೂಲಿಗೆ ಹೋಗುತ್ತಿದ್ದ ಮಾರ್ಗದ ನಾಲೆಯಲ್ಲಿ ಕರಿಯ ಬಲೆ ಎಸೆದು ಮೀನು ಹಿಡಿಯುತ್ತಾ ನಿಂತಿರುತ್ತಿದ್ದ. ನಮಗೆ ಆ ಮಾರ್ಗದಲ್ಲಿ ಅದೇ ಒಂದು ಅದ್ಭುತ. ಬಲೆಯನ್ನು ಬೀಸಿ ಎಸೆದು ಎಳೆಯುವಾಗ ಒಂದೇ ಗಂಟಾಗಿ ಹಿಂದಕ್ಕೆ ಎಳೆಯುತ್ತಿದ್ದುದು ಒಂದು ಮೋಡಿಯಾಗಿಯೇ ನಮಗೆ ತೋರುತ್ತಿದ್ದಿತು. ಆ ಬಲೆಯ ತಳದಲ್ಲಿ ದಪ್ಪ ಮೀನು, ಸಣ್ಣ ಮೀನು ಬೆಳ್ಳಿಯ ಚೂರುಗಳಂತೆ ಚಿನ್ನದ ರೇಕುಗಳಂತೆ ಮಿಂಚು ಹುಳುಗಳಂತೆ ಪುಕಪುಕನೆ ನೆಗೆಯುತ್ತಾ ಮೇಲಕ್ಕೆ ಬರುತ್ತಿದ್ದವು. ಆಗ ನಮ್ಮ ಬಾಲ್ಯದ ಕೋಮಲವಾದ ಮನಸ್ಸಿಗೆ ಕರಿಯ 'ಒಳ್ಳೆಯ' ರಾಕ್ಷಸನಾಗಿ ತೋರುತ್ತಿದ್ದ. ಪುಟ್ಟಪುಟ್ಟನೆ ಹೀಗೆ ನೆಗೆಯುವ ಇಂತಹ ಹೊಳಪು ಕಣ್ಣಿನ ಮೀನುಗಳನ್ನು ಈ ಕಟುಕ ತೆಗೆದುಕೊಂಡು ಹೋಗಿ ಬೇಯಿಸಿಬಿಡುತ್ತಾನಲ್ಲ ಎಂದು ನಮಗೆ ಕರಿಯನ ಮೇಲೆ ಕೋಪ. ಒಂದೊಂದು ಸಲ ನಮ್ಮ ಕನಿಕರ ಅತಿ ಹೆಚ್ಚಾದಾಗ ನಾವು ಅವನಿಗೆ ಮೂರು ಕಾಸು ಕೊಟ್ಟು ಅವನ ಬಲೆಯಿಂದ ಎರಡು ಮೀನುಗಳನ್ನು ನೀರಿನೊಳಕ್ಕೆ ಮತ್ತೆ ಬಿಡಿಸುತ್ತಿದ್ದೆವು. ಕರಿಯ ಬಲೆಗೆ ಕೈಹಾಕಿ ಮಿಲಕಾಡುತ್ತಿರುವ ಮೀನುಗಳನ್ನು ಹಿಡಿದುಕೊಂಡು ಗಂಡು ಮೀನನ್ನು ಬಿಡಲೋ ಹೆಣ್ಣು ಮೀನನ್ನೂ ಬಿಡಲೋ ಎನ್ನುತ್ತಿದ್ದ. ಗಂಡು ಮೀನು ಮೂರು ಕಾಸಿಗೆ ಎರಡನ್ನು ಬಿಡುತ್ತಿದ್ದ. ಹೆಣ್ಣು ಒಂದನ್ನು ಮಾತ್ರ ಬಿಡುತ್ತಿದ್ದ. ನಾವು ಸಾಧಾರಣವಾಗಿ ಹೆಣ್ಣು ಮೀನನ್ನು ನೀರಿಗೆ ಬಿಡಿಸು

ತ್ತಿದ್ದೆವು. ಒಂದೊಂದು ಸಲ ಕರಿಯ ಹೆಣ್ಣು ಮೀನನ್ನು ಬಿಟ್ಟನಂತರ, ಅಯ್ಯೋ ಪಾಪ, ಅದರ ಗಂಡ ಇಲ್ಲಿಯೇ ಇದೆ. ಹೆಂಡತಿ ಬಿಟ್ಟು ಇದೊಂದೆ ಇಲ್ಲಿ ಹೇಗೆ ಇರುತ್ತೆ. ಹೆಂಡತಿ ಬಿಟ್ಟು ಇದು ಖಂಡಿತ ಬದುಕುವುದಿಲ್ಲ ಎನ್ನುತ್ತಿದ್ದ. ನಾವು ಕೂಡಲೆ ಇನ್ನೂ ಮೂರು ಕಾಸುಕೊಟ್ಟು ಗಂಡು ಮೀನನ್ನೂ ನೀರಿನೊಳಕ್ಕೆ ಬಿಡಿಸುತ್ತಿದ್ದೆವು. ಬೆಸ್ತನ ಬುಟ್ಟಿಯಲ್ಲಿಯ ಮೀನು ಯಾವತ್ತಿದ್ದರೂ ಸಾಯುತ್ತೆ,— ಹೆಂಡತಿ ಜತೆಯಲ್ಲಿದ್ದರೂ ಜತೆಯಲ್ಲಿಲ್ಲದಿದ್ದರೂ ಎಂಬುದು ನಮಗೆ ಆಗ ಹೊಳೆಯು ತ್ತಿರಲಿಲ್ಲ. ಕರಿಯ ಹೆಣ್ಣು ಮೀನು ಗಂಡು ಮೀನನ್ನು ಹೇಗೆ ಪತ್ತೆಮಾಡುತ್ತಾನೆ ಎಂಬುದು ನಮಗೆ ಅಂದೂ ಹೊಳೆದಿರಲಿಲ್ಲ ಇಂದೂ ಹೊಳೆದಿಲ್ಲ. ಕರಿಯ ಈಗಲೂ ಅದೇ ನಾಲೆಯ ಬಳಿ ಹಾಗೆಯೇ ಮೀನು ಹಿಡಿಯುತ್ತಾನೆ. ಹಾಗೆಯೇ ಹೆಣ್ಣು ಗಂಡುಗಳನ್ನು ನೀರಿಗೆ ಬಿಟ್ಟು ಶಾಲೆಯ ವಿದ್ಯಾರ್ಥಿಗಳಿಂದ ಕಾಸು ಸುಲಿಯುತ್ತಿ ದ್ದಾನೆ. ಆ ಬಾಲ್ಯದಲ್ಲಿ ಮೀನುಗಳ ಜೀವನ ಮರಣಗಳ ಮೇಲಿನ ಕರಿಯನ ಅದ್ಭುತಶಕ್ತಿ ನೋಡಿ ನಮಗೆ ಅವನಲ್ಲಿ ಭಯದ ಜತೆಗೆ ಗೌರವವೂ ಉಂಟಾಗಿದ್ದಿತು. ಕರಿಯನಿಗೆ ಮನಸ್ಸು ಪ್ರಸನ್ನವಾದಾಗ ಠೀವಿಯಿಂದ ತನ್ನ ಔದಾರ್ಯವನ್ನು ಪ್ರಕಟಿಸುತ್ತಿದ್ದ. ಅವನ ದಯಾಗುಣ, ಕಾನೂನಿನ ಚೌಕಟ್ಟಿನಲ್ಲಿ ವರ್ತಿಸುವ ಮನುಷ್ಯರ ದಯಾಗುಣದಂತೆ ಹೇಡಿಯ ಕೈಯಿನ ನಿರುಪಯೋಗಿ ಚಂದ್ರಾಯುಧವಲ್ಲ. ಕನಿಕರವೆಂಬ ರೋಗಕ್ಕೆ ತುತ್ತಾದವರನ್ನು ತೃಪ್ತಿಪಡಿಸಲು ಅವನು ಒಂದೊಂದು ಸಲ ತನ್ನ ಬಲೆಯಲ್ಲಿ ಮೇಲಕ್ಕೆ ಎಳೆದಿದ್ದ ಎಲ್ಲಾ ಮೀನುಗಳನ್ನೂ ಮತ್ತೆ ನೀರಿನೊಳಕ್ಕೆ ಬೀಸಾಡಿದುದುಂಟು.

ಹುಡುಗರಾದ ನಾವು ಒಂದೊಂದು ಸಲ ಭಯದಿಂದಲೇ ಈ ಮೀನುಗಳನ್ನೆಲ್ಲಾ ಇವನು ಏನು ಮಾಡಿಕೊಳ್ಳುತ್ತಾನೆ ಎಂದು ಮಾತನಾಡಿಕೊಂಡುದುಂಟು. ಅದು ಕಿವಿಗೆ ಬಿದ್ದಾಗ ಕರಿಯನು ಇವುಗಳೆಲ್ಲಾ ರಾಜಕುಮಾರಿಗಳು. ಮನುಷ್ಯರ ಕಣ್ಣಿಗೆ ಬೀಳದಿರಬೇಕೆಂದು ವೇಷ ಮರಸಿಕೊಂಡು ಮೀನುಗಳಾಗಿವೆ. ರಾತ್ರಿಯಾದ ಕೂಡಲೇ ಪ್ರತಿಯೊಂದೂ ಒಂದೊಂದು ನೀರುಹೆಣ್ಣಾಗಿ ತನ್ನ ಕತೆಯನ್ನೆಲ್ಲಾ ನನಗೆ ಹೇಳು ತ್ತವೆ. ಆಹಾ ಎಂತಹ ಅದ್ಭುತವಾದ ರಮ್ಯವಾದ ಕಥೆಗಳು. ಇವುಗಳ ಕತೆ ಕೇಳ್ತ ಇದ್ದರೆ ನನಗೆ ನಿದ್ರೆಯೇ ಬರೋದಿಲ್ಲ. ಹೀಗೆ ಕತೇನೆಲ್ಲ ಹೇಳಿ ಬೆಳಗಾಗುವ ಹೊತ್ತಿಗೆ ಮೀನುಗಳೇ ಆಗಿಬಿಡುತ್ತವೆ. ಅವುಗಳನ್ನು ನೀರಿಗೆ ಮತ್ತೆ ತಂದುಬಿಡುತ್ತೇನೆ, ಹೀಗೆ ನಿತ್ಯಾ ಈ ಮೀನುಗಳು ಹೇಳುವ ಕತೆ ನಾಲ್ಕು ರಾಮಾಯಣವಾಗುತ್ತದೆ ಎನ್ನುತ್ತಿದ್ದನು. ಹತ್ಯಮಾಡುವವನ ಯಾವ ಕ್ರೌರ್ಯವೂ ಅವನಲ್ಲಿ ನಮಗೆ ಕಾಣು ತ್ತಿರಲಿಲ್ಲ. ನಾವು ಇದ್ದರೂ ಇರಬಹುದೇನೋ ಎಂದುಕೊಳ್ಳುತ್ತಿದ್ದೆವು. ಒಂದೊಂದು ಸಲ ಕರಿಯನು ನಿಮಗೆ ದೇವಲೋಕದ ಕನ್ನಿಕೆಯರು ಬೇಕೋ; ನಾಗಲೋಕದ

ಕನ್ನಿಕೆಯರು ಬೇಕೋ ಯಾರು ಬೇಕಾದರೂ ಹೇಳಿ; ಎಲ್ಲರನ್ನೂ ಈ ಬಲೆಯಲ್ಲಿ ಹಿಡಿದುಕೊಡುತ್ತೇನೆ ಎನ್ನುತ್ತಿದ್ದನು. ನಮ್ಮ ತಂದೆಯವರು ಯಾವಾಗಲೂ ಹೇಳುತ್ತಿದ್ದ ಭಾರತ ರಾಮಾಯಣಗಳನ್ನು ಅವನು ಕೇಳಿದ್ದುದರಿಂದ ಆ ಕತೆಗಳೆಲ್ಲಾ ಅವನಿಗೆ ಪರಿಚಯವಾಗಿದ್ದವು.

ಕರ್ಮದಲ್ಲಿ ಕುಶಲನಾಗಿರುವುದು ಯೋಗವೆಂದು ಹೇಳುತ್ತಾರೆ. ಆ ದೃಷ್ಟಿಯಿಂದ ನೋಡಿದರೆ ಕರಿಯನ ಕರ್ಮಕುಶಲತೆ ಅನೇಕರಲ್ಲಿಲ್ಲದ ಅಸಾಧಾರಣವಾದ ಶಕ್ತಿ. ಕರಿಯು ಯಾವ ಕೆಲಸವನ್ನೂ ಬಹಳ ಶಿಸ್ತಿನಿಂದ ಚೆನ್ನಾಗಿ ಅಚ್ಚುಕಟ್ಟಾಗಿಯೇ ಮಾಡುತ್ತಾನೆ. ಅವನು ನೀರಿನಲ್ಲಿ ಮೀನು ಹಿಡಿಯದಿರುವ ಕಾಲವನ್ನೆಲ್ಲ ನೆಲದ ಮೇಲೆ ಬಲೆಮಾಡುವುದರಲ್ಲಿ ಕಳೆಯುತ್ತಾನೆ. ಅವನ ಕೆಲಸ ಯೋಗಿ ತನ್ನ ತಪಸ್ಸಿನಲ್ಲಿ ನಿರತನಾಗಿರುವಂತೆ. ಜೇನುಹುಳು ಯಾವ ರೀತಿ ಮೇಣದಲ್ಲಿ ಮನೆಗಳನ್ನು ಒಂದೇ ಸಮನಾಗಿ ಮಾಡುತ್ತದೋ ಅಷ್ಟೇ ಸ್ವಾಭಾವಿಕವಾದ ಶಕ್ತಿಯಿಂದ ಕರಿಯ ಬಲೆ ಮಾಡುತ್ತಾನೆ. ಅವನು ಮಾಡುವ ನೂಲು ಉಕ್ಕಿನ ತಂತಿಯಂತೆ ಗಟ್ಟಿ. ಆ ನೂಲನ್ನು ನೋಡಿ ನಮ್ಮೂರ ಪುರೋಹಿತರು "ಜನಿವಾರಕ್ಕೆ ಈ ತರಹ ನೂಲು ಮಾಡಬೇಕಯ್ಯ. ಒಳ್ಳೆ ರೇಷ್ಮೆಹಾಗೆ. ಆದರೆ ಏನುಮಾಡುವುದು. ಇವ ಬೆಸ್ತ. ಇವನ ಕೈಲಿ ಜನಿವಾರ ಮಾಡಿಸೋಕೆ ಆಗದು" ಎನ್ನುತ್ತಿದ್ದರು. ನಮ್ಮೂರ ಸ್ನಾನದ ಘಟ್ಟದಲ್ಲಿ ಒಕ್ಕಲಿಗರಿಗೂ ಬ್ರಾಹ್ಮಣರಿಗೂ ಯಾವಾಗಲೂ ಚರ್ಚಾಸ್ಪದವಾದ ಸಂಗತಿ ಮೀನು. ಇಬ್ಬರೂ ಹೊಡೆದಾಡುವುದು ಮೀನಿಗಾಗಿಯೇ: ಒಬ್ಬರು ಮೀನು ಬೇಕು ಎಂದು. ಮತ್ತೊಬ್ಬರು ಮೀನು ಬೇಡ ಎಂದು. ಬ್ರಾಹ್ಮಣರಿಗೂ ಒಕ್ಕಲಿಗರಿಗೂ ಬೇರೆ ಬೇರೆ ಸ್ನಾನಘಟ್ಟಗಳಿವೆ. ಈ ಸ್ನಾನಘಟ್ಟಗಳನ್ನು ಯಾರೂ ಜಾತಿವಾರಾಗಿ ವಿಂಗಡಿಸಿಲ್ಲ. ಬ್ರಾಹ್ಮಣರು ತಮಗೆ ಹತ್ತಿರವಾಗಿರುವ ಭಾಗದ ನದಿಯ ತೀರಕ್ಕೆ ಹೋಗುತ್ತಾರೆ. ಒಕ್ಕಲಿಗರು ತಮಗೆ ಹತ್ತಿರವಾಗಿರುವ ನದಿಯ ದಂಡೆಯ ಭಾಗಕ್ಕೆ ಹೋಗುತ್ತಾರೆ. ಆದುದರಿಂದ ಅವಕ್ಕೆ ಹೀಗೆ ಬೇರೆ ಬೇರೆ ಹೆಸರುಗಳು.

ಸ್ನಾನಘಟ್ಟಗಳು ಹೀಗೆ ಬೇರೆಬೇರೆಯಾಗಿದ್ದರೂ ಮೀನು ಒಂದು ಪ್ರಾಣಿಗೆ ಮಾತ್ರ ಬ್ರಾಹ್ಮಣರಲ್ಲಿ ವಿಶ್ವಾಸವಿರುವಂತೆ ಕಾಣುತ್ತದೆ. ಅವು ಎಲ್ಲಾ ಕಡೆಯಿಂದಲೂ ಬಂದು ಬ್ರಾಹ್ಮಣರ ಸ್ನಾನಘಟ್ಟದಲ್ಲಿ ಸೇರಿಕೊಳ್ಳುತ್ತವೆ. ಒಕ್ಕಲಿಗರ ಕಡವಿನಲ್ಲಿ ಒಂದೇ ಒಂದು ಮೀನು ಸಹ ಇಲ್ಲ. ಈ ಕಾಲದಲ್ಲಿ ಮೀನುಗಳಿಗೂ ಬ್ರಾಹ್ಮಣರಲ್ಲಿ ಹಿಂದಲಂತೆ ವಿಶ್ವಾಸವಿದೆ ಎಂದು ಹೇಳುವುದು ಸಾಧ್ಯವಿಲ್ಲ. ಅವು ಬ್ರಾಹ್ಮಣರ ಕಡವಿಗೆ ಬಂದು ಆಶ್ರಯಿಸಲು ಕಾರಣ ಇಲ್ಲಿ ಅವಕ್ಕೆ ದೊರೆಯುವ ಅನ್ನದ ಅಗುಳು, ತಪ್ಪಲೆಯ ತಳದ ಕೆರಕಲು, ಸಾರಿನ ಬೇಳೆಯಕಾಳಿನ ಚರಟ. ಬ್ರಾಹ್ಮಣರ ಹೆಂಗಸರು

ತಮ್ಮ ಕಡವಿನಲ್ಲಿ ಪಾತ್ರೆ ಬೆಳಗುತ್ತಿರುವಾಗ ಇದ್ದಕ್ಕಿದ್ದಂತೆ ಒಂದು ಮೀನು ಅವರ ಕಾಲಿಗೆ ಮುತ್ತುಕೊಟ್ಟು ತನ್ನ ಕೃತಜ್ಞತೆ ತೋರಿಸುತ್ತದೆ. ಹೆಣ್ಣಿಗೆ ಕಚಕುಳಿ ಇಟ್ಟಂತಾಗಿ ಅವಳು ಚೆಂಗನೆ ಮೇಲಕ್ಕೆ ಹಾರುತ್ತಾಳೆ. ನೂರು ಮನೆಯ ಬ್ರಾಹ್ಮಣರ ವಿಧವಿಧವಾದ ಅನ್ನದ ಚರಟಗಳಿಂದ ಪುಷ್ಟವಾದ ಮೀನುಗಳು ನೀಳವಾಗಿ ಗಾತ್ರ ವಾಗಿ ಹೆಂಗಸರ ಕಡುವಿನಲ್ಲಿ ಕೈಗೇ ಸಿಕ್ಕುವಂತೆ ಈಜಾಡುತ್ತಿರುತ್ತವೆ. ಕೊಳೆಯಿಂದ ಮೀನು ಬೆಳೆಯುವುದೆಂಬುದು ನಿಜವಾದರೆ ಆ ಆಹಾರವೂ ಮೀನಿಗೆ ಬ್ರಾಹ್ಮಣರ ಕಡುವಿನಲ್ಲಿಯೇ ಹೆಚ್ಚು. ಸ್ನಾನಕ್ಕೆ ಇಳಿದವರು ಒಂದು ಗಳಿಗೆ ತಮ್ಮ ಕೊಳೆಯಾದ ಮೈಯನ್ನು ಮೀನಿನ ಬಾಯಿಗೆ ತುತ್ತು ಮಾಡುತ್ತಾರೆ. ಪಾತ್ರೆ ಬೆಳಗುತ್ತಿರುವ ಸ್ತ್ರೀಯರು ತಮ್ಮ ಹೆಜ್ಜೆಗಳನ್ನು ನೀರಿನಲ್ಲಿಟ್ಟು ಮೀನು ಅದರ ಸುತ್ತಾ ಲೀಲೆಯಾಡು ತ್ತಿದ್ದರೂ ಒಂದುಗಳಿಗೆ ಸುಮ್ಮನೆ ಸಹಿಸಿಕೊಂಡಿರುತ್ತಾರೆ. ಮೀನು ಒಕ್ಕಲಿಗರ ಕಡುವನ್ನು ಬಿಟ್ಟು ಬ್ರಾಹ್ಮಣರ ಕಡವಿಗೆ ಧಾವಿಸುವ ಕಾರಣ, ಆ ಕಡವಿನಲ್ಲಿ ಅವಕ್ಕೆ ಹೊಟ್ಟೆಗಿಲ್ಲದಿರುವುದೇ. ಒಕ್ಕಲಿಗರ ಹೆಂಗಸರು ಮಡಕೆಯಲ್ಲಿ ಹಿಟ್ಟುಮಾಡಿ ಅದನ್ನು ಗಂಗಳದಲ್ಲಿ ತಿಂದುಬಿಡುತ್ತಾರೆ. ಮಡಕೆಯನ್ನೂ ಗಂಗಳವನ್ನೂ ತೊಳೆದ ನೀರನ್ನು, ಮುಂದೆ ತಾವೇ ತಿನ್ನಬೇಕಾಗಿರುವ ಕೋಳಿಗೆ ಕುಡಿಸಿಬಿಡುತ್ತಾರೆ. ದಡದ ಮೇಲೆ ನಿಂತು ಒಂದು ಮೊಗೆ ನೀರನ್ನು ಎತ್ತಿಕೊಂಡು ಹೋಗುತ್ತಾರೆ. ನಿತ್ಯಾ ಸ್ನಾನ ಮಾಡುವುದು ರೋಗಕಾರಣವೆಂದು ಅವರು ಭಾವಿಸಿರುವುದರಿಂದ ಮೈಯನ್ನು ನೀರಿಗೆ ಅದ್ದುವುದಿಲ್ಲ. ಒಕ್ಕಲಿಗ ವಾರಕ್ಕೊಂದು ಸಲ ಮನೆಯಲ್ಲಿಯೇ ಬಿಸಿನೀರಿನ ಸ್ನಾನಮಾಡುವುದರಿಂದ ಮೀನಿಗೆ ಆ ಕೊಳೆಯೂ ಇಲ್ಲ. ತನ್ನ ಅಗಸನಾಗಿ ಸದ್ಯಕ್ಕೆ ಉಳಿದಿರುವವನು ಬ್ರಾಹ್ಮಣನೊಬ್ಬನೇ. ಹೊಳೆಯಲ್ಲಿ ನಿತ್ಯಾ ಹೋಗಿ ಇವನು ತನ್ನ ಬಟ್ಟೆಗಳನ್ನು ತಾನು ಒಗೆದುಕೊಳ್ಳುತ್ತಾನೆ. ಈ ಎಲ್ಲಾ ಕಾರಣಗಳಿಂದ ಒಕ್ಕಲಿಗ—ಕಡವಿನ ಮೀನುಗಳೆಲ್ಲ ಬ್ರಾಹ್ಮಣರ ಕಡವಿನಲ್ಲಿ ಬಂದು ಸೇರಿಕೊಂಡಿವೆ. ಒಕ್ಕಲಿಗರ ಕೇರಿಯ ನಾಯಿಗಳೂ ಕಾಗೆಗಳೂ ಬ್ರಾಹ್ಮಣರ ಕೇರಿಯನ್ನು ಸೇರಿರುವ ಕಾರಣವೂ ಇದೇಯೆ.

ಹೀಗೆ ಬ್ರಾಹ್ಮಣರ ಕಡವಿನಲ್ಲಿ ಬೆಳೆದಿರುವ ಪುಷ್ಟವಾದ ಮೀನುಗಳನ್ನು ಹಿಡಿಯಲು ಒಕ್ಕಲಿಗರು ಗಾಳದ ಗಣೆಗಳನ್ನು ತೆಗೆದುಕೊಂಡು ಬಂದು ಹೆಂಗಸರ ಕಡುವಿನಲ್ಲಿ ಕೂರುತ್ತಾರೆ. ಇದರಿಂದ ಬ್ರಾಹ್ಮಣರಿಗೂ ಒಕ್ಕಲಿಗರಿಗೂ ಆಗಾಗ್ಗೆ ಘರ್ಷಣೆ ಉಂಟಾಗುತ್ತದೆ. ಒಕ್ಕಲಿಗರು ಹಿಡಿದ ಮೀನನ್ನು ಬ್ರಾಹ್ಮಣರ ಕಡವಿನ ಮೇಲ್ಭಾಗದ ಕಲ್ಲುಗಳ ಮೇಲೆ ಉಜ್ಜುತ್ತಿರುತ್ತಾರೆ. ಅದರ ದುರ್ನಾತ ಅಸಾಧ್ಯವಾಗಿ ಪಾತ್ರೆ ಬೆಳಗುತ್ತಿರುವವರ ಮೇಲೆಯೂ ಸ್ನಾನಮಾಡುವವರ ಮೇಲೆಯೂ ಬರುತ್ತದೆ.

ಬೆಸ್ತರ ಕರಿಯು ಕರ್ಮ ಕುಶಲನೆಂದು ಹೇಳಿದುದು ಈ ಕಾರಣದಿಂದಲೇ. ಮೀನು ಹಿಡಿಯುವ ಬ್ರಾಹ್ಮಣ ಹೇಗೆ ಅಡ್ಡಕಸಬಿಯೋ ಹಾಗೆಯೇ ಮೀನು ಹಿಡಿಯುವ ಒಕ್ಕಲಿಗನೂ ಅಡ್ಡಕಸಬಿಯೇ ಅವು ಅವರವರ ಸ್ವಭಾವಕ್ಕೆ ಅನುಗುಣಗಳಾದ ಕರ್ಮಗಳಲ್ಲ. ಚಪಲದಿಂದ ಪ್ರೇರಿತವಾದವು. ಆದರೆ ಕರಿಯ ಮೀನು ಹಿಡಿಯುವುದರಲ್ಲಿ ಈ ಯಾವ ಗದ್ದಲವೂ ಇಲ್ಲ. ಸ್ಕೂಲಿನ ಮಾರ್ಗದ ನಾಲೆಯಲ್ಲಿ ಬಲೆ ಎಸೆಯುವುದರ ಹೊರತು, ಈ ಮಂಕರಿ ಮಂಕರಿ ಮೀನನ್ನು ಅವನು ಎಲ್ಲಿ ಹಿಡಿಯುತ್ತಾನೆ ಎಂಬುದು ಯಾರಿಗೂ ಗೊತ್ತಿಲ್ಲ. ದೇವಸ್ಥಾನ ಸ್ನಾನಘಟ್ಟದ ಕಡುಗಳನ್ನೆಲ್ಲಾ ತಮ್ಮ ಚಾಪಲ್ಯದ ದುರ್ಗಂಧಕ್ಕೆ ಒಳಪಡಿಸುವ ಈ ಅಡ್ಡಕಸಬಿಗಳಂತೆ ಅವನು ಒಂದು ದಿನವೂ ಈ ಕಡುಗಳಲ್ಲಿ ಮೀನು ಹಿಡಿದು ಇಲ್ಲಿ ಅವುಗಳನ್ನು ತಿಕ್ಕಿ ಜನರಿಗೆ ತನ್ನ ಕಸಬಿನಲ್ಲಿಯೂ ತನ್ನ ವಸ್ತುವಿನಲ್ಲಿಯೂ ಅಸಹ್ಯವುಂಟುಮಾಡಿದವನಲ್ಲ. ಕರಿಯನ ಮೈಯಂತೆ, ಅವನ ಸ್ವಭಾವದಂತೆ ಅವನ ಪದಾರ್ಥವೂ ಕಸಬೂ ಶುದ್ಧ. ಅವನು ವಾರ ವಾರವೂ ಸಂತೆಯಲ್ಲಿ ಸಿದ್ಧಮಾಡಿಟ್ಟ ಮೀನನ್ನು ನೋಡಿದವರಿಗೆ, ತಾವು "ಮೀನಾಹಾರಿ"ಗಳಲ್ಲದಿದ್ದರೂ ಕರಿಯನ ಮೇಲೆ ಕೋಪವುಂಟಾಗುತ್ತಿರಲಿಲ್ಲ. ಅವನ ಕಸಬಿನ ಮೇಲೆಯೂ ತಿರಸ್ಕಾರವುಂಟಾಗುತ್ತಿರಲಿಲ್ಲ.

ಮನುಷ್ಯನಿಗೆ ಭಯವಿರಬಾರದು. ಅದರಂತಹ ರೋಗ ಬೇರೆ ಯಾವುದೂ ಇಲ್ಲ. ಕರಿಯನಿಗೆ ಭಯವೆಂಬುದೇ ಇಲ್ಲ. ನೀರಿನ ಪ್ರವಾಹವಂತೂ ಅವನಿಗೆ ಲೀಲಾಜಾಲ. ಎಂತಹ ತುಂಬು ಹೊಳೆಯನ್ನೂ ಅವನು ಸರಾಗವಾಗಿ ಈಜುತ್ತಾನೆ. ಐದು ನಿಮಿಷ ನೀರಿನಲ್ಲಿ ಮುಳುಗಿ ಕುಳಿತಿದ್ದು ಒಂದು ಆಳು ಹೊರಲಾರದ ಮೀನನ್ನು ಮೇಲಕ್ಕೆ ಎತ್ತಿಕೊಂಡು ಬರುತ್ತಾನೆ. ಚಳಿ ಮಳೆ ಗಾಳಿ ಬಿಸಿಲು ಎಲ್ಲಾ ಕಾಲದಲ್ಲಿಯೂ ಅವನ ಉಡುಪು ಒಂದೇ ಸಮ. ತಾವರೆಯ ಎಲೆಯ ಮೇಲಿನ ನೀರು ಎನ್ನುತ್ತಾರಲ್ಲ ಹಾಗೆ ಕರಿಯನ ಬಾಳು. ಅವನು ಜಗತ್ತಿನಲ್ಲಿದ್ದರೂ ಜಗತ್ತಿಗೆ ಸೇರದವನಂತೆಯೇ ಇರುತ್ತಾನೆ. ಅವನ ಅನಾಸಕ್ತಿ ಅದ್ಭುತ. ತಾನು ಹಿಡಿದ ಮೀನನ್ನು ಕೇಳಿದವರಿಗೆ ಕೊಡುವ ಔದಾರ್ಯವಂತು ಇರಲಿ. ಅವನ ಮದುವೆಗಳ ಸಂಬಂಧದಲ್ಲಿ ಅವನು ವ್ಯಕ್ತಪಡಿಸಿದ ಅನಾಸಕ್ತಿ ಎಂತಹ ಯೋಗಿಗಳಲ್ಲಿಯೂ ಕಾಣದ ಶಕ್ತಿ.

ನಾವು ಕರಿಯನನ್ನು ನೋಡುವ ವೇಳೆಗೇ ಅವನಿಗೆ ಒಂದು ಹೆಂಡತಿಯಲ್ಲಿ ಐವರು ಮಕ್ಕಳಿದ್ದರು. ಹೆಂಡತಿ ವಾರವಾರವೂ ಕರಿಯ ಹಿಡಿದ ಮೀನನ್ನು ಸಂತೆಯಲ್ಲಿ ಮಾರುತ್ತಿದ್ದಳು. ಆ ಮೀನನ್ನು ಸಂತೆಯಲ್ಲಿ ವ್ಯಾಪಾರಕ್ಕೆ ಇಡುವುದರಲ್ಲಿಯೂ ಕರಿಯನದು ಒಂದು ಕಲೆಯೇ. ಗಿರಾಕಿ ಆ ಗುಡ್ಡೆಯನ್ನು ನೋಡಿ ಅದರ ಕಡೆಗೇ ಬರುತ್ತಿದ್ದನು. ಕೆಲವು ದಿವಸಗಳೊಳಗೆ ಆ ಹೆಂಡತಿ ಸ್ವರ್ಗಸ್ಥಳಾದಳು. ಕರಿಯನಿಗೆ

ವಯಸ್ಸಾಗಿದೆ. ಮಕ್ಕಳು ಬೇರೆ. ಇನ್ನು ಈ ವಯಸ್ಸಿನಲ್ಲಿ ಬೇರೆ ಮದುವೆಯಾಗುವಂತೆ ಇಲ್ಲ. ಪಾಪ ಒಂಟಿಯಾದ,—ಎಂದು ನಾವು ಯೋಚಿಸಿದ್ದೆವು. ಕರಿಯನನ್ನು ಕಂಡರೆ ಅವನಿಗೆ ಸಹಾನುಭೂತಿಯ ಮಾತುಗಳನ್ನು ಹೇಳಬೇಕು ಎಂಬುದು ನನ್ನ ಆಸೆಯಾಗಿದ್ದಿತು. ಎರಡುವಾರ ನಾನು ಕರಿಯನನ್ನು ನೋಡಲಿಲ್ಲ. ಮೂರನೆಯ ವಾರ ಸಂತೆಯಲ್ಲಿ ಕರಿಯ ಮತ್ತೆ ತನ್ನ ಮೀನುಗಳನ್ನು ಓರಣವಾಗಿ ಗುಡ್ಡೆಯಿಡುತ್ತಿದ್ದ. ಅವನ ಪಗ್ಗುಲಲ್ಲಿ ಒಬ್ಬಳು ಹೊಸ ಹೆಂಗಸು ಕುಳಿತಿದ್ದಳು. ವಿಚಾರಿಸಿದುದರಲ್ಲಿ ಕರಿಯ ಹೊಸದಾಗಿ ಮದುವೆ ಮಾಡಿಕೊಂಡು ಬಂದ ಎರಡನೆಯ ಹೆಂಡತಿ ಆಕೆ ಎಂದು ತಿಳಿಯಿತು. ನಾನು ಹೇಳಬೇಕೆಂದಿದ್ದ ಸಹಾನುಭೂತಿಯ ಮಾತು ಆಡದೆ ಒಳಗೇ ಉಳಿದು ಹೋಯಿತು.

ಎರಡನೆಯ ಹೆಂಡತಿಯಲ್ಲಿ ಕರಿಯನ ಸಂಸಾರ ಮೊದಲನೆಯ ಹೆಂಡತಿಯಲ್ಲಿ ಬೆಳೆದುದಕ್ಕಿಂತ ಹೆಚ್ಚು ಪ್ರಬಲವಾಗಿ ಬೆಳೆಯುತ್ತಿದೆ. ಕರಿಯನಿಗೆ ಈ ಎರಡನೆಯ ಹೆಂಡತಿಯಲ್ಲಿ ಒಂಬತ್ತು ಜನ ಮಕ್ಕಳಾಗಿದ್ದಾರೆ. ರೋಗಗಳನ್ನೂ ಮುಪ್ಪನ್ನೂ ಜೀರ್ಣಿಸಿಕೊಂಡಂತೆ ಕರಿಯ ಹೆಂಡತಿಯರನ್ನೂ ಜೀರ್ಣಿಸಿಕೊಳ್ಳುತ್ತಾನೆ. ಹೀಗೆ ಒಂಬತ್ತು ಮಕ್ಕಳನ್ನು ಹೆತ್ತಮೇಲೆ ಕರಿಯನ ಎರಡನೆಯ ಹೆಂಡತಿಯೂ ಒಂದು ದಿನ ಚಳಿ ಜ್ವರದಿಂದ ಮಲಗಿದವಳು ಮೇಲಕ್ಕೆ ಏಳಲೇ ಇಲ್ಲ. ಹಾಸಿಗೆ ಹಿಡಿದ ಮೂರು ದಿನಗಳಲ್ಲಿಯೇ ಸತ್ತುಹೋದಳು. ಕರಿಯನೂ ಅವನ ಮಕ್ಕಳೂ ದೀರ್ಘ ಕಾಲ ಬದುಕಿದ ಸುಮಂಗಲಿ ಎಂದುಕೊಂಡು ಆಕೆಯ "ತಿತಿ"ಗಳನ್ನು ಸಂಭ್ರಮದಿಂದಲೇ ಮಾಡಿದರು. ನಾವು "ಇನ್ನು ಕರಿಯನ ತೋಳು ಮುರಿಯಿತು. ಅವನು ಸೋತ ಎಂದುಕೊಂಡೆವು. ಕರಿಯನ ಮಕ್ಕಳಿಗೆಲ್ಲ ನನ್ನ ವಯಸ್ಸಾಗಿದೆ. ನನಗೆ ಆಗಲೇ ಮುಪ್ಪು ಬರುತ್ತಿದೆ. ಕರಿಯ ಸೋಲದೆ ಇನ್ನೇನು? ಎಂದುಕೊಂಡೆ. ಈ ಸಲವಾದರೂ ಎರಡು ಕನಿಕರದ ಮಾತನ್ನು ಕರಿಯನಿಗೆ ಹೇಳಬೇಕೆಂದು ಮನಸ್ಸಿನಲ್ಲಿ ಮಾಡಿಕೊಂಡೆ.

ನಮ್ಮ ನಾಲೆಯಲ್ಲಿ ಬಟ್ಟೆ ಒಗೆಯುವಾಗ ಒಂದುದಿನ ನನ್ನ ಪಂಚೆ ಕೈಜಾರಿ ತೇಲಿಬಿಟ್ಟಿ. ಪಂಚೆಯಿರಲಿ. ಹನ್ನೆರಡು ಮೈಲಿಯ ನಾಲೆಯಲ್ಲಿ ಒಂದು ನೂಲನ್ನು ತೇಲಿಬಿಟ್ಟರೂ ಕರಿಯ ಹುಡುಕಿ ತೆಗೆದುಕೊಂಡು ಬರುತ್ತಾನೆ. ಒಂದು ಹಾವು ಮೀನು ಒಂದು ಬಾಳೆಮೀನು ಒಂದು ಸಸ್ಲೆಮೀನು ಹನ್ನೆರಡು ಮೈಲಿ ನಾಲೆಯಲ್ಲಿ ಎಲ್ಲಿ ಈಜುತ್ತಿದ್ದರೂ ಹಿಡಿದುಕೊಂಡು ಬರುತ್ತಾನೆ. ಪಂಚೆ ಹುಡುಕಿ ತಂದುಕೊಡು ಎಂದು ಹೇಳೋಣವೆಂದು ನಾನು ಕರಿಯನ ಬಾಗಿಲಿಗೆ ಹೋದೆ. ಒಂದು ದೊಡ್ಡ ಕೊಪ್ಪಲನ್ನೇ ಸ್ಥಾಪಿಸಲು ಸಾಕಾಗುವಷ್ಟು ಇದ್ದ ಆತನ ಸಣ್ಣ ದೊಡ್ಡ ಮಕ್ಕಳು

ಬಾಗಿಲಲ್ಲಿ ಲಗ್ಗೆ ಹತ್ತಿದ್ದರು. ಕರಿಯ ಎಂಬ ನನ್ನ ಕೂಗಿಗೆ ಉತ್ತರವಾಗಿ ಒಳಗಿನಿಂದ ಒಬ್ಬ ಹೆಂಗಸು ಬಂದಳು. ಅವಳು ಕರಿಯನ ಮೂರನೆಯ ಹೆಂಡತಿ. ಕರಿಯ ಅವಳನ್ನು ಮದುವೆಯಾಗಿ ನಾಲ್ಕು ದಿನಗಳಾಗಿದ್ದವು.

ಆ ದಿನ ಕರಿಯ ನಿಜವಾಗಿಯೂ ಯೋಗಿಯೇ ಎಂಬ ಪ್ರಶ್ನೆ ನನಗೆ ತೋರಿತು. ಕರಿಯನಿಗೆ ಬಾಲ್ಯವೂ ಇಲ್ಲ, ಮುಪ್ಪೂ ಇಲ್ಲ; ಶತ್ರುಗಳೂ ಇಲ್ಲ, ಮಿತ್ರರೂ ಇಲ್ಲ. ಹಳೆಯ ಹೆಂಡತಿ ಸತ್ತ ದುಃಖವೂ ಇಲ್ಲ, ಹೊಸ ಹೆಂಡತಿ ಬಂದ ಆನಂದವೂ ಇಲ್ಲ. ಅವನನ್ನು ಬಯ್ಯುವವರೂ ಇಲ್ಲ, ಹೊಗಳುವವರೂ ಇಲ್ಲ. ಅವನ ಕಸಬೇ ಅವನ ದೇವರು. ದೊರೆಯಲಾರದ ಸುಖವನ್ನು ಅವನು ಹುಡುಕಿಕೊಂಡು ಹೋಗುವವನೂ ಅಲ್ಲ. ತನ್ನನ್ನು ಹುಡುಕಿಕೊಂಡು ಬಂದ ದುಃಖದಿಂದ ತಪ್ಪಿಸಿಕೊಂಡು ಓಡಿಹೋಗುವವನೂ ಅಲ್ಲ. ಎಲ್ಲಾ ನೀರನ್ನೂ ತನ್ನಲ್ಲಿ ಒಳಗೊಂಡ ಸಮುದ್ರ ಹೇಗೆ ಶಾಂತವಾಗಿರುತ್ತದೋ ಹಾಗೆ ಕರಿಯ ಲೋಕದ ಹೊಡೆತ ಒದೆತಗಳನ್ನು ಸಹಿಸಿಕೊಂಡು ಅದಕ್ಕಾಗಿ ಯಾರಮೇಲೆಯೂ ಅಸಮಾಧಾನ ಅಸೂಯೆ ಪಡದೆ ಶಾಂತನಾಗಿರುತ್ತಾನೆ. ಆದರೆ ಇವನು ಯೋಗಿಯೇ ಎಂಬ ಪ್ರಶ್ನೆ ಮಾತ್ರ ನನ್ನನ್ನು ಪದೇಪದೇ ಬಾಧಿಸುತ್ತಿದೆ.

ಗೊರೂರು ರಾಮಸ್ವಾಮಯ್ಯಂಗಾರ್.

ಹಳತು, ಹೊಸತು

"ಕಾವ್ಯಪ್ರಯೋಗ ಪರಿಣತರೂ ತಾರುಣ್ಯದ ಉದ್ರೇಕ ಆರಿ ಹದವಾದ ವಿವೇಕದಿಂದ ಲೋಕದ ಸುಖದುಃಖವನ್ನು ನೋಡಬಲ್ಲವರೂ ಆದ ಹಿರಿಯರು ಹೊಸಕಾಲದ ಭಾವನೆಗೆ, ಹೊಸ ಜನಾಂಗದ ರಸಭಾವಕ್ಕೆ ರೂಪುಕೊಡದೆ ತಮ್ಮ ನೇತೃತ್ವವನ್ನು ಅಳಿಸುತ್ತಿದ್ದಾರೆಂದು ಕಿರಿಯರು ದೂರುತ್ತಿದಾರೆ. ಲೋಕವೆಲ್ಲ ಪರಿವರ್ತನವಾಗುತ್ತಿದೆ. ಇಷ್ಟುದಿನ ಕೇಳಿ ಬಾರದೆ ಇದ್ದ ಲೋಕದ ದುಃಖ ಸಂಕಟ ಈಗ ಕಿವಿ ಸೀಳುವ ಹಾಗೆ ಕೇಳಿಬರುತ್ತಿವೆ. ಭಕ್ತಿಗಾಗಿ ಕಣ್ಣಪ್ಪ ಕಣ್ಣುಕೊಟ್ಟಂತೆ ಈಗ ಇನ್ನಾವುದೋ ಧ್ಯೇಯಕ್ಕಾಗಿ ತರುಣರು ಪ್ರಾಣ ಒಪ್ಪಿಸುತ್ತಿದ್ದಾರೆ. ಇಷ್ಟು ಕಾಲ ಬಡಾಯಿ ಮಾಡಿದ ಸಂಸ್ಥೆ ತತ್ವಸಂಪ್ರದಾಯ ಈಗ ಸೋತು ಬಯಲಿಗೆ ಬಿದ್ದಿವೆ. ಒಂದು ನಾಗರಿಕತೆ ನಮ್ಮ ಕಣ್ಣು ಮುಂದೆಯೇ ಪಾಳುಬೀಳುತ್ತಿದೆ. ಇನ್ನೊಂದು ಬೆಳೆಯುತ್ತಿದೆ. ಅದರಲ್ಲಿ ಸರ್ವಸಮಾನತೆ ಮುಖ್ಯಸೂತ್ರ. ಇದಕ್ಕೆಲ್ಲ ಹಿರಿಯರು ವಿಮುಖರಾಗಿದ್ದುಕೊಂಡು ಪ್ರಾಚೀನ ಗಾದೆಗಳಲ್ಲೇ ಮುಳುಗಿದಾರೆಂದೂ ಗತವೈಭವ ಸ್ಮರಣ ಅನುಸರಣಗಳಲ್ಲೇ ಇದ್ದಾರೆಂದೂ ಕಿರಿಯರು ಆಕ್ಷೇಪಿಸುತ್ತಿದ್ದಾರೆ. ಇದರಿಂದ ಅಪಕ್ವಾನುಭವದ ಅಸಂಪೂರ್ಣಚೇತನದ ಎಳಕರು ಸಾಹಿತ್ಯ ಕ್ರಾಂತಿಗೆ ಕೈಹಾಕಿ ಹೀಚು ಮಿಡಿಗಳನ್ನು ತಂದು ಬಾಯಿರುಚಿಯನ್ನೇ ಕೆಡಿಸುತ್ತಿದ್ದಾರೆಂದೂ ಕೇಳಿದೇನೆ.

ಹೊಸದು ಎಂಬುದು ನಮ್ಮನ್ನು ಹೆದರಿಸಬೇಕಾಗಿಲ್ಲ. ಹಳತೆಲ್ಲವೂ ಕಹಿಯೇ ಅಲ್ಲ. ಅದನ್ನೂ ಇದನ್ನೂ ಧಾರಾಳವಾಗಿ ಬಳಸಿಕೊಂಡೇ ನನ್ನ ಕೆಲಸವನ್ನು ನಾನು ಮಾಡಿದೇನೆ. ಲೋಕದಲ್ಲಿ ನಿಜವಾಗಿಯೂ ಹೊಸತು ಯಾವುದು? ಹಳತು ಯಾವುದು? ಸರ್ವಜ್ಞನ ಪದ್ಯ ಎಂದಿಗೆ ಹಳೆಯದಾಗಬೇಕು? ಹಳತನ್ನೂ ಹೊಸತನ್ನೂ ಸರಿಯಾಗಿ ಬೆರೆಸುತ್ತ ಹೋಗುವುದೇ ಪ್ರಗತಿಯ ಲಕ್ಷಣ. ಯಾವುದೂ ಅತಿ ಆಗಬಾರದು. ನಾಟಕದ ತುಂಬಾ ಶ್ರಮಜೀವಿಗಳನ್ನು ತುಂಬಿಸಿ, ಅವರಿಂದ ಸದ್ದುಹೊಡೆಸಿದರೂ ನಿಟ್ಟುಸಿರು ಬಿಡಿಸಿದರೂ ನಾಟಕ ಆನಂದದಾಯಿ ಆಗುವುದಿಲ್ಲ. ಅಥವಾ ಚಮಕೀ ಅಂಗರೇಖೆ ಸುರುವಾಲು ನೀರಾಜೀ ರುಮಾಲುಗಳ ರಾಜರನ್ನು ತಂದು ಕುಣಿಸಿದರೂ ಫಲವಿಲ್ಲ.

ಹಾಗಲ್ಲದೆ ಬರೀ ವಾದವಿವಾದದಲ್ಲಿ ತೊಡಗಿದರೆ ಆಗುವ ಸೃಷ್ಟಿ ಅಪನಿಂದೆ; ಸಾಹಿತ್ಯವಲ್ಲ. ಗುಣಕ್ಕೆ ಮತ್ಸರವಿಲ್ಲವೆಂಬುದು ಅದಕ್ಕಿಂತಲೂ ನಿಜ. ವಿಮರ್ಶೆ ವಿಮರ್ಶಕರಿಗಿರಲಿ. ಅದು ಅವರ ಕಸಬು. ಕಲೋಪಾಸಕರಿಗೆ ಕಲಾಸೃಷ್ಟಿಯೊಂದೇ ಉಲ್ಲಾಸ."

—ಕೈಲಾಸಂ.

(ಅಧ್ಯಕ್ಷ ಭಾಷಣದಿಂದ)

ಪೊರಸು—ಒಂದು ವಿಚಾರ

ಹಿಂದಿನ ಕನ್ನಡ ಕಾವ್ಯಗಳಲ್ಲಿ ಹಲವೆಡೆ ಪ್ರಯೋಗವಾಗಿರುವ ಪೊಱಸು> ಹೊರಸು ಎಂಬ ಪದದ ಅರ್ಥ ವಿಚಾರವನ್ನು ಮಾಡಿ ಅದನ್ನು ವಿವರಿಸುವುದು ಈ ಲೇಖನದ ಉದ್ದೇಶ.

ಕನ್ನಡ ನಿಘಂಟುಗಳಲ್ಲಿ ಈ ಶಬ್ದ ದೊರೆಯುತ್ತದೆ. ಡಾ. ಕಿಟ್ಟೆಲ್ ಅವರು "ಹೊಱಸು" ಶಬ್ದವನ್ನು ಕೊಟ್ಟು ಅದಕ್ಕೆ ಅರ್ಥವಾಗಿ A kind of Pigeon ಎಂದು ಹೇಳಿ ಅದಕ್ಕೆ ಸಂವಾದಿಯಾದ ಪುಱವ, ಪುಱವು, ಪುಱಾ ಎಂಬ ತಮಿಳಿನ ಪದಗಳನ್ನು ಸೂಚಿಸಿದ್ದಾರೆ. ಇವರಿಗೆ ಈ ಅರ್ಥವನ್ನು ಕೊಡಲು ಆಧಾರ ಹಲಾಯುಧನ "ಅಭಿಧಾನ ರತ್ನಮಾಲಾ" ಎಂಬ ಸಂಸ್ಕೃತ ನಿಘಂಟಿಗೆ ಇರುವ ಕನ್ನಡ ವ್ಯಾಖ್ಯಾನ. ಈ ನಿಘಂಟಿನ ಭೂಮಿಕಾಂಡದಲ್ಲಿ ೧೦೦ ನೆಯ ಪದ್ಯದ ಪೂರ್ವಾರ್ಧ ಹೀಗಿದೆ:

ಜೀವಂಜೀವ ಕಪಿಂಜಲ ಚಕೋರ ಹಾರೀತ ವಂಜುಲ ಕಪೋತಾಃ।

ಇದಕ್ಕೆ ಟೀಕೆಯಲ್ಲಿ "ಈ ೬ ಹೊಱಸು" ಎಂದು ಬರೆದಿದೆ. ಆದ್ದರಿಂದ "ಹೊಱಸು" ಎಂಬ ಪದದಿಂದ ನಿರ್ದಿಷ್ಟವಾದ ಪ್ರಾಣಿ ಪಾರಿವಾಳ ಎಂಬುದರಲ್ಲಿ ಸಂಶಯಕ್ಕೆ ಎಡೆಯಿಲ್ಲ.

ಇದೇ ಅರ್ಥದಲ್ಲಿ ಕನ್ನಡ ಕಾವ್ಯಗಳಲ್ಲಿ ದೊರಕುವ ಈ ಕೆಳಗಣ ಪ್ರಯೋಗಗಳನ್ನು ನೋಡಬಹುದು:

(೧) "ವಡ್ಡಾರಾಧನೆ"ಯ ವಿದ್ಯುಚ್ಚೋರ ರಿಸಿಯ ಕಥೆಯ ಕೊನೆಯಲ್ಲಿ, "**ಪೊಱಸು**ಗಳನಿವಿರಿಯವು ದಂಸ ಮಸಕಂಗಳಂ ವಿಗುರ್ವಿಸೆ" ಎಂಬ ವಾಕ್ಯ ಭಾಗ ಬರುತ್ತದೆ. ಪಾರಿವಾಳಗಳಷ್ಟು ದೊಡ್ಡವಾದ ಸೊಳ್ಳೆ ಚಿಕ್ಕಾಡುಗಳನ್ನು ಮಾಯೆಯಿಂದ ಸೃಷ್ಟಿಸಲು ಎಂದು ಇದರ ಅರ್ಥ.

(೨) ತಲೆಯೆಲ್ಲ ನರೆತ ವಿಟನೊಬ್ಬನು ಪ್ರಾಯದ ಗಣಿಕೆಯೊಡನೆ ನೆರೆಯುವುದನ್ನು 'ಸೂಕ್ತಿಸುಧಾರ್ಣವ'ದ ಚಂದ್ರೋದಯ ವರ್ಣನಾ ಪ್ರಕರಣದಲ್ಲಿ ಬರುವ ಈ ಕೆಳಗಣ ಪದ್ಯದಲ್ಲಿ ವರ್ಣಿಸಿದೆ:

ನರೆಯ ಬೊಜಂಗನುಮಾನುಂ
ನೆರೆದಿರ್ದೊಡೆ ನೆರೆದು ಬಿನದದಿಂ ನೋಟ್ಪವರಿ
ನ್ನರಗಿಳಿಯುಂ **ಬೆಳ್ವೊಱಸುಂ**
ನೆರೆದಂದಮನಱಿಸಿರೆಮ್ಮೊಳಮೋಘಂ (?) ||

ಇಲ್ಲಿ ಬರುವ 'ಬೆಳ್ಪೊಱಸು' ಎಂದರೆ ಬಿಳಿ ಪಾರಿವಾಳ. ಆ ಪಕ್ಷಿಜಾತಿಯಲ್ಲಿ ವಿಶಿಷ್ಟವಾದ ಒಂದು ಪಂಗಡವನ್ನು ಬೆಳ್ ಎಂಬ ವಿಶೇಷಣ ಸೂಚಿಸುತ್ತದೆ.

(೩) ಪಾಂಡವರು ಜೂಜಾಡಿ ಸೋತು ದ್ರೌಪದೀ ಸಮೇತರಾಗಿ ಅರಣ್ಯ ವಾಸಕ್ಕೆ ಹೊರಟಾಗ ಅವರನ್ನು ಕಂಡ ಜನಗಳು ದುಃಖದಿಂದಲೂ ಕೌರವರ ಮೇಲಣ ಆಗ್ರಹದಿಂದಲೂ

ಎನಿತಾನುಮಂದದಿಂ ಜೂ
ದನಿಕ್ಕೆಯುಂ ದ್ರುಪದಸುತೆಯನೆಳೆದುಯ್ಯೆಯುಂ ವಿಂ
ತಿನಿತೊಂದಾದುದು ದುಶ್ಶಾ
ಸನನಿಂದಂ ಶಕುನಿಯೆಂಬ **ಬೆಳ್ಪೊಱಸಿಂದಂ** ||

ಎಂದು ಹಲುಬಿದರಂತೆ (ಪಂಪಭಾರತ, VII—೨೦). ಪಾಂಡವರಿಗೆ ಉಂಟಾದ ಈ ಕಷ್ಟಕ್ಕೆ ಕಾರಣ ಒಂದು ಕಡೆ ದುಶ್ಶಾಸನ, ಮತ್ತೊಂದು ಕಡೆ ಶಕುನಿಯೆಂಬ ಬಿಳಿ ಪಾರಿವಾಳ. ಪಂಪನ ಈ ಪ್ರಯೋಗದಲ್ಲಿ ಬಿಳಿ ಪಾರಿವಾಳ ಅನಿಷ್ಟಕಾರಕವಾದುದೆಂಬ ಅರ್ಥ ಅಡಗಿರುವಂತೆ ಕಾಣುತ್ತದೆ. ಇದನ್ನು ಪಾಠ ಹೇಳುವಾಗ ನನ್ನ ವಿದ್ಯಾಗುರುಗಳು ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು ಈ ಪದಕ್ಕೆ A bird of ill-omen ಎಂದು ಅರ್ಥ ಹೇಳಿದ್ದು ಸ್ಮರಣೆಗೆ ಬರುತ್ತದೆ.

(೪) ಕೀಚಕನ ವಧೆಯಾದನಂತರ ಪಾಂಡವರು ವಿರಾಟ ನಗರದಲ್ಲೇ ತಲೆ ಮರಸಿಕೊಂಡಿರಬೇಕೆಂದು ಊಹಿಸಿ ಕೌರವನು ಹೀಗೆನ್ನುತ್ತಾನೆ:

ಪರಿಭವದೊಂದು ತುತ್ತತುದಿ ಕೃಷ್ಣೆಯ ಬನ್ನದೊಳಾಗೆ ಜೂದಿನೊಳ್
ಪೊರ(ಱ)ಸಟಿವಂತೆ ತಮ್ಮರಸುಗೆಟ್ಟು ಕಟಿಲ್ದೆರ್ದೆಗೆಟ್ಟರಣ್ಯದೊಳ್
ತಿರಿತರುತಿರ್ದ್ದ ಕಣ್ಬಡಿಗರಿಂ ಮುಗುಬ್ದುಂ ಬಿಱುತೋಡಿ ಬೇಡರೊಳ್
ನೆರೆದಿರಲಲ್ಲದೊಡ್ಡಯಿಸಿ ರಾಜ್ಯದೊಳೇಂ ನೆರೆಯಲ್ಕೆ ತೀರ್ಗುಮೋ ||

(ಪಂಪಭಾರತ VIII-೮೫)

ಕೌರವನ ಈ ಮಾತಿನಲ್ಲಿ ಪಾಂಡವರ ವಿಷಯಕವಾದ ತಿರಸ್ಕಾರವೂ ಅನಾದರವೂ ಕಾಣುತ್ತವೆ. ಈ ಪದ್ಯದ 'ಪೊರ(ಱ)ಸಟಿವಂತೆ' ಎಂಬ ಪ್ರಯೋಗ ಚಿಂತನೀಯ. ಪಾರಿವಾಳ ಹಾಳುಮಾಡುವಂತೆ ಎಂದು ಇದಕ್ಕೆ ಅರ್ಥವಿದ್ದರೆ 'ಪೊಱಸು' ಎಂಬಲ್ಲಿ ಱಕಾರವಿರಬೇಕು. ಆದರೆ ಪ್ರಾಸದಲ್ಲಿ ರಱಕಾರಗಳನ್ನು ಪಂಪನು ಬೆರಸಿ ಬಳಸುತ್ತಾನೆಯೆ ಎಂಬ ಸಂದೇಹ ಬರುತ್ತದೆ. ರೇಫ ಶಕಟರೇಫಗಳನ್ನು ಪ್ರಾಸದಲ್ಲಿ ಬೆರಸಬಾರದೆಂಬ ವ್ಯಾಕರಣ ನಿಯಮವಿದ್ದರೂ ಅದಕ್ಕೆ ವಿರುದ್ಧವಾಗಿ ಪಂಪನು ಬೆರಸುತ್ತಾನೆಂಬುದಕ್ಕೆ ಈ ಕೆಳಗಣ ಅವನ ಪದ್ಯ ನಿದರ್ಶನ:

ಕರವೊಸೆದಾ ದ್ರುಪದಜೆಯೊಳ್
ನೆರೆದೊಸಗೆಗೆ ತಮ್ಮ ಬೀರಮುಂ ಬಿಂಕಮುಮಂ
[1]ತೆಱವುಂ ತೆಲ್ಲಂಟಿಯುಮೆಂ
ದರಿಕೇಸರಿಗಾಗಳೀವವೋಲ್ ಬೆನ್ನಿತ್ತರ್
(ಪಂಪಭಾರತ III-೭೨)

ಆದ್ದರಿಂದ 'ಪೊಱಸು' ಎಂಬ ಪ್ರಯೋಗವನ್ನು ಒಳಕೊಂಡ ಮೇಲೆ ಕಾಣಿಸಿದ ಪದ್ಯದಲ್ಲಿ ಱಕಾರಗಳನ್ನು ಪ್ರಾಸದೆಡೆಯೆಲ್ಲಿ ಅಪರೂಪವಾಗಿ ಪಂಪನು ಬೆರಸಿದ್ದಾನೆಂದು ಹೇಳಬಹುದು. ಹೀಗಲ್ಲದೆ 'ಪೊರಸು' ಎಂದೇ ರೇಫಾನ್ವಿತವಾದ ಪದವನ್ನು ಪಂಪನು ಬುದ್ಧಿಪೂರ್ವಕವಾಗಿಯೇ ಬಳಸಿದ್ದಾನೆಂದರೆ ಆಗ ಆ ಪದಕ್ಕೆ ಹಗ್ಗದ ಮಂಚ ಎಂದು ಅರ್ಥೈಸಬೇಕಾಗುತ್ತದೆ. ಆಗ 'ಪೊರಸಟಿವಂತೆ' ಎಂಬುದಕ್ಕೆ ಹಗ್ಗದ ಮಂಚ ಹಾಳುಮಾಡುವಂತೆ ಎಂಬ ಅರ್ಥವುಂಟಾಗುತ್ತದೆ.

(೫) ಮೇಘರಥನೆಂಬ ರಾಜನು ತನ್ನ ಅರಮನೆಯ ಜಿನಮಂದಿರದ ಮುಂದಿನ ಮಂಟಪದಲ್ಲಿ ನಿಂತಿರಲು ಗಿಡಗನು ಬೆನ್ನಟ್ಟಿಬರುತ್ತಿದ್ದ ಪಾರಿವಾಳವೊಂದು ಅವನ ಎದುರಿಗೆ ಬಂದು ಬೀಳುತ್ತದೆ. ಆ 'ರಾಜಕಪೋತ'ವು ತನ್ನನ್ನು ಗಿಡಗನಿಂದ ರಕ್ಷಿಸಬೇಕೆಂದು ರಾಜನಲ್ಲಿ ಮೊರೆಯಿಡಲು ಆತನು ಆ ಹಕ್ಕಿಗಳ ಅಕಾರಣದ್ವೇಷಕ್ಕೆ ಹಿಂದಿನ ಕಥೆಯೊಂದನ್ನು ತಿಳಿಸಲು ಅದನ್ನು ಕೇಳಿದ ದೃಢರಥನೆಂಬೊಬ್ಬನು

ಮಾನಿಸರ ನುಡಿವ ತೆಱದಿಂ
ಶ್ಯೇನನು **ಮರವೊಱಸು**ಮಿಂತು ಗಱಪಿದಪುದಿದಂ
ಶ್ರೀನಾಥ ಬೆಸಸಿಮವಧಿ
ಜ್ಞಾನದಿನಱಿದೆನೆ ನೃಪೇಂದ್ರನದುವಂ ಪೇೞ್ಗುಂ ||
(ಪೊನ್ನ : ಶಾಂತಿಪುರಾಣ IX-೯೧)

ಇಲ್ಲಿ ಬರುವ 'ಅರವೊಱಸು' ಎಂಬುದಕ್ಕೆ ರಾಜಕಪೋತವೆಂಬ ಅರ್ಥ ಸ್ಪಷ್ಟವಾಗಿಯೇ ಇದೆ.

(೬) ವೈಶಂಪಾಯನ ಸರೋವರದಲ್ಲಿ ಅಡಗಿಕೊಂಡಿದ್ದ ದುರ್ಯೋಧನನನ್ನು ಎಲ್ಲೆಲ್ಲಿಯೂ ಹುಡುಕಿ ಕಾಣದೆ ಭೀಮಸೇನನು

ಭರತಕುಲೇಂದು ಕಲಂಕಂ
ಭರತಾನ್ವಯ ರಾಜಭವನ **ರಾಜಕಪೋತಂ**

---

[1] ಪರಿಷತ್ತಿನ ಮುದ್ರಿತ ಪುಸ್ತಕದಲ್ಲಿ ಇಲ್ಲಿ ರೇಫವೇ ಅಚ್ಚುಹಾಕಿದೆ. ಆದರೆ ಅದು ಸರಿಯಲ್ಲವೇನೊ?

ಕುರುಕೇತುವೆಲ್ಲಿದಂ ತತ್
ಕುರುಕುಲ ಲಯಕೇತು ಭೀಮಸೇನಂ ಬಂದಂ ||

(ಗದಾಯುದ್ಧ VI-೩೧)

ಎಂದು ಸಿಂಹದಂತೆ ಗರ್ಜಿಸಿದನಂತೆ. ಇಲ್ಲಿ ಕಾಣುವ "ಭರತಾನ್ವಯ ರಾಜಭವನ ರಾಜಕಪೋತಂ" ಎಂಬ ಮಾತು ಹೊಗಳಿಕೆಯ ಮಾತಲ್ಲವೆಂದು ಸ್ಪಷ್ಟ. ಅದರಲ್ಲಿ ನಿಂದೆ ತುಂಬಿರುವಂತೆ ಪದ್ಯವನ್ನು ಓದಿದ ಯಾರಿಗಾದರೂ ವೇದ್ಯವಾಗದಿರದು.

(೭) ದುರ್ಗಸಿಂಹನ 'ಪಂಚತಂತ್ರ'ದಲ್ಲಿ ಬರುವ ಕಚದ್ರುಮನ ಕಥೆಯಲ್ಲಿ "ಕಚದ್ರುಮಂ ನಿರ್ಬುದ್ಧಿಯೊರ್ವನೆ ಕರುಮಾಡದೊಳ್ **ಶ್ವೇತಕಪೋತ**ಸಂತಿರ್ದು ಶತ್ರುಸಂಗ್ರಹಣಕ್ಕೊಳಗಾದಂ" (ಪುಟ ೨೯) ಎಂಬ ವಾಕ್ಯವಿದೆ. ಇಲ್ಲಿ ಬರುವ "ಕರುಮಾಡದೊಳ್ ಶ್ವೇತಕಪೋತಸಂತಿರ್ದು" ಎಂಬುದನ್ನು "ರಾಜಭವನ ರಾಜ ಕಪೋತಂ" ಎಂಬ ರನ್ನನ ಪ್ರಯೋಗದೊಡನೆ ಹೋಲಿಸಬಹುದು. ಅರಮನೆಯಲ್ಲಿ ಬಿಳಿಪಾರಿವಾಳದಂತಿದ್ದ ಎನ್ನುವುದು ಬೈಗುಳದ ಮಾತೆಂದು ಭಾಸವಾಗುತ್ತದೆ.

(೮) ಪುಷ್ಪದಾಡನ ಭಾರ್ಯೆಯಾದ ಸುದಂತಿ ಅತಿಕುರೂಪಿ. ಅವಳು ಇತರ ಸುಂದರಕುಮಾರಿಯರೊಡನೆ ಇದ್ದಾಗ ಹೇಗೆ ಕಾಣುತ್ತಿದ್ದಳೆಂಬುದನ್ನು ವರ್ಣಿಸುವಾಗ ನಯಸೇನ "ಹಂಸೆಯೊಳಗೆ **ಹೊರಸು** ಬಂದಿರ್ಪಂತೆ ಬರ್ಪುದುಂ" (ಧರ್ಮಾಮೃತ VII-೨೨೪ ಗ) ಎಂದು ಹೋಲಿಕೆಯೊಂದನ್ನು ಕೊಟ್ಟಿದ್ದಾನೆ. ಇಲ್ಲಿನ 'ಹೊರಱಸು' ಎಂಬುದಕ್ಕೆ ಪಾರಿವಾಳವೆಂಬ ಅರ್ಥ ಅಷ್ಟೇ ಅಲ್ಲದೆ ಅದು ಅಮಂಗಳ ಕರ ಎಂಬ ಸೂಚನೆಯೂ ಅಡಗಿದೆ.

(೯) ಧರ್ಮರತ್ನಾಕರೆಯಾದ ಧನಶ್ರೀಯನ್ನು ಇತರ ದುಷ್ಟ ಸ್ತ್ರೀಯರೊಡನೆ ಹೋಲಿಸಿ ಹೊಗಳುತ್ತ ನಯಸೇನ ಕವಿ

ಮುಱುಕಿಸುವ ಧರ್ಮವೆಂದೊಡೆ
ಗುಱುಗುಱಿಸುವ ಗಂಡನಿದಿರೊಳೆದ್ದಾಡುವ ಬೆ
[ಳ್ಪೊ]ಱಸುಗಳಂ ಕಿಸುಗುಳಿಯರ
ನಱಿವೊಡೆ ಪೋಲಿಪುದೆ ಧರ್ಮರತ್ನಾಕರೆಯಂ ||

(ಧರ್ಮಾಮೃತ X-೭೮)

ಎಂಬ ಪದ್ಯವೊಂದನ್ನು ಹೇಳಿದ್ದಾನೆ. ಇಲ್ಲಿ ಕಾಣುವ 'ಬೆಳ್ಪೊಱಸುಗಳಂ' ಎಂಬುದಕ್ಕೆ ಮುದ್ರಿತ ಪುಸ್ತಕದಲ್ಲಿ ಇರುವ ಪಾಠ ತಪ್ಪೆಂಬುದರಲ್ಲಿ ಸಂದೇಹವಿಲ್ಲ. ಆ ಪದದ ವಾಚ್ಯಾರ್ಥ ಬಿಳಿಪಾರಿವಾಳ; ಅದರಂತೆ ಅನಿಷ್ಟಕಾರಕರನ್ನು ಎಂಬುದು ಲಕ್ಷಣಾರ್ಥ. ಱಕಾರ ಪ್ರಾಸಿನಲ್ಲಿ ಪೊಱಸಿನ ರೇಫ ಪ್ರಯೋಗವಾಗಿರುವುದು ಈ ಪದ್ಯದಲ್ಲಿ ಗಮನಿಸಬೇಕಾದ ಅಂಶ.

(೧೦) ರುದ್ರಭಟ್ಟನ 'ಜಗನ್ನಾಥ ವಿಜಯ'ದಲ್ಲಿ ಪೊಱವೊರಸು, ಪಱವೊಱಸು ಎಂಬೆರಡು ಪ್ರಯೋಗಗಳು ದೊರೆಯುತ್ತವೆ. ಆ ಗ್ರಂಥದ ೨ನೆಯ ಆಶ್ವಾಸದ ೧೮ನೆಯ ಪದ್ಯದನಂತರ ಬರುವ ಪುರವರ್ಣನಾವಸರದ ಪದ್ಯಗಳಿಗೆ ಪ್ರತಿಯಾಗಿ ಕೆಲವು ಕೈಬರೆಹದ ಪ್ರತಿಗಳಲ್ಲಿ ಪಜ್ಝಟಿಕೆಯಂತಿರುವ ರಗಳೆಯೊಂದಿದೆ. ಆ ರಗಳೆಯಲ್ಲಿನ ಕೆಲವು ಸಾಲುಗಳಿವು:

ಕಿನ್ನರಿಯರ ಚೆನ್ನಂ ಪಟಿದು ನಗುವ
ಖಚರಿಯರಂ ಭಾವದೊಳ್ಳೆದೆ ವಿಗುವ
ಜತ್ತಕರಂ ಸುತ್ತಿಂದೊಳಗುಮಾೞ್ಪ
ವಾತ್ಸ್ಯಾಯನನಂ **ಪೊಱವೊರಸು** ಮಾೞ್ಪ . . .

(ಜಗನ್ನಾಥವಿಜಯ: ಪು. ೨೩, ಅಡಿ ಟಿಪ್ಪಣಿ)

ಇಲ್ಲಿರುವ 'ಪೊಱವೊರಸು ಮಾೞ್ಪ'ಕ್ಕೆ ಖಚಿತವಾಗಿ ಇದೇ ಅರ್ಥವೆಂದು ಹೇಳುವುದು ಕಷ್ಟವಾದರೂ ಕಡೆಗಣಿಸು, ತಿರಸ್ಕಾರಮಾಡು, ಇತ್ಯಾದಿಯಾದ ಲಕ್ಷಣಾರ್ಥವಿರಬೇಕೆಂದು ಊಹಿಸಬಹುದು.

(೧೧) ಒಬ್ಬ ವಿಟ "ತನ್ನ ಕನ್ನೆವೇಟದ ಚೆನ್ನೆಯನ್ನು ನೆನೆದು"

ಕಿಱುವಡಿಗಾಲದಂದುಟಿದೆನೋ ಪಳನಾನವಳಂದೆ ಗಂಡರಂ
ಪಱವೊಱಸಾಗೆ ಮಾಡುವಳವಳ್ಗೆ ಕುಚಂ ಕಚಮೂರು ಭಾರವ
ಳ್ಳಿಱಿದು ಪೊದಱ್ದುಕೊರ್ವಿ ನಿಲಲಿನ್ನೆ ಗವಾಕೆಯೊಳಿಂದ್ರಚಂದ್ರರೆಂ
ಬಱಿಕೆಯ ದೇವಕೋಟಿ ಮನುಜಾಕೃತಿಯಿಂದೊಡಗೂಡದಿರ್ಕುಮೇ ||

(ಜ. ವಿಜಯ: XVI-೧೩೪)

ಎಂದು ಹಿಂದಿನ ಅನುರಾಗದ ಮಾತನ್ನು ಉಸುರಿದನಂತೆ. ಇಲ್ಲಿ ಕಾಣುವ 'ಪಱವೊಱಸಾಗೆ ಮಾಡು' ಎಂಬ ಮಾತಿಗೆ ಅರ್ಥ ಅನಿರ್ದಿಷ್ಟವಾದರೂ ರುದ್ರಭಟ್ಟನ ಮೊದಲ ಪ್ರಯೋಗದೊಡನೆ ಹೋಲಿಸಿ ನೋಡಿದರೆ ಎರಡಕ್ಕೂ ಒಂದೇ ಅರ್ಥವಿರುವಂತೆ ತೋರುತ್ತದೆ. ಅಂತು ಈ ಕವಿಯ ಎರಡು ಪ್ರಯೋಗಗಳಲ್ಲೂ ದೊರೆಯುವ 'ಪೊರ(ಱ)ಸು' ಎಂಬುದರ ಅರ್ಥನಿರ್ಣಯವಾಗಲಿ ರೂಪನಿರ್ಣಯವಾಗಲಿ ಸದ್ಯಕ್ಕೆ ಕಷ್ಟವಾಗಿಯೇ ಉಳಿದುಕೊಂಡಿದೆ.

(೧೨) ಯಶೋಧರ ರಾಜನು ತನ್ನ ಕೆನ್ನೆಯಲ್ಲಿ ನರೆಗೂದಲನ್ನು ಕಂಡು ವಿರಕ್ತಿ ಹೊಂದಿದ್ದನ್ನು ವರ್ಣಿಸುವ ಜನ್ನನ ಪದ್ಯ ಹೀಗಿದೆ;

ನರೆಯೆಂಬ **ಹೊಱಸು** ಮೊಗಮಂ
ಬರಮನೆಯಂ ಪೊಕ್ಕೊಡಂಗನಾಲೋಕನಮಂ

ಬರಸೆಂತಿರ್ದಪನೆಂದಾ
ನರನಾಥಂ ತೊಱೆದನಖಿಳವಿಷಯಾಮಿಷಮಂ ||

(ಯಶೋಧರಚರಿತೆ ಸಂಗ್ರಹ. II-೮)

ಇಲ್ಲಿ ನರೆಗೂದಲನ್ನು ಪಾರಿವಾಳವೆಂದು ಹೇಳಿರುವುದರಿಂದ ಆ ಪಾರಿವಾಳ ಬೆಳ್ಳಗಿರ ಬೇಕೆಂಬುದನ್ನು ಊಹಿಸಬಹುದು. ಹಾಗೆಯೇ ನರೆ ಮುಖದಲ್ಲಿ ಕಾಣಿಸಿದರೆ ಅದನ್ನು ಕಂಡ ಅಂಗನೆಯರು ಮೆಚ್ಚದೆ ಬಿಟ್ಟುಹೋಗುತ್ತಾರೆಂಬುದಕ್ಕೆ ಪಾರಿವಾಳ ಅರಮನೆ ಯನ್ನು ಹೊಕ್ಕರೆ ಎಂಬ ಹೋಲಿಕೆಯನ್ನು ಕೊಟ್ಟಿರುವುದರಿಂದ ಅರಮನೆಯನ್ನು ತ್ಯಜಿಸಬೇಕೆಂಬ ಸೂಚನೆ ಅಡಗಿದೆ.

(೧೩) ಪಾರಿವಾಳವು ಅನಿಷ್ಟಕಾರಕ ಪಕ್ಷಿ ಎಂದು ಮೇಲಿನ ಕೆಲವು ಪ್ರಯೋಗ ಗಳಲ್ಲಿ ಅನುಮಾನಿಸಿರುವ ವಿಷಯವನ್ನು ಸ್ಥಿರೀಕರಿಸುವ ಈ ಕೆಳಗಣ ಎರಡು ಪದ್ಯ ಗಳು ಬ್ರಹ್ಮಶಿವನ 'ಸಮಯ ಪರೀಕ್ಷೆ'ಯಲ್ಲಿ ದೊರೆಯುತ್ತವೆ:

ಪೊಱಸು ಮನೆವೊಗಲು ಮೇಘೋ
ತ್ಕರ ಗರ್ದಭ ಚರಣರಜಮದೊಂದಿನಿಸಾನುಂ
ಪುರುಷನ ಮೆಯ್ಯಂ ಪೊರ್ದಿದೊ
ಡಿರಲಱಿಯದು ಭಾಗ್ಯಮೆಂದು ನೆಗೞ್ವರ್ ಮೂಢರ್ ||

ಪೊಱಸಿನ ನೆಟಲೆತ್ತಾನುಂ
ಪುರುಷನ ಮೇಲೊಮ್ಮೆ ಪರಿದೊಡಾಗಲೆ ಮೆಯ್ಯಿಂ
ಸಿರಿ ತೊಲಗುಗುಮೆಂಬರದೇಂ
ಸಿರಿ ತೊಲಗದೆ ಪೊರಸಿನಲ್ಲಿ ಪಟ್ಟಿರೆ ನಿಚ್ಚಂ ||

ಪಾರಿವಾಳದ ವಿಷಯದಲ್ಲಿ ಜನಜನಿತವಾಗಿದ್ದ ಒಂದು ಮೂಢ ನಂಬಿಕೆಯನ್ನು ಬ್ರಹ್ಮಶಿವನು ಈ ಪದ್ಯಗಳಲ್ಲಿ ಹೇಳುತ್ತಿದ್ದಾನೆ. ಪಾರಿವಾಳವು ಮನೆಯನ್ನು ಹೊಕ್ಕರೆ ಭಾಗ್ಯ ಅಲ್ಲಿರದೆ ಹೋಗುತ್ತದೆಂದು ಮೂಢರು ಹೇಳುತ್ತಾರೆಂದು ಮೊದಲು ಹೇಳಿ ಆ ಮೇಲೆ ಅದನ್ನು ಅವನು ಪರಿಹಾಸಮಾಡಿದ್ದಾನೆ. ಪಾರಿವಾಳದ ನೆರಳು ಮನುಷ್ಯನ ಮೇಲೆ ಬಿದ್ದರೆ ಅವನ ಮೈಯಿಂದ ಸಂಪತ್ತು ತೊಲಗುತ್ತದೆ ಎನ್ನುವುದರಲ್ಲಿ ಏನಿದೆ? ಸದಾ ಮಂಚದ ಮೇಲೆ ಮಲಗಿದ್ದರೆ ಸಿರಿ ತೊಲಗದೆ ಇರುತ್ತದೆಯೆ! ಮನುಷ್ಯನು ಕಾರ್ಯಶೂರನಾಗಿ ಸಂಪತ್ತನ್ನು ಗಳಿಸಬೇಕೇ ಹೊರತು ಲೋಲನಾಗಿ ಮಂಚದ ಮೇಲೆ ಬಿದ್ದುಕೊಂಡಿದ್ದರೆ ಐಶ್ವರ್ಯಲಾಭ ಆಗದು. ಇದು ಬ್ರಹ್ಮಶಿವನ ಅಭಿಪ್ರಾಯ. ಈ ದೃಷ್ಟಿಯಿಂದ ಉಳಿದ ಪ್ರಯೋಗಗಳನ್ನು ನೋಡಿದರೆ ಅವುಗಳ ಒಳ ಅರ್ಥ ವಿಶದವಾಗುತ್ತದೆ. "ಶಕುನಿಯೆಂಬ ಬೆಳ್ವೊಱಸಿಂದಂ", "ಜೂದಿನೊಳ್ ಪೊರ (ಱ)

ಸೞಿವಂತೆ"—ಎಂಬ ಪಂಪನ ಮಾತುಗಳಿಗೆ ಶಕುನಿಯು ಪಾಂಡವರನ್ನು ಹಾಳು ಮಾಡುವ, ಅತಏವ ಕೌರವಕುಲವನ್ನೂ ನಾಶಗೊಳಿಸುವ ಬಿಳಿ ಪಾರಿವಾಳವಾಗಿದ್ದನೆಂದೂ, ಕೌರವನು ಒಡ್ಡಿದ ಜೂಜು ಪಾಂಡವರಿಗೆ ಪಾರಿವಾಳದಂತೆ ನಾಶಕರವಾಯಿತೆಂದೂ ಅರ್ಥಬಂದು ಪಂಪನ ಮಾತು ಹೆಚ್ಚು ರಮಣೀಯವಾಗುತ್ತದೆ. "ಭರತಾನ್ವಯ ರಾಜಭವನ ರಾಜಕಪೋತಂ" ಎಂಬ ರನ್ನನ ಮಾತಿನಲ್ಲಿ ಅಡಗಿರುವ ಮೊದಲೆಯ ಮುಳ್ಳು ಭರತವಂಶವೆಂಬ ಅರಮನೆಯನ್ನು ಹಾಳುಮಾಡುವ ಕಪೋತ ದುರ್ಯೋಧನನಾಗಿದ್ದಾನೆ ಎಂಬ ಅರ್ಥದಲ್ಲಿ ಅಡಗಿಕೊಂಡಿದೆ. ಹೀಗೆಯೇ ಕಚದ್ರುಮನು ಕರುಮಾಡವನ್ನು ಹಾಳುಮಾಡುವ ಶ್ವೇತ ಕಪೋತನಾಗಿದ್ದಾನೆ. ನರೆಗೂದಲು ಕಾಮಿನಿಯರ ಕಣ್ಣಿಗೆ ಹೇಗೆ ಅನಿಷ್ಟವೊ ಹಾಗೆಯೇ ಪಾರಿವಾಳ ಅರಮನೆಯನ್ನು ಹೊಕ್ಕರೆ ಅನಿಷ್ಟಕಾರಕವೆಂದು ಜನ್ನನ ಪದ್ಯದಲ್ಲಿ ಹುದುಗಿರುವ ಹುರುಳು.

ಪೊಱಸು ಎಂಬ ಪದಕ್ಕೆ ಪಾರಿವಾಳವೆಂಬ ಅರ್ಥ ಪ್ರಸಿದ್ಧವಾಗಿತ್ತೆಂದೂ ಅದರ ವಿಷಯದಲ್ಲಿ ವಿಪತ್ಕಾರಕವಾದ ಅಪಶಕುನದ ಹಕ್ಕಿಯೆಂಬ ನಂಬಿಕೆ ಕನ್ನಡ ಜನತೆಯಲ್ಲಿ ಹತ್ತನೆಯ ಶತಮಾನದಿಂದ ಹಿಡಿದು ಹದಿಮೂರನೆಯ ಶತಮಾನದ ವರೆಗೂ ನೆಲಸಿತ್ತೆಂದೂ ಮೇಲಣ ಚರ್ಚೆಯಿಂದ ತೇಲಿ ಬಂದಿರುವ ಅಂಶಗಳು. ಈಗ ನಮ್ಮ ನಾಡವರಲ್ಲಿ ಗೂಬೆ, ಕಾಗೆ, ಬೆಳವ (ಒಂದು ಬಗೆಯ ಪಾರಿವಾಳ) ಗಳ ವಿಷಯದಲ್ಲಿ ಈ ಮೂಢ ನಂಬಿಕೆ ಬಂದಿದೆ. ಪಾರಿವಾಳದ ವಿಷಯದಲ್ಲಿದ್ದ ಇಂಥ ನಂಬಿಕೆ ಕಾಲಕ್ರಮದಲ್ಲಿ ಗೂಬೆ ಮುಂತಾದವುಗಳಿಗೆ ಆರೋಪಿತವಾಗಿರಬಹುದೆ? ಪಾರಿವಾಳ ಅನಿಷ್ಟಕಾರಕ ಪಕ್ಷಿ ಎಂಬ ನಂಬಿಕೆ ಋಗ್ವೇದದ ಕಾಲದಲ್ಲಿಯೂ ಇದ್ದಿತೆಂದು ಹೇಳುವುದಕ್ಕೆ ಆಧಾರವಿದೆ.[1]

ಇನ್ನು ಈ ಪದದ ರೂಪವಿಚಾರ. ಇದರಲ್ಲಿ ರೇಫವಿರಬೇಕೋ? ಶಕಟ ರೇಫವಿರಬೇಕೋ? ಬ್ರಹ್ಮಶಿವನ ಎರಡು ಪದ್ಯಗಳಲ್ಲೂ ರೇಫ ಪ್ರಾಸವಿರುವುದು ಕಾಣುತ್ತದೆ. ಎರಡು ಪದ್ಯಗಳೂ 'ಪೊರ(ಱ)ಸು' ಎಂಬ ಪದದಿಂದ ಆರಂಭವಾಗಿವೆ. ಅದರಲ್ಲಿ ಱಕಾರವಿದ್ದರೆ ಬ್ರಹ್ಮಶಿವನು ಮಿಶ್ರಪ್ರಾಸ ಮಾಡಿದ್ದಾನೆಂದು ಹೇಳಬೇಕಾಗುತ್ತದೆ. ಪಂಪನಿಂದ ಇಂಥ ಮಿಶ್ರಪ್ರಾಸಕ್ಕೆ ಉದಾಹರಣೆಯನ್ನು ಹಿಂದೆಯೇ ಕೊಟ್ಟಿದೆ. ಇವರಿಬ್ಬರೂ ಮಾರ್ಗವಿದರಾದ ಕವಿಗಳು. ಇಂಥವರು ರಱಕಾರಗಳನ್ನು ಪ್ರಾಸದಲ್ಲಿ ಬೆರಸುವರೆಂದು ನಂಬುವುದು ಕಷ್ಟ. ತಮಿಳಿನಲ್ಲಿರುವ ಪುಱವ ಮುಂತಾದ ರೂಪಗಳನ್ನೂ, ಅವು 'ಪದಿಟ್ಟುಪ್ಪತ್ತು' 'ಜೀವಕ ಚಿನ್ತಾಮಣಿ' ಮುಂತಾದ ಪ್ರಾಚೀನ ತಮಿಳು ಗ್ರಂಥಗಳಲ್ಲಿ ಪ್ರಯೋಗವಾಗಿರುವುದನ್ನೂ* ಱಪ್ರಾಸಿನಲ್ಲಿ ಪೊಱಸಿನ ರೇಫ

[1] Monier Williams: Sanskrit-English Dictionary, ಕಪೋತ ನೋಡು.

* Tamil Lexicon; P. 2811, 2812.

ವನ್ನು ನಯಸೇನ ಬಳಸಿರುವುದನ್ನೂ ನೋಡಿದರೆ ಪಾರಿವಾಳವೆಂಬರ್ಥದಲ್ಲಿ ಪೊಱಸು ಎಂದು ಶಕಟ ರೇಫವಿರಲೇಬೇಕೆಂದು ಊಹಿಸಬಹುದು. ಆದ್ದರಿಂದ ಪಂಪನೂ ಬ್ರಹ್ಮಶಿವನೂ ಕ್ವಚಿತ್ತಾಗಿ ರೇಫಱಕಾರಗಳನ್ನು ಪ್ರಾಸದಲ್ಲಿ ಬೆರಸಿರಬೇಕೆಂದು ಬೋಧೆಯಾಗುತ್ತದೆ.

ಪೊಱಸು, ಪೊರಸು ಎಂಬೆರಡು ಪದಗಳಿಗೆ ಇರುವ ಅರ್ಥ ವ್ಯತ್ಯಾಸವೇ ಬ್ರಹ್ಮಶಿವನ ಎರಡನೆಯ ಪದ್ಯದಲ್ಲಿ ಕಾಣುವ ಚಮತ್ಕಾರದ ಸ್ವಾರಸ್ಯ. ಮೊದಲನೆಯದಕ್ಕೆ ಪಾರಿವಾಳವೆಂದೂ ಎರಡನೆಯದಕ್ಕೆ ಹಗ್ಗದಿಂದ ಮಾಡಿದ ಮಂಚವೆಂದೂ ಇರುವ ಅರ್ಥವನ್ನು ಗಮನಿಸಿದರೆ ಬ್ರಹ್ಮಶಿವನ ಪರಿಹಾಸದ ರಮ್ಯತೆ ಒಡಮೂಡುತ್ತದೆ. 'ಪೊಱಸು' ಎಂಬ ಪದದಲ್ಲಿ ಅಡಗಿರುವ ಅರ್ಥಮರ್ಮವನ್ನು ಭೇದಿಸುವುದರಲ್ಲಿ ಬ್ರಹ್ಮಶಿವನ ಪ್ರಯೋಗ ಅತ್ಯಂತ ಸಹಕಾರಿಯಾಗಿದೆ.

ಡಿ. ಎಲ್. ನರಸಿಂಹಾಚಾರ್.

ಕಾವ್ಯಾವಲೋಕನ

೧. ರವೀಂದ್ರರ ಕತೆಗಳು, ಭಾಗ ೨—ಅನುವಾದಕರು: ಶ್ರೀ ಅ. ನಾರಾಯಣ ಸ್ವಾಮಿ ಅಯ್ಯರ್ ಅವರು; ಸತ್ಯಶೋಧನ ಪ್ರಕಟನ ಮಂದಿರ, ಬೆಂಗಳೂರು ನಗರ; ಪುಟ ೧೧೪; ಬೆಲೆ, ೧ ರೂಪಾಯಿ.

ರವೀಂದ್ರರ ಕಥೆಗಳ ಮೊದಲ ಭಾಗ ಅಚ್ಚಾದುದರ ಹಿಂದೆಯೆ ೨ನೆಯ ಭಾಗವನ್ನೂ ಶ್ರೀ ನಾರಾಯಣಸ್ವಾಮಿಯವರು ಒದಗಿಸಿದ್ದಾರೆ. ಇಷ್ಟರಲ್ಲೇ ೩-೪ನೆಯ ಭಾಗಗಳೂ ಕನ್ನಡಿಗರಿಗೆ ಸಿಗಲಿವೆ. ಅಲ್ಲದೆ ೧ನೆಯ ಭಾಗ ಪುನರ್ಮುದ್ರಣ ಕಂಡಿದೆ. ಇದರಿಂದಲೇ ಶ್ರೀ ನಾರಾಯಣಸ್ವಾಮಿಯವರು ಕನ್ನಡ ಸಾಹಿತ್ಯದಲ್ಲಿಯ ಒಂದು ದೊಡ್ಡ ಕೊರತೆಯನ್ನು ಯಶಸ್ವಿಯಾಗಿ ದೂರಮಾಡಿದ್ದಾರೆಂಬದು ಸ್ಪಷ್ಟವಾಗುತ್ತಲಿದೆ. ರವೀಂದ್ರರ ಸಾಹಿತ್ಯ ಇದಕ್ಕೂ ಮೊದಲೇ ಹೆಚ್ಚು ಪ್ರಮಾಣದಲ್ಲಿ ಕನ್ನಡದಲ್ಲಿಳಿದಿರಬೇಕಿತ್ತು. ಈ ವಿಷಯದಲ್ಲಿ ಕರ್ನಾಟಕ ಭಾರತದ ಬೇರೆಲ್ಲ ಸಾಹಿತ್ಯಗಳಿಗಿಂತ ಬಹಳ ಹಿಂದು. ಆದರೀಗ ಶ್ರೀ ನಾರಾಯಣಸ್ವಾಮಿಯವರ ಅಭ್ಯಾಸ ಹಾಗು ಪಣಗಳ ಫಲವಾಗಿ ಕವಿ ರವೀಂದ್ರನು ಕನ್ನಡಿಗರ ಮನೆ-ಮನಗಳನ್ನು ಪ್ರವೇಶಿಸುತ್ತಲಿದ್ದಾನೆ.

ರವೀಂದ್ರರ ಸಾಹಿತ್ಯ ಅಪಾರವಾದದ್ದು. ಅವರ ಸಾಹಿತ್ಯದೃಷ್ಟಿಯ ವ್ಯಾಪವೋ—ಜೀವನದ ಪಾರಾವಾರದ ಆವಾರವನ್ನೇ ಮೀರುವಂತಹದು. ಅವರ ಕೃತಿಗಳಲ್ಲಿ ಬಂಗಾಲಿಗಳ ಜೀವ-ಭಾವ, ಆಸೆ-ಆಕಾಂಕ್ಷೆ, ಗುಣಲೋಪಗಳು ಇಣುಕಿ-ಮಿಣುಕುತ್ತಿರುವದರ ಹಿಂದೆ ಬ್ರಹ್ಮಾಂಡದ ಜೀವನದ ತತ್ವದ ನಾಡಿಸ್ಫುರಣವೂ ಅಡಗಿರುವುದು ಸಹೃದಯ ವಾಚಕನಿಗೆ ಗೋಚರಿಸದಿರದು. ಬಂಗಾಲದ ಛಾಯಾಚಿತ್ರಗಳೂ, ಭಾವ ಚಿತ್ರಗಳೂ ತೋರುವ ವಿವಿಧ ಆವಿಷ್ಕಾರಗಳ ಹಿಂದೆ ಮಾನವ್ಯದ ಸುಖದುಃಖಗಳ ಪ್ರಚ್ಛನ್ನಲೀಲೆಯೂ, ವಿಶ್ವವಾಣಿಯ ಆರ್ತಸಂದೇಶವೂ ಆವಿರ್ಭವಿಸುತ್ತಿರುವದೇ ರವೀಂದ್ರರ ಕತೆಗಳಿಗೆ ಸಂದಿಗ್ಧತೆಯ ಆವರಣವನ್ನುಂಟುಮಾಡುತ್ತದೆ. ಈ ಆವರಣ ಕಳಚದೆ ಅವರ ಕತೆ ತಿಳಿದರೂ ಅದರ ಮರ್ಮ ಒಮ್ಮೊಮ್ಮೆ ಪೂರಾ ಹೊಳೆದಂತಾಗುವದಿಲ್ಲ. ಮೇಲಾಗಿ ಬಂಗಾಲೀ ಜೀವನದ ಸಂನಿವೇಶಗಳ ವಿವಿಧತೆಯೂ ವೈಶಿಷ್ಟ್ಯವೂ ಓದುಗರಿಗೆ ತಿಳಿದುಬರುವದು ಅವಶ್ಯ. ಬಂಗಾಲದಲ್ಲಿ ಸಾಕಷ್ಟು ದಿನವಿದ್ದು ಅಲ್ಲಿ ಸಾಹಿತ್ಯಜೀವನಗಳನ್ನು ಚೆನ್ನಾಗಿ ಪರಿಶೀಲಿಸಿದ ಶ್ರೀ ನಾರಾಯಣಸ್ವಾಮಿಯವರು

ತಮ್ಮ ಅನುವಾದಗಳ ಮೂಲಕ ಕನ್ನಡಿಗರನ್ನು ಶಕ್ಯವಾದಷ್ಟು ರವೀಂದ್ರರ ಕತೆಗಾರಿಕೆಯ ಹಾಗು ಬಂಗಾಲೀ ಜೀವನದ ಹತ್ತಿಹತ್ತಿರ ಒಯ್ದು ನಿಲ್ಲಿಸಿದ್ದಾರೆ. ಮೊದಲನೆಯ ಭಾಗದಂತೆ ಎರಡನೆಯ ಭಾಗದಲ್ಲೂ ರವೀಂದ್ರರ ಕಲಾನಿಷ್ಪನ್ನತೆಯ ವೈವಿಧ್ಯ ನಮಗೆ ಸಾಕಷ್ಟು ಸಿಗುವಂತೆ ಕತೆಗಳನ್ನು ಆರಿಸಿದ್ದಾರೆ. ಆ ವೈವಿಧ್ಯದ ಪ್ರಮಾಣ ಈ ಎರಡೂ ಭಾಗಗಳಲ್ಲಿ ಬಂದುದಕ್ಕಿಂತ ಎಷ್ಟೋ ಪಾಲು ಹೆಚ್ಚಾಗಿದ್ದರೂ, ರವೀಂದ್ರರ ಕತೆಗಳನ್ನೂ ಇನ್ನೂ ಭಾಗಶಃ ಪ್ರಸಿದ್ಧಮಾಡಲು ಶ್ರೀಯುತರು ಕಂಕಣಕಟ್ಟಿದ್ದರಿಂದ ನಮಗೆ ರವೀಂದ್ರರ ಕಲೆಯ ಮಾದರಿಗಳು ಇನ್ನೂ ವಿಧವಿಧವಾಗಿ ದೊರೆತಾವೆಂದು ಆಶೆಯಿದೆ. ಎರಡನೆಯ ಭಾಗದಲ್ಲಿ ಒಟ್ಟು ೭ ಕತೆಗಳು. "ಅರ್ಧರಾತ್ರಿಯಲ್ಲಿ"ಯ ಉನ್ಮಾದ-ರಮಣೀಯತೆ, "ಅನಧಿಕಾರಪ್ರವೇಶದ" ಕೊಂಕು-ಕಾರುಣ್ಯ, "ಅತಿಥಿ"ಯಲ್ಲಿಯ ತರಂಗಿತ ಅತೃಪ್ತಿ, "ಪುತ್ರಯಜ್ಞ"ದ ವಿಡಂಬನೆ, "ಹಿರಿಯಾಸೆ"ಯ ಆಶಾಗರ್ಭಿತ ಸ್ವಪ್ನದೃಷ್ಟಿ, ಮುಂತಾದವುಗಳು ರವೀಂದ್ರರ ಕಥನಕಲೆಯ ವಿಶಿಷ್ಟ ಉದಾಹರಣೆಗಳೇ ಎನ್ನಬಹುದು.

ರವೀಂದ್ರರ ಕತೆಗಳನ್ನು ಕನ್ನಡಕ್ಕಿಳಿಸುತ್ತ ಅನುವಾದಕರು ತೊಡಕಿಲ್ಲದ ಶೈಲಿ, ಸರಳವಾದ ಭಾವವಿವರಣೆಗಳಿಂದ ಓದುಗರಿಗೆ ಕತೆ ಕನ್ನಡಿಯಾಗುವಂತೆ ಮಾಡಿದ್ದಾರೆ. ಅಲ್ಲಲ್ಲಿ ಮೂಲ ಬಂಗಾಲೀ ಪ್ರಯೋಗಗಳನ್ನೇ ಬಳಸಿ, ಅವು ಕನ್ನಡಕ್ಕೆ ಹೊರತಲ್ಲವೆಂದು ಕಾಣುವಂತೆ ಮಾಡಿದ್ದರೂ, ಎಷ್ಟೋಸಲ ಬಂಗಾಲೀ ಶಬ್ದಗಳೂ ಪ್ರಯೋಗಗಳೂ—ಮೂಲಸಂಸ್ಕೃತವಾದರೂ—ಕನ್ನಡದ ಅರ್ಥವ್ಯಾಪ್ತಿಗೆ ಹೊಂದದೆ ಹೋಗಿವೆ. ಕನ್ನಡಕ್ಕೆ ಬಂಗಾಲಿಯನ್ನಿಳಿಸುವಾಗ ಶೈಲಿ ಸಂಸ್ಕೃತದತ್ತ ಹೆಚ್ಚು ಒಲೆಯುವದು ಸ್ವಾಭಾವಿಕವೇ. ಇಂಥ ಶೈಲಿ ಪ್ರೌಢ ಕನ್ನಡದಂತೆ ಕಂಡರೂ, ಎಷ್ಟೋಸಲ ಅದೇ ಸಂಸ್ಕೃತ ಶಬ್ದಗಳಿಗೆ ಬಂಗಾಲಿಯಲ್ಲಿದ್ದ ಅರ್ಥವ್ಯಾಪ್ತಿ ಕನ್ನಡದಲ್ಲಿರುವದಕ್ಕಿಂತ ಬೇರೆಯಾಗಿರುತ್ತದೆ. ಕನ್ನಡ ಅನುವಾದಕರು ಇದೊಂದು ಮಾತನ್ನು ಲಕ್ಷ್ಯದಲ್ಲಿಡುವದವಶ್ಯ. ಈ ವಿಷಯದಲ್ಲಿ ಶ್ರೀಯುತರು ಒಟ್ಟಾರೆ ಜಾಗರೂಕರಾಗಿರಲು ಯತ್ನಿಸಿದ್ದಾರೆ. ಕನ್ನಡಿಗರಿಗೆ ಇಂಥ ಶೈಲಿಯ ಪರಿಚಯ ಹೆಚ್ಚಾದಂತೆ ಈ ಬಿಕ್ಕಟ್ಟೂ ಇಲ್ಲದಾದೀತೆಂದು ಆಶಿಸುವ. ಅದಕ್ಕಾಗಿ, ಶ್ರೀ ನಾರಾಯಣಸ್ವಾಮಿಯವರು ಇಂಥದೇ ಬೆಲೆಯುಳ್ಳ ಅನುವಾದಗಳನ್ನು ಕನ್ನಡಕ್ಕೆ ಹೆಚ್ಚು ಪ್ರಮಾಣದಲ್ಲಿ ಕೊಡುವಂತಾಗಲಿ. ಯುದ್ಧದ ತುಟ್ಟಿಕಾಲದಲ್ಲೂ ಪುಸ್ತಕವನ್ನು ಸಾಧ್ಯವಾದಷ್ಟು ಅಂದವಾಗಿ ಮಾಡಿ, ಒಂದೇ ರೂಪಾಯಿಗೆ ಕೊಡುತ್ತಿರುವುದು ಪ್ರಕಾಶಕರಿಗೆ ಪ್ರಶಂಸನೀಯ ಮಾತೇ ಸರಿ. ಬಂಗಾಲಿಗಳ ಸಂಪ್ರದಾಯಗಳ ನಡವಳಿಕೆಗಳ ಬಗೆಗೆ ಅಲ್ಲಲ್ಲಿ ಟಿಪ್ಪಣಿ ಹಾಕಿದ್ದು ಒಳಿತೇ. ಆದರೆ ಕನ್ನಡಿಗರ ದೃಷ್ಟಿಯಿಂದ ಇವು ಇನ್ನಿಷ್ಟು ಹೆಚ್ಚಾಗಿದ್ದರೆ

ಸರಿ. ಕವೀಂದ್ರರ ಮುಖಚಿತ್ರ ಎರಡನೆಯ ಭಾಗದಲ್ಲಿ ಬಂದುದು ಪುಸ್ತಕದ ಶೋಭೆಯನ್ನು ಹೆಚ್ಚಿಸಿದೆ. ಇದರಂತೆ ಬೇರೆ ಬೇರೆ ಭಾಗಗಳಲ್ಲಿ ಕವೀಂದ್ರರ ಬೇರೆ ಬೇರೆ ತರದ ಮುಖಚಿತ್ರಗಳು ಬರುವದು ಒಳಿತು.

ಒಟ್ಟಾರೆ ಇಂದಿನ ಭಾರತೀಯ ಜೀವನದ ಮೇಲೆ ಹಲವು ತೆರಗಳಿಂದ ಪರಿಣಾಮ ಮಾಡುತ್ತಿರುವ ಬಂಗಾಲೀ ಜೀವನದ ಇತ್ತೀಚಿನ ಭಾರತೀಯ ಸಾಹಿತ್ಯಕ್ಕೇ ಸ್ಫೂರ್ತಿಯ ಹೊನಲಾದ ರವೀಂದ್ರರ ಸಾಹಿತ್ಯದ ನಿಕಟಪರಿಚಯ ಕನ್ನಡಿಗರಿಗೆ ಆದಷ್ಟೂ ಬೇಕು. ಈ ಆಶಯವನ್ನು ಪುಸ್ತಕ ಅನುವಾದಕರು ಪೂರಾ ತುಂಬಿಸಲಿ.

—ಕೃಷ್ಣಕುಮಾರ.

***

೨. ಚೀನಾ ದೇಶದ ಕರೆ

ಆಧುನಿಕ ಚೀನಾ—ಲೇಖಕ: ಎಸ್. ಅನಂತನಾರಾಯಣ; ಪ್ರಚಲಿತ ಸಾಹಿತ್ಯ, ಬೆಂಗಳೂರು; ಪುಟ ii + ಅಳ; ಬೆಲೆ, ರೂ. ೧.

ಜಾಗ್ರತ ಚೀನ—ಲೇಖಕ: ಎ. ಎಸ್. ಕುಲಕರ್ಣಿ; ಮಿಂಚಿನ ಬಳ್ಳಿ, ಧಾರವಾಡ; ಪುಟ iv + ೧೫೫; ಬೆಲೆ, ರೂ. ೨.

ಹಿಂದಿನ ಜಾಗತಿಕ ಯುದ್ಧದನಂತರ ರಷ್ಯಾ ದೇಶವು ಎಚ್ಚತ್ತು ಹೊಸ ಜನ್ಮವನ್ನು ತಾಳಿದಂತೆ ಮೊನ್ನೆಯ ಜಾಗತಿಕ ಯುದ್ಧದನಂತರ ಚೀನಾ ಮತ್ತು ಭಾರತಗಳು ಎದ್ದೇಳುವುದನ್ನು ಕಣ್ಣಾರೆ ಕಾಣುತಿದ್ದೇವೆ. ಇಂಥ ಸಮಯದಲ್ಲಿ ನಮ್ಮ ನೆರೆನಾಡಾಗಿ ನಮ್ಮಂತೆ ಪರಪೀಡೆಗೆ ಬಲಿಯಾಗಿದ್ದು ಈಗ ಆತ್ಮದರ್ಶನ ಪಡೆಯುತ್ತಿರುವ ಚೀನಾ ದೇಶದ ವಿಷಯ ಕನ್ನಡಿಗರು ತಿಳಿಯಬೇಕಾದದ್ದು ಅತ್ಯವಶ್ಯವಾಗಿದೆ. ಹಿಂದೊಮ್ಮೆ ಪ್ರಚಾರ ಸಾಹಿತ್ಯಮಾಲೆಯ ಪ್ರಕಟನೆಯೊಂದನ್ನು ಪ್ರಬುದ್ಧ ಕರ್ಣಾಟಕದಲ್ಲಿ ವಿಮರ್ಶಿಸಿದ್ದು ಮರೆಯುವುದರೊಳಗೆ ಇನ್ನೆರಡು ಪುಸ್ತಕಗಳು ಹೊರಬಂದುದನ್ನು ಕಂಡು ಸಂತೋಷವೆನಿಸುತ್ತದೆ. ಪ್ರಕಾಶಕರಿಗೂ ಲೇಖಕರಿಗೂ ಕನ್ನಡಿಗರ ಧನ್ಯವಾದಗಳನ್ನು ಅರ್ಪಿಸಬೇಕೆನಿಸುತ್ತದೆ.

'ಆಧುನಿಕ ಚೀನಾ' ಪುಸ್ತಕದ ಲೇಖಕರು ಆರಂಭದಲ್ಲಿ ಚೀನರ ಹಿಂದಿನ ಇತಿಹಾಸ ಮತ್ತು ಯುರೋಪಿನ ಸಂಪರ್ಕದಿಂದಾದ ಪೀಡೆಗಳನ್ನು ಸಂಕ್ಷೇಪವಾಗಿ ಬರೆದು ಇಂದಿನ ಸಮಸ್ಯೆಗಳನ್ನು ಸವಿವರವಾಗಿ ಹೇಳಲು ಪ್ರಯತ್ನಿಸಿದ್ದಾರೆ. ಆದರೆ ಆ ಜನತೆಯನ್ನು ಎದುರಿಸಿರುವ ಬೇರೆ ಯಾವ ಸಮಸ್ಯೆಯನ್ನೂ ಗಮನಿಸದೆ ಕಮ್ಯೂನಿಸ್ಟ ಮತ್ತು ಚಿಆಂಗ್-ಷೇಕ್ ಪಕ್ಷಗಳೊಳಗಿನ ಅಂತಃಕಲಹದ ವಿವರವನ್ನೇ ಬುಡದಿಂದ

ತುದಿಯ ವರೆಗೂ ತೊಟ್ಟ ತಪ್ಪೆಲ್ಲ ಚಿಆಂಗ್-ಷೇಕನ ತಲೆಯ ಮೇಲೆ ಹೊರಿಸಿದ್ದಾರೆ; ಕಮ್ಯೂನಿಷ್ಟರಲ್ಲಿ ಅಣುಮಾತ್ರ ದೋಷವೂ ಕಂಡುಬರುವುದಿಲ್ಲ. ಇಷ್ಟೇ ಅಂಶವನ್ನಾದರೂ ವಿವರಿಸುವ ರೀತಿಯಲ್ಲಿ ವ್ಯವಸ್ಥೆಯಿಲ್ಲದ್ದರಿಂದ ಕೆಲವೆಡೆಗಳಲ್ಲಿ ಹೇಳಿದ್ದನ್ನೇ ಹೇಳಿದಂತೆಯೂ ಇನ್ನು ಕೆಲವೆಡೆಗಳಲ್ಲಿ ಏನೋ ಬಿಟ್ಟುಹೋದಂತೆಯೂ ತೋರುತ್ತದೆ. ಎರಡೆರಡು ಸಲ ಓದದೆ ಪುಸ್ತಕದ ಅರ್ಥ ತಿಳಿಯುವಂತಿಲ್ಲ.

ಲೇಖಕರು ಭಾಷೆಗೂ ಗಮನಕೊಡಲಿಲ್ಲವೆಂಬಂತೆ ಕಾಣುತ್ತದೆ. ಇಂದಿನ ಸಮಸ್ಯೆಗಳು ಬಿಸಿಬಿಸಿ ಇರುವಾಗಲೆ ಜನತೆಗೆ ವಿವರಿಸುವ ಪುಸ್ತಕಗಳಲ್ಲಿ ಭಾಷೆಯ ಚೆಲುವನ್ನು ಅಪೇಕ್ಷಿಸಬಾರದಾದರೂ ಅರ್ಥವಾಗದ ಮಾತುಗಳು, ಮುದ್ರಣ ದೋಷಗಳು—ಇವು ಇರಬಾರದಷ್ಟೆ. 'ಅಸಾಧ್ಯ ಅನೈಕ್ಯ,' 'ಅಸಾಧ್ಯ ಹಿಂಸೆ,' 'ಅಸಾಧ್ಯ ಸಹಜಸಂಪತ್ತು'—ಇವುಗಳ ಅರ್ಥವೇನು? ೧೮೬೪-೬೫ರಲ್ಲಿ ಹುಟ್ಟಿದ ದಂಗೆಯ 'ನಾಯಕರು ಒಂದು ವಿಚಿತ್ರ ರೀತಿಯ ಆರ್ಥಿಕ ಸುಧಾರಣೆಯನ್ನನುಸರಿಸಿದರು' ಎಂದು ಹೇಳಿದ್ದಾರೆಯೇ ಹೊರತು ಅದೇನೆಂದು ತಿಳಿಸಿಲ್ಲ. ಈ ರೀತಿ ಅಲ್ಲಲ್ಲಿ ಪುಸ್ತಕದ ಅರ್ಥವಾಗಬೇಕಾದರೆ ಬರಹಗಾರರ ಪುಸ್ತಕಾರಂಭದಲ್ಲಿ ಕೊಟ್ಟ ಪಟ್ಟಿಯಲ್ಲಿನ ಹದಿನೇಳು ಇಂಗ್ಲಿಷು ಪುಸ್ತಕಗಳಿಂದ ನಾಲ್ಕಾರನ್ನಾದರೂ ಓದಬೇಕಾಗುವುದು.

ಶ್ರೀಯುತ ಕುಲಕರ್ಣಿಯವರ ಪುಸ್ತಕವು ಚೀನದ ಸಂಪೂರ್ಣ ಪರಿಚಯವನ್ನು ಮಾಡಿಕೊಡುತ್ತದೆ. ಚೀನದ ಅತಿಪ್ರಾಚೀನ ಯುಗದಿಂದ ಇಂದಿನ ವರೆಗೆ ನಡೆದ ಮುಖ್ಯ ಘಟನೆಗಳು, ಚೀನೀಯರ ಜೀವನದಲ್ಲಿ ಕಂಡುಬರುವ ವೈಶಿಷ್ಟ್ಯ, ಅವರ ಧರ್ಮ ಕಲೆ ಸಾಹಿತ್ಯ—ಇವೆಲ್ಲವುಗಳ ಪರಿಚಯ ಈ ಪುಸ್ತಕದಲ್ಲಿದೆ. ಆಧುನಿಕ ಪ್ರಶ್ನೆಗಳಿಗೂ ಸಾಕಷ್ಟು ಪ್ರಾಮುಖ್ಯತೆ ದೊರಕಿದೆ. ಕಮ್ಯೂನಿಸ್ಟ್ ಚಿ-ಆಂಗ್ ಕಲಹದ ವಿವರವಿದೆ, ಕಮ್ಯೂನಿಸ್ಟರ ಕರ್ಮಶೂರತೆಯನ್ನು ಹೊಗಳುವುದರೊಂದಿಗೆ ಚಿ-ಆಂಗನ ಗುಣದೋಷಗಳನ್ನು ನಿಷ್ಪಕ್ಷಪಾತರೀತಿಯಿಂದ ಇವರು ಬಣ್ಣಿಸಿದ್ದಾರೆ. ಜಪಾನರ ದಾಳಿಯನ್ನು ಎದುರಿಸಲಿಕ್ಕೆ ಚೀನೀಯರು ಕೈಕೊಂಡ ಹಲವಾರು ಬಗೆಯ ಉದ್ಯಮಗಳನ್ನೂ ವಿವರಿಸಿದ್ದಾರೆ. ಅದಲ್ಲದೆ ಚೀನದ ವಿಷಯಕ್ಕೆ ಬೇಕಾದ ಅಂಕೆಸಂಖ್ಯೆಗಳನ್ನು ಕೊಟ್ಟು ಅಲ್ಲಲ್ಲಿ ಭಾರತದೊಂದಿಗೆ ಚೀನಾ ದೇಶವನ್ನು ಹೋಲಿಸಿ ಓದುಗರಿಗೆ ಸಹಾಯ ಮಾಡಿದ್ದಾರೆ. ಒಟ್ಟಾರೆ ಹೇಳುವುದಾದರ ಈ ಪುಸ್ತಕವನ್ನು ಓದಿದವರು ಇಂಗ್ಲಿಷು ಪುಸ್ತಕಗಳ ಮರೆಹೊಗಬೇಕೆಂತಿಲ್ಲ. ಅಂತ್ಯದಲ್ಲಿ ಕೊಟ್ಟ ಚಿತ್ರಪಟಮಾತ್ರ ಕನ್ನಡದಲ್ಲಿಲ್ಲದೆ ಇಂಗ್ಲಿಷಿನಲ್ಲಿದೆ.

ಎಸ್. ಮುಕುಂದರಾವ್.

***

೩. **ರತಿದೇವಿ ಮತ್ತು ಇತರ ಕಥೆಗಳು**—ಬರೆದವರು: ಎಂ. ವಿ. ಸೀತಾರಾಮಯ್ಯ; ಕ್ರಾ. ಅಷ್ಟಪುತ್ರ; ೧೧೨ ಪುಟಗಳು; ಬೆಲೆ, ೧ ರೂಪಾಯಿ.

ಶ್ರೀ ಎಂ. ವಿ. ಸೀತಾರಾಮಯ್ಯನವರ ಲೇಖನಿ ಕತೆ, ಕಾವ್ಯ, ನಾಟಕ ಮೂರು ಸಾಹಿತ್ಯಕ್ಷೇತ್ರಗಳಲ್ಲಿ ಆಡಿದೆ; ಮೂರು ಕ್ಷೇತ್ರಗಳಲ್ಲಿ ಹೆಸರಾಂತಿದೆ. ಇದರಲ್ಲಿ ಕಥೆಗಾರ ಎಂ. ವಿ. ಸೀ. ಅವರ ಕೃತಿಗಳ ಗಾತ್ರವೇ ದೊಡ್ಡದು.

'ಶಿಲಾಮುಖ' ಎಂ.ವಿ.ಸೀ. ಯವರ ಅನುವಾದ ಕಥಾಸಂಗ್ರಹವಾದರೂ ಇಡಿಯಾಗಿ ಸ್ವಾರಸ್ಯಪೂರ್ಣವಾಗಿದೆ. ಅಂತಹ ಮೋಹಕವಾದ ಕಥನ ಶೈಲಿ ಇವರಿಗಿದೆ.

ಪ್ರಕೃತ ಕಥಾಸಂಗ್ರಹದಲ್ಲಿಯೂ ಎಲ್ಲ ಕತೆಗಳಲ್ಲಿ ಶೈಲಿಯ ಸೊಗಸನ್ನು ನಾವು ಕಾಣುತ್ತೇವೆ. ಕತೆಯಲ್ಲಿ ವಿಶೇಷ ಹುರುಳಿಲ್ಲದಿದ್ದರೂ ಶೈಲಿಯ ಮಾಧುರ್ಯವು ಒಮ್ಮೊಮ್ಮೆ ವಾಚಕರನ್ನು ಮುಗ್ಧಗೊಳಿಸಲು ಸಾಕಾಗಬಹುದು. ವಿಮರ್ಶಕನೂ ಈ ಶೈಲಿಯ ಮೋಹಕ್ಕೆ ಒಳಗಾದರೆ ಸಾಹಿತ್ಯಕ್ಕೆ ಅನ್ಯಾಯ ಮಾಡಿದಂತಾದೀತು.

ಈ ಸಂಗ್ರಹದಲ್ಲಿ ಬಂದಿರುವ 'ಚಿತ್ರಪಟತಾರೆ, 'ಹಸ್ತ ಪರಿಗ್ರಹಣಗಳು ಕತೆಗಾರರು ಏನೊ ಒಂದು ಹುಚ್ಚು ಲಹರಿಯಲ್ಲಿ ಮೋಜಿಗಾಗಿ ಬರೆದ ಯತ್ನಗಳಾಗಿವೆ. ಕತೆಗಾರರು ರಸಿಕರು, ವಿಲಾಸಪ್ರಿಯರು ಎಂಬಿಷ್ಟೆ ಅಭಿಪ್ರಾಯ ಓದುಗರಿಗಾಗುವಂತಿದೆ. ಸಾಮಾನ್ಯವಾಗಿ ಇಲ್ಲಿ ಬಂದಿರುವ ಎಲ್ಲ ಕತೆಗಳಲ್ಲಿಯೂ ಸಿನಿಮಾ ಪ್ರಪಂಚ, ಸುಶಿಕ್ಷಿತ ಯುವಕ ಶೃಂಗಾರ ಲಹರಿ—ಇವು (ಇವೇ ?) ಒಂದಿಲ್ಲೊಂದು ರೀತಿ ಬಂದಿವೆ.

ಕತೆಗಾರರು ಇಂದಿನ ಸುಶಿಕ್ಷಿತ ತರುಣ ತರುಣಿಯರ ಮನೋವಿಜ್ಞಾನವನ್ನು ಚೆನ್ನಾಗಿ ಅರಿತವರಾಗಿದ್ದಾರೆ. ಅಂತೆಯೇ ಇವರ ಕತೆಗಳೆಲ್ಲವೂ ಉತ್ತಮವಾಗಿ ಆರಂಭವಾಗುತ್ತವೆ. ಆದರೆ ಮಧ್ಯದಲ್ಲಿ ಹೇಗೋ ತಂತ್ರ ತಪ್ಪಿ ಕಥೆ ಅಸಂಬದ್ಧತೆಗಿಡುವುದೆ ಹೆಚ್ಚು. 'ಸಿನಿಮಾ ಹುಚ್ಚು' ಇದಕ್ಕೊಂದು ಉತ್ತಮ ಉದಾಹರಣೆ. 'ಕನ್ನಡಿಯಲ್ಲಿ ಕಂಡದ್ದು' ಒಂದು ಮನೋ ವಿಜ್ಞಾನ ನಿರೂಪಣೆಯೆನ್ನಬಹುದಾದರೂ ಆದರಲ್ಲಿ ಏನೂ ನಾವೀನ್ಯವಿಲ್ಲ, ಬಗೆ ಹಿಡಿಯುವ ಭಾವನೆ ಇಲ್ಲ.

'ಕಡಲೆಪುರಿ ಕೆಂಪಮ್ಮ' ಇಡಿಯ ಸಂಗ್ರಹದಲ್ಲಿಯೆ ಚಿರಕಾಲ ಚಿತ್ರದಲ್ಲಿ ನಿಲ್ಲುವಂತಹ ಕಥೆ. ಇಂತಹ ಚೆಲ್ಲಾಟಗಿತ್ತಿಯರನ್ನು ನಾವು ಯಾವ ದೊಡ್ಡ ಪಟ್ಟಣಗಳಲ್ಲೂ ಕಾಣಬಹುದು. 'ಕೆಂಪಮ್ಮ' ಬರಿ ಚೆಲ್ಲಾಟಮಾಡುವ ಬಿನ್ನಾಣಗಿತ್ತಿಯಲ್ಲ, ಜೀವನದಲ್ಲಿ ನೊಂದು ಬೆಂದು ಬೆಳೆದು ಬಂದ ರಸಿಕ ಜೀವಿ. ಅವಳ ಬಗ್ಗೆ ಕೊನೆಗೆ ಹೃದಯವು ಸಹಾನುಭೂತಿಯಿಂದ ಮಿಡಿಯುತ್ತದೆ.

'ರತಿ ದೇವಿ' ಒಂದು ಮಾಸದಿಂದ ಇಡಿಯ ಸಂಗ್ರಹಕ್ಕೆಯೇ ತಿಲಕಪ್ರಾಯ ವಾಗಿದೆಯೆನ್ನಬಹುದಾಗಿತ್ತು. ಆದರೆ ಇಲ್ಲಿ ಸಹಜತೆ ಎಷ್ಟುಮಟ್ಟಿಗೆ ಬಂದಿದೆ ಎಂಬುದೊಂದೆ ಪ್ರಶ್ನೆ. ಕೊನೆಯವರೆಗೂ ಕಥೆಯ ಕಲ್ಪನೆ ಸೂಕ್ಷ್ಮ-ಗಂಭೀರವಾಗಿ, ಸುಂದರವಾಗಿ ಸಾಗಿದೆ. ಶ್ರೇಷ್ಠ ಕಥೆಯ ಕಲೆಗಾರಿಕೆ ಇದರಲ್ಲಿದೆಯೆಂದು ಹೇಳಬಹು ದಾದರೆ ಶ್ರೀಕಾಂತನ ದೃಷ್ಟಿಯಿಂದ ಇಂತಹ ಒಬ್ಬ ಕಲಾವಿದನ ಜೀವನ ಗುರಿ ಯನ್ನು ಕತೆಗಾರರು ಸೊಗಸಾಗಿಯೇ ಚಿತ್ರಿಸಿದ್ದಾರೆ. ಸಹಜತೆ—ಅಸಹಜತೆ ಏನೇ ಇದ್ದರೂ ಕತೆ ಮೊದಲಿನಿಂದ ಕಡೆವರೆಗೆ ಓದುಗರ ಬಗೆಯನ್ನು ಅರಳಿಸಿ ತೇಲಿಸಿಕೊಂಡು ಹೋಗುತ್ತದೆ. ಅದೆ ಅದರ ಹಿರಿಮೆಯ ಲಕ್ಷಣ ಎನ್ನಬಹುದು. 'ಕಡಲೆಪುರಿಯ ಕೆಂಪಮ್ಮ'—'ರತಿದೇವಿ'ಯೊಳಗಿನ ತಿರುಕಿ ಇಬ್ಬರಲ್ಲಿ ಈ ಕೆಂಪಮ್ಮ ನಮ್ಮ ಪ್ರಪಂಚ ದಲ್ಲಿಯೇ ಇದ್ದ ಜೀವಂತ ವ್ಯಕ್ತಿಯೆನಿಸಿದರೆ, ಆ ತಿರುಕಿ ನಮ್ಮ ಜಗತ್ತನ್ನು ಮೀರಿ ದವಳು ಎನ್ನುವ ಹಾಗಿದ್ದಾಳೆ. 'ಬೊಲೆಸ್ಲೊ' ಎಂಬುದು ಶ್ರೇಷ್ಠರಶಿಯನ್ ಸಾಹಿತಿ ಗಾರ್ಕಿಯ ಕಥೆಯ ಪ್ರಾಮಾಣಿಕ ಅನುವಾದವಾಗಿದೆ.

ಎನ್ಕೆ.

***

೪. ಸತ್ಯಾಗ್ರಹ (ಇತಿಹಾಸ ಮತ್ತು ತಂತ್ರ)—ಬರೆದವರು : ರಂಗನಾಥ ದಿವಾ ಕರರು ; ಪ್ರಕಾಶಕರು : ಬೋಧರಾವ ದಿವಾಕರ ; ಅಧ್ಯಾತ್ಮ ಕಾರ್ಯಾಲಯ, ಹುಬ್ಬಳ್ಳಿ.

ಇದರಲ್ಲಿ ಪ್ರತಿಪಾದಿಸಲಾದ ಎಲ್ಲ ವಿಷಯಗಳನ್ನು ಸಂಕ್ಷೇಪವಾಗಿ ಸಂಗ್ರಹಿಸು ವದು ಕಠಿಣವಾದರೂ ಇಲ್ಲಿ ಅವುಗಳ ಸಾಮಾನ್ಯ ಕಲ್ಪನೆಯನ್ನಾದರೂ ಕೊಡದಿದ್ದರೆ ಈ ಗ್ರಂಥದ ಯೋಜನೆಯು ಎಷ್ಟು ವ್ಯಾಪಕವೂ ನವೀನವೂ ಆಗಿದೆ ಎನ್ನುವದು ತಿಳಿಯಲಾರದು.

ಸತ್ಯಾಗ್ರಹದ ಹಿನ್ನೆಲೆಯು ಹಿಂದೂ, ಬೌದ್ಧ, ಕ್ರೈಸ್ತ, ಇಸ್ಲಾಮು ಮುಂತಾದ ಧರ್ಮಗಳಲ್ಲಿ ಕಂಡುಬರುತ್ತದೆ. ಅದರ ಮೂಲವೆಂದರೆ ಸರ್ವಭೂತಾಂತರ್ಯಾಮಿ ಯಾದ ಆತ್ಮವೊಂದೇ ಎಂಬ ಭಾವನೆ. ವಿಶ್ವಪ್ರೇಮ ಪರ್ಯವಸಾಯಿಯಾದ ಅಹಿಂಸೆಯ ಮಾರ್ಗದಿಂದ ಸತ್ಯಾನ್ವೇಷಣೆಯೇ ಅದರ ತಳಹದಿ. ಇದು ಅನು ಭಾವತರ್ಕ ಇತಿಹಾಸಗಳಿಂದ ಸಿದ್ಧವಾದದ್ದು ; ಸತ್ಯಾಗ್ರಹಿಯ ದೃಷ್ಟಿಯು ಬರೇ ಸತ್ಯಶೋಧನೆಯ ಕಡೆಗೆ ಇರುವದಿಲ್ಲ; ಸತ್ಯವನ್ನರಿತು ಅದನ್ನು ನಿರ್ದಾಕ್ಷಿಣ್ಯವಾಗಿ ಉಚ್ಚರಿಸುವದೂ ನಿರ್ಭಯವಾಗಿ ಆಚರಿಸುವದೂ ಅವನ ದೃಷ್ಟಿಯಲ್ಲಿ ಅಷ್ಟೇ ಮಹತ್ವವಾದವು.

ಸತ್ಯಾಗ್ರಹವನ್ನು ವ್ಯಕ್ತಿಯು ತನ್ನ ಜೀವನದರ್ಶನವೆಂದು ತನ್ನ ಮೋಕ್ಷಕ್ಕಾಗಿ ಆಚರಿಸಬಹುದು. ಎಲ್ಲ ಅನ್ಯಾಯಗಳಿಗೆ ಸಾಮೂಹಿಕ ಪ್ರತೀಕಾರವೆಂದು ಆಚರಿಸಬಹುದು ; ಚಿರಂತನ ಧರ್ಮವೆಂದು ಆಚರಿಸಬಹುದು, ತಾತ್ಪೂರ್ತಿಕ ಧೋರಣವೆಂದು ಆಚರಿಸಬಹುದು. ಆದಕಾರಣ ಅದರ ಕ್ಷೇತ್ರವು ವಿಶಾಲವಾಗಿದೆ. ಅದು ನೈತಿಕ ಬಲದ ಮೇಲೆ ಅವಲಂಬಿಸಿರುವದರಿಂದ ಅದನ್ನು ಸಬಲರೂ ದುರ್ಬಲರೂ ಉಪಯೋಗಿಸಬಹುದು. ಅದರಲ್ಲಿ ಹಿಂಸೆ ದ್ವೇಷಗಳಿಗೆ ಅವಕಾಶವಿಲ್ಲದ್ದರಿಂದ ಅದನ್ನು ಶತ್ರುಮಿತ್ರರೆಲ್ಲರೆದುರಾಗಿಯೂ ಉಪಯೋಗಿಸಬಹುದು. ಅದು ಆತ್ಮೋನ್ನತಿಗಾಗಿ ಪಾವಕ ಸ್ವರೂಪವಿದ್ದಿರಬಹುದು. ವಿಧಾಯಕವಾದ ಜನಸೇವೆಯ ರೂಪವನ್ನು ತಾಳಬಹುದು. ಅನ್ಯಾಯ ಪ್ರತೀಕಾರಕ್ಕಾಗಿ ಆಕ್ರಮಕಸ್ವರೂಪದ್ದಿರಬಹುದು.

ಹಿಂಸಾತ್ಮಕ ಯುದ್ಧದಲ್ಲಿ ಭಾಗವಹಿಸುವವರಿಗೆ ಬೇಕಾಗುವಂತೆ ಸತ್ಯಾಗ್ರಹದಲ್ಲಿ ಭಾಗವಹಿಸುವವರಿಗೂ ಶಿಕ್ಷಣ ಹಾಗೂ ಸಂಘಟನೆ ಅವಶ್ಯ. ಈ ಶಿಕ್ಷಣ ಹಾಗೂ ಸಂಘಟನೆಗಳು ವಿಧಾಯಕ ಕಾರ್ಯಕ್ರಮಗಳ ಮಾರ್ಗವಾಗಿ ನಡೆಯುವದರಿಂದ ಅದರಲ್ಲಿ ವೆಚ್ಚಮಾಡಿದ ಶಕ್ತಿ ವೇಳೆ ಧನಗಳ ಅಪವ್ಯಯವಾಗುವದಿಲ್ಲ. ಯುದ್ಧದಿಂದ ಸಾಧಿಸಬಹುದಾದ ಎಲ್ಲ ಗುರಿಗಳನ್ನೂ ಸತ್ಯಾಗ್ರಹದಿಂದ ಹೆಚ್ಚು ಚೆನ್ನಾಗಿ ಸಾಧಿಸಬಹುದು. ಯುದ್ಧದಲ್ಲಿ ಪ್ರದರ್ಶಿತವಾಗುವ ಸದ್ಗುಣಗಳೆಲ್ಲವನ್ನೂ ಸತ್ಯಾಗ್ರಹವು ನೂರುಮಡಿ ಹೆಚ್ಚಾಗಿ ಪೋಷಿಸಬಲ್ಲದಲ್ಲದೆ ಯುದ್ಧದಿಂದ ಜನಿತವಾಗುವ ಕ್ರೌರ್ಯ ಮೋಸ ದ್ವೇಷಾದಿಗಳನ್ನು ತಪ್ಪಿಸುವದು.

ಹಿಂದುಸ್ತಾನವು ಸತ್ಯಾಗ್ರಹವನ್ನು ರಾಜಕೀಯ ಧೋರಣವೆಂದು ಸ್ವೀಕರಿಸಿದರೂ ಅದು ಅನ್ಯಾಯ ಪ್ರತೀಕಾರದ ಅಮೂಲ್ಯವಾದ ಸಾಮೂಹಿಕಸಾಧನವೆಂಬುದು ನಿರ್ವಿವಾದ. ಭವಿಷ್ಯತ್ತಿನಲ್ಲಿ ಸತ್ಯಾಗ್ರಹವು ಪರಕೀಯರ ದಾಳಿಗಳನ್ನು ಎದುರಿಸಲು ಮತ್ತು ಜಾತೀಯ ದಂಗೆಗಳನ್ನು ತಡೆಯಲು ಪ್ರಯೋಗಿಸಬಹುದು. ಹಿಂಸೆಯ ವಿಫಲತೆಯು ಹೆಚ್ಚು ಹೆಚ್ಚು ಸ್ಪಷ್ಟವಾದಂತೆ ಸತ್ಯಾಗ್ರಹದ ಭವಿಷ್ಯವು ಉಜ್ವಲವಾಗುವದು.

ಮೊದಲಿನ ಹದಿನಾರು ಪ್ರಕರಣಗಳಲ್ಲಿ ಮೇಲೆ ಹೇಳಿದ ವಿಷಯಗಳ ಪ್ರತಿಪಾದನೆಯಲ್ಲದೆ ಮೊದಲನೆಯ ಪ್ರಕರಣದಲ್ಲಿ ಸತ್ಯಾಗ್ರಹ ಶಬ್ದದ ಅರ್ಥವನ್ನು, ಅದು ಬಳಕೆಯಲ್ಲಿ ಬಂದ ಬಗೆಯನ್ನು, ಹದಿಮೂರನೆಯ ಪ್ರಕರಣದಲ್ಲಿ ಸತ್ಯಾಗ್ರಹಿಗಳು ಅನುಸರಿಸಬಹುದಾದ ಬೇರೆಬೇರೆ ತಂತ್ರಗಳನ್ನು, ವಿವರಿಸಲಾಗಿದೆ. ಕೊನೆಯ ಹತ್ತು ಪ್ರಕರಣಗಳಲ್ಲಿ ಗಾಂಧೀಜಿಯವರ ವೈಯಕ್ತಿಕ ಜೀವನದಲ್ಲಿಯೂ ಹಿಂದುಸ್ತಾನದ ಇತಿಹಾಸದಲ್ಲಿಯೂ ಬೇರೆಬೇರೆ ದೇಶಗಳಲ್ಲಿಯೂ ನಡೆದುಹೋದ ಸತ್ಯಾಗ್ರಹದ ಉದಾಹರಣೆಗಳಿವೆ.

ಇನ್ನು ವಿಷಯವ್ಯವಸ್ಥೆಯ ಬಗ್ಗೆ ನಾಲ್ಕು ಮಾತು. ಸತ್ಯಾಗ್ರಹದ ಇತಿಹಾಸವೆಂದು ಕರೆಯುದ ಹತ್ತು ಪ್ರಕರಣಗಳು ಮೊದಲಿನ ಹದಿನಾರು ಪ್ರಕರಣಗಳಲ್ಲಿ ವಿವರಿಸಲಾದ ಸತ್ಯಾಗ್ರಹ ತಂತ್ರದ ನಿದರ್ಶನಗಳೆಂದು ತಿಳಿಯಲಿಕ್ಕೆ ಸಾಕು. ಏಕೆಂದರೆ ಈ ಘಟನೆಗಳ ಇಷ್ಟು ಸಂಕ್ಷೇಪವಾದ ವಿವರಣೆಗಳಿಂದ ಅವುಗಳ ಇತಿಹಾಸದ ಅಭ್ಯಾಸಕ್ಕೆ ವಿಶೇಷ ಪ್ರಯೋಜನವಾಗದು. ನಿದರ್ಶನಗಳೆಂದೇ ಅವುಗಳನ್ನು ಹೇಳಲಾಗಿದ್ದರೆ ಅವನ್ನು ಪ್ರತ್ಯೇಕವಾಗಿ ಕೊನೆಗೆ ಸಂಗ್ರಹಿಸುವದರ ಬದಲಾಗಿ ಆಯಾ ಪ್ರಕರಣಗಳಲ್ಲಿಯೇ ಸೇರಿಸಿದ್ದರೆ ವಿಷಯ ವಿವೇಚನೆಯೂ ಹೆಚ್ಚು ಮನೋಹರವಾಗುತ್ತಿತ್ತಲ್ಲದೆ ಎಷ್ಟೋ ಪ್ರಸಂಗಗಳಲ್ಲಿ ಪುನರುಕ್ತಿಯಾಗುವದು ಉಳಿಯುತ್ತಿತ್ತು ; ಪುಟ (೨೪-೨೫, ೧೬೭-೧೬೮), (೧೬೯, ೧೮೨), (೧೦೨-೧೦೫, ೧೯೯-೨೦೩) ನೋಡಬಹುದು.

ಸಿದ್ಧಾಂತ ಪ್ರತಿಪಾದನೆಯಲ್ಲಿ ಒಂದೆಡೆಗೆ ಒಂದು ವಿಧಾನವನ್ನು ಸಮರ್ಥಿಸಲಿಕ್ಕೆ ಹೇಳಿದ್ದನ್ನೇ ಇನ್ನೊಂದೆಡೆಗೆ ಇನ್ನೊಂದು ವಿಧಾನವನ್ನು ಪುಷ್ಟೀಕರಿಸಲಿಕ್ಕೆ ಹೇಳಬೇಕಾಗಬಹುದು. ಇಂಥಲ್ಲಿ ಒಂದೆಡೆಗೆ ವಿವರವಾಗಿ ಹೇಳಿದ್ದನ್ನು ಇನ್ನೊಂದೆಡೆಗೆ ಸಂಕ್ಷೇಪವಾಗಿ ನಿರ್ದೇಶಿಸಿದರೆ ಅದು ಪುನರುಕ್ತಿಯೆನಿಸಲಾರದು. ಆದರೆ ಪುಟ (೮-೧೧, ೩೬), (೧೧, ೧೨, ೩೨, ೬೬, ೧೫೩-೧೫೪), (೩೮, ೫೮, ೬೩), (೩೦, ೭೧, ೧೫೮-೧೫೯), (೩೫, ೭೨), (೪೭-೫೦, ೯೭-೯೯) ಪುನರುಕ್ತಿಗಳು.

ಯಾವದೇ ವಿಷಯದ ವಿವೇಚನೆಯನ್ನು ಸ್ವತಂತ್ರವಾಗಿ ಮಾಡದೆ ಬೇರೆ ಬೇರೆ ಗ್ರಂಥಗಳಿಂದ ಎತ್ತಿದ ಅವತರಣಿಕೆಗಳ ಮೇಲೆ ಅವಲಂಬಿಸಿರುವದು ಬಹುಮಟ್ಟಿಗೆ ಇಂಥ ಪುನರುಕ್ತಿಗಳ ಕಾರಣವಾಗಿದೆ. ದಿವಾಕರರ ಸ್ವತಂತ್ರ ತರ್ಕ-ಸರಣಿಯು ಇಲ್ಲಿ ಉದ್ಧರಿಸಲಾದ ಯಾವ ಗ್ರಂಥಕ್ಕಿಂತಲೂ ಶಕ್ತಿಯಲ್ಲಾಗಲಿ ಓಘದಲ್ಲಾಗಲಿ ಕಡಿಮೆಯದಲ್ಲವೆನ್ನುವದನ್ನು ಈ ಗ್ರಂಥದ ಉದ್ದಕ್ಕೂ ಅಲ್ಲಲ್ಲಿ ಕಾಣಬಹುದು. ದಿವಾಕರರಂತೆ ಸತ್ಯಾಗ್ರಹವನ್ನು ಆಳವಾಗಿ ಅಭ್ಯಾಸಿಸಿದವರೂ ನಿಷ್ಠೆಯಿಂದ ಆಚರಿಸಿದವರೂ ಈ ವಿಷಯದಲ್ಲಿ ತಮ್ಮ ವಿಧಾನಗಳನ್ನು ಸಮರ್ಥಿಸಲಿಕ್ಕೆ ಬೇರೆಯವರ ಪ್ರಮಾಣಗಳನ್ನು ಶಬ್ದಶಃ ಕೊಡುವ ಆವಶ್ಯಕತೆಯಿದ್ದಿಲ್ಲ.

ಈ ಗ್ರಂಥದಲ್ಲಿ ಸತ್ಯಾಗ್ರಹವು ವ್ಯಕ್ತಿಯ ಆತ್ಮೋದ್ಧಾರದ ಸಾಧನವೆನ್ನುವದಕ್ಕಿಂತ ಅನ್ಯಾಯ ಪ್ರತೀಕಾರದ ಸಾಮೂಹಿಕ ಸಾಧನವೆಂಬದನ್ನು ಹೆಚ್ಚಾಗಿ ಪ್ರತಿಪಾದಿಸಿರುವದರಿಂದ "ಸತ್ಯಾಗ್ರಹವು ಯುದ್ಧಕ್ಕೆ ಪ್ರತಿಯಾದ ಇಲ್ಲವೆ ಪರ್ಯಾಯರೂಪವಾದ ಶಸ್ತ್ರ"ವೆಂಬ ಪ್ರಕರಣದಲ್ಲಿ "ಸತ್ಯಾಗ್ರಹದ ಮಾಲೀಕತೆ" ಎಂಬ ಪ್ರಕರಣದ ವಿಷಯವೂ ೪೭ ಮತ್ತು ೯೭-೯೯ನೆಯ ಪುಟಗಳಲ್ಲಿರುವ ಅದೇ

ವಿಷಯವೂ ಸಹಜವಾಗಿ ಬರಬಹುದಿತ್ತು. "ಹಿಂದುಸ್ತಾನದಲ್ಲಿ ಸಾಮೂಹಿಕ ಸತ್ಯಾಗ್ರಹ"ವೆಂಬ ಪ್ರಕರಣವು ಸತ್ಯಾಗ್ರಹದ ತಾತ್ವಿಕ ಪ್ರತಿಪಾದನೆಯೆಲ್ಲ ಮುಗಿದ ತರುವಾಯ ಸತ್ಯಾಗ್ರಹದ ಭವಿಷ್ಯವನ್ನು ಚರ್ಚಿಸುವದಕ್ಕಿಂತ ಮೊದಲು ಬಂದಿದ್ದರೆ ಹೆಚ್ಚು ಸಮರ್ಪಕವಾಗುತ್ತಿತ್ತೆಂದು ತೋರುತ್ತದೆ.

ಶೈಲಿಯ ಬಗ್ಗೆ ಎರಡು ಮಾತು: "ಖತಸೆಟ್ಟ" (ಪು. ೮) "ಓಂಫಸ್" (ಪು. ೨೭೦) ಇಂಥ ಶಬ್ದಗಳು ವಿಷಯ ಗಾಂಭೀರ್ಯಕ್ಕೂ, "ಯಚ್ಚಾವತ್" (ಪು. ೨೬) "ಸಹಜಾಸಹಜಿ" (ಪು. ೧೫೦) "ಜಂಗ್ಲೀ" (ಪು. ೧೫೪) "ಮನ ಮಾನಿ" (ಪು. ೨೨೪) "ಬಿನ್‌ಕರಾರ" (ಪು. ೨೩೫) ಇಂಥ ಶಬ್ದಗಳು ನಮ್ಮ ಭಾಷೆಯ ಸ್ವರೂಪಕ್ಕೆ ಸರಿಹೋಗುವದಿಲ್ಲವೆಂದೆನಿಸುತ್ತದೆ. ಇಂಗ್ಲಿಷಿನ ಶಬ್ದಸರಣಿಯನ್ನು ಕನ್ನಡಕ್ಕೆ ಪರಿವರ್ತಿಸುವಾಗಲೂ ಹೆಚ್ಚಿನ ಜಾಗರೂಕತೆ ಬೇಕು. "ಪ್ರತಿಪಕ್ಷವನ್ನು ಪೂರಾ ತಪ್ಪಿನಲ್ಲಿ ಹಾಕುವನು" ಎಂಬದರಲ್ಲಿ (ಪು. ೪೮) The other side is placed completely in the wrong ಎಂಬ ಶಬ್ದಸರಣಿಯು ಸ್ಪಷ್ಟವದೆ. ಆದರೆ ಸತ್ಯಾಗ್ರಹಿಯು ಯಾರನ್ನೂ ಉದ್ದೇಶಪೂರ್ವಕವಾಗಿ ತಪ್ಪಿನಲ್ಲಿ ಹಾಕಲಾರನಾದ ಕಾರಣ "ಪ್ರತಿಪಕ್ಷವು ಪೂರಾ ತಪ್ಪಿನಲ್ಲಿರುವದೆಂದು ತೋರಿಸುವನು" ಎಂದು ಪರಿವರ್ತಿಸಿದ್ದರೆ ಹೆಚ್ಚು ಸಮರ್ಪಕವಾಗುತ್ತಿತ್ತು. "ದುಃಖವು ಸತ್ಯವಿರಬೇಕು" ಎಂಬಲ್ಲಿ (ಪು. ೧೨೨) Grievance ಶಬ್ದವನ್ನು "ದೂರು" ಎಂದು ಪರಿವರ್ತಿಸಿದ್ದರೆ, avert my eyes ಪರಿವರ್ತಿಸುವಾಗ "ನಾನು ಕಣ್ಣು ತಿರುವುತ್ತಿದ್ದೆನು" (ಪು. ೨೬೮) ಅನ್ನದೆ "ಮೋರೆ ತಿರುವುತ್ತಿದ್ದೆನು" ಎಂದಿದ್ದರೆ cultivate ಎನ್ನುವದಕ್ಕೆ "ಕೃಷಿಮಾಡಬಲ್ಲೆವು" (ಪುಟ ೬೮) ಎಂದು ಹೇಳದೆ "ಬೆಳೆಯಿಸಬಲ್ಲೆವು" ಎಂದಿದ್ದರೆ ಹೆಚ್ಚು ಸಮರ್ಪಕವಾಗುತ್ತಿತ್ತೆಂದು ತೋರುತ್ತದೆ.

ಕನ್ನಡ ಶಬ್ದಗಳನ್ನು ಬಳಸುವಾಗ ಸಹ ಅವುಗಳ ಅರ್ಥರೂಪಗಳಿಗೆ ಇನ್ನಷ್ಟು ಲಕ್ಷ್ಯಗೊಟ್ಟರೆ ಮೇಲು. ಉದಾ.—"ಹಲವೇ ದಿನಗಳಲ್ಲಿ" (ಪು. ೨೯) "ತಾತ್ಪೂರ್ತಿಕ ವ್ಯವಹಾರದ ತಡೆ" (ಪು. ೭೯) "ತೀವ್ರಭಾವನಾವಶದಿಂದ ಜೀವದಿಂದಿರುವದು ಅಸಹ್ಯವಾದಾಗ" (ಪು. ೮೧) "ಅನ್ಯಾಯಗಳನ್ನಷ್ಟೆ ಅನ್ವಯಿಸು" (ಪು. ೮೩).

ದಿವಾಕರರ ಕ್ರಿಯಾಸಿದ್ಧಿಯು ಪ್ರಸಿದ್ಧವಿರುವಾಗ ಅವರ ಉಪಕರಣಗಳಲ್ಲಿ ಕಂಡುಬರುವ ಚಿಕ್ಕಪುಟ್ಟ ದೋಷಗಳು ಅವರ ಸತ್ವವನ್ನು ಅಲ್ಲಗಳೆಯುಲಾರವು. ಆದರೆ ಅವರ ಅನುಕರಣವೆಂದು ಅವರ ಸತ್ವವಿಲ್ಲದ ಇತರರು ಅಂಥ ತಪ್ಪುಗಳನ್ನು ಮಾಡಬಾರದೆಂದು ನಮ್ಮ ಆಶಯ. ಲೋಕಸಂಗ್ರಹ ದೃಷ್ಟಿಯಿಂದಲಾದರೂ ದಿವಾಕರರ ಗ್ರಂಥಗಳಲ್ಲಿ ಇಂಥ ಕೊರತೆಗಳಿರಬಾರದೆಂದು ನಮ್ಮ ಅರಿಕೆ. ಗಾಂಧೀಜಿಯವರ

ಶೈಲಿಯು ಇಂಗ್ಲಿಷ ಗುಜರಾಥೀ ಸಾಹಿತ್ಯಗಳಲ್ಲಿ ಪಡೆದ ಸ್ಥಾನಮಾನಗಳನ್ನು ದಿವಾಕರರ ಶೈಲಿಯು ಕನ್ನಡದಲ್ಲಿ ಪಡೆಯುವಂತಾಗಲೆಂದು ನಮ್ಮ ಕೋರಿಕೆ ದಿವಾಕರರ ಬಹುಮುಖವಾದ ರಾಷ್ಟ್ರಸೇವೆಯಲ್ಲಿ ಈ ಕೆಲಸಕ್ಕೆ ಅವರಿಗೆ ಅನುವು ದೊರೆಯದಿದ್ದರೆ ಅವರ ಸಂಪಾದಕ ಪ್ರಕಾಶಕರಾದರೂ ಈ ಉದ್ಗ್ರಂಥದಲ್ಲಿ ಯಾವ ಕುಂದುಕೊರತೆಗಳೂ ಉಳಿಯದಂತೆ ಪರಿಷ್ಕರಿಸಿ ಇನ್ನೊಂದಾವೃತ್ತಿಯನ್ನು ಪ್ರಸಿದ್ಧಿ ಸುವರೆಂದು ಪ್ರತೀಕ್ಷಿಸುತ್ತೇವೆ.

ಪ್ರ. ವೆ. ಜೋಶಿ.

ವಸ್ತುಕೋಶ

ಕಂಬನಿ

ಆಚಾರ್ಯ ಬಿ. ಎಂ. ಶ್ರೀಕಂಠಯ್ಯನವರು ಶರೀರತ್ಯಾಗ ಮಾಡಿದರಂತೆ-ಮಾಡಿದರು ಎಂದು ಹೇಳಲು ಮನಸ್ಸು ಹಿಂಜರಿಯುತ್ತಿದೆ. ಅಷ್ಟು ಅನಿರೀಕ್ಷಿತ ಆ ಸುದ್ದಿ. ಅಷ್ಟು ಆಕಸ್ಮಿಕ ಅದು ಬಂದ ರೀತಿ. ಸುದ್ದಿಯನ್ನು ಆಲಿಸಿದ ಪ್ರತಿಯೊಬ್ಬ ಅಕ್ಕರಿಗ ಕನ್ನಡಿಗನೂ "ಹಾದೆ!" ಎಂದು ಹೌಹಾರಿ ಬೀಳದಿರಲಾರನು.

ದಿವಂಗತ "ಶ್ರೀ" ಯವರು

ಹೌದು! ಕನ್ನಡ ಸಾಹಿತ್ಯ ನವೋದಯಕ್ಕೆ ನಾಂದೀ ಸ್ವರೂಪರಾದವರು, ಕನ್ನಡದ ಬಾವುಟವನ್ನು ತೋಳ್ ನೀಡಿ ನಭಕ್ಕೆತ್ತಿದವರು, ಕನ್ನಡದ ಏಳ್ಗೆಗಾಗಿ ಕನ್ನಡದ ಬಾಳ್ಕೆಗಾಗಿ ನಾನಾರಂಗಗಳಲ್ಲಿ ಅನೇಕ ವಿಧಾನಗಳಲ್ಲಿ ಉಸಿರ್ಕಟ್ಟಿ ಒಮ್ಮನಿಸ್ಸಿನಿಂದ ಹೋರಾಡಿದವರು, "ಬಾಳ್ ಕನ್ನಡ ತಾಯ್! ಏಳ್ ಕನ್ನಡ ತಾಯ್, ಆಳ್ ಕನ್ನಡ ತಾಯ್" ಎಂದು ಕೊರಳೆತ್ತಿ ಕೂಗಿದವರು ಕೈಬೀಸಿ ಕರೆದವರು, ತೆರಪಿಲ್ಲದೆಚ್ಚರಿಸಿದವರು, ಹುರಿದುಂಬಿಸಿದವರು, ಹಾರೈಸಿದವರು, ಹರಸಿದವರು ನಿನ್ನೆ ಹಗಲು ದೇಹ ತ್ಯಾಗಮಾಡಿದರಂತೆ! ಕನ್ನಡಮ್ಮನಿಗಾಗಿ ಬಹಿರಂಗವಾಗಿಯೂ ಅಂತರಂಗವಾಗಿಯೂ ಅನೇಕ ತ್ಯಾಗಗಳನ್ನು ಮಾಡಿದ ಆ ಮಹಾದಾನಿಗೆ ಇದು ಕೊನೆಯ ತ್ಯಾಗ, ಈ ಶರೀರ ತ್ಯಾಗ.

ಕೊನೆಯದೆಂದು ಹೇಳುವುದು ನಮ್ಮ ಲೋಕವ್ಯವಹಾರ ದೃಷ್ಟಿಯಿಂದ ಮಾತ್ರ. ಏಕೆಂದರೆ ಅಮೃತಾತ್ಮದ ಅನಂತ ಯಾತ್ರೆಗೆ ಕೊನೆ ಎಲ್ಲಿ? ಯಾವುದು ಅನಂತವೋ ಅದರ ಅನಂತ ಸಾಹಸಿಗಳಿಗೆ ಅಂತ್ಯವೆಲ್ಲಿ? ಆದ್ದರಿಂದ ಅದು ಕಡೆಯದೂ ಅಲ್ಲ, ಕೊನೆಯದೂ ಅಲ್ಲ. ಕೈಕೊಂಡ ಕಾರ್ಯವನ್ನು ಮುಂದುವರಿಸುವ ಸಲುವಾಗಿ, ಕನ್ನಡದ ಅಭ್ಯುದಯ ಸಾಧನೆಗೆ ಸ್ವರ್ಗವೇದಿಕೆಯಲ್ಲಿ ಸೊಂಟ ಕಟ್ಟುವ ಸಲುವಾಗಿ, ಅಲ್ಲಿಯ ದೇವತಾಶೀರ್ವಾದ ಶಕ್ತಿಗಳನ್ನು ಇಲ್ಲಿಗೆ ಆಮಂತ್ರಿಸುವುದಕ್ಕಾಗಿ, ನಮ್ಮ ಇಲ್ಲಿಯ ಸಾಧನೆಗೆ ಅಲ್ಲಿಯ ಕೃಪಾಸಹಾಯವನ್ನು ಸಂಪಾದಿಸುವುದಕ್ಕಾಗಿ ಪೂಜ್ಯ ಶ್ರೀಕಂಠಯ್ಯನವರು ಅಶರೀರಯಾತ್ರೆಹೋಗಿದ್ದಾರೆ. ಯಾರು ಹೇಳಿದರು ಅವರು ಮಡಿದರೆಂದು? ಈ ಬದುಕಿನಿಂದ ಆ ಬದುಕಿಗೆ ವರ್ಗವಾಗಿದ್ದಾರೆ! ಕನ್ನಡಕ್ಕಾಗಿ ದುಡಿದು ಮುನ್ನಡೆದ ಮಹನೀಯರೊಡನೆ ಸೇರಿದ್ದಾರೆ, ಕಾರ್ಯಾರ್ಥವಾಗಿಯೆ! ಕಳಿದವರಿಗಾಗಿ ಅಳುವುದು ಲೋಕದ ರೂಢಿ. ಆದರೆ ಚಿರಂಜೀವಿಯಾದ "ಶ್ರೀ"ಯವರಿ

ಗಾಗಿ ನಾವು ಅಳುವುದು ಸಲ್ಲ. ಏತಕ್ಕೆ ಅಳು? ನಶ್ವರ ಹೋಯಿತು, ಶಾಶ್ವತ ತೇಜಸ್ಸಿನ ಶಾಶ್ವತ ವೈಭವಕ್ಕಾಗಿ. ಇಂದು ಶ್ರೀಕಂಠಯ್ಯನವರು ಹಿಂದಿಗಿಂತಲೂ ನೂರ್ಮಡಿಯಾಗಿ ಬದುಕಿದ್ದಾರೆ! ನಮ್ಮೆದೆಯಲ್ಲಿ ಉಕ್ಕುತ್ತಿರುವ ಗೌರವ ಭಾವವೇ ಅದನ್ನು ಸಮರ್ಥಿಸುತ್ತಿದೆ! ನಮ್ಮ ಹೃದಯ ಭೂಮಿಕೆಯಲ್ಲಿ ಹೆಡೆಯೆತ್ತುತ್ತಿರುವ ದಿವ್ಯೋಲ್ಲಾಸದ ಅಗ್ನಿ ಶೇಷನೇ ಅದಕ್ಕೆ ಸಾಕ್ಷಿ! ಆಚಾರ್ಯ ಶ್ರೀಕಂಠಯ್ಯನವರು ದೇಹ ಬಂಧನದಿಂದ ವಿಮುಕ್ತರಾಗಿ, ಏಕಕಾಲದಲ್ಲಿ ನಮ್ಮೆಲ್ಲರೊಡನೆಯೂ ಯಾವಾಗಲೂ ಇರುವ ದಿವ್ಯಸ್ಥಿತಿಗೇರಿದ್ದಾರೆ.

ಪೂಜ್ಯ ಶ್ರೀಕಂಠಯ್ಯನವರ ಪರಿಚಯದ ಪುಣ್ಯ ನನ್ನನ್ನು ಸುಮಾರು ಇಪ್ಪತ್ತು ಇಪ್ಪತ್ತೆರಡು ವರ್ಷಗಳಿಂದಲೂ ಅವಿರಾಮವಾಗಿ ಆಶೀರ್ವದಿಸುತ್ತಿದೆ. ಮೊದಲು ನನಗವರು ಗೋಚರವಾದದ್ದು ಮೈಸೂರಿನ ಮಹಾರಾಜರ ಕಾಲೇಜಿನಲ್ಲಿ ಇಂಗ್ಲಿಷ್ ಪ್ರೊಫೆಸರ್ ಆಗಿ. ಆಗ ಇನ್ನೂ ನನ್ನ ಬಾಳಿನ ದಿಗಂತದಲ್ಲಿ ಕನ್ನಡ ಕಾವ್ಯರವಿ ಮೂಡಿರಲಿಲ್ಲ. ಮೂಡಿರಲಿಲ್ಲ ಮಾತ್ರವಲ್ಲ, ಅದು ಮೂಡುವ ಸುಳಿವೂ ಇರಲಿಲ್ಲ. ನನ್ನ ಒಲವೂ ಒಲವರವೂ ಇಂಗ್ಲಿಷ್ ಸಾಹಿತ್ಯಕ್ಕೆ ಸಂಪೂರ್ಣವಾಗಿ ವಿಾಸಲಾಗಿದ್ದ ಕಾಲ. ನನ್ನ ಕಾವ್ಯದೇವಿ ನನಗೆ ಗೋಚರವಾದುದೂ ಇಂಗ್ಲಿಷ್ ಮೊಗವಾಡ ಹಾಕಿಕೊಂಡೇ! ನನ್ನ ಕವಿಪ್ರತಿಭೆಯನ್ನು ಕನ್ನಡದ ಕಡೆಗೆ ತಿರುಗಿಸಿದ ನಿಮಿತ್ತ ಮಾತ್ರ ವ್ಯಕ್ತಿ ಒಬ್ಬ ವಿದೇಶೀಯ ಕವಿಯಾದರೂ, ಅದಕ್ಕೆ ಮೆಚ್ಚುಗೆಯ ಪ್ರೋತ್ಸಾಹ ತೀರ್ಥವನ್ನು ತಳಿದು ನಿದರ್ಶನ ಮಾತ್ರದಿಂದಲೇ ನನಗೆ ಮಾರ್ಗದರ್ಶಕರಾಗಿ, ಅದರ ಬೆಳೆಗೆ ಬೇಕಾದ ವಿದ್ವದ್ಬಲವನ್ನು ಶೇಖರಿಸಲು ಕಾರಣವಾದ ವ್ಯಕ್ತಿಗಳಲ್ಲಿ ಶ್ರೀ ಯವರು ಅಮಿತಗಣ್ಯರಾಗಿದ್ದಾರೆ.

ನನಗಿನ್ನೂ ನೆನಪಿದೆ. ಒಂದು ಸಂಜೆ ಕಾಲೇಜಿನ ಕರ್ಣಾಟಕ ಸಂಘದಲ್ಲಿ ಅವರು ರನ್ನನ "ಗದಾಯುದ್ಧ"ವನ್ನು ಕುರಿತು ಉಪನ್ಯಾಸ ಮಾಡಿದರು. ಬಹುಶಃ ಅದನ್ನು ನಾಟಕಕ್ಕೆ ತಿರುಗಿಸುತ್ತಿದ್ದ ಕಾಲವೋ ಅಥವಾ ತಿರುಗಿಸಲು ಸಂಕಲ್ಪಿಸುತ್ತಿದ್ದ ಕಾಲವೋ ತಿಳಿಯದು. ಹೊರಗೆ ಬಂದ ಮೇಲೆ ಸಮಿಾಪದಲ್ಲಿಯೆ ಗುಂಪಿನಲ್ಲಿ ಹೋಗುತ್ತಿದ್ದ ನನ್ನನ್ನು ಕರೆದರು. ನಾನು ಆ ಕೃತಿಗೆ ಬಹಳ ಹೆಮ್ಮೆಪಟ್ಟುಕೊಂಡೇ ಅವರೆಡೆಗೆ ಹೋದೆ. ಅವರು ಕಾಲೇಜಿನ ಅಂಗಳಕ್ಕೆ ಮೊಗವಾಗಿ ಕಟಕಟೆಯ ಮೇಲೆ ಒರಗಿನಿಂತು ನನ್ನೊಡನೆ ವಿಷಯ ಪರಿಶೀಲನೆ ಮಾಡತೊಡಗಿದರು. ನಾನು ಬಿ.ಎ. ತರಗತಿಯ ಮೊದಲನೆಯ ವರ್ಷದಲ್ಲೋ ಎರಡನೆಯ ವರ್ಷದಲ್ಲೊ ಇದ್ದೆ. ಆಗ ನನಗೆ ಕನ್ನಡದಲ್ಲಿ ಸಡ್ಡೆಯಾಗಲಿ, ಅಭಿಮಾನವಾಗಲಿ, ಪರಿಶ್ರಮವಾಗಲಿ, ಪ್ರಯೋಗಾಸಕ್ತಿಯಾಗಲಿ ವಿಶೇಷವಾಗಿರದಿದ್ದ ಕಾಲ. ಅದರೆ ಇಂಗ್ಲಿಷಿನಲ್ಲಿ ಅತಿಮೋಹ,

ಅತಿಗೌರವ, ಅತಿಶ್ರದ್ಧೆ ಇದ್ದುದರಿಂದ ಇಂಗ್ಲಿಷ್ ಪ್ರೊಫೆಸರನ್ನು ಕಂಡರೆ ಗೌರವ. ಇಂಗ್ಲಿಷ್ ಪ್ರೊಫೆಸರ್ ಕೂಡ ಕನ್ನಡ ಸಂಘದಲ್ಲಿ ಕನ್ನಡದಲ್ಲಿ ಕನ್ನಡ ಕವಿಯೊಬ್ಬನ ಕಾವ್ಯವನ್ನು ಕುರಿತು ಮಾತನಾಡುತ್ತಾರೆಂದು ಸಭೆಗೆ ಹೋಗಿದ್ದೆನೋ ಅಥವಾ ಆಗತಾನೆ ಕನ್ನಡದ ಕಡೆಗೆ ನನ್ನ ಕಣ್ಣು, ಕೃಪಾಕಟಾಕ್ಷವೆಂಬಂತೆ, ಒಲೆಯುತ್ತಿದ್ದ ಕಾಲವೋ! ಶ್ರೀಕಂಠಯ್ಯನವರು ಗದಾಯುದ್ಧವನ್ನು ಕುರಿತು ಸಂವಾದ ನಡೆಸ ತೊಡಗಿದರು. ನನ್ನಲ್ಲಿ ಯಾವ ಯೋಗ್ಯತೆಯನ್ನು ಕಂಡರೋ ಯಾವ ಅಧಿಕಾರವನ್ನು ಊಹಿಸಿದರೋ ನಾನರಿಯೆ. ಯಾವ ಯಾವ ವಿಷಯದಲ್ಲಿ ಕುರಿತು ಪ್ರಸ್ತಾಪಿಸಿದರೋ ಅದೂ ನೆನಪಾಗುವುದಿಲ್ಲ. ಒಂದು ಮಾತ್ರ ಸುಸ್ಪಷ್ಟವಾಗಿ ಮನಸ್ಸಿನಲ್ಲಿದೆ.

ವೃತ್ತಗಳನ್ನು ಅಥವಾ ಕನ್ನಡ ಪದ್ಯಗಳನ್ನು ಇಂಗ್ಲಿಷ್ ಪದ್ಯಗಳನ್ನು ವಾಚಿಸು ವಂತೆ ಏಕೆ ನಾಟಕೀಯವಾಗಿ ಓದಬಾರದು? ಹಾಗೆ ಮಾಡುವುದಾದರೆ (ಅವರೇ ಆ ದಿನ 'ಗದಾಯುದ್ಧ'ದ ಭಾಗಗಳನ್ನು ಓದಿದೋರಿಸಿದಂತೆ), ಇಂಗ್ಲಿಷ್ 'ಬ್ಲಾಂಕ್ ವರ್ಸ್' ಅನ್ನು ಹೋಲುವಂತೆ ಕನ್ನಡದಲ್ಲಿಯೂ ವೃತ್ತ ಛಂದಸ್ಸಿನಲ್ಲಿ ಕಾವ್ಯರಚನೆ ಮಾಡಬಹುದಲ್ಲವೇ?—ಅವರ ಆ ಪ್ರಶ್ನೆಗೆ ನಾನೇನು ತೊದಲುತ್ತರ ಹೇಳಿದೆನೋ ನೆನಪಿಲ್ಲ. ಒಂದು ಮಾತ್ರ ನೆನಪಿದೆ; ವೃತ್ತಗಳನ್ನು ರಾಗವಾಗಿಯೇ ಓದಬೇಕೆಂದು ನಾನು ಹಟಹಿಡಿದೆ. ಅವರು ವಾದಕ್ಕೆ ತೊಡಗಲಿಲ್ಲ. ಸರಿ, ಇರಲಿ ಎಂದು ಬೇರೆಯ ವಿಷಯಕ್ಕೆ ಹೊರಟರು. ಕೆಲಕಾಲದ ತರುವಾಯ ನಾನು ಸ್ವತಂತ್ರವಾಗಿಯೇ, ಆಗ ತಾನೆ ಬಳಕೆಗೆ ಬರುತ್ತಿದ್ದ ಸರಳರಗಳೆಯ ಛಂದಸ್ಸಿನಲ್ಲಿ ಮೊತ್ತಮೊದಲನೆಯ ನಾಟಕ ವನ್ನು ರಚಿಸಿ ಶ್ರೀ ವೆಂಕಣ್ಣಯ್ಯನವರಾದಿಯಾಗಿ ಹಲವು ಹಿರಿಯರ ಮೆಚ್ಚುಗೆಗೆ ಪಾತ್ರನಾದಾಗ ಶ್ರೀಕಂಠಯ್ಯನವರು ಎಷ್ಟು ಸಂತೋಷಪಟ್ಟರೆಂಬುದನ್ನು ಸೂಚಿಸಲು ಕಲ್ಬುರ್ಗಿಯ ಸಾಹಿತ್ಯ ಸಮ್ಮೇಳನದಲ್ಲಿ ನಡೆದ ಒಂದು ಸಣ್ಣ ಘಟನೆಯನ್ನು ಸದಸ್ಯರ ಕ್ಷಮೆಬೇಡಿ, ತಿಳಿಸುತ್ತೇನೆ. 'ಶ್ರೀ'ಯವರ "ಗದಾಯುದ್ಧ ನಾಟಕ" ಮತ್ತು ನನ್ನ "ಯಮನ ಸೋಲು" ಎರಡು ನಾಟಕಗಳನ್ನೂ ಪ್ರೇಕ್ಷಕರು ಮನದಣಿಯೆ ನೋಡಿದ ಮೇಲೆ 'ಶ್ರೀ' ಯವರು ತಮಗೆ ಅರ್ಪಿತವಾಗಿದ್ದ ಹಾರವನ್ನು ರಂಗದ ಮೇಲೆ ಬಹಿರಂಗವಾಗಿ ನನ್ನ ಕೊರಳಿಗೆ ಹಾಕಿ "ಇದು ಇವರಿಗೆ ಹೆಚ್ಚಾಗಿ ಸಲ್ಲತಕ್ಕದ್ದು" ಎಂದು ಹೇಳಿಬಿಟ್ಟರು! ಹೀಗೆ ಒಂದಲ್ಲ, ಎರಡಲ್ಲ, ಅನೇಕ ಸಮಯಗಳಲ್ಲಿ ಹಲವು ರೀತಿಗಳಿಂದ ನನ್ನಂತಹ ಇನ್ನೂ ಅನೇಕ ಕಿರಿಯರನ್ನು ಸಮಾನರೆಂಬಂತೆ ಕಂಡು, ಅವರ ಲಜ್ಜಾಭಯಗಳನ್ನು ಪರಿಹರಿಸಿ, 'ಶ್ರೀ'ಯವರು ತಮ್ಮ ಕನ್ನಡತನದ ತೇಜಸ್ಸನ್ನು ಸಾವಿರಾರು ಹೃದಯಗಳಲ್ಲಿ ಹರಿಯ ಬಿಟ್ಟಿದ್ದಾರೆ. ಕನ್ನಡನಾಡು ತನ್ನ ನುಡಿ, ತನ್ನ ಸಾಹಿತ್ಯ ಇರುವವರೆಗೆ ಶ್ರೀಕಂಠಯ್ಯನವರನ್ನು ನೆನೆಯುತ್ತಿರುತ್ತದೆ.

ಹಿರಿಯ ಬಾಳನ್ನು ಬಾಳಿದ ಅವರ ವಿಚಾರವಾಗಿ ಈ ಹದಿನೈದು ನಿಮಿಷದ ಭಾಷಣದಲ್ಲಿ ಹೇಳಬೇಕಾದ್ದೆಲ್ಲವನ್ನೂ ಹೇಳಿಬಿಡುತ್ತೇನೆಂದು ಪ್ರಯತ್ನಿಸುವುದು ಬಾಲ ಚಾಪಲ್ಯವಾದೀತು. ಆ ಅಸಾಧ್ಯ ಪ್ರಯತ್ನಕ್ಕೆ ಬಹುದೂರ ನಿಲ್ಲುತ್ತದೆ, ಕೈಮುಗಿದು, ನನ್ನ ಈ ನಿವೇದನ. ನಾನು ಅವರನ್ನು ಕಂಡಿರುವುದು ವಿಶೇಷವಾಗಿ ಸಾರ್ವಜನಿಕ ಜೀವನದಲ್ಲಿ—ಅಧ್ಯಾಪಕ, ವಾಗ್ಮಿ, ಸಾಹಿತ್ಯವಿಮರ್ಶಕ, ಸಾಹಿತ್ಯಕರ್ತೃ, ಕನ್ನಡ ಭಕ್ತ, ಪ್ರಚಾರಪಟು, ದಾನಿ, ತ್ಯಾಗಿ ಇತ್ಯಾದಿ ಪಾತ್ರಗಳಲ್ಲಿ. ಆದರೆ ಈ ಎಲ್ಲ ಪಾತ್ರ ಗಳಿಗೂ ಶಕ್ತಿದಾಯಕವಾಗಿರುವ ಪಾತ್ರಗಳೂ ಆತ್ಮವ್ಯಾಪಾರಗಳೂ ಜೀವಾತ್ಮನಿಗೆ ಇವೆ ಎಂಬುದನ್ನು ನಾನು ಚೆನ್ನಾಗಿ ಬಲ್ಲೆ. ಬಹುಶಃ ಅವುಗಳಲ್ಲಿ ಕೆಲವು ಆಯಾ ವ್ಯಕ್ತಿಗಲ್ಲದೆ ಇತರರಿಗೆ ಅಗೋಚರವೂ ಆಗಿರುತ್ತವೆ. ನನ್ನ ಮಟ್ಟಿಗೆ ಹೇಳುವುದಾದರೆ, ಆ ಅಗೋಚರ ವ್ಯಾಪಾರಗಳಿಗೇ ನಾನು ವರಿಷ್ಠವಾಗಿ ಬೆಲೆಕಟ್ಟುತ್ತೇನೆ. ಶ್ರೀಮಾನ್ ಶ್ರೀಕಂಠಯ್ಯನವರು ತಮ್ಮ ಓದುಮನೆಯ ಮೇಜಿನ ಮೇಲೆ ತಮಗೆದುರಾಗಿ ಬುದ್ಧ ದೇವನ ಒಂದು ಪ್ರಶಾಂತ ಸುಂದರವಾದ ಬಿಳಿಯ ವಿಗ್ರಹವನ್ನು ಇಟ್ಟುಕೊಂಡಿರುತ್ತಿದ್ದುದು ನಾನು ಅವರಲ್ಲಿಗೆ ಹೋದಾಗಲೆಲ್ಲ ಕಣ್ಣಿಗೆ ಬೀಳುತಿತ್ತು. ಅದರ ವಿಚಾರ ವಾಗಿ ಅವರು ಒಂದೇ ಒಂದುಸಾರಿ ನನ್ನೊಡನೆ ಹೇಳಿದ್ದೆಂದರೆ: ಅದನ್ನು ಯಾವುದೋ ಒಂದು ಪ್ರದರ್ಶನದಲ್ಲಿ ಕೊಂಡುಕೊಂಡ ವಿಚಾರವಾಗಿ! ಆದರೆ ಅದನ್ನು ನೋಡು ತ್ತಿದ್ದ ಅವರ ಕಣ್ಣೂ, ಅದನ್ನು ಬಣ್ಣಿಸುತ್ತಿದ್ದ ರೀತಿಯಲ್ಲಿ ಇಣುಕುತ್ತಿದ್ದ ದಿವ್ಯ ರುಚಿಯೂ ಬೇರೊಂದು ರಹಸ್ಯ ಕಥೆಯನ್ನು ಬಯಲಿಗೆಳೆಯುತ್ತಿದ್ದುವು. ಅವರ ಕೆಲವು ಭಾಷಣಗಳಲ್ಲಿಯೂ ಆ ರುಚಿ ಅಲ್ಲಲ್ಲಿ ತಲೆಹಾಕದೆ ಇರುತ್ತಿರಲಿಲ್ಲ. ಅದೆಲ್ಲ ಅವರ ಆತ್ಮಶ್ರೀಗೆ ಸಂಬಂಧಪಟ್ಟುದು; ಚಿರಕಲ್ಯಾಣಕ್ಕೆ ಕಾರಣವಾದದ್ದು; ಅವರ ಜನ್ಮ ಜನ್ಮಾಂತರಗಳ ಸಂಸ್ಕಾರಗಳಿಗೂ ಸಚ್ಚಿದಾನಂದ ಸಾಧಕವಾದ ಆತ್ಮವಿಕಾಸಕ್ಕೂ ಸಮನ್ವಿತವಾದದ್ದು. ನಮಗೆ ಪ್ರಕೃತವಾದದ್ದು ಈ ಜನ್ಮದಲ್ಲಿ ವ್ಯಕ್ತಗೊಂಡ ಈ ಪುರುಷಕಾರಕ್ಕೆ ಸಂಬಂಧಪಟ್ಟದ್ದು ಮಾತ್ರ.

ಕನ್ನಡ ಸಾಹಿತ್ಯಕ್ಕೆ 'ಶ್ರೀ'ಯವರ ಕಾಣಿಕೆ ಅಪೂರ್ವವಾದದ್ದು. "ಇಂಗ್ಲಿಷ್ ಗೀತೆಗಳು" "ಅಶ್ವತ್ಥಾಮನ್" "ರಜತಮಹೋತ್ಸವ ಪ್ರಗಾಥ"—ಒಂದೊಂದೂ ಕನ್ನಡ ನವೋದಯಕ್ಕೆ ಹಾದಿ ತೋರಿಸಿದ ಕೃತಿಗಳು. ಅವೆಲ್ಲವುಗಳನ್ನು ಕುರಿತ ವಿಶಾಲವಾದ ಪ್ರಶಂಸೆಯೂ ವಿವರವಾದ ವಿಮರ್ಶೆಯೂ ಈ ಆಕಾಶವಾಣಿ ಯಿಂದಲೇ ಇನ್ನು ಒಂದೆರಡು ವಾರಗಳ ಒಳಗಾಗಿ ನಡೆಯಲಿದೆಯೆಂದು ಕೇಳುತ್ತೇನೆ. ಇದು ಸಮಯವೂ ಅಲ್ಲ, ಇಲ್ಲಿ ಸಮಯವೂ ಇಲ್ಲ.

ಶ್ರೀ ಅರವಿಂದರು ಸ್ವಾಮಿ ವಿವೇಕಾನಂದರ ಪುರುಷಕಾರದ ವಿಚಾರವಾಗಿ

ಹೇಳುತ್ತಾ ಕೊನೆಯಲ್ಲಿ ಹೀಗೆಂದಿದ್ದಾರೆ: "Not only are the men greater than their definite works, but their influence is so wide and formless that it has little relation to any formal work that they have left behind them."

ಹಿರಿಯರ ಹಿರಿಮೆ ಅವರು ತಮ್ಮ ಹಿಂದೆ ಬಿಟ್ಟು ಹೋಗುವ ಕೃತಿಗಳಿಗಿಂತಲೂ ಹಿರಿದಾದುದು. ಆಚಾರ್ಯ ಶ್ರೀಕಂಠಯ್ಯನವರ ವಿಚಾರದಲ್ಲಿ ಅದು ಬಹಳ ಸತ್ಯವೆಂದು ನನ್ನ ಭಾವನೆ. ಅವರು ಸಂಕಲ್ಪಿಸಿದ್ದ ಕೃತಿಗಳನ್ನು ಅವರು ಕೈಗೂಡಿಸಿರುವ ಕೃತಿಗಳಿಗೆ ಹೋಲಿಸಿದರೆ ಆ ಮಾತು ಮತ್ತೂ ಅರ್ಥವತ್ತಾಗುತ್ತದೆ.

ಷೇಕ್ಸ್ಪಿಯರ್ ನಾಟಕಗಳನ್ನೆಲ್ಲ ಕನ್ನಡಕ್ಕೆ ಇಳಿಸಬೇಕು; ಗ್ರೀಕ್ ನಾಟಕಗಳನ್ನು ಭಾಷಾಂತರಿಸಬೇಕು; ಕರ್ಣಾಟಕವನ್ನು ಮತ್ತೆ ಕೂಡಿಸಬೇಕು; ಕರ್ಣಾಟಕಕ್ಕೊಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕು; ಕನ್ನಡ ಎಲ್ಲೆಲ್ಲಿಯೂ ವೈಭವದಿಂದ ಮೆರೆಯಬೇಕು; ಅದಕ್ಕೆ ಎಲ್ಲರ ಮನ್ನಣೆಯೂ ದೊರೆಯುವಂತಾಗಬೇಕು— ಒಂದೇ? ಎರಡೇ? ಮೂರೇ? ಈ ಹೊಂಗನಸುಗಳು, ಈ ಹೆಗ್ಗನಸುಗಳು? ನೂರಾರು! ಆದರೇನು? ಮೂರಕ್ಕಾಶಿಸಿ ಮೂರನ್ನು ಪಡೆದವನಿಗಿಂತ ನೂರಕ್ಕಾಶಿಸಿ ಆರನ್ನೇ ಪಡೆಯುವಾತನು ಹಿರಿಯನೆ ದಿಟ!

ಯಾರು ಬಲ್ಲರು? ಈಡೇರದ ಸಂಕಲ್ಪಗಳನ್ನು ಈಡೇರಿಸುವುದಕ್ಕೆ ಮತ್ತೊಮ್ಮೆ . . . ಅದೆನ್ನೇಕೆ ಬಾಯಿಬಿಟ್ಟಾಡಬೇಕು. ಈ ಸಮಯದಲ್ಲಿ! ಲೋಕಲೋಕಾಂತರಗಳಲ್ಲಿ ಆ ಜೀವಕ್ಕೆ ಹಾದಿ ಸುಗಮವಾಗಲೆಂದು ಈಶೋಪನಿಷತ್ತಿನ ಮಂತ್ರಗಳಲ್ಲಿ ಪ್ರಾರ್ಥಿಸಿ, ಈ ಭಾಷಣವನ್ನು ಪೂರೈಸುತ್ತೇನೆ:

ವಾಯುರನಿಲಮಮೃತಮಥೇದಂ ಭಸ್ಮಾನ್ತಂ ಶರೀರಮ್ |
ಓಂ ಕ್ರತೋ ಸ್ಮರ, ಕೃತಂ ಸ್ಮರ; ಕ್ರತೋ ಸ್ಮರ, ಕೃತಂ ಸ್ಮರ ||

ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್
ವಿಶ್ವಾನಿ ದೇವ ವಯುನಾನಿ ವಿದ್ವಾನ್ |
ಯುಯೋಧ್ಯಸ್ಮಜ್ಜುಹುರಾಣಮೇನೋ
ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ ||*

ಓಂ ಶಾಂತಿಃ

ಕುವೆಂಪು

---

* ಈ ಲೇಖನ ಮೈಸೂರು ಆಕಾಶವಾಣಿಯ ಕೃಪೆಯಿಂದ ದೊರೆತುದು.

ಸಂಪಾದಕೀಯ

ದೀಪಾವಳಿಯ ಸಂಚಿಕೆಯಲ್ಲಿ ತಿಳಿಸಿದಂತೆ ಮದರಾಸಿನಲ್ಲಿ ಈ ಸಲದ ಅಖಿಲ ಕನ್ನಡ ಸಾಹಿತ್ಯ ಪರಿಷತ್ ಸಮ್ಮೇಳನ ನಡೆಯಿತು. ಕಾರ್ಯ ಕರ್ತೃಗಳ ಅವಿಶ್ರಾಂತವಾದ ದುಡಿತದಿಂದಲೂ ಮದರಾಸಿನ ಮಹಾಜನರ ಉತ್ಸಾಹದಿಂದಲೂ ಉತ್ಸವ ತುಂಬಾ ಕಳೆಯಿಂದ ನಡೆಯಿತು. ಶ್ರೀ ಟಿ. ಪಿ. ಕೈಲಾಸಂ ಅವರ ಅಧ್ಯಕ್ಷ ಭಾಷಣದಿಂದ ಒಂದು ಭಾಗವನ್ನು ಈ ಮುಂಚೆ ಕೊಟ್ಟಿದೆ. (ಪು. ೯೨ ನೋಡಿ) ಲೇಖಕ ಗೋಷ್ಠಿಯಲ್ಲಿ ಪ್ರೊ. ಎಸ್. ಎಸ್. ಮಾಳವಾಡರು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹಲವು ಮಹತ್ವದ ವಿಷಯಗಳನ್ನೆತ್ತಿ ಭಾಷಣ ಮಾಡಿದರು. ಸಮ್ಮೇಳನವನ್ನು ಆರಂಭಿಸಿದ ಪ್ರಜಾಮಾನ್ಯ 'ಸಿ. ಆರ್.' ಅವರ ಭಾಷಣ ಕನ್ನಡಿಗರ ಆಶೋತ್ತರಗಳಿಗೆ ಪ್ರೋತ್ಸಾಹಕವಾಗಿತ್ತು. ಹಲವು ಬಗೆಯಲ್ಲಿ ವಿಶೇಷವಾದ ಈ ಸಲದ ಸಮ್ಮೇಳನದ ಕಾರ್ಯ ಸಾಂಗವಾಗಿ, ಸುಸೂತ್ರವಾಗಿ ನಡೆಯಿತು. ಸ್ವಾಗತ ಸಮಿತಿಯವರು ಬಹು ವಿಚಕ್ಷಣೆಯಿಂದ ಈ ಉತ್ಸವವನ್ನು ವ್ಯವಸ್ಥೆಮಾಡಿ ನಡಸಿದರು. ಅದಕ್ಕೆ ನೆರವಾದ ಎಲ್ಲರೂ ವಂದ್ಯರು.

***

ಕನ್ನಡ ನಾಡಿನಲ್ಲಿ ಬಹು ದೊಡ್ಡ ತಲೆಯಾಗಿದ್ದ ಹಿರಿಯರು ಸ್ವರ್ಗಸ್ಥರಾದ ಸಂಗತಿ ಈವರೆಗಾಗಲೇ ಎಲ್ಲರಿಗೂ ತಿಳಿದಿದೆ. ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯನವರ ನಿಧನದಿಂದ ಕನ್ನಡ ಲೋಕಕ್ಕೆ ಅಪಾರವಾದ ನಷ್ಟವಾಗಿದೆ. ಈ ಇಪ್ಪತ್ತು ಇಪ್ಪತ್ತೈದು ವರ್ಷಗಳಲ್ಲಿ ನಮ್ಮ ಕಡೆಯೂ ಹೊರಗೂ ಏನೇನು ಕನ್ನಡ ಕೆಲಸ ಆಗಿದೆಯೋ ಆ ಎಲ್ಲದರ ಚಾಲಕವ್ಯಕ್ತಿಗಳಲ್ಲಿ ಮುಖ್ಯವಾದ ಒಂದು ನಾಯಕ ಶಕ್ತಿಯಂತೆ ಅವರು ದುಡಿದರು; ನಡೆದರು, ನಡಸಿದರು; ನುಡಿದರು, ನುಡಿಸಿದರು. ಸಾಹಿತ್ಯ ನಿರ್ಮಾಣ, ಪ್ರಚಾರ, ಹೊಸ ಕನ್ನಡದ ರೂಪಣ, ಅದರ ವಿಮರ್ಶೆ, ಭಾಷೆ ಮತ್ತು ವಿದ್ಯಾಸಂಸ್ಕೃತಿಗಳ ಪರಿಶೀಲನೆ, ಗ್ರಂಥ ಪರಿಶೋಧನೆ, ಸಂಪಾದನೆ, ಸಾಹಿತ್ಯದ ಅಂಗಶಾಸ್ತ್ರಗಳ ವ್ಯಾಸಂಗ—ಈ ಎಲ್ಲದರ ಹಿಂದೆಯೂ ಒಳಕ್ಕೂ ಹೊಕ್ಕು ಚಾರಿತ್ರಿಕ ದೃಷ್ಟಿಯಿಂದಲೂ, ಸಾರಸಂಗ್ರಹ ದೃಷ್ಟಿಯಿಂದಲೂ, ರಸಾಸ್ವಾದನ ದೃಷ್ಟಿ, ಮೌಲ್ಯನಿರ್ಣಯಗಳ ದೃಷ್ಟಿಯಿಂದಲೂ ತಾವು ಮಾಡಬಹುದಾದ ಕೆಲಸವನ್ನೆಲ್ಲ ನಿರ್ವಂಚನೆಯಿಂದ ಮಾಡಿದರು. ಹೊಸ ಕಾಲದ ದರ್ಶನ ರುಚಿಗಳಿಗೆ ತಕ್ಕಂತೆ

ಹೊಸ ಸಾಹಿತ್ಯ ಪ್ರಕಾರಗಳನ್ನು ತಾವು ಬರೆದು ಇತರರಿಂದ ಬರಸಿ ಒಂದು ನೂತನ ಸಂಪ್ರದಾಯವನ್ನು ನಿರ್ಮಾಣ ಮಾಡಿದರು.

ಉಪಾಧ್ಯಾಯ ವೃತ್ತಿಯಲ್ಲಿರುವ ಒಬ್ಬಾತನು ತನ್ನ ವಿದ್ಯಾರ್ಥಿಗಳಲ್ಲಿ ಯಾವ ಸಾಹಿತ್ಯ ಚೈತನ್ಯವನ್ನು ನೆಟ್ಟು ಪ್ರೋತ್ಸಾಹ ಕೊಡಬಹುದೋ ಅದನ್ನು ಸಂಪೂರ್ಣವಾಗಿ ಕೊಟ್ಟರೆಂಬುದು ಅವರಲ್ಲಿ ಪಾಠ ಕಲಿತ ಯಾರೇ ಆಗಲಿ ಬಲ್ಲ ಸಂಗತಿ. ತಾವು ಪರಿಚಯ ಮಾಡಿಕೊಂಡ ಸಂತೋಷಸಂಪತ್ತನ್ನೆಲ್ಲ ಹೊಸಕನ್ನಡ ಲೋಕಕ್ಕೆ ಬಿತ್ತಿ ಬೆಳಸಬೇಕೆಂಬ ಅವರ ಸಂತತ ಉತ್ಸಾಹವೂ ಪ್ರಯತ್ನವೂ ಯಾವ ಯುವಕನಿಗೂ ಸ್ಫೂರ್ತಿ ತರುವಂಥವು. ಅವರು ಯಾವುದಾದರೂ ತಮಗೆ ಮೆಚ್ಚಿದ ವಿಷಯವನ್ನು ಕುರಿತು ಭಾಷಣ ಮಾಡಲು ನಿಂತರೆಂದರೆ ಅದರ ವೈಭವ ಸವಿಯಬೇಕಾದ್ದು. ಶ್ರದ್ಧೆಯಿಂದ, ಸೌಹಾರ್ದದಿಂದ ಕೇಳುವವರ ಮೇಲೆ ಅದರ ಪ್ರಭಾವ, ಪರಿಣಾಮ ಆಜೀವಪರ್ಯಂತ ಉಳಿಯುವಂಥಾದ್ದು.

ಕನ್ನಡ ನಾಡಿಗಾಗಿ ಅವರು ಹಲವು ಕನಸುಗಳನ್ನು ಕಂಡರು; ಅವನ್ನು ಕಾರ್ಯದಲ್ಲಿ ರೂಪುಗೊಳಿಸಲು ಬಹುವಾಗಿ ಶ್ರಮಪಟ್ಟರು. ಜನವನ್ನೂ, ಸಂಸ್ಥೆಗಳನ್ನೂ ಕಟ್ಟಿದರು. ನನಸುಗಳಿಗೆ ಹೂಡಿದರು. ನಾಡನ್ನೆಲ್ಲ ಸುತ್ತಿ ಎಲ್ಲರ ನಾಲಿಗೆಯಲ್ಲಿ ನೆಲಸಿದರು. ಅವರ ಭಕ್ತಿಗೆ ವಸ್ತುವಾದರು. ದೇಹಾಲಸ್ಯವನ್ನು ಎಣಿಸದೆ, ಕ್ಲೇಶಗಳನ್ನು ಲೆಕ್ಕಿಸದೆ, ತಮ್ಮ ಶಕ್ತಿಯನ್ನೆಲ್ಲ ಕನ್ನಡಕ್ಕೆ ಮೀಸಲಾಗಿಸಿ ಕನ್ನಡದ ಮನೆ ಒಂದು, ಅದರ ಕ್ಷೇತ್ರ ಅವಿಭಕ್ತವಾದ ಒಂದು ಪ್ರಪಂಚ, ಅದರ ಪ್ರಾಂತ ಒಂದು ಸಹಜವಾದ ಪ್ರಭಾವ ಮಂಡಲ, ಅದರ ಕಾರ್ಯ ಒಂದು ದೀಕ್ಷೆ, ಒಂದು ಪರಮ ಕರ್ತವ್ಯ, ಒಂದು ಪುಣ್ಯ ಎಂಬಂತೆ ಕಡೆಯವರೆಗೂ ಕೆಲಸ ಮಾಡಿದರು.

ಆ ಕಾರ್ಯವನ್ನು ಇಂದು ನಾಡೇ ಬಲ್ಲುದಾದ್ದರಿಂದ ವಿವರಗಳಿಗೆ ಇಲ್ಲಿ ಹೋಗುವುದಿಲ್ಲ. ಕನ್ನಡ ನಾಡಿನಲ್ಲಿ ಕನ್ನಡಿಗರ ನಡುವೆ ಕನ್ನಡಕ್ಕಾಗಿ ಮಾತನಾಡಬೇಕಾದ, ಜನವನ್ನು ಒಲಿಸಬೇಕಾದ ದುರ್ದಶೆ ಬಂದ—ಇಂದಿಗೂ ಇರುವ—ಸಮಯದಲ್ಲಿ ಅದಕ್ಕೆ ಧ್ವನಿಯಾದವರು ಅವರು. ಅದರ ಕೆಲಸಕ್ಕೆ ಆಳಾಗಿ, ಕಲಿಯಾಗಿ, ಬಲಿಯಾದವರು ಅವರು. ಕನ್ನಡದ ಕೆಲಸ ಸಣ್ಣದೆಂದು ಅವರು ಅರಿತಿದ್ದರೆ ಅದಕ್ಕೆ ಕೈಯಿಡುತ್ತಿರಲಿಲ್ಲ. ಸಂಸ್ಕೃತ, ಗ್ರೀಕ್, ಇಂಗ್ಲಿಷ್ ಬಲ್ಲ ಅವರಿಗೆ ಕನ್ನಡ ಈಗಿರುವಂತೆ ಬಹು ದೊಡ್ಡ ಸಾಹಿತ್ಯವೆಂದು ಹೇಳುವ ಅತಿಭಕ್ತಿ ಇರಲಿಲ್ಲ. ಆದರೆ ಅದು ಭರತಖಂಡದ ಪುನರುಜ್ಜೀವನದ ಕಾರ್ಯದಲ್ಲಿ ಒಂದು ಜೀವಾಂಶ, ಸಾರಾಂಶ, ಎಂದು ತಿಳಿದುದರಿಂದಲೇ ಅದರಲ್ಲಿ ಪ್ರವರ್ತಿಸಿದ್ದು. ಭರತಖಂಡದಲ್ಲಿ ನಾಡಿಗೆಲ್ಲ ನವಚೈತನ್ಯ ಬಂದಿರುವಾಗ ನಾಡಿನ ಒಂದು ದೊಡ್ಡ ಭಾಗದ ಜನ ತನ್ನ ಬಾಳನ್ನು ಹೊಸತು

ಮಾಡಿಕೊಳ್ಳದಿದ್ದರೆ, ಜೀವಂತವಾಗಿ ಬಲಿಷ್ಠವಾಗಿ ಸಂಪದ್ಯುಕ್ತವಾಗಿ ಮಾಡಿಕೊಳ್ಳದಿದ್ದರೆ, ಅಷ್ಟುಭಾಗ ಜಡವಾಗಿ ದುರ್ಬಲವಾಗಿ ವ್ಯರ್ಥವಾಗಿ ಉಳಿದೀತು—ಅದಕ್ಕೆ ನುಡಿ ಸಾಹಿತ್ಯಗಳು ಹೊಸರೂಪ ತಾಳಿ ಹೊಸಕಾಲದ ಶಕ್ತಿಯನ್ನು ಬಲಿಸಬೇಕು—ಎಂದವರು ಆ ವ್ರತವನ್ನು ತೊಟ್ಟರು. ಅದಕ್ಕಾಗಿ ದೂರು ಹೊತ್ತರು. ಕನ್ನಡನಾಡು ಒಂದಾದ ದಿನ, ಕನ್ನಡ ಪ್ರಾಂತ ನಿರ್ಮಾಣವಾದ ದಿನ, ಕನ್ನಡಿಗರಿಗೇ ಕನ್ನಡ ನಾಡಿನಲ್ಲಿ ಕನ್ನಡ ಒಂದು ಪದಾರ್ಥ, ತಮ್ಮ ಒಂದು ವಿದ್ಯಾ ಸಂಸ್ಕೃತಿಗಳ ಸಾಧನ, ಸೌಭಾಗ್ಯ ಎಂದು ತಿಳಿದ ದಿನ ಅವರ ಆತ್ಮಕ್ಕೆ ತೃಪ್ತಿಯಾಗುತ್ತದೆ. ಅವರ ಬಾಳು, ಆಸೆ, ಪೂರ್ತಿಯಾಗಿ ಫಲಿಸುತ್ತವೆ.

ಈ ಜನಕ್ಕೆ ಇನ್ನೂ ಕನ್ನಡವೆಂದರೆ ಯಾವುದೋ ಅಮುಖ್ಯ ವಿಷಯವಾಗಿದೆ, ಕನ್ನಡ ಮಕ್ಕಳಿಗೆ ಕನ್ನಡ ಬೇಡವಾಗಿದೆ—ಎಂಬ ಅರಿವು ಅವರನ್ನು ಬಹುವಾಗಿ ನೋಯಿಸಿತು, ಬಳಲಿಸಿತು. ಆ ನೋವು ಬಳಲಿಕೆ ಬೇಸರಿಕೆಗಳಲ್ಲಿ ಒಂದೊಂದು ಸಲ ಕಠಿನವಾಗಿ ನುಡಿದು ಹಲವರಿಗೆ ಅಪ್ರೀತಿಯನ್ನು ಉಂಟುಮಾಡಿತು. ಆದರೆ ಅವುಗಳ ಹಿಂದೆ ಇದ್ದ ಅವರ ಹೃದಯ ಸುಮಕೋಮಲವಾದ್ದು; ಪ್ರೀತಿಯಿಂದ ತುಂಬಿದುದು; ಆತ್ಮಗೌರವದಿಂದಲೂ ನಾಡನ್ನು ಚೆನ್ನಾಗಿ ಮೆರಸಿ ಬಾಳಿಸಬೇಕೆಂಬ ಉತ್ಸಾಹದಿಂದಲೂ ತುಳುಕಾಡುತ್ತಿದ್ದುದು. ಕನ್ನಡ ನಾಡಿನ ಮೇಲ್ಮೆಗೂ, ಅದರ ಸಾಹಿತ್ಯದ ಉನ್ನತಿ, ವಿಸ್ತಾರ, ಸಿದ್ಧಿಗಳಿಗೂ ಅವರು ಮಿತಿಯನ್ನು ಒಪ್ಪಿದವರಲ್ಲ. ಅಥೆನ್ಸ್ ಎಷ್ಟು ದೊಡ್ಡ ರಾಷ್ಟ್ರ? ಅದರ ಜನಸಂಖ್ಯೆ ಎಷ್ಟು ಹೆಚ್ಚು? ಅದು ಅಮೃತವಾದ ಸಂಸ್ಕೃತಿ ನಿರ್ಮಾತೃವಾಗಲಿಲ್ಲವೆ? ಎಲಿಜಬೆತ್ ಕಾಲದ ಲಂಡನ್ ಎಷ್ಟು ಮಹಾದೇಶ? ಅದರಲ್ಲಿ ಹೊಮ್ಮಿದ್ದ ಸಾಹಿತ್ಯಚೈತನ್ಯವಿನ್ನೆಲ್ಲಿ ಹೊಮ್ಮಿತು? ರಾಜ್ಯ ವಿಸ್ತಾರ, ಜನಸಂಖ್ಯೆಯ ಅಲ್ಪತೆ-ಬಹುಳತೆಯಿಂದಲ್ಲ ಅದಕ್ಕೆ ಚಿರಸ್ಥಾಯಿಯಾದ ಕೃತಿಕೀರ್ತಿ ಬರುವುದು. ಅದರ ಜನದ ಸತ್ವ ಉತ್ಸಾಹ ಸಾಹಸಗಳಿಂದ. ದೈವ ಬಲವಿದ್ದರೆ ಕನ್ನಡ ನಾಡು ಸ್ವಲ್ಪವೇ ಕಾಲದಲ್ಲಿ ಅಂತಹ ಚೆಲುವಿನ ನಿರ್ಮಾಣವನ್ನು ಮಾಡಿ ಭರತಖಂಡಕ್ಕೆ ತನ್ನದಾದ ಸೇವೆ ಸಲ್ಲಿಸಬಾರದೇಕೆ? ನಾಡಿನ ಕುಳಗಳಲ್ಲಿ ಕನ್ನಡವು ಹಿರಿಯ ಕುಳವಾಗಲಾರದೇ? ಎಂದೆಂದಿಗೂ ಇತರರನ್ನು ಹಿಂಬಾಲಿಸುತ್ತಲೇ ಇತರ ರಾಮರ ಹನುಮಂತರಾಗಿಯೇ ಇರಬೇಕಾದ ಗೊಡ್ಡುಗತ್ಯವೇಕೆ ಈ ಜನಕ್ಕೆ? ನಾಯಕ ಮಂಡಲದಲ್ಲಿ ಇದರ ಧ್ವನಿಗೂ ವ್ಯಾಪಕತೆ ಪ್ರಭಾವಗಳಿಗೂ ಏಕೆ ಮೊದಲ ಗೌರವ ಬರಬಾರದು? ಜನ, ಅವರ ಗುಣ, ಅವರ ಕಾರ್ಯಶಕ್ತಿ ದೊಡ್ಡವಾದರೆ ತಾವಾಗಿ ಲೋಕ ಇದಕ್ಕೆ ಮೊದಲ ಮನ್ನಣೆ ಕೊಟ್ಟೀತು. ಅಂಥ ಸತ್ವವನ್ನಾಗಿ ರೂಪಿಸಬೇಕು ಎಂದು ಅವರು ಬಯಸಿದರು. ಆ ದರ್ಶನವನ್ನು ಕನ್ನಡಿಗರ ಕಣ್ಣಿಗೂ

ಮನಸ್ಸಿಗೂ ಹಾಯಿಸಿದರು. ಲೋಕದ ಸಾರಸಂಪತ್ತಿನ ಪರಿಚಯವನ್ನೆಲ್ಲ ಬೇರೆ ಭಾಷೆಯನ್ನರಿಯದ, ಅರಿಯಲಾರದ ಜನಕ್ಕೆ ಕನ್ನಡದಲ್ಲಿ ಮಾಡಿಕೊಡಬೇಕು, ಕನ್ನಡಿಗರನ್ನು ಪೇರೊಕ್ಕಲಾಗಿ ಮಾಡಿ ನಿಲ್ಲಿಸಬೇಕು ಎಂಬುದು ಅವರ ಆಸೆ. ಒಡೆದು, ಮುರಿದು, ಛಿದ್ರವಾದ ನಾಡಿನ ಬದುಕನ್ನು ಒಂದು ನೇರಕ್ಕೂ ಬೆಸುಗೆಗೂ ನೆಯ್ಗೆಗೂ ಹೊಂದಿಸಬೇಕೆಂದು ನಾಡೆಲ್ಲ ಸುತ್ತಿದರು; ಸ್ನೇಹಗಳನ್ನು ಬೆಳಸಿದರು. ಕನ್ನಡ ಚರಿತ್ರೆಯನ್ನು ಹೆಜ್ಜೆಯಿಟ್ಟಲ್ಲೆಲ್ಲ ನೆನೆದುಕೊಂಡು ತಮ್ಮ ಕರ್ನಾಟ ಯಾತ್ರೆಯನ್ನು ಪುಣ್ಯ ಯಾತ್ರೆಯನ್ನಾಗಿ ತಿಳಿಯುತ್ತಾ ಆನಂದಪಟ್ಟರು. ಬಲವನ್ನೂ ಸಂತೋಷ ವನ್ನೂ ತುಂಬಿಕೊಂಡರು; ಹೆಜ್ಜೆ ಹೆಜ್ಜೆಗೂ ಹಿಂದಿನ ಸಾಹಸಗಳ ಮತ್ತು ಸಾಧನೆಯ ನೆನವು ಉಕ್ಕಿ ಅವರ ಸ್ಫೂರ್ತಿಯನ್ನೂ ನಾಡ ಪ್ರೇಮವನ್ನೂ ಹೆಚ್ಚಿಸಿದವು; ಅವರ ಆಸೆ ಅನಿವಾರ್ಯವಾಯಿತು.

ಕನ್ನಡ ಬಾವುಟವನ್ನು ಕೈಯಲ್ಲಿ ಹಿಡಿದರು; ಅದರ ಏಕೀಕರಣಕ್ಕೊ, ಅದರ ಕಾವ್ಯಪ್ರಚಾರಕ್ಕೊ, ಅದರ ಉತ್ಸವ ಸಮಾರಂಭಗಳಿಗೊ, ಅದರ ಸತ್ವ ಪೋಷಣೆ ಗಾಗಿ ಲೋಕ ಸೌಭಾಗ್ಯವನ್ನು ತಂದೆರೆಯುವುದಕ್ಕೊ ತೊಡಗಿದಾಗ ಅವರು ಒಂದು ಸಾಮಾನ್ಯ ವ್ಯಕ್ತಿಯಾಗಿರಲಿಲ್ಲ. ಒಂದು ಮಹಾ ಶಕ್ತಿಯಾಗಿದ್ದರು; ರಸ, ವೀರ್ಯ, ವಿಪಾಕ, ಪ್ರಭಾವ ಎಂದು ವೈದ್ಯರೆನ್ನುವ ಪದಾರ್ಥಗಳ ಎಲ್ಲ ಉಪಯೋಗಗಳೂ ಅವರ ನಡೆನುಡಿ ವ್ಯವಹಾರದಲ್ಲಿ ಕ್ರಿಯಾಚೈತನ್ಯಗಳಾಗಿ ಜೀವನವನ್ನು ಪೋಷಿಸಲು ಒದಗಿದವು. ಹಲವು ಬಗೆಯಲ್ಲಿ ಅವರ ಪ್ರೇಮಜೀವನ ನಾಡಿನ ಪ್ರೇಮದಲ್ಲಿ ಕಾಂತಿ ಗೊಂಡಿತು. ಎಲ್ಲೇ ಇರಲಿ, ಯಾವುದನ್ನೇ ಮಾಡಲಿ, ಅವರ ಮನಸ್ಸು ಸಂತತವಾಗಿ ತನ್ನ ಜನ, ಆ ಜನದ ಜೀವನ ಪರಿಶುದ್ಧಿ, ಅದರ ಉತ್ಥಾನತೆಯ ಚಿಂತನೆ, ಅದಕ್ಕಾಗಿ ಶ್ರದ್ಧೆ, ನಿರಂತರವಾದ ದುಡಿತ—ಇವಕ್ಕೆ ಮುಡಿಪಾಯಿತು.

ಅಂಥವರನ್ನು ಇಂದು ನಾವು ಕಳೆದಕೊಂಡಿರುವೆವಾದರೂ ಅವರು ಈ ನಾಡಿನ ರಕ್ತದಲ್ಲಿ ಸೇರಿದ್ದಾರೆ; ಅವರ ಆಸೆ ನಮ್ಮದು; ಅವರು ಹಿಡಿದ ಕೆಲಸ ನಾಡಿನ ಕೆಲಸ; ಅವರ ಧ್ವನಿ, ಕರ್ತವ್ಯದ ಕರೆ; ಅವರು ಬಿತ್ತಿದ ಶಾಸ್ತ್ರ, ಕೃತಿಧರ್ಮ, ವಿಮರ್ಶನ ಮಾರ್ಗ ನಾಡಿನ ಶಾಶ್ವತ ಮಂಗಳವನ್ನು ಸಾಧಿಸುವ ತಂತ್ರ; ಅವರ ದರ್ಶನ ನಮ್ಮ ಒಳಗನ್ನು ಬೆಳಗಿ ನಮ್ಮನ್ನು ಮುಂದೆ ನಡಸುವ ದೀವಿಗೆ ಆಗಿರುತ್ತದೆ.

ಕರುಣಾಳುವಾದ ಆ ಬೆಳಕು ಬಾಳನ್ನು ಮುಸುಕುವ ಎಲ್ಲ ಮಬ್ಬಿನಲ್ಲಿಯೂ ನಮ್ಮ ಕೈಹಿಡಿದು ನಡಸಲಿ.

ಪ್ರಾಚ್ಯಲೇಖನಮಾಲೆ

Indian Linguistics—IX, 1. 1944-5.

1. 'The Dravidian Neuter Plural'–A. CHIDAMBARANATHA CHETTIAR.

   'V' is indicative of Plurality. Tolkāppiyam and Puranānuru and Paripāṭal throw light on it. It is in disuse in verbs: but existed at one stage in the history of Tamil language.

2. 'Some Iranian Loan words in Indo-Aryan'—S. K. CHATTERJI.

   Āyadana > Ayatana.
   Guṇḍā (a ruffian-Hindi) for Vṛnda (O. Ir. and Skt.).
   —ḍā (Pleonastic or Contemptuous) affix.

3. 'The use of the Genitive in Middle Indo-Aryan'—S. SEN.

   In M.I.A. the G.—either altogether replaced the dative and the ablative or was an alternative case form to them. In Pali the ablative and to some extent the dative, remained side by side with the G. But in Buddhistic Skt. and in the Pkts. the genitive almost totally replaced the other two cases.

   In O.I.A. Quite a number of verbs govern the G. The G so governed falls into 4 types: (1) The Partitive G. (2) The Possessive G. (3) The G of subject matter or reference, and (4) The G. of the indirect object. (i.e. the dative and the ablative G).

   Owing to the gradual disuse and ultimate disappearance of the dative and abl. cases in the M.I.A. the idiom of the G with verbs is very much extended, so much so that in Buddhistic Skt. (esplly. in the Mahāvastu) a direct object often appears in the G. case.

4. 'Etymology of Mandhātr'—S. SEN.

   Like *Kred Dhē > Sraddhā (faith, reverence)
   *mens dhē Av. Mazdā OIA Medhā
   (medhas—) < 1-Ir *Mazdhā (Mazdhâs) < IE.
   *mṇs-dhē
   OIA (Rgv) Mandhātṛ—(thinker, wise) from the same source:
   IE *méns dhētér— > 1 Ir. *máns dhātàr- > OIA. mandhātár—

Philosophy of Science—Vol. 12-3. July, 1945.

1. 'The Hypothesis of Esthetic measure'—JAMES FEIBLEMAN.

Bulletin of the School of Oriental Studies, London—XI, 3.

1. 'Some notes on Central Asian Kharoṣṭi Documents' (No. 661)—F. W. THOMAS.

On all grounds it appears that the Vijita Siṇha of the Kharoṣṭi document No. 661 is the earliest authentic example of the dynastic name Vijita—Vijaya. To Prof. Konow's contentoin that Vijita is a sanskritization of a vernacular form Viśa we are not in a position to offer a well-grounded objection of a positive kind. But considering the frequency of a suffix ta/ti in the early nomenclature of Chinese Turkestan and the fact that in D. 661-itself there is mention of a person named Vagiti Vadhaga, we may doubt whether Vijita was a Sanskritization at all, and whether, in fact, it preceded or followed or was a contemporary with Biśa—Biśi.

Date fixed at its End of 3rd Cy. A.D.

2. 'Phonology of the Sinhalese Inscriptions up to the end of the 10 Cy. A.D.'—P. B. F. WIJERATNE.

3. 'Dravidian Studies V'—T BURROW.

Initial y—and ñ.

ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ—ಸಂ. ೩೦-೨.

೧. ಶ್ರೀಮನ್ ಮಧ್ವಾಚಾರ್ಯರ ಕಾಲನಿರ್ಣಯ—ಮಂ. ಗೋವಿಂದ ಪೈ.

(ಹುಟ್ಟು ೧೨೩೮-೯ ; ನಿರ್ಗಮ ೧೩೧೭-೮)

೨. ಪಂಪನ ದೇಸಿ—ರಂ. ಶ್ರೀ. ಮುಗಳಿ.

ಜೀವನ—VI. ೮–೧೦.

೧. ಚೀನಾದೇಶದ ಒಂದು ನಾಟಕ—ಮಾ. ವೆಂ. ಅ.

೨. ಸಾಹಿತ್ಯ ಜೀವನಕ್ಕೆ ಸಂಬಂಧಿಸಿರಬೇಕು—ಮಾ. ವೆಂ. ಅ.

೩. ಬೌದ್ಧರ ವರ್ಣೋತ್ಪತ್ತಿವಾದ—ಜಿ. ಪಿ. ರಾಜರತ್ನಂ

ಪ್ರಬುದ್ಧ

ಕರ್ಣಾಟಕ

ಪಾರ್ಥಿವ ಸಂವತ್ಸರ — ೧೦೩ — ಕಾಮನ ಸಂಚಿಕೆ

ಹಾರೈಸು

ಹಾರೈಸು, ಹಾರೈಸು, ಹಾರೈಸು, ಜೀವ:
ಹಾರೈಸು, ನೀನಾಗುವನ್ನೆಗಂ ದೇವ!—
ಹಾರೈಸಿ ಹಾರೈಸಿ ಹಾರೈಸಿ
ಅನ್ನ ತಾನಾದುದೈ ಪ್ರಾಣ;
ಹಾರೈಸಿ ಹಾರೈಸಿ ಹಾರೈಸಿ
ಹಾರಿದುದೊ ನೀರಧಿಯ ಮೀನ!
ಹಾರೈಸಿ ಹಾರೈಸಿ ಹಾರೈಸಿ
ಪ್ರಾಣಿಗುದಿಸಿತು ಮನೋಜ್ಞಾನ;
ಹಾರೈಸಿ ಹಾರೈಸಿ ಹಾರೈಸಿ
ಸಿದ್ಧಿಯಾಯ್ತಾತ್ಮ ವಿಜ್ಞಾನ!—

ಹಾರೈಸು, ಹಾರೈಸು, ಹಾರೈಸು, ಜೀವ:
ಹಾರೈಸು ನೀನಾಗುವನ್ನೆಗಂ ದೇವ!—
ಹಾರೈಸಿ ಹಾರೈಸಿ ಹಾರೈಸಿ
ಹಸುರನುಸುರ್ದುವೊ ಕಲ್ಲುಮಣ್ಣು;
ಹಾರೈಸಿ ಹಾರೈಸಿ ಹಾರೈಸಿ
ಕುರುಡು ಜಡಕುದಿಸಿತಯ್ ಕಣ್ಣು!
ಹಾರೈಸಿ ಹಾರೈಸಿ ಹಾರೈಸಿ
ಚಿತ್ ಉರುಳ್ದುದು ಸುತ್ತಿಸುರುಳಿ;
ಹಾರೈಸಿ ಹಾರೈಸಿ ಹಾರೈಸಿ
ಮೃತ್ ಅರಳ್ವುದೊ ಅತ್ತೆ ಮರಳಿ!—

ಕುವೆಂಪು.

ತಂತ್ರಗಳ ವೈಶಿಷ್ಟ್ಯ

ತಂತ್ರಗಳ ವೈಶಿಷ್ಟ್ಯವನ್ನು ಕುರಿತು ಪ್ರಸ್ತಾಪಿಸುವದಕ್ಕೆ ಪೂರ್ವಭಾವಿಯಾಗಿ, 'ತಂತ್ರ' ಶಬ್ದದ ಯಥಾರ್ಥವನ್ನು ಗ್ರಹಿಸುವುದು ಸೂಕ್ತವಾಗಿದೆ. 'ತಂತ್ರ' ಶಬ್ದವು 'ತನ್' (ವಿಸ್ತರಿಸು) ಧಾತುವಿನಿಂದ ಜನ್ಯವಾದದ್ದು. 'ತನ್ಯತೇವಿಸ್ತಾರಯತೇ ಜ್ಞಾನಂ ಅನೇನ ಇತಿ ತಂತ್ರಂ,' ಈ ಉಪಪತ್ತಿಗನುಸಾರವಾಗಿ, 'ತಂತ್ರ'ವೆಂದರೆ 'ಜ್ಞಾನವಿಕಾಸಕ್ಕೆ ಸಹಕಾರಿಯಾದ ಶಾಸ್ತ್ರ' ವೆಂದರ್ಥ. 'ಕಾಮಿಕಾಗಮ'ದಲ್ಲಿ ಹೀಗೆ ಉಕ್ತವಾಗಿದೆ:

> ತನೋತಿ ವಿಪುಲಾನ್ ಅರ್ಥಾನ್ ತತ್ವಮಂತ್ರ ಸಮನ್ವಿತಾನ್
> ತ್ರಾಣಂಚ ಕುರುತೇಯಸ್ಮಾತ್ ತಂತ್ರಂ ಇತ್ಯಭಿಧೀಯತೇ.

'ತತ್ವ' ಮತ್ತು 'ಮಂತ್ರ'ಗಳ ವಿಪುಲ ಜ್ಞಾನದಾಯಕವೂ, ಮುಕ್ತಿಜ್ಞಾನದಾಯಕವೂ ಆದುದರಿಂದ 'ತಂತ್ರ'ವೆಂದು ಹೇಳಲ್ಪಡುತ್ತದೆ.

ಪೂರ್ವೋಕ್ತ ವಿವರಣೆಯಿಂದ 'ತಂತ್ರ' ಶಬ್ದವು 'ವಿಧಿ, ನಿಯಮ, ಶಾಸ್ತ್ರ' ಎಂಬರ್ಥಗಳನ್ನು ನಿರ್ದೇಶಿಸುತ್ತದೆಂದು ಭಾವಿಸಬಹುದು. [ನಿದರ್ಶನಕ್ಕಾಗಿ ಶಂಕರಾಚಾರ್ಯರು 'ಸಾಂಖ್ಯದರ್ಶನ' ವನ್ನು 'ತಂತ್ರ' ವೆಂದು ಕರೆದಿದ್ದಾರೆ.]

ತಂತ್ರ ಮತ್ತು ಆಗಮಗಳು ಈಶ್ವರನ ಸಗುಣೋಪಾಸನೆಯನ್ನು ವಿವರಿಸುತ್ತವೆ. ಇವು ಉಪನಿಷದ್ ಯುಗದ ಅಂತ್ಯದಲ್ಲಿ ಮಾನವರಿಗೆ ದತ್ತವಾದುವು. ವೈದಿಕ ಆಚಾರವು ಕ್ರಮೇಣ ಖಿಲವಾಗಲು ಪ್ರಾರಂಭವಾದದ್ದು ಇದಕ್ಕೆ ಮೊದಲನೆಯ ಕಾರಣ. ಈ ಆಚಾರಕ್ಕೆ ಅರ್ಹರಲ್ಲದವರು ಬಹು ಸಂಖ್ಯೆಯಲ್ಲಿ ವೈದಿಕಮತಾವಲಂಬಿಗಳಾದುದು ಎರಡನೆಯ ಕಾರಣ. ಆಗಮಗಳಿಗೆ ವೈದಿಕಾಚಾರದ ವಿಧಿನಿಷೇಧಗಳಿಲ್ಲ. ಅದು ಜಾತಿಭೇದ ಲಿಂಗಭೇದಗಳಿಲ್ಲದೆ ಸಮಸ್ತರಿಂದಲೂ ಅನುಸರಿಸಲ್ಪಡಲು ಅರ್ಹವಾದದ್ದು.

ವೇದಗಳು ಅಪೌರುಷೇಯ; ತಂತ್ರಗಳೂ ಅಪೌರುಷೇಯ, ಅವು ಒಂದೇ 'ದೈವವಾಣಿ'ಯ ಎರಡು ವಿಶಿಷ್ಟರೂಪಗಳು. ಅವು ಪರಸ್ಪರ ವಿರುದ್ಧಗಳಲ್ಲ, ಪೂರಕಗಳು. ವೇದವು ಸೃಷ್ಟಿಕರ್ತನ ವಿಶ್ವಚಿತ್ತದಲ್ಲಿ ಆವಿರ್ಭವಿಸುವ 'ಭಾವನಾಜಗತ್ತು': ತಂತ್ರವು ಅದರ 'ಬೃಹತ್ಸ್ವರೂಪ'. ಇದೇ ವೈದಿಕ ದೃಷ್ಟಿ.

ಆಗಮಗಳು 'ಉಪಾಸ್ಯ' ಅಥವಾ 'ಇಷ್ಟದೇವತೆ' ಗಳಿಗನುಸಾರವಾಗಿ 'ಶೈವ, ವೈಷ್ಣವ, ಶಾಕ್ತ, ಸೌರ, ಗಾಣಾಪತ್ಯ, ಕೌಮಾರ' ಎಂದು ಆರು ಶಾಖೆಗಳಾಗಿ

ವಿಭಾಗಿಸಲ್ಪಟ್ಟಿವೆ. ಈ ಷಣ್ಮತಗಳು ಬಾಹ್ಯದೃಷ್ಟಿಯಿಂದ ಪರಸ್ಪರ ಭಿನ್ನವಾದರೂ ತತ್ವತಃ ಒಂದೇ ಆಗಿವೆ. ಶಂಕರಾಚಾರ್ಯರು 'ಪಾಂಚರಾತ್ರ' ಮತ್ತು ಇತರ 'ತಂತ್ರ'ಗಳಲ್ಲಿ ಪ್ರತಿಪಾದಿತವಾಗಿರುವ ಕೆಲವು ತತ್ವಗಳನ್ನು ಮಾತ್ರ ಅವೈದಿಕವೆಂದು ಖಂಡಿಸಿದ್ದಾರೆ. ಏಕೆಂದರೆ ಸ್ವಯಂ ಶಂಕರರೇ 'ಷಣ್ಮತಸ್ಥಾಪನಾಚಾರ್ಯ'ರೆಂದು ಕೀರ್ತಿಯುಕ್ತರಾಗಿದ್ದಾರೆಂಬುದನ್ನು ಮರೆಯಬಾರದು.

ಪೂರ್ವೋಕ್ತ ಷಣ್ಮತಗಳ ಪೈಕಿ, ಪ್ರತಿಯೊಂದು ಮತವೂ ತನ್ನದೇ ಆದ ತಂತ್ರಗಳನ್ನು ಹೊಂದಿದೆ. ಇವುಗಳ ಪೈಕಿ, 'ಪಾಂಚರಾತ್ರ'ವು ವೈಷ್ಣವಾಗಮ. ಇದಕ್ಕೆ ಶ್ರೀಮದ್ಭಾಗವತದಲ್ಲಿ 'ಸಾತ್ವತತಂತ್ರ'ವೆಂಬ ಅಭಿಧಾನವು ಕೊಡಲ್ಪಟ್ಟಿದೆ:

ತೇನೋಕ್ತಂ ಸಾತ್ವತಂ ತಂತ್ರಂ
ಯತ್ ಜ್ಞಾತ್ವಾಮುಕ್ತಿಭಾಗ್ ಭವೇತ್
ಯತ್ರಸ್ತ್ರೀ ಶೂದ್ರದಾಸಾನಾಂ
ಸಂಸ್ಕಾರೋ ವೈಷ್ಣವ ಸ್ಮೃತಃ

'ವಾಯುಸಂಹಿತೆ'ಯಲ್ಲಿ 'ಶೈವಾಗಮ'ವು "ಶ್ರೌತ" "ಅಶ್ರೌತ" ಎಂದು ವಿಭಾಗಿಸಲ್ಪಟ್ಟಿದೆ:

ಶೈವಾಗಮೋಪಿ ದ್ವಿವಿಧಃ ಶ್ರುತೋಽಶ್ರೌತಶ್ಚ ಸಂಸ್ಮೃತಃ
ಶ್ರುತಿಸಾರಮಯಃ ಶ್ರೌತಃ ಸ್ವತಂತ್ರಸ್ತ್ವಿತರೋಮತಃ

ಶೈವಮತದಲ್ಲಿ ಕಾಶ್ಮೀರಶೈವ (ತ್ರಿಕ), ಶೈವಸಿದ್ಧಾಂತ (ದಕ್ಷಿಣದ ದ್ರಾವಿಡಶೈವ), ಪಾಶುಪತ ಎಂಬ ಮೂರು ಮುಖ್ಯ ಶಾಖೆಗಳಿವೆ.

ಶಾಕ್ತರು ಭರತಖಂಡದಲ್ಲಿ ಬಂಗಾಳ ಮತ್ತು ಅಸ್ಸಾಂಗಳಲ್ಲಿ ಅಧಿಕ ಸಂಖ್ಯೆಯಲ್ಲಿ ನೆಲಸಿದ್ದಾರೆ. ಶಾಕ್ತರು ಶಕ್ತ್ಯುಪಾಸಕರಾದರೂ ಬಹುಮಟ್ಟಿಗೆ 'ಅದ್ವೈತಶೈವ' ಸಂಬಂಧಿಗಳಾಗಿದ್ದಾರೆ. ಶಿವಶಕ್ತಿಯರು ಅಭಿನ್ನರು. 'ಅರ್ಧನಾರೀಶ್ವರ ಮೂರ್ತಿ'ಯು ಈ 'ಅವಿನಾಭಾವ'ದ ಪ್ರತೀಕ[1]. ಶಿವನ ಉಪಾಸನೆಯೆಂದರೆ ಶಕ್ತಿಯ ಉಪಾಸನೆಯೂ ಹೌದು. 'ಆಗಮವಾದಿ'ಗಳಾದ ಶಾಕ್ತರ ಮೂಲಸಿದ್ಧಾಂತವು "೩೬ ತತ್ವಗಳನ್ನೊಳಗೊಂಡ ಶೈವಸಿದ್ಧಾಂತ." ಇದು ವಂಗದೇಶದಲ್ಲಿ ಪ್ರಸಿದ್ಧವಾದ 'ಕುಲಾರ್ಣವ

---

[1] ಶಿವಃ ಶಕ್ತ್ಯಾಯುಕ್ತೋ ಯದಿಭವತಿ ಶಕ್ತಃ ಪ್ರಭವಿತುಂ
ನಚೇದೇವಂ ನಖಲುಕುಶಲಃ ಸ್ಪಂದಿತುಮಪಿ
ಅತಸ್ತ್ವಮಾರಾಧ್ಯಾಂ ಹರಿಹರವಿರಂಚಾದಿಭಿರಪಿ
ಪ್ರಣಂತುಂ ಸ್ತೋತುಂ ವಾ ಕಥಮಕೃತಪುಣ್ಯಃ ಪ್ರಭವತಿ

(*Ananda Lahari*—Madras Edn.)

ತಂತ್ರ'ದಲ್ಲಿ ಪ್ರತಿಪಾದಿತವಾಗಿದೆ.[2] ಅಲ್ಲದೆ 'ಆನಂದಲಹರಿ' ಮುಂತಾದ ಶಾಕ್ತ ಗ್ರಂಥಗಳಲ್ಲಿಯೂ ವರ್ಣಿತವಾಗಿದೆ. ವಂಗೀಯ ಶಾಕ್ತರ ಆಧಾರಗ್ರಂಥವಾದ 'ಶಾರದಾತಿಲಕ'ವು ಕಾಶ್ಮೀರ ಶೈವಶಾಖೆಗೆ ಸೇರಿದ ಲಕ್ಷ್ಮಣಾಚಾರ್ಯ ದೇಶಿ ಕೇಂದ್ರ ಕೃತವಾದದ್ದು. ಕಾಶ್ಮೀರ ಶೈವರು ಮತ್ತು ಶಾಕ್ತರು ಅದ್ವೈತವಾದಿಗಳು. ಶೈವಸಿದ್ಧಾಂತ ಮತ್ತು ಪಾಂಚರಾತ್ರಾಗಮಗಳು ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸುವುವು. ತದ್ರೀತಿಯಲ್ಲಿಯೇ ಅಸಂಖ್ಯಾತ ಬೌದ್ಧತಂತ್ರಗಳು ವಿವಿಧ ಶಾಖೆಗಳ ತತ್ವಗಳನ್ನು ವಿವರಿಸುವುವು. ಶೈವಶಾಖೆಗಳ ಮೂಲಸಂಬಂಧವು ಅನೇಕ ರೀತಿಗಳಲ್ಲಿ, ಅದರಲ್ಲೂ 'ಮೃಗೇಂದ್ರ, ಮತಂಗ' ಮುಂತಾದ ತಂತ್ರಗಳು ಸರ್ವ ಶಾಖೆಗಳಿಗೂ ಸಾಧಾರಣವಾಗಿರುವ ಅಂಶದಿಂದ ವಿಶದೀಕರಿಸಲ್ಪಟ್ಟಿದೆ. ಶಾಕ್ತ ತತ್ವಕ್ಕೂ ಶೈವಸಿದ್ಧಾಂತಕ್ಕೂ ಐತಿಹಾಸಿಕ ದೃಷ್ಟಿಯಿಂದ ಯಾವ ಸಂಬಂಧವೂ ಇಲ್ಲವೆಂದು ಕೆಲವು ಪಂಡಿತರ ಅಭಿಮತ. ಇದಕ್ಕೆ ಯಾವ ಆಧಾರವೂ ಇಲ್ಲ. ಶಾಕ್ತಸಾಹಿತ್ಯದ ಪರಿಶೀಲನೆಯಿಂದ ಈ ಉಭಯಪಂಥಗಳಿಗೂ ಇರುವ ಪರಸ್ಪರ ತೆಯು ಸುವ್ಯಕ್ತವಾಗುತ್ತದೆ. ಶೈವದರ್ಶನದಲ್ಲಿ ಅಜ್ಞಾನಿಗಳಾದವರಿಗೆ ಶಾಕ್ತ ಸಾಹಿತ್ಯವು ಸಂಪೂರ್ಣವಾಗಿ ವೇದ್ಯವಾಗುವುದಿಲ್ಲ. ಶಾಕ್ತರು ಕೌಲ (೬೪ ತತ್ವಗಳು), ಮಿಶ್ರ (೮ ತತ್ವಗಳು) ಮತ್ತು ಸಮಯಾ (೫ ತತ್ವಗಳು) ಎಂಬ ಮೂರು ಪಂಗಡಗಳಾಗಿ ವಿಭಾಗಿಸಲ್ಪಟ್ಟಿದ್ದಾರೆ. ಈ ವಿಭಾಗವು ನಿರ್ದಿಷ್ಟವಾದ ಪುರುಷಾರ್ಥ ಸಾಧನೆಯ ದೃಷ್ಟಿಯನ್ನು ಅವಲಂಬಿಸಿದೆ. ಪಾಂಚರಾತ್ರಸಾಹಿತ್ಯವು ಅಗಾಧ ವಾದದ್ದು (೧೦೮ ಗ್ರಂಥಗಳು).[3] ಕಾಶ್ಮೀರ ಶೈವವು ಅನೇಕ ತಂತ್ರಗಳನ್ನು ಹೊಂದಿದೆ. ಅವುಗಳ ಪೈಕಿ 'ಮಾಲಿನೀವಿಜಯ'ವೂ, 'ಸ್ವಚ್ಛಂದತಂತ್ರ'ವೂ ಬಹು ಮುಖ್ಯವಾದುವು; ಶೈವಸಿದ್ಧಾಂತವು ೨೮ ಮುಖ್ಯತಂತ್ರಗಳನ್ನೂ ಅಸಂಖ್ಯಾತ ಉಪತಂತ್ರಗಳನ್ನೂ ಹೊಂದಿದೆ. ಈ ಉಪತಂತ್ರಗಳ ಪೈಕಿ 'ತಾರಕಾತಂತ್ರ'ವೂ 'ವಾಮತಂತ್ರ'ವೂ ಬಹುಮುಖ್ಯವಾದುವು.[4] ಈ ರೀತಿಯಲ್ಲಿ ಭಿನ್ನಭಿನ್ನವಾದ ಸಿದ್ಧಾಂತಗಳನ್ನು ಹೊಂದಿದ ಅನೇಕ ತಂತ್ರಗಳು ಉಪಲಬ್ಧವಿವೆ.

ತಂತ್ರಗಳ ವೈಶಿಷ್ಟ್ಯವನ್ನು ಕುರಿತ ಜಿಜ್ಞಾಸೆಯಲ್ಲಿ ಅವುಗಳ ಕಾಲನಿರ್ಣಯವು ಮುಖ್ಯವಾದದ್ದು. ಅನೇಕ ಭಾರತೀಯ ವಿದ್ವಾಂಸರು ತಂತ್ರಗಳು ಪುರಾಣೋತ್ತರಯುಗದಲ್ಲಿ ರಚಿತವಾದುವೆಂದು ಅಭಿಪ್ರಾಯಪಡುತ್ತಾರೆ. ಪೌರಾಣಿಕ

[2] *Kularnava Tantra*—Avalon's Edn.

[3] *Introduction to Pancharatra*—Otto Schrader.

[4] *Studies in Saiva Siddhanta*—Nallaswamy Pillay.

ಯುಗದ ಪ್ರತಿಪಾದನಪ್ರಿಯರಾದ ಪಾಶ್ಚಾತ್ಯ ಮನೀಷಿಗಳ ಅನುಕರಣೆಯು ಫಲವಿದು.[5] ಪುರಾಣಗಳಲ್ಲಿ ವೈದಿಕ ಹಾಗೂ ತಾಂತ್ರಿಕ ಉಪಾಸನೆಗಳು ವರ್ಣಿತ ವಾಗಿವೆ. ಇದರಿಂದ ತಾಂತ್ರಿಕಾಚಾರವು ಪುರಾಣಪೂರ್ವವೆಂಬುದು ಸಿದ್ಧವಾಗುತ್ತದೆ. ತಾಂತ್ರಿಕ ಯುಗವು ಪೌರಾಣಿಕ ಯುಗವನ್ನು ಅನುಸರಿಸಿತೆಂಬ ವಾದವು ನಿರಾಧಾರ ವಾದದ್ದು. ಕೆಲವು ವಿದ್ವಾಂಸರು ತಂತ್ರಗಳು ಬೌದ್ಧಯುಗಾನಂತರ ರಚಿತವಾದು ವೆಂದು ಅಭಿಪ್ರಾಯಪಡುತ್ತಾರೆ. 'ಲಲಿತ ವಿಸ್ತರ'ದ ಉಕ್ತಿಯಿಂದ ಇದು ಅಸಾಧು ವೆಂಬುದು ಸ್ಫುಟವಾಗುತ್ತದೆ. ಈ ಕೃತಿಯ ಏಳನೆಯ ಅಧ್ಯಾಯದಲ್ಲಿ ಬುದ್ಧನು ಬ್ರಹ್ಮ, ಇಂದ್ರ, ವಿಷ್ಣು, ಕಾತ್ಯಾಯನಿ, ಗಣಪತಿ ಮುಂತಾದ ದೇವತೆಗಳ ಆರಾಧನೆ ಯನ್ನು ಖಂಡಿಸುತ್ತಾನೆ.[6] ಬುದ್ಧನು ಈ ದೇವತೆಗಳ ಆರಾಧನೆಯನ್ನು ಖಂಡಿಸಿದ್ದರೂ, ಬೌದ್ಧರೂ ತಮ್ಮದೇ ಆದ ವಿಶೇಷ ತಂತ್ರಗಳನ್ನೂ, ಆದಿ ಬುದ್ಧ, ಪ್ರಜ್ಞಾಪಾರ ಮಿತಾ, ಮಂಜುಶ್ರೀ, ತಾರಾ, ಆರ್ಯತಾರಾ ಮುಂತಾದ ದೇವತೆಗಳನ್ನೂ ಹೊಂದಿರುವರೆಂಬುದು ಗಮನಾರ್ಹವಾದುದು.

ಭಾರತೀಯ ಸಂಸ್ಕೃತಿಯಲ್ಲಿ ವಿಗ್ರಹಾರಾಧನೆಯು ಅನಾರ್ಯ ಸಂಪರ್ಕದಿಂದ ಉದ್ಭವಿಸಿತೆಂಬುದು ನಿರಾಧಾರವಾದದ್ದು. ಅದಕ್ಕೆ ಪ್ರತಿಯಾಗಿ ಮೂರ್ತಿ ಪೂಜೆಯು ವೈದಿಕ ಯುಗದ ಮುಖ್ಯ ಲಕ್ಷಣವಾಗಿತ್ತು.[7] ತಾಂತ್ರಿಕಪದ್ಧತಿಗಳೆಲ್ಲವೂ ವೇದ ಮೂಲವೆಂದೂ, ಕಾಳಿ ಮತ್ತು ತಾರಾದೇವಿಯರ ಆರಾಧನೆಯಿಲ್ಲದೆ ಅಥರ್ವಣ ಪ್ರಯೋಗವು ಅಸಾಧ್ಯವೆಂದೂ, 'ಸಮ್ಮೋಹನ ತಂತ್ರ'ವು ತಿಳಿಸುತ್ತದೆ.

ವಿನಾಕಾಲಿಂ ವಿನಾತಾರಾನ್ನಾಥರ್ವಣೋ ವಿಧಿಃ ಕ್ವಚಿತ್

ಅಥರ್ವವೇದವು ವೈದಿಕ ಸಂಸ್ಕೃತಿಯ ವಿಶಿಷ್ಟರೂಪವೆಂದು ಶ್ರೀಮಾನ್ ಎಸ್. ಶ್ರೀಕಂಠಶಾಸ್ತ್ರಿಗಳು ಅಧಿಕಾರಯುತವಾಗಿ ಸಿದ್ಧಮಾಡಿದ್ದಾರೆ.[8]

ಅಥರ್ವವೇದದ ಪ್ರತಿಷ್ಠಾತೃದೇವಿ 'ಕಾಳಿಕಾ' (ಆಕೆಯ ಕ್ಷೇರಳದ ಹೆಸರು). ಅವಳು ಕಾಶ್ಮೀರದಲ್ಲಿ 'ತ್ರಿಪುರಾ' ಎಂದೂ, ಗೌಡ ದೇಶದಲ್ಲಿ 'ತಾರಾ' ಎಂದೂ ಕೌಲೋತ್ತರಯಾನದಲ್ಲಿ 'ಕುಲೋತ್ತರ' ಎಂದೂ ಕರೆಯಲ್ಪಡುತ್ತಾಳೆ.

ವೇದಗಳ ಮೂಲಸ್ಥಾನವಾದ 'ಸಪ್ತಸಿಂಧು' ಮತ್ತು 'ಗಂಗಾ' ಪ್ರದೇಶಗಳೇ

---

[5] *Indian Historical Tradition*—Pargiter.

[6] *Lalitavistara*—Rajendralal Mitra.

[7] *Origins of Hindu Iconism*—Venkatesvara.
Vedic Iconography—Dr. Ananda Coomaraswamy.

[8] *Proto-Indic Religion*—Srikantha Sastri.

ತಂತ್ರಗಳ ಮೂಲಸ್ಥಾನವೂ ಆಗಿತ್ತೆಂಬುದನ್ನು ಶ್ರೀಮಾನ್ ಎಸ್. ಶ್ರೀಕಂಠಶಾಸ್ತ್ರಿಗಳು ಕೆಳಗಣ ಅಂಶಗಳಿಂದ ಸ್ಪಷ್ಟಗೊಳಿಸಿದ್ದಾರೆ:[9]

ಡಾ. ಬಗಚಿಯವರು ಅವೈದಿಕ ತಂತ್ರಗಳಲ್ಲಿ ಗೋಚರಿಸುವ ಪರಕೀಯ ಪ್ರಭಾವವನ್ನು ತೋರಿಸಿದ್ದಾರೆ. ಕೌಲಿಕಾಮ್ನಾಯದ 'ಕುಬ್ಜಿಕಾತಂತ್ರ' 'ಮಹಾಚೀನಕ್ರಮ ತಾರಾಸಾಧನ', ನೀಲಸರಸ್ವತಿ ಅಥವಾ ಉಗ್ರತಾರೆಯ ಆರಾಧನೆ, ಲಾಮಾಚಾರ (ಜಯದ್ರಥಯಾಮಳ) ಇವುಗಳಲ್ಲಿ ಟಿಬೆಟ್ ಮತ್ತು ಚೀಣಾ ಪ್ರಭಾವಗಳು ಎದ್ದು ಕಾಣುತ್ತವೆ. ಅವರು 'ಲಾಕಿಣಿ, ಡಾಕಿಣಿ, ಶಾಕಿಣಿ, ರಾಕಿಣಿ' ಮುಂತಾದ ಹೆಸರುಗಳು ಕೆಲವು ಪಂಗಡಗಳ ಹೆಸರುಗಳಿಂದ ಜನ್ಯವಾದುವೆಂದು ತೋರಿಸಿದ್ದಾರೆ. ಪಶ್ಚಿಮ ಟಿಬೆಟ್ಟಿನ 'ಲಾ—ಕ' ಮಂತ್ರವಾದಿಗಳಿಂದ 'ಲಾಕಿಣಿ', ಡಗಿಸ್ಥಾನದ ಡೋಗರಿಂದ 'ಡಾಕಿಣಿ', ಶಕರಿಂದ 'ಶಾಕಿಣಿ', ಸಂತಾಲ ಪರ್ಗಣದ ಅನಾಗರಿಕ ಸಂತಾಲರು ಪೂಜಿಸುವ 'ರಂಕಿಣಿ'ಯಿಂದ 'ರಾಕಿಣಿ'ಯೂ ಉದ್ಭವಿಸಿದರು. ಮಧ್ಯದೇಶದಲ್ಲಿ ಇಲ ಆಗಮಗಳ ವೈದಿಕತಂತ್ರಗಳೂ, ಇತರ ಭಾಗಗಳಲ್ಲಿ 'ವಾಮಾಚಾರ'ವೂ ಪದ್ಧತಿಯಾಗಿತ್ತೆಂದು ಡಾ. ಬಗಚಿಯವರು ಅಭಿಪ್ರಾಯಪಡುತ್ತಾರೆ.

ಅವೆಲಾನ್‌ರವರು ಕಾದಿ (ಸಮಯ), ಹಾದಿ (ಹಂಸರಾಜ) ಮತ್ತು ಕಹಾದಿ ಎಂಬ ಮತತ್ರಯಗಳ ಹೆಸರು ಹೇಳಿದ್ದಾರೆ. 'ಕುಲಾರ್ಣವ ತಂತ್ರ'ದ ಪಾರಮ್ಯವೆಂದರೆ, ಅದು 'ಊರ್ಧ್ವಾಮ್ನಾಯ'ದ ಶ್ರೇಷ್ಠತಂತ್ರ. ಅದರಲ್ಲಿ ಯಾವ ಪರಕೀಯ ಪ್ರಭಾವವೂ ಕಂಡುಬರುವುದಿಲ್ಲ. ತತ್ಕಾರಣವಾಗಿ ಸಮಯಮಾರ್ಗದ (ವೈದಿಕ) ತಂತ್ರಗಳ ಮೂಲಸ್ಥಾನವನ್ನು ನಿರ್ದೇಶಿಸಲು ಶ್ರೀಚಕ್ರಯಂತ್ರದ ಸ್ವರೂಪವನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು. ಕಾಶ್ಮೀರಶೈವನಾದ ಸುಭಗಾನಂದನಾಥ ಪ್ರಣೀತ ವ್ಯಾಖ್ಯಾನಯುಕ್ತವಾದ 'ತಂತ್ರರಾಜ'ದ ಪ್ರಕಾರ ಶ್ರೀಯಂತ್ರದ ಕೇಂದ್ರದಲ್ಲಿ 'ಸರ್ವಸಿದ್ಧಿಪ್ರದಚಕ್ರ (ಅಧೋಮುಖ ತ್ರಿಕೋಣ) ವೂ, 'ಸರ್ವಾನಂದಮಯ ಚಕ್ರ (ಬಿಂದು) ವೂ, ಪ್ರತಿಷ್ಠಿತವಾಗಿವೆ. 'ಬಿಂದು'ವೇ 'ಓಡ್ಯಾಣಪೀಠ.' 'ಅಧೋಮುಖಕೋಣ'ವೇ ಕಾಮೇಶ್ವರಿಯ 'ಕಾಮರೂಪಪೀಠ'; 'ವಾಮಕೋಣ'ವೇ ಭಗಮಾಲಿನಿಯ 'ಪೂರ್ಣಗಿರಿಪೀಠ; 'ದಕ್ಷಿಣಕೋಣ'ವೇ 'ವಜ್ರೇಶ್ವರಿಯ 'ಜಾಲಂಧರಪೀಠ.'[10]

ಕಾಮರೂಪವು ಈಗಿನ 'ಅಸ್ಸಾಂ.' ಜಾಲಂಧರವು ಈಗಿನ 'ಜಲಂಧರಜಿಲ್ಲೆ.' 'ಉಡ್ಯಾಣ'ವು ಹ್ಯೂಯನ್‌ತ್ಸಾಂಗನ ಪ್ರಕಾರ 'ಸ್ವಾಟ್‌ಕಣಿವೆ,' ಪೂರ್ಣಗಿರಿಯು

---

[9] *Proto-Indic and Tantrik Hieroglyphs*—S. Srikantha Sastri.

[10] *Tantraraja*—Avalon's Edn:

ಪ್ರಾಯಶಃ 'ಬದರಿ.' ನಾವು 'ಸ್ವಾಟ್ ಕಣಿವೆ'ಯನ್ನು 'ಬಿಂದುಪೀಠ' ಅಥವಾ 'ಆನಂದಮಯ ಚಕ್ರ'ವೆಂದೂ ಪರಿಗಣಿಸಿದರೆ (ಸ್ಥೂಲಪ್ರಪಂಚ), ಅಧೋಮುಖ ಕೋಣವು 'ಅಸ್ಸಾಂ' ದೇಶವನ್ನು ತೋರಿಸುತ್ತದೆ. ಆಗ ದಕ್ಷಿಣಕೋಣವು 'ಜಾಲಂಧರ'; ವಾಮಕೋಣವು 'ಪೂರ್ಣಗಿರಿ'. ಇದರಿಂದ 'ಸಮಯಾಚಾರ' ಮತದ ಔನ್ನತ್ಯವು ಪೂರ್ವದಲ್ಲಿ 'ಕಾಮರೂಪ'ದಿಂದ ಪಶ್ಚಿಮದಲ್ಲಿ 'ಸ್ವಾಟ್ ಕಣಿ'ವೆಯ ವರೆಗೂ, ಉತ್ತರದಲ್ಲಿ 'ಬದರಿ'ಯಿಂದ ದಕ್ಷಿಣದಲ್ಲಿ 'ಜಾಲಂಧರ'ದ ವರೆಗೂ ವಿಸ್ತರಿಸಿತ್ತೆಂದು ಹೇಳಬಹುದು. 'ತ್ರಿಪುರಾದೇವಿ'ಯ ನಿವಾಸಸ್ಥಾನ ವಾದ 'ಶ್ರೀ ನಗರ'ವು ಇದರಲ್ಲಿ ಸೇರಿತ್ತು. ಇದರಿಂದ ಸಿಂಧು, ಗಂಗಾ, ಯಮುನಾ ಮತ್ತು ಸರಸ್ವತಿ (ಇಡಾ, ಪಿಂಗಳಾ ಮತ್ತು ಸುಷುಮ್ನಾ) ಮತ್ತು 'ಬ್ರಹ್ಮಪುತ್ರ' ಅಥವಾ 'ಲೌಹಿತ್ಯ ಪ್ರದೇಶ' (ಲಲಿತಾ, ಲೋಹಿತಾಂಗಿ) ವೈದಿಕತಂತ್ರಗಳ ಮೂಲ ಸ್ಥಾನವಾಗಿತ್ತೆಂದು ಹೇಳಬಹುದು.

ಕಾದಿಮತವು ಕಾಮರೂಪ, ದ್ರಾವಿಡ, ಕೈಕಟ, ಐರಕ, ಭೋಟ, ಚೀಣ, ಮಹಾಚೀಣಾ, ಶಿಲಾಹಟ್ಟ, ಸ್ನೋತ್ಕಲ, ಕಚ್ಛದೇಶಗಳಲ್ಲಿ ವ್ಯಾಪಿಸಿತ್ತು. ಹಾದಿ ಮತವು ಸೌರಾಷ್ಟ್ರ, ಬಂಕ, ವಿದೊ, ವ್ಯೋಂದ, ಮಾತಟ, ಪನಟ, ಗಾಂಧಾರ, ಸೇವರ, ಬನಟ, ತೆಂಕಣ, ಮೈದ, ಪಾರ್ಶ್ವಕಿಕ, ದ್ಯೋರ್ಜಲ, ಯವನ, ಜಾಲ, ಜಾಲಂಧರಾ ಮತ್ತು ಸಲ್ವದೇಶಗಳಲ್ಲಿ ಪ್ರಾಮುಖ್ಯತೆಯನ್ನು ಪಡೆದಿತ್ತು. ಇದರಿಂದ 'ಕಾದಿಮತ'ವು ಭರತಖಂಡದ ಹೊರಗಡೆ ಪಶ್ಚಿಮದಲ್ಲಿ 'ಐರಕ' (Iraq)ದ ವರೆಗೂ ಉತ್ತರದಲ್ಲಿ ಚೀಣಾ, ಮಹಾಚೀಣಾ ಮತ್ತು ಬ್ಯಾಕ್ಟ್ರಿಯಾ ದೇಶಗಳ ವರೆಗೂ ಹರಡಿತ್ತು. ಹಾದಿಮತವು 'ಮೈದ' (Media) ದಿಂದ ಪಾರ್ಶ್ವಕಿಕ (Persia), ಯವನ (Greece ?) ದೇಶಗಳ ವರೆಗೆ ವಿಸ್ತರಿಸಿತ್ತು. ದಕ್ಷಿಣಭಾರತದಲ್ಲಿ 'ಕಾದಿ ಮತ'ವು 'ದ್ರಾವಿಡ' ಮತ್ತು 'ಶಿಲಾಹಟ್ಟ' (ಶಿಲಾಹಾರ ?) ಪ್ರದೇಶಗಳಲ್ಲಿ ಉತ್ಕರ್ಷವನ್ನು ಪಡೆದಿತ್ತು. ಈ ಉಭಯಮತಗಳೂ ಮಲಯ, ಕುಂತಲ, ಕರ್ಣಾಟ, ಕೊಂಕಣ ದೇಶಗಳಲ್ಲಿ ಅಭಿವೃದ್ಧಿಯನ್ನು ಹೊಂದಿದ್ದುವು. ಹಾದಿಮತವು ಕರ್ಣಾಟ ದಲ್ಲಿ ಪನಟ (ಪುನ್ನಾಟ ?), ಬನಟ (ಬನವಾಸಿ ?), ಮಾಲಟ (?) ದೇಶಗಳಲ್ಲಿ ಕಂಡುಬರುತ್ತಿತ್ತು.

'ಶ್ರೀ ವಿದ್ಯಾರ್ಣವ ತಂತ್ರ'ದಲ್ಲಿ 'ಅಷ್ಟಾಷ್ಟಕನ್ಯಾಸ'ದ ಈ ಕೆಳಗಣ ಎಂಟು ಕ್ಷೇತ್ರ, ಪುರ, ಪೀಠ, ದೇವತೆಗಳು ಹೇಳಲ್ಪಟ್ಟಿವೆ :[11]

---

[11] *Iconography of Sri Vidyarnava Tantra*—Srikantha Sastri.

ಕ್ಷೇತ್ರ	ಪುರ	ಪೀಠ	ದೇವತೆ
ಪ್ರಯಾಗ	ವೇಶಿನೀ	ಕಾಮರೂಪ	ಮಂಗಲಾ
ವಾರಣಾಸಿ	ಶೌಂಡಿನೀ	ಮಲಯಗಿರಿ	ಚಾರಿಕಾ
ಕೌಲಪುರ	ಕೈವರ್ತಿನೀ	ಪೂರ್ಣಗಿರಿ	ಯೋಗೀಶಾ
ಅಟ್ಟಹಾಸ	ಕುಟಿನೀ	ಕುಲಾಂತಕ	ಹರಸಿದ್ಧಾ
ಜಯಂತಿಕಾ	ಗಂಡಕೀ	ಚೌಹಾರ	ಭದ್ರಾ
ಚಾರಿತ್ರಾ	ರಾಜ್ಞೀ	ಜಾಲಂಧರಾ	ಕಿಲಾಕಿಲಾ
ಏಕಾಮ್ರ	ಶಿಲ್ಪಿನೀ	ಉಡ್ಯಾಣ	ಕಾಲರಾತ್ರ
ದೇವಿಕೋಟ	ಸಟೀನಾ	ದೇವಕೋಟ	ವಿಭಾಸಕಾಂಬಾ

ದುರ್ಗಾಪೂಜೆಯಲ್ಲಿ 'ಪೀಠನ್ಯಾಸ'ದ ದೇವಿಯ ಸ್ಥಾನಗಳು ಹೀಗಿವೆ:

ಪೂರ್ವ	ಒಡ್ಯಾಣಪೀಠ	ಮುಂಡೇಶ್ವರನಾಥ	ಮುಂಡಾಂಬಾ
ಆಗ್ನೇಯ	ಮಾತೃಕಾಪೀಠ	ಮಾತೃಕಾಚಕ್ರೇಶ್ವರ	ಮಾತೃಕಾಂಬಾ
ದಕ್ಷಿಣ	ಜಾಲಂಧರಪೀಠ	ಜ್ವಾಲಾಮುಖಾನಾಥ	ಜ್ವಾಲಾಮುಖಾಂಬಾ
ನೈಋತ್ಯ	ಕೋಲಾಪುರಪೀಠ	ಕೋಲಾಪುರೇಶ್ವರ	ಕೋಲಾಂಬಾ
ಪಶ್ಚಿಮ	ಪೂರ್ಣಗಿರಿಪೀಠ	ಪೂರ್ಣೇಶ್ವರನಾಥ	ಪೂರ್ಣಾಂಬಾ
ವಾಯವ್ಯ	ಚೌಹಾರಪೀಠ	ಚೌಹಾರನಾಥ	ಚೌಹಾರಾಂಬಾ
ಉತ್ತರ	ಕೋಲಗಿರಿಪೀಠ	ಕೋಲನಾಥನಾಥ	ಕೋಲಾಂಬಾ
ಈಶಾನ್ಯ	ಕಾಮರೂಪಪೀಠ	ಕಾಮರೂಪನಾಥ	ಕಾಮಾಂಬಾ

ಮಧ್ಯೆ ಯೋಗಿನೀಪೀಠ—ಜಾತವೇದಸಾದೇವಿ

ಪೂರ್ವೋಕ್ತ ಅನೇಕ ಪೀಠಗಳ ನಿರ್ದಿಷ್ಟಸ್ಥಾನವನ್ನು ತಿಳಿಯುವುದು ಅಸಾಧ್ಯವಾದರೂ, ಉತ್ತರಭಾರತ ಎಂದರೆ ಪಂಜಾಬು ಮತ್ತು ಹಿಮಾಲಯ ಪ್ರಾಂತಗಳ ನಡುವಣ ಪ್ರದೇಶವೇ, ಪ್ರಥಮತಃ ರಚಿತವಾದ ತಂತ್ರಗಳ ಮೂಲಸ್ಥಾನವಾಗಿತ್ತೆಂದು ದೃಢವಾಗಿ ಹೇಳಬಹುದು. ಈ ಕೇಂದ್ರದಿಂದ ತಾಂತ್ರಿಕಾಚಾರವು ಎಲ್ಲ ದಿಕ್ಕುಗಳಿಗೂ ವ್ಯಾಪಿಸಿತು. ತತ್ಫಲವಾಗಿ ನೂತನ ದೇವೀಪೀಠಗಳು ಸ್ಥಾಪಿತವಾದುವು.

ಶಾಕ್ತಮತದ ಸ್ವರೂಪ ವಿಶೇಷವನ್ನು ಅಧಿಕಾರಯುತವಾಗಿ ವರ್ಣಿಸಿರುವ ವಿದ್ವಾಂಸರು, ಶಕ್ತ್ಯುಪಾಸನೆಯು ಅನಾರ್ಯ ಸಂಪ್ರದಾಯವೆಂದೂ, ವೇದಗಳಲ್ಲಿ ಇವುಗಳಿಗೆ ಆಧಾರವಿಲ್ಲವೆಂದೂ ಅಭಿಪ್ರಾಯಪಟ್ಟಿದ್ದಾರೆ. ವಿಮರ್ಶಾತ್ಮಕ ದೃಷ್ಟಿಯಿಂದ ಪರಿಶೀಲಿಸಿದರೆ ಇದು ಅಸಾಧುವೆಂಬುದು ಸ್ಫುಟವಾಗುತ್ತದೆ. ವೈದಿಕ ಗ್ರಂಥಗಳಲ್ಲಿ 'ಶಕ್ತಿ' ಎಂಬ ಪ್ರಯೋಗವು ಗೋಚರಿಸುವುದಿಲ್ಲವೆಂದರೆ ಅದನ್ನು ಒಪ್ಪಲೇಬೇಕು. ಆದರೆ ಅನೇಕ ದೇವಿಯರು ವೇದಗಳಲ್ಲಿ ಸ್ವನಾಮಖ್ಯಾತರಾಗಿದ್ದಾ

ರೆಂಬುದು ನಿರ್ವಿವಾದವಾದದ್ದು. ಋಗ್ವೇದ ಸಂಹಿತಾ ಮತ್ತು ಇತರ ಕೃತಿಗಳಲ್ಲಿ ಪುರುಷದೇವತೆಗಳು ಅಗ್ರಗಣ್ಯರಾಗಿದ್ದಾರೆಂಬುದೂ ಸ್ತ್ರೀ ದೇವತೆಗಳ ಸ್ಥಾನವು ಗೌಣವೆಂಬುದೂ ನಿಜ. ಆದರೆ ಇದರಿಂದ ಶಕ್ತ್ಯುಪಾಸನೆಯು ವೈದಿಕವೆಂಬ ಸಿದ್ಧಾಂತಕ್ಕೆ ಚ್ಯುತಿಯಿಲ್ಲ.

ವೇದಯುಗದಲ್ಲಿ ಅಸಂಖ್ಯಾತ ದೇವಿಯರು ಆರಾಧಿಸಲ್ಪಡುತ್ತಿದ್ದರು. ವೇದ ಸ್ತುತರಾದ ಈ ದೇವಿಯರ ಸ್ವರೂಪವನ್ನು ಸೂಕ್ಷ್ಮವಾಗಿ ಪರಿಶೀಲಿಸೋಣ.

(೧) **ಪೃಥ್ವೀ**—ಪ್ರಾಗ್ದ್ರಾವಿಡ ಯುಗದಲ್ಲಿ ಪೃಥ್ವಿಯು ಕೇವಲ 'ಸಸ್ಯಾಭಿಮಾನ' ಹಾಗೂ 'ಫಲಾಭಿಮಾನ' (vegetation and fertility deity) ದೇವತೆಯಾಗಿ ಪರಿಗಣಿಸಲ್ಪಟ್ಟಿದ್ದಳು. ಮೌರ್ಯರ ಕಾಲದ 'ಯೋನಿ'ಗಳು ತಕ್ಷಶಿಲೆಯಲ್ಲಿ ಗೋಚರಕ್ಕೆ ಬಂದಿವೆ. ಈ ಯೋನಿಗಳ ಮಧ್ಯೆ ರಂಧ್ರದಲ್ಲಿ ನಗ್ನಳಾದ ಫಲಾಭಿಮಾನ ದೇವತೆಯ ವಿಗ್ರಹವಿದೆ. ಲೌರಿಯ ನಂದಗಡದ ಕ್ರಿ. ಪೂ. ೯ನೆಯ ಶತಮಾನದ ಅವಶೇಷಗಳಲ್ಲಿ ಸುವರ್ಣದ ಶಕ್ತಿಯ ಮೂರ್ತಿಯು ದೊರೆತಿದೆ.[12]

ವೈದಿಕಯುಗದಲ್ಲಿ ಪೃಥ್ವಿಯು ಕೇವಲ 'ಫಲಾಭಿಮಾನ' ದೇವತೆಯೆಂದು ಮಾತ್ರ ಪರಿಗಣಿತಳಾಗಿರಲಿಲ್ಲ. ಅವಳು 'ರಕ್ಷಾದೇವಿ'ಯೆಂದು ಆರಾಧಿಸಲ್ಪಡುತ್ತಿದ್ದಳು. ಆರ್ಯರು ಜಗತ್ತಿನ ಮಾತಾಪಿತೃಗಳೆಂದು ಸಂಬೋಧಿಸುತ್ತಿದ್ದ 'ದ್ಯಾವಾ ಪೃಥ್ವಿ'ಯರ ಉಲ್ಲೇಖವು ಋಗ್ವೇದದಲ್ಲಿ ಕಂಡುಬರುತ್ತದೆ. 'ದ್ಯೌಸ್' ಅಥವಾ 'ಸ್ವರ್ಗವು', 'ಪೃಥ್ವೀ' ಅಥವಾ 'ಭೂಮಿ'ಯ ಪತಿಯೆಂಬ ಭಾವನೆಯಿದ್ದಿರಬಹುದು. ವೈದಿಕಕಾಲದಲ್ಲಿ ಆರ್ಯನು 'ಪೃಥ್ವಿ'ಯೆಂದರೆ 'ಇಡೀಭೂಮಿ'ಯೆಂಬ ಅಭಿಪ್ರಾಯವನ್ನು ಹೊಂದಿದ್ದನು. ಏಕೆಂದರೆ ಗಿರಿಗಳು ಮತ್ತು ವೃಕ್ಷಗಳು ಆಕೆಯಲ್ಲಿ ಸುಪ್ರತಿಷ್ಠಿತವಾಗಿದ್ದುವು. 'ದೃಢತ್ವ'ವು ಆಕೆಯ ಮುಖ್ಯ ಗುಣ. ಮನುಷ್ಯನು ತನ್ನ ಕ್ಷುತ್ಪಿಪಾಸೆಗಳನ್ನು ಪರಿಹರಿಸಿಕೊಳ್ಳಲು ಆವಶ್ಯಕವಾದ ಧಾನ್ಯಗಳನ್ನೂ ಜಲವನ್ನೂ ಅವಳಿಂದ ಪಡೆಯುತ್ತಾನೆ. ಅವನ ಶರೀರಕಾಂತಿ ಪುಷ್ಟಿಗಳಿಗೆ ಸಹಕಾರಿಯಾದ ದಿವ್ಯಮೂಲಿಕೆಗಳಿಗೂ, ಹಿರಣ್ಯಾದಿ ಮುಂತಾದ ಲೋಹಗಳಿಗೂ ಅವಳು ಆಕರ. ಮೃತನಾದವನು ಪೃಥ್ವೀಮಾತೆಯನ್ನು ಸೇರುತ್ತಾನೆ. ಮನುಷ್ಯನು ಮಣ್ಣಿನಿಂದ ಹುಟ್ಟಿ ಕಡೆಗೆ ಮಣ್ಣನ್ನೇ ಸೇರುವನೆಂಬ ಭಾವವು ಆಗ ರೂಢವಾಗಿತ್ತು. ಇದರಿಂದ ಅವನು ಪೃಥ್ವಿಯನ್ನು ವಾತ್ಸಲ್ಯಯುಕ್ತಳಾದ ಜನನಿಯೆಂದು ಗಣಿಸಿದ್ದನೆಂಬುದು ಸುದೃಢವಾಗುತ್ತದೆ.

ಪೃಥ್ವಿಯ ಉಪಾಸನೆಗೆ ಪ್ರಾಗ್ದ್ರಾವಿಡಯುಗದ ಮಾತೃಪ್ರಧಾನವಾದ

[12] *Mohenjo Daro and Indus Civilisation*—Marshall.

ಕುಟುಂಬ ಪದ್ಧತಿಯನ್ನು ಅನುಸರಿಸುತ್ತಿದ್ದ ಮೂಲನಿವಾಸಿಗಳು ಕಾರಣರಾಗಿದ್ದಿರಬಹುದು. ಮಾತೆಯು ತನ್ನ ಲಾಲನೆಪಾಲನೆಗಳಿಂದ ಮಗುವಿನ ಪ್ರೀತಿ, ವಿಶ್ವಾಸ, ಗೌರವಗಳಿಗೆ ಪಾತ್ರಳಾಗುವಳು. ತತ್ಕಾರಣವಾಗಿಯೇ ವೇದವು ಮೊದಲು 'ಮಾತೃದೇವೋಭವ', ತರುವಾಯ 'ಪಿತೃದೇವೋಭವ' ಎಂದು ವಿಧಿಸುತ್ತದೆ. ಈ ಕಾರಣದಿಂದಲೇ ಈಚಿನ ಕವಿಯು 'ಜನನೀಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂದು ಗಾನಮಾಡಿದನು. ಮಾನವ ಚರಿತ್ರೆಯಲ್ಲಿ ಮಾತೃಪ್ರಧಾನವಾದ ಕುಟುಂಬ ಪದ್ಧತಿಯು ಅಳಿದು ಪಿತೃಪ್ರಧಾನವಾದ ಕುಟುಂಬಗಳು ಪ್ರಬಲಿಸಿದರೂ ಮಾತೃಪೂಜೆಯು ಸ್ಥಿರವಾಗಲು ಇದೇ ಹೇತುವಾಯಿತು.

(೨) **ಉಷಸ್**—ಉಷಾದೇವಿಯು ಪ್ರಾತಃಕಾಲದ ದೇವತೆ. ರಾತ್ರಿಯು, ಅಂಧಕಾರ ಸಮಾಚ್ಛನ್ನವೂ, ಪಾಪಪೂರಿತವೂ ಆದದ್ದು. ದಿವಸದ ಆಗಮನವೂ ರಾತ್ರಿಯ ಲಯವೂ ವೈದಿಕ ಆರ್ಯನಿಗೆ ಉತ್ಸಾಹವನ್ನೂ ಆನಂದವನ್ನೂ ಉಂಟು ಮಾಡುತ್ತಿದ್ದವು. ಇದರಿಂದ ಅವನು ಆಶಾರೂಪಿಣಿಯಾದ ಉಷಸ್ಸಿನ ಕಾಂತಿಯನ್ನು ಕುರಿತು ಹಾಡಿದನು.

ಉಷಸ್ಸು ದ್ಯೌಸಿನ ಪುತ್ರಿ. ಯುವಕನು ತನ್ನ ಪ್ರೇಯಸಿಯನ್ನು ಹಿಂಬಾಲಿಸುವಂತೆ ಸೂರ್ಯನು ರಥಾರೂಢಳಾದ ಅವಳನ್ನು ಅನುಸರಿಸುವನು. ಅವಳ ಆಗಮನದಿಂದ ಸಮಸ್ತ ಪ್ರಾಣಿಗಳೂ ನಿದ್ರೆಯಿಂದ ಎಚ್ಚತ್ತು ಕಾರ್ಯೋನ್ಮುಖವಾಗುವುವು. ಅವಳು ಸಮಸ್ತ ಚರಾಚರ ಪ್ರಾಣಿಗಳಲ್ಲಿಯೂ ನವಚೈತನ್ಯವನ್ನು ತುಂಬುವಳು.

(೩) **ರಾತ್ರಿ**—ರಾತ್ರಿಯು ದ್ಯೌಸಿನ ಮತ್ತೊರ್ವ ಪುತ್ರಿ ಮತ್ತು ಉಷಸ್ಸಿನ ಸಹೋದರಿ. ಗಾಢಾಂಧಕಾರವು ವೈದಿಕ ಆರ್ಯನ ಚಿತ್ತವೃತ್ತಿಗೆ ವಿರುದ್ಧವಾದದ್ದು. ಆದುದರಿಂದ ಅವನು ರಾತ್ರಿಯೆಂದರೆ, ಅಗಣಿತ ತಾರಾಗಣಗಳಿಂದ ಪ್ರಕಾಶಿತವಾದದ್ದೆಂದು ವರ್ಣಿಸಿದನು. ರಾತ್ರಿಯು ಒಂದು ಋಕ್ಕಿನಲ್ಲಿ ಸ್ತುತಳಾಗಿದ್ದಾಳೆ. ಅದರಲ್ಲಿ ಅವಳು ಗೃಹಸ್ಥನನ್ನು ವೃಕ, ಚೋರ ಮತ್ತು ದುಷ್ಟ ಮೃಗಗಳಿಂದ ರಕ್ಷಿಸುವಂತೆ ಪ್ರಾರ್ಥಿಸಲ್ಪಟ್ಟಿದ್ದಾಳೆ.[13]

[13] ರಾತ್ರೀ ವ್ಯಖ್ಯದಾಯತೀ ಪುರುತ್ರಾ ದೇವ್ಯಕ್ಷಭಿಃ | . . . . .
ಜ್ಯೋತಿಷಾ ಬಾಧತೇ ತಮಃ
ನಿರು ಸ್ವಸಾರಮಸ್ಕೃತೋಷಸಂದೇವ್ಯಾಯತೀ | ಅಪೇದು ಹಾಸತೇ ತಮಃ ||
ನಿಗ್ರಾಮಾಸೋ ಅವಿಕ್ಷತ ನಿ ಪದ್ವಂತೋ ನಿ ಪಕ್ಷಿಣಃ | ನಿ ಶ್ಯೇನಾಸಶ್ಚಿದರ್ಥಿನಃ ||
ಯಾವಯಾ ವೃಕ್ಯಂ ವೃಕಂಯುವಯಸ್ತೇನ ಮೂರ್ತ್ಯೇ ಅಥಾನಃ ಸುತರಾ ಭವ ||
. . . . . . .ಅಪ ತೇ ಗಾಃ
ಇವಾಕರಂ ವೃಣೀಷ್ವ ದುಹಿತರ್ದಿವಃ | ರಾತ್ರಿಸ್ತೋಮಂ ನ ಜಿಗ್ಯುಷೇ ||
(R.V. X. 127)

(೪) **ಅದಿತಿ**—ಅದಿತಿಯನ್ನು ಕುರಿತು ಮ್ಯಾಕ್ಡೊನೆಲ್ ಅವರು ಹೀಗೆ ಹೇಳಿದ್ದಾರೆ: "ಭಾರತೀಯ ಮೂಲವುಳ್ಳ ಈ ದೇವಿಯು, ಪ್ರಾಗ್ಭಾರತೀಯ ಯುಗಕ್ಕೆ ಸೇರಿದ ಅವಳ ಕೆಲವು ಪುತ್ರರಿಗಿಂತ ಕಿರಿಯಳು."[14] 'ಅದಿತಿ' ಎಂದರೆ 'ನಿರ್ಬಂಧರಹಿತ'ವಾದದ್ದು ಅಥವಾ 'ಸ್ವಾತಂತ್ರ್ಯಪೂರ್ಣ'ವಾದದ್ದು. 'ಸ್ವಾತಂತ್ರ್ಯ' ಎಂದರೆ ಮ್ಯಾಕ್ಡೊನೆಲ್‌ರವರ ಅಭಿಪ್ರಾಯದಂತೆ ದೈಹಿಕ ಮತ್ತು ಮಾನಸಿಕ ವ್ಯಾಧಿಗಳಿಂದ ಸ್ವಾತಂತ್ರ್ಯ. ಒಬ್ಬ ವ್ಯಕ್ತಿಯು ದೈಹಿಕ ಆಲಸ್ಯಕ್ಕೆ ಗುರಿಯಾಗಿ, ಸರ್ವ ನೀತಿ ವಿರುದ್ಧವಾದ ಪಾಪಾಚರಣೆಯನ್ನು ಮಾಡಬಹುದು. ಇವುಗಳಿಂದ ವಿಮುಕ್ತನಾಗಲು ಅದಿತಿಯನ್ನು ಆರಾಧಿಸಬೇಕು. ಅವಳು ಮತ್ತು ಅವಳ ಪುತ್ರರು ಸ್ವಾತಂತ್ರ್ಯಮೂರ್ತಿಗಳು. ಆದಿತ್ಯರ ಉಪಾಸನೆಯೆಂದರೆ ಅದಿತಿಯ ಉಪಾಸನೆಯೂ ಹೌದು. ಋಗ್ವೇದದಲ್ಲಿ ಅನೇಕ ಋಕ್ಕುಗಳು ಅವಳಿಗೆ ಮೀಸಲಾಗಿವೆ.[15] ಅದಿತಿಯು ತನ್ನ ಪುತ್ರರಿಗಿಂತ ಕಿರಿಯಳೆಂಬ ಮ್ಯಾಕ್ಡೊನೆಲ್‌ರವರ ಹೇಳಿಕೆಯು ಅಯುಕ್ತವಾದುದು. ಆದಿತ್ಯರು ಪ್ರಥಮತಃ ಬೇರೆ ಬೇರೆ ಹೆಸರುಗಳಿಂದ ಪ್ರಸಿದ್ಧರಾಗಿದ್ದು, ತರುವಾಯ ಆಕೆಯ ಪುತ್ರರೆಂದು ಭಾವಿತರಾಗಿರಬಹುದು. ಅವರು ತಮ್ಮ ಮಾತೆಯ ಶಕ್ತಿ ಕೀರ್ತಿಗಳನ್ನು ಸಂಪೂರ್ಣವಾಗಿ ಸೆಳೆದುಕೊಂಡರು. ಅಥರ್ವವೇದದಲ್ಲಿ ಅದಿತಿಯು ಶೂರಪುತ್ರರ ಜನನಿಯೆಂದು ಉಕ್ತವಾಗಿದೆ.[16]

(೫) **ವಾಕ್**—ವಾಕ್ಕಿನ ಅಧಿದೇವತೆ ದೇವತೆಗಳಿಗೆ ಅವರ ಕಷ್ಟತರವಾದ ಉದ್ಯಮಗಳಲ್ಲಿ ಸಹಾಯವನ್ನು ನೀಡುವಳು. ವಾಕ್ಕು ಮ್ಯಾಕ್ಡೊನೆಲ್‌ರವರ ಮಾತಿನಲ್ಲಿ ಹೇಳುವುದಾದರೆ 'ನಾಸ್ತಿಕನಿಗೆ ವಿರುದ್ಧವಾಗಿ ರುದ್ರನ ಧನುಸ್ಸನ್ನು ಬಗ್ಗಿಸುವಳು (ಅಹಂ ರುದ್ರಾಯಧನುರಾತನೋಮಿ ಬ್ರಹ್ಮದ್ವಿಷಾ ಶರವೇ ಹಂತವಾಉ).

(೬) **ಇತರ ದೇವಿಯರು**—'ಪುರಂಧಿ'ಯು ಸಂಪತ್ತು ಮತ್ತು ಐಶ್ವರ್ಯಗಳ ಅಧಿದೇವತೆ (ಅವೆಸ್ತಾದ 'ಪರೇಂದಿ?') 'ಧಿಷಣಾ' ಸಂಪತ್ಕರೀದೇವತಾ, 'ಇಳಾ' ಪುಷ್ಟಿದಾತೆ, ಕ್ಷೀರ ಮತ್ತು ನವನೀತಗಳ ಅರ್ಪಣೆಯಿಂದ ಪ್ರೀತಳಾಗುವಳು, 'ಯೂಥಮುಖ್ಯ'ಳೆಂದು ಸಂಬೋಧಿಸಲ್ಪಟ್ಟಿದ್ದಾಳೆ. ಇವರಲ್ಲದೆ ಶ್ರೀ, ರಾಕಾ,

---

14 *A History of Sanskrit Literature*—Macdonel.

15 ಅದಿತಿರ್ದ್ಯೌರದಿತಿ ರಂತರಿಕ್ಷಂ
ಅದಿತಿರ್ಮಾತಾ ಸ ಪಿತಾ ಸ ಪುತ್ರಃ
ವಿಶ್ವೇದೇವಾ ಅದಿತಿಃ ಪಂಚಜನಾಃ
ಅದಿತಿರ್ಜಾತಂ ಅದಿತಿರ್ಜನಿತ್ವಂ

16 ಹುವೇ ದೇವೀಮದಿತಿಂ ಶೂರಪುತ್ರಾಂ ಸಜಾತಾನಾನಾಂಮಧ್ಯಮೇಷ್ಠಾ ಯಥಾಸಾನಿ ||
(A.V. iii. 8)

ಸಿನೀವಾಲೀ, ಪೃಶ್ನಿ, ಬೃಹದ್ದೇವಾ ಮುಂತಾದ ದೇವಿಯರು ಉಕ್ತರಾಗಿದ್ದಾರೆ. ಇದರಿಂದ ಶಕ್ತ್ಯುಪಾಸನೆಯು ವೈದಿಕವೆಂದು ನಿರ್ವಿವಾದವಾಗಿ ಹೇಳಬಹುದು.

ವೈದಿಕ ಗ್ರಂಥಗಳ ಪೈಕಿ ಸಮಯಮಾರ್ಗವಾದ 'ಶ್ರೀವಿದ್ಯೆ'ಯು ತೈತ್ತಿರೀಯ ಆರಣ್ಯಕದ ಒಂದು ಇಡೀ ಪ್ರಪಾಠಕದಲ್ಲಿ ಪ್ರತಿಪಾದಿತವಾಗಿದೆ. ಈ ಪ್ರಪಾಠಕವು ನಾರಾಯಣಕೃತವಾಗಿದ್ದು, 'ಯಾಜ್ಞಿಕೀ ಉಪನಿಷದ್' ಎಂಬ ಅಪರ ನಾಮಧೇಯವನ್ನು ಹೊಂದಿದೆ. ಇದನ್ನು ವಿದ್ಯಾರಣ್ಯರು 'ಖಿಲ'ವೆಂದು ಪರಿಗಣಿಸಿದ್ದರೂ, ಈ ಭಾಗವು ವೇದದ ನಿಜವಾದ ಒಂದು ಅಂಗವಾಗಿದ್ದು ಕ್ರಮವಾಗಿ ಗುರುವಿನಿಂದ ಶಿಷ್ಯನಿಗೆ ದತ್ತವಾಗಿದೆ.[17] ಈ ಪ್ರಪಾಠಕವನ್ನು ಈಗ ಸೂಕ್ಷ್ಮದೃಷ್ಟಿಯಿಂದ ಪರಿಶೀಲಿಸೋಣ.

ಮೊದಲು 'ಪಂಚಗಾಯತ್ರಿ'ಯು ಉಕ್ತವಾಗಿದೆ. ಅವುಗಳ ಪೈಕಿ 'ದುರ್ಗಾಗಾಯತ್ರಿ'ಯು ನಾಲ್ಕನೆಯದು. ಅವಳು ಕಾತ್ಯಾಯನನ ಮಗಳಾದ 'ಕನ್ಯಾಕುಮಾರಿ' ಅಲ್ಲದೆ ಅಗ್ನಿದುರ್ಗಳ 'ಒಂದು ವಿಶೇಷರೂಪ'.

> ಕಾತ್ಯಾಯನಾಯ ವಿದ್ಮಹೇ ಕನ್ಯಕುಮಾರಿ ಧೀಮಹಿ | ತನ್ನೋ ದುರ್ಗಿಃ
> ಪ್ರಚೋದಯಾತ್ ||[18]

ಎರಡನೆಯದಾಗಿ 'ದೂರ್ವಾತರು'ವು 'ದೇವಿ'ಯೆಂದು ಹೇಳಲ್ಪಟ್ಟಿದೆ: ಇದನ್ನು 'ದುಸ್ಸ್ವಪ್ನನಾಶ'ಕ್ಕಾಗಿ ಶಿರಸ್ಸಿನಲ್ಲಿ ಧಾರಣೆಮಾಡಿ ಸ್ನಾನಮಾಡುತ್ತಾರೆ.

> ಸಹಸ್ರಪರಮಾ ದೇವೀ ಶತಮೂಲಾ ಶತಾಂಕುರಾ
> ಸರ್ವಂ ಹರತು ಮೇಪಾಪಂ ದೂರ್ವಾ ದುಸ್ಸ್ವಪ್ನನಾಶಿನೀ

ಮೂರನೆಯದಾಗಿ ದೇವಿಯು 'ಮಹೀ' ಮುಂತಾದ ಅನೇಕ ನಾಮಗಳಿಂದ ಸಂಬೋಧಿಸಲ್ಪಟ್ಟಿದ್ದಾಳೆ. ಅವಳು ಪಾಪಗಳನ್ನು ನಾಶಮಾಡಿ, ದೀರ್ಘಾಯುಷ್ಯವನ್ನು ಕೊಡುವಂತೆ ಪ್ರಾರ್ಥಿಸಲ್ಪಟ್ಟಿದ್ದಾಳೆ:

> ಅಶ್ವಕ್ರಾಂತೇ ರಥಕ್ರಾಂತೇ ವಿಷ್ಣುಕ್ರಾಂತೇ ವಸುಂಧರಾ
> ಶಿರಸಾಧಾರಿತಾ ದೇವಿ ರಕ್ಷಸ್ವಮಾಂ ಪದೇ ಪದೇ
> ಉದ್ಧೃತಾಸಿ ವರಾಹೇಣ ಕೃಷ್ಣೇನ ಶತಬಾಹುನಾ
> ಭೂಮಿರ್ಧೇನು ರ್ಧರಣೀ ಲೋಕಧಾರಿಣೀ

---

[17] *Taittiriya Aranyaka*—Mysore Edn: Prapathaka 6.

[18] *Tripuratapini Upanishad* gives the 4th pāda of the *Gayatri Mantra* (*paro rajase savadom*) hitherto unknown to us (*Sakta Upanishads*—Mahadeva Sastry—Adyar, 1925.)

ಮೃತ್ತಿಕೇ ಹನಮೇಪಾಪಂ ಯನ್ಮಯಾ ದುಷ್ಕೃತಂ ಕೃತಂ
ತ್ವಯಾಹತೇನ ಪಾಪೇನ ಜೀವಾಮಿ ಶರದಃ ಶತಮ್
ಮೃತ್ತಿಕೇ ದೇಹಿ ಮೇ ಪುಷ್ಟಿಂ ತ್ವಯಿ ಸರ್ವಂ ಪ್ರತಿಷ್ಠಿತಮ್
ಗಂಧದ್ವಾರಾಂ ದುರಾಧರ್ಷಾಂ ನಿತ್ಯಾಪುಷ್ಟಾಂ ಕರೀಷಿಣೀಮ್
ಈಶ್ವರೀಂ ಸರ್ವಭೂತಾನಾಂ ತಾಮಿಹೋಪಹ್ವಯೇ ಶ್ರಿಯಮ್

ನಾಲ್ಕನೆಯದಾಗಿ, 'ವಾರುಣಿ'ಯು ಈ 'ಪ್ರಶ್ನ'ದಲ್ಲಿ ಆವಾಹಿತಳಾಗಿದ್ದಾಳೆ. ಇಂದ್ರ, ಅಗ್ನಿ, ಬೃಹಸ್ಪತಿ ಮುಂತಾದವರು ಸ್ತುತಿಸಲ್ಪಟ್ಟಿರುವ ಒಂದು ಋಕ್ಕಿನಲ್ಲಿ 'ವರುಣ' ಹಾಗೂ 'ವಾರುಣಿ'ಯರ ಹೆಸರು ಕಂಡುಬರುತ್ತದೆ. ಇತರ ದೇವತೆಗಳ ಪತ್ನಿಯರ ಹೆಸರು ಹೇಳಲ್ಪಟ್ಟಿಲ್ಲ. ಇದು 'ವಾರುಣಿ'ಯ ಪಾರಮ್ಯವನ್ನು ಸೂಚಿಸುತ್ತದೆ.

ಹಿರಣ್ಯಶೃಂಗಂ ವರುಣಂ ಪ್ರಪದ್ಯೇ ತೀರ್ಥಂ ಮೇ ದೇಹಿ ಯಾಚಿತಃ . . . . . .
ತನ್ನ ಇಂದ್ರೋ ವರುಣೋ ಬೃಹಸ್ಪತಿಃ ಸವಿತಾ ಚ ಪುನಂತು ಪುನಃ ಪುನಃ
ನಮೋಽಗ್ನಯೇಽಪ್ಸುಮತೇ ನಮ ಇಂದ್ರಾಯ ನಮೋ ವರುಣಾಯ
ನಮೋ ವಾರುಣ್ಯೈ ನಮೋಽದ್ಭ್ಯಃ . . . . . .

ಐದನೆಯದಾಗಿ, ಪಂಚದುರ್ಗಾಮಂತ್ರಗಳು ಹೇಳಲ್ಪಟ್ಟಿವೆ. ದುರ್ಗಿಯು ಚೋರರು, ದುಷ್ಟಮೃಗಗಳು, ಭೂತಪ್ರೇತಾದಿಗಳು ಮುಂತಾದುವುಗಳಿಂದ ಪ್ರಾಪ್ತವಾದ ಭಯವನ್ನು ನಾಶಗೊಳಿಸುವಂತೆ ಪ್ರಾರ್ಥಿಸಲ್ಪಟ್ಟಿದ್ದಾಳೆ. ದುರ್ಗಿಯು ಅಗ್ನಿಯ ಒಂದು ರೂಪವೆಂದು ಹೇಳಲ್ಪಟ್ಟಿದೆ:

ಜಾತವೇದಸೇ ಸುನವಾಮ ಸೋಮಮರಾತೀಯತೋ ನಿದಹಾತಿ ವೇದಃ |
ಸನಃ ಪರ್ಷದತಿ ದುರ್ಗಾಣಿ ವಿಶ್ವಾನಾವೇವ ಸಿಂಧುಂ
ದುರಿತಾತ್ಯಗ್ನಿಃ | ತಾಮಗ್ನಿವರ್ಣಾಂ ತಪಸಾ ಜ್ವಲಂತೀಂ
ವೈರೋಚನೀಂ ಕರ್ಮಫಲೇಷು ಜುಷ್ಟಾಮ್ |
ದುರ್ಗಾಂ ದೇವೀಂ ಶರಣಮಹಂ ಪ್ರಪದ್ಯೇ ಸುತರಸಿ ತರಸೇ ನಮಃ ||

ಆರನೆಯದಾಗಿ, ಹನ್ನೊಂದು ಮತ್ತು ಹನ್ನೆರಡನೆಯ 'ಅನುವಾಕ'ಗಳಲ್ಲಿ ಬ್ರಹ್ಮನ 'ಉಮಾಮಹೇಶ್ವರ' ಸ್ವರೂಪವು ಉಕ್ತವಾಗಿದೆ:

ಋತಂ ಸತ್ಯಂ ಪರಂಬ್ರಹ್ಮ ಪುರುಷಂ ಕೃಷ್ಣಪಿಂಗಳಂ |
ಊರ್ಧ್ವರೇತಮ್‌ವಿರೂಪಾಕ್ಷಂ ವಿಶ್ವರೂಪಾಯ ವೈ ನಮಃ ||

ಸತ್ಯವು ಎರಡು ವಿಧವಾಗಿದೆ: 'ವ್ಯಾವಹಾರಿಕ' ಹಿರಣ್ಯಗರ್ಭರೂಪದಲ್ಲಿ, 'ಋತಂ ಸತ್ಯಂ' ಎಂಬಲ್ಲಿರುವಂತೆ 'ಪಾರಮಾರ್ಥಿಕ'. ನಿದರ್ಶನಕ್ಕಾಗಿ ಅನುವಾಕ ೧ಲ ರಲ್ಲಿ

‘ ಹಿರಣ್ಯಪತಿ, ಅಂಬಿಕಾಪತಿ, ಉಮಾಪತಿ ’ ಇವರ ಉಲ್ಲೇಖವಿದೆ. ‘ ಅಂಬಯತಿ ’ ಎಂಬುದರಿಂದ ಜನ್ಯವಾದ ‘ ಅಂಬಾ ’ ಎಂದರೆ ‘ ಜಗತ್ಸೃಷ್ಟಿ.’ ‘ ಉಮಾ ’ ಎಂಬುದು ‘ ಲಯಸೂಚಕ ’ವಾಗಿದೆ.

> ನಮೋ ಹಿರಣ್ಯಬಾಹವೇ . . . ಹಿರಣ್ಯಪತಯೇಽಂಬಿಕಾಪತಯ ಉಮಾಪತಯೇ
> ನಮೋನಮಃ |
> ಪ್ರಪಂಚದಶಾಯಾಂ ಅಂಬಿಕಾ ದೇವೀ ಭವತಿ | ಪ್ರಪಂಚವಿಲಯೇತು
> ಪರಶಕ್ತಿರೂಪೇಣ ಸ್ಥಿತಾ ಪ್ರಣವಪರ್ಯಾಯೇಣ ಉಮಾಶಬ್ದೇನೋಚ್ಯತೇ |

ಏಳನೆಯದಾಗಿ, ಸರ್ವಭೂತಮಾತೆಯಾದ ಅದಿತಿಯು ‘ ಪೃಥ್ವಿ ’ಯೆಂದು ಪ್ರಶಂಸಿಸಲ್ಪಟ್ಟಿದ್ದಾಳೆ :

> ಅದಿತಿರ್ದೇವಾ ಗಂಧರ್ವಾ ಮನುಷ್ಯಾಃ ಪಿತರೋಽಸುರಸ್ತೇಷಾಂ
> ಸರ್ವಭೂತಾನಾಂ ಮಾತಾ ಮೇದಿನೀ ಮಹತೀ ಮಹೀ ಸಾವಿತ್ರೀ
> ಗಾಯತ್ರೀ ಜಗತ್ಯುರ್ವೀ ಪೃಥ್ವೀ ಬಹುಲಾ ವಿಶ್ವಾಭೂತಾ
> ಕತಮಾ ಕಾಯಾ ಸಾ ಸತ್ಯೇತ್ಯಮೃತೇತಿ ವಸಿಷ್ಠಃ |

ಎಂಟನೆಯದಾಗಿ, ಅನುವಾಕ ೨೬ರಲ್ಲಿ ವಿಖ್ಯಾತವಾದ ‘ ಗಾಯತ್ರಿ ’ಯು ಗೋಚರಿಸುತ್ತದೆ.

ಒಂಬತ್ತನೆಯದಾಗಿ, ದೇವಿಯು ‘ ಮೇಧಾ, ವಿಶ್ವಾಚೀ, ಭದ್ರಾ, ಸುಮನಸ್ಯಮಾನಾ ’ ಮುಂತಾದ ಶಬ್ದಗಳಿಂದ ಸ್ತುತಿಸಲ್ಪಟ್ಟಿದ್ದಾಳೆ. ಅನುವಾಕ ೪೦ ಮತ್ತು ೪೭ರಲ್ಲಿ ‘ ಸರಸ್ವತಿ ’ ಮತ್ತು ‘ ಸುರಭಿ ’ಯರ ಉಲ್ಲೇಖವಿದೆ.

ಪೂರ್ವೋಕ್ತ ವಿವರಗಳಿಂದ ‘ ಸಮಯಮಾರ್ಗ ’ದ ಮೂಲವು ವೈದಿಕಸಾಹಿತ್ಯದಲ್ಲಿಯೇ ಗೋಚರಿಸುವುದೆಂಬುದೂ, ಆರಣ್ಯಕಗಳ ರಚನೆಗೆ ಹಿಂದೆಯೇ ಜನಪ್ರಿಯವಾಗಿತ್ತೆಂಬುದೂ ಪ್ರಮಾಣಪೂರ್ವಕವಾಗಿ ದೃಢಪಟ್ಟಹಾಗಾಯಿತು.

ಶಾಕ್ತಸಿದ್ಧಾಂತವು ವೈದಿಕವೆಂಬುದಕ್ಕೂ, ಅದ್ವೈತವಾದವೆಂಬುದಕ್ಕೂ ಕೆಲವು ಪ್ರಮಾಣಗಳಿವೆ. ‘ ವೇದ ’ವೆಂದರೆ, ಚತುರ್ವೇದಗಳು ಮತ್ತು ಅಥರ್ವಣದ ‘ ಉತ್ತರಕಾಂಡ ’ವಾದ ‘ ಸೌಭಾಗ್ಯ ’ ಮತ್ತು ಅದೇ ಹೆಸರಿನ ‘ ಉಪನಿಷತ್ತು.’ ಸರ್ವವಿದ್ಯಾಸಿದ್ಧ ಸರ್ವಾನಂದನಾಥನ ‘ ಸರ್ವೋಲ್ಲಾಸ ’ವೆಂಬ ‘ ತಾಂತ್ರಿಕ ಸಂಗ್ರಹ ’ದಲ್ಲಿ ‘ ನಿಗಮ ’ವು ‘ ಆಗಮ ’ದಿಂದ ಜನ್ಯವಾಯಿತೆಂಬುದಕ್ಕೆ ಪ್ರಮಾಣಗಳು ಉದ್ಧೃತವಾಗಿವೆ. ‘ ವೇದ ’ಗಳು ‘ ಯಾಮಳ ’ಗಳಿಂದ ಜನ್ಯವಾದುವೆಂದೂ ‘ ನಾರಾಯಣೀಯತಂತ್ರ ’ದ ಈ ಶ್ಲೋಕವು ತಿಳಿಸುತ್ತದೆ :

ಬ್ರಹ್ಮಯಾಮಳ ಸಂಭೂತಂ ಸಾಮವೇದಮತಂ ಶಿವೇ
ರುದ್ರಯಾಮಳ ಸಂಜಾತಃ ಋಗ್ವೇದಃ ಪರಮೋಮಹಾನ್
ವಿಷ್ಣುಯಾಮಳ ಸಂಭೂತಃ ಯಜುರ್ವೇದಃ ಕುಲೇಶ್ವರೀ
ಶಕ್ತಿಯಾಮಳ ಸಂಭೂತಂ ಅಥರ್ವ ಪರಮಂ ಮಹತ್

ವೇದವು 'ಪರಾನುಭವ.' ಬ್ರಹ್ಮನು ಜ್ಞಾನಸ್ವರೂಪಿ. ಜಗತ್ತು ಅನಂತ ಬ್ರಹ್ಮವಾರಿಧಿಯ ಕೇವಲ ವೀಚಿಮಾತ್ರ. ಇದರಿಂದಲೇ 'ತ್ರಿಶತೀಭಾಷ್ಯ'ದಲ್ಲಿ ದೇವಿಯನ್ನು ಕುರಿತು ಹೀಗೆ ಹೇಳಲ್ಪಟ್ಟಿದೆ.

ವೇದಾಂತ ಮಹಾವಾಕ್ಯಜಸ್ಯ ಸಾಕ್ಷಾತ್ಕಾರರೂಪಾ ಬ್ರಹ್ಮವಿದ್ಯಾ

ದೇವಿಯು ವೇದಾಂತ ಮಹಾವಾಕ್ಯಗಳಾದ 'ತತ್ವಮಸಿ, ಅಹಂಬ್ರಹ್ಮಾಸ್ಮಿ' ಎಂಬುವುಗಳಿಂದ ಉದ್ಭೂತವಾದ ಬ್ರಹ್ಮವಿದ್ಯೆಯ ಸಾಕ್ಷಾತ್ಕಾರರೂಪ. ಎಂದರೆ ಆತ್ಮಜ್ಞಾನವು ಸ್ವಪ್ರಕಾಶವೂ, ಸರ್ವಜ್ಞಾನ ಮೂಲವೂ, ಪ್ರಮಾತೃ ಪ್ರಮಾಣಾತೀತವೂ ಆದದ್ದು. ಅದು 'ಸ್ವಾನುಭವ.' ಶ್ರೀ ಶಂಕರರು ಹೇಳುವಂತೆ ಮಿಥ್ಯಾಜ್ಞಾನದ ಲಯದಿಂದ, ಈ ಸತ್ಯಜ್ಞಾನವು ಶ್ರುತಿಯಿಂದ ಉದ್ಭೂತವಾಗುತ್ತದೆ.

'ಪ್ರಪಂಚಸಾರ'ದಲ್ಲಿ (ch. XXIX, ಕುಲಾರ್ಣವ, ch. I, Vs 6-7) ಪರಮಾತ್ಮನು 'ನಿರ್ಗುಣ'ನೆಂದೂ, 'ಸಚ್ಚಿದಾನಂದ'ನೆಂದೂ ಹೇಳಲ್ಪಟ್ಟಿದೆ. 'ಕುಲಾರ್ಣವ'ದಲ್ಲಿ 'ಶಿವನು ಪರಬ್ರಹ್ಮ, ಸರ್ವಜ್ಞ, ಸರ್ವಸೃಷ್ಟಿಕರ್ತ'ನೆಂದೂ ಹೇಳಲ್ಪಟ್ಟಿದೆ. ಅವನು 'ನಿಷ್ಕಳಂಕ, ಸರ್ವವಿಭು, ಅದ್ವಯ, ಪರಂಜ್ಯೋತಿ, ನಿರ್ವಿಕಾರ, ಅನಾದಿ, ಮಧ್ಯಾಂತರಹಿತ, ನಿರ್ಗುಣ, ಪರಾತ್ಪರ, ನಿಷ್ಕಲ, ನಿರ್ಮಲ, ಅರೂಪ, ಅಕ್ಷರ, ವ್ಯೋಮಸನ್ನಿಭ, ಸ್ವಯಂಜ್ಯೋತಿ.' ತತ್ವವು ವಾಙ್ಮಯಾತೀತವೂ, ಭಾವನಾಗಮ್ಯವೂ ಆದದ್ದು (ಕುಲಾರ್ಣವ I. 6-8 ; III. 92-93 ; IX-7). ಈಶ್ವರ ರೂಪದಲ್ಲಿ ಅವನು 'ಸರ್ವಜ್ಞ' ಮತ್ತು 'ವಿಶ್ವಾತ್ಮ'; ಅವನ ದೇಹವು 'ಶುದ್ಧಸತ್ವಮಯ'ವಾದದ್ದು. ಇದರಿಂದ ತಂತ್ರಗಳು ವೇದಾರ್ಥವನ್ನೇ ಉಪಬೃಂಹಣಮಾಡುವುವು. ತಿಲವನ್ನು ತೈಲವು ಆವರಿಸಿರುವಂತೆ ಬ್ರಹ್ಮವು ವಿಶ್ವವನ್ನು ಅನಂತವಾಗಿ ವ್ಯಾಪಿಸಿದೆ (ಪ್ರಪಂಚಸಾರ, XXIX). ಬ್ರಹ್ಮನು 'ಪರಬ್ರಹ್ಮ' (ನಿರ್ಗುಣ, ನಿಷ್ಕಲ) ಮತ್ತು 'ಶಬ್ದಬ್ರಹ್ಮ' (ಸಗುಣ, ಸಕಲ) ಎಂಬ ರೂಪದ್ವಯಗಳನ್ನು ಹೊಂದಿದ್ದಾನೆ. 'ಕುಲಾರ್ಣವ'ದಲ್ಲಿ ಹೀಗೆ ಉಕ್ತವಾಗಿದೆ: 'ಶಬ್ದಬ್ರಹ್ಮ ಪರಬ್ರಹ್ಮ ಭೇದೇನ ಬ್ರಹ್ಮೋ ದ್ವೈವಿಧ್ಯಂ ಉಕ್ತಂ.' ಅದೇ ತಂತ್ರದಲ್ಲಿ ಜೀವನು ಪಾಶಬದ್ಧನೆಂದೂ, ಸದಾಶಿವನು ಪಾಶಮುಕ್ತನೆಂದೂ ಹೇಳಲ್ಪಟ್ಟಿದೆ (ಪಾಶಬದ್ಧೋ ಭವೇಜ್ಜೀವಃ ಪಾಶಮುಕ್ತಃ ಸದಾಶಿವಃ. IX. 42). 'ಪ್ರಾಣತೋಷಿಣಿ'ಯ ಕರ್ತನು

ಇದನ್ನು ಉದ್ಧರಿಸಿ ಹೀಗೆ ಹೇಳಿದ್ದಾನೆ: 'ಇತಿ ಶಿವಜೀವಯೋರೈಕ್ಯಂ ಉಕ್ತಂ'. ಶಾಕ್ತತಂತ್ರವು 'ಅದ್ವೈತವಾದಃ.' ಏಕೆಂದರೆ ಅದು ಜೀವಾತ್ಮಪರಮಾತ್ಮರ ಅಭೇದವನ್ನು ಪುಷ್ಟೀಕರಿಸುತ್ತದೆ. ವೇದಾಂತ ಮಹಾವಾಕ್ಯಗಳಾದ 'ತತ್ವಮಸಿ, ಅಹಂ ಬ್ರಹ್ಮಾಸ್ಮಿ, ಸೋಽಹಂ' ಎಂಬುವುಗಳ ತಾಂತ್ರಿಕರೂಪ 'ಹ್ರೀಂ, ಕುಂಡಲೀ ಮತ್ತು ಹಂಸ.' 'ಯ' ಸೂಕ್ಷ್ಮಸೋಽಹಂ (ಪ್ರಪಂಚಸಾರ, XXIV; ಜ್ಞಾನಾರ್ಣವ. XXI), 'ಬ್ರಹ್ಮಾಸ್ಮಿ (ಕುಲಾರ್ಣವ, IX. 32). 'ಮಹಾನಿರ್ವಾಣ ತಂತ್ರ'ದ ಪ್ರಕಾರ ತಾಂತ್ರಿಕ ಕುಲಾಚಾರದ ಚರಮಧ್ಯೇಯ ಹಾಗೂ ಗಂತವ್ಯ ಲಕ್ಷ್ಯ 'ಸರ್ವಂ ಖಲ್ವಿದಂ ಬ್ರಹ್ಮ' (VII. 98). ಇದೇ 'ಪರಾನುಭವ' ಅಥವಾ 'ಪಂಚಮತತ್ವ' (ಪ್ರಪಂಚಸಾರ) 'ಜೀವಬ್ರಹ್ಮರ ಐಕ್ಯವೇ ಮೋಕ್ಷ.' 'ಕುಲಾರ್ಣವ'ವು ಶಿವನು ಅದ್ವೈತವನ್ನು ಕುರಿತು ಹೇಳುತ್ತಾನೆಂದು ತಿಳಿಸುತ್ತದೆ (ಅದ್ವೈತಂತು ಶಿವೇನೋಕ್ತಂ). ಸಾಧಕನು 'ದ್ವೈತಹೀನ'ನಾಗಿರಬೇಕೆಂದು 'ಗಾಂಧರ್ವ ತಂತ್ರ'ವು ವಿಧಿಸುತ್ತದೆ. "ಬೌದ್ಧಮತವನ್ನು ರೂಢಮೂಲವಾಗಿ ನಾಶಗೊಳಿಸಲು ಶಿವನೇ ಶಂಕರಾಚಾರ್ಯರ ರೂಪಿನಲ್ಲಿ ಅವತರಿಸಿದ"ನೆಂದು "ಸಮ್ಮೋಹನತಂತ್ರ"ವು ತಿಳಿಸುತ್ತದೆ. ಕೌಲಾಚಾರ್ಯನು ಪೂರ್ಣ ವೇದಾಂತಿಯಾಗಿರಬೇಕು. 'ಕುಲಾರ್ಣವತಂತ್ರ'ದಲ್ಲಿ ಶಿವನು ಹೀಗೆ ಹೇಳಿದ್ದಾನೆ: 'ಕೆಲವರು ದ್ವೈತಾಪೇಕ್ಷಿಗಳು; ಕೆಲವರು ಅದ್ವೈತಾಪೇಕ್ಷಿಗಳು. ಆದರೆ ಸತ್ಯವು ದ್ವೈತಾದ್ವೈತವಿವರ್ಜಿತವಾದದ್ದು.' ಜ್ಞಾನಿಯು ವೇದಾಂತದ ತರ್ಕವಿತರ್ಕಗಳಿಂದ ದೂರವಾಗಿರಬೇಕು.

ಅದ್ವೈತವೇದಾಂತವು ಶಾಕ್ತಸಾಧಕನ ಪ್ರಾಣ ಮತ್ತು ನಿತ್ಯಾನುಸಂಧಾನ. ಅವನು ಬ್ರಹ್ಮಮುಹೂರ್ತದಲ್ಲಿ ಎದ್ದು ಹೀಗೆ ಧ್ಯಾನಿಸಬೇಕು:

> ಅಹಂ ದೇವಿ ನಚಾನ್ಯೋಽಸ್ಮಿ ಬ್ರಹ್ಮೈವಾಹಂ ನಶೋಕಭಾಕ್
> ಸಚ್ಚಿದಾನಂದ ರೂಪೋಽಹಂ ನಿತ್ಯಮುಕ್ತಸ್ವಭಾವವಾನ್

ಪುನಃ ಮಧ್ಯಾಹ್ನ 'ಪೂಜಾಸನ'ದಲ್ಲಿ ಕುಳಿತು, 'ಭೂತಶುದ್ಧಿ'ಕಾಲದಲ್ಲಿ, ಪರಮಾತ್ಮನಲ್ಲಿ 'ತತ್ವ'ಗಳ ಐಕ್ಯವನ್ನು ಕುರಿತು ಧ್ಯಾನಿಸಬೇಕು. ಪರಮಾತ್ಮ ಜೀವಾತ್ಮರ ಅಭೇದವನ್ನು ಅರಿತವನಾಗಿ 'ಸೋಽಹಂ' ಎಂದು ಪುರಶ್ಚರಣೆಮಾಡಬೇಕು. ಪುನಃ ಸಂಧ್ಯಾಕರ್ಮಗಳನಂತರ ತನ್ನನ್ನು 'ಅಖಿಲಾತ್ಮ' ಮತ್ತು 'ಸಚ್ಚಿದಾನಂದ'ನೆಂದು ಭಾವಿಸಬೇಕು.

ಗಂಧರ್ವತಂತ್ರವು ಹೀಗೆ ತಿಳಿಸುತ್ತದೆ.

> 'ಗುರೂನ್ನತ್ವಾವಿಧಾನೇನ ಸೋಽಹಂ ಇತಿ ಪುರೋಗತಃ
> ಐಕ್ಯಂ ಸಂಭಾವಯೇತ್ ಧೀಮಾನ್ ಜೀವಸ್ಯ ಬ್ರಹ್ಮಣೋಪಿ ಚ.'

'ಕಾಳಿಕಾತಂತ್ರ'ದಲ್ಲಿ ಹೀಗೆ ಉಕ್ತವಾಗಿದೆ. ಈ ರೀತಿಯಲ್ಲಿ ಸಾಧಕನು 'ಅಹಂ ಬ್ರಹ್ಮಾಸ್ಮಿ' ಎಂದು ಚಿಂತಿಸುತ್ತಾ, ದೇವಿಯನ್ನು ತನ್ನ ಆತ್ಮವೆಂದು ಅರಿತು ಪೂಜಿಸಬೇಕು. ಇದರಿಂದಲೇ 'ಕುಬ್ಜಿಕಾತಂತ್ರ'ದಲ್ಲಿ 'ತತ್ವಸಹಿತಾತ್ಮಾನಂ ಏಕೀಭೂತಂ ವಿಚಿಂತಯೇತ್' ಎಂದು ಹೇಳಲ್ಪಟ್ಟಿದೆ.

ಶಾಕ್ತರ ಅದ್ವೈತವಾದವು ಕಷ್ಟವೇದ್ಯವೂ, ತತ್ವಾರ್ಥಗುಂಫಿತವೂ ಆದದ್ದು. ಇಲ್ಲಿ ಅದರ ಸಾರವನ್ನು ಕೊಟ್ಟಿದೆ: ಶಾಕ್ತತಂತ್ರಗಳು ೯೪ ತತ್ವಗಳನ್ನು, ಎಂದರೆ 'ಕಾಮಕಲಾ' ರೂಪಿಗಳಾದ ಅಗ್ನಿ, ಸೂರ್ಯ ಮತ್ತು ಚಂದ್ರರ ೧೦, ೧೨ ಮತ್ತು ೧೬ ಕಲೆಗಳನ್ನೂ, ಸದಾಶಿವನ ೧೯, ಈಶ್ವರನ ೬, ಬ್ರಹ್ಮ, ವಿಷ್ಣು ಮತ್ತು ರುದ್ರರ ೩೦ ಕಲೆಗಳನ್ನೂ ಒಳಗೊಂಡಿವೆ. ೫೧ ಕಲೆಗಳು ಅಥವಾ ೫೧ ಮಾತೃಕೆಗಳು, ೫೧ ವರ್ಣಗಳ ಸೂಕ್ಷ್ಮರೂಪಗಳು. ಇವು ೯೪ ತತ್ವಗಳ ಒಂದು ಭಾಗ. ಬಿಂದುವಿನಿಂದ ಶ್ರೀ ಮಾತೃಕೋತ್ಪತ್ತಿ ಸುಂದರಿಯ ವರೆಗೆ ಕುಂಡಲಿನಿಯ ೫೧ ವಲಯಗಳು. ಇವುಗಳನ್ನು ಮದ್ಯಪಾಯಿಗಳಾದ ಶಾಕ್ತರು ಮದ್ಯಘಟದಲ್ಲಿ ಆವಾಹಿಸಿ ಪೂಜಿಸುತ್ತಾರೆ. ಶಾಕ್ತರಿಗೂ ಶೈವರಿಗೂ ಸಾಧಾರಣವಾದ ೩೬ ತತ್ವಗಳು ಶಾಸ್ತ್ರಗಳಲ್ಲಿ ವಿವರಿಸಲ್ಪಟ್ಟಿವೆ. ಪಂಚತತ್ವಗಳು 'ನಿವೃತ್ತಿ, ಪ್ರತಿಷ್ಠಾ, ವಿದ್ಯಾ, ಶಾಂತಾ, ಶಾಂತ್ಯತೀತ' ಎಂಬ ತತ್ವಗಳಿಗೂ, 'ಕಲಾ, ತತ್ವ, ಭುವನ, ವರ್ಣ, ಪದ ಮತ್ತು ಮಂತ್ರ' ಎಂಬ 'ಪಂಚ ದಶಾಧ್ವ'ಗಳಿಗೂ ಸಾಧಾರಣವಾಗಿವೆ.

ಶಾಕ್ತರ 'ಮಾತೃಭಾವಸಾಧನೆ'ಯು ಮಾಧುರ್ಯ ಹಾಗೂ ವಾತ್ಸಲ್ಯ ಯುಕ್ತವಾದದ್ದು ಆಗಮಗಳಲ್ಲಿ ಉಪದೇಶಿಸಲ್ಪಟ್ಟಿರುವ 'ಮಾಯಾವಾದ'ವು. ಶಂಕರರಿಂದ ಪ್ರತಿಪಾದಿತವಾದ ಪಾರಮಾರ್ಥಿಕದೃಷ್ಟಿಯ 'ಮಾಯಾವಾದ'ವಲ್ಲ. ಅದ್ವೈತವೇದಾಂತದ ಪ್ರಕಾರ ಬ್ರಹ್ಮನು ನಿರ್ಗುಣನೂ, ನಿರಾಕಾರನೂ, ನಿತ್ಯಶುದ್ಧ ಬುದ್ಧಮುಕ್ತನೂ, ನಿಮಿತ್ತಾತೀತನೂ ಆದವನು. ಅವನು ಮಾಯೆಯಿಂದ ಬಂಧಿತವಾಗಿಲ್ಲ. ಮಾಯೆಯು ಬ್ರಹ್ಮನಿಂದ ಭಿನ್ನವಾದುದಲ್ಲ. ಮಾಯೆಗೆ ಸ್ವತಂತ್ರವಾದ ವ್ಯಕ್ತಿತ್ವವಿಲ್ಲ. ಮಾಯೆಯು ಬ್ರಹ್ಮನಲ್ಲಿ ಗೋಚರಿಸುವ ಒಂದು 'ವಿಶೇಷ'ವಲ್ಲ. ಬ್ರಹ್ಮನು 'ಅವಿಶೇಷನು'. ಶಾಕ್ತರಿಗೆ ಮಾಯೆಯು 'ಶಕ್ತಿಸ್ವರೂಪಿಣಿ'. ಶಕ್ತಿಯು 'ಚೈತನ್ಯಸ್ವರೂಪ'ದಲ್ಲಿ ವ್ಯಕ್ತಗೊಳ್ಳುವಳು. ಎಂದರೆ ಅವಳೇ 'ಚೈತನ್ಯಸ್ವರೂಪಿಣಿ'. ಶಾಕ್ತನಿಗೆ ಸಮಸ್ತ ವಸ್ತುಗಳೂ ಜಗನ್ಮಾತೆಯ ಪ್ರತೀಕಗಳು, ಎಲ್ಲವೂ 'ಚೈತನ್ಯ ಸ್ವರೂಪ'.

ಜಗನ್ಮಾತೆಯು ಮೊದಲು 'ಸಾಧಕನ ಜನನಿ'ಯಾಗಿಯೂ, ತರುವಾಯ 'ಪತ್ನಿ'ಯಾಗಿಯೂ ಗೋಚರಿಸುತ್ತಾಳೆ. ಮೂರನೆಯದಾಗಿ, ವೃದ್ಧಾಪ್ಯ, ವ್ಯಾಧಿ

ಮತ್ತು ಮರಣಗಳಲ್ಲಿ 'ಕಾಳಿಕಾ' ರೂಪಿಯಾಗಿ ತೋರ್ಪಡಿಸಿಕೊಳ್ಳುತ್ತಾಳೆ. ಕಾಳಿಕಾ ಅಥವಾ ಚಾಮುಂಡಿಯು 'ಸಂಹಾರ ಶಕ್ತಿ'.

'ಪಂಚತತ್ವ' ಅಥವಾ 'ಮಕಾರ'ಗಳು (ಮದ್ಯ, ಮಾಂಸ, ಮೀನ, ಮುದ್ರಾ, ಮೈಥುನ) ತಾಂತ್ರಿಕೋಪಾಸನೆಯ ಮುಖ್ಯ ಲಕ್ಷಣವೆಂದೂ, ಇದರಿಂದಲೇ ಅದು ಗರ್ಹಿತವಾದುದೆಂದೂ ಕೆಲವರ ಅಭಿಮತ. ಆದರೆ ಇದು 'ಪ್ರತ್ಯಕ್ಷ, ಅನುಕಲ್ಪ, ದಿವ್ಯ' ಎಂದು ಮೂರು ವಿಧವಾಗಿದೆ. 'ಪ್ರತ್ಯಕ್ಷ' ಎಂದರೆ ಸಾಕ್ಷಾತ್ತಾಗಿ 'ಮದ್ಯ, ಮಾಂಸ, ಮತ್ಸ್ಯ'ಗಳನ್ನಿಟ್ಟು ಅರಾಧಿಸುವುದು.[19] 'ಅನುಕಲ್ಪ' ಎಂದರೆ ಮಾಂಸಾದಿಗಳಿಗೆ ಪ್ರತಿಯಾಗಿ ಅಪರವಸ್ತುಗಳನ್ನು 'ಪಂಚತತ್ವ'ಗಳೆಂದು ಭಾವಿಸಿ ಪೂಜಿಸುವುದು. 'ಅನುಕಲ್ಪ'ಕ್ಕೆ ಸಸ್ಯಾಹಾರಿಯೂ ಆಕ್ಷೇಪಿಸಲಾರನು. **ಮೈಥುನ** (ಸಾಧಕನ 'ಆತ್ಮಪ್ರಕೃತಿ' ಅಥವಾ 'ಪತ್ನಿ'ಯೊಡನೆ, ಅವಳು 'ಅನಧಿಕಾರಿ'ಯಾದರೆ ಮಾತ್ರ 'ಪರಸ್ತ್ರೀ'ಯೊಡನೆ) 'ಆದ್ಯಶಕ್ತಿ' ಸಮೇತ; **ಮುದ್ರಾ**—(ಆದ್ಯಮುದ್ರ—ವಲ್ಕಲ); **ಮದ್ಯ** (ಆದ್ಯಮದ್ಯ—ಧಾನ್ಯಜಾ—ಶಾಲೀ ಆಸವ); **ಮಾಂಸ** (ಆದ್ಯಶುದ್ಧಿ—ಮಾಂಸ—ಆರ್ದ್ರದಕ—ಶುಂಠಿ); **ಮೀನ**—(ಆದ್ಯಮೀನ—ಜಂಬೀರ—ಮಾತುಲುಂಗ). ಪಂಚತತ್ವರಹಿತವಾದ ಪೂಜೆ ನಿಷ್ಫಲವೆಂದು ತಂತ್ರಗಳಲ್ಲಿ ಉಕ್ತವಾಗಿದೆ.

ಚಕ್ರಪೂಜಕರಲ್ಲದವರು ಮದ್ಯಮಾಂಸಗಳಿಗೆ ಆಕ್ಷೇಪಿಸಬಹುದು. 'ವೃಥಾ ಪಾನ'ವು ಮಹಾಪಾಪವೆಂದು ಸಮಸ್ತ ಹಿಂದುಗಳೂ ಒಪ್ಪುತ್ತಾರೆ. ಮಂತ್ರ ಪೂರ್ವಕವಾದ ಮದ್ಯಪಾನವು ನಿಷಿದ್ಧವಲ್ಲ. ವೈದಿಕ ಯಜ್ಞಗಳಲ್ಲಿ 'ಸೋಮಪಾನ'ವನ್ನು ಮಾಡುತ್ತಿದ್ದಂತೆ ಸಾಧಕನು ಧಾನ್ಯಜವಾದ ಮದ್ಯವನ್ನು ಸೇವಿಸುತ್ತಾನೆ. ಪುರಿಯಲ್ಲಿ ಇಂದಿಗೂ ದೇವತಾಪ್ರಸಾದ, ಅದರಲ್ಲೂ ದುರ್ಗಾದೇವಿಯ ಪ್ರಸಾದದ ಮೇಲೆ ಮದ್ಯವನ್ನು ಪ್ರೋಕ್ಷಿಸಿ ಕೊಡುತ್ತಾರೆ.

'ಆಗಸ್ತ್ಯಸೂತ್ರ'ಗಳಲ್ಲಿ 'ದಿವ್ಯ'ಭಾವವು ಉಕ್ತವಾಗಿದೆ: **ಮದ್ಯ**—ಯೋಗದಲ್ಲಿ ಚಿಚ್ಛಕ್ತಿಮಂಡಲ ಅಥವಾ ಚಿಚ್ಚಂದ್ರಮಂಡಲದಿಂದ ಪ್ರವಹಿಸುವ 'ಅಮೃತ' **'ಮಾಂಸ'**—ಉಪವಾಸದಿಂದ ಕಾಯಕ್ಷಯ—ತನ್ನ ದೇಹದ ಮಾಂಸವನ್ನು ತಾನೇ ಭಕ್ಷಿಸುವುದು. **ಮತ್ಸ್ಯ ಮತ್ತು ಮುದ್ರಾ**—ಇಡಾ, ಪಿಂಗಳ ನಾಡಿಗಳು. **ಮೈಥುನ**—ಪರಮಾತ್ಮ ಜೀವಾತ್ಮರ ಐಕ್ಯದ ಆನಂದ.[20]

'ಕುಲಾರ್ಣವ' ಮತ್ತು 'ಜ್ಞಾನದೀಪ' ತಂತ್ರಗಳ ಪ್ರಕಾರ ಸಪ್ತ 'ಆಚಾರ'ಗಳಿವೆ. ಇವುಗಳ ಪೈಕಿ, ವೈದಿಕ, ವೈಷ್ಣವ, ಶೈವ ಮತ್ತು ದಕ್ಷಿಣ ಎಂಬುವು

---

19 ಕಾಪಾಲಿಕ, ಕಾಳಾಮುಖ ಮುಂತಾದ ಶೈವರು ಈ ರೀತಿಯ ಪೂಜಾಪದ್ಧತಿಯನ್ನು ಕೈಗೊಂಡಿದ್ದರು.

20 Quoted by V. R. R. Dikshitar in his *Lalita Cult*.

'ಪಶ್ವಾಚಾರಗಳು'. 'ವಾಮಾಚಾರ'ವು ಪರಮಾಚಾರವಾದ 'ಕೌಲಾಚಾರ'ಕ್ಕೆ ಸೋಪಾನ. 'ಭಾವಚೂಡಾಮಣಿ' ಮುಂತಾದ ಗ್ರಂಥಗಳಲ್ಲಿ ಷಟ್ ಮತ್ತು ನವ ಆಚಾರಗಳೂ, 'ಸಭಾವ, ವಿಭಾವ, ದೇಹಭಾವ' ಎಂಬ ವಿವಿಧ ಭಾವಗಳೂ ವರ್ಣಿತವಾಗಿವೆ.

ವೇದಾಚಾರ, ದಕ್ಷಿಣಾಚಾರ ಮತ್ತು ವಾಮಾಚಾರಗಳು ಮುಖ್ಯವಾದುವು. 'ವೇದಾಚಾರವು' ವೈದಿಕಾಚಾರವಲ್ಲ. 'ಶ್ರೌತವೈದಿಕಾಚಾರ'ವು ತಂತ್ರಗಳಿಗೆ ನಿಷಿದ್ಧವಾದದ್ದು. ಮಂತ್ರಪೂರ್ವಕವಾಗಿ 'ಅಗ್ನಿ'ಯನ್ನು ಉಪಾಸಿಸುವುದು ಮತ್ತು ವೈದಿಕ ಕರ್ಮಗಳ ಅನುಷ್ಠಾನ 'ವೇದಾಚಾರ'ದ ಮುಖ್ಯ ಲಕ್ಷಣ. 'ಶ್ರೌತವೈದಿಕಾಚಾರ'ಕ್ಕೆ ಅರ್ಹರಲ್ಲದವರು ಇದನ್ನು ಅನುಸರಿಸಬಹುದು. ಇದರಲ್ಲಿ ವಾಮದಕ್ಷಿಣ ಭೇದಗಳಿಲ್ಲ. ಪಾಶುಪತ ಮತ್ತು ಪಾಂಚರಾತ್ರಗಳು 'ಪೂರ್ಣ ದಕ್ಷಿಣಾಚಾರಗಳು.' 'ವಾಮಾಚಾರ'ವು 'ಪೂರ್ಣ ಕೌಲಾಚಾರ'ಕ್ಕೂ, ತರುವಾಯ 'ಕುಲಾವಧೂತ, ಅವಧೂತ ಮತ್ತು ದಿವ್ಯ' ಭಾವಗಳಿಗೂ ಒಯ್ಯುತ್ತದೆ. 'ಸ್ವೇಚ್ಛಾಚಾರ'ವು ಸರ್ವ ಆಚಾರಗಳಿಗೂ ಅತೀತವಾದದ್ದು. ಸ್ವೇಚ್ಛಾಚಾರಿಗಳ ಕಾರ್ಯ ಮತ್ತು ಸ್ಪರ್ಶಗಳು ಅತಿಪವಿತ್ರವಾದುವು. ವಾಮಾಚಾರದಲ್ಲಿ ಮಾಂಸಭಕ್ಷಣ, ಮದ್ಯಪಾನ, ಮೈಥುನಗಳು ಮುಖ್ಯವಾದುವು. 'ಪಶು'ಭಾವದ ತರುವಾಯ 'ವೀರ'; ತರುವಾಯ 'ದಿವ್ಯ'. 'ಪಶು'ಭಾವ 'ಸಾಧನೆಯ ಪ್ರಾರಂಭ'; 'ವೀರ'ವು ಅದರ 'ಮಧ್ಯಭಾಗ'; 'ದಿವ್ಯ'ವು ಅದರ 'ಗಂತವ್ಯಲಕ್ಷ್ಯ' ಇವುಗಳಲ್ಲಿ 'ವಾಮ ದಕ್ಷಿಣ' ಭೇದಗಳುಂಟು. ಇದು ಶಾಕ್ತಮತದ ವೈಶಿಷ್ಟ್ಯವಲ್ಲ: ಸರ್ವಮತಗಳಿಗೂ ಸಮಾನವಾದುದು. ವಾಮಾಚಾರದಲ್ಲಿ ವಾಮ ದಕ್ಷಿಣ ಭೇದಗಳಿವೆ. ದಕ್ಷಿಣಾಚಾರದಲ್ಲಿ ಶಿಲಾಪಾತ್ರೆಯಲ್ಲಿ ಮದ್ಯಸೇವನೆ, 'ಸ್ವಕೀಯಶಕ್ತಿ' ಅಥವಾ 'ಆತ್ಮಭಾರ್ಯೆ' ಯೊಡನೆ ಪೂಜೆ. ವಾಮಾಚಾರದಲ್ಲಿ 'ಕಪಾಲ'ದಲ್ಲಿ ಮದ್ಯಪಾನ, 'ಅನ್ಯಶಕ್ತಿ' ಎಂದರೆ 'ಪರಸ್ತ್ರೀ'ಯೊಡನೆ ಪೂಜೆ. ವಾಮಾಚಾರಿಗಳಲ್ಲಿ ಕೆಲವರು ಮಾಂಸಭಕ್ಷಣ, ಮದ್ಯಪಾನಗಳಲ್ಲಿ ಪ್ರೀತಿಯುಳ್ಳವರಾಗಿದ್ದರೂ, ಸ್ತ್ರೀ ಸಂಪರ್ಕವನ್ನು ಮಾಡುವುದಿಲ್ಲ. ಅವರು ಬ್ರಹ್ಮಚಾರಿಗಳು. ಇವರು ಶಾಕ್ತರಲ್ಲ, ಶೈವರು.

ಬ್ರಹ್ಮಾನಂದಸ್ವಾಮಿ ಪ್ರಣೀತ 'ಶಾಕ್ತಾನಂದತರಂಗಿಣಿ'ಯೆಂಬ 'ತಾಂತ್ರಿಕ ಸಂಗ್ರಹ'ದಲ್ಲಿ ಆಗಮ 'ಸದಾಗಮ' 'ಅಸದಾಗಮ' ಎಂದು ವಿಭಾಗಿಸಲ್ಪಟ್ಟಿದೆ. ಅಲ್ಲದೆ 'ಸದಾಗಮ'ವೇ ಆಗಮವೆಂದು ತಿಳಿಸುತ್ತದೆ (ಸದಾಗಮ ಏವ ಆಗಮಶಬ್ದಸ್ಯ ಮುಖ್ಯತ್ವಾತ್). ಶಿವನು 'ಆಗಮಸಂಹಿತೆ' ಯಲ್ಲಿ 'ಅಸದಾಗಮ'ವನ್ನು ಖಂಡಿಸಿ ಹೀಗೆ ಹೇಳಿದ್ದಾನೆ. 'ಎಲೈ ದೇವೇಶಿ, ಕಲಿಯುಗದಲ್ಲಿ ಮಾನವರು ರಾಜಸಿಕ ಹಾಗೂ

ತಾಮಸಿಕ ಗುಣಾನ್ವಿತರಾಗಿ, ಅಪೇಯಾಪಾನ ಅಭಕ್ಷ್ಯಭಕ್ಷಣಗಳಲ್ಲಿ ನಿರತರಾಗಿರುತ್ತಾರೆ. ಅಲ್ಲದೆ ಇತರರನ್ನೂ ಮೋಸಗೊಳಿಸುತ್ತಾರೆ. ಎಲೈ, ದೇವೀ, ಯಾರು ವರ್ಣಾಶ್ರಮಧರ್ಮಗಳಿಗೆ ವಿರುದ್ಧವಾಗಿ ನಮಗೆ ಮಾಂಸ, ರಕ್ತ ಮತ್ತು ಮದ್ಯಗಳನ್ನು ಅರ್ಪಿಸುತ್ತಾರೋ, ಅವರು ಭೂತಪ್ರೇತ, ಬ್ರಹ್ಮರಾಕ್ಷಸರಾಗಿ ಜನ್ಮತಾಳುತ್ತಾರೆ.' ಈ ಗ್ರಂಥವು ಅಂತಹ ಪೂಜೆಯನ್ನು ವರ್ಣಾಶ್ರಮವಿರುದ್ಧವೆಂದು ಖಂಡಿಸುತ್ತದೆ. ಮಂತ್ರೋಚ್ಚಾರಣೆಯ ಪೂರ್ವಕ, 'ಯಜ್ಞ'ವೆಂಬ ಭಾವದಿಂದ ಮದ್ಯಮಾಂಸಗಳನ್ನು ಆಸ್ವಾದಿಸುವವರಿಗೆ, ಇದು ಅನ್ವಯಿಸುವುದಿಲ್ಲವೆಂದು, ವಾಮಾಚಾರಿಗಳು ಹೇಳುತ್ತಾರೆ.

ವಾಮಾಚಾರದಲ್ಲಿ 'ವಾಮಾ' ಅಥವಾ 'ಸ್ತ್ರೀ' ಮುಖ್ಯಳು. ಇದು ಸ್ವಲ್ಪ ಮಟ್ಟಿಗೆ ನಿಜ. ವಾಮಾಚಾರದ ವಿಧಿಗಳಿಗನುಸಾರವಾಗಿ ಅರ್ಚಿಸುವ ಸಾಧಕರ ವಿಷಯದಲ್ಲಿ ಇದು ಯಥಾರ್ಥವಾದದ್ದು. ಇದು 'ಬ್ರಹ್ಮಚಾರಿ' ವಾಮಾಚಾರಿಗಳಿಗೆ ಅನ್ವಯಿಸುವುದಿಲ್ಲ. 'ವಾಮಾಚಾರವು' ತತ್ವತಃ 'ದಕ್ಷಿಣಾಚಾರ'ಕ್ಕೆ ವಿರುದ್ಧವಾದದ್ದು. ದಕ್ಷಿಣಾಚಾರದ ಪರಮಸಿದ್ಧನು ಅದ್ವಿತೀಯನಲ್ಲ. ಆದರೆ ವಾಮಾಚಾರದ ಸಿದ್ಧಪುರುಷನು ಸಾಕ್ಷಾತ್ ಪರಮೇಶ್ವರನೇ ಆಗುತ್ತಾನೆ. ಇವುಗಳ 'ಭಾವ'ಗಳು ಪೃಥಕ್ಪೃಥಕ್ಕಾದುವು. ಇವುಗಳ ಉಪಾಸನಾಮಾರ್ಗಗಳಿಗೆ ಇರುವ ಅಂತರವು ಕ್ಷೀರಕ್ಕೂ ಮದ್ಯಕ್ಕೂ ಇರುವ ಅಂತರವೇ ಆಗಿದೆ.

ಅವರು ಆರಾಧಿಸುವ ದೇವಿಯು ಶಿವನ ವಾಮಪಾರ್ಶ್ವವನ್ನು ಅಲಂಕರಿಸಿದ್ದಾಳೆ. ವಾಮಾಚಾರಿಗಳಲ್ಲಿ ಕಾಪಾಲಿಕರು, ಕಾಳಾಮುಖರು, ಪಾಶುಪತರು, ಭಾಂಡಿಕೇರರು, ದಿಗಂಬರರು, ಕಕ್ಷಪುಟರು, ಅಘೋರರು, ಚೀಣಾಚಾರಿಗಳು ಮುಂತಾದ ಪಂಗಡಗಳು ಕಂಡುಬರುತ್ತವೆ. ಇವರಲ್ಲಿ 'ದೀಕ್ಷೆ' ಪ್ರಧಾನ. ಉತ್ತರ ಕೌಲರು 'ಪಂಚತತ್ವ'ಗಳಿಂದ ಸಹಿತವಾದ ಪೂಜೆಯನ್ನು ಮಾಡುತ್ತಾರೆ. ಅಘೋರ ಮತ್ತು ಪಾಶುಪತರು ಬ್ರಹ್ಮಚಾರಿಗಳಾದರೂ ಮದ್ಯವನ್ನು ಸೇವಿಸುತ್ತಾರೆ ಮತ್ತು ಮಾಂಸಭಕ್ಷಣವನ್ನು ಮಾಡುತ್ತಾರೆ. ಕೆಲವರು ವಾಮಾಚಾರಿಗಳು, ಓಘದ ಸಾಧುಗಳು, ವಟುಕ ಭೈರವಾರಾಧಕರಾದ ಕಂಥಧಾರಿಗಳು, ಮತ್ಸ್ಯೇಂದ್ರನಾಥ, ಗೋರಕ್ಷನಾಥ, ಸೀತಾನಾಥ ಮುಂತಾದ 'ನಾಥಪಂಥಿಗಳು' ಬ್ರಹ್ಮಚರ್ಯವನ್ನು ತ್ಯಜಿಸುವುದಿಲ್ಲ. 'ನೀಲಕ್ರಮ'ದಲ್ಲಿ 'ಮೈಥುನ'ಕ್ಕೆ ಎಡೆಯಿಲ್ಲ. ಕಾಳಾಮುಖರ ಪೈಕಿ, ಕಾಲವೀರರು ಒಂಬತ್ತು ವತ್ಸರಗಳ ವರೆಗಿನ ಕುಮಾರಿಯರನ್ನು ಮಾತ್ರ ಪೂಜಿಸುತ್ತಾರೆ. ಕಾಮಮೋಹಿತರು ಪ್ರೌಢವಯಸ್ಕಳಾದ ಶಕ್ತಿಯನ್ನೇ ಅರ್ಚಿಸುತ್ತಾರೆ.

ವಾಮಾಚಾರಿಗಳಲ್ಲಿ ಸಿದ್ಧಪುರುಷರೆನಿಸಿದವರು ಮದ್ಯವನ್ನು ಸೇವಿಸುವುದಿಲ್ಲ, ಹಾಗೂ ಮಾಂಸಭಕ್ಷಣೆಯನ್ನು ಮಾಡುವುದಿಲ್ಲ. ಮಹಾವಾಮಾಚಾರಿ ಸಾಧಕ, ಛಿನ್ನಮಸ್ತಾಮೂರ್ತಿಯ ಉಪಾಸಕ ನದೀಯದ ರಾಜಾಕೃಷ್ಣಚಂದ್ರ ಮದ್ಯಪಾನವನ್ನು ಮಾಡುತ್ತಿರಲಿಲ್ಲ. ಇಂತಹ ಸಾಧಕರು ವಾಮಾಚಾರದ ಪ್ರಥಮ ಸೋಪಾನಗಳನ್ನು ಅಡರಿದವರು. ಮಧ್ಯಸ್ಥಕೌಲರ ಮಹಾಶಾಸ್ತ್ರವಾದ 'ಮಹಾಕಾಲಸಂಹಿತೆ'ಯ 'ಶರೀರಯೋಗಕಥನ'ವೆಂಬ ಏಕಾದಶೋಲ್ಲಾಸದಲ್ಲಿ ಹೀಗೆ ಉಕ್ತವಾಗಿದೆ. 'ಕೆಲವು ಕೌಲರು ಐಹಿಕಾರ್ಥಧೃತಾತ್ಮರು. ಕೆಲವರು ವೈದಿಕರೂ ಸಹ 'ಐಹಿಕಾರ್ಥಕಾಮರು'; ಮೋಕ್ಷಾಭಿಲಾಷಿಗಳಲ್ಲ (ಅಮೃತೇ ರತಿಂ ನಕುರ್ವಂತಿ). ನಿಷ್ಕಾಮ ಸಾಧನದಿಂದ ಮಾತ್ರ ಮೋಕ್ಷಪ್ರಾಪ್ತಿ.'

ಕೊನೆಯದಾಗಿ ಶಾಕ್ತಮತದ ವೈಶಿಷ್ಟ್ಯವನ್ನು ಕುರಿತು ಒಂದು ಮಾತು. ಶಾಕ್ತದೀಕ್ಷೆಗೆ ಸಮಸ್ತರೂ ಅರ್ಹರು. ಅಲ್ಲಿ ಜಾತಿಭೇದ ಲಿಂಗಭೇದಗಳಿಗೆ ಎಡೆಯಿಲ್ಲ. ವೈದಿಕರು ಸ್ತ್ರೀಶೂದ್ರರು ವೈದಿಕಾಚಾರಕ್ಕೆ ಅನರ್ಹರೆಂದು ಘೋಷಿಸಿದರು. ಶಾಕ್ತಧರ್ಮದ ಮತ್ತೊಂದು ವಿಶೇಷವೆಂದರೆ ಸ್ತ್ರೀಯರಿಗೆ ಅದು ಸಲ್ಲಿಸುವ ಗೌರವ. ಮಹಾಮಾತೆಯ ಉಪಾಸಕರಿಗೆ ಇದು ಸ್ವಾಭಾವಿಕವಾದದ್ದು. ಭೂಲೋಕದ ಸ್ತ್ರೀಯರು ಜಗದಂಬೆಯ ಪ್ರತೀಕಗಳು (ಸ್ತ್ರಿಯೋ ದೇವಾಃ ಸ್ತ್ರಿಯೋ ಪ್ರಾಣಾಃ—ಸರ್ವೋಲ್ಲಾಸ). ಸ್ತ್ರೀಯು 'ಅಂಬಾ'ದೇವಿಯ ಪ್ರತಿಕೃತಿಯಾದುದರಿಂದ ಶಾಕ್ತತಂತ್ರಗಳು ಸ್ತ್ರೀಯರ ಮತ್ತು ಕುಮಾರಿಯರ ಪೂಜೆಯನ್ನು ವಿಧಿಸುತ್ತವೆ. ಈ ದೃಷ್ಟಿಯಿಂದಲೇ 'ಸತಿ' ಮುಂತಾದ ಕ್ರೂರ ಪದ್ಧತಿಗಳನ್ನು ಅವು ನಿಷೇಧಿಸುತ್ತವೆ. ಇಷ್ಟೇ ಅಲ್ಲ. ಒಂದು ಹೆಣ್ಣು ಮೃಗವನ್ನೂ ಸಹ ಕೊಲ್ಲಬಾರದೆಂದು ವಿಧಿಸುತ್ತವೆ. ಈ ದೃಷ್ಟಿಯಿಂದಲೇ 'ಮಹಾನಿರ್ವಾಣತಂತ್ರ'ವು ವಿವಾಹಕ್ಕೆ ಮೊದಲು ಸ್ತ್ರೀಯರಿಗೆ ವಿದ್ಯಾಭ್ಯಾಸ ಮಾಡಿಸುವುದು ಅತ್ಯಾವಶ್ಯಕವೆಂದು ತಿಳಿಸುತ್ತದೆ. ಸ್ತ್ರೀಯರನ್ನು ಗುರುವಾಗಿ ಸ್ವೀಕರಿಸಬಹುದೆಂದೂ ಇದರಿಂದ 'ಅಷ್ಟಸಿದ್ಧಿಯು' ಪ್ರಾಪ್ತವಾಗುವುದೆಂದೂ ಶಾಕ್ತಗ್ರಂಥಗಳು ತಿಳಿಸುತ್ತವೆ.

ಬಿ. ಸೀತಾರಾಂ.

ಕ್ಷಾಮದೇವಿ

ಕಾಲಚಕ್ರದ ನಡುವೆ ನಿಂದಿಹ ಕ್ಷಾಮದೇವಿಯ ನೋಡಿರಿ
ಸತ್ವಸಾಹಸ ಶೌರ್ಯದಿಂದೀ ಚಂಡಿಯೊಳು ಹೋರಾಡಿರಿ.

ಅಂದು ವಂಗದಿ ಯಾವ ದೈತ್ಯರು ಗೈಯಲಾರದ ಕೃತ್ಯವ
ಗೈದಳೀಕೆಯು ನೋಡಿರಿವಳಾ ರೌದ್ರತರದೀ ನೃತ್ಯವ.

ನರನ ಪಾಪವೊ ದೈವಶಾಪವೊ ಭರತಮಾತೆಯ ತಾಪವೊ,
ತೃಪ್ತಿಯನು ಕಂಡರಿಯದಿರುವಾ ಕಾಲಪುರುಷನ ಕೋಪವೊ,

ಗಾಳಿಯಂದದಿ ಸುಳಿಯುತೈದುತ ನಾಡುನಾಡನೆ ಮುಸುಕಿದೆ
ಹವಿಯನುಂಗಿದ ಜ್ವಾಲೆಯಂದದಿ ತಾನೆ ತಾನಾಗೆಸೆದಿದೆ.

ಚಿನ್ನವೇತಕೆ ರನ್ನವೇತಕೆ ಅನ್ನವಿಲ್ಲದ ಜೀವಿಗೆ?
ಅನ್ನವೇ ಜೀವಾಳವಾಗಿರೆ ತನುವನೆಳೆಯದೆ ಸಾವಿಗೆ.

ಕುಶಲಕಲೆ ಘನವಿದ್ಯೆ ಗಾಯನ ವಿಭವ ವಿಲಸನವಲ್ಲವು
ಅಶನ ಬಲವೊಂದಿಲ್ಲದಿರೆ ಬೇರಾವ ಬಲದಿಂ ನಿಲ್ಲವು.

ಹಸುಳೆಗಳ ರೋದನವ ಕೇಳಲು ಕರುಳು ಕೊರೆಯುವ ಹಾಗಿದೆ
ಬಸುರಿಯರ ಬಳಲಿಕೆಯ ನೋಡಲು ಕಣ್ಣನಿರಿಯುವ ಹಾಗಿದೆ.

ವೃದ್ಧ ಜನಗಳ ತೊಳಲಿಕೆಯ ಪರಿ ಹೇಳಲಸದಳವಾಗಿದೆ
ಮಿಕ್ಕವರ ಸಂಕಟವ ನೆನೆದರೆ ಎದೆಯು ಬಿರಿವಂತಾಗಿದೆ.

ಹಾಲುತುಪ್ಪದ ಮಾತದಿರಲಿ—ಅಂಬಲಿಗು ಗತಿಯಿಲ್ಲದೆ
ತನುವ ಹೊರುತಿಹ ಭೀಕರತೆಗಿಂ ಮಿಗಿಲು ದೃಶ್ಯವದೆಲ್ಲಿದೆ?

ಬಾಯಿಬಿಟ್ಟರು ಬಣ್ಣಗೆಟ್ಟರು ಬಳಲಿದರು ಹಿಡಿಕೂಳಿಗೆ
ನಾಡುನಾಡೇ ಕರಗಿ ಸೊರಗಿ ನಿರಾಸೆಹೊಂದಿದೆ ಬಾಳಿಗೆ.

ಬಾಳ ಸವಿಯನು ನೆನೆದು ಮುಂದಿನ ಬಾಳ್ವೆಯಾಸೆಯ ಮರೆಯುತ
ಕಾಳಸಂತೆಯ ಕ್ರೂರಕುಂಡದಿ ಆರ್ತದೇಹವ ಹೊರೆಯುತ

ಮನಗಳಳಿದವು ಮಣ್ಣುಗೂಡಿತು ಮನೆತನಂಗಳು ಬರದಲಿ
ಯಾರತಪ್ಪಿಗೆ ಯಾರಶಿಕ್ಷೆಯೊ, ಯಾರು ಹೊಣೆಯಿದಕಿಳೆಯಲಿ ?

ಬಡವ ಬಲ್ಲಿದ ದಾನಿ ದೀನನು ಎಲ್ಲ ಒಂದೇ ತೆರದೊಳು
ದಿವಸ ದಿವಸಕೆ ಸವೆದು ಸೇರ್ವರು ಮೃತ್ಯುದೇವನ ಕರದೊಳು.

ಸಾವಿಗಿಹುದು ಸಹಸ್ರಮಾರ್ಗವು ಆದೊಡೀ ನಿರಶನದೊಳು
ಸಾವಿಗೀಡಾಗುವರ ಗೋಳಿಗೆ ತಲ್ಲಣಿಪೆವೀ ಜಗದೊಳು.

ತಾಯ ಮಮತೆಯು ಹೋಮವಾದುದು ಕ್ಷಾಮದೇವತೆಯೊಡಲಲಿ
ತಂದೆ ಪ್ರೇಮವು ಸೂರೆಯಾದುದು ಮರಣದೊಡೆಯನ ಅಡಿಯಲಿ.

ಜನದ ಕರ್ಮವೊ ಯುಗದ ಧರ್ಮವೊ ಹೇಳಬಲ್ಲವನಾವನು ?
ನೆನೆಯಲಾಗದ ಮರೆಯಲಾರದ ಈ ದುರಂತದ ನೋವನು.

ನೊಂದು ಬೆಂದವರೆದೆಯ ಹಾಹಾಕಾರ ದಿಕ್ತಟಕೇರಿದೆ
ಇದ ನಿವಾರಣೆಗೈವ ಕಾರ್ಯವು ಎಲ್ಲ ಜನರಿಗು ಸೇರಿದೆ.

ದೇವ ದೇವನ ಕರುಣೆಯಿಂದೀ ಘೋರಕ್ಷಾಮವು ತೊಲಗಲಿ
ಭಾರತಾಂಬೆಯ ಭಾಗ್ಯದಿಂದಲಿ ನಿತ್ಯಶಾಂತಿಯು ನೆಲಸಲಿ.

ಎಂ. ಬಿ. ಗೌರಮ್ಮ ಅಚ್ಯುತರಾವ್.

ತಾಳಗುಂದ ಮತ್ತು ಚಿಪಳೂಣ ಅಗ್ರಹಾರಗಳು

ಕದಂಬವಂಶದ ರಾಜಸಿಂಹಾಸನದ ಮೂಲಸಂಸ್ಥಾಪಕನಾದ ಮಯೂರ[1] ಶರ್ಮನು ಕ್ರಿಸ್ತ ವರ್ಷದ ೪ನೆಯ ಶತಮಾನದ ಮಧ್ಯಕಾಲದಲ್ಲಿ ಎಂದರೆ ಸುಮಾರು ಕ್ರಿ.ವ. ೩೫೦ರಲ್ಲಿ ಅಹಿಚ್ಛತ್ರ ಅಗ್ರಹಾರದಿಂದ ಬ್ರಾಹ್ಮಣರನ್ನು ಕರೆದುಕೊಂಡು ಬಂದು, ಅವರನ್ನು ತಾಳಗುಂದ ಅಗ್ರಹಾರದಲ್ಲಿ ಮತ್ತು ಕುಪ್ಪಟೂರ ಅಗ್ರಹಾರದಲ್ಲಿ ಹೇಗೆ ನೆಲೆಗೊಳಿಸಿದನೋ, ಹಾಗೆಯೇ ಗೋವೆಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು, ಮಧ್ಯಕೊಂಕಣ[2]ವನ್ನು ಮತ್ತು ಬನವಾಸಿನಾಡನ್ನು ಆಳುತ್ತಿದ್ದ ಮುಕ್ಕಣ್ಣ ಕದಂಬನು ೧೨ನೆಯ ಶತಮಾನದ ಉತ್ತರಾರ್ಧದಲ್ಲಿ ಎಂದರೆ ಸುಮಾರು ಕ್ರಿ.ವ. ೧೧೬೪ರಲ್ಲಿ ಅಹಿಚ್ಛತ್ರ ಅಗ್ರಹಾರದಿಂದ ೬೪ ಬ್ರಾಹ್ಮಣ ಕುಟುಂಬಗಳನ್ನು (ಎಂದರೆ ಮನೆತನಗಳನ್ನು=ಒಕ್ಕಲುಗಳನ್ನು) ಮುಂದಿಟ್ಟು ತಂದು ತಾಳಗುಂದ ಅಗ್ರಹಾರದಲ್ಲಿ ೬೪ ಬ್ರಾಹ್ಮಣ ಕುಟುಂಬಗಳನ್ನೂ ಚಿಪಳೂಣ[3] ಅಗ್ರಹಾರದಲ್ಲಿ ೬೪ ಬ್ರಾಹ್ಮಣ ಕುಟುಂಬಗಳನ್ನೂ ಸ್ಥಾಪಿಸಿದನು,—ಎಂಬುದನ್ನು ಈ ಪ್ರಬಂಧದಲ್ಲಿ ವಿವೇಚಿಸುವವರಿದ್ದೇವೆ.

ಯಜ್ಞಸಂಸ್ಥೆಯು ಪ್ರಾಚೀನಕಾಲದಲ್ಲಿಯ ವೈದಿಕಬ್ರಾಹ್ಮಣರ ವೈಶಿಷ್ಟ್ಯವಾಗಿದೆ. ಆ ಪ್ರಾಚೀನಕಾಲದಲ್ಲಿ ವೈದಿಕಬ್ರಾಹ್ಮಣರು ಒಂದು ಸ್ಥಳದಿಂದ

---

[1] ಹವ್ಯಕಬ್ರಾಹ್ಮಣರು "ಜ್ಞಾನದೀಪಿಕಾ" ಎಂಬ ಗ್ರಂಥದಲ್ಲಿಯೂ ಶಿವಳ್ಳಿ ಬ್ರಾಹ್ಮಣರು "ಉಡುಪಿ ಮಾಹಾತ್ಮ್ಯ" ಮತ್ತು "ಗ್ರಾಮಪದ್ಧತಿ" ಎಂಬ ಎರಡು ಗ್ರಂಥಗಳಲ್ಲಿಯೂ ಈ ರೀತಿ ಈ ಎರಡೂ ಗುಂಪುಗಳ ಬ್ರಾಹ್ಮಣರು—"ಕದಂಬವಂಶದ ರಾಜನಾದಂಥ ಮಯೂರಶರ್ಮನು ನಮ್ಮನ್ನು ಅಹಿಚ್ಛತ್ರ ಅಗ್ರಹಾರದಿಂದ ಕರೆದುಕೊಂಡು ಬಂದನು" ಎಂದು ಕಂಠರವದಿಂದ ಹೇಳಿಕೊಂಡಿದ್ದಾರೆ. ಕದಂಬವಂಶದ ರಾಜಸಿಂಹಾಸನದ ಮೂಲಸಂಸ್ಥಾಪಕನಾದ ಈ ಮಯೂರಶರ್ಮರಾಜನು ಕ್ರಿ.ವ. ೩೪೫ ರಿಂದ ೩೬೦ ರ ವರೆಗೆ ರಾಜ್ಯವನ್ನಾಳಿದನು. (ಕದಂಬಕುಲ ಗ್ರಂಥದ ೧೫ನೆಯ ಪುಟದಲ್ಲಿದ್ದ ಪ್ರಾಚೀನ ಬನವಾಸಿ ಕದಂಬರ ವಂಶವೃಕ್ಷವನ್ನು ನೋಡಿರಿ.)

[2] ಮಧ್ಯಕೊಂಕಣ ಎಂದರೆ ಈಗಿನ ರತ್ನಾಗಿರಿ ಜಿಲ್ಲಾ, ಗೋವೆಯ ಈಗಿನ ಪ್ರಾಂತ, ಕಾರವಾರ ಜಿಲ್ಲಾ ಮಂಗಳೂರು ಜಿಲ್ಲಾ.

[3] ಈ ಪ್ರಾಚೀನ ಚಿಪಳೂಣ ಅಗ್ರಹಾರವು ಈಗಿನ ಕಾಲದಲ್ಲಿ ರತ್ನಾಗಿರಿಜಿಲ್ಲೆಯ ತಾಲೂಕಿನ ಸ್ಥಳವಾಗಿದೆ.

ಮತ್ತೊಂದು ಸ್ಥಳಕ್ಕೆ ಸ್ಥಿರವಾಗಿ ವಾಸಿಸುವುದಕ್ಕೆ ವಲಸೆ ಹೊರಟರೆಂದರೆ, ತಮ್ಮ ಜತೆಯಲ್ಲಿ ಯಜ್ಞಸಂಸ್ಥೆಯನ್ನು ತೆಗೆದುಕೊಂಡೇ ಹೊರಡುತ್ತಿದ್ದರು.

ಸರ್ವತೋಮುಖ ಯಜ್ಞಕ್ಕೆ ೬೪ ಜನ ಋತ್ವಿಜರು ಬೇಕಾಗುತ್ತಾರೆ. ಪೂರ್ವ ವಿಹಾರದಲ್ಲಿ ೧೬ ಜನ ಋತ್ವಿಜರು; ಪಶ್ಚಿಮ ವಿಹಾರದಲ್ಲಿ ೧೬ ಜನ ಋತ್ವಿಜರು; ಉತ್ತರ ವಿಹಾರದಲ್ಲಿ ೧೬ ಜನ ಋತ್ವಿಜರು; ದಕ್ಷಿಣ ವಿಹಾರದಲ್ಲಿ ೧೬ ಜನ ಋತ್ವಿಜರು,— ಈ ಪ್ರಕಾರ ಸರ್ವತೋಮುಖಯಜ್ಞದಲ್ಲಿ ೬೪ ಜನ ಋತ್ವಿಜರು ಇರುತ್ತಾರೆ. ಪೂರ್ವ ವಿಹಾರದಲ್ಲಿ ಯಜ್ಞಕರ್ತೃವಾದ ಯಜಮಾನನು ಇರುತ್ತಾನೆ.

"ಸರ್ವತೋಮುಖಾದೌ ಪೂರ್ವಾದಿ ದಿಕ್ಷು ಅಗ್ನಿಷ್ಟೋಮಾದಿ ನಾನಾ ಸಂಸ್ಥಾಕೇ ದಿಗನ್ತರೇ"
(ಭಾಟ್ಟ ದೀಪಿಕಾ ಪ್ರಭಾವಲೀ ವ್ಯಾಖ್ಯಾ ಸಂವಲಿತಾ ಅ. ೩, ಪಾ. ೩, ಅಧಿ. ೧೧)

ಸರ್ವತೋಮುಖಯಜ್ಞಕ್ಕಿಂತ ರಾಜಸೂಯಯಜ್ಞ, ಅಶ್ವಮೇಧ ಇವೆರಡೂ ದೊಡ್ಡ ಯಜ್ಞಗಳಾಗಿದ್ದರೂ ಪ್ರತಿಯೊಂದರಲ್ಲಿ ೧೬ ಜನರೇ ಋತ್ವಿಜರು ಇರುತ್ತಾರೆ. ಇತ್ಯರ್ಥವೇನೆಂದರೆ, ಯಜ್ಞಸಂಸ್ಥೆಯಲ್ಲಿ ಋತ್ವಿಜರ ಸಂಖ್ಯೆಯ ಪರಮಾವಧಿಯೆಂದರೆ, ಅರುವತ್ತುನಾಲ್ಕೇ ಸರಿ ಎಂಬುದು ಸ್ಪಷ್ಟವಾಯಿತು.

ಇವೆರಡೂ ಅಗ್ರಹಾರಗಳಲ್ಲಿಯ ೬೪/೬೪ ಜನ ಬ್ರಾಹ್ಮಣ ಮನೆತನಗಳ ಅಡ್ಡ ಹೆಸರುಗಳ ನಿತಾಂತ ಸಾಮ್ಯವನ್ನು ತೋರಿಸಬಹುದು.

ಇನ್ನು ತಾಳಗುಂದ (ಎಂದರೆ ಶಿವಮೊಗ್ಗಾ ಜಿಲ್ಹೆಯ ಶಿಕಾರಿಪುರ) ಮಹಾಗ್ರಹಾರದ ಶಿಲಾಶಾಸನವನ್ನು ಕುರಿತು ವಿವೇಚಿಸುವ.

ಈ ಶಿಲಾಶಾಸನದಲ್ಲಿ ಬೇರೆ ಬೇರೆ ಕಾಲಗಳಲ್ಲಿ ಜರುಗಿದ ಎರಡು ಘಟನೆಗಳು ಹೀಗೆ ವರ್ಣಿತವಾಗಿವೆ:—

(I) ಹೊಯ್ಸಳ ಯಾದವ ಚಕ್ರವರ್ತಿ ವೀರಬಲ್ಲಾಳ ದೇವರಸರು ಆಳುವ ಕಾಲದಲ್ಲಿ (ಕ್ರಿ.ವ. ೧೧೭೩–೧೨೨೦) ಮಾಂಡಲಿಕ ರಾಜನಾದ ಮುಕ್ಕಣ್ಣ ಕದಂಬನು ಅಹಿಚ್ಛತ್ರ ಅಗ್ರಹಾರದಿಂದ ೬೪ ಜನ ಬ್ರಾಹ್ಮಣ ಕುಟುಂಬಗಳನ್ನು (= ಮನೆತನಗಳನ್ನು = ಒಕ್ಕಲು[1]ಗಳನ್ನು) ಕರೆದುಕೊಂಡು ಬಂದು, ತಾಳಗುಂದ ಮಹಾಗ್ರಹಾರದಲ್ಲಿ ನೆಲೆಗೊಳಿಸಿದನು.

---

[1] ರೆವ್ಹರೆಂಡ್ ಎಫ್. ಕಿಟ್ಟೆಲ್ ಸಾಹೇಬರು ತಮ್ಮ ಕನ್ನಡ-ಇಂಗ್ಲಿಷ್ ಕೋಶದಲ್ಲಿ 'ಒಕ್ಕಲು' ಎಂದರೆ ಮನೆತನ Family ಎಂದು ಅರ್ಥ ಬರೆಯಲಿಲ್ಲ. ಉತ್ತರ ಕರ್ನಾಟಕದಲ್ಲಿ "ಒಕ್ಕಲು" ಎಂದರೆ 'ಮನೆತನ' ಎಂಬರ್ಥವು ಚೆನ್ನಾಗಿ ಪ್ರಚಾರದಲ್ಲಿದೆ. ಉದಾ.— ಮೈಲಾರಲಿಂಗನ ಒಕ್ಕಲು, ಎಲ್ಲಮ್ಮನ ಒಕ್ಕಲು, ಇತ್ಯಾದಿ.

(II) ಪ್ರವರ್ತಮಾನ ಶಕವರ್ಷದ ೧೧೮೨[1]ನೆಯ (ಎಂದರೆ ಅತೀತ ಶಕ ವರ್ಷದ ೧೧೮೧ನೆಯ ಅರ್ಥಾತ್ ಕ್ರಿಸ್ತ ವರ್ಷದ ೧೨೫೯ನೆಯ) ಸಿದ್ಧಾರ್ಥಿ ಸಂವತ್ಸರದ ಚೈತ್ರ ಶುದ್ಧ ೧೧ ಆದಿವಾರದಂದು ಈ ತಾಳಗುಂದ ಅಗ್ರಹಾರದಲ್ಲಿರುವ ಶ್ರೀ ಮಾಧವದೇವರ ಅಂಗಭೋಗ ರಂಗಭೋಗಕ್ಕೆ ೪೦ ಕಮ್ಮ ಗದ್ದೆ, ಮತ್ತು ೪೦ ಕಮ್ಮ ತೋಟ ಇವುಗಳನ್ನು ಈ ಅಗ್ರಹಾರ ನಿವಾಸಿಗಳಲ್ಲಿ ಪ್ರಮುಖನಾದ ಮಾಕಿಮಯ್ಯ ಬ್ರಾಹ್ಮಣೋತ್ತಮನ ಐದು ಜನ ಪುತ್ರರಾದ ವಾಮನ, ಗೋಪ ಅಥವಾ ಗೋವಿಂದ, ತ್ರಿಲೋಚನ, ಈಶ್ವರ, ನೃಸಿಂಹ ಈ ಐವರು ಸೇರಿ ದತ್ತಿ ಯಾಗಿ ಕೊಟ್ಟರು. ಮತ್ತು ಸೋವಿಸೆಟ್ಟಿಯೆಂಬ ವೈಶ್ಯನೊಬ್ಬನು ಈ ಮಾಧವ ದೇವರ ನಂದಾದೀವಿಗೆಗೆ ಐದು ಕಮ್ಮ ತೋಟವನ್ನು ದತ್ತಿಯಾಗಿ ಬಿಟ್ಟನು.

ಇವೆರಡು ಘಟನೆಗಳಲ್ಲಿ ಮೊದಲನೆಯ ಘಟನೆ ನಮಗೆ ಇಲ್ಲಿ ಸಂಬಂಧಪಟ್ಟುದು.

ಈ ಶಿಲಾಶಾಸನದಲ್ಲಿ ಸ್ತುತನಾಗಿದ್ದ ಸುಪ್ರಸಿದ್ಧ ಮಾಕಿಮಯ್ಯನು ವಿಶ್ವಾ ಮಿತ್ರ ಗೋತ್ರಜನು; 'ಚಕ್ರದವರು' ಎಂಬ ಅಡ್ಡ ಹೆಸರಿನ ಮನೆತನದವನು.

ಕರ್ನಾಟಕದಲ್ಲಿರುವ ೬೪ ಒಕ್ಕಲು ಬ್ರಾಹ್ಮಣರಲ್ಲಿ ವಿಶ್ವಾಮಿತ್ರ ಗೋತ್ರಜರಲ್ಲಿ "ಚಕ್ರದವರು" ಎಂಬ ಅಡ್ಡ ಹೆಸರಿನ ಮನೆತನದವರು ಈಗಲೂ ಇದ್ದಾರೆ. ಅತ ಏವ ಈ ಶಿಲಾಶಾಸನದಲ್ಲಿ ವರ್ಣಿತರಾದ ಬ್ರಾಹ್ಮಣ ಕುಟುಂಬದವರೆಲ್ಲರೂ ೬೪ ಒಕ್ಕಲು ಬ್ರಾಹ್ಮಣರೇ ಎಂಬುದು ಸ್ಪಷ್ಟ, (ಇದೂ ಅಲ್ಲದೆ ಮಹಾರಾಷ್ಟ್ರದಲ್ಲಿರುವ ೬೪ ಒಕ್ಕಲು ಬ್ರಾಹ್ಮಣರಲ್ಲಿಯೂ ಎಂದರೆ ಚಿತ್ಪಾವನ ಬ್ರಾಹ್ಮಣರಲ್ಲಿಯೂ "ಚಕ್ರದೇವ" ಎಂಬ ಅಡ್ಡ ಹೆಸರಿನ ಮನೆತನದವರು ಈಗಲೂ ಇದ್ದಾರೆ.) ಅರ್ಥಾತ್, ಶ್ರೌತಸೂತ್ರದಲ್ಲಿ ನಿಷ್ಣಾತರಾದ ಈ ೬೪ ಒಕ್ಕಲು ಬ್ರಾಹ್ಮಣರು ತಾವು ಈ ಶಿಲಾಶಾಸನವನ್ನು ಬರೆಯುವಾಗ್ಗೆ ಶ್ರೌತಮಾರ್ಗದಲ್ಲಿ ಸುಪ್ರಸಿದ್ಧವಾದ ದ್ವಂದ್ವಸಂಪಾದನ ರೀತಿಯಿಂದ "ದ್ವಾತ್ರಿಂಶತ್ ವಿಪ್ರಕುಟುಂಬಮಂ" (ಎಂದರೆ ದ್ವಾತ್ರಿಂಶತ್ ದ್ವಂದ್ವಾನಿ ವಿಪ್ರಕುಟುಂಬಮಂ ೬೪ ಬ್ರಾಹ್ಮಣ ಕುಟುಂಬಗಳನ್ನು) ಎಂದು ಬರೆದಿದ್ದಾರೆಂದು ಹೇಳುವುದು ಕ್ರಮಪ್ರಾಪ್ತವಾಯಿತು.

ಕರ್ನಾಟಕದಲ್ಲಿಯ ೬೪ ಒಕ್ಕಲು ಬ್ರಾಹ್ಮಣರು ತಮ್ಮಲ್ಲಿ ೬೪ ಬ್ರಾಹ್ಮಣ ಕುಟುಂಬಗಳೆಂದೂ ೧೪ ಗೋತ್ರಗಳೆಂದೂ ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ. ಮಹಾ ರಾಷ್ಟ್ರದಲ್ಲಿಯ ೬೪ ಒಕ್ಕಲು ಬ್ರಾಹ್ಮಣರು ಎಂದರೆ ಚಿತ್ಪಾವನ ಬ್ರಾಹ್ಮಣರು

[1] ಈ ಶಿಲಾಶಾಸನದಲ್ಲಿ '೨' ಎಂಬ ಅಂಕವನ್ನು ಕೆತ್ತುವ ಸ್ಥಳದಲ್ಲಿ '೩' ಎಂಬ ಅಂಕವನ್ನು ತಪ್ಪಿ ಕಂಡರಿಸಿದೆ. ಈ ಶಿಲಾಶಾಸನವನ್ನು ಕಂಡರಿಸುವಾಗ್ಗೆ ಬಹಳ ಶಬ್ದಗಳನ್ನು ಅಶುದ್ಧವಾಗಿ ಕೆತ್ತಿದೆ.

"ಚೌಸಷ್ಟಘರಾಣೇ, ಚೌದಾಗೋತ್ರೇ" ಎಂದು ಗಾದೆಯ ಮಾತಿನಂತೆ ಪ್ರತಿಯೊಬ್ಬರೂ ನುಡಿಯುತ್ತಾರೆ.

ಈ ರೀತಿ ಇವೆರಡೂ ಅಗ್ರಹಾರಗಳ (ತಾಳಗುಂದ ಮತ್ತು ಚಿಪಳೂಣ) ಬ್ರಾಹ್ಮಣರು ತಮ್ಮ ತಮ್ಮ ಗುಂಪಿನಲ್ಲಿ ಮೂಲತಃ ಅರುವತ್ತುನಾಲ್ಕೇ ಮನೆತನಗಳೆಂಬುದನ್ನು ಒಪ್ಪಿಕೊಂಡಿದ್ದಾರೆ.

"ಅರುವತ್ತುನಾಲ್ಕು ಒಕ್ಕಲು" ಎಂದು ಇಷ್ಟು ದೀರ್ಘವಾಗಿ ಉಚ್ಚರಿಸುವುದು ತೊಂದರೆಯಾಗಲಾರಂಭಿಸಿದ್ದರಿಂದ ಉಚ್ಚಾರ ಸೌಕರ್ಯಾರ್ಥವಾಗಿ "ಅರುವತ್ತೊಕ್ಕಲು" ಎಂದು ಅಪಭ್ರಂಶಮಾಡಿಕೊಂಡು, ಕರ್ಣಾಟಕದಲ್ಲಿಯ ೬೪ ಒಕ್ಕಲು ಬ್ರಾಹ್ಮಣರು ತಮ್ಮನ್ನು "ಅರುವತ್ತೊಕ್ಕಲು ಬ್ರಾಹ್ಮಣರು" ಎಂದು ಸಂಬೋಧಿಸಿಕೊಳ್ಳುತ್ತಾರೆ.

ಈ ಶಿಲಾಶಾಸನದ ಪ್ರಥಮಭಾಗದಲ್ಲಿ "ಯಾದವ ಚಕ್ರವರ್ತಿ ವೀರಬಲ್ಲಾಳ ದೇವರಸರು ರಾಜ್ಯವನ್ನಾಳುತ್ತಿರಲು **ಆ ಕಾಲದಲ್ಲಿ (=ತತುಕಾಲದೊಳು)** ಮುಕ್ಕಣ್ಣಕದಂಬನು" ಎಂದು ಕಂಠೋಕ್ತವಾಗಿ ಹೇಳಿದೆ. ಅತಏವ ಈ ಮುಕ್ಕಣ್ಣ ಕದಂಬನೆಂದರೆ ಗೋವೆಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು, ಮಧ್ಯ ಕೊಂಕಣವನ್ನು ಮತ್ತು ಬನವಾಸಿ ನಾಡನ್ನು, ಎಂದರೆ, ಅನೇಕ ಮಂಡಳಗಳನ್ನು ಆಳುತ್ತಿದ್ದ ಶಿವಚಿತ್ತನೇ ಸರಿ. ಏಕೆಂದರೆ ಈ ಶಾಸನದಲ್ಲಿ "ಬನವಸೆ ಮೊದಲೆನಿಸಿದ ಅನೇಕ ಮಂಡಳೇಶ್ವರಂ" ಎಂದು—ಈ ಮುಕ್ಕಣ್ಣಕದಂಬನನ್ನು ಸಂಬೋಧಿಸಿದ್ದಾರೆ. ಇಷ್ಟಕ್ಕೂ ಈ ವೀರಬಲ್ಲಾಳ ದೇವರಸರು ಆಳುವ ಕಾಲದಲ್ಲಿ ಈ ಶಿವಚಿತ್ತನು ಬನವಸೆ ಮೊದಲೆನಿಸಿದ ಅನೇಕ ಮಂಡಳಗಳನ್ನು ಆಳುತ್ತಿದ್ದನೆಂಬುದು ಇತಿಹಾಸ ಪ್ರಸಿದ್ಧವೇ ಇದೆ. ಈ ಶಿವಚಿತ್ತನೂ (ಕ್ರಿ.ವ. ೧೧೪೭–೧೧೮೧[1]) ಈ ವೀರಬಲ್ಲಾಳ ದೇವರಸರೂ (ಕ್ರಿ.ವ. ೧೧೭೩-೧೨೨೦) ಸಮಕಾಲೀನರು.

ಮೇಲಾಗಿ "ಮುಕ್ಕಣ್ಣ, ತ್ರಿನೇತ್ರ, ತ್ರಿಲೋಚನ" ಎಂಬವು ಶಿವನ ಪರ್ಯಾಯ ನಾಮಗಳೇ.—ಮೈಸೂರು ಜಿಲ್ಹೆಯ ಹೆಗ್ಗಡದೇವನಕೋಟೆ ೫೦ನೆಯ ಶಾಸನದಲ್ಲಿ (ಎಂದರೆ ನೆಮ್ಮನಹಳ್ಳಿ ಹೋಬಳಿಯ ನರಸೀಪುರ ಗ್ರಾಮದ ವೀರಗಲ್ಲಿನಲ್ಲಿ)— "ಸ್ವಸ್ತಿಸಮಸ್ತಪ್ರಶಸ್ತಿಸಹಿತಂ ಶ್ರೀಮನ್ಮಹಾಮಣ್ಡಳೇಶ್ವರ ದ್ವಾರಾವತೀ ಪುರವರಾಧೀಶ್ವರ **ಮುಕ್ಕಣ್ಣಕದಂಬ** ಶ್ರೀ . . . . ಬ ನಾಡರಾಜ್ಯಂಗೆಯ್ಯೆ || . . . . ಶಕವರುಷಂ ೧೧೬೦ ಸಾಸಿರದ . . . . ತ್ತನೆಯ ಪಿಂಗಳ ಸಂವತ್ಸರದ ಮಾರ್ಗ್ಗಶಿರ

[1] ಶ್ರೀಮಾನ್ ಪ್ರೊ|| ಎಮ್. ಮೊರೆಸ್, ಎಂ.ಎ. ಇವರ "ಕದಂಬಕುಲ" ಪು. ೧೬೭ **ಗೋವೆಯ ಕದಂಬರ ವಂಶವೃಕ್ಷವನ್ನು ನೋಡಿರಿ.**

ಸಂಕ್ರಮಣಂ ಶುದ್ಧ ಏಕಾದಶಿ ೧೧ ಬೃಹಸ್ಪತಿ ವಾರದಂದು . . . ." ಎಂದು ಉಕ್ತವಾಗಿದೆ.

ಈ ಶಾಸನವು, ಕ್ರಿ.ವ. ೧೧೩೭ನೆಯ ಪಿಂಗಳ ಸಂವತ್ಸರದ್ದೆಂಬುದು ಸ್ಪಷ್ಟ. ಈ ಶಾಸನದಲ್ಲಿ ಉಕ್ತವಾದ **"ಮುಕ್ಕಣ್ಣ ಕದಂಬ"** ಎಂಬ ನಾಮವು, ಇದೇ ಕಾಲಕ್ಕೆ ಆಳುತ್ತಿದ್ದ ದ್ವಾರಾವತೀ ಪುರವರಾಧೀಶ್ವರನಾದ ವಿಷ್ಣುವರ್ಧನನ (ಕ್ರಿ.ವ. ೧೧೧೧–೧೧೪೧) ಬಿರುದು ಎಂದು ಮೆ|| ರೈಸಸಾಹೇಬರು ಊಹಿಸಿದ್ದಾರೆ. ಅರ್ಥಾತ್ ವಿಷ್ಣುವರ್ಧನನು ಕ್ರಿ.ವ. ೧೧೩೭ರಲ್ಲಿ ಮುಕ್ಕಣ್ಣ ಕದಂಬನನ್ನು ಸೋಲಿಸಿ, ಅವನನ್ನು ತನ್ನ ಮಾಂಡಲಿಕನನ್ನಾಗಿ ಮಾಡಿಕೊಂಡು, ಈ "ಮುಕ್ಕಣ್ಣ ಕದಂಬ" ಎಂಬ ಬಿರುದನ್ನು ಧರಿಸಿದ್ದಾನೆಂಬುದು ವ್ಯಕ್ತವಾಯಿತು.

ವಿಷ್ಣುಚಿತ್ತನು ಯುವರಾಜನಾಗಿದ್ದಾಗ ಹಲಸಿಗೆ ನಾಡನ್ನು ಹೇಗೆ ಆಳುತ್ತಿದ್ದನೋ, ಹಾಗೆಯೇ ಶಿವಚಿತ್ತನು ಇಮ್ಮಡಿ ಜಯಕೇಶಿಗೆ (ಕ್ರಿ.ವ. ೧೧೦೪–೧೧೪೭) ಜ್ಯೇಷ್ಠಪುತ್ರನಾಗಿದ್ದು ಅತಏವ ಯುವರಾಜನಾಗಿ ಬನವಾಸಿನಾಡನ್ನು ಕ್ರಿ.ವ. ೧೧೩೭ರಲ್ಲಿ ಆಳುತ್ತಿದ್ದು, ವಿಷ್ಣುವರ್ಧನನಿಗೆ ಸೋತು ಅವನ ಮಾಂಡಲಿಕನಾಗಿರಬೇಕು. ಈ ಶಿವಚಿತ್ತನೇ ಮುಕ್ಕಣ್ಣ ಕದಂಬನೆಂಬುದು ಸಿದ್ಧ.

ಈ ಶಿಲಾಶಾಸನದಲ್ಲಿ ಇನ್ನೊಂದು ವಿಷಯವುಂಟು.

ಈ ೬೪ ಒಕ್ಕಲು ಬ್ರಾಹ್ಮಣರು ಅಹಿಚ್ಛತ್ರ ಅಗ್ರಹಾರದಿಂದ ದಕ್ಷಿಣಾಪಥಕ್ಕೆ ಬರುವುದಕ್ಕಿಂತ ಮುಂಚೆಯೇ ದಕ್ಷಿಣ ಭಾರತದಲ್ಲಿ ತೇಜಸ್ವಿಗಳಾದ ಬ್ರಾಹ್ಮಣರು ಇದ್ದೇ ಇದ್ದರು. ಈ ಶಿಲಾಶಾಸನವನ್ನು ಬರೆದ ಈ ೬೪ ಒಕ್ಕಲು ಬ್ರಾಹ್ಮಣರು ತಮ್ಮ ಪ್ರತಿಷ್ಠೆಯನ್ನು ಮಾಡಿಕೊಳ್ಳುವುದಕ್ಕೋಸ್ಕರ ಹೀಗೆ ಬರೆದುಕೊಂಡಿದ್ದಾರೆಯೇ ಹೊರತು ಮತ್ತೇನೂ ಇಲ್ಲ. ಆದುದರಿಂದ ಈ ೬೪ ಒಕ್ಕಲು ಬ್ರಾಹ್ಮಣರು ದಕ್ಷಿಣಾಪಥಕ್ಕೆ ಬರುವುದಕ್ಕಿಂತ ಮುಂಚೆ ದಕ್ಷಿಣ ಭಾರತದಲ್ಲಿ ಬ್ರಾಹ್ಮಣರೇ ಇರಲಿಲ್ಲವೆಂದು ಈ ಶಿಲಾಶಾಸನದಲ್ಲಿ ಬರೆದಿರುವುದು ಐತಿಹಾಸಿಕ ಸತ್ಯವಲ್ಲ.

ಚಿಪಳೂಣ ಅಗ್ರಹಾರದ ೬೪ ಒಕ್ಕಲು ಬ್ರಾಹ್ಮಣರು, ತಾಳಗುಂದ ಅಗ್ರಹಾರದ ೬೪ ಒಕ್ಕಲು ಬ್ರಾಹ್ಮಣರು ಈ ಶಿಲಾಶಾಸನದಲ್ಲಿ ಕಂಠೋಕ್ತವಾಗಿ ಹೇಳಿಕೊಂಡಂತೆ ಈ ಚಿಪಳೂಣ ಬ್ರಾಹ್ಮಣರು ತಮ್ಮನ್ನು **"ಅಗ್ನಿಹೋತ್ರಪವಿತ್ರ"** ಅಥವಾ **"ಅಗ್ನಿಹೋತ್ರಪಾವನ"** ಬ್ರಾಹ್ಮಣರೆಂದು ಸಂಬೋಧಿಸಿಕೊಳ್ಳಲಾರಂಭಿಸಿದರು. ಮುಂದೆ ಕಾಲಾಂತರದಿಂದ ಉಚ್ಚಾರ ಸೌಕರ್ಯಕ್ಕೋಸ್ಕರ ಪೂರ್ವ[1]ಪದವನ್ನು ಬಿಟ್ಟು, ಕೇವಲ ಉತ್ತರ ಪದದಿಂದ **"ಪಾವನ ಬ್ರಾಹ್ಮಣರು"**

[1] ಉತ್ತರದೇಶಸ್ಥ ಬ್ರಾಹ್ಮಣ=ಬಡಗನಾಡು ಬ್ರಾಹ್ಮಣ.

ಎಂದು ಇವರು ಸಂಬೋಧಿಸಿಕೊಳ್ಳಲಾರಂಭಿಸಿದರು. ಇವರು ಚಿಪಳೂಣ ಅಗ್ರಹಾರಕ್ಕೆ ಬಂದು, ಸ್ಥಿರವಾಗಿ ವಾಸಮಾಡಿ, ಕೊಂಕಣದಲ್ಲಿ ಪ್ರಸಿದ್ಧರಾಗುವಷ್ಟರಲ್ಲಿ ಒಂದು ಶತಮಾನ ಕಾಲವು ಕಳೆದುಹೋಯಿತು. ಅಷ್ಟರಲ್ಲಿ "ದೇವಗಿರಿ ಯಾದವ ಮಹಾದೇವ ರಾಜನು (ಕ್ರಿ.ಪ. ೧೨೬೦-೧೨೭೧) ಕೊಂಕಣದೇಶದ ಸೋಮೇಶ್ವರನೆಂಬ ಶಿಲಾಹಾರ ರಾಜನನ್ನು ಸೋಲಿಸಿ, ಕೊಂಕಣದ ಉತ್ತರಭಾಗವನ್ನೆಲ್ಲ ದೇವಗಿರಿ ಯಾದವ ರಾಜ್ಯಕ್ಕೆ ಸೇರಿಸಿದನು."[1] ದೇವಗಿರಿ ಯಾದವರಾಜರ ಪ್ರತಿನಿಧಿಗಳಾದ ಬ್ರಾಹ್ಮಣ ಅಧಿಕಾರಿಗಳು ಉತ್ತರ ಕೊಂಕಣದಲ್ಲಿ ರಾಜ್ಯಕಾರಭಾರ ಮಾಡುವುದಕ್ಕೋಸ್ಕರ ಬಂದ ಕಾಲದಲ್ಲಿ ಆ ಬ್ರಾಹ್ಮಣ ಅಧಿಕಾರಿಗಳ ಜೊತೆಯಲ್ಲಿ ಆ ದೇವಗಿರಿ ಪ್ರಾಂತದಿಂದ ಎಂದರೆ ಘಟ್ಟದ ಮೇಲಿನ ದೇಶದಿಂದ ಆ ಅಧಿಕಾರಿಗಳ ನಿತ್ಯ, ನೈಮಿತ್ತಿಕ ಕರ್ಮಗಳಿಗೋಸ್ಕರ ಪುರೋಹಿತರಾಗಿ ಕೆಲವರು ವೈದಿಕ ಬ್ರಾಹ್ಮಣರು ಕುಟುಂಬ ಸಹಿತವಾಗಿ ಈ ಉತ್ತರ ಕೊಂಕಣದಲ್ಲಿ ಬಂದು, ಸ್ಥಿರವಾಗಿ ವಾಸಮಾಡಿದರು. ಈ ಘಟ್ಟದ ಮೇಲಿನ ಅಹಿಚ್ಛತ್ರ ಬ್ರಾಹ್ಮಣೇತರ ಬ್ರಾಹ್ಮಣರು ಆ ಕಾಲದಲ್ಲಿ ತಮಗೆ ರಾಜಾಶ್ರಯವಿದ್ದುದರಿಂದ ಆ ಉತ್ತರ ಕೊಂಕಣದಲ್ಲಿರುವ ಸಮಸ್ತ ಹಿಂದೂ ಜಾತಿಗಳ ಮೇಲೆ ತಮ್ಮ ಪೌರೋಹಿತ್ಯ ಅಧಿಕಾರವನ್ನು ನಡಸಿದರು.

ಇನ್ನು ತಾಳಗುಂದ ಅಗ್ರಹಾರದ ೬೪ ಒಕ್ಕಲು ಬ್ರಾಹ್ಮಣರನ್ನೂ ಚಿಪಳೂಣ ಅಗ್ರಹಾರದ ೬೪ ಒಕ್ಕಲು ಬ್ರಾಹ್ಮಣರನ್ನೂ ತುಲನಾತ್ಮಕ ದೃಷ್ಟಿಯಿಂದ ಪರೀಕ್ಷಿಸುವ.

ಶ್ರೀ ನಾರಾಯಣ ಗೋವಿಂದ ಚಾಪೇಕರ ಇವರು ಬಹು ಪರಿಶ್ರಮವನ್ನು ವಹಿಸಿ, ಕೊಂಕಣ ಮೊದಲಾದ ಎಲ್ಲ ಪ್ರದೇಶಗಳಲ್ಲಿ ಸಂಚರಿಸಿ, **"ಚಿತ್ಪಾವನ"** ಎಂಬುದೊಂದು ೩೦೪ ಪುಟಗಳುಳ್ಳ ದೊಡ್ಡ ಗ್ರಂಥವನ್ನು ಮರಾಠಿ ಭಾಷೆಯಲ್ಲಿ ಬರೆದಿದ್ದಾರೆ. ಈ ಗ್ರಂಥದಲ್ಲಿ ಚಿತ್ಪಾವನ ಬ್ರಾಹ್ಮಣರ ವಿಷಯವಾಗಿದ್ದ ತರ್ಕ ವಿತರ್ಕಗಳನ್ನೆಲ್ಲ ಒಂದು ಕಡೆಗೆ ಚೆನ್ನಾಗಿ ಸಂಗ್ರಹಿಸಿದ್ದಾರೆ.

ತಾಳಗುಂದ ಅಗ್ರಹಾರದ ಬ್ರಾಹ್ಮಣರಲ್ಲಿ ೬೪ ಮನೆತನಗಳೂ ೧೪ ಗೋತ್ರಗಳೂ ಇರುತ್ತವೆ. ಇದೇಮೇರೆಗೆ ಚಿಪಳೂಣ ಅಗ್ರಹಾರದ ಬ್ರಾಹ್ಮಣರಲ್ಲಿಯೂ ಮೂಲತಃ ೬೪ ಮನೆತನಗಳೂ ೧೪ ಗೋತ್ರಗಳೂ ಇವೆ.[2]

---

[1] ಶ್ರೀ ರಾ. ಗೋ. ಭಾಂಡಾರಕರ ಇವರ ತಮ್ಮ "ದಕ್ಷಿಣಾ ಪಥದ ಪ್ರಾಚೀನ ಇತಿಹಾಸ" ನೋಡಿ.

[2] ೬೪ ಒಕ್ಕಲು ಬ್ರಾಹ್ಮಣರಾದ ಮತ್ತು ಮೈಸೂರು ಸಂಸ್ಥಾನದ ಸರ್ವೆ ಡಿಪಾರ್ಟ್‌ಮೆಂಟಿನ ಅಸಿಸ್ಟೆಂಟ ಸೂಪರಿಂಟೆಂಡೆಂಟರಾಗಿದ್ದ ಶ್ರೀ ಎಚ್. ವ್ಯಾಸರಾವ, ಬಿ.ಎ., ಇವರು ತಮ್ಮ ಹಿರಿಯರು ಬರೆದಿಟ್ಟ ತಮ್ಮ ಜನಾಂಗದ ೬೪ ಮನೆತನಗಳ ಉಪನಾಮಗಳನ್ನೂ ೧೪ ಗೋತ್ರಗಳನ್ನೂ ಇಂದಿಗೆ ೧೦ ವರ್ಷಗಳ ಹಿಂದೆಯೇ ನನಗೆ ತೋರಿಸಿದರು.

ಮೊದಲು ತಾಳಗುಂದ ಅಗ್ರಹಾರದ ೬೪ ಬ್ರಾಹ್ಮಣ ಮನೆತನಗಳ ಹೆಸರುಗಳನ್ನೂ ಅವರ ೧೪ ಗೋತ್ರಗಳನ್ನೂ ವಾಚಕರ ಮುಂದೆ ಇಟ್ಟು ತದನಂತರ ಇವುಗಳಿಗೂ ಚಿಪಳೂಣ ಅಗ್ರಹಾರದ ೬೪ ಬ್ರಾಹ್ಮಣ ಮನೆತನಗಳ ಹೆಸರುಗಳಿಗೂ ಹೇಗೆ ನಿತಾಂತ ಸಾಮ್ಯವಿರುತ್ತದೆಂಬುದನ್ನು ತೋರಿಸುವ.

(೧) ಕಾಶ್ಯಪಗೋತ್ರ

(೧) ನಂಜೆಯುವರು
(೨) ಭಾರತದವರು
(೩) ಸವಿನುಡಿಯವರು
(೪) ಬಲ್ಲರಸರು

(೨) ಆತ್ರೇಯಗೋತ್ರ (= ಅತ್ರಿಗೋತ್ರ)

(೫) ಬೊಮ್ಮರಸರು
(೬) ಬಂದರಸರು
(೭) ಬುರುಡೆಯವರು
(೮) ಹರಿಬಂಟನವರು
(೯) ಈಚಲವರು

(೩) ವಿಶ್ವಾಮಿತ್ರಗೋತ್ರ

(೧೦) ಮಿಂಚಿನವರು
(೧೧) ಬೆಟ್ಟದವರು
(೧೨) ಚಕ್ರದವರು
(೧೩) ಮಂಖಣಿಯವರು
(೧೪) ಮಾಲ್ಯದವರು
(೧೫) ಶಿವಪುರದವರು
(೧೬) ಥಣ್ಣಾಯಕರು

(೪) ಗೌತಮಗೋತ್ರ

(೧೭) ವೇದಾಂತಿಯವರು
(೧೮) ಬರಗಿಯವರು
(೧೯) ಯನಗಲವರು
(೨೦) ಬೀಗಮುದ್ರೆಯವರು
(೨೧) ಕಲ್ಮುರಿ
(೨೨) ಯಲೆಕುಂಟೆ

(೫) ಜಾಮದಗ್ನ್ಯವತ್ಸಗೋತ್ರ

(೨೩) ಉದ್ದಿಯವರು
(೨೪) ಬೊಕ್ಕಸದವರು
(೨೫) ಜಾನಸಾಲೆ
(೨೬) ತಿರದಂಡಿ
(೨೭) ಕಂಕೂರು

(೬) ವಸಿಷ್ಠಗೋತ್ರ

(೨೮) ವೈದೇವ
(೨೯) ಬಲದೇವ
(೩೦) ಚೀಟಿನವರು
(೩೧) ಕೆರಟಿ
(೩೨) ಹುಲ್ಬಂಡಿ
(೩೩) ಖಂಡೇಕಾರ
(೩೪) ಮದ್ದಿನವರು
(೩೫) ಯರವಿನಕಲೆ

(೭) ಅಗಸ್ತ್ಯಗೋತ್ರ

(೩೬) ಬಡಕಣದವರು

(೮) ಹಾರೀತಸಗೋತ್ರ

(೩೭) ಆರಾಧ್ಯರು
(೩೮) ಗಂಗರಸರು
(೩೯) ಚಂಡರು
(೪೦) ಅನಂತಪುರದವರು

(೯) ಬಾದರಾಯಣಗೋತ್ರ

(೪೧) ಬುಕ್ಕರಾಯ ಸಮುದ್ರ
(೪೨) ಜ್ವಾಲಸಾಗರ
(೪೩) ಸಕ್ಕರೆಪಟ್ಟಣ

(೧೦) ಕೌಂಡಿಣ್ಯಗೋತ್ರ

(೪೪) ಕೂಡಿಲೂರು
(೪೫) ಬೆನಕನ ಕಾಲುವೆ
(೪೬) ಬೊಮ್ಮಿನವರು
(೪೭) ತಂಗೆಹಳ್ಳಿ
(೪೮) ವಡ್ಡೆಥಾಳಿ

(೧೧) ಶಾಂಡಿಲ್ಯಗೋತ್ರ

(೪೯) ನಯನಾರಿ
(೫೦) ಮರಸಲು

(೧೨) ಕೌಶಿಕಗೋತ್ರ

(೫೧) ಅಂಕರಸರು
(೫೨) ಮಾಕರಸರು
(೫೩) ಬೊಮ್ಮರಸರು

(೧೩) ಶ್ರೀವತ್ಸಗೋತ್ರ

(೫೪) ಮಲಖೇಟದವರು
(೫೫) ದೀಪದವರು
(೫೬) ದವಸದವರು
(೫೭) ಕಾಂದಲವಾಡಿ
(೫೮) ಮುತ್ತಿನಸತ್ತಿಗೆ
(೫೯) ವಾರಣಾಶಿ

(೧೪) ಭಾರದ್ವಾಜಗೋತ್ರ

(೬೦) ಕೂಚರಸರು (೬೨) ಮಣಿವಾಲದವರು
(೬೧) ವಿಶ್ವರೂಪದವರು (೬೩) ಟಿಂಕಸಾಲೆ
(೬೪) ನೊತ್ತೂರು

ಈ ಪ್ರಕಾರ ತಾಳಗುಂದ ಅಗ್ರಹಾರದಲ್ಲಿದ್ದ ೬೪ ಒಕ್ಕಲು ಬ್ರಾಹ್ಮಣರ ಮನೆತನಗಳ ಅಡ್ಡಹೆಸರುಗಳು ಅರುವತ್ತುನಾಲ್ಕೇ ಇರುತ್ತವೆ. ಈಗ ಸಹ ಇವರಲ್ಲಿ ಇಷ್ಟೇ ೬೪ ಉಪನಾಮುಗಳು ಇರುತ್ತವೆ. ಈ ಉಪನಾಮುಗಳಲ್ಲಿ ಕೆಲವು ಮಾತ್ರ ಶತಕಾನುಶತಕಗಳಿಂದ ಜನರ ಬಾಯಲ್ಲಿ ಸಂಚರಿಸುತ್ತ ಬರುವಾಗ್ಗೆ ರೂಪಾಂತರವನ್ನು ಹೊಂದಿವೆ.

ಶಿಕಾರಿಪುರ ತಾ. ೧೮೬ನೆಯ ಶಿಲಾಶಾಸನದಲ್ಲಿ ತಾಳಗುಂದ ಅಗ್ರಹಾರ ದಲ್ಲಿದ್ದ ೬೪ ಒಕ್ಕಲು ಬ್ರಾಹ್ಮಣನಾದ ಮಾಕಿಮಯ್ಯನ ಮನೆತನದ "ಚಕ್ರದವರು" ಎಂಬ ಅಡ್ಡಹೆಸರನ್ನು ಕುರಿತು ಸೋಪಪತ್ತಿಕವಾಗಿಯೂ ಸುಂದರವಾಗಿಯೂ ಹೀಗೆ ವಿವರಿಸಿ ಹೇಳಿದೆ:—"ಬುದ್ಧಿಚಕ್ರದಿಂ ಗ್ರಾಮಕ್ಕೆ ಬಪ್ಪ ದುರಿತಂಗಳಂ ಪರಿಹರಿಸಿ ಹಿತಮಂ ಆಚರಿಸುವ ಕಾರಣದಿಂ 'ಚಕ್ರದವರು' ಎಂಬುವ ಪೆಸರಂ ಪಡೆದ ವಂಶಂ." ಆದ್ದರಿಂದ ಈ ೬೪ ಅಡ್ಡಹೆಸರುಗಳೂ ಅರ್ಥಪೂರ್ಣವಾಗಿರುತ್ತ ವೆಂದು ನಿಸ್ಸಂದೇಹವಾಗಿ ಹೇಳಬಹುದು. ಆದರೆ ಇವುಗಳಲ್ಲಿ ಎಷ್ಟೋ ಅಪಭ್ರಷ್ಟ ರೂಪವನ್ನು ತಾಳಿರುವುದರಿಂದ ಅವುಗಳ ಮೂಲರೂಪವನ್ನು ಕಂಡುಹಿಡಿಯುವುದೇ ಕಠಿಣವಾಗಿದೆ.

ಇನ್ನು ಚಿಪಳೂಣ ಅಗ್ರಹಾರದಲ್ಲಿದ್ದ ೬೪ ಒಕ್ಕಲು ಬ್ರಾಹ್ಮಣರಲ್ಲಿ ೬೪ ಉಪನಾಮುಗಳಿಗಿಂತ ಹೆಚ್ಚು ಎಂದರೆ ೩೧೭ರ ವರೆಗೆ ಅಡ್ಡ ಹೆಸರುಗಳು ಬೆಳೆದಿರುತ್ತವೆ. ಏಕೆಂದರೆ, ಈ ಅಗ್ರಹಾರ ನಿವಾಸಿಗಳು ಮುಂದೆ ಕಾಲಾಂತರದಿಂದ ಜೀವನಾರ್ಥ ವಾಗಿ ಈ ಅಗ್ರಹಾರದಿಂದ ಹೊರಟು ಬೇರೆಬೇರೆ ಗ್ರಾಮುಗಳಲ್ಲಿ ಹೋಗಿ ವಾಸ ಮಾಡಿದ್ದರಿಂದ ಹಾಗೂ ಬೇರೆಬೇರೆ ಉದ್ಯೋಗಗಳನ್ನು ಮಾಡಿದ್ದರಿಂದ ಆಯಾ ಗ್ರಾಮುಗಳ ಹೆಸರು, ಆಯಾ ಉದ್ಯೋಗಗಳ ಹೆಸರು, ಇವರಿಗೆ ಉಪನಾಮುಗಳಾಗಿ ಇಷ್ಟು ಅಡ್ಡ ಹೆಸರುಗಳು ಬೆಳೆದಿರುತ್ತವೆ. ಇವುಗಳಲ್ಲಿ ಮೂಲ ೬೪ ಉಪನಾಮುಗಳು ಯಾವುವು? ಎಂಬುದನ್ನು ಕಂಡುಹಿಡಿಯುವುದು ಮಹತ್ವದ ಸಂಗತಿ. ಇದಕ್ಕೋಸ್ಕರ ವಾಗಿಯೇ ತಾಳಗುಂದ ಅಗ್ರಹಾರದಲ್ಲಿದ್ದ ೬೪ ಒಕ್ಕಲು ಬ್ರಾಹ್ಮಣರ ೬೪ ಉಪ ನಾಮುಗಳನ್ನು ಸಂಪೂರ್ಣವಾಗಿ ಪ್ರಸಿದ್ಧಮಾಡಿದ್ದೇವೆ. ಇಷ್ಟೇ ಅಲ್ಲ, ಇವುಗಳ

ಪ್ರಕಾರದಿಂದ ಚಿಪಳೂಣ ಅಗ್ರಹಾರದ ೨೨ ಮೂಲ ಉಪನಾಮಗಳನ್ನು ಹೀಗೆ ಕಂಡುಹಿಡಿದಿದ್ದೇವೆ:

(ನಿತಾಂತಸಾಮ್ಯ)

ತಾಳಗುಂದ ೬೪ ಒಕ್ಕಲು ಬ್ರಾಹ್ಮಣರು.		ಚಿಪಳೂಣ ೬೪ ಒಕ್ಕಲು ಬ್ರಾಹ್ಮಣರು.
ಬೆಟ್ಟದವರು	=	ಡೋಂಗರೆ
ಮೈದೇವ	=	ಮಾಯದೇವ
ವಾರಣಾಶೀ	=	ಕಾಶೀಕರ
ದೀಪದವರು	=	ದಿವೇಕರ
ಸವಿನುಡಿಯವರು	=	ಗೋಡಬೋಲೆ
ಚಕ್ರದವರು	=	ಚಕ್ರದೇವ
ಬಲದೇವ	=	ಮಹಾಬಳ
ವೇದಾಂತಿಯವರು	=	ದೇವಧರ
ಬೀಗಮುದ್ರೆಯವರು	=	ಕಿಲ್ಲೀದಾರ (ಟಿಳಕ ಪಂಚಾಂಗ[1])
ನಯನಾರಿ	=	ಕಾಣೇ
ಆರಾಧ್ಯರು	=	ಪರಾಂಜಪೆ
ಮದ್ದಿನವರು	=	ಆಗಲಾವೆ
ಹರಿಬಂಟನವರು	=	ಭಾಗವತ
ದವಸದವರು	=	ಕಣ್ಯಾಚೇ (ದಾತೇ ಪಂಚಾಂಗ)
ಘಣ್ನಾಯಕರು	=	ದೇಶಮುಖ
ಖಂಡೇಕಾರ	=	ಭಾತಖಂಡೇ
ಜ್ವಾಲಸಾಗರ	=	ಭಾನು
ಭಾರತದವರು	=	ವೈಶಂಪಾಯನ
ಬಲ್ಲರಸರು	=	ವ್ಯಾಸ
ಬೊಕ್ಕಸದವರು	=	ಸಾಠ್ಯೇ
ಸಕ್ಕರೆ ಪಟ್ಟಣ	=	ಸಾಖರೇ (ಟಿಳಕ ಪಂಚಾಂಗ)
ಮಣಿವಾಲದವರು	=	ಹಿರೇ (ದಾತೇ ಪಂಚಾಂಗ)

[1] ಟಿಳಕ ಪಂಚಾಂಗದ ಕೊನೆಯಲ್ಲಿ ಕೊಟ್ಟ ಚಿತ್ಪಾವನ ಬ್ರಾಹ್ಮಣರ ಅಡ್ಡ ಹೆಸರುಗಳಲ್ಲಿ ಕಿಲ್ಲೀದಾರ ಎಂಬುದು ಕಿಲ್ಲೇದಾರ ಎಂದು ಅಪಭ್ರಂಶವಾಗಿದೆ.

ಶ್ರೀ ನಾ. ಗೋ. ಚಾಪೇಕರ ಇವರು ತಮ್ಮ ಚಿತ್ಪಾವನಗ್ರಂಥದಲ್ಲಿ "ಚಿಪಳೂಣ ಅಗ್ರಹಾರದ ೬೪ ಒಕ್ಕಲು ಬ್ರಾಹ್ಮಣರಲ್ಲಿದ್ದ ಎಂದರೆ ಚಿತ್ಪಾವನ ಬ್ರಾಹ್ಮಣರಲ್ಲಿದ್ದ 'ಕಾನಡೆ' ಎಂಬ ಅಡ್ಡಹೆಸರಿನವರು ಕರ್ನಾಟಕದವರು ಇರಬೇಕೆ"ಂದು ಊಹಿಸಿದ್ದಾರೆ. ಈ ಊಹೆಯು ಸಮಂಜಸವಾಗಿದೆ. ಏಕೆಂದರೆ, ಕಾನಡೆ ಮನೆತನದವರ ಗೋತ್ರವು ಶಾಂಡಿಲ್ಯವಾಗಿದೆ. ತಾಳಗುಂದ ಅಗ್ರಹಾರದ ೬೪ಒಕ್ಕಲು ಬ್ರಾಹ್ಮಣರಲ್ಲಿಯೂ ಶಾಂಡಿಲ್ಯಗೋತ್ರದವರು ಇದ್ದಾರೆ. ಇವೆರಡೂ ಅಗ್ರಹಾರಗಳ ೬೪/೬೪ ಒಕ್ಕಲು ಬ್ರಾಹ್ಮಣರು ಒಂದೇ ಕಾಲಕ್ಕೆ ಅಹಿಚ್ಛತ್ರದಿಂದ ಈ ಅಗ್ರಹಾರದ್ವಯಗಳಿಗೆ ಬಂದವರಾಗಿದ್ದುದರಿಂದ ಅಣ್ಣ ತಮ್ಮಂದಿರಲ್ಲಿ ಒಬ್ಬನು ತನ್ನ ಮನೆತನವನ್ನು ತಾಳಗುಂದ ಅಗ್ರಹಾರದಲ್ಲಿ ಮತ್ತೊಬ್ಬನು ತನ್ನ ಮನೆತನವನ್ನು ಚಿಪಳೂಣ ಅಗ್ರಹಾರದಲ್ಲಿ ಸ್ಥಾಪಿಸಿದನು; ಎನ್ನುವುದಕ್ಕೆ **ನಯನಾರಿ** (ತಾಳಗುಂದ), ಕಾಣೆ (ಚಿಪಳೂಣ) ಎಂಬ ಒಂದೇ ಅಡ್ಡಹೆಸರಿನ ಇವೆರಡೂ ಮನೆತನಗಳವರು ಶಾಂಡಿಲ್ಯಗೋತ್ರದವರೇ ಇದ್ದುದರಿಂದ ಚೆನ್ನಾಗಿ ವ್ಯಕ್ತವಾಗುತ್ತದೆ.

ಚಿಪಳೂಣ ಅಗ್ರಹಾರದಲ್ಲಿದ್ದ ಶಾಂಡಿಲ್ಯಗೋತ್ರದ 'ಕಾಣೆ' ಎಂಬ ಅಡ್ಡಹೆಸರಿನ ಒಂದು ಮನೆತನದಲ್ಲಿ ಮುಂದೆ ಕಾಲಾಂತರದಿಂದ ಸಂತತಿ ಆಗದೆ ಹೋದುದರಿಂದ ಈ ಮನೆತನದ ಯಜಮಾನನು ತಾಳಗುಂದ ಅಗ್ರಹಾರದಲ್ಲಿದ್ದ "ನಯನಾರಿ" ಎಂಬ ಅಡ್ಡಹೆಸರಿನ ಶಾಂಡಿಲ್ಯಗೋತ್ರದ ತಮ್ಮ ವಂಶಜರಲ್ಲಿಯ ಒಬ್ಬ ಹುಡುಗನನ್ನು ದತ್ತಕ ತೆಗೆದುಕೊಂಡಿರಬೇಕೆಂದೂ ತದನಂತರ ಆ ಹುಡುಗನಿಗೆ ಆ ತಾಳಗುಂದ ಅಗ್ರಹಾರದಲ್ಲಿದ್ದ ಭಿನ್ನಗೋತ್ರದವರು ಕನ್ಯೆಯನ್ನು ಕೊಟ್ಟು ವಿವಾಹಕಾರ್ಯವನ್ನು ನೆರವೇರಿಸಿರಬೇಕೆಂದೂ, ಅರ್ಥಾತ್, ಈ ಪತಿ ಪತ್ನಿಯರಿಬ್ಬರೂ ಅಚ್ಚ ಕನ್ನಡಿಗರಾದುದರಿಂದ ಈ ಉಭಯತ್ರರು ಚಿಪಳೂಣ ಅಗ್ರಹಾರದಲ್ಲಿ ಇರಲಾರಂಭಿಸಿದ ಬಳಿಕ ತಮ್ಮ ಗೃಹಭಾಷೆಯನ್ನು ಮಾತ್ರ ಕನ್ನಡ ಭಾಷೆಯನ್ನಾಗಿ ಇಟ್ಟುಕೊಂಡಿದ್ದರಿಂದ ಈ ಮನೆತನವನ್ನು ಚಿಪಳೂಣ ಅಗ್ರಹಾರದ ಬ್ರಾಹ್ಮಣರು "ಕಾನಡೆ (=ಕನ್ನಡ) ಮನೆತನ" ಎಂದು ಸಂಬೋಧಿಸಲಾರಂಭಿಸಿದರೆಂದೂ ಹೇಳುವುದು ಸಯುಕ್ತಿಕವಾಗಿದೆ.

ಇನ್ನು 'ಮರಾಠೆ' ಎಂಬ ಅಡ್ಡಹೆಸರನ್ನು ಕುರಿತು ವಿವೇಚಿಸುವ: ಚಿಪಳೂಣ ಅಗ್ರಹಾರದಲ್ಲಿದ್ದ ಕಪಿಗೋತ್ರದ ರಟಾಟೆ ಮನೆತನದ ವರನಿಗೆ ತಾಳಗುಂದ ಅಗ್ರಹಾರದಲ್ಲಿದ್ದ ಭಿನ್ನಗೋತ್ರದ ಕನ್ಯೆಯನ್ನು ನಿಶ್ಚಯಮಾಡಿರಬೇಕೆಂದೂ ಹಾಗೂ ಬ್ರಾಹ್ಮಣರ ವಿವಾಹಪದ್ಧತಿಗನುಸರಿಸಿ ಕನ್ಯೆಯ ಮಾತಾಪಿತೃಗಳು ತಮ್ಮ ಮನೆಯಲ್ಲಿಯೇ, ಅರ್ಥಾತ್, ತಾಳಗುಂದ ಅಗ್ರಹಾರದಲ್ಲಿಯೇ ವಿವಾಹ ಸಮಾರಂಭವನ್ನು ನೆರವೇರಿಸ

ಬೇಕಾದ್ದರಿಂದ ವರಪಕ್ಷದ ರಟಾಟೆ ಮನೆತನದವರು ಚಿಪಳೂಣದಿಂದ ತಾಳಗುಂದಕ್ಕೆ ಬಂದ ಕಾಲದಲ್ಲಿ ಕನ್ನಡಿಗರಾದ ಕನ್ಯಾಪಕ್ಷದವರು ಮರಾಠಿಗರಾದ ವರಪಕ್ಷದವರನ್ನು 'ಮರಾಠೆ' ಎಂದು ಸಂಬೋಧಿಸಲಾರಂಭಿಸಿರಬೇಕೆಂದೂ ಆ ಬಳಿಕ ಈ 'ಮರಾಠೆ' ಎಂಬ ಅಡ್ಡಹೆಸರಿನಿಂದಲೇ ಈ ರಟಾಟೆ ಮನೆತನದವರನ್ನು ಚಿಪಳೂಣ ಅಗ್ರಹಾರದ ಬ್ರಾಹ್ಮಣರು ವಿನೋದಾರ್ಥವಾಗಿ ಸಂಬೋಧಿಸಲಾರಂಭಿಸಿದರೆಂದೂ ಹೇಳಬಹುದು.

ಈ ಪ್ರಕಾರ ಚಿಪಳೂಣ ಅಗ್ರಹಾರದ ಬ್ರಾಹ್ಮಣರಲ್ಲಿ ಕಾನಡೆ ಮತ್ತು ಮರಾಠೆ ಎಂಬ ಉಪನಾಮಗಳು ಇರುತ್ತಿರುವುದರಿಂದ ಚಿಪಳೂಣ ಅಗ್ರಹಾರದ ಬ್ರಾಹ್ಮಣರಿಗೂ ತಾಳಗುಂದ ಅಗ್ರಹಾರದ ಬ್ರಾಹ್ಮಣರಿಗೂ ದತ್ತಕಸಂಬಂಧ, ವಿವಾಹಸಂಬಂಧಗಳು ಜರುಗುತ್ತಿದ್ದವೆಂಬುದು ನಿಷ್ಪನ್ನ.

ಇನ್ನು ತಾಳಗುಂದ ಅಗ್ರಹಾರದ ಬ್ರಾಹ್ಮಣರ ೧೪ ಗೋತ್ರಗಳನ್ನೂ ಚಿಪಳೂಣ ಅಗ್ರಹಾರದ ಬ್ರಾಹ್ಮಣರ ೧೪ ಗೋತ್ರಗಳನ್ನೂ ನಿರೀಕ್ಷಿಸುವ.

ಇಬ್ಬರಲ್ಲಿಯೂ ಇರುವ ಒಂಬತ್ತು ಗೋತ್ರಗಳು

(೧) ಕಾಶ್ಯಪಗೋತ್ರ
(೨) ಅತ್ರಿಗೋತ್ರ
(೩) ಭಾರದ್ವಾಜಗೋತ್ರ
(೪) ಜಾಮದಗ್ನ್ಯಗೋತ್ರ
(೫) ವಾಸಿಷ್ಠಗೋತ್ರ
(೬) ಕೌಂಡಿಣ್ಯಗೋತ್ರ
(೭) ಶಾಂಡಿಲ್ಯಗೋತ್ರ
(೮) ಕೌಶಿಕಗೋತ್ರ
(೯) ಶ್ರೀವತ್ಸಗೋತ್ರ

(ತಾಳಗುಂದ)	(ಚಿಪಳೂಣ)
(೧೦) ವಿಶ್ವಾಮಿತ್ರಗೋತ್ರ	(೧೦) ಕಪಿಗೋತ್ರ
(೧೧) ಗೌತಮಗೋತ್ರ	(೧೧) ಗಾರ್ಗ್ಯಗೋತ್ರ
(೧೨) ಅಗಸ್ತ್ಯಗೋತ್ರ	(೧೨) ನಿತ್ಯುಂದನಗೋತ್ರ
(೧೩) ಹಾರೀತಗೋತ್ರ	(೧೩) ಬಾಭ್ರವ್ಯಗೋತ್ರ
(೧೪) ಬಾದರಾಯಣಗೋತ್ರ	(೧೪) ವಿಷ್ಣುವೃದ್ಧಗೋತ್ರ

ಈ ಪ್ರಕಾರ ಇವೆರಡೂ ಅಗ್ರಹಾರಗಳ ಬ್ರಾಹ್ಮಣರಲ್ಲಿ ೯ ಗೋತ್ರಗಳು ಉಭಯತ್ರರಲ್ಲಿಯೂ ಒಂದೇ ಆಗಿದ್ದು, ೫ ಗೋತ್ರಗಳು ಮಾತ್ರ ಬೇರೆ ಬೇರೆಯಾಗಿವೆ.

ಶಿವಚಿತ್ತ ಕದಂಬರಾಜನು ಗೋವೆಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಮಧ್ಯಕೊಂಕಣವನ್ನೂ ಬನವಾಸಿನಾಡನ್ನೂ ಆಳುತ್ತಿರುವಾಗ್ಗೆ ಇವನ ತಮ್ಮನಾದ ವಿಷ್ಣುಚಿತ್ತನು ಯುವರಾಜನಾಗಿದ್ದು, ಈತನು ಹಲಸಿಗೆನಾಡನ್ನು ಆಳುತ್ತಿದ್ದನು. ಆ ಕಾಲಕ್ಕೆ ಈ ವಿಷ್ಣುಚಿತ್ತನು ಹಲಸಿಗೆಯಲ್ಲಿ ಶ್ರೀ ನೃಸಿಂಹದೇವಾಲಯವನ್ನು ಪ್ರತಿಷ್ಠೆಮಾಡಿ, ಈ ದೇವಾಲಯದ ಆಧಿಪತ್ಯಕ್ಕೆ ಕರ್ಹಾಡೆ ಬ್ರಾಹ್ಮಣರನ್ನು ಸರ್ವಾಧಿಕಾರಿಗಳನ್ನಾಗಿ ಮಾಡಿರುವುದನ್ನು ನೋಡಿದರೆ, ಕರ್ಹಾಡೆ ಬ್ರಾಹ್ಮಣರು ಸಹ ಅಹಿಚ್ಛತ್ರ ಅಗ್ರಹಾರದಿಂದ ಇದೇಕಾಲಕ್ಕೆ ದಕ್ಷಿಣಭಾರತಕ್ಕೆ ಬಂದಿರಬೇಕು. ಇದೇ ಮೇರೆಗೆ ದೇವಋಖಿ (= ದೇವಋಷಿ) ಬ್ರಾಹ್ಮಣರ ಶಾಖಾ ಸೂತ್ರ ಗೋತ್ರಗಳು ಚಿತ್ಪಾವನ ಬ್ರಾಹ್ಮಣರ ಶಾಖಾ, ಸೂತ್ರ, ಗೋತ್ರಗಳಂತೆ ಬಹುಮಟ್ಟಿಗೆ ಇರುತ್ತಿರುವುದರಿಂದ ಈ ದೇವಋಖಿ ಬ್ರಾಹ್ಮಣರೂ ಸಹ ಇದೇ ಕಾಲಕ್ಕೆ ಅಹಿಚ್ಛತ್ರ ಅಗ್ರಹಾರದಿಂದ ದಕ್ಷಿಣ ಭಾರತಕ್ಕೆ ಬಂದರೆಂಬುದು ಸಿದ್ಧ.

ಚಿಪಳೂಣ ಗ್ರಾಮವು ಚಿತ್ಪಾವನ ಬ್ರಾಹ್ಮಣರ ಅಗ್ರಹಾರವೆಂದು ಹೇಳುವುದಕ್ಕೆ ಮೂರು ಪ್ರಮಾಣಗಳು ಇವೆ.

(೧) ರತ್ನಾಗಿರಿ ಜಿಲ್ಹೆಯಲ್ಲಿ ಜನರು ಚಿತ್ಪಾವನ ಬ್ರಾಹ್ಮಣರನ್ನು **“ಚಿಪಳೋಣಾ ಬ್ರಾಹ್ಮಣರೆಂದು”** ಸಂಬೋಧಿಸುತ್ತಾರೆ. (ಚಿತ್ಪಾವನ ಗ್ರಂಥ, ಪುಟ ೧)

(೨) “ಚಿಪಳೂಣ ಗ್ರಾಮವು ಚಿತ್ಪಾವನ ಬ್ರಾಹ್ಮಣರ ಮೂಲಸ್ಥಳವಾಗಿದೆ” ಎಂಬ ಲೋಕವಾರ್ತೆಯು ಪ್ರಸಿದ್ಧ.

(೩) ಸ್ಕಾಂದಪುರಾಣಾಂತರ್ಗತ ಸಹ್ಯಾದ್ರಿ ಖಂಡದ ೮೨ ನೆಯ ಅಧ್ಯಾಯದಲ್ಲಿ ಚಿತ್ಪಾವನ ಬ್ರಾಹ್ಮಣರ ವಿಷಯವಾಗಿದ್ದ ಪ್ರಕ್ಷಿಪ್ತ ಕಥೆಯಲ್ಲಿ ಸಹ ಚಿಪಳೂಣ ಗ್ರಾಮವೇ ಚಿತ್ಪಾವನ ಬ್ರಾಹ್ಮಣರ ಮೂಲಸ್ಥಳವೆಂಬುದನ್ನು ವ್ಯಕ್ತಪಡಿಸಿದ್ದಾರೆ.

ಉತ್ಕಲ, ಮೈಥಿಲ, ಕಾನ್ಯಕುಬ್ಜ, ಸಾರಸ್ವತ, ಗೌಡ ಈ ಪಂಚಗೌಡನಾಮಗಳಲ್ಲಿ ಯಾವುದೊಂದನ್ನೂ ಧಾರಣಮಾಡದೆ, ಉತ್ತರದೇಶಸ್ಥ (=ದೇಶಸ್ಥ), ಬಡಗನಾಡು, ೬೪ ಒಕ್ಕಲು, ಅಗ್ನಿಹೋತ್ರ ಪಾವನ (=ಚಿತ್ಪಾವನ), ಸಹವಾಸಿ, ಕರ್ಹಾಡೆ, ದೇವಋಖಿ, (=ದೇವಋಷಿ), ವಡಮ, ಬೃಹಚ್ಚರಣ, ಸಾಂಕೇತಿ, ಇತ್ಯಾದಿ ನಾಮಗಳನ್ನು ಧಾರಣಮಾಡಿಕೊಂಡು ಆಹಾರ, ಆಚಾರಗಳಲ್ಲಿ ಸಮಾನಸಂಸ್ಕೃತಿಯನ್ನು ಇಟ್ಟುಕೊಂಡು, ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ಸ್ಥಿರವಾಗಿ ವಾಸಿಸುವುದಕ್ಕೆ ಬಂದ ಬ್ರಾಹ್ಮಣರೆಲ್ಲರೂ ಪಂಚದ್ರಾವಿಡ ಬ್ರಾಹ್ಮಣರೆಂದು ಪ್ರಸಿದ್ಧರಾದರು.

ಇಷ್ಟೆಲ್ಲ ವಿವರಣೆಯ ಮಥಿತಾರ್ಥವೇನೆಂದರೆ, ಮಧ್ಯಕೊಂಕಣದಲ್ಲಿರುವ ಚಿಪಳೂಣ ಅಗ್ರಹಾರಕ್ಕೂ ಬನವಾಸಿ ನಾಡಿನಲ್ಲಿರುವ ತಾಳಗುಂದ ಅಗ್ರಹಾರಕ್ಕೂ ನಿತಾಂತ ಸಾಮ್ಯವಿರುವುದರಿಂದ ಇವೆರಡೂ ಅಗ್ರಹಾರಗಳಲ್ಲಿ ಅಹಿಚ್ಛತ್ರದಿಂದ ೬೪/೬೪ ಬ್ರಾಹ್ಮಣ ಕುಟುಂಬಗಳನ್ನು ಕರೆದುಕೊಂಡು ಬಂದು ಸ್ಥಾಪಿಸಿ ಅವರ ಯೋಗಕ್ಷೇಮಗಳ ಏರ್ಪಾಡನ್ನು ಮಾಡುವುದಕ್ಕೆ ಸಮರ್ಥನೆಂದರೆ, ಶಿವಚಿತ್ತ ವೀರಪೆರ್ಮಾಡಿ ದೇವನಾದ ಗೋವೆಯ ಕದಂಬರಾಜನೇ ಸರಿ. ಅತಏವ ಬನವಸೆ ಮೊದಲೆನಿಸಿದ ಅನೇಕ ಮಂಡಳೇಶ್ವರನಾದ (ಎಂದರೆ, ಬನವಸೆ ಮಂಡಳ, ಗೋವೆ ಮಂಡಳ, ಹೈಗಮಂಡಲ, ತುಳುಮಂಡಲ ಪ್ರಭೃತಿ ಅನೇಕ ಮಂಡಳೇಶ್ವರನಾದ) ಮುಕ್ಕಣ್ಣ ಕದಂಬನೆಂದರೆ ಈ ಶಿವಚಿತ್ತ ವೀರಪೆರ್ಮಾಡಿದೇವನೇ ಎಂಬುದನ್ನು ಹಿಂದೆಯೇ ತಿಳಿಸಿಯಾಗಿದೆ.

ಮೆ. ರೈಸಸಾಹೇಬರು ಈ ಮುಕ್ಕಣ್ಣ ಕದಂಬನು ಕದಂಬವಂಶದ—ಮೂಲ ಪುರುಷನೆಂನು ಭ್ರಮಿಸಿದ್ದಾರೆ. ಕದಂಬವಂಶದ ಮೂಲಪುರುಷನಾದ "ಮುಕ್ಕಣ್ಣ, ತ್ರಿಲೋಚನ, ತ್ರಿನೇತ್ರ ಎಂಬುವನು ಸಾರ್ವಭೌಮರಾಜನೂ ಅಲ್ಲ; ಮಾಂಡಲಿಕ ರಾಜನೂ ಅಲ್ಲ; ಯಃಕಶ್ಚಿತ್ ದರಿದ್ರನಾದ ಒಬ್ಬ ವೈದಿಕ ಬ್ರಾಹ್ಮಣನು. ಇಂಥ ಬಡವನು ಉತ್ತರಾಪಥದಿಂದ ಬ್ರಾಹ್ಮಣ ಕುಟುಂಬಗಳನ್ನು ಕರೆದುಕೊಂಡು ದಕ್ಷಿಣಾ ಪಥಕ್ಕೆ ಬಂದು, ಅವರನ್ನು ಅಗ್ರಹಾರದಲ್ಲಿ ಸ್ಥಾಪಿಸುವುದು ಸರ್ವಥೈವ ಅಶಕ್ಯವಾಗಿದೆ.

ಸಾ. ಶ್ರೀ ರಾಜಪುರೋಹಿತರು

ಚಿರದುಃಖಿ[1]

೧

ನಾಯೊಂದು ಅಳುತಿತ್ತು, ಪಾಳೂರು ಮಲಗಿತ್ತು.
ತಾಯಿಕಾವೇರಿ ಒಂದೆರಡಾಗಿ ಒಡೆದಿರುಳ
ಮೌನದಲಿ ಭೋರೆಂದು ಮೊರೆಯುತ್ತ ಪಟ್ಟಣವ
ಬಳಸಿ ಮುಂಬರಿಯುತ್ತ, ಮತ್ತೆ, ತನ್ನನು ತಾನೆ
ಸೇರಿ ಸಾಗುತಲಿತ್ತು. ಚಂದ್ರಮನ ಮೋಡಗಳು
ಮುತ್ತಿಕೊಳ್ಳದೆ ಬೆಳಕಿನಾಟವನು ನೋಡಲಿಕೆ
ದೂರದೂರದ ಬೆಟ್ಟಗಳ ಮೇಲೆ ಅಲೆವುತ್ತ
ಗಾಳಿಯೊಡನಾಡುತಿವೆ. ಶ್ರೀರಂಗಪಟ್ಟಣವು
ತಿಂಗಳಿನ ಹೊದಿಕೆಯಲಿ,— ಸಾಲುಮರದಡಿಯಲ್ಲಿ
ಬಿದ್ದಿರುವ ಪರದೇಶಿಯಂತೆ — ತಾ ಪವಡಿಸಿದೆ.
ಬೆಳುದಿಂಗಳೆದುರಲ್ಲಿ ' ಮಿಂಚುಸೊಡರು 'ಗಳೆಲ್ಲ
ಬೈಗಿನಲಿ ಮಿಂಚುಹುಳು ಹೊಳೆವಂತೆ ಹೊಳೆಯುತಿವೆ.
ಅರ್ಧರಾತ್ರಿಯು ಕಳೆದು ಅರೆಘಳಿಗೆಯಾಗಿಲ್ಲ!
ನೀರಮೇಲಣ ಗಾಳಿ, ಊರ ಮರಗಳ ತುಂಬ
ಬೀಸುತ್ತ, ಬೀದಿಯಾ ನಾಯಿಗಳ, ಗೂಳಿಗಳ,
ನಡುಗಿಸುತ ನಗುತಲಿದೆ. ಅರೆಬಿದ್ದ ಕೋಟೆಯಾ
ಗೋಡೆಗಳು, ಕಪ್ಪನೆಯ ನೆಳಲನ್ನು ಪಕ್ಕದಲಿ
ಹರಡಿ ಆ ಕಟ್ಟಿರುಳ ಮೋನದಲಿ ಉಸಿರಿಡದೆ
ಗಂಭೀರದೋಲ್ ನಿಂತು ಏನನೋ ನೋಡುತಿದೆ.
ಕತ್ತಲೆಯ ಹುತ್ತವೆನೆ ಕೊತ್ತಲವು ರೌದ್ರತೆಯ
ಆಗರವದೆನಿಸಿಹುದು. ಸತ್ತ ಬೆಕ್ಕನು ತಿಸಲು
ಅಲ್ಲಿ ಗೂಬೆಯ ಗುಂಪು, ಗೂಕರಿಸಿ ಸೇರುತಿವೆ
ಹೆಣನ ಕಿತ್ತಾಡುತಿವೆ, ಮತ್ತೆ ಕೂಗುತ್ತಿವೆ.

---

[1] ಮೈಸೂರು ವಿಶ್ವವಿದ್ಯಾನಿಲಯದಲ್ಲಿ ೧೯೩೩ನೆಯ ವರ್ಷ "ಶ್ರೀ" ಯವರ ಸ್ವರ್ಣ ಬಹುಮಾನ ಪಡೆದ ಕವಿತೆ.

ರಾತ್ರಿಯಾ ಭೀಕರತೆ ಎದ್ದೆದ್ದು ನಿಲ್ಲುತಿದೆ,
ಬಾವಲಿಗಳಾಗಸದೆ ಸಂತೆಯಲಿ ಜನರಲೆವ
ತೆರದಲ್ಲಿ ಅಲೆಯುತಿವೆ. ಸುಳಿಗಳನು ಸುತ್ತಿಸುತ
ಮಲಗಿರುವ ಮಡುವಿನಿಂದೆದ್ದ 'ನಕ್ರಾಕುಲ'ವು
ಬಂಡೆಗಳ ತಬ್ಬಿ ಕೆಲವಾಗಸಕೆ ಬಾಯ್ದೆರೆದು
ಸೃಷ್ಟಿಯಾಶಾಂತತೆಗೆ ದೃಷ್ಟಿಯನ್ನೆರೆದು ಆ
ಬೆಳಕಿನಾಕತ್ತಲಲಿ, ಸತ್ತಂತೆ ಬಿದ್ದಿರುವ
ವಾರಾತ್ರಿ ಆವುದೋ ನೋವನೊಳಗಿರಿಕಿಕೊಂ
ಡಳುತಲಿದೆ, ದೃಶ್ಯ ಭೀಕರತೆಯಾಂತೆದೆಯಲ್ಲಿ
ನಡುಗುತಿದೆ. ತಿರೆಯೆಲ್ಲ ಬಿಳಿಕಪ್ಪು ಬಣ್ಣದಲೆ
ಸಲೆಯೆಸಗಿದಂತಿಹುದು. ಹೆಮ್ಮರಗಳಬ್ಬರವು
ಹೊಳೆನೀರ ಮೊರೆತಗಳು, ನಿಶೆವಕ್ಕಿಗಳ ಕೂಗು,
ಎನಿತಾದರೂ ಊರ ಗಂಭೀರ ಶಾಂತಿಯದು
ತೊಲಗದಿದೆ. ಮಾನವನು ಎಲ್ಲವನು ಮರೆತಂತು
ಕಣ್ಮುಚ್ಚಿ ಎಲ್ಲಿಯೋ ಮುಸುಕೆಳೆದು ಪಟ್ಟಿಹನು.
ಚಿಮಚಿಮನೆ ರಾತ್ರಿಯಾಜೀರುಂಡೆ ಚೀರುತಿದೆ.
ಪೂರ್ವಕ್ಕೆ ಕರಿಘಟ್ಟ, ಕರಿ ಥಟ್ಟನೆದ್ದಂತೆ
ಬೆಳ್ದಿಂಗಳಲಿ ಎದ್ದು ಮೌನದಲಿ ಮೈಸೂರ
ಗತಕಾಲದಾ ರಾಜಧಾನಿ ಶ್ರೀರಂಗನಾ
ಪಟ್ಟಣದ ನೋವನ್ನು ನಿರುಕಿಸುತೆ ಹೆಳವನಾ
ದುಃಖವನು ಉಪ್ಪರಿಗೆ ಧನವಂತ ಬಗೆವಂತೆ
ಏನನೋ ಊಹಿಸುತ, ಕೌತುಕದೆ ನಿಂದಿಹುದು.
ಅಬ್ಬ ! ಎಂತಹ ನೋಟ !! ಇದನೋಡೆ ಮೋಡಗಳು
ಓಡೋಡಿ ಬಂದವವು. ಹಿಮಕರನೆ ಮರೆಯಾದನು.

೨

ಬೆಳಕು ನಂದಿತು, ಮುಗಿಲು, ಮುಗಿಲಿನಿಂ ತುಂಬಿಬರೆ
    ಜ್ವರವಿಳಿಯುವಂತೆ ಬೆಳುದಿಂಗಳಳಿಯೆ
ಸುತ್ತಲಿನ ನೀರವವು ಕತ್ತಲೆಯನಾದರದೆ
    ತಬ್ಬಿಕೊಂಡಿತು ಭಯವು ಉಬ್ಬಿಹರಿಯೆ

ತತ್ತಿಗಳನೊಂದೊಂದ ಬಡಿದು ಪುಡಿಪುಡಿಮಾಡಿ
ಪುಡಿಯ ಸುತ್ತಲು ಇಟ್ಟ ಸತ್ತಹಾವ
ತೆರದೆ ಮುರಿದೂರಸುತ್ತಲು ನಿಂದ ಕೋಟೆಯದು
ಅವುಡುಗಚ್ಚಿದೆ ನುಂಗೆ ಕರುಳನೋವ

ಕೋಟೆಬಾಗಿಲುಗಳಲಿ ಕವಿದಿರ್ದ ಕತ್ತಲೆಯು
ಕತ್ತಲೆಯನೇ ಹೆದರಿಸುತ್ತಲಿರಲು
ಆರವನು ? ಬಾಗಿಲಲಿ ? ಇಲ್ಲೇಕೆ ಮಲಗಿಹನು ?
ನರಳುವನೆ ? ದುಃಖಿಪನೆ ? ಏತರೊರಲು ?

ತಡೆ, ನಿಲ್ಲು, ನೋಡು, ಅವನೆದ್ದು ಕಂಬವನೊರಗಿ
ಅಲ್ಲಿ ಕುಳ್ಳಿರ್ದನದು ಕಲ್ಲುಗೋಣೆ
ಮನುಜನಾದರೆ ಇಂತು ವಿಕೃತ ಕಾಯುವದೇಕೆ ?
'ದೆವ್ವ'ವೆನ್ನುವರಲ್ಲ ! ಇದೆಯೊ ಕಾಣೆ !

ಹೊಗೆಯಲ್ಲಿ ಮಾಡಿಟ್ಟ ಮಾನವಾಕೃತಿಯಂತೆ
ತೇಲುತಿಹನೇತಕಿವ ? ಇವನೆ ಭೂತ ?
ಆವುದೋ ಚಿತ್ರದಲಿ ಇವನ ನೋಡಿದ ನೆನಪು
ಒಮ್ಮೊಮ್ಮೆ ಸುಳಿಯುವುದು ಯಾರು ಈತ ?

ಬಲಗೈಯ ನೆಲಕೂರಿ ದೇಹವನು ಮೇಲೆತ್ತಿ
ನೋಡ, ನಿಂತನು. ಅಹುದು, ಗಂಡು ಅವನು,
ಏನಿದದ್ಭುತಕಾಯ ? ಏನುಶಕ್ತಿಯ ಮಾಯ ?
ಭೂತವೆನ್ನಲು ಆತ್ಮನೊಪ್ಪಿಕೊಳನು.

'ಹುಲ್ಲೆಬಾಗಿಲ' ದಾಟಿ, ಕೋಟೆಗೋಡೆಯ ಸಮಕೆ
ನಡೆತಂದನಾಗಸವನೊಮ್ಮೆ ನೋಡಿ
ಕತ್ತಲಲಿ ಮಿರುಗುತ್ತ, ಬೆಳಕಿನಲಿ ಕಪ್ಪಿಟ್ಟು
ಸಾಗುತಿರ್ದನು ಮೊಗವ ಕೆಳಗೆ ಮಾಡಿ.

ಹಾ ! ಅಹುದು !! ಈಗರಿತೆ, ಓ ಪ್ರಭುವೆ ! ಓ ಕಲಿಯೆ !
ಸುಲ್ತಾನ ! ಇದು ನೀನೆ ? ನೀ ಟಿಪ್ಪುವೆ ?

ನಿನಗು ಉಂಟೇ ದುಃಖ? ಏತಕೀ ನಿಡಿದುಸಿರು?
ಸಮರವೀರರಿಗು ಕಂಬನಿಗಳಿಹವೆ?

ರಾಜ, ಎಲ್ಲಿಗೆ ಹೊರಟೆ, ಮುಳ್ಳುಗಳ ಹಾದಿಯಲಿ?
ಅರೆರಾತ್ರಿಯಲಿ ಚರಿಪ ವಿಧಿಯಿದೆಂತು?
ಆಸೆಗಳು ತೀರದಿರೆ, ಗಂಡುಗಲಿ ನೀಕೂಡ
ಭೂತವಾದೆಯ ದುಃಖಿಯಾಗಲಿಂತು?

ಅಯ್ಯೊ! ನಡೆದನು ದೊರೆಯು—ಈಗವನು ದೊರೆಯಲ್ಲ
ಸೋಡೆ ಮನುಜನೆ ಅಲ್ಲ. ದೆವ್ವವಹುದು.
ಹುಣ್ಣಿಮೆಯ ರಾತ್ರಿಯಲಿ ನಿಶ್ಯಬ್ದ ಧಾತ್ರಿಯಲಿ
ಅದೊ! ಸತ್ತವನ ಆತ್ಮ ಚಲಿಸುತಿಹುದು.

ಕಾಲನೆಳೆಯುತ, ಕೈಯ ಕೈಯಿನಿಂ ಮಸೆವುತ್ತ
ದುಃಖಿಸುಲ್ತಾನ ಪೊರಮಟ್ಟ ನೋಡು.
ಅವನ ಮುದ್ದಿನ ಊರು? ಅವನ ವಾಸದ ಸೂರು
ಕಲೆಯ ಬೀಡದು ಆಯ್ತು ಕೊಲೆಯಬೀಡು.

ಕಣ್ಣೆತ್ತಿ ಪಟ್ಟಣವ ನೋಡಲೂ ಮನಬರದು
ನೋಡದಿರಲೂ ಆರ ಕಣ್ಣುತುಂಬ
ಬಲಭೀಮನೆದೆಯಂಥ ಸುತ್ತು ಗೋಡೆಗಳಂಚ
ಸವರಿ ನಡೆಯಿತು ಅವನ ದೇಹಬಿಂಬ.

ಹೊಳೆಯ ದಾರಿಯ ದಾಟಿ, ಪಶ್ಚಿಮದ ನೇರಕ್ಕೆ
ನಡೆದನೆಂಬತ್ತು ಗಜ ವೊಡನೆ ನಿಂತ
ಅವನ ಶ್ರೀ ಚರಣಗಳ ಶಿರದಲ್ಲಿ, ಭಕ್ತಿಯಲಿ
ಕ್ರಮದಿಂದ ಹೊತ್ತವವು ಕಲ್ಲುಹಂತ.

ಮುಂಗಡೆಗೆ ಮೂವತ್ತು, ಹಿಂಗಡೆಗೆ ಮೂವತ್ತು
ಮಂದಿಗಳ ಬಿಟ್ಟಿಲ್ಲ ದರ್ಪವೆತ್ತು
ದ್ರೋಹಿಗಳ ಕೂಡಿರುವ, ಬಂಧಿ ನೆಲಮಾಳಿಗೆಗೆ
ಟಿಪ್ಪು ಬರುತಿದ್ದೊಂದು ಕಾಲವಿತ್ತು

ಈಗ ಬರುತಿಹನವನು ‘ ಗಾಳಿ ’ ರೂಪವನೆತ್ತಿ
ಕಣ್ಣುಗಳು ಕೆಂಬಣ್ಣವೆತ್ತಿರುವುವು
ಮಿಂಚಿನಾ ಹನಿಯಂತೆ ಕಂಬನಿಗಳಲ್ಲಿಂದ
ಉಕ್ಕುಕ್ಕಿ ತಟಪಟನೆ ಉದುರುತಿಹವು.

ಟೀಪು, ಸಾಯುವ ಮುನ್ನ ಒಟ್ಟು ಇಪ್ಪತ್ತೆರಡು
ಗುಂಡು ದೇಹವನೆ ಹೊಕ್ಕಿದ್ದುವಂತೆ !
ಆಗವಗೆ ಇನಿಸೊಂದು ನೋವೆನಿಸಲಿಲ್ಲಿಂದು
ಆ ನೋವು ಮೈಯಲ್ಲಿ ತೋರಿಬಂತೆ !

ಸುಲ್ತಾನನುದರದಲಿ ಕೋಪವಡಗಿರುವಂತೆ
ಮಾಳಿಗೆಯಲಡಗಿಹುದು ‘ ದೊಡ್ಡಗುಂಡು ’
ಟಿಪ್ಪುವಿನ ಹೃದಯವನು ದುಃಖ ಮುತ್ತಿರುವಂತೆ
ಮಾಳಿಗೆಯ ಮುತ್ತಿಹುದು ಮುಳ್ಳುದಂಡು.

ಹೊಗೆಬಂಡಿ ಹಾದಿಯನು ಹಾಯ್ದು ಮುನ್ನಡೆದನವ
ಎದುರುಗೊಂಡಿತು ಅರಿಯ ಜಯದ ಸ್ತೂಪ
ಮೋಡಗಳು ಓಡಿದವು, ಚಂದ್ರನೀಚೆಗೆ ನೆಗೆದ,
ದೊರೆಗೆ ಹೆಚ್ಚಿತು ಹುಚ್ಚು ಸೇಡು, ಕೋಪ.

ಗತಿಸಿದೌಷಧಶಾಲೆ, ಮುರಿದ ಕೋಶಾಗಾರ
ನಮಿಸೆ ರಾಜಗೆ, ಭೂಪ ಹಲ್ಲುಗಡಿದ
ಶಟ್ಟನೆದ್ದಿತು ಗಾಳಿ ಗರಗರನೆ ತಿರುತಿರುಗಿ
ಬೀಸಿತರಸನು ಬೇಗನತ್ತ ನಡೆದ

ಊರ ಮೂಲೆಯ ನಾಲ್ಕು ಮದ್ದಿನಾಮನೆಯಲ್ಲಿ
ಒಂದರಾ ತಲೆವಾಗಿಲಲಿ ಇಣುಕಲು
ಆರೊ ಕಳ್ಳರು ಕದ್ದದನವ ಕೊಯ್ದಾಡುತ್ತ
ಹಿಗ್ಗುತಿದ್ದರು ನೆತ್ತರೆರಚಾಡಲು.

ಹಸಿಮಾಂಸ ವಾಸನೆಯು, ನರಿಯೊಂದ ಹತ್ತಿರದ
ಪೊದೆವರೆಗು ಕರೆತಂದು ನಿಲ್ಲಿಸಿತ್ತು.

ನಯನ, ಮನಭೀಕರವದಾ ರಾತ್ರಿ; ಆ ನರಿಯು
ʻ ಗೋಳೆಂ ʼದು ಬಾಯ್ಬಿಟ್ಟಿತಾಗ ಅತ್ತು.

೩

ಕೋಟೆಯೊಡನೆಯೆ ಬಳಸಿ ಊರಕಾಯುತಲಿದ್ದ
ಕಂದಕವು ಟೀಪುವನೆ ಕಂಡು ಬೆದರಿ
ನಾಚಿ ಮೊಗವನು ತೋರಲಾರದಾಯಿತು. ರಾಜ
“ ಹೇಡಿ ! ಸಾಯೀ ” ಎನುತ ನೊಂದ, ಬೆವರಿ.

ಹಿಂದೆ ವೀರರು ಮುದ್ದು ಕತ್ತಿಗಳನೊಳಗೊಂಡು
ಹತ್ತಿರಕೆ ಬರಲೆದೆಯು ಹಾರುವಲ್ಲಿ
ಈಗಲ್ಲಿ ಎಕ್ಕ, ತುಂಬೆಗಳು ಬೆಳದಿಹವೊಂದು
ಕರು ದಾರಿದಪ್ಪಿ ಮೆಲುಕಿಡುವುದಲ್ಲಿ.

ಸುಲ್ತಾನನಲ್ಲಿಂದ ಕಾಲ್ದೆಗೆದು ನಡೆತಂದ
ಆ ʻ ದರಿಯದವಲತ್ತು ʼ ತಲೆವಾಗಿತು.
ಹಿಂದೆ ರಾಜಾಸ್ಥಾನ; ಇಂದು ನೋಟದ ತಾಣ
ಅಸಹಾಯಕತೆಯಿಂದ ಎದುರಾಯಿತು.

ನೋಡಲಾರದೆ ಪೂರ್ವದಿಕ್ಕಿನಾ ಗಾಳಿಯನು
ಜತೆಗೂಡಿ ಹಾರಿದನು, ನಿಂತನಲ್ಲಿ.
ಸತ್ತು, ತನ್ನದು ತನ್ನ ಅಪ್ಪ ಅಮ್ಮನ ದೇಹ
ಅಕ್ಕಪಕ್ಕದಲ್ಲಿಹುದ ಕಂಡನಲ್ಲಿ.

ದೂರದಲೆ ʻ ಅಬ್ಬಾಯಿ, ಮಾ ʼ ಗಳಿಗೆ ತಲೆವಾಗಿ
ಕಣ್ಣೀರ ಹರಿಸಿದನು. ಒರಸಿಕೊಳನು.
“ ನನ್ನದಲ್ಲದ ದೇಶದಲಿ ನಾನು ನರಳುತಿಹೆ.
ಕನಿಕರಿಸಿ ; ಸಾಕು ” ಎಂದೆನುತಿರುವನು.

“ ನನ್ನ ಮನಸಿನ ಕನಸು, ಇಷ್ಟು ಪೆಡಸಿನದೆಂದು
ಬಿದ್ದು ಒಡೆಯುವುದೆಂದು ತಿಳಿದಿದ್ದೆನೇ ?
ನನ್ನ ಜನ ತಿನ್ನಲಿಕೆ ಮಣ್ಣ ಕೊಡುವರು ಬಾಯ್ಗೆ
ಎನ್ನುವುದ ಎಂದಾದರರಿತಿದ್ದೆನೇ ? ”

“ಕನ್ನಡದ ರಾಜ್ಯದಲೆ ಅನ್ನವನು ತಿನುತಿದ್ದು
ಕನ್ನಡಕೆ ದ್ರೋಹವನೆ ಎಣಿಸಿದ್ದೆನೆ?
ಹುಟ್ಟುಗಳ್ಳರು ಪೇಳ್ವ ಕಟ್ಟುಕತೆಯಂತಾನು
ಹಿಂದುಗಳ ಕುಲಕೆರಡ ಬಗೆದಿದ್ದೆನೆ?”

“ಒಂದು ನುಡಿಯಾಡುವರನೊಂದು ನಾಡಿನಲಿಡುವ
ಎನ್ನಾಸೆಯಲರ ಅವರೇ ಸುಟ್ಟರು,
ನನ್ನ ನೆಚ್ಚಿನ ‘ರಂಗ’ ಅವರ ದೇವರು, ಗೊತ್ತು.
ಆದರೂ ವಿಶ್ವಾಸವನೆ ಬಿಟ್ಟರು”

“ದೊರೆ ಎನಿಸಿದವಗೆಲ್ಲಿ ಜಾತಿಕುಲಗಳ ಕಟ್ಟು?
ರಾಜ, ರಾಜ್ಯವ ಕಾಯ್ವ ಜನರ ತೊತ್ತು
ಎಂದಾನು ಅರಿತಿದ್ದೆ. ಕತೆಪೇಳ್ದರಲಿ ಮಾತ್ರ
‘ಮತವೈರಿ’ ಎಂಬ ಹೆಸರೆನಗೆ ಬಿತ್ತು”

“ಶಿಷ್ಟರನು ಮೋಸದಲಿ ಕೊಂದು ಮುಂದಿನ ಜಗದೆ
‘ದುಷ್ಟಶಿಕ್ಷಕ’ ರೆಂಬ ಬಿರುದು ಹೊರಲು
ಕಟ್ಟಿ ಹರಡಿಹ ಕೆಟ್ಟ ಹರಟೆಗಳನೆಲ್ಲವನು
ನೆಚ್ಚಿ ಆಡುವುವಿನ್ನು ಹಲವು ಕೊರಲು”

“ಅಯ್ಯೋ! ಇನ್ನೂ ನನ್ನ ಈ ಬಾಳು ಮುಗಿಯದಿದೆ
ಮುತ್ತ ಕಳೆದೆಸೆದ ಶುಕ್ತಿಯುದರಂತೆ.
ನನ್ನ ಗುರಿ, ಆದರ್ಶವೆಲ್ಲ ನುರಿ ಸುಚ್ಚಾಯ್ತು
ಉಳಿದೆ ಸತ್ತವನ ಅಪಕೀರ್ತಿಯಂತೆ.

“ಕನ್ನಡದ ಮಕ್ಕಳಿರ, ‘ಮಮ್ಮದ’ ನ ಮಕ್ಕಳಿರ
ಕಾಲವಿನ್ನೂ ಮೀರಿಹೋಗಿಲ್ಲವು
ಇಂದಿನಾ ಬೆಳುದಿಂಗಳಂತೆ ನಿಮ್ಮಯ ನೇಹ
ಎಲ್ಲೆಲ್ಲು ಹರಡಿಬರಲಿನ್ನು ತರವು.”

“ನನ್ನ ನನ್ನಿಯ ಪ್ರಜೆಯ ಪೌತ್ರರಿರ, ಮಕ್ಕಳಿರ
ಹೇಗೆ ತೋರಲಿ ಎನ್ನ ಮನದ ಅಳಲ?

ನಿಮ್ಮ ನಾಡಿಗೆ ನಾನು 'ರಾಹು' ವೆನಿಸಿರಲಿಲ್ಲ
ಸಾಕ್ಷಿ ಕಾವೇರಿ ತಾನಿರುವಳಲ್ಲ!"

"ನೀವೆಲ್ಲ ನನಗಾಗಿ 'ಅಯ್ಯೊ' ಎಂದರೆ ಸಾಕು,
ಈ ದೆವ್ವದಾಯುಸ್ಸು ಕ್ಷೀಣಿಸುವುದು,
ನೀವೆಲ್ಲ ಒಂದಾಗಿ ನಾಡ ಬಲಿಗೆದುರಾಗೆ
ಎನ್ನಾತ್ಮ ಅಂದು ಸಗ್ಗವ ನೋಳ್ಪುದು"

"ಕನ್ನಡ ಜೀವಗಳೆ, ನಾನಿನ್ನು ಸತ್ತಿಲ್ಲ
ಆ ಪುಣ್ಯವೆನಗಿನ್ನು ಲಭಿಸಲಿಲ್ಲ.
ಮನೆಯ ಕೈಸೆರೆಗೊಟ್ಟು ಆದರ ಸೂರಲೆ ಇಂದು
'ಸೈತಾನ' ನಂತೆ ಜೀವಿಸುವೆನಲ್ಲ"

"ಹುಲಿಯ ಬೆನ್ನನು ತಟ್ಟಿ ಕಾಳಗಕೆ ಕರೆದಿದ್ದೆ
ಆ ಪುರುಷಗಣ್ಣಲ್ಲಿ ಇಂದು ನೀರು.
ಕರದ ಕತ್ತಿಯ ಹೊಳೆಸಿ, ಅರಿಯ ಕಣ್ಣನು ಇರಿದ
ವೀರತ್ವಕಿಂದಿಲ್ಲವದರ ಬೇರು."

"ರಾಜಕಾರಣಕೆಲ್ಲ 'ಗದ್ದಿಗೆ'ಯ ತೆರನಿದ್ದ
ದರಿಯದವಲತ್ತು ಈಗಾಟಕಾಯ್ತು
ಮನವು ಚಿಂತಿಸುತಿರಲು, ನಯನವಾಡಲಿಕಾಗಿ
ಇಟ್ಟ ತೋಟವು 'ಖುಷಿ'ಯ ಕೂಟಕಾಯ್ತು."

"ಊರ ಕಾಯಲು ಎದ್ದ ಕೋಟೆ ಕೊತ್ತಲವೆಲ್ಲ
ಕಾಡುದನ ಗೂಬೆಗಳ ವಾಸಕಾಯ್ತು
ತಂದೆತಾಯಿಯ ಪುಣ್ಯ ಗೋರಿಗಳ ಸುತ್ತಲೂ
ಅಂದು ಸತ್ತೆಲ್ಲರಾ ಗಣನೆಯಾಯ್ತು."

"ಅಯ್ಯೊ! ತಾಯಿಯ ಕೊರಳ ತಾರೆಗಳ ಮಾಲೆಯಲಿ,
ಸಿಂಗರಿಸಬೇಕೆಂದು ಬಯಸಿದ್ದೆನೆ!
ಕನ್ನಡದ ನಾಡೆಲ್ಲ ಹೊನ್ನುಡೆಯ ಜನರಿಂದ
ಗಿಡಿವಂತೆ ಮಾಳ್ಪ ಕನಸಿಟ್ಟಿದ್ದೆನೆ!"

"ಕೃಷ್ಣನಿಗು, ಕರಿಮನಿಗು, ಬಸವನಿಗು, ಬುದ್ಧನಿಗು
ತೀರ್ಥಕರರೆಲ್ಲರಿಗು ಎದೆಯೆಡೆಗಳು
ಒಂದೆ ಮಟ್ಟದವೆನ್ನ ಜೀವನದೆ. ಎಲ್ಲರಿಗು
ಸಲ್ಲುವುದು ಎನ್ನ ಶತ ವಂದನೆಗಳು."

ದೊರೆಯು ಆ ಮತದವನು, ಎಂದು ಈ ಮತದವರು
ಮಮತೆ ಬಿಡದಿರಲೆಂಬುದೆನ್ನಾಸೆಯು
ನಿಮ್ಮ ಹಿತಕಾಗಿಯೇ ಹುಟ್ಟಿ ದುಡಿದಾ ಅವನ
ನಂಬದಾ ತಪ್ಪಿಗಾಗೀ ಶಿಕ್ಷೆಯು"

ಟೀಪುವಿನ ಹಿರಿಮನಸು ಇಷ್ಟೆಲ್ಲವಾಡಿತ್ತು.
ಕಣ್ಣೀರು ಮುಗಿದಿತ್ತು. ದುಃಖವಿತ್ತು
ಸುತ್ತಿನಾ ಸೃಷ್ಟಿ ಸುಲ್ತಾನನಾ ಜತೆಗೂಡಿ
ಅತ್ತಕಾರಣದಿಂದ ತೆಪ್ಪನಿತ್ತು.

೪

ಕಲ್ಲು ಕರಗುವ ಹೊತ್ತು
ಬೆಳುದಿಂಗಳಿತ್ತು
ಗೋರಿಗಳ ತಾವಿಂದ
ದೆವ್ವ ಹೊರಟಿತ್ತು
ನೋಡಲಾರದೆ ಊರ
ಹುಲ್ಲೆಬಾಗಿಲಿಗೆಂದು
ಇನ್ನು ನಡೆದಿತ್ತು
ಕತ್ತಲೆಯ ಆಸರೆಯು
ಅದಕೆ ಬೇಕಿತ್ತು.

ಗದ್ದೆ ಭತ್ತಗಳೆಲ್ಲ
ತಲೆತೂಗುತಿತ್ತು
ಗದ್ದೆಯೊಳಗೆಲ್ಲೆಲ್ಲು
ನೀರಾಡುತಿತ್ತು
ಮಿಂಚುಹುಳು ದಂಡುಗಳು

ತೆನೆಗಳೊಡನಾಡಾಡಿ
ಮಿನುಗಾಡುತಿತ್ತು
ಭೂಮಿ, ತರು, ಸಸಿಗಳಿಗೆ
ಮೊಲೆಯೂಡುತಿತ್ತು.

ಟಿಪ್ಪು, ಸುತ್ತಲು ನೋಡಿ
ಮುನ್ನಡೆಯುತಿದ್ದ.
ಜಿರ್ರೆನುತಲಿದ್ದ ಹುಳು
ಬಾಯ್ತಡೆಯುತಿತ್ತು.
ಮುಂದಿನವು ಮೆಲುಮೆಲನೆ
ಹತ್ತಿರದವಾಗುತ್ತ
ಲಿತ್ತ ಬರುತಿತ್ತು
ಹತ್ತಿರದವತ್ತಕಡೆ
ಹಿಂದೆಗೆಯುತಿತ್ತು.

ಕತ್ತಲಲೆ ನಡೆಯುತ್ತ
ಊರ ಸೇರಿದನು
ಕಂಡು ಭಯಪಡುವರೆಂ
ದವಗಾಯ್ತು ಭಯವು
ಊರು ಮಲಗಿದ್ದರೂ
ಮದುವೆ ಮನೆಯೊಂದೆದ್ದು
ಬಲು ಕಿರಲುತಿತ್ತು
ಜನರ ನಗೆಯವನ ಕಿವಿ
ವರೆಗು ಬರುತಿತ್ತು.

ಮದುವೆ ಮನೆಯಿಂದಿರ್ವ
ರೈತಂದರದಕೊ !
ಹೊರಗೆಲ್ಲ ನಿಶ್ಶಬ್ದ
ಬೆಳುದಿಂಗಳೊಳಗೆ
ಆ ಗೋಡೆಯಂಚಿನಲಿ

ಟೀಪು ನಡೆಯುತಲಿದ್ದ
ಬಂದವರಲೊಬ್ಬ
'ಅಗೊ, ನೋಡು, ಅದು ದೆವ್ವ'
ಎಂದರಚಿಕೊಂಡ.

ಥಟ್ಟನೋಡಿದ ಟಿಪ್ಪು
ಮರೆಯ ಕಡೆಗೆಂದು
ಮನಸ ಬಲು ಸಂಕೋಚ
ಮುತ್ತಿ ಹಿಡಿದಿತ್ತು
ಭೂವಾಸ ಸಾಕುಮಾ
ಡೆಂದು ಕೇಳಲಿಕಾಗಿ
ರಂಗನೆಡೆಗಾಗಿ
ಸುಲ್ತಾನನೈತಂದ—
ಗುಡಿಯು ಮಲಗಿತ್ತು.

'ರಂಗ ಎಂದಿನಹಾಗೆ
ಪವಡಿಸಿರಬೇಕು.
ಅವನೀಗ ಏಳುವನೆ?
ಎಂದೆಂದಿಗಿಲ್ಲ!
ಸುಂಕದಾ ಕಾಯಿಗಳ
ಒಡೆಸಿಕೊಂಡಿರಲಾರ
ಅವನಿಲ್ಲಿ ಇಲ್ಲ.
ಎನುತ ಹೊಳೆಕಡೆಗಾದ
ಚಿರದುಃಖಿ ಟೀಪು.

ಚಂದ್ರನಿಳಿಬಿದ್ದಿದ್ದ
ಪಶ್ಚಿಮದ ಕಡೆಗೆ.
ಪೂರ್ವ ರಂಗೇರುತ್ತ
ಹಣ್ಣಾಗಲಿತ್ತು.
ಟೀಪು ಹೊಳೆದಡದಲ್ಲಿ

ಕುಳಿತು ಅಳುತಲಿಕಿರಲು
   'ರೈಲು ಬರುತಿತ್ತು ;
ಬೆಂಗಳೂರಿನ ಕಡೆಯ
   ಪಯಣಿಗರ ಹೊತ್ತು.

'ಬೆಳಕರಿಯಿತೆಂ'ದೆದ್ದು
   ಟೀಪು ಮರೆಯಾದ.
ಕೋಳಿ ರೆಕ್ಕೆಯ ಬಡಿದು
   ಕ್ರೊಕ್ರೊಕ್ರೊಕ್ರೋ
ಎಂದು ಕೂಗಲು ಊರು
ಮೈಮುರಿದು ಆಕಳಿಸಿ
   ಕಣ್ಣುಜ್ಜಿತೆದ್ದು
ಟೀಪುವಿನ ರಾತ್ರಿ ತಾ
   ನಾಗ ಮೊದಲಾಯ್ತು.

ಎಂ. ಎನ್. ಬಾಬು

ದಿನಚರ್ಯೆ*

ಪಾತ್ರಗಳು

ಡಾಕ್ಟರ್ ನಾರಾಯಣರಾವ್, ಎಲ್.ಆರ್.ಸಿ.ಪಿ., ಎಂ.ಆರ್.ಸಿ.ಎಸ್.
ಸೀತಮ್ಮ—ಇವರ ತಂಗಿ.
ರಂಗಪ್ಪ—ಅಡಿಗೆಯವನು.

ಡಾ. ನಾರಾಯಣರಾಯರ ಮನೆಯ ಒಂದು ಕೊಠಡಿ. ರಂಗಸ್ಥಳದಲ್ಲಿ (ಪ್ರೇಕ್ಷಕರ) ಎಡಕ್ಕೆ ಒಂದು ಬಾಗಿಲು—ಮನೆಯ ಒಳ ಹಜಾರಕ್ಕೆ ತೆರೆಯುತ್ತದೆ. ಬಾಗಿಲ ಹತ್ತಿರ, ಎದುರಿಗೆ ಒಂದು ಬೀರು ಗೂಡು—ಮುಚ್ಚಿದೆ. ಅದರೊಳಗೆ ಹೇರ್ ಆಯಿಲ್, Thermos-flask, ನಾಲ್ಕಾರು ಸೀಸೆ, ಡಬ್ಬಿ, ಇತ್ಯಾದಿ. ಮಧ್ಯದಲ್ಲಿ ಒಂದು ದುಂಡನೆಯ ಸಣ್ಣ ಮೇಜ. ಬಲಕ್ಕೆ ಮೂಲೆಯಲ್ಲಿ ಬರೆಯುವ ಮೇಜ—ವೈದ್ಯಕೀಯ ಪುಸ್ತಕಗಳು, ಶಾಯಿ, ಲೇಖನಿ, ಕಾಗದಪತ್ರ, ಒಂದು ಓದುವ ದೀಪ. ಈ ಮೇಜದ ಎಡಕ್ಕೆ, ಎದುರು ಗೋಡೆಯಲ್ಲಿ ಒಂದು ಕಿಟಕಿ, ಮೇಜಕ್ಕೆ ಸೇರಿದ ಹಾಗೆ ಒಂದು ತಿರುಗಣೆ ಕುರ್ಚಿ. ಕಿಟಕಿ ಪರೆದೆಯಿಂದ ಪೂರ್ತಿ ಮುಚ್ಚಿದೆ. ಎದುರು ಗೋಡೆಯ ಮಧ್ಯೆ ಗಡಿಯಾರ. ೪ ಗಂಟೆ. ಅದರ ಪಕ್ಕದಲ್ಲಿ, ಸ್ವಲ್ಪ ತಳಗೆ ಕಣ್ಣಿನ ಪರೀಕ್ಷೆಯ ರಟ್ಟು. ಬಲಗಡೆ ಗೋಡೆಯ ಹತ್ತಿರ ಒಂದು ಸ್ಟೂಲಿನ ಮೇಲೆ ಕೆಲವು ವೈದ್ಯಕೀಯ ಸಲಕರಣೆಗಳು.

ತಿರುಗಣೆಯ ಕುರ್ಚಿಯ ಮೇಲೆ ಕುಳಿತು ನಾರಾಯಣರಾವ್ ಎಡಗೈಯಲ್ಲಿ ಒಂದು ಕಾಗದ ಹಿಡಿದು, ಆ ಕೈಯನ್ನು ಮೇಜದ ಮೇಲೆ ಚಾಚಿ, ಏನೋ ದೀರ್ಘವಾಗಿ ಯೋಚಿಸುತ್ತಾನೆ. ಸುಮಾರು ಮೂವತ್ತೈದು ವಯಸ್ಸಿರಬಹುದು. ಶ್ರೀಮಂತ. ಅವನು ಯೋಚನಾಪರನಾಗಿದ್ದಾಗ ಸೀತೆ ಒಳಗೆ ಬರುತ್ತಾಳೆ. ಹದಿನೆಂಟು-ಇಪ್ಪತ್ತು ವರ್ಷ ವಯಸ್ಸು. ಲಕ್ಷಣವಾಗಿದ್ದಾಳೆ. ದೇಹಾಯಾಸದಿಂದಲೂ ಮನಃಕ್ಲೇಶದಿಂದಲೂ ಕಂದಿದ ಮುಖ. ಮಾತನಾಡುವಾಗ ಬೇಸರದಿಂದ ಮಾತಾಡುತ್ತಾಳೆ. ಆದರೆ ಕೆಲವು ಸಲ ಹುರುಪಿನಿಂದಲೂ ಮಾತಾಡುತ್ತಾಳೆ.

ಸೀತೆ—ಸ್ವಲ್ಪ ಹೊರಗೆ ಹೋಗಿ ಬರ್ತೀನಣ್ಣ ನಾನು.

ನಾರಾಯಣ—ಆ — ಒಳ್ಳೇದಮ್ಮ . . . ಎಲ್ಲಿಗೆ ಹೋಗ್ತಿ ?

ಸೀತೆ—ಸಾವಿತ್ರಿ ಬಂದು ಪೀಡಿಸುತ್ತ ಇದಾಳೆ. ಅವರ ಮನೇಗೆ ಹೋಗಬೇಕಂತೆ. ನನಗೆ ಎಲ್ಲಿಗೆ ಹೋಗೊಕ್ಕು ಇಷ್ಟವಿಲ್ಲ. ಸುಮ್ಮನೆ ಬಲವಂತ ಮಾಡುತಾ ಇದಾಳೆ. ಋಣ ತೀರಿಸಿ ಬರುತೀನಿ.

ನಾರಾ.—ಏನೊ, ಸ್ನೇಹಿತೆ. ಪ್ರೀತಿ ಇಂದ ಕರೀತಾಳೆ. ಹೋಗಿ, ಹಾಗೇ ಪಾರ್ಕುಗೀರ್ಕು ತಿರುಗಿಕೊಂಡು ಬನ್ನಿ.

---

*ರಾಲ್ಫ್ ವುದರ್‌ಸ್ಪೂನ್ ಮತ್ತು ಎಲ್. ಎನ್. ಜಾಕ್‌ಸನ್ ಇವರ "ಆಲ್ ಇನ್ ದಿ ಡೇಸ್ ವರ್ಕ್" ಎಂಬ ನಾಟಕದ ಆಧಾರದ ಮೇಲೆ ಬರೆದದ್ದು.

ಸೀತೆ—ಪಾರ್ಕು ಬೇಡ ಎಂಥಾದ್ದೂ ಬೇಡ. ಎಲ್ಲಿಗೆ ಹೋದರೂ ಯಾರು ಬಂದರೂ ಬೇಜಾರು—

ನಾರಾ. (ಮಾತು ತಡೆದು)—ಹೂ, ಇರಲಿ, ಈಗ ಹೋಗಿಬಾ, ನೋಡೋಣ.

[ಎಂದು ಹೊರಗೆ ಕಳುಹಿಸುತ್ತಾನೆ. ಅವಳು ಹೋದ ಸ್ವಲ್ಪ ಹೊತ್ತು ಯೋಚಿಸುತ್ತಿದ್ದು, ತರುವಾಯ ನಾರಾಯಣ ಬಾಗಿಲಿಗೆ ಹೋಗಿ ''ರಂಗಪ್ಪನವರೆ'' ಎಂದು ಕರೆಯುತ್ತಾನೆ. ರಂಗಪ್ಪನಿಗೆ ಸುಮಾರು ಐವತ್ತು ವಯಸ್ಸು. ಗಂಭೀರ ಸ್ವಭಾವ, ಗಂಭೀರವಾಗಿಯೆ ಯಾವಾಗಲೂ ಮಾತನಾಡುವುದು. ರಂಗಪ್ಪ ಬರುವಾಗ ನಾರಾಯಣ ಕೋಟುಹಾಕಿಕೊಳ್ಳುತ್ತಿರುತ್ತಾನೆ.]

ನಾರಾ.—ಸೀತೆ ಹೇಗಿದಾಳೆ ರಂಗಪ್ಪನವರೆ, ಇವೊತ್ತು ?

ರಂಗ.—ಯಥಾಪ್ರಕಾರ. ನೆನ್ನೆ, ಏನೋ ಸಕಲೇಶಪುರದಿಂದ ದೂರಪ್ರಯಾಣ ಬಂದಿದ್ದು, ದಣಿವಾಗಿರಬಹುದು ಅಂತಿದ್ದೆ. ಇವೊತ್ತೂ ಹಾಗೇ. ಊಟ, ತಿಂಡಿ ಏನೂ ತಿನ್ನಲಿಲ್ಲ.

ನಾರಾ.—ಹೌದು ತಾನೆ!

ರಂಗ.—ಬಹಳ ಚಿಂತೆಯಾಗುತ್ತಿರೊ ಹಾಗೆ ಕಾಣುತ್ತೆ, ತೀರ ಬೇಜಾರು ಪಡುತ್ತಾರೆ. ಆ ಊರಿಗೆ ಹೋದಾಗಿನಿಂದ ಹೀಗೆ ಆಗಿದೆ. ಮೊದಲನೆ ಸಲ ಬಂದಾಗ, ಏನೊ ಹಳ್ಳಿಗಾಡಿಗೆ ಹೋಗಿದ್ದಿರಬಹುದು, ಸರಿಹೋಗುತ್ತೆ, ಅಂತಿದ್ದೆ ಬರುತಾ ಬರುತಾ ಏಕೊ—

ನಾರಾ.—ಅದೇ ನೋಡಿ, ಆಗಲೆ ನಾಲ್ಕೈದು ಸಲ ಬಂದಿದಾಳೆ. ಒಂದೊಂದು ಸಲಕ್ಕೂ ಹೆಚ್ಚಾದ ಹಾಗೆ ಕಾಣುತ್ತೆ ಬೇಸರ. ಪ್ರಪಂಚವೇ ಬೇಸರ ಆಗಿರೋಹಾಗೆ ಆಡುತ್ತಾಳೆ. ಕೈಲಾದದ್ದೆಲ್ಲ ಹೇಳಿದೆ, ಮಾಡಿದೆ. ಏನೂ ವ್ಯತ್ಯಾಸ ಕಾಣೊಲ್ಲ. ಶಂಕರನೂ ಸಾಧ್ಯವಾದ ಪ್ರಯತ್ನವೆಲ್ಲ ಮಾಡಿದಾನೆ. ಸೀತೆ ಸುಖವಾಗಿರೋಕೆ ಏನು ಬೇಕಾದರೂ ಮಾಡುತೀನಿ ಅಂತ ನೆನ್ನೆ ತಾನೆ ಕಾಗದ ಬರೆದಿದಾನೆ. **ಅವನಿಗೆ** ಬರೆದುಹಾಕಿದೆ ಬೆಳಗ್ಗೆ. ನಾನು ಈಸಲ ಔಷ್ತಿಕೊಟ್ಟು ಕಳಿಸತ್ತೀನಿ. ಇವಳನ್ನು ಸರಿಯಾಗಿ ನೋಡಿಕೊ; ಸಂಜೆಹೊತ್ತು ವಾಕಿಂಗ್ ಕರೆದುಕೊಂಡು ಹೋಗು; ಜತೇಲಿ, ಏನಾದರೂ ಕತೆಯೊ ಕಾದಂಬರಿಯೊ ಓದಿ, ಆಗಾಗ್ಗೆ ಇಲ್ಲಿಗೆ ಬಂದು ಸ್ನೇಹಿತರು ಸಿನಿಮಾ ನೋಡಿ, ಅಂತ. ಅವನೇನೊ ಒಳ್ಳೆಯವನು, ಬುದ್ಧಿವಂತ, ಹೇಳಿದ ಹಾಗೆ ನಡಕೊತಾನೆ. ಇವಳಿಗೇನು ಮಾಡೋದೊ ಗೊತ್ತಾಗೊಲ್ಲ.

ರಂಗ.—ಏನಾದರೂ ಮಾಡಿ. ಯಜಮಾನರು ತೀರಿಕೊಂಡ ಮೇಲೆ ನೀವೆ ಸೀತಮ್ಮನ್ನ ಮುಂದಕ್ಕೆ ಓದಿಸಿದಿರಿ. ಮದುವೇನೂ ಮಾಡಿದಿರಿ. ಅಣ್ಣತಂಗಿ ಅನ್ಯೋನ್ಯವಾಗಿ ಬೆಳೆದಿದೀರ. ಇದುವರೆಗೂ ಅವಳನ್ನ ಕಾಪಾಡಿಕೊಂಡು ಬಂದೋರು ಈಗ

ಬಿಡಬೇಡಿ. ನನ್ನ ಕಣ್ಣೆದುರಿಗೇ ಬೆಳೆದವರು ಇಬ್ಬರೂ. ದೇವರು ನಿಮ್ಮನ್ನ ಸುಖ ವಾಗಿಟ್ಟಿರಲಿ ಅಂತ ನನ್ನಾಸೆ. ಏನಾದರೂ ಉಪಾಯ ಹುಡುಕಿ.

[ರಂಗಪ್ಪ ಮಾತನಾಡುತ್ತಿರುವಾಗ ನಾರಾಯಣ ಯೋಚಿಸುತ್ತಿರುತ್ತಾನೆ]

ನಾರಾ. (ಯೋಚಿಸುತ್ತ)—ಎಲ್ಲಾ ಉಪಾಯವೂ ಆಯಿತು. ಈಗ ಉಳಿದಿರೋದೊಂದೇ. ಅದು ಸರಿಹೋದರೆ ಗೆದ್ದಹಾಗೆ. ಇದುವರೆಗೂ ನೋಡಿದ್ದಾಯಿತು. ಇನ್ನೂ ಹೀಗೆ ಬಿಟ್ಟರೆ ಸರಿಹೋಗೊಲ್ಲ. ನಾನೀವಾಗ ಮಾಡಬೇಕು ಅಂತಿರೋದಕ್ಕೆ ನಿಮ್ಮ ಸಹಾಯ ಅತ್ಯಗತ್ಯ. ಒಂದು ಸಂಸಾರ ಕಾಪಾಡಿದ ಹಾಗಾಗುತ್ತೆ. ಒಂದು ಮನೆ ಉಳಿಸಿದಹಾಗಾಗುತ್ತೆ. ನಾನೀಗ ಹೋಗಿ ಆರುಗಂಟೆಗೆ ಬರುತ್ತೇನೆ. ನಾವಿಬ್ಬರೂ ಇಲ್ಲಿ ಮಾತಾಡುತ ಇರ್ತೀವಿ. ಕಾಫೀತಿಂಡಿ ತಂದಿಡಿ. ಕಾಫೀಗೆ ಸಕ್ಕರೆ ಹಾಕಬೇಡಿ. ಬೇರೇನೂ ತರಬೇಡಿ, ಆಮೇಲೆ. . . .

[ನಾರಾಯಣ ಹೀಗೆ ಮಾತಾಡುತ್ತಿರುವಾಗ ರಂಗಸ್ಥಳದ ದೀಪಗಳು ನಿಧಾನವಾಗಿ ಆರುತ್ತ, ಕಡೆಗೆ ರಂಗದಲ್ಲಿ ಪೂರ್ಣಾಂಧಕಾರ ಕೆಲಹೊತ್ತು ಇರುತ್ತದೆ. ನಿಶ್ಶಬ್ದ. ತರುವಾಯ ಎಲ್ಲ ದೀಪಗಳೂ ಒಂದೇ ಸಲ ಹತ್ತುತ್ತವೆ. ನಾರಾಯಣ ಆಗತಾನೆ ಹಿಂತಿರುಗಿ ಬಂದವನಂತೆ, ಚಕ್ಕಳದ ಕೈ ಚೀಲವನ್ನು ಬರೆಯುವ ಮೇಜದ ಮೇಲಿಟ್ಟು Stethoscope ಅನ್ನೂ ತೆಗೆದಿಡುತ್ತಾನೆ. ಅಷ್ಟು ಹೊತ್ತಿಗೆ ಸೀತಮ್ಮನ ಪ್ರವೇಶ.]

ಸೀತೆ—ಏನಣ್ಣ, ಇನ್ನೂ ಆರು ಗಂಟೆ. ಇಷ್ಟು ಬೇಗ ಬಂದೆ?

ನಾರಾ. (ಒತ್ತಿ ಹೇಳದೆ)—ನಿನಗೋಸ್ಕರ ಬಂದೆ.

ಸೀತೆ—ಹಾಗಿದ್ದರೆ ನಿನ್ನ ಹಳೇ ರೋಗೀನ ಕಂಡರೆ ಬೇಸರ ಆಗೊಲ್ಲ ತಾನೆ?

ನಾರಾ.—ಬೇಸರ ಆಗೋಂ ಹಾಗಿದ್ದರಲ್ವೆ ಆಗೋದು.

ಸೀತೆ—ಪರವಾಗಿಲ್ಲ! ಒಳ್ಳೇ ಭಿಷಗ್ರತ್ನ ನೀನು!

ನಾರಾ.—ನನ್ನ ಭಿಷಗ್ರತ್ನ ಅಂತ ಕರೆಯಬಾರದು. ಸೊಪ್ಪುಸದೆ ಅರೆದು, ಕಷಾಯ ಕುಡಿಸೋರು ಭಿಷಗ್ರತ್ನಗಳು. ನಾವು ಸಾದಾ ವೈದ್ಯರು. ವೈದ್ಯೋ ನಾರಾಯಣೋ ಹರಿಃ—ಅದು ನಾವು.

ಸೀತೆ—ಸದ್ಯಾ! ಹರ ಹರ ಅಲ್ಲವೆಲ್ಲ! ಈಚೆಗೆ ಯಾರಿಗಾದರು ಗುಣ ಮಾಡಿದೀಯ?

ನಾರಾ.—ಕಳೆದ ವರ್ಷದಲ್ಲಿ ಸುಮಾರು ಸಾವಿರ ಜನದಲ್ಲಿ ಮೂರು ಜನಕ್ಕೆ.

ಸೀತೆ—ಆ ಮೂರು ಜನದಲ್ಲಿ ನಾನೊಬ್ಬಳಾಗಿರಬಾರದಾಗಿತ್ತೆ? ನಿನ್ನಿಂದ ನನಗೇನು ಅಷ್ಟು ಸಹಾಯ ಆಗಿಲ್ಲ.—ನಿನ್ನ ಕೈಲಾದದ್ದೆಲ್ಲ ಮಾಡ್ತಿ ನೀನು ಅನ್ನು; ಅದು ಹೇಳಬೇಕಾದ್ದೆ.

ನಾರಾ.—Thanks very much . . . ಈಗ . . . ಸ್ವಲ್ಪ ಕಾಫೀತಿಂಡಿ ತರಿಸ್ತೀನಿ. ಆಮೇಲೆ ನಿನ್ನ ಹೊಸ troubles ಏನು ಅಂತ ಹೇಳುವೆಯಂತೆ, ಒಳ್ಳೆ ಹುಡುಗಿಯಹಾಗೆ.

ಸೀತೆ—ಹೊಸ troubles ಏನು ? ಎಲ್ಲ ಹಳೇವೆ. ಅದೂ ಅಲ್ಲದೆ ಒಳ್ಳೇ ಹುಡುಗಿ ಅಂತ ಕರೀಬೇಡ. ನನ್ನ ಪೇಚಾಟದಿಂದ ಎಲ್ಲರಿಗೂ ತೊಂದರೆ ಕೊಡೊ ಗೂಬೆ ನಾನು.

ನಾರಾ.—ಪೇಚಾಟ ಇರಬಹುದು. ಹುಂ (ಮೃದುವಾಗಿ) ಏಕಮ್ಮ ಪೇಚಾಟ ?

ಸೀತೆ—ನಾ ಕಾಣೆ. ಅಲ್ಪ ಪ್ರಾಣವಾಗಿದೆ, ಅಷ್ಟೆ.

ನಾರಾ.—ಅಲ್ಪ ಪ್ರಾಣ ! ಹಾಗೆಂದರೆ ?

ಸೀತೆ—ಪ್ರೈಮರಿ ಸ್ಕೂಲು ಬಿಟ್ಟು ತುಂಬಾ ದಿನ ಆಯಿತಲ್ಲವೆ ?

ನಾರಾ.—ಹೌದು. ಆದರೆ ?

ಸೀತೆ (ಇದುವರೆಗೂ ತೋರದಿದ್ದ ಹುರುಪಿನಿಂದ)—ಜ್ಞಾಪಿಸಿಕೊ ಅಣ್ಣ, ಏನಾದರೂ ಸಪ್ಪೆಯಾದ್ದು, ಜೀರ್ಣವಾದ್ದು, ಸತ್ವವಿಲ್ಲದಿರೋ ಅಂಥಾದ್ದನ್ನೇನಾದರೂ ಜ್ಞಾಪಿಸಿಕೊ.

ನಾರಾ. (ಅರ್ಥಕ್ಕೆ ತಡವರಿಸುತ್ತ)—ಸರಿ . . . ಸರಿ . . . ಏನಾದರೂ ಬಣ್ಣ ಕಂದೀರೊದು ?

ಸೀತೆ (ಹಳಿಯುತ್ತ)—ಆ ಮಾತು ಹೇಳಿದರೆ ಸಾಕು, ಅದರಲ್ಲಿರೋ ನಿರಾಶೆ ಅರ್ಥ ಕಿರಿಚಿಕೊಳ್ಳುತ್ತೆ. (ತೀರ ಕಹಿಯಾಗಿ) ಅಲ್ಪಪ್ರಾಣ !

ನಾರಾ.—ಇಷ್ಟು ಜುಗುಪ್ಸೆ ಏಕೆ ? ಏನು ಕಾರಣ ?

ಸೀತೆ—ಕಾರಣ ಏನು ಹೇಳೋದಣ್ಣ ? ತೀರ ಬೇಜಾರು ಅಷ್ಟೇ. ಹಳೇ ರೋಗ, ಹಳೇ ಕಾರಣವೇ.

ನಾರಾ. (ಯೋಚಿಸಿ ಹುಸಿ ನಗುತ್ತ)—ಹುಂ, ಸರಿ. ನಿನಗೀಗ ಏನಾಗಬೇಕು ಅಂತ ನನಗೆ ಗೊತ್ತು.

ಸೀತೆ—ಏನು ?

ನಾರಾ.—ನೀನು ಲವಲವಿಕೆಯಾಗಿರುವ ಹಾಗೆ ಮಾಡೋಕೆ—

ಸೀತೆ (ಅಡ್ಡಮಾತು ಹಾಕಿ)—ಲಗ್ನಪತ್ರಿಕೆ ಆದ ದಿನವೇ ಲವಲವಿಕೆಯೆಲ್ಲ ಮುಗಿಯಿತು. ಆಮೇಲೆ ಮದುವೇಲಿ ಕುತ್ತಿಗೆಯ ಮೇಲೆ ಬಿದ್ದ ನೊಗ ಇನ್ನೂ ಹೊತ್ತುಕೊಂಡು ಇದೀನಿ. ತಲೆಬೇಜಾರಾಗಿ ಹೋಗಿದೆ ನನಗೆ. ಈಗಲೊ, ಆ ಮಲೆನಾಡಿನಲ್ಲಿ ಪಾಚಿ ಕೊಳೆತ ಹಾಗೆ ಕೊಳೆಯಬೇಕು. ಚಿಕ್ಕೋಳು ಸೊಸೆ ಅಂತ ಅಡಿಗೆ ಕೆಲಸ ಮಾಡೋಕು ಬಿಡೋದಿಲ್ಲ, ಅತ್ಯಮ್ಮ ಸೋರು. ಮೂಲೇಲಿ ಕೂತು ಸದಾ ನೊಣ ಹೊಡೀತಿರಬೇಕು. ಥು ! . . . ಬೆಳಗಾದರೆ, "ಎದ್ರಾ ? " ಮಧ್ಯಾಹ್ನ,

" ಊಟವಾಯಿತೆ? " ಸರಿ, ಸಂಜೆ,—ಯಾವುದೋ ಕಾಡು ಹರಟೆ. ಮೈ ಪರಚಿ ಕೊಳ್ಳುವ ಹಾಗಾಗುತ್ತೆ! ಊಟ ಹರಟೆ, ಅದು ಬಿಟ್ಟರೆ, ಊಟಹರಟೇನೆ. ಇಲ್ಲದಿದ್ದರೆ ಏಳು ಮನೆ ವಿಚಾರ ಕೂಲಂಕಷವಾಗಿ ತನಿಖೆ ಮಾಡು . . . ಕಾಲೇಜಿನಲ್ಲಿರೊ ಅಷ್ಟು ದಿನ Literature, Philosophy ಅಂತ ಓದಿ, ಈಗ, ನಂಜಮ್ಮನ ಕೈಯಲ್ಲಿ ಎಷ್ಟು ಜತೆ ಬಳೆ ಉಳಿದಿದೆ, ಆಚೆ ಮನೆ ನಾಗಮ್ಮ ಅತ್ತೆ ಹತ್ತಿರ ಎಷ್ಟು ಸಲ ಜಗಳ ಆಡ್ತಾರೆ, ಇದೇ ಆಗಿದೆ. They are no better than beasts ಅಣ್ಣಾ, I hate them. ನನ್ನಷ್ಟು ಸಂಕಟಪಡೋರು ಯಾರೂ ಇಲ್ಲ ಅನ್ನಿಸುತ್ತೆ, ಈ ಪ್ರಪಂಚದಲ್ಲಿ.

ನಾರಾ.—ಛೆ, ಹಾಗೆನ್ನಬಾರದಮ್ಮ. ಏಕೆ—

ಸೀತೆ (ಅಣಕಿಸುತ್ತಾ)— " ಏಕೆ? ನಿನಗೇನು ವಯಸ್ಸಾಗಿದೆಯೆ? ಬೇಕಾದ ಹಾಗೆ ದುಡ್ಡಿದೆ. ಬಟ್ಟೆ ಬರೆಗೇನು ಕಮ್ಮಿ. ಭರ್ಜರಿ ಗಂಡ ಇದಾನೆ. ಹೇಗೆ ತಾನೆ ಹೇಳ್ತಿ ಬೇಜಾರು ಅಂತ? ಸುಖವಾಗಿ ಖುಷಿಯಾಗಿ ಕಾಲ ಹಾಕಬೇಕು "—

ನಾರಾ.—ಸರಿ. ಅಲ್ಲ. ನಾನು—

ಸೀತೆ—ಓ, ಹೋಗಲಿ ಬಿಡು. ಅದು ತಾನೇ ನೀನು ಹೇಳ್ತ ಇದ್ದದ್ದು ?—ಏಕೆ? ಏಕೆ? ಏಕೆ? ಅವರು ಹೇಳೋದು ಅದೆ. ಭರ್ಜರಿ ಗಂಡ ಅಂತ ಮಾತ್ರ ಹೇಳ್ಕೊ ಳೊಲ್ಲ, ಅಷ್ಟೆ. ಪ್ರತಿಷ್ಠೆಯಾಗುತ್ತೆ ಅಲ್ವೆ?

ನಾರಾ. (ಶಾಂತಿಯಿಂದ)— ನಿನ್ನ ಗಂಡನಿಗೆ ಅಹಂಕಾರವೇ ಇಲ್ಲ. ಎಷ್ಟು ತಾಳ್ಮೆ? ತುಂಬ ನಿಧಾನಿ ಅವನು.

ಸೀತೆ—ಹೌದು ಹೌದು. ತುಂಬಾ ನಿಧಾನಿ. ಮಧ್ಯಾಹ್ನ ಕ್ಲಬ್ಬಿಗೆ ಹೋದರೆ ಮಧ್ಯ ರಾತ್ರಿಯ ವರೆಗೂ ಮನೆಗೆ ಬರುವುದಿಲ್ಲ. ಬೆಳಗಿನ ಹೊತ್ತೋ, ಅವರಾಯಿತು ಅವರ ಲೆಕ್ಕ ಪತ್ರವಾಯಿತು. ನನಗಿದ್ದೇ ಇದೆ—ಕಸೂತಿಯೋ ಕೆಲಸದವಳ ಹತ್ತಿರ ಕಾಡುಹರಟೆಯೋ. ಸಂಜೆ ಆಯಿತು ಅಂದರೆ ಬೇಜಾರು ಪ್ರಾರಂಭ. ಎಲ್ಲೂ ಹೋಗೋಕೆ ಮನಸ್ಸು ಬರುವುದಿಲ್ಲ. ಎಲ್ಲಾರು ಯಾರ ಮನೆಗಾದರೂ ಹೋದರೆ ಆ ಮನೆಯುವರು, ಈ ಮನೆಯುವರು ಏಳೆಂಟು ಜನ ಸೇರಿ, ಬೀದಿ ಬಾಗಲಲ್ಲಿ ಕೂತು ಹೋಗೋರ ಬರೋರ ಮಾತು ಆಡಬೇಕು. ಕತ್ತಲೆ ಆಯಿತು ಅಂತ ಮನೆಗೆ ಬಂದರೆ, ಅವರು ಬರೋತಂಕ ದೆವ್ವದ ಹಾಗೆ ಕಾಯ್ತ್ತ ಇರಬೇಕು. ಬೇಜಾರು ಅಂದರೆ ಅಷ್ಟಿಷ್ಟಲ್ಲ . . . . . ಊಟ ಬೇಡ, ತಿಂಡಿ ಬೇಡ, ಜೀವಾನೇ ಬೇಡ.

ನಾರಾ.—ಈಗ ತಿಳೀತು ನಿನಗೇನು ಬೇಕು ಔಷ್ತಿ ಅಂತ.

ಸೀತೆ— ಏನು ಹೊಸದೋ ?

ನಾರಾ.—ಹೌದು ಹೌದು, ಈಗತಾನೆ ತಯರಾದದ್ದು.

ಸೀತೆ—ಕಹಿ ಗಿಹಿ ಇಲ್ಲದೆ, ರುಚಿಯಾಗಿರುತ್ತೆ ತಾನೆ?

ನಾರಾ.—ರುಚಿ ರುಚಿಯಾಗಿರುತ್ತೆ ಅಂತ ಕಾಣಿಸುತ್ತೆ . . .

ಸೀತೆ—ಎಂಥಾದ್ದು. ಹೇಳು?

ನಾರಾ.—ನಿನಗೆ ಈಗ ಆಗಬೇಕಾಗಿರೋದು (ಬೆರಳೆತ್ತಿ ತಡೆದು) ಸ್ವಲ್ಪ ಕಾಫೀ ತಿಂಡಿ.

ಸೀತೆ—ಅಯ್ಯೋ ರಾಮ. ಏನೋ, ಹೊಸ ತರಹ ಔಷ್ತಿ ಕೊಡ್ತಿ ಅಂತಿದ್ದೆ. ಕುಚೋದ್ಯ ಮಾಡಬೇಡ. ನಾಸಿದ್ದರೆಷ್ಟು ಸತ್ತರೆಷ್ಟು ಅನ್ನಿಸುತ್ತೆ. ಏನೇನೂಂತ ಹೇಳ್ಕೊಳ್ಳಿ; ನನ್ನ ಬಾಳು ನರಕದ ಬಾಳಾಗಿದೆ. ಸತ್ತರೆ ಸಾಕು ಅನ್ನಿಸುತ್ತೆ.

ನಾರಾ.—ಅಲ್ಲ ಸೀತೆ, ಹೀಗಾದರೆ—

ಸೀತೆ—ನಾನು ಮಾತೇ ಆಡಕೂಡದೇನು?

ನಾರಾ.—ನೀನೀವರೆಗೂ ಇನ್ನೇನು ಮಾಡುತಾ ಇದ್ದೆ ಅಂತಿದೀ?

ಸೀತೆ (ಆವೇಶದಿಂದ)—ನಾನೇನು ಬಾಯಿಗೆ ಬೀಗ ಹಾಕಿಕೊಂಡಿರಬೇಕೆ? ಹಿಂಗಟ್ಟು ಮುರಿ ಹಾಕಿ ಕೂರಿಸಿದೆ ನನ್ನ ಅವರಿಗೆ, ನನ್ನ ಸ್ವಾಮಿ, ನನ್ನ ದೇವರು. ಅವರ ಜಮಾ ಖರ್ಚು. ಅವರ ಲೆಕ್ಕಪತ್ರ, ಲೇವಾದೇವಿ, ಗುಲಾಮನಾಟ, ಇದೇ ಕಥೆ. ದಿನ ಬೆಳಗಾದರೆ, ಮೂರು ಹೊತ್ತೂ. ನಾನು ಬೇಗ ಸತ್ತರೆ ನನ್ನ ಪುಣ್ಯ. ಇಲ್ಲದಿದ್ದರೆ ಸಾಯೋವರೆಗೂ ಇದೇ ರಾಮಾಯಣ ನಡೀತಿರಬೇಕು . . . . ಇಲ್ಲಿ ಕಾಫೀ ತಿಂಡಿ ಆಗಬೇಕಂತೆ ನನಗೆ ಈಗ. ಹೇಳೋದು ನೋಡು!

ನಾರಾ. (ಕರುಣದಿಂದ)—ಅಷ್ಟೇ ಅಲ್ಲ. ತಿಂದೇ ತಿಂತಿ.

ಸೀತೆ—ನೀನು ಬಲಾತ್ಕಾರ ಮಾಡಬಲ್ಲೆ! ತಿಂಡೀ ಕಾಫೀ! ಹೊಸ ತರಹ ವೈದ್ಯ ಇದ್ದ ಹಾಗಿದೆ. ನಾನು ತಿಂತಾ ಇರೋವಾಗ ನನ್ನ Reactions ಏನೂಂತ watch ಮಾಡ್ತೀಯ? ಇಲ್ದಿದ್ರೆ (ವಿಸ್ಮಯವನಭಿನ್ನಯಿಸುತ್ತ) ಹಾಗೇ ಏನಾದ್ರೂ ಮಾಯ ಮಂತ್ರ ಮಾಡ್ತೀಯೋ?

ನಾರಾ.—ಮಾಯಾ ಮಂತ್ರ! ಅಲ್ವೆ! ಸದ್ಯಾ. ಅಂತೋನಲ್ಲ ನಾನು ಅಂದ್ಕೊಂಡಿದೀನಮ್ಮ.

ಸೀತೆ—ಅನ್ಯಾಯ, ಮಾಯಮಂತ್ರ ಬಂದಿದ್ದರೆ ಏನಾದರೂ ಅನುಕೂಲ ಆಗ್ತಾ ಇತ್ತೇನೊ ನನಗೆ. ಯಾತರಿಂದಲೂ ನನಗೆ ಆಸಕ್ತಿ, ಉತ್ಸಾಹ ಹುಟ್ಟೋಹಾಗಿಲ್ಲ.

ನಾರಾ.—ನಿಜವಾಗಲೂ ನನಗೆ ವ್ಯಥೆಯಾಗುತ್ತಮ್ಮ—ಸದ್ಯಕ್ಕೆ ನೀನು [ರಂಗಪ್ಪನು ತಿಂಡಿ ಕಾಫೀ ತರುತ್ತಾನೆ. ಉಪ್ಪಿಟ್ಟು, ಕೋಡುಬಳೆ, ನಾಲ್ಕು ಕಿತ್ತಿಳೆ ಹಣ್ಣು. ಒಂದು ಕೆಟಲಿನಲ್ಲಿ

ಕಾಫೀ, ಎರಡು ಬರಿದಾಗಿರುವ ಲೋಟಗಳು] ಸ್ವಲ್ಪ ತಿಂಡಿ ತಗೋ. [ರಂಗಪ್ಪನು ತಿಂಡಿ ತಟ್ಟೆಯನ್ನು ದುಂಡುಮೇಜಿನ ಮೇಲೆ ಇಡುತ್ತಾನೆ] ಉಪ್ಪಿಟ್ಟು ಬಿಸಿಬಿಸಿಯಾಗಿದೆ, ನಿನಗದಿಷ್ಟ.

ಸೀತೆ—ಮೈಸೂರ್‌ಪಾಕೂ ಇಷ್ಟ ನನಗೆ.

ನಾರಾ.—ನಿಜ (ಅಡಿಗೆಯವನ ಕಡೆಗೆ ತಿರುಗಿ) ಮಾಡೋದಕ್ಕೆ ಸಾಧ್ಯವಾದರೆ ಈಗಲೆ [ಅಡಿಗೆಯವನು "ಇಲ್ಲ" ಎಂದು ಗಂಭೀರವಾಗಿ ತಲೆ ಅಲ್ಲಾಡಿಸಿ ಹೋಗುತ್ತಾನೆ. ತಿನ್ನುತ್ತಿರುವಾಗ ಮುಂದಿನ ಸಂಭಾಷಣೆ]

(ತಟ್ಟೆಯನ್ನು ಸರಿಯಾಗಿ ನೋಡುತ್ತಾ) ಓಹೋ ಕೋಡುಬಳೇನೂ ಇದೆ. ಯಾರು ಹೆಸರಿಟ್ಟರೋ ಕಾಣೆ, ಕೋಡುಬಳೆ ಅಂತ .... ನೀನು ಇನ್ನೊಂದು ಸಲ ಬರೋ ಹೊತ್ತಿಗೆ ಮೈಸೂರುಪಾಕ್, ಬೊಂಬಾಯಿ ಬೋಂಡ, ಎಲ್ಲಾ ಮಾಡಸ್ತೀನಿ ...

ಸೀತೆ (ಮಂದಸ್ಮಿತದಿಂದ)—ಬಿಡಣ್ಣ ಬರೀ ಮಾತು.

ನಾರಾ. (ಕಾಫಿಯನ್ನು ಎರಡು ಲೋಟಕ್ಕೂ ಬಗ್ಗಿಸಿ)—ನಿಮ್ಮ ಕಡೆ ಸಕ್ಕರೆ ಕಾಫೀನೋ, ಇಲ್ಲ ಬೆಲ್ಲದ್ದೋ ?

ಸೀತೆ—ಸಕ್ಕರೇದೇ, ನಮ್ಮನೇಲಿ ಸಕ್ಕರೇನೇಪ್ಪ.

ನಾರಾ. (ಒಂದು ತೊಟ್ಟು ಕುಡಿದು ಮುಖ ವಿಕಾರಮಾಡುತ್ತಾ)—ಇದಕ್ಕೆ ಸಕ್ಕರೆ ಹಾಕಿಲ್ಲ. ತಡಿ, ಇಲ್ಲೇ ಬೀರು ಗೂಡಿನಲ್ಲಿ ಒಂದಿಷ್ಟು ಸಕ್ಕರೆ ಇದೆ. (ತರುತ್ತಾನೆ. ತನ್ನ ಲೋಟಕ್ಕೆ ಎರಡು ಚಮಚ ಹಾಕಿಕೊಂಡು) ನಿನಗೆ ಜಾಸ್ತಿ ಬೇಕಲ್ಲವೆ ?(ಸೀತೆ "ಹೌದು" ಅಂತ ತಲೆ ಅಲ್ಲಾಡಿಸುತ್ತಾಳೆ. ನಾರಾಯಣ ಅವಳ ಲೋಟಕ್ಕೆ ಮೂರು ಚಮಚ ಮೇಲೆ ಅರ್ಧ ಹಾಕುತ್ತಾನೆ) ...... ನೋಡು ನಿನ್ನ ಗಂಡನ ಮೇಲೆ ಏಕೆ ಇಷ್ಟು ಕೋಪ ಮಾಡಿಕೊಂಡಿದ್ದೀ ಅಂತ ಗೋತ್ತೇ ಆಗೊಲ್ಲ. ನಿಜವಾಗಿಯೂ ಅವನು ಒಳ್ಳೆಯವನು.

ಸೀತೆ—ಯಾರು ಇಲ್ಲ ಅಂದಿದ್ದು ? ನನ್ನ ಪಾಡಿಗೆ ನಾನಿರಲಿ, ತಾವ್ಯಾಕೆ ನನಗೆ ತೊಂದರೆ ಕೊಡಬೇಕು, ಅಂತ ನಾನಿದೀನೇ ಸತ್ನೇ ಅಂತ ವಿಚಾರಿಸೋಲ್ಲ, ನಾನ್ಯಾಕಿರಬೇಕಿನ್ನು ?

ನಾರಾ. (ಲಕ್ಷಿಸದೆ)—ಸಭ್ಯ. ಮಾನಮರ್ಯಾದೆಗೆ ಹೆದರೋನು, ಬುದ್ಧಿವಂತ, ಆಸ್ತಿಕ—

ಸೀತೆ—ಅಲ್ಲವೆ ? ಆಸ್ತಿಕರು ತಾನೆ ! ಲಾಭ ಗಿಟ್ಟಿಸಿ ಗಿಟ್ಟಿಸಿ ಕುಬೇರನ ಸಮಾನ ಆಗಿದಾರೆ.

ನಾರಾ.—ಸುಮ್ಮನೆ ಒಂದಕ್ಕೆ ನೂರು ಹೇಳಬೇಡ.

ಸೀತೆ—ಇಲ್ಲಣ್ಣಾ. ನೀನೇ ಬಂದು ನೋಡು. ಮೂರು ಹೊತ್ತೂ ಪತ್ರ, ಪಾಸ್ ಬುಕ್ಕು ಪ್ಹಾರಾಯಣ ಮಾಡ್ತಿರ್ತಾರೆ. ಎಷ್ಟು ಆಸಕ್ತಿ ಅದರಲ್ಲಿ!

ನಾರಾ—ಹಾಗೋ! ನಿನಗೆ ಏತರಲ್ಲಿ ಆಸಕ್ತಿ ಇದೆಯೋ ಅದರಲ್ಲಿ ಆಸಕ್ತಿ ಅವನಿಗಿಲ್ಲ. . . . ಹಾಳಾದ್ದು ಏತರಲ್ಲಿ ನಿನಗೆ ಆಸಕ್ತಿ ಇದೆ ಅಂತ ಹೇಳಬಾರದೆ?

ಸೀತೆ (ನಿಧಾನವಾಗಿ)—ಅದೇ ಬಂದಿರೋದು. ನನಗೆ ಯಾತರಲ್ಲೂ ಆಸಕ್ತಿ ಇಲ್ಲ. ಅನ್ನಿಸುತ್ತೆ.

ಸೀತೆ—ನೋಡು, ಖಡಾಖಂಡಿತವಾಗಿ ಹೇಳ್ತೀನಿ ನಿಂಗೆ, ನೀನೇನೂ ತಿಳ್ಕೊಳ್ದಿದ್ರೆ. ನೀನು ತಿಳ್ಕೊಂಡ್ರು ಹೇಳ್ತೀನಿ ಅಂತಿಟ್ಕೊ.

ಸೀತೆ—ಭೇಷ್!

ನಾರಾ. (ಹಗುರವಾಗಿ)—ಸಂಸಾರ ಅನ್ನೋದನ್ನು ಒಬ್ಬರು ನಿರ್ವಹಿಸೋದಲ್ಲ. ನಾನು ಅಂದಾಜು ಹಾಕಿರೋದರಲ್ಲಿ, ನಿನ್ನ ಭಾಗದ ಕೆಲಸ ನೀನು ಸರಿಯಾಗಿ ಮಾಡ್ತಾ ಇಲ್ಲ ಅಂತ ಕಾಣುತ್ತೆ. ಪ್ರಯತ್ನಾನೇ ಮಾಡೋಲ್ಲ. . . . ನಿನ್ನ ಕಂಡರೆ ಪ್ರೀತಿ ನನಗೆ—ನಿಮ್ಮಿಬ್ಬರಲ್ಲೂ ಪ್ರೀತಿ ನನಗೆ. ನಿಮ್ಮನ್ನ ಬಿಟ್ಟರೆ ನನಗೆ ಬೇಕಾದವರು ಯಾರೂ ಇಲ್ಲ. ಏನಾದರೂ ಅನಾಹುತ ಆದರೆ ನಾನು ಸಹಿಸಲಾರೆ. ಆಗಲೆ ದುಶ್ಯಕುನ ಕಾಣಸ್ತಾ ಇದೆ. ನೀನು ಹೀಗೆ ಮಾಡ್ತಾಹೋದ್ರೆ ಭಾರಿ ಅನಾಹುತ ಆಗುತ್ತೆ. ಅವನು ತಾನೆ ಎಷ್ಟು ದಿನ ಅಂತ ಸಹಿಸ್ತಾನೆ? ಹಾಗೇ ಸ್ವಲ್ಪ ಅನುಸರಿಸಿಕೊಂಡು ಹೋಗಬೇಕು.

ಸೀತೆ—ಹಾಗೊ? ಅನುಸರಿಸಿಕೊಂಡು ಹೋಗಬೇಕೋ? **ಅವರೇನು** ಮಾಡ್ತಾರೆ?

ನಾರಾ.—**ನೀನೇನು** ಮಾಡಬೇಕು ಅನ್ನೋದು ಈಗ ಪ್ರಶ್ನೆ.

ಸೀತೆ (ಸಿಡುಕಿನಿಂದ)—ಸರಿ. ನನಗೆ ಹೀಗೆ ಹೆಣಗಾಡುವುದಕ್ಕಾಗುವುದಿಲ್ಲ.

ನಾರಾ. (ಮೃದುವಾಗಿ)—ಹೆಣಗಾಡೊಕ್ಕಾಗೊಲ್ವೊ?

ಸೀತೆ—ಹೆಣಗಾಡೊಕ್ಕಾಗೊಲ್ಲ ಅಂತಲ್ಲ; ಹೆಣಗಾಡೋ**ಕ್ಕಾಗೋದೇ** ಇಲ್ಲ.

ನಾರಾ.—ಹೆಣಗಾಡೋಕಾಲ ಸದ್ಯದಲ್ಲೇ ಬರಬಹುದು.

ಸೀತೆ (ದೊಡ್ಡದಾಗಿ ಕಣ್ಣು ತೆರೆದು ಭೀತಿಯನ್ನನುಕರಣ ಮಾಡುತ್ತ)—ಏನು ಹೊಡಿಯೋಕ್ಕೆ ಬಡಿಯೋಕ್ಕೆ ಶುರುಮಾಡ್ತಾರೇನು?

ನಾರಾ.—ಅವನು ಹಾಗೆ ಮಾಡಲಿ ಅಂತ ಆಸೆಯೇ ನಿಂಗೆ? ಅದರಿಂದ ನಿನಗೇನಾದರೂ ಹೆದರಿಕೆ, ಭಯ, ಭಕ್ತಿ. . . .

ಸೀತೆ—ಅಯ್ಯೋ, ದೇವರೆ! ಇಲ್ಲಪ್ಪ. "ನಿನ್ನ ಪೀಡಿಸೋದರಿಂದ ನನಗೇನು ಪುಣ್ಯ ಬಂತು? ನನಗೆ ಸಂಕಟ ಆಗೊಲ್ವೆ?"—ಅಂತ ಹೇಳಿ ಆಟ ಹಾಳ್ಮಾಡ್ತಾರೆ.

ನಾರಾ.—ನಿನ್ನ ಪೇಚಾಟದಿಂದ ಅವನಿಗೆಷ್ಟು ಸಂಕಟವಾಗುತ್ತೋ! [ಸೀತೆ—"ನಾನು ಕಾಣೆ" ಎನ್ನುವ ರೀತಿಯಲ್ಲಿ ತಲೆ ಅಲ್ಲಾಡಿಸುತ್ತಾಳೆ.]

(ಸ್ವಲ್ಪ ಬಿಡುವು)

ನಾರಾ.—ಇನ್ನೊಂದು ಕೋಡುಬಳೆ ತಗೊ. ಓ, ಇನ್ನೂ ಕಾಫೀ ಮುಗಿದಿಲ್ಲವೋ? (ತಾನು ಒಂದು ತೆಗೆದುಕೊಳ್ಳುತ್ತಾ) ಜನ ಹೊಟ್ಟೆತುಂಬ ಆಹಾರ ತಗೊಳ್ಳೋಲ್ಲ. ಅದರಿಂದಲೇನೆ ಎಲ್ಲಾ ತೊಂದರೇನು ಪ್ರಾರಂಭವಾಗೋದು.

ಸೀತೆ (ತಾನೊಂದು ಕೋಡುಬಳೆ ತೆಗೆದುಕೊಂಡು)—ಕೆಲವರಿಗೆ ಹಸಿವೇ ಆಗೋದಿಲ್ಲ ಅನ್ನೋದನ್ನ ಮರೀಬೇಡ.

ನಾರಾ. (ತಪ್ಪು ಒಪ್ಪಿಕೊಳ್ಳುತ್ತ)—ಮರೆತೆ. (ಇನ್ನೊಂದು ಕೋಡುಬಳೆ ಕೊಡುತ್ತ) ನಿನಗೆ ಸರಿಯಾಗಿ ಹಸಿವಾಗುತ್ತಿರುತ್ತೊ?

ಸೀತೆ—ಅಸಹ್ಯ! ಹೊಟ್ಟೆ ತುಂಬಿದ ಹಾಗೆ ಇರುತ್ತೆ.

ನಾರಾ. (ಅವಳ ಕಾಫೀ ಲೋಟ ತೆಗೆದುಕೊಂಡು)—ಸ್ವಲ್ಪ ಕಾಫೀ ಹಾಕಲೆ?

ಸೀತೆ—ಪೂರ್ತಿಹಾಕು. ಕೋಡುಬಳೆ ತಿಂದದ್ದು ಬಾಯೆಲ್ಲ ಒಣಗಿಹೋಗಿದೆ.

ನಾರಾ. (ಎಂದಿನಂತೆ)—ಅಂದಹಾಗೆ, ಕಾಫೀರುಚಿ ಹೇಗಿದೆ?

ಸೀತೆ—ಪೂರ್ತಿಪ್ರಾಣ ಕೊಡೋಹಾಗಿದೆ.

ನಾರಾ.—ಬಹಳ ಸಂತೋಷ, ಹಾಗೆಂದೆಯಲ್ಲ. ನನ್ನ ಕಾಫೀಪ್ಲಾಂಟರ್ ಸ್ನೇಹಿತರೊಬ್ಬರು ಅದನ್ನು ಸ್ಪೆಷಲ್ ಆಗಿ ಕಳಿಸ್ತಾರೆ (ಎರಡನೆಯ ಲೋಟ ಕಾಫೀಗೂ ಮೂರುವರೆ ಚಮಚ ಸಕ್ಕರೆ ಹಾಕಿಕೊಡುತ್ತಾನೆ).

ಸೀತೆ (ಚಿಂತಾಕುಲಳಾಗಿ)—ನಿನಗೇನು ಎಲ್ಲಾ ಸ್ಪೆಷಲ್ ಆಗಿ ಸಿಗುತ್ತೆ, ನೀನೂ ಸ್ಪೆಷಲಿಸ್ಟ್ ಅಲ್ಲವೆ?

ನಾರಾ. (ಅವಳ ಮಾತಿನ ರೀತಿ ಕುರಿತು)—ನೀನು ಇದರಲ್ಲೆ ಸ್ಪೆಷಲೈಸ್ ಮಾಡು.

ಸೀತೆ—ಕೋಪಿಸಿಕೋಬೇಡ ವಕ್ರವಾಗಿ ಮಾತನಾಡಿದೆ ಅಂತ. ನಾನೇನು ಮಾಡಲಿ? ಸುಟ್ಟುಸುಣ್ಣ ಆಗಿದೀನಿ. ಗುಣ ಆಗೋದಕ್ಕೆ ಏನಾದರೂ ಉಪಾಯ ಹೇಳಬಾರದೆ?

ನಾರಾ.—ಹೊಸದಾಗೆ? ಏನೂ ಉಳಿದಿರೋ ಹಾಗೆ ಕಾಣೊಲ್ಲವಲ್ಲ.

ಸೀತೆ (ಯೋಚನಾಪರಳಾಗಿ)—ಹೌದು. ಎಲ್ಲ ಆಯಿತು. ಆಯುರ್ವೇದ, ಯುನಾನಿ, ಹೋಮಿಯೊ ಪತಿ, ಎಲ್ಲ. ಕಡೆಗೆ ನನ್ನ ಕಟ್ಕೊಂಡು ಕಾಶಿ ರಾಮೇಶ್ವರ ಅಂತ ಕೂಡ ಅಲೆದರು ಅವರು.

ನಾರಾ.—ವಯಸ್ಸು ಮೂವತ್ತಾಗಿಲ್ಲ, ತಲೆ ಕೂದಲು ನರೆತಿಲ್ಲ; . . . . ಉಂ. ಓದುವ ಅಭ್ಯಾಸ ಬಿಟ್ಟುಬಿಟ್ಟೆಯ ?

ಸೀತೆ—ಬಿಟ್ಟ ಹಾಗೇ. ಓದುವದರಿಂದ ಸುಖ ಆಗೋದು ಯಾವಾಗ ? ನೀನು ಓದಿರೊ ಪುಸ್ತಕಾನೇ ಓದಿರೊ ಇನ್ನೊಬ್ಬರ ಹತ್ತಿರ ಅದನ್ನು discuss ಮಾಡೋದು. ಆ ಕೊಂಪೆ ಹೆಂಗಸರು ಯಾರೂ ಓದುವವರೆ ಅಲ್ಲ.

ನಾರಾ.—ಶಂಕರನ ಜತೆ ಓದಬಹುದಲ್ಲ.

ಸೀತೆ—ಪತ್ತೆದಾರಿ ಕಥೆಗಳನ್ನ ಬಿಟ್ಟು ಅವರು ಯಾವುದನ್ನೂ ಓದುವುದೇ ಇಲ್ಲ.

ನಾರಾ. (ಸ್ವಲ್ಪ ತಡೆದು, ಗಂಭೀರವಾಗಿ)—ಮಕ್ಕಳಿದ್ದಿದ್ದರೆ ಚೆನ್ನಾಗಿತ್ತು.

ಸೀತೆ—ಹಾ ! ಮಕ್ಕಳು ಮರಿ ವಿಚಾರ ಏನಾದರು ಹೇಳ್ತೀಯ ಅಂತ ಅಂದು ಕೊಂಡೇ ಇದ್ದೆ ನಾನು. "ಮಕ್ಕಳಿಲ್ಲದೆ ಇದ್ದರೆ 'ಭಿಂ' ಅಂತ ಇರುತ್ತೆ. ಮಕ್ಕಳು ಮರಿ ಮನೇ ತುಂಬ ಓಡ್ಯಾಡಿಕೊಂಡಿದ್ದರೆ ಸಂತೋಷವಾಗಿರುತ್ತೆ". ನಂಗೊತ್ತಿಲ್ಲವೆ ? ಸಾಕು ಸಾಕು, ನೀ ಹೋಳೋದು.

ನಾರಾ.—ಶಂಕರನಿಗೆ ಮಕ್ಕಳು ಮರಿ ಅಂದರೆ ಬಹಳ ಆಸೆ.

ಸೀತೆ—ಇರಬಹುದು, ಬೆಟ್ಟದಂಥ ಆಸೆ ಇರಬಹುದು. ಆದರೆ ಅವರೇನು ಹೆರಬೇಕೆ ? ಇಲ್ಲ. ಕುಯ್ಯೊ ಮೊರೆಯೊ ಅಂತ ಅವರ ಬೆನ್ನಿಗೆ ಅಂಟಿಕೊಂಡು ಓಡಾಡುತ್ವೊ ?

ನಾರಾ. (ಗಂಟಲು ಸರಿಮಾಡಿಕೊಳ್ಳುತ್ತಾ)—ಹ ಹಂ . . . . ಇನ್ನೊಂದು ಸ್ವಲ್ಪ ಕಾಫೀ ?

ಸೀತೆ—ಬೇಡಪ್ಪ, ಸಾಕು.

[ನಾರಾಯಣ ಗಂಟೆ ಬಾರಿಸುತ್ತಾನೆ. ರಂಗಪ್ಪನು ಬಂದು ಸಲಕರಣೆಗಳನ್ನು ಶೇಖರಿಸಿಕೊಂಡು ಕಿತ್ತಿಳೆ ಹಣ್ಣುಗಳನ್ನ ಮೇಜದ ಮೇಲೆಯೆ ಬಿಡುತ್ತಾನೆ]

ನಾರಾ.—ಇವನ್ನ ಕೊಡಗಿನಿಂದ ಸ್ಪೆಷಲ್ಲಾಗಿ (ಅವಳ ಮುಖ ನೋಡಿ ನಗುತ್ತ ಅಲ್ಲಿಗೆ ನಿಲ್ಲಿಸಿ) ಕೊಡಗಿನಿಂದ ಬಂದಿದೆ ಈ ಹಣ್ಣು.

ಸೀತೆ—ಎಷ್ಟು ಜಾಣತನ ಅದಕ್ಕೆ.

[ಸೀತೆ ಒಂದು ಹಣ್ಣು ಸುಲಿಯುತ್ತಾಳೆ. ನಾರಾಯಣ ಬೀರು ಗೂಡಿಗೆ ಹೋಗಿ, ಸಿಗರೆಟ್ ತೆಗೆದುಕೊಂಡು ಹತ್ತಿಸಿಕೊಳ್ಳುತ್ತಾ, ರಂಗಪ್ಪ ಹೊರಗೆ ಹೋಗುವಾಗ ಬಾಗಿಲು ಹೊರಗಡೆಯಿಂದ ಅಗಣಿ ಹಾಕಿಕೊಳ್ಳುವಂತೆ ಸೀತೆಗೆ ಕಾಣದ ಹಾಗೆ ಸನ್ನೆ ಮಾಡುತ್ತಾನೆ. ರಂಗಪ್ಪ ಸದ್ದಿಲ್ಲದೆ

ಬಾಗಿಲು ಹಾಕಿಕೊಳ್ಳುತ್ತಾನೆ. ತೃಪ್ತನಾದವನಂತೆ ನಾರಾಯಣ ಬಂದು ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತಾನೆ]

ನಾರಾ. (ನಿಧಾನವಾಗಿ ಹೊಗೆ ಬಿಡುತ್ತ)—ನಿಜವಾಗಲೂ, ಸೀತೆ, ಜೀವನದಲ್ಲಿ ನಿನಗೆ ಅಷ್ಟು ಜುಗುಪ್ಸೆಯೆ?

ಸೀತೆ (ಭಾವಶೂನ್ಯಳಾಗಿ)—ಖಂಡಿತವಾಗಿ.

ನಾರಾ.—ಯಾವಾಗಲಾದರೂ . . . . ಯೋಚಿಸಿದೀಯ ಆತ್ಮಹತ್ಯಾನ? (ಅವಳು ಏನು ಉತ್ತರ ಕೊಡುತ್ತಾಳೆಂದು ಆಸಕ್ತನಾಗಿ ನಿರೀಕ್ಷಿಸುತ್ತಿರುತ್ತಾನೆ)

ಸೀತೆ—ಅದಕ್ಕೆ ಯೋಚನೆ ಮಾಡಬೇಕೆ? ಸರ್ವೇಸಾಧಾರಣವಾಗಿದೆ.

ನಾರಾ.—ಹಾಗೇನೂ ಕಾಣೋಲ್ಲ. ಪ್ರಾಣತ್ಯಾಗ ಮಾಡೋದು—ಏನೆಂತಾರೆ?-ತೀರ . . . . ದುಸ್ಸಾಧ್ಯವಾದ ಕಾರ್ಯ.

ಸೀತೆ—ಬಿಟ್ಟು,—ತೀರ ಸುಲಭವಾದದ್ದು. ಏಕಣ್ಣ, ಎಲ್ಲರೂ ಪ್ರಾಣ ನೀಗ್ತಾರೆ—ಹಾದೀಲಿ ಹೋಗೋರು ಬೀದೀಲಿ ಹೋಗೋರು ಕೂಡ.

ನಾರಾ.—ಹಾಗಂತೀಯ ನಿಜವಾಗಲೂ? ನಿನಗೊ? ಸಾಯೋದು ಅಂದರೆ ಭಯ ಆಗೋಲ್ಲ? ಸ್ವಲ್ಪಾನೂ ಹೆದರಿಕೆ ಇಲ್ಲ?

ಸೀತೆ(ನಾರಾಯಣನ ಆ ವೇಗವನ್ನು ನೋಡಿ ಅವಳಿಗೆ ಕೊಂಚ ಆಶ್ಚರ್ಯವಾಗುತ್ತದೆ)—ನಾನೇಕೆ ಹೆದರಿಕೋಬೇಕು? ಇದುವರೆಗೂ ನಾನ್ಯಾತಕ್ಕೂ ಹೆದರಿಲ್ಲ . . . . ಸಾಯುವಾಗ ಏನಾಗುತ್ತೆ, ಆಮೇಲೇನಾಗುತ್ತೆ ಅಂತ ಕಾಣೆ. ಆದರೂ ಹೆದರಿಕೆ ಇಲ್ಲ. ಹಾಗೇ ಸುಮ್ಮನೆ ಕಣ್ಮುಚ್ಚಿಕೊತೀವಿ ಅಂತ ಕಾಣುತ್ತೆ . . . ಏನಾದರೂ ಅಷ್ಟೇ, ಸಾಯೋದೇ ವಾಸಿ, ಇರೋಕಿಂತಲೂ.

[ಅವಳು ಮುಗಿಸಿದ ಮೇಲೆ ನಾರಾಯಣ ಹಿಂದಕ್ಕೆ ಒರಗಿಕೊಂಡು, ತೃಪ್ತನಾದವನಂತೆ ತಲೆ ಆಡಿಸುತ್ತ]

ನಾರಾ.—ಹಾಗಾದರೆ **ಅದು** ಸರಿಹೋಯ್ತು.

ಸೀತೆ—ಯಾವುದು ಸರಿಹೋಯ್ತು?

ನಾರಾ.—ಸಾಯೊಕೆ ನೀನು ಅಂಜೋಲ್ಲ ಅಂತ ಕೇಳಿ ಧೈರ್ಯವಾಯಿತು.

ಸೀತೆ—ಹಿಂದೆ ಎಷ್ಟೋ ಸಲ ಹೇಳಿದೀನಿ ಹಾಗೆ?

ನಾರಾ.—ಖಂಡಿತವಾಗಿ ಹಾಗೆಂದುಕೊಂಡಿದೀ ಅಂತ ಇಲ್ಲಿಯವರೆಗೆ ತಿಳಿದಿರಲಿಲ್ಲ. ನೀನು ಹೇಳುವುದರಲ್ಲೆ ಗೊತ್ತಾಗುತ್ತೆ, ನಿನಗೆ ಸಾಯೋಕಿಷ್ಟ, ಅದಕ್ಕೆ ಹೆದರುವುದಿಲ್ಲ, ಅಂತ. ನಿಜವಾಗಲೂ, ನೋಡು; ಸಂಕಟ ವಿಪರೀತವಾದರೆ ಸಾವೇ ಅದಕ್ಕೆ ಮದ್ದು. ಕೆಲವು ದಿನಗಳಿಂದ ನನಗೂ ಹಾಗೆ ತೋರುತಾ ಇದೆ.

ಸೀತೆ (ನಂಬದೆ)—ಹುಚ್ಚು ಹುಚ್ಚಾಗಿ ಮಾತಾಡ ಬೇಡ. ನಿನಗೇನಾಗಿದೆ?

ನಾರಾ.—ಪೂರ್ತಿ ಜುಗುಪ್ಸೆ, ಜೀವನದಲ್ಲಿ.

ಸೀತೆ—ನಂಬುತೀನಿ, ಕಾದುಕೊಂಡಿರು. ಈ ಬೂಟಾಟಿಕೆ ನನಗೆ ಹೇಳಬೇಡ (ಅಸಮಾಧಾನದಿಂದ ಹಣ್ಣನ್ನು ತೆಗೆದುಕೊಂಡು) ನಿನಗೇನು ಸೀಮೆಗೆ ಹೋಗಿ ಬಂದಿದಿ, ಒಳ್ಳೆ practice ಇದೆ. ನಿನಗೂ ಅದರಲ್ಲಿ ತುಂಬ ಆಸಕ್ತಿ.

ನಾರಾ.—ಆಸಕ್ತಿ! ಮಣ್ಣು! ಆಸಕ್ತಿ ಇರಬೇಕಾದರೆ ಹುಚ್ಚು ಹಿಡಿದಿರಬೇಕು . . . ಹ್ಹುಂ! . . . ದಿನ ಬೆಳಗಾದರೆ ಹೋಗೋರ ಬರೋರ ಹಾಳು ಗೋಳು ಕೇಳ ಬೇಕು. ಒಳಗೆ ಕುದೀತಾ ಇದ್ದರೂ, ಹೊರಗೆ ಸಹನೆ ತೋರಿಸಬೇಕು. ಗುಣ ಸಾಧ್ಯ ವಿಲ್ಲದೆ ಇರೊ ರೋಗಕ್ಕೆಲ್ಲ ಔಷ್ತಿ ತಂತ್ರ ಹೂಡಬೇಕು . . . . ತಿಮ್ಮ ಸೆಟ್ಟಿ, ಬೊಮ್ಮ ಸೆಟ್ಟಿ—ನನಗೂ ಅವರಿಗೂ ಏನು ಸಂಬಂಧ? ದುಡ್ಡಿಸಿಕೊಂಡು ಕಿವಿ ಕೊಡೋನು ನಾನು. ಅವರ ಆರೋಗ್ಯದ ಅವಸಾನ ಕಾಲದಲ್ಲಿ ರೋದಿಸೊ ಬಾಡಿಗೆ ಗುಲಾಮ . . . . ವ್ಯರ್ಥ ಕೆಲಸ. ಆಸಕ್ತಿಯಂತೆ ಆಸಕ್ತಿ!

ಸೀತೆ—ನೀನು ಹೀಗೆ ಯಾವತ್ತೂ ಮಾತಾಡಿದ್ದು ಕಾಣೆ.

ನಾರಾ. (ವಕ್ರವಾಗಿ ನಸುನಗುತ್ತ)—ನಾನು ಯಾವಾಗಲೂ ಹೀಗೆ ಬಿರುಸಾಗಿ ಮಾತಾಡೊಲ್ಲ.

ಸೀತೆ (ಯೋಚಿಸುತ್ತ)—ಹೌದು, ಒಂದೊಂದು ಸಲ ಸ್ವಲ್ಪ ಬೇಜಾರಾಗುತ್ತೆ.

ನಾರಾ.—ಸ್ವಲ್ಪ ಬೇಜಾರು! ಚಳಿಯೊ ಮಳೆಯೊ ಅರ್ಧರಾತ್ರೇಲಿ ಎದ್ದು ಹೋಗಿ ವಾಂತಿ ಹತ್ತಿ ಉಸಿರು ಸಿಕ್ಕಿಕೊಂಡಿರೊ ಗುಡಾಣದ ಹೊಟ್ಟೆಯವನಿಗೆ "ಸಂಜೆ ಹೊತ್ತು ಹೋಟೆಲ್ ದೋಸೆ ತಿನ್ನಬೇಡ" ಅಂತ ಹೇಳ ಬೇಕು. ಇದರಲ್ಲಿ ನನಗೆ ಆಸಕ್ತಿ ಅಂತ ಹೇಳ್ತೀಯ? ಇದಕ್ಕೇ ನಾನು ಇಂಗ್ಲೆಂಡಿಗೆ ಹೋಗಿ ಬಂದದ್ದು? ಹೀಗಿರೋಕಿಂತಲೂ ಸಾಯುವುದೇ ವಾಸಿ. ಇಷ್ಟಕ್ಕೂ ನನಗೇನು ಹೆಂಡರಿಲ್ಲ ಮಕ್ಕಳಿಲ್ಲ . . . . ಬೆಳಗೆದ್ದರೆ ಯಾರದೋ ಕಜ್ಜಿ, ತುರಿ, ಹೊಟ್ಟೆನೋವು, ಇದೇ ಆಯ್ತು ಪುರಾಣ. They are no better than beasts ಸೀತ, ಅಸಹ್ಯವಾಗುತ್ತೆ.

ಸೀತೆ—ಹೌದು. ನಾನಾಗಿದ್ದರೆ ಒಂದು ನಿಮಿಷವೂ ತಡೀತಿರಲಿಲ್ಲ. ಆದರೆ— ನಿನಗಿದೆಲ್ಲ ಇಷ್ಟ ಅಂತಿದ್ದೆ.

ನಾರಾ.—ಹಾಗೆ ತಿಳಿಕೊ, ಹಾಗೆ ತಿಳಿಕೊ . . . . ಸರಿ, ಆಯ್ತಲ್ಲ. ನಾವಿಬ್ಬರೂ ಒಂದೇ ದಿಕ್ಕಿನಲ್ಲಿ ಪ್ರಯಾಣ ಹೊರಟಿದೀವಿ. ಇಹ ಲೋಕದ ಪ್ರಯಾಣ ಇಲ್ಲಿಗೆ ಸಮಾಪ್ತಿ ಮಾಡೋಣ.

ಸೀತೆ (ಮಬ್ಬಾಗಿ)—ಅಂದರೆ!—ಹಾಗೆಂದರೇನು ಮಾಡ್ತಿ?

ನಾರಾ. (ಗಂಭೀರವಾಗಿ)—ಮಾಡುವ ಕಾಲ ಮೀರಿ ಹೋಗಿದೆ. ಸಮಾಪ್ತಿ ಆಗಿ ಹೋಗಿದೆ.

ಸೀತೆ—ಆಗಿ ಹೋಗಿದೆ!

ನಾರಾ.—ಮುಗೀತು.

ಸೀತೆ—ಮುಗೀತು! ಹಾಗಿದ್ದರೆ ಗತಿ—ನಿನ್ನ ರೋಗಿಗಳದ್ದು ? . . . **ನನ್ನ** ಗತಿ ?

ನಾರಾ.—ರೋಗಿಗಳ ಗತಿ ಹಾಳಾಯಿತು. ನಿನ್ನ ವಿಚಾರದಲ್ಲೂ ಎಲ್ಲ ಅಣಿ ಮಾಡಿದೀನಿ. ನಿನ್ನ ಕೆಲಸವೂ ಮುಗೀತು.

ಸೀತೆ (ಸ್ವಲ್ಪ ಕುತೂಹಲದಿಂದ)—ಮುಗೀತೆ? ಹೇಗೆ ?

ನಾರಾ.—ಹೇಗೆ ಅಂದರೆ . . . . ನಿನಗಾಶ್ಚರ್ಯ ಆಗುತ್ತೇನೊ, ಈಗ ತಾನೆ ನಾವು ಕುಡಿದ ರುಚಿ ರುಚಿಯಾದ ಕಾಫೀಲಿ ವಿಷ ಇತ್ತು ಅಂದರೆ?

[ತೀರ ಕೊಂಚ ಬಿಡವು]

ಸೀತೆ (ಪರಿಹಾಸ್ಯ ಮಾಡುತ್ತ)—ನನಗೆ ನಗು ಬರುತ್ತೆ, ನಾಣಿ. ಸಕ್ಕರೆ ಅನ್ನೊ ವಿಷವೇನೊ ?

ನಾರಾ. (ನುಣುಪಾಗಿ)—ನಿಜವಾದ ವಿಷ.

ಸೀತೆ—ಶುದ್ಧ ಸುಳ್ಳು.

ನಾರಾ.—ಸುಳ್ಳಲ್ಲ. ಕಾಫೀಲಿ ವಿಷ ಇತ್ತು ಅಂತ ನನಗೆ ಗೊತ್ತು. ಏಕೆಂದ್ರೆ, ನಾನೇ ಹಾಕಿದ್ದು . . . . ಒಳ್ಳೇ ತೀಕ್ಷ್ಣವಾದ ವಿಷಾನೆ ಅದು.

ಸೀತೆ (ಶ್ಲಾಘಿಸುತ್ತ)—ನಿನ್ನ ಸಮಾನ ಯಾರೂ ಇಲ್ಲವೊ !

ನಾರಾ. (ಕಿಲ ಕಿಲ ನಗುತ್ತ)—ದಿಟವಾಗ್ಲೂ, ಕಾಫೀ ಕುಡಿಸುತ್ತ, ನಿನಗೆ ಮಾಯಾ ಮಂತ್ರ ಮಾಡಿದ್ದೇನಲ್ಲ! ಅಂಥ ಮನುಷ್ಯನೇ ಆದೆ ಕಡೆಗೂ. ಹಾಳಾದ್ದು ನಾಳೆ ಎಲ್ಲಾ ಪೇಪರಲ್ಲೂ ಇರುತ್ತೆ ನಮ್ಮ ಭಯಂಕರ ವರ್ಣನೆ:

"ಶ್ರೀಮಂತ ಸ್ತ್ರೀಯೊಬ್ಬರಿಗೆ ವಿಷ ಪ್ರಯೋಗ
ಪ್ರಸಿದ್ಧ ವೈದ್ಯರೊಬ್ಬರ ಕೃತ್ಯ
ಸ್ವಂತ ಅಣ್ಣ ತಂಗಿ . . . .
ಆತ್ಮ ಹತ್ಯದ ಒಪ್ಪಂದವೆ ?
ಪೋಲೀಸಿನವರ ತನಿಖೆ ನಡೆಯುತ್ತಿದೆ."

ಹೇಗೆ ಬರೀತಾರೆ ಅಂತ ಗೊತ್ತಿದೆಯಲ್ಲ ಕೆಟ್ಟ ಕೆಟ್ಟ ವರ್ಣನೆ. ಒಂದೊಂದು ಕೋಡು ಬಳೆ ಅಷ್ಟು ದೊಡ್ಡ ಅಕ್ಷರಗಳಲ್ಲಿ.

ಸೀತೆ—ನನಗೆಲ್ಲ ಗೊತ್ತಿದೆ. ನೀನೇನೂ ಹೇಳಬೇಕಾಗಿಲ್ಲ.

ನಾರಾ.—ಸರಿ, ಹಾಗಿದ್ದರೆ, ಈ ವಿಷಯದ ವಿಚಾರ ಹೇಳ್ತೀನಿ ಕೇಳು.

ಸೀತೆ—ಶುರುಮಾಡು, ಆಟಾನ (ಮಕ್ಕಳ ರೀತಿಯನ್ನು ಅನುಕರಿಸಿ). ಯಾವ ತರದ ವಿಷ ಅಣ್ಣ ಅದು ?

ನಾರಾ. (ಕುರ್ಚಿಯಿಂದ ಎದ್ದು ಇದ್ದಕ್ಕಿದ್ದಂತೆ ತಿರುಗುತ್ತ)—ಗೋತ್ತೇ ಇದೆ. ನೀನು ನಂಬೊಲ್ಲ. ಮೊದಲು ಮೊದಲು ನೀನು ನಂಬ್ತೀಯಾ ಅಂತ ನಾನೂ ತಿಳಿದುಕೋ ಕೂಡದು. ಏಕೆ ನೀನು ನಂಬಕೂಡದು ಅನ್ನುವುದಕ್ಕೆ ಒಳ್ಳೆ ಕಾರಣವಿದೆ. ಆದರೆ ಸದ್ಯದಲ್ಲೇ ನಂಬಿಕೆ ಬರುತ್ತೆ . . . . ಈಗಲೋ ಆಗಲೋ ಉಸಿರು ನಿಂತು ಹೋಗುತ್ತೆ.

ಸೀತೆ (ನಂಬದಿದ್ದರೂ, ಕೊಂಚ ಸೈರಣೆ ಕೆಟ್ಟು)—ಎಳೇ ಮಗೂ ಹಾಗೆ ಆಡಬೇಡ. ಕಾಫೀಗೆ ವಿಷ ಹಾಕಿದ್ದರೆ ಸ್ವಲ್ಪವಾದರೂ ಪರಿಣಾಮ ಗೊತ್ತಾಗಬೇಕಲ್ಲ ನಮಗೆ.

ನಾರಾ.—ನಿನಗೆ ಗೊತ್ತಾಗಬೇಕು ಅನ್ನೊ ನಿರ್ಬಂಧವೇನಿಲ್ಲ.

ಸೀತೆ—ಸ್ವಲ್ಪವಾದರೂ ಕಾಣ್ತಾ ಇತ್ತಲ್ಲ ?

ನಾರಾ.—ಕಾಣ್ತಾ ಇದೆ. ಕಡೆಪಕ್ಷ ನಿನ್ನಲ್ಲಾದರೂ ಕಾಣ್ತಾ ಇದೆ, ಪರಿಣಾಮ, ನನಗೆ.

ಸೀತೇ (ಹಾಸ್ಯದಿಂದ)—ಮೂತಿ ಕೆಂಚಗಾಗಿದೆ ಏನು ?

ನಾರಾ.—ಅಷ್ಟು ಸುಲಭ ಅಲ್ಲ. ಆ ವಿಷ ಬಹಳ ಚಮತ್ಕಾರವಾಗಿ. ಕೆಲಸ ಮಾಡುತ್ತೆ. ಹೊಸದಾಗಿ ಕಂಡು ಹಿಡಿದಿದಾರೆ ಅದನ್ನ. ಅಫೀಮಿನಿಂದ ತಯಾರಿಸಿದ್ದು. ಒಂದು ಗುಲಗಂಜಿ ತೂಕ ಸಾಕು ಕೊಲ್ಲೋಕೆ. ನಾನು ಒಂದೊಂದು ಕಪ್ಪಿಗೆ ಎರಡೆರಡು ಗುಲಗಂಜಿಯಂತೆ ಸಕ್ಕರೇಲಿ ಬೆರಿಕೆ ಮಾಡಿದ್ದೆ.—ನೀನು ಎರಡು ಲೋಟ ಕುಡಿದೆ ಅಲ್ವೆ ?

ಸೀತೆ (ಅತಿ ಬೇಸರದಿಂದ)—ಹೌದಪ್ಪ ಹೌದು.

ನಾರಾ.—ಬಹಳ ಒಳ್ಳೇದು. ಯಾವಾಗಲೂ ಅನುಮಾನಕ್ಕಾಸ್ಪದ ಕೊಡ ಕೂಡದು. ಇನ್ನು ಸ್ವಲ್ಪಹೊತ್ತಿನಲ್ಲೇ ನಿನ್ನ ಪ್ರಾಣ ಹೋಗಬೇಕು.

ಸೀತೆ—ಸಂತೋಷ.

ನಾರಾ.—ನಾನು ಒಂದೇ ಲೋಟ ಕುಡಿದೆ ನೋಡು. ಆದ್ದರಿಂದ ನಾನು ಸ್ವಲ್ಪ ಜಾಸ್ತಿ ಹೊತ್ತು ಬದುಕಿರ್ತೀನಿ. ಇಂಥ ವಿಷಯಗಳಲ್ಲಿ ನಾನು ಮುಂದೆ ತಾನು ಮುಂದೆ ಅಂತ selfish ಆಗಿರಬಾರ್ದು.

ಸೀತೆ—ಅರ್ಥವಿಲ್ಲದೆ ಮಾತಾಡಬೇಡ. ಉಸಿರು ನಿಂತು ಹೋಗೊ ತರಹ ಸೂಚನೆ ಏನೂ ಕಾಣ್ತಾ ಇಲ್ಲ.

ನಾರಾ.—ಹಾಗೆಂದುಕೊಂಡಿದ್ದೀಯ?

ಸೀತೆ—ಖಂಡಿತವಾಗಲೂ. ಈ ಭರ್ಜರಿ ವಿಷ ನಿಂದು, ಇದು ಹೇಗೆ ಆ್ಯಕ್ಟ್ ಮಾಡುತ್ತೆ? ಸಂಕಟ ನೋವು ಏನಾದರೂ ಆಗುತ್ತ್ತೋ?

ನಾರಾ. (ಹಗುರವಾಗಿ)—ಅಂಥಾದ್ದೇನು ಇಲ್ಲ.

ಸೀತೆ—ಉಸಿರು ಹಿಡ್ಕೊಂಡು, ಕಣ್ಣುಗುಡ್ಡೆ ಸಿಗ್ಹಾಕಿಕೊಂಡು, ಒದ್ದಾಡ ಬೇಕೇನು? (ತನ್ನ ಕುತ್ತಿಗೆಯನ್ನು ಹಿಡಿದುಕೊಂಡು ಭೀತಿಯನ್ನು ಅನುಕರಿಸುತ್ತಾ), ಸಂಕಟ ಒದ್ದಾಟ ಇಲ್ಲದೆ ಇದ್ದರೆ ಸಾಕಪ್ಪ! ಸದ್ಯಾ. ನನಗೆ ಹಾಗೆ ಒದ್ದಾಡಿ ಅಭ್ಯಾಸವಿಲ್ಲ.

ನಾರಾ.—ಒದ್ದಾಟವೇನಿಲ್ಲ. ಶ್ರಮವಿಲ್ಲದ ನಿರ್ಯಾಣ.

ಸೀತೆ—ಅಂದರೆ?

ನಾರಾ.—ನಿರ್ಯಾಣ, ಮೋಕ್ಷ, ಕಣ್ಮುಚ್ಚಿಕೊಳ್ಳೋದು, ನೀನು ಹೇಳೋ ಹಾಗೆ, Morphia ದ ಹಾಗೆ ಈ ವಿಷಾನೂ Act ಮಾಡೋದು. ಆದರೆ ಇದರಲ್ಲಿ ಸಂಶಯಕ್ಕೆ ಕಾರಣವೇ ಇಲ್ಲ. ಅದಕ್ಕೆ ಇದನ್ನು ಆರಿಸಿದ್ದು. (ಭಾಷಣ ಮಾಡುವುದಕ್ಕೆ ಪ್ರಾರಂಭ) ಏನಾಗುತ್ತೆ ಅಂತ ಹೇಳ್ತೀನಿ ಕೇಳು.

ಮೊದಲನೇ Stage ನಲ್ಲಿ ಅಪನಂಬಿಕೆ. ಯಾರಿಗೆ ವಿಷಹಾಕಿದೆಯೋ ಅವನು ಅಥವಾ ಅವಳು—ತನಗೆ ವಿಷ ಹಾಕಿದೆ ಅಂತ ನಂಬೋದೇ ಇಲ್ಲ. ಆ Stage ನಲ್ಲೇ ಈವಾಗಿ ರೋದು ನೀನು. [ಸೀತೆ ಅಪನಂಬಿಕೆಯನ್ನು ತೋರುವ ರೀತಿಯಲ್ಲಿ "ಹ್ಞುಂ" ಅನ್ನುತ್ತಾಳೆ]. ನ್ಯಾಯವಾಗಿ ನಾನೂ ಆ Stage ನಲ್ಲೇ ಇರಬೇಕು. ಆದರೆ ವಿಷ ನಾನೇ ಹಾಕಿ ಕುಡಿದಿರೋದರಿಂದ ನಂಬದೆ ಇರುವಹಾಗಿಲ್ಲ, ವಾಸ್ತವವಾಗಿ ನಾನು ನಂಬದೆ ಇಲ್ಲ. ನಂಬದೆ ಇರೋಕೆ ಹೇಗಾಗುತ್ತೇ ಹೇಳು.

[ಅವನ ಮಾತಿನಿಂದ ಸ್ವಲ್ಪ ಬೇಸರಗೊಂಡವಳಂತೆ ತೋರುತ್ತಾಳೆ]

ಎರಡನೇ Stage ನಲ್ಲಿ ಕೋಪ ಪ್ರಾರಂಭವಾಗುತ್ತೆ. ಮನೋದಾರ್ಢ್ಯವಿಲ್ಲದಿದ್ದ ವರಲ್ಲಿ ಬಹಳ ಉದ್ರೇಕ ಆಗುತ್ತೆ. ಈ Stage Observe ಮಾಡೋಕ್ಕೆ ಬಹಳ ತಮಾಷೆಯಾಗಿರುತ್ತೆ. ಮೂರನೆಯ Stage ಉ—

ಸೀತೆ (ಅಸಹನೆಯಿಂದ)—ಇಲ್ಲಿ, ನೋಡೋಣ, ಇಲ್ಲಿ.

ನಾರಾ. (ಮೊದಲಿನಂತೆ ಒಂದೇ ಸಮನಾಗಿ)—ನಾನು ಹೇಳ್ತಾ ಇದ್ದ ಹಾಗೆ ಮೂರನೆ ಸ್ಟೇಜಲ್ಲಿ ಆತ್ಮ ಪರೀಕ್ಷೆ ಬಹಳ ನಡೆಯುತ್ತೆ. ರೋಗಿ ಅವನ—ಅಥವಾ ಅವಳ ಮನಃಸ್ಥಿತಿ ಮೇಲೆ ಒಂದು ತರಹ Post Mortem ಪರೀಕ್ಷೆ ನಡೆಸುತ್ತಾನೆ—ಅಥವಾ

ನಡೆಸುತ್ತಾಳೆ. ತರುವಾಯ ತನ್ನನ್ನು ತಾನೇ ಕನಿಕರಿಸಿಕೊಳ್ಳುತ್ತಾನೆ—ಅಥವಾ ಕನಿಕರಿಸಿಕೊಳ್ಳುತ್ತಾಳೆ. ಸಾಧಾರಣವಾಗಿ ಈ condition ವಿಪರೀತ ಕುಡಿದು ಬಿಟ್ಟಿರುವವರಲ್ಲೂ ಕಾಣಿಸಿಕೊಳ್ಳುತ್ತದೆ.

ಸೀತೆ—ಸಾಕು, ನಿಲ್ಲಿಸು. ತಲೆನೋವು ಬಂತು ನನಗೆ. ವಿಷದಿಂದ ಅಲ್ಲ, ನಿನ್ನ ಮಾತಿನಿಂದ. ನಿನಗೆ ಮೆದಳು ಕೆಟ್ಟಿರಬೇಕು, ನಾನಿದನ್ನೆಲ್ಲಾ ನಂಬ್ತೀನಿ ಅಂದುಕೊಳ್ಳಕ್ಕೆ.

ನಾರಾ. (ಕಿವಿಯ ಮೇಲೆ ಬೀಳಿಸಿಕೊಳ್ಳದೆ)—ಮೊದಲನೆಯ stage ಉ. ಅಪನಂಬಿಕೆ.

ಸೀತೆ (ಸಿಟ್ಟಿನಿಂದ)—ನನ್ನ ಹಾಸ್ಯ ಮಾಡುತ್ತಾ ಇದ್ದೀಯ.

ನಾರಾ. (ಅವಳ ಕಡೆ ನೇರವಾಗಿ ನೋಡುತ್ತಾ ಗಂಭೀರವಾಗಿ)—ನನ್ನಾಣೆ ಸೀತೆ, ಹಾಸ್ಯ ಅಲ್ಲ. ಇದು ಸತ್ಯ.

ಸೀತೆ—ಮಣ್ಣು.

ನಾರಾ. (ಒತ್ತಿ ಹೇಳುತ್ತಾ)—ನಿನ್ನ ಹೇಗೆ ನಂಬಿಸೋದು? ನಂಬಿಕೆ ಬಂದರೆ ಆಗ ನೀನು ಇದೆಲ್ಲ—

ಸೀತೆ—ನಾನು, ನೀನು, ಲೋಕ, ಇದೆಲ್ಲ ನಶ್ವರ. ಜೀವಿಸೋದು ದುಃಖಕರ—

ನಾರಾ.—ಅಂತ ಹೇಳಿ ಗೋತ ಹಾಕ್ತಿ. ಈಗಲೂ ಖಂಡಿತವಾಗಿ ಗೋತ ಹಾಕ್ತಿ. [ಸೀತೆ ಪುನಃ "ಹ್ಞಂ" ಎನ್ನುತ್ತಾಳೆ.] ಹೀಗೆ ಮಾಡೋಣ, ತಡಿ ರಂಗಪ್ಪನ್ನ ಕರೀತೀನಿ. ಅವರು ಸಾಚಾ ಮನುಷ್ಯ [ಗಂಟೆ ಬಾರಿಸುತ್ತಾನೆ ಒಂದುಸಲ]

ಸೀತೆ (ಹೀನಾಯವಾಗಿ)—ರಂಗಪ್ಪ! ಅವನಿಗೆ ಕೈ ಬೆಚ್ಚಗೆ ಮಾಡಿದ್ದೀ. ಮಿಕ್ಕವರ ಹಾಗೇ ಅವನೂ—ದುಡ್ಡಿನ ಆಸೆಗೆ ಯಾವ ಪ್ರಮಾಣ ಬೇಕಾದರೂ ಇಡುತ್ತಾನೆ.

ನಾರಾ.—ಛೇ ರಂಗಪ್ಪ ಹಾಗೆ ಮಾಡೋರಲ್ಲ. ನಮ್ಮ ತಂದೆಕಾಲದಿಂದಲೂ ಮನೇಲಿದಾರೆ. ದುಡ್ಡಿಗೆ ಸಲಾಮ್ ಹಾಕೋರಲ್ಲ. ಅದೂ ಅಲ್ಲದೆ ಅನುಕೂಲವಾಗಿದ್ದಾರೆ. ನನಗೂ ಹಾಗೆ ಜಗ್ಗೋಲ್ಲ ಅವರು.

ಸೀತೆ—ಪುಣ್ಯವಂತ ನೀನು!

ನಾರಾ.—ಹಾಗೆ ಕಾಣುತ್ತೆ. ಅವರೂ ನಾನೂ ಚೆನ್ನಾಗಿ ಹೊಂದ್ಕೊಂಡ್ಹೋಗ್ತಾ ಇದೀವಿ. ಇವೊತ್ತು ಮಧ್ಯಾಹ್ನ ತಾನೇ ಹೇಳ್ತಾ ಇದ್ದೆ ಅವರಿಗೆ, ಎಲ್ಲಾ ಸರಿಯಾಗಿ ಹೋದರೆ ರಾತ್ರಿಹೊತ್ತಿಗೆ ಸದ್ದಿಲ್ಲದೆ ಹಾಗೇ ಸ್ವಲ್ಪ ವಿಷ ಔಷ್ಧಿ ಪ್ರಯೋಗ ನಡೆಯುತ್ತೆ ಅಂತ.

ಸೀತೆ—ಓ. ಸರಿ, ಅವನೇನು ಹೇಳ್ದ?

ನಾರಾ.—ಇಷ್ಟೇ ಹೇಳಿದ್ದು:—"ಒಳ್ಳೇದು ಸ್ವಾಮಿ, ನಾನು ಮನೆಗ್ಹೋಗೋಕ್ಮುಂಚೆ ಇನ್ನೇನಾದರೂ ಇದೆಯೆ?" ಆ ತರಹ ಮನುಷ್ಯ ನಮ್ಮ ರಂಗಪ್ಪ. ನಾನೇನು ಉತ್ತರ ಕೊಟ್ಟೆ ಗೊತ್ತೆ?

ಸೀತೆ—ಏನೊ ಫಸ್ಟ್‌ಕ್ಲಾಸ್ ಉತ್ತರಾನೇ ಕೊಟ್ಟಿದ್ದೀ.

ನಾರಾ.—ನಾ ಹೇಳ್ದೆ. ಹ್ಹ ಹ್ಹ "ಏನಿಲ್ಲ ರಂಗಪ್ಪ, ಇನ್ನೇನೂ ಇಲ್ಲ; ಇನ್ಮೇಲೆ ಏನೇನೂ ಇಲ್ಲ" ಅಂತ. (ಧ್ವನಿ ಬದಲಾಯಿಸಿ) ಇನ್ಮೇಲೆ ಪರದಲ್ಲಿ ಏನಾದರೂ ಇದೆಯೇ ಅಂತ?

ಸೀತೆ (ಸ್ವೈರಣೆ ತಪ್ಪಿ)—ಬೆಲ್ ಹೊಡೆದು ಇಷ್ಟು ಹೊತ್ತಾದರೂ ಏಕೆ ಬರೊಲ್ಲ ಅವನು?

ನಾರಾ.—ಏಕೆ ಬರೊಲ್ಲ? ಹಾ! ಮರೆತಿದ್ದೆ. ಏಕೆ ಅಂದರೆ, ಮನೆಗೆ ಹೊರಟು ಹೋಗಿದಾರೆ. ಅದಕ್ಕೆ, ಅದೆ, ಅದೆ, ಆಗಲೇ ಹೊರಟು ಹೋಗಿದಾರೆ. ಜವಾನನೂ ಹೊರಟು ಹೋಗಿದಾನೆ. ಯಾರೂ ಇಲ್ಲ ಮನೇಲಿ. ಇನ್ನಿವರ್ನೆಲ್ಲ ಇಟ್ಕೊಂಡು ಏನು ಉಪಯೋಗ? ವೃಥಾ ಖರ್ಚು.

ಸೀತೆ (ಅರ್ಧ ಕೋಪ ಅರ್ಧ ಹೆದರಿಕೆಯಿಂದ)—ನೀನು ಕುಚೋದ್ಯ ನಿಲ್ಲಿಸದಿದ್ದರೆ **ನಾನೂ** ಹೊರಟುಹೋಗ್ತೀನಿ.

ನಾರಾ.—ಎಲ್ಲಿಗ್ಹೋಗ್ತಿ?

ಸೀತೆ—ಊರಿಗೆ.

ನಾರಾ.—ಇಲ್ಲ. ಊರಿಗ್ಹೋಗೋಕಾಗೊಲ್ಲ, ನಿಮ್ಮೂರು ಮಲೆನಾಡಿನಲ್ಲಿ, ಈಗ ನೀನು ಹೋಗ್ತಾ ಇರುವುದು ಕೈಲಾಸಕ್ಕೆ.

ಸೀತೆ (ಕುರ್ಚಿಯಿಂದ ತಟಕ್ಕನೆದ್ದು)—ಹಾಗೋ? ಕೈಲಾಸಕ್ಕೋ? ತೋರಿಸ್ತೀನಿ ತಡಿ, (ಬಾಗಿಲಿಗೆ ಹೋಗಿ ತೆಗೆಯಲು ಯತ್ನಿಸಿ, ಆಗದೆ ಕೋಪದಿಂದ) ಬಾಗಿಲು ಹಾಕಿಬಿಟ್ಟಿದೆ.

ನಾರಾ. (ತಲೆ ಆಡಿಸುತ್ತಾ)—ನನ್ನ ಆರ್ಡರು (ಒಂದು ಪತ್ರಿಕೆ ತೆಗೆದುಕೊಂಡು ಓದುತ್ತಿರುತ್ತಾನೆ)

ಸೀತೆ—ತೆಗಿ ನಾಣಿ, ಬಾಗಿಲನ್ನು (ನಾರಾಯಣ ಕೇಳಿಸದವನಂತೆ ಕುಳಿತಿದ್ದಾನೆ) ಕೇಳಿಸಲಿಲ್ಲವೆ? ನಾನೇನೂ ಆಟ ಆಡ್ತ ಇಲ್ಲ. ಬಾಗಿಲು ತೆಗಿ (ನಾರಾಯಣ ಉತ್ತರ ಕೊಡುವುದಿಲ್ಲ) (ಬಿರುಸಾಗಿ) ಬಾಗಿಲು ತೆಗೀ ಅಂದೆ.

ನಾರಾ.—ಆಂ ಬಾಗಿಲೇ? ನನ್ನ ಕೈಲಾಗುವುದಿಲ್ಲ. (ವಿಜೃಂಭಣೆಯಿಂದ) ಹೊರಗಡೆ ಇಂದ ಹಾಕಿರಬೇಕು.

ಸೀತೆ (ತೀಕ್ಷ್ಣವಾಗಿ)—ರಂಗಪ್ಪ ಎಲ್ಲಿ?

ನಾರಾ.—ನನಗೇನು ಗೊತ್ತು? ಅವರು ಆಗಲೇ ಹೋದರು. ಇಷ್ಟು ಹೊತ್ತಿಗೆಲ್ಲಿದ್ದಾರೋ ಕಾಣೆ. ಅವರ ಮನೆ ಮಾರ್ಕೆಟ್ ಹತ್ತಿರ ಎಲ್ಲೋ ಅಂತೆ. ಹೆಬ್ಬಾಲೆ ಕಡೆಯವರು ಅವರು. ಅಲ್ಲಿ ಮನೆ ಮಠ—

ಸೀತೆ (ಸ್ವಲ್ಪ ಕೋಪದಿಂದಲೆ)—ದಮ್ಮಯ್ಯ ಅಂತೀನಿ, ನಿಲ್ಲಸಪ್ಪ. ನನಗೆ ಕೋಪ ಬರುತ್ತೆ ಇನ್ನು.

ನಾರಾ.—ಕೋಪವೇ ? ಸರಿಯೆ ! ಜ್ಞಾಪಕ ಇರಬೇಕು ಆಗಲೇ ಹೇಳಿದ್ದು. ಎರಡನೇ Stage ಉ ಕೋಪದ Stage ಉ. ಅದರಲ್ಲಿ ಮನೋದಾರ್ಢ್ಯವಿಲ್ಲ—

ಸೀತೆ (ಬಾಗಿಲಿಗೆ ಹೋಗಿ)–ಯಾರು ? ಯಾರು ಹೊರಗೆ ? (ಕದ ತಟ್ಟುತ್ತಾಳೆ) ಯಾರಿದೀರ ಅಲ್ಲಿ ?

(ನಾರಾಯಣನ ಕಡೆಗೆ ನೋಡುತ್ತಾ) ಏನು ಬಂದಿದೆ ಈ ಹಾಳು ಕದಕ್ಕೆ ? ಯಾರೂ ಮಾತೇ ಆಡೊಲ್ಲ. (ಪುನಃ ಬಾಗಿಲು ತಟ್ಟುತ್ತ ಕೂಗಿಕೊಳ್ಳುತ್ತಾಳೆ) ಯಾರಿದೀರ ಹೊರಗೆ ? . . . .ಏನೋ ಬಂದಿದೆ ಈ ಬಾಗಿಲಿಗೆ ರೋಗ.

ನಾರಾ.—ಅದಕ್ಕೇನು ಬಂದಿದೆ? ಹೊರಗಡೆಯಿಂದ ಅಗಣಿ ಹಾಕಿದೆ, ಅಷ್ಟೆ.

ಸೀತೆ—ಅಗಣಿ ಹಾಕಿದೆ ? ಏತಕ್ಕೆ ?

ನಾರಾ.—ನನ್ನ Order ಉ.

ಸೀತೆ (ಭಯದಿಂದ ಕಿಟಿಕಿ ಕಡೆಗೆ ಓಡಿಹೋಗಿ ಫರದೆ ಹಿಂದಕ್ಕೆತ್ತಿ, ಕಿಟಿಕಿ ಬಾಗಿಲು ಹಾಕಿ ಅಡ್ಡವಾಗಿ ಪಟ್ಟಿ ಹೊಡೆದಿರುವುದನ್ನು ನೋಡುತ್ತಾಳೆ)—ಕೂಡಿಹಾಕಿದೀಯ ನನ್ನ, ನನ್ನ ಹೆದರಿಸುವುದಕ್ಕೆ ನೋಡ್ತಾ ಇದೀಯ ?

ನಾರಾ. (ಪೇಪರ್ ಹಿಡಿದುಕೊಂಡೆ ಬೇಜಾರಾದವನಂತೆ)—ಎಲ್ಲಾದರೂ ಉಂಟೆ ?

ಸೀತೆ—ಹೌದು, ಹೌದು.

ನಾರಾ. (ಸೀದಾ)—ನನ್ನ ಕೈಲಿ ಹೇಗೆ ಸಾಧ್ಯ ನಿನ್ನ ಹೆದರಿಸುವುದಕ್ಕೆ ? ನೀನು ಏತಕ್ಕೂ ಹೆದರೋಳಲ್ಲ. ನೀನೆ ಹೇಳಿದೀಯ ಹಾಗಂತ. ಹೆದರಿಕೊಂಡಿದಿ ಅಂತ ತಿಳ್ಕೊಂಡಿರಬಹುದು. ನಿಜವಾಗಲೂ ನೀನು ಹೆದರಿಕೊಂಡಿಲ್ಲ (ತೃಪ್ತನಾದವನ ಧ್ವನಿಯಲ್ಲಿ) ವಿಷ ಹಾಗ್ಮಾತಾಡಿಸುತ್ತ ಇದೆ.

ಸೀತೆ (ಅಸ್ಥಿರಳಾಗಿ)—ಈಕ್ಷಣ ಬಾಗಿಲು ತೆರೆದು ಹೊರಗೆ ಹೋಗಕ್ಕೆ ಬಿಡ್ತಿಯೋ ಇಲ್ಲವೊ ಈಕ್ಷಣ, (ಗಾಬರಿಯ ಸೂಚನೆಗಳು ಕಾಣುತ್ತವೆ.)

ನಾರಾ. (ಅನಾಸಕ್ತಿಯಿಂದ ಅವಳನ್ನು ನೋಡುತ್ತ)—ಹು ಹೂ, ಸರಿ ದಿಟವಾಗಲೂ ನಿನಗೆ ಸುಲಭವಾಗಿ ಉದ್ರೇಕವಾಗುತ್ತೆ. ನನಗೂ ಆಗಿದೆ. ಆದರೆ ತಡಕೊತಾ ಇದೀನಿ,

ಎಷ್ಟಾದರೂ ಗಂಡಸು. ಜತೇಗೆ (ಉದಾರವಾಗಿ) ನೀನು ಕುಡಿದಿರುವಷ್ಟು ನನ್ನ ಹೊಟ್ಟೆಗೆ ಹೋಗಿಲ್ಲವಲ್ಲ.

ಸೀತೆ (ಅವನ ಕಡೆಗೆ ದುರುಗುಟ್ಟಿಕೊಂಡು ನೋಡಿ ಅನಂತರ ಭೀತಿಯಿಂದ ಭ್ರಾಂತಳಾಗಿ)—ಸುಳ್ಳು ಹೇಳ್ತಾ ಇದೀಯ, ನೀನು. ಸುಳ್ಳು ಹೇಳ್ತಾ ಇದಿ. ಅಯ್ಯೋ ಹಾಳು ಕತ್—

ನಾರಾ. (ನಡುವೆ ಬಾಯಿಹಾಕಿ ಸಮಾಧಾನ ಮಾಡುವವನಂತೆ)—ನೋಡಿದೆಯ, ನೋಡಿದೆಯ. ಸ್ವಲ್ಪ ಕೂತುಕೋ, ಸೀತೆ, ಸ್ವಲ್ಪ ಕಿತ್ತಿಳೆ ಹಣ್ಣು ತಿನ್ನು. ಕಾಮ್ ಆಗಿರು. (ಹಣ್ಣನ್ನು ಕೊಡ ಹೋಗುತ್ತಾನೆ)

ಸೀತೆ (ಹಣ್ಣನ್ನು ಅವನ ಕೈಯಿಂದ ಹೊಡೆದು ಬೀಳಿಸಿ ಸರ್ಪದಂತೆ)—ಅಯ್ಯೋ fool ಬಾಗಿಲು ತೆಗಿ. ಸಮಾಧಾನ ಮಾಡೋಕ್ಬರಬೇಡ. ಬಾಗಿಲು ತೆಗೀಂದೆ. ನಾನು ಹೋಗಬೇಕು. ಬಿಟ್ಬಿಡು.

ನಾರಾ.—ಹೌದು, ಹೋಗಬೇಕು. ಇಬ್ಬರೂ ಹೋಗ್ತಾ ಇದ್ದೀವಿ.

ಸೀತೆ (ರೋಷದಿಂದ)—ಅಣ್ಣಾ.

ನಾರಾ. (ಅವಳ ಮಾತನ್ನು ಮುಳುಗಿಸುವಂತೆ)—ಸಾಯೋದು ಅಂದರೆ ಏನು ಹುಯಿಲು ಮಾಡುತ್ತಾರೆ ಕೆಲವರು ನಿಜವಾಗಲೂ—ಪ್ರಾಣ ಹೋಗುವಾಗ ಯಾತನೆ, ಮಣ್ಣು, ಮಸಿ, ಅಂತ . . . . . . ದತ್ತೂರ, ಮೈಲುತುತ್ತ ಅಂಥ ದರಿದ್ರ ವಿಷ, ತಗೊಂಡರೆ ಒದ್ದಾಡಬೇಕಾದ್ದು ನ್ಯಾಯವೆ!—ಬಾವೀಲಿ ಕೆರೇಲಿ ಮುಳುಗಿಕೊಳ್ಳುವುದೇನು ಅದಕ್ಕಿಂತ ಉತ್ತಮವೇನೂ ಅಲ್ಲ. ಉಸುರು ಸಿಗ್ಹಾಕಿಕೊಂಡ್ಹಾಗೆ ಆಗುತ್ತೇನೋ-ದಸರಾ Exhibition ಹಾಗೆ. ಅದು ಬಿಟ್ಟರೆ ನೇಣು ಹಾಕಿಕೊಳ್ಳಬಹುದು.

ಸೀತೆ (ದೈನ್ಯದಿಂದ)—**ನಿಲ್ಲಿಸಣ್ಣ.**

ನಾರಾ.—ನೇಣು ಹಾಕಿಕೊಂಡು ಸಾಯೋದರಲ್ಲೂ ಸುಖ ಕಾಣಲಿಲ್ಲ. ನನ್ನ ಕೇಳಿದರೆ, ಒಳ್ಳೆ ಸುಖವಾಗಿ ಖಂಡಿತವಾಗಿ, ಗಲಾಟೆ ಇಲ್ದೆ ಸಾಯಿಸೋ ವಿಷಾನೇ ಸರಿ. (ಸೀತೆ ಭೀಕರವಾದ ಈ ಕೊಠಡಿಯಿಂದ ತಪ್ಪಿಸಿಕೊಳ್ಳುವ ಮಾರ್ಗ ಯೋಚಿಸುತ್ತಿದ್ದಾಳೆ) ಅಂದ ಹಾಗೆ ದೀಪ ಇರಬೇಕೋ ಇಲ್ಲ ಕತ್ತಲೇಲೆ, ಹಾಗೆ ಕಣ್ಮುಚ್ಚಿಕೊಳ್ಳೋಣವೋ? (ದೀಪವನ್ನು ಚಿಕ್ ಅಂತ ಸದ್ದುಮಾಡಿಸಿ ಆರಿಸುತ್ತಾನೆ) ನಮ್ಮಜ್ಜ financial. secretary ಆಗಿದ್ರಂತೆ. ದೀಪ ಉರಿಸಿ ಏಕೆ ದಂಡ ಮಾಡಬೇಕು? ಸುಮ್ಮನೆ ರಾತ್ರಿಯೆಲ್ಲಾ ಉರಿಯುತ್ತೆ. ನಾಳೆ ದಿನವೆಲ್ಲಾ ಉರಿಯುತ್ತೆ, ನಮ್ಮ ಹೆಣಗಳನ್ನು ಇಲ್ಲಿ ಅವರು ನೋಡುವ ವರೆಗೂ.

ಸೀತೆ (ತಬ್ಬಿಬ್ಬಾಗಿ)—ಅವರಿಗೆ ತಿಳಿದರೆ ಸುಮ್ಮನೆ ಬಿಡುತ್ತಾರೆಯೆ ನಿನ್ನ!

ನಾರಾ.—ಅವರಿಗೆ ? ಯಾರಿಗೆ ? ಓ, ಶಂಕರನಿಗೇ ? ಪೆದ್ದು ಪೆದ್ದಾಗಿ ಆಡಬೇಡ. ಶಂಕರ ಎಲ್ಲಿ ಬರುತ್ತಾನೆ ಈಗ. ನಾಳೆ ನಮ್ಮ ಹೆಣ ಸಿಕ್ಕಿ, ಅವನಿಗೆ ವರ್ತಮಾನ ಹೋಗಿ, ಅವನು ಬರೋ ಹೊತ್ತಿಗೆ ನಾವು ಬೂದಿ ಆಗಿರ್ತ್ತೀವಿ. ನಿಜವಾಗಲೂ ನಾವಿಲ್ಲಿ ಹೀಗಿರೋವಾಗ ಅವನೆಲ್ಲೋ ಸುಖವಾಗಿ ಲೆಕ್ಕಪತ್ರ ನೋಡ್ತಾ ಇರಬೇಕು. ಇಲ್ಲ 'ಪರಿಮಳಾ' ಓದುತ್ತಾ ಇದಾನೇನೋ. ಛೆ, ಛೆ, ಅವನು ಬಂದರೆ ನಿನಗೆ ಜುಗುಪ್ಸೆ ಬೇರೆ ಆಗುತ್ತೆ.

ಸೀತೆ—ಹಾಳ್ ನೀನು—ಬಿಡು ನಾನು ಹೋಗ್ತೀನಿ.

ನಾರಾ.—ಇಷ್ಟು ಹೊತ್ತಾಗುತ್ತೇ ಎರಡನೇ stage ಉ! ಮೂರು ಲೋಟ ಏನಾದರೂ ಕುಡುದ್ಯೋಕಾಫೀನ ?

ಸೀತೆ—ನನ್ನ ಬಿಡದೆ ಇದ್ದರೆ, ಕಿರಿಚಿ ಕಿರಿಚಿ—

ನಾರಾ—ಛೆ. ಅದು ಮಾತ್ರ ಮಾಡಬೇಡ. ಏನು ಉಪಯೋಗ ? ಯಾರಿಗೂ ಕೇಳಿಸೋಲ್ಲ. ಕಿಟಿಕಿ ಬಾಗಿಲು ಹಾಕಿದೆ. ಹತ್ತಿರ ಮನೆಗಳೂ ಇಲ್ಲ. ಕಿರ್‍ಚ್ಕೊ ಬಾರದು. ನಮ್ಮಂಥವರು ಹಾಗೆ ಮಾಡ್ತಾರ್‍ಯೆ ? ಸುಮ್ಮನೆ ಕೂತ್ಕೊಂಡು [ಸೀತೆ ಚಿಟಾರನೆ ಕಿರಿಚುತ್ತಾಳೆ.]

ನಾರಾ. (ಅಲ್ಲಾಡದೆ)—ನೋಡಿದೆಯ, ನನ್ನ ಕೈಬಿಡ್ತಿದೀಯ ? ಇದು, ಇದು, ಅಲ್ಪಪ್ರಾಣಿ ತರಹ ಅಲ್ಲವೇ ? ನಿಜವಾಗಲೂ ನಿನಗೇನು ಅಡ್ಡಿ ಆತಂಕ ಇಲ್ಲವಲ್ಲ, ಸಾಯೋಕೆ ? ಅದು ಸರ್ವೇಸಾಧಾರಣ—

ಸೀತೆ—ನಾನೂ ಸಾಯಬೇಕೂಂತ ಹೇಳಲಿಲ್ಲ.

ನಾರಾ.—ಶುದ್ಧ ಸುಳ್ಳು ಅದು.

ಸೀತೆ—ಇಲ್ಲ ನಾ ಹೇಳಲಿಲ್ಲ.

ನಾರಾ.—ನೀ ಹೇಳ್ದೆ (ಮೃದುವಾಗಿ) ನೀ ಹೇಳಿದ್ದನ್ನ ನಂಬಿತಾನೆ ನಾ ಹೀಗೆ ಮಾಡಿದ್ದು.

ಸೀತೆ—ಹೇಳಲಿಲ್ಲ, ನಾ ಹೇಳಲಿಲ್ಲ. ಹೇಳಲಿಲ್ಲ.

ನಾರಾ.—ಹಾಗಾದರೆ ನನ್ನ ಸ್ವಂತ ಜವಾಬ್ದಾರಿ ಮೇಲೆ ನಿನ್ನ ಪ್ರಯಾಣ ಕಳಿಸ್ತಿದ್ದೀನಿ. ಆದರೂ (ಮೃದುವಾಗಿ) ಸತ್ಯವಾಗಲೂ ನೀ ಹೇಳ್ದೆ.

ಸೀತೆ (ಕಣ್ಣೀರು ತುಂಬಿ)—ನಾನು ಸಾಯಲಾರೆ.

ನಾರಾ. (ಹರ್ಷದಿಂದ)—ಸರಿ, ನೀನು ಬದುಕಲಾರೆ !

ಸೀತೆ—ಇನ್ನೂ, ಇನ್ನೂ ಇರಬೇಕು ಅಂತ ಆಸೆ ಅಣ್ಣ (ಅಳುತ್ತಾ ಹೇಳುತ್ತಾ).

ನಾರಾ. (ಚುರುಕಾಗಿ)—ಇರಬೇಕು! ಯಾತಕ್ಕಿರಬೇಕು ಇನ್ನು ?

ಸೀತೆ (ಬಿಕ್ಕಳಿಸುತ್ತಾ)—ಏನೇನೋ ಮಾಡ್ಬೇಕೂಂತ ಆಸೆ ಇಟ್ಕೊಂಡಿದ್ದೆ..

ನಾರಾ. (ಅತ್ಯಾಶ್ಚರ್ಯದಿಂದ)—ಮಾಡ್ಬೇಕು ? [ಸೀತೆ ಹೌದು ಅಂತ ತಲೆ ಅಲ್ಲಾಡಿಸುತ್ತಾಳೆ.] (ಅರ್ಥವಾಗದೆ) ಒಳ್ಳೇ ಹುಡುಗಿ ! "ಏನೇನೋ ಮಾಡ್ಬೇಕು." ಏನೇನು ಮಾಡೋಕ್ಕೂ ಇಷ್ಟ ಇಲ್ಲ ಅಂತ ಹೇಳ್ದೆ ಮತ್ತೆ ?

ಸೀತೆ—ಸುಮ್ಮನೆ ಹೇಳ್ದೆ ; ನಿಜವಾಗಲ್ಲ.

ನಾರಾ. (ಅವಳ ಮಾತನ್ನು ಮನಸ್ಸಿಗೆ ಹಚ್ಚಿಕೊಳ್ಳದೆ)—ಏನಾದರೂ ಮಾಡಬೇಕಾಗಿದ್ದರೆ ಈಗ ಕಾಲ ಮಿಾರ್‍ಹೋಯಿತು. ಎಲ್ಲಾ ಮರೆತುಬಿಡು (ಗಡಿಯಾರ ನೋಡುತ್ತ) ಇನ್ನೆಲ್ಲೋ ತೀರ ಕೊಂಚ ಹೊತ್ತು ಉಳಿದಿದೆ.

ಸೀತೆ—ಅಯ್ಯೋ (ಕುದಿಯುತ್ತ) ಕತ್ತೆ !

ನಾರಾ.—ಸೀತೆ, ಸರಿಯೋ, ತಪ್ಪೋ ಕಾಣೆ. ನಿನಗೋಸ್ಕರ ನಾನಿಷ್ಟೆಲ್ಲ ಮಾಡಿದರೂ ನಿನಗೆ ಸಮಾಧಾನವಾದ ಹಾಗೆ ತೋರಲ್ಲ.

ಸೀತೆ (ಉಸಿರು ಸಿಕ್ಕಿಕೊಂಡು)—ಓ.

ನಾರಾ. (ನಿರ್ವಿಷಾದದಿಂದ)—ಯಾತರಲ್ಲೂ ಆಸಕ್ತಿ ಇಲ್ಲ, ಮಕ್ಕಳು ಬೇಡ, ಮರಿ ಬೇಡ, ಮನೆ ಮಠ ಎಲ್ಲ ಜುಗುಪ್ಸೆ ಆಗಿದೆ, ಅಂತ ಹೇಳಿದೆ ?

ಸೀತೆ (ನಿಧಾನವಾಗಿ)—ಮಿಕ್ಕದ್ದನ್ನೆಲ್ಲಾ ಮರೆತು "ನಾನು" "ನಾನು" ಅಂತಾಲೆ ಇದ್ಬಿಟ್ಟಿದ್ದೀನಿ.

ನಾರಾ. (ವಿಜಯಿಯಂತೆ :)—ಹಾ ! ಮೂರನೆ stage ಉ, ಕಡೇಗೆ ! ಆತ್ಮ ಪರೀಕ್ಷೆ ! "ನಾನು, ನಾನು, ಅಂದುಕೊಂಡಿದೀನಿ." ಭೇಷ್ ! ಭೇಷ್ ! ಸದ್ಯ, ಮುಗಿಯೋಕೆ ಬಂತು. ಆದರೆ ನಾನಿನ್ನೂ ಎರಡನೇ stage ನಲ್ಲೇ ಇದ್ದೀನಿ. ಸ್ವಲ್ಪ ಖುಷಿಯಾಗಿಯೇ ಇದೇನಲ್ವೆ ?

ಸೀತೆ (ಅವನ ಕಾಲಿನ ಹತ್ತಿರ ಕೂತು)—ನಿನ್ನ ದಮ್ಮಯ್ಯಾ ಬೇಡಣ್ಣ ! ಸಾಕು ! ಸಹಿಸಲಾರೆ . . . . . ನಾನು ಸಾಯಲಾರೆ.

ನಾರಾ. (ಆಕ್ಷೇಪಣಧ್ವನಿಯಲ್ಲಿ)—ಚ್, ಚ್, ಚ್, ನಿನಗೋಸ್ಕರ ಇಲ್ಲಿ ಸದ್ದಿಲ್ಲದೆ ಕಣ್ಮುಚ್ಚಿಕೊಳ್ಳೋಕೆ ಎಲ್ಲ ಅಣಿ ಮಾಡಿದ್ದೆ. ಈಗ ನನ್ನ ಮೇಲೆ ತಪ್ಪು ಹಾಕ್ತೀಯ. ಹಾಲು ಕುಡಿಸಿದ ಸರ್ಪ ಆಗಬೇಡ, ಅಲ್ಲ, ಉಪ್ಪು ಹಾಕಿದವರಿಗೆ ಎರಡು ಬಗೆಯ ಬೇಡ. (ಮೃದುವಾಗಿ) ನನಗೆ ಗೊತ್ತು, ಸೀತೆ ಅಲ್ಲ ಮಾತಾಡುತ ಇರೋದು, ವಿಷ, ಮೂರನೇ ಸ್ಟೇಜು ಅಂತ.

ಸೀತೆ (ಎದೆ ಕರಗುವಂತೆ)—ಇಲ್ಲ ಅಣ್ಣಾ, ನಾನೇ ಮಾತಾಡುತ ಇರೋದು. ನಾ ಹೇಳೋದು ಸ್ವಲ್ಪ ನಂಬು.

ನಾರಾ. (ಹಳಿಯುತ್ತ)—ಏನು! ಹುಳು ಒದ್ದಾಡಿದ ಹಾಗೆ ಒದ್ದಾಡುತ್ತ ಹೇಳ್ತೀಯ, ಆವಾಗ, "ಸಾಯುವುದೆ ವಾಸಿ, ಸತ್ತರೆ ಬದುಕಿದೆ"—

ಸೀತೆ (ಭಯಭ್ರಾಂತಳಾಗಿ)—ಇಲ್ಲ, ನಾ ಹೇಳಲಿಲ್ಲ, ಇಲ್ಲ, ಇಲ್ಲ.

ನಾರಾ. (ಆವೇಶದಿಂದ)—ಹಾಗಿದ್ದರೆ ಯಾವ ಪುರುಷಾರ್ಥಕ್ಕೋಸ್ಕರ ಆಗ ಹಾಗೆ ಹೇಳಿದೆ?

ಸೀತೆ (ತೊದಲುತ್ತ)—ನಾ ಕಾಣೆ, ಹುಚ್ಚು ಹಿಡಿದಿತ್ತೇನೊ. ಹೀಗೆ ಮಾಡುತೀ ಅಂತ ಯಾರಿಗೆ ಗೊತ್ತು? ನಿಜವಾಗಲೂ ಹಾಗರ್ಥ ಮಾಡಲಿಲ್ಲ—ನನ್ನಾಣೆ. ಬದುಕಿ ಉಪಯೋಗ ಇಲ್ಲ ಅಂತ ಇನ್ನೊಂದು ಸಲ ಹೇಳೋಲ್ಲ. ಏನು ಬೇಕಾದರೂ ಮಾಡುತೀನಿ, ಏನು ಬೇಕಾದರೂ—ಅಯ್ಯೋ, ದೇವರೆ! ನನ್ನುಳಿಸಣ್ಣ, ಸಾಯೊಕ್ಕೆ ಬಿಡಬೇಡ.

[ಒಂದೆರಡು ಕ್ಷಣ ನಾರಾಯಣ ಹಾಗೇ ನಿಂತುಕೊಂಡು, ಕಾಲ ಹತ್ತಿರ ಬಿಕ್ಕಳಿಸುತ್ತಿರುವ ಅವಳನ್ನು ನೋಡುತ್ತಾನೆ.]

ನಾರಾ.—ಸರಿಯಮ್ಮ. ಏನು ಮಾಡೊಕ್ಕೆ ಸಾಧ್ಯವೋ ನೋಡಬೇಕು. ಒಳ್ಳೆ ಕೆಲಸ ಕೊಡ್ತೀರಲ್ಲೆ, ನೀವು ಹೆಂಗಸರು. ಒಂದು ಮನಸಲ್ಲ, ಒಂದು ರೀತಿಯಲ್ಲ.

[ಸೀತೆ ದೀರ್ಘವಾಗಿ ಉಸಿರು ಬಿಟ್ಟು, ಅವನ ಕಡೆ ನೋಡುತ್ತಾಳೆ. ನಾರಾಯಣ ಬೀರು ಗೂಡಿಗೆ ಹೋಗಿ ಒಂದೆರಡು ಔಷಧಿಗಳನ್ನು ಮಿಶ್ರಮಾಡಿ]

ನಾರಾ.—ಹಾಗಾದರೆ ನೋಡೋಣ, ನಿನ್ನದೃಷ್ಟ. ಎಲ್ಲಿ, ಇದು ಸ್ವಲ್ಪ ಕುಡಿ, ತಾಯಿ; ಚೆನ್ನಾಯಿತಲ್ಲ! ಇನ್ನು ನಾನೂ ಇದನ್ನು ಕುಡಿಯೊ ಹಾಗೆ ಮಾಡಿದೆಯಲ್ಲ;

ಸೀತೆ (ಕುಡಿದು, ಮುಖ ವಿಕಾರಮಾಡಿ)—ಬದುಕಿದೆ!

ನಾರಾ.—ಇಷ್ಟಕ್ಕೇ ಮುಗಿಯಲಿಲ್ಲ. ಯಾರಿಗೆ ಈ ತರಹ ವಿಷ ಹಾಕಿದೆಯೊ ಅವರು ಚಟುವಟಿಕೆಯಾಗಿರಬೇಕು. ತೆಪ್ಪನೆ ಕೂತಿರಬಾರದು. ಓಡಾಡುತ್ತಿರಬೇಕು. [ಅವಳ ಕೈ ಹಿಡಿದೆತ್ತಿ, ಅವಳನ್ನು ಅಡ್ಡಾಡಿಸುತ್ತಾನೆ.]

ಸೀತೆ (ಮೆತ್ತಗೆ)—ಓಡಾಡುತ್ತಿರಬೇಕು?

ನಾರಾ.—ಓಡಾಡುತ್ತಿರಬೇಕು. ಮೊದಲು ನಂಟರಿಷ್ಟರ ಜತೇಲಿ. ಆಮೇಲೆ ಬದುಕಿರುವಷ್ಟು ದಿನಾನೂ.

ಸೀತೆ (ಇನ್ನೂ ಮೆತ್ತಗೆ)—ಏಕೋಡಾಡುತ್ತಿರಬೇಕು?

ನಾರಾ.—ವಿಷ ಮೆದುಳಿನಲ್ಲಿ ನರಗಳಲ್ಲಿ ಸೋಕಿಕೊಳ್ಳದೆ ಇರಲಿ ಅಂತ. ಹಾಗೇನಾದರೂ ಸೇರಿಕೊಂಡಿದ್ದರೆ, ಹೊರಗೆ ಹಾಕುವುದಕ್ಕೆ. ನೋಡು, ಈ ವಿಷ ಏನಾದರೂ ಹಾಗೆ ಒಳಗೆ ಸೇರಿಸಿಕೊಂಡುಬಿಟ್ಟರೆ ರೋಗಿ ಸೋಮಾರಿ ಆಗಿ, ನಿರುತ್ಸಾಹಿಯಾಗಿ, ಮತ್ತೆ, ಮತ್ತೆ (ಹೆದರಿಸುತ್ತ) ಅಲ್ಪ ಪ್ರಾಣದ ತರಹ ಆಗುತ್ತಾನೆ.

ಸೀತೆ (ಅಧೀನಳಾಗಿ)—ಗೊತ್ತಾಯಿತು.

ನಾರಾ.—ಓಡಾಡುತ್ತ ಇರೋದು ಅಗತ್ಯ. ಮೂಲೇಲಿ ಕೂತಿರಬಾರದು. ಓಡಾಡ್ತ ಇರಬೇಕು, ಯಾವಾಗಲೂ ಏನಾದರೂ ಕೆಲಸ ಮಾಡ್ತ ಇರಬೇಕು. ಇಲ್ಲಿ ನೋಡು, ಹುಷಾರಾಗಿ ಕೇಳು: [ಸೀತೆ ಕುಳಿತುಕೊಳ್ಳುವುದಕ್ಕೆ ಹೋಗುತ್ತಾಳೆ] ಓಡಾಡ್ತ ಇರಬೇಕು!—ಇನ್ನು ಮುಂದೆ ನೀನು ಎಲ್ಲಾ ತರಹ ಆಸಕ್ತಿ ವಹಿಸಬೇಕು. ಗೊತ್ತಾಯಿತೊ? [ಸೀತೆ ತಲೆ ಆಡಿಸುತ್ತಾಳೆ] ಇನ್ನು ಮುಂದೆ, ಮನೆ ಮಕ್ಕಳು, ನಂಟರು ಇಷ್ಟರು ಅಂತ ಆಸಕ್ತಿ ವಹಿಸಬೇಕು. ತಿಳೀತೊ? [ಸೀತೆ ಪುನಃ ತಲೆ ಆಡಿಸುತ್ತಾಳೆ] ಎಲ್ಲಿ, ಆಣೆ ಇಡು [ಸೀತೆ ಗೊಣ ಗೊಣ ಎನ್ನುತ್ತಾಳೆ.] ದಿನ ಬೆಳಗಾದರೆ ಯೋಚಿಸುತ್ತ, ಮಂಕು ಬಡಿದುಕೊಂಡಿರದೆ, ಲವಲವಿಕೆಯಾಗಿರಬೇಕು, ತಾಯಿ. [ಇಬ್ಬರೂ ಶತಪದ ತಿರುಗುತ್ತಲೇ ಇದ್ದಾರೆ.] ಓಡಾಡ್ತ ಇರಬೇಕು?

ಸೀತೆ (ವಿಧೇಯಳಾಗಿ)—ಆಗಲಣ್ಣ ಆಮೇಲೆ?

ನಾರಾ.—ಇನ್ನೇನಿಲ್ಲ. ನಿನ್ನ ಕೆಲಸ ನೀನು ಮಾಡಿಕೊಂಡು ಹೋಗು. ಪೂರ್ತಿ ಪ್ರಾಣವಾಗಿರಬೇಕು. ಪ್ರಯತ್ನ ಆದರೂ ಮಾಡು. . . . . . ಹುಂ, ಇಲ್ಲಿಗೆ, ಇಷ್ಟು ಸಾಕು.

ಸೀತೆ—ಅಲ್ಲ, ಮತ್ತೆ, ಇನ್ನೇನೂ ಔಷ್ತಿ ಕೊಡಲ್ಲವೆ?

ನಾರಾ.—ಬೇಡ. ಈಗ ಕೊಟ್ಟಿರುವಷ್ಟು ಸಾಕು. [ಸಂಕೇತ ಇಟ್ಟುಕೊಂಡ ರೀತಿಯಲ್ಲಿ ಗಂಟೆ ಬಾರಿಸುತ್ತಾನೆ.] ಬೇಕಾದರೆ ಸ್ವಲ್ಪ ಬಿಸಿ ಬಿಸಿಯಾಗಿ ಹಾಲು ಕುಡಿಯುವಿಯಂತೆ. ಆಮೇಲೆ ಹೋಗಿ ನಿದ್ದೆ ಮಾಡು. ಎರಡು ಮೂರು ದಿನದಲ್ಲಿ ಶಂಕರ ಬಂದು, ಇಲ್ಲಿ ನಾಲ್ಕುದಿನ ಇದ್ದು, ಆಮೇಲೆ ಕರೆದುಕೊಂಡು ಹೋಗುತ್ತಾನಂತೆ. [ಬೀರುಗೂಡಿನಲ್ಲಿರುವ thermos-flask ಇಂದ ಲೋಟಕ್ಕೆ ಹಾಲು ಹಾಕಿಕೊಟ್ಟು ಅವಳು ಕುಡಿದ ಮೇಲೆ ಬಾಗಿಲು ತೆಗೆಯುತ್ತಾನೆ. ಅವಳು ಅನುಮಾನದಿಂದ ಅವನಕಡೆ ನೋಡತ್ತಾಳೆ.]

ನಾರಾ. (ಅವಳನ್ನು ಹೊರಗೆ ಕಳುಹಿಸುತ್ತ)—ಈವಾಗೇನೂ ಯೋಚಿಸಬೇಡ. ಸುಮ್ಮನೆ ನಿದ್ದೆಮಾಡು —[ಸೀತೆ ಹೋಗುತ್ತಾಳೆ. ಅವಳು ಹೋದ ಸ್ವಲ್ಪ ಹೊತ್ತಿನ ಮೇಲೆ ರಂಗಪ್ಪ ಒಳಗೆ ಬರುತ್ತಾನೆ]

ನಾರಾ.—ಎಲ್ಲ ಸರಿಯಾಗಿ ನಡಕೊಂಡು ಹೋಯಿತು, ರಂಗಪ್ಪ.

ರಂಗ—ಒಳ್ಳೇದು, ಸ್ವಾಮಿ.

ನಾರಾ.—ಪರವಾಗಿಲ್ಲ! ಬಾಗಿಲನ್ನ ಹುಷಾರಾಗೇ ನೋಡಿಕೊಂಡಿರಿ.

ರಂಗ—ಎಣ್ಣೆ ಹಾಕಿ, ಸರಿಮಾಡಿಟ್ಟಿದ್ದೆ. ಒಳ್ಳೇದು. ಇನ್ನೇನಾದರೂ ಉಳಿದಿದೆಯೆ, ನಾನು ಮನೆಗೆ ಹೋಗೊಕ್ಕೆ ಮುಂಚೆ ಮಾಡಿ ಹೋಗೋದಕ್ಕೆ.

ನಾರಾ.—ಏನೂ ಇರೊ ಹಾಗೆ ಕಾಣೊಲ್ಲ. ಇಲ್ಲ. ಏನೂ ಇಲ್ಲ. ಇನ್ನೆಲ್ಲ ಸರಿ ಹೋಗುತ್ತೆ.

ತೆರೆ ಬೀಳುತ್ತದೆ.

ಬಿ. ಚಂ.

ಕೆಲವು ಹೊಸ ಅಂತರ್‌ರಾಷ್ಟ್ರೀಯ ಆರ್ಥಿಕ ಸಂಘಗಳು*

ಅಂತರ್‌ರಾಷ್ಟ್ರೀಯ ಆರ್ಥಿಕ ಸಂಬಂಧವನ್ನು ವ್ಯವಸ್ಥೆಗೊಳಿಸುವ ದೃಷ್ಟಿಯಿಂದ, ಸಂಯುಕ್ತರಾಷ್ಟ್ರಗಳು ಕೈಕೊಂಡ ಕಾರ್ಯಕ್ರಮಗಳಲ್ಲಿ ಕೆಲವನ್ನು ಇಲ್ಲಿ ಸೂಚಿಸಲಾಗಿದೆ.

ಆಹಾರ ಮತ್ತು ವ್ಯವಸಾಯ

ಸಂಯುಕ್ತರಾಷ್ಟ್ರಗಳ ಸಮ್ಮೇಳನವೊಂದು ಆಹಾರ ಮತ್ತು ವ್ಯವಸಾಯದ ವಿಷಯುಗಳನ್ನು ಚರ್ಚಿಸಲು ವರ್ಜೀನಿಯದ ಹಾಟ್‌ಸ್ಪ್ರಿಂಗ್ಸ್ ನಗರದಲ್ಲಿ ೧೯೪೩ಯ ಮೇ ತಿಂಗಳಲ್ಲಿ ಸೇರಿತು. ನಾನಾ ದೇಶದ ಆಹಾರದ ಅಭಿವೃದ್ಧಿ ಮತ್ತು ವ್ಯವಸಾಯ ಪದಾರ್ಥಗಳ ತಯಾರಿಕೆ, ಹಂಚಿಕೆ, ಮಾರಾಟಗಳಲ್ಲಿ ಅನುಸರಿಸಬೇಕಾದ ಹಲಕೆಲವು ಬದಲಾವಣೆಗಳ ಮತ್ತು ಅವಕ್ಕೆ ಸಂಬಂಧಿಸಿದ ಇತರ ವಿಚಾರಗಳಲ್ಲಿ ಚರ್ಚೆ ನಡೆಯಿತು. ಆಹಾರಕ್ಕೂ ವ್ಯವಸಾಯಕ್ಕೂ ಸೇರಿದ ನಾನಾ ಬಾಬುಗಳಲ್ಲಿ ಬಂದಿದ್ದ ಹಲವಾರು ಸಲಹೆಗಳನ್ನು ಪರಿಶೀಲಿಸಿ ತೀರ್ಮಾನಕ್ಕೆ ಬರಲು, ಸಮ್ಮೇಳನಕ್ಕೆ ಬಂದಿದ್ದ ರಾಷ್ಟ್ರಗಳ ಪ್ರತಿನಿಧಿಗಳನ್ನೊಳಗೊಂಡ ಹಂಗಾಮಿ ಸಮಿತಿಯೊಂದನ್ನೇರ್ಪಡಿಸಲಾಯಿತು. . . . . ಈ ಸಮಿತಿಯ ಮುಖ್ಯ ಕಾರ್ಯವೆಂದರೆ:— ಆಹಾರ ಮತ್ತು ವ್ಯವಸಾಯದ ಅಭಿವೃದ್ಧಿಯ ಸಲುವಾಗಿ ಸ್ಥಾಯಿೞ ಸಂಸ್ಥೆಯನ್ನು ರಚಿಸಲು ಖಚಿತವಾದ ಯೋಜನೆಯೊಂದನ್ನು ತಯಾರಿಸಿ ಅದನ್ನು ಪ್ರತಿಯೊಂದು ಸದಸ್ಯ ರಾಷ್ಟ್ರದ ಪರಿಶೀಲನೆಗೂ ಕಳುಹಿಸುವುದು. ಅದರಂತೆ ಈ ಹಂಗಾಮಿ ಸಮಿತಿಯು **“ ಅಂತರ್‌ರಾಷ್ಟ್ರೀಯ ಆಹಾರ ಮತ್ತು ವ್ಯವಸಾಯ** ಸಂಘ ”ಕ್ಕಾಗಿ ರಚನೆಯೊಂದನ್ನು ತಯಾರಿಸಿ ೧೯೪೪ನೆಯ ಆಗಸ್ಟ್ ತಿಂಗಳಲ್ಲಿ ಎಲ್ಲ ಮಿತ್ರರಾಷ್ಟ್ರಗಳ ಪರಿಶೀಲನೆ ಮತ್ತು ಒಪ್ಪಿಗೆಗೆಂದು ಕಳುಹಿಸಿತು.

ಈ ರಚನೆಯ ಪೀಠಿಕೆಯಲ್ಲಿ ಸೂಚಿಸಿದಂತೆ, “ ಇದಕ್ಕೆ ಒಪ್ಪಿಕೊಳ್ಳುವ ರಾಷ್ಟ್ರಗಳೆಲ್ಲವೂ ತಮ್ಮ ತಮ್ಮ ದೇಶದ ಆಹಾರ, ಪೋಷಣೆ, ವ್ಯವಸಾಯ ಮತ್ತು ಜನಜೀವನದ ಸ್ಥಿತಿಯನ್ನು ತಕ್ಕಷ್ಟು ಉತ್ತಮವಾಗಿಡಲು ಪ್ರಯತ್ನಿಸಬೇಕು. ಆಹಾರ

* ೧೯೪೫ರ ರಿಸರ್ವ್ ಬ್ಯಾಂಕ್ ಆಫ್ ಇಂಡಿಯ ವಾರ್ಷಿಕ ಕಾರ್ಯಕಲಾಪಗಳಿಂದ.

ವಸ್ತುಗಳ ತಯಾರಿಕೆ, ವ್ಯವಸಾಯ ಕ್ರಮ, ಗ್ರಾಮಾಂತರಗಳಲ್ಲಿನ ಪ್ರಜಾಭಿವೃದ್ಧಿ, ಇವುಗಳಿಗೆ ಸಂಬಂಧಿಸಿದ ಎಲ್ಲ ಕಾರ್ಯಕ್ರಮಗಳನ್ನೂ ಕೈಕೊಂಡು ಆ ಮೂಲಕ ಒಟ್ಟಿನಲ್ಲಿ ಅಂತರ್‌ರಾಷ್ಟ್ರೀಯ ಆರ್ಥಿಕಸ್ಥಿತಿ ಉತ್ತಮಗೊಳ್ಳುವಂತೆ ಸುವ್ಯವಸ್ಥೆಗಳನ್ನು ಏರ್ಪಡಿಸಬೇಕು."

ಆ ಯೋಜನೆಯ ರಚನೆಯ ಮೊದಲ ಭಾಗದಲ್ಲಿ ಈ ಕೆಳಗೆ ಕಂಡ ಕಾರ್ಯಕ್ರಮಗಳನ್ನು ಸೂಚಿಸಲಾಯಿತು. ೧. ಈ ಸಂಘವು, ಆಹಾರ, ಪೋಷಣೆ, ವ್ಯವಸಾಯ, ಕೃಷಿಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಸಂಗ್ರಹಿಸಿ, ವಿಂಗಡಿಸಿ ಅವನ್ನು ಪ್ರಕಟಿಸಬೇಕು.

೨. ಈ ಕೆಳಗೆ ಕಂಡ ವಿಷಯಗಳಲ್ಲಿ ಸಂಘವು ನಾನಾ ಸದಸ್ಯ ರಾಷ್ಟ್ರದವರು ಆವಶ್ಯಕ ಕಾರ್ಯಕ್ರಮಗಳನ್ನು ಕೈಕೊಳ್ಳುವಂತೆ ಸಲಹೆ ಕೊಡಬೇಕು; ಸಾಧ್ಯವಾದ ಕಡೆ ಬಲಾತ್ಕರಿಸಬೇಕು;

ವಿಷಯಗಳು ಯಾವುವೆಂದರೆ—

(ಅ) ಆಹಾರ ಪದಾರ್ಥಗಳಲ್ಲಿ ಮತ್ತು ವ್ಯವಸಾಯ ರೀತಿ ನೀತಿಗಳಲ್ಲಿ ಹೊಸ ವೈಜ್ಞಾನಿಕ ಶೋಧನೆಗಳನ್ನು ನಡೆಸುವುದು.

(ಆ) ಆಹಾರ ವಸ್ತುಗಳ ಮತ್ತು ವ್ಯವಸಾಯದ ವಿಷಯವಾಗಿ ಸಾರ್ವಜನಿಕರಲ್ಲಿ ಹೆಚ್ಚು ಹೆಚ್ಚು ತಿಳಿವಳಿಕೆಯನ್ನು ಹರಡಿ, ವ್ಯವಸಾಯ ವಿದ್ಯಾಭ್ಯಾಸವನ್ನು ಮೇಲ್ಪಡಿಸುವುದು.

(ಇ) ಸಹಜ ಸಂಪತ್ತುಗಳನ್ನು ಸಂರಕ್ಷಿಸಿ, ಆಹಾರ ವಸ್ತುಗಳ ತಯಾರಿಕೆಯನ್ನು ಅಭಿವೃದ್ಧಿಗೊಳಿಸುವುದು.

(ಈ) ಆಹಾರ ಸಾಮಗ್ರಿಗಳ ಮಾರಾಟ ಕ್ರಮಗಳಲ್ಲಿ ಇನ್ನೂ ಉತ್ತಮವಾದ ಉಪಾಯಗಳನ್ನು ಕಂಡುಹಿಡಿಯುವುದು; ಆಹಾರವಸ್ತುಗಳ ತಯಾರಿಕೆಗೆ ಬೇಕಾಗುವ ಹಣವನ್ನು ಸಾಲಕೊಡಿಸುವುದು.

೩. ಈ ಸಂಘವು ಮಾಡಬೇಕಾದ ಇತರ ಕೆಲಸಗಳೆಂದರೆ:—

(ಅ) ನಾನಾ ರಾಷ್ಟ್ರ ಸರಕಾರಗಳು ಅಪೇಕ್ಷಿಸಬಹುದಾದ ವೈಜ್ಞಾನಿಕ ಕ್ರಿಯಾತಂತ್ರಗಳನ್ನೂ ಯಂತ್ರಗಳನ್ನೂ ಒದಗಿಸುವುದು.

(ಆ) ಈ ಯೋಜನೆಗೆ ಸಮ್ಮತಿಸಿದ ರಾಷ್ಟ್ರಗಳು ಆವಶ್ಯಕ ಕಾರ್ಯಕ್ರಮಗಳನ್ನು ಕೈಕೊಂಡಾಗ ಬೇಕಾಗಬಹುದಾದ ಸಿಬ್ಬಂದಿಯನ್ನು ಮತ್ತು ಎಲ್ಲ ರೀತಿಯ ಸಹಾಯವನ್ನು ಒದಗಿಸಲು ಪ್ರಯತ್ನಿಸುವುದು.

ಸಮ್ಮಿಳಿತ ರಾಷ್ಟ್ರಗಳ ಕಷ್ಟನಷ್ಟ ಪರಿಹಾರ ಮತ್ತು ಪುನರ್ವ್ಯವಸ್ಥಾ ಸಂಘ (U.N.R.R.A.)

ಸಂಯುಕ್ತ ರಾಷ್ಟ್ರದ ದೇಶಗಳ ಪ್ರತಿನಿಧಿಗಳು ಸೇರಿ ಒಪ್ಪಂದವೊಂದನ್ನು ಮಾಡಿಕೊಂಡು ೧೯೪೩ನೆಯ ನೊವೆಂಬರ್ ತಿಂಗಳಲ್ಲಿ ಮೇಲ್ಕಂಡ ಸಂಘವನ್ನು ಸ್ಥಾಪಿಸಿದರು. ಈ ಸಂಘದ ಮುಖ್ಯ ಉದ್ದೇಶವೆಂದರೆ:—ಯುದ್ಧದಲ್ಲಿ ನೊಂದವರಿಗೂ ನಿರಾಶ್ರತರಿಗೂ ಊಟ, ಉಡಿಗೆ, ವಸತಿ ಮತ್ತು ಇತರ ಅಗತ್ಯಗಳನ್ನೂ ವೈದ್ಯಸಹಾಯವನ್ನೂ ಒದಗಿಸುವುದು ; ಅದಕ್ಕೆ ಬೇಕಾಗುವ ಅಧಿಕಾರಿಗಳ ವ್ಯವಸ್ಥೆ ಮಾಡುವುದು ; ಆವಶ್ಯಕವಾದ ಕಡೆಗಳಲ್ಲಿ ಇದಕ್ಕೆ ಬೇಕಾಗುವ ಪದಾರ್ಥಗಳನ್ನು ಸಾಗಿಸಲು ವಾಹನ ಸೌಕರ್ಯಗಳನ್ನು ಏರ್ಪಡಿಸುವುದು. ಸಂಘದ ಕಾರ್ಯಕಾರಿ ಸಮಿತಿಯು ನ್ಯೂಜರ್ಸಿ ಸಂಸ್ಥಾನದಲ್ಲಿರುವ **ಅಂಟ್ಲಾಂಟಿಕ್ ನಗರದಲ್ಲಿ** ಮೊದಲನೆಯ ಬಾರಿ ಸೇರಿ ಕೆಳಗೆ ಕಂಡಂತೆ ತೀರ್ಮಾನಿಸಿತು :—

೧. ಸಂಘವು ಆಯಾ ಪ್ರದೇಶಗಳ ಸೈನ್ಯಾಧಿಕಾರಿಗಳ ಮತ್ತು ಸರ್ಕಾರದ ಅನುಮತಿ ಪಡೆದು ಆವಶ್ಯಕ ಸಹಕಾರವನ್ನು ತೆಗೆದುಕೊಂಡು, ಶತ್ರುಗಳ ಹಿಡಿತದಿಂದ ತಪ್ಪಿಸಿದ ಕ್ಷೇತ್ರಗಳಲ್ಲಿ ತಮ್ಮ ಕಾರ್ಯಕ್ರಮಗಳನ್ನು ನಡೆಸುವುದು.

೨. ಶತ್ರುಗಳಿಗೆ ಸೇರಿದ ಅಥವಾ ಹಿಂದೆ ಸೇರಿದ್ದ ಪ್ರದೇಶಗಳಲ್ಲಿ ಏನಾದರೂ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾದರೆ ಮುಂಚಿತವಾಗಿ ಕಾರ್ಯನಿರ್ವಾಹಕ ಸಭೆಯ (Council) ಒಪ್ಪಿಗೆ ಪಡೆಯಬೇಕು ; ಆಯಾ ಪ್ರದೇಶಗಳಲ್ಲಿನ ನಷ್ಟಪರಿಹಾರ ಮತ್ತು ಪುನರ್ವ್ಯವಸ್ಥಾ ಕಾರ್ಯಗಳಿಗಾಗಿ ಬೇಕಾಗುವ ಹಣವನ್ನು ಅಲ್ಲಿನವರೇ ಕೊಡಬೇಕು.

ಸಂಘದ ನಿರ್ವಾಹಕರು ಒದಗಿಸಬೇಕಾದ ಸರಪರಾಜೂ ನೆರವೂ ಈ ಕೆಳಗೆ ಕಂಡಂತೆ ನಾಲ್ಕು ಭಾಗವಾಗಿ ವಿಂಗಡವಾದವು.

(*a*) ಆಹಾರ, ಉಡಿಗೆ, ವಸತಿ ಮುಂತಾದ ಪರಿಹಾರ ಸಾಮಗ್ರಿಗಳು.

(*b*) ಆಹಾರ ಮತ್ತು ಆರೋಗ್ಯ ರಕ್ಷಣೆ ; ಯುದ್ಧದಿಂದ ಚೆದರಿದ ಜನರನ್ನು ಪುನಃ ಸ್ವದೇಶಗಳಿಗೆ ಸೇರಿಸುವುದು—ಮೊದಲಾದ ಪರಿಹಾರ ಸೌಕರ್ಯಗಳು.

೩. ಆವಶ್ಯಕವಾಗಿ, ಬೇಕಾಗುವ ಜನಸಹಾಯ, ವ್ಯವಸಾಯದ ಬೀಜಗಳು, ಗೊಬ್ಬರ, ಕಚ್ಚಾ ಪದಾರ್ಥಗಳು, ಇವುಗಳನ್ನು ಸಾಗಿಸಲು ಬೇಕಾಗುವ ವಾಹನ ಸೌಕರ್ಯಗಳು—

೪. ದೀಪ, ನೀರು, ನಿರ್ಮಲೀಕರಣ ಮತ್ತು ವಾಹನಸೌಕರ್ಯ ಮುಂತಾದ ಸಾರ್ವಜನಿಕ ಉಪಕರಣಗಳು.

ಇದಾದನಂತರ ಸಂಘವು, ಯುದ್ಧಕಾಲದಲ್ಲಿ ಸರಕಾರದವರನ್ನು ಹೆಚ್ಚು ತೊಂದರೆಪಡಿಸದೆ ತಮಗೆ ಬೇಕಾಗುವ ಸಹಾಯವನ್ನು ಒಳದೇಶದ ನಾನಾ ಅಧಿಕಾರಿಗಳ ಸಹಕಾರದಿಂದಲೇ ಪಡೆಯಬೇಕೆಂದು ನಿರ್ಣಯಿಸಿತು.

ಈ ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು ನಾನಾ ಸದಸ್ಯ ರಾಷ್ಟ್ರಗಳು ವಹಿಸಿಕೊಳ್ಳತಕ್ಕದ್ದು ; ಪ್ರತಿ ಸರ್ಕಾರವೂ ತನ್ನ ದೇಶದ ಆದಾಯದಲ್ಲಿ (ಜೂನ್ ೩೦, ೧೯೪೩ ಕ್ಕೆ ಮುಗಿದ ಪ್ರತಿವರ್ಷಕ್ಕೂ ನೂರಕ್ಕೆ ೧ ಭಾಗವನ್ನಾದರೂ ಚಂದಾಹಣವಾಗಿ ಕೊಡಬೇಕು. ಕೊಡುವ ಹಣದಲ್ಲಿ ಕನಿಷ್ಠಪಕ್ಷ ೧೦% ಭಾಗವಾದರೂ ಚಿನ್ನದ ರೂಪದಲ್ಲಿರಬೇಕು. ಅಥವಾ ಹೊರದೇಶದಲ್ಲಿ ಮಾರಾಟವಾಗಬಲ್ಲ ಹಣದ ಪ್ರತಿನಿಧಿ ರೂಪದಲ್ಲಿರಬೇಕು.

ಸಂಘವು ಎರಡನೆಯಬಾರಿ ೧೯೪೪ನೆಯ ವರ್ಷ ಸೆಪ್ಟೆಂಬರಲ್ಲಿ ಮಾಂಟ್ರಿಯಲ್ ನಗರದಲ್ಲಿ ಸೇರಿ ಇನ್ನುಮುಂದೆ ಶತ್ರುಗಳು ಅಥವಾ ಶತ್ರುಗಳಾಗಿದ್ದವರಿಗೆ ಸೇರಿದ ಪ್ರದೇಶಗಳಲ್ಲಿ ಮೇಲ್ಕಂಡ ಯಾವ ಪರಿಹಾರ ಕಾರ್ಯಗಳನ್ನು ನಡೆಸುವಾಗಲೂ ಹಿಂದಿನಂತೆ ಕೌನ್ಸಿಲ್ಲಿನ ಅನುಮತಿಯನ್ನು ಪಡೆಯಬೇಕಾಗಿಲ್ಲವೆಂದು ತೀರ್ಮಾನಿಸಿತು. ಇಟಲಿಯ ನಾನಾ ಪ್ರದೇಶಗಳಲ್ಲಿನ ಗರ್ಭಿಣಿ ಸ್ತ್ರೀಯರು ಮತ್ತು ಶಿಶುಗಳ ಪೋಷಣೆ, ರಕ್ಷಣೆ ಕಾರ್ಯಗಳಿಗಾಗಿ ಸುಮಾರು ಐದು ಕೋಟಿ ಡಾಲರುಗನ್ನು ವಿನಿಯೋಗಿಸಬಹುದೆಂದು ಸಮ್ಮತಿಕೊಟ್ಟಿತು.

ಸಂಘದ ಮೊದಲನೆಯ ವರ್ಷದಲ್ಲಿನ ಕಾರ್ಯಕ್ರಮಗಳೆಲ್ಲವೂ ಯೋಜನೆಗಳನ್ನು ರಚಿಸುವ ಸಿದ್ಧತೆಯಲ್ಲೇ ಕಳೆದುದರಿಂದ ಅಷ್ಟು ತೃಪ್ತಿಕರವಾಗಿ ಕೆಲಸ ಮಾಡಲು ಸಾಧ್ಯವಾಗಲಿಲ್ಲ. ಯುದ್ಧದ ದೆಸೆಯಿಂದ, ಹೊರದೇಶದ ಮತ್ತು ಒಳದೇಶದ ವಾಹನ ಸೌಕರ್ಯಗಳ ಅಭಾವ ಸಹ ಇದಕ್ಕೆ ಮತ್ತೊಂದು ಕಾರಣವಾಯಿತು. ಯುರೋಪಿನ ರಾಷ್ಟ್ರಗಳಲ್ಲಿ ಅನೇಕವು ತಮ್ಮ ದೇಶದ ಕಷ್ಟಪರಿಹಾರ, ಪುನರ್ವ್ಯವಸ್ಥೆಯ ಕೆಲಸಗಳಿಗಾಗಿ ಸಂಘದ ಸಹಾಯವನ್ನು ಅಪೇಕ್ಷಿಸದಿದ್ದರೂ ಯುದ್ಧದಿಂದ ಚೆದರಿಹೋದ ತಮ್ಮ ಜನರನ್ನು ಹಿಂದಕ್ಕೆ ಕರೆಸಿಕೊಳ್ಳುವುದಕ್ಕೂ ಇತರ ಆರೋಗ್ಯ ರಕ್ಷಣೆ ಮುಂತಾದ ಸಹಾಯಗಳಿಗೂ ಸಂಘದ ನೆರವು ತೀರಾ ಅಗತ್ಯವಾಯಿತು. ಅನಂತರ ಸಂಘವು (U.N.R.R.A.) ಮೆಡಿಟೆರ್ರೇನಿಯನ್ ಪ್ರದೇಶದಲ್ಲಿ ಗ್ರೀಕ್ ಮತ್ತು ಯೂಗೋಸ್ಲಾವಿಯ ಸರಕಾರಗಳ ಸಹಕಾರ ಪಡೆದು ಯುದ್ಧಕಾಲದಲ್ಲಿ ದೇಶಚ್ಯುತರಾದ ನಾನಾ ನಿರಾಶ್ರಿತರಿಗಾಗಿ ಸಾವಿರಾರು ಶಿಬಿರಗಳನ್ನು ಏರ್ಪಡಿಸಿತು. ಅಲ್ಲದೆ ದೂರ ಪ್ರಾಚ್ಯದಲ್ಲಿ ಸಹ ಕಾರ್ಯಕ್ರಮಗಳನ್ನೂ ನಡೆಸಬೇಕೆಂದು ಒಂದು ಉಪಸಮಿತಿಯನ್ನು ರಚಿಸಿತು.

ಅಂತರ್‌ರಾಷ್ಟ್ರೀಯ ಆರ್ಥಿಕ ನಿಧಿ

ಸಂಯುಕ್ತ ರಾಷ್ಟ್ರಗಳ ಹಣಕಾಸಿನ ಸಮ್ಮೇಳನವೊಂದು ನ್ಯೂಹ್ಯಾಮ್ಪ್‌ಶೈರ್ ಸಂಸ್ಥಾನದ **"ಬ್ರೆಟ್ಟನ್ ವುಡ್ಸ್"** ಅಲ್ಲಿ ೧೯೪೪ ನೆಯ ಜೂಲೈ ತಿಂಗಳಲ್ಲಿ ಸೇರಿ, ಅಂತರ್‌ರಾಷ್ಟ್ರೀಯ ಬ್ಯಾಂಕುಗಳ ಪುನರ್‌ರಚನೆ ಮತ್ತು ಅಭಿವೃದ್ಧಿಗಾಗಿ ಮೇಲ್ಕಂಡ ಸಂಘವನ್ನು ರಚಿಸಿತು.

ಈ ಸಂಘದ ಮೂಲ ಉದ್ದೇಶಗಳೆಂದರೆ:—

ರಾಷ್ಟ್ರ ರಾಷ್ಟ್ರಗಳ ವ್ಯಾಪಾರ ಮತ್ತು ಹಣಕಾಸಿನ ವ್ಯವಹಾರಗಳ ಸಮಸ್ಯೆಗಳನ್ನು ಸುಗಮವಾಗಿ ಪರಿಹರಿಸುವುದು ; ಇದಕ್ಕಾಗಿ ಹಣಕಾಸಿನ ವಿನಿಮಯವನ್ನು ಸ್ಥಿರಗೊಳಿಸಿ ಅದರಲ್ಲಿ ಪೈಪೋಟಿಯುಂಟಾಗದಂತೆಯೂ ಹಣದ ಬೆಲೆ ಕಡಮೆಯಾಗದಂತೆಯೂ ನೋಡಿಕೊಳ್ಳತಕ್ಕದ್ದು ; ಹೊರದೇಶದ ಹಣಕಾಸಿನ ಬದಲಾವಣೆ, ಲೇವಾದೇವಿಯಲ್ಲಿನ ನಿರ್ಬಂಧಗಳನ್ನು ತೆಗೆದುಹಾಕಿ ಹಣದ ಹಂಚಿಕೆಯಲ್ಲಿ ಎಲ್ಲ ಮುಖವಾಗಿಯೂ ಧಾರಾಳವಾಗಿ ಹಣ ಸಲ್ಲಿಸುವ ಪದ್ಧತಿಯನ್ನು (Multilateral System of Payment) ಏರ್ಪಡಿಸುವುದು ; ಅಂತರ್‌ರಾಷ್ಟ್ರೀಯ ಅಥವಾ ರಾಷ್ಟ್ರೀಯ ವ್ಯವಹಾರದ ಸುಖಶಾಂತಿಗಳಿಗೆ ತೊಂದರೆ ಬಾರದಂತೆ ತಮ್ಮ ಹಣಕಾಸಿನ ಹೆಚ್ಚು ಕಡಮೆಯನ್ನು ವ್ಯವಸ್ಥೆಗೊಳಿಸಿಕೊಳ್ಳುವಂತೆ ಸದಸ್ಯ ರಾಷ್ಟ್ರಗಳಿಗೆ ಸೂಕ್ತವಾದ ಸಲಹೆಗಳನ್ನೂ ಸಹಾಯವನ್ನೂ ಕೊಡುವುದು.

ಇವಿಷ್ಟು ಸಂಘದ ಮುಖ್ಯ ಉದ್ದೇಶ. ಇನ್ನು ಇದರ ಬಂಡವಾಳಕ್ಕಾಗಿ ಚಂದಾ ಹಣ ಎತ್ತುವುದು ಹೇಗೆ ಎಂಬ ವಿಚಾರ: ಸಂಘಕ್ಕೆ ಕೊಡಬೇಕಾದ ಚಂದಾ ಹಣವನ್ನೂ ಅದರಿಂದ ಪಡೆಯಬಹುದಾದ ಕಡದ ಹಣವನ್ನೂ, ಪ್ರತಿ ರಾಷ್ಟ್ರಕ್ಕೂ ಇಷ್ಟೆಂದು ನಿರ್ದಿಷ್ಟವಾಗಿ ನಿರ್ಣಯಿಸಲಾಯಿತು. ಪ್ರತಿ ರಾಷ್ಟ್ರವೂ ತನ್ನ ಪಾಲಿನಲ್ಲಿ ೨೫% ಭಾಗವನ್ನು ಅಥವಾ ತನ್ನ ಚಿನ್ನದ ಆಪನ್ನಿಧಿ (Gold Reserve) ಯಲ್ಲಿ ೧೦% ಭಾಗವನ್ನು ಚಿನ್ನದ ರೂಪವಾಗಿ ಕೊಡಬೇಕೆಂದೂ ಉಳಿದುದನ್ನು ತನ್ನ ದೇಶದ ಚಲಾವಣೆಯ ಹಣದ ರೂಪವಾಗಿ ಕೊಡಬಹುದೆಂದೂ ನಿರ್ಧರಿಸಲಾಯಿತು.

ಅದರಂತೆ ಬ್ರೆಟ್ಟನ್ ವುಡ್ಸ್ ಸಮ್ಮೇಳನದಲ್ಲಿ ೪೫ ರಾಷ್ಟ್ರಗಳು ಸೇರಿ ಕೊಡಲು ಸಮ್ಮತಿಸಿದ ನಿಧಿಯ ಒಟ್ಟು ಬೆಲೆ, ೮೮೦ ಕೋಟಿ ಡಾಲರುಗಳಷ್ಟಾಯಿತು. ಅವುಗಳಲ್ಲಿ ಮುಖ್ಯವಾದ ರಾಷ್ಟ್ರಗಳು, ಹಣದ ವಿವರ, ಇವು:—

ಅಮೇರಿಕದ ಸಂಯುಕ್ತ ಸಂಸ್ಥಾನಗಳು	....	$ ೨೭೫	ಕೋಟಿ
ಬ್ರಿಟಿಷ್ ರಾಜ್ಯಗಳು	....	$ ೧೩೦	,,
ಸೋವಿಯೆಟ್ ಯೂನಿಯನ್	....	$ ೧೨೦	,,
ಚೀಣಾ	....	$ ೫೫	,,
ಫ್ರಾನ್ಸ್	....	$ ೪೫	,,

ನಿಧಿಯ ಉದ್ದೇಶಗಳಿಗೆ ಅಡ್ಡಿಬಾರದ ಯಾವ ಹಣಸಂದಾಯ ಮಾಡಬೇಕಾದರೂ ಪ್ರತಿ ರಾಷ್ಟ್ರವೂ ತನ್ನ ದೇಶದ ಹಣರೂಪವಾಗಿಯೇ (೨೫% ಭಾಗಕ್ಕೆ ಮೀರದಂತೆ,) ಮತ್ತೊಂದು ರಾಷ್ಟ್ರದ ಚಲಾವಣೆ ಹಣವನ್ನು ನಿಧಿಯಿಂದ ಪಡೆಯಬಹುದು. ಆದರೆ ಈ ನಿರ್ಬಂಧಗಳನ್ನು ಸಡಿಲಿಸುವ ಹಕ್ಕು ಸಂಘಕ್ಕೆ ಉಂಟು. ಯಾವುದಾದರೂ ಒಂದು ದೇಶದ ಚಾಲ್ತಿ ಹಣವು ಸಂಘದ ನಿಧಿಯಲ್ಲಿ ಅಭಾವವಾದಾಗ ಸಂಘವು ವರದಿಮಾಡಿ ಕಾರಣಗಳನ್ನು ಸೂಚಿಸಿ, ಪುನರ್ವ್ಯವಸ್ಥೆಗೊಳಿಸುವ ಸಲಹೆಗಳನ್ನೂ ಕೊಡುವುದು ; ಕೆಲವು ವೇಳೆ ಯಾವ ದೇಶದ ಚಾಲ್ತಿ ಹಣ ಅಭಾವವಿದೆಯೋ ಆ ರಾಷ್ಟ್ರಕ್ಕೆ ಚಿನ್ನವನ್ನು ಕೊಟ್ಟು ಬೇಕಷ್ಟು ಚಾಲ್ತಿ ಹಣವನ್ನು ಪಡೆಯುವುದು. ಇನ್ನು ಕೆಲವುವೇಳೆ ಆವಶ್ಯಕವಾದಷ್ಟು ಚಾಲ್ತಿ ಹಣದ ಅಭಾವ ಕಂಡುಬಂದಾಗ ತಮ್ಮ ದೇಶದ ಹಣಕಾಸಿನ ವಿನಿಮಯ ಮತ್ತು ಲೇವಾದೇವಿ ವ್ಯವಹಾರಗಳ ಮೇಲೆ ಆ ರಾಷ್ಟ್ರವು ಹಲಕೆಲವು ನಿಬಂಧನೆಗಳನ್ನು ಹಾಕುವ (Article VII, Sect. 3) ಅಧಿಕಾರವನ್ನು ಕೊಡಲಾಗುವುದು. ಸದಸ್ಯರಾಷ್ಟ್ರಗಳ ಬೇರೆ ಬೇರೆ ಹಣಗಳಿಗೆ ಒಂದು ವಿನಿಮಯದ ಬೆಲೆಯನ್ನು ಹಂಗಾಮಿಯಾಗಿ ನಿರ್ಧರಿಸಲು ಕಾರ್ಯಕ್ರಮವೊಂದನ್ನು ರಚಿಸುವುದು. ಇನ್ನು ಮುಂದೆ ಸಂಘದ ಸಲಹೆ ಪಡೆದು ಆವಶ್ಯಕವಿದ್ದಲ್ಲಿ ಆ ವಿನಿಮಯ ಬೆಲೆಯನ್ನು ವ್ಯತ್ಯಾಸ ಮಾಡಬಹುದೆಂದು ತೀರ್ಮಾನವಾಯಿತು.

ಹಣಕಾಸಿನ ಅಭಿವೃದ್ಧಿಗೂ ಪುನರ್ರಚನೆಗೂ ಬ್ಯಾಂಕುಗಳು

ಸದಸ್ಯರಾಷ್ಟ್ರಗಳಿಗೆ ಸೇರಿದ ನಾನಾ ಪ್ರದೇಶಗಳು ಯುದ್ಧದ ದೆಸೆಯಿಂದ ಹಾಳಾದುವು. ಅವನ್ನು ವ್ಯವಸ್ಥೆಗೊಳಿಸಿ ಸರಿಯಾದ ಸ್ಥಿತಿಗೆ ತರಲು ಬೇಕಾಗುವ ಹಣವನ್ನು ಸದಸ್ಯರಿಗೆ ಒದಗಿಸುವುದು ; ರಾಷ್ಟ್ರದ ಸಾರ್ವಜನಿಕರು ಹೊರ ದೇಶಗಳಲ್ಲಿ ಸ್ವಂತ ಹಣಕಾಸಿನ ಲೇವಾದೇವಿಯನ್ನು ನಡೆಸಲು ಸಹಾಯಮಾಡುವುದು ; ವ್ಯಾಪಾರ ಮತ್ತು ವಿವಿಧ ಆಹಾರ ಪದಾರ್ಥಗಳು ಮತ್ತು ವ್ಯವಸಾಯ ವಸ್ತುಗಳ ತಯಾರಿಕೆಗಾಗಿ ಸಾರ್ವಜನಿಕ ಬಂಡವಾಳ ಸಾಲದೆ ಬಂದಾಗ ಅವರಿಗೆ ಹಣವನ್ನು ಕೊಡಿಸುವುದು—ಇವೇ ಈ ಬ್ಯಾಂಕಿನ ಮುಖ್ಯ ಕೆಲಸಗಳು.

ಬ್ರೆಟ್ಟನ್ ವುಡ್ಸ್ ಸಮ್ಮೇಳನದಲ್ಲಿ ಬ್ಯಾಂಕಿಗಾಗಿ ನಾನಾ ರಾಷ್ಟ್ರಗಳ ೪೫ ಪ್ರತಿ ನಿಧಿಗಳೂ ಕೊಡುವುದಾಗಿ ಒಪ್ಪಿದ ಹಣವು ಸುಮಾರು ೯೧೦ ಕೋಟಿ ಡಾಲರುಗಳಷ್ಟಾಯಿತು. ಪ್ರತಿ ದೇಶವೂ ತನ್ನ ಚಂದಾಹಣದಲ್ಲಿ ೨೦% ಭಾಗವನ್ನು (೨% ಚಿನ್ನದ ರೂಪದಲ್ಲೂ ೧೮% ಭಾಗವನ್ನು ಚಾಲ್ತಿ ಹಣದ ರೂಪವಾಗಿಯೂ) ಬ್ಯಾಂಕಿನ ಮೂಲಧನಕ್ಕಾಗಿ ಕೊಡತಕ್ಕದ್ದು. ಉಳಿದುದನ್ನು ಆವಶ್ಯಕ ಸಂದರ್ಭಗಳಲ್ಲಿ

ಕೊಡುವುದು. ಸಾಲ ಕೊಡುವಾಗ ಪಡೆಯುವ ೧ ಅಥವಾ ೧ ೧/೨% ದಲಾಲಿ(ತರಗು) ಹಣವನ್ನು ಸಾಲದ ಇಳಿಮಾನದ ಹಣಕ್ಕಾಗಿ ಮೀಸಲಿಡುವುದು. . . . . . . ಈ ಹಣವೂ ಸಾಲದೆ ಬಂದರೆ ಮೂಲಧನದಿಂದ ಕೊಡಲಾಗುವುದು. ಬ್ಯಾಂಕಿನ ಒಟ್ಟು ವ್ಯವಹಾರ ಮತ್ತು ಲೇವಾದೇವಿಯ ಬೆಲೆ ಮೂಲಧನಕ್ಕಿಂತ ಹೆಚ್ಚಾಗ ಬಾರದೆಂದು ತೀರ್ಮಾನಿಸಲಾಯಿತು.

ಬ್ಯಾಂಕು ನೇರವಾಗಿ ಕೊಡುವ ಅಥವಾ ಒತ್ತಾಸೆಕೊಡುವ ಸಾಲಕ್ಕೆ ಎರವಲು ತೆಗೆದುಕೊಳ್ಳುವ ರಾಷ್ಟ್ರದ ಸರಕಾರ ಅಥವಾ ಸೆಂಟ್ರಲ್ ಬ್ಯಾಂಕು ಭರವಸೆ ಕೊಡಬೇಕು. ವಿಶೇಷ ಸಂದರ್ಭಗಳನ್ನು ಬಿಟ್ಟು ಉಳಿದ ಎಲ್ಲಾ ಸಂದರ್ಭಗಳಲ್ಲೂ ಸಾಲ ಕೊಡುವುದು ರಾಷ್ಟ್ರದ ಯಾವುದಾದರೂ ಪುನರ್ರಚನೆಯ ಅಥವಾ ಅಭಿವೃದ್ಧಿ ಕೆಲಸಗಳಿಗೆ ಮಾತ್ರ. ಬ್ಯಾಂಕಿಗೆ ಸಂಬಂಧಪಟ್ಟ ಸ್ಥಾಯೀ ಸಮಿತಿಯೊಂದು ರಾಷ್ಟ್ರದ ಅಂಥ ಉದ್ದೇಶಗಳ ಯುಕ್ತಾಯುಕ್ತತೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಸಿಫಾರಸು ಮಾಡಿದರೆ ಮಾತ್ರ ಹಣ ದೊರೆಯುವುದು ಸಾಧ್ಯ; ಇಲ್ಲದಿದ್ದರೆ ಇಲ್ಲ.

ಆರ್ಥಿಕ ಮತ್ತು ಸಾಮಾಜಿಕ ಸಮಿತಿ

೧೯೪೪ ನೆಯ ಅಕ್ಟೋಬರಲ್ಲಿ ಸೇರಿದ **"ಡಂಬಾರ್ಟನ್ ಓಕ್ಸ್"** ಸಮ್ಮೇಳನವು, ಅಂತರ್‌ರಾಷ್ಟ್ರ ಸಾಮಾನ್ಯ ಸಂಘವೊಂದನ್ನು ಸ್ಥಾಪಿಸಬೇಕೆಂದು ಸೂಚಿಸಿತಷ್ಟೇ;, ಅದನ್ನು ಪರಿಶೀಲಿಸಲು ಸಂಯುಕ್ತ ರಾಷ್ಟ್ರಗಳ ಉಪಸಮ್ಮೇಳನವೊಂದು ೧೯೪೫ ರಲ್ಲಿ ಸೇರುವ **ಸ್ಯಾನ್‌ಫ್ರಾನ್‌ಸಿಸ್ಕೋ** ಸಮ್ಮೇಳನದಲ್ಲಿ, ಸೇರಬೇಕೆಂದು ತೀರ್ಮಾನವಾಯಿತು. ಸಾಮಾನ್ಯ ಸದಸ್ಯರ ಸಭೆ ಮತ್ತು ಸೆಕ್ಯೂರಿಟಿ ಕೌನ್ಸಿಲ್‌ಗಳ ಜೊತೆಗೆ ಮೇಲ್ಕಂಡ ಸಮಿತಿಯೊಂದನ್ನು ಸಹ ರಚಿಸಬೇಕೆಂದು ಮತ್ತು ಅದರಲ್ಲಿ ಸಾಮಾನ್ಯ ಸದಸ್ಯರು ಚುನಾಯಿಸಿದ ೧೮ ಪ್ರತಿನಿಧಿಗಳು ಇರಬೇಕೆಂದು ನಿರ್ಧಾರವಾಯಿತು. ಡಂಬಾರ್ಟನ್ ಓಕ್ಸ್ ಅಲ್ಲಿ ಸೂಚಿತವಾದ ನಿರ್ಣಯದ ಪ್ರಕಾರ ಸಮ್ಮೇಳನದಲ್ಲಿ ಈ ಸಮಿತಿಯ ಮುಖ್ಯ ಉದ್ದೇಶಗಳು ಇವು—

೧. ಈ ಸಮಿತಿಯು ಸಾಮಾನ್ಯ ಸದಸ್ಯಸಭೆ ಸೂಚಿಸುವ ಕಾರ್ಯಕ್ರಮಗಳಲ್ಲಿ ತನಗೆ ಸಾಧ್ಯವಾದಷ್ಟನ್ನೆಲ್ಲ ನಡಸುವುದು.

೨. ಅಂತರ್‌ರಾಷ್ಟ್ರೀಯ ಆರ್ಥಿಕ, ಸಾಮಾಜಿಕ ಮತ್ತು ಇತರ ಜನೋಪಕಾರ ಕೆಲಸಗಳನ್ನು ಮಾಡುವುದು.

೩. ಅಂತರ್ ರಾಷ್ಟ್ರೀಯ ಆರ್ಥಿಕ, ಸಾಮಾಜಿಕ ಮತ್ತು ಬೇರೆ ಬೇರೆಯ ಸಂಘಗಳ ವರದಿಗಳನ್ನು ಪರಿಶೀಲಿಸಿ ಅಂತಹ ಸಂಸ್ಥೆಗಳೊಡನೆ ಸಹಕರಿಸಿ ಕಾರ್ಯಕ್ರಮಗಳು ಸರಿಯಾಗಿ ನಡೆಯಲು ಬೇಕಾದ ಎಲ್ಲ ನೆರವನ್ನೂ ಕೊಡುವುದು.

ಕನ್ನಡ—ಎಚ್. ಕೆ. ರಾಮಚಂದ್ರಮೂರ್ತಿ

ಮೂಡುತಿಹನದೋ

ಬಾನ ಬಣ್ಣ ಮಾಗಿಸಿ ಶಶಿ
ಮೂಡುತಿಹನದೋ—

೧

ಹೂವನೆರಚಿ ಸಂಜೆ ಸಾರೆ
ನಮ್ರವಾಗಿ ತಾರೆ ತೋರೆ
ಶರದದಿರುಳ ಕರವ ಪಿಡಿದು ಏರುತಿಹನದೋ—

೨

ಉದ್ಯಾನದ ಪುಷ್ಪ ಬೃಂದ
ಲಜ್ಜೆಯ ಸಿರಿ ಹೊಂದಿದಂದ
ತೆಳು ಬೆಳಕಿನ ಮೇಲೊದುವನು ಧರಿಸುವಂತಿದೋ—

೩

ತಮುವನೊಗೆದವೆನುವ ತೆರದಿ
ನಿಡಿದು ನೆಳಲ ಬಿಸುಟು ನೆಲದಿ
ತರುಗಳೆದ್ದು ಬೇರೆ ತರವ ತೋರುವಂತಿದೋ—

೪

ನೆಳಲು ಬೆಳಕಿನೆಂಥ ಆಟ!
ನನಸೆ ಕನಸು ಎನಿಪ ಮಾಟ
ಎಲ್ಲು ಬಿಡುವು ಬೇಟವೆನುವ ಚೆಂದವಾಯ್ತಿದೋ—

ಜಗದ ಬಣ್ಣ ಮಾಗಿಸಿ ಶಶಿ
ಬೆಳಗುತಿಹನದೋ—

ಪು.ತಿ.ನ.

ಸರ್ವಜ್ಞನ ಮಾನಸಿಕ ಸಂಸ್ಕೃತಿ

ಚರ್ಚಾಸ್ಪದವಾದ ಸರ್ವಜ್ಞನ ಕಾಲವನ್ನು ನಾವು ೧,೬೦೦ನೆಯ ಇಸವಿಯೆಂದು ಇಟ್ಟುಕೊಂಡರೂ,—ಅಂದರೆ, ಅವನು ಮಡಿದುಹೋಗಿ ೩೦೦ ವರ್ಷಗಳ ಮೇಲೆ ಆದರೂ,—ಆ ಪ್ರತಿಭಾಸಂಪನ್ನನ ಪ್ರತಿಭೆಯ ದಿವ್ಯಜ್ಯೋತಿ ಇನ್ನೂ ಬೆಳಗುತ್ತಿದೆ. ಆತನು ಆಗ ಉಸಿರಿದ ಉಸಿರು ತ್ರಿಪದಿಯ ರೂಪದಲ್ಲಿ ಈಗಲೂ ಹಳ್ಳಿ ಹಳ್ಳಿಯಲ್ಲಿ ಕೂಲಿಕಾರರ ದಣಿವಿನ ಬೆವರಿನಲ್ಲಿ ಮಿಂದು, ಸುಧಾರಣೆಯ ಬೆಡಗಿನ ಪಟ್ಟಣಗಳ ಕಾಮಿನಿಯರ ಸುವಾಸನೆಯ ಉಸಿರಿನೊಡನೆ ಒಂದಾಗಿ, ಕಲಾವಂತರ ಕಾವ್ಯದಲ್ಲಿ ಸುಳಿದು, ವಿದ್ವಾಂಸರ ವಿಚಾರಚಕ್ರದಲ್ಲಿ ಚಕ್ರಹಾಕಿ, ಅರಮನೆಯಲ್ಲಿಯೂ ರಾಜಶ್ರೀಯಾಗಿ ಶೋಭಿಸುತ್ತಿದೆ. ಒಂದು ದೀಪದ ಬೆಳಕನ್ನೂ, ಅದರ ಮೋಡಿಯನ್ನೂ ನೋಡಿದೊಡನೆ ನಮ್ಮ ಚಿತ್ತವು ಒಮ್ಮೆಲೇ ಅದರ ಮೂಲದ ಕಡೆಗೆ ಹೊರಳುತ್ತದೆ. ಆ ದೀಪವೇನು ವಿದ್ಯುತ್ತಿನಿಂದ ಉಂಟಾದದ್ದೋ, ಗ್ಯಾಸಿನದೋ, ಚಿಮಣಿಯ ಎಣ್ಣೆಯದೋ ಎಂದು ನಾವು ವಿಚಾರಿಸುವಂತೆ, ಮುನ್ನೂರು ವರ್ಷಗಳ ವರೆಗೆ ಒಂದೇ ಸವನೆ ಬೀಸಿದ ಕಾಲನ ಬಿರುಗಾಳಿಗೆ ಸಹ ಸ್ವಲ್ಪವೂ ಮಣಿಯದೆ ಸ್ವಲ್ಪವೂ ಮಸುಕದೆ, ಸ್ವಲ್ಪವೂ ಚಲಿಸದೆ ಇರುವ ಈ ನಂದಾದೀಪಕ್ಕೆ ಮೂಲವಾದ ಸರ್ವಜ್ಞನ ಮಾನಸಿಕ ಸಂಸ್ಕಾರದ ಕಡೆಗೆ ನಮ್ಮ ಚಿತ್ತ ಹೋಗುವದು ಸ್ವಾಭಾವಿಕ. ಅವನ ಮಾನಸಿಕ ಘಟಕಗಳಾದವು, ಮಾನಸಿಕ ನಿರ್ಮಾಣಕ್ಕೆ ಕಾರಣವಾದ ಪರಿಸ್ಥಿತಿಗಳಾವವು, ಸಂಗತಿಗಳಾವವು, ವಾತಾವರಣವಾವದು, ವ್ಯಕ್ತಿಗಳಾರು ಎಂಬುದನ್ನು ತಿಳಿಯಬೇಕೆಂಬ ಕುತೂಹಲ ಹುಟ್ಟುವದು ಸ್ವಾಭಾವಿಕ.

ಒಂದು ಚಿತ್ರವು ಆಕರ್ಷಕವಾಗಬೇಕಾದರೆ ಅದು ನಾನಾ ಸಂಗತಿಗಳನ್ನು ಅವಲಂಬಿಸಿರುತ್ತದೆ. ಮೊದಲು ಚಿತ್ರಕಾರನ ಪ್ರತಿಭೆ ಯಾವದರ ಮೇಲೆ ಚಿತ್ರವನ್ನು ತೆಗೆದಿರುವರೋ ಆ ಬಟ್ಟೆ, ಕುಂಚ, ಬಣ್ಣ, ನಿರ್ದಿಷ್ಟವಾದ ಅಭಿರುಚಿಯುಳ್ಳ ಒಂದು ಕಾಲ. ಒಂದು ಉತ್ತಮವಾದ ಮೈದುಂಬಿದ ಜೋಳದ ತೆನೆಯನ್ನು ನುರಿತ ಒಬ್ಬ ಒಕ್ಕಲಿಗನ ಕೈಯಲ್ಲಿ ಕೊಟ್ಟರೆ, ಅವನು ಅದರ ಬೀಜ ಎಂಥದು, ಯಾವ ನೆಲದಲ್ಲಿ ಬೆಳೆದದ್ದು, ಬೆಳೆದ ಒಕ್ಕಲಿಗನೆಂಥವನು, ಅದಕ್ಕೆ ಹಾಕಿದ ಗೊಬ್ಬರ ಎಂಥದು, ಯಾವ ವಾತಾವರಣದಲ್ಲಿ ಬೆಳೆದದ್ದು ಮುಂತಾದ ಸಂಗತಿಗಳ ಬಗ್ಗೆ ವಿಚಾರಿಸಹತ್ತುವನು. ಯಾಕಂದರೆ, ಮೈದುಂಬಿದ ಕಾಳುಗಳ ತೆನೆಯು ಇವೆಲ್ಲ ಕಾರಣಗಳ ಪರಿಣಾಮ.

ಅದರಂತೆಯೇ, ಒಂದು ಮನಸ್ಸು ಯಾವದೊಂದು ಪರಿಪಕ್ವಸ್ಥಿತಿಗೆ ಬರಬೇಕಾದರೆ, ನಾನಾ ಸಂಗತಿಗಳೂ ವ್ಯಕ್ತಿಗಳೂ ಅದಕ್ಕೆ ಸಹಾಯಕರಾಗಿರುತ್ತಾರೆ. ಮೊದಲನೆಯದು ಆಜನ್ಮ ಸಂಸ್ಕಾರ; ಆಮೇಲೆ ತಾಯಿ; ಆಮೇಲೆ ಗುರು; ಅದರಂತೆಯೇ ದೇಶ ಕಾಲ ಪರಿಸ್ಥಿತಿ. ಈ ದೃಷ್ಟಿಯಿಂದ ಸರ್ವಜ್ಞನ ಬಗ್ಗೆ ವಿಚಾರ ಮಾಡೋಣ:

ಹುಟ್ಟಿದಾಗಿನಿಂದಲೇ ತಂದೆತಾಯಿಗಳ ಮನೋಘಟಕಗಳ ಕೆಲವೊಂದು ಅಂಶವಾದರೂ ಮಗುವಿನ ಮನಸ್ಸಿನ ಹಿನ್ನೆಲೆಯಾಗಿರುವದೆಂದು ಆಧುನಿಕ ಮನಃಶಾಸ್ತ್ರಜ್ಞರೂ ಒಪ್ಪಿಕೊಳ್ಳುವರು. ಸಂಸ್ಕೃತಿಯ ಯಾವ ಶಾಖೆಯ ಮಹಾವ್ಯಕ್ತಿಗಳ ಮನೆತನದ ಚರಿತ್ರೆ ನೋಡಿದರೂ ಈ ಮಾತಿನ ಗುಟ್ಟು ತಿಳಿಯುವದು. ಜಗತ್ಪ್ರಖ್ಯಾತಳಾದ ಮ್ಯಾಡಮ್ ಕ್ಯೂರಿಯುವರ ಬಳಗದ ಪ್ರತಿಯೊಬ್ಬ ವ್ಯಕ್ತಿಯ ನಾಳನಾಳದಲ್ಲಿಯೂ ವಿಜ್ಞಾನಾಂಶವು ಹರಿದಾಡುತ್ತಿದ್ದುದು ಅವರ ಚರಿತ್ರೆ ಓದಿದರೆ ತಿಳಿಯುವದು. ಕವಿವರ್ಯ ರವೀಂದ್ರರ ವಂಶವು ಕಲೆಯ ನೆಲೆಯಾಗಿದ್ದುದು ಎಲ್ಲರಿಗೂ ತಿಳಿದ ಮಾತು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಹ ಕೇಶಿರಾಜನ ತಂದೆ ಮಲ್ಲಿಕಾರ್ಜುನನು ದೊಡ್ಡ ಕವಿ; ಕವಿ ಸುಮನೋಬಾಣನು ತಾಯಿಯ ತಂದೆ; ಕವಿ ಜನ್ನನು ಸೋದರಮಾವ. ಅದರಂತೆ ಮಾದಿರಾಜ ರುದ್ರಭಟ್ಟರ ವಂಶವೇ ಸಾಮಾಜಿಕ ಕವಿಗಳ ವಂಶವೆಂದು ಪ್ರಸಿದ್ಧಿಯಾಗಿತ್ತು. ಈ ಸತ್ಯವು ಸರ್ವಜ್ಞನ ವಿಷಯದಲ್ಲಿ ಸಿದ್ಧವಾಗುವದೊ ನೋಡುವಂತಿದೆ. ಇದು ಅವನ ಕಥೆಯೆನ್ನುವರು:

ಸರ್ವಜ್ಞನ ತಂದೆ ಧಾರವಾಡ ಜಿಲ್ಲೆಯ ಮಾಸೂರೆಂಬ ಗ್ರಾಮದ ಬ್ರಾಹ್ಮಣ; ಬಸವರಸ. ಹೊಟ್ಟೆಯಲ್ಲಿ ಮಕ್ಕಳೇ ಆಗಲಿಲ್ಲವೆಂದು ನೊಂದು ಕಾಶಿಯ ಯಾತ್ರೆ ಹೋಗಿ, ತಿರುಗಿ ಬರುವಾಗ, ಅಂಬುಲೂರೆಂಬಲ್ಲಿ ಒಂದುದಿನ ವಾಸಿಸುವನು. ಅಡಿಗೆ ಮಾಡಿಕೊಳ್ಳಲು ಒಂದು ಗಡಿಗೆ ತರಬೇಕೆಂದು ಹತ್ತಿರದಲ್ಲಿಯೇ ಇದ್ದ ಒಬ್ಬ ಕುಂಬಾರನ ಮನೆಗೆ ಹೋಗುವನು. ಆ ಕುಂಬಾರನ ಮಗಳು ಮಾಳಿಯೆಂಬಾಕೆ ರೂಪವತಿ. ಇಬ್ಬರ ಭಾವನೆಗಳೂ ವಿಕಾರಗೊಳ್ಳುವವು. ತತ್ಪರಿಣಾಮವಾಗಿ, ಮಾಳಿಯ ಹೊಟ್ಟೆಯಲ್ಲಿ ಸರ್ವಜ್ಞನು ಜನಿಸುವನು. ತಂದೆ ಬ್ರಾಹ್ಮಣ; ತಾಯಿ ಕುಂಬಾರಳು. ಇದೇ ಸರ್ವಜ್ಞನ ಆಜನ್ಮಮನೋರಂಗದ ಪರಿಸ್ಥಿತಿ. ಇದನ್ನು ನೋಡುತ್ತಿರಲು, ಅವನ ಮನೋಘಟಕಗಳಲ್ಲಿ ಪೂರ್ವಾರ್ಜಿತವೇನೂ ಇಲ್ಲದುದರ ಮೂಲಕ, ಕಾಡುಗಲ್ಲೊಂದು ಕೈಗನ್ನಡಿಯ ನುಣುಪನ್ನು ಪಡೆದಷ್ಟು, ಮಳಲಿಂದ ಒಂದು ನಯವಾದ ಗಣಪತಿಯನ್ನು ಮಾಡಿದಷ್ಟು ಆಶ್ಚರ್ಯವಾಗುತ್ತದೆ. ಈ ಆಶ್ಚರ್ಯವನ್ನು ಹೋಗಲಾಡಿಸಲೋ ಎನ್ನುವಂತೆ ಅವನು ಅತಿ ಮಾನುಷನೆಂದೂ ಶಿವನಹತ್ತಿರ

ಇದ್ದ ಪುಷ್ಪದತ್ತನೆಂಬ ಗಣನಾಥನ ಅವತಾರವೆಂದೂ ಹೇಳುವರು. ಹುಲ್ಲಿನಲ್ಲಿ ಮಲ್ಲಿಗೆ ಅರಳಿದ ಆಶ್ಚರ್ಯ ಮಾತ್ರ ಹಾಗೆಯೇ ಉಳಿದಿದೆ.

ಇವನ ಸಂಸ್ಕೃತಿಯಲ್ಲಿ ತಾಯಿಯ ಕೈವಾಡವೇನಾದರೂ ಇದೆಯೇನೊ ನೋಡೋಣ: ಮಾಳಿ ಕುಂಬಾರ ಹುಡುಗೆ; ಬಡವನ ಗುಡಿಸಿಲಲ್ಲಿ ಬೆಳೆದಾಕೆ; ಮಡಕೆಗಳ ಸಹವಾಸದಲ್ಲಿದ್ದಾಕೆ. ಯೌವನದ ಕಡಲಿನಲ್ಲಿ ಎಲ್ಲೆಲ್ಲಿಯೂ ತಿರುಗಣೆಯ ಮಡುಗಳಿವೆಯೆಂಬುದನ್ನರಿಯದೆ, ಜಾರಿ ಬಿದ್ದು ಅನಾಥಳಾಗಿ, ಕಡೆತನಕ ಕೊರಗಿದ ಮುಗ್ಧೆ. ಇಂಥವಳು ಇವನಿಗೆ ಯಾವ ಬಗೆಯ ಸಂಸ್ಕೃತಿಯನ್ನು ಕೊಡಲು ಸಾಧ್ಯ? ಆದರೆ ಇಷ್ಟು ಮಾತ್ರ ನಿಜ: ಬಡತನವು ಒಂದು ಅಮೌಲ್ಯವಾದ ಪಿತ್ರಾರ್ಜಿತ ವಸ್ತುವೆನ್ನುವಂತೆ, ಮಾಳಿಯು ಸರ್ವಜ್ಞನಿಗೆ ಬಡತನವನ್ನು ಮಾತ್ರ ಕೊಟ್ಟಳು. ಕುಂತಿಯ ಬಡತನದಿಂದ ಪಾಂಡವರು ಸುಗುಣಿಗಳಾದಂತೆ, ಬಡತನದೊಡನೆ ಅದರ ಸಹವಾಸಿಗಳಾದ ಸುಗುಣಗಳು ಸರ್ವಜ್ಞನಲ್ಲಿ ಮನೆ ಮಾಡಿಕೊಂಡವು. ಇನ್ನೊಂದು ಮಹತ್ವದ ಸಂಗತಿ: ಕುಟ್ಟುವಾಗ ಬೀಸುವಾಗ ಆಗಲಿ, ಸವುಡಿದ್ದಾಗೆಲ್ಲ ಮನೆಯ ಕುಂಬಾರಗೆಲಸದಲ್ಲಿ ಅನುವಾಗುವಾಗ ಆಗಲಿ, ಮಾಳಿಪದಗಳನ್ನು ಹೇಳುತ್ತಿದ್ದಿರಬಹುದು; ಬುಗುರಿ ತಿರುತಿರುಗಿದಂತೆ, ಮಾಳಿಯ ಮಿದುವಾದ ಬೆರಳುಗಳು ತಿಗುರಿಯಲ್ಲಿಯ ಕೊಡದ ಮೇಲೆ ಕುಣಿಕುಣಿದಂತೆ ಅವುಗಳ ತಾಳ ಹಿಡಿದು ಪದಗಳು ಆಕೆಯ ನಾಲಿಗೆಯ ಮೇಲೆ ಕುಣಿಯುತಿದ್ದಿರಬಹುದು; ಅವುಗಳನ್ನು ಕೇಳಿ ಬಳಿಯಲ್ಲಿಯೇ ಕುಳಿತ ಈ ಹುಡುಗನ ಕವಿಹೃದಯವೂ ಕುಣಿಯ ಹತ್ತಿರಬೇಕು. ಆಗಿನಿಂದಲೇ ತ್ರಿಪದಿ ಅವನಲ್ಲಿ, ಅವನಿಗೂ ಅವಳಿಗೂ ತಿಳಿಯದಂತೆ ಮನೆ ಮಾಡಿಕೊಂಡಿರಬಹುದು.

ಹುಡುಗರು ದೊಡ್ಡವರಾದ ಮೇಲೆ ಸಂಸ್ಕೃತಿಯ ಮುಂದಿನ ಮೆಟ್ಟು ಗುರು ಸಾನ್ನಿಧ್ಯದಲ್ಲಿ ಆದರೆ, ಸರ್ವಜ್ಞನಿಗೆ ಮಾತ್ರ ವಿದ್ಯಾರ್ಜನೆ ಮಾಡುವ ವೇಳೆಯಲ್ಲಿಯೇ ಮನೆ ಬಿಟ್ಟು ಹೊರಗೆ ಬಿದ್ದು, ತುಣುಕು ರೊಟ್ಟಿಗಾಗಿ ಮನೆ ಮನೆ ತಿರುಗುವ ಪ್ರಸಂಗ ಬಂತು. ಮಾಳಿಗೆ ಬಸವರಸನಲ್ಲಿ ತುಂಬ ಅಭಿಮಾನ. ಒಮ್ಮೆ ಮಗನನ್ನು ನೀನು ಯಾರ ಮಗನೆಂದು ಕೇಳಿದಾಗ, 'ನಾನು ಪರಶಿವನ ಮಗನೆಂ'ದು ಹೇಳಿದನಂತೆ ಈತ. ಆ ಮಾತಿಗೆ ಸಿಟ್ಟಿಗೆದ್ದು, ಅವನನ್ನು ಮನೆ ಬಿಟ್ಟು ಹೊರಗೆ ಹಾಕಿದಳಂತೆ. ಆಗ ಅವನು 'ಮುಂಡ ಬೋಳಿಸಿಕೊಂಡು, ತುಂಡು ಕಂಬಳಿ ಹೊದೆದು, ಹಿಂಡನಗಲಿದ ಗಜದಂತೆ' ಅಲೆಯಹತ್ತಿದನು. ಹೀಗೆ ತಿರುಗಾಡುತ್ತಿರುವಾಗಲೇ ಅವನ ನಿಜವಾದ ವಿದ್ಯಾರ್ಜನೆ ಸುರುವಾಯಿತೆನ್ನಬಹುದು. ಭಿಕ್ಷೆಗಾಗಿ ಮನೆಮನೆಯ ಬಾಗಿಲುಗಳ ಮುಂದೆ ನಿಂತು, ಕೌರ್ಯ, ಕಾಠಿಣ್ಯ, ಸರಳತೆ, ವಿನಯ, ಮಿದುತನ

ಮುಂತಾದವುಗಳ ಪರಿಚಯ ಮಾಡಿಕೊಳ್ಳಲು ಅನುವು ದೊರೆಯಿತು. ಜೀವಿಜೀವಿಗಳ ಹೃದಯದ ಅಂತರಾಳದಲ್ಲಿ ಹಣಿಯಿಕ್ಕಿ ನೋಡಿ, ಮೂಲೆ ಮೂಲೆಯಲ್ಲಿ ಬೆದಕುವ ಯೋಗ ದೊರೆಯಿತು. ಮಾನವನ ಹೃದಯವೀಣೆಯ ನಾನಾ ಭಾವನೆಗಳ ತಂತಿಗಳನ್ನು ಮಿಡಿಯಲು ಸವುಡು ಸಿಕ್ಕಿತು. ಬಡಬಾಳಿನ ಬೇವಿನ ಕಹಿಯನ್ನೂ ಮಾವಿನ ಸವಿಯನ್ನೂ ಸವಿಯಲು ಅವಕಾಶ ದೊರೆಯಿತು. ಆಗ ಅವನು 'ಹಾಳೂರ ಶಕುನ'ಗಳಿಗೆ ಕಿವಿಗೊಟ್ಟ; 'ಸೋರುವ ಮನೆ'ಯಲ್ಲಿ ವಾಸಿಸಿದ; 'ಚುಚ್ಚುವ ಕೆರವ'ನ್ನು ಮೆಟ್ಟಿದ; 'ಇಂಗಿನ ನಾತವನ್ನು ಕುಡಿದ; 'ಹೇಸನ್ನು ತಿನ್ನುವ ಹೀನ'ರನ್ನು ಕಂಡ; ಕೆಚ್ಚಲ ಮೇಲಿನ ಉಣ್ಣಿಯನ್ನು ಕಂಡು ಹಳಹಳಿಬಟ್ಟ; 'ಹಾವಸೆಗಲ್ಲು ಜಾರಿ ಬಿದ್ದವ' ರನ್ನು ಮೇಲೆಬ್ಬಿಸಿದ; 'ಕೆಸರೊಳಗೆ ಮುಳ್ಳು ತುಳಿ'ದ; 'ಮರದ ಮೇಲೆ ಹತ್ತಿ, ಕೈಜಾರಿ ಬಿದ್ದ;' ಇದ್ದು ಬಿದ್ದುದನೆಲ್ಲ ಅಡವಿಟ್ಟು, ಕಡೆಗೆ ಏನೂ ಇಲ್ಲದ್ದಕ್ಕೆ ತನ್ನ ಹೆಸರಿನ ಒಂದು ಅಕ್ಷರವನ್ನೇ ಅಡವಿಟ್ಟು, ರುದ್ರಭಟ್ಟನು ತನ್ನನ್ನು 'ರುದ್ರಟ'ನೆಂದಂತೆ ಕರೆದುಕೊಂಡಂಥವರನ್ನು ಕಂಡ; 'ಸಾಲವನು ಕೊಂಬಾಗ ಹಾಲೋಗರುಂಡಂತೆ' ಸುಖದಿಂದಿದ್ದು, 'ಸಾಲಿಗರು ಬಂದು ಎಳೆವಾಗ ಕಿಬ್ಬದಿಯ ಕೀಲು ಮುರಿದಂತೆ' ವ್ಯಥೆಪಟ್ಟವರನ್ನು ಕಂಡು ತಾನೂ ವ್ಯಥೆಪಟ್ಟ.

ಇಷ್ಟರಲ್ಲಿ ಬಸವಣ್ಣನವರ ತತ್ವದ ಸುವಾಸನೆ ಅವನ ಮೂಗಿಗೆ ಬಡಿಯಿತು. ಅವರ ಅಮೃತವಾಣಿಗೆ ಮರುಳಾಗಿ ವೀರಶೈವಮತವನ್ನು ಸ್ವೀಕರಿಸಿದನು. ಹೀಗೆ ಅಂದಾಕ್ಷಣ, ಅವನು ಶ್ರೀ ಬಸವ, ಚೆನ್ನಬಸವ ಮೊದಲಾದವರಂತೆ ಅವರ ಧರ್ಮವೃಕ್ಷವನ್ನು ಬೆಳೆಯಿಸಬೇಕೆಂಬ ಕುತೂಹಲದಿಂದ ತನ್ನ ಜನ್ಮವನ್ನೇ ಅದಕ್ಕೆ ಧಾರೆಯೆರೆಯಲಿಲ್ಲ. ಆಗಲೇ ಬೆಳೆದು ಹೂತ ಆ ತರುವಿನಿಂದ ಮೂಸಲೆಂದು ಎರಡು ಪುಷ್ಪಗಳನ್ನು ಮಾತ್ರ ಆಯ್ದುಕೊಂಡ. ಯಾವ ಗುರುಕುಲದ ಗೋಜಿಗೂ ಹೋಗಲಿಲ್ಲ. ಅನುಭವ ಮಂಟಪದಂಥ ಚರ್ಚಾಕೇಂದ್ರಗಳನ್ನು ಬಹುಶಃ ಅವನು ಅರಿಯನು. ಆ ಮತವನ್ನು ಸ್ವೀಕರಿಸಿದರೂ, ಅದರಿಂದ ನಿರ್ಲಿಪ್ತನಾಗಿ ಉಳಿದಿದ್ದುದರಿಂದ ಅವನ ಮನಸ್ಸಿನ ಮೇಲೆ ದೊಡ್ಡದೊಂದು ಪರಿಣಾಮವಾಯಿತು. ಅವನಲ್ಲಿ ಅವರು ಇವರು, ಆ ಧರ್ಮ ಈ ಧರ್ಮ, ಎಂಬ ಭೇದ ಉಳಿಯಲಿಲ್ಲ. ವೀರಶೈವ ಮತ ಪ್ರಚಾರದಲ್ಲಿ ತೊಡಗಿದ ಹಲವರು ಬ್ರಾಹ್ಮಣ ಜೈನ ಮತಗಳನ್ನು ಮನಸ್ಸಿಗೆ ಬಂದಂತೆ ತೆಗಳಿದರೆ, ಇವನು ಅವರನ್ನು ನಿಷ್ಪಕ್ಷಪಾತದಿಂದ ಬಾಯಿತುಂಬ ಹೊಗಳಿರುವನು.

ಮಾತನರಿದಾ ಸುತನು ರೀತಿಯರಿದಾ ಸತಿಯು
ನೀತಿಯನ್ನರಿದ ವಿಪ್ರನು ಜಗದೊಳು
ಜ್ಯೋತಿ ಇದ್ದಂತೆ ಸರ್ವಜ್ಞ

ಗುರು, ಗುರುಕುಲ, ಅನುಭವಮಂಟಪ ಮುಂತಾದವುಗಳ ಕೊರತೆಯಿದ್ದರೂ ಬಹುಶಃ ಅವನ ಮನಸ್ಸು ವಿಶಾಲವಾಯಿತು ; ದೃಷ್ಟಿ ವಿಶಾಲವಾಯಿತು ; ಸಹಾನುಭೂತಿಯು ವಿಶ್ವವನ್ನೇ ವ್ಯಾಪಿಸಿತು. ಹಾಗೆಯೇ ಜೈನ ಕವಿಗಳಂತೆ ತನ್ನ ಚೈತನ್ಯವನ್ನೆಲ್ಲ ಯಾವನೊಬ್ಬ ತೀರ್ಥಂಕರನ ಚರಿತ್ರೆ ಬರೆಯುವದರಲ್ಲಿ ವೆಚ್ಚಮಾಡುವ ಪ್ರಸಂಗ ಅವನಿಗೆ ಬರಲಿಲ್ಲ. ಮಾನವನ ಚರಿತ್ರೆ ಬರೆದುದಕ್ಕೆ ರಾಘವಾಂಕನಂತೆ ಮಾವನಿಂದ ಹಲ್ಲು ಮುರಿಸಿಕೊಳ್ಳುವ ಪ್ರಸಂಗವೂ ಬರಲಿಲ್ಲ !

ಅವನ ಮನಸ್ಸಿಗೆ ಪರಿಪಕ್ವವಾಗಲು ಅವಕಾಶ ಕೊಟ್ಟ ಇನ್ನೊಂದು ಸಂಗತಿಯೆಂದರೆ ಅವನಿಗೆ ರಾಜಾಶ್ರಯ ದೊರೆಯದೇ ಇದ್ದುದು. ಆಗಿನ ಕಾಲವೇ ಅಂಥದಿತ್ತು. ವಿಜಯನಗರವು ಉನ್ನತಸ್ಥಿತಿಯನ್ನು ಮುಟ್ಟಿ, ಆಮೇಲೆ ತಾಳಿಕೋಟೆಯ ಅನಾಹುತದ ತರುವಾಯ ಒಮ್ಮೆಲೇ ಕುಸಿದುಬಿದ್ದಿತು. ಕೃಷ್ಣರಾಯನ ಕನಸು ಕದಡಿದ ನೀರಿನಮೇಲಿನ ಪ್ರತಿಬಿಂಬವಾಯಿತು. ಸ್ವಾತಂತ್ರ್ಯವು ಬಯಲಾಯಿತು. ಧರ್ಮದ ಕಳಸ ಬಿದ್ದಿತು. ಸಮಾಜವು ಸಡಿಲಿತು. ಸರ್ವಜ್ಞನು ಇದ್ದುದು ಇಂಥ ಶೂನ್ಯಕಾಲದಲ್ಲಿ. ಜಗತ್ತೇ ಅಸ್ತವ್ಯಸ್ತವಾದಾಗ ರಾಜ್ಯವೆಲ್ಲಿ, ರಾಜನೆಲ್ಲಿ, ರಾಜಾಶ್ರಯವೆಲ್ಲಿ ? ಹಿಂದೆ ಹೇಳಿದಂತೆ ಈ ಪರಿಸ್ಥಿತಿಯು ಸರ್ವಜ್ಞನ ಮನೋವಿಕಾಸಕ್ಕೆ ಅನುಕೂಲವಾಯಿತೇ ಹೊರತು ಪ್ರತಿಕೂಲವಾಗಲಿಲ್ಲ; ಸಾಧಕವಾಯಿತೇ ಹೊರತು ಬಾಧಕವಾಗಲಿಲ್ಲ. ಯಾಕಂದರೆ, ನೆರಳಿಗಾಗಿ ತಿರುಳಿಗೆ ತಿಲೋದಕ ಬಿಟ್ಟು, ಆತ್ಮವಿನಾಶಮಾಡಿಕೊಳ್ಳುವ ಪ್ರಸಂಗ ಬರಲಿಲ್ಲ ಅವನಿಗೆ. ಅರಸನ ಆತಂಕದಲ್ಲಿದ್ದು, ಅವನ ಭಟ್ಟಂಗಿಯಾಗಿ, ಅವನ ಲಹರಿಗೆ ತಕ್ಕಂತೆ ಗಿರಡಿಹಾಕುವ ಪ್ರಸಂಗ ಬರಲಿಲ್ಲ. ಅವನ ಪ್ರತಿಭೆಗೇ ಗಾಣಕ್ಕೆ ಹೂಡಿದ ಎತ್ತಿನಂತೆ ತುಳಿದ ಹಾದಿಯನ್ನೇ ತುಳಿಯುವ ಪ್ರಸಂಗ ಬರಲಿಲ್ಲ. ಅವನ ಚೇತನೆ ಕಂಬದಗುಂಟ ಓಡಿಯಾಡಿ ಬರಿಯ ಅರಸನ ಮನೆಯನ್ನು ಬೆಳಗುವ ವಿದ್ಯುದ್ದೀಪವಾಗಲಿಲ್ಲ ; ನಿರಾತಂಕವಾಗಿ ಎಲ್ಲ ಕಡೆಗೂ ಪಸರಿಸಿ, ಬಡವರ ಗುಡಿಸಿಲುಗಳ ಹರಕು ಚಪ್ಪರದಲ್ಲಿಳಿದು, ಅವರ ಕಗ್ಗತ್ತಲೆಯ ಜೀವನವನ್ನು ಬೆಳಗಿಸಿದ ಚಂದ್ರಿಕೆಯಾಯಿತು. ಕಟ್ಟುನಿಟ್ಟಿಗೆ ತಕ್ಕೆ ಬಿದ್ದು, ಉದ್ದಾಮಭಾಷೆ ಕಲಿತು ಮಹಾಕಾವ್ಯ ಬರೆಯುವದರಲ್ಲಿಯೇ ತನ್ನ ಜೀವನವನ್ನು ಸವೆಸುವ ಗತಿ ಅವನಿಗೆ ಬರಲಿಲ್ಲ. 'ಜಗತ್ತನ್ನೇ ತನ್ನ ವಿಶ್ವವಿದ್ಯಾಲಯವನ್ನು, ಜೀವವನ್ನೇ ಪ್ರಯೋಗಶಾಲೆಯನ್ನು, ಅನುಭವವನ್ನೇ ತನ್ನ ಗುರುವನ್ನು, ಮಾನವ ಜೀವನವನ್ನು ಹದಮಾಡಿ ಔಚಿತ್ಯಕ್ಕೆ ಒಯ್ಯುವದನ್ನೇ ತನ್ನ ಗುರಿಯನ್ನಾಗಿ ಇಟ್ಟುಕೊಂಡು' ತನಗೆ ಅನಿಸಿದ್ದನ್ನು, ತಾನು ಕಂಡದ್ದನ್ನು, ತನಗೆ ಹೊಳೆದದ್ದನ್ನು ಜನಜೀವನಕ್ಕೆ ಅದರ ಭಾಷೆಯಲ್ಲಿಯೇ, 'ಜಿಗಿಯಾಗಿ, ಹಿಡಿತವಾಗಿ, ಸೊಗಸಾಗಿ, ಮನಸ್ಸಿಗೆ ಅಂಟಿ ನಾಟಿ ದೃಢವಾಗಿ ನಿಲ್ಲುವಂತೆ ತಿಳಿಸಿ ಜನತೆಯ ಕವಿಯಾಗಲು ಅವಕಾಶ ಕೊಟ್ಟಿತು.'

ವರಗಿರಿ ಮಾರ್ತಾಂಡರಾಯ.

‘ ಶ್ರೀ ’ ಯವರ ನಿಧನವನ್ನು ಕೇಳಿ

ಆ ಕುಳಿರ ಶಿಶಿರ ಕಾಲಿಟ್ಟನಂದು ಕನ್ನಡದ ಕಾವ್ಯವನಕೆ:
ಬಿಳಿ-ಮಂಜು-ಮಂದೆ ಮೇದಿತ್ತು ಎಲ್ಲು ಹೂ ಚಿಗುರು ಕಾಯಿ ಗರುಕೆ;
ಸೊರಗಿತ್ತು ಕಮಲ, ಮರುಗಿತ್ತು ಹಕ್ಕಿ, ಮಲಗಿತ್ತು ಮೊರೆವ ಭೃಂಗ,
ಇರಲಿಲ್ಲ ಜೀವ ಚೇತನವದೆಲ್ಲು—ಘನಿಸಿತ್ತು ಅಂತರಂಗ.

ನೀ ಬಂದೆಯಾಗ ಕನ್ನಡದ ವನಕೆ ಋತುರಾಜ ಚೈತ್ರನಂತೆ;
ಕೈಹಿಡಿದು ಕುಣಿಸಿ ಪೊಸಕಬ್ಬವೆಣ್ಣ ಅವಳೊಡನೆ ಆಡಿ ನಿಂತೆ;
ಚಿಗುರಿಟ್ಟಿತಾಗ ಹೂಬಿಟ್ಟಿತಾಗ ಕೂಗುಟ್ಟಿತಾಗ ಕಾಡು ;
ಆ ದನಿಯ ಕೇಳಿ ಮುದವನ್ನು ತಾಳಿ ಆಗಿತ್ತು ಕಾಡು ನಾಡು.

ಪಡುಗಡಲನಾಡ ಹೆಣ್ಣೊಡನೆ ಕಲಿತ ಆ ಲಾಸ್ಯ ಭಂಗಿಯನ್ನು
ನೀ ಕಲಿಸೆ ನಮ್ಮ ಹೆಣ್ಣಿಂಗೆ ಅದುವೆ ತೋರಿತ್ತು ಬೇರೆ ಚೆನ್ನು ;
ಸಂಶಯದ ಸುಳಿವು ಮೊಳೆದಿತ್ತು ಮೊದಲು ಕೆಲವೆದೆಯ ಬಯಲಿನೊಳಗೆ,
ಬಳಿಕದನು ಕಿತ್ತು ಮೂಡಿತ್ತು ಬೇರೆ ಹೊಸ-ನೆಚ್ಚ-ಬಳ್ಳಿ ಕಡೆಗೆ.

ಅದರಿಂದ ಬಂದು ಕೆಲವೆಳೆಯರೆಲ್ಲ ನಿನ್ನೊಡನೆ ಕೂಡಿ ಕುಣಿದು
ಆ ನಿನ್ನ ಲಾಸ್ಯದಾ ಭಂಗಿಗಳನು ಅನುಕರಿಸಿ ನೋಡಿ ತಣಿದು
ಹೊಸಹುರುಪದೊಂದು ಎದೆಚಿಮ್ಮುತಿರಲು, ಗುರು-ಭಾವ-ಭಕ್ತಿಯಲ್ಲಿ
‘ ತಳಿರ ’ನ್ನು ಮೊದಲು ‘ ಕಿರುಗಾಣ್ಕೆ ’ ಬಳಿಕ ತಂದಿಹರು ಅರ್ತಿಯಲ್ಲಿ.

ಈ ನಿನ್ನ ಬಳಗ ನಿನ್ನಿಂದ ಕಲಿತು ಎಲ್ಲೆಲ್ಲು ಕಲಿಸುತಿಹುದು
ಕನ್ನಡಕೆ ಇನ್ನು ಕೊರಗಿಲ್ಲವೆಂದು ಅದು ಸಾರಿ ಹೇಳುತಿಹುದು ;
ನೀನಿಟ್ಟ ಅಡಿಯ ಗೆಲುಬಟ್ಟೆಯಲ್ಲೆ ತಾ ಸಾಗಿಸಿಹುದು ನಡೆದು
ನಿನ್ನಂಥ ತುಂಬಿದೆದೆ ಪ್ರೇಮದಿಂದ ತಾಯ್ನಾಡ ಗುಡಿಯ ಹಿಡಿದು.

ಸಿರಿಗನ್ನಡಕ್ಕೆ ಕುಲಪತಿಯದಾಗಿ ನೀನಿದ್ದೆಯೆಂದು ಮೊದಲು,
ನಾವಾಡುತಿರುವ ಮಾತಿವುಗಳೆಲ್ಲ ನಿನ್ನಿಂದ ಕಲಿತ ತೊದಲು ;
ಹೊಸಗನ್ನಡಕ್ಕೆ ಕಳೆಯೊಂದು ಬಂತು ‘ ಶ್ರೀ ’—ಕಾವ್ಯನಾಮದಿಂದ
ಬೆಳಗಾಗ ಮೂಡಲಲಿ ಮೂಡಿಬರುವ ಭಾಸ್ಕರನ ತೇಜದಂದ.

ಆ ನಿನ್ನ ನುಡಿಯು ಗಂಭೀರ, ಗುಂಭ, ಮುನ್ನೀರ ತಳದ ಆಳ,
ದರಹಸಿತವದನ ತೋರಿತ್ತದೆನಿತು ಕನಿಕರವ ನೀನೆ ಪೇಳ ;
ನಿನ್ನೊಂದು ಮಾತಿನಲಿ ಹತ್ತು ಭಾವಗಳ ತೋರುತಿದ್ದೆ ಮನಕೆ ;
ನಿನ್ನಂಥನೊಬ್ಬ ದೊರಕುವನೆ ಮುಂದೆ ಕನ್ನಡದ ನಾಡ ಜನಕೆ ?

ಜಿ. ಎಸ್. ಶಾಮಣ್ಣ.

ಪೆನಿಸಿಲಿನ್

ಯುದ್ಧಕಾಲದಲ್ಲಿ ವಿಜ್ಞಾನಶಾಸ್ತ್ರವು ಇತರ ಕಾಲಗಳಿಗಿಂತ ಹೆಚ್ಚಾದ ವೇಗದಲ್ಲಿ ಮುಂದುವರಿಯುತ್ತದೆ ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಹಾಗೆಂದರೆ ಧ್ವಂಸಗೊಳಿಸುವ ಹೊಸ ಹೊಸ ಶಸ್ತ್ರಾಸ್ತ್ರಗಳ ತಯಾರಿಗೆ ಒಂದಕ್ಕೆ ಎಂದು ನೆನೆಸಬಾರದು. ಇದರ ಜೊತೆಗೆ ರಚನಾತ್ಮಕ ವಿಷಯಗಳೂ ಅದೇ ವೇಗದಲ್ಲಿ ಮುಂದುವರಿಯುತ್ತವೆ. ಒಂದು ಹೊಸ ಶಸ್ತ್ರ, ಬಾಂಬು ಅಥವಾ ಇನ್ನಾವುದರಿಂದ ತೊಂದರೆಯಾದಲ್ಲಿ ಅದರಿಂದ ಪಾರಾಗಲು ತಕ್ಷಣ ವಿಜ್ಞಾನಶಾಸ್ತ್ರವು ನಮ್ಮ ನೆರವಿಗೆ ಬರುತ್ತದೆ. ಯುದ್ಧಕಾಲದಲ್ಲಿ ಒದಗುವ ಸಂದರ್ಭ ಮತ್ತು ಸಹಾಯಗಳು ಬೇರೆ ಕಾಲದಲ್ಲಿ ಸಿಕ್ಕುವುದಕ್ಕಿಂತ ಹೆಚ್ಚಾಗಿರುವುದರಿಂದ ಈ ಕಾಲದಲ್ಲಿ ವಿಜ್ಞಾನಶಾಸ್ತ್ರ ಸಂಶೋಧನೆಯು ತ್ವರಿತವಾಗಿ ಮುಂದುವರಿಯುತ್ತದೆ. ಇಂತಹ ಸನ್ನಿವೇಶಗಳಲ್ಲಿ ಬೆಳೆದು ಪ್ರಾಮುಖ್ಯತೆಗೆ ಬಂದಿರುವುಗಳಲ್ಲಿ ಪೆನಿಸಿಲಿನ್ ಒಂದು. ಇದು ಯುದ್ಧಕಾಲದಲ್ಲಿ ಕಂಡುಹಿಡಿದುದಲ್ಲ; ಯುದ್ಧಕ್ಕೆ ಮೊದಲೇ ಇದರ ವಿಚಾರ ಸ್ವಲ್ಪ ತಿಳಿದಿತ್ತು. ಇದರ ಯೋಗ್ಯತೆಯನ್ನೂ ಉಪಯುಕ್ತಿಯನ್ನೂ ಎರಡನೆಯ ಪ್ರಪಂಚ ಯುದ್ಧವು ಬೆಳಕಿಗೆ ತಂದಿತು. ಗಾಯ ಮೊದಲಾದುವುಗಳಿಂದ ರಕ್ತ ವಿಷವಾಗಿ ಉಂಟಾಗುವ ಸಾವು ನೋವುಗಳನ್ನು ಇದು ಕಡಮೆಮಾಡಬಲ್ಲುದೆಂದು ತಿಳಿದ ತಕ್ಷಣ ಇಂಗ್ಲೆಂಡ್ ಮತ್ತು ಅಮೆರಿಕಾ ಸರ್ಕಾರಗಳು, ಯುದ್ಧದಲ್ಲಿ ಪ್ರಯೋಜನಕ್ಕೆ ಬರಬಹುದೆಂದು ಇದರ ಮೇಲಿನ ಕೆಲಸಕ್ಕೆ ಬಹಳ ಪ್ರೋತ್ಸಾಹಕೊಟ್ಟುವು. ಇದರಿಂದ ಪೆನಿಸಿಲಿನ್ ಪ್ರಶಸ್ತಿಗೆ ಬಂದು ಲಕ್ಷೋಪಲಕ್ಷ ಜೀವಗಳನ್ನುಳಿಸಿ ಮಾನವ ಜನಾಂಗಕ್ಕೆ ಸೇವೆ ಸಲ್ಲಿಸಿದೆ.

ಪೆನಿಸಿಲಿನ್ ತೇವವಾದ ಸ್ಥಳಗಳಲ್ಲಿ ಇದ್ದಕ್ಕಿದ್ದಂತೆ ಸ್ಪಂಜಿನಂತೆ ಬೆಳದುಬರುವ ಬೂಷ್ಟುವಿನ (Fungus) ಜಾತಿಗೆ ಸೇರಿದುದು. ಈ ಬೂಷ್ಟು ಅಥವಾ ಅಣಬೆಗಳು ಒಂದು ಜಾತಿಯ ಸೂಕ್ಷ್ಮದರ್ಶನೀಯ ಏಕಾಣುಜೀವಿ ಸಸ್ಯಗಳು. ನಮ್ಮ ಸುತ್ತಲೂ ಇವು ಹೇರಳವಾಗಿವೆ; ನಾವು ಉಸಿರಾಡುವ ಗಾಳಿಯಲ್ಲಿಯೂ, ತಿನ್ನುವ ಆಹಾರದಲ್ಲಿಯೂ ಕುಡಿಯುವ ನೀರಿನಲ್ಲಿಯೂ ಇವು ಇವೆ. ಇವುಗಳಲ್ಲಿ ಕೆಲವು ಹಾನಿಕರವಾದವು; ಉಳಿದವು ಬಹಳ ಉಪಯೋಗಕರವಾದ ಕೆಲಸಗಳನ್ನು ಮಾಡುತ್ತವೆ. ನುರಿತ ರಸಾಯನ ಶಾಸ್ತ್ರಜ್ಞನು ಹೆಚ್ಚು ಅಣಿಮಾಡಿದ ಸಂಶೋಧನಾಲಯದಲ್ಲಿಯೂ ಮಾಡಲಾಗದ ರಸಾಯನ ಬದಲಾವಣೆಗಳನ್ನು ಇವು ಮಾಡುತ್ತವೆ. ಕೆಲವು ಹಣ್ಣುಗಳಲ್ಲಿರುವ ಸಕ್ಕರೆಯನ್ನು ಮದ್ಯಸಾರಮಾಡಿ ಆಸವವನ್ನು ಕೊಡುತ್ತವೆ; ಕೆಲವು ಸತ್ತ

ಸಸ್ಯಗಳನ್ನು ಕೊಳೆಸಿ ಮತ್ತೆ ಬೆಳೆಯುವ ಸಸ್ಯಗಳಿಗೆ ಆಹಾರವನ್ನು ಒದಗಿಸುತ್ತವೆ; ಕೆಲವು ದೊಡ್ಡ ಕೈಗಾರಿಕೆಗಳ ಮೂಲಧಾತುಗಳಾಗಿರುತ್ತವೆ; ಮತ್ತೆ ಕೆಲವು ವೈದ್ಯದಲ್ಲಿ ಬಹಳ ಉಪಯೋಗವಾಗುತ್ತವೆ. ಮನುಷ್ಯನ ಅನೇಕ ರೋಗಗಳಿಗೆ ಹಾನಿಕರವಾದ ಏಕಾಣುಜೀವಿಗಳೇ ಕಾರಣ. ಪ್ಲೇಗು, ಕಾಲರಾ, ಕ್ಷಯ, ನ್ಯೂಮೋನಿಯಾ, ಮೇಹಜಾಡ್ಯ ಇವೇ ಮೊದಲಾದುವು ಏಕಾಣುಜೀವಿಗಳಿಂದುಂಟಾಗುವವು. ಇವು ಶರೀರದಲ್ಲಿ ಉತ್ಪತ್ತಿಯಾಗುವುದಿಲ್ಲ. ಹೊರಗಿನಿಂದ ಬಂದು ಶರೀರವನ್ನು ಸೇರಿದಾಗ ಜೀವಕಣಗಳನ್ನು ನಾಶಮಾಡಲು ಪ್ರಯತ್ನಿಸುತ್ತವೆ. ಆಗ ಜೀವಕಣಗಳು ಚೆನ್ನಾಗಿದ್ದಲ್ಲಿ ಏಕಾಣುಜೀವಿಗಳನ್ನು ಕೊಂದು ಹೊರಗೆ ಹಾಕುತ್ತವೆ. ಹಾಗಿಲ್ಲದಿದ್ದಲ್ಲಿ ಇವುಗಳೇ ಜೀವಕಣಗಳನ್ನು ನಾಶಮಾಡಿ ಕ್ರಮೇಣ ಪ್ರಾಣಹಾನಿಯನ್ನೂ ಮಾಡುತ್ತವೆ.

ಸೂಕ್ಷ್ಮದರ್ಶನೀಯ ಜೀವಿಗಳು ರೋಗೋತ್ಪತ್ತಿಗೆ ಕಾರಣವೆಂದು ಗೊತ್ತಾದುದು ಕೇವಲ ೧೦೦ ವರುಷಗಳ ಹಿಂದೆ ಲೂಯಿ ಪ್ಯಾಶ್ಚರ್ ಎಂಬವನು ಇವು ಜೀವದಿಂದ ಕೂಡಿವೆ ಎಂಬುದನ್ನು ಮತ್ತು ಹೊರಗಿನಿಂದ ಬಂದು ಶರೀರವನ್ನು ಹೊಕ್ಕರೆ ಹಾನಿಯುಂಟುಮಾಡುವುವೆಂಬುದನ್ನು ತೋರಿಸಿದನು. ಇವನು ಒಂದು ಬಗೆಯ ಏಕಾಣುಜೀವಿಯು ಮತ್ತೊಂದು ಬಗೆಯದನ್ನು ನಾಶಮಾಡುತ್ತದೆ ಎಂಬುದನ್ನು ತೋರಿಸಿದನು. ಶಸ್ತ್ರವೈದ್ಯ ಪ್ರವೀಣನಾದ ಲಾರ್ಡ್ ಲಿಸ್ಟರ್ ಎಂಬವನು ಪ್ಯಾಶ್ಚರನ ಪ್ರಕಾಶನವನ್ನು ಕಾರ್ಯರೂಪದಲ್ಲಿ ಉಪಯೋಗಿಸಿದನು. ಇವನಿಗೆ ಮುಂಚೆ ಅತಿ ಕಿರಿಯ ಶಸ್ತ್ರಚಿಕಿತ್ಸೆಯೂ ಅಪಾಯಕರವಾಗಿರುತ್ತಿತ್ತು. ಶಸ್ತ್ರಚಿಕಿತ್ಸೆಯಾದಾಗ ಗಾಯದ ಜೊತೆಯಲ್ಲಿ ಏಕಾಣುಜೀವಿಗಳು ಬಂದು ರಕ್ತವಿಷವಾಗಿ ಪ್ರಾಣಹಾನಿಯಾಗುತ್ತಿತ್ತು. ಲಿಸ್ಟರನು ಇದನ್ನು ಗಮನಕ್ಕೆ ತಂದುಕೊಂಡು ಗಾಯದ ಜೊತೆಯಲ್ಲಿ ಏಕಾಣುಜೀವಿಗಳು ಬರದಿರುವ ಹಾಗೆ ಮಾಡಲು ಚಿಕಿತ್ಸೆಗೆ ಮೊದಲು ಶಸ್ತ್ರಗಳನ್ನು ಕಾರ್ಬಾಲಿಕ್ ಆಮ್ಲದಲ್ಲಿ ಅದ್ದಿ ಕ್ರಿಮಿಶುದ್ಧಿಮಾಡಿದನು. ಅದಲ್ಲದೆ ಚಿಕಿತ್ಸೆಯಾಗುವ ಸ್ಥಳವನ್ನು ಬಹಳ ಚೊಕ್ಕಟವಾಗಿಟ್ಟನು! ಇದರಿಂದ ಸಾವುಗಳು ಕಡಮೆಯಾಗಿ ಶಸ್ತ್ರಚಿಕಿತ್ಸೆಯು ದಿನೇ ದಿನೇ ಹೆಚ್ಚು ಆಚರಣೆಗೆ ಬಂದಿತು. ಲಿಸ್ಟರನು ಹಾಕಿದ ಮೇಲ್ಪಂಕ್ತಿಯು ಈ ದಿವಸವೂ ಶಸ್ತ್ರಚಿಕಿತ್ಸೆಯಲ್ಲಿ ಉಪಯೋಗದಲ್ಲಿದೆ.

ಲಿಸ್ಟರನು ಏಕಾಣುಜೀವಿಗಳನ್ನು ದೂರವಿಟ್ಟು ರಕ್ತವಿಷವಾಗದಂತೆ ಮಾಡಬಹುದೆಂದು ತೋರಿಸಿದರೂ ಆಗಲೇ ಶರೀರವನ್ನು ಹೊಕ್ಕು ಕೆಡುಕುಮಾಡುತ್ತಿರುವುಗಳನ್ನು ಹೇಗೆ ನಾಶಮಾಡಬೇಕೆಂಬುದರಲ್ಲಿ ಯಶಸ್ವಿಯಾಗಲಿಲ್ಲ. ಏಕೆಂದರೆ ಅವನ ಕಾಲದಲ್ಲಿದ್ದ ಪೂತಿನಾಶಕಗಳು ಬಹಳ ವಿಷಕರವಾದುವು. ಅವು ಏಕಾಣುಜೀವಿಗಳಿಗಿಂತ ಜೀವಕಣಗಳಿಗೇ ಹೆಚ್ಚು ಕೆಡುಕನ್ನುಂಟುಮಾಡುತ್ತಿದ್ದುವು. ಜೀವಕಣಗಳನ್ನು

ಕೆಡಿಸದೆ ಏಕಾಣುಜೀವಿಗಳನ್ನು ಮಾತ್ರ ನಾಶಮಾಡುವ ಪೂತಿನಾಶಕವನ್ನು ಮೊದಲು ತಯಾರಿಸಿದವನು ಪಾಲ್ ಎರ್‌ಲಿಷ್‌ನು (Paul Erlich). ಇವನು ೧೯೦೯ರಲ್ಲಿ ಸಾಲ್‌ವರ್‌ಸಾನ್ ಎಂಬುದನ್ನು ತಯಾರಿಸಿದನು. ಮೇಹರೋಗಗಳಲ್ಲಿ ಅತಿ ಕೆಡುಕಾದ ಪರಂಗಿಹುಣ್ಣನ್ನು (Syphilis) ಗುಣಪಡಿಸಲು ಇವನು ತಯಾರಿಸಿದ ಪೂತಿನಾಶಕಗಳಲ್ಲಿ ಇದು ೬೦೬ನೆಯದಾದುದರಿಂದ ಇದಕ್ಕೆ 'ಎರ್‌ಲಿಷ್‌ನ ೬೦೬' ಎಂಬ ಹೆಸರೂ ಇದೆ. ಇದು ಶರೀರಕ್ಕೆ ತೊಂದರೆ ಕೊಡದೆ ಪರಂಗಿಹುಣ್ಣಿಗೆ ಕಾರಣವಾದ ಏಕಾಣುಜೀವಿಗಳನ್ನು ಕೊಂದು ರೋಗವನ್ನು ಗುಣಮಾಡುತ್ತದೆ. ರೋಗವು ಪ್ರಬಲವಾಗುವುದಕ್ಕೆ ಮುಂಚೆ ಉಪಯೋಗಿಸಿದರೆ ಸಾಲ್‌ವರ್‌ಸಾನ್ ಒಳ್ಳೆಯ ಫಲಿತಾಂಶಗಳನ್ನು ಕೊಡುತ್ತದೆ.

ಶರೀರಕಣಗಳಿಗೆ ಕೆಡುಕುಮಾಡದೆ ಏಕಾಣುಜೀವಿಗಳನ್ನು ಮಾತ್ರ ಕೊಲ್ಲತಕ್ಕ ಈ ತರಹ ಪೂತಿನಾಶಕಗಳಲ್ಲಿ ಸಾಲ್‌ವರ್‌ಸಾನ್ ತರುವಾಯ ಸುಮಾರು ೨೦-೨೫ ವರ್ಷಗಳ ಕಾಲ ಬೇರೆ ಯಾವುದೂ ಪ್ರಾಮುಖ್ಯತೆಗೆ ಬರಲಿಲ್ಲ. ಈ ಕಾಲದಲ್ಲಿ ಉತ್ತಮವಾದ ಕ್ರಿಮಿನಾಶಕಗಳು ತಯಾರಾದುವು. ಕ್ರಿಮಿಶುದ್ಧಿ ವಿಧಾನಗಳೂ ಉತ್ತಮಗೊಂಡುವು. ಆದರೆ ಶರೀರ ಹೊಕ್ಕ ಏಕಾಣುಜೀವಿಗಳನ್ನು ಸರಿಯಾದ ರೀತಿಯಲ್ಲಿ ನಾಶಮಾಡುವ ಪದಾರ್ಥವು ಉಪಯೋಗಕ್ಕೆ ಬರಲಿಲ್ಲ. ಇದರಿಂದಲೇ ಮೊದಲನೆಯ ಪ್ರಪಂಚ ಯುದ್ಧದಲ್ಲಿ ಗಾಯಗಳಿಂದ ಅನೇಕ ಸಾವು ನೋವುಗಳುಂಟಾದುವು. ಗಾಯವಾದಾಗ ಏಕಾಣುಜೀವಿಗಳು ಅದನ್ನು ಸೇರಿ ರಕ್ತ ವಿಷಮಾಡಿ ಹಾನಿಮಾಡುವದಕ್ಕೆ ಮೊದಲು ಅವುಗಳನ್ನು ಕೊಲ್ಲಬೇಕು. ೧೯೩೩ರಲ್ಲಿ ಉಪಯೋಗಕ್ಕೆ ಬಂದ ಪ್ರಾಂಟೋಸಿಲ್ ಈ ಗುಣವುಳ್ಳ ಔಷಧಗಳಲ್ಲೊಂದು. ಇದು ಒಂದು ಜಾತಿಯ ಬಣ್ಣ. ಇದನ್ನು ೧೯೦೮ರಲ್ಲೇ ಜರ್ಮನರು ತಯಾರಿಸಿದ್ದರು. ಕೆಲವು ವರ್ಷಗಳನಂತರ ಈ ಜಾತಿಯ ಬಣ್ಣಗಳು ಏಕಾಣುಜೀವಿನಾಶಕಗಳೆಂದು ತಿಳಿದರೂ ವೈದ್ಯಶಾಸ್ತ್ರದಲ್ಲಿ ಇವು ಪ್ರಯೋಜನಕ್ಕೆ ಬರಲಿಲ್ಲ. ಜೀವಕಣಗಳಿಗೆ ಹೆಚ್ಚು ವಿಷಕಾರಿಗಳಲ್ಲವೆಂದು ತಿಳಿದಮೇಲೆ ಇವು ಪ್ರಾಮುಖ್ಯತೆಗೆ ಬಂದು ಈಗ 'ಗಂಧಕ ಔಷಧಗಳು' (Sulfa Drugs) ಎಂದು ಹೆಸರುವಾಸಿಯಾಗಿರುವ ಅನೇಕ ಔಷಧಗಳು ತಯಾರಾಗಿ ಉಪಯೋಗಕ್ಕೆ ಬಂದುವು. ಈ ಗಂಧಕ ಔಷಧಗಳು ಸಾವು, ರೋಗ, ಅನರ್ಹತೆ, ಅಂಗವಿಕಲತೆ ಮುಂತಾದ ಕಾರಣಗಳಿಂದ ಅನೇಕ ಜೀವಗಳನ್ನು ಕಾಪಾಡಿವೆ. ಇವುಗಳಿಂದಲೂ ಆಗದ ಕಾರ್ಯವನ್ನು ನೆರವೇರಿಸಲು ೧೯೪೧ರಲ್ಲಿ ಪೆನಿಸಿಲಿನ್ ವೈದ್ಯರಂಗಕ್ಕೆ ಬಂದಿದೆ. ಗಂಧಕ ಔಷಧಗಳ ಜೊತೆಗೆ ಈ ಘೋರ ಎರಡನೆಯ ಪ್ರಪಂಚ ಯುದ್ಧದಲ್ಲಿ ಪೆನಿಸಿಲಿನ್ ಇಲ್ಲದಿದ್ದರೆ ಈಗಾಗಿರುವ

ಹತವಾದವರ, ಗಾಯಪಟ್ಟವರ ಮತ್ತು ಅಶಕ್ತರಾದವರ ಸಂಖ್ಯೆ ಇನ್ನೂ ಅಧಿಕವಾಗಿರುತ್ತಿತ್ತು.

ಯುದ್ಧಕಾಲದಲ್ಲಿ ಬೆಳೆದು ಪ್ರಾಮುಖ್ಯತೆಗೆ ಬಂದಿದ್ದರೂ ಪೆನಿಸಿಲಿನ್ನನ್ನು ಕಂಡುಹಿಡಿದುದು ೧೯೨೮ರಲ್ಲಿ. ಈಗ ಈ ಪ್ರಸಿದ್ಧಿಯಲ್ಲಿರುವ ಅನೇಕ ವಿಷಯಗಳು ಅವಕ್ಕಾಗಿಯೇ ಕೆಲಸಮಾಡಿ ಫಲಿಸಿದುವುಗಳಲ್ಲ. ಸಂಶೋಧನೆಯಲ್ಲಿ ಯಾವುದೋ ಕೆಲಸಮಾಡುತ್ತಿರುವಾಗ ಅಕಸ್ಮಾತ್ ಮತ್ತಾವುದೋ ಸಂಭವಿಸಿ ಅದರಿಂದ ಮಾನವ ಜನಾಂಗಕ್ಕೆ ಎಷ್ಟೋ ಪ್ರಯೋಜನವಾಗುತ್ತಿರುವುದು ವಿಜ್ಞಾನಶಾಸ್ತ್ರಕ್ಕೆ ಹೊಸದಲ್ಲ. ಹಾಗೆ ಅದೃಷ್ಟವಶಾತ್ ಕಂಡುಹಿಡಿದ ಪದಾರ್ಥಗಳಲ್ಲಿ ಪೆನಿಸಿಲಿನ್ ಒಂದು. ೧೯೨೮ನೆಯ ಸೆಪ್ಟೆಂಬರ್ ತಿಂಗಳಲ್ಲಿ ಲಂಡನ್ನಿನ ಸೇಯಿಂಟ್ ಮೇರಿ ಆಸ್ಪತ್ರೆಯಲ್ಲಿ ಮಹೋಪಾಧ್ಯಾಯ ಅಲೆಕ್ಸಾಂಡರ್ ಫ್ಲೆಮಿಂಗ್ ಎಂಬವನು ಹುಣ್ಣು ಮತ್ತು ರಕ್ತವಿಷಮಾಡುವ ಒಂದು ಜಾತಿಯ ಏಕಾಣುಜೀವಿಗಳ ಮೇಲೆ ಕೆಲಸಮಾಡುತ್ತಿದ್ದನು. ಅವುಗಳ ಪರೀಕ್ಷೆ ಮುಗಿದನಂತರ ಅವುಗಳಿದ್ದ ಫಲಕಗಳನ್ನು ಮೇಜಿನ ಮೇಲೆ ಒಂದು ಕಡೆ ಹಾಕಿದ್ದನು. ಕೆಲವು ದಿವಸಗಳಾದನಂತರ ಅವುಗಳನ್ನು ಮತ್ತೆ ಪರೀಕ್ಷಿಸಿದಾಗ ಅವುಗಳಲ್ಲೊಂದರ ಮೇಲೆ ಗಾಳಿಯಲ್ಲಿರುವ ಮತ್ತೊಂದು ಏಕಾಣುಜೀವಿಯು ಬೆಳೆದಿತ್ತು. ಏಕಾಣುಜೀವಿಶಾಸ್ತ್ರ ಸಂಶೋಧನೆಯಲ್ಲಿ ಇದು ದಿನಂಪ್ರತಿ ಆಗತಕ್ಕಂಥ ವಿಷಯ. ಸಾಧಾರಣ ಕೆಲಸಗಾರನು ಮಲಿನವಾದದ್ದೆಂದು ತಿಳಿದು ಅಂತಹ ಫಲಕನ್ನು ಬಿಸಾಡುತ್ತಿದ್ದನು. ಸಂಶೋಧನೆಯಲ್ಲಿ ನುರಿತ ಫ್ಲೆಮಿಂಗನು ಹಾಗೆ ನೋಡದೆ ಆ ಫಲಕವನ್ನು ಮತ್ತೆ ಚೆನ್ನಾಗಿ ಪರೀಕ್ಷಿಸಿದನು. ಗಾಳಿಯಿಂದ ಬಂದು ಬೆಳೆದಿದ್ದ ಸೂಕ್ಷ್ಮದರ್ಶನೀಯ ಜೀವಿಯ ಸುತ್ತಲೂ ಮೊದಲು ಬೆಳೆದಿದ್ದ ಹಾನಿಕಾರಕ ಏಕಾಣುಜೀವಿಗಳು ನಾಶವಾಗಿದ್ದುವು. (ಚಿತ್ರ ೧ ನೋಡಿ.)

೧೯೧೪—೧೮ರ ಯುದ್ಧದಲ್ಲಿ ಸರಿಯಾದ ಪೂತಿನಾಶಕಗಳಿಲ್ಲದೆ ಉಂಟಾಗಿದ್ದ ಅನಾಹುತಗಳನ್ನು ಯುದ್ಧರಂಗದ ಆಸ್ಪತ್ರೆಗಳಲ್ಲಿ ಕೆಲಸಮಾಡಿ ಅರಿತಿದ್ದ ಫ್ಲೆಮಿಂಗನಿಗೆ ಅನಿರೀಕ್ಷಿತವಾಗಿ ಬಂದ ಸೂಕ್ಷ್ಮದರ್ಶನೀಯ ಜೀವಿಯ ಪೂತಿನಾಶಕ ಶಕ್ತಿಯಲ್ಲಿ ಆಸಕ್ತಿ ಹುಟ್ಟಿತು. ಅನಂತರ ಅವನು ಆ ಜೀವಿಯನ್ನೇ ಬೇರೆ ಬೆಳಸಿ ಅನೇಕ ರೋಗಕಾರಕ ಏಕಾಣುಜೀವಿಗಳನ್ನು ಅದರ ಹತ್ತಿರ ತಂದನು. ಕೆಲವು ಹೊರತು ಉಳಿದವು ಸತ್ತವು. ಇದರಿಂದ ಫ್ಲೆಮಿಂಗನಿಗೆ ಈ ಹೊಸ ಸೂಕ್ಷ್ಮದರ್ಶನೀಯ ಜೀವಿಯು ಬೆಳೆಯುವಾಗ ರೋಗಕಾರಕ ಏಕಾಣುಜೀವಿಗಳನ್ನು ನಾಶಮಾಡುವ ಒಂದು ಪದಾರ್ಥವನ್ನು ಹೊರದೂಡುವುದೆಂದು ಮನದಟ್ಟಾಯಿತು. ಅನಂತರ ಫ್ಲೆಮಿಂಗನು ಈ ಸೂಕ್ಷ್ಮದರ್ಶನೀಯ ಜೀವಿಯನ್ನು ಒಂದು ದ್ರವರೂಪದ ಆಹಾರದ

ಮೇಲೆ ಬೆಳಸಿ ಕೆಲವು ದಿವಸಗಳಾದ ಮೇಲೆ ಆ ಜೀವಿಯನ್ನು ಬೇರೆ ಮಾಡಿ ಅದು ಬೆಳೆದ ದ್ರವವನ್ನು ರೋಗಕಾರಕ ಏಕಾಣುಜೀವಿಗಳ ಹತ್ತಿರ ತಂದಾಗ ಮೊದಲು ಸೂಕ್ಷ್ಮದರ್ಶನೀಯ ಜೀವಿಯಿಂದ ನಾಶವಾಗಿದ್ದವೆಲ್ಲವೂ ಈಗ ಈ ದ್ರವದಿಂದಲೇ ನಾಶವಾದವು. ಈ ಹೊಸ ಸೂಕ್ಷ್ಮದರ್ಶನೀಯ ಜೀವಿಯನ್ನು ಫ್ಲೆಮಿಂಗನು ಪರೀಕ್ಷಿಸಿದಾಗ ಇದು ಪೆನಿಸಿಲಿಯ ಎಂಬ ಗುಂಪಿಗೆ ಸೇರಿದ ಪೆನಿಸಿಲಿಯಂ ನೊಟೇಟಂ (Penicillium Notatum) ಆಗಿದ್ದಿತು. ಇದರಿಂದ ಬಂದ ಪದಾರ್ಥವಾದುದರಿಂದ ಫ್ಲೆಮಿಂಗನು ತಾನು ಕಂಡುಹಿಡಿದ ಏಕಾಣುಜೀವಿನಾಶಕಕ್ಕೆ 'ಪೆನಿಸಿಲಿನ್' ಎಂಬ ಹೆಸರನ್ನು ಕೊಟ್ಟನು.

ಫ್ಲೆಮಿಂಗನು ಇಷ್ಟಕ್ಕೇ ಈ ಕೆಲಸವನ್ನು ಬಿಟ್ಟುಬಿಡಲಿಲ್ಲ. ಇವನು ೧೯೩೨ರ ವರೆಗೂ ಪೆನಿಸಿಲಿನ್ ಮೇಲೆ ಕೆಲಸಮಾಡಿ ಅದರ ಅನೇಕ ಗುಣಗಳನ್ನು ಕಂಡುಹಿಡಿದನು. ಅನೇಕ ಜಾತಿಯ ಏಕಾಣುಜೀವಿಗಳು ಬೆಳೆದಿರುವ ತಟ್ಟೆಯೊಂದರಲ್ಲಿ ಪೆನಿಸಿಲಿನ್ ತಂದಾಗ ಕೆಲವು ತಕ್ಷಣ ನಾಶವಾದುವು; ಕೆಲವು ಯಾವ ಬದಲಾವಣೆಯೂ ಇಲ್ಲದೆ ಬೆಳೆಯುತ್ತಲೇ ಇದ್ದುವು. (ಚಿತ್ರ ೨.) ಇದರಿಂದ ಕೆಲವು ಗುಂಪಿನ ಏಕಾಣುಜೀವಿಗಳಿಂದಾದ ರೋಗಗಳನ್ನು ಮಾತ್ರ ಪೆನಿಸಿಲಿನ್ ಗುಣಪಡಿಸಬಲ್ಲುದೆಂಬುದು ವ್ಯಕ್ತವಾಯಿತು. ಇದಲ್ಲದೆ ಪೆನಿಸಿಲಿನ್ ಸೂಜಿಮದ್ದು ಕೊಟ್ಟಾಗ ಬಿಳಿಯ ಇಲಿಗಳಿಗೆ ವಿಷಕಾರಿಯಾಗಿರಲಿಲ್ಲ. ಮತ್ತೆ ಪೆನಿಸಿಲಿನ್ ಒಳಗೊಂಡ ದ್ರವವು ಅದರ ೮೦೦ ರಷ್ಟು ನೀರು ಬೆರಸಿ ಸಾರ ಕಡಮೆ ಮಾಡಿದರೂ ಏಕಾಣುಜೀವಿನಾಶಕ ಶಕ್ತಿಯನ್ನು ಪಡೆದಿತ್ತು. ಇದನ್ನೆಲ್ಲ ಪರೀಕ್ಷಿಸಿ ಫ್ಲೆಮಿಂಗನು ೧೯೩೨ ರಲ್ಲಿ ಬರೆದ ಲೇಖನವೊಂದರಲ್ಲಿ ಗಾಯಗಳಿಗೆ ಹಚ್ಚುವ ಆಗಿನ ಕಾಲದಲ್ಲಿದ್ದ ಮುಲಾಮುಗಳಿಗೆಲ್ಲಕ್ಕಿಂತಲೂ ಪೆನಿಸಿಲಿನ್ ಉತ್ತಮವಾದದ್ದೆಂತಲೂ ಅದನ್ನು ಮುಲಾಮಿನ ಮೂಲಕವಾಗಲೀ ಅಥವಾ ಸೂಜಿ ಮದ್ದಿನಿಂದಾಗಲೀ ಏಕಾಣುಜೀವಿಗಳಿರುವ ಸ್ಥಳಕ್ಕೆ ಕಳುಹಿಸಿ ಅವುಗಳನ್ನು ನಾಶಮಾಡಬಹುದೆಂದೂ ಬರೆದಿದ್ದಾನೆ.

ಫ್ಲೆಮಿಂಗನು ಈ ಪ್ರಯೋಗಗಳಲ್ಲೆಲ್ಲಾ ಉಪಯೋಗಿಸಿದುದು ಪೆನಿಸಿಲಿಯಂ ನೊಟೇಟಂ ಬೆಳೆದ ದ್ರಾವಣ. ಈ ದ್ರಾವಣದಲ್ಲಿ ಪೆನಿಸಿಲಿನ್ ಅಲ್ಲದೆ ಇನ್ನೂ ಅನೇಕ ಕಲ್ಮಷಗಳಿವೆ. ಕಲ್ಮಷಗಳನ್ನು ಹೋಗಲಾಡಿಸಿ ಶುದ್ಧವಾದ ಮತ್ತು ಹೆಚ್ಚು ಸಾರವುಳ್ಳ ಪೆನಿಸಿಲಿನ್ ತಯಾರಿಸಲು ಫ್ಲೆಮಿಂಗನು ಪ್ರಯತ್ನಪಟ್ಟನು. ರಸಾಯನಶಾಸ್ತ್ರ ಅನುಭವವಿಲ್ಲದಿದ್ದುದರಿಂದ ಇದರಲ್ಲಿ ಇವನು ಯಶಸ್ವಿಯಾಗಲಿಲ್ಲ. ಅನಂತರ ೧೯೩೨ ರಲ್ಲಿ ಸೂಕ್ಷ್ಮದರ್ಶನೀಯ ಜೀವಿಗಳಿಂದ ಪದಾರ್ಥಗಳ ರಸಾಯನಶಾಸ್ತ್ರದಲ್ಲಿ ನುರಿತ ರೈಸ್ಟ್ರಿಕ್ ಎಂಬವನು ಪೆನಿಸಿಲಿನ್ ಶುದ್ಧಿಮಾಡಲು ಪ್ರಯತ್ನ ಮಾಡಿದನು. ಇವನು

ಇದನ್ನು ಲೀನಕಾರಿಗಳಿಂದ ಸಂಸ್ಕರಿಸಿ ಸ್ವಲ್ಪಮಟ್ಟಿಗೆ ಶುದ್ಧಿ ಮಾಡಿದನು. ಆದರೆ ಪೆನಿಸಿಲಿನ್ ಸಾಧಾರಣವಾಗಿ ಉಪಯೋಗಿಸುವ ರಸಾಯನ ವಿಧಾನಗಳಿಂದ ನಾಶವಾಗುವ ಅಸ್ಥಿರವಾದ ಪದಾರ್ಥವಾದುದರಿಂದ ಇವನು ಇದನ್ನು ಪೂರ್ತಿ ಶುದ್ಧಮಾಡಲಾಗಲಿಲ್ಲ. ಈ ಅಸ್ಥಿರ ಸ್ವಭಾವದಿಂದ ಪೆನಿಸಿಲಿನ್ ವೈದ್ಯರಂಗದಲ್ಲಿ ಹೆಚ್ಚು ಪ್ರಯೋಜನಕ್ಕೆ ಬರಲಾರದೆಂದು ರೈಸ್ಟ್ರಿಕ್ಸ್ ಅಭಿಪ್ರಾಯಪಟ್ಟನು. ಪೆನಿಸಿಲಿನ್ನಿನ ಸಾಮರ್ಥ್ಯವನ್ನು ತಿಳಿದಿದ್ದರೂ ಅದನ್ನು ಪಡೆಯಲಿರುವ ಕಷ್ಟವನ್ನು ನೋಡಿ ರೈಸ್ಟ್ರಿಕ್ಸ್‌ನ ಅಭಿಪ್ರಾಯಕ್ಕೆ ಫ್ಲೆಮಿಂಗನೂ ಸಮ್ಮತಿಸಿದನು. ರೈಸ್ಟ್ರಿಕ್ಸ್ ಅನಂತರ ಸುಮಾರು ೭ ವರ್ಷಗಳ ಕಾಲ ಪೆನಿಸಿಲಿನ್ ಮೇಲೆ ಮತ್ತಾವ ಕೆಲಸವೂ ನಡೆಯಲಿಲ್ಲ. ಏಕೆಂದರೆ ವೈದ್ಯಶಾಸ್ತ್ರಜ್ಞರು ಇದರಲ್ಲಿ ಆಗ ಹೆಚ್ಚು ನಂಬಿಕೆ ಇಡಲಿಲ್ಲ. ಅದಲ್ಲದೆ ಆಗ ತಾನೇ ಪ್ರಾಮುಖ್ಯತೆಗೆ ಬಂದಿದ್ದ ಗಂಧಕ ಔಷಧಗಳು ಎಲ್ಲಾ ವಿಜ್ಞಾನ ಶಾಸ್ತ್ರಜ್ಞರ ಗಮನವನ್ನು ಹಿಡಿದಿದ್ದುವು.

ಪೆನಿಸಿಲಿನ್ನನ್ನು ಅದರ ಸಂಯೋಜನಗಳಿಂದ ಪೃಥಕ್ಕರಿಸಿ ವೈದ್ಯ ಚಿಕಿತ್ಸೆಯಲ್ಲಿ ಉಪಯೋಗವಾಗುವಂತೆ ಮಾಡಿದ ಕೀರ್ತಿಯು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ರೋಗ ಲಕ್ಷಣಶಾಸ್ತ್ರದ ಮಹೋಪಧ್ಯಾಯನಾದ ಹೋವರ್ಡ್ ಫ್ಲೋರಿ ಮತ್ತು ಅವನ ಸಹಪಾಠಿಗಳಿಗೆ ಸೇರಿದುದು. ಶುದ್ಧವಾದ ಪೆನಿಸಿಲಿನ್ ತಯಾರಿಕೆ, ಅದರ ಶುದ್ಧತೆಯನ್ನು ನಿಷ್ಕರ್ಷಿಸುವ ವಿಧಾನ, ವೈದ್ಯಕೀಯದಲ್ಲಿ ಅದು ಪ್ರಯೋಜನವಾಗುವ ರೀತಿ, ಉಪಯೋಗಿಸುವ ಪರಿಮಾಣ, ಮತ್ತು ಶರೀರದಿಂದ ಅದು ವಿಸರ್ಜನೆಯಾಗುವ ರೀತಿ ಇವೆಲ್ಲವನ್ನೂ ಆಕ್ಸ್‌ಫರ್ಡ್ ಕೆಲಸಗಾರರು ನಿರ್ಧರಿಸಿದರು. ರೋಗದ ಸೋಂಕು ಮೊದಲಾದುವುಗಳಿಂದ ರಕ್ಷಣೆ ಪಡೆಯುವ ಸ್ವಾಭಾವಿಕ ಪದಾರ್ಥಗಳಲ್ಲಿ ಹೆಚ್ಚು ಅಭಿರುಚಿ ಇದ್ದ 'ಫ್ಲೋರಿಯು ೧೯೨೯ ರಲ್ಲಿ ಲೈಸೋಸೈಮ್ ಎಂಬ ಪದಾರ್ಥದ ಮೇಲೆ ಕೆಲಸ ಮಾಡುತ್ತಿದ್ದನು. ಇದನ್ನು ಕೂಡ ೧೯೨೨ ರಲ್ಲಿ ಫ್ಲೆಮಿಂಗನೇ ಕಂಡುಹಿಡಿದಿದ್ದನು. ಲೈಸೊಸೈಮ್ ಪ್ರಕೃತಿಯಲ್ಲಿ ಹೇರಳವಾಗಿದೆ. ಶರೀರದ ನಾನಾ ಭಾಗಗಳಲ್ಲಿರುವ ಇದು ಕಣ್ಣೀರಿನಲ್ಲಿ ಹೆಚ್ಚಾಗಿದೆ. ನಮ್ಮ ಸುತ್ತಲೂ ಇರುವ ಏಕಾಣುಜೀವಿಗಳಿಂದ ಕಣ್ಣಿಗೆ ಅಪಾಯವಾಗದಂತೆ ಇದು ನೋಡಿಕೊಳ್ಳುತ್ತದೆ. ಇದರ ಕೆಲಸ ಮುಗಿದಮೇಲೆ ಮೊದಲು ಶೆಫೀಲ್ಡ್‌ನಲ್ಲಿದ್ದ ಫ್ಲೋರಿಯು ಆಕ್ಸ್‌ಫರ್ಡ್‌ಗೆ ಬಂದನು. ಅಲ್ಲಿ ಅಂಟುರೋಗಗಳಿಗೆ ಕಾರಣವಾದ ಏಕಾಣುಜೀವಿಗಳನ್ನು ಶರೀರಕ್ಕೆ ತೊಂದರೆಯಾಗದ ರೀತಿಯಲ್ಲಿ ನಾಶಮಾಡುವ ಸ್ವಾಭಾವಿಕ ಪದಾರ್ಥಗಳ ಮೇಲೆ ಕೆಲಸಮಾಡಬೇಕೆಂದು ಹೊರಟನು. ಇಂತಹ ಪದಾರ್ಥಗಳು ಅನೇಕವಿದ್ದರೂ ಅವುಗಳ ರಸಾಯನ ಮತ್ತು ಇತರ ಸ್ವರೂಪಗಳು ಸರಿಯಾಗಿ

ಗೊತ್ತಿಲ್ಲದಿದ್ದುದರಿಂದ ಇವುಗಳ ವಿಷಯದಲ್ಲಿ ಸಂಶೋಧನೆ ನಡಸಿದರೆ ಹೆಚ್ಚು ಪ್ರಯೋಜನವಾಗುವುದೆಂಬ ಭರವಸೆ ಇವನಿಗಿತ್ತು. ಆದ್ದರಿಂದ ಆಗಿದ್ದ ಏಕಾಣು ಜೀವಿನಾಶಕಗಳನ್ನೆಲ್ಲಾ ಪರೀಕ್ಷಿಸಿ ಪೆನಿಸಿಲಿನ್ ಮೇಲೆ ಕೆಲಸಮಾಡಬೇಕೆಂದು ನಿಶ್ಚಯಿಸಿದನು. ಹಿಂದೆ ನಡೆದಿದ್ದ ಕೆಲಸದಿಂದ ಇದರಮೇಲೆ ಹೆಚ್ಚು ಕೆಲಸಮಾಡುವುದು ಆಶಾಜನಕವಾಗಿಲ್ಲದಿದ್ದರೂ ಇನ್ನಾವ ಪೂತಿನಾಶಕಗಳಿಂದಲೂ ನಾಶವಾಗದ ಏಕಾಣುಜೀವಿಗಳು ಇದರಿಂದ ನಾಶವಾಗುತ್ತಿದ್ದುದರಿಂದ ಪೆನಿಸಿಲಿನ್ ಮೇಲೆಯೇ ಕೆಲಸಮಾಡಬೇಕೆಂದು ನಿಶ್ಚಯಿಸಿದನು. ಈ ಕಾರ್ಯವು ಇವನೊಬ್ಬನಿಂದಲೇ ಯಶಸ್ವಿಯಾಗುತ್ತಿರಲಿಲ್ಲ. ಕೆಲಸವು ಮುಂದುವರಿದ ಹಾಗೆಲ್ಲಾ ಇತರ ಪ್ರವೀಣರ ಸಹಾಯವು ಇವನಿಗೆ ಬೇಕಾಯಿತು. ಆ ಸಹಾಯವು ಆಕ್ಸ್‌ಫರ್ಡಿನಲ್ಲಿ ಹೇರಳವಾಗಿ ದೊರೆಯಿತು. ಇಂತಹ ಸಹಾಯಕರ್ತರಲ್ಲಿ ಜೀವನ ರಸಾಯನ ವಿಜ್ಞಾನಶಾಸ್ತ್ರಜ್ಞನಾದ ಡಾಕ್ಟರ್ ಚೈನ್ ಎಂಬವನು ಮುಖ್ಯವಾದ ಒಬ್ಬನು.

ಆಕ್ಸ್‌ಫರ್ಡಿನಲ್ಲಿ ನಡೆದ ಕೆಲಸವನ್ನು ವಿವರಿಸುವದಕ್ಕೆ ಮುಂಚೆ ಪೆನಿಸಿಲಿನ್ ತಯಾರಿಸುವ ವಿಧಾನವನ್ನು ವಿಚಾರಿಸಬೇಕು. ಪೆನಿಸಿಲಿನ್ ಬೂಷ್ಟುವಿನ ಜಾತಿಗೆ ಸೇರಿದ ಪೆನಿಸಿಲಿಯಂ ನೊಟೇಟಂ ಎಂಬ ಸಸ್ಯವು ಬೆಳೆಯುವಾಗ ಬೆಳೆಯುವ ದ್ರಾವಣಕ್ಕೆ ಹೊರದೂಡಿಸಿದ ಪದಾರ್ಥವೆಂದು ಮೊದಲೇ ತಿಳಿಸಿದೆ. ಬೂಷ್ಟುವಿನ ಜಾತಿಯ ಸೂಕ್ಷ್ಮದರ್ಶನೀಯ ಜೀವಿಗಳು ನಮ್ಮ ಸುತ್ತಲೂ ಇದ್ದು ಸಿಕ್ಕಿದ ಕಡೆಗಳಲ್ಲೆಲ್ಲಾ ಬೆಳೆದರೂ ಬೇಕಾದ ಒಂದೇ ಜಾತಿಯ ಜೀವಿಯನ್ನು ಬೆಳೆಯುವುದು ಕಷ್ಟ. ಒಂದು ಬಗೆಯ ಸೂಕ್ಷ್ಮದರ್ಶನಿಯು ಬೆಳೆಯುವ ಸ್ಥಿತಿಗಳೇ ಇತರ ಬಗೆಯವುಗಳಿಗೂ ಬೆಳೆಯುವುದಕ್ಕೆ ಅನುಕೂಲವಾಗಿರುವುದರಿಂದ ಬಹಳ ಎಚ್ಚರಿಕೆಯಿಂದಿಲ್ಲದಿದ್ದರೆ ಬೆಳೆಯುವ ಸೂಕ್ಷ್ಮದರ್ಶನಿಯು ಇತರವುಗಳೊಡನೆ ಸೇರಿ ಮಲಿನವಾಗುವುದು. ಆದ್ದರಿಂದ ಇವನ್ನು ಕೊಳೆತವುಂಟಾಗದಂತೆ ಮಾಡಿದ ಸ್ಥಿತಿಯಲ್ಲೇ ಬೆಳೆಯಬೇಕು. ಪೆನಿಸಿಲಿಯಂ ನೊಟೇಟಂ ಅನ್ನು ಒಂದು ದ್ರಾವಣದ ಮೇಲೆ ಬೆಳಸುತ್ತಾರೆ. ಬೇರೆ ಬೇರೆ ಕೆಲಸಗಾರರು ಬೇರೆ ಬೇರೆ ದ್ರಾವಣಗಳನ್ನು ಪಯೋಗಿಸುತ್ತಾರೆ. ಈ ದ್ರಾವಣಗಳಲ್ಲೆಲ್ಲಾ ಸ್ವಲ್ಪ ಹೆಚ್ಚು ಕಡಮೆ ಒಂದೇ ತರಹದ ಪದಾರ್ಥಗಳಿರುತ್ತವೆ; ಆದರೆ ಅವುಗಳಿರುವ ಪ್ರಮಾಣದಲ್ಲಿ ವ್ಯತ್ಯಾಸವಿರುತ್ತದೆ. ಬೇಕಾದ ದ್ರಾವಣವನ್ನು ಒಂದು ಸೀಸೆಯಲ್ಲಿ ಹಾಕಿ ಅದರ ಬಾಯನ್ನು ಹತ್ತಿಯ ಬಿರಡೆಯಿಂದ ಮುಚ್ಚಿ ಹೆಚ್ಚು ಒತ್ತಡದ ಆವಿಯಲ್ಲಿ ಸ್ವಲ್ಪಕಾಲವಿಟ್ಟು ಕ್ರಿಮಿಶುದ್ಧಿಮಾಡಬೇಕು. ಅನಂತರ ಅದು ತಣ್ಣಗಾದಮೇಲೆ ಎಚ್ಚರಿಕೆಯಿಂದ ಸ್ವಲ್ಪ ಪೆನಿಸಿಲಿಯಂ ನೊಟೇಟಂ ಬಿಟ್ಟು ಪುನಃ ತಕ್ಷಣ ಬಿರಡೆ ಹಾಕಿದರೆ ೨೪ ಘಂಟೆಗಳಲ್ಲಿ ಸೀಸೆಯ ತಳದಲ್ಲಿ ಬಹಳ ನವುರಾದ ಬೆಳೆ

ಕಾಣುತ್ತದೆ. ಅನಂತರ ಬೆಳೆಯು ಹೆಚ್ಚಿ ೩ ದಿವಸಗಳಲ್ಲಿ ದ್ರಾವಣದ ಮೇಲೆ ಬಿಳಿಯ ಪದಾರ್ಥವೊಂದು ತೇಲುತ್ತದೆ. ೪–೫ ದಿವಸಗಳಲ್ಲಿ ಈ ಬಿಳಿಯ ಪದಾರ್ಥದ ಮೇಲ್ಭಾಗವು ಹಸುರು, ನೀಲಿ ಬಣ್ಣಕ್ಕೆ ತಿರುಗಿ ಕೆಳಭಾಗವು ಕಂದು ಹಳದಿ ಬಣ್ಣಕ್ಕೆ ತಿರುಗುತ್ತದೆ. ೬–೭ ದಿವಸಗಳಲ್ಲಿ ಬೆಳವಣಿಗೆಯು ಪೂರ್ತಿಯಾಗುತ್ತದೆ. ಚಿತ್ರದಲ್ಲಿ ಪೆನಿಸಿಲಿನ್ ಸೀಸೆಯಲ್ಲಿ ಬೆಳೆದಿರುವುದನ್ನು ನೋಡಬಹುದು. ಆಮೇಲೆ ಪೆನಿಸಿಲಿಯಂ ನೊಟೇಟಂ ಬೇರ್ಪಡಿಸಿದರೆ ದ್ರಾವಣದಲ್ಲಿ ಪೆನಿಸಿಲಿನ್ ಇರುತ್ತದೆ.

ಈ ದ್ರಾವಣದಿಂದ ಪೆನಿಸಿಲಿನ್ನನ್ನು ಲೀನಕಾರಿಗಳಿಂದ ಸಂಗ್ರಹಿಸಬಹುದೆಂದು ರೈಸ್ಟ್ರಿಕ್ಟನು ತೋರಿಸಿದ್ದುದನ್ನು ಫ್ಲೋರಿಯೂ ಅವನ ಸಹಪಾಠಿಗಳೂ ಉಪಯೋಗಿಸಿಕೊಂಡು ಶುದ್ಧವಾದ ಪೆನಿಸಿಲಿನ್ ತಯಾರಿಸಿದರು. ಇದರ ತಯಾರಿಕೆಯಲ್ಲಿ ಲೀನಕಾರಿಗಳಿಂದ ಪೆನಿಸಿಲಿನ್ನನ್ನು ಸಂಗ್ರಹಿಸುವಾಗ ದ್ರಾವಣದ ಆಮ್ಲಶಕ್ತಿ ಮತ್ತು ತೀಕ್ಷ್ಣತೆಗಳಲ್ಲಿ ಬಹಳ ಎಚ್ಚರಿಕೆಯಿಂದಿರಬೇಕು. ಆಮ್ಲಶಕ್ತಿ ಒಂದು ಸ್ಥಿತಿಯಲ್ಲಿದ್ದರೆ ತಾನೇ ಪೆನಿಸಿಲಿನ್ ಲೀನಕಾರಿಯಲ್ಲಿ ಕರಗುತ್ತದೆ; ಅದರ ಗುಣವೂ ಬದಲಾಗುವುದಿಲ್ಲ. ತೀಕ್ಷ್ಣತೆಯು ಹೆಚ್ಚಾದ ಹಾಗೆಲ್ಲಾ ಇದರ ಪೂತಿನಾಶಕ ಶಕ್ತಿಯು ಕಡಮೆಯಾಗುತ್ತದೆ. ಆದುದರಿಂದ ಆದಷ್ಟು ಕಡಮೆ ತೀಕ್ಷ್ಣತೆಯಲ್ಲಿಯೇ ಅಂದರೆ ನೀರು ಮಂಜುಗಡ್ಡೆಯಾಗುವ ತೀಕ್ಷ್ಣತೆಯಲ್ಲಿ ಕೆಲಸಮಾಡಿ ಇದನ್ನು ಶುದ್ಧಿಮಾಡಬೇಕು. ಹೀಗೆ ಕೆಲಸಮಾಡಿ ಫ್ಲೋರಿ ಸಹೋದ್ಯೋಗಿಗಳು ಹೆಚ್ಚು ಶಕ್ತಿಯ ಪೆನಿಸಿಲಿನ್ ದ್ರಾವಣವನ್ನು ತಯಾರಿಸಿದರು. ಪೆನಿಸಿಲಿನ್ ಆಮ್ಲವಾದುದರಿಂದ ಇದನ್ನು ಲವಣರೂಪಕ್ಕೆ ತಿರುಗಿಸಿ ಘನಸ್ಥಿತಿಯ ಪೆನಿಸಿಲಿನ್ನನ್ನೂ ತಯಾರಿಸಿದರು.

ಪೆನಿಸಿಲಿನ್ ದ್ರವವು ಹೆಚ್ಚು ದಿವಸ ನಿಲ್ಲುವುದಿಲ್ಲ. ಪೆನಿಸಿಲಿನ್ ಲವಣವು ೧೦°c ಕೆಳಗೆ ಇಟ್ಟರೆ ೩-೬ ತಿಂಗಳ ವರೆಗೂ ಕೆಡದೆ ಇರುತ್ತದೆ. ಆಕ್ಸ್‌ಫರ್ಡ್ ಕೆಲಸಗಾರರು ತಯಾರಿಸಿದುದಕ್ಕಿಂತಲೂ ಉತ್ತಮವಾದ ಪೆನಿಸಿಲಿನ್ ಲವಣವು ಈಗ ಉಪಯೋಗದಲ್ಲಿದೆ. ಇದರ ಬಣ್ಣವು ಶುದ್ಧತೆಯನ್ನನುಸರಿಸಿ ಕಿತ್ತಿಳೇಹಣ್ಣಿನ ಬಣ್ಣದಿಂದ ಹಳದಿ ಮಿಶ್ರವಾದ ಬಿಳುಪಾಗಿರುತ್ತದೆ. ತಯಾರಿಕೆಯ ವಿಧಾನವು ಉತ್ತಮಗೊಂಡ ಹಾಗೆಲ್ಲಾ ಬಣ್ಣವಿಲ್ಲದ ಲವಣವನ್ನು ತಯಾರಿಸಬಹುದು. ಅನೇಕ ಬಗೆಯ ಪೆನಿಸಿಲಿನ್ ಲವಣಗಳನ್ನೂ ತಯಾರಿಸಬಹುದು. ಇವುಗಳಲ್ಲಿ ಸೋಡಿಯಂ ಲವಣವೇ ಸಾಧಾರಣವಾಗಿ ಉಪಯೋಗದಲ್ಲಿದೆ. ಕ್ಯಾಲ್ಸಿಯಂ ಲವಣವನ್ನೂ ಕೆಲವು ಸಂದರ್ಭಗಳಲ್ಲಿ ಉಪಯೋಗಿಸುವುದುಂಟು. ಈ ಲವಣಗಳನ್ನೇ ಸಾಮಾನ್ಯವಾಗಿ ಪೆನಿಸಿಲಿನ್ ಎಂದು ಕರೆಯುತ್ತಾರೆ. ಉಪಯೋಗಕ್ಕೆ ಮೊದಲು ಲವಣವನ್ನು ಭಟ್ಟಿ ಇಳಿಸಿದ್ದ ನೀರಿನಲ್ಲಿ ಕರಗಿಸಿ ತಕ್ಷಣ ಉಪಯೋಗಿಸಬೇಕು. ಇಲ್ಲದಿದ್ದರೆ ಗಾಳಿಯಲ್ಲಿರುವ ಕೆಲವು ಪದಾರ್ಥಗಳಿಂದ ಪೆನಿಸಿಲಿನ್ ಕೆಟ್ಟುಹೋಗುತ್ತದೆ.

ಪೆನಿಸಿಲಿನ್ ತಯಾರಿಸಿದ ಮೇಲೆ ಅದರ ಶುದ್ಧತೆಯನ್ನು ಶೀಘ್ರವಾಗಿ ನಿಷ್ಕರ್ಷಿಸುವ ವಿಧಾನವೊಂದನ್ನು ಆಕ್ಸ್‌ಫರ್ಡ್ ಕೆಲಸಗಾರರು ಕಂಡುಹಿಡಿಯಬೇಕಾಯಿತು. ಇದನ್ನು ಡಾ. ಹೀಟ್ಲಿ ಎಂಬವನು ಸಾಧಿಸಿದನು. ಅಣುಜೀವಿಗಳನ್ನು ಬೆಳೆಯಿಸುವ ಜೀವ್ಯಣುವರ್ಧಕವೊಂದನ್ನು ಒಂದು ತಟ್ಟೆಯಲ್ಲಿ ತಯಾರಿಸಿ ಅದರ ಮೇಲೆ ರಕ್ತ ವಿಷಮಾಡುವ ಏಕಾಣುಜೀವಿಯೊಂದನ್ನು ಬೆಳಸಬೇಕು. ಅನಂತರ ತಟ್ಟೆಯ ಮೇಲೆ ಎರಡು ಕಡೆಯೂ ಬಾಯಿ ಇರುವ ಗಾಜಿನ ಅಥವಾ ಪಿಂಗಾಣಿಯ ವರ್ತುಳ ನಾಳಗಳನ್ನಿಟ್ಟು ಅವುಗಳಲ್ಲಿ ಪೆನಿಸಿಲಿನ್ನೊಳಗೊಂಡ ದ್ರಾವಣವನ್ನು ಹಾಕಿ ೩೭° ಕಾವಿನಲ್ಲಿಟ್ಟರೆ ಪೆನಿಸಿಲಿನ್ ನಾಳಿಯಿಂದ ವಿಸ್ತರಿಸಿ ಅದರ ಸುತ್ತಲೂ ಇರುವ ಏಕಾಣುಜೀವಿಗಳನ್ನು ಬೆಳೆಯದ ಹಾಗೆ ಮಾಡುತ್ತದೆ. (ಚಿತ್ರ ೪.) ಅಣುಜೀವಿಯು ಬೆಳೆಯದ ವೃತ್ತದ ಅಡ್ಡಳತೆಯು ನಾಳದಲ್ಲಿರುವ ಪೆನಿಸಿಲಿನ್ನಿನ ಶಕ್ತಿಯನ್ನನುಸರಿಸುತ್ತದೆ. ಆದುದರಿಂದ ಒಂದು ನಾಳದಲ್ಲಿ ಗೊತ್ತಾದ ಶಕ್ತಿಯುಳ್ಳ ಪೆನಿಸಿಲಿನ್ ಇದ್ದರೆ ಇತರ ನಾಳಗಳಲ್ಲಿರುವುಗಳ ಶಕ್ತಿಯನ್ನು ಗೊತ್ತುಮಾಡಬಹುದು.

ಪೆನಿಸಿಲಿನ್ನಿನ ಶಕ್ತಿಯನ್ನು ಒಂದು ಪ್ರಮಾಣದಲ್ಲಿ ವ್ಯಕ್ತಪಡಿಸಬೇಕು. ಆಕ್ಸ್‌ಫರ್ಡಿನಲ್ಲಿ ಮೊದಲಿಟ್ಟುಕೊಂಡ ಕನಿಷ್ಠಪ್ರಮಾಣಕ್ಕೆ 'ಆಕ್ಸ್‌ಫರ್ಡ್ ಪ್ರಮಾಣ' ಅಥವಾ 'ಫ್ಲೋರಿ ಪ್ರಮಾಣ' ಎಂಬ ಹೆಸರಿದೆ. ಇದು ಒಂದು ಜಾತಿಯ ರಕ್ತವಿಷ ಮಾಡುವ ಏಕಾಣುಜೀವಿಯನ್ನು ನಾಶಮಾಡಲು ೧.೦*c.c.* ನೀರಿನಲ್ಲಿ ಕರಗಿಸಬೇಕಾದ ಪೆನಿಸಿಲಿನ್ ಆಗಿದೆ. ಅನೇಕ ಏಕಾಣುಜೀವಿಗಳ ಬೆಳವಣಿಗೆಯನ್ನು ತಡೆಯುವುದಕ್ಕೆ ೧*.c.c.* ಯಲ್ಲಿ ೦.೦೧-೦.೦೫ ಆಕ್ಸ್‌ಫರ್ಡ್ ಪ್ರಮಾಣವು ಸಾಕು. ಸಾಧಾರಣ ಶುದ್ಧವಾದ ಒಂದು ಮಿಲ್ಲಿಗ್ರಾಮ್ ಪೆನಿಸಿಲಿನ್ನಲ್ಲಿ ಸುಮಾರು ೧,೦೦೦ ಆಕ್ಸ್‌ಫರ್ಡ್ ಪ್ರಮಾಣಗಳಿವೆ. ಈ ಪ್ರಮಾಣವೇ ಇನ್ನೂ ರೂಢಿಯಲ್ಲಿದೆ. ಶುದ್ಧವಾದ ಪೆನಿಸಿಲಿನ್ ತಯಾರಾದ ಮೇಲೆ ಮಿಲ್ಲಿಗ್ರಾಮ್ ಕನಿಷ್ಠಪ್ರಮಾಣ ಉಪಯೋಗಕ್ಕೆ ಬರುವುದು.

ಫ್ಲೋರಿ ಮತ್ತು ಆತನ ಸಹೋದ್ಯೋಗಿಗಳು ಮೊದಲು ತಯಾರಿಸಿದ ಪೆನಿಸಿಲಿನ್ ಈಗ ತಿಳಿದಿರುವ ಶುದ್ಧತೆಯ ಪ್ರಕಾರ ಕೇವಲ ಶೇ. ೧ರಷ್ಟು ಪೆನಿಸಿಲಿನ್ನೊಳಗೊಂಡಿತ್ತು. ಆದರೂ ಇದು ೫,೦೦,೦೦೦ ದಲ್ಲಿ ೧ರಷ್ಟು ಸಾರಗುಂದಿಸಿದ ದ್ರಾವಣದಲ್ಲಿಯೂ—ಏಕಾಣುಜೀವಿಗಳ ಬೆಳವಣಿಗೆಯನ್ನು ತಡೆಯುತ್ತಿತ್ತು. ಪೆನಿಸಿಲಿನ್ನಿನ ಅಪಾರಶಕ್ತಿಯಿಂದ ಈ ಅಪಕ್ವ ಪೆನಿಸಿಲಿನ್ನೇ ಶುದ್ಧವಾದದ್ದೆಂದು ತಿಳಿದು ಫ್ಲೋರಿಯು ಅವನ ಕೆಲಸದಲ್ಲಿ ಇದನ್ನು ಉಪಯೋಗಿಸಿದನು. ಆದರೆ ಈಗ ತಯಾರಿಸಿರುವ ಶುದ್ಧವಾದ ಪೆನಿಸಿಲಿನ್ ೫ ಕೋಟಿಯಲ್ಲಿ ೧ ರಷ್ಟಿದ್ದರೂ ಏಕಾಣುಜೀವಿನಾಶಕ

ಶಕ್ತಿಯನ್ನು ಪಡೆದಿರುತ್ತದೆ. ಕೆಲವು ಅಣುಜೀವಿಗಳು ಇದು ೧೫ ಕೋಟಿಯಲ್ಲಿ ೧ರಷ್ಟಿದ್ದರೂ ನಾಶವಾಗುತ್ತವೆ. ಪೆನಿಸಿಲಿನ್ ಪ್ರಯೋಗಶಾಲೆಗಳಲ್ಲಿ ಮಾತ್ರ ಅಣು ಜೀವಿನಾಶಕವಾಗಿರುವುದಲ್ಲದೆ ಶರೀರವನ್ನು ಹೊಕ್ಕು ರೋಗೋತ್ಪತ್ತಿಮಾಡಿದ ಏಕಾಣುಜೀವಿಯನ್ನೂ ಜೀವಕಣಗಳಿಗೆ ತೊಂದರೆಯಾಗದಂತೆ ನಾಶಮಾಡಿ ರೋಗ ವನ್ನು ಹೋಗಲಾಡಿಸಬಲ್ಲುದೆಂಬುದನ್ನು ಫ್ಲೋರಿಯು ಮೊದಲು ಪರೀಕ್ಷಿಸಿದನು. ಇದಕ್ಕಾಗಿ ಇವನು ಪೆನಿಸಿಲಿನ್ನನ್ನು ಸ್ವಲ್ಪ ಸ್ವಲ್ಪವಾಗಿ ಹೆಚ್ಚಿಸುತ್ತಾ ಇಲಿಗಳಿಗೆ ಸೂಜಿಮದ್ದು ಕೊಟ್ಟನು. ೩೦ ಗ್ರಾಮ್ ತೂಕವುಳ್ಳ ಇಲಿಗೆ ೧೦ ಮಿಲ್ಲಿಗ್ರಾಮ್ ಪೆನಿಸಿಲಿನ್ ವಿಷಕಾರಿಯಾಗಿರಲಿಲ್ಲ; ಮತ್ತು ಸ್ವಲ್ಪ ಹೊತ್ತಿನಲ್ಲಿಯೇ ಅದು ಇಲಿಯ ಮೂತ್ರದಲ್ಲಿ ಕಾಣಿಸಿಕೊಂಡಿತು. ಅನಂತರ ಸಾವನ್ನುಂಟುಮಾಡುವ ಏಕಾಣುಜೀವಿ ಯೊಂದನ್ನು ೮ ಇಲಿಗಳಿಗೆ ಸೂಜಿಮದ್ದುಕೊಟ್ಟು ಅವುಗಳಲ್ಲಿ ನಾಲ್ಕಕ್ಕೆ ಆಗಾಗ್ಗೆ ಪೆನಿಸಿಲಿನ್ ಕೊಟ್ಟನು. ಪೆನಿಸಿಲಿನ್ ಕೊಡದ ಇಲಿಗಳು ೨೪ ಘಂಟೆಗಳೊಳಗೆ ಸತ್ತವು. ಪೆನಿಸಿಲಿನ್ ಚಿಕಿತ್ಸೆ ಪಡೆದವು ಬದುಕಿಕೊಂಡವು. ಈ ಫಲಿತಾಂಶದಿಂದ ಧೈರ್ಯಹೊಂದಿ ಫ್ಲೋರಿಯು ೧೯೪೧ನೆಯ ಫೆಬ್ರುವರಿ ೧೨ರಲ್ಲಿ ಮೊದಲನೆಯ ರೋಗಿಯನ್ನು ಪೆನಿಸಿಲಿನಿಂದ ಚಿಕಿತ್ಸೆಮಾಡಿದನು. ಇತರ ಔಷಧಗಳಿಂದ ಗುಣ ವಾಗದಿದ್ದ ಈ ರೋಗವು ಈ ಚಿಕಿತ್ಸೆಯಿಂದ ಎಷ್ಟೋ ಉತ್ತಮಗೊಂಡಿತು. ಆದರೆ ಬೇಕಾದಷ್ಟು ಪೆನಿಸಿಲಿನ್ ಇಲ್ಲದಿದ್ದುದರಿಂದ ಚಿಕಿತ್ಸೆ ಮಧ್ಯದಲ್ಲೇ ನಿಂತಿತು. ಅದ ರಿಂದ ರೋಗವು ಮರುಕಳಿಸಿ ರೋಗಿಯು ಸತ್ತನು. ಜೂನ್ ೧೯೪೧ರ ಹೊತ್ತಿಗೆ ಇಂತಹ ೬ ರೋಗಿಗಳು ಚಿಕಿತ್ಸೆಹೊಂದಿದರು. ಎಲ್ಲರೂ ಗುಣಮುಖವನ್ನು ತೋರಿಸಿ ದರು; ಇಬ್ಬರು ಪೆನಿಸಿಲಿನ್ ಮುಗಿದುಹೋದುದರಿಂದ ಸತ್ತರು. ಇದರಿಂದ ಪೆನಿಸಿ ಲಿನ್ ಏಕಾಣುಜೀವಿ ರೋಗಗಳಿಗೆ ಒಳ್ಳೆಯ ಔಷಧವೆಂಬುದು ವ್ಯಕ್ತವಾಯಿತು.

ಪೆನಿಸಿಲಿನ್ನಿನ ಈ ರೋಗಪರಿಹಾರಕ ಶಕ್ತಿಯನ್ನು ಇನ್ನೂ ಚೆನ್ನಾಗಿ ತಿಳಿಯಲು ಹೆಚ್ಚು ಪೆನಿಸಿಲಿನ್ ಬೇಕಾಗಿದ್ದಿತು. ಇಷ್ಟನ್ನು ಪ್ರಯೋಗಶಾಲೆಯಲ್ಲಿಯೇ ತಯಾರಿ ಸಲು ಸಾಧ್ಯವಾಗಲಿಲ್ಲ. ಕೈಗಾರಿಕೆ ರೂಪದಲ್ಲಿ ಇದನ್ನು ತಯಾರಿಸುವುದು ಸುಲಭ ವಲ್ಲ. ಗಾಳಿಯಲ್ಲಿರುವ ಪದಾರ್ಥಗಳು ಇದನ್ನು ನಾಶಮಾಡುತ್ತವೆ. ಆದ್ದರಿಂದ ಇದರ ತಯಾರಿಕೆಗೆ ಆಕ್ಸ್‌ಫರ್ಡ್ ಕೆಲಸಗಾರರು ಹೊಸ ಯಂತ್ರೋಪಕರಣಗಳನ್ನು ನಿರ್ಮಾಣಿಸಿಕೊಂಡರು. ಅದರಿಂದಲೂ ಆಗಿನ ಕೆಲಸಕ್ಕೆ ಬೇಕಾದಷ್ಟು ಪೆನಿಸಿಲಿನ್ ಒದಗಲಿಲ್ಲ. ಇದೇ ಕಾಲದಲ್ಲಿ ಇಂಗ್ಲೆಂಡಿನ ಮೇಲೆ ಜರ್ಮನಿಯು ವಿಶೇಷವಾಗಿ ವಿಮಾನ ದಾಳಿ ನಡೆಸುತ್ತಿದ್ದುದರಿಂದ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಪೆನಿಸಿಲಿನ್ನನ್ನು ಅಲ್ಲಿ ತಯಾರಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ ಫ್ಲೋರಿಯು ೧೯೪೧ನೆಯ ಜುಲೈಯಲ್ಲಿ

ಅಮೆರಿಕಾಕ್ಕೆ ಪ್ರಯಾಣಮಾಡಿ ಅಲ್ಲಿಯ ದೇಶೀಯ ಸಂಶೋಧನಾ ಸಂಘದ ಮುಂದೆ ಪೆನಿಸಿಲಿನ್ ಮೇಲೆ ವೈದ್ಯಕೀಯ ಸಂಶೋಧನೆ ನಡಸುವುದಕ್ಕೂ ಮತ್ತು ಅದನ್ನು ಹೆಚ್ಚಾಗಿ ತಯಾರುಮಾಡುವುದಕ್ಕೂ ಸಹಾಯವನ್ನು ಬೇಡಿದನು. ಆ ಸಂಘದ ಅಧ್ಯಕ್ಷನಾದ ಹ್ಯಾರಿಸನ್ ಮೂಲಕ ಇವನು ಅಮೆರಿಕಾ ಸರ್ಕಾರದ ವ್ಯವಸಾಯ ಇಲಾಖೆಯ ಏಕಾಣುಜೀವಿ ಸಂಶೋಧನಾಲಯದಲ್ಲಿ ಕೆಲಸಮಾಡಲು ಅನುಮತಿ ಪಡೆದನು. ಇಲ್ಲಿ ಹೆಚ್ಚು ಪೆನಿಸಿಲಿನ್ ತಯಾರಿಸಿದುದಲ್ಲದೆ ತಯಾರಿಕೆಯ ವಿಧಾನವನ್ನು ಬದಲಾಯಿಸಿ ಜಾಸ್ತಿ ಪೆನಿಸಿಲಿನ್ ಪಡೆಯುವ ಸ್ಥಿತಿಯನ್ನು ಕಂಡುಹಿಡಿದರು. ಕೆಲವು ತಿಂಗಳಲ್ಲಿಯೇ ಅಮೆರಿಕಾದ ಔಷಧ ತಯಾರಿಕಾಕರ್ತರು ಇದರ ತಯಾರಿಕೆಗೆ ದೊಡ್ಡ ಕಾರ್ಖಾನೆಗಳನ್ನು ಸ್ಥಾಪಿಸಿದರು. ೧೯೪೨ನೆಯ ಮಾರ್ಚಿ ೧೪ರಲ್ಲಿ ಅಮೆರಿಕಾದಲ್ಲಿ ಮೊದಲನೆಯ ರೋಗಿಯು ಪೆನಿಸಿಲಿನ್ ಚಿಕಿತ್ಸೆ ಹೊಂದಿದನು.

ಫ್ಲೋರಿಯು ೧೯೪೧ನೆಯ ಸೆಪ್ಟೆಂಬರಲ್ಲಿಯೇ ಇಂಗ್ಲೆಂಡಿಗೆ ಹಿಂದಿರುಗಿದನು. ಹೀಟ್ಲೆಯು ಅಮೆರಿಕಾದಲ್ಲಿಯೇ ಇನ್ನು ಒಂದು ವರ್ಷಕಾಲ ಇದ್ದುಕೊಂಡು ಪೆನಿಸಿಲಿನ್ನಿನ ತಯಾರಿಕೆಯ ಮೇಲ್ವಿಚಾರಣೆಯಲ್ಲಿದ್ದನು. ಈ ಕಾಲದಲ್ಲಿ ಚೈನ್ ಮೊದಲಾದವರ ಸಹಾಯದಿಂದ ಫ್ಲೋರಿಯು ಶುದ್ಧವಾದ ಪೆನಿಸಿಲಿನ್ ತಯಾರಿಸುವುದರಲ್ಲಿ ಕೆಲಸಮಾಡಿದನು. ಇದರ ಪರಿಣಾಮವಾಗಿ ಶುದ್ಧವಾದ ಅಂದರೆ ಮಿಲ್ಲಿಗ್ರಾಮಿಗೆ ೧,೦೦೦ ಆಕ್ಸ್‌ಫರ್ಡ್ ಪರಿಮಾಣವುಳ್ಳ ಪೆನಿಸಿಲಿನ್ ತಯಾರಿಸಿದನು. ಈಗ ಪೆನಿಸಿಲಿನ್ನನ್ನು ಹರಳಿನ ರೂಪದಲ್ಲಿ ತಯಾರಿಸಿದೆ. ಇದರಿಂದ ಇದರ ಶುದ್ಧತೆಯ ಗುರಿಯನ್ನು ಮುಟ್ಟಿದಂತೆಯೇ ಆಗಿದೆ. ಇದು ಮಿಲ್ಲಿಗ್ರಾಮಿಗೆ ೧,೬೫೦, ೨,೦೦೦ ಆಕ್ಸ್‌ಫರ್ಡ್ ಪರಿಮಾಣವುಳ್ಳದ್ದಾಗಿದೆ. ಇಷ್ಟು ಶುದ್ಧತೆಯ ಪದಾರ್ಥವನ್ನು ವೈದ್ಯಕೀಯದಲ್ಲಿ ಉಪಯೋಗಿಸುವ ಪ್ರಮೇಯವಿಲ್ಲ. ಮತ್ತು ಇದರಿಂದ ಚಿಕಿತ್ಸೆ ತುಟ್ಟಿಯೂ ಆಗುತ್ತದೆ. ಪೆನಿಸಿಲಿನ್ ಶುದ್ಧತೆ ಜಾಸ್ತಿಯಾದ ಹಾಗೆಲ್ಲಾ ಅದರ ವಿಷಸ್ವಭಾವವು ಕಡಮೆಯಾಗುತ್ತದೆ. ಶುದ್ಧವಾದುದನ್ನು ೧೮ ಗ್ರಾಮ್ ತೂಕದ ಇಲಿಗೆ ೩೦ ಮಿಲ್ಲಿಗ್ರಾಮ್‌ಗಳಷ್ಟು ಕೊಟ್ಟರೂ ದೋಷ ಕಾಣಲಿಲ್ಲ. ಇದಲ್ಲದೆ ಫ್ಲೋರಿಯು ಈ ಕಾಲದಲ್ಲಿ ಡಾಕ್ಟರಾದ ಅವನ ಹೆಂಡತಿಯ ಮತ್ತು ಇತರರ ಸಹಾಯದಿಂದ ಏಕಾಣುಜೀವಿ ರೋಗಿಗಳಿಗೆ ಪೆನಿಸಿಲಿನ್ನಿನ ಚಿಕಿತ್ಸಾ ವಿಧಾನವನ್ನೂ, ಅದು ಯಾವ ಯಾವ ರೋಗಗಳಲ್ಲಿ ಗುಣಕಾರಿ ಎಂಬುದನ್ನೂ ಯಾವ ರೀತಿಯಲ್ಲಿ ಏಕಾಣುಜೀವಿಗಳನ್ನು ನಾಶಮಾಡುವುದೆಂಬುದನ್ನೂ ಕಂಡುಹಿಡಿದನು. ಚೈನ್ ಇದೇ ಕಾಲದಲ್ಲಿ ಪೆನಿಸಿಲಿನ್ನಿನ ರಸಾಯನ ಸ್ವರೂಪದ ಮೇಲೆ ಕೆಲಸಮಾಡಿ ಅದರ ಸ್ವಭಾವವನ್ನು ಬಹಳಮಟ್ಟಿಗೆ ನಿರ್ಧರಿಸಿದನು.

ಇಂಗ್ಲೆಂಡಿನ ಯುದ್ಧ ಕಚೇರಿಯವರು ೧೯೪೩ ನೆಯ ಬೇಸಗೆಯಲ್ಲಿ ಫ್ಲೋರಿಯನ್ನು ಸೇನೆಯ ವೈದ್ಯಕೀಯ ಮುಖ್ಯಾಧಿಕಾರಿಯೊಡನೆ ಯುದ್ಧಗಾಯಗಳಲ್ಲಿ ಪೆನಿಸಿಲಿನ್ನಿನ ಪ್ರಯೋಜನವನ್ನು ತಿಳಿಯುವುದಕ್ಕೆ ಉತ್ತರ ಆಫ್ರಿಕಾಕ್ಕೆ ಕಳುಹಿಸಿದರು. ಮೂರು ತಿಂಗಳ ನಂತರ ಅವರು ಹಿಂದಿರುಗಿ ಮಾಂಸಖಂಡಗಳಲ್ಲಿಯೇ ಆಗಲಿ ತಲೆಯಲ್ಲೇ ಆಗಲಿ ಎಂತಹ ದೊಡ್ಡ ಗಾಯವಾಗಿದ್ದರೂ ಗಾಯವಾದ ತಕ್ಷಣ ಪೆನಿಸಿಲಿನ್ ಚಿಕಿತ್ಸೆಮಾಡಿದರೆ ಗುಣವಾಗುತ್ತದೆ ಎಂದು ವರದಿಮಾಡಿದರು. ಇತ್ತೀಚಿನ ಕೆಲಸಗಳಿಂದ ಇವರು ವರದಿಮಾಡಿದುದಕ್ಕಿಂತಲೂ ಪೆನಿಸಿಲಿನ್ ಹೆಚ್ಚು ಗುಣಕಾರಿಯೆಂಬುದು ವ್ಯಕ್ತವಾಗಿದೆ. ಉತ್ತರ ಆಫ್ರಿಕಾದಿಂದ ಹಿಂದಿರುಗಿದ ತಕ್ಷಣ ರಷ್ಯಾದವರು ಫ್ಲೋರಿಯನ್ನು ಕರೆಯಿಸಿಕೊಂಡರು. ೧೯೪೪ ನೆಯ ಪ್ರಾರಂಭದಲ್ಲಿ ಇವನು ಮಾಸ್ಕೋಗೆ ಹೋಗಿ ಪೆನಿಸಿಲಿನ್ ಗುಣಗಳನ್ನು ವಿವರಿಸಿ ಯುದ್ಧಗಾಯಗಳಲ್ಲಿ ಅದನ್ನು ಉಪಯೋಗಿಸುವ ವಿಧಾನವನ್ನು ತಿಳಿಸಿದನು. ಅಲ್ಲಿಂದ ಇಂಗ್ಲೆಂಡಿಗೆ ಬಂದ ಮೇಲೆ ಇವನ ಜನ್ಮಸ್ಥಳವಾದ ಆಸ್ಟ್ರೇಲಿಯಾವು ಇವನ ಸಹಾಯವನ್ನು ಅಪೇಕ್ಷಿಸಿತು.

ಅಮೆರಿಕಾ ಮತ್ತು ಇಂಗ್ಲೆಂಡುಗಳಲ್ಲಿ ತಯಾರಾದ ಪೆನಿಸಿಲಿನ್ ಎಲ್ಲಾ ಪ್ರಾರಂಭದಲ್ಲಿ ಯುದ್ಧ ಆವಶ್ಯಕತೆಗಳಿಗೇ ಉಪಯೋಗವಾಗುತ್ತಿತ್ತು. ಇದು ಈಗ ಹೇರಳವಾಗಿ ತಯಾರಾಗಿ ಎಲ್ಲಾ ದೇಶಗಳಲ್ಲಿಯೂ ಎಲ್ಲರಿಗೂ ಸಿಕ್ಕುತ್ತಿದೆ. ಮುಖ್ಯವಾಗಿ ಇದು ತಯಾರಿಕೆಯಾಗುವುದು ಅಮೆರಿಕಾದಲ್ಲಿ. ಅಲ್ಲಿ ಸುಮಾರು ೩೦ ಪೆನಿಸಿಲಿನ್ ಕಾರ್ಖಾನೆಗಳಿವೆ. ಕೆನಡಾದಲ್ಲಿ ೩ ಕಾರ್ಖಾನೆಗಳಿವೆ. ಇಂಗ್ಲೆಂಡಿನಲ್ಲಿ ಐ.ಸಿ.ಐ. ಕಂಪನಿಯವರು ಇದನ್ನು ತಯಾರಿಸುತ್ತಾರೆ. ಅಮೆರಿಕಾದ ಕಾರ್ಖಾನೆಗಳು ಸುಮಾರು ೭.೫ ಕೋಟಿ ರೂಪಾಯಿಗಳನ್ನು ಇದರ ತಯಾರಿಕೆಯಲ್ಲಿ ವಿನಿಯೋಗಿಸಿವೆ. ಕೆಲವು ದೊಡ್ಡ ಕಂಪನಿಗಳು ೩೦ ಲಕ್ಷ ರೂಪಾಯಿಗಳ ಯಂತ್ರೋಪಕರಣಗಳನ್ನೇ ಅಳವಡಿಸಿವೆ. ಪೆನಿಸಿಲಿಯಂ ನೊಟೇಟಂ ಬೆಳೆಯಲು ಇರುವ ತೊಂದರೆಗಳೂ, ಅದು ಬೆಳೆದ ದ್ರಾವಣದಲ್ಲಿ ಇರುವ ಪೆನಿಸಿಲಿನ್ನಿನ ವಿರಳತೆಯೂ ಮತ್ತು ಅಸ್ಥಿರ ಸ್ವಭಾವವೂ ಇದನ್ನು ತಯಾರಿಸುವ ಕಾರ್ಖಾನೆಗೆ ಬೀಳುವ ಹೆಚ್ಚು ಬಂಡವಾಳಕ್ಕೆ ಕಾರಣವಾಗಿವೆ. ೧೯೪೧ ರಲ್ಲಿ ಇದನ್ನು ತಯಾರಿಸಲು ಪ್ರಾರಂಭಿಸಿದ ಅಮೆರಿಕವು ೧೯೪೩ ನೆಯ ಜನವರಿಯಿಂದ ಮೇವರೆಗೆ ೪೦ ಕೋಟಿ ಪ್ರಮಾಣಗಳನ್ನು ತಯಾರಿಸಿತು. ಅದೇ ಡಿಸೆಂಬರಲ್ಲಿ ಇದು ೯೨೦ ಕೋಟಿಗೂ ಮತ್ತು ೧೯೪೪ ನೆಯ ಮಾರ್ಚಿಯಲ್ಲಿ ೪,೦೦೦ ಕೋಟಿಗೂ ಏರಿತು. ಎಲ್ಲಾ ಕಾರ್ಖಾನೆಗಳೂ ಪೂರ್ತಿ ಕೆಲಸಮಾಡುವ ಸ್ಥಿತಿಗೆ ಬಂದಾಗ ತಿಂಗಳಿಗೆ ೨೦,೦೦೦ ಕೋಟಿ

ಪ್ರಮಾಣದಷ್ಟು ತಯಾರಾಯಿತು. ಇದು ತಿಂಗಳಿಗೆ ಸರಾಸರಿ ೨.೫ ಲಕ್ಷ ರೋಗಿಗಳ ಚಿಕಿತ್ಸೆಗೆ ಸಾಕು. ತಯಾರಿಕೆಯು ಜಾಸ್ತಿಯಾದ ಹಾಗೆಲ್ಲಾ ಪೆನಿಸಿಲಿನ್ನಿನ ಬೆಲೆಯೂ ಕ್ರಮೇಣ ಕಡಮೆಯಾಯಿತು. ಒಂದು ಲಕ್ಷ ಪ್ರಮಾಣಗಳ ಬೆಲೆ ಸುಮಾರು ೭೦ ರೂಪಾಯಿಗಳಿಂದ ೧೧ ರೂಪಾಯಿಗಳಿಗೆ ಇಳಿದಿದೆ.

ಪೆನಿಸಿಲಿನ್ ಎಲ್ಲಾ ರೋಗಗಳನ್ನೂ ಗುಣಪಡಿಸುವಂಥ ಸಿದ್ಧೌಷಧವೆಂಬ ತಪ್ಪು ತಿಳಿವಳಿಕೆ ಬಹಳವಾಗಿದೆ. ಎಲ್ಲಾ ಏಕಾಣುಜೀವಿ ರೋಗಗಳನ್ನೂ ಗುಣಪಡಿಸುವ ಶಕ್ತಿ ಇದಕ್ಕಿಲ್ಲ. ಈ ವಿಚಾರವಾಗಿ ಬಹಳ ಕೆಲಸ ನಡೆದು ಕೆಲವು ಜಾತಿಯ ಏಕಾಣುಜೀವಿಗಳಿಂದಾದ ರೋಗಗಳನ್ನು ಮಾತ್ರ ಪೆನಿಸಿಲಿನ್ ಗುಣಪಡಿಸಬಲ್ಲುದೆಂದು ಸಿದ್ಧಪಡಿಸಿದೆ. ಇನ್ನೂ ಸಂಶೋಧನೆ ನಡೆದು ಈ ವಿಷಯದಲ್ಲಿ ಪೆನಿಸಿಲಿನ್ನಿನ ನಿಜವಾದ ಸ್ಥಾನವನ್ನು ನಿರ್ಧರಿಸಬೇಕಾಗಿದೆ. ಆದ್ದರಿಂದ ಎಲ್ಲಾ ರೋಗಗಳಿಗೂ ಇದನ್ನು ಉಪಯೋಗಿಸುವುದರಿಂದ ಫಲವಿಲ್ಲ. ನ್ಯೂಮೋನಿಯಾ, ಗೊನೇರಿಯಾ ಮೊದಲಾದ ರೋಗಗಳು ಇದರಿಂದ ಬೇಗ ಮತ್ತು ಸುಲಭವಾಗಿ ಗುಣವಾಗುತ್ತವೆ; ಕಾಲರಾ, ಪ್ಲೇಗು, ಆಮಶಂಕೆ, ಕ್ಷಯ, ಮಲೇರಿಯಾ ಮೊದಲಾದುವು ಗುಣವಾಗುವುದಿಲ್ಲ. ಹುಣ್ಣು ಮತ್ತು ಸುಟ್ಟ ಗಾಯಗಳಿಗೆ ಪೆನಿಸಿಲಿನ್ ನಿಜವಾಗಿಯೂ ಸಿದ್ಧೌಷಧ. ಇತರ ಪೂತಿನಾಶಕಗಳು ರಕ್ತ ಮತ್ತು ಕೀವುಗಳಿಂದ ತಾವೇ ನಾಶವಾಗಿ ರೋಗವನ್ನು ವಾಸಿಮಾಡಲಾರವು. ಪೆನಿಸಿಲಿನ್ ಇವುಗಳ ಜೊತೆಯಲ್ಲಿ ತನ್ನ ಶಕ್ತಿಯನ್ನು ಕಳೆದುಕೊಳ್ಳದಿರುವುದರಿಂದ ಈ ರೋಗಗಳನ್ನು ಗುಣಪಡಿಸಲು ಬಹಳ ಉತ್ತಮವಾದುದು. ಇದರ ಈ ಗುಣದಿಂದಲೇ ಈಗಿನ ಯುದ್ಧದಲ್ಲಿ ಗಾಯಗಳಿಂದಾದ ಸಾವು ನೋವು ಬಹಳವಾಗಿ ಕಡಮೆಯಾಗಿವೆ.

ಪೆನಿಸಿಲಿನ್ನನ್ನು ಬಾಯಿ ಮೂಲಕ ಸೇವನೆ ಮಾಡಲಾಗುವುದಿಲ್ಲ. ಇದು ಜಠರದಲ್ಲಿರುವ ಆಮ್ಲದಿಂದ ನಾಶವಾಗುತ್ತದೆ. ಆದುದರಿಂದ ಇದನ್ನು ಸೂಜಿಯ ಮದ್ದಾಗಿ ಉಪಯೋಗಿಸಬೇಕು. ಮಾಂಸಖಂಡಕ್ಕೆ ಅಥವಾ ರಕ್ತನಾಳಕ್ಕೆ ನೇರವಾಗಿ ಇದನ್ನು ಸೂಜಿಮದ್ದಾಗಿ ಕೊಡಬಹುದು. ಹೀಗೆ ಶರೀರವನ್ನು ಸೇರಿದ ಪೆನಿಸಿಲಿನ್ ರಕ್ತದ ಮೂಲಕ ಶರೀರವನ್ನು ಸುತ್ತಿ ಏಕಾಣುಜೀವಿಯು ಇರುವ ಕಡೆ ಅದನ್ನು ನಾಶಮಾಡುತ್ತದೆ. ಆದರೆ ರಕ್ತವು ಮೂತ್ರಕೋಶಕ್ಕೆ ಬಂದಾಗ ಇತರ ಕಲ್ಮಷಗಳೊಡನೆ ಪೆನಿಸಿಲಿನ್ನೂ ಹೊರಗೆ ಬರುತ್ತದೆ. ಶರೀರದಲ್ಲಿ ಇದರ ಸಾರವನ್ನು ಒಂದೇ ಸ್ಥಿತಿಯಲ್ಲಿಡಬೇಕಾದರೆ ಆಗಾಗ್ಗೆ ಪೆನಿಸಿಲಿನ್ ಸೂಜಿಮದ್ದು ಕೊಡಬೇಕು. ಕೆಲವುವೇಳೆ ಅವಿಚ್ಛಿನ್ನವಾಗಿಯೂ ಕೊಡಬೇಕಾಗುತ್ತದೆ. ಇದಕ್ಕಾಗಿ ಹೊಸ ಸೂಜಿ ಮದ್ದು ಕೊಡುವ ವಿಧಾನವನ್ನು ಕಂಡುಹಿಡಿದಿದ್ದಾರೆ. ಬರಿಯ

ಸೂಜಿ ಮದ್ದಿನ ಮೂಲಕವೇ ಇದನ್ನು ಉಪಯೋಗಿಸಬೇಕಾಗಿರುವುದರಿಂದ ಇದರ ಉಪಯೋಗವು ಹೆಚ್ಚು ಪ್ರಶಸ್ತಿಗೆ ಬರುವುದು ಸ್ವಲ್ಪ ಕಷ್ಟ. ಗಂಧಕ ಔಷಧಗಳ ಪ್ರಾಮುಖ್ಯತೆಗೆ ಅವುಗಳನ್ನು ಬಾಯಿಮೂಲಕ ಉಪಯೋಗಿಸುಬಹುದಾಗಿರುವುದೇ ಕಾರಣವಾಗಿದೆ. ಪೆನಿಸಿಲಿನ್ನು ಮುಲಾಮುಗಳ ಮೂಲಕವೂ ಗಾಯಗಳಿಗೆ ಹಚ್ಚಿ ಗುಣಪಡಿಸಬಹುದು. ಒಂದು ಸಾರಿ ಗಾಯವನ್ನು ತೊಳೆದು ಸರಿಯಾದ ಪೆನಿಸಿಲಿನ್ ಮುಲಾಮು ಹಚ್ಚಿ ಗಾಯವನ್ನು ಮುಚ್ಚಿದರೆ ಇತರ ಔಷಧಗಳಂತೆ ಅದನ್ನು ಆಗಾಗ್ಗೆ ತೆಗೆದು ಬೇರೆ ಹಾಕಬೇಕಾಗಿಲ್ಲ. ಪೆನಿಸಿಲಿನ್ ಏಕಾಣುಜೀವಿಗಳನ್ನು ನೇರವಾಗಿ ಕೊಲ್ಲುವುದಿಲ್ಲ. ಅವುಗಳ ಬೆಳವಳಿಕೆಯನ್ನು ತಡೆದು ಜೀವಕಣಗಳು ಬೆಳೆಯುವುದಕ್ಕೆ ಸಹಾಯಮಾಡಿ ಅವುಗಳಿಂದಲೇ ಏಕಾಣುಜೀವಿಗಳನ್ನು ನಾಶಮಾಡಿಸುತ್ತವೆ.

ಹೆಚ್ಚಾಗಿ ತಯಾರುಮಾಡುತ್ತಿರುವುದರಿಂದ ಪೆನಿಸಿಲಿನ್ ಬೆಲೆ ಮೊದಲಿಗಿಂತ ಕಡಮೆಯಾಗಿದ್ದರೂ ಇನ್ನೂ ಅಧಿಕವಾಗಿಯೇ ಇದೆ. ಒಂದು ಪೌಂಡಿಗೆ ಸುಮಾರು ೧ ಲಕ್ಷ ರೂಪಾಯಿಗಳಾಗುತ್ತದೆ. ಇಷ್ಟು ಹೆಚ್ಚು ಬೆಲೆ ಇದು ಅತ್ಯಲ್ಪ ಪ್ರಮಾಣಗಳಲ್ಲಿಯೇ ರೋಗಗಳನ್ನು ಗುಣಮಾಡುವುದರಿಂದ ಚಿಕಿತ್ಸೆಗೆ ಹೆಚ್ಚು ವೆಚ್ಚವಾಗುವುದಿಲ್ಲ. ಸ್ಯೂಮೋನಿಯ ಅಥವಾ ಗೊನೇರಿಯಾ ರೋಗಗಳನ್ನು ವಾಸಿಮಾಡಿಕೊಳ್ಳಲು ಸುಮಾರು ೨೨—೪೦ ರೂಪಾಯಿಗಳ ಪೆನಿಸಿಲಿನ್ ಬೇಕಾಗುತ್ತದೆ. ರಕ್ತವಿಷವಾಗಿದ್ದರೆ ೧೨೦ ರೂಪಾಯಿಗಳ ಪೆನಿಸಿಲಿನ್ ಬೇಕು. ಇದು ನಮ್ಮಂತಹ ಬಡದೇಶಕ್ಕೆ ಹೆಚ್ಚು ಬೆಲೆಯದಾಯಿತು. ಇದೇ ಬೆಲೆಯಿದ್ದರೆ—ಇದು ಬೇಕಾದವರ ಸಹಾಯಕ್ಕೆಲ್ಲಾ ಬರುವುದಿಲ್ಲ. ಎಲ್ಲರಿಗೂ ಸಿಕ್ಕುವ ಹಾಗೆ ಮಾಡಬೇಕಾದರೆ ಸುಲಭ ಬೆಲೆಯಲ್ಲಿ ತಯಾರಿಸಬೇಕು. ಈಗ ತಯಾರಾಗುತ್ತಿರುವ ವಿಧಾನದಿಂದಲೇ ಇದನ್ನು ಪಡೆಯಬೇಕಾದಲ್ಲಿ ಬೆಲೆಯೇನೂ ಕಡಮೆಯಾಗುವುದಿಲ್ಲ. ಹಾಗೆ ಕಡಮೆ ದರದಲ್ಲಿ ತಯಾರಿಸಬೇಕಾದರೆ ಪೆನಿಸಿಲಿನ್ನಿನ ರಸಾಯನ ಸ್ವರೂಪವನ್ನು ತಿಳಿದು ಪೆನಿಸಿಲಿಯಂ ನೊಟೇಟಂ ಇಂದ ಆಗುವ ಕೆಲಸವನ್ನು ರಸಾಯನಶಾಸ್ತ್ರಜ್ಞನೇ ಪ್ರಯೋಗಶಾಲೆಯಲ್ಲಿ ಮಾಡುವ ಹಾಗಾಗಬೇಕು. ಅದಾದಲ್ಲಿ ಅಮೆರಿಕದ ೨೦ ಕಾರ್ಖಾನೆಗಳು ದಿವಸ ಒಂದಕ್ಕೆ ತಯಾರಿಸುವ ಒಂದುವರೆ ಪೌಂಡು ಪೆನಿಸಿಲಿನ್ನನ್ನು ಒಂದು ಸಣ್ಣ ಪ್ರಯೋಗಶಾಲೆಯಲ್ಲಿ ಕೆಲವು ಘಂಟೆಗಳಲ್ಲಿ ತಯಾರಿಸಬಹುದು. ಈ ಸಂಬಂಧವಾಗಿ ಕೆಲಸ ನಡೆಯುತ್ತಿದೆ. ಇದು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ. ಸ್ವಾಭಾವಿಕವಾಗಿ ಸಿಕ್ಕುವ ಪದಾರ್ಥಗಳು ಜನೋಪಯೋಗವಾಗಿದ್ದಲ್ಲಿ ಅವುಗಳ ರಸಾಯನ ಸ್ವರೂಪವು ಗೊತ್ತಾದ ಮೇಲೆ

ಅವುಗಳನ್ನು ಇತರ ಪದಾರ್ಥಗಳಿಂದ ಪ್ರಯೋಗಶಾಲೆಗಳಲ್ಲಾಗಲಿ ಕಾರ್ಖಾನೆಗಳಲ್ಲಾಗಲಿ ತಯಾರಿಸುವುದು ರಸಾಯನಶಾಸ್ತ್ರಜ್ಞನಿಗೆ ದೊಡ್ಡ ವಿಷಯವಲ್ಲ. ಸ್ವಾಭಾವಿಕವಾಗಿ ಬಂದ ಪದಾರ್ಥಕ್ಕಿಂತಲೂ ಹೆಚ್ಚು ಗುಣವುಳ್ಳ ವಸ್ತುವನ್ನು ಪಡೆಯಬಹುದು. ಉದಾಹರಣೆಗೆ ಕ್ವಿನೀನು ಮಲೇರಿಯಾ ಜ್ವರಕ್ಕೆ ಒಳ್ಳೆಯ ಔಷಧವೆಂದು ಗೊತ್ತಾದಮೇಲೆ ರಸಾಯನಶಾಸ್ತ್ರಜ್ಞರು ಅದನ್ನು ಮೀರಿಸುವಂಥ ಪ್ಲಾಸ್ಮೋಕ್ವಿನ್ ಮತ್ತು ಅಟೆಬ್ರಿನ್‌ಗಳನ್ನು ತಯಾರಿಸಿದ್ದಾರೆ. ಈ ಮಲೇರಿಯಾವನ್ನು ಹೋಗಲಾಡಿಸಲು ನಾವು ಸಿಂಕೋನ ಗಿಡಗಳ ಬೆಳವಣಿಗೆಗೇ ಕಾಯಬೇಕಾಗಿಲ್ಲ. ಅದರಂತೆಯೇ ಪೆನಿಸಿಲಿಯಂ ನೊಟೇಟಂ ಇಲ್ಲದೆ ನಾವು ಪೆನಿಸಿಲಿನ್ನನ್ನು ಸುಲಭ ಬೆಲೆಯಲ್ಲಿ ತಯಾರುಮಾಡಲು ಸಾಧ್ಯವಾಗಬಹುದು.

ಅಗ್ಗವಾದ ಪೆನಿಸಿಲಿನ್ ತಯಾರಿಸಿದ ಮೇಲೆ ಅದರ ಗುಣಗಳನ್ನು ಮಾರ್ಪಡಿಸಿ ಉಪಯೋಗಗಳನ್ನು ಹೆಚ್ಚಿಸಿಕೊಳ್ಳಬಹುದು. ಇದರಿಂದ ಇತರ ಔಷಧಗಳಂತೆ ಇದನ್ನು ಬಾಯಿಯ ಮೂಲಕ ಸೇವಿಸಲು ಸಾಧ್ಯವಾಗಬಹುದು. ಈಗಿರುವಂತೆ ಅಸ್ಥಾಯಿಯಾಗಿರದೆ ಹೆಚ್ಚುಕಾಲ ನಿಲ್ಲುವ ಪೆನಿಸಿಲಿನ್ ಪಡೆಯಬಹುದು. ಈಗ ಇದರಿಂದ ಗುಣವಾಗದ ಪ್ಲೇಗು, ಕಾಲರಾ, ವಿಷಮಜ್ವರಗಳನ್ನು ವಾಸಿಮಾಡುವಂಥ ಪೆನಿಸಿಲಿನ್ ಪಡೆಯಬಹುದು. ಇದಕ್ಕೆಲ್ಲಾ ಹೆಚ್ಚಿನ ಸಂಶೋಧನೆ ನಡೆಯಬೇಕು ; ನಡೆಯುತ್ತಲೂ ಇದೆ. ಇದಕ್ಕೆ ಪೆನಿಸಿಲಿನ್ನಿನ ಗುಣಗಳನ್ನು ಉತ್ತಮಗೊಳಿಸುವುದಲ್ಲದೆ ಇದರ ಜಾತಿಗೆ ಸೇರದ ಮತ್ತು ಇದಕ್ಕಿಂತಲೂ ಉತ್ತಮವಾದ ಪದಾರ್ಥಗಳನ್ನು ಕಂಡುಹಿಡಿಯಬೇಕಾಗುವುದು. ಮುಂದೆ ಯಾವುದೇ ಬರಲಿ ಪೆನಿಸಿಲಿನ್ನನ್ನು ಕಂಡುಹಿಡಿದದ್ದೂ ಮತ್ತು ಅದರ ಬೆಳವಣಿಗೆಯೂ ವೈದ್ಯಶಾಸ್ತ್ರದಲ್ಲಿ ಚಿರಸ್ಥಾಯಿಯಾಗಿ ನಿಲ್ಲುತ್ತದೆ. ಇದಕ್ಕೆ ಕಾರಣಕರ್ತರಾದ ಫ್ಲೆಮಿಂಗ್, ಫ್ಲೋರಿ ಮತ್ತು ಚೈನ್‌ರವರುಗಳಿಗೆ ೧೯೪೫ ನೆ ವರ್ಷದ ನೊಬೆಲ್ ಬಹುಮಾನವು ದೊರೆತದ್ದು ಅವರಿಗೆ ಸಲ್ಲತಕ್ಕ ಮರ್ಯಾದೆಯೇ ಆಗಿದೆ.

ಎಂ. ಷಡಕ್ಷರಸ್ವಾಮಿ

ಚಿತ್ರಗಳ ವಿವರ

ಚಿತ್ರ ೧.—ಫ್ಲೆಮಿಂಗನು ಪೆನಿಸಿಲಿನ್ನಿನ ಗುಣವನ್ನು ಕಂಡುಹಿಡಿದ ಮೂಲ ತಟ್ಟೆ.

ಚಿತ್ರದಲ್ಲಿ ಕಾಣುವ ಸಣ್ಣ ಚುಕ್ಕೆಗಳು ಚೆನ್ನಾಗಿ ಬೆಳೆದ ರಕ್ತ ವಿಷ ಮಾಡುವ ಏಕಾಣುಜೀವಿಗಳ ಸಮುದಾಯ. ದೊಡ್ಡ ಚುಕ್ಕೆಯು ಗಾಳಿಯಿಂದ ಬಂದು ಬೆಳೆದ ಸೂಕ್ಷ್ಮದರ್ಶನೀಯ ಜೀವಿ. ತಟ್ಟೆಯಲ್ಲೆಲ್ಲಾ ಒಂದೇ ಸಮನಾಗಿ ಬೆಳೆದಿದ್ದ ಏಕಾಣುಜೀವಿಗಳು ಸೂಕ್ಷ್ಮದರ್ಶನೀಯ ಜೀವಿಯ ಸುತ್ತಲೂ ಸುಖಪಾಗಿರುವುದನ್ನು ನೋಡಬಹುದು.

ಚಿತ್ರ ೨.—ಪ್ರಯೋಗಶಾಲೆಗಳಲ್ಲಿ ಪೆನಿಸಿಲಿಯಂ ನೊಟೇಟಂ ಬೆಳೆಯುವ ವಿಧಾನ.

ದ್ರಾವಣದ ಮೇಲೆ ಬಿಳುಪಾಗಿ ತೇಲುತ್ತಿರುವುದು ಪೆನಿಸಿಲಿಯಂ ನೊಟೇಟಂ. ಅದು ಪೂರ್ತಿ ಬೆಳೆದನಂತರ ಪೆನಿಸಿಲಿನ್ ದ್ರಾವಣದಲ್ಲಿರುತ್ತದೆ. ನೊಟೇಟಂ ಬೇರ್ಪಡಿಸಿ ಪೆನಿಸಿಲಿನ್ ಪಡೆಯಬಹುದು.

ಚಿತ್ರ ೩.—ಚೆನ್ನಾಗಿ ಬೆಳೆದ ಪೆನಿಸಿಲಿಯಂ ನೊಟೇಟಂ 1½ ಯಷ್ಟು ವಿಸ್ತರಿಸಿದುದು.


ಚಿತ್ರ ೪.—ಪೆನಿಸಿಲಿನ್ ಶಕ್ತಿಯನ್ನು ಪರೀಕ್ಷಿಸುವ ವಿಧಾನ.

ಏಕಾಣುಜೀವಿಯು ಬೆಳೆದಿರುವ ತಟ್ಟೆಯೊಂದರಲ್ಲಿ ಪಿಂಗಾಣಿಗಳನ್ನಿಟ್ಟು ಅದರಲ್ಲಿ ಪೆನಿಸಿಲಿನ್ ದ್ರಾವಣವನ್ನು ಹಾಕಿದರೆ ಅದು ಪಿಂಗಾಣಿಗಳಿಂದ ಹೊರದೂಡಿ ಏಕಾಣುಜೀವಿಗಳ ಬೆಳವಣಿಗೆಯನ್ನು ತಡೆಯುತ್ತದೆ. ಪಿಂಗಾಣಿಗಳ ಸುತ್ತಲೂ ಇರುವ ಕಪ್ಪಿನ ವೃತ್ತವು ಅಣುಜೀವಿ ನಾಶವಾದ ಪ್ರದೇಶ. ಈ ವೃತ್ತದ ಅಡ್ಡಳತೆ ಪೆನಿಸಿಲಿನ್ನಿನ ಶಕ್ತಿಯನ್ನನುಸರಿಸಿರುತ್ತದೆ.

ಚಿತ್ರ ೫.—ಪೆನಿಸಿಲಿನ್ ಯಾವ ಯಾವ ಏಕಾಣುಜೀವಿಗಳನ್ನು ನಾಶಮಾಡುವುದೆಂಬುದನ್ನು ಕಂಡುಹಿಡಿಯುವ ವಿಧಾನ.

ತಟ್ಟೆಯ ಮಧ್ಯದಲ್ಲಿರುವ ತೆಳುವಾದ ಗೆರೆಗಳೊಳಗೆ ಪೆನಿಸಿಲಿನ್ ಇದೆ. ಅದರ ಎರಡು ಪಕ್ಕಗಳಲ್ಲಿಯೂ ಕಾಣುವ ದೊಡ್ಡ ಪಂಕ್ತಿಗಳು ರೋಗಕಾರಕ ಏಕಾಣುಜೀವಿಗಳು. ಇವುಗಳಲ್ಲಿ ಕೆಲವು ಪೆನಿಸಿಲಿನ್ ಹತ್ತಿರ ನಾಶವಾಗಿವೆ. ಮತ್ತೆ ಕೆಲವು ಚೆನ್ನಾಗಿ ಬೆಳೆದಿವೆ. ಹೀಗೆ ನಾಶವಾದ ಜೀವಿಗಳಿಂದಾದ ರೋಗಗಳನ್ನು ಪೆನಿಸಿಲಿನ್ ಗುಣಪಡಿಸಬಲ್ಲುದು.


ಚಿತ್ರ ೧, ೩, ೪ ಮತ್ತು ೫ 'ಎಂಡೆವರ್' ಅಧಿಕಾರಿಗಳ ಕೃಪೆಯಿಂದ.




1




2



3



4



5

ಕೆಲವು ಅಂಕಿ ಅಂಶಗಳು

I. (a) ಇಂಡಿಯ ವಿಸ್ತಾರ ಮತ್ತು ಜನಸಂಖ್ಯೆ

(ಬರ್ಮ, ಏಡೆನ್, ಅಂಡಮಾನ್, ನಿಕೋಬಾರ್ ದ್ವೀಪಗಳು ಸೇರಿಲ್ಲ)

	ಬ್ರಿಟಿಷ್ ಇಂಡಿಯ			ದೇಶೀಯ ಸಂಸ್ಥಾನಗಳು		
	1921	1931	1941	1921	1931	1941
1. ವಿಸ್ತಾರ (ಚ. ಮೈಲಿ)	857,370	859,456	865,446	711,032	712,508	715,964
2. ಒಟ್ಟು ಜನಸಂಖ್ಯೆ (000)	233,708	256,778	295,808	71,939	81,311	93,189
ಒಂದು ಚ. ಮೈಲಿಗೆ	273	299	341	101	114	130
3. ಸ್ತ್ರೀಪುರುಷರ ಸಂಖ್ಯೆ (000)						
ಪುರುಷರು	120,056	132,389	153,020	37,123	41,897	48,006
ಸ್ತ್ರೀಯರು	113,652	124,389	142,789	34,816	39,414	45,184
4. ಬೇರೆ ಬೇರೆ ಮತಕ್ಕೆ ಸೇರಿದವರ ಸಂಖ್ಯೆ (000)						
ಹಿಂದೂ	162,647	177,148	190,811	53,590	61,467	64,120
ಮಹಮ್ಮದೀಯ	58,894	66,386	79,399	9,291	10,657	12,660
ಕ್ರೈಸ್ತ	2,766	3,531	3,482	1.726	2,430	2,834
ಸಿಖ್	2,361	3,209	4,165	872	1,115	1,526
ಜೈನ	454	453	578	723	799	871
ಬೌದ್ಧ	286	342	167	80	94	65
ಪಾರಸಿ	88	96	102	13	13	13
5. ಹಳ್ಳಿಗಳು ಮತ್ತು ಪಟ್ಟಣಗಳಲ್ಲಿ ವಾಸಿಸುವವರ ಸಂಖ್ಯೆ (000)						
ಪಟ್ಟಣ	23,697	28,087	37,547	7.431	9,327	12,149
ಹಳ್ಳಿ	210,011	228,691	258,262	64,508	71,984	81,040
6. ನಾನಾ ಉದ್ಯೋಗಗಳಲ್ಲಿರುವವರ ಸಂಖ್ಯೆ* (000)						
ಕಚ್ಚಾ ಪದಾರ್ಥಗಳ ಉತ್ಪತ್ತಿ ಕಾರ್ಯಗಳಲ್ಲಿ	78,959	79,293	ಸಂಖ್ಯೆ ದೊರೆತಿಲ್ಲ	22,210	27,306	ಸಂಖ್ಯೆ ದೊರೆತಿಲ್ಲ
ಕೈಗಾರಿಕೆ, ವಾಣಿಜ್ಯ, ವ್ಯಾಪಾರ ಮಾರ್ಗಗಳಿಗೆ ಸಂಬಂಧಪಟ್ಟ ಉದ್ಯೋಗಗಳಲ್ಲಿ	18,242	20,432		6,244	7,511	
ಸಾರ್ವಜನಿಕ ಆಡಳಿತ, ಲಲಿತಕಲೆಗಳಲ್ಲಿ ನಿರತರು	2,411	3,030		1,471	1,495	
ಇತರ ಬಾಬುಗಳು	7,198	17,968		2,863	5,086	

* ಉಪಕಸುಬುಗಳಿಂದ ಸಂಪಾದನೆ ಮಾಡುವವರೂ ಸೇರಿ.

I. (b) ಅಕ್ಷರತೆ

ಬ್ರಿಟಿಷ್ ಇಂಡಿಯ (ಬರ್ಮ ಸೇರಿ)

	ಬ್ರಿಟಿಷ್ ಇಂಡಿಯ			ದೇಶೀಯ ಸಂಸ್ಥಾನಗಳು		
	1921	1931	1941	1921	1931	1941
ಒಟ್ಟು ಅಕ್ಷರಸ್ಥರು (000)	14,998	18,072	37,016	3,969	5,408	10,306
ಅಕ್ಷರಸ್ಥರು (10.000 ಕ್ಕೆ)	642	704	1,251	552	665	1,108
5 ವರ್ಷಕ್ಕೆ ಮೇಲ್ಪಟ್ಟ ಅಕ್ಷರಸ್ಥರು (10,000 ಕ್ಕೆ)						
ಗಂಡಸರು—						
ಅಕ್ಷರಸ್ಥರು	1,275	1,403	ಸಂಖ್ಯೆ ದೊರೆತಿಲ್ಲ	1,016	1,306	ಸಂಖ್ಯೆ ದೊರೆತಿಲ್ಲ
ಇಂಗ್ಲಿಷ್ ಬಲ್ಲವರು	180	235		89	135	
ಹೆಂಗಸರು—						
ಅಕ್ಷರಸ್ಥರು	154	214		210	289	
ಇಂಗ್ಲಿಷ್ ಬಲ್ಲವರು	20	30		12	18	

I. (c) ವೋಟಿನ ಹಕ್ಕುಳ್ಳವರು

	1920	1926	1937*
I. ವೋಟು ಮಾಡುವವರು— (000)	ಸಂಖ್ಯೆ ದೊರೆತಿಲ್ಲ		
ಒಟ್ಟು		6,375	30,138
ಹೆಂಗಸರು		268	4,253
II. ಹಕ್ಕುಳ್ಳವರಲ್ಲಿ ವೋಟುಮಾಡಿದವರು	29%	43%	55%

* ಪ್ರಾಂತಗಳ ನ್ಯಾಯವಿಧಾಯಕ ಸಭೆಗಳಿಗೆ ಮಾತ್ರ.

II. ವಿದ್ಯಾಭಿವೃದ್ಧಿ

ಬ್ರಿಟಿಷ್ ಇಂಡಿಯ (ಬರ್ಮ ಬಿಟ್ಟು)

ವರ್ಷದ ಕಡೆ, ಮಾರ್ಚ್ 31	1920-21	1928-29	1938-39	1940-41
ವಿದ್ಯಾಸಂಸ್ಥೆಗಳ ಸಂಖ್ಯೆ	180,380	232,429	230 526	232,766
ಸರ್ಕಾರದವು	2,749	4,665	5,128	6,817
ವಿದ್ಯಾಂಸರ ಸಂಖ್ಯೆ (000)				
(1) ಒಟ್ಟು	7,820	11,461	14,509	15,770
(2) ಗಂಡು	6,527	9 521	11,345	12,201
(3) ಹೆಣ್ಣು	1,293	1,940	3,163	3,569
ಈ ಕೆಳಗಿನ ಸಂಸ್ಥೆಗಳಲ್ಲಿರುವ ವಿದ್ಯಾಂಸರ ಸಂಖ್ಯೆ (000)				
(1) ಕಲೆ ಮತ್ತು ವಿಜ್ಞಾನದ ಕಾಲೇಜುಗಳು	48	75	109	127
(2) ಔದ್ಯೋಗಿಕ ಕಾಲೇಜುಗಳು	13	18	24	26
(3) ಪ್ರೌಢ ವಿದ್ಯಾಶಾಲೆಗಳು	1,125	1,909	2,505	2,754
(4) ಪ್ರಾಥಮಿಕ ಶಾಲೆಗಳು	6,113	8,734	10,870	11,778
(5) ಟೆಕ್ನಿಕಲ್ ಮತ್ತು ಕೈಗಾರಿಕಾ ಶಾಲೆಗಳು	10	27	34	39
ಸರ್ಕಾರದಿಂದ ಅಂಗೀಕಾರ ಪಡೆದ ಸಂಸ್ಥೆಗಳ ಖರ್ಚು (ಲಕ್ಷ ರೂ.)				
(1) ಒಟ್ಟು	15,84	24,91	27,82	29,84
(2) ಸರ್ಕಾರದ ನಿಧಿಯಿಂದ	7,32	12,11	12,25	12,89
ಮುದ್ರಣಾಲಯಗಳ ಸಂಖ್ಯೆ	3,583	5,729	8,467	8,758
ಪ್ರಚುರಪಡಿಸಿದ ಪತ್ರಿಕೆಗಳ ಸಂಖ್ಯೆ	955	1,642	2,752	2,609
ಮಾಸಪತ್ರಿಕೆಗಳು	2,197	2,781	3,301	2,880
ಪ್ರಚುರಪಡಿಸಿದ ಪುಸ್ತಕಗಳು—				
(1) ಇಂಗ್ಲಿಷ್ ಅಥವಾ ಬೇರೆ ಐರೋಪ್ಯ ಭಾಷೆಗಳವು	1,676	2,546	3,298	2,841
(2) ಭಾರತೀಯ ಭಾಷೆಯವು	9 815	14,348	14,137	14,117

III. ಸಾರ್ವಜನಿಕ ಆರೋಗ್ಯ

ಬ್ರಿಟಿಷ್ ಇಂಡಿಯ (ಬರ್ಮ ಬಿಟ್ಟು)

	1921	1929	1939	1940
ಆಸ್ಪತ್ರೆಗಳು ಮತ್ತು ಸಣ್ಣ 'ಔಷಧಶಾಲೆ'ಗಳ ಸಂಖ್ಯೆ	3,263	4,439	5,650	5,885
ಚಿಕಿತ್ಸೆ ಪಡೆದ ರೋಗಿಗಳು (000)	35,463	51,640	79,057	81 815
[1]ಜನನ—ಸ್ಥೂಲಸಂಖ್ಯೆ	32	33	34	33
ಮಕ್ಕಳ ಮರಣ. (ಬದುಕುವ 1,000 ಮಕ್ಕಳಲ್ಲಿ)	31	24	22	22
ಕಾಲರ, ಸಿಡುಬು, ಪ್ಲೇಗ್, ರೋಗಗಳಿಂದ ಮರಣ (1,000ಕ್ಕೆ)	198	178	156	160
ಸಾರ್ವಜನಿಕ ಆರೋಗ್ಯ, ಔಷಧೋಪಚಾರ, ಆಡಳಿತ ಕಾರ್ಯಗಳಿಗೆ [2]ತಗಲುವ ಒಟ್ಟು ಖರ್ಚು (ಲಕ್ಷ ರೂ)	2·4	1·8	0·7	0·7
(i) ಕೇಂದ್ರ ಸರ್ಕಾರ ಮತ್ತು ಆಧಿಪತ್ಯ ಸರ್ಕಾರಗಳು	4,34	5,99	5,74	6,32
(ii) ಮ್ಯುನಿಸಿಪಾಲಿಟಿಗಳು[3]	7,09	7,64	7,29	ಸಂಖ್ಯೆ ದೊರೆತಿಲ್ಲ
(iii) ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಸಾರ್ವಜನಿಕ ಸಂಸ್ಥೆಗಳು	1,24	2,02	2,21	

[1] ವರ್ಷದ ಮಧ್ಯದಲ್ಲಿ ಪರಿಗಣಿಸಿದ ಜನಸಂಖ್ಯೆಯ ಮೇಲೆ ನಿರ್ಧರಿಸಿದೆ.

[2] 1920-21 ರಿಂದ ಪ್ರಾರಂಭವಾಗಿ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ.

[3] 1933-34 ರ ವರೆಗೆ ಬರ್ಮವನ್ನೂ ಸೇರಿಸಿಕೊಂಡು.

1. ಚಿನ್ನದ ಉತ್ಪತ್ತಿ

(ಇಷ್ಟು ಸಾವಿರ ಔನ್ಸು)
(ಒಂದು ಔನ್ಸ್ = $2\frac{1}{2}$ ತೊಲೆ)

	1939	1940	1941	1942	1943	1944
I. ಬ್ರಿಟಿಷ್ ಸಾಮ್ರಾಜ್ಯ	22,471	24,053	24,200	22,550	19,150	17,657
(1) ದಕ್ಷಿಣ ಆಫ್ರಿಕಾ ಯೂನಿಯನ್	12,822	14,047	14,386	14,121	12,800	12,343
(2) ಕ್ಯಾನಡ	5,094	5,311	5,345	4,841	3,650	2,943
(3) ಆಸ್ಟ್ರೇಲಿಯಾ	1,646	1,644	1,503	1,164	750	571
(4) ನ್ಯೂಸೀಲಂಡ್	179	186	186	180	150	....
(5) ಇಂಡಿಯ	317	289	286	260	252	188
II. ಅಮೇರಿಕದ ಸಂಯುಕ್ತ ಸಂಸ್ಥಾನಗಳು....	4,621	4,863	4,832	3,619	1,350	1,000
III. ಎಲ್ಲ ದೇಶಗಳೂ ಸೇರಿ	39,038	40,810	40,100	35,800	29,600	27,400

2. ಕೆಲವು ದೇಶಗಳಲ್ಲಿ ಹಣಲೆಕ್ಕದಲ್ಲಿ ಇರುವ ಚಿನ್ನದ ಪರಿಮಾಣ

	1913		1929		1938		1942		1943	
	ಪರಿಮಾಣ	ಬೆಲೆ	ಪರಿಮಾಣ	ಬೆಲೆ	ಪರಿಮಾಣ	ಬೆಲೆ	ಪರಿಮಾಣ	ಬೆಲೆ	ಪರಿಮಾಣ	ಬೆಲೆ
ಅಮೇರಿಕದ ಸಂಯುಕ್ತ ಸಂಸ್ಥಾನಗಳು	62·4	1,290	188·7	3,900	414·6	14,512	649·3	22,726	626·8	21,938
ಬ್ರಿಟನ್	8·0	165	34·3	710	76·9	2,690	....	1	....	1
ಫ್ರಾನ್ಸ್	32·8	679	79·0	1,633	69·4	2,430	57·1	2,000	57·1	2,000
ಇಂಡಿಯ	6·0	124	6·2	128	7·8	274	7·8	274	7·8	274

3. ಚಿನ್ನ ಬೆಳ್ಳಿಗಳ ಧಾರಣೆವಾಸಿ

ಚಿನ್ನ				ಬೆಳ್ಳಿ			
ಶುದ್ಧ (1 ಔನ್ಸಿಗೆ)	ಅತಿ ಹೆಚ್ಚು	ಅತಿ ಕಡಮೆ	ಸರಾಸರಿ	100 ತೊಲೆಗಳಿಗೆ	ಅತಿ ಹೆಚ್ಚು	ಅತಿ ಕಡಮೆ	ಸರಾಸರಿ
	ರೂ. ಆ. ಪೈ	ರೂ. ಆ. ಪೈ	ರೂ. ಆ. ಪೈ		ರೂ. ಆ. ಪೈ	ರೂ. ಆ. ಪೈ	ರೂ. ಆ. ಪೈ
1938-39	37-10-6	34-12-3	35-10-3	1938-39	53- 1-6	48- 2-0	51-11-3
1943-44	96- 4-0	65- 4-0	76-11-6	1944-45	143- 4-0	113-10-0	128-10-9
1938-39 ರಿಂದ 1944-45	....	....	52- 9-8	ಈ ಏಳು ವರ್ಷಗಳಲ್ಲಿ	....	....	81- 9-0
13-5-1946	267- 8-0	....	....	13-5-1946	181- 0-0	....	....

		1939-40	1942-43
I. ಕೇಂದ್ರ ಸರ್ಕಾರ—			
(1) ಆಯ	....	94.57	176.88
(2) ವ್ಯಯ	....	94.57	289.05
(3) ಅಧಿಕ (+) ನ್ಯೂನ (−)	....	....	− 112.17
(4) 2 ಕ್ಕೆ 1 ರ %.	....	100 0	61 2
II. ಒಟ್ಟು ಸರಕಾರದ ವೆಚ್ಚ—	....	98.57	667.04
II ಕ್ಕೆ I ರ %.	....	95.9	26.5
A. ಇಂಡಿಯಾ ಪರವಾಗಿ	....	94.57	341.56
(1) ಮುಲ್ಕಿ ವೆಚ್ಚ	....	45.03	74.43
(2) ರಕ್ಷಣೆ ವೆಚ್ಚ	....	49.54	267.13
(*a*) ಗಟ್ಟಿ ಬಂಡವಾಳ ಲೆಕ್ಕ	....	....	52.51
(*b*) ಆದಾಯ ಲೆಕ್ಕ	....	49 54	214.62
(i) ಮೂಲಭೂತವಾದ ಸಾಧಾರಣ ಆಯವ್ಯಯ	....	36.77	36.77
(ii) ಧಾರಣೆವಾಸಿ ಏರಿದ್ದರಿಂದ	....	1.19	7.97
(iii) ಯುದ್ಧಕಾರ್ಯಗಳ (ನಿವ್ವಳ)	....	3 52	161.63
(iv) ಯುದ್ಧಕ್ರಿಯೆಗಳಲ್ಲದೆ ಇತರ (ನಿವ್ವಳ)	....	8.07	8.26
(3) ಒಟ್ಟು ವೆಚ್ಚಕ್ಕೆ ರಕ್ಷಣೆಯ ಲೆಕ್ಕ ಇರುವ ಶೇಕಡ		52.4	74.3
B. ಯುದ್ಧದ ವೆಚ್ಚ ಬೇರೆಯವರಿಂದ ಬರಬೇಕಾದ್ದು	....	4.00	325 48
A 2 ಗೆ B ಯ %	....	8.1	121.8
III. ಕೇಂದ್ರ ಸರ್ಕಾರದ ಸಾಲ ವರ್ಷಾಂತ್ಯದಲ್ಲಿ—			
(1) ಪೌಂಡು ಸಾಲ	....	439.10	50.56
(2) ರೂಪಾಯಿ ಸಾಲ	....	450.23	748.74
(3) ಜನ ಕೂಡಿಹಾಕಿದ ಕಿರುಸಾಲ*	....	135.35	92.77
(4) ಖಜಾನೆಹುಂಡಿ ಮತ್ತು ಕೈಸಾಲ	....	54.70	264.70
(5) ಒಮ್ಮೆ ಬಡ್ಡಿ ತೆರಬೇಕಾದ ಸಾಲ	....	1,203.86	1,353.13
IV. ಪ್ರಾಂತಗಳು—			
(1) ಆದಾಯ	....	90.83	124.31
(2) ವೆಚ್ಚ	....	89.22	118.18
(3) ಅಧಿಕ (+) ನ್ಯೂನ (−)	....	+ 1.61	+ 6.13
(4) ಸಾಲಸ್ಥಿತಿ (ಒಮ್ಮೆ ನಗದು ಮೊತ್ತ)†	....	167.61	170.26

* (1) ಪೋಸ್ಟಾಫೀಸ್ ನಗದು ಸರ್ಟಿಫಿಕೇಟ್. (2) ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟ್. (3) ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್. (4) ಡಿಫೆನ್ಸ್ ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟ್. (5) ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್—ಇಲ್ಲಿ ಸೇರಿವೆ.

1939–40 ರಿಂದ 1945–46 ವರೆಗೆ (ಇಷ್ಟು ಕೋಟಿ ರೂಪಾಯಿಗಳು)

1943-44	1944-45	1939-40 ರಿಂದ 1944-45	1945-46 ಅಂದಾಜು
252·06	356·88	1,122·61	362·34
441·84	512·65	1,599·55	517·63
— 189·78	— 155·77	— 476 94	— 155·29
57·0	69·6	70·2	70·0
857·17	1,011·59	3,142·81	1,024·19
29·4	35·3	35·7	35·4
479·30	572·06	1,748·93	535·39
83·44	115·42	402 22	123·40
395·86	456·64	1,346·71	411·99
37·46	59·41	149·38	17·76
358·40	397·23	1,197·33	394 23
36 77	36·77	220·62	36·77
14·44	16·92	47·48	19·76
298·75	334·22	878·46	328·51
8·44	9·32	50·80	9·19
81·1	77·5	74·9	76·2
377·87	439·53	1,393·88	488·80
95·5	96·3	103 5	118·6
34·70	34 10	— 430·84	34·04
1,006·55	1,190·98	+ 753·11	1,484·43
118·47	157·25	+ 15·80	205·75
110·61	86·61	+ 40·31	86·61
1,532·47	1,819·02	+ 613·26	2,180·57
163·31	200·78	784·12	188·17
153·85	208·05	767·96	191·74
+ 9·46	— 7·27	+ 16·16	— 3·57
196·28	215·49	+ 52·29	....

† (1) ನಿಡುವಾಯಿದೆ ಸಾಲ. (2) ಕಿರುವಾಯಿದೆ ಸಾಲ. (3) ಇನ್ನೂ ನಿಡುವಾಯಿದೆ ಲೆಕ್ಕಕ್ಕೆ ಸೇರಿಸದೆ ಇರುವುದು. (4) ಕೇಂದ್ರ ಸರ್ಕಾರದಿಂದ ತೆಗೆದ ಸಾಲ—ಸೇರಿವೆ.

ಇಂಡಿಯಾ ದೇಶದ ರೈಲ್ವೆಗಳ ಆದಾಯ ವೆಚ್ಚ ಮತ್ತು ಆಪದ್ಧನ

(ಇಷ್ಟು ಕೋಟಿ ರೂಪಾಯಿಗಳು)

	1938-39	1943-44	1944-45		1945-46
			ಅಂದಾಜು	ಪರಿಷ್ಕೃತ	ಅಂದಾಜು
I. ಆದಾಯ ವೆಚ್ಚ —					
ಒಟ್ಟು ಸಂಪಾದನೆ	99·62	1,85·43	1,82·00	2,14·30	2,20·00
ಕೆಲಸಗಳ ಖರ್ಚು	69·18	1,08·84	1,14·28	1,47·49	1,59·87
(ಅ) ವಾಣಿಜ್ಯದಿಂದ ನಿವ್ವಳ ಆಯ	30·44	76·59	67·72	66·81	60·13
(ಇ) ಸಾದಿಲ್ವಾರು ನಿವ್ವಳ ಆಯ	0·23	2·78	3·05	3·01	3·77
ನಿವ್ವಳ ವರಮಾನ (ಅ + ಇ)	**30·67**	**79·37**	**70·77**	**69·82**	**63·90**
ಬಡ್ಡಿ ಖರ್ಚು	29·30	28·53	28·75	27·81	27·39
II. ಅಧಿಕ ಮಿಗಿತಾಯ	1·37	50·84	42·02	42·01	36·51
ಸರ್ಕಾರಕ್ಕೆ ಆದಾಯವಾಗಿ ಕೊಟ್ಟದ್ದು	1·37	37·64	31·18	32·00	32·00
ರೈಲ್ವೆ ಆಪನ್ನಿಧಿಗೆ ಕೊಟ್ಟದ್ದು	....	13·20	10·84	10·01	4·51
ಬಂಡವಾಳದ ಲೆಕ್ಕಕ್ಕಾಗಿ ಕಳೆದ ವೆಚ್ಚ	2·33	8·71	28 70	20·88	9·50
ಇಳಿಮಾನ ನಿಧಿಗಾಗಿ ಕಳೆದ ವೆಚ್ಚ	7·08	6·64	23·00	12·30	22·50
III. ವರ್ಷಾಂತ್ಯದಲ್ಲಿ ಬಂಡವಾಳ	**7,55·26**	**7,80·73**	**8,08·04**	**7,89·59**	**7,99·09**
IV. ಇಳಿಮಾನದ ಆಪನ್ನಿಧಿ	**19·61**	**82·07**	**87·93**	**92·30**	**98·09**
ವರ್ಷದಲ್ಲಿ ನಿವ್ವಳ ಸೇರಿದ್ದು	5·48	10·23	— 5·88	5·79	— 5·38
ವರ್ಷಾಂತ್ಯದ ಸಿಲ್ಕು	25·09	92·30	82·05	98·09	92·71

ಇಂಡಿಯಾ ದೇಶದ ಕಡಲು ವ್ಯಾಪಾರ—ದಿಕ್ಕು

(ಇಷ್ಟು ಲಕ್ಷ ರೂಪಾಯಿಗಳು)

	1938			1942			1943			1944		
	ಆಮದು	ರಫ್ತು	ಉಳಿಕೆ	ಆಮದು	ರಫ್ತು	ಉಳಿಕೆ	ಆಮದು	ರಫ್ತು	ಉಳಿಕೆ	ಆಮದು	ರಫ್ತು	ಉಳಿಕೆ
1. ಬ್ರಿಟಿಷ್ ಸಾಂರಾಜ್ಯ—												
(1) ಸಂಯುಕ್ತ ರಾಜ್ಯ	48,12	55,14	+ 7,02	33,86	63,29	+ 29,43	24,49	54,42	+ 29,93	38.60	65,66	+ 27,06
ಶೇಕಡಾ	31·4	34·1	....	29·8	30·8	....	22·1	29·2	....	21·3	30·0	...
(2) ಬರ್ಮಾ	22,73	10,13	− 12,60	6,06	65	− 5,41	11	....	− 11	12	....	− 12
(3) ಸಿಲಾನ್	1,09	5,06	+ 3,97	4,27	12,70	+ 8,43	3,70	15,31	+ 11,61	3,50	18,23	+ 14,73
(4) ಆಸ್ಟ್ರೇಲಿಯಾ	2,04	2,95	+ 91	3,56	16,30	+ 12,74	4,70	14,28	+ 9,58	8,09	13,68	+ 5,59
(5) ಕ್ಯಾನಡಾ	70	2,04	+ 1,34	6,38	3,64	− 2,74	2,92	5 07	+ 2,15	3,02	5,65	+ 2 63
(6) ದ ಆಫ್ರಿಕಾ	27	1,41	+ 1,14	1,71	9,50	+ 7,79	2,87	10,35	+ 7,48	2,67	12,67	+ 10,00
(7) ಇತರ ದೇಶಗಳು....	12,93	8,48	− 4,45	13,84	24,46	+ 10,62	13,72	24,81	+ 11,09	17,92	25,01	+ 7,09
ಒಟ್ಟು ಬ್ರಿ. ಸಾಂರಾಜ್ಯ	87,88	85,21	− 2,67	69,68	1,30,54	+ 60,86	52,51	1,24,24	+ 71,73	73,92	1,40,90	+ 66,98
ಒಟ್ಟು ವ್ಯಾಪಾರದ ಶೇ.	57 3	52·7	....	61·3	63.5	....	47·4	66·7	....	40·9	64·4	....
2. ವಿದೇಶಗಳು—												
(1) ಅಮೇರಿಕದ ಸಂ. ಸಂಸ್ಥಾನಗಳು	11 41	13,43	+ 2,02	20,45	33,86	+ 13,41	17,70	32,82	+ 15,12	39,14	48,20	+ 9,06
ಶೇಕಡಾ	7·4	8·3	....	18·0	16·5	....	16.0	17·6	....	21·6	22.0	....
(2) ಜಪಾನ್	15,58	14,53	− 1,05	4	....	− 4	....	....	....	....	....	....
(3) ಈಜಿಪ್ಟ	2,60	1,31	− 1,29	3,86	5,27	+ 1,41	14,42	1,90	− 12 52	13,59	4,35	− 9,24
(4) ಇರಾನ್	3,41	66	− 2,75	14,51	4 23	− 10,28	22,50	1,38	− 21,12	47,57	3,09	− 44,48
(5) ಇತರ	32,54	46,55	+ 14,01	5,21	31,72	+ 26,51	3,71	25,98	+ 22,27	6,68	22,30	+ 15,62
ಒಟ್ಟು ವಿದೇಶಗಳು	65,54	76,48	+ 10,94	44,07	75,08	+ 31,01	58,33	62,08	+ 3,75	1,06,98	77,94	− 29,04
ಒಟ್ಟು ವ್ಯಾಪಾರದ ಮೊತ್ತ	1,53,42	1 61,69	+ 8,27	1,13,75	2,05,62	+ 91,87	1,10,84	1,86,32	+ 75,48	1,80,90	2,18,84	+ 37,94

ಇಂಡಿಯಾದೇಶದ ವ್ಯಾಪಾರ*

	1938		1942		1943		1944	
	ಕೋಟಿ ರೂ.	%	ಕೋಟಿ ರೂ	%	ಕೋಟಿ ರೂ.	%	ಕೋಟಿ ರೂ.	%
ಆಮದು								
ಆಹಾರ	20·70	13·5	10·89	9·6	7·00	6 3	16·21	9·0
ಮೂಲಸಾಮಗ್ರಿ	36·62	23·9	43·39	38 2	61·90	55·8	104·86	58·0
ಕೈಗಾರಿಕೆಯಲ್ಲಿ ತಯಾರಾದದ್ದು	93·61	61·0	57·82	50·8	40·53	36·6	57 64	31·9
ರಫ್ತು								
ಅಹಾರ	39·65	23·5	50·49	23·5	43·90	22·3	51·99	22·5
ಮೂಲಸಾಮಗ್ರಿ	74·70	44·3	53·42	24·9	49·46	25 1	57·19	24·7
ಕೈಗಾರಿಕೆಯಲ್ಲಿ ತಯಾರಾದದ್ದು	51·34	30·5	107·74	50·1	101·39	51·5	119 33	51·5

* ಇವುಗಳಲ್ಲಿ ಸರಕಾರದವರ ಆಮದು ರಫ್ತು ಅಂಕೆಗಳು ಸೇರಿಲ್ಲ.

ಇಂಡಿಯಾ ದೇಶದ ವಿದೇಶೀ ವ್ಯಾಪಾರ (ಕೆಲವು ಮುಖ್ಯ ಪದಾರ್ಥಗಳು)

(ಇಷ್ಟು ಲಕ್ಷ ರೂಪಾಯಿ)

	1938	1942	1943	1944	1943 ಕ್ಕಿಂತ ಹೆಚ್ಚು + ಕಡಮೆ —
ಆಮದು					
ಕಾಳು, ಹಿಟ್ಟು	10,83	2,72	1	6,93	+ 6,92
ಎಣ್ಣೆಗಳು (ಎಲ್ಲ ಬಗೆ)	16,28	23,77	31,90	71,09	+ 39,19
ಹತ್ತಿ (ಹಸಿ, ಕಳಪೆ ಕೂಡಿ)	11,07	11,17	19,93	22,14	+ 2,21
ಉಣ್ಣೆ (ಹಸಿ)	72	2,53	4,19	2,47	— 1,72
ರಾಸಾಯನಿಕ ದ್ರವ್ಯಗಳು, ವನಸ್ಪತಿಗಳು, ಔಷಧಿಗಳು	5,73	7,23	5,60	10,35	+ 4 75
ಬಣ್ಣ, ರಂಗು	3,79	5,92	7,30	7,94	+ 64
ಯಂತ್ರಸಾಮಗ್ರಿ	19,81	11,54	10,23	14,83	+ 4,60
ಹತ್ತಿ ನೂಲು, ತಯಾರಿಕೆಗಳು	14,61	2,06	1,09	1,52	+ 43
ರಫ್ತು					
ಕಾಳು, ಹಿಟ್ಟು	8,16	8,48	3,21	70	— 2,51
ಟೀ	23,47	31,62	33,44	40,65	+ 7,21
ಎಣ್ಣೆಗಳು (ಎಲ್ಲ ಬಗೆ)	1,08	1,73	76	1,24	+ 48
ಬಿತ್ತಗಳು	15,94	10,38	10,26	11,25	+ 99
ಹತ್ತಿ (ಹಸಿ, ಕಳಪೆ)	23,93	7,74	6,29	9,01	+ 2,72
ಸಣಬು	12,24	10,13	7,37	7,95	+ 58
ತೊಗಲು ಚಕ್ಕಳ (ಹಸಿ, ಹದವಾದ್ದು, ಚರ್ಮ)	11,58	11,45	13,85	14,04	+ 19
ಲೋಹಗಳು	3,56	2,02	1,65	3,47	+ 1,82
ಹತ್ತಿ ನೂಲು, ತಯಾರಿಕೆಗಳು	8,03	49,67	42,91	40,80	— 2,11
ಸಣಬು ತಯಾರಾದ್ದು	26,18	42,20	44,43	60,59	+ 16,16

ಅಪಶಕುನದ ಹಕ್ಕಿಗಳು

೧

ಈ ಪತ್ರಿಕೆಯ ಪಾರ್ಥಿವ ಸಂವತ್ಸರದ ಸಂಕ್ರಾಂತಿ ಸಂಚಿಕೆಯಲ್ಲಿ **ಪೊಱಸು** ಎಂಬ ಶಬ್ದದ ಅರ್ಥವನ್ನು ವಿಚಾರಮಾಡುತ್ತಾ ನನ್ನ ಮಾನ್ಯಮಿತ್ರರಾದ ಶ್ರೀಮಾನ್ ಡಿ. ಎಲ್. ನರಸಿಂಹಾಚಾರ್ಯರು ಕೆಳಗೆ ಕಂಡಂತೆ ಬರೆದಿದ್ದಾರೆ.

"ಪೊಱಸು ಎಂಬ ಪದಕ್ಕೆ ಪಾರಿವಾಳವೆಂಬ ಅರ್ಥ ಪ್ರಸಿದ್ಧವಾಗಿತ್ತೆಂದೂ ಅದರ ವಿಷಯದಲ್ಲಿ ವಿಪತ್ಕಾರಕವಾದ ಅಪಶಕುನದ ಹಕ್ಕಿಯೆಂಬ ನಂಬಿಕೆ ಕನ್ನಡ ಜನತೆಯಲ್ಲಿ ಹತ್ತನೆಯ ಶತಮಾನದಿಂದ ಹಿಡಿದು ಹದಿಮೂರನೆಯ ಶತಮಾನದ ವರೆಗೂ ನೆಲಸಿತ್ತೆಂದೂ ಮೇಲಣ ಚರ್ಚೆಯಿಂದ ತೇಲಿ ಬಂದಿರುವ ಅಂಶಗಳು. ಈಗ ನಮ್ಮ ನಾಡವರಲ್ಲಿ ಗೂಬೆ, ಕಾಗೆ, ಬೆಳವ (ಒಂದು ಬಗೆಯ ಪಾರಿವಾಳ)ಗಳ ವಿಷಯದಲ್ಲಿ ಈ ಮೂಢನಂಬಿಕೆ ಬಂದಿದೆ. ಪಾರಿವಾಳದ ವಿಷಯದಲ್ಲಿದ್ದ ಇಂಥ ನಂಬಿಕೆ ಕಾಲ ಕ್ರಮದಲ್ಲಿ ಗೂಬೆ ಮುಂತಾದುವುಗಳಿಗೆ ಆರೋಪಿತವಾಗಿರಬಹುದೆ? ಪಾರಿವಾಳ ಅನಿಷ್ಟಕಾರಕ ಪಕ್ಷಿ ಎಂಬ ನಂಬಿಕೆ "ಋಗ್ವೇದದ ಕಾಲದಲ್ಲಿಯೂ ಇದ್ದಿತೆಂದು ಹೇಳುವುದಕ್ಕೆ ಆಧಾರ ಎದೆ."[1]

ಆದರೆ ಪಾರಿವಾಳ ಒಂದಲ್ಲದೆ ಗೂಬೆಯು ಕೂಡ ಋಗ್ವೇದದ ಕಾಲದಲ್ಲಿ ಅನಿಷ್ಟಕಾರಕ ಪಕ್ಷಿಯೆಂದು ಭಾವಿಸಲ್ಪಟ್ಟಿತ್ತೆಂದು ಧಾರಾಳವಾಗಿ ಹೇಳಬಹುದಾಗಿದೆ. ಪಾರಿವಾಳವೂ (**ಕಪೋತ**) ಗೂಬೆಯೂ (**ಉಲೂಕ**) ಸಾವಿನ (**ಮೃತ್ಯು, ನಿರ್ಋತಿ**) ದೂತರೆಂದು ಈ ವೇದದಲ್ಲಿ ಕರೆಯಲ್ಪಟ್ಟಿವೆ.[2]

ದೇವಾಃ ಕಪೋತ ಇಷಿತೋ ಯದಿಚ್ಛನ್
ದೂತೋ ನಿರ್ಋತ್ಯಾ ಇದಮಾಜಗಾಮ |
ಯದುಲೂಕೋ ವದತಿ ಮೋಘಮೇತ—
ದ್ಯತ್ಕಪೋತಃ ಪದಮಗ್ನೌ ಕೃಣೋತಿ |
ಯಸ್ಯ ದೂತಃ ಪ್ರಹಿತ ಏಷ ಏತ—
ತ್ತಸ್ಮೈ ಯಮಾಯ ನಮೋ ಅಸ್ತು ಮೃತ್ಯವೇ ||

ಈ ನಂಬಿಕೆಯೇ ವೇದದ ಕಾಲದಲ್ಲಿ ಈ ಎರಡು ಹಕ್ಕಿಗಳನ್ನೂ ಅನಿಷ್ಟಕಾರಕಗಳೆಂದು ತಿಳಿಯಲು ಕಾರಣ.

---

[1] ಸಂಪುಟ ೨೭, ಸಂಚಿಕೆ ೩, ಪುಟ ೯೯.

[2] ಋಗ್ವೇದ, ೧೦. ೧೬೫. ೧, ೪,

ಗೂಬೆಯು ಈಗಲೂ ಅಪಶಕುನದ ಹಕ್ಕಿಯಾಗಿದೆ. ಪಾರಿವಾಳಗಳಲ್ಲಾದರೆ ಒಂದು ಬಗೆಯುದನ್ನು (ಬೆಳವ) ಮಾತ್ರ ಈ ರೀತಿ ಕಾಣುವುದು ವಾಡಿಕೆಯಲ್ಲಿದೆ. ಗೂಬೆಯು ಮುಂಚಿನಿಂದಲೂ ತಿರಸ್ಕರಿಸಲ್ಪಟ್ಟಿರುವುದರಿಂದ ಈಗ ಆ ಹಕ್ಕಿಯ ವಿಷಯದಲ್ಲಿರುವ ಕೀಳು ಭಾವನೆಯು ಹೊಸದಾಗಿ ಬಂದದ್ದಲ್ಲ. ಪಾರಿವಾಳದ ವಿಷಯದಲ್ಲಾದರೋ ಮುಂಚೆ ಇದ್ದ ಅಪನಂಬಿಕೆಯು ಈಗ ಹೋಗಿ ಅದರ ಬದಲು ಸಮಾಧಾನವು ತಲೆದೋರುತ್ತಲಿರುವಂತಿದೆ. ಈ ಹಕ್ಕಿಯ ಮೇಲಿದ್ದ ದುರಭಿಪ್ರಾಯವು ಬೇರೆ ಇನ್ನಾವ ಹಕ್ಕಿಯ ಮೇಲೆಯೂ ಆರೋಪಿತವಾಗಿರಲಾರದು. ಗೂಬೆಯ ಮೇಲೆ ಖಂಡಿತವಾಗಿಯೂ ಅಲ್ಲ. ಕಾಲಕ್ರಮದಲ್ಲಿ ಯಾವ ಕಾರಣದಿಂದಲೋ ಆ ಅಸಮಾಧಾನವು ತನಗೆ ತಾನೇ ಅಳಿಸಿಹೋಗಿರಬಹುದೆಂದು ನನಗೆ ತೋರುತ್ತದೆ.

ಹೊ. ಗು. ನರಹರಿ

ಅಂತರ್‌ರಾಷ್ಟ್ರೀಯ ವ್ಯಾಪಾರ ಮತ್ತು ವಿಶ್ವಶಾಂತಿ

ಪ್ರಪಂಚದ ಶಾಶ್ವತ ಶಾಂತಿಗೆ ಅಂತರ್‌ರಾಷ್ಟ್ರೀಯ ವ್ಯಾಪಾರ ಮತ್ತು ವಾಣಿಜ್ಯ ವ್ಯವಸ್ಥೆಯು ಅತ್ಯಾವಶ್ಯಕ. ಮಾನವ ಜೀವನದಲ್ಲಿ ವ್ಯಾಪಾರವು ಬಹಳ ಕಾಲದಿಂದಲೂ ನಡೆದು ಬಂದಿರುವ ಮುಖ್ಯವಾದ ಕಸಬುಗಳಲ್ಲೊಂದು. "ವಾಣಿಜ್ಯೇ ವಸತೇ ಲಕ್ಷ್ಮೀಃ" ಎಂಬ ಆರ್ಯೋಕ್ತಿಯಂತೆ ವ್ಯಾಪಾರವು ಐಶ್ವರ್ಯದ ನೆಲೆ ವೀಡೆಂದು ಹೇಳಬಹುದು. ವ್ಯಾಪಾರವು ಒಂದು ದೇಶದ ಜೀವನಾಡಿ. ನಾಗರಿಕತೆಯ ಶಿಖರವನ್ನೇರಿರುವ ಎಲ್ಲಾ ದೇಶಗಳೂ ವ್ಯಾಪಾರದಲ್ಲಿಯೂ ಉನ್ನತ ಸ್ಥಿತಿಯನ್ನು ಹೊಂದಿವೆಯೆನ್ನಬಹುದು. ಆಧುನಿಕ ಜೀವನದಲ್ಲಿ ವ್ಯಾಪಾರದ ಸಹಾಯವಿಲ್ಲದೆ ಯಾವ ದೇಶದ ಜನರೂ ನಯಜೀವನವನ್ನು ನಡೆಸಲಾರರು; ಬಹು ಹಿಂದಿನಕಾಲ ದಲ್ಲಿ ಮನುಷ್ಯನ ಆಶಯುಗಳು ತೀರಾ ಕಡಿಮೆಯಾಗಿದ್ದಾಗ ಮನುಷ್ಯನು ತನ್ನ ಪ್ರಯತ್ನದಿಂದಲೇ ತನ್ನ ಆಶಯುಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗಿತ್ತು. ಅವನ ನಾಗರಿಕ ಜೀವನವು ಉತ್ತಮಗೊಂಡಂತೆಲ್ಲ ಅವನ ಆಶೆ, ಆಕಾಂಕ್ಷೆಗಳು ಜಾಸ್ತಿಯಾಗಿ ಅವುಗಳ ಪೂರೈಕೆಗೆ ಇತರರಿಂದ ಉತ್ಪನ್ನವಾದ ಪದಾರ್ಥಗಳನ್ನು ವಿನಿಮಯದಿಂದ ಹೊಂದಬೇಕಾಗಿ ಬಂತು. ಪ್ರಾರಂಭದಲ್ಲಿ ಪದಾರ್ಥಗಳ ವಿನಿಮಯ ದಿಂದಲೇ ಜನರು ತಮಗೆ ಬೇಕಾದ ವಸ್ತುಗಳನ್ನು ಪಡೆಯುತ್ತಾ ಬಂದರು. ಆ ಕಾಲದಲ್ಲಿ ವ್ಯಾಪಾರವು ಕೇವಲ ಸ್ಥಳೀಯವಾಗಿತ್ತು. ಕಾಲಕ್ರಮದಲ್ಲಿ ಈ ತೆರನಾದ ಸಾಟಿ ವ್ಯಾಪಾರದಿಂದ (Barter) ಹಲವು ಅನನುಕೂಲಗಳು ಕಂಡುಬಂದು ಅವುಗಳ ಪರಿಹಾರಕ್ಕಾಗಿ ಜನರ ಅನುಭವದಿಂದ ಹಣದ ಉಪಯೋಗವು ಆಚರಣೆಗೆ ಬಂದಿತು. ಹಣದ ಉಪಯೋಗದಿಂದ ವ್ಯಾಪಾರಕ್ಕೆ ಹೆಚ್ಚು ಸೌಲಭ್ಯವೇರ್ಪಟ್ಟು ವ್ಯಾಪಾರವು ಕೇವಲ ಸ್ಥಳೀಯವಾಗಿರದೆ ಕ್ರಮೇಣ, ರಾಷ್ಟ್ರೀಯವಾಗಿ, ಅಂತರ್ ರಾಷ್ಟ್ರೀಯವಾಗಲು ಅವಕಾಶವಾಯಿತು.

ಹದಿನೆಂಟನೆಯ ಶತಮಾನದ ಮಧ್ಯಭಾಗದಿಂದ ವೈಜ್ಞಾನಿಕರ ಶ್ರಮದ ಫಲವಾಗಿ ಹುಟ್ಟಿದ ಅನೇಕ ಯಂತ್ರಗಳ ಸಹಾಯದಿಂದ ಪ್ರಪಂಚಕ್ಕೆಲ್ಲಾ ಅದ್ಭುತವಾದ ಯಾನ, ವಾಹನಗಳ ಸೌಲಭ್ಯಗಳು ದೊರಕಿ ಪ್ರಪಂಚದ ವ್ಯಾಪಾರದಲ್ಲಿ ಒಂದು ದೊಡ್ಡ ಕ್ರಾಂತಿಯೇ ಉಂಟಾಯಿತು. ಭೂ, ಜಲ, ವಾಯು ಮಾರ್ಗಗಳಲ್ಲಿ ಅತ್ಯಂತ ವೇಗವಾಗಿ ಸಂಚರಿಸಬಹುದಾದ ಯಾನ, ವಾಹನಗಳ ಸಹಾಯದಿಂದ ಪ್ರಪಂಚದ

ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಜನಗಳೂ ಮತ್ತು ಪದಾರ್ಥಗಳೂ ವೇಗದಿಂದ ಪ್ರಯಾಣಮಾಡಲು ಅನುಕೂಲವೇರ್ಪಟ್ಟಿದೆ. ಅಲ್ಲದೆ ವಿಶ್ವದ ಒಂದು ಮೂಲೆಯಲ್ಲಿ ನಡೆದ ಯಾವ ಸಮಾಚಾರವನ್ನಾಗಲಿ ನಿಮಿಷಮಾತ್ರದಲ್ಲಿ ಪ್ರಪಂಚಕ್ಕೆಲ್ಲಾ ತಿಳಿಸಬಹುದಾದ ರೇಡಿಯೋ ಅಥವಾ ಆಕಾಶವಾಣಿಯ ಸಹಾಯದಿಂದ ಬಹು ವಿಶಾಲವಾದ ಜಗತ್ತೂ ಸಂಕುಚಿತವಾದಂತಾಗಿದೆ. ಈ ವೈಜ್ಞಾನಿಕ ಸೌಲಭ್ಯಗಳಿಂದ ರಾಜಕೀಯ ಮತ್ತು ರಾಷ್ಟ್ರೀಯ ಭಾವನೆಗಳು ಮಸುಕಾಗಿ ಜನರಲ್ಲಿ ಅಂತರ್ ರಾಷ್ಟ್ರೀಯ ಭಾವನೆಯು ಹೆಚ್ಚುತ್ತಿದೆ. ವಾಹನ ಸೌಕರ್ಯಗಳಿಲ್ಲದ ಹಿಂದಿನ ಕಾಲದಲ್ಲಿ ವ್ಯಾಪಾರವು ಕೇವಲ ಸ್ಥಳೀಯವಾಗಿದ್ದು ಮಾರುವವರು ಮತ್ತು ಕೊಳ್ಳುವವರು ಪರಸ್ಪರ ಕಲೆತು ಪದಾರ್ಥಗಳನ್ನು ವಿನಿಮಯದಿಂದ ಹೊಂದಬೇಕಾಗಿತ್ತು. ಇಂತಹ ವ್ಯಾಪಾರವು ನಡೆಯುವ ಸ್ಥಳಗಳಿಗೆ **ಪೇಟೆ**ಯೆಂದು ಈಗಲೂ ನಮ್ಮಲ್ಲಿ ರೂಢಿಯಲ್ಲಿದೆ. ಇತ್ತೀಚೆಗೆ ಈ ಆಶ್ಚರ್ಯಕರವಾದ ಯಾನವಾಹನಗಳ ಸಹಾಯದಿಂದ ಜಗತ್ತೇ ಒಂದು ದೊಡ್ಡ ಪೇಟೆಯಾಗಿ ಪರಿಣಮಿಸಿದೆ. ಪದಾರ್ಥಗಳು ಕೇವಲ ಉತ್ಪನ್ನಸ್ಥಾನದಲ್ಲಿ ಮಾತ್ರವಲ್ಲದೆ ಪ್ರಪಂಚದ ನಾನಾ ಭಾಗಗಳಲ್ಲಿ ಮಾರಾಟವಾಗುತ್ತಿರುವುದು ಸಾಮಾನ್ಯ ವಿಷಯ. ಇಂಡಿಯಾ ದೇಶದ ಹತ್ತಿ ಮತ್ತು ಎಣ್ಣೆ ಬೀಜಗಳಿಗೆ ವಿಶೇಷವಾದ ಗಿರಾಕಿ ಗ್ರೇಟ್ ಬ್ರಿಟನ್ ಮುಂತಾದ ಯೂರೋಪ್ ರಾಷ್ಟ್ರಗಳೆಂದು ಎಲ್ಲರಿಗೂ ತಿಳಿದಿದೆ. ಮಾಂಸ, ಹೂ, ಹಣ್ಣು ಮುಂತಾದ ಬಹು ಬೇಗ ಕೆಡುವ ಪದಾರ್ಥಗಳಿಗು ಕೂಡ ಅಂತರ್‌ರಾಷ್ಟ್ರೀಯ ವ್ಯಾಪಾರವಿರುವುದು ಆಧುನಿಕ ಜೀವನದ ಒಂದು ವಿಶೇಷ, 'ಆಸ್ಟ್ರೇಲಿಯ ದೇಶದ ಮಾಂಸ ಮಾರಾಟವಾಗುವುದು ಲಂಡನ್ನಿನ ಪೇಟೆಯಲ್ಲಿ, ರಷ್ಯದೇಶದಲ್ಲಿ ಬೆಳೆದ ಹೂಗಳಿಗೆ ಗಿರಾಕಿ ಇರುವುದು ನ್ಯೂಯಾರ್ಕ್ ಮಾರ್ಕೆಟ್ಟಿನಲ್ಲಿ ಈ ತೆರನಾದ ಅಂತರ್‌ರಾಷ್ಟ್ರೀಯ ವ್ಯಾಪಾರದಲ್ಲಿ ಪದಾರ್ಥಗಳು ಪ್ರಪಂಚದ ಮೂಲೆಯಿಂದ ಮೂಲೆಗೆ ಬಹು ಬೇಗ ಸಾಗಣೆಯಾಗುವುದಲ್ಲದೆ, ಅವಕ್ಕೆ ನಿರ್ಣಯವಾಗುವ ಬೆಲೆಗಳನ್ನು ಆಕಾಶವಾಣಿಯ ಮುಖಾಂತರ ಜನರಿಗೆ ತಿಳಿಯುವಂತೆ ಪ್ರಚಾರಮಾಡಲು ವಿಶೇಷ ಸೌಲಭ್ಯಗಳಿವೆ.

ಇದರಿಂದ ಬಹು ಹಿಂದಿನ ಕಾಲದಲ್ಲಿ ರಾಷ್ಟ್ರಗಳಲ್ಲಿ ಕಂಡುಬರುತ್ತಿದ್ದ ಸ್ವಸಂಪೂರ್ಣತೆಯು (Self-Sufficiency) ಮಾಯವಾಗಿ ಪರಸ್ಪರಾವಲಂಬನೆಯು (Interdependence) ಹೆಚ್ಚಿದೆಯೆಂದು ಹೇಳಬಹುದು.

ವ್ಯಾಪಾರದ ಇತಿಹಾಸವನ್ನು ನೋಡಿದರೆ ಬಹುಕಾಲದವರೆಗೆ ಅನೇಕ ದೇಶಗಳು ವ್ಯಾಪಾರದಲ್ಲಿ ಕೇವಲ ರಾಷ್ಟ್ರೀಯ ಭಾವನೆಯನ್ನು ತೋರಿಸುತ್ತಿದ್ದುದು ಸಾಮಾನ್ಯ. ಪ್ರತಿ ರಾಷ್ಟ್ರವೂ ಸಾಧ್ಯವಾದ ಮಟ್ಟಿಗೆ ಎಲ್ಲ ಪದಾರ್ಥಗಳನ್ನೂ

ಸ್ವಪ್ರಯತ್ನದಿಂದಲೇ ಹವಣಿಸಿಕೊಳ್ಳಬೇಕೆಂಬುದು ಅವುಗಳ ಸಾಮಾನ್ಯ ನೀತಿಯಾಗಿತ್ತು. ಹದಿನೆಂಟನೆಯ ಶತಮಾನದ ಅಂತ್ಯಭಾಗದಲ್ಲಿ ಉಂಟಾದ ಕೈಗಾರಿಕಾ ಕ್ರಾಂತಿಯ ಫಲವಾಗಿ ಕೆಲವು ರಾಷ್ಟ್ರಗಳಲ್ಲಿ ಪದಾರ್ಥಗಳ ಉತ್ಪನ್ನವು ಯಂತ್ರಗಳ ಸಹಾಯದಿಂದ ವಿಶೇಷ ಹೆಚ್ಚಾಗಿ ಆ ರಾಷ್ಟ್ರಗಳು ತಮ್ಮ ವ್ಯಾಪಾರನೀತಿಯನ್ನು ಬದಲಾಯಿಸಿಕೊಳ್ಳಬೇಕಾದ ಸಂದರ್ಭವೊದಗಿತು. ಅದಕ್ಕನುಗುಣವಾಗಿ ಪ್ರಸಿದ್ಧ ಅರ್ಥಶಾಸ್ತ್ರಜ್ಞನಾದ ಆಡ್ಯಾಮ್ ಸ್ಮಿತ್ ಎಂಬುವನು "ದೇಶಗಳ ಅಭ್ಯುದಯಕ್ಕೆ ನಿರರ್ಗಳವಾದ, ನಿರಾತಂಕವಾದ ವ್ಯಾಪಾರ ನೀತಿಯು ಬಹು ಸಹಕಾರಿಯೆಂದೂ, ಇದರಿಂದ ಪದಾರ್ಥಗಳನ್ನು ಉತ್ಪನ್ನ ಮಾಡುವವರಲ್ಲಿ ಒಂದು ವಿಧವಾದ ಸ್ಪರ್ಧೆಯೇರ್ಪಟ್ಟು, ಪದಾರ್ಥಗಳ ಉತ್ಪನ್ನ ರೀತಿಯು ಉತ್ತಮಗೊಳ್ಳುವುದೆಂದೂ, ಹೇರಳವಾದ ಉತ್ಪನ್ನದಿಂದ ಪದಾರ್ಥಗಳ ಬೆಲೆ ಕಡಿಮೆಯಾಗಿ ಕೊಳ್ಳುವವರಿಗೆ ವಿಶೇಷವಾದ ಅನುಕೂಲವಾಗುವುದೆಂದೂ," ತನ್ನ **'ಲೈಸ್ಸೆ ಫೇರ್'** ಅಥವಾ **'ಫ್ರೀಟ್ರೇಡ್'** (ನಿರಾತಂಕ ವ್ಯಾಪಾರ) ನೀತಿಯನ್ನು ಪ್ರತಿಪಾದಿಸಿದನು. ಈತನ ಸ್ಫೂರ್ತಿಯಿಂದ ಗ್ರೇಟ್ ಬ್ರಿಟನ್ ಮುಂತಾದ ಮುಂಬರಿದ ರಾಷ್ಟ್ರಗಳು ೧೯ನೆಯ ಶತಮಾನದಲ್ಲಿ ಈ ನಿರಾತಂಕ ವ್ಯಾಪಾರದ ನೀತಿಯನ್ನು ಅನುಸರಿಸಿ ವಿಶೇಷವಾದ ಸಂಪತ್ತನ್ನು ಗಳಿಸಿದುವು. **ನಿರಾತಂಕವಾದ ಈ ವಿಶ್ವವ್ಯಾಪಾರವು, ವಿಶ್ವಶಾಂತಿಯ ಅಡಿಗಲ್ಲೆಂದು ಆತನು ವಾದಿಸಿದನು.** ಈ ಅಂತರ್‌ರಾಷ್ಟ್ರೀಯ ವ್ಯಾಪಾರದಿಂದ ಪ್ರಪಂಚಕ್ಕೆ ವಿಶೇಷ ಉಪಕಾರವಾಗಿದೆಯೆಂದು ಹೇಳಬಹುದು. ಇದರಿಂದ ಪ್ರತಿಯೊಂದು ರಾಷ್ಟ್ರವೂ ತನಗೆ ಬೇಕಾದ ಎಲ್ಲ ಪದಾರ್ಥಗಳನ್ನೂ ಪಡೆದು ಜನಜೀವನದ ಮಟ್ಟವನ್ನು ಉತ್ತಮಗೊಳಿಸಲು ಅವಕಾಶವಾಗುವುದು. ಅಲ್ಲದೆ ಪ್ರತಿಯೊಂದು ರಾಷ್ಟ್ರವೂ ಉತ್ಪತ್ತಿ ಮಾಡಲು ವಿಶೇಷ ಸೌಲಭ್ಯವಿರುವ ಪದಾರ್ಥಗಳನ್ನು ಮಾತ್ರ ಹವಣಿಸಿಕೊಂಡು ಹಾಗೆ ಉತ್ಪತ್ತಿ ಮಾಡಲು ಅವಕಾಶವಿಲ್ಲದ ಪದಾರ್ಥಗಳನ್ನು ಬೇರೆ ದೇಶಗಳಿಂದ ಅಗ್ಗವಾಗಿ ವಿನಿಮಯದಿಂದ ತರಿಸಿಕೊಳ್ಳಲು ಅವಕಾಶವುಂಟು. ಒಂದು ರೀತಿಯಲ್ಲಿ ಅಂತರ್‌ರಾಷ್ಟ್ರೀಯ ವ್ಯಾಪಾರವು, ಅಂತರಾಷ್ಟ್ರೀಯ ಕಾರ್ಯವಿಭಜನೆಯೆಂದು ಹೇಳಬಹುದು. ಒಟ್ಟಿನಲ್ಲಿ ಪ್ರಪಂಚದ ಸಂಪತ್ತು ಹೆಚ್ಚಿ ಜನಜೀವನವು ಉತ್ತಮಗೊಂಡು ಪ್ರಪಂಚವು ಸುಖಮಯವಾಗಲು ಅವಕಾಶವುಂಟು. ಅಲ್ಲದೆ ಈ ತೆರನಾದ ವ್ಯಾಪಾರದಿಂದ ಜನರ ಸಂಕುಚಿತ ಭಾವನೆಯು ಮಾಯವಾಗಿ ಅವರಲ್ಲಿ ವಿಶ್ವಪ್ರೇಮವು ಹುಟ್ಟಲು ಅವಕಾಶವಾಗುವುದು. ನಾಗರಿಕತೆಯ ಹೆದ್ದಾರಿಯಲ್ಲಿ ಮುಂಬರಿದಿರುವ ರಾಷ್ಟ್ರಗಳ ಅನುಕರಣದಿಂದ ಹಿಂದುಳಿದ ದೇಶಗಳ ಜನರು ತಮ್ಮ ನಡೆ, ನುಡಿ, ವ್ಯವಹಾರಗಳನ್ನು ಉತ್ತಮಪಡಿಸಿಕೊಂಡು ನಾಗರಿಕರಾಗಲು ತುಂಬಾ ಸಹಾಯವಾಗುವುದು.

ನಿರಾಂತಕ ವ್ಯಾಪಾರದಿಂದ ಆಗಬಹುದಾದ ಅನುಕೂಲಗಳ ಜೊತೆಗೆ ಕೆಲವು ಅನನುಕೂಲಗಳುಂಟು. ಬಲಯುತ ರಾಷ್ಟ್ರಗಳು ಸಣ್ಣ ಅಶಕ್ತ ರಾಷ್ಟ್ರಗಳ ಮೇಲೆ ಸ್ಪರ್ಧಿಸಿ ದಬ್ಬಾಳಿಕೆ ನಡೆಸಲು ಅವಕಾಶವಾಗುವುದೆಂದು ಹಲವರ ಅಭಿಪ್ರಾಯ. ಅಲ್ಲದೆ ಒಂದು ದೇಶದ ಆರ್ಥಿಕ ದೃಷ್ಟಿಯಿಂದ ಅಸಾಧ್ಯವಾದದು ಮಟ್ಟಿಗೆ ಸ್ವಾವಲಂಬಿಯಾಗಿರುವುದು ಉತ್ತಮ. ಜರ್ಮನಿಯ ಪ್ರಸಿದ್ಧ ಅರ್ಥಶಾಸ್ತ್ರಜ್ಞನಾದ ಫ್ರೆಡ್ರಿಕ್ ಲಿಸ್ಟ್ ಎಂಬಾತನು ಒಂದು ದೇಶದಲ್ಲಿ ಶೈಶವಾವಸ್ಥೆಯಲ್ಲಿರುವ ಕೈಗಾರಿಕೆಗಳಿಗೆ ಕೆಲವು ಕಾಲವಾದರೂ ರಕ್ಷಣೆಯು ಅತ್ಯಾವಶ್ಯಕವೆಂದು ಪ್ರತಿಪಾದಿಸಿರುತ್ತಾನೆ. ಇದರಿಂದ ಆಧುನಿಕ ವ್ಯಾಪಾರ ನೀತಿಯು ಕೇವಲ ಸ್ವೇಚ್ಛೆಯಾಗಿರದೆ, ಕೆಲವು ಹತೋಟಿಗಳಿಗೆ ಒಳಪಟ್ಟಿರಬೇಕೆಂದು ವಿದಿತವಾಗುವುದು. ೧೯೧೪—೧೯೧೮ ರಲ್ಲಿ ಪ್ರಪಂಚವನ್ನೇ ಆವರಿಸಿದ ಘೋರ ಸಂಗ್ರಾಮದ ಪರಿಣಾಮವಾಗಿ ಅಂತರ್ ರಾಷ್ಟ್ರೀಯ ವ್ಯಾಪಾರ ಕ್ರಮವು ಹದಗೆಟ್ಟಿತು. ಯುದ್ಧ ಪರಿಸ್ಥಿತಿಯಿಂದ ಅಂತರಾಷ್ಟ್ರೀಯ ವಿನಿಮಯಕ್ಕೆ ಅತ್ಯಾವಶ್ಯಕವಾದ ಚಿನ್ನದ ಅಭಾವದಿಂದ ಅನೇಕ ರಾಷ್ಟ್ರಗಳಲ್ಲಿ ನೋಟುಗಳ ಚಲಾವಣೆ ಹೆಚ್ಚಿ ಹಣದ ಉಬ್ಬರ (Inflation) ಉಂಟಾಯಿತು. ಬೇರೆ ಬೇರೆ ದೇಶಗಳ ಹಣದ ವಿನಿಮಯಕ್ಕೆ ದೊಡ್ಡ ಅಡಚಣೆ ಉಂಟಾಯಿತು. ಈ ಕುಂದನ್ನು ನಿವಾರಿಸಲು ಯುದ್ಧಾನಂತರ ಮೇಲಿಂದ ಮೇಲೆ ಅನೇಕ ಸಮ್ಮೇಳನಗಳು ನಡೆದುವು. ೧೯೨೦ ರಲ್ಲಿ ನಡೆದ ಬ್ರುಸ್ಸೆಲ್ಸ್ ೧೯೨೨ ರಲ್ಲಿ ಜಿನೋವ ಸಮ್ಮೇಳನ. ಪುನಃ ೧೯೨೨ ರಲ್ಲಿ ನಡೆದ ಜಿನೋವ ಸಮ್ಮೇಳನ ಮುಖ್ಯವಾದುವು. ಜಿನೋವ ಸಮ್ಮೇಳನದಲ್ಲಿ ಅಂತರ್‌ರಾಷ್ಟ್ರೀಯ ವ್ಯಾಪಾರಕ್ಕೆ ತೊಡಕುಗಳನ್ನು ತಂದೊಡ್ಡುವುದು ಸರಿಯಲ್ಲವೆಂದೂ, ಇದರಿಂದ ವಿಶ್ವಶಾಂತಿಗೆ ಭಂಗ ಬರುವುದೆಂದೂ, ರಾಷ್ಟ್ರಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯಗಳು ತೊಲಗಿ ಮೈತ್ರಿ ಹೆಚ್ಚಬೇಕೆಂದೂ ಹಲವು ಪ್ರಾಜ್ಞರು ತಿಳಿಸಿದರು. ಆದರೂ ಪ್ರಪಂಚದ ದುರದೃಷ್ಟದಿಂದ ರಾಷ್ಟ್ರಗಳಲ್ಲಿ ಮೈತ್ರಿ ಹೆಚ್ಚುವುದಕ್ಕೆ ಬದಲಾಗಿ ಅನುಮಾನ, ಅಸೂಯೆ ಹಬ್ಬಿ ಅಂತರ್‌ರಾಷ್ಟ್ರೀಯ ವ್ಯಾಪಾರಕ್ಕೆ ಅಡಚನೆಗಳನ್ನುಂಟುಮಾಡುತ್ತಾ ಬಂದುವು. ೧೯೩೦ರಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನವು "**ಹಾಲಿ ಸ್ಮೂಟ್ ಟಾರೀಫ್**" ಎಂಬ ಸುಂಕದ ಗೋಡೆಯನ್ನು ಕಟ್ಟುವ ನೀತಿಯಿಂದ ಪ್ರಪಂಚವನ್ನೇ ದೊಡ್ಡ ಕಷ್ಟಕ್ಕೀಡಿತು. ಕಾರ್ಡೆಲ್ ಹಲ್ ಅವರು "ಈ ದುರದೃಷ್ಟ ಕಾಯಿದೆಯಿಂದ ಪ್ರಪಂಚದ ರಾಷ್ಟ್ರಗಳಲ್ಲಿ ಒಡಕು ಹುಟ್ಟಿ ಪ್ರಪಂಚದ ಆರ್ಥಿಕ ಭದ್ರತೆಗೆ ಕೊಡಲಿ ಪೆಟ್ಟು ಬಿತ್ತೆಂದು" ಪೇಚಾಡಿದ್ದಾರೆ. ೧೯೨೯—೧೯೩೬ರ ವರೆಗೆ ಪ್ರಪಂಚವನ್ನು ಆವರಿಸಿದ ಅರ್ಥಿಕ ಮುಗ್ಗಟ್ಟಿಂದ ಅಂತರ್‌ರಾಷ್ಟ್ರೀಯ ವ್ಯಾಪಾರವು ಹೆಚ್ಚುವುದಕ್ಕೆ

ಬದಲು ಬಹಳಮಟ್ಟಿಗೆ ಕುಗ್ಗಿತು. ಇದರ ಫಲವಾಗಿ ನಿರುದ್ಯೋಗವು ಜಾಸ್ತಿಯಾಯಿತು. ಅನೇಕ ರಾಷ್ಟ್ರಗಳು ಚಿನ್ನದ ಬೆಂಬಲವುಳ್ಳ ನಾಣ್ಯ ಚಲಾವಣೆಯನ್ನು ಬಿಟ್ಟು ಕೇವಲ ನೋಟುಗಳ ಚಲಾವಣೆಗೆ ಇಳಿಯಬೇಕಾಯಿತು. ಹತ್ತೊಂಬತ್ತನೆಯ ಶತಮಾನದಲ್ಲಿ ನಿರಾಂತಕ ವ್ಯಾಪಾರ ನೀತಿಗೆ ತೌರುಮನೆಯಾದ ಗ್ರೇಟ್ ಬ್ರಿಟನ್ ಸಹ ರಕ್ಷಣಾ ವ್ಯವಸ್ಥೆಯನ್ನು ಕೈಗೊಳ್ಳಬೇಕಾಯಿತು. ಟಾರೀಫ್ " (ಸುಂಕ), ಬೌಂಟಿ (ನೆರವು), ಕೋಟಾಸ್ (ಪ್ರಮಾಣ ನಿರ್ಬಂಧ), ಬ್ಲಾಕ್ ಅಕೌಂಟ್ಸ್ (ಧನಸಂದಾಯದ ನಿರ್ಬಂಧ) ಮುಂತಾದ ವಿಶೇಷರೀತಿಯ ರಕ್ಷಣಾ ಕ್ರಮಗಳು ಅನೇಕ ದೇಶಗಳಲ್ಲಿ ಜಾರಿಗೆ ಬಂದವು.

೧೯೩೩ ನೆಯ ಜೂನ್ ೧೨ ರಲ್ಲಿ ಅರುವತ್ತು ನಾಲ್ಕು ರಾಷ್ಟ್ರಗಳ ವಿಶ್ವಸಮ್ಮೇಳನವೊಂದು ಲಂಡನ್ನಿನಲ್ಲಿ ನಡೆಯಿತು. ಈ ಸಮ್ಮೇಳನದ ಅಧ್ಯಕ್ಷ ಭಾಷಣಮಾಡುತ್ತಾ ರ್‍ಯಾಮ್ಸೇ ಮ್ಯಾಕ್ಡೊನಾಲ್ಡ್ ಅವರು ಪ್ರಪಂಚದ ರಾಷ್ಟ್ರಗಳು ಇತ್ತೀಚೆಗೆ ಅನುಸರಿಸುತ್ತಿರುವ ವ್ಯಾಪಾರ ನೀತಿಯು ವಿಶ್ವಶಾಂತಿಗೆ ಕುಠಾರ ಪ್ರಾಯವಾಗಿದೆ. ಪರಸ್ಪರ ಮೈತ್ರಿಗೆ ಬದಲು ಕ್ಷಾತ್ರವು ಹೆಚ್ಚುತ್ತಿದೆ. ಇದರಿಂದ ಪ್ರಪಂಚದಲ್ಲಿ ಅನಾವಶ್ಯಕವಾದ ಬಡತನ, ನಿರುದ್ಯೋಗ, ಮತ್ತು ಸಂಕಟಗಳು ಹೆಚ್ಚುತ್ತಿವೆ. ಮಾನವ ಸಮಾಜದ ಶತ್ರುಗಳಾದ ಬಡತನ, ನಿರುದ್ಯೋಗಗಳನ್ನು ನಿವಾರಿಸುವುದು ಪ್ರತಿ ನಾಗರಿಕನ ಕರ್ತವ್ಯ ಎಂದು ಸಾರಿದರು. ಆದರೂ ಈ ಸಮ್ಮೇಳದ ಪರಿಣಾಮವು ನಿರೀಕ್ಷಿಸಿದಷ್ಟು ಫಲಕಾರಿಯಾಗಲಿಲ್ಲ. ಪ್ರಪಂಚದ ಆರ್ಥಿಕ ಮುಗ್ಗಟ್ಟಿಗೆ ದಾರಿ ಮಾಡಿ ಕೊಟ್ಟ ಅಮೇರಿಕದ ಸಂಯುಕ್ತ ಸಂಸ್ಥಾನವು ಪ್ರೆಸಿಡೆಂಟ್ ರೂಸವೆಲ್ಟರ ಅಧ್ಯಕ್ಷತೆಯಲ್ಲಿ ಆರ್ಥಿಕ ಮುಗ್ಗಟ್ಟನ್ನು ಬಿಡಿಸಲು ಸತತವಾದ ಪ್ರಯತ್ನ ನಡೆಸಿತು. ನೀರಿನ ಅಭಾವದಿಂದ ಬಂಜರು ಬೀಳುವ ಭೂಮಿಗೆ ನೀರೊನ್ನೊದಗಿಸಿ ಶ್ರಯಕ್ಕೆ ತರುವಂತೆ, ಹಣದ ಮುಗ್ಗಟ್ಟಿನಿಂದ ಕಂಗಾಲಾಗಿರುವ ಪ್ರಪಂಚದ ಬಡತನವನ್ನು ಹೋಗಲಾಡಿಸಲು ಆವಶ್ಯಕವಾದ ಹಣವನ್ನು ಒದಗಿಸುವ ಹಲವು ಪ್ರಯೋಗಗಳನ್ನು ಆ ರಾಷ್ಟ್ರವು ಕೈಗೊಂಡಿತು. ನ್ಯೂ ಡೀಲ್ ಮತ್ತು ನ್ಯೂಯೆಸ್ಟ್ ಡೀಲ್ ಎಂಬುವು ಇವುಗಳಲ್ಲಿ ಮುಖ್ಯವಾದುವು. ಮುಗ್ಗಟ್ಟಿನಿಂದ ಪಾರಾಗಿ ರಾಷ್ಟ್ರಗಳು ಸ್ವಲ್ಪ ಚೇತರಿಸಿಕೊಳ್ಳುವಷ್ಟರಲ್ಲಿ ಬಹು ಭಯಂಕರವಾದ ಎರಡನೆಯ ಪ್ರಪಂಚಯುದ್ಧ ಎಲ್ಲರನ್ನೂ ತಲ್ಲಣಗೊಳಿಸಿತು. ಅವಿಶ್ರಾಂತವಾಗಿ ಆರು ವರ್ಷಗಳ ಕಾಲ ಲೋಕದ ರಾಷ್ಟ್ರಗಳು ರಕ್ತಪಾತದಿಂದ ನಿಸ್ತೇಜವಾಗಿವೆ. ಈ ಸಂಗ್ರಾಮವು ಯುದ್ಧವನ್ನು ಕೊನೆಗಾಣಿಸುವ ಯುದ್ಧವಾಗಬೇಕೆಂದೂ, ದೊಡ್ಡರಾಷ್ಟ್ರಗಳು ಸಣ್ಣರಾಷ್ಟ್ರಗಳ ಮೇಲೆ '**ಮತ್ಸ್ಯ ನ್ಯಾಯದಂತೆ**' ನಡೆಸುವ ಕಾರ್ಯವು ಮಾಯವಾಗಿ ಎಲ್ಲರೂ ಸಮತೆಯಿಂದ ಜೀವಿಸು

ವಂತಾಗಬೇಕೆಂದೂ ಎಲ್ಲರೂ ಆಶಿಸುತ್ತಿದ್ದಾರೆ. ಹಿಂದಿನ ಅನುಭವದಿಂದ ಪ್ರಪಂಚದ ಶಾಶ್ವತ ಶಾಂತಿಗೆ ವ್ಯವಸ್ಥಿತವಾದ ಅಂತರ್‌ರಾಷ್ಟ್ರೀಯ ವ್ಯಾಪಾರವು ಅತ್ಯಾವಶ್ಯಕವೆಂದು ಮನಗಂಡು ಯುದ್ಧ ನಡೆಯುತ್ತಿದ್ದಾಗಲೇ ಪ್ರಪಂಚದ ಮುಖಂಡ ಮಿತ್ರರಾಷ್ಟ್ರಗಳು ಬ್ರಿಟ್ಟನ್ ವುಡ್ಸ್ ಎಂಬಲ್ಲಿ ಒಂದು ಸಮ್ಮೇಳನವನ್ನು ನಡೆಸಿ ವಿಶ್ವ ವ್ಯಾಪಾರಕ್ಕೆ ಅತ್ಯಾವಶ್ಯಕವಾದ ವಿನಿಮಯಕ್ಕೆ ಅನಕೂಲವಾಗುವಂತೆ ಇಂದು ಅಂತರ್‌ರಾಷ್ಟ್ರೀಯ ನಿಧಿಯನ್ನು ಏರ್ಪಡಿಸಬೇಕೆಂದೂ, ಇದರ ಅಂಗವಾಗಿ ಲೋಕಕ್ಕೆಲ್ಲ ಒದಗುವ ಹಣಕಾಸಿನ ಸಂಸ್ಥೆ ಏರ್ಪಾಡಾಗಬೇಕೆಂದೂ ಹಲವು ಸಲಹೆಗಳನ್ನು ಮಾಡಿದ್ದಾರೆ.

ಇದು ಪರಮಾಣುಯುಗ. ಪರಮಾಣುವಿನ ಕಾರಕ (creative) ಮಾರಕ (destructive) ಶಕ್ತಿಯು ಅದ್ಭುತವಾದುದೆಂದು ವೈಜ್ಞಾನಿಕರು ಸಾರುತ್ತಿದ್ದಾರೆ. ಕೇವಲ ಬಲಪ್ರದರ್ಶನದಿಂದ ಶಾಂತಿಯನ್ನು ಸ್ಥಾಪಿಸಲು ಯತ್ನಿಸುವುದು ನಿಷ್ಪ್ರಯೋಜನವೆಂದು ಪ್ರಪಂಚದ ರಾಷ್ಟ್ರಗಳು ಚೆನ್ನಾಗಿ ಮನಗಂಡಿವೆ. **ವಿಶ್ವ ಶಾಂತಿಗೆ ತಳಹದಿ ವಿಶ್ವಮೈತ್ರಿ;** ವಿಶ್ವ ಮೈತ್ರಿಗೆ ಅತ್ಯಾವಶ್ಯಕವಾದುದು ಅಂತರ್‌ರಾಷ್ಟ್ರೀಯ ವ್ಯಾಪಾರ. ಈ ವ್ಯಾಪಾರವು ವ್ಯವಸ್ಥಿತವಾಗಿ, ಯಾವುದೊಂದು ರಾಷ್ಟ್ರದ ಆರ್ಥಿಕ ಭದ್ರತೆಗೆಭಂಗಬರದಂತೆ, ಎಲ್ಲಾ ರಾಷ್ಟ್ರಗಳೂ ಸಮತೆಯಿಂದ, ಸೌಹಾರ್ದದಿಂದ ನಡೆದು ಬಂದರೆ ಪ್ರಪಂಚದಲ್ಲಿ ಶಾಶ್ವತವಾದ ಶಾಂತಿಯು ನೆಲೆಸುವುದು. ಈಗಿನ ಪರಿಸ್ಥಿತಿಯಲ್ಲಂತೂ ಯಾವುದೊಂದು ರಾಷ್ಟ್ರವೂ ಇತರ ರಾಷ್ಟ್ರಗಳ ಯೋಗಕ್ಷೇಮವನ್ನು ನಿರ್ಲಕ್ಷಿಸುವಂತಿಲ್ಲ. ಉದಾಹರಣೆಗಾಗಿ ಭಾರತದ ಆಹಾರ ನಿಯೋಗ ಮಂಡಲಿಯ ಪ್ರಾರ್ಥನೆಯನ್ನು ಮನ್ನಿಸಿ ಪ್ರಪಂಚದ ಸಂಯುಕ್ತ ಆಹಾರಸಮಿತಿಯವರು ಭಾರತಕ್ಕೆ ಸಾಧ್ಯವಾದಷ್ಟು ಹೆಚ್ಚು ಆಹಾರ ಒದಗಿಸಲು ಒಪ್ಪಿರುವುದು ಮುಂದಿನ ಅಂತರ್‌ರಾಷ್ಟ್ರೀಯ ಮೈತ್ರಿಗೆ ಶುಭಸೂಚಕವಾಗಿದೆ. ಭೀಕರವಾದ ಯುದ್ಧದ ದೆಸೆಯಿಂದ ಕಂಗೆಟ್ಟಿರುವ ಪ್ರಪಂಚದಲ್ಲಿ ಶಾಂತಿಯನ್ನು ಕುದುರಿಸಲು ಸ್ಥಾಪಿತವಾಗಿರುವ (ಯುನೊ). ಸಂಯುಕ್ತರಾಷ್ಟ್ರಗಳ ಸಮಿತಿಯ ಸತತವಾದ ಪ್ರಯತ್ನಗಳಿಂದ ಪ್ರಪಂಚಕ್ಕೆ ಮಂಗಳವಾಗುವುದೆಂದು ಆಶಿಸೋಣ.

ಜಿ. ಎನ್. ಕೃಷ್ಣಮೂರ್ತಿ.

ರಸಸಂಪ್ರದಾಯ*

ನಾಟ್ಯಶಾಸ್ತ್ರವನ್ನು ಬರೆದ ಭರತಮುನಿ ರಸಸಂಪ್ರದಾಯದ ಮೂಲಪ್ರವರ್ತಕ. ಈ ಸಂಪ್ರದಾಯದ ಸಂಬಂಧ ವಿಶೇಷವಾಗಿ ನಾಟ್ಯಕಲೆಗೇ ಕೂಡಿಕೊಂಡಿರುವಂತೆ ಕಾಣಬರುತ್ತದೆ. ‘ವಿಭಾವಾನುಭಾವವ್ಯಭಿಚಾರಿಸಂಯೋಗಾದ್ರಸನಿಷ್ಪತ್ತಿಃ—’ ನಾಟ್ಯಶಾಸ್ತ್ರದ ಈ ಸೂತ್ರ ಎಲ್ಲ ರಸ ಸಂಪ್ರದಾಯಪದ್ಧತಿಯ ಕೇಂದ್ರ. ಇದರ ಸುತ್ತಲೂ ಈ ಸಂಪ್ರದಾಯ ಬೆಳೆದಿದೆ. ವಿಭಾವವೆಂದರೆ ರಸಪ್ರಾದುರ್ಭಾವಕ್ಕೆ ಮೂಲಕಾರಣ. ಅನುಭಾವವೆಂದರೆ ರಸಾನುಕೂಲ ವೃತ್ತಿಯನ್ನು ವ್ಯಕ್ತಪಡಿಸುವ ವಿಷಯ; ವ್ಯಭಿಚಾರಿಭಾವವೆಂದರೆ ಈ ವೃತ್ತಿಯನ್ನು ಪರಿಪೋಷಿಸುವ ಇತರ ವಿಷಯಗಳು, ಮತ್ತು ಭಾವ, ಇವುಗಳ ಸಂಯೋಗದಿಂದ ರಸನಿಷ್ಪತ್ತಿಯಾಗುತ್ತದೆ. ಹೀಗೆ ಈ ಸೂತ್ರದ ಅಕ್ಷರಶಃ ಅರ್ಥ. ಈ ಸೂತ್ರದ ನಿಜವಾದ ಅರ್ಥ ಏನಿರಬೇಕು ಎಂಬುದನ್ನು ಹೇಳಿ ಒಟ್ಟು ರಸಕಲ್ಪನೆಯ ಸವಿಸ್ತರ ವಿವರಣೆಯನ್ನು ಕೊಡಲು ಅನೇಕ ಗ್ರಂಥಕಾರರು ತಮ್ಮ ಗ್ರಂಥದ ಬಹು ಭಾಗವನ್ನು ತೆಗೆದುಕೊಂಡಿದ್ದಾರೆ.

ಮನುಷ್ಯನ ಮನೋವೃತ್ತಿಯನ್ನು ಉದ್ದೀಪನಗೊಳಿಸಿ ಆನಂದವನ್ನು ಕೊಡುವುದು ಕಾವ್ಯದ ಮುಖ್ಯ ಕೆಲಸವೇ ಹೊರತು ಬುದ್ಧಿಗೆ ಪ್ರೇರಣೆ ಕೊಡುವುದಲ್ಲವೆಂಬುದನ್ನು ಮೊದಲು ಲಕ್ಷ್ಯದಲ್ಲಿಡಬೇಕು. ರಸಕಲ್ಪನೆಯ ತಳಹದಿ ಕೆಲವು ಅಂಶಗಳಲ್ಲಿ ಇಂದ್ರಿಯಕಾರ್ಯವಿಜ್ಞಾನವಿಷಯಕವೂ, ಕೆಲವು ಅಂಶಗಳಲ್ಲಿ ಮಾನಸಶಾಸ್ತ್ರವಿಷಯಕವೂ ಆಗಿದೆ. ಇದಕ್ಕೆ ಅನುಸಾರವಾಗಿ ಅದರಲ್ಲಿ ಮನುಷ್ಯನ ಭಾವನೆ ಮತ್ತು ವೃತ್ತಿಗಳ ಮೇಲೆ ಕಾವ್ಯದ ಪರಿಣಾಮ ಹೇಗೆ ಆಗುತ್ತದೆಂಬುದನ್ನು ಹೇಳುವ ಪ್ರಯತ್ನ ನಡೆದಿರುತ್ತದೆ. ಮನುಷ್ಯನ ಅಂತಃಕರಣದಲ್ಲಿ ಕೆಲವು ವೃತ್ತಿಗಳೂ ಭಾವಗಳೂ ನಿತ್ಯವಾಗಿರುತ್ತವೆ. ಆದರೆ ಸಾಮಾನ್ಯವಾಗಿ ಅವು ಸುಪ್ತಾವಸ್ಥೆಯಲ್ಲಿದ್ದು ಅವಕ್ಕೆ ಸರಿಯಾದ ಚಾಲನೆ ಸಿಕ್ಕಿದಾಗ ಎಚ್ಚರವಾಗುವುವು. ಶರೀರದಲ್ಲಿನ ಶಕ್ತಿ ಸರಿಯಾದ ಔಷಧಿ ಸಂಬಂಧದಿಂದ ಹೇಗೆ ಎಚ್ಚರವಾಗಿ ಪ್ರತಿಕ್ರಿಯೆಯನ್ನು ತೋರಿಸುತ್ತದೆಯೋ ಹಾಗೆಯೇ ಈ ಮನೋವೃತ್ತಿಗಳೂ ಪ್ರತಿಕ್ರಿಯೆಯನ್ನು ತೋರಿಸುತ್ತವೆ. ನಾಟ್ಯಪ್ರಯೋಗದಲ್ಲಿ ಈ ಚಾಲನೆ ಶಬ್ದ ಮತ್ತು ಅಭಿನಯ ಇವುಗಳ ಸಂಬಂಧದಿಂದ ಆಗುತ್ತದೆ. ಕಾವ್ಯದಲ್ಲಿ ಬರಿಯ ಶಬ್ದಗಳಿಂದ ಆಗುತ್ತದೆ.

---

* ‘ಸಂಸ್ಕೃತ ಸಾಹಿತ್ಯ ಶಾಸ್ತ್ರಾಚಾ ಇತಿಹಾಸ್’—ಪುಟ ೨೮೩-೨೯೧ ಕನ್ನಡಿಸಿದುದು.

ಕುಶಲ ಚಿತ್ರಗಾರ ಸ್ವಲ್ಪ ಬಣ್ಣದ ಸಹಾಯದಿಂದ ನಿಜವಾದ ವಸ್ತುಗಳ ಭಾಸ ಮಾನ ದೃಶ್ಯವನ್ನು ಮುಂದಿಟ್ಟು ನೋಡುವವನಿಗೆ ತನ್ನ ಮುಂದೆ ನಿಜವಾದ ವಸ್ತು ಇರುವಂತೆ ಹೇಗೆ ಮಾಡುತ್ತಾನೋ ಅದೇ ರೀತಿ ಕುಶಲ ನಾಟಕಕಾರ ಮತ್ತು ಕವಿ, ಶಬ್ದ ಮತ್ತು ಅಭಿನಯಗಳ ಯೋಗದಿಂದ ಮತ್ತು ಕೇವಲ ಶಬ್ದಗಳ ಜೋರಿನಿಂದ ಕೇಳುವವರ ಮತ್ತು ಓದುವವರ ಮನಸ್ಸಿನಲ್ಲಿ ಕೆಲವು ಭಾವಗಳನ್ನು ಕೆರಳಿಸಿ ಅವರಿಗೆ ತಮ್ಮ ವಸ್ತುಸ್ಥಿತಿಯನ್ನು ಮರೆಸುತ್ತಾನೆ. ಇದರಿಂದ ಅವರು ಒಂದು ವಿಧವಾದ ಆನಂದಮಯ ವೃತ್ತಿಯನ್ನು ಭೋಗಿಸುತ್ತಾರೆ. ಈ ಆನಂದಮಯ ವೃತ್ತಿಯ ಸುಖಾನು ಭವಕ್ಕೇ ರಸವೆಂದು ಸಂಜ್ಞೆ ಕೊಡಲಾಗಿದೆ. ನಾಟಕ ಅಥವಾ ಕಾವ್ಯ ಇವುಗಳ ಯೋಗದಿಂದ ಉದ್ದೀಪಿತವಾಗುವ ಸ್ಥಾಯಿಭಾವಗಳು ಎಂಟೆಂದು ಕೆಲವರ ಮತ. ಕೆಲವರ ಮತದಲ್ಲಿ ಒಂಬತ್ತು; ರತಿ ಅಥವಾ ಪ್ರೇಮ, ಹಾಸ ಅಥವಾ ವಿನೋದ, ಶೋಕ, ಕ್ರೋಧ, ಉತ್ಸಾಹ, ಭಯ, ಜುಗುಪ್ಸೆ, ಮತ್ತು ವಿಸ್ಮಯ ಇವು ಎಂಟು ಸ್ಥಾಯಿ ಭಾವಗಳು. ಶಮ ಅಂದರೆ, ಮನಃಶಾಂತಿ, ಒಂಬತ್ತನೆಯದೆಂದು ಕೆಲವರ ಮತ. ರತಿ ಅಂದರೆ ಪ್ರೇಮ, ಈ ಭಾವ ಪುರುಷನಲ್ಲಿ ಸ್ತ್ರೀಸಂಬಂಧದಿಂದ, ಸ್ತ್ರೀಯಲ್ಲಿ ಪುರುಷನ ಸಂಬಂಧದಿಂದ ಹುಟ್ಟುತ್ತದೆ. ಎಂದರೆ ಸ್ತ್ರೀಪುರುಷರನ್ನು ಅವಲಂಬಿ ಸಿರುತ್ತದೆ. ಈ ಭಾವ ಒಂದಾವರ್ತಿ ಎಚ್ಚರವಾದರೆ, ಚಂದ್ರೋದಯ, ವಸಂತ ಋತು, ಹೂ ಬಳ್ಳಿ ಮಂಟಪ ಮುಂತಾದ ಉದ್ದೀಪಕ ಕಾರಣಗಳ ಸಂಬಂಧದಿಂದ ಬಲಗೊಳ್ಳುತ್ತದೆ. ರತಿಭಾವೋತ್ಕರ್ಷಕ ವಸ್ತು; ಅಂದರೆ ಸ್ತ್ರೀ ಮತ್ತು ಪುರುಷ, ಮತ್ತು ಇದನ್ನು ಪ್ರಜ್ವಲಿಸುವ ವಸ್ತು ವಸಂತಾದಿಗಳು—ಇವುಗಳಿಗೆ ವಿಭಾವವೆಂದು ಸಂಜ್ಞೆ ಕೊಡಲಾಗಿದೆ. ಮೊದಲನೆಯದು, ಎಂದರೆ ರತಿಗೆ ಮೊಳಕೆ ಒಡೆಸುವ ವಸ್ತುಗಳಿಗೆ ಆಲಂಬನ ವಿಭಾವವೆಂತಲೂ, ಈ ಮೊಳಕೆ ಒಡೆದ ರತಿಯನ್ನು ಪ್ರಜ್ವಲಿಸುವ ವಸ್ತು ಗಳಿಗೆ ಉದ್ದೀಪನ ವಿಭಾವವೆಂತಲೂ ಹೇಳುತ್ತಾರೆ. ರತಿ ಉದ್ದೀಪಿತವಾದರೆ ಅದಕ್ಕೆ ವ್ಯಕ್ತಸ್ವರೂಪ ಕೊಡುವ ಕಟಾಕ್ಷ ವಿಕ್ಷೇಪಣಾದಿಗಳಿಂದ ರತಿಯ ಕೆಲಸ ನಡೆದು ಬಂದುದು ತಿಳಿದುಬರುವುದರಿಂದ ಇವಕ್ಕೆ ಅನುಭಾವ ಎಂಬ ಹೆಸರನ್ನು ಕೊಡಲಾಗಿದೆ.

ರತ್ಯಾದಿ ಕೆಲವು ಸ್ಥಾಯಿಭಾವಗಳಿಗೆ ಸಾಧಾರಣವಾದ ಕೆಲವು ಅನಿತ್ಯ ಅಥವಾ ಗೌಣ ತರಹದ ಕೆಲವು ಭಾವಗಳಿವೆ. ಸ್ಥಾಯಿಭಾವದ ಪೂರ್ಣ ಪರಿಪೋಷ ಮಾಡುವುದರಲ್ಲಿ ಇವುಗಳ ಉಪಯೋಗವಾಗುತ್ತದೆ. ಈ ಭಾವ ನಿರ್ವೇದ ಅಂದರೆ ಖಿನ್ನತೆ, ಗ್ಲಾನಿ ಅಂದರೆ ಬಳಲಿಕೆ,—ಈ ರೀತಿ ಇರುತ್ತದೆ. ಇವುಗಳ ಸಂಬಂಧದಿಂದ ರತಿ ಮತ್ತು ಶೋಕ ಈ ಸ್ಥಾಯಿಭಾವಗಳು ಪೂರ್ಣವಾಗಿ ವ್ಯಕ್ತವಾಗುತ್ತವೆ. ಇವುಗಳಿಗೆ ವ್ಯಭಿಚಾರಿ ಅಥವಾ ಸಂಚಾರಿ ಭಾವವೆಂದು ಹೇಳುತ್ತಾರೆ. ರತಿ, ಶೋಕ,

ಹಾಸ ಮುಂತಾದ ಸ್ಥಾಯಿಭಾವಗಳು ಅವಶ್ಯವಾದ ವಿಭಾವಾನುಭಾವವ್ಯಭಿಚಾರಿ ಭಾವಗಳ ಸಂಯೋಗದಿಂದ ಪೂರ್ಣವಾಗಿ ವ್ಯಕ್ತವಾದರೆ ಅವುಗಳಿಗೆ ರಸಾವಸ್ಥೆ ಬಂದು ಶೃಂಗಾರ ಕರುಣ ಹಾಸ್ಯ ಮುಂತಾದ ಸಂಜ್ಞೆಗಳು ಬರುತ್ತವೆ. ನಾಟಕ ಕಾರ ನಾಟಕ ಬರೆಯುವಾಗ ಇಂಥಾ ಸ್ಥಳದಲ್ಲಿ ಶೃಂಗಾರ ರಸತಂದಿದ್ದೇನೆ, ಅಂಥಾ ಸ್ಥಳದಲ್ಲಿ ವೀರರಸ ಕೂಡಿಸಿದ್ದೇನೆ, ಹೀಗೆಂದು ಎಲ್ಲೂ ಹೇಳುವುದಿಲ್ಲ. ಆದರೆ, ನಾಯಕ ನಾಯಿಕಾ ಮುಂತಾದ ವಿಭಾವ, ಕಟಾಕ್ಷವಿಕ್ಷೇಪಣಾದಿ ಅನುಭಾವ, ನಿರ್ವೇದಾದಿ ವ್ಯಭಿಚಾರಿಭಾವ ಇವುಗಳನ್ನು ಯಥೋಚಿತವಾಗಿ ಯೋಜನೆ ಮಾಡಿ ಅವುಗಳ ವರ್ಣನೆಯಿಂದ ಹುಟ್ಟುವ ಮನಃಸಂವೇದ್ಯ ಆನಂದವನ್ನು ಅನುಭವಿಸುವ ಕೆಲಸ ಕೇಳುವವರಿಗೆ ಅಥವಾ ಓದುವವರಿಗೆ ನಾಟಕಕಾರ ವಹಿಸಿಕೊಡುತ್ತಾನೆ. ಈ ಕಾರಣಕ್ಕಾಗಿಯೇ ರಸ ವಾಚ್ಯವಾಗಿರದೆ ವ್ಯಙ್ಗ್ಯವೆಂದು ಪರಿಗಣಿಸಲಾಗಿದೆ. ಇದಕ್ಕೆ ಬದಲು ಒಂದು ವೇಳೆ ಕವಿ ಅಥವಾ ನಾಟಕಕಾರ ಇಂಥಾ ವರ್ಣನೆಯಲ್ಲಿ ಶೃಂಗಾರ ರಸವನ್ನು ಇಡಲಾಗಿದೆ ಇಂಥಾ ಕಡೆ ವೀರರಸವನ್ನು ಜೋಡಿಸಲಾಗಿದೆ—ಹೀಗೆಂದು ಸ್ಪಷ್ಟವಾಗಿ ಹೇಳುತ್ತಿದ್ದರೂ ಆ ವರ್ಣನೆಗಳಲ್ಲಿ ವಿಭಾವಾನುಭಾವಾದಿಗಳ ಯಥೋಚಿತವಾದ ಮೇಲನ ಇಲ್ಲದಿದ್ದರೆ, ಕೇಳುವವನಿಗೂ ನೋಡುವವನಿಗೂ ರಸೋತ್ಪತ್ತಿಯಿಂದ ಆಗುವ ಆನಂದ ಭೋಗಿಸುವುದಕ್ಕೆ ಸಿಕ್ಕುವುದೇ ಇಲ್ಲ. ಎಂದರೆ ರಸವಾದುದು ಹೇಳುವುದರಿಂದ ಹುಟ್ಟುವುದಿಲ್ಲ. ಆದರೆ ಅದಕ್ಕೆ ತಗಲುವ ಸಾಹಿತ್ಯ ವನ್ನು ಕ್ರಮಗೊಳಿಸಿದರೆಯೆ ರಸ ಪ್ರತೀತಿಯಾಗುವುದು. ರಸ ವಿಷಯದಲ್ಲಿ ಸಾಂಗೋಪಾಂಗ ಮತ್ತು ಸವಿಸ್ತರ ವಿವೇಚನೆ ನಾಟ್ಯಶಾಸ್ತ್ರ (ಅಧ್ಯಾಯ 6-7) ದಶರೂಪಕ (ಪ್ರಕಾಶ 4), ಸಾಹಿತ್ಯದರ್ಪಣ (ಉಲ್ಲಾಸ 3) ಮತ್ತು ರಸತರಂಗಿಣೀ, (ಸಮಗ್ರಗ್ರಂಥ) ಇವುಗಳಲ್ಲಿ ಕಂಡುಬರುತ್ತದೆ. ನಾಟ್ಯಶಾಸ್ತ್ರದಲ್ಲಿ (6-15) ಶೃಂಗಾರ, ಹಾಸ, ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ ಮತ್ತು ಅದ್ಭುತ ಹೀಗೆ ಎಂಟು ರಸಗಳನ್ನು ಹೇಳಿದೆ. ಮುಂದಿನ ಹಲವು ಗ್ರಂಥಕಾರರು ಶಾಂತ ರಸವನ್ನು ಸೇರಿಸಿ, ರಸಗಳ ಸಂಖ್ಯೆ ಒಂಬತ್ತು ಮಾಡಿರುತ್ತಾರೆ. ಆದರೆ ಶಾಂತ ರಸವನ್ನು ಬೇರೆ ಕಡೆಯಲ್ಲಿ ಇತರರು ಮಾನ್ಯ ಮಾಡಿದ್ದರೂ ನಾಟ್ಯದಲ್ಲಿ ಇದಕ್ಕೆ ಸ್ಥಳವಿಲ್ಲವೆಂದು ದಶರೂಪಕಾದಿ ಹಲವು ಗ್ರಂಥಗಳಲ್ಲಿ ಹೇಳಿದೆ. ದಶರೂಪಕದಲ್ಲಿ (4-35) ಧನಂಜಯ ಹೇಳುತ್ತಾನೆ: 'ಶಮಮಪಿ ಕೇಚಿತ್ ಪ್ರಾಹುಃ ಪುಷ್ಟಿರ್ನಾಟ್ಯೇಷು ನೈತಸ್ಯ'| ಇದಕ್ಕೆ ಕಾರಣ ಇಷ್ಟೇ : ನಾಟಕದ ಮುಖ್ಯ ಕೆಲಸ ಅಭಿನಯದ ಮೂಲಕವಾಗುತ್ತದೆ. ಇದರಲ್ಲಿನ ಸರ್ವ ಪರಿಸ್ಥಿತಿಯು ಶಾಂತರಸಕ್ಕೆ ಪ್ರತಿಕೂಲ ವಾಗಿದೆ. ಶಾಂತರಸಕ್ಕೆ ಸ್ಥಾಯಿಭಾವವಾದ ಶಮ ಎಂದರೆ, ಇಚ್ಛೆಯಿಲ್ಲದಿರುವಿಕೆ,

ಭಾವನೆ ಇಲ್ಲದಿರುವಿಕೆ, ವೈರಾಗ್ಯ ಇಂದ್ರಿಯನಿಗ್ರಹ ಮುಂತಾದವುಗಳ ಸಂಯೋಗ ನಾಟ್ಯಪ್ರಯೋಗದ ಪರಿಸ್ಥಿತಿಯಲ್ಲಿ ಹುಟ್ಟುವುದು ಶಕ್ಯವಿಲ್ಲ; "ಶಾಂತಶ್ಚ ತೃಷ್ಣಾಕ್ಷಯ ಸುಖಸ್ಯ ಯಃ ಪರಿಪೋಷಸ್ತಲ್ಲಕ್ಷಣೋ ರಸಃ ಪ್ರತೀಯತ ಏವ-(ಧ್ವನ್ಯಾಲೋಕಪುಟ 176) ಎಂದು ಹೇಳಿದೆ. ಆದರೆ ಕೇವಲ ಓದುವ ಕಾವ್ಯದಲ್ಲಿ ಆ ಸ್ಥಾಯಿಭಾವ ಹುಟ್ಟುವುದು ಶಕ್ಯವಿದೆ. ಕಾರಣ, ಕಾವ್ಯ ಶಾಂತವಾಗಿ ಏಕಾಂತದಲ್ಲಿ ಓದುವ ವಿಷಯವಾದುದರಿಂದ. ಮಹಾಭಾರತದಲ್ಲಿ ಕಂಡುಬರುತ್ತಿರುವಂತೆ, ಅದರಲ್ಲಿ ಶಾಂತರಸಕ್ಕೆ ಪರಿಪೋಷವಾಗುವ ಸರ್ವಸಿದ್ಧತೆ ಇದ್ದು ಸಹಜವಾಗಿ ಶಾಂತರಸ ಹುಟ್ಟುತ್ತದೆ.

> ಮಹಾಭಾರತೇಽಪಿ ಶಾಸ್ತ್ರಕಾವ್ಯರೂಪಚ್ಛಾಯಾನ್ವಯಿನಿ ವೃಷ್ಣಿಪಾಂಡವ
> ವಿರಸಾವಸಾನವೈಮನಸ್ಯದಾಯಿನೀಂ ಸಮಾಪ್ತಿಮುಪನಿಬಧ್ನತಾ
> ಮಹಾಮುನಿನಾ ವೈರಾಗ್ಯಜನನತಾತ್ಪರ್ಯಂ ಪ್ರಾಧಾನ್ಯೇನ ಸ್ವಪ್ರಬಂಧಸ್ಯ
> ದರ್ಶಯತಾ ಮೋಕ್ಷಲಕ್ಷಣಃ ಪುರುಷಾರ್ಥಃ ಶಾಂತೋರಸಶ್ಚ ಮುಖ್ಯತಯಾ
> ವಿವಕ್ಷಾವಿಷಯತ್ವೇನ ಸೂಚಿತಃ (ಧ್ವನ್ಯಾಲೋಕ ಪುಟ 238)

ನಾಟಕದಲ್ಲಿ ಎಲ್ಲಿ ಶಾಂತರಸವನ್ನು ಗೌಣರಸವೆಂದು ಕೂಡಿಸುತ್ತಾರೊ ಅಲ್ಲಿ ಶೃಂಗಾರದ ನಾಯಕ ಶಾಂತದ ನಾಯಕ ಇವರನ್ನು ಬೇರೆ ಬೇರೆ ಇಟ್ಟು, ಅವರ ಪರಿಸ್ಥಿತಿಗಳನ್ನೂ ಬೇರೆ ಬೇರೆ ಇಡಬೇಕು. ಹಾಗೆ ಮಾಡದಿದ್ದರೆ ಸರ್ವಥಾ ರಸಹಾನಿ ಆದೀತೆಂಬ ಆಶಯದ ವಿವೇಚನೆ ಧ್ವನ್ಯಾಲೋಕದಲ್ಲಿ ಮಾಡಲಾಗಿದೆ. ಈ ಒಂಬತ್ತು ರಸಗಳ ಜೊತೆಗೆ 'ಪ್ರೇಯಾನ್' ಎಂಬ ಹತ್ತನೆಯ ರಸವನ್ನು ರುದ್ರಟ ತನ್ನ ಕಾವ್ಯಾಲಂಕಾರದಲ್ಲಿ ಹೇಳಿದ್ದಾನೆ. (12-3) ಸ್ನೇಹಪ್ರಕೃತಿಃ ಪ್ರೇಯಾನ್ (16-17) ಎಂದು ಅದರ ಲಕ್ಷಣ ಹೇಳಿ; ಸಾಹಚಾರ್ಯಾದಿಗಳು ಅದರ ವಿಭಾವ, ಸ್ತ್ರೀಯರ ಅಶ್ರು ಮುಂತಾದವು ಅನುಭಾವ, ಸ್ನೇಹ ಸ್ಥಾಯಿಭಾವ ಹೀಗೆಂದು ರುದ್ರಟ ಹೇಳಿದ್ದಾನೆ. ಇದಲ್ಲದೆ ವಾತ್ಸಲ್ಯ, ಲೌಲ್ಯ, ಭಕ್ತಿ ಮತ್ತು ಕಾರ್ಪಣ್ಯ ಇವೂ ರಸಗಳೆಂದು ಹಲವರ ಮತ. ಆದರೆ ಈ ಮತವನ್ನು ರಸತರಂಗಿಣೀಕಾರ (ತರಂಗ 6) ತಳ್ಳಿಹಾಕಿ ಮೇಲೆ ಹೇಳಿದ ಒಂಬತ್ತು ರಸಗಳಲ್ಲೆ ಇವುಗಳ ಅಂತರ್ಭಾವ ಆಗುತ್ತದೆಂದು ನಿರ್ಣಯ ಕೊಟ್ಟಿದ್ದಾನೆ. ಭಕ್ತಿ ವಾತ್ಸಲ್ಯ ಶ್ರದ್ಧಾ ಇವೂ ರಸವಾಗುತ್ತವೆಂದು ಹಲವರು ಹೇಳಿರುವುದನ್ನು ರಸರತ್ನಹಾರ ಕರ್ತನಾದ ಶಿವರಾಮನು ಖಂಡಿಸಿ, ಅವುಗಳನ್ನು ಮೇಲೆ ಹೇಳಿದ ಒಂಬತ್ತು ರಸಗಳಲ್ಲೇ ಕೂಡಿಸಬಹುದೆಂದು ಬರೆದಿದ್ದಾನೆ.

ಈಗ ರಸಾದಿ ಸಂಜ್ಞೆಯ ವಿಚಾರ ಮಾಡೋಣ. ರಸವಾದುದು ಮನಸ್ಸಿನ ಒಂದು ಆನಂದಾತ್ಮಕ ಅವಸ್ಥೆ. ಈ ಆನಂದವನ್ನು ಕೇವಲ ಹೃದಯದಿಂದಲೇ ಭೋಗಿಸಬೇಕು. 'ರಸನಾದ್ರಸತ್ವಮೇಷಾಂ' ಎಂದು ರುದ್ರಟ ರಸಶಬ್ದದ ವ್ಯುತ್ಪತ್ತಿ ತೋರಿಸಿದ್ದಾನೆ. (12-4)

ರಸತರಂಗಿಣಿಯಲ್ಲಿ (ತರಂಗ 6) 'ವಿಭಾವಾನುಭಾವ ಸಾತ್ವಿಕವ್ಯಭಿಚಾರಿ ಭಾವೈರುಪನೀಯಮಾನಃ ಪರಿಪೂರ್ಣಃ ಸ್ಥಾಯಿಭಾವೋ ರಸಃ' ಹೀಗೆ ರಸಲಕ್ಷಣ ವನ್ನು ಮಾಡಲಾಗಿದೆ. ನಾಟ್ಯಶಾಸ್ತ್ರದಲಕ್ಷಣವೂ ಇದೇ ರೀತಿ ಇರುವುದನ್ನು ಮೊದಲೇ ಕೊಟ್ಟಿದೆ (6-34). ವಿಭಾವದ ವ್ಯುತ್ಪತ್ತಿ ನಾಟ್ಯಶಾಸ್ತ್ರದಲ್ಲಿ (7-4) ಬಹವೋರ್ಥಾ ವಿಭಾವ್ಯಂತೇ ವಾಗಂಗಾಭಿನಯಶ್ರಯಾಃ| ಅನೇನ ಯಸ್ಮಾತ್ತೇನಾಯಂ ವಿಭಾವ ಇತಿ ಸಂಜ್ಞಿತಃ ಎಂದು ಹೇಳಿದೆ: ದಶರೂಪಕದಲ್ಲಿ (4-2) 'ಜ್ಞಾಯಮಾನತಯಾ ತತ್ರ ವಿಭಾವೋ ಭಾವ ಪೋಷಕೃತ್ | ಆಲಂಬನೋದ್ದೀಪನತ್ವ ಪ್ರಭೇದೇನ ಸಚದ್ವಿಧಾ ‖' ರಸತರಂಗಿಣಿಯಲ್ಲಿ (ತರಂಗ 2) 'ವಿಶೇಷೇಣ ಭಾವಯಂತಿ ಉತ್ಪಾದಯಂತಿ ಯೇ ರಸಾಂಸ್ತೇ ವಿಭಾವಾಃ' ಎಂದು ಹೇಳಿದೆ. ರಸವನ್ನು ಹುಟ್ಟಿಸುವ ವಿಶೇಷ ಕಾರಣಗಳೇ ವಿಭಾವ.

ಸ್ಥಾಯಿಭಾವ ಎಲ್ಲ ಭಾವಗಳ ಅಧಿಪತಿ. ಭರತಮುನಿ ಹೇಳುತ್ತಾನೆ 'ಯಥಾ ನರಾಣಾಂ ನೃಪತಿಃ ಶಿಷ್ಯಾಣಾಂ ಚ ಯಥಾಗುರುಃ | ಏವಂ ಹಿ ಸರ್ವಭಾವಾನಾಂ ಭಾವಸ್ಥಾಯೀ ಮಹಾನಿಹ (ನಾ. ಶಾ. 7, 8) ಇತರ ಅನುಕೂಲ ಪ್ರತಿಕೂಲ ಭಾವಗಳಿಂದ ಯಾವುದು ವಿಕೃತಿಯಾಗುವುದಿಲ್ಲವೋ ಮತ್ತು ಅವುಗಳನ್ನು ಯಾವುದು ತನ್ನಂತೆ ಮಾಡಿಬಿಡುತ್ತದೆಯೋ ಆ ಭಾವ ಸ್ಥಾಯೀ ಎಂದು ದಶರೂಪಕಕಾರನ ಮತ. (4-34). ವಿರುದ್ಧೈರವಿರುದ್ಧೈರ್ವಾ ಭಾವೈರ್ವಿಚ್ಛಿದ್ಯತೇ ನ ಯಃ| ಆತ್ಮಭಾವಂ ನಯತ್ಯನ್ಯಾನ್ಸಸ್ಥಾಯೀ ಲವಣಾಕರಃ ‖ ಕೊನೆವರೆಗೂ ಯಾವುದು ಉಳಿಯುವುದೊ ಅದೇ ಸ್ಥಾಯೀ ಭಾವವೆಂದು ರಸತರಂಗಿಣಿಯಲ್ಲಿ ಕೊಟ್ಟಿದೆ. (ತರಂಗ 1) 'ಚರಮ ಸಮಯಪರ್ಯಂತಸ್ಥಾಯಿತ್ವಾದಸ್ಯ ಸ್ಥಾಯಿತ್ವವ್ಯಪದೇಶಃ.'

ಅನುಭಾವದ ಲಕ್ಷಣ ದಶರೂಪಕದಲ್ಲಿ (7-3) 'ಅನುಭಾವೋ ವಿಕಾರಸ್ತು ಭಾವಸಂಸೂಚನಾತ್ಮಕಃ' ಎಂದು ಹೇಳಿದೆ. ಇದರ ಮೇಲೆ ಟೀಕಾಕಾರ ಧನಿಕ ಹೇಳುತ್ತಾನೆ 'ಸ್ಥಾಯಿಭಾವಾನನುಭಾವಯತಃ ಸಾಮಾಜಿಕಾನ್ ಸಭ್ರೂವಿಕ್ಷೇಪ ಕಟಾಕ್ಷಾದಯೋ ರಸಪೋಷಕಾರಿಣೋಽನುಭಾವಾಃ' ರಸದಲ್ಲಿನ ಸ್ಥಾಯಿಭಾವ ವನ್ನು ದೃಗ್ಗೋಚರ ಮಾಡುವ ಕಟಾಕ್ಷ ಕ್ಷೇಪಣಾದಿ ಬಾಹ್ಯ ವ್ಯಾಪಾರಗಳೇ ಅನು ಭಾವ. ಅನುಭಾವಗಳ ಪೈಕಿ ಎಂಟು ಸಾತ್ವಿಕ ಭಾವಗಳೆಂದು ಎಣಿಸಲಾಗಿದೆ. ಈ ವಿಷಯದಲ್ಲಿ ದಶರೂಪಕಕಾರ ಪೃಥಗ್ಭಾವಾ ಭವಂತ್ಯನ್ಯೇಽನು ಭಾವತ್ವೇಽಪಿ ಸಾತ್ವಿಕಾಃ | ಸತ್ವಾದೇವ ಸಮುತ್ಪತ್ತೇಸ್ತಚ್ಚ ತದ್ಭಾವಭಾವನಮ್ ‖ ಸ್ತಂಭಪ್ರಲಯ ರೋಮಾಂಚಾಃ ಸ್ವೇದೋ ವೈವರ್ಣ್ಯವೇಪಥೂ| ಅಶ್ರುವೈಸ್ವರ್ಯ ಮಿತ್ಯಷ್ಟೌ ಸ್ತಂಭೋಽಸ್ಮಿನ್ನಿಷ್ಕ್ರಿಯಾಂಗತಾ‖ ಪ್ರಲಯೋ ನಷ್ಟ ಸಂಜ್ಞತ್ವಂ ಶೇಷಾಃ ಸುವ್ಯಕ್ತ

ಲಕ್ಷಣಾಃ (ದ. ರೂ. 4-4-6) ಎಂದು ಹೇಳಿದ್ದಾನೆ. ಸ್ತಂಭ ಅಂದರೆ ನಿಷ್ಕ್ರಿಯತೆ, ಪ್ರಲಯ ಅಂದರೆ ಮೂರ್ಛೆ, ರೋಮಾಂಚ, ಸ್ವೇದ, ಮುಖದ ಮ್ಲಾನತೆ, ಕಂಪ, ಅಶ್ರು ಮತ್ತು ಸ್ವರಭೇದ ಇವು ಸತ್ವದಿಂದ ಹುಟ್ಟುವುದರಿಂದ ಅವಕ್ಕೆ ಸಾತ್ವಿಕಭಾವವೆಂದು ಹೆಸರು. ಸತ್ವ ಎಂದರೆ ಸಹಾನುಭೂತಿಯಿಂದ ತುಂಬಿದ ಮನಸ್ಸು, ಈ ಸತ್ವದಿಂದ ಹುಟ್ಟಿದ್ದು ಸತ್ವೇನ ನಿರ್ವೃತ್ತಃ ಸಾತ್ವಿಕ ಎಂಬ ಅರ್ಥವನ್ನು ದಶರೂಪಕದಲ್ಲಿ ಕೊಡಲಾಗಿದೆ. ಸಾಹಿತ್ಯದರ್ಪಣದಲ್ಲೂ (3-134) ಇದೇ ಮತವನ್ನು ಕೊಡಲಾಗಿದೆ, ಆದರೆ ರಸತರಂಗಿಣಿಯಲ್ಲಿ 'ಸತ್ವಂ ಜೀವ ಶರೀರಂ ತಸ್ಯಧರ್ಮಾಃ ಸಾತ್ವಿಕಾಃ। ಇತ್ಥಂ ಚ ಶರೀರಭಾವಾಃ ಸ್ತಂಭಾದಯಃ ಸಾತ್ವಿಕಾಭಾವಾ ಇತಿ ಅಭಿಧೀಯಂತೇ ॥ (ರ. ತ. ತರಂಗ 4) ಎಂದು ಹೇಳಿದೆ. ಸತ್ವ ಎಂದರೆ ಮನುಷ್ಯನ ಶರೀರ; ಅದರ ಮೇಲೆ ಕಂಡು ಬರುವ ಧರ್ಮ ಅಥವಾ ಭಾವ ಸಾತ್ವಿಕಭಾವವಾಗುತ್ತದೆಂದು ಇದರ ಅರ್ಥ. ಹೀಗೆ ಸಾತ್ವಿಕ ಶಬ್ದದ ವ್ಯುತ್ಪತ್ತಿಸಂಬಂಧದಲ್ಲಿ ಮತಭೇದ ಕಾಣುತ್ತದೆ.

ವ್ಯಭಿಚಾರಿಭಾವ ಒಟ್ಟು ಮೂವತ್ತಮೂರೆಂದು ಹೇಳಿದೆ. ಅವು, ನಿರ್ವೇದ, ಗ್ಲಾನಿ, ಶಂಕಾ, ಆವೇಗ, ದೈನ್ಯ, ಶ್ರಮ, ಜಾಡ್ಯ, ಉಗ್ರತಾ ಮುಂತಾದವು.

ನಿರ್ವೇದಾವೇಗದೈನ್ಯಶ್ರಮಮದಜಡತಾ ಔಗ್ರ್ಯಮೋಹೌ ವಿಬೋಧಃ ।
ಸ್ವಪ್ನಾಪಸ್ಮಾರಗರ್ವಾ ಮರಣಮಲಸತಾಮರ್ಷನಿದ್ರಾವಹಿತ್ಥಾ ॥
ಔತ್ಸುಕ್ಯೋನ್ಮಾದಶಂಕಾಃ ಸ್ಮೃತಿಮತಿಸಹಿತಾ ವ್ಯಾಧಿಸಂತ್ರಾಸ ಲಜ್ಜಾ
ಹರ್ಷಾಸೂಯಾವಿಷಾದಾಃ ಸಧೃತಿಚಪಲತಾ ಗ್ಲಾನಿ ಚಿಂತಾ ವಿತರ್ಕಾಃ'

ಸಾಹಿತ್ಯದರ್ಪಣ (3-141) ಹಾಗೇ ನಾಟ್ಯಶಾಸ್ತ್ರ 6-18-21 ರಲ್ಲೂ ಹೇಳಿದೆ.

ವಿವಿಧಮಾಭಿಮುಖ್ಯೇನ ರಸೇಷು ಚರಂತೀತಿ (ನಾ. ಶಾ. ಪುಟ. 72)

ಅಂದರೆ ರಸಮಧ್ಯದಲ್ಲಿ ಬೇರೆ ಬೇರೆ ರೀತಿಯಿಂದ ಅವು ಪ್ರಕಟವಾಗುತ್ತವೆಂದು ಅವುಗಳಿಗೆ ವ್ಯಭಿಚಾರಿ ಎಂದು ಹೇಳಲಾಗಿದೆ. ದಶರೂಪಕಕಾರ:

ವಿಶೇಷಾದಾಭಿಮುಖ್ಯೇನ ಚರಂತೋ ವ್ಯಭಿಚಾರಿಣಃ ।
ಸ್ಥಾಯಿನ್ಯುಮಗ್ನನಿರ್ಮಗ್ನಾಃ ಕಲ್ಲೋಲಾ ಇವ ವಾರಿಧೌ ॥

ನಿತ್ಯವಾದ ಸಮುದ್ರದಲ್ಲಿ ಹೇಗೆ ಅಲೆಗಳ ಏರಿಳಿತವು ಆಗುತ್ತದೆಯೋ ಅದೇ ರೀತಿ ಸ್ಥಾಯಿಭಾವದಲ್ಲಿ ವ್ಯಭಿಚಾರಿ ಭಾವಗಳ ಏರಿಳಿತವು ಆಗುತ್ತದೆ. ಎಂಟು ಸ್ಥಾಯಿ ಭಾವ, ಎಂಟು ಸಾತ್ವಿಕಭಾವ, ಮೂವತ್ತಮೂರು ವ್ಯಭಿಚಾರಿಭಾವ ಒಟ್ಟು ೪೯ ಭಾವಗಳಾಗುತ್ತವೆ. ಅಭಿನಯದ ಮೂಲಕ ರಸಗಳಿಗೆ ಭಾವಿತ ಅಂದರೆ ಪುಷ್ಟಿ ಕೊಡುತ್ತವಾದ್ದರಿಂದ ಇವುಗಳಿಗೆ ಭಾವವೆಂದು ಹೇಳುತ್ತಾರೆ. ಭಾವವಿಲ್ಲದೆ ರಸೋ

ತ್ಪತ್ತಿ ಇಲ್ಲ. ಭಾವವಿದ್ದರೆ ರಸವಿದ್ದೇ ಇರಬೇಕು. ಪಲ್ಯ ಮುಂತಾದುವು ಪರಸ್ಪರ ಪೋಷಕವಾಗಿ ಅನ್ನಕ್ಕೆ ರುಚಿ ಕೊಡುವಂತೆ ರಸಭಾವಗಳ ಸಂಬಂಧವಿದೆಯೆಂದು ನಾಟ್ಯ ಶಾಸ್ತ್ರದಲ್ಲಿ ಹೇಳಿದೆ.

" ನಾನಾಭಿನಯಸಂಬದ್ಧಾನ್ ಭಾವಯಂತಿ ರಸಾನಿಮಾನ್ |
ಯಸ್ಮಾತ್ತಸ್ಮಾದಮೀ ಭಾವಾ ವಿಜ್ಞೇಯಾ ನಾಟ್ಯಯೋಕ್ತೃಭಿಃ ||
ನಭಾವಹೀನೋಽಸ್ತಿ ರಸೋ ನಭಾವೋ ರಸವರ್ಜಿತಃ |
ಪರಸ್ಪರ ಕೃತಾಸಿದ್ಧಿಸ್ತಯೋರಭಿನಯೇ ಭವೇತ್ ||
ವ್ಯಂಜನೌಷಧಿಸಂಯೋಗೋ ಯಥಾನ್ನಂ ಸ್ವಾದುತಾಂ ನಯೇತ್ |
ಏವಂ ಭಾವಾರಸಾಶ್ಚೈವ ಭಾವಯಂತಿ ಪರಸ್ಪರಂ ||' ನಾ. ಶಾ. (4. 35-37),

ರಸಪ್ರತೀತಿ ರಸಿಕನಿಗೆ ನಿಶ್ಚಿತವಾಗಿ ಹೇಗಾಗುತ್ತೆಂಬುದನ್ನು ಹೇಳುವಾಗ ಲೊಲ್ಲಟ, ಶಂಕುಕ, ಭಟ್ಟನಾಯಕ ಮತ್ತು ಅಭಿನವಗುಪ್ತ ಇವರಲ್ಲಿ ಬಹಳವಾದ ಮತ ಭೇದ ಕಾಣುತ್ತದೆ. ಈ ವಿಷಯದಲ್ಲಿ ಅರ್ವಾಚೀನ ಸಾಹಿತ್ಯಕಾರರ ಒಲೆತ ಅಭಿ ನವಗುಪ್ತನ ಮತದ ಕಡೆಗೆ ಇದೆ. ರಸಭೋಗವಿಷಯದಲ್ಲಿ ಲೊಲ್ಲಟನ ಮತ ಈರೀತಿ ಇದೆ. ರಸ ಮೂಲತಃ ನಾಯಕಗತ. ಉದಾಹರಣೆಗೆ ನಾಯಕ ರಾಮನನ್ನು ತೆಗೆದು ಕೊಳ್ಳೋಣ. ರಾಮ ಸೀತೆಯಮೇಲೆ ಪ್ರೇಮ ಮಾಡುತ್ತಾನೆ. ಈ ಪ್ರೇಮದ ವರ್ಣನೆಯನ್ನು ನಾಟಕಕಾರ ಯಥಾರ್ಥ ಶಬ್ದಗಳಿಂದ ಮಾಡುತ್ತಾನೆ. ರಾಮನ ಪಾತ್ರವನ್ನು ವಹಿಸುವ ನಟ ತನ್ನ ಅಭಿನಯ ನೈಪುಣ್ಯದಿಂದ ತಾನು ರಾಮನ ಮನಃಸ್ಥಿತಿಯಲ್ಲೇ ಇರುವಂತೆ ಭಾಸವನ್ನು ಪ್ರೇಕ್ಷಕರ ಮನಸ್ಸಿನಲ್ಲಿ ಹುಟ್ಟಿಸುತ್ತಾನೆ. ಪ್ರೇಕ್ಷಕರು ಆಕ್ಷಣದಲ್ಲಿ ಆರೀತಿ ಭಾವಿಸುವುದರಿಂದ ನಟನಲ್ಲಿ ಆರೋಪಿತವಾದ ಪ್ರೇಮಭಾವ ಪ್ರೇಕ್ಷಕರ ಮನಸ್ಸಿನಲ್ಲಿ ಆನಂದವನ್ನು ಹುಟ್ಟಿಸುತ್ತದೆ.

'ವಿಭಾವಾನುಭಾವವ್ಯಭಿಚಾರಿಸಂಯೋಗಾದ್ರಸನಿಷ್ಪತ್ತಿಃ'

ಭರತ ಸೂತ್ರದ ಈ ಅರ್ಥವೇ ಲೊಲ್ಲಟನ ಮತ. ಈ ಮತದ ಪ್ರಕಾರ ರಸಕ್ಕೂ ಪ್ರೇಕ್ಷಕರ ಭಾವನೆ ಅಥವಾ ವೃತ್ತಿಗಳಿಗೂ ಏನೂ ಸಂಬಂಧವಿಲ್ಲ. ಲೊಲ್ಲ ಟನ ಮತದಂತೆ 'ನಿಷ್ಪತ್ತಿ' ಅಂದರೆ 'ಉತ್ಪತ್ತಿ' ಎಂದು ಅರ್ಥ. ಸ್ಥಾಯಿಭಾವ (ರತಿ ಮುಂತಾದವು) ಎನ್ನುವುದು ಚಿತ್ತವೃತ್ತಿ. ವಿಭಾವಗಳ (ಎಂದರೆ, ಸ್ತ್ರೀ ಪುರುಷ ವಸಂತಾದಿಗಳು) ಸಂಯೋಗದಿಂದ ರಸೋತ್ಪತ್ತಿಯಾಗುತ್ತದೆ. ಎಂದರೆ ವಿಭಾವ ಎನ್ನುವುದು ಸ್ಥಾಯಿಭಾವದ ಕಾರಣವಾಗುತ್ತದೆ. ವಿಭಾವಾನುಭಾವಾದಿ ಗಳ ವರ್ಣನೆ ಮತ್ತು ಅಭಿನಯದಿಂದ ಸ್ಥಾಯಿಭಾವ ಪುಷ್ಟವಾದರೆ ಅದೇ ರಸವೆನಿಸು ತ್ತದೆ. ಈ ರಸ ನಾಟಕದ ಮತ್ತು ಕಾವ್ಯದ ರಾಮಾದಿ ಪಾತ್ರಗಳಲ್ಲಿರುತ್ತದೆ. ಅದೇ

ಪ್ರಕಾರ ತಾನು ರಾಮನೇ ಎಂದು ತಿಳಿದು ಅಭಿನಯ ಮಾಡುವ ನಟನಲ್ಲಿರುತ್ತದೆ. ಈ ಮತದ ಮೇಲೆ ದೊಡ್ಡ ಆಕ್ಷೇಪಣೆ ಈ ರೀತಿ ಇದೆ: ಬಹಳ ಹಿಂದಿನ ಕಾಲದಲ್ಲಿ ಆಗಿಹೋದ ರಾಮಾದಿಗಳಲ್ಲಿದ್ದ ಅಥವಾ ಅವರ ಅನುಕರಣಮಾಡುವ ನಟರಲ್ಲಿ ಇರುವ ರಸದಿಂದ ಪ್ರೇಕ್ಷಕನಿಗೆ ಆನಂದವೇತಕ್ಕೆ ಆಗಬೇಕೆಂಬುದು ಸ್ಪಷ್ಟವಾಗುವುದಿಲ್ಲ.

ಶಂಕುಕನ ಮತದಂತೆ ರಸ, 'ಅನುಮಾನ'ದ ಪರಿಣಾಮ. ಅಭಿನಯಕಲೆಯಲ್ಲಿ ನಿಷ್ಣಾತನಾದ ನಟ ರಾಮಾದಿ ಮೂಲವರ್ಣ್ಯ ಪುರುಷನ ಕೃತಿಗಳನ್ನು ಕೌಶಲ್ಯದಿಂದ ಅಭಿನಯ ಮಾಡುತ್ತಾನೆ. ಆ ಕಾಲದಲ್ಲಿ ಪ್ರೇಕ್ಷಕನಿಗೆ ಒಂದು ಕ್ಷಣ ಈ ನಟ ನಟನಾಗಿರದೆ ಪ್ರತ್ಯಕ್ಷ ವರ್ಣ್ಯಪುರುಷನೇ ಎಂದು ಅಭೇದಪ್ರತೀತಿ ಆಗುತ್ತದೆ. ನಟನು ವ್ಯಕ್ತಪಡಿಸಿದ ಅನುಭಾವ ವ್ಯಭಿಚಾರಿ ಭಾವಗಳಿಂದ ಪ್ರೇಕ್ಷಕ ಆ ರಾಮಾದಿ ವರ್ಣ್ಯಪುರುಷನ ಪ್ರೇಮದ ಅನುಮಾನ ಮಾಡಿ ಆ ಪ್ರೇಮಭಾವನೆಯನ್ನು ಮನಸ್ಸಿನಲ್ಲಿ ಕಲಕುತ್ತಾನೆ. ಇದರಲ್ಲಿ ಆನಂದವನ್ನು ಅನುಭವಿಸುತ್ತಾನೆ.

ಶಂಕುಕನ ಮತದ ವಿಸ್ತೃತ ವಿವೇಚನೆ ಅಭಿನವಭಾರತಿಯಲ್ಲಿ ಮಾಡಿದೆ. (ಪುಟ 274-278). ಇವನ ಮತದ ಪ್ರಕಾರ ರಸನಿಷ್ಪತ್ತಿಯೆಂದರೆ ರಸದ ಅನುಮಾನ ಎಂದು ಅರ್ಥ. ರಾಮನಲ್ಲಿ ಸೀತೆಯ ವಿಷಯವಾಗಿ ಇರುವ ರತಿ (ಸ್ಥಾಯಿಭಾವ) ನಟನಿಂದ ಅನುಕೃತವಾದರೆ ಅದರ ಮೇಲೆ ಪ್ರೇಕ್ಷಕನು ರಾಮನ ರತಿ ಸಂಬಂಧವಾಗಿ ಯಾವ ಅನುಮಾನ ಮಾಡುತ್ತಾನೋ ಅದೇ ಶೃಂಗಾರ. ಈ ಸ್ಥಳದಲ್ಲಿ ಪ್ರೇಕ್ಷಕನಿಗೆ ಈ ನಟನೇ ರತಿ ಸುಖದಿಂದ ಕೂಡಿದ್ದಾನೆಯೆ?, ಇವನೇ ರಾಮ ಎಂಬ ಭ್ರಮೆ, ಇವನು ಸುಖಿ ಅಲ್ಲ, ಇವನು ರಾಮನೆ ಅಲ್ಲವೆ ಎಂಬ ಸಂದೇಹ ಇವು ಯಾವುವೂ ಆಗುವುದಿಲ್ಲ. ಚಿತ್ರದಲ್ಲಿ ಕಾಣಬರುವ ಕುದುರೆಯಂತೆ, ರತಿಸುಖಿಯಾದ ರಾಮನ ಪ್ರತೀತಿ ಪ್ರೇಕ್ಷಕನಿಗೆ ಆಗುತ್ತದೆ. ಅಭಿನವಗುಪ್ತ ಶಂಕುಕನ ಎರಡು ಶ್ಲೋಕಗಳನ್ನು ಕೊಟ್ಟಿದ್ದಾನೆ;

> ಪ್ರತಿಭಾತಿ ನ ಸಂದೇಹೋ ನ ತತ್ತ್ವಂ ನ ವಿಪರ್ಯಯಃ
> ಧೀರಸಾವಯಮಿತ್ಯಸ್ತಿ ನಾಸಾವೇವಾಯಮಿತ್ಯಪಿ
> ವಿರುದ್ಧ ಬುದ್ಧಿ ಸಂಭೇದಾದವಿವೇಚಿತಸಂಪ್ಲವಃ
> ಯುಕ್ತ್ಯಾ ಪರ್ಯನುಯುಜ್ಯೇತ ಸ್ಫುರನ್ನನುಭವಃ ಕಯಾ—(ಅಭಿನವ ಭಾರತೀ ಪುಟ 275)

ಶಂಕುಕನ ಈ ಮತದಲ್ಲಿ ರಸದ ಸಂಬಂಧ ಪ್ರೇಕ್ಷಕನೊಂದಿಗೆ ಕೂಡಿಸಿದ್ದಾನೆ ನಿಜ. ಆದರೆ ನಟನ ಅಭಿನಯ ಕೌಶಲ್ಯದಿಂದ ಪ್ರೇಕ್ಷಕನ ಮನಸ್ಸಿನಲ್ಲಿ ಹೊರಡುವ ಅನುಮಾನವೇ ರಸದ ಸ್ವರೂಪವೆಂದು ಹೇಳುತ್ತಾನೆ. 'ಅನುಕರಣರೂಪೋ ರಸಃ' ಇದು ಶಂಕುಕನ ಮತಸಾರವೆಂದು ಹೇಳಬಹುದು. ಈ ಮತದ ಮೇಲೂ ಅನೇಕ ಆಕ್ಷೇಪಣೆಗಳು ಬರುತ್ತವೆ. ಮೂಲರಾಮ ಹೇಗಿದ್ದನೆಂಬುದು ನಮಗೂ ನಟನಿಗೂ

ಗೊತ್ತಿಲ್ಲದಿದ್ದರೆ ಅವನ ಯಥಾವತ್ತಾದ ಅನುಕರಣವಾದರೂ ನಟನು ಹೇಗೆ ಮಾಡುತ್ತಾನೆ? ಆದ್ದರಿಂದ ನಟನು ರಾಮನ ಅನುಕರಣಮಾಡುತ್ತಾನೆಂದು ಹೇಳುವುದು ಮೂಲತಃ ತಪ್ಪು. ಅದೇಪ್ರಕಾರ ರಾಮನಿಗೆ ಉಂಟಾಗುವ ಸೀತಾವಿಷಯಕ ಪ್ರೇಮದ ಅನುಕರಣವನ್ನು ಮಾಡಿ, ಅಭಿನಯಮಾಡುವ ನಟನಿಗೆ ರಾಮನ ಪ್ರೇಮದ ಅನುಮಾನ ಮಾಡುವುದು ಶಕ್ಯವಿಲ್ಲ. ಹೊಗೆಯಂತೆ ಕಾಣುವ ಮಂಜಿನಿಂದ ಅಗ್ನಿಯಾಗಲಿ ಅಗ್ನಿಯಂತೆ ಕೆಂಪಾಗಿರುವ ದಾಸವಾಳದ ಹೂವನ್ನಾಗಲಿ ನಾವು ಅನುಮಾನ ಮಾಡುವುದಿಲ್ಲ. ಪ್ರತ್ಯಕ್ಷ ಪ್ರತೀತಿಯಿಂದ ಯಾವ ಆನಂದವಾಗುತ್ತದೆಯೋ ಅದು ಅನುಮಾನದಿಂದ ಆಗುವದಿಲ್ಲ.

ರಸ ಅನುಮಾನ ರೂಪವೆಂಬ ಮತವು ಭಟ್ಟನಾಯಕನಿಗೆ ಅಮಾನ್ಯವಾಗಿರುವುದಲ್ಲದೆ ರಸವು ಪ್ರೇಕ್ಷಕರು ಅನುಮಾನದಿಂದ ಪಡೆದ ಪ್ರತೀತಿಯೆಂದು ಭಾವಿಸುವುದಕ್ಕೂ ಅವನು ಸಿದ್ಧನಿಲ್ಲ. ಭಟ್ಟನಾಯಕನು ರಸಾಸ್ವಾದವನ್ನು ಪರಬ್ರಹ್ಮ ಸಾಕ್ಷಾತ್ಕಾರದ ಮಟ್ಟಕ್ಕೆ ಏರಿಸಿದ್ದಾನೆ. ಪರಬ್ರಹ್ಮ ಹೇಗೆ ಆನಂದಮಯವೋ ಅದರಂತೆ, ರಸಾಸ್ವಾದವೂ ಆನಂದಸ್ವರೂಪವೆಂದು ಇವನ ಮತ. ಭಟ್ಟನಾಯಕನ ಈ ಮತವನ್ನು ಲೋಚನಾಕಾರ ವಿಸ್ತಾರವಾಗಿ ಕೊಟ್ಟಿರುತ್ತಾನೆ (ಪುಟ 67-68). ಭಟ್ಟನಾಯಕನ ಮತದಂತೆ ರಸ ಪ್ರಮಾಣಗ್ರಾಹ್ಯವಲ್ಲ. ಅದು ಹುಟ್ಟುವುದಿಲ್ಲ, ವ್ಯಕ್ತವಾಗುವುದಿಲ್ಲ. ಅದು ಇತರ ಜ್ಞಾನದಿಂದ ಪ್ರತೀತಿಯಾಗುವ ಹಾಗಿದ್ದರೆ ಕರುಣ ರಸದ ನಾಟಕವನ್ನು ನೋಡಿದ ಕೂಡಲೆ ಪ್ರೇಕ್ಷಕನಿಗೆ ಕೇವಲ ಶೋಕವೇ ಭಾಸವಾಗಬೇಕಾಗಿತ್ತು. ಆದರೆ ಶೋಕರಸ ನಾಟಕವನ್ನು ನೋಡುವುದರಲ್ಲಿ ಒಂದು ವಿಧವಾದ ಆನಂದವಾಗುತ್ತದೆ. ರಾಮನ ಸೀತಾವಿಷಯಕ ಪ್ರೇಮದ ಪ್ರಯೋಗವನ್ನು ನೋಡಿದ ಮೇಲೆ ಸೀತೆ ಪ್ರೇಕ್ಷಕರ ಶೃಂಗಾರಕ್ಕೆ ಕಾರಣವಾಗುವುದಿಲ್ಲ. ಯಾಕೆಂದರೆ ನಮಗೂ ಸೀತೆಗೂ ಸಂಬಂಧವಿಲ್ಲವೆಂದು ಪ್ರೇಕ್ಷಕರಿಗೆ ತಿಳಿದೇ ಇರುತ್ತದೆ. ಅಲ್ಲದೆ ಈ ಪ್ರಯೋಗದಿಂದ ಪ್ರೇಕ್ಷಕರಿಗೆ ತಮ್ಮ ಕಾಂತೆಯರ ಸ್ಮರಣೆಯೂ ಆಗುವುದಿಲ್ಲ. ನಿಜವಾಗಿಯೂ ಆಗುವುದು ಏನೆಂದರೆ: ಅಭಿನಯಚಾತುರ್ಯದಿಂದ ಮತ್ತು ಶಬ್ದಗಳ ಸೌಂದರ್ಯದಿಂದ ಪ್ರೇಕ್ಷಕನು ಈ ವ್ಯಕ್ತಿನಿಷ್ಠತ್ವವನ್ನು ಮರೆತು, ಮೂಲ ಪಾತ್ರಗಳು, ನಟ, ತಾನು ಇವೆಲ್ಲವನ್ನೂ ಒಂದೇ ಸಾಮಾನ್ಯ ಮಟ್ಟಕ್ಕೆ ತಂದು ಸೀತಾನಿಷ್ಠ ರಾಮನ ರತಿಯನ್ನು ವೈಯಕ್ತಿಕ ರೂಪವಲ್ಲದ್ದನ್ನಾಗಿ ಮಾಡಿ ಕೇವಲ ಸಾಮಾನ್ಯತ್ವದಿಂದ ರತಿಭಾವದ ಆವಿರ್ಭಾವ ಮಾಡುತ್ತಾನೆ. (ಇದಕ್ಕೆ ಭಾವಕತ್ವ ಶಕ್ತಿ ಎಂದು ಹೇಳುತ್ತಾರೆ). ಇವನಿಗೆ ಯಾವ ಚರ್ವಣಾತ್ಮ ಸುಖ ಸಿಕ್ಕುತ್ತದೆಯೋ ಅದೇ ರಸ.

ರಸ ವಿಷಯದಲ್ಲಿ ಅಭಿನವಗುಪ್ತನ* ಸ್ವಂತ ಅಭಿಪ್ರಾಯ ಈ ರೀತಿ ಇದೆ: ರಸವಾದುದು ಕಾರ್ಯ ಅಥವಾ ಜ್ಞಾಪ್ಯ ಅಂದರೆ ಹುಟ್ಟಿಸುವ ಅಥವಾ ಅನುಮಾನದಿಂದ ತಿಳಿಸಿಕೊಡುವುದಾಗಿರದೆ, ಅಭಿವ್ಯಕ್ತ ಅಂದರೆ ಸೂಚನೆ ಮಾಡಿಕೊಡುವಂತಹದು. ಭಟ್ಟನಾಯಕನು ಅಭಿಧಾ ಹೊರತು ಪರಿಗಣಿಸಿರುವ ಭಾವನಾ ಮತ್ತು ಭೋಗಗಳೆಂಬ ಶಬ್ದ ಶಕ್ತಿಗಳನ್ನು ಅಭಿನವಗುಪ್ತನು ಮಾನ್ಯ ಮಾಡುವುದಿಲ್ಲ. ಅಲ್ಲದೆ ರಸವು

---

*ರಸ ವಿಷಯದಲ್ಲಿ ಭಟ್ಟನಾಯಕನ ಮತ ಈರೀತಿ ಇದೆ.

'ನ ತಾಟಸ್ಥ್ಯೇನ ನಾತ್ಮಗತತ್ವೇನ ರಸಃ ಪ್ರತೀಯತೇ ನೋತ್ಪದ್ಯತೇ ನಾಭಿವ್ಯಜ್ಯತೇ ಅಪಿತು ಕಾವ್ಯನಾಟ್ಯೇ ಚಾಭಿದಾತೋ ದ್ವಿತೀಯೇನ ವಿಭಾವಾದಿಸಾಧಾರಣೀಕರಣಾತ್ಮನಾ ಭಾವಕತ್ವ ವ್ಯಾಪಾರೇಣ ಭಾವ್ಯಮಾನಃ ಸ್ಥಾಯೀ ಸತ್ವೋದ್ರೇಕಪ್ರಕಾಶಾನಂದಮಯಸಂವಿದ್ವಿಶ್ರಾಂತಿ ಸತತ್ವೇನ ಭೋಗೇನ ಭುಜ್ಯತ ಇತಿ ಭಟ್ಟನಾಯಕಃ (ಕಾವ್ಯಪ್ರಕಾಶ ಉಲ್ಲಾಸ 4). ಇದಲ್ಲದೆ ಇನ್ನೂ ವಿಸ್ತಾರವಾಗಿ ಭಟ್ಟನಾಯಕನ ಮತ ಅಭಿನವಗುಪ್ತನ ಲೋಚನದಲ್ಲೂ, ಅಭಿನವಭಾರತಿಯಲ್ಲೂ ಕೊಡಲಾಗಿದೆ. ಅಭಿನವಭಾರತಿಯಲ್ಲಿ ಈರೀತಿ ಇದೆ:

"ಭಟ್ಟನಾಯಕಸ್ತ್ವಾಹ ರಸೋ ನಪ್ರತೀಯತೇ ನೋತ್ಪದ್ಯತೇ ನಾಭಿವ್ಯಜ್ಯತೇ | ಸ್ವಗತತ್ವೇನ ಹಿ ಪ್ರತೀತೌ ಕರುಣೇ ದುಃಖಿತ್ವಂ ಸ್ಯಾತ್ ನಚಸಾ ಪ್ರತೀತಿರ್ಯುಕ್ತಾ | ಸೀತಾದೇರವಿಭಾವತ್ವಾತ್ ಸ್ವಕಾಂತಾಸ್ಮೃತ್ಯಸಂವೇದನಾತ್ | . . . ತಸ್ಮಾತ್ ಕಾವ್ಯೇ ದೋಷಾಭಾವಗುಣಾಲಂಕಾರಮಯತ್ವ ಲಕ್ಷಣೇನ ನಾಟ್ಯೇ ಚತುರ್ವಿಧಾಭಿನಯರೂಪೇಣ. ನಿಬಿಡನಿಜಮೋಹಸಂಕಟತಾನಿವಾರಣಕಾರಿಣಾ ವಿಭಾವಾದಿ ಸಾಧಾರಣೀಕರಣಾತ್ಮನಾಭಿಧಾತೋ ದ್ವಿತೀಯೇನಾಂಶೇನ ಭಾವಕತ್ವ ವ್ಯಾಪಾರೇಣ ಭಾವ್ಯಮಾನೋ ರಸೋನುಭವಸ್ಮೃತ್ಯಾದಿವಿಲಕ್ಷಣೇನ ರಜಸ್ತಮೋನುವೇಧವೈಚಿತ್ರ್ಯ ಬಲಾತ್ ಹೃದಿ ವಿಸ್ತಾರವಿಕಾಸಲಕ್ಷಣೇನ ಸತ್ವೋದ್ರೇಕಪ್ರಕಾಶಾನಂದಮಯನಿಜಸಂವಿದ್ವಿಶ್ರಾಂತಿವಿಲಕ್ಷಣೇನ ಪರಬ್ರಹ್ಮಾಸ್ವಾದಸವಿಧೇನ ಭೋಗೇನ ಪರಂ ಭುಜ್ಯತ" ಇತಿ | ಇವುಗಳ ಭಾವಾರ್ಥ ಇಷ್ಟೇ. ಕಾವ್ಯ ಅಥವಾ ನಾಟಕ ಇವುಗಳಲ್ಲಿ ಕೂಡಿಸಿರುವ ಶಬ್ದಗಳ (ಪದಗಳು) ಅಭಿಧಾ ಭಾವನಾ ಮತ್ತು ಭೋಗಿಕೃತಿಗಳೆಂಬ ಮೂರು ಕಾರ್ಯಗಳು ಇರುತ್ತವೆ. ಭೋಗಿಕೃತಿಗೆ ರಸಚರ್ವಣಾ ಅಥವಾ ಭೋಗವೆಂತಲೂ ಹೇಳುತ್ತಾರೆ. ಅಭಿಧಾ ಎಂದರೆ ಸರಳವಾಗಿ ತೋರುವ ಅರ್ಥ. ಇದು ಕಾವ್ಯದಲ್ಲಿದ್ದಂತೆ ಶಾಸ್ತ್ರದಲ್ಲೂ ಇರುತ್ತದೆ.

ಭಾವನೆಯಿಂದ ರಸೋದ್ದೀಪನೆ ಮಾಡುವ ನಾಯಕ ಮುಂತಾದ ವಿಷಯಗಳು ಎಂದರೆ ವಿಭಾವಗಳು, ಆ ವ್ಯಕ್ತಿ ಸ್ವರೂಪವನ್ನು ಒಂದು ಕಡೆಗೆ ಒತ್ತರಿಸಿ ಸಾಮಾನ್ಯ ರೂಪದಿಂದ ಎಂದರೆ ಸಾಧ್ವೀ, ಪತಿವ್ರತಾ, ಸುಂದರ ಸ್ತ್ರೀ ಈ ರೂಪಗಳಿಂದ ಮನೋಭೂಮಿಕೆಯ ಮೇಲೆ ನಿಲ್ಲುತ್ತವೆ. ಮೂರನೆಯ ವ್ಯಾಪಾರವಾದ ಭೋಗಿಕೃತಿ ಅಥವಾ ಭೋಗ ಮುಂದೆ ಬಂದು ಇದರಿಂದ ವಾಚಕ, ಶ್ರೋತಾ ಮತ್ತು ಪ್ರೇಕ್ಷಕ ಇವರಿಗೆ ಸ್ವತಃ ಒಂದು ವಿಧವಾದ ಅನುಭವವಾಗುತ್ತದೆ. ಈ ಅನುಭವ ಬ್ರಹ್ಮಾನಂದದಂತೆ ಕೇವಲ ಸ್ವಸಂವೇದ್ಯವಾಗಿರುತ್ತದೆ. ಶಬ್ದಗಳಿಂದ ಇದರ ವರ್ಣನೆ ಮಾಡಲು ಬರುವುದಿಲ್ಲ. ಈ ಅನುಭವದಿಂದ ಸಹೃದಯ ವಾಚಕನಾಗಲಿ ಅಥವಾ ಪ್ರೇಕ್ಷಕನಾಗಲಿ ಕ್ಷಣ

ಕೇವಲ ಸ್ವಸಂವೇದ್ಯ ಹಾಗೆಯೇ ವರ್ಣನಾತೀತ ಎಂಬುದೂ ಅಭಿನವಗುಪ್ತನಿಗೆ ಮಾನ್ಯವಲ್ಲ. ಪ್ರೇಕ್ಷಕರ ಮನಸ್ಸಿನಲ್ಲಿ ರತ್ಯಾದಿ ಸ್ಥಾಯಿಭಾವಗಳು ಸುಪ್ತಾವಸ್ಥೆಯಲ್ಲಿ ನಿತ್ಯವಾಗಿರುತ್ತವೆ. ಅವು ವಿಭಾವಾದಿಗಳ ಪ್ರೇರಣೆಯಿಂದ, ಎಚ್ಚರಗೊಂಡು ರಸಾವಸ್ಥೆಯಲ್ಲಿ ಪರಿಣತವಾಗುತ್ತವೆ. ಈ ನಾಲ್ಕು ಮತಗಳ ಸವಿಸ್ತರ ದಿಗ್ದರ್ಶನ, ಮಮ್ಮಟನ ಕಾವ್ಯಪ್ರಕಾಶದ ನಾಲ್ಕನೆಯ ಉಲ್ಲಾಸದಲ್ಲೂ, ಅಭಿನವಗುಪ್ತನ ಲೋಚನದಲ್ಲೂ (ಪುಟ 24-56) ಮಾಡಲಾಗಿದೆ. ಕಾವ್ಯದ ಆತ್ಮ ರಸ. ಭರತನ ಈ ಮತವನ್ನು ಶೃಂಗಾರತಿಲಕಕಾರನಾದ ರುದ್ರನು ಸ್ವೀಕರಿಸಿದ್ದಾನೆ. ಅಗ್ನಿಪುರಾಣ ಕಾವ್ಯಮೀಮಾಂಸಾ, ಅಲಂಕಾರಶೇಖರ, ಈ ಗ್ರಂಥಗಳೂ ಈ ಮತನ್ನು ಅವಲಂಬಿಸಿವೆ; ವಾಗ್ವೈದಗ್ಧ್ಯ ಪ್ರಧಾನೇಽಪಿ ರಸ ಏವಾತ್ರ ಜೀವಿತಮ್ ಎಂದರೆ ಕಾವ್ಯದಲ್ಲಿ ಶಬ್ದ ಕೌಶಲ್ಯದ ಪ್ರಾಧಾನ್ಯವಿದ್ದರೂ ಅದರ ಆತ್ಮ ಅಥವಾ ಜೀವ ರಸವೇ ಎಂದು ಅಗ್ನಿಪುರಾಣದಲ್ಲಿ ಹೇಳಿದೆ (336,-33). 'ರಸ ಆತ್ಮಾ' ಎಂದು ರಾಜಶೇಖರ ಹೇಳಿದ್ದಾನೆ (ಕಾ. ಮೀ. ಪುಟ 6) 'ಅಲಂಕಾರಸ್ತು ಶೋಭಾಯೈ ರಸ ಆತ್ಮಾ ಪರೇ ಮನಃ ಎಂದು ಶೌದ್ಧೋದನೀ ಅಲಂಕಾರಶೇಖರದಲ್ಲಿ ಹೇಳಿದ್ದಾನೆ. (ಪುಟ. 6).

ಪಿ. ವಿ. ಕಾಣೆ.

(ಕನ್ನಡಿಸಿದವರು—ಕೌಲಗಿ ಶೇಷಾಚಾರ್ಯ)

ಮಾತ್ರ ತನ್ನನ್ನು ತಾನು ಮರೆತು ವರ್ಣ್ಯ ವಿಷಯಗಳೊಂದಿಗೆ ತಾದಾತ್ಮ್ಯವನ್ನು ಹೊಂದುತ್ತಾನೆ. ಇದೇ ರಸಾನುಭವ. ಇದೇ ವಿಷಯವಾಗಿ ಹೇಮಚಂದ್ರನು ಕಾವ್ಯಾನುಶಾಸನವಿವೇಕದಲ್ಲೂ, ಜಯರಥನು ಅಲಂಕಾರಸರ್ವಸ್ವವಿವರಣದಲ್ಲೂ ಭಟ್ಟನಾಯಕನ ಕಾರಿಕೆಗಳನ್ನು ಉದಾಹರಿಸಿದ್ದಾರೆ,

> ಅಭಿಧಾ ಭಾವನಾ ಚಾನ್ಯಾ ತದ್ಭೋಗೀಕೃತಿರೇವಚ |
> ಅಭಿಧಾಧಾಮತಾಂ ಯಾತೇ ಶಬ್ದಾರ್ಥಾಲಂಕೃತೀ ತತಃ |
> ಭಾವನಾಭಾವ್ಯ ಏಷೋಽಪಿ ಶೃಂಗಾರಾದಿಗಣೋ ಮತಃ |
> ತದ್ಭೋಗೀಕೃತಿರೂಪೇಣ ವ್ಯಾಪ್ಯತೇ ಸಿದ್ಧಿಮಾನ್ನರಃ ||

ಈ ಎರಡು ಶ್ಲೋಕಗಳನ್ನು ಅಭಿನವಭಾರತಿಯಲ್ಲೂ ಕೊಡಲಾಗಿದೆ.

ಕಾವ್ಯಾವಲೋಕನ

ಹೆತ್ತಳಾ ತಾಯಿ—ಶಿವರಾಮ ಕಾರಂತ; ಪ್ರಕಾಶಕರು: ಬಾಲಚಂದ್ರ ಘಣೇಕರ, ಸಮಾಜ ಪುಸ್ತಕಾಲಯ, ಧಾರವಾಡ; ಬೆಲೆ, ೨ ರೂಪಾಯಿ; ಪುಟ ೧೪೮.

'ಮರಳಿಮಣ್ಣಿಗೆ' ಕಾದಂಬರಿಯನ್ನು ಬರೆದನಂತರ ಕಾರಂತರು ಕಾದಂಬರಿಗಳನ್ನು ಬರೆಯುವುದರಲ್ಲಿ ಹೊಸದೊಂದು ತೆರದ ಪ್ರಯೋಗವನ್ನು ಮಾಡುತ್ತಿದ್ದಾರೆಂದು ತೋರುತ್ತದೆ. ಈ ಹೊಸ ಪ್ರಯೋಗದಲ್ಲಿ ಘಟನೆಗಳಿಗಿಂತ ಪಾತ್ರಪೋಷಣೆಗೆ ಹೆಚ್ಚಿನ ಪ್ರಾಧಾನ್ಯ. ಹತ್ತಾರು ಸನ್ನಿವೇಶಗಳನ್ನು ಮನಸೆಳೆಯುವಂತೆ ಹೆಣೆದು ಓದುಗರ ಕುತೂಹಲವನ್ನು ಕೆರಳಿಸಿ ಕಾಯ್ದುಕೊಂಡು ಹೋಗುವುದು ಒಂದು ದಾರಿಯಾದರೆ, ಪಾತ್ರಗಳನ್ನು ಕೂಲಂಕಷವಾಗಿ ನಿರೀಕ್ಷಿಸಿ ಓದುಗರ ಮನಸ್ಸಿನಮೇಲೆ ಅವರ ವ್ಯಕ್ತಿತ್ವವನ್ನು ಬಿಂಬಿಸುವುದು ಎರಡನೆಯ ದಾರಿ. ಕಾರಂತರು ಇತ್ತೀಚೆಗೆ ಬರೆದ 'ಬೆಟ್ಟದ ಜೀವ'ದಲ್ಲಿ ಈ ರೀತಿ ಸ್ಪಷ್ಟವಾಗಿ ಕಂಡುಬರುತ್ತದೆ. ಅದೇ ರೀತಿ ಈ ಕಾದಂಬರಿಯಲ್ಲಿ ಇನ್ನೂ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಈ ರೀತಿ ಪಾತ್ರಗಳನ್ನು ಎತ್ತಿ ತೋರಿಸುವುದರಲ್ಲಿ ಆಯಾ ಪಾತ್ರಗಳ ಮನೋವೃತ್ತಿಯ ವಿಶ್ಲೇಷಣದಲ್ಲಿ, ಸುತ್ತಲಿನ ಆವರಣಕ್ಕೆ ಆ ಪಾತ್ರಗಳು ಕೊಡುವ ಉತ್ತರದಲ್ಲಿ ಕೆಲವೊಂದು ವಿಷಯಗಳ ಮೇಲೆ ಲೇಖಕನಿಗೆ ವಿಮರ್ಶೆಯೂ ಸಾಧ್ಯವಾಗುವುದುಂಟು. ಇದು ಸಾಧ್ಯವಾದಾಗ ಪಾತ್ರಗಳು ಕೇವಲ ಪಾತ್ರಗಳಾಗಿಯೇ ಉಳಿಯದೆ ಕೆಲವೊಂದು ಮನೋವೃತ್ತಿಯ ಪ್ರತೀಕಗಳಾಗಿ ಹೆಚ್ಚಿನ ಮಾನ್ಯತೆಯನ್ನು ಪಡೆಯುವವು. 'ಹೆತ್ತಳಾ ತಾಯಿ' ಕಾದಂಬರಿಯಲ್ಲಿ ಕಾರಂತರು ಈ ಸಮನ್ವಯವನ್ನು ಸಾಧಿಸಿದ್ದಾರೆಂದು ನಿರ್ವಿವಾದವಾಗಿ ಹೇಳಬಹುದಾಗಿದೆ. ಪಾತ್ರ ನಿರ್ಮಿತಿಯಲ್ಲಿ 'ಬೆಟ್ಟದ ಜೀವದ'ಲ್ಲಿಯ ಕಿಂತಲೂ ಒಂದು ಮೇಲಿನ ಮೆಟ್ಟಿಲನ್ನು ಮುಟ್ಟಿದ್ದಾರೆಂದೂ ಹೇಳಬಹುದು.

ಹಾಗೆ ನೋಡಿದರೆ ಒಂದು ಕಾದಂಬರಿಯಲ್ಲಿ ಪಾತ್ರಕ್ಕೆ ಪ್ರಾಧಾನ್ಯವಿರಬೇಕೋ, ಘಟನೆಗಳಿಗೆ ಪ್ರಾಧಾನ್ಯವಿರಬೇಕೋ ಎಂಬ ಪ್ರಶ್ನೆ ನಿರರ್ಥಕ. ಕಾದಂಬರಿಯಲ್ಲಿಯ ಘಟನೆ ಅದರಲ್ಲಿಯ ಪಾತ್ರಗಳ ಪ್ರತಿಕ್ರಿಯೆ ಕ್ರಿಯೆಗಳಲ್ಲಿ ಒಡಮೂಡಿದಾಗ ಮಾತ್ರ ಕಲ್ಪಿತವಾದ ಘಟನೆ ಕೃತಕವೆನಿಸುವುದಿಲ್ಲ. ಕಥೆ ಕಟ್ಟುಕಥೆಯಾದರೂ ಅದರಲ್ಲಿಯ ಪಾತ್ರಗಳಿಗೂ ಘಟನೆಗಳಿಗೂ ಈ ತೆರದ ಕಾರ್ಯಕಾರಣ ಸಂಬಂಧ ನಿಕಟವಾಗಿದ್ದಾಗ ಮಾತ್ರ ಕಥೆ ಓದುಗರ ಮನಸ್ಸಿನ ಮೇಲೆ ಮೇಲ್ತರದ ಪರಿಣಾಮ

ವನ್ನುಂಟುಮಾಡಬಹುದು. ವಿಶಿಷ್ಟ ವ್ಯಕ್ತಿಗಳ ವಿಶಿಷ್ಟ ಮನೋವೃತ್ತಿಗಳಲ್ಲಿಯೇ ಕಥಾನಕ ಹುಟ್ಟಿಕೊಳ್ಳುವುದುಂಟು. ಇದಲ್ಲದೆ ಹೋದರೆ ಕಥೆಗೂ ಪಾತ್ರಗಳಿಗೂ ಸಂಬಂಧ ತಪ್ಪಿ, ಬರೆದ ಕೃತಿ 'ಏನೋ ಕಟ್ಟುಕಥೆ' ಎನಿಸುವಂತಾಗುವುದು. 'ಹೆತ್ತಳಾತಾಯಿ' ಕಾದಂಬರಿಯಲ್ಲಿಯ ಕಥೆ ಅದರಲ್ಲಿಯ ಪಾತ್ರಗಳನ್ನವಲಂಬಿಸಿದೆ. ಅದರಲ್ಲಿ ಎದ್ದು ಕಾಣುವ ಮೂರು ಪಾತ್ರಗಳು ಈಗಿದ್ದುದಕ್ಕಿಂತ ಯಾವುದಾದರೊಂದು ಬಗೆಯಲ್ಲಿ ಬೇರೆಯಾಗಿದ್ದರೆ ಕಥೆಯ ಸ್ವರೂಪ ಬದಲಾಗಿಬಿಡುತ್ತಿತ್ತು. ಈ ಮೂರು ಪಾತ್ರಗಳೇ ಕಥೆಯ ಪ್ರವಾಹವನ್ನು ಮುಂದಕ್ಕೆ ಸಾಗಿಸಿವೆ. ಕಥೆಗೆ ಈಗಿದ್ದ ರೂಪಕೊಟ್ಟ ಶ್ರೇಯಸ್ಸು ಕಾರಂತರಿಗಿಲ್ಲ. ಕಥೆಯಲ್ಲಿಯ ಸುಬ್ಬಯ್ಯ, ವೆಂಕಪ್ಪ, ಕುಸುಮೆಯರಿಗೆ !

ಈ ಮೂರು ಮುಖ್ಯ ಪಾತ್ರಗಳ ಅನ್ಯೋನ್ಯ ಸಂಬಂಧಗಳಲ್ಲಿ ಹುಟ್ಟಿಕೊಂಡ ಕಥೆ ನಿರರ್ಗಳವಾಗಿ ಮುಂದುವರಿಯುತ್ತದೆ. ಹಳ್ಳಿಯ ಹುಡುಗಿಯಾದ ಗಿರಿಜೆಯು ವಕೀಲ ಸುಬ್ಬಯ್ಯನ ಮಡದಿಯಾಗಿ ಕುಸುಮೆಯಾಗುತ್ತಾಳೆ. ಮದುವೆಯಾದ ಹೊಸತರಲ್ಲಿ ಸುತ್ತಲಿನ ಸಾಮಾಜಿಕ ಜೀವನದ ಆಶೋತ್ತರಗಳಿಗೆ ಮನಸೋತು ತನ್ನ ಗಂಡನ ಸ್ನೇಹಿತನೂ ಸಹೋದ್ಯೋಗಿಯೂ ಆದ ವೆಂಕಪ್ಪನ ಹೆಂಡತಿಯ ಜೊತೆಯಲ್ಲಿ ತನ್ನ ಸ್ವಾಭಿಮಾನಕ್ಕೆ ಊರಲ್ಲಿಯ 'ಸಮಾಜ'ದಿಂದ ಧಕ್ಕೆ ತಗಲಿದಾಗ ತನ್ನದೊಂದು ಬೇರೊಂದು 'ಸಮಾಜ'ವನ್ನೇ ಸ್ಥಾಪಿಸುತ್ತಾಳೆ. ಸುಬ್ಬಯ್ಯನ ಗಳಿಕೆಗೇನೂ ಕಡಿಮೆಯಿಲ್ಲದ್ದರಿಂದ ಕೆಲಕಾಲ ಎಲ್ಲವೂ ಸುಸೂತ್ರವಾಗಿ ಸಾಗುತ್ತದೆ. ತನಗೆ ಮಕ್ಕಳಿಲ್ಲವೆಂಬ ಮಾತು ಹೆರವರ ಬಾಯಲ್ಲಿದ್ದುದನ್ನು ಕೇಳಿದಾಗ ಒಡಮೂಡುತ್ತಿದ್ದ ತಾಯ್ತನದ ಹಂಬಲ ಬೆಟ್ಟವಾಗಿ ಬೆಳೆದು ನಿಲ್ಲುತ್ತದೆ. ಇವಳಿಗಿದ್ದರೂ ಸುಬ್ಬಯ್ಯನಿಗೆ ಮಕ್ಕಳ ಯೋಗವಿಲ್ಲವೆಂದು ಹಳ್ಳಿಯ ಭವಿಷ್ಯವಾದಿಯೊಬ್ಬ ಹೇಳುತ್ತಾನೆ. ಇದಕ್ಕೆ ಸರಿಯಾಗಿ ಸುಬ್ಬಯ್ಯನಿಂದ ಹುಟ್ಟಿದ ಚೊಚ್ಚಲು ಮರುಚಲು ಕೈಗೆ ನಿಲುಕುವುದಿಲ್ಲ. ಇದೇ ಕಾಲಕ್ಕೆ ವೆಂಕಪ್ಪನ ಹೆಂಡತಿ ಅಕಸ್ಮಾತ್ತಾಗಿ ಸತ್ತು ಹೋಗುತ್ತಾಳೆ. ಮಕ್ಕಳಿಗೆ ಮಲತಾಯಿಯಿಂದ ತೊಂದರೆಯಾದೀತೆಂದು ಎರಡನೆಯ ಸಂಬಂಧಕ್ಕೆ ವೆಂಕಪ್ಪ ಮೊದಲು ಒಪ್ಪುವುದಿಲ್ಲ. ಕುಸುಮೆಯ ತಾಯ್ತನದ ಹಂಬಲ ವೆಂಕಪ್ಪನ ಜೊತೆಯಲ್ಲಿ ವ್ಯಭಿಚಾರವನ್ನರಸಿ ಗಂಡು ಮಗುವನ್ನು ಪಡೆದು ಸಮಾಧಾನಪಡೆಯುತ್ತದೆ. ಮನೆಯಲ್ಲಿಯಂತೆ ವ್ಯವಸಾಯದಲ್ಲಿಯೂ ವೆಂಕಪ್ಪನ ಪರಿಸ್ಥಿತಿ ಹೀನಾಯಕ್ಕೆ ಬರುತ್ತಿದ್ದಾಗ ಸುಬ್ಬಯ್ಯನಿಂದ ಮುಚ್ಚುಮರೆಯಲ್ಲಿ ವೆಂಕಪ್ಪನಿಗೆ ಕುಸುಮೆ ನೂರು ರೀತಿಯಲ್ಲಿ ಸಹಾಯ ಮಾಡುತ್ತಾಳೆ. ವೆಂಕಪ್ಪ ಬೇರೊಂದು ಮದುವೆ ಮಾಡಿಕೊಂಡು ಮನೆಯಲ್ಲಿ ಸುಖವನ್ನು ಇಲ್ಲದಾಗಿಸಿಬಿಡುತ್ತಾನೆ. ಕುಸುಮೆಗೆ ವೆಂಕಪ್ಪನ ಮಕ್ಕಳ

ಗೋಳನ್ನು ನೋಡುವುದಾಗದಿದ್ದರೂ ಎರಡನೆಯ ಹೆಂಡತಿಯ ಕೂಡ ಸಖ್ಯಸಾಧ್ಯವಿಲ್ಲದಾಗಿ ಸುಬ್ಬಯ್ಯನಂತೆ ತಾನೂ ಸುಮ್ಮನಾಗಿಯೇ ಇರುತ್ತಾಳೆ. ಮಲಮಕ್ಕಳ ಜೊತೆಯಲ್ಲಿ ತನ್ನಿಂದ ಇರುವುದಾಗುವುದಿಲ್ಲವೆಂದು ವೆಂಕಪ್ಪನ ಎರಡನೆಯ ಹೆಂಡತಿ ತವರನ್ನು ಸೇರಿಬಿಡುತ್ತಾಳೆ. ಮಕ್ಕಳ ಗೋಳಾಟವನ್ನು ನೋಡಲಾಗದೆ ವೆಂಕಪ್ಪನ ಹಿರಿಯ ಮಗನಿಗೆ ಸುಬ್ಬಯ್ಯ ಸಹಾಯಮಾಡಿ ಲಾ ಅಭ್ಯಾಸವನ್ನು ಪೂರೈಸಿ ಅವನ ತಮ್ಮ ತಂಗಿಯರಿಗೆ ಸುಖವಾಗುವಂತೆ ಬೇರೆ ವ್ಯವಸ್ಥೆಮಾಡಿಕೊಡುತ್ತಾನೆ. ಈ ಸಂದರ್ಭದಲ್ಲಿ ವೆಂಕಪ್ಪನಿಂದ ಕುಸುಮೆಯ ಎರಡನೆಯ ಮಗುವೊಂದನ್ನು ಹೆರುವಂತಾಗಿರುತ್ತಾಳೆ. ತಾನು ಬೇನೆಯಿಂದ ಬಳಲುತ್ತಿದ್ದಾಗ ಈ ಸಂಗತಿ ನಡೆದುದನ್ನು ನೋಡಿ ಸುಬ್ಬಯ್ಯನ ಮನಸ್ಸಿನ ಮೇಲೊಂದು ದೊಡ್ಡ ಆಘಾತವಾಗಿ ಪರಿಣಮಿಸುತ್ತದೆ. ಸುಬ್ಬಯ್ಯ ಯಾವುದನ್ನೂ ಆಡಿ ತೋರಿಸದೆ ಒಳಗಿನಿಂದಲೇ ಕೊರಗುವ ಹೆಣ್ಣು ಮಗುವೊಂದು ಹುಟ್ಟಿದಾಗ ಗಂಡ ಹೆಂಡಿರಿಬ್ಬರೂ ದೂರವಾಗುತ್ತಿದ್ದವರು ಇನ್ನೂ ದೂರವಾಗುತ್ತಾರೆ. ಸುಬ್ಬಯ್ಯನಿಗೆ ಮನೆ ಮಾರು ಬೇಡವಾಗಿ ಎಲ್ಲೆಲ್ಲಿಯೋ ಇದ್ದು ಮರಣ ಸಮೀಪಿಸಿದಾಗ ಮನೆ ಸೇರಿ ಪ್ರಾಣ ನೀಗುತ್ತಾನೆ. ಪಶ್ಚಾತ್ತಾಪದಿಂದ ಬೆಂದುಹೋದ ಹೆಂಡತಿಯನ್ನು ಸಾಯುವ ಮುನ್ನ ಕ್ಷಮಿಸುತ್ತಾನೆ. ಇತ್ತ ವೆಂಕಪ್ಪ ಮಕ್ಕಳನ್ನು ಹಿರಿಯ ಮಗನ ಜೊತೆಯಲ್ಲಿ ಇಟ್ಟು ತವರಿನಲ್ಲಿದ್ದ ಹೆಂಡತಿಯನ್ನು ಕೂಡುತ್ತಾನೆ.

ಇದಿಷ್ಟು ಕಥಾನಕ. ನಿಧಾನವಾಗಿ ಎಡೆತಡೆಗಳಿಲ್ಲದೆ ಮುಂದೆ ಸಾಗುವುದು. ಈ ಕಾದಂಬರಿಯಲ್ಲಿ ಪಾತ್ರಗಳ ಪೋಷಣೆಗೆ ಒಂದು ಮುಖ್ಯ ಅಂಶವಾದರೆ ಕಥೆಯನ್ನು ಹೇಳುವ ರೀತಿಯಲ್ಲಿಯ ಸಂಯಮ, ಹಿಡಿತ, ಗಮನಾರ್ಹವಾದ ಎರಡನೆಯ ಅಂಶ. ವೆಂಕಪ್ಪ, ಕುಸುಮೆಯರ ವ್ಯಭಿಚಾರವನ್ನು ಸೂಕ್ಷ್ಮವಾಗಿಯಾದರೂ ಸ್ಪಷ್ಟವಾಗಿ ಸೂಚಿಸಿದ ಬಗೆ ಈ ಸಂಯಮಕ್ಕೆ ನಿದರ್ಶನವೆಂದು ಹೇಳಬಹುದು. ಒಂದು ಮಾತು ಹೆಚ್ಚಾದರೆ ಅಶ್ಲೀಲವಾಗಬಹುದು. ಒಂದು ಮಾತು ಕಡಮೆಯಾದರೆ ಸೂಚನೆಗೆ ನ್ಯೂನವಾದೀತು. ಇಂಥ ಇಕ್ಕಟ್ಟಿನಲ್ಲಿ ಕಾರಂತರು ನೇರವಾಗಿ ಮುಂದುವರಿದು ಶ್ರೇಷ್ಠವಾದ ಕಲೆಗಾರಿಕೆಯನ್ನು ತೋರಿಸಿದ್ದಾರೆ. ಇದಲ್ಲದೆ ಸುಬ್ಬಯ್ಯ ವೆಂಕಪ್ಪರ ಮನೆತನದ ಸ್ಥಿತಿಗತಿ, ಆಗುಹೋಗುಗಳ ವಿವರ, ಇಬ್ಬರ ಮನೆತನದ ಹೆಣ್ಣುಮಕ್ಕಳಲ್ಲಿ ವೈಮನಸ್ಯ ಬೆಳೆದ ಬಗೆ, ವೆಂಕಪ್ಪನ ಮೊದಲ ಹೆಂಡತಿಯ ಆಡಳಿತದಲ್ಲಿ ಸುಖವಾಗಿದ್ದ ಮನೆತನ ಕ್ರಮವಾಗಿ ಹೀನಾಯಕ್ಕೆ ಸಿಕ್ಕುಬಿದ್ದ ಕತೆ, ಎರಡನೆಯ ಹೆಂಡತಿ ಬಂದಾಗಿನಿಂದ ಮಕ್ಕಳ ಗೋಳು, ಆ ಗೋಳಿನಿಂದ ಪಾರಾಗಿ ಸುಖವನ್ನು ಮುಟ್ಟಿದ ಯತ್ನಸಾಫಲ್ಯಗಳು, ಈ ಕಾದಂಬರಿಯಲ್ಲಿಯ ಇತರ

ಇತರ ಸೌಂದರ್ಯಸ್ಥಾನಗಳು. ಬದುಕನ್ನು ಸಹನೆಯಿಂದ, ಬಿಡುಗಣ್ಣಿನಿಂದ ನೋಡಿ ಮನಮುಟ್ಟುವಂತೆ ಚಿತ್ರಿಸಿದರ ಫಲವಾಗಿಯೇ ಓದುಗ ಮೈಮರೆತು ಮುಂದುವರಿಯುತ್ತಾನೆ. ವರ್ಷಾನುವರ್ಷದ ಕಾಲಾವಧಿ ಸಂದರೂ ಬೇಸರಪಡುವುದಿಲ್ಲ. ಯಾವ ದೊಡ್ಡ ಘಟನೆಯೂ ಇಲ್ಲದಿದ್ದರೂ ವಿಶೇಷವಾಗಿ ಕಾದಂಬರಿಯಲ್ಲಿ ಸಂಭಾಷಣೆ ಕೂಡ ಇಲ್ಲದಿದ್ದರೂ ಕಥೆ ಹೇಳುವ ಕೈವಾಡಕ್ಕೆ ಓದುಗ ಬೆರಗುಬಟ್ಟು ಕೇಳುತ್ತಾನೆ. ಇದೆಲ್ಲವೂ ಸಾಧ್ಯವಾದದ್ದು ಮುಖ್ಯ ಪಾತ್ರಗಳ ಮೂಲಕವಾಗಿ. ಅವರು ಮೂವರೂ ತಮ್ಮ ಬದುಕನ್ನು ತಮ್ಮ ದೃಷ್ಟಿಗನುಸಾರವಾಗಿ ನಡೆಯಿಸುತ್ತಾರೆ. ಈ ಬದುಕಿನ ಕಥೆಯೇ ಕಾದಂಬರಿಯಲ್ಲಿಯ ಕಥೆ. ಇದಕ್ಕೆ ವಾಸ್ತವತೆಯೆನ್ನಬಹುದು. ನಿರ್ಮಿತ ಪಾತ್ರಗಳ ವ್ಯಕ್ತಿವೈಶಿಷ್ಟ್ಯವೆನ್ನಬಹುದು.

ಕುಸುಮೆಯಂಥ ಹೆಣ್ಣುಮಗಳು ಬದುಕಿನಲ್ಲಿ ಸಾಧ್ಯವೆ ಎಂದು ಕೇಳುವುದಕ್ಕಿಂತ ಅಸಾಧ್ಯವೆ ಎಂದು ಕೇಳಿಕೊಂಡರೆ ಅವಳ ಮೇಲೆ ಅವಾಸ್ತವತೆಯ ಆರೋಪ ಮಾಡುವವರ ಸಮಸ್ಯೆ ಬಗೆಹರಿದೀತು. ಸಾವಿರ ಬಗೆಯಲ್ಲಿ ಹಳ್ಳಿಗಳಲ್ಲಿಯ ನಿರಾಶೆ ವಿರಸಗಳ ವಾತಾವರಣದಲ್ಲಿ ಬೆಳೆದು ಹರಯ ಮುಟ್ಟಿದ ಕುಸುಮೆ ಸುಬ್ಬಯ್ಯನಂಥ ಉದಾರ ಚರಿತನನ್ನು ಮದುವೆಯಾಗಿ ಪಟ್ಟಣ ಸೇರಿದರೆ, ಸುಖದ ಕಲ್ಪನೆಯನ್ನು ತಪ್ಪಾಗಿಟ್ಟುಕೊಂಡು ಆ ಸುಖವನ್ನೇ ಬೆನ್ನಟ್ಟಿ ಹತ್ತಾರು ದಾರಿಗಳಲ್ಲಿ ಹಟ ಹಿಡಿದು ನಡೆದರೆ, ಯಾವ ಸೋಜಿಗವೂ ಅಲ್ಲ. ಮನಸ್ಸಿನಲ್ಲಿ ಬಂದುದನ್ನು ಮಾಡಿಯೇ ತೀರುವೆನೆಂಬ ಹಟ ಕುಸುಮೆಯ ಸ್ವಭಾವಕ್ಕೆ ಅಡಿಗಲ್ಲು. ಎಂಥ ಅಡ್ಡಿ ಬಂದರೂ ಲೆಕ್ಕಿಸದೆ ಈ ಹಟ ತನ್ನ ಸಮಾಧಾನಕ್ಕಾಗಿ ಮುಂದೆ ನಡೆದಿತು. ತನ್ನ ಇಚ್ಛೆಗೆ ಎದುರು ಬರುವ ಯಾವ ಸಂಗತಿಯೂ ಅಂಥವಳ ಸ್ವಾಭಿಮಾನಕ್ಕೆ ಏಟು. ಅವಳು ಸ್ಥಾಪಿಸಿದ 'ಸಮಾಜ' ಇದಕ್ಕೆ ಸಾಕ್ಷಿ. ಸುಬ್ಬಯ್ಯನ ಮಕ್ಕಳು ಬದುಕುವಂತಿಲ್ಲವಾದರೆ ವೆಂಕಪ್ಪನಿಂದ ಬದುಕಬಹುದಾದ ಮಕ್ಕಳನ್ನು ಪಡೆಯಲು ಆ ಮನಸ್ಸು ಹಿಂಜರಿಯುವುದಿಲ್ಲ. ಅವಳ ತಾಯ್ತನದ ಹಂಬಲ ತಪ್ಪುದಾರಿಯನ್ನು ಹಿಡಿದಿದ್ದರೆ ತಾನು ಹಿಡಿದ ದಾರಿ ತಪ್ಪು ಎಂದು ಅವಳಿಗೆ ಆ ಕ್ಷಣಕ್ಕೆ ತಿಳಿಯುವುದು ಅವಳ ಸ್ವಭಾವದ ಮೂಲಕ ಸಾಧ್ಯವೇ ಇರಲಿಲ್ಲ.

ವೆಂಕಪ್ಪನಾದರೂ ಅವಳ ಇಚ್ಛೆಗೆ ತಲೆ ಬಾಗಿರಬೇಕೇ ಹೊರತು ತಾನಾಗಿಯೇ ಮುಂದುವರಿದಿರಲಿಕ್ಕಿಲ್ಲವೆಂದೂ ಹೇಳಬಹುದಾಗಿದೆ. ಈ ತೆರದ ಅಧಃಪಾತಕ್ಕೆ ಇಳಿದ ಕುಸುಮೆ ಕೀಳೆಂದು ಹೇಳಬೇಕಾದವರು ಅವಳ ಮನೋವೃತ್ತಿಯನ್ನು ಬಿಡಿಸಿ ನೋಡಬೇಕು. ಅವಳ ಮನೋವೃತ್ತಿ ಅಸಾಮಾನ್ಯವಾಗಿರಬಹುದು, ಅಸಾಧ್ಯವಾದುದಲ್ಲ. ಹತ್ತುಕಡೆಗೆ ನೋಡಲು ಸಿಗಬಹುದಾದದ್ದು.

ಇಂಥವಳಿಗೆ ಸರಿಯಾಗಿ ಅವಳಿಗೆ ತೀರ ಹತ್ತಿರದ ಸಂಬಂಧ ಬಂದ ಇಬ್ಬರೂ ವ್ಯಕ್ತಿಗಳು ಒಂದೊಂದು ರೀತಿಯಲ್ಲಿ ಅವಳ ಮನೋವೃತ್ತಿಗೆ ಸಹಾಯ ಮಾಡುವವರೇ. ಹೇಳಬಹುದಾದ ಯಾವ ಆತಂಕವೂ ಅವಳ ದಾರಿಯಲ್ಲಿ ಬರುವುದಿಲ್ಲ. ಬಂದಿದ್ದರೂ ಅವುಗಳನ್ನು ಮೆಟ್ಟಿನಿಲ್ಲುವವಳಾಕೆ ಎಂಬುದರಲ್ಲಿಯೂ ಸಂದೇಹವಿಲ್ಲ. ಸುಬ್ಬಯ್ಯ ಮೆತ್ತಗಿನ ಮನುಷ್ಯ. ನಿಷ್ಠುರಮಾತು, ನಡೆ, ಅವನಿಂದ ಮೈಲಿದೂರ. ವೆಂಕಪ್ಪ, ಪ್ರವಾಹ ಪತಿತ. ಅವನಲ್ಲಿ ಸುಬ್ಬಯ್ಯನ ಮನಸ್ಸಿನ ಔದಾರ್ಯವೂ ಇಲ್ಲ. ಕುಸುಮೆಯ ಗಟ್ಟಿಗತನವೂ ಇಲ್ಲ. ಸಾವಿರ ಬಗೆಯಲ್ಲಿ ಸುಬ್ಬಯ್ಯನಿಂದ ಸಹಾಯಹೊಂದಿದ ವೆಂಕಪ್ಪ ತನ್ನ ಗೆಳೆಯನ ಮನೆ ಮುರಿಯಬಾರದಾಗಿತ್ತು. ಆದರೆ ಈ ವಿಚಾರಕ್ಕೆ ಎಡೆ ಕೊಡುವಷ್ಟು ವಿಚಾರ ವೆಂಕಪ್ಪನಲ್ಲಿಲ್ಲ. ಆ ವಿಚಾರ ಅವನಲ್ಲಿದ್ದರೆ ತನ್ನ ಮನೆಯನ್ನೇ ಮುರಿದು ಮೂರಾಬಟ್ಟೆ ಮಾಡಿಕೊಳ್ಳುತ್ತಿದ್ದನೆ? ಇವರಿಬ್ಬರ ವೃತ್ತಿಗಳಿಂದ ಕುಸುಮೆಗೆ ಸಹಾಯ ದೊರಕಿದಂತೆಯೇ ಆಯಿತು. ತನ್ನ ಸ್ವಭಾವ ತನ್ನನ್ನು ಯಾವ ಘೋರ ದುಃಖದೆಡೆಗೆ ಕರೆದೊಯ್ಯುತ್ತಿದೆ ಎಂಬುದರ ಕಲ್ಪನೆ ಸುಬ್ಬಯ್ಯ ಮರಣೋನ್ಮುಖನಾಗುವವರೆಗೂ ಅವಳಿಗೆ ಬರುವುದಿಲ್ಲ. ಹೀಗೆಂದ ಮಾತ್ರಕ್ಕೆ ಕುಸುಮೆ ಸ್ವಭಾವದಿಂದ ನಿಕೃಷ್ಟಳೆಂದು ತಿಳಿಯುವಂತಿಲ್ಲ. ವೆಂಕಪ್ಪನ ಮನೆಯ ಮಕ್ಕಳಿಗೆ ಅವಳು ತೋರಿದ ಸಹಾನುಭೂತಿ, ವಿಮಲೆಯ ಮಾತ್ಸರ್ಯದಿಂದ ದೂರವಾಗಿದ್ದ ಅವಳ ಮಮತೆ ಇವೆಲ್ಲವೂ ಸೇರಿ ಅವಳ ಮನಸ್ಸು ಒಳ್ಳೆಯದನ್ನು ಕೆಟ್ಟದನ್ನು ಕೂಡಿಸಿ ಎರಕ ಹೊಯ್ದಂತಿದೆ. ಕಾದಂಬರಿಕಾರನಿಗೆ ಉತ್ತಮ ಸಾಮಗ್ರಿಯಾಗಿ ನಿಂತಿದೆ.

ಕೊನೆಯಲ್ಲಿ ಕುಸುಮೆ ತನ್ನ ಮೂರ್ಖತನಕ್ಕೆ ಬಲಿಯಾದರೆ ಸುಬ್ಬಯ್ಯ ತನ್ನ ಔದಾರ್ಯಕ್ಕೆ ಬಲಿಯಾಗುತ್ತಾನೆ. ಗೆಳೆಯನೆಂದು, ಗಂಡನೆಂದು, ತಂದೆಯೆಂದು, ವಕೀಲನೆಂದು ನಾಲ್ಕು ಸಂಬಂಧಗಳಲ್ಲಿ ಚಿತ್ರಿತವಾದ ಈ ಪಾತ್ರ ಮೊದಲಿಂದ ಕೊನೆಯವರೆಗೂ ಓದುಗನ ಸಹಾನುಭೂತಿಯನ್ನು ಬೇಡುತ್ತದೆ. ತನಗೆ ತೀರ ಹತ್ತಿರದವರಾದ ಕುಸುಮೆ ವೆಂಕಪ್ಪರಿಂದ ಈ ಬಗೆಯ ಅನ್ಯಾಯ ಸಾಧ್ಯ ಎಂದು ಬಗೆಯುವವನಲ್ಲ. ಅಂಥ ಅಶುಭ ಸಂಶಯ ಅವನ ಮನಸ್ಸಿನ ಹತ್ತಿರವೂ ಸುಳಿಯಲಾರದು. ಯಾವರೀತಿಯಲ್ಲೂ ಮಡದಿ ಅಸಂತೋಷಪಡಬಾರದೆಂದು ಎಲ್ಲ ಬೇಡಿಕೆಯನ್ನು ಪೂರೈಸಿದ ಸುಬ್ಬಯ್ಯನಿಗೆ ಆ ಮಡದಿಯಿಂದಲೇ ಅನ್ಯಾಯವಾಗಬೇಕು : ಹತ್ತಿರದ ಗೆಳೆಯ ಆ ಅನ್ಯಾಯದಲ್ಲಿ ಸಹಭಾಗಿಯಾಗಿರಬೇಕೆಂಬುದು ಬದುಕಿನಲ್ಲಿಯ ಒಂದು ವಿಪರೀತ ಕ್ರಮ. ಸುಬ್ಬಯ್ಯನಂತಹರಿಗೆ ಈ ತೆರದ ಪ್ರತಿಫಲ ಸಿಕ್ಕಬೇಕೆಂದರೆ ವಿಪರೀತವಲ್ಲದೆ ಏನು? ಎಂಬ ವಿಚಾರ ಓದುಗನ ಮನಸ್ಸನ್ನು ಮುಟ್ಟದಿರಲಾರದು. ಅವನದು ಸುಸಂಸ್ಕೃತವಾದ ತಿಳಿವು. ಎಲ್ಲ ತಿಳಿದಮೇಲೂ ಯಾವುದನ್ನೂ ದೀರ್ಘಕ್ಕೆಳೆಯುವ

ದಿಲ್ಲ. ಮಾಡಿದವರು ಉಂಡಾರು ಪ್ರತಿ ಫಲವನ್ನು ಎಂಬುದರಲ್ಲಿಯೇ ಸಮಾಧಾನ ಪಡೆಯುತ್ತಾನೆ. ಮನಸ್ಸಿನಲ್ಲಿಯೇ ಮರುಗುತ್ತಿದ್ದ ಕುಸುಮೆಯನ್ನು ಸುಬ್ಬಯ್ಯ ಕ್ಷಮಿಸಿ ಸಮಾಧಾನ ಹೇಳಿದಾಗ ಅವನ ತಿಳಿವು ಯಾವ ಮಟ್ಟದ್ದು, ಕುಸುಮೆ ವೆಂಕಪ್ಪರ ತಿಳಿವಿಗಿಂತ ಎಷ್ಟು ದೂರದ್ದು ಎಂಬುದರ ಅರಿವು ಓದುಗನಿಗೆ ಬರುವದು. ಇದಕ್ಕೆ ವಿರುದ್ಧವಾಗಿ ವೆಂಕಪ್ಪ ವಿಚಾರಶೂನ್ಯ. ಹಿಂದಿನದರ ಅರಿವಿಲ್ಲ, ಮುಂದಿನದರ ಪರಿವೆಯಿಲ್ಲ ಅವನಿಗೆ. ಸುಬ್ಬಯ್ಯನಂಥವರ ಬದುಕಿನಲ್ಲಿ ಎಲ್ಲಿಂದಲೋ ಬಂದು ಇದ್ದ ಬಿದ್ದ ಸುಖವನ್ನು ಮಣ್ಣುಗೂಡಿಸುವ ಜಾತಿಯ ಪ್ರತೀಕ ವೆಂಕಪ್ಪ. ತಾನೇನು ಮಾಡುತಿದ್ದೇನೆಂಬುದರ ಅರಿವಾದರೂ ವೆಂಕಪ್ಪನಿಗೆ ಇತ್ತೋ ಇಲ್ಲವೋ ? ಅಂತೂ ವೆಂಕಪ್ಪ ಒಂದು ರೀತಿಯಲ್ಲಿ ಸಹಾಯಕನಾಗಿ, ಸುಬ್ಬಯ್ಯ ಇನ್ನೊಂದು ರೀತಿಯಲ್ಲಿ ಸುಮ್ಮನಿದ್ದು ಕುಸುಮೆಯ ವೃತ್ತಿಯಲ್ಲಿಯ ವಿಷಬೀಜ ಬೆಳೆಯಲಿಕ್ಕೆ ಅನುವುಮಾಡಿಕೊಡುತ್ತಾರೆ. ಈ ಮೂರು ಬಗೆಯ ಮನೋವೃತ್ತಿಗಳ ಸಂಘರ್ಷವೇ ಈ ಕಾದಂಬರಿಯಲ್ಲಿಯ ಕಥೆಗೆ, ಕಥೆಯ ಹಿಂದಿನ ಅರ್ಥಕ್ಕೆ ಅಧಾರವಾಗಿ ನಿಂತಿದೆ. ಕೊನೆಯಲ್ಲಿ ಬರುವ ಕುಸುಮೆಯ ಪಶ್ಚಾತ್ತಾಪ, ಸುಬ್ಬಯ್ಯನ ಕ್ಷಮೆ, ಅವನ ಸಾವು, ಕುಸುಮೆ ಮಾಡಿದ್ದು ಸರಿಯೇ ಎಂಬ ಪ್ರಶ್ನೆಗೆ ಏಕಕಂಠವಾದ ಉತ್ತರವನ್ನು ಹೇಳುತ್ತದೆ. ಸಹಜವಾಗಿ ಮೊದಲಾದ ಕಥೆ ಉಗ್ರವಾಗಿ ಕೊನೆಗೊಳ್ಳುತ್ತದೆ.

ಈ ಮೂರು ಮನೋವೃತ್ತಿಗಳ ಸಂಘರ್ಷವನ್ನು ಇನ್ನಷ್ಟು ಸೂಕ್ಷ್ಮವಾಗಿ ವಿವರಿಸಬಹುದಿತ್ತೇನೊ. ಕಥೆಯ ಓಟಕ್ಕೆ ಒಂದುವೇಳೆ ತಡೆಯಾಗಬಹುದಿತ್ತು, ಹಾಗೆ ಮಾಡಿದ್ದರೆ. ಬದುಕಿನ ಮೂರು ದಾರಿಗಳು ಒಂದೇ ಕಥೆಯಲ್ಲಿ ಒಂದು ಪ್ರವಾಹವಾಗಿ ಬೆರೆತು ಹರಿದಾಗ ಯಾವ ಸನ್ನಿವೇಶ ಉಂಟಾಗಬಹುದೆಂಬುದನ್ನು ತೋರಿಸುವುದೇ ಈ ಕಾದಂಬರಿಯ ಮುಖ್ಯಲಕ್ಷಣ. ' ಚೋಮನ ದುಡಿ 'ಯ ಭೀಕರ ಶಕ್ತಿ ಇದರಲ್ಲಿ ಇರಲಿಕ್ಕಿಲ್ಲ. 'ಕನ್ಯಾಬಲಿ'ಯಲ್ಲಿಯ ಸಮಾಜ ವಿಮರ್ಶೆಯ ಕಾಠಿಣ್ಯವೂ ಇಲ್ಲಿ ಇರಲಿಕ್ಕಿಲ್ಲ. 'ಮರಳಿಮಣ್ಣಿಗೆ' ಕಾದಂಬರಿಯ ವಿಸ್ತಾರವಾಗಲಿ 'ಬೆಟ್ಟದ ಜೀವ'ದ ಏಕ ಮುಖತೆಯಾಗಲಿ ಇಲ್ಲಿ ಇರಲಿಕ್ಕಿಲ್ಲ. ಆದರೆ ಮೂರು ಮನಸ್ಸಿನ ಬಗೆಗಳನ್ನು ಸಾಧ್ಯವಿದ್ದಷ್ಟು ಬಿಡಿಬಿಡಿಯಾಗಿಸಿ ಅದನ್ನೇ ಕಥೆಯ ಬೆಳವಣಿಗೆಗೆ ಆಧಾರವನ್ನಾಗಿಟ್ಟುಕೊಂಡ ರೀತಿ ನಮಗೆ ಹೊಸದು. ಇದೂ ಅಲ್ಲದೆ ಕಾರಂತರ ಯಾವ ಕೃತಿಯಲ್ಲಿಯೂ ಕಾಣಬಹುದಾದ ನಮ್ಮ ಸಾಮಾಜಿಕ ಜೀವನದಲ್ಲಿಯ ಹಳೆ ಹೊಸತುಗಳ ತಿಕ್ಕಾಟವನ್ನು ಇಲ್ಲಿಯೂ ಕಾಣಬಹುದು. ಸರಳವಾದ ಶೈಲಿಯಿಂದ, ನೇರವಾಗಿ ಕಥೆ ಹೇಳುವ ರೀತಿಯಿಂದ, ಸ್ಪಷ್ಟವಾದ ಪಾತ್ರಪೋಷಣೆಯಿಂದ ಈ ಕಾದಂಬರಿಯು ಬರೆಹಗಾರನ ಸಾಧನದ ಒಂದು ಎತ್ತರದ ಮಟ್ಟವನ್ನು ಮುಟ್ಟಿದೆ ಎಂದು ಸಹಜವಾಗಿ ಹೇಳಬಹುದು.

ವ್ಹಿ. ಎಂ. ಇನಾಮದಾರ.

ಶ್ರೀ ಶಾರದಾದೇವಿ—ಬರೆದವರು: ರಾ. ನರಸಿಂಹಮೂರ್ತಿ; ಕ್ರೌನ್ ಅಷ್ಟಪತ್ರ; ಪುಟಗಳು viii+೧೧೧. ಬೆಲೆ, ೧-೪ ರೂಪಾಯಿ.

ಶ್ರೀ ರಾಮಕೃಷ್ಣ ಪರಮಹಂಸರ ಪರಿಚಯವನ್ನು ಕನ್ನಡನಾಡಿಗೆ ಆಗಲೆ ಶ್ರೀ ಕೃಷ್ಣ ಶಾಸ್ತ್ರಿಗಳು, ವೆಂಕಣ್ಣಯ್ಯನವರು, ಪುಟ್ಟಪ್ಪ, ಮಾಸ್ತಿ, ದಿವಾಕರ ಮುಂತಾದ ವರು ಮಾಡಿಕೊಟ್ಟಿರುವರು. ಶ್ರೀ ಸ್ವಾಮಿ ವಿವೇಕಾನಂದರ ಪರಿಚಯವನ್ನು, ಪುಟ್ಟಪ್ಪನವರೂ ಇತ್ತೀಚೆಗೆ ಅ. ನ. ಕೃಷ್ಣರಾಯರೂ ಮಾಡಿಕೊಟ್ಟಿರುವರು. ಪರಮ ಹಂಸರ ಸಹಧರ್ಮಿಣಿಯಾಗಿ, ಪ್ರಥಮ ಶಿಷ್ಯೆಯಾಗಿ, ಪತಿಯ ಕಾಲಾನಂತರ, ಅವರ ಸಂದೇಶವನ್ನು ಜಗತ್ತಿಗೆ ಸಾರಿ, ಸಾವಿರಾರು ಜನ ಜೀವರನ್ನು ಉದ್ಧರಿಸಿದ ಮಹಾ ಮಾತೆ ಶ್ರೀ ಶಾರದಾ ದೇವಿಯವರ ಪರಿಚಯವನ್ನು ಕನ್ನಡನಾಡಿಗೆ ಮೊದಲು ಮಾಡಿ ಕೊಟ್ಟ ಗೌರವಕ್ಕೆ ಶ್ರೀಮಾನ್ ನರಸಿಂಹಮೂರ್ತಿಯವರು ಪಾತ್ರರು.

ಪರಮಹಂಸರ ಜೀವನದಲ್ಲೂ ರೋಮಾಂಚನವೆಸಗುವ ಆಧ್ಯಾತ್ಮಿಕ ಘಟನೆ ಗಳಿವೆ. ಒಂದು ಸಾಧನೆಯಿಂದ ಮೇಲೆ ಮತ್ತೊಂದು ಸಾಧನೆ, ಒಂದು ಧರ್ಮವಾದ ಮೆಲೆ ಮತ್ತೊಂದು ಧರ್ಮ, ಒಂದು ದೃಷ್ಟಿಕೋನದಿಂದ ಸತ್ಯವನ್ನು ನೋಡಿದ ಮೇಲೆ ಮತ್ತೊಂದರಿಂದ ಸತ್ಯವನ್ನು ನೋಡುವ ಸಾಹಸದಿಂದ ತುಂಬಿ ತುಳುಕಾಡುತ್ತಿದೆ. ಅವರ ನೆಚ್ಚಿನ ಶಿಷ್ಯ ಸ್ವಾಮಿ ವಿವೇಕಾನಂದರ ಜೀವನವಾದರೋ ಕಟ್ಟುಕಾದಂಬರಿ ಯನ್ನೂ ಮರೆಯಿಸುವಷ್ಟು ವಿಸ್ಮಯ ಆತಂಕಗಳ ಚಲನ ವಲನಗಳಿಂದ ಕೂಡಿದೆ. ಆದರೆ ಶ್ರೀ ಶಾರದಾದೇವಿಯರ ಜೀವನದಲ್ಲಿ ಇಂತಹ ಬಾಗ್ಯ ರೋಮಾಂಚನವನ್ನು ಉಂಟುಮಾಡುವ ಘಟನೆಗಳೇ ಇಲ್ಲ ಎನ್ನಬಹುದು. ಸೋದರಿ ನಿವೇದಿತಾ ಹೇಳುವಂತೆ ಅವರದೊಂದು ಮೌನಧ್ಯಾನ ಪೂರ್ಣ ಜೀವನ . . . ಶ್ರೀ ರಾಮಕೃಷ್ಣರು ಭಾರ ತೀಯ ನಾರಿಯರ ಆದರ್ಶದ ವಿಚಾರವಾಗಿ ಹೇಳಿದ ಕೊನೆಯಮಾತು ಶ್ರೀ ಶಾರದಾ ದೇವಿಯವರ ಜೀವನ. ಆಚಾರದಲ್ಲಿ ಹಳೆಯ ಸಂಪ್ರದಾಯದವರಂತೆ ತೋರಿದರೂ ಜೀವನ ದೃಷ್ಟಿಯಲ್ಲಿ ಅತಿ ಆಧುನಿಕರನ್ನೂ ಮೀರಿದರು. ಆದಕಾರಣವೆ ಸೋದರಿ ನಿವೇದಿತ ಮತ್ತೊಂದು ಕಡೆ "ಶ್ರೀ ಶಾರದಾದೇವಿಯವರು ಪ್ರಾಚೀನ ಸಂಪ್ರದಾ ಯದ ಕೊನೆಯ ವ್ಯಕ್ತಿಯೆ, ಅಥವಾ, ಆಧುನಿಕ ಸಂಪ್ರದಾಯದ ಅರುಣೋದಯದ ಮೊದಲ ವ್ಯಕ್ತಿಯೆ" ಎಂದು ಅನುಮಾನಿಸುವರು. ಭಕ್ತಿ ಜ್ಞಾನ ವೈರಾಗ್ಯಗಳ ಅಡಿ ಗಲ್ಲಿನಮೇಲೆ ಕಟ್ಟಿದ್ದ ಸುಂದರವಾದ ಭವ್ಯವಾದ, ಶಾಂತಮಯ ಜೀವನ. ವಿಶ್ವವನ್ನೆ ತನ್ನದು ಎಂದು ತಬ್ಬುವ ತಾಯೊಲುಮೆ ಮೊದಲಿಂದ ಕೊನೆಯವರೆಗೂ ಇವರ ಜೀವನದಲ್ಲಿ ನಂದಾದೀವಿಗೆಯಂತೆ ಉರಿಯುತ್ತದೆ. ಇವರ ಪಾಲಿಗೆ ಪರಮಹಂಸರು ತ್ರಿವೇಣಿಯ ಸಂಗಮವಾಗಿದ್ದರು. ಕೈಹಿಡಿದ ಪತಿಯಾಗಿದ್ದರು. ಜೀವನದ ಪರಮ

ಗುರಿಯೆಡೆಗೆ ಕರೆದುಕೊಂಡು ಹೋದ ಗುರುವಾಗಿದ್ದರು. ತಮ್ಮ ನೆಚ್ಚಿನ ಇಷ್ಟದೈವವಾಗಿದ್ದರು. ಪರಮಹಂಸರ ಸಂದೇಶ ಹರಿಯುತ್ತಿದ್ದ ಹಲವು ನಾಲೆಗಳಲ್ಲಿ ಶಾರದಾ ದೇವಿಯವರ ಜೀವನ ಒಂದು ದೊಡ್ಡ ನಾಲೆ. ಹಲವು ಜೀವಿಗಳನ್ನು ಇವರು ಪಾಪ ಕೂಪದಿಂದ ಮೇಲೆತ್ತಿದರು. ದುಃಖ ಕಷ್ಟಗಳಿಂದ ನರಳುತ್ತಿದ್ದವರಿಗೆ ಶಾಂತಿಯನ್ನು ಕೊಟ್ಟರು. ನೆಚ್ಚುಗೆಟ್ಟವರ ಎದೆಯಲ್ಲಿ ನೆಚ್ಚಿನ ಹಣತೆಯನ್ನು ಹಚ್ಚಿದರು. ಮೇರೆ ಇಲ್ಲದ ಸ್ವಾರ್ಥಹೀನ ಮಾತೃಪ್ರೇಮದ ಅಮೃತವನ್ನು ತನ್ನೆಡೆಗೆ ಬಂದವರಿಗೆಲ್ಲ ಧಾರೆ ಎರೆದರು. ಇಂತಹ ವ್ಯಕ್ತಿ ಯಾವ ದೇಶದಲ್ಲಿ ಇರಲಿ, ಯಾವ ಕಾಲದಲ್ಲಿ ಇರಲಿ ಜನಾಂಗದ ಗೌರವಕ್ಕೆ ಪಾತ್ರವಾದುದು. ಇವುಗಳನ್ನೆಲ್ಲ ಸುಂದರವಾಗಿ ಚಿತ್ರಿಸಿ ನರಸಿಂಹಮೂರ್ತಿಯವರು ಕನ್ನಡ ನಾಡಿಗೆ ಉಪಕಾರ ಮಾಡಿರುವರು. ಶೈಲಿ ಸರಳವಾಗಿದೆ. ಸುಂದರವಾಗಿದೆ. ಪುಟ್ಟ ಪುಟ್ಟ ಅಧ್ಯಾಯುಗಳಿಂದ ಕೂಡಿದೆ. ಬರವಣಿಗೆಯ ಹಿಂದೆ ಅವರಿಗೆ ಪೂಜ್ಯಮಾತೆಯ ಮೇಲೆ ಇರುವ ಭಕ್ತಿ ಛಾಯೆ ಸುಳಿಯುತ್ತಿದೆ.

ಜೀವನವನ್ನು ಚಿತ್ರಿಸಿರುವುದರಲ್ಲಿ ಮೊದಲಿಂದ ಕೊನೆಯ ವರೆಗೂ *The Holy Mother* ಮತ್ತು *Life of Sri Sarada Devi* ಎಂಬ ಇಂಗ್ಲಿಷ್ ಪುಸ್ತಕಗಳನ್ನು ಅನುಸರಿಸಿರುವರು. ಒಂದು ಕಡೆ ಮಾತ್ರ ಅವರ ಸ್ವಲ್ಪ ಮಾರ್ಪಾಡು ಅಷ್ಟು ಹಿತವೆಂದು ಕಾಣಿಸುವುದಿಲ್ಲ. ಅದು ಈ ಸನ್ನಿವೇಶದಲ್ಲಿ ಬರುವುದು : ಪರಮಹಂಸರು ತಮ್ಮ ಚಿಕಿತ್ಸೆಗಾಗಿ ದಕ್ಷಿಣೇಶ್ವರದಿಂದ ಕಾಸೀಪುರದ ತೋಟದ ಮನೆಗೆ ಹೋದರು. ಗುಲಾಬ್ ಮಾ ಎಂಬ ಸ್ತ್ರೀ ಭಕ್ತಳು ಪರಮಹಂಸರು ಶಾರದಾ ದೇವಿಯವರ ಮೇಲೆ ಬೇಸರಪಟ್ಟು ಹೊರಟು ಹೋದರು ಎಂದು ಆರೋಪ ಮಾಡಿದಳು. ಶಾರದಾ ದೇವಿಯವರಿಗೆ ಇದು ತಿಳಿದು ಇದರ ನಿಜಾಂಶವನ್ನು ವಿಚಾರಿಸುವುದಕ್ಕೆ ದಕ್ಷಿಣೇಶ್ವರಕ್ಕೆ ಹೋದರು. ಇದನ್ನು ಕೇಳಿದಾಗ ಪರಮಹಂಸರು ಮರುಗಿ ಮೃದುಮಾತಿನಿಂದ ಶಾರದಾ ದೇವಿಯವರನ್ನು ಸಮಾಧಾನ ಮಾಡಿ ಕಳುಹಿಸಿದರು. ಅನಂತರ ಗುಲಾಬ್ ಮಾಳನ್ನು ಕರೆದು, 'Scolded her severely for her false and mischievous surmise' ಎಂದು ಇಂಗ್ಲಿಷ್ ಪುಸ್ತಕದಲ್ಲಿ (*Life of Sarada Devi*—Madras Math Publication ಪು. 95) ಇರುವುದು. ನರಸಿಂಹ ಮೂರ್ತಿಯವರು, "ಆ ಆರೋಪದ ಕುಹಕತೆಗಾಗಿ **ಬೆಂಕಿ**ಯಾದರು. ಆಕೆಯನ್ನು ಕಠಿಣ ಮಾತುಗಳಿಂದ ಥಳಿಸಿ . . ." ಎಂದು ಬರೆದಿರುವರು,—ಪುಟ ೪೬. ಪರಮಹಂಸರು ಬೆಂಕಿಯಾದರು ಎನ್ನುವುದು ಅವರ ಶೀಲಕ್ಕೆ ಸಹಜವಾಗಿ ಕಾಣುವುದಿಲ್ಲ. ದುರ್ವಾಸರನ್ನೊ ವಿಶ್ವಾಮಿತ್ರರ ಕೋಪದ ಮುಖವನ್ನೊ ನೆನಪಿಗೆ ತರುವಂತಹ ಪದ ಅದು. ಮಹಾತ್ಮರ ಶೀಲವನ್ನು ಬಿಡಿಸುವಾಗ ಬಹಳ ಜೋಪಾನವಾಗಿರಬೇಕು. ಕಥೆ ಕಾದಂಬರಿಗಳಲ್ಲಿ ಚಿತ್ರಿಸುವ ಕಾಲ್ಪನಿಕ,

ಪ್ರಾಪಂಚಿಕ ವ್ಯಕ್ತಿಗಳ ಗುಂಪಿಗೆ ಇದು ಸೇರಿದುದಲ್ಲ ಎಂಬುದನ್ನು ನೆನಪಿಡಬೇಕು. ಇವರ ಶೀಲದ ಭವ್ಯತೆಯ ಛಾಯೆ ನಮಗೆ ದೊರಕಬೇಕಾದರೂ ನಮ್ಮ ಬಾಳು ಉಪಾಸನೆಯಿಂದ ಮಾಗಿರಬೇಕು. ಅಲ್ಲಿಯ ವರೆಗೂ ಕಲ್ಪನೆಯ ಕುದುರೆಯ ಲಗಾಮನ್ನು ಬಿಗಿ ಹಿಡಿದು, ಯಾರು ಅವರನ್ನು ಪ್ರತ್ಯಕ್ಷವಾಗಿ ಕಂಡು ಬರೆದಿರುವರೋ ಅವರನ್ನು ಅನುಸರಿಸುವುದು ಮೇಲು.

ಬರವಣಿಗೆಯ ಕೆಲವೆಡೆ "ಸ್ವಕಪೋಲ ಕಲ್ಪಿತ" "ಭೌತ ದೇಹಪೋಷಣ" ಮುಂತಾದ ಸಂಸ್ಕೃತ ಪದಗಳಿಗೆ ಪ್ರತಿಯಾಗಿ ಕನ್ನಡ ಪದಗಳು ಇದ್ದರೆ ಮೇಲು ಎನಿಸುವುದು.

ಕನ್ನಡ ಸಾಹಿತ್ಯ ಭಂಡಾರಕ್ಕೆ ನರಸಿಂಹ ಮೂರ್ತಿಯವರು ಒಂದು ಜೀವನ ಚರಿತ್ರೆಯ ಕಾಣಿಕೆಯನ್ನು ಕೊಟ್ಟಿರುವರು. ಅದರಲ್ಲಿಯೂ ಅದು ಭಗವಂತನ ಸೇವೆಗೆ ಮೀಸಲಾಗಿಟ್ಟ ಪವಿತ್ರತಮವಾದ ಮಹಾ ಮಾತೆಯ ಜೀವನ ಒಂದು ವೈಶಿಷ್ಟ್ಯ.

"ಮಾತೆಯ ಮಹಾ ಸಂದೇಶದ ಮೊಳಗು ಕನ್ನಡ ನಾಡಿಗೆಲ್ಲಾ ಕೇಳಿಸಲಿ . . . ಕನ್ನಡಿತಿಯರ ಹೃದಯದಲ್ಲಿ ಮಿಡಿಯಲಿ. ಕನ್ನಡಿಗರ ಕ್ಲೈಬ್ಯ ಕಳೆಯಲಿ" ಎಂಬ ಅವರ ಅಭಿಲಾಷೆ ಈಡೇರಲಿ, ಎಂಬುದೇ ನಮ್ಮ ಪ್ರಾರ್ಥನೆ.

ಸೋಮನಾಥಾನಂದ

*
* *

ಭಕ್ತರಾಜ ಬಸವಣ್ಣ:—ಲೇಖಕರು: ಸಿಂ. ಪಿ. ಲಿಂಗಣ್ಣನವರು; ಪ್ರಕಾಶಕರು: ಮಾ. ನಂ. ಶಿವಪ್ಪ ಸಹೋದರರು, ಒಡೆಯರು, ವೀರಶೈವ ಸಾಹಿತ್ಯ ಭಾಂಡಾರ, ಬೆಂಗಳೂರು ನಗರ; ಪುಟಗಳು: ಕ್ರೌನ್ ಅ. ಪ. ೬೨; ಬೆಲೆ, ೦—೧೨—೦

ಈ ಪುಸ್ತಕದಲ್ಲಿ ಕನ್ನಡ "ಕುಲೋದ್ಧಾರಕ" "ಅರಿತ ಶರಣ" "ಗೆಲುವೆನೆಂಬ ಭಾಷೆ" "ನ್ಯಾಯ ನಿಷ್ಠುರಿ, ಲೋಕ ವಿರೋಧಿ" "ಸಂಗನಿಗೆ ವೀರ, ಶರಣರಿಗೆ ವಧು" ಮತ್ತು "ಬಸವಣ್ಣನು ಹಾಯ್ದ ಹೆಜ್ಜೆ" ಎಂಬ ಆರು ಪ್ರಕರಣಗಳಿವೆ. ಈ ಒಂದೊಂದು ಪ್ರಕರಣದಲ್ಲಿಯೂ ಕನ್ನಡ ಕುಲದ ಜಗದ್ಗುರು, ಕಾರಣಿಕ ಶಿಶು, ಸಂಗನ ಬಸವ, ಇತ್ಯಾದಿಯಾದ ಸಣ್ಣ ಸಣ್ಣ ತಲೆಬರಹಗಳಿದ್ದು ಅವುಗಳ ಅಡಿಯಲ್ಲಿ ಆಯಾ ವಿಷಯವನ್ನು ಕುರಿತ ವಿವೇಚನೆ ನಡೆದಿದೆ. ಇಂತಹ ಒಂದೊಂದು ಪ್ರಕರಣದಲ್ಲಿಯೂ ಬಸವಣ್ಣನವರ ಮೂರ್ತಿಸ್ವರೂಪದ ಒಂದೊಂದು ಚಿತ್ರವೂ ಆಧ್ಯಾತ್ಮಿಕ ಜೀವನದ ಒಂದೊಂದು ನಿಲವೂ ಬುದ್ಧಿಗೋಚರವಾಗುವಂತೆ ಲೇಖಕರು ಮಾರ್ಮಿಕವಾಗಿ ಆ ಮಹಾನುಭಾವರ ಜೀವನ ಕಥೆಯನ್ನು ನಿರೂಪಿಸಿದ್ದಾರೆ.

ಈ ನಿರೂಪಣೆಗೆ ಬಸವಣ್ಣನವರ ವಚನಗಳನ್ನೇ ಆದ್ಯಂತವಾಗಿ ಬಳಸಿಕೊಂಡಿರುವುದರಿಂದ ಪುಸ್ತಕ ಪ್ರಕರಣ ಪ್ರಕರಣದಲ್ಲಿಯೂ ಪ್ರಮಾಣಬದ್ಧವೂ ವಿಚಾರಯೋಗ್ಯವೂ ವಿಶ್ವಸನೀಯವೂ ಆಗಿ ಪರಿಣಮಿಸಿದೆ. ಜೊತೆಗೆ ಲೇಖಕರ ಶೈಲಿ, ಕಾವ್ಯಮಯವೂ ಸೂತ್ರಪಾಯವೂ ಆದ ಬಸವಣ್ಣನವರ ವಚೋವಿಲಾಸಕ್ಕೆ ಅನುಗುಣವಾಗಿ ಏರಿ ಬಂದಿರುವುದರಿಂದ ಬರವಣಿಗೆ ಬಿಗಿಯಾಗಿಯೂ ರಮ್ಯವಾಗಿಯೂ ಪರಿಣಮಿಸಿದೆ. ವಾಚಕರು ಅಲ್ಲಲ್ಲಿ ಅರ್ಥಕ್ಕಾಗಿ ತಲೆ ಕೆರೆದುಕೊಳ್ಳುವ ಪ್ರಸಂಗವಿದ್ದರೂ ಒಟ್ಟಿನಲ್ಲಿ ಈ ಶೈಲಿ ಈ ಬಗೆಯ ಬರವಣಿಗೆಗೆ ಹೇಳಿಸಿದ ಶೈಲಿ ಎಂದೇ ಹೇಳಬೇಕು.

ಬಸವಣ್ಣನವರನ್ನು ಕುರಿತು ಈ ವರೆಗೆ ಪ್ರಕಟವಾದ ಉತ್ತಮ ರೀತಿಯ ಪುಸ್ತಕಗಳ ಜೊತೆಗೆ ಈ ಪುಸ್ತಕವನ್ನು ಧಾರಾಳವಾಗಿ ಸೇರಿಸಬಹುದು.

ಪ್ರಕಾಶಕರು ಇನ್ನಷ್ಟು ಆಸ್ಥೆವಹಿಸಿ ಇಂತಹ ಪುಸ್ತಕಗಳನ್ನು ಅಚ್ಚುಕಟ್ಟು ಆಕರ್ಷಕವಾಗಿರುವಂತೆ ನೋಡಿಕೊಳ್ಳಬೇಕು. ಇದು ವಾಚಕರ ಪ್ರಯೋಜನದ ದೃಷ್ಟಿಯಿಂದ ಹೇಳಿದ ಮಾತಲ್ಲ. ಪ್ರಕಾಶಕರ ಪ್ರಯೋಜನದ ದೃಷ್ಟಿಯಿಂದಲೇ ಹೇಳಿದ ಮಾತು. ಜನಪ್ರಿಯವಾಗಬೇಕಾದ ಪುಸ್ತಕ ಆಕರ್ಷಕವಾಗಿರಬೇಕಾದುದು ತೀರಾ ಅಗತ್ಯ.

ಎಸ್. ವಿ. ಪರಮೇಶ್ವರ ಭಟ್ಟ

***

ನನ್ನ ಗೀತಗಳು—ಬರೆದವರು : ಗೀತಾಪ್ರಿಯ ; ಪ್ರಕಾಶಕರು : ಸಾಧನ ಮುದ್ರಣಾಲಯ, ಧಾರವಾಡ ; ಪುಟಗಳು : ಕ್ರೌ. ಅ. ಪ. ೨ + ೧೮ + ೪೫ ; ಬೆಲೆ, ರೂ. ೧—೦—೦.

ಇದು "ಗೀತಾಪ್ರಿಯ" ಎಂಬ ಕಾವ್ಯನಾಮದಿಂದ ಬರೆಯುತ್ತಿರುವ ಶ್ರೀ ಶೇಷಗಿರಿರಾಯರ ಮೂವತ್ತೊಂದು ಬಿಡಿ ಕವನಗಳ ಸಂಗ್ರಹ. ಶ್ರೀ ಶಂ. ಬಾ. ಜೋಶಿಯವರು ಈ ಸಂಗ್ರಹಕ್ಕೆ ಬರೆದ ಸುಂದರವಾದ ಮುನ್ನುಡಿ ಸಂಗ್ರಹದ ಸಾರಸ್ವತ ಸಂಪತ್ತನ್ನು ಹೆಚ್ಚಿಸುವುದಾಗಿದೆ.

ಈ ಕವನಗಳಲ್ಲಿ 'ದೊರೆಯ ಕಾಣಲಳವೆ' 'ಬನಸಿರಿ' 'ಮಳಿ ಬಂತು' ಈ ಮೂರು ನಿಸರ್ಗ ಸೌಂದರ್ಯವನ್ನು ಕುರಿತು ಹಾಡಿದುವು '—ಗೆ' 'ಇನಿಯಳ ಮುನಿಸು' 'ಮನದನ್ನೆ' 'ಕೌತುಕದ ಕನ್ಯೆ' ಈ ನಾಲ್ಕು ಪ್ರಣಯ ಗೀತಗಳು. 'ಚೆಲುವು ನಮ್ಮದೊಂದೆ ಗುರಿ' 'ಒಳಿತು' 'ಬೆಳಕು ಕತ್ತಲೆ' 'ದಾನಿ' ಈ ನಾಲ್ಕು ಲೋಕಕ್ಕೆ ಕವಿಯು ಹೇಳಬೇಕಾದ ನೀತಿಯನ್ನು ಪ್ರಕಾಶಪಡಿಸುವಂತಹವು. 'ಅಗಲಿದ ಗೆಳೆಯನಿಗೆ' ಎನ್ನುವುದೊಂದು ಚರಮಗೀತೆ. 'ನನ್ನ ಕನ್ನಡ' ಎನ್ನುವು

ದೊಂದು ನಾಡಗೀತೆ. ಉಳಿದವುಗಳೆಲ್ಲ—ಒಂದೆರಡರ ಹೊರತು ?—ಗೀತಾಪ್ರಿಯರು ತಮ್ಮನ್ನು ತಾವೇ ಕಂಡುಕೊಳ್ಳುವ ಹಂಬಲದಿಂದ ಹಾಡಿಕೊಂಡ, ತಮ್ಮದೇ ಆದ ಕಷ್ಟ ಸುಖಗಳ, ಬಿಸಿಲು ಬೆಳದಿಂಗಳುಗಳ ಅನುಭವ ವಿಶೇಷಗಳನ್ನು ಕುರಿತು ಬರೆದ ಆಧ್ಯಾತ್ಮಿಕ ಚಿತ್ತವೃತ್ತಿಯನ್ನು ಪ್ರಕಾಶಪಡಿಸುವಂತಹ ಕವನಗಳು. ಇದು ವಸ್ತು ನಿರ್ದೇಶನ ದೃಷ್ಟಿಯಿಂದ ಮಾಡಿದ ಸ್ಥೂಲ ವಿಭಜನೆ.

ವಿಭಜನೆ ಸ್ಥೂಲವಾದರೂ ಗೀತಾಪ್ರಿಯರ ಚಿತ್ತವೃತ್ತಿಯ ಒಲವು ನಿಲವುಗಳು ಎಂಥವು ಎಂಬುದನ್ನು ಇದರಿಂದ ಸ್ವಲ್ಪಮಟ್ಟಿಗೆ ತಿಳಿದುಕೊಳ್ಳಬಹುದಾಗಿದೆ. ಪರಾತ್ಪರ ವಸ್ತುವನ್ನು ಅನನ್ಯಭಾವದಿಂದ ಶರಣುಹೋಗುವುದೂ ಆ ಪರಾತ್ಪರ ದೆದುರು ತನ್ನ ಹೃದಯದ ಭಾವನೆಗಳನ್ನು ನಿವೇದಿಸುವುದೂ ಆ ಪರದೈವ ಅಪಾರ ಕೃಪೆ ತೋರಿದಾಗ ತಾನು ಅವರ್ಣನೀಯವಾದ ಆನಂದವನ್ನು ಅನುಭವಿಸುವುದೂ ಈ ಕವಿಗೆ ಪ್ರೀತಿಯ ವಿಷಯ. ಹಾಗೆಯೇ ತನ್ನ ಸುತ್ತಣ ಪ್ರಪಂಚವನ್ನೂ ಸೃಷ್ಟಿ ವೈಚಿತ್ರ್ಯವನ್ನೂ ಕಂಡು ಅವುಗಳ ಸೌಂದರ್ಯ ದರ್ಶನದಿಂದಾದ ಸಂತೋಷವನ್ನೂ ವಿಕಾರ ದರ್ಶನದಿಂದಾದ ದುಃಖವನ್ನೂ ತೋಡಿಕೊಳ್ಳುವುದೂ ಈ ಕವಿಯ ಪ್ರೀತಿಯ ವಿಷಯಗಳೇ ಆಗಿವೆ. ಈ ಎರಡು ಪ್ರೀತಿಯ ವಿಷಯಗಳನ್ನು ಕುರಿತಾದ ಹಾಡುಗಳು ಈ ಸಂಗ್ರಹದಲ್ಲಿ ಬಂದಿವೆ. ಇವುಗಳಲ್ಲಿ ' ಈಯೆ ಒಂದು ಹಾಡನು ' ' ಒಂದು ಹಾಡು ' ' ಕರುಣೆ ' ' ನನ್ನ ದಾರಿ ' ' ಜೀವದುಸಿರೆ ' ' ಸಂಕಲ್ಪ ' ' ನನ್ನ ದೀಪ ' ' ಆತ್ಮ ಶಿಶು ' ' ಪಯಣದ ಹಾಡು ' ಇವುಗಳನ್ನು ಹೇಳಬಹುದು.

ಗೀತಾಪ್ರಿಯರು ರಸಿಕರೆಂದೂ ಸೌಂದರ್ಯೋಪಾಸಕರೆಂದೂ ಅನುಭಾವಿಗಳೆಂದೂ ಶ್ರೀ ಜೋಶಿಯವರ ಮುನ್ನುಡಿಯನ್ನು ಹೇಳಿ ಗೀತಾಪ್ರಿಯರ ಕವನಗಳ ಉದಾರಣೆಯಿಂದ ಸಮರ್ಥನ ಮಾಡಿದ್ದಾರೆ. ಇದ್ದುದನ್ನು ತೋರಿ ಇರಬೇಕಾದುದನ್ನು ಸೂಚಿಸುವ ' ಆದರ್ಶ ' ಸಾಹಿತ್ಯದ ರೀತಿಯೂ ಹೊರಗಣ್ಣು ಸೆಳೆದು ಮನವನ್ನು ಹಿಗ್ಗಿಸುವ ಚೆಲುವಿಗಿಂತ ಒಳಗಣ್ಣು ಅರಳಿಸಿ ಅರಿತಂತೆ ಹೆಚ್ಚು ಹೆಚ್ಚಿನ ಆನಂದವನ್ನೀವ ಚೆಲುವಿನ ಪರಿಯನ್ನು ಚಿತ್ರಿಸುವ ರೀತಿಯೂ ಇವರ ಗೀತಗಳಲ್ಲಿವೆ ಎಂದು ಸಾರಿದ್ದಾರೆ. ಮುನ್ನುಡಿಕಾರರ ಈ ಅಭಿಪ್ರಾಯಗಳೆಲ್ಲ ನಿಜ ಎನ್ನುವುದು ಕವನಗಳನ್ನು ಓದಿದ ಸಹೃದಯರಿಗೆ ವೇದ್ಯವಾಗದಿರದು.

ಅನುಭವವೂ ತತ್ವಜ್ಞಾನವೂ ಹಿರಿದಾದ ಈ ಗೀತಗಳಲ್ಲಿ ನಾದ ಮಾಧುರ್ಯ, ಛಂದೋವೈವಿಧ್ಯ, ಪದಮೈತ್ರಿ, ಕಲ್ಪನಾವಿಲಾಸ, ರೂಪಕ ನಿರ್ಮಾಣಶಕ್ತಿ, ವ್ಯಂಗ್ಯಾರ್ಥ ಚಾತುರ್ಯ, ಉಕ್ತಿ ಸೌಂದರ್ಯ ಇವುಗಳನ್ನೂ ಗೀತಾಪ್ರಿಯರು ಸಾಧಿಸಿರುವುದರಿಂದ ಇವು ಎಲ್ಲ ರೀತಿಯಿಂದಲೂ ಸುಂದರವಾದ ಕವನಗಳಾಗಿ, ಗೀತಗಳಾಗಿ ಪರಿಣಮಿಸಿವೆ.

ಈ ಕವನ ಸಂಗ್ರಹವನ್ನು ಓದಿದಮೇಲೆ "ಹಕ್ಕಿ ಹಾರತಾವ ಹಾರಿ ಆಡತಾವ ಚಿಕ್ಕ ಮಕ್ಕಳ್ಹಾಂಗ | ಅಕ್ಕನೋಡು ಭೋರಂಗಿ ಭೃಂಗಿ ಮದರಂಗಿ ಗಿಡದ ಮ್ಯಾಗ|" "ಬಗೆಯ ಬಯಲು ಬಂಜೆಯಾಗಿ ಭೋರಿಡುತ್ತ ಬಿದ್ದಿದೆ| ನಗುವ ಜಗದ ಮಸಣವಾಗಿ ಹೊಗೆಯು ಮುತ್ತಿಕೊಂಡಿದೆ|" "ಗಾಳಿ ಬಿಟ್ಟಿತು ಏಳು ಕೆಳದಿ ಕೇಳು ಕಡಲಿನ ಕರೆಯನು| ನಾಳೆ ಸಿಕ್ಕದು ಇಂಥ ವೇಳೆಯು ಹೇಳು ಪಯಣದ ಹಾಡನು|" "ದೇವನ ದೇಹ ದೇವನ ಮನಸು ದೊರೆವ ಬಗೆಯದೋರು| ದೇವನ ಹಾಡು ಹಾಡುತ ಹಾಡುತ ಮೇಲ ಮೇಲಕೇಳು|" —ಇಂತಹ ಸುಂದರವಾದ ಭಾವ ಪೂರ್ಣವಾದ ಕವನ ಪಂಕ್ತಿಗಳು ನಾಟಕರ ಮನಸ್ಸಿನಲ್ಲಿ ನಿತ್ಯನೂತನವಾಗಿ ನೆನಪಿಗೆ ಬಂದು ಹೃದಯದ ತಂತ್ರಿಯನ್ನು ಮಿಾಟುತ್ತ, ಹೊಸ ಹೊಸ ಅರ್ಥಗಳನ್ನು ತಂದು ನೋಡುತ್ತ ನಿನದಿಸುತ್ತಿರುತ್ತವೆ.

ಎಸ್. ವಿ. ಪರಮೇಶ್ವರ ಭಟ್ಟ.

***

ಜರತಾರಿ ಕುಪ್ಪಸ—ಸಣ್ಣ ಕತೆಗಳ ಸಂಕಲನ : ಕತೆಗಾರರು : ಶ್ರೀ ಎಚ್. ಅನಂತ ಭಟ್ಟ, ಬಿ.ಎಸ್‌ಸಿ. ; ಪ್ರಕಾಶಕರು : ಶ್ರೀ ಎಚ್. ಎಸ್. ದೊರೆಸ್ವಾಮಿ, ಬಿ.ಎಸ್‌ಸಿ. ; ಮಿತ್ರಸಂಘ, ಬೆಂಗಳೂರು. ಕ್ರೌನ್ ಅಷ್ಟ ಪತ್ರ, ಪುಟ ೧೧೩ ; ಬೆಲೆ, ೧ ರೂಪಾಯಿ.

ಈ ಕಥಾಸಂಕಲನದಲ್ಲಿ ಒಬ್ಬರೇ ಕತೆಗಾರರ ಹನ್ನೊಂದು ಸಣ್ಣ ಕತೆಗಳಿವೆ. ಮೊದಲನೆಯ ಕತೆಯ ಹೆಸರೇ ಹೊತ್ತಗೆಯ ಹೆಸರೂ. "ಜರತಾರಿ ಕುಪ್ಪಸ" "ಸೇವಾಧುರೀಣ" "ಕಾಣದ ಕೈ" ಇವು ಮೂರು ಒಂದು ಗುಂಪು. ಮೊದಲನೆಯದರಲ್ಲಿ, ಐದು ಜನ ತಂಗಿಯರಿದ್ದರೂ ಐದೆಯಾಗಿದ್ದ ಒಬ್ಬಳೇ ತಂಗಿ ಲಕ್ಷ್ಮಿಗೆ ಅಣ್ಣ ನಾಗೇಶನು ಪ್ರೀತಿಯಿಂದ ಗೌರಿ ಹಬ್ಬದ ಉಡುಗೊರೆ ಜರತಾರಿ ಕುಪ್ಪಸವನ್ನು ಬಹಳ ಕಷ್ಟಪಟ್ಟು ಸಂಪಾದಿಸಿಕೊಡಹೋಗಿ ಮಾರ್ಗ ಮಧ್ಯದಲ್ಲಿ ಅಕಾಲ ಮರಣಕ್ಕೆ ತುತ್ತಾಗುತ್ತಾನೆ. ಎರಡನೆಯದರಲ್ಲಿ ಸೇವಾಧುರೀಣ ಸೇವಕ ಸೋಮನು ನಡುವಯಸ್ಸಿನಲ್ಲಿ, ಕುದುರೆಯ ಮೇಲೆ ಕೂತು ಓಡುತ್ತಿದ್ದ ತನ್ನ ಸ್ವಾಮಿಯನ್ನು ಕಾಲ್ನಡೆಯಿಂದ ಹಿಂಬಾಲಿಸಿ ಛತ್ರಿಯನ್ನು ಹಿಡಿದು ಯಾತ್ರೆ ಮಾಡಿಸಿ ಊರು ತಲಪುವ ವರೆಗೂ ಪ್ರಾಣಪಕ್ಷಿಯನ್ನು ಹಿಡಿದುಕೊಂಡಿದ್ದು, ಅರಮನೆಯ ಬಾಗಿಲಲ್ಲಿ ದಣಿವಿಂದ ದೇಹತ್ಯಾಗ ಮಾಡುತ್ತಾನೆ. ಮೂರನೆಯದಾದ "ಕಾಣದ ಕೈ" ಎಂಬ ಕತೆಯಲ್ಲಿ ಧೂರ್ತ ಗೋಪಾಲರಾಯನು ಅರಿಯದ ಅನಾಥೆ ಸುಂದರಿಯನ್ನು ಮೋಸದಿಂದ ತನ್ನ ಮೋಹಜಾಲದಲ್ಲಿ ಸಿಕ್ಕಿಸಿಕೊಂಡು ಸಂಕಟ ಬಂದಾಗ

ಸ್ವಾರ್ಥಕ್ಕಾಗಿ, ಜನಾಪವಾದಕ್ಕಾಗಿ ಆಕೆಯನ್ನು ಕೈಯಿಂದ ಕೊಲೆಮಾಡಿ ತನ್ನ ಹೀನಕೃತ್ಯಕ್ಕೆ ತಕ್ಕ ಪ್ರಾಯಶ್ಚಿತ್ತವೆಂಬಂತೆ ತಾನೂ ಯಾವುದೋ ಕಾಣದ ಕೈಯಿಂದ ನೂಕಿಸಿಕೊಂಡು ಹೊಳೆಯಲ್ಲಿ ಬಿದ್ದು ಪ್ರಾಣವನ್ನು ತೆರುತ್ತಾನೆ. ಇವು ಮೂರು ದುರಂತಗಳು.

"ಮೂರು ಹುಣ್ಣಿಮೆ" ಗಳಲ್ಲಿ 'ಚಿಣ್ಣನಿಲ್ಲದ ಬಾಳು ಬಾಳೇ' ಎಂದು ಹಂಬಲಿಸುತ್ತಿದ್ದ ಶಿವಸ್ವಾಮಿ ಶಾರದೆಯರಿಗೆ ಒಂದು ಆಶಾಕಿರಣ ಕಾಣಿಸಿಕೊಂಡು ಅದರಿಂದಲೇ ತುಂಬ ಸಂತೋಷವನ್ನು ಪಟ್ಟು 'ಸತೀವ್ರತ' ನೂ ಆದ ಶಿವಸ್ವಾಮಿಯ ಆಶಾಭಂಗವನ್ನು ನೋಡುತ್ತೇವೆ. "ವಾದವೈಖರಿ" ಯು ವಕೀಲ ರಾಮಚಂದ್ರರಾಯರು ಉದಾರ ಮನಸ್ಸಿನಿಂದ ಒಬ್ಬ ಅನಾಥೆಯ ಕೇಸನ್ನು ತೆಗೆದುಕೊಂಡು ಅಫೀಮಿನ ಅಮಲಿದ್ದರೂ ಸೋಲಿನಿಂದ ಹೇಗೆ ಗೆಲವನ್ನು ಪಡೆದು ಆಕೆಯನ್ನುದ್ಧಾರ ಮಾಡಿದರೆಂಬುದನ್ನು ತೋರಿಸುತ್ತದೆ. "ಅತ್ತಿದ್ದು ನಾಲ್ಕು ಬಾರಿ" ಯಲ್ಲಿ ಹಿಂದೂ ಸಮಾಜದ ಒಬ್ಬ ಹೆಣ್ಣು ಮಗಳು ತನ್ನ ಜೀವನದ ನಾಲ್ಕು ಬೇರೆ ಬೇರೆ ಸಂದರ್ಭಗಳಲ್ಲಿ ವ್ಯಥೆಪಟ್ಟ ಕರುಣ ಕತೆ ಇದೆ. "ಒಂದು ಭಾನುವಾರ" ವು ಈ ಸಂಕಲನದಲ್ಲಿರುವ ಒಂದು ಉತ್ತಮ ಕತೆ ಎನ್ನಬಹುದು. ಇಲ್ಲಿ ಕಾರ್ಖಾನೆಯ ಕೂಲಿಗಾರನ ದಿನಚರಿ ಜೀವನ ಸಂಗ್ರಾಮವನ್ನು ನೋಡುತ್ತೇವೆ. ಅವನ ಜೀವನದಲ್ಲಿ ಒಂದು ದಿನದ ರಜಕ್ಕೆ ಎಷ್ಟು ಬೆಲೆ, ಅದನ್ನು ಸಾರ್ಥಕಪಡಿಸಿಕೊಳ್ಳಲು ಅವನು ಹೇಗೆ ಹವಣಿಸುತ್ತಾನೆ. ಆದರೂ ಒಂದೊಂದು ಬಾರಿ ಮಧ್ಯೆ ಎಷ್ಟು ಎಡರು ತೊಡರುಗಳು ಬಂದು ಆ ರಜವೂ ಕಣ್ಣು ಮುಂದೆಯೇ ಹೇಗೆ ಕರಗಿಹೋಗುತ್ತದೆ ಎಂಬುದನ್ನು ಕಥೆಗಾರರು ಹೃದಯಂಗಮವಾಗಿ ಚಿತ್ರಿಸಿದ್ದಾರೆ. ಇಲ್ಲಿ ಕಾಣುವ ಈ ಚಿತ್ರ ಸಾಮಾನ್ಯವಾಗಿ ಅನೇಕ ಜನಗಳಿಗೆ ದಿನವೂ ಅನುಭವಕ್ಕೆ ಬಂದಿರುವ, ಬರುವ, ವಿಷಯ. ಅದರಿಂದಲೇ ಅದರ ಸೊಗಸೂ ಹೆಚ್ಚು.

" ಕಳುವಾದ ಡಾಬು " ಕನ್ನಡ ಸಣ್ಣ ಕತೆಗಳ ಕ್ಷೇತ್ರದಲ್ಲಿ ಅಷ್ಟಾಗಿ ಕಾಣಿಸದಿರುವ ನವೀನ ನಮೂನೆಯದು. ಸ್ನೇಹಿತರು ಪರಸ್ಪರ ಬರೆಯುವ ಪತ್ರಗಳಿಂದಲೇ ಒಂದು ಸಣ್ಣ ಕತೆಯಾಗಿದೆ. ಇಲ್ಲಿ ಸಜ್ಜನರ ಸ್ನೇಹ ಎಂತಹದು ಎಂಬುದನ್ನು ಮನಗಾಣಬಹುದು. "ಅದೃಶ್ಯ ಸ್ಮಾರಕ" ವು ಇಲ್ಲಿಯ ಮತ್ತೊಂದು ಉತ್ತಮ ಕತೆ. ಇಲ್ಲಿ ಶಿವನು ಪಾರ್ವತಿಗೆ " ಪ್ರೀತಿಯ ಮತ್ತು ಪಾಪದ " ಸ್ಮಾರಕಗಳಿಗೆ ವ್ಯತ್ಯಾಸವನ್ನು ದೃಷ್ಟಾಂತದಿಂದ ಮನದಟ್ಟು ಮಾಡಿಸುತ್ತಾನೆ. ಪ್ರೀತಿಯ ಸ್ಮಾರಕಗಳ ಹೆಸರಿನಲ್ಲಿ ದಿನವೂ ಪ್ರಪಂಚದಲ್ಲಿ ಎಷ್ಟು ಹಣ ವ್ಯಯಮಾಡುತ್ತಿದ್ದಾರೆ. ಅದೇ ಹಣದಿಂದ ಇನ್ನೂ ಉಪಯುಕ್ತವಾದ ರೀತಿಯಲ್ಲಿ ಅಂದರೆ ಬಡವರನ್ನು, ದೀನರನ್ನು ರಕ್ಷಿಸುವುದಕ್ಕಾಗು

ವುದಿಲ್ಲವೆ ? ಅದೂ (ಅದೃಶ್ಯ) ಸ್ಮಾರಕವಾಗುವುದಿಲ್ಲವೆ ? ಇದರಿಂದ ಲೋಕಕ್ಕೆ ಎಷ್ಟು ಕಲ್ಯಾಣ, ಜನಕ್ಕೆ ಎಷ್ಟು ಸುಖ, ಶಾಂತಿ ! ಆದರೆ ನಡೆಯುತ್ತಿರುವುದು ಹಾಗಲ್ಲ ಎಂಬ ಧ್ವನಿ ಇದೆ ಈ ಕತೆಯಲ್ಲಿ. "ಯೌವನ ಮದ" ದಲ್ಲಿ ಮುಖ್ಯವಾಗಿರುವ ನಾಲ್ಕು ವ್ಯಕ್ತಿಗಳಲ್ಲಿ ಇಬ್ಬರು ಸ್ತ್ರೀವ್ಯಕ್ತಿಗಳು—ತಾಯಿ, ಮಗಳು.—ಸಂಸ್ಕಾರವಿಲ್ಲದೆ, ಅಡ್ಡದಾರಿ ಬಿದ್ದು ಅದೇ ಸುಖವೆಂದು ನಂಬಿ ಕೊನೆಯಲ್ಲಿ ಪಶ್ಚಾತ್ತಾಪಪಡುತ್ತಾರೆ. ಉಳಿದಿಬ್ಬರು ಪುರುಷ ವ್ಯಕ್ತಿಗಳು—ಮಗ, ಅಳಿಯ—ಇವರಿಗಾಗಿ ನೊಂದು, ಆದರೆ ಅವರನ್ನು ತಿದ್ದಲು ಸಾಧ್ಯವಾಗದೆ, ಆ ಕಾರಣದಿಂದಲೇ ವಿರಕ್ತರಾಗುತ್ತಾರೆ. ಕತೆಯ ಕೊನೆಯಲ್ಲಿ ಪಶ್ಚಾತ್ತಾಪ ಹೊಂದಿ ಶಾಂತಿಯನ್ನರಸಲು ತೀರ್ಥಯಾತ್ರೆ ಮಾಡುತ್ತಿದ್ದ ತಾಯಿ ಮತ್ತು ಮಗಳು ಸನ್ಯಾಸಿ ಜೀವನವನ್ನು ನಡೆಸುತ್ತಿದ್ದ ಮಗ ಮತ್ತು ಅಳಿಯರನ್ನು ಕಾಣುತ್ತಾರೆ. ಈ ಕತೆಯಲ್ಲಿ ಕೊಂಚಮಟ್ಟಿಗೆ ಊಹೆಗೆ ಮತ್ತು ಸತ್ಯಕ್ಕೆ ದೂರವಾದ ಅಂಶಗಳು ಕೆಲವಿವೆ ಎಂದು ಹೇಳಬೇಕಾಗುತ್ತದೆ. ಉದಾ: ಪುಟ ೮೮ " ಕೃಷ್ಣಪ್ಪನವರು ಎಲ್ಲವನ್ನೂ ನೋಡುತ್ತಿದ್ದರೂ, ಅಪಾರವಾದ ತಾಳ್ಮೆಯಿಂದ (?) ಸಹಿಸಿಕೊಂಡಿದ್ದರು. . . . **ತನ್ನಂತೆಯೇ** ತನ್ನ ಹೆಂಡತಿಗೂ **ಎಲ್ಲಾ** ವಿಷಯಗಳಲ್ಲೂ **ಸಂಪೂರ್ಣ ಸ್ವಾತ್ರಂತ್ರ್ಯ**ವಿದೆಯೆಂದು ನಂಬಿದ್ದರು." ಅಂದರೆ ಪತ್ನಿಯು ಜಾರೆಯೆಂದು ತಿಳಿದಿದ್ದರೂ "ಈ ವಿಷಯದಲ್ಲಿ ಮೇಲ್ಮಟ್ಟವನ್ನು ಪಡೆದಿದ್ದ" (?) ಕೃಷ್ಣಪ್ಪನವರು ಸುಮ್ಮನಿದ್ದರು ಎಂದೂ " ತನ್ನಂತೆಯೇ " ಅಂದರೆ ತಾವೂ ಅದೇ ರೀತಿ ಇದ್ದರೆಂದೂ ಅರ್ಥವಾಗುತ್ತದೆ ! ಕೊನೆಯದಾದ "ಮುಂಗಾರು ಮೋಡ"ದಲ್ಲಿ ಬಡ ತಂದೆತಾಯಿಗಳು, ಮಗ ಮತ್ತು ಶ್ರೀಮಂತರ ಮನೆಯ ಸೊಸೆ ಇವರ ಪರಸ್ಪರ ಸಂಬಂಧ ನಡೆವಳಿಕೆಗಳು ಹೇಗಿರುತ್ತವೆ ಎಂಬುದನ್ನು ಕೊಂಚಮಟ್ಟಿಗೆ ನೋಡಬಹುದಾಗಿದೆ. ಅಲ್ಲದೆ ಶ್ರೀಮಂತರ ನಡೆನುಡಿ, ಧೋರಣೆಗಳೂ ಕಾಣುತ್ತವೆ. ಆದರೂ ಕತೆಗಿಟ್ಟಿರುವ ಹೆಸರು ಕಥಾವಸ್ತುವಿನ ದೃಷ್ಟಿಯಿಂದ ಅಷ್ಟು ಸಾರ್ಥಕವಲ್ಲವೇನೋ ಅನ್ನಿಸುತ್ತದೆ.

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸಣ್ಣ ಕತೆಗಳ ವಿಶೇಷವಾದ ಸ್ಥಾನವನ್ನು ಪಡೆದು ಭರದಿಂದ ಬೆಳೆಯುತ್ತಿದೆ. ಅದಕ್ಕೆ ಪುಸ್ತಕ ಲೇಖಕರದೂ ಒಂದು ಒಳ್ಳೆಯ ಕಾಣಿಕೆ. ಇವರ ಶೈಲಿ ಸರಳವಾಗಿ ಹರಿಯುತ್ತದೆ. ಕಲ್ಪನಾ ಸಾಮರ್ಥ್ಯ ಚೆನ್ನಾಗಿದೆ. ಇನ್ನೂ ಮೇಲಾದ ಕತೆಗಳು ಇವರಿಂದ ಬರಲಿ ಎಂದು ಆಶಿಸುತ್ತೇವೆ. ಎರಡು ಬಣ್ಣಗಳ ಒರಟಾದ ಕಾಗದವಿದ್ದರೂ ಮುದ್ರಣ ಮುದ್ದಾಗಿದೆ. ಮೇಲುಹೊದಿಕೆಯಿಂದಲೇ ಹೊತ್ತಗೆಯ ಹೆಸರು ಹೇಳುವಂತಹ ಒಂದು ಚಿತ್ರವಿದ್ದಿದ್ದರೆ ಹೊರ ಚೆಲುವು ಹೆಚ್ಚುತ್ತಿದ್ದಿತೆಂದೆನಿಸುತ್ತದೆ.

ಕೆ. ಎಂ. ಕೃ.

ವಸ್ತುಕೋಶ

ಶ್ರೀ ವಿ. ಎನ್. ಕುಡುವಾ, ಐ.ಸಿ.ಎಸ್. ಅವರು ಮದರಾಸಿನ
ಲಾ ಕಾಲೇಜಿನ ಕರ್ನಾಟಕ ಸಂಘದಲ್ಲಿ ಮಾಡಿದ
ಪರಿಸಮಾಪ್ತಿ ಭಾಷಣ (೨೮—೨—೧೯೪೭)

ಇಂಥ ಸಭೆಗಳಲ್ಲಿ ನಡೆಯುವ ಉಪನ್ಯಾಸಗಳಲ್ಲಿ ಕನ್ನಡ ಭಾಷಾ ಸಾಹಿತ್ಯಗಳ ಸೌಂದರ್ಯವನ್ನೂ ಚಿರಸ್ಮರಣೀಯವಾದ ವಿಜಯನಗರದ ಕೃಷ್ಣದೇವರಾಯನ ಆಳ್ವಿಕೆಯ ಕಾಲದ ಮಹಿಮೋನ್ನತಿಯನ್ನೂ ಕುರಿತು ಮಾತನಾಡುವುದು ಸ್ವಾಭಾವಿಕವಾಗಿದೆ. ಕರ್ನಾಟಕ ಆಂಧ್ರ ದೇಶಗಳಿಗೆ ಸೇರಿದ ನಾವು ಆರ್ಯದ್ರಾವಿಡ ಸಂಸ್ಕೃತಿಗಳ ಮಿಲನದಿಂದುಂಟಾದ ಸಂಕೀರ್ಣ ಸಂಸ್ಕಾರ ವಿಶೇಷದ ಉತ್ತರಾಧಿಕಾರಿಗಳಾಗಿದ್ದೇವೆ; ಮಾತ್ರವಲ್ಲ, ನಾವು ದಕ್ಷಿಣ ಭಾರತದ ಇತರ ಸೋದರರಿಗಿಂತ ಹೆಚ್ಚಾಗಿಯೇ ಆರ್ಯ ಸಂಸ್ಕೃತಿಯನ್ನೂ ಹೀರಿದ್ದೇವೆ. ಕರ್ನಾಟಕ, ಮುಖ್ಯವಾಗಿ, ಈ ಸಂಸ್ಕೃತಿ ಸಂಘಟನೆಯ ನಾಡು. ನಮ್ಮ ಮಟ್ಟಿಗೆ ಹೇಳುವುದಾದರೆ ನಾವು ಶಕ್ತಿಯನ್ನು ಗಳಿಸಿದೆವು; ನಮ್ಮ ನಾಡು ಸಂಪತ್ಸಮೃದ್ಧವಾಯಿತು. ವಿಂಧ್ಯಾಚಲದ ವರೆಗೆ ಮಾತ್ರವೇ ಹಬ್ಬಿದ್ದ ನಮ್ಮ ದೃಷ್ಟಿ ಇದೀಗ ಹಿಮಾಲಯದ ವರೆಗೂ ಪಸರಿಸಿತು. ನವಜೀವನದೊಡನೆ ನಮ್ಮ ದೃಷ್ಟಿಕೋನವೂ ವಿಶಾಲವಾಗಿ ನಮ್ಮ ಸಾಮಾಜಿಕ ರಾಜಕೀಯ ಮತ್ತು ಧಾರ್ಮಿಕ ಭಾವನೆಗಳೂ ಹುರುಪೇರಿದವು. ನಮ್ಮ ನಾಡಿನಲ್ಲಿ ವಿರಾಜಿಸಿ, ಮಧ್ಯಕಾಲೀನ ಭಾರತದ ಇತಿಹಾಸವನ್ನು ಬೆಳಗಿದ ಆ ಬಲಾಢ್ಯ ಚಾಲುಕ್ಯ ಗಂಗ ವಂಶಗಳಂತಹ ರಾಜ ಮನೆತನಗಳು ಈ ಸಂಸ್ಕಾರ ಸಮೀಕರಣವನ್ನೇ ನಿದರ್ಶಿಸುತ್ತವೆ. ಕರ್ನಾಟಕವು ಮಹತ್ತ್ವದ ಮತ್ತು ನಿರ್ಣಾಯಕವಾದ ರಾಜಕೀಯ ಪರಿವರ್ತನೆಗಳನ್ನು ಪ್ರಖ್ಯಾತ ರಾಜವಂಶಗಳ ಉತ್ಕರ್ಷಾಪಕರ್ಷಗಳನ್ನು ಅನುಭವಿಸಿದ ರಂಗವಾಯಿತು. ಮಧ್ಯಕಾಲೀನ ಭಾರತದ ಧಾರ್ಮಿಕ ಸುಧಾರಕರ ಸಂಶ್ಲೇಷ ಸಾಧನೆಯ ಕಾರ್ಯರಂಗವೂ ಆಯಿತು. ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ವೀರಶೈವ ಮತಗಳು ಕರ್ನಾಟಕದ ಬಲಾಢ್ಯರೂ ಉದಾರಿಗಳೂ ಆದ ರಾಜರಿಂದ ನಿರ್ಮಿತವಾದ ಅನುಕೂಲ ವಾತಾವರಣದಲ್ಲಿ ಬೆಳೆದು ಸಾಫಲ್ಯವನ್ನೊಂದಿದುವು. ಭರತಖಂಡದ ದಕ್ಷಿಣಭಾಗಕ್ಕೆ ಮಹಾದ್ವಾರದಂತಿದ್ದು, ಇತಿಹಾಸಪೂರ್ವಕಾಲದಲ್ಲಿ ವೈದಿಕ ಧರ್ಮಾನುಯಾಯಿಗಳಾದ ಆರ್ಯರ ಪ್ರಭಾವವನ್ನು

ತದನಂತರ ಜೈನರ ಪ್ರಭಾವವನ್ನು ಮೊತ್ತಮೊದಲು ಒಳಗೊಂಡ ನಮ್ಮ ನಾಡು ದಕ್ಷಿಣಭಾರತದಲ್ಲಿ ಧಾರ್ಮಿಕ ಸುಧಾರಣೆ ತರಂಗ ತರಂಗವಾಗಿ ಹಬ್ಬಿದಂತೆಲ್ಲ, ಆಯಾ ಧಾರ್ಮಿಕ ಸುಧಾರಕರ ಬೋಧೆಯನ್ನು ಉತ್ತರದೇಶದತ್ತ ಹರಿಯಿಸಿತು.

ಕರ್ನಾಟಕವು ವಿವಿಧ ಧಾರ್ಮಿಕ ಸಂಸ್ಕೃತಿಗಳಿಗೆ ತವರೂರು. ಇಂಡಿಯದ ಇತರ ಕಡೆಗಳಲ್ಲಾದಂತೆ, ನಮ್ಮಲ್ಲೂ ತತ್ವಜಿಜ್ಞಾಸೆ ಬೆಳೆದಂತೆಲ್ಲ, ಧರ್ಮದ ಹಂಬಲವೂ ತೀವ್ರವಾಯಿತು. ವೀರಶೈವರೂ ಮಧ್ವಮತದ ಹರಿದಾಸರೂ ಎಲ್ಲೆಲ್ಲೂ ಜನಪ್ರಿಯವಾದ ಧಾರ್ಮಿಕ ಪ್ರಚಾರವನ್ನು ನಡೆಸಿದರು. ಕೀರ್ತನಕಾರರು ಈಗಲೂ ಊರೂರುಗಳನ್ನು ಸಂಚರಿಸುತ್ತ, ಬಹು ಸರಳವಾದ ಭಾಷೆಯಲ್ಲಿ ಭಕ್ತಿಪರವಾದ ಕೀರ್ತನೆಗಳನ್ನು ಹಾಡಿ, ತನ್ಮೂಲಕ ಅತಿ ಸೂಕ್ಷ್ಮ ತತ್ವಗಳನ್ನು ಎಲ್ಲೆಡೆಗಳಲ್ಲೂ ಸಾರುತ್ತಿದ್ದಾರೆ. ಪುರಂದರ ಕನಕದಾಸರಂತಹ ಸಾಧುಗಳ ಜನಪ್ರಿಯವಾದ ಕೀರ್ತನೆಗಳು ಎಲ್ಲ ಕಡೆಗಳಲ್ಲೂ ಬಳಕೆಯಲ್ಲಿವೆ. ದಕ್ಷಿಣ ಇಂಡಿಯದ ಪ್ರಾಂತಗಳೊಳಗೆ ಕರ್ನಾಟಕದಲ್ಲಿ ಮಾತ್ರವೇ ಇಸ್ಲಾಂ ಧರ್ಮವೂ ಸಂಸ್ಕೃತಿಯೂ ಬೇರೂರಿ ಬೆಳೆದಿರುವುದು. ಧಾರ್ಮಿಕ ಪ್ರವೃತ್ತಿಯು ಕೇವಲ ಅಂಧಾಭಿಮಾನ ನಿಸ್ಸಾರ ಕರ್ಮನಿಷ್ಠೆಗಳ ಹಂತಕ್ಕಿಳಿದು ಮತಭ್ರಾಂತಿ ದುರಭಿಮಾನಗಳೇ ವ್ಯಕ್ತವಾದ ಕೆಲವು ದೃಷ್ಟಾಂತಗಳುಂಟೆಂಬುದೇನೋ ನಿಜ. ಆದರೂ ಭರತಖಂಡದ ಇತರ ಕಡೆಗಳಂತೆ ಕರ್ನಾಟಕದಲ್ಲಿಯೂ ಜನ ಪ್ರಿಯ ಪ್ರಚಾರವೂ ಸಹಸ ಪ್ರವೃತ್ತಿಯೂ ಧರ್ಮಮಾರ್ಗಗಳ ಪ್ರಗತಿಯನ್ನು ಸೂಚಿಸುತ್ತವೆಂಬುದನ್ನು ಖಂಡಿತವಾಗಿ ಹೇಳಬಹುದು. ಮಾತ್ರವಲ್ಲ, ಕೇವಲ ಪಾಮರರೂ ಧರ್ಮ, ಭಕ್ತಿ, ವೈರಾಗ್ಯಗಳ ಮಹಾತತ್ತ್ವಗಳನ್ನು ಅರಿತವರಾಗಿದ್ದಾರೆ.

ಸಂಸ್ಕೃತಿ, ಸಂಪ್ರದಾಯ, ಸಮಾಜಶಾಸ್ತ್ರ, ಧಾರ್ಮಿಕ ಮತ್ತು ಪೌರಜೀವನ ವಿಷಯಗಳಲ್ಲಿ, ಲಲಿತ ಕಲೆಗಳಲ್ಲಿ, ಶಿಲ್ಪಶಾಸ್ತ್ರ, ವರ್ಣಚಿತ್ರ ಸಂಗೀತಗಳಲ್ಲಿ—ಅಷ್ಟೇ ಏಕೆ?—ಅತ್ಯುಜ್ಜ್ವಲವಾದ ಪ್ರಕೃತಿ ಸೌಂದರ್ಯದಲ್ಲೂ ಕರ್ನಾಟಕವನ್ನು ಸಂಕ್ಷಿಪ್ತ ಭರತಖಂಡವೆಂದು ನಿಶ್ಚಯವಾಗಿ ಕರೆಯಬಹುದು.

ಕೃಷ್ಣದೇವರಾಯನ ಉಚ್ಛ್ರಾಯಸ್ಥಿತಿಯೂ ವೈಭವವೂ ನಮ್ಮ ಹಿರಿಮೆಯ ಪರಾಕಾಷ್ಠೆಯಾದರೂ ವಿಜಯನಗರದ ಅವನತಿಯು ನಮ್ಮ ಕೀಳ್ದೆಸೆಯ ಹೆಗ್ಗುರುತಾಗಿದೆ. ಅಂದಿನಿಂದ ನಮ್ಮ ನಾಡು ಹೈದರಾಲಿ ಟಿಪ್ಪುಸುಲ್ತಾನರ ಅಲ್ಪಕಾಲದ ಆಳಿಕೆಯನ್ನು ಬಿಟ್ಟರೆ, ಇತರ ಕಾಲಗಳಲ್ಲೆಲ್ಲ, ತನ್ನ ಐಕಮತ್ಯವನ್ನು ಕಳೆದುಕೊಂಡಿತು ; ಆಗ ಮಾತ್ರ ಹೇಗೋ ಏನೋ ಆಕಸ್ಮಿತವಾಗಿ ಕನ್ನಡನಾಡು ಅವರ ಆಧಿಪತ್ಯಕ್ಕೊಳಗಾದರೂ ಶ್ರೀರಂಗಪಟ್ಟಣದ ಪತನಾನಂತರ ಅದು ಅಂದಿನ ಆಡಳಿತದ ಪರಿಸ್ಥಿತಿಗಳನ್ನ

ವಲಂಬಿಸಿಕೊಂಡು ಸಂಸ್ಥಾನಗಳಾಗಿಯೂ ಪ್ರಾಂತಗಳಾಗಿಯೂ ಹರಿಹಂಚಾಗಿ ಹೋಯಿತು.

ಕನ್ನಡನಾಡು ಉತ್ತರದಲ್ಲಿ ಗೋದಾವರೀ ನದಿಯ ವರೆಗೆ ಹಬ್ಬಿದೆ; ದಕ್ಷಿಣದಲ್ಲಿ ಕಾವೇರಿಯ ವರೆಗೆ ಹರಡಿದೆ. ಪಶ್ಚಿಮದಲ್ಲಿ ಅದನ್ನು ಅರಬೀ ಸಮುದ್ರ ಮಿಾಯಿಯಿಸುತ್ತಿದೆ. ಪೂರ್ವದಲ್ಲಿ ಗೋದಾವರೀ ಮಂಜೀರಾನದಿಗಳ ಸಂಗಮ ಸ್ಥಾನದಿಂದ ನೀಲಗಿರಿಯ ವರೆಗೂ ಅದು ಕೈಚಾಚಿದೆ. ಬ್ರಿಟಿಷ್ ಕರ್ನಾಟಕವೊಂದೇ ಒರಿಸ್ಸಾ ಪ್ರಾಂತಕ್ಕಿಂತಲೂ ಇತರ ಅನೇಕ ಸಂಸ್ಥಾನಗಳಿಗಿಂತಲೂ ವಿಸ್ತಾರವಾಗಿದೆ. ಅದರ ಜನಸಂಖ್ಯೆ, ಸಿಂಧ್ ಮತ್ತು ತಿರುವಾಂಕೂರಿನ ಜನ ಸಂಖ್ಯೆಗಳಿಗಿಂತಲೂ ಅಧಿಕವಾದ ಜನಸಂಖ್ಯೆ; ಅದರ ವರಮಾನ ಒರಿಸ್ಸಾ, ವಾಯುವ್ಯ ಸೀಮಾ ಪ್ರಾಂತ, ಸಿಂಧ್ ಪ್ರಾಂತಗಳ ವರಮಾನಗಳನ್ನು ಮಿಾರಿದ ವರಮಾನ. ಈಗ ಅದು ಮದ್ರಾಸ್ ಬೊಂಬಾಯಿ ಪ್ರಾಂತಗಳೊಳಗೆ ಹಂಚಿಹೋಗಿದೆ. ಅಲ್ಲಿ ನಾವು ಇತರರಿಗಿಂತ ಅಲ್ಪ ಸಂಖ್ಯಾತರಾಗಿದ್ದು ನಮ್ಮ ನೆರೆ ಹೊರೆಯವರ ಭಾಷೆ ಸಂಸ್ಕೃತಿಗಳೊಡನೆ ಲೀನರಾಗಿ ಹೋಗುವ ಅಪಾಯಕ್ಕೀಡಾದೆವು. ನಮ್ಮ ಜನಕ್ಕೂ ಬೊಂಬಾಯಿ, ಮದ್ರಾಸು, ಹೈದರಾಬಾದು ರಾಜಧಾನಿಗಳಿಗೂ ಇರುವ ದೂರದಿಂದಾಗಿ ಅವುಗಳ ಆಡಳಿತೆಯ ವಿಷಯದಲ್ಲಿ ನಾವು ಬೀರಬಹುದಾಗಿದ್ದ ರಾಜಕೀಯ ಪ್ರಭಾವವು ಇಲ್ಲದಾಯಿತು. ಒಟ್ಟಿನ ಮೇಲೆ, ನಮ್ಮನ್ನೆಲ್ಲರೂ ಕಡೆಗಣಿಸುವಂತಾಯಿತು. ನಮ್ಮ ಹಿಂದಿನ ವೈಭವಕ್ಕೂ ಪ್ರಕೃತ ಪರಿಸ್ಥಿತಿಗಳಿಗೂ ಇರುವ ವಿಶಾಲವಾದ ಅಂತರವನ್ನು ನಾವರಿತುದು ಕೇವಲ ಇತ್ತೀಚೆಗೆ. ಯಾವುದೋ ಒಂದು ನವಚೈತನ್ಯ ನಮ್ಮ ಜನವನ್ನೀಗ ಹುರಿದುಂಬಿಸಿದೆ.

ನಮ್ಮ ಪ್ರಾಚೀನ ವೈಭವವನ್ನು ಪರಿಭಾವಿಸಿಕೊಳ್ಳುವುದರಿಂದ, ನಾವು ಮಹಿಮಾನ್ವಿತ ಪರಂಪರೆಗೆ ಸೇರಿದವರೆಂಬುದನ್ನು ತಿಳಿದುಕೊಳ್ಳಲು ಸಾಧ್ಯವಾಗುವುದು. ಅದರ ಸ್ಮರಣೆ ನಿಮ್ಮ ಮುಂದಿನ ಬಾಳಬಟ್ಟೆಯಲ್ಲಿ ಕತ್ತಲೆ ಕವಿದಾಗ ನಿಮ್ಮಲ್ಲಿ ದೃಢವಾದ ಆತ್ಮವಿಶ್ವಾಸವನ್ನು ತುಂಬುವುದು. ಆದರೆ ನಮ್ಮ ಜನರಿಗೆ ಪುನರುಜ್ಜೀವನವನ್ನಿತ್ತು ಅವರಿಗೆ ಆ ಹಿಂದಿನ ಸೌಭಾಗ್ಯವನ್ನೊದಗಿಸಲು ಎಷ್ಟೊಂದು ಕಾಲ ಶ್ರಮಪಡಬೇಕಾಗುವುದೆಂಬುದನ್ನು ನೀವು ಸಾಂಪ್ರತಕಾಲದಲ್ಲಿ ಮರೆಯಕೂಡದು. . . .

ನಿಷ್ಕಪಟವಾದ ಭಿನ್ನಾಭಿಪ್ರಾಯಗಳ ಸಹನೆಯೇ ಕರ್ನಾಟಕ ಸಂಸ್ಕೃತಿಯ ಸಾರವೆಂಬುದನ್ನು ಭಾವಿಸಿಕೊಂಡು ಆ ಭಿನ್ನತೆಗಳನ್ನು ಸಂದುಗೂಡಿಸಲು ಪ್ರಯತ್ನಿಸಬೇಕು. ಅಕ್ಬರ್ ಮಹಾಶಯನು ನಾನಾ ಧರ್ಮೀಯರ ಚರ್ಚಾಕೂಟಗಳನ್ನು ಏರ್ಪಡಿಸುವುದಕ್ಕೆ ಹಿಂದೆಯೇ ವಿಜಯನಗರದ ನಮ್ಮ ಮಹಾರಾಜರು ಒಂದಿಷ್ಟು ಕಡಿಮೆಯದಾದರೂ ಅಂತಹದೇ ಆದ ವ್ಯಾಪಕರೀತಿಯ ಚರ್ಚಾಸಂಘಗಳನ್ನು

ಸ್ಥಾಪಿಸಿದ್ದರು. ಶೈವ-ವೈಷ್ಣವ ಪಂಥಗಳ ಆರಾಧನ ಕ್ರಮಗಳಿಂದ ವೈಮನಸ್ಸುಂಟಾಗುವುದೆಂಬ ಭಯವು ತಲೆದೋರಿದಾಗ ಹರಿಹರ ಶಂಕರನಾರಾಯಣರ ಪೂಜಾ ಪದ್ಧತಿಯ ಸಂಘಟನ ನಮ್ಮ ನಾಡಿನಲ್ಲಿಯೇ ಬಳಕೆಗೆ ಬಂದದು. ಈ ಪದ್ಧತಿ ಕರ್ನಾಟಕವೊಂದಕ್ಕೇ ವಿಶಿಷ್ಟವಾದುದಲ್ಲದೆ ಬೇರೆಲ್ಲೂ ಈ ಸಂಪ್ರದಾಯವಿಲ್ಲ. ಇಷ್ಟೊಂದು ಮಾತ್ರವೇ ಅಲ್ಲ: ಸಂಪೂರ್ಣ ಭಿನ್ನದೃಷ್ಟಿಯುಳ್ಳ ಹಿಂದೂ ಇಸ್ಲಾಂ ಧರ್ಮಗಳೂ ಬಾಬಾಬುಡನ್ ಬೆಟ್ಟಗಳಲ್ಲಿ ಸಮ್ಮಿಲಿತವಾಗಿವೆ. ನಮ್ಮ ಜನರ ಸಾಮುದಾಯಿಕ ಜಾಗೃತಿಯು ಸಂಘಟನೆಯನ್ನೂ ಸಾಮರಸ್ಯವನ್ನು ಮೊದಲಿಂದಿತ್ತಲೂ ಪ್ರತೀಕ್ಷಿಸಿದೆ. . . .

ಅನುವಾದಕರು—ಎಸ್. ಕೆ. ಲಕ್ಷ್ಮೀನರಸಿಂಹಯ್ಯ.

ಸಂಪಾದಕೀಯ

೧. ಈ ಸಂಚಿಕೆಯೊಡನೆ ಪಾರ್ಥಿವ ಸಂವತ್ಸರದ ಕಾರ್ಯ ಮುಗಿಯಿತು. ಯಾವೆಲ್ಲ ಮಾನ್ಯಮಿತ್ರರೂ ವಿದ್ವಾಂಸರೂ ಈ ವರ್ಷದ ಪತ್ರಿಕೆಯ ಕೆಲಸಗಳನ್ನು ಮಾಡಿಕೊಟ್ಟಿದ್ದಾರೋ ಅವರಿಗೆ ನಾವು ಋಣಿಯಾಗಿದ್ದೇವೆ. ಎಂದಿಗೇ ಆಗಲಿ ಲೇಖಕ ವರ್ಗದ ನೆರವಿಂದಲೇ ಯಾವ ಪತ್ರಿಕೆಯ ಗೌರವವಾಗಲಿ ಉಳಿಯಬೇಕು, ಬೆಳಗಬೇಕಷ್ಟೇ. ನಮ್ಮ ಪ್ರಾರ್ಥನೆ ಇದು: ಹೇಗಿದ್ದರೂ ಭಿಕ್ಷೆನೀಡುವ ಉಪಕಾರ ನಮ್ಮ ಲೇಖಕ-ಸಹಾಯಕರದಾಗಿದೆ. ಪತ್ರಿಕೆ ಅವರ ಮಡಿಲ ಮಗು. ಅದರ ಲಾಲನೆ, ಪಾಲನೆ, ಏಳಿಗೆ, ಕೀರ್ತಿ, ಪುಷ್ಟಿ, ಹೃಷ್ಟಿ ಎಲ್ಲ ಅವರಿಂದಲೇ ನಡೆಯಬೇಕು. ನಾಲ್ಕು ದಿನ ಮುಂಚಿತವಾಗಿ ಅದನ್ನು ನೀಡಿದರೆ ನಮ್ಮ ಪೀಡೆ ಅವರಿಗೆ ಬೇಗನೆ ತಪ್ಪುತ್ತದೆ. ಪತ್ರಿಕೆ ಸಕಾಲಕ್ಕೆ ಪ್ರಕಟವಾಗಲೂ ಅವಕಾಶವಾಗುತ್ತದೆ. ಕೊಡುವವರ ಕೈ ಕಾಯಬೇಕಾಗಿರುವ ಅಗತ್ಯ ಹೀಗೇ ಇರುವ ವರೆಗೂ ನಾವು ಅವರನ್ನು ತ್ವರೆಗೊಳಿಸ ಬಹುದಾದರೂ ಹೇಗೆ? ಉಪಕಾರಿಗಳನ್ನು ಕುರಿತು ಹೀಗೆ ನುಡಿಯುವುದು ಸಭ್ಯತೆ ಹೌದೋ ಅಲ್ಲವೋ. ನಾವಿನ್ನೇನು ಮಾಡಬಹುದು? ಕೊಟ್ಟಿರುವ ನೆರವಿಗೆ ಕೈಮುಗಿ ಯುವುದು; ಕೊಡದಿರುವುದಕ್ಕೆ ಮರಳಿ ಮೊರೆಯಿಡುವುದು; ಕೊಡುವುದನ್ನು ಬೇಗ ಕೊಡಿರೆಂದು ಬೇಡುವುದು. 'ವ್ಯಯ'ದ (!) ಸಂಚಿಕೆಗಳನ್ನಾದರೂ ಸಕಾಲಕ್ಕೆ ಹೊರಡಿ ಸುವ ಪ್ರಯತ್ನ ಮಾಡುತ್ತೇವೆಂದು ಪತ್ರಿಕೆಯ ಚಾಲಕರ ಪರವಾಗಿ ಹೇಳಬಲ್ಲೆವು. ಬಯಕೆ ಈಡೇರುವುದು ಪತ್ರಿಕೆಯ ಭಾಗ್ಯದಾತರಾದ ತಮ್ಮ ಕೈಗೆ ಬಿದ್ದುದು.

*
* *

೨. ಈ ಸಲ ಅಂಕಿ ಅಂಶಗಳೆಂಬ ಒಂದು ಹೊಸ ಭಾಗವನ್ನು ಪ್ರಕಟಿಸಿದೆ. ಪತ್ರಿಕೆಗಳವರು, ಭಾಷಣಕಾರರು, ಸಾರ್ವಜನಿಕ ಜೀವನಕ್ಕೂ ಲೋಕವ್ಯವ ಹಾರಕ್ಕೂ ಸಂಬಂಧಪಟ್ಟ ಸಂಗತಿಗಳಲ್ಲಿ ಆಸಕ್ತರಾಗಿರುವವರು, ನ್ಯಾಯವಿಧಾಯಕ ಸಭೆ ಪ್ರತಿನಿಧಿ ಸಭೆಗಳವರು ಮುಂತಾದವರಿಗೆ ಇದರಿಂದ ಸ್ವಲ್ಪ ಉಪಯೋಗವಾದರೆ ನಮ್ಮ ಶ್ರಮ ಸಾರ್ಥಕ. ಇದು ಪ್ರಯೋಜನಕಾರಿಯೆಂದು ತಿಳಿದುಬಂದರೆ ವಿಶೇಷ ಬಗೆಯ ವಿವರಾಂಶಗಳನ್ನು ಮುಂದೆ ಹೆಚ್ಚುಹೆಚ್ಚಾಗಿ ಕೊಡಬಹುದು. ಒಂದೆರಡು ವರ್ಷಗಳೊಳಗೆ ಒಟ್ಟು ಲೋಕದ ಸಂಖ್ಯಾರೂಪವಾದ ಅಂಶಗಳ ಪರಿಚಯವಾದೀತು.

ಹಾಗೆಯೇ ಆಯಾ ಮೂರು ತಿಂಗಳ ಅವಧಿಯಲ್ಲಿ ಭರತಖಂಡದಲ್ಲಿಯೂ ಹೊರಗೂ ನಡೆವ ಮಹಾಸಂಘಟನೆಗಳ ಒರದಿಯನ್ನು ಮಾಡಿಕೊಡಬೇಕೆಂಬ ಆಸೆ ಯಿದೆ. ನಾಲ್ಕು ಜನ ನೆರವಾದರೆ ಅದು ಮುಂದಿನ ವರ್ಷದಿಂದಲೇ ತೊಡಗೀತು.

೩. ದಕ್ಷಿಣಭಾರತ ಹಿಂದೀ ಘಟಿಕೋತ್ಸವವೊಂದು ಫೆಬ್ರುವರಿಯಲ್ಲಿ ಮದರಾಸ್ ಪಟ್ಟಣದಲ್ಲಿ ನಡೆಯಿತು. ಭಾರತ ಮಹಾಪುತ್ರರಾದ ಮಹಾತ್ಮ ಗಾಂಧಿಜೀಯವರು ಆ ಸಮಾರಂಭಕ್ಕೆ ದಯಮಾಡಿಸಿ ತಮ್ಮ ಅಧ್ಯಕ್ಷತೆಯಲ್ಲಿ ಎಲ್ಲ ಕಾರ್ಯಗಳನ್ನೂ ನೆರವೇರಿಸಿದರು, ಹರಸಿದರು.

ಆ ಅವಕಾಶದಲ್ಲಿ ದಕ್ಷಿಣ ಭರತಖಂಡದ ನಾಲ್ಕು ಮುಖ್ಯನುಡಿಗಳ ಸಾಹಿತಿಗಳು ಸಭೆಸೇರಿ ತಮ್ಮ ಸಾರಸ್ವತ ಸ್ಥಿತಿಯನ್ನೂ ಕಲಾನಿರ್ಮಾಣ ಕಾರ್ಯಗಳನ್ನೂ ಕುರಿತು ಪರ್ಯಾಲೋಚನೆ ನಡಸಿದರು; ಕನ್ನಡಿಗರ ಪ್ರಿಯ ನಾಯಕರೂ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರೂ ಆದ ರಾಜಕಾರ್ಯಪ್ರಸಕ್ತ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ., ಅವರ ಅಧ್ಯಕ್ಷತೆಯಲ್ಲಿ ಸಾಹಿತ್ಯಗೋಷ್ಠಿ ನಡೆಯಿತು. ಅವರ ಆರಂಭ ಉಪಸಂಹಾರ ಭಾಷಣಗಳು ವಿಶೇಷ ಕಳೆಯಿಂದಲೂ ವಿಚಾರಪರ ಸಂಗತಿಗಳ ಪರಿಶೀಲನೆಯಿಂದಲೂ ಕೂಡಿದ್ದವು. ಈ ಭಾಷೆಗಳೆಲ್ಲದರ ಅಗತ್ಯ, ಸ್ಥಿತಿಗತಿಗಳನ್ನು ಕುರಿತು ಅವರು ನುಡಿದ ನಾಲ್ಕು ಮಾತು ಎಲ್ಲರ ಹೃದಯವನ್ನೂ ಹೊಕ್ಕು ಒಲಿಸಿತು. ಇಂದಿನ ಹೊಸ ತಮಿಳುಸಾಹಿತ್ಯವನ್ನು ಕುರಿತು ಪ್ರಖ್ಯಾತ ತಮಿಳು ಬರಹಗಾರರಾದ ಶ್ರೀ ವಾ. ರಾ. ಅವರೂ, ತೆಲುಗಿನದನ್ನು ಕುರಿತು ಅಂಧ್ರಸಂಸ್ಕೃತಿ ವಿಚಕ್ಷಣರಾದ ಶ್ರೀ ಕಾಟೂರಿ ವೆಂಕಟೇಶ್ವರರಾಯರವರೂ ಮಲೆಯಾಳದ್ದನ್ನು ಕುರಿತು ಮಾತೃಭೂಮಿ ಎಂಬ ಪತ್ರಿಕಾಚಾಲಕರಾದ ಶ್ರೀ ದಾಮೋದರ ಮೆನನರೂ ಕನ್ನಡದ್ದನ್ನು ಕುರಿತು ಶ್ರೀ ವಿ. ಸೀತಾರಾಮಯ್ಯನವರೂ ಭಾಷಣಗಳನ್ನು ಮಾಡಿದರು. ಸಾಹಿತಿಗಳನೇಕರಿಗೆ ಪರಸ್ಪರ ಪರಿಚಯ ಉಂಟಾಯಿತು. ಈ ಸಮ್ಮೇಳನದ ಫಲವಾಗಿ ಒಂದು ಹೊಸ ಸಂಸ್ಥೆಯನ್ನು ಸ್ಥಾಪಿಸಿಕೊಂಡು ಹೀಗೆ ಉತ್ತಮವಾಗಿ ಆರಂಭವಾದ ಕೆಲಸ ಮುಂದಕ್ಕೂ ನಡೆಯಬೇಕೆಂದೂ ಆ ಸಾಧನೆಗಾಗಿ ಅಖಿಲ ದಕ್ಷಿಣ ಸಾಹಿತ್ಯ ಸಂಸ್ಥೆಯೊಂದು ನಿಂತು ವರ್ಷವರ್ಷವೂ ನಾಡಿನ ಬೇರೆಬೇರೆ ಕಡೆ ಸಮ್ಮೇಳನಗಳನ್ನು ನಡಸಬೇಕೆಂದೂ, ತಮ್ಮ ತಮ್ಮಲ್ಲಿ ನಡೆವ ಕೃತಿನಿರ್ಮಾಣದ ಪರಿಚಯವನ್ನು ಉಳಿದವರಿಗೆ ಮಾಡಿಕೊಡಬೇಕೆಂದೂ, ಸಾಧಾರಣವಾಗಿ ಎಲ್ಲರಿಗೂ ಸಮಾನವಾದ ವ್ಯವಹಾರಗಳಲ್ಲಿ ಸಹಕರಿಸಿ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದೂ, ಭರತಖಂಡದ ನವಚೈತನ್ಯ ವಿಕಾಸನವಾಗುತ್ತಿರುವ ಈ ಕಾಲದಲ್ಲಿ ದಕ್ಷಿಣದ ಭಾಷಾ ಸಾಹಿತ್ಯಗಳಿಗೂ, ಸಾಹಿತಿಗಳಿಗೂ, ಸಾರಸ್ವತ ಅಗತ್ಯಗಳಿಗೂ ಸ್ಥಾನಮಾನವನ್ನು ಗಳಿಸಿ ಭದ್ರಪಡಿಸುವ ಕೆಲಸಕ್ಕೆ ಇದು ನಿಲ್ಲಬೇಕೆಂದೂ ನಿರ್ಣಯವಾಯಿತು. ಶ್ರೀ ಮಾಸ್ತಿಯವರ ಅಧ್ಯಕ್ಷತೆಯಲ್ಲಿ ಸಂಸ್ಥೆ ಕೆಲಸಮಾಡುವುದಿದೆ.

ಅವರ ಮತ್ತು ಅವರಂಥವರ ನೇತೃತ್ವದಲ್ಲಿ ಬಹುಕಾಲ ಈ ಸಂಸ್ಥೆ ನಿಂತು ತನ್ನ ಭಾಗದ ಸೇವೆಯನ್ನು ಜನತೆಗೆ ಸಲ್ಲಿಸಲಿ.

ಕಂಬನಿ

೪. ಪತ್ರಿಕೆ ಹೊರಡುವುದು ತಡವಾದ್ದರಿಂದ, ಈ ಸಂಚಿಕೆಯ ಕಾಲಮಾನವನ್ನು ಮೀರಿದ್ದರೂ, ನಮ್ಮ ಕಣ್ಣಿಂದ ಮರೆಯಾದ ಮಾನ್ಯವಿದ್ವಾಂಸರೊಬ್ಬರ ನಿಧನವನ್ನು ಕುರಿತು ನಮ್ಮ ಗೌರವದ ಸ್ಮೃತಿಕಾಣಿಕೆ ಸಲ್ಲಿಸುವ ಪ್ರಸಂಗವುಂಟಾಗಿದೆ. ನಮ್ಮ ಕಡೆಯವರಲ್ಲಿ ಹಿರಿಯ ವಿದ್ವಾಂಸರಾಗಿ ಅರಮನೆ, ಗುರುಮನೆ, ಸಾರ್ವಜನಿಕ ಸಭೆ, ಲೇಖಕವರ್ಗ—ಈ ಎಲ್ಲ ಕಡೆಯಿಂದಲೂ ವಿಶ್ವಾಸ ಸಂಪಾದಿಸಿದ್ದ ಆಸ್ಥಾನ ವಿದ್ವಾನ್ ಪಂಡಿತರತ್ನಂ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳವರು, ಕೆಲವು ಕಾಲದಿಂದ ಅನಾರೋಗ್ಯದಲ್ಲಿದ್ದು ಇದೇ ಏಪ್ರಿಲ್ ತಿಂಗಳು ಹನ್ನೆರಡನೆಯ ದಿನ ಶಿವಮೊಗ್ಗೆಯ ತಮ್ಮ ಸ್ವಗೃಹದಲ್ಲಿ ತೀರಿಕೊಂಡರು.

ಅವರು ಶಿವಮೊಗ್ಗೆಯ ಕನ್ನಡ ಉತ್ಸವಗಳಿಗೂ, ಸಂಸ್ಥೆಗಳಿಗೂ ಸಮಾರಂಭಗಳಿಗೂ ಆಧಾರಸ್ತಂಭರಾಗಿಯೂ ಕಲ್ಪವೃಕ್ಷದಂತೆಯೂ ಇದ್ದರು. ಅವರಿಂದ ಶಿವಮೊಗ್ಗೆಯ ಸಾಹಿತ್ಯಜೀವನ ತುಂಬಿತ್ತು. ಯಾವ ಸಭೆಗೆ ಅವರು ದಯಮಾಡಿಸಿದರೂ, ಅವರ ರೂಪು, ವೇಷ, ಪ್ರಜ್ಞೆ, ಮಾತು ಒಂದು ಅನನ್ಯಕಾಂತಿಯಿಂದಲೂ ಲಕ್ಷಣದಿಂದಲೂ ತುಂಬುತ್ತಿತ್ತು. ಈ ಯಾವ ಅಂಶದಲ್ಲಿಯೂ ಅವರು ನಮ್ಮ ಕಾಲದ ಸಪುರತೆಯನ್ನೊಲ್ಲದವರು. ಹಿಂದಿನ ತೋರ ಸಂಪುಷ್ಟಿಗೂ ತೂಕ ಗಂಭೀರಗಳಿಗೂ ಪ್ರತಿನಿಧಿಗಳಾದವರು. ಅವಸರದ ಈ ಕಾಲದವರಿಗೆ ಅನಾತುರವಾದ, ಧಾವತಿಯರಿಯದ ಆ ವಚೋವಿಲಾಸ, ಆ ಮನಸ್ಸಿನ ರೀತಿ ವಿಶಾಲವಾದ ಬೇರೊಂದು ಕಾಲವನ್ನು ನೆನಪಿಗೆ ತರುತ್ತಿತ್ತು. ಸ್ವಂತವಾಗಿ ಅವರು ಕವಿಗಳು; ವಾಗ್ಮಿಗಳು; ಧರ್ಮ, ಶಾಸ್ತ್ರ, ಸಾಹಿತ್ಯ ಮೂರು ಪ್ರಪಂಚದಲ್ಲಿಯೂ ಹಿರಿಯ ಮೇಧಾವಿಗಳೆಂದು ಕೀರ್ತಿಪಡೆದವರು. ವಾಚೋವಿಧೇಯವಾಗಿ ಆಧಾರಗಳೋ, ವಾಕ್ಯಗಳೋ, ಶ್ಲೋಕಗಳೋ ಅವರಿಂದ ಬರುತ್ತಿದ್ದರೆ ಆ ಸಂಪನ್ನತೆ ವೈಭವಗಳದೇ ಒಂದು ರಮಣೀಯ ಪ್ರಪಂಚ. ಸುಲಭರಾಗಿ, ರಸಜ್ಞರಾಗಿ, ಕಿರಿಯರೆಲ್ಲರ ಆಸರೆಯೂ ಸ್ಫೂರ್ತಿಯೂ ಆಗಿ ತಮ್ಮ ವಯೋಬಲ ಜ್ಞಾನಬಲಗಳಿಂದ ಸಮಯಕ್ಕೆ ತಕ್ಕ ಬೆಂಬಲವನ್ನೂ ಸಲಹೆಯನ್ನೂ ಕೊಡುತ್ತ ತಮ್ಮ ಸುತ್ತಲಿನ ಸಂಸ್ಥೆಗಳನ್ನೂ ವ್ಯಕ್ತಿಗಳನ್ನೂ ನಡಸಿಕೊಂಡು ಬಂದ ಅವರ ಔದಾರ್ಯ ದೊಡ್ಡದು. ಅವರ ನಿಧನದಿಂದ ಕನ್ನಡ ವಿದ್ವಾಂಸವರ್ಗಕ್ಕೆ ದೊಡ್ಡ ನಷ್ಟವಾಗಿದೆ. ಅವರ ನೆನಪು ನಮ್ಮನ್ನು ಸಂತತವಾಗಿ ಸಾಹಿತ್ಯ ಸಂಸ್ಕೃತಿ ಕಾರ್ಯಗಳಿಗೆ ಮೀಸಲಾಗಿಸಲಿ; ಅವರ ಸತ್ವ ಅದಕ್ಕೆ ಪ್ರೇರಕವಾಗಿ ಉಳಿಯಲಿ.

ಸಾದರ ಸ್ವೀಕಾರ

೧. **ಪ್ರಸವ ವಿಜ್ಞಾನ**—ಡಾ. ದೊಡ್ಡೇರಿ ವೆಂಕಟಗಿರಿರಾವ್, ಸಾಧನ ಪಬ್ಲಿಷಿಂಗ್ ಹೌಸ್, ಸಾಗರ, ಶಿವಮೊಗ್ಗ ; ಕ್ರೌ. ಅ. ೧೧೯ ಪುಟಗಳು ; ಬೆಲೆ, ರೂ. ೨-೦-೦.

೨. **ಸಂಸಾರಿಗ ಕಂಸ** (ನಾಲ್ಕಂಕಗಳ ನಾಟಕ)—ಶ್ರೀರಂಗ ; ರಂಗಮಂಗ ಪ್ರಕಾಶನ, ಧಾರವಾಡ ; ಕ್ರೌ. ಅ. ೧೧೬ ಪುಟಗಳು ; ಬೆಲೆ, ರೂ. ೧-೮-೦.

೩. **ಆಧುನಿಕ ತತ್ವಶಾಸ್ತ್ರ ಸಮಸ್ಯೆಗಳು**—ಲೇಖಕರು: ಶ್ರೀಮಾನ್ ಜಿ. ಹನುಮಂತ ರಾವ್, ಎಂ.ಎ. ; ಪ್ರಧಾನ ಸಂಪಾದಕ : ಎ. ಆರ್. ಕೃಷ್ಣಶಾಸ್ತ್ರೀ, ಎಂ ಎ. ; ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ ೨೧ ; ಕ್ರೌ. ಅ. ೨೯೯ ಪುಟಗಳು ; ಬೆಲೆ, ಸಾದಾ ಪ್ರತಿ ರೂ. ೧-೦-೦.

೪. **ಭಾರತದ ಸರದಾರ್ ವೀರವಲ್ಲಭಬಾಯ್ ಪಟೇಲ್**—ಶ್ವೇತ ಕುಸುಮಮಾಲಾ ೧ ; ನಾಡಿಗ ಕೃಷ್ಣಮೂರ್ತಿ ; ಕ್ರೌ. ಅ. ೩೬ ಪುಟಗಳು ; ಬೆಲೆ, ೮ ಆಣೆ.

೫. **ಜರತಾರಿ ಕುಪ್ಪುಸ** (ಸಣ್ಣಕಥೆಗಳ ಸಂಗ್ರಹ)—ಎಚ್. ಅನಂತಭಟ್ಟ, ಬಿ.ಎಸ್‌ಸಿ. ; ಪ್ರಕಾಶಕರು : ಎಚ್. ಎಸ್. ದೊರೆಸ್ವಾಮಿ, ಬಿ.ಎಸ್‌ಸಿ., ಮಿತ್ರಸಂಘ, ಬೆಂಗಳೂರು ; ಕ್ರೌ. ಅ. ೧೧೩ ಪುಟಗಳು.

೬. **ಬಡತನದ ಬಾಳು** (ನಾಲ್ಕು ಕಥೆಗಳು)—ಆನಂದಕಂದ, ಜಯಂತಿ ಕಾರ್ಯಾಲಯ ; ಕ್ರೌ. ಅ. ೧೦೪ ಪುಟಗಳು ; ಬೆಲೆ, ರೂ. ೧-೪-೦.

೭. **ಷೋಡಶಿ** (ಶರಚ್ಚಂದ್ರ ಕಾದಂಬರಿ)—ಅನುವಾದಕರು : ಶ್ರೀ ಗುರುನಾಥ ಜೋಶಿ, ಪ್ರತಿಭಾ ಗ್ರಂಥಮಾಲೆ, ಧಾರವಾಡ; ವರ್ಷಕಿರಣ ೫ ; ಕ್ರೌ. ಅ. ೧೧೦ + ೧೨೦ ಪುಟಗಳು ; ಬೆಲೆ, ರೂ. ೨-೦-೦.

೮. **ಕಂನುಡಿಯ ಹುಟ್ಟು**—ಶಂ. ಬಾ. ಜೋಶಿ; ಪ್ರಕಾಶಕರು : ಸಮಾಜ ಪುಸ್ತಕಾಲಯ, ಧಾರವಾಡ.

೯. **ಬಾಳ್ವೆಯೇ ಬೆಳಕು**—ಶಿವರಾಮ ಕಾರಂತ ; ಪ್ರಕಾಶಕರು : ಸರಸ್ವತಿ ನಿಲಯ, ಧಾರವಾಡ ; ಕ್ರೌ. ಅ. ೧೫೨ ಪುಟಗಳು ; ಬೆಲೆ, ರೂ. ೧-೮-೦.

೧೦. **The Way to Peace Power and Long Life**—Swami Narayanananda Pandit, Basti Rampathsala P.O., Dist. Saharanpur, Himalayas. Re. 1-8-0.

೧೧. ವೈಜ್ಞಾನಿಕ ಪ್ರಬಂಧಗಳು—ಲೇಖಕರು: ಪದ್ಮನಾಭ ಪುರಾಣಿಕ, ಎಂ.ಎಸ್‌ಸಿ.: ಪ್ರಕಾಶಕರು: ಕರ್ನಾಟಕ ಸಾಹಿತ್ಯ ಮಂದಿರ, ಹೈದರಾಬಾದು; ಕ್ರೌ. ಅ. ೮೦ ಪುಟಗಳು; ಬೆಲೆ, ರೂ. ೧-೮-೦.

೧೨. ಚಾರ್ಲ್ಸ್ ಡಾರ್ವಿನ್ (ಜೀವನ ಚರಿತ್ರೆ)—ಲೇಖಕರು: ಎನ್. ಎಸ್. ವೀರಪ್ಪ, ಬಿ.ಎಸ್‌ಸಿ. (ಆನರ್ಸ್) ಮೈಸೂರು ಶಿಕ್ಷಣ ಶಾಖೆ; ಕ್ರೌ. ಅ. ೧೫೯ ಪುಟಗಳು; ಬೆಲೆ, ರೂ. ೨-೦-೦.

೧೩. ಸೊಗಸಿನ ಕತೆ, ಭಾಗ ೧—ಬರಹಗಾರರು: ಸಾನೆ ಗುರುಜಿ; ಅನುವಾದಕರು: ಭಾಸ್ಕರ ಗೋಖಲೆ; ಪ್ರಕಾಶಕರು: ಬಸವಣ್ಣೆಪ್ಪ ಗುರುಲಿಂಗಪ್ಪ, ಸಂಕೇಶ್ವರ (ತುಬುಚಿ ಗದಗ); ಕ್ರೌ. ಅ. ೮೦ ಪುಟಗಳು; ಬೆಲೆ, ೧೨ ಆಣೆ.

೧೪. ಮಾತೃಭೂಮಿ—ವಿಶೇಷ ಸಂಚಿಕೆ, ೧೯೪೫; ರಾಯಲ್ ಅ. ೧೫೪ ಪುಟಗಳು; ಬೆಲೆ, ೦-೧೨-೦.

೧೫. ಕರಿಗಡುಬು—(ಮಕ್ಕಳಿಗೆ ರಸವತ್ತಾದ ಏಳು ಕಥೆಗಳು)—ಸಂಪಾದಕ: ಡಾ. ದೊಡ್ಡೇರಿ ವೆಂಕಟಗಿರಿ ರಾವ್; ಪ್ರಕಾಶಕರು: ಸಾಧನ ಪ್ರಕಟನಾಲಯ, ಸಾಗರ, ಶಿವಮೊಗ್ಗ.

೧೬. ದೊಡ್ಡಯ್ಯನ ದಾಳಿ (ಬಾಲಸಾಹಿತ್ಯ)—ಸಂಪಾದಕ: ಡಾ. ದೊಡ್ಡೇರಿ ವೆಂಕಟಗಿರಿ ರಾವ್; ಪ್ರಕಾಶಕರು: ಸಾಧನ ಪ್ರಕಟನಾಲಯ, ಸಾಗರ, ಶಿವಮೊಗ್ಗ.

೧೭. ದಾಳಿಂಬೆ ಚೆಲುವೆ—ಸಂಪಾದಕ: ಡಾ. ದೊಡ್ಡೇರಿ ವೆಂಕಟಗಿರಿ ರಾವ್; ಪ್ರಕಾಶಕರು: ಸಾಧನ ಪ್ರಕಟನಾಲಯ, ಸಾಗರ, ಶಿವಮೊಗ್ಗ.

೧೮. ಕೋಡುಬಳೆ (ಶಿಶುಸಾಹಿತ್ಯ)—ಪ್ರಕಾಶಕರು: ಚಕ್ರಪಾಣಿ; ಕ್ರೌ. ಅ. ೨೦ ಪುಟಗಳು; ಬೆಲೆ, ೨ ಆಣೆ.

೧೯. ಪುನರ್ಜನ್ಮ—ಶ್ರೀ ಗೊರೂರು ರಾಮಸ್ವಾಮಯ್ಯಂಗಾರ್ಯರು; ಪ್ರಕಾಶಕರು: ಕರ್ಣಾಟಕ ಸಂಘ, ಶಿವಮೊಗ್ಗ; ಕ್ರೌ. ಅ. ೧೧೪ ಪುಟಗಳು ಬೆಲೆ, ರೂ. ೧-೪-೦.

೨೦. ಅಯ್ಯಯ್ಯೆ!—ಲೇಖಕರು: ಕುಳುಕುಂದ ಶಿವರಾಯ; ಪ್ರಕಾಶಕರು: ಜನ ಸಾಹಿತ್ಯ ೯೪೫-೧೨೧ ಸುಲ್ತಾನಪೇಟೆ ಬೆಂಗಳೂರು ನಗರ; ಕ್ರೌ. ಅ. ೯೧ ಪುಟಗಳು; ಬೆಲೆ, ರೂ. ೧-೦-೦.

೨೧. ಶಾರದಾದೇವಿ—ಲೇಖಕರು: ರಾ. ನರಸಿಂಹ ಮೂರ್ತಿ; ಪ್ರಕಾಶಕರು: ಬಿ. ಶ್ರೀನಿವಾಸ ಅಯ್ಯಂಗಾರ್; ಪ್ರಿಂಟರ್ ಅಂಡ್ ಪಬ್ಲಿಷರ್, ೬, ಅರಳೇಪೇಟೆ, ಬೆಂಗಳೂರು ನಗರ; ಕ್ರೌ. ಅ. ೧೧೧ ಪುಟಗಳು; ಬೆಲೆ, ರೂ. ೧-೪-೦.

೨೨. ರಾಷ್ಟ್ರಪತಿಗಳು—ಲೇಖಕರು: ಸ್ವಾತಂತ್ರ್ಯಪ್ರಿಯ; ಪ್ರಕಾಶಕರು: ಶ್ರೀ ಬಿ. ಜಿ. ಅವಧಾನಿ, ಮಿಂಚಿನ ಬಳ್ಳಿ ಚಾವಡಿ, ಧಾರವಾಡ; ಕ್ರೌ. ಅ. ೩೬೧ ಪುಟಗಳು; ಬೆಲೆ, ರೂ. ೪-೦-೦.

೨೩. **ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರೀ**—ಲೇಖಕರು : ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ ; ಪ್ರಕಾಶಕರು : ಕಾವ್ಯ ಕಲಾಸಂಘ. ಜಿ. ವಿ. ಛತ್ರ, ಚಿಕ್ಕಪೇಟೆ, ಬೆಂಗಳೂರು ನಗರ ; ಕ್ರೌ. ಅ. ೧೩೨ ಪುಟಗಳು.

೨೪. **ಸಮತಾವಾದ** ಲೇಖಕರು : ಎಮಿಲ್ ಬರ್ನ್ಸ್ ; ಪ್ರಕಾಶಕರು : ಜನಸಾಹಿತ್ಯ, ಮರಾಠ ಗಲ್ಲಿ, ಹುಬ್ಬಳ್ಳಿ ; ಕ್ರೌ. ಅ. ೮೯ ಪುಟಗಳು ; ಬೆಲೆ, ರೂ. ೧-೦-೦.

೨೫. **ರಾಜ ನೀತಿ ಶಾಸ್ತ್ರ**—ಲೇಖಕರು : ಶ್ರೀಮಾನ್ ಕೃಷ್ಣಾಚಾರ್ಯ ಜೋಷಿ, ಬಿ.ಎ., ಎಲ್‌ಎಲ್.ಬಿ. ; ಪ್ರಕಾಶಕರು : ಕರ್ನಾಟಕ ಪರಿಷತ್, ಹೈದರಾಬಾದು ; ಕ್ರೌ. ಅ. ೧೯೫ ಪುಟಗಳು ; ಬೆಲೆ, ರೂ. ೨-೦-೦.

೨೬. **ಗುರುವಿನ ಗೆಲವು**—ಲೇಖಕರು : ಶ್ರೀ ಜ. ಪ. ಚೆನ್ನಬಸವರಾಜ ದೇಶಿಕೇಂದ್ರ ಸ್ವಾಮಿಗಳು ; ಪ್ರಕಾಶಕರು : ಶ್ರೀ ಜಗದ್ಗುರು ನಿಡುಮಾಮಿಡಿ ಶ್ರೀ ಶೈಲ ಸಂಸ್ಥಾನ ಗ್ರಂಥಮಾಲಾ, ಕ್ರೌ. ಅ. ೨೮ ಪುಟಗಳು ; ಬೆಲೆ, ೬ ಆಣೆ.

೨೭. **ವಿದ್ಯಾರ್ಥಿ ಕಾರ್ಯಕ್ರಮ**—ಲೇಖಕರು : ಶ್ರೀಮಾನ್ ನಾರಾಯಣ ಅಗರ್ ವಾಲಾ, ಎಂ.ಎ., ಎಂ.ಕಾಮ್. ; ಪ್ರಕಾಶಕರು : ವಿಚಾರ ಸಾಹಿತ್ಯ ಲಿಮಿಟೆಡ್, ಬೆಂಗಳೂರು ನಗರ ; ಕ್ರೌ. ಅ. ೫೧ ; ಬೆಲೆ, ೦-೧೧-೦.

ಪ್ರಾಚ್ಯಲೇಖನಮಾಲೆ

Journal of the Sri Venkateswara O. I. Tirupati—VI. 2 July—December, 1945.

'Purāṇa Samhita'—S. P. L. NARASIMHA SWAMI, P.O.L.

Buddha, Pradyota of Avanti, Udayana of Kausambi and Vivisara and his two Sons, Darsaka and Ajatasatru of Girivraja were contemporaries. Thus the Pradyotas of Avanti were the contemporaries of the later Saisunagas.

The following computation results from (this study):

The late Barhadradhas	...	1000	years*
The Saisunagas ...	...	363	,,
The Nandas	...	100	,,
The Mauryas	...	137	,,
The Sungas	...	112	,,
The Kanvas	...	45	,,
The Andhras up to Hala	...	261	,,
	Total	2018	years

Saka Eara begins in 78 A.D. So the date of the M.H.B. battle = 2018 − 78 + 1 = 1941 B.C. or 1945 if * is taken as 1004 years.

The New Review—November, 1945.

'The Racial History of the Dravidians of Kerala'—
L. A. KRISHNA IYER.

Bharatiya Vidya—July—August, '45.

'Some Buddhist Acāryas and the Imperial Guptas'—
DHIRENDRANATH MOOKERJEE.

Journal of the American Oriental Society—April—June, 1945.

Sanskrit Muṇḍa—'Shaven' (Pāṇ. etc.)—Tedesco, Paul.

[Skt. Munda—'Shaven', is middle Indic Form of Skt. Víddha-'Cut' M.B.h. Of the same origin are baṇḍá—'mutilated' (AV), madrā-kar and Bhadrā-kar—'to Shear, shave' (Pāṇ and Kāty. resp.) ruṇḍa—'mutilated', and raṇḍā—Widow, and many middle and new Indic Words].

Prabuddha Bharatha—November, 1945.

'The Dance Drama of Kerala'—L. K. BALA RATNAM.

(The Kathakali, Thullal, Challyar Koothu, Koodiyattam, Kai Kottikali, etc.).

---

* The Samhita supplies us with the system of the history of our country beginning with the childhood of the human race. Recorded history begins with C. 3600 A.D. sends with 1940-5 B.C. The Appendix brings the chronology down to 300 A.D. where Epigraphy begins to offer help.

I. H. Q.—XXI 3, September, 1945.

1. 'Some Royal poets of the Vākāṭaka Age'—V. V. MIRASHI.

All these poets—Pravarasena author of Kavya Setubandha or Rāvaṇavaho, Divakarasena, of Subhāṣita, Sarvasena author of Harivijaya. Mentioned both in Dhvanyaloka and in Vakroktijivita and in Sarasvatikanthabharana, etc.—Wrote in Maharaṣtra Prkt. No Skṭ. Kavyas of the period have yet come to light. But (*Pace* Dandi and Anandavardhana) no total absence of Skt. Kavyas in that period. That Skt. was cultivated in N. Maharastra and Vidarbha in the the beginning of the 4th Cy. A.D. is also shown by the Skt. copper-plate grant of the Maharaja's Svāmidasa and Bhuluṇḍa which are dated in the years 67 and 107 of the Abhirà era of A.D. 249-50 = 317 and 352 A.D.

2. 'Candra of the Meharauli Inscription'—G. R. SHARMA.

The identification of Candra of the M—Pillar Inscrpn.—with Candragupta II of the Imperial Gupta family alone accords with all the known facts of Indian history and paleography and it involves no contradictions.

Miscellany:

'A Prākrit tendency in Ṛgveda'—A. M. GHATGE.

In spite of the attempts of the later redacters to put R. V. Samhita in a form consistent with a later linguistic tradition and theory, the original features of its language have survived in places, particularly when the normalising process would go against the metre or when plausible explanation could be imagined which can bring them in agreement with later usage.

A number of cases of double sandhi, a feature also observed in the epic literature (Eg.) a sandhi of final—am with a following vowel giving rise to a long vowel by combination in Saṃvánanobhayaṅkarám.

Cps. Prkt alternative forms like aṭṭha, aṭṭham, heṭṭha, heṭṭham, Sammā, Sammam—also considers . . . moyaṇā (mocanam), lovaṇā (copanam) etc.

There is no doubt . . . that it was originally confined to neuter names only and was extended later on to to masc. nouns by analogy or attraction. All these cases make it highly probable that the spoken language at the earliest times had a doublet in—a for—am of a neuter word and a remnant of it may be seen in the R. V. word Samvánanā

Two more cases: (1) R. V. 18·2. durgáhā etát.

(2) R. V. 162·10. sukṛṭā tác etc.

In light of which he explains later uses: Taitt Samhita 1, 4, 44, 2, Sávanedám and K. S. 1. 4. 12. Sadanedam Astu.

—A result of the spoken dialect influencing the vedic language.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧. ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩. *ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪. *ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫. *ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.
೬. *ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. *ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. *ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯. ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. *ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧. ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨. ಕನಸುಗಳು—ಎನ್. ಎಸ್. ನಾರಾಯಣಶಾಸ್ತ್ರೀ, ಎಂ.ಎ.
೧೩. *ಮದುವೆ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪. ನಮ್ಮ ಆರ್ಥಿಕ ದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. *ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. *ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. *ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. *ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦. *ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧. *ಸಾರ್ವಜನಿಕ ವೆಚ್ಚ—ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨. *ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೩. *ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೨೪. *ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.
೨೫. *ಎಲ್ಲೋರ ಮತ್ತು ಅಜಂತಾ—ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬. ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೨೭. ಭಾಸ—ಎಚ್. ಎಲ್. ಹರಿಯಪ್ಪ, ಎಂ.ಎ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೯. *ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.
೩೦. ರಕ್ತ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೩೧. *ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜನಾಥ್, ಎಂ.ಎ.
೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.
೩೩. *ಗಣಿತಶಾಸ್ತ್ರದ ಸ್ವರೂಪ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.